JJ-51

(B) 25238

# ಕರ್ನಾಟಕ ವಿಧಾನ ಸಭೆಯ ನಡವಳಿಕೆಗಳು
# KARNATAKA LEGISLATIVE ASSEMBLY DEBATES

## ಅಧಿಕೃತ ವರದಿ
## OFFICIAL REPORT

ಹದಿಮೂರನೇ ವಿಧಾನ ಸಭೆಯ ಮೂರನೇ ಅಧಿವೇಶನ

THIRD SESSION OF THE THIRTEENTH LEGISLATIVE ASSEMBLY

ಸಂಪುಟ – ೧೩ (ಕ್ರಮಾಂಕ – ೧ ರಿಂದ ೩)

**Volume - 13 (No. 1 to 3)**

(೧೪ನೇ ಸೆಪ್ಟೆಂಬರ್ ೨೦೦೯, ೧೫ನೇ ಸೆಪ್ಟೆಂಬರ್ ೨೦೦೯ ಮತ್ತು ೧೬ನೇ ಸೆಪ್ಟೆಂಬರ್ ೨೦೦೯)

**(14th September 2009, 15th September 2009 and 16th September 2009)**

ಕರ್ನಾಟಕ ವಿಧಾನಸಭೆಯ ಸಚಿವಾಲಯ, ಬೆಂಗಳೂರು

**Karnataka Legislative Assembly Secretariat, Bangalore**

(B) 25238

# ಕರ್ನಾಟಕ ವಿಧಾನಸಭೆಯ ನಡವಳಿಕೆಗಳು
# KARNATAKA LEGISLATIVE ASSEMBLY DEBATES

## ಅಧಿಕೃತ ವರದಿ
## OFFICIAL REPORT

ಹದಿಮೂರನೇ ವಿಧಾನ ಸಭೆಯ ಮೂರನೇ ಅಧಿವೇಶನ

**THIRD SESSION OF THE THIRTEENTH LEGISLATIVE ASSEMBLY**

ಸಂಪುಟ – ೧೩ (ಕ್ರಮಾಂಕ – ೧ ರಿಂದ ೩)

**Volume - 13 (No. 1 to 3)**

(೧೪ನೇ ಸೆಪ್ಟೆಂಬರ್ ೨೦೦೯, ೧೫ನೇ ಸೆಪ್ಟೆಂಬರ್ ೨೦೦೯ ಮತ್ತು ೧೬ನೇ ಸೆಪ್ಟೆಂಬರ್ ೨೦೦೯)

**(14th September 2009, 15th September 2009 and 16th September 2009)**

ಕರ್ನಾಟಕ ವಿಧಾನಸಭೆಯ ಸಚಿವಾಲಯ, ಬೆಂಗಳೂರು

**Karnataka Legislative Assembly Secretariat, Bangalore**

# ಕರ್ನಾಟಕ ವಿಧಾನ ಸಭೆ

## ವಿಷಯಾನುಕ್ರಮಣಿಕೆ

**(14ನೇ ಸೆಪ್ಟೆಂಬರ್ 2009, 15ನೇ ಸೆಪ್ಟೆಂಬರ್ 2009 ಮತ್ತು 16ನೇ ಸೆಪ್ಟೆಂಬರ್ 2009)**

**(ಕ್ರಮಾಂಕ – 1 ರಿಂದ 3)**

**ಸೋಮವಾರ, ದಿನಾಂಕ: 14ನೇ ಸೆಪ್ಟೆಂಬರ್ 2009**


ಪುಟ ಸಂಖ್ಯೆ

1. **ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬಗ್ಗೆ ನಡೆದ ಚರ್ಚೆಗೆ ಸರ್ಕಾರದ ಉತ್ತರ ಮತ್ತು ಸ್ಪಷ್ಟೀಕರಣ:** 1-255

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು)

ಶ್ರೀ ಸಿದ್ದರಾಮಯ್ಯ

ಶ್ರೀ ಹೆಚ್.ಡಿ. ರೇವಣ್ಣ

ಶ್ರೀ ಕೆ.ಎಸ್. ಈಶ್ವರಪ್ಪ (ಇಂಧನ ಸಚಿವರು)

ಶ್ರೀ ಟಿ.ಬಿ. ಜಯಚಂದ್ರ

ಶ್ರೀ ವೆಂಕಟರಾವ್ ನಾಡಗೌಡ

ಶ್ರೀ ಅಪ್ಪಾಜಿ ಎಸ್. ನಾಡಗೌಡ

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್

ಶ್ರೀ ಪ್ರಕಾಶ್ ಬಿ. ಹುಕ್ಕೇರಿ

ಶ್ರೀ ಹೆಚ್.ಸಿ. ಬಾಲಕೃಷ್ಣ

ಶ್ರೀ ಬಿ. ರಮಾನಾಥ ರೈ

ಶ್ರೀ ಹೆಚ್.ಎಸ್. ಮಹದೇವಪ್ರಸಾದ್

ಶ್ರೀ ಎಸ್.ಕೆ. ಬೆಳ್ಳುಬ್ಬಿ

ಶ್ರೀ ಸುನೀಲ್ ಹೆಗಡೆ

ಶ್ರೀ ಎ. ಮಂಜು

ಪುಟ ಸಂಖ್ಯೆ

ಶ್ರೀ ಬಂಡೆಪ್ಪ ಕಾಶೆಂಪೂರ್

ಶ್ರೀ ಗೋಪಾಲ ಭಂಡಾರಿ

ಶ್ರೀ ಎಂ.ಸಿ. ಅಶ್ವತ್ಥ್

ಶ್ರೀ ಕೆ. ಸುರೇಶ್‌ಗೌಡ

ಶ್ರೀ ಕೆ. ರಾಜು

ಶ್ರೀ ಎನ್.ಹೆಚ್. ಶಿವಶಂಕರ ರೆಡ್ಡಿ

ಶ್ರೀ ಕರಡಿ ಸಂಗಣ್ಣ ಅಮರಪ್ಪ

ಶ್ರೀ ಕೆ.ಪಿ. ಪಾಟೀಲ್

ಶ್ರೀ ರಮೇಶ್ ಭೂಸನೂರು

ಶ್ರೀ ಯು.ಟಿ. ಖಾದರ್

ಶ್ರೀ ಹೆಚ್.ಕೆ. ಕುಮಾರಸ್ವಾಮಿ

ಶ್ರೀ ಎನ್. ಸಂಪಂಗಿ

ಶ್ರೀ ಕಿಮ್ಮನೆ ರತ್ನಾಕರ್

ಶ್ರೀ ಹೆಚ್.ಎಸ್. ಪ್ರಕಾಶ್

ಡಾ. ಎಂ. ಸುಧಾಕರ್

ಶ್ರೀ ಆರ್. ಅಶೋಕ್ (ಸಾರಿಗೆ ಸಚಿವರು)

ಶ್ರೀ ಕೆ.ಬಿ. ಚಂದ್ರಶೇಖರ್

ಶ್ರೀ ಎಂ.ಪಿ. ಕುಮಾರಸ್ವಾಮಿ

ಶ್ರೀಮತಿ ಸೀಮಾ ಮಸೂತಿ ಅಕೋಕ್

ಶ್ರೀ ಎನ್. ಯೋಗೀಶ್ ಭಟ್

ಶ್ರೀ ಬಸವರಾಜ್ ಬೊಮ್ಮಾಯಿ
(ಜಲಸಂಪನ್ಮೂಲ ಸಚಿವರು)

*****

# ಕರ್ನಾಟಕ ವಿಧಾನಸಭೆ

## ಹದಿಮೂರನೇ ವಿಧಾನಸಭೆ

## ಮೂರನೆಯ ಅಧಿವೇಶನ

ಶ್ರೀ ಜಗದೀಶ್ ಶೆಟ್ಟರ್

ಅಧ್ಯಕ್ಷರು

## ಮಂಗಳವಾರ, ದಿನಾಂಕ: 15ನೇ ಸೆಪ್ಟೆಂಬರ್ 2009


ಪುಟ ಸಂಖ್ಯೆ

1. **ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ.** 256–293

**ವಿಷಯ:** ಕರ್ನಾಟಕ ವಿದ್ಯುತ್ ನಿಗಮ ನಿಯಮಿತ ಸಂಸ್ಥೆಯು ನಿಯಮ ಬಾಹಿರವಾಗಿ M/s Bhatia International Limited, Indore ಹಾಗೂ Chennai ಸಂಸ್ಥೆಗಳಿಂದ MMTC, Bangalore ಇಲ್ಲಿಗೆ ಆಮದು ಕಲ್ಲಿದ್ದಲನ್ನು ಖರೀದಿಸಿರುವ ಬಗ್ಗೆ.

ಶ್ರೀ ಹೆಚ್.ಡಿ. ರೇವಣ್ಣ

(ನಿಯಮ 69ರ ಮೇರೆಗೆ ಚರ್ಚಿಸಲು ನಿಲುವಳಿ ಸೂಚನೆಯನ್ನು ಪರಿವರ್ತಿಸಲಾಯಿತು)

2. **ನಿಯಮ 69ರ ಮೇರೆಗೆ ಚರ್ಚೆ:** 294–404

**ವಿಷಯ:** ರಾಜ್ಯದಲ್ಲಿ ಉಂಟಾಗಿರುವ ಭೀಕರ ಬರ ಹಾಗೂ ಅತೀವೃಷ್ಟಿಯಿಂದ ಜನ ಹಾಗೂ ಜಾನುವಾರುಗಳಿಗೆ ತೀವ್ರ ಸ್ವರೂಪದ ತೊಂದರೆಯಾಗಿರುವ ಬಗ್ಗೆ.

ಶ್ರೀ ಟಿ.ಬಿ. ಜಯಚಂದ್ರ

ಶ್ರೀ ಬಂಡೆಪ್ಪ ಕಾಶೆಂಪೂರ್

ಶ್ರೀ ಪ್ರಕಾಶ್ ಈಶ್ವರ ಖಂಡ್ರೆ

ಶ್ರೀ ಶ್ರೀಕಾಂತ್ ಕುಲಕರ್ಣಿ

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್

ಶ್ರೀ ಬಿ.ಪಿ. ಹರೀಶ್

ಶ್ರೀ ಕರಡಿ ಅಮರಪ್ಪ ಸಂಗಣ್ಣ

ಪುಟ ಸಂಖ್ಯೆ

ಶ್ರೀ ಬಿ.ಸಿ. ಪಾಟೀಲ್
ಶ್ರೀ ಈಶಣ್ಣ ಗುಳಗಣ್ಣನವರ್
ಶ್ರೀ ಸುಭಾಶ್ ಗುತ್ತೇದಾರ್
ಶ್ರೀ ಪಿ.ಎಂ. ಅಶೋಕ
ಶ್ರೀ ನೆಹರು ಓಲೇಕಾರ್
ಶ್ರೀ ಎಂ. ಟಿ. ಕೃಷ್ಣಪ್ಪ
ಶ್ರೀ ರಹೀಂ ಖಾನ್

*****

**ಬುಧವಾರ, ದಿನಾಂಕ: 16ನೇ ಸೆಪ್ಟೆಂಬರ್ 2009**

**1. ಶಾಸನ ರಚನೆ :** 405–406

ಕರ್ನಾಟಕ ವಿಧಾನ ಮಂಡಲದ ವೇತನಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳು (ಎರಡನೇ ತಿದ್ದುಪಡಿ) ವಿಧೇಯಕ 2009.

ವಿಧೇಯಕದ ಮಂಡನೆ ಹಾಗೂ ಅಂಗೀಕಾರ

**(ಅನುಬಂಧ–1)**

ಪುಟ ಸಂಖ್ಯೆ

2. **ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಲಾದ ವಿಷಯ:** 407–541

(ಅ) **ವಿಷಯ:** ಕರ್ನಾಟಕ ವಿದ್ಯುತ್ ನಿಗಮ ನಿಯಮಿತ ಸಂಸ್ಥೆಯು ನಿಯಮ ಬಾಹಿರವಾಗಿ ವಿವಿಧ ಸಂಸ್ಥೆಗಳಿಂದ ಆಮದಾದ ಕಲ್ಲಿದ್ದಲನ್ನು ಖರೀದಿಸಿರುವುದರಿಂದ ರಾಜ್ಯದ ಬೊಕ್ಕಸಕ್ಕೆ ಕೋಟ್ಯಾಂತರ ರೂಪಾಯಿಗಳ ನಷ್ಟ ಉಂಟಾಗಿರುವ ಕುರಿತು ನಿಯಮ 69ರ ಅಡಿ ಚರ್ಚೆಗೆ ಸಮಯ ನಿಗದಿಗೊಳಿಸುವ ಬಗ್ಗೆ.

ಶ್ರೀ ಹೆಚ್. ಡಿ. ರೇವಣ್ಣ

(ಆ) **ವಿಷಯ:** ರಾಜ್ಯದಲ್ಲಿ ಉಂಟಾದ ಭೀಕರ ಬರ ಹಾಗೂ ಅತೀವೃಷ್ಟಿಯ ಬಗ್ಗೆ ಚರ್ಚೆ.

ಶ್ರೀ ವಿ. ಶ್ರೀನಿವಾಸ ಪ್ರಸಾದ್

ಶ್ರೀ ಸಿದ್ದರಾಮಯ್ಯ
(ವಿರೋಧ ಪಕ್ಷದ ನಾಯಕರು)

ಶ್ರೀಮತಿ ಅನಿತಾ ಕುಮಾರಸ್ವಾಮಿ

ಶ್ರೀ ಹೆಚ್.ಡಿ. ರೇವಣ್ಣ

ಶ್ರೀ ಕರುಣಾಕರ ರೆಡ್ಡಿ (ಕಂದಾಯ ಇಲಾಖೆ)

ಶ್ರೀ ಬಿ.ಎಸ್. ಯಡಿಯೂರಪ್ಪ
(ಮುಖ್ಯಮಂತ್ರಿಗಳು)

(ಇ) **ವಿಷಯ:** ನಿಯಮ 191ರ ಅಡಿಯಲ್ಲಿ ರಾಜ್ಯದ ಮಾಜಿ ಮುಖ್ಯಮಂತ್ರಿಗಳ ವಿರುದ್ಧ ಹಕ್ಕುಚ್ಯುತಿ ಪ್ರಸ್ತಾಪವನ್ನು ಮಂಡಿಸಲು ಅನುಮತಿ ಕೋರಿಕೆ.

ಶ್ರೀ ಆರ್. ಅಶೋಕ್ (ಸಾರಿಗೆ ಸಚಿವರು)

ಶ್ರೀ ಬಿ.ಎನ್. ಬಚ್ಚೇಗೌಡ
(ಕಾರ್ಮಿಕ ಸಚಿವರು)

ಶ್ರೀ ಸಿದ್ದರಾಮಯ್ಯ
(ವಿರೋಧ ಪಕ್ಷದ ನಾಯಕರು)

ಶ್ರೀ ಕೆ. ಎಸ್. ಈಶ್ವರಪ್ಪ

ಶ್ರೀ ಹೆಚ್. ಸಿ. ಬಾಲಕೃಷ್ಣ

(ಸದನವನ್ನು ಅನಿರ್ದಿಷ್ಟಾವಧಿಗೆ ಮುಂದೂಡಲಾಯಿತು)

*****

**ಕರ್ನಾಟಕ ವಿಧಾನಸಭೆ**

**(13ನೇ ವಿಧಾನಸಭೆ – 3ನೇ ಅಧಿವೇಶನ)**

**ಸೋಮವಾರ 14ನೇ ಸೆಪ್ಟೆಂಬರ್ 2009ರಂದು ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 11.00 ಗಂಟೆಗೆ ಸಮಾವೇಶಗೊಂಡಿತ್ತು. ಅಧ್ಯಕ್ಷರು ಶ್ರೀ ಜಗದೀಶ್ ಶೆಟ್ಟರ್ ರವರು ಪೀಠವನ್ನು ಅಲಂಕರಿಸಿದ್ದರು.**

**11.00 A.M.**

**ಅಧ್ಯಕ್ಷರು:** ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬಗ್ಗೆ ಇದುವರೆಗೆ ಏನು ಚರ್ಚೆ ನಡೆಯಿತು ಅದಕ್ಕೆ ಮಾನ್ಯ ಮುಖ್ಯಮಂತ್ರಿಯವರು ಉತ್ತರವನ್ನು ಕೊಡಬೇಕು. ಇದರ ಬಗ್ಗೆ further discussion ಬೇಡ. ಮೊನ್ನೆ ತಾವೆಲ್ಲಾ ಮಾತುಕೊಟ್ಟಿದ್ದೀರಿ. ಅಂದು ರಾತ್ರಿ 9.30 ಗಂಟೆಯವರೆಗೆ ಈ ವಿಚಾರದ ಬಗ್ಗೆ ಚರ್ಚೆ ಮಾಡಿದ್ದೇವೆ. ಇಂದು ಬೆಳಿಗ್ಗೆ ಮುಖ್ಯಮಂತ್ರಿಯವರು ಉತ್ತರ ಕೊಡಬೇಕೆಂದು ನಿರ್ಣಯವಾಗಿದೆ. ಮಾನ್ಯ ಮುಖ್ಯಮಂತ್ರಿಗಳ ಉತ್ತರದ ನಂತರ ತಮ್ಮ adjournment motionನ್ನು ಪ್ರಸ್ತಾಪ ಮಾಡುವುದಕ್ಕೆ ನಾನು ಅವಕಾಶ ಕೊಡುತ್ತೇನೆ. ಇನ್ನೂ ನಾಳೆ ಮತ್ತು ನಾಡಿದ್ದು ಅಧಿವೇಶನವಿದೆ. ಖಂಡಿತ ಅದಕ್ಕೆ ಅವಕಾಶ ಕೊಡುತ್ತೇನೆ. ಆದರೆ, ಇವತ್ತು ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ವಿಷಯ ಮುಗಿದುಹೋಗಲಿ.

**ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು) :** ನಾನು, ಜಯಚಂದ್ರರವರು ಮತ್ತು ಅನೇಕ ಜನ ಸದಸ್ಯರುಗಳು ತಮಗೆ ಕೆ.ಐ.ಎ.ಡಿ.ಬಿ.ಯಲ್ಲಿ ಆಗಿರುವ ಅವ್ಯವಹಾರದ ಬಗ್ಗೆ ಚರ್ಚೆ ಮಾಡಬೇಕೆಂದು ಒಂದು ನೋಟೀಸ್‌ನ್ನು ಕೊಟ್ಟಿದ್ದೇವೆ. ಅದನ್ನು ಚರ್ಚೆಗೆ ತೆಗೆದುಕೊಳ್ಳಬೇಕು. ಅದಕ್ಕೂ ಮೊದಲು ನಾವು ಇದರ ಬಗ್ಗೆ ಪ್ರಿಲಿಮಿನರಿ ಸಬ್‌ಮಿಷನ್‌ನ್ನು ಮಾಡುತ್ತೇನೆ. ಅನಂತರ ನೀವು ಏನು ತೀರ್ಮಾನ ಮಾಡಿತ್ತೀರೋ ಅದರಂತೆ ಮಾಡೋಣ.

**ಅಧ್ಯಕ್ಷರು:** ತಾವು ಕೊಟ್ಟಿರುವ ನೋಟಿಸ್ ಮತ್ತು ಅವರು ಕೊಟ್ಟಿರುವ ನೋಟಿಸ್ ಇದೆ. ಇಲ್ಲವೆಂದು ನಾನು ಹೇಳಲಿಲ್ಲ. ಆದರೆ, ವಿರೋಧ ಪಕ್ಷದ

ನಾಯಕರಲ್ಲಿ ನಾನು ವಿನಂತಿ ಮಾಡಿಕೊಳ್ಳುವಂಥದ್ದು, ಪ್ರಿಲಿಮಿನರಿ ಸಬ್‌ಮಿಷನ್ ಎಂದರೆ ಹೆಚ್ಚುಕಡಿಮೆ ಚರ್ಚೆಯೇ ಪ್ರಾರಂಭವಾದಂತೆ.

**ಶ್ರೀ ಸಿದ್ದರಾಮಯ್ಯ:** ಇಲ್ಲ.

**ಅಧ್ಯಕ್ಷರು:** ಹೌದು. ಏಕೆಂದರೆ ಇದುವರೆಗೆ adjournment motionದ್ದು ಏನೇನಾಗಿದೆ ಎಂಬುದು ನನಗೆ ಎಲ್ಲಾ ಗೊತ್ತಿದೆ. ನೀವು ಪ್ರಿಲಿಮಿನರಿ ಸಬ್‌ಮಿಷನ್ ಮಾಡುವುದಕ್ಕೂ ಅವಕಾಶ ಕೊಡುತ್ತೇನೆ. ಮುಂದೆ ಯಾವ ರೀತಿಯಾಗಿ ಅದರ ಬಗ್ಗೆ ಚರ್ಚೆಯನ್ನು ಮುಂದುವರೆಸಬೇಕು ಎಂಬುದಕ್ಕೂ ನಾನು ಅವಕಾಶ ಕೊಡುತ್ತೇನೆ. ಆದ್ದರಿಂದ ನೀವು ನನಗೆ ಸ್ವಲ್ಪ ಸಹಕಾರ ಕೊಡಿ. ಮೊದಲು ಮಾನ್ಯ ಮುಖ್ಯಮಂತ್ರಿಯವರು ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ವಿಚಾರದಲ್ಲಿ ಉತ್ತರವನ್ನು ಕೊಡಲಿ. ಆ ವಿಚಾರವನ್ನು ಮೊದಲು ಕ್ಲೋಸ್ ಮಾಡೋಣ. ಬರಗಾಲದ ಬಗ್ಗೆಯೂ ತಾವು adjournment motionನ್ನು ಕೊಟ್ಟಿದ್ದೀರಿ. ಅದನ್ನು 69ನೇ ನಿಯಮ ಪರಿವರ್ತನೆ ಮಾಡಿ ಇವತ್ತೇ ಚರ್ಚೆಗೆ ಇಟ್ಟಿದ್ದೇನೆ. ಆದ್ದರಿಂದ ಒಂದೊಂದೇ subjectನ್ನು ಕ್ಲೋಸ್ ಮಾಡಿಕೊಂಡು ಹೋಗೋಣ.

**ಶ್ರೀ ಸಿದ್ದರಾಮಯ್ಯ:** ಹೆಬ್ಬಗೋಡಿ ಹತ್ತಿರ ಚರ್ಚ್ ಮೇಲೆ ನಡೆದಿರುವ ದಾಳಿಯ ಬಗ್ಗೆ ಇಲ್ಲಿ ಬೆಳಿಗ್ಗೆ ಉತ್ತರ ಕೊಡುತ್ತೇವೆಂದು ಹೇಳಿದ್ದರು. ಮುಖ್ಯಮಂತ್ರಿಗಳು ಹೊರಗಡೆಯೇ ಅನೇಕ ವಿಚಾರಗಳನ್ನು ಹೇಳುತ್ತಿದ್ದಾರೆ. ಆದರೆ, ವಿಧಾನಸಭೆಯಲ್ಲಿ ಅವರು ಉತ್ತರವನ್ನು ಕೊಟ್ಟಿಲ್ಲ. ನಾವು ಆ ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡಿದ್ದೇವೆ.

**ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):** ಆವತ್ತು ನಾನು ಅದರ ಬಗ್ಗೆ ಉತ್ತರ ಕೊಡಲು ಸಿದ್ದವಾಗಿದ್ದೆ. ಆದರೆ ತಾವೇ ಸೋಮವಾರ ಉತ್ತರ ಕೊಡಿಯೆಂದು ಹೇಳಿದಿರಿ.

**ಶ್ರೀ ಸಿದ್ದರಾಮಯ್ಯ:** ತಾವು ಉತ್ತರ ಕೊಡಿ. ಆದರೆ ಎಲ್ಲವನ್ನು ಹೊರಗಡೆಯೇ ಹೇಳಿಕೊಂಡು ಕುಳಿತುಕೊಂಡರೆ ಹೇಗೆ? ಇದಕ್ಕೆ ವಿರೋಧ ಪಕ್ಷದವರೇ ಕಾರಣ.....

**ಡಾ: ವಿ.ಎಸ್. ಆಚಾರ್ಯ (ಗೃಹ ಸಚಿವರು):** ನೀವೂ ಹೊರಗಡೆ ಹೇಳಿದ್ದೀರಿ.

**ಶ್ರೀ ಸಿದ್ದರಾಮಯ್ಯ:** ನಾವು ಹೇಳುವುದು ಬೇರೆ. ಸರ್ಕಾರ ನಡೆಸುವವರು ನೀವು. ಆದ್ದರಿಂದ ಉತ್ತರ ಕೊಡಬೇಕಾಗಿರುವವರು ನೀವು. ನಾನಲ್ಲಾ. It is your responsibility.

**ಅಧ್ಯಕ್ಷರು:** ಇದರ ಬಗ್ಗೆ ಮೊನ್ನೆ statement ಮಾಡುತ್ತೇನೆಂದು ಹೇಳಿದ್ದರು. ಇವತ್ತು ಅದನ್ನೂ ಮಾಡುತ್ತಾರೆ.

**ಶ್ರೀ ಹೆಚ್.ಡಿ. ರೇವಣ್ಣ:** ಮಾನ್ಯ ಅಧ್ಯಕ್ಷರೆ, ನನ್ನದೊಂದು ವಿಚಾರ ಇದೆ.

**ಅಧ್ಯಕ್ಷರು:** ಹೌದು ನಿಮ್ಮದೂ ಮತ್ತು ಅವರದ್ದೂ ನಿಲುವಳಿ ಸೂಚನೆ ಬಂದಿದೆ. ಮಾನ್ಯ ಮುಖ್ಯಮಂತ್ರಿಯವರ ಉತ್ತರ ಆದಮೇಲೆ ಅವರದ್ದು ಮತ್ತು ನಿಮ್ಮದು ಎರಡನ್ನೂ ತೆಗೆದುಕೊಳ್ಳೋಣ.

**ಶ್ರೀ ಹೆಚ್.ಡಿ. ರೇವಣ್ಣ:** ಆಗಲಿ.

**1. ಕೃಷಿ ಮತ್ತು ಗ್ರಾಮೀಣಾಭಿವೃದ್ಧಿಯ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ**

**ಶ್ರೀ ಬಿ.ಎಸ್. ಯಡಿಯೂರಪ್ಪ (ಮಾನ್ಯ ಮುಖ್ಯಮಂತ್ರಿಯವರು):** ಮಾನ್ಯ ಅಧ್ಯಕ್ಷರೆ, ಕಳೆದ ಮೂರು ದಿವಸಗಳಿಂದ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬಗ್ಗೆ ಅತ್ಯಂತ ಅರ್ಥಪೂರ್ಣ ಚರ್ಚೆಯಾಗಿ, ಪ್ರತಿಪಕ್ಷದ ನಾಯಕರು ಮತ್ತು ಉಪನಾಯಕರು, ರೇವಣ್ಣನವರು, ಆ ಕಡೆ ಮತ್ತು ಈ ಕಡೆ ಇರುವಂಥ ಎಲ್ಲಾ ಸದಸ್ಯರುಗಳು ಮನಬಿಚ್ಚಿ ಮಾಡನಾಡಿದ್ದಾರೆ. ಅನೇಕ ಉಪಯುಕ್ತ ಸಲಹೆಗಳನ್ನೂ ಕೊಟ್ಟಿದ್ದಾರೆ. ಸದನ ಸೇರುವ ಮೊದಲು ಏನು ಒಪ್ಪಂದ ಆಗಿತ್ತು ಆ ರೀತಿ ಕಾರ್ಯಕಲಾಪ ನಡೆಯುವುದಕ್ಕೆ ಪ್ರತಿಪಕ್ಷದ ನಾಯಕರು ಮತ್ತು ನೀವೆಲ್ಲಾ ಸಹಕಾರ ಕೊಟ್ಟಿದ್ದೀರಿ. ಒಳ್ಳೆಯ ಸಂಪ್ರದಾಯ. ನಾವು ಅಧಿಕಾರಕ್ಕೆ ಬಂದ 14 ತಿಂಗಳ ನಂತರ ಈ ಸಂದರ್ಭದಲ್ಲಿ ಜನರು ಮೆಚ್ಚುವ ರೀತಿಯಲ್ಲಿ, ಒದೊಂದು ನಿಮಿಷವೂ ವ್ಯರ್ಥವಾಗದ ರೀತಿಯಲ್ಲಿ ಚರ್ಚೆಯಾಗಿದೆ. ಅದಕ್ಕಾಗಿ ನಾನು ನಿಮಗೆಲ್ಲಾ ಹೃತ್ಪೂರ್ವಕವಾದ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಪ್ರಾರಂಭದ ದಿವಸ ಈ ಚರ್ಚೆಗೆ ಅವಕಾಶ ಸಿಗದೆ ಅಡ್ಡಿಯಾಗುತ್ತಿದೆಯೋ ಎಂಬ ಭಾವನೆಯಿಂದ ನಾನು ಸ್ವಲ್ಪ ಆವೇಶಗೊಂಡು ದುಃಖ ಉಮ್ಮಳಿಸಿದ್ದು ನಿಜ. ಆದರೆ, ಇವತ್ತು ಅತ್ಯಂತ ಆನಂದ, ತೃಪ್ತಿ, ಸಮಾಧಾನದಿಂದ ಒಬ್ಬ ರೈತನ ಮಗನಾಗಿ ಉತ್ತರವನ್ನು ಇಲ್ಲಿ ನಿಂತುಕೊಂಡು ಕೊಡುತ್ತಿದ್ದೇನೆ. ನನಗೆ ಆಸೆ ಇದೆ, ನಮ್ಮ ಅಧ್ಯಕ್ಷರು ಮತ್ತು ಪ್ರತಿಪಕ್ಷದ ನಾಯಕರು ಸಹಕಾರ

ಮಾಡಿಕೊಟ್ಟರೆ ಪ್ರತಿಯೊಂದು ಪ್ರಮುಖ ಇಲಾಖೆಯ ಬಗ್ಗೆ ಅದು ವಿದ್ಯುತ್, ನೀರಾವರಿ, ಆರೋಗ್ಯ, ಸಮಾಜ ಕಲ್ಯಾಣ ಇಲಾಖೆ ಇರಲಿ, ಇದೇ ರೀತಿಯ ಸುದೀರ್ಘವಾದ ಚರ್ಚೆ ಒಂದು, ಎರಡು ದಿವಸವಾಗಬೇಕು. ಆದ್ದರಿಂದ, ನವೆಂಬರ್‌ನಲ್ಲಿ ಸುಮಾರು 20 ದಿವಸಗಳ ಕಾಲ, ಮಾನ್ಯ ಅಧ್ಯಕ್ಷರು ನಿಗದಿ ಮಾಡಿದ ದಿವಸದಿಂದ ಈ ರೀತಿ ಪ್ರಮುಖವಾದ ವಿಷಯಗಳ ಬಗ್ಗೆ ಚರ್ಚೆ ಮಾಡೋಣ. ತಾವು ಅದರ ಬಗ್ಗೆ ಬೆಳಕು ಚೆಲ್ಲಿ. ಅದರಿಂದ ಆಡಳಿತದಲ್ಲಿ ಸುಧಾರಣೆ ತರಲು ಸಾಧ್ಯವಾಗುತ್ತದೆ. ಗೊತ್ತಿದ್ದೋ, ಗೊತ್ತಿಲ್ಲದೆಯೋ ನಮ್ಮಲ್ಲಿ ಆಗುತ್ತಿರುವ ಲೋಪದೋಷಗಳನ್ನು ತಿದ್ದಿಕೊಂಡು, ಈ ನಾಡಿನ ಜನರೇನು ನಮಗೆ ಜವಾಬ್ದಾರಿಯನ್ನು ಹೊರಿಸಿ ಇಲ್ಲಿಗೆ ಕಳುಹಿಸಿದ್ದಾರೆ. ಆ ಕರ್ತವ್ಯವನ್ನು ನಿರ್ವಹಿಸತಕ್ಕ ಪ್ರಾಮಾಣಿಕ ಪ್ರಯತ್ನವನ್ನು ಈ ಕಡೆಯಿಂದ ಮಾಡುತ್ತೇವೆ ಎಂಬ ಭರವಸೆಯನ್ನು ಈ ಮನೆಯ ಮೂಲಕ ನಾಡಿನ ಜನರಿಗೆ ಕೊಡಲು ಬಯಸುತ್ತೇನೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ವಿರೋಧ ಪಕ್ಷ ಮತ್ತು ಆಡಳಿತ ಪಕ್ಷಗಳು ಸರಿಯಾದ ರೀತಿ ಜವಾಬ್ದಾರಿಯಿಂದ ನಡೆದುಕೊಂಡು ಚರ್ಚೆಯಲ್ಲಿ ಪಾಲ್ಗೊಂಡರೆ ಬಹಳಷ್ಟು ಒಳ್ಳೆಯ ಕೆಲಸವನ್ನು, ಬಹಳಷ್ಟು ಲೋಪದೋಷಗಳನ್ನು, ಬಹಳಷ್ಟು ಭ್ರಷ್ಟಾಚಾರದ ಹಗರಣಗಳನ್ನು ನಮ್ಮ ಅಧಿಕಾರಿಗಳಲ್ಲಿರುವ ಅಲಕ್ಷ್ಯತನವೇನಿದೆ, ಆಮೆ ವೇಗದಲ್ಲಿ ಕೆಲಸ ಮಾಡುವಂಥ ಪ್ರವೃತ್ತಿಯೇನಿದೆ, ನಾವು ನೀವು ಇಲ್ಲಿ ಬಡಿದಾಡುತ್ತಿರುವ ಲಾಭವನ್ನು ಮಧ್ಯವರ್ತಿಗಳು ಪಡೆಯುವಂಥ ಪರಿಸ್ಥಿತಿಯೇನಿದೆ. ಅದಕ್ಕೆ ಪರಿಹಾರ ಸಿಗಬಹುದು, ಸುಧಾರಣೆಯಾಗಬಹುದು, ಆ ದಿಕ್ಕಿನಲ್ಲಿ ನಾಲ್ಕು ಹೆಜ್ಜೆಗಳನ್ನಿಡಬಹುದೆಂದು ನನ್ನ ಭಾವನೆ. ನಾವು ಆಡಳಿತ ಪಕ್ಷದಲ್ಲಿ ಇದ್ದಾಕ್ಷಣ ವಿರೋಧ ಪಕ್ಷದವರು ಟೀಕೆ ಟಿಪ್ಪಣಿಗಳನ್ನೇ ಮಾಡಬಾರದು ಎಂಬುದಿಲ್ಲ. ನಿಮ್ಮದೇ ಆದ ಭಾಷೆಯಲ್ಲಿ ಸರ್ಕಾರಕ್ಕೆ ಬಿಸಿ ಮುಟ್ಟುವ ರೀತಿಯಲ್ಲಿ ಜಾಗೃತಿ ಮೂಡುವ ರೀತಿ ಮಾತನಾಡುವುದಕ್ಕೆ ಸಂಪೂರ್ಣ ಸ್ವಾತಂತ್ರ್ಯ ನಿಮಗಿದೆ. ಆದಕ್ಕೆ ಪ್ರತಿಪಕ್ಷವಾಗಿ ನೀವು ಇರುವುದು. ನಾನು ಅಲ್ಲಿ ಕುಳಿತಿದ್ದಾಗ ಈ ಕೆಲಸವನ್ನು ಮಾಡಿದ್ದೇನೆ. ಆಗ ನಾನು ಬಹಳಷ್ಟು ಆಕ್ರೋಶಕ್ಕೆ ಒಳಗಾದ್ದದ್ದುಂಟು. ಕಾರಣ ಆಗ ನನ್ನ ಹಿಂದೆ ಸಂಖ್ಯೆ ಕಡಿಮೆ ಇತ್ತು. ಪ್ರಾಮಾಣಿಕವಾಗಿ ನಾನು ಒಪ್ಪಿಕೊಳ್ಳಬೇಕೆಂದರೆ ಈ ಮನೆಯಲ್ಲಿ ಇಬ್ಬರು ಇದ್ದಾಗ, ಬಹಳ influence

ಮಾಡಿ ನೀವು ಒಬ್ಬರನ್ನು ತೆಗೆದುಕೊಂಡು ಹೋದ ಮೇಲೆ ನಾನು ಒಬ್ಬನೇ ಇದ್ದಾಗಲೂ ಕೂಡ ಹಿಂದಿರುಗಿ ನೋಡದೆಯೇ ಆಗ ಮಾನ್ಯ ಸಿದ್ದರಾಮಣ್ಣನವರೇ ನಾನು ಮಾತನಾಡಿದ್ದುಂಟು. ಅದನ್ನು ನೀವು ಕುಳಿತು observe ಮಾಡಿದ್ದೀರಿ. ಅನೇಕ ಜನ ಹಿರಿಯ ಸದಸ್ಯರು ಅಂದು ನಮ್ಮ ಜೊತೆಗಿದ್ದವರಿಗೆ ನಮ್ಮ ಪರಿಸ್ಥಿತಿ ಏನಿತ್ತು ಎಂದು ಗೊತ್ತು. ಮಾನ್ಯ ವಸಂತ ಬಂಗೇರರವರು ನಗುತ್ತಿದ್ದಾರೆ. ನಾನು ಒಬ್ಬ ಇದ್ದಾಗ ಎಲ್ಲರೂ ಗಮನಿಸಿದ್ದಾರೆ. ಇವತ್ತು ನಾಡಿನ ಜನರ ಆಶೀರ್ವಾದದಿಂದ ಇಲ್ಲಿ ಕುಳಿತು ಕೆಲಸ ಮಾಡುವಂತಹ ಅವಕಾಶ ಸಿಕ್ಕಾಗ, ಪ್ರತಿಪಕ್ಷದವರು ಟೀಕೆಯನ್ನೇ ಮಾಡಬಾರದು ಎಂದು ನಾನು ನಿರೀಕ್ಷೆ ಮಾಡುವುದು ಸರ್ವಥಾ ಸರಿಯಲ್ಲ. ಖಂಡಿತಾ ನಿಮ್ಮ ಟೀಕೆಗಳಿಗೆ ಸ್ವಾಗತ ಇದೆ. ಆ ಟೀಕೆಗಳು ಸತ್ಯಾಂಶದಿಂದ ಕೂಡಿರಬೇಕು. ಸತ್ಯಕ್ಕೆ ಹತ್ತಿರವಿರಬೇಕು. ಅಷ್ಟೇ ನನ್ನ ವಿನಮ್ರವಾದ ಬಿನ್ನಹ. ಕೆಲವರು ಮೊಸರಿನಲ್ಲಿ ಇಲ್ಲದ ಕಲ್ಲನ್ನು ಹುಡುಕುವಂತಹ ಪ್ರಯತ್ನವನ್ನು ಮಾಡಿದ್ದೀರಿ, ಮಾಡುತ್ತಿದ್ದೀರಿ. ಅದು ಎಷ್ಟರಮಟ್ಟಿಗೆ ಸರಿ ಎಂದು ಇಲ್ಲಿ ಸುದೀರ್ಘವಾಗಿ ಚರ್ಚೆಗಳಾದಾಗ ಗೊತ್ತಾಗುತ್ತದೆ. ಆವೇಶದಲ್ಲಿ ನಾನೂ ಕೂಡ ಹೇಳಿದ್ದು ಉಂಟು. ಅಂಕಿ ಅಂಶಗಳನ್ನು ಹೇಳಬೇಕಾದರೆ ನಮಗೆ ಅನೇಕ ಸಂದರ್ಭದಲ್ಲಿ ಕೋಟಿ ರೂಪಾಯಿಗಳಿಗೆ ಬೆಲೆಯೇ ಇಲ್ಲ. ನಾವು ಗೊತ್ತಿಲ್ಲದ ಹಾಗೆ ನೂರಾರು ಕೋಟಿ, ಸಾವಿರಾರು ಕೋಟಿ ರೂಪಾಯಿಯ ಶಬ್ದಗಳನ್ನು ಉಪಯೋಗಿಸಿಬಿಡುತ್ತೇವೆ. ಮಾಧ್ಯಮದಲ್ಲಿ ಅದೇ ಬರುತ್ತದೆ. ನಮ್ಮನ್ನು ನಂಬಿ ಆಯ್ಕೆ ಮಾಡಿ ಕಳುಹಿಸಿರುವಂತಹ ಜನತೆಗೆ ಹೌದಾ ಇಷ್ಟೆಲ್ಲಾ ಅನಾಹುತ ಆಗುತ್ತಿದೆಯಾ ಎಂದು ಅನಿಸುತ್ತದೆ. ಹೌಸಿಂಗ್ ಬಗ್ಗೆ ಚರ್ಚೆಯಾದಾಗ ಈ ಅನುಭವ ನಿಮಗೂ ಬಂದಿದೆ. ನಮಗೂ ಬಂದಿದೆ. ಇದು ಆಗಬಾರದು. ವಾಸ್ತವಿಕ ಅಂಕಿ ಅಂಶಗಳ ಆಧಾರದ ಮೇಲೆ ದಾಖಲೆಯೊಂದಿಗೆ ಅಥವಾ ಸಂದರ್ಭ ಬಂದರೆ ನಮ್ಮನ್ನು ಸರಿ ದಾರಿಯಲ್ಲಿ ತೆಗೆದುಕೊಂಡು ಹೋಗುವ ಮಾಹಿತಿಯೊಂದಿಗೆ ಮಾನ್ಯ ರೇವಣ್ಣನವರೇ, ಈ ಒಂದು ಸದನದಲ್ಲಿ ಚರ್ಚೆ ಆಗಬೇಕು ಎನ್ನುವ ವಿನಂತಿಯನ್ನು ನಾನು ಈ ಸಂದರ್ಭದಲ್ಲಿ ಮಾಡುವುದಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಅಧ್ಯಕ್ಷರೆ, ನಾನು ಯೀಲ್ಡ್ ಆಗುವುದಿಲ್ಲ. Sir,

please tell him. ರೇವಣ್ಣವರೆ, ನೀವು ಮಾತನಾಡುವಾಗ ನಾನು ಮಾಡನಾಡಿಲ್ಲ. ನಾನು ಇನ್ನೂ ಪ್ರಾರಂಭವೇ ಮಾಡಿಲ್ಲ.

ಕಳೆದ ವರ್ಷ ನೀವು ಯಾರೂ ಕೇಳದಿದ್ದರೂ ಸಹ ನಾನು ಜನತೆಗೆ ಪ್ರತಿ ನೂರು ದಿನಕ್ಕೊಮ್ಮೆ ನಮ್ಮ ಸಾಧನೆ ಬಗ್ಗೆ, ನಾವು ಮಾಡುವಂತಹ ಕೆಲಸ ಕಾರ್ಯದ ಬಗ್ಗೆ ಜನತಾ ನ್ಯಾಯಾಲಯದ ಮುಂದೆ ಎಂದರೆ ಜನರ ಮುಂದೆ ವರದಿಯನ್ನು ಒಪ್ಪಿಸುತ್ತೇನೆ ಎಂದು ಹೇಳಿದ್ದೇನೆ. ನೂರು ದಿವಸಗಳಿಗೊಮ್ಮೆ, ಇನ್ನೂರು ದಿವಸಗಳಿಗೊಮ್ಮೆ ಒಂದು ವರ್ಷದ ಸಾಧನೆಯನ್ನು ಜನರಿಗೆ ಒಪ್ಪಿಸುವಂತಹ ಪ್ರಯತ್ನ ನಾನು ಮಾಡಿದ್ದೇನೆ. ನನಗೆ ಅನಿಸುತ್ತದೆ ಹಿಂದೆ ಯಾವಾಗಲೂ ಮಾಡಿರಲಿಲ್ಲ. ಏಕೆ? ಕಾರಣವೇನೆಂದರೆ ಜನತೆಗೆ ವಾಸ್ತವಿಕ ವರದಿಯನ್ನು ಒಪ್ಪಿಸಿದಾಗ ಖರ್ಚಾಗಿರಬಹುದು, ಖರ್ಚು ಮಾಡದಿರಬಹುದು. ಅಭಿವೃದ್ಧಿಯಾಗಿರಬಹುದು, ಆಗದಿರಬಹುದು, ಕೆಲವು ಕ್ಷೇತ್ರದಲ್ಲಿ ಸಾಧನೆಯಾಗಿರಬಹುದು, ಕೆಲವು ಕ್ಷೇತ್ರದಲ್ಲಿ ಸಾಧನೆಯಾಗಿಲ್ಲದಿರಬಹುದು. ಆದರೆ ನಮ್ಮ ಅಧಿಕಾರಿಗಳು ಪ್ರತಿ ನೂರು ದಿನಗಳಿಗೊಮ್ಮೆ ಏನಾಗಿದೆ, ಏನಿಲ್ಲವೆನ್ನುವ ವಾಸ್ತವಿಕವಾದಂತಹ ಅಂಶವನ್ನು ಜವಾಬ್ದಾರಿಯಿಂದ ಕೊಟ್ಟಾಗ ಒಳ್ಳೆಯ ಕೆಲಸ ಮಾಡಿದ ಅಧಿಕಾರಿಗಳಿಗೆ ನಾವು ಬೆನ್ನು ತಟ್ಟಬಹುದು. ತಪ್ಪು ಮಾಡಿದವರು, ನಿರ್ಲಕ್ಷ್ಯ ಮಾಡಿದವರು ಎಚ್ಚರ ವಹಿಸಬಹುದು. ಈ ದೃಷ್ಟಿಯಿಂದ ಇದು ಬಹಳ ಉಪಕಾರಿಯಾಗಿದೆ. ಇದನ್ನು ಜನ ಒಪ್ಪಿದ್ದಾರೆ, ಮೆಚ್ಚಿದ್ದಾರೆ. ಈ ಒಂದು ಹೊಸ ಪದ್ಧತಿಯನ್ನು ಜನ ಒಪ್ಪಿದ್ದಾರೆಂದು ನಾನು ಅಂದುಕೊಂಡಿದ್ದೇನೆ. ಈ ವರ್ಷ ಸಹ ಸೆಪ್ಟೆಂಬರ್ 2009ರವರೆಗೆ ಆದ ಅರ್ಧ ವಾರ್ಷಿಕ ಪ್ರಗತಿಯ ವರದಿಯನ್ನು ಅಕ್ಟೋಬರ್ ತಿಂಗಳಿನಲ್ಲಿ ನಾನು ಜನರಿಗೆ ಒಪ್ಪಿಸುವವನಿದ್ದೇನೆ. ಆದರೂ ಸಹ ಸದನದಲ್ಲಿ ಚರ್ಚೆಯಾದ ಕೆಲವು ಪ್ರಮುಖ ವಿಷಯಗಳ ಬಗ್ಗೆ ಸಂಕ್ಷಿಪ್ತವಾಗಿ ಉತ್ತರವನ್ನು ಕೊಡುವಂಥದ್ದು ನನ್ನ ಕರ್ತವ್ಯ. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಅಡಿಯಲ್ಲಿ ನಾವು ಮಾಡಿದಂತಹ ಕೆಲಸ ಕಾರ್ಯಗಳನ್ನು ಬೇರೆ ರಾಜ್ಯಗಳಿಗೆ ಹೋಲಿಸಿದಾಗ ದೇಶದಲ್ಲಿ ನಮ್ಮ ರಾಜ್ಯ ನಾಲ್ಕನೇ ಸ್ಥಾನದಲ್ಲಿದೆ. ಇದು ತೃಪ್ತಿ ತರುವಂಥದ್ದಲ್ಲ. ನಾಲ್ಕನೇ ಸ್ಥಾನದಲ್ಲಿದ್ದರೂ ಸಹ ಆಂಧ್ರಪ್ರದೇಶಕ್ಕೆ ಹೋಲಿಸಿದಾಗ, ಮಾನ್ಯ

ಜಯಚಂದ್ರರವರೆ, ಅವರು ಆರು ತಿಂಗಳಿಗೆ ಎರಡು ಸಾವಿರ ಚಿಲ್ಲರೆ ಕೋಟಿ ರೂಪಾಯಿ ಖರ್ಚು ಮಾಡಿದ್ದಾರೆ ಎಂದಾಗ ನಾವು ಮೊನ್ನೆವರೆಗೂ ಖರ್ಚು ಮಾಡಿರುವುದು 442 ಕೋಟಿ ರೂಪಾಯಿ ಮಾತ್ರ. ಇದು ತುಲನೆ ಮಾಡುವುದಕ್ಕೆ ಬರುವುದಿಲ್ಲ. ಆದರೆ ನಾವು ಗಮನಿಸಬೇಕಾಗಿರುವುದು 2006–07ರಲ್ಲಿ ವರ್ಷಪೂರ್ತಿ 248 ಕೋಟಿ ರೂಪಾಯಿ ಖರ್ಚಾಗಿದೆ. 2007–08ರಲ್ಲಿ 233 ಕೋಟಿ ರೂಪಾಯಿ ಖರ್ಚಾಗಿದೆ ಎಂದರೆ ಕಡಿಮೆಯಾಯಿತು. 2008–09ರಲ್ಲಿ ವರ್ಷಪೂರ್ತಿ 358 ಕೋಟಿ ರೂಪಾಯಿ ಖರ್ಚಾಗಿದೆ. 2009–10ರಲ್ಲಿ September 12ರವರೆಗೆ 442 ಕೋಟಿ ರೂಪಾಯಿ ಖರ್ಚಾಗಿದೆ. ಇದು ಪ್ರಾಮಾಣಿಕವಾಗಿ, ಮಾನ್ಯ ರೋಷನ್‌ಬೇಗ್‌ರವರೆ, ನಮಗೆ ಸಮಾಧಾನವಾಗಿಲ್ಲ.

**ಶ್ರೀ ಸಿದ್ದರಾಮಯ್ಯ:** ಹಾಗೆ ಅದರ ಜೊತೆಜೊತೆಯಲ್ಲೇ 2006–07ರಲ್ಲಿ ಎಷ್ಟು ಹಣ ಲಭ್ಯ ಇತ್ತು? 2007–08, 2008–09ರಲ್ಲಿ ಎಷ್ಟು ಲಭ್ಯವಿತ್ತು? ಅದರಲ್ಲಿ ಎಷ್ಟು ಉಳಿಕೆಯಾಯಿತು ಎನ್ನುವುದನ್ನು ಹೇಳಿಬಿಡಿ.

**ಶ್ರೀ ಬಿ.ಎಸ್. ಯಡಿಯೂರಪ್ಪ:** ಈ ವಿವರವನ್ನು ನೋಡಿದಾಗ ಹಿಂದಿನ ವರ್ಷಗಳಿಗಿಂತ ಈ ವರ್ಷ ಹೆಚ್ಚು ಪ್ರಗತಿಯಾಗಿದೆ. ಈ ಸಾರಿ ನೀವೆಲ್ಲ ಸಹಕಾರವನ್ನು ಕೊಟ್ಟರೆ ಕನಿಷ್ಠ 2,000 ಕೋಟಿ ರೂಪಾಯಿಯನ್ನು ಮುಟ್ಟಬೇಕೆಂದು ಪ್ರಯತ್ನವನ್ನು ಮಾಡಿದ್ದೇವೆ. ಕೇಂದ್ರದವರು ಹಣವನ್ನು ಬಿಡುಗಡೆ ಮಾಡುವುದಕ್ಕೂ ಕಾಯದೆ ರಾಜ್ಯ ಸರ್ಕಾರದ ಬೊಕ್ಕಸದಿಂದ 70 ಕೋಟಿ ರೂಪಾಯಿ ಬಿಡುಗಡೆ ಮಾಡಿದ್ದೇವೆ. ನಾನು ನಮ್ಮ ಹಣಕಾಸಿನ ಇಲಾಖೆಯವರಿಗೆ 70 ಕೋಟಿ ರೂ. ಅಲ್ಲ 170 ಕೋಟಿ ರೂ. ಆಗಲಿ ಕೆಲಸಗಳು ನಿಲ್ಲಬಾರದು. ಬಿಡುಗಡೆ ಮಾಡಬೇಕೆಂದು ಹೇಳಿದ್ದೆನು. ನಾವು ಕೇಂದ್ರಕ್ಕೆ ಮನವಿಯನ್ನು ಸಲ್ಲಿಸಿದ್ದು ಅವರು ನಮ್ಮ ಪ್ರಗತಿಯನ್ನು ಮೆಚ್ಚಿ ಕಳೆದ ವಾರ ಇನ್ನೂ 438 ಕೋಟಿ ರೂಪಾಯಿ ಬಿಡುಗಡೆ ಮಾಡಿದ್ದಾರೆ. ಈ ಹಣವನ್ನೂ ಸಹ ಶೀಘ್ರದಲ್ಲೇ ಜಿಲ್ಲೆಗಳಿಗೆ ಬಿಡುಗಡೆ ಮಾಡಿ ಪ್ರಾಮಾಣಿಕವಾಗಿ ಹಣ ಉಪಯೋಗವಾಗುವ ರೀತಿಯಲ್ಲಿ ಪ್ರಯತ್ನವನ್ನು ಮಾಡುತ್ತೇನೆ. ಆದ್ದರಿಂದ ಆ ಕಡೆ ಕುಳಿತು ಪ್ರತಿಪಕ್ಷದ ನಾಯಕರು ಮಾತನಾಡುವಂತಹ

ಕಾಲದಲ್ಲಿ ಹಿಂದಿನ ವರ್ಷಗಳಿಗೆ ಹೋಲಿಕೆ ಮಾಡಿದರೆ ಇಷ್ಟಾಗಿದೆ. ಇನ್ನೂ ಹೆಚ್ಚಾಗಬೇಕೆಂದು ನೀವು ಅಪೇಕ್ಷೆ ಪಡುವುದರಲ್ಲಿ ಏನೂ ತಪ್ಪಿಲ್ಲ. ಆ ದಿಕ್ಕಿನಲ್ಲಿ ಪ್ರಾಮಾಣಿಕ ಪ್ರಯತ್ನವನ್ನು ನಾವು ಮಾಡುತ್ತೇವೆ. ನಾನು ಅಧಿಕಾರಕ್ಕೆ ಬಂದ ತಕ್ಷಣ ಈ ಮನೆಗೆ ಒಂದು ಭರವಸೆಯನ್ನು ಕೊಟ್ಟಿದ್ದೆನು. ವಿದ್ಯುತ್ ಅಭಾವದಿಂದ ರಾಜ್ಯದ ಅಭಿವೃದ್ಧಿ ಏನು ಕುಂಠಿತವಾಗುತ್ತಿದೆ. ಈ ಬಗ್ಗೆ ವಿಶೇಷವಾದಂತಹ ಕಾಳಜಿಯನ್ನು, ಗಮನವನ್ನು ಕೊಡುತ್ತೇವೆನ್ನುವ ಭರವಸೆಯನ್ನು ನಾನು ಕೊಟ್ಟಿದ್ದೇನೆ. ಮಾನ್ಯ ಸಿದ್ದರಾಮಣ್ಣನವರೆ, ಯಾವುದೇ ಒಂದು ಯೋಜನೆಯನ್ನು ತಮಗೆ ಗೊತ್ತಿರುವ ಹಾಗೆ ಅದರಲ್ಲೂ ವಿದ್ಯುತ್ ಕ್ಷೇತ್ರದಲ್ಲಿ 14–15 ತಿಂಗಳಲ್ಲಿ ಸಾಧನೆ ಮಾಡಿ ತೋರಿಸಿಬಿಡುತ್ತೇವೆಂದು ಹೇಳುವುದಕ್ಕೆ ಆಗುವುದಿಲ್ಲ. ಅದಕ್ಕೆ ಸಮಯ ಬೇಕಾಗುತ್ತದೆ. ದೀರ್ಘಕಾಲದ ಯೋಜನೆಗಳು, ದೂರದೃಷ್ಟಿ ಇರಬೇಕಾಗುತ್ತದೆ. ಇವುಗಳ ಬಗ್ಗೆ ಚಿಂತನೆ ಇದ್ದಿದ್ದರೆ ಇವತ್ತು ವಿದ್ಯುತ್ ಅಭಾವವನ್ನು ಎದುರಿಸುವಂತಹ ಪರಿಸ್ಥಿತಿ ಬರುತ್ತಿರಲಿಲ್ಲ. ನಮಗೆ ಅವಕಾಶಗಳೇ ಇರಲಿಲ್ಲವೆಂದು ಇಲ್ಲ. ಆದರೆ ಎಲ್ಲೋ ಒಂದು ಕಡೆ ಈ ಬಗ್ಗೆ ಗಂಭೀರ ಚಿಂತನೆಯಾಗಲಿಲ್ಲ. ಕಳೆದ ಕೆಲವು ವರ್ಷಗಳಿಂದ ವಿದ್ಯುತ್ ಕೊರತೆ ಶೇಕಡ 20ಕ್ಕೂ ಹೆಚ್ಚು ಮೀರಿದೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ವಿದ್ಯುತ್ ಉತ್ಪಾದನೆಗೆ ಹೆಚ್ಚಿನ ಆದ್ಯತೆಯನ್ನು ನೀಡಿ ಪ್ರಪ್ರಥಮ ಬಾರಿಗೆ ಕೆಪಿಸಿಎಲ್‌ಗೆ 500 ಕೋಟಿ ರೂಪಾಯಿ ಷೇರು ಬಂಡವಾಳವಾಗಿ ನಾವು ಕೊಟ್ಟಿದ್ದೇವೆ. ಅನುಷ್ಠಾನದಲ್ಲಿದ್ದಂತಹ ವಿದ್ಯುತ್ ಯೋಜನೆಗಳನ್ನು ಶೀಘ್ರವಾಗಿ ಪೂರ್ಣಗೊಳಿಸುವುದಕ್ಕೋಸ್ಕರ 2008–09ರಲ್ಲಿ ಹಿಂದಿನ ಸರ್ಕಾರಗಳ ಶ್ರಮದ ಜೊತೆಗೆ ಸೇರಿ 1,252 ಮೆಗಾವ್ಯಾಟ್ ಹೆಚ್ಚುವರಿ ವಿದ್ಯುತ್ ಸಾಮರ್ಥ್ಯವನ್ನು ಕಲ್ಪಿಸಲಾಗಿದೆ. 2008–09ರ ಸಾಲಿನಲ್ಲಿ 1300 ಮೆ.ವ್ಯಾ. ವಿದ್ಯುತ್ ಅನ್ನು ಉತ್ಪಾದನೆ ಮಾಡುವುದಕ್ಕೆ, ಸಾಮರ್ಥ್ಯ ಹೆಚ್ಚಿಸುವುದಕ್ಕೆ ನಾವು ಪ್ರಾಮಾಣಿಕ ಪ್ರಯತ್ನ ಮಾಡಿಯೇ ಮಾಡುತ್ತೇವೆ. ಒಟ್ಟಿನಲ್ಲಿ ಈ ಮನೆಯ ಮೂಲಕ ನಾಡಿನ ಜನರಿಗೆ ಭರವಸೆಯನ್ನು ಕೊಡುತ್ತೇನೆ; ಮುಂದಿನ ಚುನಾವಣೆಗೆ ಹೋಗುವ ಮುನ್ನ, ಈ ಅವಧಿ ಮುಗಿಯುವುದಕ್ಕಿಂತ ಮುನ್ನ 5000 ಮೆ.ವ್ಯಾ. ವಿದ್ಯುತ್ ಅನ್ನು ಉತ್ಪಾದಿಸುವ ಸಾಮರ್ಥ್ಯ ಹೆಚ್ಚಿಸುತ್ತೇವೆ

**11.30 A.M.**

ಎನ್ನುವ ಭರವಸೆಯನ್ನು ಕೊಡುತ್ತೇವೆ. ನೂರಕ್ಕೆ ನೂರು ಆ ಸಾಧನೆಯನ್ನು ಮಾಡಿ ತೋರಿಸುತ್ತೇವೆ ಎನ್ನುವ ಭರವಸೆಯನ್ನು ಈ ನಾಡಿನ ಜನರಿಗೆ ಈ ದಿಸೆಯಲ್ಲಿ ಕೊಡುವುದಕ್ಕೆ ಇಷ್ಟಪಡುತ್ತೇನೆ. ಚಪ್ಪಾಳೆ ಯಾವುದೂ ಬೇಡ. ಅವರು ಮೌನವಾಗಿ ಕೇಳುತ್ತಿದ್ದಾರೆ. ಸಾಧನೆಯಾದ ಮೇಲೆ ಮಾಡೋಣ.

(ಗೊಂದಲ)

**ಶ್ರೀ ಸಿದ್ದರಾಮಯ್ಯ:** ಸಾಧನೆ ಮಾಡಿದ್ದರೆ ಅಭಿನಂದಿಸಲು ನಾವು ತಯಾರಿದ್ದೇವೆ. ಆದರೆ, ಮಾಡದಿರುವ ಸಾಧನೆಯನ್ನು ಮಾಡಿದ್ದೇವೆಂದು ಹೇಳುತ್ತೀರಲ್ಲ?

(ಗೊಂದಲ)

**ಶ್ರೀ ಕೆ.ಎಂ. ವಿರೂಪಾಕ್ಷಪ್ಪ:** ಹೇಳುವುದಕ್ಕೆ ನಿಮಗೇನೂ ಕಾರಣವಿಲ್ಲ. ಅವರು ಹೇಳಿದ ಮೇಲೆ ಮಾಡಿಯೇ ಮಾಡುತ್ತಾರೆ. wait ಮಾಡಿ ಸ್ವಲ್ಪ.

(ಗೊಂದಲ)

**ಅಧ್ಯಕ್ಷರು:** ವಿರೂಪಾಕ್ಷಪ್ಪನವರೆ ಕುಳಿತುಕೊಳ್ಳಿ. ಅವರು yield ಆಗಿಲ್ಲ, ಅವರು ಉತ್ತರ ಕೊಟ್ಟ ಮೇಲೆ ಮಾತನಾಡಿ. ವಿರೂಪಾಕ್ಷಪ್ಪನವರೆ, argument ಮಾಡಬೇಡಿ. ಏನಾದರೂ ಮಾತನಾಡುವುದಿದ್ದರೆ ಆಮೇಲೆ ಮಾತನಾಡಿ.

**ಶ್ರೀ ಹೆಚ್.ಸಿ. ಬಾಲಕೃಷ್ಣ:** ಇವರು ಹೇಳುವುದು ಹೇಗಿದೆ ಎಂದರೆ, ರೈತರಿಗೆ ಉಚಿತ ವಿದ್ಯುತ್ ಕೊಡುತ್ತೇವೆಂದು ಹೇಳಿದರಲ್ಲ, ಆ ತರಹ ಸತ್ಯವನ್ನು ಈಗ ಹೇಳುತ್ತಿದ್ದಾರೆ. ಆ ತರಹ ಸತ್ಯ ದಯಮಾಡಿ ಹೇಳಬೇಡಿ.

(ಗೊಂದಲ)

**ಶ್ರೀ ಸಿದ್ದರಾಮಯ್ಯ:** 1252 ಮೆ.ವ್ಯಾ. ವಿದ್ಯುತ್ ಅನ್ನು ಕಳೆದ ಒಂದು ವರ್ಷದಲ್ಲಿ ಉತ್ಪಾದನೆ ಮಾಡಿದ್ದೇವೆ ಎಂದು ಹೇಳಿದರು. ಅದರ ವಿವರ ಕೊಟ್ಟರೆ ಒಳ್ಳೆಯದು. ಅದು ಎಲ್ಲಿಂದ ಬಂದಿದೆ? ಯಾವಾಗ ಪ್ರಾರಂಭವಾಯಿತು? ಆ project ಅನ್ನು ನೀವು ಯಾವಾಗ ಮಾಡಿದಿರಿ?

ಅದನ್ನು ಹೇಳಬೇಕು. ಬಳ್ಳಾರಿ ಶಾಖೋತ್ಪಾದನೆ ಘಟಕವನ್ನು ಉದ್ಘಾಟನೆ ಮಾಡಿ, 500 ಮೆ.ವ್ಯಾ. ವಿದ್ಯುತ್ ಅನ್ನು ನಮ್ಮ ಸರ್ಕಾರ ಮಾಡಿದೆ ಎಂದು ನೀವು ಬೆನ್ನು ತಟ್ಟಿಕೊಳ್ಳುವುದಕ್ಕಾಗುವುದಿಲ್ಲ.

(ಗೊಂದಲ)

**ಅಧ್ಯಕ್ಷರು:** ಮಾನ್ಯ ಮುಖ್ಯಮಂತ್ರಿಯವರು ಎದ್ದು ನಿಂತಿದ್ದಾರೆ, ಅವರು ಉತ್ತರ ಕೊಟ್ಟ ನಂತರ ತಾವು ಏನಾದರೂ ಕೇಳುವುದಿದ್ದರೆ ಕೇಳಿ.

(ಗೊಂದಲ)

**ಶ್ರೀ ಸಿದ್ದರಾಮಯ್ಯ:** ಇಂಧನ ಬಗ್ಗೆ ವಿಶೇಷ ಚರ್ಚೆ ಮಾಡೋಣವೆಂದು ಈಶ್ವರಪ್ಪನವರು ಹೇಳಿದ್ದರು. ಈಗ ಸುಮ್ಮನಿದ್ದಾರೆ.

**ಶ್ರೀ ಕೆ.ಎಸ್. ಈಶ್ವರಪ್ಪ (ಇಂಧನ ಸಚಿವರು):** ನವೆಂಬರ್ ತಿಂಗಳಿನಲ್ಲಿ ವಿಶೇಷ ಚರ್ಚೆ ಮಾಡೋಣ.

**ಶ್ರೀ ಸಿದ್ದರಾಮಯ್ಯ:** ನಾಳೆಯೋ, ನಾಡಿದ್ದೋ ಚರ್ಚೆ ಮಾಡಿ.

**ಶ್ರೀ ಬಿ.ಎಸ್. ಯಡಿಯೂರಪ್ಪ:** ಈ ರಾಜ್ಯದ ಇತಿಹಾಸದಲ್ಲಿ ಮೊದಲ ಸಾರಿ ಛತ್ತೀಸ್‌ಘಡಕ್ಕೆ ಹೋಗಿ 2400 ಮೆ.ವ್ಯಾ. ವಿದ್ಯುತ್ ಅನ್ನು ಉತ್ಪಾದನೆ ಮಾಡುವುದಕ್ಕೆ MOU ಗೆ ಸಹಿ ಮಾಡಿ, ಅಲ್ಲಿ ಜಮೀನುಗಳನ್ನು ಕೊಳ್ಳುವಂಥ ಪ್ರಕ್ರಿಯೆ ಪೂರ್ಣ ಮಾಡಿದ್ದು, ಇನ್ನೊಂದೆರಡು ತಿಂಗಳಲ್ಲಿ ಆ ಕೆಲಸವನ್ನು ಶುಭಾರಂಭ ಮಾಡುವುದಕ್ಕೆ ಎಲ್ಲಾ ರೀತಿಯ ಸಿದ್ಧತೆ ನಡೆದಿದೆ. ಬಳ್ಳಾರಿಯಲ್ಲಿ 3ನೇ ಹಂತದ 500 ಮೆ.ವ್ಯಾ. ವಿದ್ಯುತ್ ಉತ್ಪಾದನೆಗೆ ಕೆಲಸ ಪ್ರಾರಂಭವಾಗಿದೆ. ಯಡ್ಲಾಪುರದಲ್ಲಿ 800 ಮೆ.ವ್ಯಾ. ವಿದ್ಯುತ್ ಉತ್ಪಾದನೆ ಮಾಡುವುದಕ್ಕೆ ಕ್ರಮ ಕೈಗೊಳ್ಳುತ್ತಿದ್ದೇವೆ. ಕೂಡಿಗೆಯಲ್ಲಿ 4200 ಮೆ.ವ್ಯಾ. ತದಡಿಯಲ್ಲಿ ಅನಿಲ ಆಧಾರಿತ ವಿದ್ಯುತ್ ಉತ್ಪಾದನೆಯಲ್ಲಿ 2100 ಮೆ.ವ್ಯಾ. ಯರಮರಸ್‌ನಲ್ಲಿ 1600 ಮೆ.ವ್ಯಾ., ಗುಂಡ್ಯಾ ಜಲ ವಿದ್ಯುತ್‌ನಲ್ಲಿ 800 ಮೆ.ವ್ಯಾ. ನವೀಕರಿಸುವಂಥ ಇಂಧನ ಯೋಜನೆಗಳಿಂದ 1000 ಮೆ.ವ್ಯಾ. ಹೀಗೆ ಖಾಸಗಿ ಕ್ಷೇತ್ರದಲ್ಲಿಯೂ ವಿದ್ಯುತ್ ಉತ್ಪಾದನೆಗೆ ಅನುಮೋದನೆ ನೀಡಿದ ಯೋಜನೆಗಳನ್ನು ಸೇರಿಸಿದರೆ,

ಭಗವಂತ ಎಲ್ಲವನ್ನೂ ಸರಿಯಾಗಿ ನಡೆಸಿದರೆ, ಮುಂದಿನ ಕೆಲವೇ ವರ್ಷಗಳಲ್ಲಿ ಸುಮಾರು 20,000 ಮೆ.ವ್ಯಾ. ಹೆಚ್ಚುವರಿ ವಿದ್ಯುತ್ ಉತ್ಪಾದನಾ ಸ್ಥಾಮರ್ಥ್ಯವನ್ನು ಸೃಷ್ಟಿಸುವುದಕ್ಕೆ ಅವಕಾಶವಿದೆ. ಮಾಡಿಬಿಡುತ್ತೇವೆಂದು ಬೆನ್ನು ತಟ್ಟಿಕೊಳ್ಳುವುದಕ್ಕೆ ನಾನ್ಯಾರು? ಅವಕಾಶವಿದೆ. ಕಳೆದ ವರ್ಷ ಕಷ್ಟದ, ಬರಗಾಲದ ಸಮಯವಾಗಿತ್ತು. ರಾಜ್ಯದಲ್ಲಿ ವಿದ್ಯುತ್ ಕೊರತೆಯನ್ನು ಬಹಳ ಗಂಭೀರವಾಗಿ ಎದುರಿಸಬೇಕಾಯಿತು. ಹೊರ ರಾಜ್ಯದಿಂದ ವಿದ್ಯುತ್ ಖರೀದಿ ಮಾಡಿ ರಾಜ್ಯಕ್ಕೆ ವಿತರಣೆ ಮಾಡಬೇಕಾಯಿತು. 2004–05ರಲ್ಲಿ ವಿದ್ಯುತ್ ಕ್ಷೇತ್ರಕ್ಕೆ ಸರ್ಕಾರ ನೀಡಿದ ಅನುದಾನ 2,040 ಕೋಟಿ ರೂ. ಆಗಿದ್ದರೆ, 2005–06ರಲ್ಲಿ 1901 ಕೋಟಿ ರೂ. ಕೊಟ್ಟಿತ್ತು. ನಮ್ಮ ಅವಧಿಯಲ್ಲಿ ಅಂದರೆ 2008–09ರಲ್ಲಿ ಈ ಕ್ಷೇತ್ರಕ್ಕೆ 2,926 ಕೋಟಿ ರೂ.ಗಳ ಅನುದಾನವನ್ನು ನೀಡಿದ್ದೇವೆ. ಸಿದ್ದರಾಮಯ್ಯನವರು, ಪ್ರತಿಪಕ್ಷದವರು ಮೆಚ್ಚಬೇಕಾದ ಅಂಕಿ ಅಂಶವನ್ನು ಹೇಳುತ್ತೇನೆ ಅಥವಾ ನಿಮಗೆ ಸಮಾಧಾನವಾಗುವಂಥ ಅಂಕಿ ಅಂಶವನ್ನು ಹೇಳುತ್ತೇನೆ. ಬಡವರಿಗೆ ಬೇಕಾದ ಭಾಗ್ಯಜ್ಯೋತಿ, ಕುಟೀರ ಜ್ಯೋತಿ ಯೋಜನೆಯಲ್ಲಿ 2004–05ರಲ್ಲಿ ಕೇವಲ 65,445 ಮನೆಗಳಿಗೆ ಸಂಪರ್ಕ ನೀಡಿದ್ದರೆ, 2005–06ರಲ್ಲಿ 35,076 ಮನೆಗಳಿಗೆ ಈ ಸೌಲಭ್ಯ ನೀಡಲಾಗಿತ್ತು. ನಮ್ಮ ಸರ್ಕಾರದ ಅವಧಿಯಲ್ಲಿ ಅಂದರೆ 2008–09ರಲ್ಲಿ 2 ಲಕ್ಷದ 67 ಸಾವಿರದ 798 ಮನೆಗಳಿಗೆ ಸೌಲಭ್ಯ ಕಲ್ಪಿಸಿದ್ದೇವೆ. ರೇವಣ್ಣನವರೆ, this is not correct.

(ಗೊಂದಲ)

**ಶ್ರೀ ಸಿದ್ದರಾಮಯ್ಯ:** 2004–05ರಲ್ಲಿ ಇದ್ದ ತಾವು ಆ ಯೋಜನೆ ಹೆಸರು ಹೇಳಬೇಕು. ರಾಜೀವ್ ಗಾಂಧಿ ಗ್ರಾಮೀಣ ವಿದ್ಯುದೀಕರಣ ಯೋಜನೆ ಜಾರಿಯಲ್ಲಿತ್ತು. ಕೇಂದ್ರ ಸರ್ಕಾರದಿಂದ ಎಷ್ಟು ಬಂದಿದೆ? ಅದನ್ನು ಹೇಳಬೇಕು. ಎರಡು ವರ್ಷಗಳಲ್ಲಿ ಎಷ್ಟು ಕೊಟ್ಟಿದ್ದೀರಿ ಅದನ್ನು ಹೇಳಿ.

(ಗೊಂದಲ)

**ಶ್ರೀ ಹೆಚ್.ಡಿ. ರೇವಣ್ಣ:** ದಯಮಾಡಿ, ಯಾವ್ಯಾವಾಗ ಎಂದು ಹೇಳಿ. ಕೇಂದ್ರ ಸರ್ಕಾರದಿಂದ 9%, 10% ಪರ್ಸೆಂಟೋ ಎಂದು ಹೇಳಿ.

**(ಗೊಂದಲ)**

**ಅಧ್ಯಕ್ಷರು:** ರೇವಣ್ಣ, ಜಯಚಂದ್ರರವರೆ, ಅವರು complete ಮಾಡಿದ ನಂತರ ತಾವು ಸ್ಪಷ್ಟೀಕರಣ ಕೇಳಬಹುದು. ಮಾನ್ಯ ಮುಖ್ಯಮಂತ್ರಿಯವರು yield ಆಗಿಲ್ಲ.

**ಶ್ರೀ ಬಿ.ಎಸ್. ಯಡಿಯೂರಪ್ಪ:** I am very sorry. ನಾನು yield ಆಗುವುದಿಲ್ಲ.

**ಶ್ರೀ ಟಿ.ಬಿ. ಜಯಚಂದ್ರ:** ರಾಜ್ಯದ ಅಭಿವೃದ್ಧಿಗೆ ಕೇಂದ್ರ, ರಾಜ್ಯ ಸರ್ಕಾರದ ಪಾಲೂ ಇದೆ.

**(ಗೊಂದಲ)**

**ಶ್ರೀ ಬಿ.ಎಸ್. ಯಡಿಯೂರಪ್ಪ:** ನಾನು ಪೂರ್ತಿ ಮಾತನಾಡುವುದಕ್ಕೂ ಬಿಡುವುದಿಲ್ಲ.

**(ಗೊಂದಲ)**

**ಅಧ್ಯಕ್ಷರು:** ಮುಖ್ಯಮಂತ್ರಿಯವರು ಹೇಳುವವರೆಗಾದರೂ ಕಾಯಿರಿ. ಅವರೇನು ಹೇಳುತ್ತಾರೆನ್ನುವುದನ್ನು ಕೇಳಿ. ಮಾನ್ಯ ಮುಖ್ಯಮಂತ್ರಿಯವರು ತಮ್ಮ ಉತ್ತರ complete ಮಾಡಲಿ. ಆಮೇಲೆ, ತಮ್ಮ ಸ್ಪಷ್ಟೀಕರಣ ಇದ್ದರೆ ಕೇಳಿ. ನಿಮಗೆಲ್ಲ ಅವಕಾಶ ಕೊಡುತ್ತೇನೆ.

**(ಗೊಂದಲ)**

**ಶ್ರೀ ಬಿ.ಎಸ್. ಯಡಿಯೂರಪ್ಪ:** ನೀವು ಹೇಳಿದ ಹಾಗೆ ಉತ್ತರ ಕೊಡುವುದಕ್ಕಾಗುವುದಿಲ್ಲ.

**(ಗೊಂದಲ)**

**ಅಧ್ಯಕ್ಷರು:** ಮಾನ್ಯ ಮುಖ್ಯಮಂತ್ರಿಯವರು ಏನು ಉತ್ತರ ಕೊಡುತ್ತಾರೆನ್ನುವುದನ್ನು ಕೇಳಿ. ನಂತರ ಏನಾದರೂ ಸ್ಪಷ್ಟೀಕರಣ ಕೇಳಿ.

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:** ಜನರಿಗೆ ಸರಿಯಾದ ಸಂದೇಶ ಹೋಗಬೇಕು. ಈ ರಾಜ್ಯದ ಮುಖ್ಯಮಂತ್ರಿಯಾಗಿ ಹೇಳಬೇಕು. What we expect from the Government is....

**(ಗೊಂದಲ)**

**ಶ್ರೀ ಬಿ.ಎಸ್. ಯಡಿಯೂರಪ್ಪ:** It is not correct. ನಾನು ಒಪ್ಪುವುದಿಲ್ಲ.

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:** ಕೇಂದ್ರ ಸರ್ಕಾರದ ಕಾರ್ಯಕ್ರಮ ಯಾವುದು? ಯಾವ ಕಾರ್ಯಕ್ರಮದಲ್ಲಿ ಎಷ್ಟು ಖರೀದಿ ಮಾಡಿದ್ದಾರೆ? ಯಾವ ಕಾರ್ಯಕ್ರಮದಡಿಯಲ್ಲಿ ವಿದ್ಯುತ್ ಕೊಟ್ಟಿದ್ದಾರೆ? ಹಣ ಯಾರು ಕೊಟ್ಟರು? ಎಷ್ಟು ಖರ್ಚಾಗಿದೆ? ಎಲ್ಲಾ ಹೇಳಬೇಕು.

**(ಗೊಂದಲ)**

**ಅಧ್ಯಕ್ಷರು:** ವಿರೋಧ ಪಕ್ಷದ ನಾಯಕರೆ, ಮುಖ್ಯಮಂತ್ರಿಯವರು yield ಆಗಿಲ್ಲ.

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:** ನೀವು ಕೊಟ್ಟಿರತಕ್ಕಂಥ target ಎಷ್ಟು? ರಾಜ್ಯದ ಪಾಲು ಎಷ್ಟು? ಕೇಂದ್ರ ಸರ್ಕಾರದ ಪಾಲು ಎಷ್ಟು?

**(ಗೊಂದಲ)**

**ಅಧ್ಯಕ್ಷರು:** ವಿರೋಧ ಪಕ್ಷದ ನಾಯಕರೆ, ನಾನು ಮಾನ್ಯ ಮುಖ್ಯಮಂತ್ರಿಯವರಿಗೆ ಉತ್ತರ ಕೊಡಲು ಅವಕಾಶ ಕೊಟ್ಟಿದ್ದೇನೆ. ಅವರು

ಹೇಳುವುದರಲ್ಲಿ ಏನಾದರೂ ಮಾಹಿತಿ ಬಿಟ್ಟಿದ್ದರೆ ನಂತರ ನೀವು ಕೇಳಿ. ನೀವು ಅವರಿಗೆ opportunity ಕೊಡಿ. ನೀವು ಮಾತನಾಡುವಾಗ ಅವರು intervention ಮಾಡಿದ್ದಾರೆಯೇ? ಯಾರೂ ಮಾಡಿಲ್ಲ.

(ಗೊಂದಲ)

**ಶ್ರೀ ಸಿದ್ದರಾಮಯ್ಯ:** ನಾನು ಹೇಳುವುದು ಬೇರೆ. ಸರ್ಕಾರದ ಕಡೆಯಿಂದ ಮುಖ್ಯಮಂತ್ರಿಯವರು ಹೇಳುವಾಗ ಸತ್ಯ, ವಾಸ್ತವಾಂಶವನ್ನು ಹೇಳಬೇಕು. ಅದು ಬಿಟ್ಟು ಸುಮ್ಮನೆ ನಾವು ಮಾಡಿದ್ದೇವೆ, ನಾವು ಮಾಡಿದ್ದೇವೆ ಎಂದರೆ ಏನರ್ಥ?

(ಗೊಂದಲ)

**ಅಧ್ಯಕ್ಷರು:** ಸಿದ್ದರಾಮಯ್ಯನವರೆ, ತಾವು ಮಾತನಾಡುವಾಗ ಅವರ್ಯಾರೂ intervene ಮಾಡಿಲ್ಲ. ಮುಖ್ಯಮಂತ್ರಿಯವರು ಮೊದಲು complete ಮಾಡಲಿ. ಯಾವುದಾದರೂ ವಿಷಯ ಬಿಟ್ಟಿದ್ದರೆ ನೀವು ಹೇಳಿ.

(ಗೊಂದಲ)

**ಶ್ರೀ ಸಿದ್ದರಾಮಯ್ಯ:** As a matter of fact, this Government is implementing Rajiv Gandhi Rural Electrification Scheme.

(ಗೊಂದಲ)

**ಅಧ್ಯಕ್ಷರು:** ಸಿದ್ದರಾಮಯ್ಯನವರೆ, ಅವರು yield ಆಗಿಲ್ಲ. ಮುಖ್ಯಮಂತ್ರಿಯವರು complete ಮಾಡಲಿ. ಏನಾದರೂ ಮಾಹಿತಿ ಸರಿಯಿರದಿದ್ದರೆ ಮತ್ತೆ ಅದನ್ನು ಹೇಳಲಿಕ್ಕೆ ತಮಗೆ ಅವಕಾಶ ಇದ್ದೇ ಇದೆ. ತಾವು ಮಾತನಾಡುವಾಗ ಅವರೆಲ್ಲರೂ ಸುಮ್ಮನೆ ಕುಳಿತಿದ್ದರು. ಈಗ ಮಾನ್ಯ ಮುಖ್ಯಮಂತ್ರಿಯವರು ಮಾತನಾಡಲಿ.

(ಗೊಂದಲ)

**ಅಧ್ಯಕ್ಷರು:** ರೇವಣ್ಣನವರೆ, please ಕುಳಿತುಕೊಳ್ಳಿ. ಮಾನ್ಯ ಮುಖ್ಯಮಂತ್ರಿಯವರು continue ಮಾಡಲಿ.

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:** ನಮಗೆ allotment ಆದ 1500 M.W. ನಲ್ಲಿ 1000 M.W. ಕೂಡ ಕೊಟ್ಟಿಲ್ಲ. ಕೇಂದ್ರ ಸರ್ಕಾರ ನಮಗೆ ದ್ರೋಹ ಮಾಡಿದೆ. ಇದರ ಬಗ್ಗೆ ಯಾರೂ ಮಾತನಾಡುತ್ತಿಲ್ಲವಲ್ಲ?

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:** ಅದರ ಬಗ್ಗೆಯೂ ಚರ್ಚೆ ಮಾಡೋಣ, ಬನ್ನಿ. ಕೇಂದ್ರ ಸರ್ಕಾರದಿಂದ ಎಷ್ಟು ತೆಗೆದುಕೊಳ್ಳಲಿಕ್ಕಾಗಲಿಲ್ಲವೆನ್ನುವುದನ್ನೂ ಚರ್ಚೆ ಮಾಡೋಣ.

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:** ಮಾನ್ಯ ಮುಖ್ಯಮಂತ್ರಿಯವರು ನಿಮ್ಮ ಸಹಕಾರದಿಂದಲೂ ಮಾಡಿದ್ದೇವೆಂದು ಹೇಳಿದ್ದಾರೆ.

**(ಗೊಂದಲ)**

**ಅಧ್ಯಕ್ಷರು:** ಎಲ್ಲರೂ ಕುಳಿತುಕೊಳ್ಳಿ. ಈಗ ಮಾನ್ಯ ಮುಖ್ಯಮಂತ್ರಿಯವರು ತಮ್ಮ ಉತ್ತರವನ್ನು ಮುಂದುವರೆಸಲಿ.

**ಶ್ರೀ ಕೆ.ಎಸ್. ಈಶ್ವರಪ್ಪ:** ಕೇಂದ್ರ ಸರ್ಕಾರ ಹೇಗೆ ಹೇಗೆ ದ್ರೋಹ ಮಾಡಿದೆ, ರಾಜ್ಯಕ್ಕೆ ಬರಬೇಕಾದ್ದನ್ನು ಕೊಟ್ಟಿಲ್ಲ. ತಮಿಳುನಾಡಿಗೆ, ಆಂಧ್ರಕ್ಕೆ ಹೇಗೆ ಕೊಡುತ್ತಿದ್ದಾರೆ, ಅದರ ಬಗ್ಗೆ ನೀವ್ಯಾರೂ ಪ್ರಸ್ತಾಪವೇ ಮಾಡಿಲ್ಲ.

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:** ಕೇಂದ್ರ ಸರ್ಕಾರ ಕೊಟ್ಟಿರುವ ಹಣವನ್ನು ನಿಮ್ಮ ಸರ್ಕಾರದಿಂದ ಖರ್ಚು ಮಾಡುವುದಕ್ಕಾಗುತ್ತಿಲ್ಲ.

**ಶ್ರೀ ಕೆ.ಎಸ್. ಈಶ್ವರಪ್ಪ:** ಯಾವುದು ಖರ್ಚಾಗಿಲ್ಲ? ಎಲ್ಲಾ ಮಾಡಲಾಗಿದೆ.

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:** NREGS ಹಣ ಖರ್ಚು ಮಾಡುವುದಕ್ಕಾಗಲಿಲ್ಲ. ವಿದ್ಯುದ್ದೀಕರಣದಲ್ಲಿ ಹಣ ಖರ್ಚು ಮಾಡಲಿಕ್ಕಾಗಲಿಲ್ಲ.

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:** ಯಾವ್ಯಾವುದಕ್ಕೆ ಹಣ ಬಂದಿದೆ? ನಿಮಗೆ ತೋರಿಸುತ್ತೇವೆ.

**(ಗೊಂದಲ)**

**ಅಧ್ಯಕ್ಷರು:** ಈಶ್ವರಪ್ಪನವರೆ, ರೇವಣ್ಣನವರೆ, please ಕುಳಿತುಕೊಳ್ಳಿ. ಮುಖ್ಯಮಂತ್ರಿಯವರ ಉತ್ತರ complete ಮಾಡಲಿ. ಈಗ ನಾನು ಮಾನ್ಯ ಮುಖ್ಯಮಂತ್ರಿಯವರಿಗೆ ಉತ್ತರ ಕೊಡಲು ಅವಕಾಶ ಕೊಟ್ಟಿದ್ದೇನೆ. ಅವರು yield ಆಗಿಲ್ಲ. ಅವರು complete ಮಾಡಲಿ. ಯಾರಾದರೂ ಏನಾದರೂ ಸ್ಪಷ್ಟೀಕರಣ ಕೇಳುವುದಿದ್ದರೆ ನಂತರ ಕೇಳಿ. ಈಶ್ವರಪ್ಪನವರೆ, ಜಯಚಂದ್ರರವರೆ, please ಕುಳಿತುಕೊಳ್ಳಿ.

**(ಗೊಂದಲ)**

**ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್:** ಮಾನ್ಯ ಅಧ್ಯಕ್ಷರೆ, ತಾವು ಈಶ್ವರಪ್ಪನವರಿಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದೀರಾ?

**(ಗೊಂದಲ)**

**ಅಧ್ಯಕ್ಷರು:** Please, ಎಲ್ಲರೂ ಕುಳಿತುಕೊಳ್ಳಿ. ಎಲ್ಲರೂ ಈ ರೀತಿ ಪರಸ್ಪರ ಮಾತನಾಡಬಾರದು.

**ಶ್ರೀ ಸಿದ್ದರಾಮಯ್ಯ:** ವಿದ್ಯುದ್ದೀಕರಣಕ್ಕೆ ಹಣ ಕೊಡುವವರು ಯಾರು? ಎಷ್ಟು ಬರುತ್ತದೆ? ಎಷ್ಟು ಹಣ ಖರ್ಚಾಗಿದೆ ಅದನ್ನೂ ಹೇಳಲಿ.

(ಗೊಂದಲ)

**ಅಧ್ಯಕ್ಷರು:** ಎಲ್ಲರೂ ಕುಳಿತುಕೊಳ್ಳಿ. ರೇವಣ್ಣನವರೆ, ನಾಯ್ಡುರವರೆ ದಯವಿಟ್ಟು ಕುಳಿತುಕೊಳ್ಳಿ. ನೀವೂ ಸಹ ಈ ರೀತಿ behave ಮಾಡಿದರೆ ಹೇಗೆ? ಇದು ಸರಿಯಲ್ಲ. ಇದು ನನಗೆ ಅರ್ಥವಾಗುತ್ತಿಲ್ಲ. ನೀವು senior Leaders ಆಗಿ ಈ ರೀತಿ behave ಮಾಡಿದರೆ ಹೇಗೆ?

(ಗೊಂದಲ)

**ಶ್ರೀ ಕೆ.ಎಸ್. ಈಶ್ವರಪ್ಪ:** ಕೇಂದ್ರ ಸರ್ಕಾರಕ್ಕೆ ಕಣ್ಣಿಲ್ಲ, ಕಿವಿ ಇಲ್ಲ, ಮೂಗು ಇಲ್ಲ, ಹೃದಯವಿಲ್ಲ.

(ಗೊಂದಲ)

**ಶ್ರೀ ಸಿದ್ದರಾಮಯ್ಯ:** ಕೇಂದ್ರ ಸರ್ಕಾರ ದ್ರೋಹ ಮಾಡಿದೆ ಎಂದು ಹೇಳಿರುವ ಮಾತನ್ನು, ಪದವನ್ನು ಈಶ್ವರಪ್ಪನವರು ವಾಪಸ್ಸು ತೆಗೆದುಕೊಳ್ಳಬೇಕು.

(ಗೊಂದಲ)

**ಶ್ರೀ ಕೆ.ಎಸ್. ಈಶ್ವರಪ್ಪ:** ಕೇಂದ್ರ ಸರ್ಕಾರಕ್ಕೆ ಕಣ್ಣಿಲ್ಲ, ಮೂಗು ಇಲ್ಲ, ಹೃದಯ ಇಲ್ಲ, ರಾಜ್ಯದ ಜನರು ಸಾಯುತ್ತಿದ್ದಾರೆ.

(ಗೊಂದಲ)

**ಅಧ್ಯಕ್ಷರು:** ವಿರೋಧ ಪಕ್ಷದ ನಾಯಕರೆ, ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

**ಶ್ರೀ ಸಿದ್ದರಾಮಯ್ಯ:** ಈ ರೀತಿ ಕೇಂದ್ರ ಸರ್ಕಾರದ ಮೇಲೆ ಹೇಳುವುದು ಸರಿಯಲ್ಲ.

(ಗೊಂದಲ)

**ಅಧ್ಯಕ್ಷರು:** ಈ ರೀತಿ ಎಲ್ಲರೂ behave ಮಾಡಿದರೆ ನಾನು ಸದನವನ್ನು ಹೇಗೆ ನಡೆಸುವುದು?

**ಶ್ರೀ ಕೆ.ಎಸ್. ಈಶ್ವರಪ್ಪ:** ನೀವು ಯಾರ್ಯಾದರೂ ಒಂದು ಮಾತಾದರೂ ಆಡಿದ್ದೀರಾ?

**(ಗೊಂದಲ)**

**ಶ್ರೀ ಟಿ.ಬಿ. ಜಯಚಂದ್ರ:** ಮಾನ್ಯ ಮುಖ್ಯಮಂತ್ರಿಯವರು ಉತ್ತರ ಕೊಡುವಾಗ ನೀವು ಯಾವುದೋ ಹೇಳುತ್ತೀರಿ. ನೀವು ಅವರ ದಾರಿತಪ್ಪಿಸುತ್ತಿದ್ದೀರಿ.

**ಶ್ರೀ ಕೆ.ಎಸ್. ಈಶ್ವರಪ್ಪ:** ನಾನು ದಾರಿ ತಪ್ಪಿಸುತ್ತಿಲ್ಲ.

**(ಗೊಂದಲ)**

**ಅಧ್ಯಕ್ಷರು:** ಈಶ್ವರಪ್ಪನವರೆ, ಆಮೇಲೆ ನೀವೂ ಮಾತನಾಡಿ, ಅವರೂ ಮಾತನಾಡಲಿ. ಈಗ ಎಲ್ಲರೂ ಪರಸ್ಪರ ಈ ರೀತಿ ಮಾತನಾಡಿದರೆ ನಾನು ಹೇಗೆ ಸದನ ನಡೆಸುವುದು? ಯಾರೂ ಮಾತನಡಲು ಸಭಾಧ್ಯಕ್ಷರ ಒಪ್ಪಿಗೆ ತೆಗೆದುಕೊಳ್ಳುವುದಿಲ್ಲ. ಎಲ್ಲರೂ ಎದ್ದು ನಿಂತು ಪರಸ್ಪರ ಮಾತನಾಡುತ್ತೀರಿ. ಇದು ಸರಿಯಲ್ಲ. ಸಭಾಧ್ಯಕ್ಷರು ಎದ್ದು ನಿಂತಾಗ ಸದಸ್ಯರು ಕುಳಿತುಕೊಳ್ಳಬೇಕೆನ್ನುವುದು ಯಾರಿಗೂ ಗೊತ್ತಿಲ್ಲ. ಸಭಾಧ್ಯಕ್ಷರು ಎದ್ದು ನಿಂತು ಎಲ್ಲರನ್ನೂ ಕುಳಿತುಕೊಳ್ಳಿ ಎಂದು ಹೇಳಿದಾಗ ಯಾರೂ ಕುಳಿತುಕೊಳ್ಳುವುದಕ್ಕೆ ತಯಾರಿಲ್ಲ. ತಾವೆಲ್ಲ seniors ಇದ್ದೀರಿ. ಈ ರೀತಿ behave ಮಾಡಿದರೆ ನಾನು ಸದನ ಹೇಗೆ ನಡೆಸಬೇಕು? ಜಯಚಂದ್ರರವರೆ, ನೀವೇ ಪರಸ್ಪರ ಮಾತನಾಡಿಕೊಳ್ಳಿ. ಗುತ್ತೇದಾರ್‌ರವರೆ, ದಯವಿಟ್ಟು ಕುಳಿತುಕೊಳ್ಳಿ. ನಾನು ಮುಖ್ಯಮಂತ್ರಿಯವರಿಗೆ ಅವಕಾಶ ಕೊಟ್ಟಿದ್ದೇನೆ. ಅವರು ಹೇಳಿದ ನಂತರ ಏನಾದರೂ ಮಾಹಿತಿ ಸರಿಯಿಲ್ಲವೆಂದರೆ ನೀವು ಸ್ಪಷ್ಟೀಕರಣ ಕೇಳಬಹುದು. ಅದು ಬಿಟ್ಟು ಪದೇ ಪದೇ ನೀವು ಇದೇ ರೀತಿ reply ಕೊಡಬೇಕೆಂದು ಹೇಳಲಿಕ್ಕೆ ಆಗುತ್ತದೆಯೇ? ಅವರು ಏನು ಮಾಹಿತಿ ಕೊಡುತ್ತಾರೋ ಕೊಡಲಿ.

ಆಮೇಲೆ ಅದು ಸರಿಯಿಲ್ಲವೆಂದರೆ ಅದನ್ನು ನೀವು question ಮಾಡಬಹುದು. ನೀವು question ಮಾಡಲಿಕ್ಕೆ ನಾನು ನಿಮಗೆ ಅವಕಾಶ ಕೊಡುತ್ತೇನೆ. ಪ್ರತಿಯೊಂದು sentenceಗೂ ನೀವು ಈ ರೀತಿ ಮಾಡಿದರೆ ನಾನು ಸದನ ನಡೆಸುವುದು ಹೇಗೆ? ಸಭಾಧ್ಯಕ್ಷರು ಎದ್ದು ನಿಂತು ಸದಸ್ಯರು ಕುಳಿತುಕೊಳ್ಳಿ ಎಂದು ಹೇಳಿದಾಗ ಯಾರೂ respond ಮಾಡುವುದಕ್ಕೆ ತಯಾರಿಲ್ಲ. ಇದು ಒಳ್ಳೆಯದಲ್ಲ. ನಾನು ಯಾವಾಗಲೂ ಎದ್ದು ನಿಲ್ಲುವುದಿಲ್ಲ. ಸಭಾಧ್ಯಕ್ಷರು ನಿಂತ ಮೇಲೆ ಪ್ರತಿಯೊಬ್ಬ ಸದಸ್ಯರೂ ಕುಳಿತುಕೊಳ್ಳಬೇಕೆನ್ನುವುದು ನಿಯಮದಲ್ಲಿದೆ. ಅದನ್ನು ಯಾರೂ ಗಮನಿಸುತ್ತಿಲ್ಲ.

**ಶ್ರೀ ಸಿದ್ದರಾಮಯ್ಯ:** ಅದು ಎರಡೂ ಕಡೆ apply ಆಗಬೇಕಲ್ಲವೆ?

**ಅಧ್ಯಕ್ಷರು:** ಎರಡೂ ಕಡೆಗೂ ನಾನು ಹೇಳಿದ್ದೇನೆ. ನಿಮಗೂ ಹೇಳುತ್ತಿದ್ದೇನೆ, ಮಂತ್ರಿಗಳಿಗೂ ಹೇಳುತ್ತಿದ್ದೇನೆ. ಎರಡು ಕಡೆಯವರಿಗೂ ಹೇಳುತ್ತಿದ್ದೇನೆ.

**ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :** ವಿರೋಧ ಪಕ್ಷದ ನಾಯಕರಾದ ತಾವು ಮೂರೂವರೆ ಗಂಟೆ ಮಾತನಾಡಿದಿರಿ. ನಿಮಗೆ ಯಾರಾದರೂ ಅಡ್ಡಿಪಡಿಸಿದ್ದಾರೆಯೇ?

**ಶ್ರೀ ಸಿದ್ದರಾಮಯ್ಯ:** ಹೌದು. ಮೂರೂವರೆ ಗಂಟೆಯೂ ಮಾತನಾಡುತ್ತೇನೆ, ನಾಲ್ಕುವರೆ ಗಂಟೆಯೂ ಮಾತನಾಡುತ್ತೇನೆ. How can you curtail my right? You cannot curtail my right.

**ಶ್ರೀ ಎಸ್. ಸುರೇಶ್ ಕುಮಾರ್:** ತಾವು ಪೂರ್ತಿ ಮಾತನಾಡುವವರೆಗೂ ನಾವು ಶಾಂತವಾಗಿ ಕೇಳಿಸಿಕೊಂಡಿದ್ದೇವೆ, ಆಲಿಸಿದ್ದೇವೆ.

**ಶ್ರೀ ಸಿದ್ದರಾಮಯ್ಯ:** Actually ಅವರು ಮಾತನಾಡುವುದಕ್ಕೆ ನಮ್ಮ objection ಇಲ್ಲ. ಅವರು ಎಷ್ಟು ಗಂಟೆಯಾದರೂ ಉತ್ತರ ಕೊಡಲಿ. I have no objection. The question is, ಅವರು ಹೇಳುವಾಗ ತಪ್ಪು ಮಾಹಿತಿಗಳು

recordಗೆ ಹೋಗಬಾರದೆಂಬುದೇ ನಮ್ಮ objection. ಜನರಿಗೆ ಸಂದೇಶ ಹೋಗುವಾಗ ತಪ್ಪು ಮಾಹಿತಿ ಹೋಗಬಾರದೆನ್ನುವುದಕ್ಕಷ್ಟೇ ನಾವು objection ಮಾಡಿರುವುದು. ಅವರು ಭಾಷಣ ಮಾಡಬಾರದು, ನಮಗೆ ಉತ್ತರ ಕೊಡಬಾರದೆಂದು ನಾವು ಹೇಳುವುದಕ್ಕೆ ಹೋಗಲೇ ಇಲ್ಲ. ಆದರೆ, ಹೇಳುವಾಗ ಎಲ್ಲರೂ ಕೇಂದ್ರ ಸರ್ಕಾರದ ಮೇಲೆ ಟೀಕೆ ಮಾಡುವುದಕ್ಕೆ ಪ್ರಾರಂಭ ಮಾಡಿದರೆ ಹೇಗೆ? ಕೇಂದ್ರ ಸರ್ಕಾರ ದ್ರೋಹ ಮಾಡುತ್ತಿದೆ ಎಂದು ಈಶ್ವರಪ್ಪನವರು ಹೇಳಲಿಲ್ಲವೇ? ಅಂದರೆ NREGSಗೆ ಕೇಂದ್ರ ಸರ್ಕಾರ ರಾಜ್ಯ ಸರ್ಕಾರಕ್ಕೆ ಹಣ ಕೊಟ್ಟಿದ್ದು ದ್ರೋಹವೇ? ರಾಜೀವಗಾಂಧಿ ಗ್ರಾಮೀಣ ವಿದ್ಯುದ್ದೀಕರಣ ಯೋಜನೆಗೆ ಹಣ ಕೊಟ್ಟಿದ್ದು ದ್ರೋಹವೇ? ಕೇಂದ್ರ ಸರ್ಕಾರ ಕೋಟಿಗಟ್ಟಲೆ ಹಣ ಕೃಷಿಗೆ ಕೊಟ್ಟಿದೆ. ನೀರಾವರಿಗೆ, ಕೃಷಿಗೆ ಹಣ ಕೊಡುವುದು ದ್ರೋಹವೇ?

(ಗೊಂದಲ)

**ಶ್ರೀ ಬಸವರಾಜ ಎಸ್. ಬೊಮ್ಮಾಯಿ:** ನೀವು ನಮಗಿಂತ senior ಇದ್ದೀರಿ. ಈ ಮನೆಯಲ್ಲೊಂದು ಸಂಪ್ರದಾಯವಿದೆ. ಮಾನ್ಯ ಮುಖ್ಯಮಂತ್ರಿಯವರು ಮಾತನಾಡುವಾಗ ಮಧ್ಯದಲ್ಲಿ ಮಾತನಾಡಬಾರದು. ನಂತರ ಬೇಕಾದರೆ clarification ಕೇಳಬಹುದು.

(ಗೊಂದಲ)

**ಅಧ್ಯಕ್ಷರು:** Please ಎಲ್ಲರೂ ಕುಳಿತುಕೊಳ್ಳಿ. ಬಚ್ಚೇಗೌಡರೆ, ಕುಳಿತುಕೊಳ್ಳಿ. ಮಾನ್ಯ ಮುಖ್ಯಮಂತ್ರಿಯವರು ಈಗ continue ಮಾಡಲಿ. ಮಾಹಿತಿ ಸರಿಯಿಲ್ಲವೆಂದರೆ ನಂತರ ಸ್ಪಷ್ಟೀಕರಣ ಕೇಳಬಹುದು. ಈಗ ನಾನು ಬೇರೆಯವರಿಗೆ ಅವಕಾಶ ಕೊಡುವುದಿಲ್ಲ. ರೇವಣ್ಣನವರೆ, ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

**ಶ್ರೀ ಹೆಚ್.ಡಿ. ರೇವಣ್ಣ:** ನಾವು 1800 ಕೋಟಿ ರೂ.ಗಳು ಕೊಟ್ಟಿದ್ದೆವು. ಇದನ್ನು ಸದನದ ಗಮನಕ್ಕೆ ತರಬೇಕಾಗುತ್ತದೆ. 60 ಲಕ್ಷ ಕುಟುಂಬಗಳಿಗೆ ವಿದ್ಯುತ್ ಒದಗಿಸುವ ಕೆಲಸವನ್ನು ನಾವು ಮಾಡಿದ್ದೇವೆ.

**(ಗೊಂದಲ)**

**ಅಧ್ಯಕ್ಷರು:** ಎಲ್ಲರೂ ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:** ಹಣ ಕೊಟ್ಟ ಮೇಲೆ ದ್ರೋಹ ಎಂದು ಏಕೆ ಹೇಳುತ್ತೀರಿ? ಹಾಗಾದರೆ, ರಾಜ್ಯಕ್ಕೆ ದ್ರೋಹ ಮಾಡಿದ್ದಾರೆಂದು ಏಕೆ ಹೇಳುತ್ತೀರಿ?

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:** ನಾವು ಕೇಂದ್ರ ಸರ್ಕಾರದ ಹತ್ತಿರ ಮನವಿ ಮಾಡಲು ಮುಖ್ಯಮಂತ್ರಿಯವರ ಜೊತೆ 10–10 ಸಲ ಹೋಗಿ ಬಂದಿದ್ದೇವೆ. ಆಂಧ್ರ, ತಮಿಳುನಾಡು ರಾಜ್ಯಗಳಿಗೆ ಹಣ ಕೊಡುತ್ತಾರೆ. ನಾವೇನು ಅನ್ಯಾಯ ಮಾಡಿದ್ದೇವೆ?

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:** Most inefficient Government. ಅದಕ್ಕೆ ಹಾಗೆ ಆಗಿರುವುದು.

**(ಗೊಂದಲ)**

**ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್:** ರಾಜ್ಯದ ಬೊಕ್ಕಸವನ್ನು ಲೂಟಿ ಹೊಡೆಯುತ್ತಿದ್ದೀರಿ. ಇದು ಬರೀ ಲೂಟಿ ಸರ್ಕಾರ.

**(ಗೊಂದಲ)**

**ಅಧ್ಯಕ್ಷರು:** Please ಎಲ್ಲರೂ ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:** ಸೋನಿಯಾ ಗಾಂಧಿಯವರ ಹತ್ತಿರ ಹೋಗಿ ನಮಗೆ ಬರಬೇಕಾದ allotment ಕೊಡಿ ಎಂದು ಕೇಳಿ.

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:** ಕೊಟ್ಟಿದೆ ಎಂದು ಹೇಳುವಷ್ಟು ಸೌಜನ್ಯವೂ ನಿಮಗಿಲ್ಲ.

**ಶ್ರೀ ಕೆ.ಎಸ್. ಈಶ್ವರಪ್ಪ:** ಹತ್ತು ಬಾರಿ ಹೇಳಿದ್ದೇವೆ. ಕೇಳಿಸಿಕೊಳ್ಳುವುದಕ್ಕೆ ನಿಮಗೆ ಕಿವಿ ಇಲ್ಲ. ನಾವೇನು ಮಾಡೋಣ?

**(ಗೊಂದಲ)**

**ಅಧ್ಯಕ್ಷರು:** ಅವರು ಉತ್ತರ complete ಮಾಡುವುದಕ್ಕೆ ಬಿಡುತ್ತಿಲ್ಲ. Please, ಅಪ್ಪಚ್ಚು ರಂಜನ್‌ರವರೆ, ಕುಳಿತುಕೊಳ್ಳಿ. ಮುಖ್ಯಮಂತ್ರಿಯವರು ಈಗ ಉತ್ತರ continue ಮಾಡುತ್ತಾರೆ.

**(ಗೊಂದಲ)**

**ಶ್ರೀ ಟಿ.ಬಿ. ಜಯಚಂದ್ರ:** ಕೊಟ್ಟಿದ್ದನ್ನು, ನಿಮ್ಮ ಕೈಯಿಂದ ಬಳಸಿಕೊಳ್ಳಲಿಕ್ಕೆ ಸಾಧ್ಯವಾಗಿಲ್ಲ. ಅದನ್ನು ಹೇಳಿ. ನೀವು ನಿಮ್ಮ ಕರ್ತವ್ಯದಲ್ಲಿ ವಿಫಲರಾಗಿದ್ದೀರಿ. You have no business to stay in the House. ಇದು ನಿಮ್ಮ inefficiency ಅನ್ನು ತೋರಿಸುತ್ತದೆ.

**(ಗೊಂದಲ)**

**ಶ್ರೀ ಬಿ.ಎನ್. ಬಚ್ಚೇಗೌಡ.** ನೀವು ಇಲ್ಲಿ ಕೂಗುತ್ತೀರಿ. ಅಲ್ಲಿ ನಿಮ್ಮ ಕೈಲಿ ಕೂಗುವುದಕ್ಕಾಗುವುದಿಲ್ಲ.

**(ಗೊಂದಲ)**

**ಶ್ರೀ ಟಿ.ಬಿ. ಜಯಚಂದ್ರ:** ಕೊಟ್ಟಿರುವ ಹಣವನ್ನು ಖರ್ಚು ಮಾಡಲಿಕ್ಕೆ ಆಗುತ್ತಿಲ್ಲ.

**(ಗೊಂದಲ)**

**ಶ್ರೀ ಜಿ. ಕರುಣಾಕರರೆಡ್ಡಿ:** ದೇಶದಲ್ಲಿ ನಿಮ್ಮೊಬ್ಬರನ್ನು ಬಿಟ್ಟು ಇನ್ಯಾರೂ efficient ಇಲ್ಲ!

**(ಗೊಂದಲ)**

**ಶ್ರೀ ಟಿ.ಬಿ. ಜಯಚಂದ್ರ:** ಹೌದು. ಕೊಟ್ಟಿರುವ ಹಣವನ್ನು ಖರ್ಚು ಮಾಡದಿರುವುದಕ್ಕೆ ಏನೆಂದು ಕರೆಯುತ್ತೀರಿ? Inefficient ಎಂದೇ ಕರೆಯುವುದು. ಇನ್ನು ಏನೆಂದು ಕರೆಯುತ್ತಾರೆ.

**(ಗೊಂದಲ)**

**ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್:** ನಾಲಾಯಕ್ ಎಂದು ಕರೆಯಬೇಕೇ? ಮುಟ್ಠಾಳರು ಎಂದು ಕರೆಯಬೇಕೇ? Inefficiency ಎನ್ನುವ ಒಳ್ಳೆಯ ಪದವನ್ನು ಉಪಯೋಗಿಸುತ್ತಿದ್ದೇವೆ. ಅದು ಬೇಡವೆಂದರೆ ಬಿಡಿ.

**(ಗೊಂದಲ)**

**ಶ್ರೀ ಹೆಚ್.ಎಸ್. ಮಹದೇವಪ್ರಸಾದ್:** ಇಲ್ಲಿ ಮಂತ್ರಿಗಳು ಯಾರು? ಶಾಸಕರು ಯಾರು? ವಿರೋಧ ಪಕ್ಷದವರು ಯಾರು? ಯಾರು ಮಾತನಾಡುತ್ತಿದ್ದಾರೆ ಎನ್ನುವುದು ಒಂದೂ ಗೊತ್ತಾಗುತ್ತಿಲ್ಲ.

**(ಗೊಂದಲ)**

**ಶ್ರೀ ಆರ್. ಅಶೋಕ್ (ಸಾರಿಗೆ ಸಚಿವರು) :** ಕಳೆದ 3 ದಿವಸಗಳಿಂದ ಇಲ್ಲಿ ಒಳ್ಳೆಯ ಚರ್ಚೆಯಾಗಿದೆ. ಬಹಳ ವಿಸ್ತೃತವಾಗಿ ಚರ್ಚೆ ಮಾಡಿದ್ದಾರೆ. ವಿರೋಧ ಪಕ್ಷದವರು 2–3 ಗಂಟೆ ಮಾತನಾಡಿ ಬೆಳಕು ಚೆಲ್ಲಿದ್ದಾರೆ.

ಆದರೆ ಆಡಳಿತ ಪಕ್ಷದಿಂದ ಉತ್ತರ ಕೊಡಬೇಕಾದರೆ, ಈ ರಾಜ್ಯಕ್ಕೆ ರೈತರ ಪರವಾಗಿ ನಾವೇನು ಮಾಡುತ್ತೇವೆಂದು ಹೇಳುವಂಥ ಸಂದರ್ಭದಲ್ಲಿ, ಕೇಂದ್ರ ಸರ್ಕಾರ ಏನು ಮಾಡಿದೆ, ರಾಜ್ಯ ಸರ್ಕಾರ ಏನು ಮಾಡಿದೆ, ಕೇಂದ್ರಕ್ಕೆ ನಮ್ಮ ಪ್ರಪೋಸಲ್ಸ್ ಏನು, ನಾವು ರಾಜ್ಯ ಸರ್ಕಾರದವರು ಏನು ಮಾಡಬೇಕೇಂದು ಹೇಳುವಂಥ ಅವಕಾಶವನ್ನು ವಿರೋಧ ಪಕ್ಷದವರು ಕೊಟ್ಟರೆ ನಾವು

ಹೇಳುವುದಕ್ಕೆ ಸಾಧ್ಯವಾಗುತ್ತದೆ. ಅವರ ಮಾತುಗಳನ್ನು ನಾವು ಯಾವ ರೀತಿಯಿಂದ ಸಹನೆಯಿಂದ ಕೇಳಿದ್ದೇವೆ. ಅದೇ ರೀತಿಯ ಸಹನೆಯಿಂದ ನಮ್ಮ ಆಡಳಿತ ಪಕ್ಷದ ನಾಯಕರ ಮಾತುಗಳನ್ನು ಕೇಳಿ ನಂತರ ಕ್ಲಾರಿಫಿಕೇಷನ್ ಕೇಳಿ.

**ಶ್ರೀ ಹೆಚ್.ಸಿ. ಮಹದೇವ ಪ್ರಸಾದ್ :** ನಾವು ಟೀಕೆ ಮಾಡಲಿಲ್ಲ ಸಲಹೆಗಳನ್ನು ಕೊಟ್ಟೆವು. ಸರ್ಕಾರ ನಡೆಸುವವರು ಉತ್ತರ ಕೊಡುವಾಗ ಏನು ಮಾಡುತ್ತೇವೆಂದು ಹೇಳುವುದು ಬಿಟ್ಟು ಬರೀ ಕೇಂದ್ರ ಸರ್ಕಾರವನ್ನು ಟೀಕೆ ಮಾಡಿದರೆ ರಾಜ್ಯ ಸರ್ಕಾರ ರೈತರ ಬಗ್ಗೆ ಕಾಳಜಿ ಇಟ್ಟುಕೊಂಡು ಕೊಡುವ ಉತ್ತರವೆ?

**ಶ್ರೀ ಆರ್. ಅಶೋಕ್ :** ಕೇಂದ್ರ ಸರ್ಕಾರದ ಯೋಜನೆಗಳನ್ನು ಯಾರೂ ಮುಚ್ಚಿಡುವುದಕ್ಕೆ ಸಾಧ್ಯವಿಲ್ಲ. ಕೇಂದ್ರ ಸರಕಾರ ಏನು ಹಣ ಕೊಟ್ಟಿದೆ ಅದನ್ನು ಯಾರೂ ಮುಚ್ಚಿಡುವುದಕ್ಕೆ ಸಾಧ್ಯವೇ ಇಲ್ಲ. ಅದು ವೈಟ್ ಅಂಡ್ ಬ್ಲಾಕ್‌ನಲ್ಲಿದೆ. ಸರ್ಕಾರದಲ್ಲಿದೆ, ಪತ್ರಿಕೆಗಳ ಮೂಲಕ ಗೊತ್ತಾಗಿದೆ, ಟ್ರಾನ್ಸ್‌ಪರೆನ್ಸಿ ಆಕ್ಟ್ ಇದೆ, ಕೇಂದ್ರ ಸರ್ಕಾರದಿಂದ ಏನು ಹಣ ಬರುತ್ತದೆ ಅದು ಎಲ್ಲರಿಗೂ ಗೊತ್ತಿದೆ. ಅದನ್ನು ಮುಚ್ಚಿಡುವ ಯಾವ ಪ್ರಯತ್ನವೂ ಈ ಸರ್ಕಾರ ಮಾಡುವುದಿಲ್ಲ. ಕೇಂದ್ರ ಸರ್ಕಾರ ಕೊಡುವ ಒಂದೊಂದು ನಯಾ ಪೈಸೆಯನ್ನೂ ಯಾವ ಕಾರಣಕ್ಕೂ ಈ ಸರ್ಕಾರ ಮುಚ್ಚಿಡುವ ಪ್ರಯತ್ನ ಮಾಡುವುದಿಲ್ಲ. ಅದೇ ರೀತಿ ಬೇರೆ ಬೇರೆ ರಾಜ್ಯಕ್ಕೂ ಯಾವ ರೀತಿ ಹಣ ಬಿಡುಗಡೆಯಾಗುತ್ತದೆ. ಅದೇ ರೀತಿ ನಮ್ಮ ರಾಜ್ಯಕ್ಕೆ ಹಣ ಬಿಡುಗಡೆಯಾಗಬೇಕೆನ್ನುವ ಬಯಕೆಯಷ್ಟೆ ನಮ್ಮದು.

**ಶ್ರೀ ಸಿದ್ದರಾಮಯ್ಯ:** ರಾಜೀವಗಾಂಧಿ ಗ್ರಾಮೀಣಾ ವಿದ್ಯುದೀಕರಣಕ್ಕೆ ಕೇಂದ್ರ ಸರ್ಕಾರ, .....

**ಶ್ರೀ ಬಿ.ಎಸ್. ಯಡಿಯೂರಪ್ಪ:** ನಾನು ಹೇಳುವುದಕ್ಕೆ ಪೂರ್ತಿ ಅವಕಾಶ ಕೊಟ್ಟರೆ ನಾನು ಹೇಳುತ್ತೇನೆ.

**ಶ್ರೀ ಸಿದ್ದರಾಮಯ್ಯ:** ನೀವು ಹೇಳಲಿಲ್ಲ ಎಂದು ತಾನೇ ಆವತ್ತು ನಮ್ಮ ಅಬ್ಜೆಕ್ಷನ್.

**ಅಧ್ಯಕ್ಷರು:** ಅವರು ಹೇಳುವುದಕ್ಕೆ ಅವಕಾಶ ಕೊಡಿ. ಅವರು ಮುಗಿಸಲಿ. ಅವರಿಗೆ ಉತ್ತರ ಕೊಡುವುದಕ್ಕಾದರೂ ಅವಕಾಶ ಕೊಡಿ. ದಯಮ್ಮಾಡಿ ಎರಡೂ ಕಡೆಯ ಸದಸ್ಯರು ಸಂಯಮ ತೆಗೆದುಕೊಳ್ಳಿ. ಈ ಕಡೆ ಮಂತ್ರಿಯವರು ಇರಬಹುದು, ಈ ಕಡೆಗೆ ಪ್ರತಿಪಕ್ಷದವರು ಇರಬಹುದು, ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ನಾನು ಈಗ ಮಾನ್ಯ ಮುಖ್ಯಮಂತ್ರಿಗಳಿಗೆ ಉತ್ತರ ಹೇಳುವುದಕ್ಕೆ ಅವಕಾಶ ಕೊಟ್ಟಿದ್ದೇನೆ.

**ಶ್ರೀ ಬಿ.ಎಸ್. ಯಡಿಯೂರಪ್ಪ:** ನೀವು ಏನೇ ಪ್ರಯತ್ನ ಮಾಡಿದರೂ ಇನ್ನು ಮೂರು ಮುಕ್ಕಾಲು ವರ್ಷ ನಾನು ಸಂಯಮ ಕಳೆದುಕೊಳ್ಳುವುದಿಲ್ಲ. ನನ್ನನ್ನು ಕೆರಳಿಸುವ ಪ್ರಯತ್ನ ನೀವು ಮಾಡಿದರೆ ಅದರಲ್ಲಿ ನೀವು ವಿಫಲರಾಗುತ್ತೀರಿ. ನಿಮಗೆ ಮೈ ಕೈ ನೋವು ಆಗುತ್ತದೆ. ನನಗೇನೂ ಪರಿಣಾಮವಾಗುವುದಿಲ್ಲ. ನಾನು ನಿಶ್ಚಯ ಮಾಡಿದ್ದೇನೆ. ನಿಮ್ಮ ಉದ್ದೇಶವೇ ನನ್ನನ್ನು ಕೆರಳಿಸಬೇಕು, ಕೆಣಕಬೇಕು, ಎಂದು ಇದೆ; ಅದಕ್ಕೆ ನಾನು ಬಗ್ಗುವುದಿಲ್ಲ. ಅದಕ್ಕೋಸ್ಕರ ನಾನು ದೇವರನ್ನು ಸಂಯಮದಿಂದ ಮಾತನಾಡುವುದಕ್ಕೆ ಶಕ್ತಿ ಕೊಡು ಎಂದು ಪ್ರಾರ್ಥನೆ ಮಾಡುವುದಕ್ಕೆ ದೇವರ ಮನೆಗೆ ಹೋಗಿ ನಾನು ಇಲ್ಲಿಗೆ ಬಂದಿದ್ದೇನೆ. NREGS ಬಗ್ಗೆ ಚರ್ಚೆಯಾಯಿತು. ಸಿದ್ದರಾಮಣ್ಣ ಹೇಳಿದರು. ನಿರೀಕ್ಷೆಯಂತೆ ಫಲ ನೀಡಿಲ್ಲ.

**ಶ್ರೀ ಸಿದ್ದರಾಮಯ್ಯ:** Is it not a fact?

**ಶ್ರೀ ಬಿ.ಎಸ್. ಯಡಿಯೂರಪ್ಪ:** It is a fact. ಅರೆ ಒಂದು ನಿಮಿಷ. Please hear me.

**ಅಧ್ಯಕ್ಷರು:** ಅವರು ಕಂಪ್ಲೀಟ್ ಮಾಡಲಿಬಿಡಿ.

**ಶ್ರೀ ಬಿ.ಎಸ್. ಯಡಿಯೂರಪ್ಪ:** Please hear me, ಆದರೆ ನಾನು ನಿಮಗೆ ಮನವರಿಕೆ ಮಾಡುವುದಕ್ಕೆ ಪ್ರಯತ್ನ ಮಾಡಿದೆ. ಹಿಂದಿನ 3–4 ವರ್ಷಗಳಿಗೆ ಹೋಲಿಸಿದರೆ ಅದು ಏನೇ ಕಾರಣ ಇರಲಿ, ಸ್ವಲ್ಪ ಪರವಾಗಿಲ್ಲ, ಎರಡು ಸಾವಿರ ಕೋಟಿ ಟಚ್ ಮಾಡುವುದಕ್ಕೆ ಪ್ರಯತ್ನ ಪಡುತ್ತಿದ್ದೇವೆ. ಯಾರಪ್ಪನ ದುಡ್ಡು, ಕೇಂದ್ರದ್ದಲ್ಲದೆ ಎಂದರೆ, ಹೌದು ಸ್ವಾಮಿ ಕೇಂದ್ರದ ದುಡ್ಡು.

ನಾನು ಅಲ್ಲ ಎಂದು ಹೇಳಿಲ್ಲ. ನನ್ನ ಅಭಿಪ್ರಾಯ ಏನೆಂದರೆ, ಕೇಂದ್ರದ ಹಣ ಕೂಡ ಈ ರಾಜ್ಯದ ಜನತೆ ನೀಡಿದಂಥ ತೆರಿಗೆಯ ಹಣ. ಸಿದ್ದರಾಮಣ್ಣನವರೆ ಯಾವುದೇ ಇರಬಹುದು, ನಿಮ್ಮ ಅನುಭವದಲ್ಲಿ, ನನಗೆ ನಿಮ್ಮ ಸಮಸ್ಯೆ ಏನು ಇದೆ ಎಂದು ಗೊತ್ತಿಲ್ಲ. ನಾನು ಏನು ಹೇಳಿದರೂ ನೀವು ಅಭ್ಯಂತರ ಮಾಡಿದರೆ ಹೇಗೆ?

**ಶ್ರೀ ಸಿದ್ದರಾಮಯ್ಯ:** ನೋ, ನೋ. ಆ ರೀತಿ ಅಲ್ಲ.

**ಶ್ರೀ ಬಿ.ಎಸ್. ಯಡಿಯೂರಪ್ಪ:** ಇಲ್ಲ ಸರ್, ಈ ರೀತಿಯಾದರೆ ಆಗುವುದಿಲ್ಲ. ನಾನು ನನ್ನ ಮನೆಯಿಂದ ತಂದಿರುವ ದುಡ್ಡು ಎಂದು ನಾನು ಎಲ್ಲೂ ಹೇಳಿಲ್ಲ. Why are you interfering like that?

**ಶ್ರೀ ಸಿದ್ದರಾಮಯ್ಯ:** ಈ ರಾಜ್ಯದ ತೆರಿಗೆ ಹಣ ಎಂದು ನನಗೆ ಗೊತ್ತಿಲ್ಲವೆ?

**ಶ್ರೀ ಬಿ.ಎಸ್. ಯಡಿಯೂರಪ್ಪ:** ಗೊತ್ತಿದ್ದರೆ ನೀವು ಈ ರೀತಿ ಹೇಳುತ್ತಿರಲಿಲ್ಲ.

**ಅಧ್ಯಕ್ಷರು:** ನೋಡ್ರಿ ಸಿದ್ದರಾಮಯ್ಯನವರೆ, ಸರ್ಕಾರದವರು, ಮುಖ್ಯಮಂತ್ರಿಗಳು ಇದೇ ರೀತಿ ಉತ್ತರ ಕೊಡಬೇಕು. ಇದೇ ಶೈಲಿಯಲ್ಲಿ ಉತ್ತರ ಕೊಡಬೇಕೆಂದು ಹೇಳುವುದಕ್ಕೆ ಬರುವುದಿಲ್ಲ. ಅವರು ತಮ್ಮದೇ ಆದ ರೀತಿಯಲ್ಲಿ ಉತ್ತರ ಕೊಡುತ್ತಾರೆ. ಈಗ ನಿಮ್ಮದೇ ಆದ ರೀತಿಯಲ್ಲಿ ನೀವು ಟೀಕೆ ಮಾಡುತ್ತೀರಿ. ವಿಷಯ ಮಂಡನೆ ಮಾಡುತ್ತೀರಿ. ನಿಮ್ಮದು ಒಂದು ರೀತಿ, ಅವರದು ಒಂದು ರೀತಿ. ಅವರು ಉತ್ತರ ಕೊಟ್ಟ ನಂತರ ಸರಿಯಿಲ್ಲವೆಂದರೆ ನೀವು ನಂತರ ಹೇಳಿ.

**ಶ್ರೀ ಸಿದ್ದರಾಮಯ್ಯ:** ಸ್ವಲ್ಪ ಸತ್ಯದ ರೀತಿಯಲ್ಲಿ ಹೇಳಲಿ.

**ಅಧ್ಯಕ್ಷರು:** ಅದು ಅವರಿಗೆ ಬಿಟ್ಟಿದ್ದು. ಆಮೇಲೆ ಸರಿಯಿಲ್ಲ ಎಂದು ನೀವು ಹೇಳಿ.

**ಶ್ರೀ ಬಿ.ಎಸ್. ಯಡಿಯೂರಪ್ಪ:** ಪ್ರಸರಣೆ ಮತ್ತು ವಿತರಣಾ ನಷ್ಟದ ಬಗ್ಗೆ 2004–05ರಲ್ಲಿ ಪ್ರತಿಶತ 30ರಷ್ಟು T & D LOSS ಇತ್ತು. 2008–09ರಲ್ಲಿ

22.05ಕ್ಕೆ ಇಳಿಸುವ ಪ್ರಯತ್ನದಲ್ಲಿ ಯಶಸ್ವಿಯಾಗಿದ್ದೇವೆ. ನಮ್ಮ ಅಧಿಕಾರಿಗಳು ವಿಜಿಲೆನ್ಸ್ ಬಿಗಿ ಮಾಡಿ ಇನ್ನೂ ಈ T & D LOSS ಅನ್ನು ಕಡಿಮೆ ಮಾಡುವುದಕ್ಕೆ ಶತಪ್ರಯತ್ನ ಮಾಡುತ್ತಿದ್ದಾರೆ. ಈ ವರ್ಷದ ಕೊನೆಯಲ್ಲಿ ಅಥವಾ ಮುಂದಿನ ವರ್ಷದ ಮೊದಲ ಭಾಗದಲ್ಲಿ ಹೇಗಾದರೂ ಮಾಡಿ 22.05ರಷ್ಟು ಇರುವುದನ್ನು 20ಕ್ಕೆ ಇಳಿದರೆ ಇದೊಂದು ದೊಡ್ಡ ಸಾಧನೆಯಾಗುತ್ತದೆ. ಆ ದಿಕ್ಕಿನಲ್ಲಿ ಮಾನ್ಯ ಸಿದ್ದರಾಮಣ್ಣನವರೆ ನಾವು ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದೇವೆ. ಇಲ್ಲಿ ಒಂದು ವಿಷಯ ಚರ್ಚೆಯಾಯಿತು.

**ಶ್ರೀ ಹೆಚ್.ಡಿ. ರೇವಣ್ಣ:** ಕಂಪನಿಗಳ ಬಗ್ಗೆಯೂ ಹೇಳಿಬಿಡಿ.

**ಅಧ್ಯಕ್ಷರು:** ಇದು ನನಗೆ ಅರ್ಥವೇ ಆಗುತ್ತಿಲ್ಲ.

**ಶ್ರೀ ಬಿ.ಎಸ್. ಯಡಿಯೂರಪ್ಪ:** ಸರ್, ಬೇಡ ಎಂದರೆ ನಾನು ಹೋಗುತ್ತೇನೆ. ಉತ್ತರ ಕೊಡುವುದು ಬೇಡ ಎಂದರೆ ನೀವು ಹೇಳಿ ಸರ್ ನಾನು ಹೋಗುತ್ತೇನೆ.

**ಅಧ್ಯಕ್ಷರು:** ರೇವಣ್ಣನವರೆ ಏಕೆ ಈ ರೀತಿ ಮಾಡುತ್ತೀರಿ. ಪದೇ ಪದೇ ಈ ರೀತಿಯಾಗಿ ಇಷ್ಟೆಲ್ಲಾ ಗದ್ದಲವಾದ ಮೇಲೂ ಮಧ್ಯ ಪ್ರವೇಶಿಸಿದರೆ ಹೇಗೆ? ನಂತರ ನಿಮಗೆ ಅವಕಾಶ ಕೊಡುತ್ತೇನೆ. ಆಗ ನೀವು ಕೇಳಿ. ನನಗೆ ಇದು ಅರ್ಥವಾಗುತ್ತಿಲ್ಲ. ಅವರಿಗೆ ಮಾತನಾಡಲಿಕ್ಕಾದರೂ ಅವಕಾಶ ಕೊಡಿ. ಎಲ್ಲದಕ್ಕೂ ಮಧ್ಯೆ ಪ್ರವೇಶಿಸಿದರೆ ಸದನ ಹೇಗೆ ನಡೆಸಬೇಕು? ಅವರು ಹೇಗೆ ಉತ್ತರ ಕೊಡಬೇಕು? ರೇವಣ್ಣನವರೆ, ಇದು ನನಗೆ ಅರ್ಥವಾಗುತ್ತಿಲ್ಲ.

**ಶ್ರೀ ಹೆಚ್.ಡಿ. ರೇವಣ್ಣ:** ಅವರು ಟಿ ಅಂಡ್ ಡಿ ಲಾಸ್ ಬಗ್ಗೆ ಹೇಳಿದರು. ಅದೇ ರೀತಿಯಾಗಿ ಕಂಪನಿಯ ಬಗ್ಗೆಯೂ ಹೇಳಲಿ.

**ಅಧ್ಯಕ್ಷರು:** ನೋ, ನೋ. ರೇವಣ್ಣನವರೆ, ನಾನು ನಂತರ ನಿಮಗೆ ಅವಕಾಶ ಮಾಡಿ ಕೊಡುತ್ತೇನೆ. ನಂತರ ನೀವು ಏನಾದರೂ ಸ್ಪೆಸಿಫಿಕ್ ಆಗಿದ್ದರೆ ಕೇಳಿ. ನೀವು ಎರಡು ತಾಸು ಮಾತನಾಡಿದಿರಿ. ಆಗ ಅವರು ಏನಾದರೂ

ನಿಮಗೆ ಮಾತನಾಡಿದರೆ? ಅವರು ಉತ್ತರ ಕೊಡುವುದು ಬೇಡ ಎಂದರೆ ಬಿಟ್ಟುಬಿಡಿ. ಅವರಿಗೆ ನಾನು ಬೇಡ ಎಂದು ಹೇಳಿ ಬಿಡುತ್ತೇನೆ.

**ಶ್ರೀ ಬಿ.ಎಸ್. ಯಡಿಯೂರಪ್ಪ:** ಕಳೆದ ವರ್ಷ ವಿದ್ಯುತ್ ಅಭಾವವಿದ್ದ ಕಾರಣ ಕೇಂದ್ರ ಸರ್ಕಾರದ ಸೂಚನೆ ಕೊಟ್ಟಂತೆ ಕಲ್ಲಿದ್ದಲು ಇಂಪೋರ್ಟ್ ಮಾಡುವುದಕ್ಕೆ ವಿಶೇಷ ಪ್ರಯತ್ನ ಮಾಡಿದೆವು. ರೇವಣ್ಣನವರು ಮಾತನಾಡುತ್ತಾ ಹೇಳಿದರು. ಇಲ್ಲದಿದ್ದರೆ ನಾನು ಇದನ್ನು ಪ್ರಸ್ತಾಪ ಮಾಡುತ್ತಿರಲಿಲ್ಲ. ಈ ಕಲ್ಲಿದ್ದಲು ಖರೀದಿಯಲ್ಲಿ ಅವ್ಯವಹಾರ ನಡೆದಿದೆ ಎಂದು ಹೇಳಿದರು.

**ಶ್ರೀ ಹೆಚ್.ಡಿ. ರೇವಣ್ಣ:** ಆ ಬಗ್ಗೆ ನಿಲುವಳಿ ಸೂಚನೆ ಇದೆ. ಅದರಲ್ಲಿ ಹೇಳಿ.

**ಶ್ರೀ ಬಿ.ಎಸ್. ಯಡಿಯೂರಪ್ಪ:** ಏನ್ರೀ ಇದು? ಏಕೆ ಈ ರೀತಿ ಮಾಡುತ್ತೀರಿ?

**ಅಧ್ಯಕ್ಷರು:** ನೋಡಿ ರೇವಣ್ಣನವರೆ, I am sorry, ಹಾಗಾದರೆ ಅವರು ಏನು ಹೇಳಬೇಕೆಂದು ನೀವು ಬರೆದು ಕೊಟ್ಟು ಬಿಡಿ. ರೇವಣ್ಣನವರೆ, ನೀವು ಅವರಿಗೆ ಇದೇ ರೀತಿ ಉತ್ತರ ಹೇಳಿ ಎಂದು ಬರೆದು ಕೊಟ್ಟುಬಿಡಿ. ಅದೇ ರೀತಿ ಅವರು ಹೇಳಲಿ. ಅವರು ಯಾವ ರೀತಿ ವಿಷಯ ಮಂಡನೆ ಮಾಡುತ್ತಾರೋ ಅವರಿಗೆ ಬಿಟ್ಟಿದ್ದು. ಎಲ್ಲದಕ್ಕೂ ನೀವು ಈ ರೀತಿಯಾಗಿ ಮಧ್ಯಪ್ರವೇಶ ಮಾಡುವುದು ಸರಿಯಲ್ಲ. ನನಗೆ ಇದು ಅರ್ಥವಾಗುತ್ತಿಲ್ಲ. ಸಿ.ಸಿ. ಪಾಟೀಲ್‌ರವರೆ, ದಯಮಾಡಿ ಕುಳಿತುಕೊಳ್ಳಿ. ಏಕೆ ಈ ರೀತಿ ಮಾತನಾಡುತ್ತೀರಿ? ಆಯಿತು. ನೀವೇ ನೀವೇ ಮಾತನಾಡಿ.

**ಶ್ರೀ ಸಿ.ಸಿ. ಪಾಟೀಲ್:** ಮುಖ್ಯಮಂತ್ರಿಗಳಿಗೆ ಮೊದಲು ಮಾತನಾಡುವುದಕ್ಕೆ ಅವಕಾಶ ಕೊಡಿ.

(ಗೊಂದಲ)

**ಶ್ರೀ ಸಿ.ಸಿ. ಪಾಟೀಲ್:** ಹಾಸನವನ್ನು ರಾಜ್ಯವನ್ನಾಗಿ ಮಾಡಿಕೊಂಡು ಬಿಡಿ.

**ಶ್ರೀ ಹೆಚ್.ಡಿ. ರೇವಣ್ಣ:** ನೀವು ಶಿವಮೊಗ್ಗ, ಸಕಲೇಶಪುರವನ್ನು ರಾಜ್ಯವನ್ನಾಗಿ ಮಾಡುತ್ತೀರಾ?

**ಶ್ರೀ ಹೆಚ್.ಸಿ. ಬಾಲಕೃಷ್ಣ:** ನಿಮ್ಮಿಂದ ಪಾಠ ಕಲಿಯಬೇಕಾಗಿಲ್ಲ.

**(ಗೊಂದಲ)**

**ಅಧ್ಯಕ್ಷರು:** ಸಿ.ಸಿ. ಪಾಟೀಲ್‌ರವರೆ, ರೇಣುಕಾಚಾರ್ಯರವರೆ, ನೋಡಿ ಯಾರಾದರೂ ಸದಸ್ಯರು ಏನಾದರೂ ಮಾಡನಾಡುವುದಾದರೆ ಸಭಾಧ್ಯಕ್ಷರ ಪರ್ಮಿಷನ್ ತೆಗೆದುಕೊಂಡು ಮಾತನಾಡಿ. ನೀವೇ ಎದ್ದು ನಿಂತು ಮಾತನಾಡುವ ಅವಶ್ಯಕತೆಯಿಲ್ಲ. ಯಾರಾದರೂ ಮಾತನಾಡುವುದಿದ್ದರೆ ನನಗೆ ಅಡ್ರೆಸ್ ಮಾಡಿ ಮಾತನಾಡಿ. ನೀವೇ ಪರಸ್ಪರ ಚರ್ಚೆ ಮಾಡುವುದು, ಡಿಬೇಟ್ ಮಾಡುವ ಅವಶ್ಯಕತೆಯಿಲ್ಲ. ಇಲ್ಲಿ ಸಭಾಧ್ಯಕ್ಷರ ಪರ್ಮಿಷನ್ ತೆಗೆದುಕೊಂಡು ಮಾತನಾಡಿ. ಸಿ.ಸಿ. ಪಾಟೀಲ್‌ರವರೆ, ಮತ್ತೆ ನೀವು ಅಲ್ಲಿಯೇ ಮಾತನಾಡುತ್ತೀರಲ್ಲ?

**(ಗೊಂದಲ)**

**ಶ್ರೀ ಬಿ.ಎಸ್. ಯಡಿಯೂರಪ್ಪ:** ಮಾನ್ಯ ರೇವಣ್ಣನವರು ಹೇಳಿದರು.

**ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್:** ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಿದ್ದಾರೆ. ಆದರೆ ಆಡಳಿತ ಪಕ್ಷದ ಸದಸ್ಯರು ಕುಳಿತುಕೊಳ್ಳುವ ಸೌಜನ್ಯ ಕೂಡ ತೋರಿಸುತ್ತಿಲ್ಲ.

**ಶ್ರೀ ಬಿ.ಎಸ್. ಯಡಿಯೂರಪ್ಪ:** ಇಷ್ಟು ವರ್ಷ ಸುದೀರ್ಘವಾದ ಅನುಭವ ಈ ಇಲಾಖೆಯಲ್ಲಿ ರೇವಣ್ಣನವರಿಗೆ ಇದೆ. ಅವರು ಏನಾದರೂ ಆರೋಪ ಮಾಡಿದರೆ ಅದರಲ್ಲಿ ಸತ್ಯಾಂಶ ಬಹಳಷ್ಟು ಇರಬಹುದು ಎಂದು ಸಾಮಾನ್ಯವಾಗಿ ಜನ ಅಂದುಕೊಳ್ಳುತ್ತಾರೆ. ಅದಕ್ಕೋಸ್ಕರ ನಾನು ತೀರ್ಮಾನ ಮಾಡಿದ್ದೇನೆ. ರೇವಣ್ಣನವರೆ, 2002ರಿಂದ ಇವತ್ತಿನವರೆವಿಗೂ ಈ ಕಲ್ಲಿದ್ದಲು ಖರೀದಿಯಲ್ಲಿ ಏನೇನು ವ್ಯವಹಾರ ನಡೆದಿದೆ ಈ ಬಗ್ಗೆ retired high Court judge ನಿಂದ ತನಿಖೆ ಮಾಡಿಸುತ್ತೇವೆ.

**ಶ್ರೀ ಹೆಚ್.ಸಿ. ಬಾಲಕೃಷ್ಣ:** ಲೋಕಾಯುಕ್ತರಿಗೆ ಕೊಡಿ ಸ್ವಾಮಿ.

**ಅಧ್ಯಕ್ಷರು:** ದಯಮಾಡಿ ಯಾರೂ ಈ ರೀತಿಯಾಗಿ ಮಧ್ಯದಲ್ಲಿ ಮಾತನಾಡುವುದಕ್ಕೆ ಹೊಗಬೇಡಿ. ಬಾಲಕೃಷ್ಣರವರೆ, ಸ್ವಲ್ಪ ಕೇಳಿ.

**ಶ್ರೀ ಬಿ.ಎಸ್. ಯಡಿಯೂರಪ್ಪ:** ಮಾನ್ಯ ರೇವಣ್ಣನವರು ಈ ಮನೆಯಲ್ಲಿ ನಿಂತು ಪ್ರಸ್ತಾಪ ಮಾಡಬೇಕಾದರೆ ಕಲ್ಲಿದ್ದಲು ಖರೀದಿಯಲ್ಲಿ .....

**ಶ್ರೀ ಹೆಚ್.ಸಿ. ಬಾಲಕೃಷ್ಣ:** ಆ ವಿಷಯ ಪ್ರಸ್ತಾಪವೇ ಮಾಡಿಲ್ಲ.

**ಅಧ್ಯಕ್ಷರು:** ನೋಡಿ ಬಾಲಕೃಷ್ಣರವರೆ, ಈ ರೀತಿಯಾಗಿ ನಡುವೆ ಮಾತನಾಡಿದರೆ ಹೇಗೆ? ಅವರು ಏನು ಹೇಳುತ್ತಾರೆ ಹೇಳಲಿ ಬಿಡಿ. ಅವರೇನು ಉತ್ತರ ಕೊಡುತ್ತಾರೆ ಕೊಡಲಿ.

**ಶ್ರೀ ಟಿ.ಬಿ. ಜಯಚಂದ್ರ:** ಅಧ್ಯಕ್ಷರೆ, ನನ್ನದೊಂದು ಪಾಯಿಂಟ್ ಆಫ್ ಆರ್ಡರ್.

**ಅಧ್ಯಕ್ಷರು:** ಇದರಲ್ಲಿ ಏನು ಇದೆ ಪಾಯಿಂಟ್ ಆಫ್ ಆರ್ಡರ್?

**(ಗೊಂದಲ)**

**ಶ್ರೀ ಬಿ.ಎಸ್. ಯಡಿಯೂರಪ್ಪ:** ನಾನು ಉತ್ತರ ಕೊಡುವುದಕ್ಕೆ ಬೇಡ ಎನ್ನುವುದಕ್ಕೆ ನೀವು ಯಾರು? ನಾನು ಯಾವುದು ಮಾಡಬೇಕು, ಯಾವುದು ಬಿಡಬೇಕು ಎನ್ನುವುದಕ್ಕೆ ನೀವು ಯಾರು?

**(ಗೊಂದಲ)**

**ಶ್ರೀ ಹೆಚ್.ಸಿ. ಬಾಲಕೃಷ್ಣ:** ನಾವೆಲ್ಲಿ ಚರ್ಚೆ ಮಾಡಿದ್ದೇವೆ? ನಾವೆಲ್ಲಿ ಆರೋಪ ಮಾಡಿದ್ದೇವೆ?

**(ಗೊಂದಲ)**

**ಶ್ರೀ ಹೆಚ್.ಸಿ. ಬಾಲಕೃಷ್ಣ:** ಆರೋಪಗಳನ್ನು ಮಾಡಿಬಿಡುತ್ತಾರೆಂದು ಭಯದಿಂದ ಮಾಡಿದ್ದಾರೆ. ಅಷ್ಟೇ ವಿನಾ ಬೇರೆ ಏನೂ ಇಲ್ಲ.

**ಶ್ರಿ ಟಿ.ಬಿ. ಜಯಚಂದ್ರ:** ಇದು ವಿಶೇಷವಾದಂಥ ಅಧಿವೇಶನವಾಗಿದ್ದು, ವಿಶೇಷವಾದ ವಿಷಯದ ಬಗ್ಗೆ ಚರ್ಚೆ ಮಾಡುವುದಕ್ಕೆ ಕರೆದಂಥ ಸಭೆ. ಮಾನ್ಯ ಮುಖ್ಯಮಂತ್ರಿಗಳು ಕಲ್ಲಿದ್ದಲು ಬಗ್ಗೆ ಏನು ಪ್ರಸ್ತಾಪ ಮಾಡುತ್ತಿದ್ದಾರೆ, ಆ ವಿಷಯ ವಿಧಾನ ಸಭೆಯಲ್ಲಿ ಪ್ರಸ್ತಾಪವಾಗಿಲ್ಲ.

**12.00 A.M.**

**ಅಧ್ಯಕ್ಷರು:** ಮಾನ್ಯ ಜಯಚಂದ್ರರವರೆ, ಮೊದಲು ಅವರು ಉತ್ತರ ಕೊಡಲಿ. ಇದೇ ರೀತಿಯಾಗಿ ಉತ್ತರ ಕೊಡಬೇಕೆಂದು ಮತ್ತು ಕಲ್ಲಿದ್ದಲು ಬಗ್ಗೆ ಹಾಗೂ ಪವರ್ ಬಗ್ಗೆ ಮಾತನಾಡಬಾರದೆಂದು ಹೇಳುವುದಕ್ಕೆ ಆಗುವುದಿಲ್ಲ.

**ಶ್ರೀ ಟಿ.ಬಿ. ಜಯಚಂದ್ರ:** ಮಾನ್ಯ ಅಧ್ಯಕ್ಷರೆ, ವಿಷಯ ಸೀಮಿತವಾಗಿದೆ. ಆದ್ದರಿಂದ, ಅವರು ನೀಡುವ ಉತ್ತರ ಬಹಳ ಮಹತ್ವವಾಗಿರುತ್ತದೆ.

**ಅಧ್ಯಕ್ಷರು:** ಮಾನ್ಯ ಜಯಚಂದ್ರರವರೆ, ನೀವು ಉತ್ತರ ಬರೆದು ಕೊಡಿ.

**ಶ್ರೀ ಬಸವರಾಜ ಬೊಮ್ಮಾಯಿ:** ಸರ್ಕಾರಕ್ಕೆ ತನ್ನದೇ ಆದಂಥ ಅಧಿಕಾರ ಇದೆ. ಆದ್ದರಿಂದ, ಇದೇ ರೀತಿ ಮಾಡಿ ಎಂದು ನಾವು ಅಧಿಕಾರ ಚಲಾವಣೆ ಮಾಡುವುದಕ್ಕೆ ಬರುವುದಿಲ್ಲ.

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:** ಇದನ್ನು ನೀವು ಸ್ವಾಗತ ಮಾಡಬೇಕು. ಆದರೆ, ನೀವೇಕೆ ಹೆದರಿಕೊಳ್ಳುತ್ತಿದ್ದೀರಿ?

**(ಗೊಂದಲ)**

**ಶ್ರೀ ಟಿ.ಬಿ. ಜಯಚಂದ್ರ:** ನಿಮ್ಮ ಸಲಹೆ ನನಗೆ ಬೇಕಾಗಿಲ್ಲ. ನಾನು ಸಭಾನಾಯಕರನ್ನು ಕೇಳುತ್ತಿದ್ದೇನೆ.

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:** ಅದನ್ನು ಸ್ವಾಗತ ಮಾಡಿ. ಏಕೆ ವಿರೋಧ ಮಾಡುತ್ತಿದ್ದೀರಿ?

**ಶ್ರೀ ಟಿ.ಬಿ. ಜಯಚಂದ್ರ:** ನಿಮ್ಮಿಂದ ನಾನು ಕಲಿಯಬೇಕಾಗಿಲ್ಲ. ಮಾನ್ಯ ಮುಖ್ಯಮಂತ್ರಿಯವರಿಗೆ ನಾನು ಹೇಳುವುದೇನೆಂದರೆ, ಸದನದಲ್ಲಿ ಯಾವ ವಿಚಾರ ಚರ್ಚೆಯಾಗಿ ಸಲಹೆಗಳನ್ನು ಕೊಡಲಾಗಿದೆಯೋ ಅದಕ್ಕೆ ಸೀಮಿತವಾಗಿರುವ ರೀತಿಯಲ್ಲಿ ನಿಮ್ಮಿಂದ ಉತ್ತರ ಬರಬೇಕೆಂದು ನನ್ನ ಬಯಕೆಯಾಗಿದೆ. ಕಾರಣ ಏನೆಂದರೆ, ನೀವು ನೀಡಿರುವ ಪುಸ್ತಕದಲ್ಲಿರುವ ಸಲಹೆಗಳಿಗೆ ಸಂಬಂಧಪಟ್ಟಂತೆ ನಿಮ್ಮ ಮುಂದಿನ ಹೆಜ್ಜೆಗಳು ಕಾರ್ಯಕ್ರಮದ ಮೂಲಕ ಹೇಳಬೇಕೇ ವಿನಾ ಕೇವಲ ಅನುಕಂಪದ ಮಾತು ರೈತರಿಗೆ ಸಹಾಯವಾಗುವುದಿಲ್ಲ. ಹಾಗೆಯೇ ಟೀಕೆಟಿಪ್ಪಣಿಗಳಿಂದಲೂ ಕೂಡ ಸಹಾಯವಾಗುವುದಿಲ್ಲ. ಇವತ್ತಿನ ದಿವಸ ರೈತರ ಸಮಸ್ಯೆ ಏನೆಂಬುದು ಎಲ್ಲರಿಗೂ ಸಹ ಗೊತ್ತಿದೆ. ಆದರೆ, ವಿಶೇಷವಾದಂಥ ಸಭೆ ಕರೆದಾಗ ರೈತನ ಸಮಸ್ಯೆ ಪರಿಹಾರ ಮಾಡತಕ್ಕಂಥ ಮತ್ತು ಆತನಿಗೆ ಸಾಂತ್ವನ ಮಾಡಿ ಆತನನ್ನು ಮೇಲಕ್ಕೆ ತರುವ ಬಗ್ಗೆ ಮಾತ್ರ ಸೀಮಿತವಾಗಿ ಉತ್ತರ ಹೇಳಿ.

**ಶ್ರೀ ಆರ್. ಅಶೋಕ್:** ಮಾನ್ಯ ಜಯಚಂದ್ರರವರು ಸರ್ಕಾರದ ಪರವಾಗಿ ರಿಪ್ಲೈ ಮಾಡುತ್ತಿದ್ದಾರೆಯೇ? ಇದಕ್ಕೆ ಸರ್ಕಾರ ರಿಪ್ಲೈ ಮಾಡಬೇಕೆ ಅಥವಾ ಅವರು ಮಾಡಬೇಕೆ?

**ಶ್ರೀ ಟಿ.ಬಿ. ಜಯಚಂದ್ರ:** ಅವರು ಕೇಳುತ್ತಿದ್ದಾರೆ. ನೀವೇನು ನನಗೆ ಹೇಳುವುದು?

**(ಗೊಂದಲ)**

**ಶ್ರೀ ಆರ್. ಅಶೋಕ್:** ನಿಮಗೆ ಯಾರು ಅನುಮತಿ ಕೊಟ್ಟಿರುವುದು?

**(ಗೊಂದಲ)**

**ಶ್ರೀ ಟಿ.ಬಿ. ಜಯಚಂದ್ರ:** What is this?

**(ಗೊಂದಲ)**

**ಅಧ್ಯಕ್ಷರು:** ಮಾನ್ಯ ಜಯಚಂದ್ರರವರೆ, ಮಾನ್ಯ ಮುಖ್ಯಮಂತ್ರಿಗಳು ಈ ರೀತಿಯಾಗಿಯೇ ಉತ್ತರ ಕೊಡಬೇಕೆಂದು ಮತ್ತು ಇದೇ ವಿಷಯದ ಬಗ್ಗೆ

ಮಾತನಾಡಬೇಕೆಂದು ತಾವು ಸರ್ಕಾರಕ್ಕೆ ಬರೆದು ಕೊಡಿ. ಮಾನ್ಯ ಜಯಚಂದ್ರರವರೆ, ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ರೇವಣ್ಣನವರೆ, ತಾವೂ ಸಹ ಕುಳಿತುಕೊಳ್ಳಿ.

(ಗೊಂದಲ)

**ಶ್ರಿ ಆರ್. ಅಶೋಕ್:** ಸರ್ಕಾರದ ಪರವಾಗಿ ಅವರು ರಿಪ್ಲೈ ಕೊಡುತ್ತಾರೆಯೇ?

**ಶ್ರೀ ಸಿದ್ದರಾಮಯ್ಯ:** ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ ....

**ಅಧ್ಯಕ್ಷರು:** ಇಲ್ಲಿಗೆ ಬಂದಿರುವ Dignitariesಗೆ ಸ್ವಾಗತ ಮಾಡುತ್ತೇನೆ. ಆನಂತರ ತಾವು ಮಾತನಾಡಿ.

**ಶ್ರೀ ಸಿದ್ದರಾಮಯ್ಯ:** ಆಯಿತು. Welcome ಮಾಡಿ.

**Mr. Speaker:** The following dignitaries are witnessing the proceedings of this august House from the Speaker's Gallaery. On behalf of all the Hon'ble Members of Karnataka Legislative Assembly and on my own I welcome them.

1. Mr. Syed Mohammed Abrahim Abass, Senior Cultural Advisor of Afghan Government and Mrs. Syed Mohammed Abrahim Abass.
2. Mr. Adgur Harazhiya, Deputy Speaker, Republic Afghan province.
3. Mr. Anatoliya Tcerkobnuk, councilor of Russian Executive.

**ಶ್ರೀ ಹೆಚ್.ಡಿ. ರೇವಣ್ಣ:** ಮಾನ್ಯ ಅಧ್ಯಕ್ಷರೆ, 12 ಲಕ್ಷ ಟನ್ ಕಲ್ಲಿದ್ದಲು ಖರೀದಿಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ನೇರವಾಗಿ involve ಆಗಿದ್ದಾರೆ.

ಅವರು ಕೊಟ್ಟಿರುವ ಪತ್ರ ನನ್ನ ಹತ್ತಿರ ಇದೆ. ಆದ್ದರಿಂದ, ಈ ವಿಷಯಕ್ಕೆ ಸಂಬಂಧಪಟ್ಟಂತೆ ನಿಲುವಳಿ ಸೂಚನೆ ತೆಗೆದುಕೊಂಡು ಬಂದಿದ್ದೇವೆ.

(ಗೊಂದಲ)

**ಶ್ರೀ ಸಿದ್ದರಾಮಯ್ಯ:** ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬಗ್ಗೆ ಚರ್ಚೆ ಮಾಡುವುದಕ್ಕೆ ಸಭೆ ಕರೆಯಲಾಗಿದೆ.

**ಶ್ರೀ ಬಿ.ಎಸ್. ಯಡಿಯೂರಪ್ಪ:** ಸ್ವಲ್ಪ ತಾಳ್ಮೆಯಿಂದ ಇರಿ.

**ಶ್ರಿ ಸಿದ್ದರಾಮಯ್ಯ:** ನನಗೆ ತಾಳ್ಮೆ ಬೇಕಾದಷ್ಟು ಇದೆ. ತಾವು ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

**ಶ್ರೀ ಅರವಿಂದ ಲಿಂಬಾವಳಿ:** ಮಾನ್ಯ ಅಧ್ಯಕ್ಷರೆ, ಅವರೇ ಉತ್ತರವನ್ನು ಬರೆದು ಕೊಡಲಿ. ಮಾನ್ಯ ಮುಖ್ಯಮಂತ್ರಿಗಳು ನೀಡುತ್ತಿರುವ ಉತ್ತರವನ್ನು ಕೇಳುವುದಕ್ಕೆ ಅವರಿಗೆ ಸೌಜನ್ಯ ಇಲ್ಲವೆಂದರೆ ಹೇಗೆ?

(ಗೊಂದಲ)

**ಶ್ರೀ ಹೆಚ್.ಸಿ. ಬಾಲಕೃಷ್ಣ:** ಮಾನ್ಯ ಅಧ್ಯಕ್ಷರೆ, ಇವರಿಗೆ ಉತ್ತರ ಕೊಡುವುದಕ್ಕೆ ಬಾರದೆ ಇದ್ದರೆ ನಾವು ಬರೆದು ಕೊಡುತ್ತೇವೆ. ಸದನದಲ್ಲಿ ಯಾವ ರೀತಿಯಾಗಿ ಮಾಡನಾಡಬೇಕೆಂಬುದು ಇವರಿಗೆ ಇನ್ನೂ ಗೊತ್ತಿಲ್ಲ ಎಂದರೆ ಹೇಗೆ?

(ಗೊಂದಲ)

**ಅಧ್ಯಕ್ಷರು:** ನಾನು ಹೇಳುವುದನ್ನು ಈ ಕಡೆಯಾಗಲಿ ಅಥವಾ ಆ ಕಡೆಯಾಗಲಿ ಯಾರೂ ಕೇಳುತ್ತಿಲ್ಲ.

(ಗೊಂದಲ)

**ಶ್ರೀ ಅರವಿಂದ ಲಿಂಬಾವಳಿ:** ನೀವೇನು ಮಾಡಿದ್ದೀರಿ ಎಂಬುದು ನಮಗೆ ಗೊತ್ತಿಲ್ಲವೆ?

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:** ಮಾನ್ಯ ಅಧ್ಯಕ್ಷರೆ, ಕಲ್ಲಿದ್ದಲು ಖರೀದಿಯಲ್ಲಿ ಅವ್ಯವಹಾರ ನಡೆದಿರಬೇಕೆಂದು ಮಾನ್ಯ ಮುಖ್ಯಮಂತ್ರಿಗಳಿಗೆ ಖಾತರಿಯಾಗಿರಬೇಕೆಂದು ನನಗೆ ಅನಿಸುತ್ತಿದೆ. ಈ ಮಾತನ್ನು ನೀವೇ ಹೇಳಿದ್ದೀರಿ. ಇಲ್ಲದಿದ್ದರೆ, ಹೈಕೋರ್ಟ್ ಜಡ್ಜ್ ಕಡೆಯಿಂದ ಸುಮ್ಮನೆ ತನಿಖೆ ಮಾಡಿಸುತ್ತೀರಾ? ಅಂದರೆ, ಶೂನ್ಯಕ್ಕೆ ತನಿಖೆ ಮಾಡುಸುತ್ತೀರಾ? ಮಾನ್ಯ ಅಧ್ಯಕ್ಷರೆ, ಶೂನ್ಯಕ್ಕಂತೂ ತನಿಖೆ ಮಾಡಿಸುವುದಕ್ಕೆ ಆಗುವುದಿಲ್ಲ. ಅಲ್ಲಿ ಬೆಂಕಿ ಇದ್ದರೆ ಮಾತ್ರ ಹೊಗೆ ಬರುವುದಕ್ಕೆ ಸಾಧ್ಯ. ಬೆಂಕಿ ಇಲ್ಲದೆ ಹೊಗೆ ಹೇಗೆ ಬರುವುದಕ್ಕೆ ಸಾಧ್ಯ? ಅಲ್ಲಿ ಅವ್ಯವಹಾರ ನಡೆದಿರುವ ಬಗ್ಗೆ ಅವರಿಗೆ ಈಗ ಖಾತರಿಯಾಗಿದೆ. Suo-motu ಅವರೇ ಸ್ಟೇಟ್‌ಮೆಂಟ್ ಕೊಡುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಇದರ ಬಗ್ಗೆ ತನಿಖೆ ಮಾಡಿಸುತ್ತೇನೆಂದು ಹೇಳಿರತಕ್ಕಂಥದ್ದು ಬಹಳ ಸಂತೋಷ. ನಾವು ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬಗ್ಗೆ ಮಾತನಾಡುವಾಗ ಯಾವುದೇ ಹಗರಣ ಮತ್ತು ಭ್ರಷ್ಟಾಚಾರದ ಬಗ್ಗೆ ಎಲ್ಲಿಯೂ ಕೂಡ ಪ್ರಸ್ತಾಪ ಮಾಡಿಲ್ಲ. ಕಲ್ಲಿದ್ದಲಿನ ಬಗ್ಗೆ ನಮ್ಮ ಹತ್ತಿರ ಮಾಹಿತಿ ಇದ್ದರೂ ಕೂಡ ನಾವು ಪ್ರಸ್ತಾಪ ಮಾಡಿಲ್ಲ. ಇವತ್ತು ಆ ವಿಷಯದ ಬಗ್ಗೆ ಚರ್ಚೆ ಮಾಡಲು ನೋಟಿಸ್ ಕೊಟ್ಟಿದ್ದಾರೆ. ಆದ್ದರಿಂದ, ಅದನ್ನು ಪ್ರಸ್ತಾಪ ಮಾಡುವುದಕ್ಕಿಂತ ಮುಂಚಿತವಾಗಿಯೇ ಇದನ್ನು ಏತಕ್ಕೆ ಹೇಳುತ್ತಿದ್ದೀರಿ? ಈ ವಿಷಯದ ಬಗ್ಗೆ ಚರ್ಚೆ ಮಾಡಲು ಮಾನ್ಯ ಅಧ್ಯಕ್ಷರು ಅವಕಾಶ ಕೊಡಲಿ. ಆನಂತರ ಇದರ ಬಗ್ಗೆ ದೀರ್ಘವಾಗಿ ಚರ್ಚೆ ಮಾಡೋಣ. ಆಮೇಲೆ ಯಾವ ತರಹದ ಅಥವಾ ಯಾವ ಸ್ವರೂಪದ ತನಿಖೆ ಆಗಬೇಕೆಂದು ನಿರ್ಧಾರ ತೆಗೆದುಕೊಳ್ಳಿ. ಏಕೆಂದರೆ, ಅವ್ಯವಹಾರ ಆಗಿರತಕ್ಕಂಥದ್ದನ್ನು ಈಗ ನೀವೇ ಒಪ್ಪಿಕೊಂಡಿದ್ದೀರಿ. ಅವ್ಯವಹಾರ ನಡೆದಿದೆ ಎಂಬುದು admittedly it is a fact. Such being the case, ಬೇರೆ ರೀತಿಯಲ್ಲಿ ತೀರ್ಮಾನ ಮಾಡೋಣ. ಇದಕ್ಕೆ ಸಿಬಿಯ ತನಿಖೆ ಅಥವಾ ಸಿಟಿಂಗ್ ಹೈಕೋರ್ಟ್ ಜಡ್ಜ್ ಕಡೆಯವರಿಂದ

ಬೇಕಾದರೆ ಮಾಡಿಸೋಣ. ಈಗ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ವಿಷಯಕ್ಕೆ ಮಾತ್ರ ಸೀಮಿತವಾಗಿ ಉತ್ತರ ಹೇಳಿ.

**ಶ್ರೀ ಹೆಚ್.ಡಿ. ರೇವಣ್ಣ:** ಮಾನ್ಯ ಅಧ್ಯಕ್ಷರೆ, ನಿಲುವಳಿ ಸೂಚನೆ ಮೇಲೆ ಚರ್ಚೆ ಮಾಡಲು ನಾವು ನೋಟಿಸ್ ಕೊಟ್ಟಿದ್ದೇವೆ. ಇದರಲ್ಲಿ ಮಾನ್ಯ ಮುಖ್ಯಮಂತ್ರಿಗಳು ಇನ್ವಾಲ್ವ್ ಆಗಿದ್ದಾರೆ.

**ಅಧ್ಯಕ್ಷರು:** ಆಯಿತು. ಈಗ ಅವರು ಉತ್ತರ ಕೊಡಲಿ.

**ಶ್ರೀ ಬಿ.ಎಸ್. ಯಡಿಯೂರಪ್ಪ:** ಮಾನ್ಯ ಜಯಚಂದ್ರರವರೆ, ಈ ಭಾಷಣದ ಕೊನೆಯಲ್ಲಿ ಈ ರಾಜ್ಯದ ರೈತರಿಗೆ ಮತ್ತು ಗ್ರಾಮೀಣ ಜನರಿಗೆ ಸಂಬಂಧಪಟ್ಟಂತೆ ಸುಮಾರು 36 ಹೊಸ ಹೆಜ್ಜೆಗಳನ್ನು ನಾವೇನು ಇಡಬೇಕೆಂದು ತೀರ್ಮಾನ ಮಾಡಿದ್ದೇವೆಯೋ ಆ ಮಾಹಿತಿಯನ್ನು ನಾನು ನಿಮಗೆ ಕೊಡುತ್ತೇನೆ. ಈಗ ತಾವುಗಳು ಸ್ವಲ್ಪ ಸಮಾಧಾನದಿಂದ ಇರಿ. ನಾನು ಏನು ಹೇಳುವುದಕ್ಕೆ ಹೊರಟ್ಟಿದ್ದೇನೆಂದರೆ, ವಿದ್ಯುತ್ ಇಲಾಖೆ ಬಗ್ಗೆ ಚರ್ಚೆ ಆಗತಕ್ಕಂಥ ಕಾಲದಲ್ಲಿ ಕೆಲವು ಸುಧಾರಣೆಗಳನ್ನು ಮಾಡುತ್ತಿದ್ದೇವೆ. ಅಂದರೆ, ಟ್ರಾನ್ಸ್‌ಮಿಷನ್ ಲಾಸ್ ಮತ್ತು ತೆಫ್ಟ್ ಕಡಿಮೆ ಮಾಡುವುದಕ್ಕೆ ಹೆಜ್ಜೆ ಇಟ್ಟಿದ್ದೇವೆ. ಕಲ್ಲಿದ್ದಲು ಖರೀದಿಗೆ ಸಂಬಂಧಪಟ್ಟಂತೆ ಅಂದರೆ, ಎಲ್ಲೋ ಒಂದು ಕಡೆ ಅವ್ಯವಹಾರ ನಡೆದಿದೆ ಎಂದು ಜನರಲ್ಲಿ ಒಂದು ರೀತಿಯ ಸಂಶಯದ ಭಾವನೆ ಇದೆ. ಅದಕ್ಕೋಸ್ಕರ ಕೆಪಿಸಿ ಯಲ್ಲಿ 2002 ರಿಂದ 2009ರವರೆಗೆ ಅಂದರೆ ನನ್ನ ಅವಧಿಯನ್ನು ಸೇರಿ ಕಲ್ಲಿದ್ದಲು ಖರೀದಿ ಬಗ್ಗೆ ತನಿಖೆ ಮಾಡಿಸುತ್ತೇನೆ.

**ಶ್ರೀ ಹೆಚ್.ಡಿ. ರೇವಣ್ಣ:** ನಾವು ನೋಟಿಸ್ ಕೊಟ್ಟು ಚರ್ಚೆಯಾದ ನಂತರ ಇದಕ್ಕೆ ಉತ್ತರ ಕೊಡಲಿ.

**(ಗೊಂದಲ)**

**ಅಧ್ಯಕ್ಷರು:** ಮಾನ್ಯ ರೇವಣ್ಣನವರೆ, ಅವರು ಏನು ಹೇಳುತ್ತಾರೆಯೋ ಅದನ್ನು ಮೊದಲು ಕೇಳಿ. ಏಕೆ ಈ ರೀತಿ ಮಾಡುತ್ತಿದ್ದೀರಿ? ಉತ್ತರ ಕೊಟ್ಟ ನಂತರ ನೀವು ಏನು ಬೇಕಾದರೂ ಕೇಳಿ. ಅಂದರೆ, ನೀವು ಹೇಳಿರುವುದು

ಮತ್ತು ನೀವು ಮಾಡಿರುವುದು ಸರಿಯಲ್ಲವೆಂದು ಆಮೇಲೆ ತಾವು ಹೇಳಿ. ನಿಮಗೆ ನಾನು ಅವಕಾಶ ಕೊಡುತ್ತೇನೆ. ಪದೇ ಪದೇ ಎದ್ದು ನಿಂತರೆ ಹೇಗೆ?

**ಶ್ರೀ ಬಿ.ಎಸ್. ಯಡಿಯೂರಪ್ಪ:** ಮಾನ್ಯ ಅಧ್ಯಕ್ಷರೆ, 2002 ರಿಂದ 2009ರವರೆಗೆ ಮತ್ತು ನನ್ನ ಅವಧಿಯನ್ನು ಸೇರಿಸಿ ಕೆಪಿಸಿಎಲ್ ನಿಂದ ಕಲ್ಲಿದ್ದಲು ಖರೀದಿ ಮಾಡಿರುವಂಥ ಬಗ್ಗೆ ನಿವೃತ್ತ ಹೈಕೋರ್ಟ್ ಜಡ್ಜ್‌ನಿಂದ ತನಿಖೆ ಮಾಡಬೇಕೆಂದು ನಾನು ತೀರ್ಮಾನ ಮಾಡಿದ್ದೇನೆ. ಇದನ್ನು ಮಾಡಿಸುತ್ತೇನೆ. ನಾನು ಅಧಿಕಾರಕ್ಕೆ ಬಂದ ಮೇಲೆ ಕಳೆದ ವರ್ಷ ಬೇಸಿಗೆಯಲ್ಲಿ ವಿದ್ಯುತ್ ಅಭಾವ ಇತ್ತು. ಕಲ್ಲಿದ್ದಲನ್ನು ಸ್ಟಾಕ್ ಮಾಡಿಕೊಳ್ಳಿ ಮತ್ತು ಆಮದು ಮಾಡಿಕೊಳ್ಳಿ ಎಂದು ಕೇಂದ್ರ ಸರ್ಕಾರ ಕೂಡ ಹೇಳಿತ್ತು. 2008ರ ಮೇ ತಿಂಗಳಲ್ಲಿ ಅಂದರೆ ನಮ್ಮ ಸರ್ಕಾರ ಅಧಿಕಾರಕ್ಕೆ ಬರುವುದಕ್ಕಿಂತ ಒಂದೆರಡು ದಿನಗಳ ಮೊದಲೇ ಕೆಪಿಸಿಎಲ್ ನಿಂದ 6 ಲಕ್ಷ ಮೆಟ್ರಿಕ್ ಟನ್ ಖರೀದಿಗೆ ಟೆಂಡರ್ ಕರೆಯಲಾಗಿತ್ತು. ಇದರಲ್ಲಿ 12 ಕಂಪನಿಗಳು ಭಾಗವಹಿಸಿದ್ದವು. ನಾಲ್ಕು ಕಂಪನಿಗಳು ನಮ್ಮ ಎಲ್ಲಾ ಷರತ್ತುಗಳನ್ನು.....

**(ಗೊಂದಲ)**

**ಅಧ್ಯಕ್ಷರು:** ಮಾನ್ಯ ರೇವಣ್ಣನವರೆ, ಅವರು ಏನು ಹೇಳುತ್ತಾರೆ ಎಂಬುದನ್ನು ಕೇಳಿ.

**ಶ್ರೀ ಹೆಚ್.ಡಿ. ರೇವಣ್ಣ:** ಕೃಷಿ ಬಗ್ಗೆ ಅವರು ಮಾತನಾಡಲಿ. ಬೇರೆ ವಿಷಯದ ಬಗ್ಗೆ ಈಗ ಬೇಡ.

**ಅಧ್ಯಕ್ಷರು:** ಅವರು ಉತ್ತರ ಕೊಡಲಿ. ಈಗ ಏನು ತೊಂದರೆಯಾಗಿದೆ? ಮಾನ್ಯ ನಾಯ್ಡುರವರೇ ತಾವು ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು:** ನೀವು ಎರಡು ಗಂಟೆ ಮಾತನಾಡಿದ್ದೀರಿ. ಆಗ ನಾವು ನಿಮಗೆ ಏನೂ ಅಡ್ಡಿ ಮಾಡಲಿಲ್ಲ. ಮತ್ತೆ ಆಗ ನಾವೇನೂ ಉತ್ತರ ಕೊಡಲಿಲ್ಲ.

(ಗೊಂದಲ)

**ಶ್ರೀ ಸಿ.ಸಿ. ಪಾಟೀಲ್:** ನಿಮಗೇಕೆ ಭಯ ತನಿಖೆ ಮಾಡಲಿ ಬಿಡಿ.

**ಅಧ್ಯಕ್ಷರು:** ಮಾನ್ಯ ರೇವಣ್ಣನವರೆ ಮತ್ತು ಮಾನ್ಯ ಕಟ್ಟಾ ಸುಬ್ರಹ್ಮಣ್ಯ ನಾಯ್ಡುರವರೆ, ದಯವಿಟ್ಟು ಕುಳಿತುಕೊಳ್ಳಿ. ಅವರು ಮೊದಲು ಉತ್ತರ ಕೊಡಲಿ. ಅನಂತರ ಸರಿಯಾಗಿಲ್ಲವೆಂದು ತಾವು ಹೇಳಿ.

**ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು:** ಉತ್ತರ ಕೇಳಿಸಿಕೊಳ್ಳುವಂಥ ತಾಳ್ಮೆ ಕೂಡ ಅವರಿಗೆ ಇಲ್ಲ.

**ಅಧ್ಯಕ್ಷರು:** ಮೊದಲು ಅವರು ಕೊಡಲಿ. ಅನಂತರ ಅವರು ಹೇಳಿರುವ ಉತ್ತರ ಸರಿಯಾಗಿಲ್ಲವೆಂದು ತಾವು ಹೇಳಿ. ನಿಮಗೂ ಕೂಡ ಅವಕಾಶ ಕೊಡುತ್ತೇನೆ.

**ಶ್ರೀ ಬಿ.ಎಸ್. ಯಡಿಯೂರಪ್ಪ:** 12 ಕಂಪನಿಗಳು ಟೆಂಡರ್‌ನಲ್ಲಿ ಭಾಗವಹಿಸಿದ್ದವು. 4 ಕಂಪನಿಗಳು ಎಲ್ಲಾ ಷರತ್ತುಗಳನ್ನು ಪೂರೈಸಲು qualify ಆಗಿದ್ದವು.

(ಗೊಂದಲ)

**ಅಧ್ಯಕ್ಷರು:** ಅವರೇನು ಬೇರೆ ವಿಷಯಗಲು ಹೇಳಬಾರದೆ? ನೀವು ಹೇಳಿದಂಥ ವಿಷಯಗಳಿಗೆ ಮಾತ್ರ ಅವರು ಸೀಮಿತರಾಗಿರಬೇಕೆ? ಈ ರೀತಿ ನಡವಳಿಕೆ ಸರಿಯಲ್ಲ.

**ಶ್ರೀ ಬಿ.ಎಸ್. ಯಡಿಯೂರಪ್ಪ:** ಇದರಲ್ಲಿ 3 ಜನ Financial bid ಕೊಟ್ಟರು. ಇದರಲ್ಲಿ ಭಾಟಿಯಾ ಇಂಟರ್‌ನ್ಯಾಷನಲ್ ಕಂಪನಿ L1 ಆಗಿತ್ತು. ಅವರು ಒಂದು ಟನ್‌ಗೆ 2967 ರೂಪಾಯಿ ಕೋಟ್ ಮಾಡಿದ್ದರು. ನಾವು ಅವರ ಜೊತೆ ನೆಗೋಷಿಯಟ್ ಮಾಡಿ 2967 ರೂಪಾಯಿ ಒಂದು ಟನ್‌ಗೆ ಇದ್ದಂಥದನ್ನು ಒಂದು ಟನ್‌ಗೆ 68 ರೂಪಾಯಿ ಇಳಿಸಿ 2899 ರೂಪಾಯಿಗೆ ಖರೀದಿ ಮಾಡಬೇಕೆಂದು ತೀರ್ಮಾನ ಮಾಡಿದೆವು. ನಾವು ಬೆಲೆಯಲ್ಲಿ ಇಳಿಕೆ ಮಾಡಿದ್ದರಿಂದ 4.8 ಕೋಟಿ ರೂಪಾಯಿ ಉಳಿತಾಯ ಆಯಿತು. ಇದರಲ್ಲಿ

ಮುಖ್ಯವಾದ ಅಂಶ ಏನೆಂದರೆ, 6 ಲಕ್ಷ ಟನ್ ಕೊಡಬೇಕೆಂದು ಅಗ್ರಿಮೆಂಟ್ ಆಗಿ ನಾವು ತೆಗೆದುಕೊಳ್ಳುವಾಗ ಇದರಲ್ಲಿ 15% ಜಾಸ್ತಿಯಾದರೂ ನೀವು ಕೊಡಬೇಕು. 15% ಅಕಸ್ಮಾತ್ ಕಡಿಮೆಯಾದರೆ, ನಾವು ತೆಗೆದುಕೊಳ್ಳುವುದಿಲ್ಲ. ಈ ಕಂಡಿಷನ್ ಆದಮೇಲೆ ಅವರನ್ನು ಒಪ್ಪಿಸಿದೆವು. ಭಾಟಿಯಾ ಕಂಪನಿಗೆ ಈ ಜವಾಬ್ದಾರಿಯನ್ನು ಕೊಟ್ಟ ಮೇಲೆ 6 ಲಕ್ಷ ಟನ್‌ನಷ್ಟು ಕೋಲ್ ಅನ್ನು ಅವರಿಂದ ಖರೀದಿ ಮಾಡಿದ್ದೇವೆ.

6 ಲಕ್ಷ ಟನ್ ಕೊಲ್ ಜಾಸ್ತಿ ಬೇಕೆಂದು ತೀರ್ಮಾನ ಮಾಡಿದೆವು. ಇದು ಭಾರತ ಸರ್ಕಾರದ ಕಂಪನಿಯಾಗಿದ್ದರಿಂದ ಅವರಿಗೆ ಟೆಂಡರ್‌ನ್ನು ಕರೆಯದೆ ನಾವು exemptionನ್ನು ಕೊಟ್ಟಿದ್ದೆವು. ಅವರನ್ನು ನೇರವಾಗಿ ಕರೆದೆವು, ಭಾಟಿಯಾ ಸೇರಿ ನಾವು MMTCಯಿಂದ ಖರೀದಿಯನ್ನು ಮಾಡಬೇಕಾಯಿತು. 17 ರಾಜ್ಯಗಳು ನಮಗಿಂತ ಹೆಚ್ಚಿಗೆ ಕೊಟ್ಟು MMTCಯಿಂದ ಖರೀದಿ ಮಾಡಿದ್ದಾರೆ. ಉದಾಹರಣೆಗೆ ಹೇಳುವುದಾದರೆ, ಟೆಂಡರ್ ಮೂಲಕವೇ ಕೊಳ್ಳಬೇಕೆಂದು ಹೈಕೋರ್ಟಿಗೆ ಕೆಲವರು ಹೋದರು ಮಾನ್ಯ ಜಯಚಂದ್ರರವರೆ, ನಾವು ಈ exemptionನ್ನು ಕೊಟ್ಟಿದ್ದೆವು. ಅರ್ಧ ಟೆಂಡರ್‌ನ್ನು ಕೊಟ್ಟಿದ್ದು ಆ ಪ್ರಕಾರ ಅವರು ಸಪ್ಲೈ ಮಾಡಿದ್ದರು. ಅಷ್ಟು ಹೊತ್ತಿಗೆ ಹೈಕೋರ್ಟ್, ಸುಪ್ರೀಂಕೋರ್ಟು ನೀವು ಅರ್ಧ ಬೇಕಾದರೆ ತೆಗೆದುಕೊಳ್ಳಿ ಇನ್ನು ಹೆಚ್ಚು ನೀವು ಪೂರ್ಣ ಮಾಡಬೇಡಿ. ನೀವು ಟೆಂಡರ್‌ನ್ನೇ ಕರೆಯಬೇಕು. ಕೇಂದ್ರ ಸರ್ಕಾರದ್ದು ಆದರೂ ನೀವು ಏಕೆ ನೇರವಾಗಿ ಕೊಡುತ್ತೀರಿ ಎಂದು ಅವರು ಹೇಳಿದರು. ಹೀಗಾಗಿ ನಾವು 50% ಖರೀದಿಯನ್ನು ಮಾಡಿದ್ದೆವು. ಅದನ್ನು ಅಲ್ಲಿಗೆ ನಿಲ್ಲಿಸಿಬಿಟ್ಟೆವು. ಬಹಳ ಮುಖ್ಯವಾಗಿ ಈ ವರ್ಷ 2009–10ರಲ್ಲಿ ಇದೇ ಭಾಟಿಯ International Companyಗೆ ರೂ. 4,180 per tonne ಖರೀದಿಗೆ ಒಪ್ಪಂದ ಆಗಿದೆ. ಬೇರೆ ರಾಜ್ಯವೆಂದರೆ, ಪಕ್ಕದ ಆಂಧ್ರದಿಂದಲೂ ನಾನು ಮಾಹಿತಿಯನ್ನು ತರಿಸಿಕೊಂಡಿದ್ದೇನೆ. ಅವರು ಪರ್‌ಟನ್‌ಗೆ ಇದರಲ್ಲಿ 5,555 ರೂಪಾಯಿಯನ್ನು ಕೊಡುತ್ತಿದ್ದಾರೆ. ತಮಿಳುನಾಡಿನವರು 4,880 ರೂಪಾಯಿಗಳನ್ನು ಕೊಡುತ್ತಿದ್ದಾರೆ. ನಾವು 4,180 ರೂಪಾಯಿಗಳನ್ನು ಕೊಡುತ್ತಿದ್ದೇವೆ. ಅಂದರೆ ಉಳಿತಾಯವನ್ನು ಮಾಡಿ ನಮ್ಮ ಅಧಿಕಾರಿಗಳು

ಪ್ರಾಮಾಣಿಕವಾಗಿ ಕೆಲಸವನ್ನು ಮಾಡಿ ನಮಗೆ ಉಳಿಸುವಂತಹ ಕೆಲಸವನ್ನು ಮಾಡಿದ್ದಾರೆ. ಆದರೆ 2002 ರಿಂದ 2007–08ರವರೆಗೆ 7 ವರ್ಷಗಳ ಕಾಲ 3 ಕಂಪನಿಗಳಿಗೆ ಅಂದರೆ Gupta Coal, R.N. Energy, Global Coal, ಇವುಗಳಿಗೆ ಒಂದು ವರ್ಷಕ್ಕೆ 500 ಕೋಟಿ ರೂಪಾಯಿಗಳನ್ನು ಬರೀ ವಾಷ್ ಮಾಡುವುದಕ್ಕೋಸ್ಕರ ಹಿಂದಿನವರು ಹಣವನ್ನು ಕೊಟ್ಟರು. 58 ಲಕ್ಷ ಮೆಟ್ರಿಕ್ ಟನ್‌ಗೆ ಒಂದು ವರ್ಷಕ್ಕೆ ಕೋಲ್ ವಾಷ್ ಮಾಡುವುದಕ್ಕೆ 500 ಕೋಟಿ ರೂಪಾಯಿಗೆ ಕೊಟ್ಟರು. ಅಂದರೆ 7 ವರ್ಷದಲ್ಲಿ ಅನಗತ್ಯವಾಗಿ 3500 ಕೋಟಿ ರೂಪಾಯಿಗಳು ಸರ್ಕಾರಕ್ಕೆ ನಷ್ಟವಾಯಿತೆಂದು ಒಂದು ಅಂದಾಜು. ಈ ವರ್ಷ ನಾವು ಅಧಿಕಾರಕ್ಕೆ ಬಂದ ಮೇಲೆ ಏನು ಮಾಡಿದೆವು ಅಂದರೆ, ಇದನ್ನು ನಾನು ಹೇಳಬೇಕಲ್ಲ? ಹಿಂದೆ ಇವರು ಕೊಟ್ಟಾಗ ಏನು ಮಾಡಿದರು? ಪ್ರತಿ ವರ್ಷ ಕರೆಯಬೇಕಾಗಿತ್ತು. 500 ಕೋಟಿ ರೂಪಾಯಿಗಳು ಪ್ರತಿ ವರ್ಷ ಜಾಸ್ತಿಯಾಯಿತಲ್ಲ? ಸಾಮಾನ್ಯವಾಗಿ ವಾಷ್ ಮಾಡುವುದಕ್ಕೆ ಪ್ರತಿ ವರ್ಷ ಟೆಂಡರ್‌ನ್ನು ಕರೆಯಬೇಕಾಗಿತ್ತು. ಟೆಂಡರ್ ಕರೆಯಲಿಲ್ಲ. ಟೆಂಡರ್ ಕರೆಯದೇ ಅವರಿಗೆ extend ಮಾಡಿಕೊಳ್ಳುತ್ತಾ ಬಂದರು. ಇದರ ಪರಿಣಾಮ ಒಂದು ಅಂದಾಜಿನ ಪ್ರಕಾರ ಈ ನಮ್ಮ ಸರ್ಕಾರಕ್ಕೆ 7 ವರ್ಷದಲ್ಲಿ 3,500 ಕೋಟಿ ರೂಪಾಯಿಗಳ ಭಾರ ಬಿದ್ದಿದೆ. ಇನ್ನೊಂದು ಬಹಳ ನೀವು ಆಶ್ಚರ್ಯಚಕಿತರಾಗಬಹುದು. ಕೋಲ್ ಒರಿಸ್ಸಾದ ತಾಲಚ್ಚೇರ್‌ನಿಂದ ರಾಯಚೂರಿಗೆ ಬರಬೇಕು. ಅದು ನೇರವಾಗಿ ಬರಬಹುದಾಗಿತ್ತು. ರೈಲ್ವೆಯಿಂದ ತರಲು ಅವಕಾಶವಿದ್ದರೂ ಸಹ ತಾಲಚ್ಚೇರ್‌ನಿಂದ ಪ್ಯಾರಾದೀಪ್‌ಗೆ ಬಂತು. ಅಲ್ಲಿಂದ ರೈಲ್ವೆ ಮುಖಾಂತರ ಚೆನ್ನೈಗೆ ಬಂತು, ಚೆನ್ನೈನಿಂದ ರಾಯಚೂರಿಗೆ ಬಂತು, 350 ಕಿ.ಮೀ. ಸುತ್ತಿಕೊಂಡು ಬಂತು. ಒಂದು ವರ್ಷಕ್ಕೆ 160 ಕೋಟಿ ರೂಪಾಯಿಗಳು ನಷ್ಟ ಆಯಿತು. ನಮ್ಮ ಸರ್ಕಾರವು ಅಧಿಕಾರಕ್ಕೆ ಬಂದ ಮೇಲೆ ಇದನ್ನು ರದ್ದು ಮಾಡಿದ್ದೇವೆ. ಇದರ ಬಗ್ಗೆ ಸಮಗ್ರವಾದಂತಹ ತನಿಖೆಯು ಆಗಬೇಕೆಂದು ನನಗೆ ನಾನು ವಾಸ್ತವಿಕ ಸತ್ಯಸಂಗತಿಗಳು ಗೊತ್ತಾಗಬೇಕೆಂದು ಹೇಳಿ Retired High Court Judgeರವರಿಂದ ಈ ಸಮಗ್ರವಾದಂತಹ ಒಂದು ತನಿಖೆಯನ್ನು ಮಾಡಬೇಕೆಂದು ತೀರ್ಮಾನವನ್ನು ಮಾಡಿದ್ದೇನೆ. ಈ

ತನಿಖೆ ಆದಷ್ಟು ಬೇಗ ಮಾಡಿಸುತ್ತೇನೆ. ಪ್ಯಾರಾದೀಪ್‌ದಿಂದ ಚೆನ್ನೈಗೆ ಸಮುದ್ರದಿಂದ ಬಂತು. ಅದರಿಂದ ಇವೆಲ್ಲವೂ ಏನೇನು ಆಗಿದೆ ಎಂಬುದರ ಬಗ್ಗೆ ತನಿಖೆಯು ಆದಾಗ ಮಾತ್ರ ಗೊತ್ತಾಗುತ್ತದೆ. ಮುಂದೆ ಬರುವವರು ತಪ್ಪನ್ನು ಮಾಡಬಾರದು. ತಪ್ಪು ಮಾಡಿದ್ದರೆ ಯಾರು ಅಧಿಕಾರಿಗಳು ಸೇರಿದ್ದಾರೆ ಅಂತಹವರ ಮೇಲೆ ಸರಿಯಾದ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಅದಕ್ಕೋಸ್ಕರ ಈ ಸಂದರ್ಭದಲ್ಲಿ ಹೇಳಿದ್ದೇನೆ. ನೈಸ್ ಕಂಪನಿಯ ಬಗ್ಗೆ ಆ ಮನೆಯಲ್ಲಿ ಪ್ರಸ್ತಾಪವಾಗಿದೆ. ಇಲ್ಲಿ ಆಗಿಲ್ಲ. ಅದಕ್ಕೋಸ್ಕರ ನಾನು ಇಲ್ಲಿ ಚರ್ಚೆ ಮಾಡುವುದಿಲ್ಲ. ನನ್ನ ಅಪೇಕ್ಷೆ ಏನೆಂದರೆ, ನೈಸ್ ಕಂಪನಿಯ ವಿಷಯದಲ್ಲಿ ಒಂದು ದಿವಸ ಕಾಲ ಈ ಮನೆಯಲ್ಲಿ ಸಮಗ್ರವಾದಂತಹ ಚರ್ಚೆಯಾಗಬೇಕು. ವಾಸ್ತವಿಕವಾದಂತಹ ಸತ್ಯಾಂಶಗಳು ಏನು ಎಂಬುದು ರಾಜ್ಯದ ಜನತೆಗೆ ಗೊತ್ತಾಗಬೇಕು. ದೇಶದ ಜನತೆಗೂ ಗೊತ್ತಾಗಬೇಕು. ಇದರಲ್ಲಿ ಯಾರು ಎಷ್ಟರಮಟ್ಟಿಗೆ ಜವಾಬ್ದಾರರು ಇದ್ದಾರೆ, ಈ ಸಂಗತಿಗಳೂ ಕೂಡ ಚರ್ಚೆಯಾಗಬೇಕೆಂದು ನಾನು ಈ ಸಲಹೆಯನ್ನು ಕೊಡುತ್ತಿದ್ದೇನೆ. ಬಹಳ ಮುಖ್ಯವಾಗಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿಯ ಬಗ್ಗೆ ಸಿದ್ದರಾಮಣ್ಣನವರು ಹೇಳಿದ್ದಾರೆ. ಅದರ ಬಗ್ಗೆ ಚರ್ಚೆಯಾಗಬೇಕು. ನಾನು ಒಂದು ಮಾತನ್ನು ಈ ಮನೆಯ ಮೂಲಕ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಪ್ರತಿ ವರ್ಷ ನೀವೆಲ್ಲರೂ ಅಪೇಕ್ಷೆಪಟ್ಟಂತೆ 60 ದಿವಸವಾದರೂ ಮಿನಿಮಮ್ ಅಧಿವೇಶನ ನಡೆಯಲೇಬೇಕು. ಇದು 7–8 ವರ್ಷದಿಂದ ಕಾರ್ಯರೂಪಕ್ಕೆ ಬಂದಿಲ್ಲ.

**ಶ್ರೀ ಸಿದ್ದರಾಮಯ್ಯ:** ನೀವು ಕಾನೂನು ಮಾಡಿದ ಮೇಲೆ ಅದನ್ನು ಹೇಳಿ.

**ಶ್ರೀ ಬಿ.ಎಸ್. ಯಡಿಯೂರಪ್ಪ:** ಕಾನೂನು ಮಾಡಿದ ಮೇಲೂ ಆಗಿಲ್ಲ.

**ಶ್ರೀ ಸಿದ್ದರಾಮಯ್ಯ:** ಕಾನೂನು ಮಾಡಿದ ಮೇಲೆ ಹೇಳಿ.

**ಶ್ರೀ ಬಿ.ಎಸ್. ಯಡಿಯೂರಪ್ಪ:** ಆಯಿತಪ್ಪಾ. ಕಾನೂನು ಆದಮೇಲೆ ಆಗಲಿಲ್ಲ. ಓ.ಕೆ. ಕಾನೂನು ಆದ ಮೇಲೆ ಆಗಲಿಲ್ಲ. ಇದಕ್ಕೆ ಕಾನೂನು ಅಗತ್ಯವೇ ಇರಲಿಲ್ಲ. ಹೆಚ್ಚು ದಿವಸ ಅಧಿವೇಶನ ನಡೆಯಬೇಕೆಂದು ಕಾನೂನು ಮಾಡಿಕೊಳ್ಳುವಂತಹ ಪರಿಸ್ಥಿತಿ ಏತಕ್ಕೆ ಬಂತೆಂದರೆ, ಹೆಚ್ಚು ದಿವಸ ಅಧಿವೇಶನ

ನಡೆಸದೆ ಇದ್ದುದರಿಂದ ನಾವೇ ಒಂದು ಕಾನೂನನ್ನು ಮಾಡಿಕೊಂಡೆವು. ನಾನು ಈ ಮನೆಯ ಮೂಲಕ ರಾಜ್ಯದ ಜನತೆಗೆ ಭರವಸೆಯನ್ನು ಕೊಡುತ್ತೇನೆ. ಲೋಕಸಭೆಯಲ್ಲಿ ಏನು ಸತ್‌ಸಂಪ್ರದಾಯವಿದೆ, ಅದೇ ರೀತಿಯಲ್ಲಿ ವರ್ಷದ ಪ್ರಾರಂಭದಲ್ಲಿಯೇ 60 ದಿವಸ ವಿಧಾನಮಂಡಲದ ಅಧಿವೇಶನ ಹೇಗೆ ನಡೆಯಬೇಕು. ಯಾವ ಯಾವ ತಿಂಗಳಲ್ಲಿ ಎಷ್ಟು ದಿವಸಗಳು ನಡೆಯಬೇಕು ಈ ಬಗ್ಗೆ ಸನ್ಮಾನ್ಯ ಅಧ್ಯಕ್ಷರು ಒಂದು ಟೈಮ್ ಟೇಬಲ್‌ನ್ನು ಹಾಕಿದರೆ ಒಳ್ಳೆಯದು.

**ಅಧ್ಯಕ್ಷರು:** ಬಿಎಸಿ ಮೀಟಿಂಗ್‌ನಲ್ಲಿ suggestion ಮಾಡಿದ್ದೀರಲ್ಲಾ ಆ ರೀತಿ One year calendar of events ಹಾಕಿ ಬಿಡಬೇಕು.

**ಶ್ರೀ ಬಿ.ಎಸ್. ಯಡಿಯೂರಪ್ಪ:** ಆಗಿಬಿಡಬೇಕು ಸಾರ್. I am ready Sir.

**ಅಧ್ಯಕ್ಷರು:** ಚಳಿಗಾಲದ ಅಧಿವೇಶನ, ಬೇಸಿಗೆಕಾಲದ ಅಧಿವೇಶನ ಅದು ಒಂದು ವರ್ಷದ್ದೆ,

**ಶ್ರೀ ಬಿ.ಎಸ್. ಯಡಿಯೂರಪ್ಪ:** ನಾನು ನಿಮ್ಮ ಕಾಲದಲ್ಲಿ.....

**ಶ್ರೀ ಸಿದ್ದರಾಮಯ್ಯ:** ಈ ವರ್ಷವೇ ಮಿನಿಮಮ್ 60 ದಿವಸಗಳ ಕಾಲ ಅಧಿವೇಶನವನ್ನು ಮಾಡೋಣ. ಮುಂದಿನ ವರ್ಷ ಎಷ್ಟು ದಿವಸಗಳ ಮಾಡಬೇಕೆಂದು ಅದು calender of event ಮಾಡೋಣ.

**ಅಧ್ಯಕ್ಷರು;** ನಾವು ಡಿಸೆಂಬರ್ ತಿಂಗಳಿನಲ್ಲಿಯೇ ಡಿಸಿಷನ್ ತೆಗೆದುಕೊಂಡು ಬಿಡಬೇಕು.

**ಶ್ರೀ ಸಿದ್ದರಾಮಯ್ಯ:** ಈ ನವೆಂಬರ್‌ನಲ್ಲಿ ಎಷ್ಟು ದಿವಸಗಳ ಕಾಲ ಅಧಿವೇಶನ ನಡೆಯುತ್ತದೆ? ಈ ತಿಂಗಳಲ್ಲಿ 10 ದಿನ ಅಥವಾ 15 ದಿನ ನಡೆಸಲಿ, ಇನ್ನು ಉಳಿದ ದಿನಗಳ ಅಧಿವೇಶನವನ್ನು ನವೆಂಬರ್ ತಿಂಗಳಲ್ಲಿ ನಡೆಸಲಿ. ಒಟ್ಟಾರೆಯಾಗಿ 60 ದಿನಗಳನ್ನು ನಡೆಸೋಣ. ಆಮೇಲೆ ಮುಂದಿನ ವರ್ಷ ಏನು ಮಾಡಬೇಕೆಂದು ಟೈಮ್ ಟೇಬಲ್‌ನ್ನು ಹಾಕಿಕೊಳ್ಳೋಣ.

**ಶ್ರೀ ಬಿ.ಎಸ್. ಯಡಿಯೂರಪ್ಪ:** ನಾನು ನಿಮ್ಮ ವಿಷಯವನ್ನೇ ಮಾತನಾಡುತ್ತೇನೆ.

**ಶ್ರಿ ಟಿ.ಬಿ. ಜಯಚಂದ್ರ:** ಮಾನ್ಯ ಅಧ್ಯಕ್ಷರೆ, ಪಾರ್ಲಿಮೆಂಟ್‌ನಲ್ಲಿ ಹೇಗೆ ಬಜೆಟ್ ಸೆಷನ್‌ನ್ನು ಯಾವತ್ತು ಕರೆಯುತ್ತಾರಲ್ಲಾ, ಆ ತರಹ ಅದನ್ನು ರೂಲ್ಸ್ ಕಮಿಟಿಯಲ್ಲಿಟ್ಟು ನಾಳೆನೇ ಅಪ್ರೂವ್ ಮಾಡಿಸಿಕೊಟ್ಟರೆ .....

**ಅಧ್ಯಕ್ಷರು:** ಇದಕ್ಕೆ Rules Committee ಬೇಕಾಗಿಲ್ಲ. We have to take decision. BAC meetingನಲ್ಲಿ decisionನ್ನು ತೆಗೆದುಕೊಳ್ಳಬಹುದು.

**ಶ್ರೀ ಟಿ.ಬಿ. ಜಯಚಂದ್ರ:** That is a ...

**ಅಧ್ಯಕ್ಷರು:** ಬಿಎಸಿ ಮೀಟಿಂಗ್‌ನಲ್ಲಿ ಡಿಸಿಷನ್‌ನ್ನು ತೆಗೆದುಕೊಳ್ಳಬಹುದು.

**ಶ್ರೀ ಬಿ.ಎಸ್. ಯಡಿಯೂರಪ್ಪ:** ಮಾನ್ಯ ಸಭಾಧ್ಯಕ್ಷರೆ, ನೀವು ಸಲಹೆಯನ್ನು ಕೊಟ್ಟಿದ್ದೀರಿ. 60 ದಿವಸ ನಡೆಯುವ ಬಗ್ಗೆ ಟೈಮ್ ಟೇಬಲ್ ಹಾಕಿ. ಪಾರ್ಲಿಮೆಂಟ್‌ನಲ್ಲಿ ಏನು ಸತ್‌ಸಂಪ್ರದಾಯವಿದೆ. ಅದನ್ನು ಇಲ್ಲಿ ಹಾಕಿಕೊಡಬೇಕು. ಇದುವರೆಗೂ 29 ದಿವಸ ಅಧಿವೇಶನ ನಡೆದಿದೆ. ಈಗ 6 ದಿವಸಗಳ ಕಾಲ ಅಧಿವೇಶನ ನಡೆಯುತ್ತದೆ. ಒಟ್ಟು 35 ದಿವಸಗಳು ಆಯಿತು. ನವೆಂಬರ್‌ನಲ್ಲಿ ಚಳಿಗಾಲದ ಅಧಿವೇಶನ 20 ದಿವಸಗಳ ಕಾಲ ಹೇಗೆ ನಡೆಯಬೇಕೆಂಬುದರ ಬಗ್ಗೆ ನೀವು ಈಗಲೇ ಟೈಮ್ ಟೇಬಲ್‌ನ್ನು ಹಾಕಿಬಿಡಿ. ಅದಕ್ಕೆ ನಾವು ಸಿದ್ಧರಿದ್ದೇವೆ. ಒಟ್ಟು 55 ದಿವಸಗಳು ಆಯಿತು.

**ಶ್ರೀ ಸಿದ್ದರಾಮಯ್ಯ:** ಇನ್ನು 5 ದಿವಸಗಳ ಕಾಲ ಮಾಡಿ.

**ಶ್ರೀ ಬಿ.ಎಸ್. ಯಡಿಯೂರಪ್ಪ:** ಯಾಕೆ ಸಾರ್ ಹೀಗೆ ಮಾಡುತ್ತಾರೆ?

**ಶ್ರೀ ಸಿದ್ದರಾಮಯ್ಯ:** ಏನೂ ಮಾಡಿಲ್ಲ. ಇನ್ನು 5 ದಿವಸಗಳ ಕಾಲ ಮಾಡಿ ಎಂದು ಹೇಳುತ್ತಿದ್ದೇನೆ.

**ಶ್ರೀ ಬಿ.ಎಸ್. ಯಡಿಯೂರಪ್ಪ:** ಹೂಂ. ಅದಕ್ಕೂ ನಾನು ರೆಡಿ ಇದ್ದೇನೆ. ನೀವು ದಯಮಾಡಿ ಈ ವರ್ಷದಿಂದಲೇ 60 ದಿವಸಗಳ ಕಾಲ ಆಗುವ ಹಾಗೆ ಮಾಡಿದರೆ, I will be the happiest man. ನನಗೆ ಏನೂ ತೊಂದರೆ ಇಲ್ಲ. ಈ ಸಂಪ್ರದಾಯವನ್ನು ಮುಂದುವರಿಸಬೇಕು. ಇನ್ನು ಎರಡನೆಯದಾಗಿ

ಹೇಳುವುದಾದರೆ, ಆಡಳಿತದಲ್ಲಿ ಸುಧಾರಣೆ ಆಗಬೇಕೆಂದು ಇದ್ದರೆ ಸರ್ಕಾರಿ ನೌಕರರು ಸಮಯಕ್ಕೆ ಸರಿಯಾಗಿ ಸರ್ಕಾರಿ ಕಛೇರಿಗೆ ಬರಬೇಕು. ಅಗತ್ಯವಿದ್ದರೆ ಒಂದು ಗಂಟೆ ಕಾಲ ಹೆಚ್ಚಿಗೆ ಕುಳಿತುಕೊಳ್ಳುವುದಕ್ಕೆ ಸಿದ್ಧರಾಗಬೇಕು. ಅತಿವೃಷ್ಟಿಯಿಂದ ಜನರು ಸಂಕಷ್ಟವನ್ನು ಎದುರಿಸುತ್ತಿರುವಂತಹ ಈ ಸಂದರ್ಭದಲ್ಲಿ 100ಕ್ಕೆ 90 ಜನ ರೈತರ ಮಕ್ಕಳೇ ಗ್ರಾಮೀಣ ಪ್ರದೇಶದಿಂದ ಬಂದು ಇಲ್ಲಿ ನೌಕರರು ಇರಬೇಕಾದರೆ, ಅವರು ಜನರಿಗೆ available ಇರಬೇಕು. ಗ್ರಾಮಾಂತರ ಪ್ರದೇಶದಲ್ಲಿ ಕೊನೆಯ ಪಕ್ಷ ತಾಲ್ಲೂಕಿನಲ್ಲಿ ಕೆಲಸವನ್ನು ಮಾಡುವ ಅಧಿಕಾರಿಗಳು ತಾಲ್ಲೂಕು ಕೇಂದ್ರದಲ್ಲಿ ಆದರೂ ಇರಬೇಕು. ನಾನು Chief Secretaryಯವರಿಗೆ ಮತ್ತು ಸಂಬಂಧಪಟ್ಟ ಇಲಾಖೆಯ ಕಾರ್ಯದರ್ಶಿಯವರಿಗೆ ಸೂಚನೆಯನ್ನು ಕೊಡುತ್ತೇನೆ. ನೀವು ದೂರವಾಣಿ ಮೂಲಕ ಸಂಪರ್ಕ ಮಾಡಿ. ಯಾರಿಗೆ without your permission ತಾಲ್ಲೂಕು ಕೇಂದ್ರವನ್ನು ಬಿಟ್ಟು ತನ್ನ ಹೆಂಡತಿ ಮಕ್ಕಳು ಎಂದು ಹೇಳಿ ನಗರಕ್ಕೆ ಬರುವಂತಹ ಅಭ್ಯಾಸ ಏನು ಇರುತ್ತದೆ ಅಂಥವರಿಗೆ ಒಂದು ಅಥವಾ ಎರಡು ಸಾರಿ ವಾರ್ನ್ ಮಾಡಿ, ಮೂರನೇ ಸಾರಿಗೆ "ಇಷ್ಟವಿಲ್ಲದಿದ್ದರೆ resign ಮಾಡಿಹೋಗಿ ಬೇರೆಯವರು ಬರುತ್ತಾರೆ" ಎಂದು ಹೇಳಬೇಕು. ಈ ಕಟ್ಟುನಿಟ್ಟಿನ ಒಂದು ಕ್ರಮವನ್ನು ಜಾರಿಗೆ ತರಬೇಕೆನ್ನುವಂತಹ ಒಂದು ಸೂಚನೆಯನ್ನು ನಾನು ನಮ್ಮ ಅಧಿಕಾರಿಗಳಿಗೆ ಕೊಡುವವನಿದ್ದೇನೆ. ಅದನ್ನು ಕೊಡುತ್ತೇನೆ. ಎರಡನೆಯದಾಗಿ ನಾನು ನಮ್ಮ ಸಚಿವ ಸಂಪುಟದ ಸದಸ್ಯರಿಗೂ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನೀವು ಹೋದ ಕಡೆಯಲ್ಲಿ ರಿವ್ಯೂ ಮಾಡುತ್ತೀರಿ, ಎಲ್ಲವನ್ನು ಮಾಡುತ್ತೀರಿ, 10 ಗಂಟೆಗೆ ಕಛೇರಿಗೆ ಬರಬೇಕು, 10.30 ಗಂಟೆಗೆ ಆಗಾಗ್ಗೆ ವಾರಕ್ಕೆ ಒಂದು ಸಾರಿ, 15 ದಿನಕ್ಕೆ ಒಂದು ಸಾರಿ, ತಿಂಗಳಿಗೆ ಒಂದು ಸಾರಿ ನಿಮ್ಮ ಜಿಲ್ಲೆಯ ಒಂದು ಕಛೇರಿಗೆ ಹೋಗಿ ಸುಮ್ಮನೆ ಕುಳಿತುಕೊಳ್ಳಿ. ಏನೂ ಮಾತನಾಡಬೇಡಿ. ಯಾರು ಎಷ್ಟುಹೊತ್ತಿಗೆ ಬರುತ್ತಾರೆ ಎಂದು ನೋಟ್ ಮಾಡಿಕೊಳ್ಳಿ. ನಾನೂ ಸಹ ಬೆಂಗಳೂರಿನಲ್ಲಿದ್ದಾಗ ಅಥವಾ ಬೇರೆ ಕಡೆಗೆ ಹೋದಾಗ ಬೆಳಿಗ್ಗೆ 10.00 ಗಂಟೆಗೆ ಅಥವಾ 10.15 ಗಂಟೆಗೆ ಹೋಗಿ ಬಂದು

ಕಛೇರಿ ಕೆಲಸ ನಡೆಯುತ್ತಿದೆ. ಮತ್ತೆ ಸಾಯಂಕಾಲ 4.45 ಗಂಟೆಗೆ ಅಥವಾ 5.00 ಗಂಟೆಗೆ ಕಛೇರಿ ಸಮಯ ಮುಗಿಯುವ ಟೈಮ್‌ಗೆ 5 ಅಥವಾ 10 ನಿಮಿಷ ಮುಂಚೆ ಹೋಗುವ ಅಭ್ಯಾಸ ಮಾಡಿದರೆ ಕೇಳುವವರು ಇದ್ದಾರೆ ಎಂದು ಸ್ವಲ್ಪ ಸುಧಾರಣೆಯಾಗಬಹುದು ಎಂಬ ಆಶಾಭಾವನೆ ಅಷ್ಟೇ. ಈ ಪ್ರಯತ್ನ ನಮ್ಮ ಶಾಸಕ ಮಿತ್ರರು ಮಾಡಬೇಕು. ನಾವು ಈ ದಿಕ್ಕಿನಲ್ಲಿ ಪ್ರಾಮಾಣಿಕವಾದಂತಹ ಪ್ರಯತ್ನವನ್ನು ಮಾಡುತ್ತೇವೆನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇನ್ನು ಮುಂದೆ ಕೋಮು ಗಲಭೆಗಳು ಆದಾಗ ಕಾನೂನು ಮತ್ತು ಸುವ್ಯವಸ್ಥೆಯು ಹದಗೆಟ್ಟಾಗ ಇದರ ಸಂಪೂರ್ಣ ಜವಾಬ್ದಾರಿ ಜಿಲ್ಲಾಧಿಕಾರಿ ಮತ್ತು ಎಸ್.ಪಿ. ಯವರು ಹೊರಬೇಕಾಗುತ್ತದೆ. ಅವರ ಮೇಲೆ ನಿರ್ದಾಕ್ಷಿಣ್ಯವಾದಂತಹ ಕ್ರಮವನ್ನು ತೆಗೆದುಕೊಳ್ಳಬೇಕು. ಹಿಂದೂ ಅಥವಾ ಮುಸ್ಲಿಂ ಇರಲಿ, ಕ್ರಿಶ್ಚಿಯನ್ ಇರಲಿ ಅವರ ಧರ್ಮದ ಅನ್ವಯ ಪೂಜೆ, ಪುನಸ್ಕಾರ, ಮೆರವಣಿಗೆಗೆ ಒಂದು ಸಣ್ಣ ಅಡ್ಡಿಯನ್ನೂ ಪೊಲೀಸ್ ಇಲಾಖೆಯ ಅಧಿಕಾರಿಗಳು ಮಾಡಕೂಡದು. ಕಾನೂನು ಸುವ್ಯವಸ್ಥೆಯನ್ನು ಕಾಪಾಡಬೇಕು. ಪೊಲೀಸ್ ಬಂದೋಬಸ್ತನ್ನು ಮಾಡಬೇಕು. ಅಲ್ಪಸಂಖ್ಯಾತ ಮುಸ್ಲಿಂರ ಮೆರವಣಿಗೆ ಇರಬಹುದು. ಕ್ರಿಶ್ಚಿಯನ್‌ರವರ ಹಬ್ಬ ಇರಬಹುದು, ಹಿಂದೂಗಳ ಹಬ್ಬ ಇರಬಹುದು. ಆ ಸಂಪ್ರದಾಯಗಳು ಇವೆ. ಗಣಪತಿ ಹಬ್ಬ ಎಂದಾಕ್ಷಣ ಗಲಾಟೆ ಶುರು ಎಂದರ್ಥ. ಏಕೆ ಗಲಾಟೆಯಾಗುತ್ತದೆ? ಪ್ರಜಾತಂತ್ರ ವ್ಯವಸ್ಥೆಯಲ್ಲಿ ಆಯಾಯ ಸಮಾಜದವರು ತಮ್ಮ ಧರ್ಮದ ಪಾಲನೆಗಾಗಿ ತಮ್ಮ ಕಾರ್ಯಕ್ರಮಗಳನ್ನು ಮಾಡುವುದಕ್ಕೆ ಅಡ್ಡಿ ಮಾಡಲು ನಾವು ಯಾರು? ಅಡ್ಡಿಯನ್ನು ಮಾಡುವವರನ್ನು ಬಿಡಬಾರದು. ಈ ಕಟ್ಟುನಿಟ್ಟಿನ ಕ್ರಮಗಳನ್ನು ತೆಗೆದುಕೊಳ್ಳುವುದರ ಬಗ್ಗೆ ನಾನು ಸೂಚನೆಯನ್ನು ಕೊಡುತ್ತೇನೆ. ಸೋಮಾರಿ ಅಧಿಕಾರಿಗಳು, ಬೇಜವಾಬ್ದಾರಿ ಅಧಿಕಾರಿಗಳು ಇದ್ದಾರೆ. ಭ್ರಷ್ಟಾಚಾರದಲ್ಲಿ ಒಂದು ರೀತಿಯಲ್ಲಿ ಲೋಕಾಯುಕ್ತದವರು ಮಾಡಿರುವಂತಹ ಆರೋಪವನ್ನು ನೋಡಿದಾಗ ಅಥವಾ ತನಿಖೆಯಿಂದ ಬರುತ್ತಿರುವಂತಹ ವರದಿಯನ್ನು ನೋಡಿದಾಗ ಭಯವಾಗುತ್ತದೆ.

ಅದಕ್ಕೋಸ್ಕರ ಕೆಸಿಎಸ್ಆರ್‌ಗೆ ಒಂದು ಬದಲಾವಣೆಯನ್ನು ತಂದು ಐಎಎಸ್:ಐಪಿಎಸ್ ಅಧಿಕಾರಿಗಳು ಸೇರಿದಂತೆ ತಪ್ಪು ಮಾಡಿದವರಿಗೆ ಕಡ್ಡಾಯ ನಿವೃತ್ತಿಯನ್ನು ಮಾಡುವುದಕ್ಕೆ ನಾವು ಕಾರ್ಯಕ್ರಮವನ್ನು ರೂಪಿಸುವುದು ಅನಿವಾರ್ಯವಾಗಿದೆ ಎಂಬ ಮಾತನ್ನು ಹೇಳುತ್ತೇನೆ. ಕೇಂದ್ರ ಸಚಿವರಾದ ಶ್ರೀ ವೀರಪ್ಪ ಮೊಯ್ಲಿಯವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಭ್ರಷ್ಟ ಅಧಿಕಾರಿಗಳನ್ನು ಶಿಕ್ಷಿಸುವುದಕ್ಕೆ ಸಂವಿಧಾನದ 311ನೇ ವಿಧಿ ರಕ್ಷಾ ಕವಚವಾಗಿದೆ. ಅದು ದುರ್ಬಳಕೆಯಾಗುತ್ತಿದೆ. ಸಂವಿಧಾನದ 309ನೇ ವಿಧಿಗೆ ಒಂದು ಸೂಕ್ತವಾದಂತಹ ತಿದ್ದುಪಡಿಯನ್ನು ತರಬೇಕೆಂದು ಹೇಳಿರುವುದನ್ನು ನಾನು ಸ್ವಾಗತ ಮಾಡುತ್ತೇನೆ. ಅದಕ್ಕೆ ಪಾರ್ಲಿಮೆಂಟ್‌ನಲ್ಲಿ ಬೆಂಬಲವನ್ನು ಕೊಡುತ್ತೇವೆ. ಕರ್ನಾಟಕದಲ್ಲಿ ಈ ಬಗ್ಗೆ ಬಿಗಿ ನಿಲುವನ್ನು ನಾವು ತೆಗೆದುಕೊಳ್ಳುತ್ತೇವೆ. ಸನ್ಮಾನ್ಯ ಅಧ್ಯಕ್ಷರೆ, ಭೂಕಬಳಿಕೆಯ ಬಗ್ಗೆ ನಿಲುವಳಿ ಸೂಚನೆಯನ್ನು ಕೊಟ್ಟಿದ್ದಾರೆ. ಈ ಬಗ್ಗೆ ನಾನು ಉತ್ತರವನ್ನು ಕೊಡಬೇಕಾದರೆ ಸಂಬಂಧಪಟ್ಟ ಸಚಿವರು ಕೊಡುತ್ತಾರೆ. ಆದರೆ ಭೂಕಬಳಿಕೆಯು ಬೆಂಗಳೂರಿನಲ್ಲಷ್ಟೇ ಅಲ್ಲ, ಎಲ್ಲಾ ಪ್ರಮುಖ ನಗರಗಳಲ್ಲಿಯೂ ಒತ್ತುವರಿ ಆಗುತ್ತಿದೆ. ಈ ಕೆಲಸವನ್ನು ಬಲಾಢ್ಯರು ಮಾಡುತ್ತಿದ್ದಾರೆ. ಸರ್ಕಾರದ ಕಾರ್ಯಕ್ರಮಗಳಿಗೆ ಒಳ್ಳೆಯ ಯೋಜನೆಗಳಿಗೆ ನೆಲೆಯೇ ಇಲ್ಲದಂತಾಗಿದೆ. ಯಾವನೇ ಇರಬಹುದು, ಕೊನೆಯಪಕ್ಷ ರಾಜ್ಯದ ಜಿಲ್ಲಾ ಕೇಂದ್ರಗಳಲ್ಲಿ ಒತ್ತುವರಿ ಮಾಡಿರುವಂತಹ ಜಮೀನನ್ನು ಸರ್ಕಾರವು ವಾಪಸ್ಸು ತೆಗೆದುಕೊಳ್ಳಬೇಕು. ಇದರ ಬಗ್ಗೆ ತಾವು ಯಾವ ರೀತಿಯಾದಂತಹ ಸಲಹೆಯನ್ನು ಕೊಡುತ್ತೀರಿ, ಆ ರೀತಿ ಬಿಗಿ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ನಾನು ಸಿದ್ಧನಿದ್ದೇನೆ. ಆ ಬಲಾಢ್ಯರನ್ನು ಮೆಟ್ಟಿ ನಿಲ್ಲಬೇಕು. ಸರ್ಕಾರಕ್ಕೆ ಆ political will ಇದೆ. ಪ್ರಾಮಾಣಿಕವಾದಂತಹ ಪ್ರಯತ್ನವನ್ನು ಆ ದಿಕ್ಕಿನಲ್ಲಿ ನಾವು ಮತ್ತು ನೀವೆಲ್ಲರೂ ಸೇರಿ ಮಾಡೋಣ. ರೈತರ ಜ್ವಲಂತ ಸಮಸ್ಯೆ ಇದೆ. ಒಂದು ಅಂದಾಜಿನ ಪ್ರಕಾರ 80 ಲಕ್ಷ ರೈತ ಕುಟುಂಬಗಳು ಇದ್ದರೆ, ಸಾಲ ಸಿಕ್ಕಿರುವುದು 17–18 ಲಕ್ಷ ಜನರಿಗೆ ಮಾತ್ರ ಸಿಕ್ಕಿದೆ. ನಾನು ಆದಷ್ಟು ಬೇಗ Co-operative Institutionಗೆ ಸಂಬಂಧಪಟ್ಟಂತೆ ಪ್ರಮುಖರು ರಾಷ್ಟ್ರೀಕೃತ ಬ್ಯಾಂಕಿಗೆ

ಸಂಬಂಧಪಟ್ಟಂತಹ ಅಧಿಕಾರಿಗಳು ಪ್ರಮುಖರನ್ನು ಕರೆದು ಸಭೆಯನ್ನು ಮಾಡಿ ಹೆಚ್ಚು ಜನರಿಗೆ ಸಾಲ ಸಿಗಬೇಕು ಎನ್ನುವ ಬಗ್ಗೆ ಚರ್ಚೆ ಮಾಡುತ್ತೇನೆ. ಶ್ರೀಮಂತರ ಮನೆಯ ಬಾಗಿಲಿಗೆ ಹೋಗಿ ಕೈಕಟ್ಟಿ ನಿಂತುಕೊಳ್ಳುವುದು ನಿಲ್ಲಬೇಕು. ಕೇಂದ್ರದಲ್ಲಿಯೂ ಈ ಬಗ್ಗೆ ಡಿಬೇಟ್ ಆಗಬೇಕೆಂಬುದರ ಬಗ್ಗೆ ನಾವು ಮನವಿಯನ್ನು ಸಲ್ಲಿಸೋಣ. ಇಲ್ಲಿ ಆದಷ್ಟು ಬೇಗ ಹೆಚ್ಚು ಜನ ರೈತರಿಗೆ ಸಾಲದ ವ್ಯವಸ್ಥೆಯು ಆಗಬೇಕು. ಹೆಚ್ಚು ಜನ ರೈತರಿಗೆ ಬೆಳೆ ವಿಮೆ ಪೂರ್ಣ ಕವರ್ ಆಗಬೇಕು. ಅದು ಪೂರ್ಣ ಕವರ್ ಆಗುತ್ತಿಲ್ಲ. ಯಾವುದೇ ಸರ್ಕಾರಕ್ಕೆ ಅತಿವೃಷ್ಟಿಯಿಂದ ಬರಗಾಲದಿಂದ ಬೆಳೆ ನಾಶವಾದರೆ ಅದಕ್ಕೆ ಪರಿಹಾರ ಕೊಡುವಂತಹ ಶಕ್ತಿ ಇವತ್ತು ಇಲ್ಲ. ಅದಕ್ಕಾಗಿ ಪ್ರತಿಯೊಂದು ಬೆಳೆಗೆ ಬೆಳೆ ವಿಮೆಯು ಅವನಿಗೆ ಭಾರ ಆಗದ ರೀತಿಯಲ್ಲಿ ವಿಮೆ ಕಂತನ್ನು ಕಡಿಮೆ ಮಾಡಿ ಆ ಬೆಳೆ ವಿಮೆಯಲ್ಲಿ ಅವನಿಗೆ ನ್ಯಾಯ ಸಿಗುವಂತೆ ಮಾಡುವುದಕ್ಕೆ ನನ್ನ ಸರ್ಕಾರವು ಬದ್ಧವಾಗಿದೆ. ಆ ದಿಕ್ಕಿನಲ್ಲಿ ಏನೇನು ಮಾಡಬಹುದು ಎಂಬುದನ್ನು ನಾನು ಇವತ್ತು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಕೋಮು ಗಲಭೆ ಎನ್ನುವಂತಾಹದ್ದು ನಮ್ಮ ಸಮಾಜಕ್ಕೆ ಹಿಡಿದಂತಹ ದೊಡ್ಡ ಪಿಡುಗು. ಸ್ವಾತಂತ್ರ್ಯ ಬರುವ ಪೂರ್ವದಲ್ಲಿ ಪ್ರಾರಂಭವಾದಂತಹ ಈ ಪಿಡುಗು ಸ್ವಾತಂತ್ರ್ಯ ನಂತರವೂ ಮುಂದುವರಿದಿದೆ. ಕೋಮು ಗಲಭೆಗೆ ಕಾರಣ ಹುಡುಕುವಂತಹ ಸಮಯ ಇವತ್ತಲ್ಲ. ಇದರ ಬಗ್ಗೆ ವಿವರವಾಗಿ ಚರ್ಚೆಯನ್ನು ಮಾಡೋಣ. ಆದರೆ ಕೆಲವು ರಾಜಕೀಯ ಸಂಘಟನೆಗಳು, ಧಾರ್ಮಿಕ ಮತ್ತು ಸಾಮಾಜಿಕ ಸಂಘಟನೆಗಳು ಕೆಲವೊಮ್ಮೆ ಕೋಮು ಗಲಭೆಗೆ ಉತ್ತೇಜನವನ್ನು ನೀಡಿರಬಹುದು ಎಂಬ ಬಗ್ಗೆ ಚರ್ಚೆಯಾಗಬೇಕು; ಇದಕ್ಕೆ ಪರಿಹಾರವನ್ನು ಹುಡುಕಬೇಕು. ಈ ನಾಡಿನಲ್ಲಿ ಎಲ್ಲಾ ವರ್ಗದ ಜನರು ಒಂದೇ ತಾಯಿಯ ಮಕ್ಕಳಂತೆ ಬಾಳಬೇಕು ಎಂದು ಇಲ್ಲಿರುವಂತಹ ಎಲ್ಲರ ಒಂದು ಅಪೇಕ್ಷೆ ಇದೆ. ನಾನು ಯಾವ ಯಾವ ವರ್ಷ ಎಷ್ಟೆಷ್ಟು ಕೋಮುಗಲಭೆಗಳು ಆಯಿತು, ಎಷ್ಟು ಸಾವುನೋವಾಯಿತು ಈ ಬಗ್ಗೆ ಚರ್ಚೆ ಮಾಡುವಂತಹ ಸಮಯದಲ್ಲಿ ವಿವರಣೆಯನ್ನು ಕೊಡುತ್ತೇನೆ. ಇವತ್ತು ನಿಮಗೆ ಪ್ರಸ್ತಾಪವನ್ನು ಮಾಡುವಂತಹ ಸಂದರ್ಭವಲ್ಲ. ಅದಕ್ಕೆ ನಾನು

ಮಾತನಾಡುವಂತಹ ಸಂದರ್ಭದಲ್ಲಿ ಈಗ ಇಷ್ಟಪಡುವುದಿಲ್ಲ. ಇಲ್ಲಿ ಸಾವಯವ ಕೃಷಿಯ ಬಗ್ಗೆ ಚರ್ಚೆಯಾಯಿತು. ಇದರಲ್ಲಿ ಒಂದು ವ್ಯವಸ್ಥಿತವಾದಂತಹ ಆಂದೋಲನವನ್ನೇ ನಮ್ಮ ಸರ್ಕಾರ ಪ್ರಾರಂಭ ಮಾಡಿದೆ. ಈ ಸಾವಯವ ಕೃಷಿ ಮಿಷನ್ ರಚನೆ ಮಾಡಿದ್ದೇವೆ. ಬಹಳ ಬದ್ಧತೆ ಮತ್ತು ಪ್ರಾಮಾಣಿಕತೆಯಿಂದ ಪಾರದರ್ಶಕತೆಯಿಂದ ನಾವು ಕೆಲಸವನ್ನು ಮಾಡುತ್ತಿದ್ದೇವೆ. ಇದರಲ್ಲಿಯೂ ಸಹ ವಿನಾಕಾರಣ ಆರೋಪಗಳು ಕೇಳಿಬರುತ್ತಿವೆ. 60 ಕೋಟಿ ರೂಪಾಯಿಗಳು ದುರುಪಯೋಗವಾಗಿದೆ ಎಂದು ಹೇಳಿ ಪದೇ ಪದೇ ಒಂದು ಆರೋಪ ಮಾಡುತ್ತಿರುವುದನ್ನು ನಾನು ಕೇಳಿದ್ದೇನೆ. ಸಾವಯವ ಕೃಷಿಗೆ ಬಿಡುಗಡೆ ಮಾಡಿರುವಂತಹ ಹಣ 50 ಕೋಟಿ ರೂಪಾಯಿಗಳು ಮಾತ್ರ. ಈ ಪೈಕಿ 7.5 ಕೋಟಿ ರೂಪಾಯಿಗಳು, ಅದಕ್ಕಿಂತ ಹಿಂದಿನ ವರ್ಷ, ಅಂದರೆ 2007–08ರಲ್ಲಿ ಬಾಕಿ ಬಿಲ್ಲು ಇಲಾಖೆ 7.5 ಕೋಟಿ ರೂಪಾಯಿಗಳನ್ನು ನೀಡಿದೆ. ಆದರೆ ನಮ್ಮ ಅವಧಿಯಲ್ಲಿ 2008–09ರಲ್ಲಿ ಈ ಕಾರ್ಯಕ್ಕೆ ಈ ಮಿಷನ್ ಮೂಲಕ ನೀಡಿರುವ ಹಣ ಕೇವಲ 42.5 ಕೋಟಿ ರೂಪಾಯಿಗಳು, ಆ ಪೈಕಿ ಈವರೆಗೆ ರೈತರ ಬ್ಯಾಂಕ್ ಖಾತೆಗೆ ಜಮಾ ಆಗಿರುವುದು 10 ಕೋಟಿ ರೂಪಾಯಿಗಳು. 60 ಕೋಟಿ ರೂಪಾಯಿಗಳು ಎಲ್ಲಿ ದುರುಪಯೋಗವಾಗುತ್ತದೆ? ಉಳಿದ 32.5 ಕೋಟಿ ರೂಪಾಯಿಗಳ ಹಣ ಇನ್ನು ಕೃಷಿ ಸಹಾಯಕ ನಿರ್ದೇಶಕರು ಮತ್ತು ಇದಕ್ಕಾಗಿ ತಾಲ್ಲೂಕು ಮಟ್ಟದಲ್ಲಿ ರಚಿಸಿರುವಂತಹ ಸಾವಯವ ಕೃಷಿ ಟ್ರಸ್ಟ್ ಅಧ್ಯಕ್ಷರ ಜಂಟಿ ಖಾತೆಯಲ್ಲಿದೆ. ಪ್ರತಿ ತಾಲ್ಲೂಕಿನಲ್ಲಿ ಈ ಸಾವಯವ ಕೃಷಿ ಪದ್ಧತಿಯನ್ನು ಅಳವಡಿಸಿಕೊಳ್ಳುವುದಕ್ಕೆ 18 ಜನ ರೈತರನ್ನು ಸೇರಿಸಿ ಒಂದು ಟ್ರಸ್ಟ್ ಮಾಡಿದ್ದೇವೆ. ಈ ಟ್ರಸ್ಟ್ ಪ್ರತಿ ತಾಲ್ಲೂಕಿನಲ್ಲಿಯೂ ಸುಮಾರು 300 ಜನ ರೈತರನ್ನು ಆಯ್ಕೆ ಮಾಡಿ ಜನರಿಗೆ ಪ್ರೇರಣೆ ನೀಡಿ ಪ್ರೋತ್ಸಾಹ ಮಾಡುವುದಕ್ಕೆ ಈ ಪದ್ಧತಿಯನ್ನು ಅಳವಡಿಸುವುದಕ್ಕೆ ಪ್ರಯತ್ನವನ್ನು ಮಾಡುತ್ತಿದ್ದೇವೆ. ಒಟ್ಟು 52,000 ರೈತರು ಈ ಕೃಷಿ ಪದ್ಧತಿಯನ್ನು ಅಲವಡಿಸಿಕೊಂಡಿರುವ ಬಗ್ಗೆ ಸ್ಥಳ ತನಿಖೆಯನ್ನು ಮಾಡಿ ನಂತರವೇ ಅವರಿಗೆ ಸರ್ಕಾರದ ಅನುದಾನವನ್ನು ಕೊಡುತ್ತೇವೆ. ಅದಕ್ಕೂ ಮುಂಚೆ ಕೊಡುವುದಿಲ್ಲ. ಸೆಪ್ಟೆಂಬರ್ 30ರ ಒಳಗಾಗಿ

ಸಾವಯವ ಕೃಷಿಯನ್ನು ಯಾರ್‍ಯಾರು ಅಳವಡಿಸಿಕೊಂಡಿದ್ದಾರೆಂಬ ಬಗ್ಗೆ ತನಿಖೆಯನ್ನು ಮಾಡಿ, ನಂತರ ಅವರಿಗೆ ಚೆಕ್ ಮೂಲಕ ಅವರ ಖಾತೆಗೆ ಹಣವನ್ನು ಕೊಡಬೇಕೆಂದು ನಾವು ತೀರ್ಮಾನವನ್ನು ಮಾಡಿದ್ದೇವೆ. ಈ ಹಣವು misuse ಆಗುವುದಕ್ಕೆ ಬಿಡುವುದಿಲ್ಲ. ನಮ್ಮ ಸಾವಯವ ಕೃಷಿ ಮಿಷನ್ ಅತ್ಯಂತ ಪಾರದರ್ಶಕದಿಂದ ಪ್ರಾಮಾಣಿಕ ಮತ್ತು ಬದ್ಧತೆಯಿಂದ ಕೆಲಸವನ್ನು ಮಾಡುತ್ತಿದೆ. ಇದರಿಂದ ನಮ್ಮ ರಾಜ್ಯದಲ್ಲಿ ಮುಂಬರುವಂತಹ ದಿವಸಗಳಲ್ಲಿ 3 ಲಕ್ಷ ಜನರಿಗಾದರೂ ಸಾವಯವ ಕೃಷಿಯನ್ನು ವಿಸ್ತರಣೆಯನ್ನು ಮಾಡಬೇಕೆಂದು ನಾವು ಚಿಂತನೆಯನ್ನು ಮಾಡಿದ್ದೇವೆ. ಮಾಜಿ ರಾಷ್ಟ್ರಪತಿಗಳಾದಂತಹ ಶ್ರೀ ಅಬ್ದುಲ್ ಕಲಾಂಜಿಯವರು ಬಂದು ಪ್ರಮಾಣವಚನವನ್ನು ಸ್ವೀಕಾರಮಾಡಿಸಿ, ಅವರು ಬೆನ್ನು ತಟ್ಟಿ ಹೋದಮೇಲೆ ಇದಕ್ಕೊಂದು ಹೊಸ ಪ್ರೇರಣೆ, ಒಂದು ಹೊಸ ಶಕ್ತಿ ನಮಗೆ ಬಂದಿದೆ ಎಂಬ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಬಿಪಿಎಲ್ ಕಾರ್ಡಿನ ಬಗ್ಗೆ ಬಹಳಷ್ಟು ಚರ್ಚೆಯಾಯಿತು. ನಾನು ಈ ಮನೆಯಲ್ಲಿ ಒಂದು ವಿನಂತಿಯನ್ನು ಮಾಡುತ್ತೇನೆ. ಯಾರು ಬಿಪಿಎಲ್ ಕಾರ್ಡನ್ನು ಪಡೆಯುವುದಕ್ಕೆ ಅರ್ಹನಿದ್ದಾನೆ, ಒಬ್ಬನಿಗೆ ವಂಚನೆಯಾದರೆ, ಒಬ್ಬನಿಗೆ ಸಿಗಲಿಲ್ಲವೆನ್ನುವಂತಹ ದೂರು ಬಂದರೆ ಅಧಿಕಾರಿಗಳಿಗೆ ಜವಾಬ್ದಾರಿಯನ್ನು ಕೊಡೋಣ. ನಿಮ್ಮ ನಿಮ್ಮ ತಾಲ್ಲೂಕಿನಲ್ಲಿ ನಮ್ಮ ಶಾಸಕರುಗಳು ಪರಿಶೀಲನೆ ಮಾಡಿ ನೀವು ಏನು ಹೇಳುತ್ತೀರಾ. ಆ ರೀತಿ ಮಾಡೋಣ. ಉದ್ದೇಶಪೂರ್ವಕವಾಗಿ ಇದ್ದವನಿಗೆ ಕೊಟ್ಟು ನ್ಯಾಯಬೆಲೆ ಅಂಗಡಿಯಲ್ಲಿ 3 ರಿಂದ 5 ಕಾರ್ಡುಗಳು ಇಬ್ಬೊಬ್ಬನಿಂದ ಸಂಗ್ರಹ ಮಾಡಿಕೊಂಡು ಅದಕ್ಕೆ ಶಾಮೀಲಾಗಿ ಬಡವರಿಗೆ ಸಿಗಬೇಕಾಗಿರುವುದನ್ನು ಲೂಟಿ ಮಾಡುತ್ತಿದ್ದಾರೆ ಇವರ ಮೇಲೆ ಕ್ರಿಮಿನಲ್ ಮೊಕದ್ದಮೆಯನ್ನು ಹೂಡಬೇಕಾಗುತ್ತದೆ. ಈಗಾಗಲೇ ಮಾನ್ಯ ಜಯಚಂದ್ರರವರೆ, ಈ ಬಗ್ಗೆ ನಮಗೆ ತಂದು ಆಹಾರ ಸಚಿವರು ತೋರಿಸಿದರು. ಈ ಕೇರಿಯಲ್ಲಿ ಫೋಟೋವನ್ನು ತೆಗೆಸಿಕೊಂಡು ಒಂದು ಕಾರ್ಡು. ಪಕ್ಕದ ಕೇರಿಯಲ್ಲಿ ಫೋಟೋವನ್ನು ತೆಗೆಸಿಕೊಂಡು ಒಂದು ಕಾರ್ಡು ಇನ್ನೊಂದು ಕೇರಿಯಲ್ಲಿ ಫೋಟೋವನ್ನು

ತೆಗೆಸಿಕೊಂಡು ಒಂದು ಕಾರ್ಡು ಹೀಗೆ ಸಾಲಾಗಿ ಫೋಟೋಗಳು ಸಿಕ್ಕಿದೆ. ಇವರಿಗೆ ಒಂದು ಕಾರ್ಡು ಕೊಟ್ಟು ರೇವಣ್ಣನವರೆ, ಉಳಿದವರನ್ನು ಕ್ಷಮಿಸುವುದಲ್ಲ. ಅವರ ಮೇಲೆ ಕ್ರಿಮಿನಲ್ ಕೇಸನ್ನು ಹಾಕಬೇಕು. ಜನರಿಗೆ ಸಿಗುವಂಥ ವ್ಯವಸ್ಥೆಯನ್ನು ಕಬಳಿಸುವಂಥ ಈ ವ್ಯವಸ್ಥೆಯೇನಿದೆ, ಇದನ್ನು ನಾವು tolerate ಮಾಡುವುದಿಲ್ಲ. ಇದು ನಿಮಗೆ ಗೊತ್ತಿರಬಹುದು ಬಹಳ ಗಂಭೀರವಾಗಿ ಇದರ ಬಗ್ಗೆ ಚರ್ಚೆಯಾಗುತ್ತಿದೆ. ಸಾಕಷ್ಟು ಜನರಿಗೆ ಇದರಿಂದ ಗೊಂದಲ ಉಂಟಾಗುತ್ತಿದೆ. ಬಹಳ ವಿವರಕ್ಕೆ ಹೋಗುವುದಿಲ್ಲ. ನಿನ್ನೆ ದಿವಸ

**11.00 A.M.**

ಇಡೀ ರಾಜ್ಯದ ಜನರ ಗಮನ ಸೆಳೆಯುವ ರೀತಿಯಲ್ಲಿ ಲೋಕಾಯುಕ್ತ ಸಂತೋಷ್ ಹೆಗ್ಡೆಯವರು, ರಾಜ್ಯ ಮಾನವ ಹಕ್ಕು ಆಯೋಗದ ಅಧ್ಯಕ್ಷ ನ್ಯಾಯಮೂರ್ತಿ ಎಸ್.ಆರ್. ನಾಯಕ್‌ರವರು ಮತ್ತು ಚೀಫ್ ಜಸ್ಟೀಸ್‌ರವರು ಕಳವಳವನ್ನು ವ್ಯಕ್ತಪಡಿಸಿದ್ದಾರೆ. ಅದಕ್ಕೋಸ್ಕರ ಬಿ.ಪಿ.ಎಲ್. ಬಗ್ಗೆ ಯಾರು ಡೂಪ್ಲಿಕೇಟ್ ಕಾರ್ಡ್ ತೆಗೆದುಕೊಂಡಿದ್ದಾರೆ. ಅದರ ಬಗ್ಗೆ ತನಿಖೆ ಮಾಡಿ ಫೋಟೋ ತೆಗೆಸಿ ಫೋಟೋ ಇಲ್ಲದಿದ್ದರೆ ಕೊಡುವುದಿಲ್ಲವೆಂದು ಹೇಳಿದ್ದೇವೆಂದು ಹೇಳಿದರು. ಹೌದು, ಫೋಟೋ ತೆಗೆಸಲಿಕ್ಕೆ ಅವಧಿ ಕೊಟ್ಟಿದ್ದೇವೆ. ಒಬ್ಬನಿಗೂ ವಂಚನೆ ಮಾಡುವುದಿಲ್ಲ. ಈ ಬಗ್ಗೆ ಸಮಗ್ರ ತನಿಖೆಗೋಸ್ಕರ ಲೋಕಾಯುಕ್ತರವರಿಗೆ ದಾಖಲೆಗಳನ್ನು ಕೊಡುತ್ತಿದ್ದೇನೆ. ಬಿ.ಪಿ.ಎಲ್.ನಲ್ಲಿ ಏನೇನು ಅವ್ಯವಹಾರವಾಗಿದೆ ಇದರ ಬಗ್ಗೆ ಸಮಗ್ರ ತನಿಖೆ ಮಾಡಲಿಕ್ಕೆ ಅವರು ನಿನ್ನೆ ಕಳಕಳಿ ವ್ಯಕ್ತಪಡಿಸಿರುವುದರಿಂದ ಮತ್ತೆ ಅವರಿಗೆ ಈ ಜವಾಬ್ದಾರಿಯನ್ನು ಕೊಟ್ಟರೆ ಪ್ರಾಮಾಣಿಕವಾಗಿ ನಮಗೆ ನ್ಯಾಯ ಸಿಗುತ್ತದೆ. ಕೆಲಸ ಆಗುತ್ತದೆಂಬ ವಿಶ್ವಾಸವಿರುವುದರಿಂದ ಅವರಿಗೆ ಏನು ಹೆಚ್ಚಿನ ಸಿಬ್ಬಂದಿ ಬೇಕು ನಾನು ಕೊಡಲಿಕ್ಕೆ ಸಿದ್ಧನಿದ್ದೇನೆ. ಹಾಗಾಗಿ ಲೋಕಾಯುಕ್ತರವರ ಜೊತೆ ನಾವು ನೀವು ಹೋಗಿ ಮಾತನಾಡೋಣ. ಅವರಿಗೆ ಈ ಜವಾಬ್ದಾರಿಯನ್ನು ಕೊಡಬೇಕೆಂಬ ಒಂದು ತೀರ್ಮಾನವನ್ನು ನಾನು ಮಾಡಿದ್ದೇನೆ. ಒಂದು ಕಾಲಕ್ಕೆ ಭೂಮಿಯ ಪ್ರತಿಶತ 60ರಷ್ಟು ಇದ್ದ ಅರಣ್ಯ ಈಗ 11ಕ್ಕೆ ಇಳಿದಿದೆ. ಇದರಿಂದ

ಮಳೆ ಇಲ್ಲದಂತಾಗಿದೆ. ಮಳೆ ಕುಸಿದಿದೆ, ಮಳೆಗಾಲ ಅನಿಶ್ಚಿತವಾಗುತ್ತಿದೆ. ನೀರು ಸಂಗ್ರಹಣೆ ಒಂದೇ ನಮ್ಮ ಮುಂದಿರುವ ಮಾರ್ಗವಾಗಿರುವಂಥ ಈ ಸಂದರ್ಭದಲ್ಲಿ ಕೆಲವು ಕಾರ್ಯಕ್ರಮಗಳನ್ನು ನಾವು ಯೋಚನೆ 'ಮಾಡಿದ್ದೇವೆ. ಈಗಿರುವಂಥ ಸಣ್ಣ ಕೆರೆಗಳ, ಹೊಂಡಗಳ ಜೀರ್ಣೋದ್ಧಾರ ಆಗುವುದು ಅಗತ್ಯವಾಗಿದೆ. ಭೂಗರ್ಭ, ಜಲ ಸಂಪದ್ಭರಿತವಾಗುವಂತೆ ಹಳ್ಳ ಹಾಗೂ ನದಿಗಳಿಗೆ ಒಡ್ಡುಗಳನ್ನು ನಿರ್ಮಾಣ ಮಾಡಬೇಕೆಂದು ಮಾಡಿದ್ದೇವೆ. ನದಿಗಳ ಜೋಡಣೆ, ಹರಿಯುವ ನದಿಗಳನ್ನು, ಕೆರೆಗಳನ್ನು ತುಂಬಿಸಿ ಅಂತರ್ಜಲ ಕುಸಿಯದಂತೆ ಕ್ರಮ ಕೈಗೊಳ್ಳುತ್ತೇವೆ. ಸ್ವಾತಂತ್ರ್ಯ ಪೂರ್ವದಲ್ಲಿ ಮೂವತ್ತೇಳು ಸಾವಿರಗಳಿಗಿಂತ ಹೆಚ್ಚು ಕೆರೆಗಳಿತ್ತು. ಜನರ ದುರಾಸೆಯಿಂದ ಈಗ ಅದು ಮೂವತ್ತು ಸಾವಿರಕ್ಕೆ ಇಳಿದಿದೆ. ಬಹಳಷ್ಟು ಕೆರೆಗಳು ತನ್ನ ರೂಪವನ್ನು ಕಳೆದುಕೊಂಡಿವೆ. ಬೆಂಗಳೂರು ಒಂದರಲ್ಲೇ ನೂರಾರು ಕೆರೆಗಳು ಒತ್ತುವರಿಯಾಗಿದೆ. ನಮ್ಮ ರೋಷನ್ ಬೇಗ್‌ರವರು ಹೇಳಿದಂತೆ ಈ ಕೆರೆ ಒತ್ತುವರಿ ಮಾಡುವುದನ್ನು ಬಿಗಿ ಮಾಡುತ್ತಿದ್ದೇವೆ. ಹೂಳು ತೆಗೆಯುತ್ತಿದ್ದೇವೆ. ಅಭಿವೃದ್ಧಿಪಡಿಸುತ್ತಿದ್ದೇವೆ. ಇದು ಕೇವಲ ಬೆಂಗಳೂರಿನದ್ದಲ್ಲ, ಇಡೀ ರಾಜ್ಯದಲ್ಲಿ ಎಷ್ಟೇ ಹಣ ಖರ್ಚಾಗಲಿ, ಕೆರೆಗಳಲ್ಲಿ ಹೂಳು ತೆಗೆಸಿ, ಒತ್ತುವರಿಯನ್ನು ತೆಗೆದು ಹಾಕಿ, ಅಂತರ್ಜಲ ಕುಸಿಯದಂತೆ ಕೆರೆಗಳಲ್ಲಿ ನೀರು ಸಂಗ್ರಹ ಮಾಡುವುದಕ್ಕೆ ಏನೇನು ಸಾಧ್ಯವಿದೆ ಅದನ್ನೆಲ್ಲಾ ಮಾಡುತ್ತೇವೆ. ಮಳೆ ನೀರು ಕೊಯ್ಲಿಗೆ, ಅದು ಭೂಮಿಯಲ್ಲಿ ಇಂಗುವುದಕ್ಕೆ ಈಗಾಗಲೇ ಕಾರ್ಯಕ್ರಮವನ್ನು ಬಹಳ ದೊಡ್ಡ ಪ್ರಮಾಣದಲ್ಲಿ ಮಾಡಿ ಅದಕ್ಕೆ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಹಣವನ್ನು ಕೊಟ್ಟು ನಾವು ಕೆಲಸ ಮಾಡಲಿಕ್ಕೆ ಸಿದ್ಧರಿದ್ದೇವೆ. ಬಹಳ ಆತಂಕ ತರುವಂಥ ಸಂಗತಿಯೇನೆಂದರೆ ರಾಜ್ಯದ 29,800 ಹಳ್ಳಿಗಳ ಪೈಕಿ ಸುಮಾರು ಶೇಕಡ 60ರಷ್ಟು ಹಳ್ಳಿಗಳಲ್ಲಿ ದೊರಕುವ ಕುಡಿಯುವ ನೀರಿಯಲ್ಲಿ ಫ್ಲೋರೈಡ್, ನೈಟ್ರೇಟ್, ಕಬ್ಬಿಣ ಮತ್ತು ಸಲ್ಫೇಟ್ ಲವಣಗಳು ಹೆಚ್ಚಿನ ಪ್ರಮಾಣದಲ್ಲಿವೆ. ಬಹಳ ಜನರ ಆರೋಗ್ಯದ ಮೇಲೆ ದುಷ್ಪರಿಣಾಮ ಆಗುತ್ತದೆ. ಅದಕ್ಕೋಸ್ಕರ ಈ ಬಗ್ಗೆ ವಿಶೇಷವಾದಂಥ ಕಾರ್ಯಕ್ರಮವನ್ನು ರೂಪಿಸುತ್ತಿದ್ದೇವೆ. ಇವತ್ತು ಈ ಮೂರು ದಿವಸ ಗ್ರಾಮೀಣಾಭಿವೃದ್ಧಿ ವಿಷಯದಲ್ಲಿ ಚರ್ಚೆಯಾಗುವುದಕ್ಕೆ

ಕಾರಣವೇನೆಂದರೆ, ಡಾ: ಅಬ್ದುಲ್ ಕಲಾಂರವರಿಗೆ ಈ ಅಧಿವೇಶನ ಕರೆದಿರುವ ಬಗ್ಗೆ ನಿಮ್ಮ ಸಲಹೆ ನಿಮ್ಮ ಜಂಟಿ ಸದನದಲ್ಲಿ ನೀವು ಹೇಳಿದಂಥ ವಿಷಯದ ಆಧಾರದ ಮೇಲೆ ಈ ಅಧಿವೇಶನವನ್ನು ಕರೆದಿದ್ದೇವೆ. ಅದಕ್ಕೋಸ್ಕರ ಇನ್ನೇನು ಮಾಡಬಹುದು ಎಂದು ಸಲಹೆಗಳನ್ನು ಕೊಡಿ ಎಂದು ಪತ್ರವನ್ನು ಬರೆದಿದ್ದೆವು ಮತ್ತು ಪರ್ಸನಲ್ ಆಗಿ ಮಾತನಾಡಿದ್ದೆವು. ಅವರು ದಿನಾಂಕ: 7.9.2009ರಂದು ಪತ್ರ ಬರೆದು 20 ಪುಟಗಳ ವಿವರವಾದ ಸಲಹೆಗಳನ್ನು ಕೊಟ್ಟಿದ್ದಾರೆ. ನನ್ನ ಅಪೇಕ್ಷೆ ಇದೆ. ನೀವು ಒಪ್ಪುವುದಾದರೆ ಚಳಿಗಾಲದ ಅಧಿವೇಶನ ಪ್ರಾರಂಭವಾಗುವುದಕ್ಕೆ ಮುಂಚೆ ಅಬ್ದುಲ್ ಕಲಾಂಜಿಯವರನ್ನು ಕರೆಸಿ ನಮ್ಮೆಲ್ಲರ ಶಾಸಕ ಮಿತ್ರರು ಕುಳಿತು, ಅವರ ನಿರೀಕ್ಷೆ ಏನು, ಅವರ ಅಪೇಕ್ಷೆ ಏನು, ನಾವು ಯಾವ ದಿಕ್ಕಿನಲ್ಲಿ ಈಗ ಹೋಗುತ್ತಿದ್ದೇವೆ, ಅವರ ಸಲಹೆಗಳನ್ನು ಕಾರ್ಯರೂಪಕ್ಕೆ ತರುತ್ತಿದ್ದೇವೆಯೇ ಮತ್ತು ಮುಂದೇನು ಮಾಡಬೇಕೆಂಬುದರ ಬಗ್ಗೆ ಒಂದು ದಿವಸ ಪೂರ್ಣ ಅವರದೊಂದಿಗೆ ಚರ್ಚೆ ಮಾಡುವಂಥ ಕೆಲಸವನ್ನು ಮಾಡುತ್ತೇವೆ. ಆ ಮಹಾನ್ ಚೇತನದ ಉಪಯೋಗವನ್ನು ನಾವು ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ. ಅವರ PURA ಕಲ್ಪನೆಯನ್ನು ಪುನರುಚ್ಚರಿಸುತ್ತೇನೆ. ಆಹಾರ ಸಂರಕ್ಷಣೆ, ಮಾರುಕಟ್ಟೆ ಸುಧಾರಣೆ, ಮಾಹಿತಿ ತಂತ್ರಜ್ಞಾನ ವಿಸ್ತರಣೆ, N.R.E.G.S. ನ ಸಮರ್ಪಕ ಬಳಕೆ ಮಾಡಿಕೊಳ್ಳುವುದು, ಕೃಷಿ ಸಂಶೋಧನೆ ಬಗ್ಗೆ, ಶಿಕ್ಷಣ, ಆರೋಗ್ಯ ಮತ್ತು ಕೌಶಲ್ಯ ಇತ್ಯಾದಿಗಳ ಬಗ್ಗೆ ಬಹಳ ವಿಸ್ತೃತವಾದ ಸಲಹೆಗಳನ್ನು ನೀಡಿದ್ದಾರೆ.

**ಶ್ರೀ ಟಿ.ಬಿ. ಜಯಚಂದ್ರ:** ಮಾನ್ಯ ಅಧ್ಯಕ್ಷರೆ, ಸಭಾನಾಯಕರು, ಈಗ ತಮ್ಮ ಮುಂದಿನ ಹೆಜ್ಜೆಗಳೇನು ಎಂಬುದರ ಬಗ್ಗೆ ನೋಟ್ ಅನ್ನು circulate ಮಾಡಿದ್ದಾರೆ. ನಾನು ಈ ಸಂದರ್ಭದಲ್ಲಿ ಒಂದು ವಿಚಾರವನ್ನು ಮುಖ್ಯಮಂತ್ರಿಗಳಿಗೆ ಸಭಾಧ್ಯಕ್ಷರ ಮುಖೇನ ತರುವಂಥದ್ದು ಏನೆಂದರೆ ಬಹುಶಃ ಈ ದೇಶದಲ್ಲಿ ಹಸಿರು ಕ್ರಾಂತಿಗೆ ಹೆಸರಾಗಿದ್ದಂಥವರೆಂದರೆ ಡಾ: ನಾರ್ಮನ್ ಬೋರ್ಲಾಗ್‌ರವರು ಅವರು ನಿನ್ನೆ ನಿಧನರಾಗಿದ್ದಾರೆ. ಅವರು ಅಮೆರಿಕಾದಲ್ಲಿದ್ದಾಗ ಅವರ ಸಂಶೋಧನೆ ಎಷ್ಟರಮಟ್ಟಿಗೆ ಭಾರತ ದೇಶಕ್ಕೆ ಸಹಾಯವಾಯಿತು ಎಂಬುದರ ಬಗ್ಗೆ ನಾವು ಅವರಿಗೆ ನೊಬೆಲ್ ಪ್ರಶಸ್ತಿ

ಕೊಡುವುದರೊಂದಿಗೆ ಭಾರತ ಸರ್ಕಾರ ಕೂಡ ಅವರಿಗೆ ಪದ್ಮವಿಭೂಷಣ ಪ್ರಶಸ್ತಿಯನ್ನು ಕೊಟ್ಟಿದೆ. ಹಸಿರು ಕ್ರಾಂತಿಯಲ್ಲಿ ಒಂದು ದೊಡ್ಡ ಹೆಜ್ಜೆಯನ್ನಿಟ್ಟು ಅತ್ಯಂತ ಮಾನವತಾವಾದವನ್ನು ಮಾಡಿದಂಥ ಕ್ರಾಂತಿಯನ್ನು ಮಾಡಿದವರು ಯಾರೆಂದರೆ ಅದು ನಾವು ನೆನೆಸಲೇಬೇಕಾಗಿದ್ದಂಥವರು ಎಂದರೆ ಡಾ: ನಾರ್ಮನ್ ಬೋರ್ಲಾಗ್‌ರವರು ಇವತ್ತು ಅವರು ನಿಧನರಾಗಿರುವಂಥ ಸಂದರ್ಭದಲ್ಲಿ ಇಲ್ಲಿಂದ ಅವರಿಗೆ ಒಂದು ಸಂದೇಶ ಹೋಗಬೇಕು ಎಂಬುದು ಮುಖ್ಯವಾಗಿದೆ. ಅವರಿಂದ ಕರ್ನಾಟಕ ರಾಜ್ಯಕ್ಕೆ ಏನು ಸಹಾಯವಾಗಿತ್ತು ಎಂಬುದು ತಲುಪಬೇಕು. ನಾನು ಮೂರು ವರ್ಷಗಳಲ್ಲಿ ಅಧಿಕಾರದಲ್ಲಿಲ್ಲದ ಸಂದರ್ಭದಲ್ಲಿಯೂ ಕೂಡ ಅವರನ್ನು ಭೇಟಿ ಮಾಡಿದ್ದೆ. ಅವರು ಕರ್ನಾಟಕದ ಅದರಲ್ಲಿಯೂ ವಿಶೇಷವಾಗಿ ಧಾರವಾಡ ಆ ಭಾಗದಲ್ಲಿ ಬೆಳೆಯತಕ್ಕಂಥ ಗೋಧಿ, ಜೋಳ ಅದಕ್ಕೆ ವಿಶೇಷವಾದಂಥ ಒತ್ತನ್ನು ಕೊಟ್ಟು ರೋಗ ಇಲ್ಲದೇ ಇರತಕ್ಕಂಥ ಗೋಧಿಯನ್ನು ಬೆಳೆಯುವಂಥ ಹೊಸ ಸಂಶೋಧನೆಯನ್ನು ಅವರು ಮಾಡಿಕೊಟ್ಟಿದ್ದರ ಫಲವಾಗಿ ಇವತ್ತು ನಮ್ಮ crop productivity ಜಾಸ್ತಿಯಾಗಿದೆ. ಇವತ್ತು ಡಾ: ಸ್ವಾಮಿನಾಥನ್ ಅವರನ್ನು ನಂಬರ್ ಒನ್ ಎಂದು ಹೇಳುತ್ತೇವೆಯೋ ಅವರೂ ಕೂಡ ಇವತ್ತು ಬೋರ್ಲಾಗ್‌ರವರಿಂದ ಮಾರ್ಗದರ್ಶನ ಪಡೆದಿರುವಂಥ ಕೃಷಿ ವಿಜ್ಞಾನಿ. ಇವತ್ತು ಅವರು ನಮ್ಮನ್ನು ಅಗಲಿದ್ದಾರೆ. ಈಗ ವಿಶೇಷವಾಗಿ ನಾವು ಚರ್ಚೆ ಮಾಡುವಂಥ ಸಂದರ್ಭದಲ್ಲಿ ನನ್ನ ಒಂದು ಸಲಹೆ ಏನೆಂದರೆ, ನೀವು ಕೊಟ್ಟಿರುವಂಥದ್ದನ್ನು glance ಮಾಡಿದೆ. ಆದರೆ ಬೋರ್ಲಾಗ್‌ರವರು ಕೊಟ್ಟಂಥ ಸಲಹೆಗಳನ್ನು ಇದರಲ್ಲಿ ಯಾವುದೂ ಸಹ ಅಳವಡಿಕೆಯಾಗಿಲ್ಲ. ಹಾಗಾಗಿ ತಾವು ಆ ಮಾಹಿತಿಯನ್ನು ಪಡೆದು ಅದನ್ನೂ ಕೂಡ ಅಳವಡಿಸಿ ಮುಂದಿನ Food Securityಗೆ ಅವರ ನಿಲುವು ಏನಾಗಿತ್ತು ಎನ್ನುವುದನ್ನು ಪ್ರಕಟಿಸಿದರೆ ಬಹುಶಃ ಅವರ ಆತ್ಮಕ್ಕೆ ಶಾಂತಿ ದೊರೆತಂತಾಗುವುದು ಎಂಬ ಮಾತನ್ನು ಹೇಳಬಯಸುತ್ತೇನೆ.

**ಶ್ರೀ ಬಿ.ಎಸ್. ಯಡಿಯೂರಪ್ಪ:** ಬಹಳ ಪ್ರಮುಖವಾದ ವಿಚಾರಗಳನ್ನು ಜಯಚಂದ್ರರವರು ಪ್ರಸ್ತಾಪ ಮಾಡಿದ್ದಾರೆ. ಈ ಖ್ಯಾತ ಕೃಷಿ ತಜ್ಞ ನಾರ್ಮನ್ ಜೋರ್ಲಾಗ್‌ರವರು ಕೃಷಿ ಕ್ಷೇತ್ರಕ್ಕೆ ನೀಡಿದಂಥ ಕೊಡುಗೆ ಅಪಾರವಾದುದು.

ಅವರ ಸಂಶೋಧನೆ ಫಲವಾಗಿ ಕೃಷಿ ಉತ್ಪನ್ನ ಹೆಚ್ಚಾಗಿದೆ. ಅವರ ನೆನಪಿಗಾಗಿ ಅವರು ನೀಡಿರುವಂಥ ಸಲಹೆಗಳನ್ನು ಸ್ಟಡಿ ಮಾಡಿ implement ಮಾಡುವುದಕ್ಕೆ ಏನೇನು ಸಾಧ್ಯವಿದೆ ಮತ್ತು ನೀವೆಲ್ಲಾ ಕೊಡುವ ಸಲಹೆಗಳನ್ನು implement ಮಾಡಲಿಕ್ಕೆ ನಾನು ಸಿದ್ಧನಿದ್ದೇನೆಂದು ಹೇಳುತ್ತೇನೆ. ಅಬ್ದುಲ್ ಕಲಾಂರವರು ಬಿಜಾಪುರ ಹಾಗೂ ಗುಲ್ಬರ್ಗಾ ಜಿಲ್ಲೆಗಳಲ್ಲಿ PURA ಮಾದರಿಯ ಅಭಿವೃದ್ಧಿಗೆ ಪ್ರತ್ಯೇಕ ವಿವರಗಳನ್ನು ಕಳುಹಿಸಿ ಕೊಟ್ಟಿದ್ದಾರೆ. ನಾನು ಅದನ್ನೂ ಸಹ implement ಮಾಡಲಿಕ್ಕೆ ಪ್ರಯತ್ನ ಮಾಡುತ್ತೇನೆ. ಕಲಾಂರವರಿಗೆ ಮತ್ತೊಮ್ಮೆ ಈ ಸಲಹೆ ಕೊಟ್ಟಿದ್ದಕ್ಕೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಈ ಅಧಿವೇಶನದಲ್ಲಿ ನಡೆದಂಥ ವಿಚಾರ ಮಂಥನದಿಂದ ಹೊರಬಂದಿರುವಂಥ ಅಮೂಲ್ಯ ಸಲಹೆಗಳ ಪೈಕಿ ಕೆಲವನ್ನು ಅನುಷ್ಠಾನಗೊಳಿಸಲಿಕ್ಕೆ ಏನು ಮಾಡಬಹುದು ಎಂದು ಪ್ರಸ್ತಾಪ ಮಾಡಲಿಕ್ಕೆ ಇಚ್ಛೆಪಡುತ್ತೇನೆ. ಬಿತ್ತನೆ ಬೀಜ ನೀಡುವುದಕ್ಕೆ ರೈತರಿಗೆ ಸಹಾಯ ನೀಡುವುದು, ಗ್ರಾಮ ಸೇವಕರ ನೇಮಕಾತಿ, ರೈತರ ಮಕ್ಕಳಿಗೆ ತರಬೇತಿ ಮತ್ತು ನೇಮಕಾತಿ, ಉಪ ಕಸುಬುಗಳಿಗೆ ಉತ್ತೇಜನ, ಕುರಿ ಸಾಕಾಣಿಕೆಗೆ ಪ್ರೋತ್ಸಾಹ, ನೀರಾವರಿ ಸೌಲಭ್ಯ ವಿಸ್ತರಣೆ, ವಿದ್ಯುತ್ ಕ್ಷೇತ್ರ ಸುಧಾರಣೆ, ಶಿಕ್ಷಣದಲ್ಲಿ ಕೃಷಿ ಪಠ್ಯ ಕ್ರಮ ಕಡ್ಡಾಯ ಮಾಡುವಂಥದ್ದು, ಸ್ವಯಂ ಸೇವಾ ಸಂಘಗಳ ಮೂಲಕ ಅರಣ್ಯ ಬೆಳೆಸುವುದಕ್ಕೆ ಹೆಚ್ಚು ಉತ್ತೇಜನ ಮಾಡುವಂಥದ್ದು, ರೈತರಿಗೆ ಸಮಂಜಸವಾದ ಬೆಲೆ ನಿಗದಿ ಮಾಡುವಂಥದ್ದು, ಎಲ್ಲಾ ಗ್ರಾಮಗಳಲ್ಲಿ ಶೌಚಾಲಯವನ್ನು ಕಡ್ಡಾಯ ಮಾಡುವುದಕ್ಕೆ ಹಣಕಾಸಿನ – ಹೆಚ್ಚಿನ ನೆರವನ್ನು ಕೊಡಲು ಏನೇನು ಸಾಧ್ಯವಿದೆಯೋ ಆ ಕಡೆ ಗಮನ ಕೊಡುವಂಥದ್ದು. ಗ್ರಾಮೀಣ ರಸ್ತೆಗಳ ನಿರ್ಮಾಣದ ಬಗ್ಗೆ, ಆರೋಗ್ಯ ಸೌಲಭ್ಯಗಳ ಬಗ್ಗೆ, ಆಹಾರ ಸಂರಕ್ಷಣೆ ಮತ್ತು ಮಾರುಕಟ್ಟೆ ಬಗ್ಗೆ, ವ್ಯಕ್ತಿ ವಿಕಸನದ ಬಗ್ಗೆ ಅಬ್ದುಲ್ ಕಲಾಂಜಿಯವರು ಅನೇಕ ವಿಷಯಗಳನ್ನು ಮಾತನಾಡಿದ್ದಾರೆ. ತಜ್ಞರು ಮತ್ತು ಸಾರ್ವಜನಿಕರ ಸಲಹೆಗಳನ್ನೂ ಸಹ ನಾನು ಕೇಳಿದ್ದೆನು. ನೂರಾರು ಜನ E-mail ಮೂಲಕ, ಪತ್ರಿಕೆಗಳ ಮೂಲಕ ತಮ್ಮ ಅಭಿಪ್ರಾಯಗಳನ್ನು ವ್ಯಕ್ತ ಮಾಡಿದ್ದಾರೆ. ಸಾಕಷ್ಟು ಉತ್ತಮ ಸಲಹೆಗಳು ಬಂದಿವೆ. ಅದರಲ್ಲಿ ಕೆಲವು ಸಲಹೆಗಳನ್ನು ಮಾತ್ರ ಹೇಳುತ್ತೇನೆ. ಡಾ: ಪ್ರಬುಲ್ ಚಂದ್ರ, ಶಿವಮೊಗ್ಗ, ಸಣ್ಣ ಚೆಕ್ ಡ್ಯಾಮ್‌ಗಳಿಗೆ

ಆದ್ಯತೆ ನೀಡಿ, ರೈತರ ಬೆಳೆಯನ್ನು ನೇರವಾಗಿ ಖರೀದಿ ಮಾಡಿ ಎನ್ನುವ ಮಾತನ್ನು ಹೇಳಿದ್ದಾರೆ. ಶ್ರೀ ಗುರುಶರಣ್ ಗೋಳಾ, ಆಳಂದ ತಾಲ್ಲೂಕು ಇವರು ಬೆಳೆ ವಿಮೆಯನ್ನು 90 ಪ್ರತಿಶತ ಹೆಚ್ಚಿಸಬೇಕು ಎನ್ನುವ ಕಳಕಳಿಯನ್ನು ವ್ಯಕ್ತಪಡಿಸಿದ್ದಾರೆ. ಡಾ: ಹೆಚ್.ಡಿ. ಗಂಗಲ್, ಹುಬ್ಬಳ್ಳಿ ಇವರು ಹಳ್ಳಿಗಳಲ್ಲಿ ಉತ್ತಮ ಆರೋಗ್ಯ ಸೇವೆ ಒದಗಿಸುವುದರ ಬಗ್ಗೆ ಹೇಳಿದ್ದಾರೆ. ಡಾ: ಎ. ಓಬಾರೆಡ್ಡಿ, ರಾಷ್ಟ್ರೀಯ ಹೈನುಗಾರಿಕೆ ಸಂಶೋಧನಾ ಸಂಸ್ಥೆ ಇವರು ಉತ್ತಮ ಸಂಸ್ಥೆಗೆ ಅಮೃತಮಹಲ್ ಕಾವಲ್ ಅಭಿವೃದ್ಧಿಪಡಿಸಿಕೊಡಿ. ಹೈನುಗಾರಿಕೆಗೆ ಆದ್ಯತೆ ನೀಡಿ, ರೈತರಿಗೆ ಉತ್ತಮ ತಳಿಯ ಎತ್ತುಗಳನ್ನು ಒದಗಿಸಿ ಎನ್ನುವ ಮಾತನ್ನು ಹೇಳಿದ್ದಾರೆ. ಡಾ: ಆರ್. ಸುರೇಶ್ ಕುಮಾರ್, SBM . India Limited, Bangalore ಇವರು ಗ್ರಾಮೀಣಾಭಿವೃದ್ಧಿ ಯೋಜನೆಗಳ ಅನುಷ್ಠಾನ, ಮೇಲ್ವಿಚಾರಣೆಗೆ ತಾಲ್ಲೂಕು ಮಟ್ಟದಲ್ಲಿ ಕಾರ್ಯಪಡೆಯನ್ನು ರಚಿಸಿ ಎನ್ನುವ ಉತ್ತಮವಾದ ಸಲಹೆ ಕೊಟ್ಟಿದ್ದಾರೆ. ಸಿದ್ದರಾಮಪ್ಪ, ದಂಗಾಪುರ್, ಅಧ್ಯಕ್ಷರು, ಜಿಲ್ಲಾ ಪರಿಶಿಷ್ಟ ಸಮಾಜ, ಗುಲ್ಬರ್ಗಾ ಇವರು ಶಾಲಾ ಕಾಲೇಜುಗಳಲ್ಲಿ ಕೃಷಿಗೆ ಸಂಬಂಧಪಟ್ಟ ಪಠ್ಯಪುಸ್ತಕಗಳನ್ನಿಡಿ ಎಂದು ಹೇಳಿದ್ದಾರೆ ಮತ್ತು ಹೊಲಕ್ಕೊಂದು ಕೆರೆ, ಹೊಲಕ್ಕೆ ಒಂದು ಹೊಂಡ, ಇದರ ಅಭಿವೃದ್ಧಿ ಬಗ್ಗೆ ಚಿಂತನೆ ಮಾಡಿ ಎಂದು ಹೇಳಿದ್ದಾರೆ. ಡಾ: ಹೆಚ್.ಎಂ. ಮರಳುಸಿದ್ದಯ್ಯ, ಬೆಂಗಳೂರು ಇವರು ನಿರ್ಮಲ ಕರ್ನಾಟಕ ಯೋಜನೆಯನ್ನು ಸ್ವಯಂ ಸೇವಾ ಸಂಸ್ಥೆಗಳ ಮುಖಾಂತರ ಜಾರಿಗೆ ತನ್ನಿ, ಶಿಕ್ಷಣ, ಆರೋಗ್ಯ, ಕಾಯಕ, ಸಾಮರಸ್ಯ ಹಾಗೂ ಜನಾಧಿಕಾರಗಳೆಂಬ ಪಂಚಮುಖಿ ಅಭಿವೃದ್ಧಿಗೆ ಒಂದು ಕಲ್ಪನೆಯನ್ನು ಜಾರಿಗೊಳಿಸಿ ಎಂದು ಹೇಳಿದ್ದಾರೆ. ಶ್ರೀ ರಾಮರಾವ್ ದೇಶಪಾಂಡೆ, ಚಿಂಚೋಳಿ ತಾಲ್ಲೂಕು, ಬೆಳೆ ವಿಮೆ ಕಡ್ಡಾಯ ಮಾಡಿ, ನೀರಾವರಿಗೆ ಆದ್ಯತೆ ಕೊಡಿ ಎಂದು ಹೇಳಿದ್ದಾರೆ. ಶ್ರೀಮತಿ ಬಿ. ಶೋಭಾ ಅರಸ್, ತೆಕ್ಕಟ್ಟೆ ಇವರು ಜನತೆಗೆ ಏನನ್ನೂ ನೀವು ಉಚಿತವಾಗಿ ಕೊಡಬೇಡಿ. ಗುಣಮಟ್ಟದ ವಿದ್ಯುತ್ ಸೌಲಭ್ಯವನ್ನು ಒದಗಿಸಿ ಸಾಕು ಇದರಿಂದ ನಾವು ಬದುಕುತ್ತೇವೆ ಎನ್ನುವ ಮಾತನ್ನು ಹೇಳಿದ್ದಾರೆ. ಕೆ. ನಾಗರಾಜ್, ತೊಪ್ಪಿನಘಟ್ಟ, ಶಿವಮೊಗ್ಗ ಇವರು internet ಮೂಲಕ ರೈತರಿಗೆ ಮಾರುಕಟ್ಟೆ ಮಾಹಿತಿ ಮತ್ತು ಸಲಹೆಗಳನ್ನು ನೀಡಿ

ಎಂದು ಹೇಳಿದ್ದಾರೆ. ಶ್ರೀ ಮೃತ್ಯುಂಜಯ, ಬೆಂಗಳೂರು, ಇವರು ಕೃಷಿಗೆ ಅಗತ್ಯವಿರುವಂಥ ವಸ್ತುಗಳಿಗೆ ತೆರಿಗೆ ವಿನಾಯಿತಿಯನ್ನು ನೀಡಿ ಎನ್ನುವ ಮಾತನ್ನು ಹೇಳಿದ್ದಾರೆ. ಶ್ರೀ ಭಜಂದಲಿ ಜೂಬ್, ಬೆಂಗಳೂರು, ಸುಭಾಷ್ ಪಾಳೇಗಾರ್ ಇವರು ಜಪಾನಿನ ಜೊಕಾವೋರವರ ಸಾವಯವ ಕೃಷಿ ಪದ್ಧತಿಯನ್ನು ಜಾರಿಗೆ ತರುವುದಕ್ಕೆ ಸಹಾಯ ಮಾಡಿ ಎಂದು ಹೇಳಿದ್ದಾರೆ. ಮಾಧ್ಯಮಗಳಿಂದ ಬಹಳ ದೊಡ್ಡ ಸ್ವಾಗತ ಸಿಕ್ಕಿದೆ. ಅವರ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಮಾಧ್ಯಮದ ಸ್ನೇಹಿತರು ಇದರ ಬಗ್ಗೆ ಕೊಟ್ಟಿರುವಂಥ ಸಲಹೆಗಳಿಗೆ ನಾನು ಅಭಿನಂದನೆ ಸಲ್ಲಿಸುತ್ತೇನೆ. ಅವರ ಸಲಹೆಗಳನ್ನು ಕಾರ್ಯರೂಪಕ್ಕೆ ತರಲು ಪ್ರಯತ್ನ ಮಾಡುತ್ತೇನೆ. ಸನ್ಮಾನ್ಯ ಅಧ್ಯಕ್ಷರೆ, ಈಗ ಬರುವ ದಿವಸಗಳಲ್ಲಿ ಭವಿಷ್ಯದ ಹೆಜ್ಜೆಗಳೇನು, ಯಾವ ದಿಕ್ಕಿನಲ್ಲಿ ನಾವು ಯೋಚನೆ ಮಾಡುತ್ತಿದ್ದೇವೆ, ಈ ಮೂರು ದಿವಸಗಳ ಅಧಿವೇಶನ ಕೇವಲ ನಾಮಕಾವಸ್ತೆಗೆ ಚರ್ಚೆಯಾಗಿ, ಬರೀ ಭರವಸೆ ಕೊಟ್ಟು ಎದ್ದು ನಿಲ್ಲದೆ, ಅದನ್ನು ಕಾರ್ಯರೂಪಕ್ಕೆ ತರುವುದಕ್ಕೆ ಕೆಲವು ಚಿಂತನೆಗಳು ಆಗಿದೆ. ಅದರ ಬಗ್ಗೆ ನಿಮ್ಮ ಸಲಹೆಗಳನ್ನು ನಾನು ಕೇಳುತ್ತೇನೆ.

**ಕಲಾಂಪುರ:** ಈ ಅಧಿವೇಶನದ ಚರ್ಚೆಯಿಂದ ಡಾ: ಅಬ್ದುಲ್ ಕಲಾಂರವರ "ಪುರ" (PURA) ಕಲ್ಪನೆಯ ಸಾಕಾರಕ್ಕಾಗಿ ಸರ್ಕಾರಕ್ಕೆ ಒಂದು ಹೊಸ ಯೋಜನೆಯನ್ನು ಹಮ್ಮಿಕೊಳ್ಳುವಂಥ ಉದ್ದೇಶವನ್ನು ಗಟ್ಟಿ ಮಾಡಿದೆ.

ಈ ದಿಸೆಯಲ್ಲಿ ಹೋಬಳಿ ಕೇಂದ್ರದಲ್ಲಿ ನಗರಮಟ್ಟದ ಭೌತಿಕ, ಸಾಮಾಜಿಕ ಮತ್ತು ಆರ್ಥಿಕ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಮತ್ತು ಆ ಹೋಬಳಿಯ ಗ್ರಾಮಗಳಿಗೆ ವಿವಿಧ ಸಂಪರ್ಕ ಜಾಲ ಸೌಲಭ್ಯ ಕಲ್ಪಿಸಲು "ಕಲಾಂಪುರ" ಎಂಬ ಹೆಸರನ್ನು ಇಟ್ಟು, ಈ ನೂತನ ಯೋಜನೆಯನ್ನು ಪ್ರತಿ ಗ್ರಾಮೀಣ ಶಾಸಕರ ಕ್ಷೇತ್ರಕ್ಕೆ ಒಂದರಂತೆ, 200 ಹೋಬಳಿಗಳಲ್ಲಿ ಜಾರಿಗೆ ತರುವುದಕ್ಕೆ ಈ ವರ್ಷವೇ ಅನುಭವಿ ಸಂಸ್ಥೆ ಮುಖಾಂತರ ಯೋಜನಾ ವರದಿಗಳನ್ನು (ಡಿ.ಪಿ.ಆರ್.) ತಯಾರಿಕೆಗೆ ನಾನು ಚಾಲನೆ ಕೊಡುತ್ತೇನೆ. ಇದು ಮೊದಲನೆಯದು.

ಈ ವರದಿಗಳನ್ನು ಆಧರಿಸಿ ಡಾ: ಕಲಾಂರವರ ಕಲ್ಪನೆಯಂತೆ ಆಯ್ಕೆಯಾದ ಗ್ರಾಮ ಗುಚ್ಛಗಳನ್ನು ಅಭಿವೃದ್ಧಿಪಡಿಸುತ್ತೇವೆ. ಈ ದಿಸೆಯಲ್ಲಿ ಮುಂದಿನ ಆಯವ್ಯಯ ತಯಾರಿಸುವ ಮುನ್ನ ಡಾ: ಕಲಾಂರವರ ಜೊತೆ, ಶಾಸಕರ ಜೊತೆ ಹಾಗೂ ನಿಮ್ಮ ಜೊತೆ ಚರ್ಚೆ ಮಾಡಿ ಸಮಾಲೋಚನೆ ಮಾಡಿ ಕಾರ್ಯರೂಪಕ್ಕೆ ತರುವಂಥ ಪ್ರಯತ್ನ ಮಾಡುತ್ತೇವೆ.

**ಗ್ರಾಮೀಣ ರಸ್ತೆ:** ಇನ್ನು ಗ್ರಾಮೀಣ ರಸ್ತೆಗೆ ಸಂಬಂಧಪಟ್ಟಂತೆ ಇದು ಅತ್ಯಂತ ಪ್ರಮುಖವಾದುದು ಹಾಗೂ ನಾನು ಬಹಳ ಜವಾಬ್ದಾರಿಯುತವಾಗಿ ಈ ಮಾತನ್ನು ಹೇಳುತ್ತೇನೆ. ಇದನ್ನು ನಮ್ಮೆಲ್ಲಾ ಸದಸ್ಯರು ಗಮನಿಸಬೇಕು. ಗ್ರಾಮೀಣ ರಸ್ತಗಳ ಅಭಿವೃದ್ಧಿಗೆ ಇನ್ನೂ ಹೆಚ್ಚಿನ ಆದ್ಯತೆ ಮತ್ತು ಅನುದಾನ ನೀಡುವ ಅವಶ್ಯಕತೆ ಇದೆ. ಈ ಬಗ್ಗೆ ಹಲವಾರು ಸದಸ್ಯರು ತಮ್ಮ ಸಲಹೆಗಳನ್ನು ನೀಡಿದ್ದಾರೆ. ನಮ್ಮ ಶಾಸಕರಲ್ಲಿ ನಾನು ವಿನಂತಿ ಮಾಡುವುದು ಏನೆಂದರೆ, ಇವತ್ತಿನಿಂದ ಬೇರೆ ಬೇರೆ ಕಾಮಗಾರಿಗಳು ಬೇಕು ಎಂದ್ದು ಯಾರೂ ಸಹ ಕಾಗದವನ್ನು ಕೊಡದೇ ಇದ್ದರೆ, ಒತ್ತಾಯ ಮಾಡದೇ ಇದ್ದರೆ, ನನ್ನ ಅಪೇಕ್ಷೆ ಇರುವುದು ಏನೆಂದರೆ, ಪ್ರತಿ ಗ್ರಾಮೀಣ ವಿಧಾನಸಭಾ ಕ್ಷೇತ್ರದಲ್ಲಿ 50 ಕಿ.ಮೀ. ರಸ್ತೆ ಅಭಿವೃದ್ಧಿ ಮಾಡಲು ವಿಶೇಷ ಯೋಜನೆ ತಯಾರು ಮಾಡುತ್ತೇನೆ. ಇದೇ ವರ್ಷ ಮಾಡುತ್ತೇನೆ. ಮುಂದಿನ ವರ್ಷ ಮಾಡುವುದಿಲ್ಲ. ಇದೇ ವರ್ಷ ಟೆಂಡರ್ ಪ್ರಕ್ರಿಯೆ ಪ್ರಾರಂಭ ಮಾಡುತ್ತೇನೆ. ಈ ಮೂಲಕ ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ 10,000 ಕಿ.ಮೀ. ಉದ್ದದ ಗುಣಮಟ್ಟದ ರಸ್ತೆಗಳನ್ನು ಮಾಡುವುದಕ್ಕೆ ಎಲ್ಲಾ ರೀತಿಯ ಕಾರ್ಯಕ್ರಮಗಳನ್ನು ರೂಪಿಸಿ ಇನ್ನು ಎರಡು-ಎರಡೂವರೆ ವರ್ಷಗಳಲ್ಲಿ ಮಾಡುತ್ತೇವೆ. ನೀವು ನಿಮ್ಮ ಕ್ಷೇತ್ರಗಳಿಗೆ ಹೋದಾಗ ಈ 50 ಕಿ.ಮೀ. ರಸ್ತೆ ಅಭಿವೃದ್ಧಿಯಿಂದ ನಿಮಗೆ ಸಮಾಧಾನ ತರುವಂಥ ರೀತಿಯಲ್ಲಿ ಪೂರ್ತಿಯಾಗಿ ಉತ್ತಮ ಗುಣಮಟ್ಟದ ರಸ್ತೆಯ ವ್ಯವಸ್ಥೆಯನ್ನು ಮಾಡುತ್ತೇವೆ. ಇದಕ್ಕೆ ಕಾರ್ಯಕ್ರಮವನ್ನು ರೂಪಿಸುತ್ತೇನೆ.

**ನಿವೇಶನಕ್ಕೆ ಭೂಮಿ:** ನಿವೇಶನ ಇಲ್ಲವೆಂದು ಎಲ್ಲಾ ಕಡೆ ಕೇಳಿಬರುತ್ತಿದೆ. ಬಡವರಿಗೆ ಆಶ್ರಯ ಮನೆಗಳು ಸಿಗುತ್ತಿಲ್ಲ ಎಂದು ಹೇಳುತ್ತೀರಿ. ಅದಕ್ಕೋಸ್ಕರ ಬೇರೆ ಮೂಲಗಳಿಂದ ಉಳಿತಾಯ ಮಾಡಿ ಇದೇ ವರ್ಷದಲ್ಲಿ ಜಮೀನು

ಖರೀದಿ ಮಾಡಿ ನಿವೇಶನಗಳನ್ನು ಮಾಡುವುದಕ್ಕೆ 100 ಕೋಟಿ ರೂಪಾಯಿಗಳನ್ನು ತೆಗೆದಿಡಬೇಕು ಎನ್ನುವ ತೀರ್ಮಾನವನ್ನು ನಾನು ಮಾಡಿದ್ದೇನೆ.

Rural Development and Self-employment Training Institute (RUDSETI- ರುಡ್‌ಸೆಟಿ): ಈ ಸಂಸ್ಥೆಗೆ ಸಂಬಂಧಿಸಿದಂತೆ ಇವತ್ತು ಕೇಂದ್ರ ಸರ್ಕಾರದವರು ಶ್ರೀ ಕ್ಷೇತ್ರ ಧರ್ಮಸ್ಥಳದ ಮಾನ್ಯ ಹೆಗಡೆಯವರ ಬಗ್ಗೆ ಮಾತನಾಡಿದ್ದಾರೆ. ಇದು ಬಹಳ ಅಭಿಮಾನದ ಸಂಗತಿ. ಇವತ್ತು ನಮ್ಮ ರಾಜ್ಯದಲ್ಲಿ ಗ್ರಾಮೀಣಾಭಿವೃದ್ಧಿ ಬಗ್ಗೆ ಚಿಂತನೆ ಮಾಡುತ್ತಿರುವ ಒಬ್ಬರು ಚಿಂತಕರಾದ ಶ್ರೀ ಕ್ಷೇತ್ರ ಧರ್ಮಸ್ಥಳದ ಮಾನ್ಯ ಹೆಗಡೆಯವರ ಬಗ್ಗೆ ಕೇಂದ್ರ ಸರ್ಕಾರವೂ ಚಿಂತನೆ ಮಾಡುತ್ತಿರುವುದು ಅತ್ಯಂತ ಸ್ವಾಗತಾರ್ಹವಾದ ಸಂಗತಿ. ಶ್ರೀ ಕ್ಷೇತ್ರ ಧರ್ಮಸ್ಥಳದ ರುಡ್‌ಸೆಟಿ ಮುಖಾಂತರ ಗ್ರಾಮೀಣಾಭಿವೃದ್ಧಿಗೆ ತೆಗೆದುಕೊಂಡಂಥ ಕಾರ್ಯಕ್ರಮಗಳು ಬಹಳ ಯಶಸ್ವಿಯಾಗಿ ನಡೆಯುತ್ತಿವೆ. ಇಡೀ ದೇಶದ ಗಮನವನ್ನು ಸೆಳೆದಿದೆ. ಕೇಂದ್ರ ಸರ್ಕಾರವೂ ಸಹ ಈ ಮಾದರಿಯಲ್ಲಿ ಗ್ರಾಮೀಣಾಭಿವೃದ್ಧಿ ಯೋಜನೆಗಳನ್ನು ಅನುಷ್ಠಾನಗೊಳಿಸುವುದಕ್ಕೆ ಮುಂದೆ ಬಂದಿದೆ. ನಮ್ಮ ರಾಜ್ಯದಲ್ಲಿರುವ ಈ ಒಂದು ಅತ್ಯುತ್ತಮ ಸಂಸ್ಥೆಯ ಸಹಯೋಗದೊಂದಿಗೆ ಗುಡಿ ಮತ್ತು ಗೃಹ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸುವುದಕ್ಕೆ ಜನರನ್ನು ಸ್ವಯಂ ಉದ್ಯೋಗದಲ್ಲಿ ತೊಡಗಿಸಿಕೊಳ್ಳಬಹುದಾಗಿದೆ. ಈ ಸಂಸ್ಥೆ ಸ್ವಸಹಾಯ ಗುಂಪುಗಳ ತರಬೇತಿ, ಉತ್ಪಾದನೆ ಮತ್ತು ಮಾರುಕಟ್ಟೆ ವ್ಯವಸ್ಥೆ ಸಹ ಮಾಡುತ್ತಿದೆ.

ಇದೇ ವರ್ಷ ಶ್ರೀ ಕ್ಷೇತ್ರ ಧರ್ಮಸ್ಥಳ ರುಡ್‌ಸೆಟಿ ಸಂಸ್ಥೆಗೆ ವಿಶೇಷ ಅನುದಾನ ನೀಡಿ ರಾಜ್ಯದ ವಿವಿಧೆಡೆ ಇದರ ಚಟುವಟಿಕೆಗಳ ವ್ಯಾಪ್ತಿಯನ್ನು ವಿಸ್ತರಣೆ ಮಾಡುವುದಕ್ಕೆ ನಾನು ಕಾರ್ಯಕ್ರಮವನ್ನು ರೂಪಿಸುತ್ತೇನೆ.

ಬ್ಯಾಂಕ್ ಮತ್ತು ಬೇರೆ ಸಂಸ್ಥೆಗಳಿಗೆ ತಾಲ್ಲೂಕು ಕೇಂದ್ರಗಳಲ್ಲಿ ರುಡ್‌ಸೆಟಿ ಸ್ಥಾಪಿಸಲು ಪ್ರೋತ್ಸಾಹಧನ ನೀಡಲಾಗುತ್ತದೆ.

ಸ್ತ್ರೀಶಕ್ತಿ ಗುಂಪುಗಳಿಗೆ ಗುಡಿ ಕೈಗಾರಿಕೆ ಕೈಗೊಳ್ಳಲು ಉತ್ತೇಜನ ನೀಡಿ ಅವರಿಗೂ ಸಹಾಯಧನದ ಸೌಲಭ್ಯ ವಿಸ್ತರಿಸುತ್ತೇವೆ. ಅವು ಉತ್ಪಾದಿಸುವ ಮತ್ತು ಸರ್ಕಾರಕ್ಕೆ ಅಗತ್ಯವಿರುವ ಫಿನೈಲ್, ಫೈಲ್ ಕವರ್ ಮತ್ತಿತರ 'ಸರಕುಗಳನ್ನು ನೇರವಾಗಿ ಖರೀದಿಸಲು ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ. ಇನ್ನೊಂದು ಮಾತನ್ನು ನಮ್ಮ ಅಧಿಕಾರಿಗಳಿಗೆ ನಾನು ಹೇಳುವುದಕ್ಕೆ ಇಚ್ಛಿಪಡುತ್ತೇನೆ. ನಮ್ಮ ಸರ್ಕಾರದ ಸಂಸ್ಥೆಯಾದ ಭದ್ರಾವತಿ ಪೇಪರ್ ಮಿಲ್ಸ್‌ನಿಂದ ನಮಗೆ ಸುದ್ದಿ ಬಂದಿದೆ. ನಮ್ಮ ರಾಜ್ಯದಲ್ಲಿಯೇ ಇದ್ದು, ನಾವು ಲಾಭದಾಯಕವಾಗಿ ಮಾಡುವ ಹಾಗೆ ಇದ್ದರೂ ಕೂಡ ಬೇರೆ ಬೇರೆ ಕಡೆಯಿಂದ ಇವತ್ತು ಪೇಪರ್ ಅನ್ನು ಖರೀದಿ ಮಾಡುವಂಥ ಪ್ರಯತ್ನ ನಡೆಯುತ್ತಿದೆ. ಇದು ನಿಲ್ಲಬೇಕು. ನಾನು ಸೂಚನೆ ಕೊಡುತ್ತೇನೆ. ನಮ್ಮ ಪ್ರಯತ್ನ ಯಾವ ಕಾರಣಕ್ಕೂ ಸಹ ನಮಗೆ ಅಗತ್ಯವಿರುವ ಪೇಪರ್ಸ್ ಅನ್ನು ಭದ್ರಾವತಿ ಪೇಪರ್ ಮಿಲ್‌ನಿಂದಲೇ ಖರೀದಿ ಮಾಡಬೇಕು ಎನ್ನುವ ಸೂಚನೆಯನ್ನು ನಾನು ಇವತ್ತು ಕೊಡುತ್ತಿದ್ದೇನೆ. ಅದಕ್ಕೆ ಏನಾದರೂ ಈಗಾಗಲೇ ಟೆಂಡರ್ ಕರೆಯುವುದು ಅಥವಾ ಮತ್ತೊಂದನ್ನು ಮಾಡುತ್ತಿದ್ದರೆ ಅದನ್ನು ನಿಲ್ಲಿಸಬೇಕು. ಈ ಸೂಚನೆ ಇವತ್ತಿನಿಂದ ಜಾರಿಗೆ ಬರುತ್ತದೆ. ಇದನ್ನು ಗಮನಿಸಬೇಕು ಎಂದು ಹೇಳುತ್ತೇನೆ.

**ಕಿಸಾನ್ ಕ್ರೆಡಿಟ್ ಕಾರ್ಡ್:** ಇನ್ನು ಕಿಸಾನ್ ಕ್ರೆಡಿಟ್ ಕಾರ್ಡ್ ಬಗ್ಗೆ ಹೇಳುವುದಾದರೆ ಎಲ್ಲಾ ರೈತರಿಗೆ ಸಕಾಲದಲ್ಲಿ ಮೂರು ಪ್ರತಿಶತ ಬಡ್ಡಿ ದರದಲ್ಲಿ ಸಾಲ ಸಿಗುವಂತೆ ಮಾಡಲು ಮುಂದಿನ ಎರಡು ವರ್ಷಗಳಲ್ಲಿ ಕಿಸಾನ್ ಕ್ರೆಡಿಟ್ ಕಾರ್ಡ್ ವ್ಯವಸ್ಥೆ ಮಾಡುತ್ತೇವೆ. ಈ ದಿಸೆಯಲ್ಲಿ ವಾಣಿಜ್ಯ ಮತ್ತು ಸಹಕಾರಿ ಬ್ಯಾಂಕುಗಳ ಪ್ರಮುಖರ ಜೊತೆ ಸಭೆ ನಡೆಸಿ ರಾಜ್ಯದಾದ್ಯಂತ ಕಿಸಾನ್ ಕ್ರೆಡಿಟ್ ಕಾರ್ಡ್ ಅಭಿಯಾನ ಕೈಗೊಳ್ಳಬೇಕೆಂದು ಯೋಚನೆ ಮಾಡಿದ್ದೇವೆ.

**ಕೃಷಿ ಸಂಸ್ಕರಣೆಗೆ ಉತ್ತೇಜನ: ಭೂ ಪರಿವರ್ತನೆ ಅಗತ್ಯವಿಲ್ಲ:** ಇನ್ನು ಕೃಷಿ ಸಂಸ್ಕರಣೆಗೆ ಉತ್ತೇಜನಕ್ಕೆ ಸಂಬಂಧಿಸಿದಂತೆ, ಬಹಳ ಮುಖ್ಯವಾಗಿ ನಮ್ಮ ಸದನದ ಗೌರವಾನ್ವಿತ ಸದಸ್ಯರು ಗಮನಿಸಬೇಕು. ಇನ್ನು ಮುಂದೆ ಕೃಷಿ ಸಂಸ್ಕರಣೆ ಯೋಜನೆಗಳನ್ನು ಮಾಡುವುದಕ್ಕೆ, ಕೈಗಾರಿಕೆಗಳನ್ನು ಸ್ಥಾಪಿಸಲು ಮುಂದೆ ಬರುವವರಿಗೆ 5 ಎಕರೆಯವರೆಗೆ ಭೂಪರಿವರ್ತನೆ ಅಗತ್ಯವಿಲ್ಲ. ನಾಳೆ

ಬೆಳಿಗ್ಗೆ 5 ಎಕರೆಗಳನ್ನು ಖರೀದಿ ಮಾಡಿದರೆ ಗ್ರಾಮೀಣ ಪ್ರದೇಶದಲ್ಲಿ 8 ದಿನಗಳಲ್ಲಿ ಕೃಷಿ ಆಧಾರಿತ ಕಾರ್ಯಕ್ರ, ಗುಡಿ ಕೈಗಾರಿಕೆಗಳನ್ನು ಮಾಡುವುದಕ್ಕೆ permission ಕೊಡುವಂಥ ಒಂದು ವಿನೂತನ ಯೋಜನೆ ಇದು. ಕೃಷಿ ಆಧಾರಿತ ಕೈಗಾರಿಕೆಗಳು, ಉಗ್ರಾಣ ಮತ್ತು ಶೀತಲೀಕರಣ ಕೇಂದ್ರ, ಕೃಷಿ ಪೂರಕ ಚಟುವಟಿಕೆಗಳೆಂದು ನಾವು ಪರಿಗಣನೆ ಮಾಡಿದ್ದೇವೆ. ಇಂತಹ ಕೈಗಾರಿಕೆಗಳ ಸ್ಥಾಪನೆಗೆ ಜಿಲ್ಲಾ ಕೇಂದ್ರಗಳನ್ನು ಹೊರತುಪಡಿಸಿ ಮಾಡಬೇಕು. ಏಕೆಂದರೆ, ಇದೇ ನೆಪದಲ್ಲಿ ಅವರು ಇನ್ನು ಬೇರೆ ಏನೋ ಮಾಡಬಾರದು. 5 ಎಕರೆಯವರೆಗೆ ಭೂ ಪರಿವರ್ತನೆ ಅಗತ್ಯವಿಲ್ಲದಂತೆ ಮಾಡಲು ಭೂ ಕಂದಾಯ ಅಧಿನಿಯಮಕ್ಕೆ ಸೂಕ್ತ ತಿದ್ದುಪಡಿ ತರುತ್ತೇವೆ. ಭೂಮಿ ಖರೀದಿ ಸರಳೀಕರಣ ಜಿಲ್ಲಾ ಕೇಂದ್ರವನ್ನು ಹೊರತುಪಡಿಸಿ ಕೃಷಿ ಆಧಾರಿತ ಕೈಗಾರಿಕೆಗಳು, ಉಗ್ರಾಣ ಮತ್ತು ಶೀತಲೀಕರಣ ಕೇಂದ್ರ ಸ್ಥಾಪನೆಗಳಿಗೆ ಈ ರೀತಿಯ ಇತರೆ ಅನುಕೂಲತೆಗಳಿಗೆ 5 ಎಕರೆ ಜಮೀನು ಖರೀದಿ ಮಾಡುವುದಕ್ಕೆ ಭೂ ಸುಧಾರಣೆ ಅಧಿನಿಯಮದ 79(ಎ) ಮತ್ತು 79(ಬಿ) ಪ್ರಕರಣಗಳಿಗೆ ಸೂಕ್ತ ತಿದ್ದುಪಡಿಗಳನ್ನು ತರಬೇಕು ಎಂದು ನಾವೂ ತೀರ್ಮಾನ ಮಾಡಿದ್ದೇವೆ.

**ಹೆಚ್ಚುವರಿ ಸಹಾಯಧನ:** ಕರ್ನಾಟಕ ಕೈಗಾರಿಕಾ ನೀತಿ 2009–14ರಡಿ ಈಗ ನೀಡುತ್ತಿರುವ ಸಹಾಯಧನವು ಕೆಲವು ವಲಯಗಳಿಗೆ ಮಾತ್ರ ಸೀಮಿತವಾಗಿದೆ. ಕೃಷಿ ಆಧಾರಿತ ಕೈಗಾರಿಕೆಗಳಿಗೆ ಸಂಬಂಧಿಸಿದಂತೆ ಈ ವಲಯವಾರು ವರ್ಗೀಕರಣಗಳನ್ನು ತೆಗೆದುಹಾಕಿ ರಾಜ್ಯದ 164 ತಾಲ್ಲೂಕುಗಳಲ್ಲೂ (12 ಅಭಿವೃದ್ಧಿ ಹೊಂದಿದ ತಾಲ್ಲೂಕುಗಳನ್ನು ಹೊರತುಪಡಿಸಿ) ಶೇಕಡಾ 25ರಷ್ಟು ಸಹಾಯಧನ (ಗರಿಷ್ಠ ರೂ. 30 ಲಕ್ಷ) ಸಹಾಯಧನವನ್ನು ಕೊಡುತ್ತೇವೆ. ಈ ಸಹಾಯಧನವನ್ನು ಉಗ್ರಾಣ ಮತ್ತು ಶೀತಲೀಕರಣ ಕೇಂದ್ರ, ಇತರೆ ಕಾರ್ಯಕ್ರಮಗಳಿಗೆ ಅವರು ಉಪಯೋಗ ಮಾಡಿಕೊಳ್ಳಬಹುದು. ಇವುಗಳಿಗೆ ವಿದ್ಯುತ್ ಅನ್ನು ಪ್ರತಿ ಯೂನಿಟ್‌ಗೆ ಒಂದು ರೂಪಾಯಿಯಂತೆ ಸಹಾಯಧನವನ್ನು ಕೊಡುತ್ತೇವೆ. ಗ್ರಾಮೀಣ ಪ್ರದೇಶದ ಕೈಗಾರಿಕೆಗಳನ್ನು ತೆಗೆದು ಲಾಭದಾಯಕವಾಗಿ ನಡೆಸಬೇಕೆನ್ನುವುದಕ್ಕೋಸ್ಕರ ಈ concession ಕೊಡಬೇಕೆಂದು ಯೋಚನೆ ಮಾಡಿದ್ದೇವೆ.

**ಬೆಳೆ ವಿಮೆ ವಿಸ್ತರಣೆ ಹಾಗೂ ಸಹಾಯಧನ:** ಬೆಳೆ ವಿಮೆಗೆ ಒಂದು ಪ್ರಮುಖವಾದ ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಈಗಿರುವ ವಿಮಾ ಯೋಜನೆ ಹೆಚ್ಚು ರೈತರಿಗೆ ತಲುಪುತ್ತಿಲ್ಲ. ಇದನ್ನು ಸರಳೀಕರಿಸಿ ಮತ್ತು ವಿಸ್ತರಿಸಲು ಪ್ರತಿ ಗ್ರಾಮ ಪಂಚಾಯಿತಿಯಲ್ಲಿ ಟೆಲಿ ಮೆಟ್ರಿಕ್ ಮಳೆ ಮಾಪನ ಕೇಂದ್ರ ಸ್ಥಾಪಿಸಿ, ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆಯನ್ನು ಜಾರಿಗೊಳಿಸುತ್ತೇವೆ. ಜೊತೆಗೆ ಸಣ್ಣ ಮತ್ತು ಅತಿ ಸಣ್ಣ ರೈತರು ಕಟ್ಟಬೇಕಾದಂತಹ ಬೆಳೆ ವಿಮೆ ಪ್ರೀಮಿಯಂನಲ್ಲಿ ಶೇಕಡ 50ರಷ್ಟನ್ನು ಸರ್ಕಾರವೇ ಇನ್ನು ಮೇಲೆ ಭರಿಸುತ್ತದೆ. ಈಗ ಕೇವಲ ಶೇಕಡ 10 ಮಾತ್ರ ಇದೆ. ಶೇಕಡ 50ರಷ್ಟನ್ನು ನಾವೇ ಭರಿಸಬೇಕೆಂದು ತೀರ್ಮಾನ ಮಾಡಿದ್ದೇವೆ.

**ಹಸಿರು ಹೊನ್ನು:** "ಹಸಿರು ಹೊನ್ನು" ಈ ವಿಶಿಷ್ಟ ಕಾರ್ಯಕ್ರಮಕ್ಕೆ ಚಾಲನೆ ನೀಡುವ ಮೂಲಕ ಕಳೆದ ಆಗಸ್ಟ್ ತಿಂಗಳಿನಲ್ಲಿ ದಾವಣಗೆರೆ ಜಿಲ್ಲೆಯ ಎಪ್ಪತ್ತೈದು ಗ್ರಾಮಗಳಲ್ಲಿ ಮೂರು ಲಕ್ಷ ಹೊಂಗೆ, ಬೇವು ಇತ್ಯಾದಿ ಜೈವಿಕ ಇಂಧನ ಸಸಿಗಳನ್ನು ನೆಡಲಾಗಿದೆ. ಈ ಹಸಿರು ಹೊನ್ನು ಕಾರ್ಯಕ್ರಮವನ್ನು ರೈತರ ಸಹಭಾಗಿತ್ವದಲ್ಲಿ ಮುಂದಿನ ಮೂರು ವರ್ಷಗಳಲ್ಲಿ ಎಲ್ಲ ತಾಲ್ಲೂಕುಗಳಿಗೆ ವಿಸ್ತರಣೆ ಮಾಡುತ್ತೇವೆ. ರೈತರಿಗೆ ಉಚಿತ ಸಸಿಗಳನ್ನು ಹಂಚುವುದರ ಜೊತೆಗೆ, ಅವರು ಮಾಡುವ ಜೈವಿಕ ಎಣ್ಣೆ ಕಾಳುಗಳಿಗೆ ಅಂದರೆ, ಬೇವು, ಹೊಂಗೆ, ಧೂಪ, ನಾಗಸಂಪಿಗೆ, ಹಿಪ್ಪೆ, ಜಟ್ರೋಪ ಇತ್ಯಾದಿ ಇವುಗಳಿಗೆ ಹಾಲಿಗೆ ಯಾವ ರೀತಿ ಎರಡು ರೂಪಾಯಿ ಪ್ರೋತ್ಸಾಹಧನವನ್ನು ಕೊಡುತ್ತೇವೆಯೋ ಅದೇ ರೀತಿ ಕೆ.ಜಿ.ಗೆ ಒಂದು ರೂಪಾಯಿ ಪ್ರೋತ್ಸಾಹಧನವನ್ನು ಕೊಡಬೇಕೆಂದು ತೀರ್ಮಾನ ಮಾಡಲಾಗಿದೆ. ಉಚಿತವಾಗಿ ಗಿಡಗಳು, ಒಂದು ರೂಪಾಯಿ ಪ್ರೋತ್ಸಾಹಧನ.

**ಸಾವಯವ ಕೃಷಿ:** ಮುಂದಿನ ನಾಲ್ಕು ವರ್ಷಗಳಲ್ಲಿ ಕನಿಷ್ಠ ಐದು ಲಕ್ಷ ರೈತರಿಗೆ ಇದನ್ನು ವಿಸ್ತರಣೆ ಮಾಡಬೇಕೆಂದು ತೀರ್ಮಾನ ಮಾಡಿ ಕಾರ್ಯಕ್ರಮ ರೂಪಿಸುತ್ತೇವೆ.

**ಜಲ ರಕ್ಷಣೆ:** ಉದ್ಯೋಗ ಖಾತರಿ ಯೋಜನೆಯಲ್ಲಿ ಕೃಷಿ ಹೊಂಡ, ಭೂ ಸಮತಟ್ಟು, ಒಡ್ಡು, ಕಲ್ಲೊಡ್ಡು, ಇತ್ಯಾದಿ ಜಲಾನಯನ ಕಾಮಗಾರಿಗಳನ್ನು

ಕೈಗೊಂಡು ಹೊಲದ ನೀರನ್ನು ಹೊಲದಲ್ಲೇ ಹಿಡಿದಿಡುವುದರ ಮೂಲಕ ಒಣ ಬೇಸಾಯದ ರೈತರಿಗೆ ಅನುಕೂಲ ಮಾಡಿಕೊಡುವ ವಿನೂತನ ಯೋಜನೆಯನ್ನು ಮಾಡುತ್ತಿದ್ದೇವೆ.

**ಬೀಜಗಳ ಸಂಶೋಧನೆ ಮತ್ತು ಉತ್ಪಾದನೆಗೆ ಪ್ರೋತ್ಸಾಹ:** ಕೃಷಿ ವಿಶ್ವವಿದ್ಯಾಲಯದ ಪ್ರಮುಖರನ್ನು ಕರೆಸಿ ಮಾತನಾಡಿದ್ದೇನೆ. ಹೊಸ ತಳಿಗಳ ಸಂಶೋಧನೆಗೆ ಹೆಚ್ಚಿನ ಅನುದಾನ ನೀಡುವುದರ ಜೊತೆಗೆ ರಾಜ್ಯದ ಕೃಷಿ ವಿಶ್ವವಿದ್ಯಾಲಯಗಳ ಜಮೀನು ಮತ್ತು ಕೃಷಿ ಮತ್ತು ತೋಟಗಾರಿಕೆ ಇಲಾಖೆಗಳ ಫಾರ್ಮ್‌ಗಳಲ್ಲಿ ಬೀಜಗಳ ಉತ್ಪಾದನೆಗೆ ಉತ್ತೇಜನ ನೀಡಿ ರೈತರಿಗೆ ಸ್ಥಕಾಲದಲ್ಲಿ ಉತ್ತಮ ಬೀಜಗಳು ದೊರೆಯುವಂತೆ ಮಾಡುವುದರ ಬಗ್ಗೆ ಆದ್ಯತೆಯನ್ನು ಕೊಡುತ್ತಿದ್ದೇನೆ.

**ಕೃಷಿ ಮಾರುಕಟ್ಟೆ ವ್ಯವಸ್ಥೆ ಸುಧಾರಣೆ:** ಬಹಳ ಮುಖ್ಯವಾಗಿ ಕೃಷಿ ಮಾರುಕಟ್ಟೆ ವ್ಯವಸ್ಥೆ ಸುಧಾರಣೆಯಾಗಬೇಕು. ರೈತರಿಗೆ ಅವರು ಬೆಳೆದ ಉತ್ಪನ್ನಗಳ ಮಾರಾಟಕ್ಕೆ ಆಗುತ್ತಿರುವ ತೊಂದರೆಗಳು ಕಡಿಮೆಯಾಗಬೇಕು. ಅದಕ್ಕೆ ಎ.ಪಿ.ಎಂ.ಸಿ.ಗಳಲ್ಲಿ ಗಣಕೀಕರಣ ಮತ್ತು ಆಧುನೀಕರಣ ಮಾಡಲಾಗುತ್ತದೆ. ಇದೇ ವರ್ಷ ಕೆಲವು ಪ್ರಮುಖ ಎ.ಪಿ.ಎಂ.ಸಿ.ಗಳಿಗೆ ರೈತರು ಸರಾಗವಾಗಿ ತಮ್ಮ ಮಾಲುಗಳನ್ನು ತೆಗೆದುಕೊಂಡು ಹೋಗಲು ಬೇಕಾದ ವ್ಯವಸ್ಥೆಯನ್ನು ಮಾಡಲಾಗಿದೆ. ಅದರಲ್ಲಿ ಕಡಿಮೆ ಖರ್ಚಿನಲ್ಲಿ ಅವರ ಹಣ್ಣು ಮತ್ತು ತರಕಾರಿ ಸಾಗಿಸುವುದಕ್ಕೆ ಅನುಕೂಲ ಮಾಡಲಿಕ್ಕೆ ಚಿಂತನೆಯನ್ನು ಮಾಡಿದ್ದೇವೆ.

**ತೋಟಗಾರಿಕೆಗೆ ಪ್ರೋತ್ಸಾಹ:** ತೋಟಗಾರಿಕೆ ಬೆಳೆಗಳಿಗೆ ಪ್ರೋತ್ಸಾಹ ನೀಡಲು ರಾಜ್ಯದಲ್ಲಿ 4 ಮೆಗಾ ಮಾರ್ಕೆಟ್‌ಗಳ ಸ್ಥಾಪನೆಗೆ ಖಾಸಗಿ ಸಹಭಾಗಿತ್ವದಲ್ಲಿ ಚಾಲನೆ ನೀಡುತ್ತೇವೆ. ಇಲ್ಲಿ ಹಣ್ಣು ಮತ್ತು ತರಕಾರಿ ಕೇಂದ್ರಗಳ ವರ್ಗೀಕರಣ, ಶೀತಲೀಕರಣ ಮತ್ತು ಪ್ಯಾಕಿಂಗ್‌ಗೆ ಸಹ ವ್ಯವಸ್ಥೆ ಮಾಡುತ್ತೇವೆ. ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ ಒಂದು ವಿಶೇಷ

ತೋಟಗಾರಿಕಾ ರಫ್ತು ವಲಯವನ್ನು ಸ್ಥಾಪನೆ ಮಾಡುವುದಕ್ಕೆ ನಾವು ತೀರ್ಮಾನವನ್ನು ಮಾಡಿದ್ದೇವೆ.

**ಪಶುಸಂಗೋಪನೆಗೆ ಉತ್ತೇಜನ: ಸಂಚಾರಿ ಚಿಕಿತ್ಸಾಲಯ:** ಸಂಚಾರಿ ಚಿಕಿತ್ಸಾಲಯಗಳ ಅಗತ್ಯವಿದೆ. ಕುರಿ, ಹಂದಿ ಮತ್ತಿತರ ಪಶು ಸಾಕಾಣಿಕೆಗೆ ವಿಶೇಷ ಉತ್ತೇಜನ ನೀಡುತ್ತೇವೆ. ಅವುಗಳ ಆರೋಗ್ಯ ರಕ್ಷಣೆಗಾಗಿ ಚಿಕಿತ್ಸೆಗೆ ಅಗತ್ಯವಿರುವಂಥ ಸಂಚಾರಿ ಚಿಕಿತ್ಸಾಲಯಗಳನ್ನು ಪ್ರಾರಂಭಿಸುತ್ತೇವೆ. ಪಶುಚಿಕಿತ್ಸೆಗೆ ಸಹಾಯವಾಣಿಯನ್ನೂ ಸಹಾ ಸ್ಥಾಪಿಸುತ್ತೇವೆ.

**ಅಮೃತಮಹಲ್ ಕಾವಲ್ ಅಭಿವೃದ್ಧಿ:** ಬಹಳ ಪ್ರಮುಖವಾದ ಇನ್ನೊಂದು ತೀರ್ಮಾನವನ್ನು ನಾವು ತೆಗೆದುಕೊಂಡಿರುವುದೇನೆಂದರೆ, ಅಮೃತಮಹಲ್ ಕಾವಲ್ ಅಭಿವೃದ್ಧಿ ಚಿಕ್ಕಮಗಳೂರು ಜಿಲ್ಲೆಯ ಅಮೃತಮಹಲ್ ಕಾವಲ್‌ನ ಒತ್ತುವರಿ ತೆಗೆದುಹಾಕಿ ಅಭಿವೃದ್ಧಿಪಡಿಸುವ ಕಾರ್ಯ ಪ್ರಾರಂಭವಾಗಿದೆ. ಈ ಕಾವಲಿನ ಸಂರಕ್ಷಣೆ ಮತ್ತು ಪಶುತಳಿಗಳ ಅಭಿವೃದ್ಧಿ ಸಂಶೋಧನೆಗೆ ಪೂರಕವಾಗಿ ಅಲ್ಲಿ ಹೊಸ ಪಶುವೈದ್ಯಕೀಯ ಕಾಲೇಜ್ ಪ್ರಾರಂಭ ಮಾಡುತ್ತೇವೆ. ಬಹಳ ವಿಸ್ತಾರವಾದ ಭೂಮಿ ಇದೆ. ಅವರ ಲಾಭವಾಗುತ್ತದೆ. ಇದರಿಂದ ಭವಿಷ್ಯದಲ್ಲಿ ಪಶುವೈದ್ಯರ ಕೊರತೆ ನೀಗಿಸಲು ಮತ್ತು ಪಶುಸಂಗೋಪನೆಗೆ ಹೆಚ್ಚು ಉತ್ತೇಜನ ಕೊಡುವಂತಾಗುತ್ತದೆ ಎಂದು ಹೇಳಿ ತೀರ್ಮಾನ ತೆಗೆದುಕೊಂಡಿದ್ದೇವೆ.

**ಮಾರಾಟ ವ್ಯವಸ್ಥೆ:** ಕುರಿ ಮಾಂಸ, ಉಣ್ಣೆ, ಮೀನು ಮತ್ತಿತರ ಪಶು ಉತ್ಪನ್ನಗಳ ಮಾರಾಟಕ್ಕೆ ಸೂಕ್ತ ವ್ಯವಸ್ಥೆ ಮಾಡುವತ್ತಾ ಗಮನ ಕೊಡುತ್ತೇವೆ. ಮಾನ್ಯ ಸದಸ್ಯರು ಇಲ್ಲಿ ಸಲಹೆ ಕೊಟ್ಟರು, ಸಜೀವವಾಗಿ ದೇಹ ತೂಕ ಮಾಡಲು ಡಿಜಿಟಲ್ ತೂಕ ಯಂತ್ರಗಳ ವ್ಯವಸ್ಥೆ ಮಾಡುತ್ತೇವೆ. ಇದಕ್ಕಾಗಿ ವೈಜ್ಞಾನಿಕ ಮಾರುಕಟ್ಟೆಗಳ ಸ್ಥಾಪನೆ ಸಹ ಮಾಡುತ್ತೇವೆ.

**ಕೋಳಿ ಸಾಕಾಣಿಕೆಗೆ ಪ್ರೋತ್ಸಾಹ:** ಕೋಳಿ ಸಾಕಾಣಿಕೆಗೆ ನೀಡಲಾಗುತ್ತಿದ್ದ ಸಹಾಯಧನವನ್ನು ದುರುಪಯೋಗವಾಗುತ್ತಿತ್ತೆಂಬ ಕಾರಣದಿಂದ ನಿಲ್ಲಿಸಲಾಗಿದೆ.

ಬಹಳ ದುರುಪಯೋಗವಾಗದ ರೀತಿಯಲ್ಲಿ ಮತ್ತೊಮ್ಮೆ ಯೋಜನೆಯನ್ನು ತಯಾರಿಸಿ ಹೊಸ ಪೌಲ್ಟ್ರಿ ಘಟಕಗಳಿಗೆ 25 ಪ್ರತಿಶತ ಸಹಾಯಧನ ನೀಡುತ್ತೇವೆ.

**(ಈ ಹಂತದಲ್ಲಿ ಶ್ರೀ ಎನ್. ಯೋಗೀಶ್ ಭಟ್**
**ಅವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)**

**ಕುಡಿಯುವ ನೀರು:** ರಾಜ್ಯದಲ್ಲಿ ಸುಮಾರು 20 ಸಾವಿರ ಜನವಸತಿಗಳಲ್ಲಿ ಕುಡಿಯುವ ನೀರಿನ ಗುಣಮಟ್ಟ ಉತ್ತಮವಾಗಿಲ್ಲದಿರುವುದರಿಂದ ನದಿ ಮತ್ತು ಜಲಾಶಯಗಳ ಮುಖಾಂತರ ಶುದ್ಧ ಕುಡಿಯುವ ನೀರಿನ ವ್ಯವಸ್ಥೆಗೆ ವಿಶೇಷ ಯೋಜನೆಯನ್ನು ರೂಪಿಸುತ್ತೇವೆ. ಈಗಾಗಲೇ ಸುಮಾರು ರೂ. 850 ಕೋಟಿ ವೆಚ್ಚದ ಬಹುಗ್ರಾಮ ವಿಶೇಷ ಯೋಜನೆಗಳನ್ನು ತಯಾರಿಸಿ ಭಾರತ ಸರ್ಕಾರಕ್ಕೆ ಕಳುಹಿಸಿದ್ದೇವೆ. ವಿಶ್ವಬ್ಯಾಂಕ್ ನೆರವಿನ ಜಲನಿರ್ಮಲ ಯೋಜನೆಯ ವಿಸ್ತರಣೆಗೂ ಸಹ ವಿಶೇಷ ನೆರವನ್ನು ಕೋರಲಾಗಿದೆ. ಕುಡಿಯುವ ನೀರಿನ ಯೋಜನೆಗಳ ಸಮರ್ಪಕ ನಿರ್ವಹಣೆಗೆ ಹೊರ ಗುತ್ತಿಗೆ ವ್ಯವಸ್ಥೆ ಜಾರಿಗೆ ತರುತ್ತೇವೆ.

**ನಿರ್ಮಲ ಗ್ರಾಮ:** ನಮ್ಮ ಗ್ರಾಮೀಣ ಪ್ರದೇಶದಲ್ಲಿ ನೈರ್ಮಲ್ಯ ಮತ್ತು ಶೌಚಾಲಯದ ವ್ಯವಸ್ಥೆ ತೃಪ್ತಿಕರವಾಗಿಲ್ಲ. ಮುಂದಿನ ಮೂರು ವರ್ಷಗಳಲ್ಲಿ ಸಂಪೂರ್ಣ ಸ್ವಚ್ಛತಾ ಆಂದೋಲನವನ್ನು ಯಶಸ್ವಿಗೊಳಿಸಿ ಆ ಮೂಲಕ ಎಲ್ಲಾ ಹಳ್ಳಿಗಳನ್ನು ನಿರ್ಮಲ ಗ್ರಾಮಗಳನ್ನಾಗಿ ಪರಿವರ್ತಿಸಲು ಪೂರಕವಾಗಿ ಈಗಿರುವ ಸಹಾಯಧನವನ್ನು ರೂ. 2500 ರಿಂದ ರೂ. 3000ಕ್ಕೆ ಹೆಚ್ಚಿಸಲಾಗುವುದು. ಹಣಕಾಸಿನ ಇತಿಮಿತಿಯೊಳಗೆ ಹೆಚ್ಚಿಸಬೇಕೆಂದು ಮಾನ್ಯ ಬಾಲಕೃಷ್ಣನವರು ಸಲಹೆಯನ್ನು ಕೊಟ್ಟಿದ್ದರು.

**ಆರೋಗ್ಯ ಭಾಗ್ಯ: ಆರೋಗ್ಯ ವಿಮೆ:** ನಮ್ಮ ಆರೋಗ್ಯ ಸಚಿವರ ವಿಶೇಷ ಪರಿಶ್ರಮದಿಂದ ಸುವರ್ಣ ಆರೋಗ್ಯ ಸುರಕ್ಷಾ ಯೋಜನೆ ಮೂಲಕ ಈಗ ಗುಲ್ಬರ್ಗಾ ವಿಭಾಗದ ಎಲ್ಲಾ 16 ಲಕ್ಷ ಕುಟುಂಬಗಳನ್ನು ಆರೋಗ್ಯ ವಿಮಾ ವ್ಯಾಪ್ತಿಗೆ ನಾವು ತಂದಿದ್ದೇವೆ. ಈ ಯೋಜನೆಯನ್ನು ಮುಂದಿನ ವರ್ಷ ರಾಜ್ಯದಾದ್ಯಂತ ಜಾರಿಗೆ ತರಬೇಕೆನ್ನುವ ತೀರ್ಮಾನವನ್ನು ನಾವು ಮಾಡಿದ್ದೇವೆ.

**ಆರೋಗ್ಯ ಕವಚ (108):** ತುರ್ತು ಆರೋಗ್ಯ ಸೇವೆ ನೀಡುವ ದಿಸೆಯಲ್ಲಿ ಜಾರಿಗೆ ತಂದ ಆರೋಗ್ಯ ಕವಚವು ಯಾರು ಏನೇ ಟೀಕೆ ಮಾಡಲಿ ಬಹಳ ಯಶಸ್ವಿಯಾಗಿ ನಡೆಯುತ್ತಿದೆ. ಇದರ ವ್ಯಾಪ್ತಿಯನ್ನು ಮುಂದಿನ ಒಂದು ವರ್ಷದಲ್ಲಿ ಎಲ್ಲಾ ತಾಲ್ಲೂಕುಗಳಿಗೂ ವಿಸ್ತರಿಸಬೇಕೆಂದು ತೀರ್ಮಾನವನ್ನು ಮಾಡಿದ್ದೇವೆ.

**ನರ್ಸಿಂಗ್ ವಿದ್ಯಾರ್ಥಿನಿಯರಿಗೆ ವಿಶೇಷ ಪ್ರೋತ್ಸಾಹ:** ಕೇರಳದಿಂದ ಇಲ್ಲಿಗೆ ಹೆಣ್ಣುಮಕ್ಕಳು ಬರುತ್ತಾರೆ. ನರ್ಸಿಂಗ್ ಮಹತ್ವ ಗೊತ್ತು, ಸೇವಾ ಮನೋಭಾವನೆ ಅವರಲ್ಲಿದೆ. ಇಷ್ಟು ದೊಡ್ಡಪ್ರಮಾಣದಲ್ಲಿ ಸಂಬಳ ಸಿಗುತ್ತದೆ. ಅನುಕೂಲ ಇದೆ. ಆದರೆ, ನಮ್ಮ ಮಕ್ಕಳು ಇದಕ್ಕೆ ಮುಂದೆ ಬರುತ್ತಿಲ್ಲ. ಅದಕ್ಕೋಸ್ಕರ ಈ ನರ್ಸಿಂಗ್ ಕಾಲೇಜು ವಿಷಯದಲ್ಲಿ ಬೆಂಗಳೂರನ್ನು ಬಿಟ್ಟು, ಬೆಂಗಳೂರಿಗೆ ಅದರದೇ ಆದಂತಹ ವಿಶೇಷವಾದ ಕಾರಣಗಳಿವೆ, ಯಾವ ಗ್ರಾಮೀಣ ವಿದ್ಯಾರ್ಥಿನಿಯರು ನರ್ಸಿಂಗ್ ಕಾಲೇಜ್ ಸೇರುವುದಕ್ಕೆ ಮುಂದೆ ಬರುತ್ತಾರೆ, ಅವರಿಗೆ ಪ್ರೋತ್ಸಾಹ ನೀಡುವುದಕ್ಕೋಸ್ಕರ, 10,000 ರೂಪಾಯಿ ಸಹಾಯಧನವನ್ನು ಅವರು ನರ್ಸಿಂಗ್ ಕಾಲೇಜ್‌ಗೆ ಪ್ರವೇಶ ಪಡೆಯುವ ಸಂದರ್ಭದಲ್ಲಿ ನೀಡಬೇಕೆಂದು ನಾವು ತೀರ್ಮಾನ ಮಾಡಿದ್ದೇವೆ. ಬೆಂಗಳೂರು ಬಿಟ್ಟು ಹೊರಗಡೆ ಈ ಯೋಜನೆಯನ್ನು ಮಾಡುತ್ತೇವೆ.

**ಶಿಕ್ಷಣ ಮತ್ತು ಕೌಶಲ್ಯ ಅಭಿವೃದ್ಧಿ: ಗ್ರಂಥಾಲಯ ಬಲಪಡಿಸುವುದು:** ಈಗ ಗ್ರಾಮೀಣ ಶಾಲೆಗಳಲ್ಲಿರುವ ಗ್ರಂಥಾಲಯಗಳನ್ನು ಬಲಪಡಿಸಿ ಗ್ರಾಮಸ್ಥರಿಗೂ ಕೂಡ ಶಾಲಾ ವೇಳೆ ನಂತರ ಇವುಗಳ ಉಪಯೋಗ ದಕ್ಕುವಂತೆ ವಿಶೇಷ ಕಾರ್ಯಕ್ರಮವನ್ನು ರೂಪಿಸುತ್ತೇವೆ.

**ಕೌಶಲ್ಯ ಅಭಿವೃದ್ಧಿ:** ಕೌಶಲ್ಯ ಅಭಿವೃದ್ಧಿ ನಿಗಮದ ಮುಖಾಂತರ ಗ್ರಾಮೀಣ ಯುವಕ ಯುವತಿಯರಿಗೆ ತರಬೇತಿ ನೀಡಿ ಅವರಿಗೆ ಕೈಗಾರಿಕೆ ಮತ್ತು ಸೇವಾ ಕ್ಷೇತ್ರಗಳಲ್ಲಿ ಉದ್ಯೋಗ ಒದಗಿಸುವ ಕಾರ್ಯಕ್ರಮವನ್ನು ಇನ್ನೂ ವ್ಯಾಪಕವಾಗಿ ವಿಸ್ತರಿಸುತ್ತೇವೆ.

**ಉನ್ನತ ಶಿಕ್ಷಣ:** ಅತ್ಯಂತ ಹಿಂದುಳಿದ ತಾಲ್ಲೂಕುಗಳಲ್ಲಿ ಉನ್ನತ ಶಿಕ್ಷಣದ ವ್ಯಾಪ್ತಿಗೆ ಹೆಚ್ಚು ವಿದ್ಯಾರ್ಥಿಗಳನ್ನು ತರಲು ವಿಶೇಷ ಯೋಜನೆಗಳನ್ನು ರೂಪಿಸುತ್ತಿದ್ದೇವೆ.

**ನೇಕಾರರಿಗೆ ನೆರವು:** ನೇಕಾರರಿಗೆ ಮೂರು ಪ್ರತಿಶತ ಬಡ್ಡಿ ದರದಲ್ಲಿ ಸಾಲದ ವ್ಯವಸ್ಥೆಯನ್ನು ಮಾಡಿದ್ದೇವೆ. ಪ್ರತಿ ಕೈಮಗ್ಗ ಅಭಿವೃದ್ಧಿ ನಿಗಮದ ಕೇಂದ್ರ ಸ್ಥಾನವನ್ನು ಸಂಪೂರ್ಣವಾಗಿ ಹುಬ್ಬಳ್ಳಿಗೆ ಸ್ಥಳಾಂತರಿಸಿ ಅವರ ಕಾರ್ಯಚಟುವಟಿಕೆಗಳು ಅಲ್ಲೇ ನಡೆಯುವಂತೆ ತೀರ್ಮಾನ ಮಾಡಿದ್ದೇವೆ. ಎಲ್ಲರೂ ಬೆಂಗಳೂರಿಗೇ ಬರುತ್ತಾರೆ. ಹೊರಗಡೆ ಇರುವುದಕ್ಕೆ ಇಷ್ಟಪಡುವುದಿಲ್ಲ. ಅದಕ್ಕೋಸ್ಕರ ಹುಬ್ಬಳ್ಳಿಗೆ ಸ್ಥಳಾಂತರಿಸಿ ಅದರ ಕಾರ್ಯಚಟುವಟಿಕೆಗಳ ವಿಸ್ತಾರಕ್ಕೆ ಹೆಚ್ಚಿನ ವಹಿವಾಟು ಬಂಡವಾಳ ನೀಡಲಾಗುವುದು, ಕೈಮಗ್ಗ ನೇಕಾರರಿಗೆ ಕನಿಷ್ಠ ದಿನಗೂಲಿ ಸಿಗುವಂಥ ವ್ಯವಸ್ಥೆಯನ್ನು ಮಾಡುತ್ತೇವೆ. ಐದು ಸಾವಿರ ಮಗ್ಗದ ಕೋಣೆಯುಳ್ಳ ತಲಾ ರೂ. 60,000 ವೆಚ್ಚದ ಮನೆಗಳ ನಿರ್ಮಾಣಕ್ಕೆ ಶೀಘ್ರದಲ್ಲೇ ಚಾಲನೆ ಕೊಡುತ್ತೇವೆ.

**1.00 P.M.**

**ನೀರಾವರಿ: ನೀರಾವರಿಗೆ ಹೆಚ್ಚು ಸಂಪನ್ಮೂಲ:** ನೀರಾವರಿ ಯೋಜನೆಗೆ ಹೆಚ್ಚು ಸಂಪನ್ಮೂಲ ಒದಗಿಸುವುದಕ್ಕೆ ರಾಜ್ಯದಲ್ಲಿ ಪ್ರಗತಿಯಲ್ಲಿರುವ ಮತ್ತು ಉದ್ದೇಶಿತ ಯೋಜನೆಗಳನ್ನು ಪೂರ್ಣಗೊಳಿಸುವುದಕ್ಕೆ ಸುಮಾರು 45,000 ಕೋಟಿ ರೂಪಾಯಿಗಳ ಅಗತ್ಯವಿದೆಯೆಂದು ಅಂದಾಜು ಮಾಡಿದ್ದೇವೆ. ಕೇಂದ್ರ ಸರ್ಕಾರದ ಎ.ಐ.ಡಿ.ಪಿ. ಯೋಜನೆಯಡಿ ಇನ್ನೂ ಹೆಚ್ಚು ಹಣ ತರಬೇಕಾಗಿದೆ. ಪ್ರತಿಪಕ್ಷದವರು ನಾವೆಲ್ಲರೂ ಒಟ್ಟಾಗಿ ಹೋಗಿ ನೀರಾವರಿ ನಿಗಮಗಳ ಸಂಪನ್ಮೂಲ ಕ್ರೋಢೀಕರಿಸುವುದಕ್ಕೆ ಮತ್ತು ಕೇಂದ್ರದಿಂದ ಹೆಚ್ಚು ಹಣವನ್ನು ಪಡೆಯುವುದಕ್ಕೆ ಪ್ರಯತ್ನ ಮಾಡೋಣ.

**ಅಚ್ಚುಕಟ್ಟು ಪ್ರದೇಶಗಳ ಅಭಿವೃದ್ಧಿ:** ಈಗಾಗಲೇ ಸೃಷ್ಟಿಸಿರುವ ನೀರಾವರಿ ಸಾಮರ್ಥ್ಯವನ್ನು ಸಂಪೂರ್ಣವಾಗಿ ಬಳಸುವುದಕ್ಕೆ ಮಾನ್ಯ ಬಸವರಾಜ್ ಬೊಮ್ಮಾಯಿಯವರು ಇಲ್ಲೇ ಇದ್ದಾರೆ. ರಾಷ್ಟ್ರೀಯ ಗ್ರಾಮೀಣ ಉದ್ಯೋಗ

ಖಾತರಿ ಯೋಜನೆಯಡಿ ನಾಲಾ ಮತ್ತು ಅಚ್ಚುಕಟ್ಟು ಅಭಿವೃದ್ಧಿಗಾಗಿ ಸುಮಾರು 1000 ಕೋಟಿ ರೂಪಾಯಿ ನೀವು ಖರ್ಚು ಮಾಡಬೇಕು.

ಏಕೆಂದರೆ, ಶೇಕಡ 40ರಷ್ಟು ಹಣವನ್ನು ಮೆಷಿನರಿಗಳಿಗೆ ಉಪಯೋಗಿಸಬಹುದು. ಎಲ್ಲಾ ಜಲಾಶಯಗಳಿಗೆ ಸಂಬಂಧಿಸಿದಂತೆ ಕಾಲುವೆಗಳನ್ನು ನಿರ್ಮಿಸುವುದಕ್ಕೆ ಇದೊಂದು ಸುವರ್ಣಾವಕಾಶ. ಬೇರೆಯವರು ಮಾಡುತ್ತಿದ್ದಾರೆ. ನಿಮ್ಮದು Rs. 1,000 crores plan ಆಗಬೇಕು. ಅಲ್ಲಿಗೆ ನೀವು ಮುಟ್ಟಬೇಕು. ನಿಮ್ಮ ಅಧಿಕಾರಿಗಳಿಗೆ ಅದನ್ನೇ ಕೊಡಿ. ಈಗಾಗಲೇ ನೀವು ಪ್ರಯತ್ನ ಮಾಡುತ್ತಿದ್ದೀರಿ. ಚೆನ್ನಾಗಿ ಆಗುತ್ತಿದೆ.

**ಕೆರೆಗಳಿಗೆ ನೀರು:** ಮಳೆಗಾಲದಲ್ಲಿ ಜಲಾಶಯಗಳು ತುಂಬಿ ನೀರು ಸಮುದ್ರಕ್ಕೆ ವ್ಯರ್ಥವಾಗಿ ಹರಿದು ಹೋಗುತ್ತಿದೆ. ಈ ನೀರು ಕೆರೆಗಳಿಗೆ ತುಂಬುವುದಕ್ಕೆ ಎಲ್ಲೆಲ್ಲಿ ಅವಕಾಶಗಳಿವೆ ಎಂಬುದನ್ನು ಎಲ್ಲಾ ಮಾನ್ಯ ಶಾಸಕರುಗಳು ಹೇಳಬೇಕು. ದಯಮಾಡಿ ಹಣವನ್ನು ಉಪಯೋಗಿಸಿಕೊಂಡು ಕೆರೆಗಳಲ್ಲಿ ನೀರು ತುಂಬಿಸುವ ಕೆಲಸ ಮಾಡಿದರೆ ಅಂತರ್ಜಲ ಹೆಚ್ಚುತ್ತದೆ. ಅಂತರ್ಜಲ ಬಹಳ ಕೆಳಮಟ್ಟಕ್ಕೆ ಇಳಿದಿದೆ, ನಾವು ಬದುಕುವುದಕ್ಕಾಗುವುದಿಲ್ಲ ಎನ್ನುವ ಪರಿಸ್ಥಿತಿ ಏನಿದೆ, ಆಗ ಅದನ್ನು ಸರಿಪಡಿಸಬಹುದು. ಆ ಕಡೆ ಒತ್ತು ನೀಡಬೇಕು.

**ಊರಿಗೊಂದು ಕೆರೆ, ಊರಿಗೊಂದು ವನ:** ಇದರ ಬಗ್ಗೆ ಡಾ: ಎ.ಪಿ.ಜೆ. ಅಬ್ದುಲ್ ಕಲಾಂಜಿಯವರು ಮತ್ತು ಅನೇಕ ತಜ್ಞರ ಅಭಿಪ್ರಾಯಗಳಿವೆ. ಒಂದು ಊರಿಗೆ ಹೋದ ತಕ್ಷಣ ನಮ್ಮ ಶಾಸಕರು ಜನರಿಗೆ ತೋರಿಸುವಂತಿರಬೇಕು. ಅಲ್ಲೊಂದು ಅಭಿವೃದ್ಧಿ ಹೊಂದಿದ ಕೆರೆ ಮತ್ತು ಉದ್ಯಾನ ಸಾಯಂಕಾಲ ಬಂದರೆ ಅಲ್ಲಿ ಜನರು ಸೇರುವಂತಿರಬೇಕು. ವಿಶಾಲವಾದ ಜಾಗಗಳಿವೆ. ಉದ್ಯಾನವೆಂದು ಹೇಳುತ್ತೇವೆ. ಆದರೆ, ಅಲ್ಲಿ ಇಸ್ಪೀಟು ಆಡಿಕೊಂಡು ಕುಳಿತಿರುತ್ತಾರೆ, ನಾಯಿ–ನರಿಗಳು ನಿಂತಿರುತ್ತವೆ. ಅದನ್ನು ಅಭಿವೃದ್ಧಿಪಡಿಸಲು ಶಾಸಕರು ತಮ್ಮ ನಿಧಿಯಿಂದ 2–3 ಲಕ್ಷ ರೂ.ಗಳ ಅನುದಾನ ನೀಡಿದಲ್ಲಿ ಬೇಲಿ ಹಾಕಿಸಿ ಗಿಡಗಳನ್ನು ಬೆಳೆಸಬಹುದು. ಈ ದೃಷ್ಟಿಕೋನ ನಮ್ಮ ಶಾಸಕರುಗಳಿಗೆ ಬಂದರೆ

ಅನುಕೂಲವಾಗುತ್ತದೆ. ಈ ನಿಟ್ಟಿನಲ್ಲಿ ಹೆಚ್ಚಿನ ಅನುದಾನ ಕೊಡುವುದಕ್ಕೆ ನಾನು ಪ್ರಯತ್ನಿಸುತ್ತೇನೆ.

**ಗ್ರಾಮಗಳಿಗೆ ಸಂಪರ್ಕಜಾಲ:** ಗ್ರಾಮೀಣ ಪ್ರದೇಶಗಳಿಗೂ ಮಾಹಿತಿ ಮತ್ತು ತಂತ್ರಜ್ಞಾನದ ಲಾಭ ಮುಟ್ಟಲು ಬ್ರಾಂಡ್ ಬ್ಯಾಂಡ್ ವಿಸ್ತರಣೆಗೆ ಪ್ರೋತ್ಸಾಹ ನೀಡುತ್ತೇವೆ. ಈ ಮೂಲಕ ಗ್ರಾಮೀಣ ಬಿ.ಪಿ.ಓ. ಸ್ಥಾಪನೆಗೆ ಉತ್ತೇಜನ ನೀಡುತ್ತೇವೆ.

**ವ್ಯಕ್ತಿ ವಿಕಸನಕ್ಕೆ ಉತ್ತೇಜನ:** ಇನ್ನು ವ್ಯಕ್ತಿ ವಿಕಸನಕ್ಕೆ ಉತ್ತೇಜನ ನೀಡುವುದು. ನಾನು ನಿನ್ನೆ ತಾನೇ Art of Living ಸಂಸ್ಥೆಯ ಶ್ರೀ ರವಿಶಂಕರ್ ಗುರೂಜಿಯವರೊಂದಿಗೆ ಸುಮಾರು ಎರಡು ಗಂಟೆಗಳ ಕಾಲ ಮಾತನಾಡಿ ಬಂದಿದ್ದೇನೆ. ನಮ್ಮ ಗ್ರಾಮೀಣ ಜನರು ಸ್ವಾವಲಂಬನೆ, ಸಾಮೂಹಿಕ ಜವಾಬ್ದಾರಿ, ನೈತಿಕತೆ, ಸಾಮಾಜಿಕ ಬದ್ಧತೆ ಮತ್ತು ಸ್ವಾಭಿಮಾನದ ಬಾಳನ್ನು ಬಾಳಲು ನಾವು ಕಲಿಸಬೇಕಾಗುತ್ತದೆ. ಅದಕ್ಕೋಸ್ಕರ Art of Living ಸಂಸ್ಥೆಯು ಈಗಾಗಲೇ ರಾಯಚೂರು, ಬೀದರ್, ಕೊಪ್ಪಳ, ಚಿಕ್ಕಮಗಳೂರು ಇತ್ಯಾದಿ ಜಿಲ್ಲೆಗಳಲ್ಲಿ Youth Leadership Training Programme ಮಾಡುತ್ತಿದ್ದಾರೆ. ಅದರ ಮುಖಾಂತರ ಗ್ರಾಮೀಣ ಯುವಕರಲ್ಲಿ ಅರಿವು ಮೂಡಿಸುವ ಮತ್ತು ಅವರನ್ನು ತಮ್ಮ ಗ್ರಾಮಗಳ ಅಭಿವೃದ್ಧಿಗೆ ಸಿದ್ಧಗೊಳಿಸುವ ಪ್ರಯತ್ನ ನಡೆಯುತ್ತಿದೆ. ಈ ಸಂಸ್ಥೆಯ ಸಹಭಾಗಿತ್ವದಲ್ಲಿ ರಾಜ್ಯದ ವಿವಿಧೆಡೆಗಳಲ್ಲಿ ವ್ಯಕ್ತಿ ವಿಕಸನ ಕಾರ್ಯಕ್ರಮ ಹಮ್ಮಿಕೊಳ್ಳುತ್ತೇವೆ. ಇದಕ್ಕಾಗಿ ವಿಶೇಷ ಅನುದಾನ ನೀಡುವವರಿದ್ದೇವೆ.

**ಕೃಷಿ ಇಲಾಖೆಯ ಬಲವರ್ಧನೆ:** ಈ ಹಿಂದೆ ಕೃಷಿ ಇಲಾಖೆಯಲ್ಲಿ ಕೃಷಿ ಸಹಾಯಕ (ಗ್ರಾಮ ಸೇವಕ) ಹುದ್ದೆ ಇತ್ತು. ಈ ಅಧಿಕಾರಿ ಗ್ರಾಮದಲ್ಲಿಯೇ ವಾಸವಾಗಿ ರೈತರೊಂದಿಗೆ ಉತ್ತಮ ಸಂಪರ್ಕ ಹೊಂದಿ ಸರ್ಕಾರದ ವಿವಿಧ ಯೋಜನೆಗಳ ಬಗ್ಗೆ ರೈತರಿಗೆ ಮಾಹಿತಿಗಳನ್ನು ನೀಡಬೇಕು. ಆದರೆ, ಹಲವು ವರ್ಷಗಳಿಂದ ಈ ಹುದ್ದೆಗಳ ನೇಮಕಾತಿಯಾಗಿಲ್ಲ. ಮತ್ತೊಂದು ಪ್ರಮುಖ ನಿರ್ಧಾರವೇನೆಂದರೆ, ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಅಥವಾ ರೈತರ ಸಂಪರ್ಕ ಕೇಂದ್ರದ ಮಟ್ಟದಲ್ಲಿ ಕೃಷಿ ಸಹಾಯಕ ಹುದ್ದೆಯ ಅಗತ್ಯವಿದೆ. ಇದಕ್ಕಾಗಿ ಕೃಷಿ

ವಿಶ್ವವಿದ್ಯಾನಿಲಯಗಳ ಮಾರ್ಗದರ್ಶನದಲ್ಲಿ ಗ್ರಾಮೀಣ ಯುವಕ-ಯುವತಿಯರಿಗೆ ಪಿಯುಸಿ ನಂತರದ ಎರಡು ವರ್ಷದ 'ಕೃಷಿ ಡಿಪ್ಲೊಮಾ' ಕೋರ್ಸ್ ಪ್ರಾರಂಭಿಸಲಾಗುವುದು. ಈ ಕೋರ್ಸ್ ಮಾಡಿದರೆ ತನ್ನ ಹಳ್ಳಿಯ ಕೃಷಿಕರಿಗೆ ಮಾರ್ಗದರ್ಶನ ಮಾಡುತ್ತಾರೆ. ಯಾರಾದರೂ ಉತ್ತಮ ಬೆಳೆ ಬೆಳೆದಲ್ಲಿ, ಉಳಿದವರು ಅದನ್ನು ನೋಡುವುದಕ್ಕೆ ಅನುಕೂಲವಾಗುತ್ತದೆ. ಆ ಕೆಲಸವನ್ನು ಮುಂದಿನ ವರ್ಷದಿಂದ ನಾನು ನಿಶ್ಚಿತವಾಗಿಯೂ ಪ್ರಾರಂಭಿಸುತ್ತೇನೆ.

**ಪಂಚಾಯತ್ ರಾಜ್ ಬಲವರ್ಧನೆ:** ಪಂಚಾಯತ್ ರಾಜ್ ಸಂಸ್ಥೆಗಳ ಆಡಳಿತ ಬಲವರ್ಧನೆ ಜೊತೆಗೆ ಈ ಸಂಸ್ಥೆಗಳು ಸಮರ್ಪಕವಾಗಿ, ಪ್ರಾಮಾಣಿಕವಾಗಿ, ಪಾರದರ್ಶಕತೆಯಿಂದ ಕೆಲಸ ಮಾಡುವಂತೆ ನೋಡಿಕೊಳ್ಳಬೇಕಾಗಿರುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಈ ನಿಟ್ಟಿನಲ್ಲಿ ಪಾರದರ್ಶಕತೆ ಮತ್ತು ಬದ್ಧತೆ ಹೆಚ್ಚಿಸುವ ದೃಷ್ಟಿಯಿಂದ **'ಓಂಬುಡ್ಸ್‌ಮನ್'** ವ್ಯವಸ್ಥೆಯನ್ನು ಶೀಘ್ರವಾಗಿ ಜಾರಿಗೊಳಿಸುತ್ತೇವೆ. ಜೊತೆಗೆ, ಈ ಸಂಸ್ಥೆಗಳು ಕಾಮಗಾರಿಗಳಲ್ಲಿ ಗುಣಮಟ್ಟ ಕಾಯ್ದುಕೊಳ್ಳುವುದಕ್ಕೆ ಸಹಾಯವಾಗುವಂತೆ ಜಿಲ್ಲಾ ಮಟ್ಟದಲ್ಲಿ ತಜ್ಞರ ಕಾರ್ಯಪಡೆ ರಚಿಸುತ್ತೇವೆ. ಈಗಾಗಲೇ ರಾಜ್ಯಮಟ್ಟದಲ್ಲಿ ಕಾಮಗಾರಿಗಳಲ್ಲಿ ಗುಣಮಟ್ಟಗಳ ಕಾರ್ಯಪಡೆಯನ್ನು ರಚಿಸಿದ್ದೇವೆ. ಅದೇ ರೀತಿ ಜಿಲ್ಲಾ ಮಟ್ಟದಲ್ಲೂ ಸದರಿ ಕಾರ್ಯಪಡೆಯನ್ನು ರಚಿಸುತ್ತೇವೆ. ಈ ಕಾರ್ಯಪಡೆಯು ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲಿಸಿ, confidential report ನೀಡಿದಲ್ಲಿ ಆಗ ನಾವು ಬಿಗಿಯಾದ ಕ್ರಮ ಕೈಗೊಳ್ಳಲು ಅನುಕೂಲವಾಗುತ್ತದೆಂಬ ದೃಷ್ಟಿಯಿಂದ ಈ ರೀತಿ ಮಾಡುತ್ತಿದ್ದೇವೆ.

**ರಾಜ್ಯಮಟ್ಟದ ಉನ್ನತ ಮಟ್ಟದ ಸಮಿತಿ:** ಈ ಮೇಲಿನ ಕಾರ್ಯ ಯೋಜನೆಗಳನ್ನು ರೂಪಿಸಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಮತ್ತು ಪರಿಶೀಲಿಸಲು ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಒಂದು ಉನ್ನತ ಮಟ್ಟದ ಸಮಿತಿಯನ್ನು ರಚಿಸುತ್ತೇವೆ. ಇವತ್ತು ನಾವು ಏನೇನು ಭರವಸೆಗಳನ್ನು ನೀಡಿದ್ದೇವೆ. ಇದು ಪ್ರಾಮಿಸ್ ಆಗಬಾರದು. ಇಲ್ಲಿ ಏನೋ ಸುಮ್ಮನೆ ಪ್ರಚಾರಕ್ಕೆ, ಇಷ್ಟು ವರ್ಷ ನಡೆದುಕೊಂಡು ಬಂದಂತೆ ಜನರಿಗೆ ಇನ್ನೇನೋ ಮಾಡುವುದಾಗಬಾರದು. ಇದು ಆಗಬಾರದೆಂಬ ದೃಷ್ಟಿಯಿಂದ ಮುಖ್ಯಮಂತ್ರಿಗಳ

ಅಧ್ಯಕ್ಷತೆಯಲ್ಲಿಯೇ ಒಂದು ಉನ್ನತ ಮಟ್ಟದ ಸಮಿತಿ ರಚಿಸಿ, ಈ ಸಮಿತಿಗೆ ಸಂಬಂಧಪಟ್ಟ ಸಚಿವರು, ಅಧಿಕಾರಿಗಳು ಮತ್ತು ತಜ್ಞರನ್ನು ನೇಮಿಸಿ ಆ ಮೂಲಕ ಒಂದು ಹೊಸ ಬದಲಾವಣೆ ತರಬೇಕೆಂಬ ದಿಸೆಯಲ್ಲಿ ಮಾಡಿದ್ದೇವೆ.

ಮೇಲೆ ಪ್ರಸ್ತಾಪಿಸಿದ ಭವಿಷ್ಯದ ಹೆಜ್ಜೆಗಳನ್ನು ಕಾರ್ಯರೂಪಕ್ಕೆ ತರಲು ನಿಮ್ಮೆಲ್ಲರ ಸಹಕಾರ ನನಗೆ ಬೇಕು. ನಾನು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ರಾಜಕಾರಣ ಬೆಳೆಸಲು ನಾನು ಪ್ರಯತ್ನಿಸುವುದಿಲ್ಲ. ಈ ಮೂಲಕ ನಮ್ಮ ಗ್ರಾಮೀಣ ಚಿತ್ರಣ ಬದಲಾಗಬೇಕು. ಅಲ್ಲಿನ ಗುಣಮಟ್ಟ ಎತ್ತರಗೊಂಡು ಮಾನವ ಅಭಿವೃದ್ಧಿ ಸೂಚಿ ತ್ವರಿತವಾಗಿ ಹೆಚ್ಚಾಗುವುದಕ್ಕೆ ನಾವೆಲ್ಲರೂ ಪ್ರಾಮಾಣಿಕವಾಗಿ ಪ್ರಯತ್ನ ಮಾಡೋಣ.

ಕಳೆದ ಮೂರು ದಿವಸಗಳಿಂದ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬಗ್ಗೆ ನಡೆದ ಚರ್ಚೆಯಲ್ಲಿ ಭಾಗವಹಿಸಿ ಸಲಹೆ ನೀಡುವ ಮೂಲಕ ಎಲ್ಲರೂ ಎಲ್ಲಾ ರೀತಿಯ ಸಹಕಾರಗಳನ್ನು ನೀಡಿದ್ದಾರೆ. ಕೊನೆಯದಾಗಿ, ಒಂದೇ ಪ್ರಾರ್ಥನೆ. ಪ್ರಾರಂಭದ ದಿವಸಗಳಲ್ಲಿ ವಿಷಯ ಎಲ್ಲಿದೆ, ಚರ್ಚೆ ಎಲ್ಲಿದೆ ಎಂಬುದು ನಮ್ಮ ಕಣ್ಮುಂದೆ ಇತ್ತು. ಆದರೆ, ಚರ್ಚಿಸುವುದಕ್ಕೆ ಬಹಳ ಪೈಪೋಟಿ ಇತ್ತು. ರಾತ್ರಿ 9.30 ಗಂಟೆವರೆಗೂ ಚರ್ಚಿಸಿದ್ದೀರಿ. ಮುಂಬರುವ ಮಳೆಗಾಲದ ಅಧಿವೇಶನದಲ್ಲಿ ಒಂದೆರಡು ದಿವಸ ವಿದ್ಯುತ್ ಬಗ್ಗೆ, ನಿಮಗೆ ಏನೇನು ಕೊರತೆಗಳು ಕಾಣಿಸುತ್ತವೆ, ಏನೇನು ಸುಧಾರಣೆಗಳನ್ನು ತರಬಹುದೆಂಬುದರ ಕುರಿತು ಸಲಹೆಗಳನ್ನು ಕೊಡಿ. ಇದೇನೂ ಸರ್ವಾಧಿಕಾರಿ ವ್ಯವಸ್ಥೆಯಲ್ಲ, ಪ್ರಜಾಪ್ರಭುತ್ವ ವ್ಯವಸ್ಥೆ, ನಿಮ್ಮ ಭಾವನೆಗಳನ್ನು ಹಂಚಿಕೊಂಡರೆ ಒಂದೊಂದು ಕ್ಷೇತ್ರಗಳ ಬಗ್ಗೆಯೂ ಎರಡು ದಿವಸಗಳ ಕಾಲ ಚರ್ಚಿಸಿ ಕೆಲವು ಕ್ಷೇತ್ರಗಳಲ್ಲಾದರೂ ಸುಧಾರಣೆಗಳನ್ನು ಮಾಡಿ ಆಡಳಿತದಲ್ಲಿ ಸುಧಾರಣೆ ತರಬಹುದೆಂಬ ವಿಶ್ವಾಸ ನನಗಿದೆ.

ಮಾನ್ಯ ಸಭಾಧ್ಯಕ್ಷರೆ, ಈ ಸಂದರ್ಭದಲ್ಲಿ ನಮಗೆ ಎಲ್ಲಾ ರೀತಿಯ ಸಹಕಾರಗಳನ್ನು ಕೊಟ್ಟು, ಈ ರೀತಿಯ ಮುಕ್ತ ಚರ್ಚೆಗೆ ಅವಕಾಶ ಕಲ್ಪಿಸಿಕೊಟ್ಟು ಅಭಿಪ್ರಾಯಗಳನ್ನು ಪರಸ್ಪರ ಹಂಚಿಕೊಳ್ಳಲು ಅವಕಾಶ ಕಲ್ಪಿಸಿಕೊಟ್ಟ ಗೌರವಾನ್ವಿತ ಎಲ್ಲಾ ಮಾನ್ಯ ಸದಸ್ಯರುಗಳಿಗೂ ಅಭಿನಂದನೆಗಳನ್ನು ಸಲ್ಲಿಸುತ್ತಾ ಬರುವ

ದಿವಸಗಳಲ್ಲಿ ಚರ್ಚೆಯ ಗುಣಮಟ್ಟ ಹೆಚ್ಚಾಗುವುದಕ್ಕೆ ಏನೇನು ಪ್ರಯತ್ನಗಳಾಗಬೇಕೋ ಅದನ್ನು ಪ್ರತಿ ಪಕ್ಷ ನಾಯಕರ ಜೊತೆ ಕುಳಿತು ಚರ್ಚಿಸಿ ಅದನ್ನು ಕಾರ್ಯರೂಪಕ್ಕೆ ತರಲು ನನ್ನ ಶಕ್ತಿ ಮೀರಿ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆಂಬ ಭರವಸೆಯನ್ನು ಈ ಸಂದರ್ಭದಲ್ಲಿ ಕೊಟ್ಟು ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಸಿದ್ದರಾಮಯ್ಯ:** ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಮೂರು ದಿವಸಗಳ ಕಾಲ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ವಿಷಯಗಳಿಗೆ ಸೀಮಿತವಾಗಿ ಈ ಸದನದಲ್ಲಿ ಚರ್ಚಿಸುವುದಕ್ಕೆ ಬಹಳ ಕಳಕಳಿಯಿಂದ ನಮ್ಮೆಲ್ಲರ ಅಭಿಪ್ರಾಯ ಬೇಕೆಂದು ಈ ಸದನ ಕರೆದದ್ದು. ಪಾಪ! ಅವರು ಪ್ರಾಸ್ತಾವಿಕ ಮಾತುಗಳನ್ನು ಪ್ರಾರಂಭಿಸುವ ರೈತರು, ಬಡವರು, ಗ್ರಾಮೀಣ ಬದುಕು, ಇದನ್ನು ನೆನೆಸಿಕೊಂಡರೆನೇ ಅಳು ಬರುತ್ತದೆ ಎನ್ನುವ ರೀತಿಯಲ್ಲಿ ಮಾತನಾಡಿದರು. ನೆನೆಸಿಕೊಂಡರೆನೇ ದುಃಖ, ಅಳು, ಪಾಪ! ಗದ್ಗದಿತರಾಗಿಬಿಟ್ಟರು. ಇದು ನಿಜವೇನೋ, ಪ್ರಾಮಾಣಿಕವಾಗಿ ಇದೆಯೇನೋ ಅಂದುಕೊಂಡಿದ್ದೆವು. ಆದರೆ, ಅದು ಸತ್ಯವಲ್ಲವೆಂದು ಅವರ ಉತ್ತರದಿಂದ ಸ್ಪಷ್ಟವಾಗಿ ಗೊತ್ತಾಯಿತು. ಅನೇಕ ಮಾನ್ಯ ಸದಸ್ಯರುಗಳು ಇಲ್ಲಿ ಅತಿ ಉತ್ಸಾಹದಿಂದ ಚರ್ಚೆಯಲ್ಲಿ ಭಾಗವಹಿಸಿ ಆ ಕಡೆ ಈ ಕಡೆ ಇಂದ ಈ ಕಳಕಳಿ ಇದೆಯೆಂದು ನಾವು ಮತ್ತು ಇತರ ಮಾನ್ಯ ಸದಸ್ಯರೆಲ್ಲರೂ ಚರ್ಚೆಯಲ್ಲಿ ಭಾಗವಹಿಸಿ ಅತ್ಯಂತ ಉಪಯುಕ್ತವಾದ ಸಲಹೆಗಳನ್ನು ಕೊಟ್ಟಿದ್ದೇವೆ. ಆದರೆ, ಅವರ ಉತ್ತರ ನೋಡಿದ ಮೇಲೆ ಮತ್ತೆ ಅವರು ಇಲ್ಲಿ ಲಿಖಿತ ಮೂಲಕ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ – ಭವಿಷ್ಯದ ಹೆಜ್ಜೆಗಳು ಎಂದು ಕೊಟ್ಟಿದ್ದಾರೆ. ಇದನ್ನು ನೋಡಿದರೆ ಇದೊಂದು ರೀತಿ ಬಜೆಟ್‌ನಲ್ಲಿ ಭರವಸೆಗಳನ್ನು ಕೊಟ್ಟಾಗ at least ಎಲ್ಲಾ ಭರವಸೆಗಳಿಗೂ ನಾವು ಕಾರ್ಯಕ್ರಮಗಳನ್ನು ಘೋಷಿಸಿದಾಗ most of the programmesನಲ್ಲಿ ಹಣ ಇತ್ತು, ನಾವು ಅದನ್ನು ಬೆಂಬಲಿಸುತ್ತೇವೆ.

ಇಂತಹ ಕಾರ್ಯಕ್ರಮಗಳಿಗೆ ಹಣವನ್ನು ಇಟ್ಟಿದ್ದೇವೆ ಅದನ್ನು ಮಾಡುತ್ತೇವೆ ಎಂದು ಹೇಳುತ್ತೇವೆ. ಇವರು ಹೇಳಿರುವುದು ಹೇಗೆ ಇದೆ ಎಂದರೆ ನೀರಿಗೆ ಅದ್ದಿಬಿಟ್ಟು ಬೆರಳು ಚೀಪಿದರೆ ಏನೂ ರುಚಿ ಸಿಗುವುದಿಲ್ಲ ಆ ರೀತಿ ಇದೆ.

ನಾವು ಏನು ತಿಳಿದುಕೊಂಡಿದ್ದೆವು ಅಂದರೆ ಜೇನುತುಪ್ಪಕ್ಕೆ ಅದ್ದಿದರೆ ಆ ರೀತಿಯಾಗುತ್ತದೆ ಅಂದರೆ ರುಚಿ ಸಿಗುತ್ತದೆ ಆ ತರಹ ಇವರು ಕಳಕಳಿಯಿಂದ ಮಾಡುತ್ತಾರೆಂದು ನಾವು ಅಂದುಕೊಂಡಿದ್ದೆವು. ಇಲ್ಲಿ ನೋಡಿದರೆ ಏನೂ ಇಲ್ಲ. ಇದು ಬರೀ ಭರವಸೆಗಳು ಅಷ್ಟೇ. ನಾವು ಚಪ್ಪಾಳೆಯನ್ನು ತಟ್ಟಿಸಿಕೊಳ್ಳುವುದಕ್ಕೆ ಇಷ್ಟವೇ ಇಲ್ಲ. ನೀವು ಚಪ್ಪಾಳೆಯನ್ನು ತಟ್ಟಿದರೆ ನಮಗೆ ಖುಷಿಯಾಗುತ್ತದೆ.

**(ಈ ಹಂತದಲ್ಲಿ ಮಾನ್ಯ ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)**

**ಶ್ರೀ ಸಿ.ಟಿ. ರವಿ:** ಜೇನುತುಪ್ಪವನ್ನು ಇಟ್ಟರೂ ನೀರು ಕಂಡ ಹಾಗೇ ಆಗುತ್ತದೆ ಎಂದು ಹೇಳುತ್ತಿದ್ದಾರೆ.

**ಶ್ರೀ ಸಿದ್ದರಾಮಯ್ಯ:** ಹೌದಾ? ನಿಮ್ಮ ತರಹದ ನಾಲಿಗೆಯಲ್ಲಾ ನನ್ನದು.

**ಶ್ರೀ ಸಿ.ಟಿ. ರವಿ:** ಅದಕ್ಕೆ ನಮ್ಮ ತರಹದ ನಾಲಿಗೆಯಲ್ಲಾ, ರುಚಿ ನಿಮಗೆ ಗೊತ್ತಾಗುವುದಿಲ್ಲವೆಂದು ನಾನು ಹೇಳುತ್ತಿರುವುದು.

**ಶ್ರೀ ಸಿದ್ದರಾಮಯ್ಯ:** ನಮ್ಮ ನಾಲಿಗೆಯು ಸ್ವಲ್ಪ ಶುದ್ಧವಾದಂತಹ ನಾಲಿಗೆಯಾಗಿದೆ. ನಮ್ಮ ನಾಲಿಗೆಯೂ ರುಚಿಯನ್ನು ಸಹ ಪತ್ತೆಹಚ್ಚುತ್ತದೆ. ನಮ್ಮ ಎಲ್ಲಾ ಪಂಚೇಂದ್ರಿಯಗಳು ಕೂಡ ಕೆಲಸವನ್ನು ಮಾಡುತ್ತಿವೆ. ದುರಾದೃಷ್ಟವಶಾತ್ ನಿಮ್ಮ ಪಂಚೇಂದ್ರಿಯಗಳು ಒಂದು ಕೆಲಸವನ್ನು ಮಾಡುತ್ತಿಲ್ಲ ಎನ್ನುವುದೇ ನಮಗೆ ಬಹಳ ನೋವಿನ ಸಂಗತಿಯಾಗಿದೆ.

**ಶ್ರೀ ಜೆ. ಕರುಣಾಕರರೆಡ್ಡಿ:** ಡಾಕ್ಟರುಗಳು ಬಂದು ನಮ್ಮ ಪಂಚೇಂದ್ರಿಯಗಳನ್ನು ಟೆಸ್ಟ್ ಮಾಡಿದ್ದಾರಾ?

**ಶ್ರೀ ಸಿದ್ದರಾಮಯ್ಯ:** ಅವರನ್ನು ತಮ್ಮ ಹತ್ತಿರ ಕಳುಹಿಸಿಕೊಡೋಣ. ನಿಮ್ಮ ಪಂಚೇಂದ್ರಿಯಗಳೂ ಸರಿಯಾಗಿ ಕೆಲಸ ಮಾಡುತ್ತಿದೆಯೋ ಇಲ್ಲವೋ ಎಂಬುದನ್ನು ನೋಡಲು ಡಾಕ್ಟರನ್ನು ಕಳುಹಿಸಿಕೊಡೋಣ. ನಾವು ಹೇಳುವುದು ಸರಿಯೋ ಅಥವಾ ಇಲ್ಲವೋ ಎಂಬುದಕ್ಕೆ ನೀವು ಡಾಕ್ಟರ್ ಹತ್ತಿರ ಹೋಗಿ ತೋರಿಸಿಕೊಳ್ಳಿ. ಅಂದರೆ ನಿಮ್ಮ ಸರ್ಕಾರ ಅಂತ, ನೀವಲ್ಲಾ, Government. Not you. You are in the Government. Mr. Yeddyurappa or

Mr. Karunakara Reddy are not the Government. You are all members of the Government, the entire Government. ಆಯಿತು, 1947ನಿಂದಲೂ ಆಗೋಣ. 1952 ಇಂದಲೂ ಮಾಡೋಣ. 1982 ನಿಂದಲೂ ಮಾಡೋಣ. ಈಗ ಕಳೆದ 4 ವರ್ಷದಿಂದ ಇದ್ದಿರಲ್ಲಾ ಅದು ಆಗಲಿ ಏನಂತೆ? ತಾವು 3 ವರ್ಷದಿಂದ ಅಧಿಕಾರದಲ್ಲಿ ಇಲ್ಲವೇ? 20 ತಿಂಗಳೋ ಅದು ನನಗೆ ಗೊತ್ತಿಲ್ಲ. ನೀವು ಅಧಿಕಾರದಲ್ಲಿ ಇದ್ದಿರಲ್ಲಾ, ನಾನು ಏನು ಹೇಳುತ್ತೇನೆಂದರೆ, ಇದರಲ್ಲಿ ಯಾವುದು ಉಪ್ಪು ಇಲ್ಲ. ಹುಳಿಯೂ ಇಲ್ಲ, ಖಾರವೂ ಇಲ್ಲ, ಈ ರಾಜ್ಯಕ್ಕೆ ಅನುಕೂಲವಾಗುವಂತಹದ್ದು ಏನೂ ಇಲ್ಲ. ಈಗ ನಾನು as a Member ಏನು expect ಮಾಡಿದ್ದೇನೆಂದರೆ, not as a leader of the Opposition, not as a Congress man ಸಾಮಾನ್ಯ citizen ಆಗಿ ಏನು expect ಮಾಡಬಹುದಾಗಿತ್ತು. What is the food production today? What is your population? ನಮಗೆ ಎಷ್ಟು ಯೋಗ್ಯವಾದಂತಹ ವ್ಯವಸಾಯ ಮಾಡುವುದಕ್ಕೆ ಭೂಮಿ ಇದೆ. ಈಗ ವ್ಯವಸಾಯ ಮಾಡುವುದಕ್ಕೆ ಇರುವಂತಹ ಭೂಮಿ, ಈಗ ಇರತಕ್ಕಂತಹ ಆಹಾರದ ಉತ್ಪಾದನೆ, ಮುಂದೆ 20 ವರ್ಷಗಳಲ್ಲಿ ನಮ್ಮ ಜನಸಂಖ್ಯೆಯೂ ಏನಾಗುತ್ತದೆ, ನಾವು ಏನು ಮಾಡಬೇಕು ಅಥವಾ ಮುಂದಿನ 5–10 ವರ್ಷಗಳಲ್ಲಿ ಏನು ಮಾಡಬೇಕೆಂದು ಹೇಳಿ ಒಂದು Vision Document ನೀವು ಮಾಡುತ್ತೀರೆಂದರೆ, ಮತ್ತೆ ಬಜೆಟ್‌ನಲ್ಲಿ ಏನೇನು ಹೇಳಿದ್ದೀರಿ. ಅದರಿಂದ ನೀವು ಏನು ವಿಮುಖರಾಗಲೇ ಇಲ್ಲ. I expected, ಈಗ ಕಳೆದ 10 ವರ್ಷಗಳಿಂದ ಇದನ್ನು ನಾನು ಪ್ರಸ್ತಾಪ ಮಾಡಿದ್ದೆ. since ten years, since a decade food production is stagnant. ಮುಂದೆ ಅಪಾಯದ ದಿನಗಳು ಇವೆ. ಅದಕ್ಕೋಸ್ಕರ ಕೃಷಿ ಉತ್ಪನ್ನವನ್ನು ಹೆಚ್ಚು ಮಾಡಲಿ. production and productivity. ಇವೆರಡನ್ನೂ ಹೆಚ್ಚು ಮಾಡಬೇಕಾದರೆ ಏನು ಮಾಡಬೇಕು? ಆ ತರಹದ್ದು ಒಂದು ನಿಮ್ಮ ಉತ್ತರದಲ್ಲಿ ಇದೆಯೇ? ನಾವು ಸಲಹೆಯನ್ನು ಕೊಟ್ಟಿರುವುದಕ್ಕೆ ಏನಾದರೂ ಉತ್ತರವನ್ನು ಕೊಟ್ಟಿದ್ದೀರೋ? In 2006 document, you are also a party. 2006ರಲ್ಲಿ ಕೃಷಿ ನೀತಿ ಮಾಡಿದ್ದೀರಿ. 2006ರಲ್ಲಿ ತಾವು ಏನಂತ ಹೇಳಿಕೊಂಡಿದ್ದೀರಿ. By

2020, We are going to increase the food production or we are going to double the food production of what we are getting today. ಇದರಲ್ಲಿ ಏನಿದೆ? ಇದಕ್ಕೆ ನಿಮಗೆ Agriculture ಬಗ್ಗೆ ಬಹಳ ದೊಡ್ಡ ಕಳಕಳಿ ಇದೆ ಎಂದು ಹೇಳಬೇಕೆ? ಇದಕ್ಕೆ ಯಾವ ಭಾಷೆಯಲ್ಲಿ ಹೇಳಬೇಕು? So, ಅದಕ್ಕೆ ನಿಮ್ಮಲ್ಲಿ ಇದರಲ್ಲಿ ಏನೂ ಉತ್ತರವಿಲ್ಲ. ನಿಮ್ಮ ಒಂದು Action Plan ಕೂಡ ಇಲ್ಲ. ಅದಕ್ಕೆ ಬೇಕಾದಂತಹ resourcesಗೆ ಏನು ಮಾಡಿಕೊಳ್ಳಬೇಕೆಂದು ಕೂಡ ಇಲ್ಲ. ಇದರಲ್ಲಿ ಯಾವುದೂ ಕೂಡ ಇಲ್ಲ. 2007ರಲ್ಲಿ ಕೇಂದ್ರ ಸರ್ಕಾರವು ಒಂದು Agriculture Policy ಮಾಡಿದೆ. ನಮ್ಮ ರಾಜ್ಯವೂ ಮಾಡಿದೆ. ಕೇಂದ್ರ ಸರ್ಕಾರವೂ ಕೂಡ ಮಾಡಿದೆ in which, our Chief Minister is a member of the National Development Council. National Development Councilನವರು ಕೂಡ ಇದನ್ನು approve ಮಾಡಿದ್ದಾರೆ. National Policy ಮಾಡಿದ್ದಾರೆ. ನೀವು ಹೇಳಿರುವ ಉತ್ತರದಲ್ಲಿ ಆ ಬಗ್ಗೆ ಒಂದು ಅಂಶವಾದರೂ ಇದೆಯೇ? ಏನಾದರೂ ಒಂದು ಕೃಷಿಯ ಬಗ್ಗೆ ಇದೆಯೇ? Then what is your commitment? ಇದರಲ್ಲಿ ಏನಾದರೂ ಇದೆಯೇ? 2006ರಲ್ಲಿ ಈ ನೀತಿಯನ್ನು ನೀವೇ ಮಾಡಿಕೊಂಡಿರುವುದು. 2007ರಲ್ಲಿ ಕೇಂದ್ರ ಸರ್ಕಾರವು ಮಾಡಿದೆ. ಅದು ಏನು, 2006ರಲ್ಲಿಯೂ ಮಾಡಿದಾಗಲೂ ಕೂಡ ಶ್ರೀ ಸ್ವಾಮಿನಾಥನ್‌ರವರು ಅವರು ಕೊಟ್ಟಂತಹ ಸಲಹೆಗಳು ಮತ್ತು ಶಿಫಾರಸ್ಸುಗಳು ನೋಡಿ ಮಾಡಿದ್ದೀರಿ. That is No.1 ಇಲ್ಲಿ ಸ್ವಾಮಿನಾಥನ್‌ರವರು ನಮ್ಮ ದೇಶದಲ್ಲಿ, ವ್ಯವಸಾಯದಲ್ಲಿ ಅವರು authority ಎಂದು ಹೇಳಿ ನಾವು ಅಂದುಕೊಂಡಿದ್ದೇವೆ. ನಾವು ಅವರ ಬಗ್ಗೆ ಗೌರವವನ್ನು ಇಟ್ಟುಕೊಂಡಿದ್ದೇವೆ. ಅದು ಆ ಮಟ್ಟದ ಯೋಗ್ಯತೆ ಮತ್ತು ಜ್ಞಾನ ಎಲ್ಲಾ ಇದೆ. ಈ ದೇಶದ ಕೃಷಿಯ ಬಗ್ಗೆ ಅಪಾರವಾದಂತಹ, ಆಳವಾದಂತಹ ಜ್ಞಾನ ಇದೆ. commitment ಇದೆ. ಕೇಂದ್ರ ಸರ್ಕಾರದವರು ಅವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಮಾಡಿ, ಆ ಕಮಿಟಿಯವರು ಕೊಟ್ಟಂತಹ ವರದಿಯ ಆಧಾರದ ಮೇಲೆ ಒಂದು policy documentನ್ನು ಮಾಡಿದ್ದಾರೆ. ಅದನ್ನು ನೋಡಿಯಾದರೂ ನೀವು ಕೃಷಿಯ ಬಗ್ಗೆ ಒಂದು Action Plan

ಮಾಡಬೇಕೋ ಬೇಡವೋ? ನಿವು ಏನೂ ಮಾಡಿಲ್ಲ. ನಾನು ನಿಮಗೆ ಏತಕ್ಕಾಗಿ ಕಳಕಳಿ ಇಲ್ಲವೆಂದು ಹೇಳುತ್ತಿದ್ದೇನೆಂದರೆ ಈಗ ಮಾನ್ಯ ಮುಖ್ಯಮಂತ್ರಿಗಳು NREGA ಬಗ್ಗೆ ಮಾತನಾಡುತ್ತಾ ಹೇಳುತ್ತಿದ್ದರು. ಈಗ NREGA ಹಣ ಕೃಷಿಗೆ ಅನುಕೂಲವಾಗಲೆಂದು ಗ್ರಾಮೀಣಾಭಿವೃದ್ಧಿಗೆಂದು ಮಾಡಿರುವುದು. ಈಗ ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಉತ್ತರವನ್ನು ಹೇಳಿ ಹೊರಟುಹೋದರು. ನಾವು clarification ಕೇಳೋಣವೆಂದರೆ ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಇಲ್ಲವಲ್ಲಾ, ಮಾನ್ಯ ಅಧ್ಯಕ್ಷರೆ?

**ಶ್ರೀ ಹೆಚ್.ಸಿ. ಬಾಲಕೃಷ್ಣ:** ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಹೇಳಿದ್ದಾರೆ. ಮಾನ್ಯ ವಿರೋಧ ಪಕ್ಷದ ನಾಯಕರು clarification ಕೇಳುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಎಲ್ಲಿಗೆ ಹೋಗಿದ್ದಾರೆ?

**ಶ್ರೀ ಬಸವರಾಜ ಬೊಮ್ಮಾಯಿ:** ಒಂದು ನಿಮಿಷ. ಇಲ್ಲಿ Agriculture Minister ಇದ್ದಾರೆ. ಗ್ರಾಮೀಣಾಭಿವೃದ್ಧಿ ಮಂತ್ರಿಗಳು ಇದ್ದಾರೆ.

**ಶ್ರೀ ಸಿದ್ದರಾಮಯ್ಯ:** ನಾವು ಅದೇ ತರಹ ಮೊನ್ನೆ ಮಾಡಬಹುದಾಗಿತ್ತಲ್ಲಾ?

**ಶ್ರೀ ಬಸವರಾಜ ಬೊಮ್ಮಾಯಿ:** ನಾವು ಉತ್ತರವನ್ನು ಕೊಡುತ್ತೇವೆ.

**ಶ್ರೀ ಸಿದ್ದರಾಮಯ್ಯ:** ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವುದನ್ನು ಕೇಳದೆ ಹೊರಟು ಹೊಗಬಹುದಿತ್ತಲ್ಲಾ?

**ಶ್ರೀ ಬಸವರಾಜ ಬೊಮ್ಮಾಯಿ:** ಇಲ್ಲಾ, ನಾವು ಉತ್ತರವನ್ನು ಕೊಡುತ್ತೇವೆ.

**ಶ್ರೀ ಸಿದ್ದರಾಮಯ್ಯ:** ನೀವು ಉತ್ತರವನ್ನು ಕೊಡುವುದಿದ್ದರೆ ಮುಖ್ಯಮಂತ್ರಿಗಳು ಏತಕ್ಕೆ ಬೇಕಾಗಿತ್ತು?

**ಶ್ರೀ ಬಸವರಾಜ ಬೊಮ್ಮಾಯಿ:** Agriculture Ministerರವರು ಉತ್ತರವನ್ನು ಕೊಡುತ್ತಾರೆ. ಗ್ರಾಮೀಣಾಭಿವೃದ್ಧಿ ಮಂತ್ರಿಗಳೂ ಸಹ ಉತ್ತರವನ್ನು ಕೊಡುತ್ತಾರೆ. ನೀವು ಕೇಳುತ್ತಿರುವ clarificationಗೆ ಎಲ್ಲಾ ಮಂತ್ರಿಮಂಡಲದ ಸದಸ್ಯರು ಇದ್ದಾರೆ.

**ಶ್ರೀ ಸಿದ್ದರಾಮಯ್ಯ:** Agriculture Minister ಉತ್ತರವನ್ನು ಕೊಡುವುದಾದರೆ ನಮಗೆ ಬೇಡ. ಹಾಗಾದರೆ ನಾನು ಕುಳಿತುಕೊಳ್ಳುತ್ತೇನೆ. It is not correct. When the Chief Minister has replied on the debate, ಹಾಗಾದರೆ ಅವರ ಆಸಕ್ತಿ ಏನು? ಮಾನ್ಯ ಮುಖ್ಯಮಂತ್ರಿಗಳ commitment ಏನು? Then what commitment he has?

**ಶ್ರೀ ಹೆಚ್.ಸಿ. ಬಾಲಕೃಷ್ಣ:** ಆಮೇಲೆ ಅವಕಾಶವನ್ನು ಕೊಡುತ್ತೇವೆ. ನೀವು ಆಗ ಚರ್ಚೆ ಮಾಡಿ ಎಂದು ಹೇಳಬೇಕಾಗಿತ್ತು. ಮಾನ್ಯ ಮುಖ್ಯಮಂತ್ರಿಗಳು ಎಲ್ಲಿದ್ದಾರೆ?

**ಶ್ರೀ ಸಿದ್ದರಾಮಯ್ಯ:** ಬಸವರಾಜ ಬೊಮ್ಮಾಯಿಯವರೆ, No. No.

**ಶ್ರೀ ಬಸವರಾಜ ಬೊಮ್ಮಾಯಿ:** 5 ನಿಮಿಷದಲ್ಲಿ ಬರುತ್ತಾರೆ. ನಮ್ಮ ನಾಯಕರು ಉತ್ತರವನ್ನು ಕೊಡುತ್ತಾರೆ.

**ಶ್ರೀ ಹೆಚ್.ಸಿ. ಬಾಲಕೃಷ್ಣ:** 5 ನಿಮಿಷದಲ್ಲಿ ಎಲ್ಲಿ ಬರುತ್ತಾರೆ? ಅವರೆಲ್ಲರೂ ಮಾತನಾಡಿದ ಮೇಲೆ ಬರುತ್ತಾರೆಯೇ?

**ಶ್ರೀ ಸಿದ್ದರಾಮಯ್ಯ:** ಅವರಿಗೆ ಕಳಕಳಿ ಇದೆಯಾ, ಆಸಕ್ತಿ ಇದೆಯಾ, ಬದ್ಧತೆ ಇದೆಯಾ? ಅದು ನಮಗೆ ಗೊತ್ತಾಗಬೇಕಲ್ಲ? It clearly shows that, ಇದು ಸುಮ್ಮನೆ ಬೂಟಾಟಿಕೆ ಮಾಡಿರುವಂತಹದ್ದು ಮತ್ತು ಕಾಟಾಚಾರಕ್ಕೆ ಮಾಡಿರುವುದು ಎಂದು ಆಗುತ್ತದೆ.

**ಶ್ರೀ ಬಸವರಾಜ ಬೊಮ್ಮಾಯಿ:** ಒಂದು ನಿಮಿಷ ನಾನು ಹೇಳುತ್ತೇನೆ.

**ಶ್ರೀ ಸಿದ್ದರಾಮಯ್ಯ:** ನೀವು ಅವರನ್ನು ಬರುವುದಕ್ಕೆ ಹೇಳಿ. ಆಮೇಲೆ ಮಾತನಾಡೋಣ. ಈ ಮಾತನ್ನು ಅವರ ಎದುರುಗಡೆಯೇ ಹೇಳೋಣ.

**ಶ್ರೀ ಬಸವರಾಜ ಬೊಮ್ಮಾಯಿ:** ನಾನು ಏನು ಹೇಳುವುದೆಂದರೆ, ತಾವು ಸುದೀರ್ಘವಾಗಿ ಯಾವ ಯಾವ ಪಾಲಿಸಿಗಳು ಆಗಿದೆ, ಯಾವ ಯಾವ ಕಮಿಟಿಗಳು ಆಗಿದೆ ಎಂದು ಹೇಳಿದ್ದೀರಿ. ಆ ಎಲ್ಲಾ ಪಾಲಿಸಿಗಳು ಹಿಂದೆ ಆಗಿ, ಕೇಂದ್ರ ಸರ್ಕಾರದಲ್ಲಿಯೂ ಆಗಿದ್ದರೂ ಕೂಡ ಗ್ರಾಮೀಣಾಭಿವೃದ್ಧಿ ಪರಿಸ್ಥಿತಿ,

ರೈತರ ಪರಿಸ್ಥಿತಿ ಹೀಗೆ ಇದೆ ಎಂದು ನಿಮಗೂ ಗೊತ್ತು ನಮಗೂ ಕೂಡ ಗೊತ್ತು. ಆ ಹಿನ್ನೆಲೆಯಲ್ಲಿ ಏನು Action Plan ಮಾಡಬೇಕೆಂದು ತಾವು ಏನು ಹೇಳಿದ್ದೀರಿ? ಮಾನ್ಯ ಮುಖ್ಯಮಂತ್ರಿಗಳ ಉತ್ತರದಲ್ಲಿ ಆ ಎಲ್ಲಾ ಪಾಲಿಸಿಯ ಆಧಾರದ ಮೇಲೆ ಆಗಿದೆ.

(ಗೊಂದಲ)

**ಶ್ರಿ ಸಿದ್ದರಾಮಯ್ಯ:** ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಟ್ಟಿದ್ದಕ್ಕೆ ಮಾನ್ಯ ಮಂತ್ರಿಗಳು ಸ್ಪಷ್ಟೀಕರಣ ನೀಡಿದರೆ ಏನೂ ಪ್ರಯೋಜನವಾಗುವುದಿಲ್ಲ.

(ಗೊಂದಲ)

**ಶ್ರೀ ಬಸವರಾಜ ಬೊಮ್ಮಾಯಿ;** ಏನು ಮಾಡಲಿಕ್ಕೆ ಹೊರಟಿದ್ದೇವೆ ಎನ್ನುವುದನ್ನು ಬಹಳ ಸ್ಪಷ್ಟವಾಗಿ ಹೇಳಿದ್ದೇವೆ. ಹಿಂದೆ ಆಗಿರುವ ಕೇಂದ್ರ ಮತ್ತು ರಾಜ್ಯಗಳ ಪಾಲಿಸಿಗಳ ಹಿನ್ನೆಲೆಯಲ್ಲೇ ಈ ಉತ್ತರ ಸಿದ್ಧಪಡಿಸಲಾಗಿದೆ.

(ಗೊಂದಲ)

**ಶ್ರೀ ಸಿದ್ದರಾಮಯ್ಯ:** ಅದು ನೀವು ಕೊಟ್ಟಿರುವ ಉತ್ತರದಲ್ಲಿ mention ಮಾಡಿಲ್ಲವೆಂದು ನಾನು ಹೇಳುತ್ತಿದ್ದೇನೆ. There is not even a mention of it.

**ಶ್ರೀ ಬಸವರಾಜ ಬೊಮ್ಮಾಯಿ:** ಸರ್, ಪಾಲಿಸಿಗಳ ಬಗ್ಗೆ ಬಹಳಷ್ಟು ನಾವು ಚರ್ಚೆಯನ್ನು ಮಾಡುತ್ತೇವೆ. ಆದರೆ action plan ಬೇಕಲ್ಲವೇ? ಅದರ ಆಧಾರದ ಮೇಲೆಯೇ ನಾವು ಇದನ್ನು ....

**ಶ್ರೀ ಸಿದ್ದರಾಮಯ್ಯ:** ನಾನು ಯೀಲ್ಡ್ ಆಗಿಲ್ಲ. ಹೀಗಿರುವಾಗ ನೀವೇಕೆ ಮಧ್ಯೆ ಎದ್ದು ನಿಂತು ಮಾತನಾಡುತ್ತಿದ್ದೀರಿ? ಮಾನ್ಯ ಮುಖ್ಯಮಂತ್ರಿಗಳು ಒಟ್ಟಿಗೆ ಎಲ್ಲದಕ್ಕೂ ಉತ್ತರ ಹೇಳುತ್ತಾರೆ ಬಿಡಿ. ಅವರನ್ನು clarification ಕೇಳಿದರೆ why are you supporting him? He is capable of defending himself. ಮಾನ್ಯ ಅಧ್ಯಕ್ಷರೆ, NREGA ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು,

3 ವರ್ಷಗಳಿಂದ ನಾವೇನೂ ಮಾಡಿಲ್ಲ. ಈ ವರ್ಷ ಮಾಡುತ್ತೇವೆಂದು ಹೇಳುತ್ತಾರೆ. That shows, ಈ ಸರ್ಕಾರಕ್ಕೆ ಬದ್ಧತೆ ಇಲ್ಲ. ಕೇಂದ್ರ ಸರ್ಕಾರದ ಈ ಕಾರ್ಯಕ್ರಮವನ್ನು ಜಾರಿಗೊಳಿಸಲಿಕ್ಕೆ ಇವರಿಗೆ ಆಸಕ್ತಿ ಇಲ್ಲವೆಂಬುದು ಇವರ performanceನಿಂದ ಬಹಳ ಸ್ಪಷ್ಟವಾಗಿ ಗೊತ್ತಾಗುತ್ತದೆ. What evidence do you require? 2006–07ರ ಆರಂಭದ ಶಿಲ್ಕು 78 ಕೋಟಿ ರೂ.ಗಳು ಕೇಂದ್ರದ್ದು ಎಲ್ಲವೂ ಸೇರಿಸಿ ಒಟ್ಟು 341 ಕೋಟಿ ರೂ.ಗಳಷ್ಟು ನಿಮ್ಮ ಹತ್ತಿರ ದುಡ್ಡಿದ್ದರೆ, ಆ ವರ್ಷ 93 ಕೋಟಿ ರೂ.ಗಳನ್ನು ಬಾಕಿ ಉಳಿಸಿಕೊಂಡಿದ್ದೀರಿ. 2007–08ನೇ ಸಾಲಿಗೆ 419 ಕೋಟಿ ರೂ.ಗಳು ನಿಮಗೆ ಸಿಗುತ್ತದೆ. ನೀವು action plan ಮಾಡಿಕೊಂಡಿದ್ದರೆ ನಿಮಗೆ ಇನ್ನೂ ಜಾಸ್ತಿ ದುಡ್ಡು ಸಿಗುತ್ತಿತ್ತು. ಈ ದುಡ್ಡಿನಲ್ಲಿ ಕೇವಲ 236 ಕೋಟಿ ರೂ.ಗಳನ್ನು ಉಪಯೋಗಿಸಿಕೊಂಡು ಇನ್ನೂ 182 ಕೋಟಿ ರೂ.ಗಳನ್ನು ಬಾಕಿ ಉಳಿಸಿಕೊಂಡಿರಿ. 2008–09ನೇ ಸಾಲಿನಲ್ಲಿ 642 ಕೋಟಿ ರೂ.ಗಳು ನಿಮಗೆ ಲಭ್ಯವಿದ್ದರೆ, ನೀವು ಖರ್ಚು ಮಾಡಿದ್ದು 357 ಕೋಟಿ ರೂ.ಗಳು ಮಾತ್ರ. ಅದರಲ್ಲಿ ನೀವು 285 ಕೋಟಿ ರೂ.ಗಳ ಬಾಕಿ ಉಳಿಸಿಕೊಂಡಿರಿ. Can we call that Government is sincere and committed in the implementation of the programmes which are purely for the rural development? ಎಲ್ಲಿದೆ ನಿಮಗೆ ಕಾಳಜಿ? ಗ್ರಾಮೀಣಾಭಿವೃದ್ಧಿ ಬಗ್ಗೆ ಕಾಳಜಿ ಇಲ್ಲದೆ ಚರ್ಚೆ ಮಾಡುವುದು ಕಾಟಾಚಾರಕ್ಕಾಗಿ ಚರ್ಚೆ ಮಾಡಿದಂತಾಗುತ್ತದೆ. ಇದು ನನ್ನ ಅಂಕಿ ಅಂಶವಲ್ಲ, ಇದು ಸರ್ಕಾರವೇ ಕೊಟ್ಟಿರತಕ್ಕ ಅಂಕಿ ಅಂಶವಾಗಿದೆ. ..

**ಶ್ರೀ ಬಿ.ಎಸ್. ಯಡಿಯೂರಪ್ಪ:** ನೀವೇನು ಭಾಷಣ ಮಾಡುತ್ತಿದ್ದೀರೋ ಅಥವಾ clarification ಕೇಳುತ್ತಿದ್ದೀರೋ?

**ಶ್ರೀ ಸಿದ್ದರಾಮಯ್ಯ:** ನಾನು ನಿಮ್ಮಿಂದ clarification ಅನ್ನೇ ಕೇಳುತ್ತಿದ್ದೇನೆ.

**ಶ್ರೀ ಬಿ.ಎಸ್. ಯಡಿಯೂರಪ್ಪ:** ಏಕೆಂದರೆ, ನಾಲ್ಕು ಗಂಟೆಗಳ ಕಾಲ ಮಾತನಾಡಿದ್ದೀರಿ. ನಾನು ಮಾತನಾಡಿದ ಮೇಲೆ ಒಂದಷ್ಟು clarifications ಕೇಳಿದರೆ, ಅದಕ್ಕೆ ನಾನು ಉತ್ತರವನ್ನು ಕೊಡಬಹುದು. ಅದರ ಬದಲಾಗಿ ನೀವು ಇನ್ನೊಂದು ಭಾಷಣ ಮಾಡಿದರೆ ಹೇಗೆ? ಇದ್ಯಾವ ಸಂಪ್ರದಾಯ?

**ಶ್ರೀ ಸಿದ್ದರಾಮಯ್ಯ:** ಆಗಲೇ ನೀವು ಇರಲಿಲ್ಲ.

**ಶ್ರೀ ಬಿ.ಎಸ್. ಯಡಿಯೂರಪ್ಪ:** ನಾನು ಬಾತ್‌ರೂಂಗೆ ಹೋಗಿದ್ದೆ.

**ಶ್ರೀ ಸಿದ್ದರಾಮಯ್ಯ:** ಹೌದಾ?

**ಶ್ರೀ ಬಿ.ಎಸ್. ಯಡಿಯೂರಪ್ಪ:** ಅದಕ್ಕೂ ನಿಮ್ಮ ಪರ್ಮಿಷನ್ ತೆಗೆದುಕೊಂಡು ಹೋಗಬೇಕೆ?

**ಶ್ರೀ ಸಿದ್ದರಾಮಯ್ಯ:** ಆಯಿತು ಬಿಡಿ. ನೀವು ಬಾತ್‌ರೂಂಗೆ ಹೋಗುವುದಕ್ಕೆ, ಊಟ ಮಾಡುವುದಕ್ಕೆ ಮತ್ತು ತಿಂಡಿ ಮಾಡುವುದಕ್ಕೆ ನಾವೇನೂ ನಿಮಗೆ ಅಡ್ಡ ಬರುವುದಿಲ್ಲ. ಅದನ್ನು ಮಾಡಿ. ಅಸೆಂಬ್ಲಿಯಲ್ಲಿ ಇರುವಾಗ, ನಾವು ಮಾತನಾಡುವಾಗ ಕೇಳಿ ಎಂದು ನಾನು ಹೇಳುತ್ತಿದ್ದೇನೆ. ನಿಮಗೆ ಬಾತ್‌ರೂಂಗೆ ಹೋಗಬೇಡಿ ಎಂದು ಯಾರು ಹೇಳುತ್ತಾರೆ? ನಾನು clarification ಅನ್ನೇ ಕೇಳುತ್ತಿದ್ದೇನೆ. ಈ ವರ್ಷ ನಾವು ಮಾಡುತ್ತೇವೆ, ಮೂರು ವರ್ಷಗಳಿಂದ ನಾವು ಮಾಡಲಿಲ್ಲ ಎಂದರೆ ಹೇಗೆ?

**ಶ್ರೀ ಬಿ.ಎಸ್. ಯಡಿಯೂರಪ್ಪ:** ನೀವು ಏನು ಬೇಕಾದರೂ ಹೇಳಿ, ನಾವು ಕೇಳುತ್ತೇವೆ.

**ಶ್ರೀ ಸಿದ್ದರಾಮಯ್ಯ:** ಏನು ಬೇಕಾದರೂ ಹೇಗೆ ಹೇಳಲಿಕ್ಕಾಗುತ್ತದೆ? ನಾನು ಸತ್ಯವನ್ನು ಹೇಳುತ್ತಿದ್ದೇನೆ. ನಾನು ಸತ್ಯ ಹೇಳುವುದನ್ನು ಕೇಳುವುದಕ್ಕೆ ನಿಮಗೆ ಇಷ್ಟವಿಲ್ಲ. ಪಶ್ಚಿಮ ಘಟ್ಟಗಳಿಗಾಗಿ ಕೊಟ್ಟಿರುವ ದುಡ್ಡನ್ನು ಖರ್ಚು ಮಾಡಲಿಕ್ಕೆ ನಿಮಗೆ ಆಗಲೇ ಇಲ್ಲ. ನಾನೇಕೆ ಹೇಳುತ್ತಿದ್ದೇನೆ ಎಂದರೆ, ಇವರು at least ಕನಿಷ್ಠ ಪಕ್ಷ ಸರ್ಕಾರದ ಕಾರ್ಯಕ್ರಮಗಳು ಜನರಿಗೆ ತಲುಪಬೇಕು ಎನ್ನುವ ಕಾರಣಕ್ಕೋಸ್ಕರ 100 ದಿವಸಕ್ಕೊಂದು ಸಾರಿ evaluation ಮಾಡುತ್ತೇವೆ,

6 ತಿಂಗಳಿಗೊಂದು ಸಾರಿ evaluation ಮಾಡುತ್ತೇವೆ, ವರ್ಷಕ್ಕೊಮ್ಮೆ evaluation ಮಾಡುತ್ತೇವೆಂದು ಹೇಳಿದ್ದರು. ಕಳೆದ ವರ್ಷದಿಂದ ಏನೇನು ಮಾಡಿದ್ದೀರಿ ಎಂದು ಸಂಬಂಧಪಟ್ಟ ದಾಖಲಾತಿಗಳನ್ನಾದರೂ ನೀವಿಲ್ಲಿ ಇಡಬೇಕಾಗುತ್ತಲ್ಲವೇ? ಅವುಗಳನ್ನೇನೂ ಇಲ್ಲಿ ಇಟ್ಟೇ ಇಲ್ಲ. ನಿಮ್ಮ ಆ evaluation papers ಎಲ್ಲಿವೆ? That is my clarification. ನೀವು ಹೇಳಿದಂತೆ evalution ಮಾಡಿಲ್ಲ. ನಾವು ಇಷ್ಟು ಮನೆಗಳಿಗೆ/ಕುಟೀರಗಳಿಗೆ ವಿದ್ಯುತ್ ಕೊಟ್ಟಿದ್ದೇವೆಂದು ಹೇಳುತ್ತಿದ್ದೀರಿ. ನಿಮಗೆ target ಏನು? ಆ ಕಾರ್ಯಕ್ರಮದ ಉದ್ದೇಶವೇನು? ಎಷ್ಟಾಗಿದೆ? ಎಷ್ಟಾಗಿಲ್ಲ? ನಿಜ ಹೇಳಿ. ನಿಮ್ಮ target ಗೆ ನೀವು reach ಆಗಲಿಕ್ಕಾಗಿಲ್ಲ. ರಾಜೀವ್‌ಗಾಂಧಿ ಗ್ರಾಮೀಣ ವಿದ್ಯುದ್ದೀಕರಣ ಯೋಜನೆಯಡಿ ಕೇಂದ್ರ ಸರ್ಕಾರ ಶೇಕಡ 90ರಷ್ಟು ಹಣ ಕೊಡುತ್ತದೆ. ಇನ್ನುಳಿದ ಶೇಕಡ 10ರಷ್ಟು 4% ಬಡ್ಡಿ ದರದಲ್ಲಿ loan ಆಗಿ ಕೊಡಲಾಗುತ್ತದೆ. ಇದು ನಿನ್ನೆ ಮೊನ್ನೆ ಪ್ರಾರಂಭವಾದ ಯೋಜನೆಯಲ್ಲ. ನಾನು ಹಣಕಾಸಿನ ಮಂತ್ರಿಯಾಗಿದ್ದಾಗ, 2005ರಲ್ಲಿ ಇದು ಪ್ರಾರಂಭವಾಯಿತು. ಆವತ್ತಿನಿಂದ ನಿಮ್ಮ ಸರ್ಕಾರ ಅದನ್ನು implement ಮಾಡುವುದರಲ್ಲಿ totally failure ಆಗಿದೆ. ಈ ಬಗ್ಗೆ ನೀವು ಕೊಟ್ಟಂತಹ ಅಂಕಿ ಅಂಶಗಳು ವಾಸ್ತವಿಕ ಅಂಶಗಳಿಗೆ ದೂರವಾದುದು. ಒಳ್ಳೆಯದಾಗಿರುವುದು ಯಾವುದು ಇದೆ ಎಂಬುದನ್ನು ಹೇಳಿ, ಅದರ ಬಗ್ಗೆಯೂ ನಾನು ಹೇಳುತ್ತೇನೆ.

**ಶ್ರೀ ಬಿ.ಎಸ್. ಯಡಿಯೂರಪ್ಪ:** ಒಂದು ನಿಮಿಷ.

**ಶ್ರೀ ಸಿದ್ದರಾಮಯ್ಯ:** ನಾವೇನು ನಿಮ್ಮ ತರಹ ಮೊಂಡಾಟ ಮಾಡುವುದಿಲ್ಲ. ನಾನು ಕುಳಿತುಕೊಳ್ಳುತ್ತೇನೆ, ಅದೇನು ಹೇಳಿ.

**ಶ್ರೀ ಬಿ.ಎಸ್. ಯಡಿಯೂರಪ್ಪ:** ಮಾನ್ಯ ಅಧ್ಯಕ್ಷರೆ, ನಾನು ವಿಶೇಷವಾದ ಕಾರಣಕ್ಕಾಗಿ ದೆಹಲಿಯಲ್ಲಿ 4.30 ಗಂಟೆಗೆ ನಡೆಯುವ ಸಭೆಯೊಂದರಲ್ಲಿ ಹಾಜರಾಗಬೇಕಾಗಿದೆ. ಕೇಂದ್ರ ಸಚಿವರುಗಳೆಲ್ಲಾ ಆ ಸಭೆಯಲ್ಲಿ ಭಾಗವಹಿಸುತ್ತಿದ್ದಾರೆ. ನಾನು 1.45 ಗಂಟೆಯವರೆಗೆ ಮಾತ್ರ ಇಲ್ಲಿರುತ್ತೇನೆ. ಸನ್ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು, ಮಾನ್ಯ ವಿದ್ಯುತ್ ಸಚಿವರು, ಮಾನ್ಯ

ನೀರಾವರಿ ಸಚಿವರು ಸೇರಿದಂತೆ ನಮ್ಮೆಲ್ಲಾ ಸಚಿವರೂ ನಿಮ್ಮ clarificationsಗೆ ಉತ್ತರವನ್ನು ಕೊಡುತ್ತಾರೆ. ದಯಮಾಡಿ ತಾವು ಅನುಮತಿಯನ್ನು ಕೊಡಬೇಕು. ಸದನದ ಪ್ರಮುಖರು ಅನ್ಯಥಾ ಭಾವಿಸಬಾರದು. ನಿಮಗೆ ಗೊತ್ತಿದೆ, ಕಳೆದ 14 ತಿಂಗಳಿನಿಂದ ನೀವು ನನ್ನನ್ನು ನೋಡುತ್ತಿದ್ದೀರಿ. ಪ್ರತಿಪಕ್ಷದ ನಾಯಕರು ಅಥವಾ ಇತರರು ಯಾರಾದರೂ ಮಾತನಾಡುವಾಗ ಅಥವಾ ಉತ್ತರ ಕೊಡಬೇಕಾದರೆ ತಪ್ಪಿಸಿಕೊಂಡು ಹೋಗುವಂತಹ ವ್ಯಕ್ತಿ ನಾನಲ್ಲ. ದಯಮಾಡಿ, ಸಹಕರಿಸಿ. ನಾನು 1.45 ಗಂಟೆಯವರೆಗೆ ಮಾತ್ರ ಸದನದಲ್ಲಿರುತ್ತೇನೆ.

**ಶ್ರೀ ಸಿದ್ದರಾಮಯ್ಯ:** ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಇಲ್ಲಿರಬೇಕು ಎನ್ನುವಂಥದ್ದು ನಮ್ಮೆಲ್ಲರ ಇಚ್ಛೆಯಾಗಿದೆ. ಏಕೆಂದರೆ, ಅವರು ಇವತ್ತು ಅತ್ಯಂತ ಪ್ರಾಮುಖ್ಯವಾದಂತಹ ವಿಚಾರದ ಬಗ್ಗೆ ಉತ್ತರ ಕೊಟ್ಟಿದ್ದಾರೆ. ಗ್ರಾಮೀಣ ಬದುಕಿಗೆ ಸಂಬಂಧಪಟ್ಟಂತಹ ಪ್ರಾಮುಖ್ಯ ವಿಷಯದ ಬಗ್ಗೆ, ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬಗ್ಗೆ ಚರ್ಚೆಯಾಗಿದೆ. ಬಹಳ ಜನ ಮಾನ್ಯ ಸದಸ್ಯರು ಅಪಾರವಾದಂತಹ ನಿರೀಕ್ಷೆ ಇಟ್ಟುಕೊಂಡು ಕುಳಿತಿದ್ದಾರೆ. ಚರ್ಚೆಯಲ್ಲಿ ಭಾಗವಹಿಸಿದ್ದಾರೆ. ಬಹಳ ಸಲಹೆಗಳನ್ನು ಕೊಟ್ಟಿದ್ದಾರೆ. ಪಾಪ! ಅವುಗಳೆಲ್ಲದಕ್ಕೂ ಉತ್ತರ ಸಿಗುತ್ತದೆಂದು ಕಾದು ಕುಳಿತಿದ್ದಾರೆ. ಇನ್ನೂ ಬಹಳ ಜನ ಚರ್ಚೆ ಮಾಡುವವರಿದ್ದರು; ಅವರಿಗೆ ಅವಕಾಶ ಸಿಗಲಿಲ್ಲ. ನೀವು ಸ್ವಲ್ಪ ಆತುರ ಮಾಡಿಬಿಟ್ಟಿರಿ. ಮೂರು ದಿನದಲ್ಲೇ ಮುಗಿಯಬೇಕು, ಮೂರು ದಿನದೊಳಗೆ ಉತ್ತರ ಕೊಟ್ಟು ಬಿಡಬೇಕು, 1 ಗಂಟೆಗೇ ಉತ್ತರ ಕೊಟ್ಟು ಬಿಡಬೇಕು, 3 ಗಂಟೆಗೇ ಉತ್ತರ ಕೊಟ್ಟು ಬಿಡಬೇಕು ಎಂದು ಹಠ ಮಾಡಿದಿರಿ.

**ಶ್ರೀ ಬಿ.ಎಸ್. ಯಡಿಯೂರಪ್ಪ:** ತಾವು ಒಪ್ಪುವುದಾದರೆ, ನಾನೊಂದು ಸಲಹೆ ಕೊಡುತ್ತೇನೆ. ಚರ್ಚೆಯಾಗುತ್ತಿರುವ ಸಂದರ್ಭದಲ್ಲಿ ಯಡಿಯೂರಪ್ಪನವರು ಹೊರಟು ಹೋದರು ಎಂದು ಅನಿಸಿಕೊಳ್ಳುವುದು ನನಗಿಷ್ಟವಿಲ್ಲ. ಈ ಮನೆ ಒಪ್ಪುವುದಾದರೆ, ಇನ್ನೂ ಅನೇಕ ವಿಷಯಗಳು ಚರ್ಚೆಯಾಗಬೇಕಾಗಿದೆ, ನಾಳೆ ನೀವು clarification ಕೇಳಿ, ನಾನು 1 ಗಂಟೆ ಇಲ್ಲವೇ 2 ಗಂಟೆ ನಿಮ್ಮ ಜೊತೆಗೆ ಕುಳಿತು ಉತ್ತರ ಕೊಡುತ್ತೇನೆ. ದಯಮಾಡಿ ಇವತ್ತು ಬೇರೆ ವಿಷಯಗಳನ್ನಾದರೂ ತೆಗೆದುಕೊಂಡು ಚರ್ಚೆ ಮಾಡಿ. ನಾಳೆ

ನಾನು ಯಾವುದೇ ಕಾರಣಕ್ಕೂ ತಪ್ಪಿಸಿಕೊಳ್ಳುವುದಿಲ್ಲ. ಸಮಯಕ್ಕೆ ಸರಿಯಾಗಿ ಬಂದು ನಿಮಗೆ ಉತ್ತರ ಕೊಡುತ್ತೇನೆ. ಯಾವುದಾದರೂ ಒಂದನ್ನು ನೀವು ಆಯ್ಕೆ ಮಾಡಿಕೊಳ್ಳಿ.

**ಶ್ರೀ ಸಿದ್ದರಾಮಯ್ಯ:** ನಾನು ಇವತ್ತೇ clarification ಕೇಳಬೇಕು.

**ಅಧ್ಯಕ್ಷರು:** ಮಾನ್ಯ ಮುಖ್ಯಮಂತ್ರಿಗಳು ಮಧ್ಯಾಹ್ನ 1.45 ಗಂಟೆಗೆ ದೆಹಲಿಗೆ ಹೋಗಬೇಕಾಗಿದೆ. ಅದಕ್ಕಾಗಿ ಆ ರೀತಿ ಅವರು ತಮ್ಮಲ್ಲಿ request ಮಾಡಿದರು. ನೀವು clarification ಕೇಳಿ, ಬೇರೆ ಸಚಿವರು ಉತ್ತರ ಕೊಡುತ್ತಾರೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು.

**ಶ್ರೀ ಸಿದ್ದರಾಮಯ್ಯ:** ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ದೆಹಲಿಗೆ ಹೋಗುವುದಕ್ಕೆ ನಮ್ಮದೇನೂ ಅಭ್ಯಂತರವಿಲ್ಲ. ನೀವು ದೆಹಲಿಗೆ ಹೋಗಿ. ಆದರೆ ನಮ್ಮ ಇಚ್ಛೆ ಏನೆಂದರೆ, ನೀವು ಇಲ್ಲೇ ಇರಬೇಕಾಗಿತ್ತು. ಅದು ನಿಮ್ಮ ಜವಾಬ್ದಾರಿ ಎಂದಷ್ಟೇ ನಾನು ಹೇಳಬಯಸುತ್ತೇನೆ. ಅವರು ದೆಹಲಿಗೆ ಹೋಗುವುದಕ್ಕೆ ನಮ್ಮದೇನೂ ತಕರಾರಿಲ್ಲ. ಅವರಿಗೆ ದೆಹಲಿಗೆ ಹೋಗಬೇಡಿ ಎಂದು ಹೇಳುವುದಕ್ಕೆ ನಾವ್ಯಾರು? ನಿಮಗೆ ದೆಹಲಿಗೆ ಹೋಗಲು ನಾವೇನೂ ಬೇಡವೆಂದಿಲ್ಲ. ಮಂಗಳವಾರ ಬೇಡ, ಆವತ್ತು ಚರ್ಚೆ ಮಾಡುವುದಕ್ಕೆ ಬೇರೆ ವಿಷಯಗಳಿವೆ. ಇವತ್ತೇ clarification ಆಗಲಿ. ನೀವು ಹೇಗೆ ದೆಹಲಿಗೆ ಹೋಗುತ್ತಿದ್ದೀರಿ? ನಾಳೆ ನೀವು ಇನ್ಫೋಸಿಸ್‌ಗೆ ಬರುತ್ತಿಲ್ಲವೇ? ನಾಳೆ ಬೆಳಿಗ್ಗೆ ಮೈಸೂರಿನ ಇನ್ಫೋಸಿಸ್‌ನಲ್ಲಿ function ಇದೆ.

**ಶ್ರೀ ಬಿ.ಎಸ್. ಯಡಿಯೂರಪ್ಪ:** ನಿಮ್ಮ ಜೊತೆಗೇ ಬರುತ್ತೇನೆ.

**ಶ್ರೀ ಸಿದ್ದರಾಮಯ್ಯ:** ನೀವು ನಮ್ಮ ಜೊತೆಗೇನೂ ಬರುವುದು ಬೇಡ, ನೀವು ಬೇರೆಯಾಗಿಯೇ ಬನ್ನಿ. ನಾಳೆ ಮೈಸೂರಿನ ಇನ್ಫೋಸಿಸ್‌ನಲ್ಲಿ ನಡೆಯುವ functionಗೆ ನೀವು ಬರುತ್ತೀರೋ, ಇಲ್ಲವೋ?

**ಶ್ರೀ ಬಿ.ಎಸ್. ಯಡಿಯೂರಪ್ಪ:** ಬರುತ್ತೇನೆ.

**ಶ್ರೀ ಸಿದ್ದರಾಮಯ್ಯ:** ನೀವು ಇವತ್ತು ದೆಹಲಿಗೆ ಹೋಗಿ ನಾಳೆ ಅಲ್ಲಿಗೆ ಹೇಗೆ ಬರುತ್ತೀರಿ?

**ಅಧ್ಯಕ್ಷರು:** ಬೇಕಾದಷ್ಟು flights ಇವೆ.

**ಶ್ರೀ ಸಿದ್ದರಾಮಯ್ಯ:** ಹೋಗುವುದಕ್ಕೆ 3 ಗಂಟೆ, ಬರುವುದಕ್ಕೆ 3 ಗಂಟೆಯಾಗಿ ದಿನವೇ ಮುಗಿದು ಹೋಗುತ್ತದೆ. ಇನ್ನು ಹೇಗೆ ಬರುತ್ತಾರೆ?

**ಅಧ್ಯಕ್ಷರು:** ಈಗೇನು ಒಂದು ದಿವಸದಲ್ಲಿ ಲಂಡನ್‌ಗೆ ಹೋಗಿ ಬರಬಹುದು.

**ಶ್ರೀ ಸಿದ್ದರಾಮಯ್ಯ:** ಹೋಗುವುದಕ್ಕೆ 4 ಗಂಟೆ, ಬರುವುದಕ್ಕೆ 4 ಗಂಟೆ ಸೇರಿ ಒಟ್ಟು 8 ಗಂಟೆಯಾಗುತ್ತದೆ. ದಿನದಲ್ಲಿ ಇನ್ನೇನು ಸಮಯ ಉಳಿಯುತ್ತದೆ? ನಾನು ಸುಮ್ಮನೆ ನಿಮಗೆ ಹೇಳುತ್ತಿದ್ದೇನೆ. ನಾನು ನಿಮ್ಮನ್ನು ಪ್ರಶ್ನೆ ಮಾಡುತ್ತಿಲ್ಲ. ನಾಳೆ ಮಾನ್ಯ ಮುಖ್ಯಮಂತ್ರಿಗಳು ಇನ್ಫೋಸಿಸ್‌ಗೆ ಬರುವ ಕಾರ್ಯಕ್ರಮವಿತ್ತು. ಅವರು ಬರುತ್ತಾರೆಂದು ನಾನು ಅಂದುಕೊಂಡಿದ್ದೇನೆ. ಮಾನ್ಯ ನಾರಾಯಣ ಮೂರ್ತಿಯವರು ಅವರನ್ನೂ ಸಹ ಕರೆದಿದ್ದಾರೆ, ನನ್ನನ್ನೂ ಸಹ ಕರೆದಿದ್ದಾರೆ. ಅಲ್ಲಿಗೆ ಮಾನ್ಯ ಸೋನಿಯಾ ಗಾಂಧಿಯವರು ಬರುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳೂ ಸಹ ಆ ಕಾರ್ಯಕ್ರಮಕ್ಕೆ ಬರಬೇಕೆಂದೇ ನಾನೂ ಸಹ ಹೇಳುತ್ತಿದ್ದೇನೆ. ಇವತ್ತು ಇಲ್ಲೇ ಇರಲಿ, ದೆಹಲಿ programme ಮುಂದಕ್ಕೆ ಹಾಕಿ.

**ಅಧ್ಯಕ್ಷರು:** ಆಯಿತು ಬಿಡಿ.

**ಶ್ರೀ ಸಿದ್ದರಾಮಯ್ಯ:** Ok, ಮಾನ್ಯ ಅಧ್ಯಕ್ಷರೆ, ನಾನು ಏಕೆ ಇವರಿಗೆ ಕಳಕಳಿ ಇಲ್ಲವೆಂದು ಹೇಳುತ್ತಿದ್ದೇನೆ ಎಂದರೆ, 8 ಅಥವಾ 9ನೇ ತಾರೀಖು ಮಾನ್ಯ ಪ್ರಧಾನ ಮಂತ್ರಿಗಳು NREGA ಬಗ್ಗೆ ಚರ್ಚೆ ಮಾಡುವುದಕ್ಕಾಗಿಯೇ ಎಲ್ಲಾ ರಾಜ್ಯಗಳ ಗ್ರಾಮೀಣಾಭಿವೃದ್ಧಿ ಸಚಿವರುಗಳ ಸಭೆಯೊಂದನ್ನು ಕರೆದಿದ್ದರು. ನಮ್ಮ ಗ್ರಾಮೀಣಾಭಿವೃದ್ಧಿ ಮಂತ್ರಿಗಳು ಆ ಸಭೆಗೆ ಹೋಗಿಯೇ ಇಲ್ಲ.

**ಕು. ಶೋಭಾ ಕರಂದ್ಲಾಜೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು):** ಅಧಿವೇಶನ ನಡೆಯುತ್ತಿದ್ದರಿಂದ, ಮುಖ್ಯ ಕಾರ್ಯದರ್ಶಿಯವರು ಅಲ್ಲಿ ಅಟೆಂಡ್ ಮಾಡಿದರು.

**ಶ್ರೀ ಸಿದ್ದರಾಮಯ್ಯ:** ಪರವಾಗಿಲ್ಲ, ಇದಕ್ಕಿಂತ ಅದು ಬಹಳ ಮುಖ್ಯ, ಇಲ್ಲಿ ನಿಮ್ಮ ಯಾರಾದರೂ ಮಂತ್ರಿಗಳು ಕೆಲಸ ಮಾಡುತ್ತಾರೆ, ಚೀಫ್ ಸೆಕ್ರೆಟರಿ ಹೋದರಾಗುವುದಿಲ್ಲ. ಪ್ರಧಾನ ಮಂತ್ರಿಗಳು ಕರೆದಿರುವ ಸಭೆಗೆ ಮಂತ್ರಿಗಳು ಹೋಗಬೇಕಮ್ಮ. ಆಯಿತು, ಆವತ್ತು ಹೋಗದಿರುವ ದಿವಸ ನಿಮ್ಮ ಕೆಲಸವೇನಿತ್ತು ಹೇಳಿ ನೋಡೋಣ. ಆವತ್ತು ಏನೂ ಇರಲಿಲ್ಲ. ರಾಷ್ಟ್ರದ ಪ್ರಧಾನ ಮಂತ್ರಿಗಳು, ಈ ಕಾರ್ಯಕ್ರಮ ಬಹಳ ಯಶಸ್ವಿಯಿಂದ ಜಾರಿಯಾಗಬೇಕು. ಹಳ್ಳಿಗಾಡಿನ, ಸಣ್ಣ ರೈತರು, ಕೂಲಿ ಕಾರ್ಮಿಕರು, ಕೃಷಿ ಅಭಿವೃದ್ಧಿಯಾಗಬೇಕೆಂದು ಅತ್ಯಂತ ಕಳಕಳಿ ಇಟ್ಟುಕೊಂಡು ರಿವ್ಯೂ ಮೀಟಿಂಗ್ ಕರೆದರೆ, ಆಯಿತು ನೀವು ಬೇಡ, ಯಾರಾದರೂ ನಿಮ್ಮ ಮಂತ್ರಿಗಳನ್ನು ಕಳುಹಿಸಬಹುದಾಗಿತ್ತು. ನೀವು ಹೋಗಬಹುದಾಗಿತ್ತು, ಮುಖ್ಯಮಂತ್ರಿಗಳಿದ್ದರು, ನಿಮ್ಮ ಇಲಾಖೆಯನ್ನು ನೋಡಿಕೊಳ್ಳುತ್ತಿದ್ದರು. ಮತ್ತೆ ನಾವು 9ನೇ ತಾರೀಖಿನಿಂದ ಚರ್ಚೆ ಮಾಡುತ್ತಿದ್ದೆವು. ಆವತ್ತೆ ಇವರು ಉತ್ತರ ಕೊಡುವಂಥ ಅಗತ್ಯವಿರಲಿಲ್ಲ. ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, that shows ನಿಮಗೆ commitment ಇಲ್ಲವೆಂಬುದಕ್ಕೆ ಹೇಳುತ್ತಿದ್ದೇನೆ ಅಷ್ಟೆ. ಗೌರ್ನಮೆಂಟ್‌ಗೆ commitment ಇಲ್ಲ. ಮುಖ್ಯಮಂತ್ರಿಗಳಿಗೂ ಇಲ್ಲ. ಸಂಬಂಧಪಟ್ಟ ಮಂತ್ರಿಗಳಿಗೂ ಇಲ್ಲ. ಮತ್ತೆ ಗ್ರಾಮೀಣಾಭಿವೃದ್ಧಿ ಬಗ್ಗೆ ಚರ್ಚೆ ಮಾಡಿ ಸಲಹೆಗಳನ್ನು ಕೊಟ್ಟು ಏನು ಮಾಡುವುದು? ಕೃಷಿ ಬಗ್ಗೆ ನಾವು ಹೇಳಿದ್ದೇವೆ. ನೀರಾವರಿಗೆ ಇನ್ನು 5 ವರ್ಷದಲ್ಲಿ, ಈಶ್ವರಪ್ಪನವರೆ, 116ರಲ್ಲಿ 48 ಕಂಪ್ಲೀಟ್ ಆಗಿದ್ದಾವೆ. ಇನ್ನು 52 ಪ್ಲಸ್ 16 ಸೇರಿ ಒಟ್ಟು 68 ಇದ್ದಾವೆ. ಇನ್ನು 40–50 ಸಾವಿರ ಕೋಟಿ ಖರ್ಚಾಗಬೇಕು. ನೀವು ಇಲ್ಲಿ political will ಅನ್ನು ಪ್ರದರ್ಶನ ಮಾಡಬೇಕಾಗಿದೆ. Here is a Government. ನಾವು ನೀರಾವರಿ ಹೆಚ್ಚು ಮಾಡುತ್ತೇವೆ. ನಮಗೆ 45 ಲಕ್ಷ ಹೆಕ್ಟೇರ್ ಪ್ರದೇಶವನ್ನು ನೀರಾವರಿ ಮಾಡುವುದಕ್ಕೆ ಅವಕಾಶವಿದೆ. ಆದರೆ ಇದುವರೆವಿಗೆ ಆಗಿರುವುದು 31 ಲಕ್ಷ

ಹೆಕ್ಟೇರ್ ಮಾತ್ರ. ಅದನ್ನು ನಾವು ಮಾಡುತ್ತೇವೆಂದು ತಾವು political will ಅನ್ನು ತೋರಿಸಬೇಕು. ನೀವು ತೋರಿಸಲಿಲ್ಲ. This is what we expected from the Chief Minister, from the Government. ಆದರೆ ಅದನ್ನು ಮಾಡಲಿಲ್ಲ. ಇಲ್ಲೆಲ್ಲಾ ಸುವರ್ಣ ಗ್ರಾಮ ಯೋಜನೆಯಲ್ಲಿ lavatories ಕಟ್ಟಿಸಿದ್ದೀರೆಂದು ಪುನಃ ಇಲ್ಲಿ ಪ್ರಸ್ತಾಪ ಮಾಡಿದ್ದೀರಿ. ಅದು 2006–07ರಲ್ಲಿ ಪ್ರಾರಂಭವಾಗಿದ್ದು, 1204 ಹಳ್ಳಿಗಳನ್ನು select ಮಾಡಿದಿರಿ. ಇವತ್ತಿನವರೆಗೆ ಆ ಹಳ್ಳಿಗಳೆಲ್ಲಾ complete ಆಗಿದ್ದಾವೆಯೇ? ಏಕೆ ಮಾಡಲಿಲ್ಲ. ಅಲ್ಲಿ ಗುಲ್ಬರ್ಗಾದಲ್ಲಿ ಎರಡು ಸಾರಿ ಹೋಗಿ 220 ಹಳ್ಳಿಗಳನ್ನು ತೆಗೆದುಕೊಳ್ಳುತ್ತೇವೆ. ಮತ್ತೆ 200 ಹಳ್ಳಿಗಳನ್ನು ತೆಗೆದುಕೊಳ್ಳುತ್ತೇವೆಂದು ಘೋಷಣೆ ಮಾಡಿದಿರಿ. ಒಂದು ಹಳ್ಳಿಯನ್ನಾದರೂ ತೆಗೆದುಕೊಂಡಿರಾ? ಮತ್ತೆ ಸುಮಾರು ಒಂದು ಸಾವಿರ ಚಿಲ್ಲರೆ ಹಳ್ಳಿಗಳನ್ನು ಮಾಡುತ್ತೇವೆಂದು ಎಲ್ಲಾ ಶಾಸಕರ ಹತ್ತಿರ ಮಾಹಿತಿಗಳನ್ನು ತೆಗೆದುಕೊಂಡಿರಿ. ಒಂದು ರೂಪಾಯಿ ಬಿಡುಗಡೆ ಮಾಡಿದ್ದೀರಾ? ಮೊದಲನೆಯದನ್ನೇ ನೀವು ಮುಗಿಸಲಿಲ್ಲ.

**ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್:** ಶಾಸಕರಿಂದ ಪಟ್ಟಿ ಕೇಳಿದ ಮೇಲೆ, ಶಾಸಕರ ಪಟ್ಟಿಗೆ ಸ್ವಲ್ಪವಾದರೂ ಗೌರವವನ್ನು ಕೊಡಬೇಕು. ನಮ್ಮ ಹತ್ತಿರ ಪಟ್ಟಿ ತೆಗೆದುಕೊಳ್ಳುವುದು. ಆಮೇಲೆ ಜಿಲ್ಲಾ ಮಂತ್ರಿಗಳು ಅವರಿಗೆ ಇಷ್ಟ ಬಂದ ಗ್ರಾಮಗಳನ್ನು ಆಯ್ಕೆ ಮಾಡುವುದು. ಮುಖ್ಯಮಂತ್ರಿಗಳ ಸಣ್ಣ, ಮಧ್ಯಮ ಪಟ್ಟಣ ಅಭಿವೃದ್ಧಿಗೆ ಹಣ ಕೊಟ್ಟಿದ್ದೀರಿ. ಶಾಸಕರ ಸಲಹೆಗಳನ್ನು ತೆಗೆದುಕೊಂಡು ಮಾಡಿ ಎಂದು ಹೇಳುತ್ತೀರಿ. ಶಾಸಕರು ಸಲಹೆ ಕೊಡುವುದು ಒಂದಾದರೆ, ನಿಮ್ಮ DMAಗೆ ಹೋಗುವ ಪಟ್ಟಿಯೇ ಬೇರೆ. ಈ ತರಹವಾದರೆ ಶಾಸಕರಿಗೆ ಒಂದು ಗೌರವ ಕೊಡುವಂಥ ವ್ಯವಸ್ಥೆ ಹೇಗೆ ಆಗುತ್ತದೆ? ಇಲ್ಲವೆಂದರೆ, ನಮ್ಮ ಸಲಹೆ ಕೇಳದೆ ಸರ್ಕಾರವೆ ತನ್ನ ಇಚ್ಛಾನುಸಾರವಾಗಿ ಮಾಡಿದರೂ ತೊಂದರೆ ಇಲ್ಲ. ನಮ್ಮನ್ನು ಕೇಳಿ. ಆ ಜನಗಳ ಮುಂದೆ ನಮ್ಮನ್ನು ಸುಮ್ಮನೆ ಒಂದು ತರಹ ಇನ್ಸಲ್ಟ್ ಮಾಡುವಂಥ ಪ್ರಯತ್ನ ಸರ್ಕಾರದಿಂದ ಆಗಬಾರದೆಂದು ತಮ್ಮ ಮುಖಾಂತರ ಕೇಳುವುದಕ್ಕೆ ಇಚ್ಛೆಪಡುತ್ತೇನೆ.

**ಶ್ರೀ ಸಿದ್ದರಾಮಯ್ಯ:** ನಾನು ಈ ವಿಚಾರವನ್ನು ಏಕೆ ಪ್ರಸ್ತಾಪ ಮಾಡುತ್ತಿದ್ದೇನೆಂದರೆ, ಅವರನ್ನು ಟೀಕೆ ಮಾಡಬೇಕೆಂದಲ್ಲ. But these are all farce. The Government has lack of commitment for rural development. 1204 ಹಳ್ಳಿಗಳನ್ನು ಮೊದಲನೆ ಹಂತದಲ್ಲಿ ಮಾಡಿದರು. ಅವನ್ನೇ ಇವರು ಇನ್ನು ಕಂಪ್ಲೀಟ್ ಮಾಡಲಾಗಲಿಲ್ಲ. ಅದಕ್ಕೆ ಬೇಕಾದ ಪೂರ್ಣ ಹಣವನ್ನು ಇನ್ನು ಕೊಡುವುದಕ್ಕಾಗಲಿಲ್ಲ. 2008–09ರಲ್ಲಿ 12ನೇ ಹಣಕಾಸಿನ ಹಣ 175 ಕೋಟಿ ರೂಪಾಯಿಗಳು ಬಿಡುಗಡೆಯಾಯಿತು. ಅದನ್ನು 2007–08ಕ್ಕೆ ಖರ್ಚು ಮಾಡಿದರು. 2008–09ಕ್ಕೆ ಒಂದು ರೂಪಾಯಿಯೂ ಇಲ್ಲ. ಮತ್ತೆ 2009ಕ್ಕೆ action plan ಮಾಡುತ್ತೇವೆನ್ನುತ್ತಿದ್ದಾರೆ. Can we call it as a commitment to the rural development? ಹೇಗೆ? ಬಿಪಿಎಲ್ ಕಾರ್ಡ್ ಅನ್ನು ನಾವ್ಯಾರೂ ಕೊಡುವುದಕ್ಕೆ ಹೇಳಲಿಲ್ಲ. ನಿಮ್ಮ ಪಕ್ಷದಲ್ಲಿ ಯಾರಾದರು ಕೇಳಿದ್ದಾರೇನೋ ನನಗೆ ಗೊತ್ತಿಲ್ಲ. 28 ಲಕ್ಷ ಕಾರ್ಡ್‌ಗಳನ್ನು ನೆಮ್ಮದಿ ಕೇಂದ್ರಗಳಿಂದ ಕೊಟ್ಟುಬಿಟ್ಟಿರಿ. ಇವತ್ತು 80% ಕಿತ್ತು ಹಾಕಿ ಎಂದು ಸರ್ಕಾರ ಡೈರೆಕ್ಷನ್ ಕೊಟ್ಟಿದೆ. ಮಂತ್ರಿಗಳಾದ ಹಾಲಪ್ಪನವರು ಕುಳಿತುಕೊಂಡು ತಲೆ ಅಲ್ಲಾಡಿಸುತ್ತಿದ್ದೀರಿ. If I am not correct, ನಿಮ್ಮ ತುಮಕೂರು ಡಿಸಿ ಮೀಟಿಂಗ್ ಮಾಡಿ ಆದೇಶ ಕೊಟ್ಟಿದ್ದಾರಲ್ಲ? Are you going to take action against him? Without your direction, without the direction of the Government how can a D.C. issue instruction to Food DD? ಫುಡ್ ಡಿಡಿ, ಸಹಶೀಲ್ದಾರ್‌ಗೆ ಹೇಗೆ instructions ಕೊಡಲು ಬರುತ್ತದೆ? Remove 80% ಯಾರಾದರು ಕೇಳಿದ್ದರೇ? ಒಬ್ಬೊಬ್ಬರು 200 ರೂಪಾಯಿ, 500 ರೂಪಾಯಿ ಕೊಟ್ಟು ಅಫಿಡವಿಟ್ ಮಾಡಿಸಿ ನೆಮ್ಮದಿ ಕೇಂದ್ರಗಳಿಗೆ ಕೊಟ್ಟುಬಿಟ್ಟು, ಅವರಿಗೆ ಒಂದು ತಿಂಗಳು ಅಕ್ಕಿ ಕೊಟ್ಟಿರಿ. ಆಮೇಲೆ ಪುನಃ ನಿಲ್ಲಿಸಿದಿರಿ. ಮತ್ತೆ ಸೀಮೆಎಣ್ಣೆ, ಶುಗರ್ ಕೊಟ್ಟಿದ್ದೇವೆಂದು ಹೇಳಿದಿರಿ. ಅದು ಕೇಂದ್ರ ಸರ್ಕಾರದಿಂದ ಬರುತ್ತದೆ ಕೊಟ್ಟಿದ್ದೀರಿ. ಆಗಸ್ಟ್ ತಿಂಗಳಿನಲ್ಲಿ ಕೊಟ್ಟಿದ್ದೀರಾ ಹೇಳಿ ನೋಡೋಣ.

**ಶ್ರೀ ಅಮರೇಗೌಡ ಬಯ್ಯಾಪುರ:** ನಾವು ಅಲ್ಲಿ ನೋಡಿದ್ದೇವೆ. ಆ ಆದೇಶವನ್ನು ಬೇಕಾದರೆ ಪ್ರೊಡ್ಯುಸ್ ಮಾಡುತ್ತೇವೆ.

**ಒಬ್ಬ ಮಾನ್ಯ ಸದಸ್ಯರು:** ದಯವಿಟ್ಟು ಸಂಬಂಧಪಟ್ಟ ಮಂತ್ರಿಗಳು ಹೇಳುವುದಕ್ಕೆ ಅವಕಾಶ ಕೊಡಿ.

**ಶ್ರೀ ಸಿದ್ದರಾಮಯ್ಯ:** ತುಮಕೂರು ಜಿಲ್ಲಾಧಿಕಾರಿಯಾದ ಸೋಮಶೇಖರ್ ಅವರು ಕೊಟ್ಟಿರಬೇಕು. It is not a fact? ಅವರು ಮೀಟಿಂಗ್ ಮಾಡಿ ಡೈರೆಕ್ಷನ್ ಅನ್ನು ಕೊಟ್ಟಿದ್ದಾರೋ ಇಲ್ಲವೋ?

**ಶ್ರೀ ಹೆಚ್. ಹಾಲಪ್ಪ:** ಅವರು ರೆಸಲೂಷನ್ ಮಾಡಿದ್ದಾರೆ.

**ಶ್ರೀ ಸಿದ್ದರಾಮಯ್ಯ:** What do you mean by resolution and direction? What is the difference between a resolution and a direction? ಆ ರೆಸಲೂಷನ್ ಅನ್ನು ಜಾರಿಗೆ ತರುವುದಕ್ಕಾಗುವುದಿಲ್ಲ. ಏಕೆಂದರೆ, food is not given. ನಾನು ಏಕೆ ಹೇಳುತ್ತಿದ್ದೇನೆಂದರೆ, ಅರ್ಜಿಗಳನ್ನು ತೆಗೆದುಕೊಳ್ಳುವುದಕ್ಕೆ ನಿಮಗೆ ಹೇಳಿದವರ್ಯಾರು? ಇವತ್ತು ಕಿತ್ತು ಹಾಕುತ್ತೇವೆಂದರೆ, ಪಾಪ ಅವರಿಗೆಲ್ಲಾ ಏನಾಗುತ್ತದೆ? 500–1000 ರೂಪಾಯಿಗಳನ್ನು ಖರ್ಚು ಮಾಡಿ ಸ್ಟ್ಯಾಂಡ್ ಪೇಪರ್ ಸಿಗದೆ ಅಲೆದು ಅಲೆದು, ಎಲ್ಲೆಲ್ಲೋ ಹೋಗಿ ಜಾಸ್ತಿ ಹಣ ಕೊಟ್ಟು ಸ್ಟ್ಯಾಂಡ್ ಪೇಪರ್ ತೆಗೆದುಕೊಂಡು ಬಂದು ಅಫಿಡವಿಟ್ ಹಾಕಿದರು. 28 ಲಕ್ಷ ಕಾರ್ಡುಗಳನ್ನು ಏತಕ್ಕೆ ಮಾಡಿದಿರಿ? ಮಾಡಿದ ಮೇಲೆ ಎಷ್ಟು ಕೋಟಿಯಾದರೂ ಆಗಲಿ ಬಡವರ ಬಗ್ಗೆ ಕಳಕಳಿ ಇದ್ದರೆ ಸಬ್ಸಿಡಿ ಕೊಟ್ಟು ಅವರಿಗೆ ಮಾಡಬೇಕಾಗಿತ್ತು. Ineligible ತೆಗೆದು ಹಾಕಿ, we have no objection. ಆದರೆ eligibleಗೆ ಕೊಡಿ. 28 ಲಕ್ಷ ಕೊಡುವುದಕ್ಕೆ ಹೇಳಿದವರು ಯಾರು? ಲೋಕಸಭೆ ಚುನಾವಣೆ ಇತ್ತೆಂದು ಕೊಟ್ಟುಬಿಟ್ಟು, ಈಗ ಎಲ್ಲವನ್ನೂ ತೆಗೆದು ಹಾಕುತ್ತೇವೆಂದರೆ, ಇದು ಯಾವ ನ್ಯಾಯ? ಇದು ಬಡವರ ಪರವಾಗಿರುವಂಥ ಮಾತುಗಳಾ? ಬಡವರ ಪರವಾಗಿರುವ ನೀತಿಯೇ? ಬಡವರ ಪರವಾಗಿರುವ ಕಾರ್ಯಕ್ರಮವೇ?

**ಶ್ರೀ ಕರಡಿ ಸಂಗಣ್ಣ ಅಮರಪ್ಪ:** ಮಾನ್ಯ ಮುಖ್ಯಮಂತ್ರಿಗಳು ಬೆಳಗಾಂ ಅಧಿವೇಶನದಲ್ಲಿ ಬಾಂಡ್ ಯಾರು ಕೊಡುತ್ತಾರೆ, ಅದನ್ನು ತೆಗೆದುಕೊಂಡು ಅಕ್ಕಿ ಕೊಡಿ ಎಂದು ಹೇಳಿದರು.

**ಶ್ರೀ ಸಿದ್ದರಾಮಯ್ಯ:** ಬಾಂಡ್ ಬರೆದುಕೊಟ್ಟವರಿಗೆಲ್ಲಾ ಕೊಟ್ಟುಬಿಡಿ.

**ಶ್ರೀ ಎನ್. ಸಂಪಂಗಿ:** ಲ್ಯಾಪ್‌ಟಾಪ್‌ನಲ್ಲಿ ಫೋಟೋ ತೆಗೆಯಲು 45 ರೂಪಾಯಿಗಳೆಂದು ತೆಗೆದುಕೊಂಡು, ಅದು ಬರಲಿಲ್ಲವೆಂದು ಮತ್ತೆ ತೆಗೆಯಬೇಕೆಂದು ಹೇಳುತ್ತಿದ್ದಾರೆ.

**ಶ್ರೀ ಸಿದ್ದರಾಮಯ್ಯ:** ಒಂದು ವರ್ಷಕ್ಕೆ ಮೂರು ಲಕ್ಷ ಬಡವರ ಮನೆಗಳನ್ನು ಕಟ್ಟುತ್ತೇವೆಂದು ಹೇಳಿದಿರಿ. 2007–08ರಲ್ಲಿ ಒಂದು ಮನೆಯನ್ನಾದರೂ ಕೊಟ್ಟಿದ್ದೀರಾ? ಎಷ್ಟು ಮಂಜೂರು ಮಾಡಿದ್ದೀರಿ ಎಂದು ಹೇಳಿ ನೋಡೋಣ. ಹಿಂದೆ ಇದ್ದ ಹಳೆಯ ಮನೆಗಳು 2004–05, 2005–06, 2006–07, 2007–08, ಆ ಮನೆಗಳನ್ನು ಪೂರ್ತಿ ಮಾಡುವುದಕ್ಕೆ ಪೂರ್ತಿ ಮಾಡುತ್ತಿದ್ದೀರಿ ಅದು ಲೆಕ್ಕ ಕೊಡುತ್ತಿದ್ದೀರಿ ಹೊರತು 2007–08ರಲ್ಲಿ ಒಂದೂ ಮನೆ ಮಂಜೂರು ಮಾಡಿಲ್ಲ. 2008–09ರಲ್ಲಿ 25 ಮನೆ ಕೊಡುತ್ತೇವೆಂದು ಹೇಳಿದ್ದರು. 2009–10ರಲ್ಲಿ ಕೂಡ ಹೋದ ವರ್ಷದ್ದು ಈ ವರ್ಷ ಮಾಡುತ್ತಿದ್ದೀರಿ. 2007–08, 2008–09, 2009–10ಕ್ಕೆ ಒಂದು ಮನೆ ಕಟ್ಟಿಲ್ಲ. ಇವತ್ತಿನವರೆಗೆ ಆಶ್ರಯ ಸಮಿತಿಗಳನ್ನು ಮಾಡಿಲ್ಲ.

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:** ಅರ್ಬನ್ ಆಶ್ರಯ ಕಮಿಟಿ ಮಾಡುವುದಕ್ಕೆ ಬರುತ್ತದೆ. ಇವತ್ತಿನವರೆಗೆ ಒಂದೇ ಒಂದು ಪಟ್ಟಣದಲ್ಲಿ ಒಂದು ಮನೆ ಕೊಟ್ಟಿದ್ದೇವೆಂದು ಹೇಳಲಿ ನೋಡೋಣ. ಯಾವುದಾದರೂ ಒಂದು ಪಟ್ಟಣದಲ್ಲಿ ಒಂದು ಸೈಟ್ ಕೊಟ್ಟಿದ್ದೇವೆ. ಒಂದು ಮನೆ ಕೊಟ್ಟಿದ್ದೇವೆಂದು ಹೇಳಲಿ ನೋಡೋಣ. Absolutely No. ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗದವರಿಗೆ ಜಮೀನು ತೆಗೆದು ಕೊಡುತ್ತೇವೆಂದು ಒಂದು ಕಾರ್ಯಕ್ರಮ ಇದೆ. ಇವರು ಬಂದ ಮೇಲೆ ಯಾರಿಗಾದರೂ ಒಬ್ಬರಿಗೆ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗದವರಿಗೆ

ಒಂದು ಎಕರೆ ಭೂಮಿ ತೆಗೆದುಕೊಟ್ಟಿದ್ದೇವೆಂದು ಹೇಳಿ ನೋಡೋಣ. ಏಕೆಂದರೆ ಮಾನ್ಯ ಅಶೋಕ್‌ರವರು 55,000 ರೂ. ಎಂದು ನಿಗದಿ ಮಾಡಿದ್ದಾರೆ. ಎಲ್ಲಿಯೂ 50,000 ರೂ.ಗೆ ಭೂಮಿ ಸಿಗುವುದಿಲ್ಲ. ಮಾರ್ಕೆಟ್ ವ್ಯಾಲ್ಯೂ ಜಾಸ್ತಿ ಮಾಡಿ. ಇಲ್ಲಿಯವರೆಗೆ ಏಕೆ ಮಾಡಲಿಲ್ಲ?

**ಶ್ರೀ ಎಂ.ಪಿ. ಕುಮಾರಸ್ವಾಮಿ:** ಮಾನ್ಯ ಅಧ್ಯಕ್ಷರೆ, ಅದು ನೀವೇ ಮಾಡಿದ್ದು, ಈಗ ನಮ್ಮ ಸರ್ಕಾರ ಎರಡೂವರೆ ಲಕ್ಷ ಮಾಡಿದೆ. 60,000 ರೂ. ನೀವೇ ಮಾಡಿದ್ದು.

**ಶ್ರೀ ಸಿದ್ದರಾಮಯ್ಯ:** ಮಾನ್ಯ ಕುಮಾರಸ್ವಾಮಿಯವರೆ, ಕುಳಿತುಕೊಳ್ಳಿ. ಈಗ ನೀವು ಮಾಡಿ. ನಾಲ್ಕು ವರ್ಷದಿಂದ ಬಂದಿದ್ದೀರಿ ಮಾಡಿ. It is true. What was the market value in 2004-05? What is the market value in 2009-10?

**ಶ್ರೀ ಆರ್. ಅಶೋಕ್:** ಮಾನ್ಯ ಅಧ್ಯಕ್ಷರೆ, ಮಾಡಿದವರು ಅವರು, ಆಪಾದನೆ ನಮ್ಮ ಮೇಲೆ.

**ಶ್ರೀ ಸಿ.ಟಿ. ರವಿ:** ಮಾನ್ಯ ಅಧ್ಯಕ್ಷರೆ, ನೀವೆಲ್ಲ ಅನುಭವಸ್ಥರು. ಬಹಳ ವರ್ಷಗಳ ಕಾಲ ಅಧಿಕಾರ ನಡೆಸಿದವರು, ಇಷ್ಟೆಲ್ಲಾ ಜ್ಞಾನೋದಯ ಇದ್ದವರು ಏಕೆ ಎರಡು ಲಕ್ಷ ಮಾಡಲಿಲ್ಲ? ಎರಡು ಲಕ್ಷ ಮಾಡಬೇಕಿತ್ತು. 50 – 60 ವರ್ಷ ಅಧಿಕಾರ ನಡೆಸಿ ಅನುಭವವಿರುವವರು. ಅದರ ಬಗ್ಗೆ ಕಾಳಜಿ ಇದ್ದವರಲ್ಲ? ಏಕೆ ಮಾಡಲಿಲ್ಲ? ಮೊಣಕೈಗೆ ತುಪ್ಪ ಸವರಬೇಡಿ.

**ಶ್ರೀ ಸಿದ್ದರಾಮಯ್ಯ:** Assuming for the argument sake ನಾವು 2004–05ರಲ್ಲಿ 50,000 ರೂ. ಮಾಡಿದ್ದೆವು. ಅದೇ ಮಾರ್ಕೆಟ್ ವ್ಯಾಲ್ಯೂ 2009–10ರಲ್ಲಿ ಇಟ್ಟುಕೊಳ್ಳಬೇಕೆಂದು ಇದೆಯಾ?

**ಶ್ರೀ ಎಂ.ಪಿ. ಕುಮಾರಸ್ವಾಮಿ:** ಮಾನ್ಯ ಅಧ್ಯಕ್ಷರೆ, ಈಗ ರೂ. 2.50 ಲಕ್ಷ ಆಗಿದೆ. ಕಳೆದ ವರ್ಷ ನಾವೇ ಅನೇಕ ಜನರಿಗೆ ಭೂಮಿ ತೆಗೆದು ಕೊಟ್ಟಿದ್ದೇವೆ.

**ಶ್ರೀ ಸಿದ್ದರಾಮಯ್ಯ:** ಒಬ್ಬ ದಲಿತನಿಗೆ ಒಂದು ಗುಂಟೆ ಜಮೀನು ತೆಗೆದುಕೊಡುವುದಕ್ಕಾಗುವುದಿಲ್ಲ. ಆ ಕಾರ್ಯಕ್ರಮ ಹಾಗೆಯೇ ಇದೆ. It is not at all implemented since 3-4 years. ಇವತ್ತಿನವರೆಗೆ ಇವರಿಗೆ ಬಗರ್ ಹುಕುಂ ಸಮಿತಿಗಳನ್ನು ಮಾಡುವುದಕ್ಕಾಗಲಿಲ್ಲ. ಬಗರ್ ಹುಕುಂ ಹಾಗೂ ಆರಾಧನಾ ಸಮಿತಿಗಳನ್ನು ಮಾಡದೆ ಹಣ ಲ್ಯಾಪ್ಸ್ ಆಗುತ್ತಿದೆ. ಟ್ರಿಬ್ಯುನಲ್‌ಗಳನ್ನು ಮಾಡಿಲ್ಲ.

**ಶ್ರೀ ಗೋವಿಂದ ಎಂ. ಕಾರಜೋಳ:** ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ತಾವು ಏನು ಆಪಾದನೆ ಮಾಡುತ್ತಿದ್ದೀರಿ ಅದು ಸರಿ ಅಲ್ಲ. ಆರಾಧನಾ ಸಮಿತಿ ಮಾಡಿದೆ, ಒಂದೆರಡು ಉಳಿದಿರಬಹುದು. ಆದರೆ ಆಗಿವೆ. ನನ್ನ ಕ್ಷೇತ್ರದಲ್ಲಿ ಆಗಿರುವುದನ್ನು ನಾನು ಹೇಳುತ್ತಿದ್ದೇನೆ. ಸಾರಾಸಗಟು ಹೇಳುವುದು ಸರಿಯಲ್ಲ. ಜಿಲ್ಲೆಯಲ್ಲಿ ಒಂದೋ ಎರಡೋ ಉಳಿದಿರಬಹುದು. ಅಂಥವು ಉಳಿದಿದ್ದರೆ ಅವುಗಳನ್ನು ಮಾಡಿ ಕೊಡುತ್ತೇವೆ. ಕೆಲವು ಕಡೆ ಕಮಿಟಿಗಳನ್ನು ಮಾಡಿದ್ದಾರೆ. ಆರಾಧನಾ ಸಮಿತಿಗಳು ಆಗಿವೆ. ಕಳೆದ ವರ್ಷ ಬಿಡುಗಡೆ ಮಾಡಿದ ಹಣ ಖರ್ಚಾಗಿದೆ.

**ಶ್ರೀ ಸಿದ್ದರಾಮಯ್ಯ:** ಚಾಮುಂಡಿಬೆಟ್ಟದಲ್ಲಿ ಇವತ್ತಿನವರೆಗೆ ಕಮಿಟಿ ಆಗಿಲ್ಲ. ಮುಜರಾಯಿ ಸಮಿತಿಗಳು ಮಾಡುವುದಕ್ಕಾಗಲಿಲ್ಲ. ಮಹದೇಶ್ವರ ಬೆಟ್ಟದಲ್ಲಿ ಮಾಡಿಲ್ಲ. ನಂಜುಂಡೇಶ್ವರ ದೇವಸ್ಥಾನದಲ್ಲಿ ಮಾಡಿಲ್ಲ. ಮಾನ್ಯ ಕರುಣಾಕರ ರೆಡ್ಡಿಯವರು ಇಲ್ಲಿಯೇ ಇದ್ದಾರೆ. ಬಗರ್ ಹುಕುಂ ಕಮಿಟಿಗಳು ಮತ್ತು ಟ್ರಿಬ್ಯುನಲ್‌ಗಳು ಇವತ್ತಿನವರೆಗೂ ಆಗಿಲ್ಲ. ಮಾಡುವುದು ಬೇರೆ.

**ಶ್ರೀ ಜಿ. ಕರುಣಾಕರ ರೆಡ್ಡಿ:** ಯಾವುದೇ ಕಡತ ಬಂದರೂ immediate ಆಗಿ clear ಮಾಡಿ ಕಳುಹಿಸುತ್ತಿದ್ದೇನೆ.

**ಶ್ರೀ ಸಿದ್ದರಾಮಯ್ಯ:** ನೀವು ಮಾಡುವುದಿಲ್ಲ. ಕೆಲಸ ಮಾಡಬೇಕಲ್ಲ. ಕೆಲಸ ಮಾಡುತ್ತಿದ್ದಾವಾ ಹೇಳಿ ನೋಡೋಣ. ನಿಮಗೆ ಕಾನೂನು ಕೂಡ ಪಾಸ್ ಮಾಡಿ ಕೊಟ್ಟಿದ್ದೇವೆ.

**ಶ್ರೀ ಗೋವಿಂದ ಎಂ. ಕಾರಜೋಳ:** ಲ್ಯಾಂಡ್ ಟ್ರಿಬ್ಯುನಲ್ಸ್ ಆಗಿವೆ. ನನ್ನ ಕ್ಷೇತ್ರದಲ್ಲಿಯೇ ಟ್ರಿಬ್ಯುನಲ್ ಸಿಟ್ಟಿಂಗ್ಸ್ ಆಗಿವೆ. ನನ್ನ ಕ್ಷೇತ್ರದಲ್ಲಿ ಲ್ಯಾಂಡ್ ಟ್ರಿಬ್ಯುನಲ್ ಆಗಿದೆ. ಆರಾಧನಾ ಆಗಿದೆ.

**ಶ್ರೀ ಸಿದ್ದರಾಮಯ್ಯ:** ನಿಮ್ಮ ತಾಲ್ಲೂಕಿನಲ್ಲಿ ಮಾಡಿಕೊಂಡರೆ, ನಮ್ಮ ತಾಲ್ಲೂಕಿಗೂ ಮಾಡಿ.

**ಶ್ರೀ ಅಮರೇಗೌಡ ಬಯ್ಯಾಪುರ:** ಮಾನ್ಯ ಅಧ್ಯಕ್ಷರೆ, ಎಲ್ಲಿ BJP ಶಾಸಕರು ಇದ್ದಾರೆ ಅಲ್ಲಿ ಎಲ್ಲಾ ಆಗಿದೆ. ಬೇರೆ ಕಡೆ ಮಾಡಿಲ್ಲ.

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:** ಮಾನ್ಯ ಕಾರಜೋಳರವರೆ, ನಿಮ್ಮದು ಆಗಿದೆ. ನಮ್ಮಲ್ಲಿ ಆಗಿಲ್ಲ. ಮಾನ್ಯ ಕರುಣಾಕರ ರೆಡ್ಡಿಯವರಿಗೆ ಕೇಳಿ ಆಗಿದೆಯಾ ಎಂದು. ಆಗಿಲ್ಲ. ನಿಮಗೆ ಗೊತ್ತಿಲ್ಲ ಕುಳಿತುಕೊಳ್ಳಿ. ಆಗಿಲ್ಲವೆಂದು ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ, ನೀವು ಆಗಿದೆ ಎಂದು ಹೇಳುತ್ತಿದ್ದೀರಿ.

**ಶ್ರೀ ಜಿ. ಕರುಣಾಕರ ರೆಡ್ಡಿ:** ಮಾನ್ಯ ಅಧ್ಯಕ್ಷರೆ, ಎಲ್ಲಾ ಕ್ಷೇತ್ರಗಳನ್ನು ಆದಷ್ಟು ಬೇಗ ಮಾಡುತ್ತೇವೆ.

**ಶ್ರೀ ಗೋವಿಂದ ಎಂ. ಕಾರಜೋಳ:** ಮಾನ್ಯ ಅಧ್ಯಕ್ಷರೆ, ಒಂದೆರಡು ಉಳಿದಿರಬಹುದು. ಮಾನ್ಯ ಅಮರೇಗೌಡರೆ. ನಾನೇ ನಿಮ್ಮ ಜಿಲ್ಲೆಯ ಉಸ್ತುವಾರಿ ಸಚಿವನಿದ್ದೇನೆ. ನೀವೇಕೆ ಒಂದು ದಿನವೂ ಹೇಳಲಿಲ್ಲ? ಕೊಪ್ಪಳ ಜಿಲ್ಲಾ ಉಸ್ತುವಾರಿ ಮಂತ್ರಿ ನಾನು. ಪ್ರತಿ ತಿಂಗಳು ಒಂದೋ ಎರಡೋ ಸಭೆ ಮಾಡೇ ಮಾಡುತ್ತೇನೆ. ಪ್ರತಿ ಸಭೆಯಲ್ಲಿಯೂ ಇದ್ದೇ ಇರುತ್ತಾರೆ. ಆಗಲಾದರೂ ಹೇಳಬೇಕಾಗಿತ್ತು.

**ಶ್ರೀ ಸಿದ್ದರಾಮಯ್ಯ:** ಮಾನ್ಯ ಕಾರಜೋಳರವರೆ, ಕುಳಿತುಕೊಳ್ಳಿ. I am not disputing your statement. What I am disputing is ನಮ್ಮ ಇಲ್ಲಿರತಕ್ಕಂತಹ ಒಬ್ಬ ಶಾಸಕರ ಕ್ಷೇತ್ರದಲ್ಲಿಯೂ ಕೂಡ ಆಗಲಿಲ್ಲ. That

shows how committed they are. ಮಾನ್ಯ ಅಧ್ಯಕ್ಷರೆ, ನಂಜುಂಡಪ್ಪನವರ ವರದಿ...

**ಶ್ರೀ ಗೋವಿಂದ ಎಂ. ಕಾರಜೋಳ:** ಮಾನ್ಯ ನಾಡಗೌಡರು ಎದ್ದಿದ್ದಾರೆ. ಬಿಜಾಪುರ ಜಿಲ್ಲೆಗೂ ನಾನೇ ಉಸ್ತುವಾರಿ ಮಂತ್ರಿಯಾಗಿದ್ದೇನೆ. ಕೊಪ್ಪಳಕ್ಕೂ ನಾನೇ ಉಸ್ತುವಾರಿ ಮಂತ್ರಿಯಾಗಿದ್ದೇನೆ. ಆಗಿಲ್ಲವೆಂದು ಅವರು ಎದ್ದು ಹೇಳಿಬಿಡಲಿ. ಮಾನ್ಯ ನಾಡಗೌಡರು ಇಲ್ಲವೆಂದು ಹೇಳಲಿ.

**ಶ್ರೀ ಸಿದ್ದರಾಮಯ್ಯ:** ಆಯಿತು. ಮಾನ್ಯ ನಾಡಗೌಡರು ಒಪ್ಪಿಕೊಳ್ಳುತ್ತಿದ್ದಾರೆ.

**ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್:** ಮಾನ್ಯ ಅಧ್ಯಕ್ಷರೆ, ಯಾರ್ಯಾರು ಅವರ ಪಕ್ಷದ ಕಾರ್ಯಕರ್ತರು ಪಟ್ಟಿ ಕೊಟ್ಟಿದ್ದಾರೆ ಅಲ್ಲಿ ಮಾಡಿದ್ದಾರೆ. ಇನ್ನು ಎಲ್ಲೆಲ್ಲಿಂದ ಪಟ್ಟಿ ಬಂದಿಲ್ಲ ಅಲ್ಲಿ ಪೆಂಡಿಂಗ್ ಇವೆ.

**ಶ್ರೀ ಸಿದ್ದರಾಮಯ್ಯ:** ನಿಮ್ಮವರದೇ ಮಾಡಿಕೊಳ್ಳಿ. We have no objection. ನೀವು ನಮ್ಮ ಕಾರ್ಯಕರ್ತರನ್ನು ಹಾಕುವುದಿಲ್ಲವೆಂದು ನಮಗೆ ಗೊತ್ತಿದೆ.

**ಶ್ರೀ ಬಸವರಾಜ ಬೊಮ್ಮಾಯಿ:** ಎಲ್ಲರೂ ಅವರವರು ಇದ್ದಾಗ ಅವರು ಮಾಡಿಕೊಂಡಿದ್ದಾರೆ. ಬಹಳಷ್ಟು ಕಡೆ ಆಗಿದೆ, ಇನ್ನು ಉಳಿದ ಕಡೆ ಆದಷ್ಟು ಬೇಗನೆ ಮಾಡುತ್ತೇವೆ.

**ಶ್ರೀ ಸಿದ್ದರಾಮಯ್ಯ:** Yes, Your answer is correct. ನಮ್ಮ ಜಿಲ್ಲೆಯಲ್ಲಿ ಮಾಡುವುದು ಯಾರು? ಅವರೋ, ನೀವೋ?

**ಶ್ರೀ ಗೋವಿಂದ ಎಂ. ಕಾರಜೋಳ:** ನಾನು ಹೇಳುವುದು ಸಾರಾಸಗಟಾಗಿ ಈ ಕಡೆಯವರು ಆಗಿಲ್ಲವೆಂದು ಹೇಳಿದಿರಿ. ಅದಕ್ಕೆ ಮಾನ್ಯ ನಾಡಗೌಡರು ಎದ್ದು ಆಗಿದೆ ಎಂದು ಹೇಳಲಿ ಎಂದು ಹೇಳಿದೆ.

**ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್:** ಮಾನ್ಯ ಅಧ್ಯಕ್ಷರೆ, ನಾನು ಮೊದಲೇ ಪ್ರಸ್ತಾಪ ಮಾಡುತ್ತಾ ತಮಗೆ ತಿಳಿಸಿದೆ. ಬಗರ್ ಹುಕುಂ ಸಮಿತಿ ಇರಬಹುದು. ಆಶ್ರಯ ಸಮಿತಿ ಇರಬಹುದು. ಆರಾಧನಾ ಸಮಿತಿ ಇರಬಹುದು.

ತಹಶೀಲ್ದಾರ್‌ರವರು ಏನು ಮಾಡುತ್ತಾರೆ, ನಾವು ಹೇಳಿದವರಿಗೆ ಮಾಡುವುದಿಲ್ಲ, ನಾವು ಪಟ್ಟಿ ಕೊಡುವುದಿಲ್ಲವೆಂದು ಹೇಳಿದರೂ ಇಲ್ಲ. ನಮಗೆ ರೆವಿನ್ಯೂ ಕಾರ್ಯದರ್ಶಿಯವರು ಕೇಳುತ್ತಾರೆ, ನೀವು ಹೆಸರು ಕೊಡಲೇಬೇಕೆಂದು ಕಡ್ಡಾಯವಾಗಿ ನಮ್ಮ ಹತ್ತಿರ ಹೆಸರು ತೆಗೆದುಕೊಂಡು ಕಳುಹಿಸುತ್ತಾರೆ. ನಾವು ಆ ಲೆಟರ್ ಅನ್ನು ಕಳುಹಿಸುತ್ತೇವೆ. ಗೌರವಕ್ಕಾದರೂ ನಾವು ಕೊಟ್ಟ ಪಟ್ಟಿಯಲ್ಲಿರುವ ಒಂದು ಹೆಸರೂ ಕೂಡ ಇರುವುದಿಲ್ಲ. ಹೀಗಾದರೆ ನಮ್ಮನ್ನು ಹೆಸರು ಕೊಡಿ ಎಂದು ಕೇಳುವುದೇ ಬೇಡ. ಯಾವ ಸರ್ಕಾರವಿರುತ್ತದೋ ಆ ಪಕ್ಷದವರನ್ನೇ ನಾವು ಮಾಡಿಕೊಳ್ಳುತ್ತೇವೆಂದು ಮತ್ತು ಯಾವುದೇ ಶಾಸಕರ ಹತ್ತಿರ ಹೆಸರುಗಳ ಪಟ್ಟಿಯನ್ನು ಕೇಳಬೇಡಿ ಎಂದು ಡಿ.ಸಿ.ಗಳಿಗೆ ನೀವು ಒಂದು ಡೈರಕ್ಷನ್ ಕೊಡಿ. ನಮ್ಮ ಹತ್ತಿರ ಪಟ್ಟಿ ತೆಗೆದುಕೊಂಡು ಆ ಪಟ್ಟಿಯಲ್ಲಿರುವ ಹೆಸರುಗಳಲ್ಲಿ ಒಂದನ್ನೂ ತೆಗೆದುಕೊಳ್ಳದೇ ಇದ್ದರೆ ಪಟ್ಟಿ ಏಕೆ ಕೇಳಬೇಕು?

**ಶ್ರೀ ಆರ್. ಅಶೋಕ್ (ಸಾರಿಗೆ ಸಚಿವರು):** ಮಾನ್ಯ ಅಧ್ಯಕ್ಷರೆ, ಮಹದೇವ ಪ್ರಸಾದ್‌ರವರು ಮಂತ್ರಿಯಾಗಿದ್ದಾಗಲೂ ಮತ್ತು ನಾವು ಶಾಸಕರಾಗಿದ್ದಾಗಲೂ ಕೂಡ ನಮಗೂ ಹೆಸರಿನ ಪಟ್ಟಿ ಕಳುಹಿಸುವಂತೆ ಕೇಳಿದ್ದರು. ನಾವೂ ಕೂಡ ಹೆಸರುಗಳ ಪಟ್ಟಿಯನ್ನು ಕೊಟ್ಟಿದ್ದೆವು. ಯಾವುದೂ ಕೂಡ ಆಗಿಲ್ಲ.

**ಶ್ರೀ ಬಿ.ಬಿ. ರಾಮಸ್ವಾಮಿಗೌಡ:** ನಾವು ಪಟ್ಟಿ ಕೊಡುವುದಿಲ್ಲವೆಂದರೂ ನಮ್ಮನ್ನು ಬಿಡುವುದಿಲ್ಲ. ಹಿಂಸೆ ಮಾಡಿಯಾದರೂ ನಮ್ಮಿಂದ ಪಟ್ಟಿಯನ್ನು ತಹಶೀಲ್ದಾರ್‌ರವರು ಮತ್ತು ಡಿ.ಸಿ.ಯವರು ತೆಗೆದುಕೊಳ್ಳುತ್ತಾರೆ. ಆದರೆ ಅವರು ಕೊಡುವ ಪಟ್ಟಿಯಲ್ಲಿ ಬೇರೆ ಹೆಸರು ಬಂದಿರುತ್ತದೆ. ಈ ರೀತಿ ನಮಗೆ ಏಕೆ ಅವಮಾನ ಮಾಡುತ್ತೀರಿ? ನಮ್ಮ ಹತ್ತಿರ ಹೆಸರಿನ ಪಟ್ಟಿ ಕೇಳಿ ಕಳುಹಿಸಿ ಎಂದು ನಾವೇನಾದರೂ ನಿಮಗೆ ಹೇಳಿದ್ದವೆ?

**ಶ್ರೀ ಸಿ.ಎಸ್. ನಾಡಗೌಡ:** ಮಾನ್ಯ ಅಧ್ಯಕ್ಷರೆ, ನಮ್ಮ ಸಚಿವರಾದ ಕಾರಜೋಳ್ ಸಾಹೇಬರು ಮಾತನಾಡುವಾಗ ಕೆಲವೊಂದು ಜಿಲ್ಲೆಗಳಲ್ಲಿ ಆಗಿದೆ. ಕೆಲವೊಂದು ಜಿಲ್ಲೆಗಳಲ್ಲಿ ಆಗಿಲ್ಲವೆಂದು ಹೇಳಿದರು. ವಿರೋಧ ಪಕ್ಷದ ನಾಯಕರು ಕೂಡ ಅದನ್ನೇ ಹೇಳಿದ್ದು. ಇದೊಂದು ಕಡೆ ಇರಲಿ.

ಎರಡನೆಯದಾಗಿ ಯಾವ ಕಾರಣದಿಂದ ಶಾಸಕರನ್ನು ಅಲ್ಲಿ ಸದಸ್ಯರನ್ನಾಗಿ ತೆಗೆದರು ಎಂಬುದು ನನಗಂತೂ ಅರ್ಥವಾಗುತ್ತಿಲ್ಲ. ಎಲ್ಲಾ ಸರ್ಕಾರಗಳಲ್ಲಿಯೂ ಕೂಡ ಶಾಸಕರು ಲ್ಯಾಂಡ್ ಟ್ರಿಬ್ಯುನಲ್‌ಗೆ ಸದಸ್ಯರುಗಳಾಗಿದ್ದರು. ಈಗ ನೀವು ಅದನ್ನು ತೆಗೆದು ಹಾಕಿದ್ದೀರಿ. ಯಾವ ಕಾರಣಕ್ಕೆ ತೆಗೆದು ಹಾಕಿದಿರೋ ಅದು ನಮಗೂ ಗೊತ್ತಿಲ್ಲ. ಯಾವ ಉದ್ದೇಶದಿಂದ ಶಾಸಕರನ್ನು ತೆಗೆದು ಹಾಕಿದಿರೋ ನಮಗೆ ಗೊತ್ತಿಲ್ಲ. ಶಾಸಕರ್ಯಾರೂ ಕಮಿಟಿಯ ಸದಸ್ಯರಾಗಿ ಎಲ್ಲಿಯೂ ಇಲ್ಲ.

**ಶ್ರೀ ಸಿದ್ದು ಸವದಿ:** ಹಿಂದೆ ಕೂಡ ಶಾಸಕರು ಇರಲಿಲ್ಲ.

**ಶ್ರೀ ಸಿ.ಎಸ್. ನಾಡಗೌಡ:** ಮೇಜರ್ ತಾಲ್ಲೂಕಿನಲ್ಲಿ ಯಾರು ರೆಪ್ರೆಸೆಂಟ್ ಮಾಡುತ್ತಿದ್ದರೋ ಅಂಥ ಶಾಸಕರು ಸದಸ್ಯರಾಗಿದ್ದರು. ಸವದಿಯವರೆ, ನಿಮಗೆ ಸಂಪೂರ್ಣವಾಗಿ ಈ ಬಗ್ಗೆ ಗೊತ್ತಿಲ್ಲವೆಂದರೆ ಕೇಳಿ ತಿಳಿದುಕೊಳ್ಳಿ. ಎಲ್ಲಾ ಕಡೆಗಳಲ್ಲಿ ಶಾಸಕರು ಆಗಿರುವುದಿಲ್ಲ. ಆದರೆ ಮೇಜರ್ ತಾಲ್ಲೂಕನ್ನು ಯಾರು ರೆಪ್ರೆಸೆಂಟ್ ಮಾಡಿರುತ್ತಾರೋ ಅವರು ಸದಸ್ಯರಾಗಿರುತ್ತಾರೆ. ಯಾರು ಅಂಥ ಶಾಸಕರಿರುತ್ತಾರೋ ಅವರು ಆ ಕಮಿಟಿಯಲ್ಲಿ ಸದಸ್ಯರಾಗಿರುತ್ತಿದ್ದರು. ನಿಮಗೆ ಗೊತ್ತಿಲ್ಲವೆಂದರೆ ಸ್ವಲ್ಪ ಕೇಳಿ ತಿಳಿದುಕೊಳ್ಳಿ.

**ಶ್ರೀ ಮಾಲೀಕಯ್ಯ ಏ. ಗುತ್ತೇದಾರ್:** ಆ ರೀತಿ ಇತ್ತು. ಕಂದಾಯ ಮಂತ್ರಿಗಳು ಈ ಬಗ್ಗೆ ಕ್ಲಾರಿಫಿಕೇಶನ್ ಅನ್ನು ಕೊಡಬೇಕಾಗುತ್ತದೆ.

**ಶ್ರೀ ಸಿದ್ದರಾಮಯ್ಯ:** ಕರುಣಾಕರ ರೆಡ್ಡಿಯವರೆ, ಏನು ಹೊರಟು ಹೋಗುತ್ತಿದ್ದೀರಿ? ನಿಮಗೇ ನಾನು ಹೇಳುತ್ತಿರುವುದು.

**ಶ್ರೀ ಜಿ. ಕರುಣಾಕರ ರೆಡ್ಡಿ:** ನೀವು ಹೇಳಿ. ನಾನು ಕೇಳುತ್ತೇನೆ.

**ಶ್ರೀ ಸಿದ್ದರಾಮಯ್ಯ:** ನೀವು ಆ ಕಡೆ ಹೋದರೆ ಕೇಳುವುದೇನು? ಮಾನ್ಯ ಅಧ್ಯಕ್ಷರೆ, ಕೂಡಲೇ ಸಮಿತಿ ಮಾಡಿ. ಬಹಳ ಜನರ ಅಪ್ಲಿಕೇಶನ್‌ಗಳು ಇನ್ನೂ ಪೆಂಡಿಂಗ್ ಇವೆ. Lot of applications are pending. ಈಗೇನಾಗಿದೆಯೆಂದರೆ ಅನೇಕ ಕಡೆಗಳಲ್ಲಿ ಇದರ ಬಗ್ಗೆ ಅನೇಕ ವರ್ಷಗಳಿಂದ ಇತ್ಯರ್ಥ ಮಾಡದೇ ಇರುವುದರಿಂದ ಪಟ್ಟಣದ ಸುತ್ತ acquisition ಆಗುತ್ತವೆ.

ಪಾಪ ಇವರ್ಯಾರಿಗೂ ಮೂರು ಕಾಸಿನ ಪರಿಹಾರ ಕೂಡ ಸಿಗುತ್ತಿಲ್ಲ. ಏಕೆಂದರೆ ಅವರ ಹತ್ತಿರ ಹಕ್ಕು ಪತ್ರಗಳಿಲ್ಲ. ಅವರ ಜಮೀನಿಗೇ ಅವರು ಲೋನ್‌ನ್ನು ತೆಗೆದುಕೊಳ್ಳುವುದಕ್ಕೆ ಆಗುತ್ತಿಲ್ಲ. 40 ವರ್ಷಗಳಿಂದ ಕೃಷಿ ಮಾಡುತ್ತಿದ್ದಾರೆ. ನಮ್ಮ ತಾಲ್ಲೂಕಿನಲ್ಲಿ ಒಬ್ಬರು ಪಾಪ, 45 ವರ್ಷದಿಂದ ಕೃಷಿ ಮಾಡುತ್ತಿದ್ದಾರೆ. ಅವರು ಈ ಜಮೀನಿನಲ್ಲಿ ಉಳುಮೆ ಮಾಡಿಕೊಂಡು, ವ್ಯವಸಾಯ ಮಾಡಿಕೊಂಡು ಜೀವನ ನಡೆಸುತ್ತಿದ್ದಾರೆ. ಸುಮಾರು 20 ವರ್ಷದಿಂದ ಅರ್ಜಿಯನ್ನು ಕೊಡುತ್ತಾ ಬಂದಿದ್ದಾರೆ. ಇವತ್ತಿನವರೆವಿಗೆ ಅವರಿಗೆ ಗ್ರ್ಯಾಂಟ್ ಮಾಡಿಕೊಡುವುದಕ್ಕೆ ಆಗಿಲ್ಲ. ನಾವು ಇದ್ದಾಗ ಅವರು ಅರ್ಜಿ ಹಾಕಿಲ್ಲ. ಈಗ ಅರ್ಜಿಯನ್ನು ಹಾಕಿಕೊಂಡು ಬಂದಿದ್ದಾರೆ. ಈಗ ನೋಡಿದರೆ ಈಗ ಇನ್ಯಾವನೋ ಒಬ್ಬ ಒಳಗೆ ನುಗ್ಗಿಬಿಟ್ಟಿದ್ದಾನೆ. ಅಲ್ಲಿ ನಾನು ಕೃಷಿ ಮಾಡುತ್ತಿದ್ದೆ ಎಂದು ಹೇಳಿಕೊಂಡಿದ್ದಾನೆ. ಆ ಪೊಲೀಸ್‌ನವರು ಅಲ್ಲಿಗೆ ನೀನೂ ಹೋಗಬೇಡ ಮತ್ತು ಅವನೂ ಹೋಗುವುದು ಬೇಡವೆಂದು ತೀರ್ಮಾನವನ್ನು ಮಾಡಿಬಿಟ್ಟಿದ್ದಾರೆ. ಪಾಪ 40 ವರ್ಷದಿಂದ ಕೃಷಿ ಮಾಡಿಕೊಂಡು ಬರುತ್ತಿದ್ದವನು ಈ ರೀತಿಯಾದರೆ ಏನು ಮಾಡಬೇಕು ಹೇಳಿ. ನೀವು ಬೇಕಾದರೆ ಈ ರೀತಿಯಾಗಿದೆಯೋ ಅಥವಾ ಇಲ್ಲವೋ ಎಂಬ ಬಗ್ಗೆ ಮೈಸೂರು ತಾಲ್ಲೂಕು ಪೊಲೀಸ್ ಸ್ಟೇಶನ್‌ಗೆ ಫೋನ್ ಮಾಡಿ ತಿಳಿದುಕೊಳ್ಳಿ.

**ಶ್ರೀ ಬಸವರಾಜ ಬೊಮ್ಮಾಯಿ:** ನಿಮ್ಮ ಡೈರಕ್ಷನ್ ಏನಾದರೂ ಇರಬೇಕು.

**ಶ್ರೀ ಸಿದ್ದರಾಮಯ್ಯ:** ಇಲ್ಲಪ್ಪಾ, ನನ್ನ ಡೈರಕ್ಷನ್ ಏನೂ ಇದರಲ್ಲಿ ಇಲ್ಲ. ನಾನು interfere ಆಗುವುದಿಲ್ಲ. ಪೊಲೀಸ್‌ನವರ ಜೊತೆ ಮಾತನಾಡುವುದನ್ನು ನಾನು ಈಗ ಬಿಟ್ಟುಬಿಟ್ಟಿದ್ದೇನೆ. ಇನ್ನು ನಂಜುಂಡಪ್ಪ ವರದಿಯಲ್ಲಿ imbalance ತೆಗೆಯಬೇಕು ಎಂದು ಹೇಳಲಾಗಿದೆ. ಇದಕ್ಕಾಗಿ ಇವರು ಎಷ್ಟು ದುಡ್ಡನ್ನು ಇಟ್ಟಿದ್ದರು ಮತ್ತು ಎಷ್ಟು ದುಡ್ಡನ್ನು ಖರ್ಚು ಮಾಡಿದ್ದಾರೆ ಎಂಬ ಬಗ್ಗೆ ಇವರು ಲೆಕ್ಕ ಕೊಡಲಿ. ಇವರು ಪ್ಲಾನ್‌ನೊಳಗೆ ಎಷ್ಟು ಖರ್ಚು ಮಾಡಿದ್ದಾರೆ ಎಂದು ಲೆಕ್ಕ ಕೊಡಲಿ ನೋಡೋಣ. ಗುಲ್ಬರ್ಗಾ ಸೇರಿದಂತೆ 39 most backward ಪ್ರದೇಶಗಳೇನಿವೆ ಅವುಗಳಿಗೆ ಕಳೆದ ಮೂರು ವರ್ಷಗಳಿಂದ ಏನು ಮಾಡಿದ್ದಾರೆ ಎಂಬುದನ್ನು ಹೇಳಲಿ ನೋಡೋಣ. ಅಲ್ಲಿ ಶಿಕ್ಷಣ ಎಷ್ಟು ಇಂಪ್ರೂವ್ ಆಗಿದೆ.

ರೋಡ್‌ಗಳು ಎಷ್ಟು ಇಂಪ್ರೂವ್ ಆಗಿದೆ. ಜನರ ಆರೋಗ್ಯ ಎಷ್ಟು ಇಂಪ್ರೂವ್ ಆಗಿದೆ. ಕುಡಿಯುವ ನೀರಿನ ಸೌಲಭ್ಯ ಎಷ್ಟು ಇಂಪ್ರೂವ್ ಆಗಿದೆ ಎಂಬುದನ್ನು ಇವರು ಹೇಳಲಿ ನೋಡೋಣ.

**ಶ್ರೀ ಗೋವಿಂದ ಎಂ. ಕಾರಜೋಳ:** ಮಾನ್ಯ ಅಧ್ಯಕ್ಷರೆ, 114 ಕಿತ್ತೂರು ರಾಣಿ ಚೆನ್ನಮ್ಮ ಹೆಸರಿನಲ್ಲಿ ವಸತಿ ಶಾಲೆಗಳನ್ನು ಮಾಡಿದ್ದೇವೆ. ಇವರು ಏನು ಮಾಡಿಲ್ಲವೆಂದು ಹೇಳುತ್ತಿದ್ದಾರೆ. ಅದಕ್ಕಾಗಿ ನಾನು ಇದನ್ನು ಹೇಳುತ್ತಿದ್ದೇನೆ. ಇದಕ್ಕೆ ಈಗ 200 ಗ್ರಾಮಗಳನ್ನು ಹೆಚ್ಚುವರಿಯಾಗಿ ಸೇರಿಸಿದ್ದೇವೆ.

**ಶ್ರೀ ಸಿದ್ದರಾಮಯ್ಯ:** ಕಾರಜೋಳರವರೆ, ನಿಮಗೆ ಕಳೆದ ವರ್ಷ 750 ಕೋಟಿ ರೂಪಾಯಿಗಳು ಮೈನರ್ ಇರಿಗೇಶನ್ ಇತ್ತು. ಎಷ್ಟು ದುಡ್ಡು ಬಂತು ಹೇಳಿ ನೋಡೋಣ. ಈ ವರ್ಷ ಹೊಸ ಕೆಲಸಗಳನ್ನು ತೆಗೆದುಕೊಳ್ಳುವುದಕ್ಕೆ ಕೆರೆಗಳನ್ನು ಕಟ್ಟುವುದಕ್ಕೆ ಎಷ್ಟು ದುಡ್ಡಿದೆ ಹೇಳಿ ನೋಡೋಣ.

**ಶ್ರೀ ಬಸವರಾಜ ಬೊಮ್ಮಾಯಿ:** ಮಾನ್ಯ ಅಧ್ಯಕ್ಷರೆ, ಎಸ್‌ಸಿ/ಎಸ್‌ಟಿ ಲ್ಯಾಂಡ್ ಖರೀದಿಗೆ ಇಟ್ಟಿರುವ 50 ಸಾವಿರ ಹಣ ಹಳೆಯದಿದೆ. ಲ್ಯಾಂಡ್ ಖರೀದಿ ಯಾವುದೂ ಮಾಡುತ್ತಿಲ್ಲವೆಂದು ಹೇಳಲಾಗುತ್ತಿತ್ತು. ಈ ಬಗ್ಗೆ ಮೊನ್ನೆ ನಾವು ಕ್ಯಾಬಿನೆಟ್‌ನಲ್ಲಿ ಡಿಸಿಶನ್ ಮಾಡಿ ಎಸ್‌ಸಿ/ಎಸ್‌ಟಿ ಲ್ಯಾಂಡ್ ಖರೀದಿ ಮಾಡುವುದಕ್ಕೆ ರಿಜಿಸ್ಟ್ರೇಶನ್ ವ್ಯಾಲ್ಯು ಎಷ್ಟಿದೆ ಅಥವಾ ಎರಡೂವರೆ ಲಕ್ಷ ರೂಪಾಯಿಗಳಿಗೆ ಏರಿಸಲಾಗಿದೆ. 50 ಸಾವಿರ ಇದ್ದದ್ದನ್ನು 2.5 ಲಕ್ಷ ರೂಪಾಯಿಗಳಿಗೆ ಏರಿಸಿದ್ದೇವೆ. ಈಗ ಜಿ.ಓ. ಇಶ್ಯೂ ಆಗಿದೆ.

**ಶ್ರೀ ಸಿದ್ದರಾಮಯ್ಯ:** ಆ ಆರ್ಡರ್ ಕಾಪಿಯನ್ನು ಕೊಡಿ.

**ಶ್ರೀ ಬಸವರಾಜ ಬೊಮ್ಮಾಯಿ:** ಖಂಡಿತವಾಗಿ ನಿಮಗೆ ಆ ಆದೇಶದ ಪ್ರತಿಯನ್ನು ಕೊಡಿಸುತ್ತೇನೆ. ಮೊನ್ನೆ ನಾವು ಕ್ಯಾಬಿನೆಟ್‌ನಲ್ಲಿ ಈ ರೀತಿಯ ಡಿಸಿಶನ್ ಮಾಡಿದ್ದೇವೆ. ಇದೊಂದು important announcement ಆಗಿದೆ. ಎಸ್‌ಸಿ/ಎಸ್‌ಟಿ ಲ್ಯಾಂಡ್ ಖರೀದಿಗೆ 50 ಸಾವಿರ ಇದ್ದದ್ದನ್ನು ಹೆಚ್ಚು ಮಾಡಬೇಕೆಂದು ಏನು ಕೇಳಿದ್ದೀರಿ ಆ ಬಗ್ಗೆ ನಮ್ಮ ಸರ್ಕಾರ ಪರಿಶೀಲಿಸಿ

50 ಸಾವಿರ ಇದ್ದದ್ದನ್ನು as per the registration value, unit cost or Rs. 2.5 lakh which is maximum ಎಂದು ಮಾಡಲಾಗಿದೆ.

**ಶ್ರೀ ಸಿದ್ದರಾಮಯ್ಯ:** ನಾನು ಏನು ಹೇಳುತ್ತೇನೆಂದರೆ, ಇವತ್ತಿನವರೆವಿಗೆ ನನಗೆ ಬಂದಿರುವ information ಪ್ರಕಾರ ಇಲ್ಲಿಯವರೆವಿಗೆ ಆ ರೀತಿಯ ಆದೇಶ ಇಶ್ಯೂ ಆಗಿಲ್ಲ.

**ಶ್ರೀ ಬಸವರಾಜ ಬೊಮ್ಮಾಯಿ:** ಮೊನ್ನೆ ದಿವಸ ಆಗಿದೆ.

**ಶ್ರೀ ಸಿದ್ದರಾಮಯ್ಯ:** ಆಯಿತು. ಆದರೆ ನನಗೆ ಬಂದಿರುವ information ಪ್ರಕಾರ ನಾನು ಹೇಳಬೇಕೋ ಬೇಡವೋ ಹೇಳಿ. ಈ ಗಳಿಗೆಯವರೆವಿಗೆ ನನಗೆ ನೀವು ಹೇಳಿದ information ಬಗ್ಗೆ ಜಿ.ಓ. ನನಗೆ ದೊರೆತಿಲ್ಲ. ನೀವು ತೀರ್ಮಾನ ಮಾಡಿಕೊಂಡು ಆ ಫೈಲನ್ನು ನೀವೇ ಇಟ್ಟುಕೊಂಡು ಬಿಟ್ಟರೆ ನಮಗೆ ಹೇಗೆ ಗೊತ್ತಾಗಬೇಕು?

**ಶ್ರೀ ಬಸವರಾಜ ಬೊಮ್ಮಾಯಿ:** ಈ ರೀತಿಯವುಗಳು ಬಹಳ ಇವೆ. ಹಿಂದೆ ಯಾವ ಯಾವ ಕಾಲದಲ್ಲಿ ಮಾಡುವುದಕ್ಕೆ ಆಗಿಲ್ಲವೋ ಅಂಥವುಗಳನ್ನು ಈಗ ಮಾಡುತ್ತಿದ್ದೇವೆ. ಅದಕ್ಕಾಗಿ ನೀವು ಅಭಿನಂದನೆಯನ್ನು ಸಲ್ಲಿಸಬೇಕು.

**ಶ್ರೀ ಅಮರೇಗೌಡ ಬಯ್ಯಾಪುರ:** ಹಿಂದೆ ನೀವು ಮಾಡಿದ್ದನ್ನೇ ನಾವು ಈಗ ಮಾಡುತ್ತಿದ್ದೇವೆ ಎಂದರೆ ಅಭಿನಂದನೆ ಸಲ್ಲಿಸುವುದು ಹೇಗೆ ಬರುತ್ತದೆ.

**ಶ್ರೀ ಸಿದ್ದರಾಮಯ್ಯ:** ಬೆಂಗಳೂರಿನಲ್ಲಿ ಈಗ ಇರುವ Inter National Airport ಬರುವ ಮೊದಲು ಅಲ್ಲಿ ಒಂದು ಎಕರೆ ಜಮೀನು 30 ಲಕ್ಷ, 20 ಲಕ್ಷಕ್ಕೆ ಸಿಗುತ್ತಿತ್ತು. ಈಗ 2 ಕೋಟಿಯಾಗಿದೆ. ಏನೂ ಮಾಡುವುದಕ್ಕಾಗುವುದಿಲ್ಲ.

**ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು:** ಅದೇ ಏರ್‌ಪೋರ್ಟ್‌ಗಾಗಿ ಒಂದು ಎಕರೆಗೆ 4 ಲಕ್ಷ ರೂಪಾಯಿ, 5 ಲಕ್ಷ ರೂಪಾಯಿ ಕೊಟ್ಟು ಜಮೀನನ್ನು ಪಡೆದುಕೊಳ್ಳಲಾಗಿದೆ. ಅದೂ ಕೂಡ ರೈತರ ಜಮೀನೆ ಆಗಿದೆ.

**ಶ್ರೀ ಸಿದ್ದರಾಮಯ್ಯ:** ಹೌದು, ಅದು ನಿಜ.

**ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು:** ಇರುವ ಸತ್ಯವಾದ ವಿಚಾರವನ್ನೇ ಹೇಳಿದೆ.

**ಶ್ರೀ ಸಿದ್ದರಾಮಯ್ಯ:** ಹೌದು ಮತ್ತೆ, ಸತ್ಯವನ್ನೇ ಹೇಳಬೇಕು. ಇರುವ ವಿಚಾರ ಬಿಟ್ಟು ಬೇರೆ ಹೇಳುವುದಕ್ಕೆ ಆಗುತ್ತದೆಯೆ? 4 ಲಕ್ಷಕ್ಕೂ ಮಾಡಿದ್ದಾರೆ, 5 ಲಕ್ಷಕ್ಕೂ ಕೂಡ ಖರೀದಿ ಮಾಡಿದ್ದಾರೆ.

**ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು:** ಎಷ್ಟೆಷ್ಟು ಪರಿಹಾರ ಕೊಟ್ಟಿದ್ದೇವೆ ಎಂಬ ಬಗ್ಗೆ ಲೆಕ್ಕವಿದೆಯೆಂದು ನಾನು ಹೇಳಿದೆ.

**ಶ್ರೀ ಸಿದ್ದರಾಮಯ್ಯ:** ರೈತರ ಜಮೀನು ತೆಗೆದುಕೊಳ್ಳುವಾಗ ಮಾರ್ಕೆಟ್ ವ್ಯಾಲ್ಯೂ ಏನಿದೆ ಅದನ್ನು ಕೊಟ್ಟು ತೆಗೆದುಕೊಳ್ಳಬೇಕು.

**ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು:** ಆ ಪ್ರಕಾರವೇ ಖರೀದಿ ಮಾಡಿದ್ದಾರೆ.

**ಶ್ರೀ ಸಿದ್ದರಾಮಯ್ಯ:** ಆವತ್ತು ಏನು ಮಾರ್ಕೆಟ್ ಬೆಲೆ ಇತ್ತು ಆ ಪ್ರಕಾರ ಮಾಡಿದ್ದಾರೆ. ನೀವು ಕುಳಿತುಕೊಳ್ಳಿ.

**ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು:** ಇವತ್ತು ನೀವು ಅಲ್ಲಿ 2 ಕೋಟಿ ರೂ. ಇದೆ ಎಂದು ಹೇಳಿದಿರಲ್ಲಾ. 2 ಕೋಟಿ ರೂ. ಕೊಡುತ್ತಿಲ್ಲವಲ್ಲ.

**ಶ್ರೀ ಸಿದ್ದರಾಮಯ್ಯ:** ಹಾಗಾದರೆ ಎಷ್ಟು ಕೊಡುತ್ತಿದ್ದಾರೆ.

**ಶ್ರೀ ಕಟ್ಟಾಸುಬ್ರಹ್ಮಣ್ಯ ನಾಯ್ಡು:** 40, 50, 60 ಲಕ್ಷ ರೂಪಾಯಿ.

**ಶ್ರೀ ಸಿದ್ದರಾಮಯ್ಯ:** ಕೆ.ಐ.ಎ.ಡಿ.ಬಿ. ಇನ್‌ಫಾರ್ಜ್ ಇದ್ದೀರಲ್ಲಾ; ಎಷ್ಟು ಕೊಡುತ್ತಾರೆ?

**ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು:** ಆವತ್ತಿನ ಬೆಲೆ ಏನಿತ್ತೋ ಅದಕ್ಕೆ ತಕ್ಕಂತೆ ಕೊಟ್ಟಿದ್ದೇವೆ.

**ಶ್ರೀ ಆರ್. ಅಶೋಕ್:** ರಿಯಲ್ ಎಸ್ಟೇಟ್ ಬಗ್ಗೆ ಹೇಳಿದಂತಾಗಿದೆ.

**ಶ್ರೀ ಸಿದ್ದರಾಮಯ್ಯ:** ರಿಯಲ್ ಎಸ್ಟೇಟ್ ಬಗ್ಗೆ ನನಗೆ ಗೊತ್ತೇ ಇಲ್ಲ. I do not know, What is it.

**ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು:** ಆದರೆ ನಿಮ್ಮವರೇ ಡಬ್ಬಲ್ ಸಂಖ್ಯೆಯಲ್ಲಿ ಇದ್ದಾರೆ.

**ಶೀ ಸಿದ್ದರಾಮಯ್ಯ:** ನಮ್ಮವರು ಇರಬಹುದು, ನಾನು ಹೇಳುತ್ತಿದ್ದೇನೆ. ನಿಮ್ಮವರೂ ಇದ್ದಾರೆ, ನಮ್ಮವರೂ ಇದ್ದಾರೆ, ನಿಮ್ಮವರು ಇಲ್ಲವೋ?

**ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು:** ನಿಮ್ಮವರು ನಮ್ಮವರಿಗಿಂತ ಡಬ್ಬಲ್ ಸಂಖ್ಯೆಯಲ್ಲಿ ಇದ್ದಾರೆ. 800 ಕೋಟಿ ರೂ. 900 ಕೋಟಿ ರೂ. ಇರುವವರು ಇದ್ದಾರೆ.

**ಶ್ರೀ ಸಿದ್ದರಾಮಯ್ಯ:** ಆ ರೀತಿ ಯಾರು ಇದ್ದಾರೋ ಅವರಿಗೆ ನೀವು ಹೇಳಿ.

**ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು:** 800 ಕೋಟಿ ರೂ. 900 ಕೋಟಿ ರೂ. ಇರುವವರು, 20 ಸಾವಿರ, 30 ಸಾವಿರ ಎಕರೆ ತೆಗೆದುಕೊಂಡಿರುವವರು ಇದ್ದಾರೆ.

**ಶ್ರೀ ಸಿದ್ದರಾಮಯ್ಯ:** ನಿಮ್ಮದನ್ನು ಅವರಿಗೆ ಹೇಳಿಕೊಳ್ಳಿ. ಅವರು ನಿಮ್ಮದನ್ನು ಹೇಳಿಕೊಳ್ಳಲಿ, ನಮಗೇನು? ಏರ್‌ಪೋರ್ಟ್ ರೋಡ್‌ನಲ್ಲಿ ನಮ್ಮದಿದೆಯೇ ಹೇಳಿ. ಹಾಗೇನಾದರೂ ಇದ್ದರೆ ಈಗಲೇ ನಾನು ಬರೆದುಕೊಟ್ಟು ಬಿಡುತ್ತೇನೆ. ತೆಗೆದುಕೊಳ್ಳಿ. ಒಂದು ಗುಂಟೆ ಇದೆ ಎಂದು ತೋರಿಸಿದರೂ ಕೂಡ ನಾನು ಈಗಲೇ ಬರದುಕೊಟ್ಟು ಬಿಡುತ್ತೇನೆ. ತೋರಿಸಿ.

**ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು:** ಅಲ್ಲಿ ಯಾರು ಯಾರದ್ದು ಇದೆ ಎಂಬುದು ತಮಗೂ ಗೊತ್ತಿದೆ.

**ಶ್ರೀ ಸಿದ್ದರಾಮಯ್ಯ:** ಯಾರಿಗೆ?

**ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು:** ತಮ್ಮ ಸದಸ್ಯರದ್ದು ಯಾರ ಯಾರದ್ದು ಇದೆ ಎಂದು...

**ಶ್ರೀ ಸಿದ್ದರಾಮಯ್ಯ:** ನಮಗೂ ಗೊತ್ತಿದೆ, ನಿಮಗೂ ಗೊತ್ತಿದೆ.

**ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು:** ಹಾಗಲ್ಲ. ನಮ್ಮ ಸದಸ್ಯರದ್ದು ಯಾರ ಯಾರದ್ದು ಎಷ್ಟೆಷ್ಟು ಇದೆ. ಅವರು ಶಾಸಕರಾದಾಗ ಎಷ್ಟು ಆಸ್ತಿಯನ್ನು ಡಿಕ್ಲೇರ್ ಮಾಡಿದ್ದಾರೆ. ಆ ಆಸ್ತಿ ಹೇಗೆ ಬಂತು, ಎಷ್ಟು ಸಾವಿರ ಎಕರೆಗಳ ವ್ಯವಹಾರವಾಗಿದೆ. ಇವೆಲ್ಲವೂ ತಮಗೂ ಗೊತ್ತಿದೆ. ನಾನು ಹೊಸದಾಗಿ ಏನೂ ಹೇಳುವ ಅವಶ್ಯಕತೆ ಇಲ್ಲ. ತಾವು ಈ ಬಗ್ಗೆ ಸಮಗ್ರವಾಗಿ ಎಲ್ಲ ವಿಚಾರಗಳನ್ನೂ ತಿಳಿದುಕೊಂಡಿದ್ದೀರಿ. ನಾನು ತಮಗೆ ಪಾಠ ಹೇಳುವುದಕ್ಕೆ ಬರುವುದಿಲ್ಲ.

**2.00 P.M.**

**ಶ್ರೀ ಸಿದ್ದರಾಮಯ್ಯ:** ನಾನೇನು ಬೃಹಸ್ಪತಿ ಎಂದು ಯಾರಿಗೂ ಹೇಳುತ್ತಿಲ್ಲ.

**ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು:** ತಮ್ಮ ಎಲ್ಲಾ ಸದಸ್ಯರುಗಳದು ಏನೇನು ವಹಿವಾಟು ಇವೆ, ಎಷ್ಟೆಷ್ಟು ಸಾವಿರ ಎಕರೆಗಳಿವೆ ಎಂದು ತಮಗೂ ಗೊತ್ತಿದೆ.

**(ಗೊಂದಲ)**

**ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್:** ಮಾನ್ಯ ಅಧ್ಯಕ್ಷರೆ, ಎಲ್ಲಾ ಸದಸ್ಯರು ಅಲ್ಲ, ಸುಮ್ಮನೇ ಹೇಳುವುದಲ್ಲ, ಜವಾಬ್ದಾರಿಯಾಗಿ ಮಾತನಾಡಬೇಕು. ಎಲ್ಲಾ ಸದಸ್ಯರು ಎಂದರೆ ಅರ್ಥವೇನು? ಯಾರು ಕೆಲವರಿದ್ದಾರೆ ಅವರ ಬಗ್ಗೆ ಮಾತನಾಡಿ. ಎಲ್ಲರಿಗೂ ಅದೇ ರೀತಿ ಮಾತನಾಡುವುದಲ್ಲ. ಸುಮ್ಮನೆ ಬಾಯಿಗೆ ಬಂದ ಹಾಗೆ ಮಾತನಾಡುವುದಲ್ಲ.

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:** ಯಾರ್ಯಾರು ಶಾಸಕರಾದ ಮೇಲೆ ಇವತ್ತಿನವರೆಗೆ ಎಷ್ಟೆಷ್ಟು ಆಸ್ತಿ ಮಾಡಿದ್ದಾರೆಂದು ಚರ್ಚೆ ಮಾಡೋಣ, ತನಿಖೆ ಮಾಡಿಸಿ.

**(ಗೊಂದಲ)**

**ಶ್ರೀ ಹೆಚ್.ಡಿ. ರೇವಣ್ಣ:** ಮಾನ್ಯ ಅಧ್ಯಕ್ಷರೆ, ಈಗ ಒಂದು ಲೈನ್ ರೆಸಲ್ಯೂಷನ್ ಮಾಡಿಬಿಡೋಣ. ಮಾನ್ಯ ಕಟ್ಟಾರವರು ಮೂವ್ ಮಾಡಲಿ. ಅದಕ್ಕೆ ನಾವೆಲ್ಲ agree ಆಗುತ್ತೇವೆ. ಯಾರ್ಯಾರ ಬೇನಾಮಿ ಹೆಸರಿನಲ್ಲಿ ಏನಿದೆ

ಎಂದು ಎಲ್ಲಾ ಸಿಬಿಐ ಎನ್‌ಕ್ವೈರಿಗೆ ಕಳುಹಿಸಿಕೊಡೋಣ. ಅವರು ಆಗಬಹುದು ಎಂದು ಹೇಳುತ್ತಿದ್ದಾರೆ.

**ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು:** ಆಗಬಹುದು, ಇದಕ್ಕೆ ತಯಾರು ಇದ್ದೇವೆ.

**ಶ್ರೀ ಹೆಚ್.ಡಿ. ರೇವಣ್ಣ:** ಅವರು ಮೂವ್ ಮಾಡುತ್ತಾರೆ, ನಾನು ಮತ್ತು ಮಾನ್ಯ ಸಿದ್ದರಾಮಯ್ಯನವರು....

**ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು:** ಆಯಿತು, ಒಬ್ಬರ ಮೇಲೆ ಹೇಳಿ ಬಿಟ್ಟು ಅವರು ಮಾಡಿದ್ದೆಲ್ಲ ಮುಚ್ಚಿಕೊಳ್ಳುವುದು ಬೇಡ. ಮೊದಲಿನಿಂದ ಬರಲಿ, ಎಲ್ಲದಕ್ಕೂ ಕೂಡ ತಯಾರು. ಇದು ಆಗಬೇಕು. ಇದನ್ನು ಒಂದು ಬಾರಿ ತೊಳೆದು ಬಿಡಬೇಕು.

**ಶ್ರೀ ಹೆಚ್.ಡಿ. ರೇವಣ್ಣ:** ಅದಕ್ಕೆ ಸಿಬಿಐಗೆ ಕಳುಹಿಸಿ ಸ್ವಾಮಿ.

**ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು:** ರೆಡಿ.

**ಶ್ರೀ ಹೆಚ್.ಡಿ. ರೇವಣ್ಣ:** ಮಾನ್ಯ ಅಧ್ಯಕ್ಷರೆ, Cabinet Minister agree ಆದ ಮೇಲೆ ಅದರ ಬಗ್ಗೆ ದಯವಿಟ್ಟು ಅಧ್ಯಕ್ಷರು ಸದನದಲ್ಲಿ ರೂಲಿಂಗ್ ಕೊಡಬೇಕಾಗುತ್ತದೆ. ಅವರೇ ಹೇಳಿದ್ದಾರಲ್ಲ?

**ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು:** ಇನ್ನೂ ಹಲವಾರು ವಿಷಯಗಳು ಹೇಳುವುದಿದೆ. ಅವೆಲ್ಲವೂ ಕೂಡ ಆಗಬೇಕು. ಒಂದಲ್ಲ ಎಷ್ಟು ಹೇಳುತ್ತೇವೋ ಅವೆಲ್ಲವೂ ಆಗಬೇಕು. ಏನೇನು ಇವೆ, ಅವೆಲ್ಲವೂ ಹೇಳುತ್ತೇವೆ. ಲೋಕಾಯುಕ್ತದಿಂದ ತನಿಖೆ ಏನಾಯಿತು? ಲೋಕಾಯುಕ್ತದಿಂದ ಯಾರಿಗೆ ತನಿಖೆಯಾಯಿತು? ಏನೇನಾಯಿತು? ಎಲ್ಲವೂ ಆಗಬೇಕು.

**(ಗೊಂದಲ)**

**ಒಬ್ಬ ಮಾನ್ಯ ಸದಸ್ಯರು:** ಅದು ಅವರಿಗೂ ಗೊತ್ತಾಗಬೇಕು. ಇದು ಎನ್‌ಕ್ವೈರಿ ಆಗಲಿ.

**ಒಬ್ಬ ಮಾನ್ಯ ಸದಸ್ಯರು:** ಇದು ಸಿಬಿಐ ತನಿಖೆಯಾಗಲಿ.

**ಶ್ರೀ ಟಿ.ಬಿ. ಜಯಚಂದ್ರ:** ಮಾನ್ಯ ಅಧ್ಯಕ್ಷರೆ, ಏನಿದು?

**ಅಧ್ಯಕ್ಷರು:** ನಾನು ಏನು ಮಾಡಬೇಕೆಂದು ಹೇಳಿ? ನನಗೆ ಅರ್ಥವಾಗುತ್ತಿಲ್ಲ. ನಾನು ಬೆಳಿಗ್ಗೆಯಿಂದಲೂ ಹೇಳುತ್ತಿದ್ದೇನೆ. ನೀವು ನೀವೇ ಪರಸ್ಪರ ಮಾತನಾಡಿದರೆ ಅದಕ್ಕೆ ಅರ್ಥವಿಲ್ಲ. ಯಾರಾದರಾಗಲಿ ಪರ್ಮಿಷನ್ ತೆಗೆದುಕೊಂಡು ಮಾತನಾಡಿ ಎಂದರೆ ಯಾರೂ ಗೌರವ ಕೂಡ ಕೊಡುತ್ತಿಲ್ಲ.

**ಶ್ರೀ ಹೆಚ್.ಡಿ. ರೇವಣ್ಣ:** ಮಾನ್ಯ ಅಧ್ಯಕ್ಷರೆ, ಈ ಸದನದಲ್ಲಿ ನಾವು ಬಂದು ಧರಣಿ ಕುಳಿತುಕೊಳ್ಳಬೇಕಾಗುತ್ತದೆ.

(ಗೊಂದಲ)

**ಶ್ರೀ ಮಾಲೀಕಯ್ಯ ಏ. ಗುತ್ತೇದಾರ್:** ಈ ರೀತಿಯಾದರೆ ನಾವು ಸದನಕ್ಕೆ ಬರಬಾರದು ಎಂದೆ? ಯಾವ ವಿಷಯ ಗಂಭೀರವಾಗಿ ಇದೆ ಅದರ ಬಗ್ಗೆ ಚರ್ಚೆಯಾಗಲಿ.

**ಶ್ರೀ ಸಿ.ಎಸ್. ನಾಡಗೌಡ:** ಮಾನ್ಯ ಅಧ್ಯಕ್ಷರೆ, ಒಂದು ಅವರು ಹೇಳಿದ್ದನ್ನು ಕಡತದಿಂದ ತೆಗೆಸಿ, ಇಲ್ಲ ಎನ್‌ಕ್ವೈರಿ ಮಾಡಿಸಿ, ಎರಡರಲ್ಲಿ ಒಂದು ಮಾಡಿ. ಸಿಬಿಐಗೆ....

(ಗೊಂದಲ)

**ಶ್ರೀ ಮಾಲೀಕಯ್ಯ ಏ. ಗುತ್ತೇದಾರ್:** ಕ್ಯಾಬಿನೆಟ್ ಮಂತ್ರಿಯಾಗಿ ಇವರು ಹೇಳಿರುವುದು ಹೊರಗಡೆ ಮೆಸೇಜ್ ಏನು ಹೋಗುತ್ತದೆ? ಎನ್‌ಕ್ವೈರಿ ಆಗಲಿ ಹೇಳಿ ಅದು.

(ಗೊಂದಲ)

**ಶ್ರೀ ಸಿ.ಎಸ್. ನಾಡಗೌಡ:** ಇಲ್ಲಿ ನಿಂತು ಏನಾದರೂ ಮಾತನಾಡಿ ಹೋಗಬಹುದು ಎಂದರೆ ಅದು ಪಂಚಾಯಿತಿ ಆಗುತ್ತದೆ.

**ಶ್ರೀ ಹೆಚ್.ಡಿ. ರೇವಣ್ಣ:** 50 ವರ್ಷದಿಂದ ಯಾವ್ಯಾವ ರಾಜಕಾರಣಿಗಳದು ಇದೆ ಇಲ್ಲಿ ಮಾತನಾಡಿ. ನಾವು ಬೇಡ ಎಂದು ಹೇಳಿದೆವೇ?

**ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್:** ಇಲ್ಲಿ ಶಿಸ್ತು ಇಲ್ಲ. ಗ್ರಾಮೀಣಾಭಿವೃದ್ಧಿ ಬಗ್ಗೆ ಮಾತನಾಡಿ ಸಾಕು.

**ಅಧ್ಯಕ್ಷರು:** ಈಗ ಸದನವನ್ನು ಮಧ್ಯಾಹ್ನ ಮೂರು ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

**3.00 P.M.**

**(ಸದನವು ತನ್ನ ಕಲಾಪವನ್ನು 2.00 ಗಂಟೆ 4 ನಿಮಿಷಕ್ಕೆ ಮುಕ್ತಾಯಗೊಳಿಸಿ ಮತ್ತೆ 3.00 ಗಂಟೆಗೆ ಸೇರಲು ನಿಃಶ್ಚಯಿಸಿತು)**

**(ಭೋಜನ ವಿರಾಮದ ಬಳಿಕ ಸದನವು ಮಧ್ಯಾಹ್ನ 3.18ಕ್ಕೆ ಸಮಾವೇಶಗೊಂಡಿತು)**

**(ಸನ್ಮಾನ್ಯ ಸಭಾಧ್ಯಕ್ಷರು ಪೀಠವನ್ನಲಂಕರಿಸಿದ್ದರು)**

**ಅಧ್ಯಕ್ಷರು:** ಈಗ ವಿರೋಧ ಪಕ್ಷದ ನಾಯಕರು.

**ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು):** ಮಾನ್ಯ ಅಧ್ಯಕ್ಷರೆ, ಇನ್ನೂ 2-3 clarification ಕೇಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಅವಕ್ಕೆಲ್ಲ ಉತ್ತರ ಕೊಡುತ್ತಾರೆ ಎಂದು ನಾನು ಆಸೆ ಇಟ್ಟುಕೊಂಡಿದ್ದೇನೆ. ಆಗಲೆ ನಾನು ಡಾ: ನಂಜುಂಡಪ್ಪನವರ ವರದಿ ಬಗ್ಗೆ ಮಾತನಾಡುತ್ತಿದ್ದಾಗ, ಮಾನ್ಯ ಕಟ್ಟಾ ಸುಬ್ರಹ್ಮಣ್ಯ ನಾಯ್ಡುರವರು ಮಧ್ಯೆ ಪ್ರವೇಶ ಮಾಡಿ, real estate business ಬಗ್ಗೆ ಮಾತನಾಡುವ ಹಾಗೆ ಮಾಡಿದರು.

**ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು:** ನಾನು ಮಾತನಾಡಲಿಲ್ಲ, ತಾವೇ ಮಾತನಾಡಿದಿರಿ, ತಾವೇ ಪ್ರಸ್ತಾಪ ಮಾಡಿದಿರಿ. ತಾವು ಹೇಳಿದ್ದಕ್ಕೆ ನಾನು ಹೇಳಿದೆ ಅಷ್ಟೇ. ನಾನಾಗಿ ನಾನು ಮಧ್ಯೆ ಪ್ರವೇಶ ಮಾಡಲಿಲ್ಲ. ತಾವು ಪ್ರಸ್ತಾಪ ಮಾಡಿದಂಥದ್ದಕ್ಕೆ ನಾನು clarification ಹೇಳಿದೆ ಅಷ್ಟೇ.

**ಶ್ರೀ ಸಿದ್ದರಾಮಯ್ಯ:** ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡುರವರು clarification ಕೊಟ್ಟರು, ಆಯಿತೆ? ಆದರೆ ನೀವು ಮಾತನಾಡುತ್ತಾ real estate businessನಲ್ಲಿ ಆ ಕಡೆಯವರೆಲ್ಲ ಇದ್ದಾರೆ ಎಂದು ಹೇಳಿದಿರಿ.

ಜವಾಬ್ದಾರಿಯಿರತಕ್ಕ ಒಬ್ಬ ಮಂತ್ರಿಗಳು C.B.I. enquiry ಆಗಲಿ ಎಂದು ಹೇಳುತ್ತಾರೆ. ಅವರು C.B.I. enquiryಗೆ ಒಪ್ಪಿಗೆ ಕೊಟ್ಟಿದ್ದಾರೆ. ದಯಮಾಡಿ ಅದಕ್ಕೆ ಅವರೂ ಬದ್ಧರಾಗಬೇಕು, ನಾವೂ ಬದ್ಧರಾಗೋಣ. ಇಲ್ಲದಿದ್ದರೆ ಅವರು ಅದನ್ನು ವಾಪಸ್ಸು ತೆಗೆದುಕೊಳ್ಳಲಿ.

**ಶ್ರೀ ಹೆಚ್.ಡಿ. ರೇವಣ್ಣ:** ಅದಕ್ಕೆ ನಾನು propose ಮಾಡುತ್ತಿದ್ದೇನೆ. ಏಕೆಂದರೆ, ಮಂತ್ರಿಗಳು ಹೇಳಿಕೆ ಕೊಟ್ಟ ಮೇಲೆ ಅದರಂತೆ ಆಗಬೇಕು, ಈ ಸದನದ ಗೌರವ ಹೋಗಬಾರದು. ಇದಕ್ಕೆ ತಾವು ಈಗ Ruling ಕೊಡಬೇಕು.

**ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್:** ಸರ್ಕಾರವೇ ಒಪ್ಪಿಕೊಂಡ ಮೇಲೆ ತಾವು ಅದನ್ನು C.B.I. enquiryಗೆ ಕಳುಹಿಸಬೇಕು.

**ಶ್ರೀ ಹೆಚ್.ಡಿ. ರೇವಣ್ಣ:** ಅಧ್ಯಕ್ಷರೆ, ಈ ಬಗ್ಗೆ ತಾವು Ruling ಕೊಡಬೇಕಾಗುತ್ತದೆ.

**ಅಧ್ಯಕ್ಷರು:** ಅದನ್ನು C.B.I.ಗೆ ಕಳುಹಿಸುವಂಥ ಅವಶ್ಯಕತೆ ಇಲ್ಲ.

**ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್:** ಅವರು ಮಾತನಾಡುತ್ತಾ, ಎಲ್ಲರದ್ದೂ ಇದೆ ಎಂದು ಹೇಳಿದ್ದಾರೆ. ಅವರ ಬಾಯಿಗೆ ಏನೂ ಲಗಾಮು ಇಲ್ಲವೇ?

**ಶ್ರೀ ಹೆಚ್.ಡಿ. ರೇವಣ್ಣ:** ಒಬ್ಬ cabinet ಸಚಿವರು ಹೇಳಿದ ಮೇಲೆ, ತಾವು ದಯಮಾಡಿ ಅದನ್ನು C.B.I. enquiryಗೆ ಕೊಡಿ.

**ಅಧ್ಯಕ್ಷರು:** ಯಾವುದು refer ಮಾಡಬೇಕು ಎನ್ನುವುದನ್ನೆಲ್ಲ detail ಕೊಡಿ. ನಂತರ, I will take a decision.

**ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್:** ಅವರು ಹೇಳಿರುವುದು recordಗೆ ಹೋಗಿದೆ.

**ಅಧ್ಯಕ್ಷರು:** ಅದು recordಗೆ ಹೋಗಿರುತ್ತದೆ ಸರಿ. ಇನ್ನೂ ಬಹಳಷ್ಟು recordಗೆ ಹೋಗಿರುತ್ತದೆ.

**ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್:** ಎಲ್ಲರದ್ದೂ ಇದೆ ಎಂದರೆ ನಾವು ಸುಮ್ಮನೆ ಇರಬೇಕೇ?

**ಶ್ರೀ ಹೆಚ್.ಡಿ. ರೇವಣ್ಣ:** Cabinet ministerರವರೇ ಹೇಳಿದ್ದಾರೆ. ನಾನು ಇವತ್ತೂ ಒಪ್ಪಿಕೊಂಡಿದ್ದೇನೆ ಎಂದು ಹೇಳುತ್ತಾರೆ.

**ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್:** ಹೇಳುವುದಕ್ಕೂ ಒಂದು ಇತಿಮಿತಿ ಇರುತ್ತದೆ. ಆದರೆ ಅವರು ಬಾಯಿಗೆ ಬಂದ ಹಾಗೆ ಮಾತನಾಡುತ್ತಾರೆ.

**(ಗೊಂದಲ)**

**ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು):** ಮಾನ್ಯ ಅಧ್ಯಕ್ಷರೆ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಕ್ಕೆ ಎಂದು ಹೊರಡಿಸಿರುವ G.O. ಅನ್ನು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಕಳುಹಿಸಿಕೊಡುತ್ತೇನೆ.

**(ಗೊಂದಲ)**

**ಅಧ್ಯಕ್ಷರು:** ಈಗ ವಿರೋಧ ಪಕ್ಷದ ನಾಯಕರು ಮಾತನಾಡುತ್ತಿದ್ದಾರೆ. ಅವರೆಲ್ಲವನ್ನೂ ಕೇಳುತ್ತಿದ್ದಾರೆ. ನೀವೆಲ್ಲರೂ ಎದ್ದು ನಿಂತು ಕೇಳಿದರೆ ಹೇಗೆ?

**(ಗೊಂದಲ)**

**ಶ್ರೀ ಹೆಚ್.ಸಿ. ಬಾಲಕೃಷ್ಣ:** ಮಂತ್ರಿಗಳು ಏನು ಹೇಳಿದರು ಎನ್ನುವುದು ಕೇಳಿಲ್ಲ.

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:** I want to know from the Hon'ble Minister, Will he stand by his statement or not? ಅವರು ಆ standಗೆ ಅಂಟಿಕೊಂಡರೆ, if he agrees, let us all agree for that. ಅವರು ಏನು ಹೇಳುತ್ತಾರೋ ಅದನ್ನೆಲ್ಲವನ್ನು ಮಾಡುವುದಕ್ಕೆ ಒಪ್ಪಿಕೊಳ್ಳೋಣ, ಅವರೂ ಒಪ್ಪಿಕೊಳ್ಳಬೇಕು, ಎಲ್ಲರೂ ಒಪ್ಪಿಕೊಳ್ಳಬೇಕು. ಅದು Houseನಲ್ಲಿಯೇ ತೀರ್ಮಾನವಾಗಲಿ. ಇದಕ್ಕೆ ಮಂತ್ರಿಗಳು ಏನು ಹೇಳುತ್ತಾರೋ ಗೊತ್ತಿಲ್ಲ.

**ಶ್ರೀ ಸಿ.ಟಿ. ರವಿ:** ಮೊದಲು ಆಗಿದ್ದರೆ CBI enquiry ಮಾಡಿದರೆ ಸಾಕಾಗುತ್ತಿತ್ತು. ಈಗ FBIಗೇ ವಹಿಸಬೇಕಾಗುತ್ತದೆ. ಏಕೆಂದರೆ, ಬರೀ ದೇಶದೊಳಗೇ invest ಮಾಡಿದ್ದಾರೆಂದಲ್ಲ, ಬೇರೆ ಬೇರೆ ಕಡೆಯೂ invest ಮಾಡಿರುವ chances ಇರುವುದರಿಂದ ಅದನ್ನು FBIಗೇ ವಹಿಸಬೇಕು.

**ಶ್ರೀ ಬಸವರಾಜ ಬೊಮ್ಮಾಯಿ:** ಪರಿಶಿಷ್ಟ ಜಾತಿ: ಪರಿಶಿಷ್ಟ ಪಂಗಡದ ಜಮೀನು ಖರೀದಿ ಬಗ್ಗೆ ಹೊಸ ಆದೇಶವನ್ನು ಸರ್ಕಾರದಿಂದ ಏನು ಹೊರಡಿಸಿದ್ದೀರಿ ಎಂದು ಕೇಳಿದ್ದಾರೆ. ಅದಕ್ಕೆ ಸರ್ಕಾರಿ ಆದೇಶ ಸಂ. 80 ಎಸ್‌ಟಿಸಿ ದಿನಾಂಕ: 5.8.2009ರಂದು ಭೂ ಒಡೆತನದ ಯೋಜನೆಯಡಿಯಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿಸಲಾದ ಸಮಿತಿಯ ಮುಖಾಂತರ ಭೂಮಿ ಖರೀದಿಸುವ ಘಟಕದ ವೆಚ್ಚವನ್ನು ನೋಂದಾಯಿತ ಬೆಲೆಯ ಎರಡು ಪಟ್ಟುವರೆಗೆ ಏರಿಸಿ ಘಟಕದ ವೆಚ್ಚ ಗರಿಷ್ಠ ಮಿತಿ ಎರಡೂವರೆ ಲಕ್ಷ ರೂ.ಗಳನ್ನು ಮೀರದಂತೆ ಖರೀದಿಸಲು ಸರ್ಕಾರದಿಂದ ಮಂಜೂರಾತಿ ನೀಡಲಾಗಿದೆ. ಈ G.O. ಅನ್ನು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಕಳುಹಿಸಿಕೊಡುತ್ತೇನೆ.

**ಶ್ರೀ ಸಿದ್ದರಾಮಯ್ಯ:** ಇದೇ ರೀತಿ ಬೇರೆಯವರಿಗೂ ಅಂದರೆ ಹಿಂದುಳಿದವರಿಗೆ, ಅಲ್ಪಸಂಖ್ಯಾತರಿಗೆ, ದಲಿತರಿಗೆ ಅವರಿಗೂ ಕೂಡ ಜಮೀನು ಕೊಂಡುಕೊಳ್ಳುವುದು ಬಂದಾಗ ಅದನ್ನೂ ಕೂಡ ಸೇರಿಸಿ ಮಾಡಬೇಕು. ಇದರಲ್ಲಿ ಎರಡು ಪಟ್ಟು ಅಂದರೆ 50 ಸಾವಿರ ರೂ.ಗಳಿಂದ 1 ಲಕ್ಷ ಮಾಡುತ್ತೇವೆ. maximum ಎರಡೂವರೆ ಲಕ್ಷ ರೂ. ಎಂದು ಮಾಡುತ್ತೇವೆಂದು ಇದೆ. Alright, maximum 2.5 ಲಕ್ಷ ರೂ. ಇರಲಿ.

**ಶ್ರೀ ಬಸವರಾಜ ಬೊಮ್ಮಾಯಿ:** ಇದಕ್ಕೆ ನೀವು ಅಭಿನಂದನೆ ಸಲ್ಲಿಸುತ್ತೀರಿ ಎಂದು ಭಾವಿಸಿದ್ದೆ. ಒಂದು ಲಕ್ಷ ರೂ. ಮಾಡಿ ಎಂದು ಹೇಳಿದ್ದೀರಿ. ನಾವು ಗರಿಷ್ಠ ಮಿತಿಯನ್ನು 2.5 ಲಕ್ಷ ರೂ.ಗಳಿಗೆ ಮಾಡಿದ್ದೇವೆ. ನೀವು ಏನು ಚಿಂತನೆ ಮಾಡುತ್ತಿದ್ದೀರಿ ಅದನ್ನು ನಾವು ಈಗಾಗಲೇ actionಗೆ ತಂದಿದ್ದೇವೆ. ನಾವು ಹೇಗೆ ಟೀಕೆಯನ್ನು ಸ್ವೀಕಾರ ಮಾಡುತ್ತೇವೆ ಹಾಗೆಯೇ ನೀವು ಕೂಡ ಒಳ್ಳೆಯ

ಕೆಲಸವನ್ನು ಸ್ವೀಕಾರ ಮಾಡಿ. ಇದರಿಂದ ಜನರಿಗೆ ಒಳ್ಳೆಯ ಸಂದೇಶ ಹೋಗುತ್ತದೆ.

**ಶ್ರೀ ಕೆ.ಎಂ. ಶಿವಲಿಂಗೇಗೌಡ:** ಮಂಜೂರು ಮಾಡುವುದು ಮುಖ್ಯವಲ್ಲ. ಅದಕ್ಕೆ ಹಣ ಸಹ ಬೇಕು. ಒಂದೊಂದು ಎಕರೆ ಜಾಗವನ್ನು ಒಂದೊಂದು ಜಿಲ್ಲೆಗೆ ಇಟ್ಟರೆ ಅಲ್ಲಿ ಏನು ಮಾಡುವುದು? ಅದನ್ನು ಯಾರಿಗೆ ಕೊಡುವುದು? ಒಳ್ಳೆಯ ನಿರ್ಧಾರ ತೆಗೆದುಕೊಂಡಿದ್ದೀರಿ. ಅದರಲ್ಲಿ ಸರ್ಕಾರದ ಗುರಿ ಎಷ್ಟು? ಎಷ್ಟು ಹಣ ನಿಗದಿ ಮಾಡಿದ್ದೀರಿ?

(ಗೊಂದಲ)

**ಅಧ್ಯಕ್ಷರು:** ಈಗ ಏರಿಕೆ ಮಾಡಿದ್ದಾರೆ. ಆನಂತರ ನೀವು ಕೇಳಿ. ಶಿವಲಿಂಗೇಗೌಡರೆ, please, ಕುಳಿತುಕೊಳ್ಳಿ.

**ಶ್ರೀ ಕೆ.ಎಂ. ಶಿವಲಿಂಗೇಗೌಡ:** ಇದೆಲ್ಲ ಪುಕ್ಕಟೆ ವ್ಯವಹಾರವಲ್ಲ.

**ಶ್ರೀ ಸಿದ್ದರಾಮಯ್ಯ:** ಇದರ ಜೊತೆಗೆ ಹಿಂದುಳಿದವರಿಗೆ ಮತ್ತು ಅಲ್ಪಸಂಖ್ಯಾತರಿಗೆ ಜಮೀನು ತೆಗೆದುಕೊಡುವ ಕಾರ್ಯಕ್ರಮ ಕೂಡ ಇದೆ. ಅವರಿಗೂ ಕೂಡ ಇದೇ ರೀತಿ ಅವರನ್ನೂ ಸೇರಿಸಿ ಮಾಡಬೇಕು. ಆಸಕ್ತಿ ಇಟ್ಟು ಹೊರಡಿಸಿರುವ ಆದೇಶವನ್ನು ಇಲ್ಲಿ ಓದಿದ್ದಕ್ಕೆ ಬಸವರಾಜ ಬೊಮ್ಮಾಯಿಯವರಿಗೆ, ಸರ್ಕಾರಕ್ಕೆ ಧನ್ಯವಾದಗಳು. ಕಟ್ಟಾಸುಬ್ರಹ್ಮಣ್ಯರವರ ಬಗೆಗಿನ ಚರ್ಚೆ ಬೇಡವೇ?

**ಶ್ರೀ ಹೆಚ್.ಡಿ. ರೇವಣ್ಣ:** ಈಗ ಸದನದಲ್ಲಿ record ಆಗಿದೆ.

(ಗೊಂದಲ)

**ಶ್ರೀ ಸಿದ್ದರಾಮಯ್ಯ:** ಅವರು ಹೇಳಿರುವುದನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಹೇಗೆ ಆಗುತ್ತದೆ?

**ಶ್ರೀ ಟಿ.ಬಿ. ಜಯಚಂದ್ರ:** ಸಚಿವ ಸಂಪುಟದ ಸದಸ್ಯರಾಗಿರತಕ್ಕಂಥವರು ನಾವು CBI enquiryಗೆ ತಯಾರಾಗಿದ್ದೇವೆಂದು ಹೇಳಿದ ಮೇಲೆ ಅದನ್ನು

ವಾಪಸ್ಸು ತೆಗೆದುಕೊಳ್ಳುವ ಪ್ರಶ್ನೆ ಎಲ್ಲಿದೆ? ಇಲ್ಲ. ಜಾಸ್ತಿ ಎಂದರೆ Assurances Committee ಮುಂದೆ ಕಳುಹಿಸಬೇಕಷ್ಟೆ. ಅದು ಬಿಟ್ಟರೆ ನೀವು ವಾಪಸ್ಸು ತೆಗೆದುಕೊಳ್ಳುವ ಪ್ರಶ್ನೆ ಬರುವುದಿಲ್ಲ. ಅದನ್ನು ಅವರು ವಾಪಸ್ಸು ತೆಗೆದುಕೊಳ್ಳುವುದಕ್ಕೂ ತಯಾರಿಲ್ಲ. ನನಗೆ ಗೊತ್ತಿದೆ. ಏಕೆಂದರೆ, ಸತ್ಯಾಂಶ ಏನು ಎನ್ನುವುದು ಸಾರ್ವಜನಿಕರಿಗೆ ಗೊತ್ತಾಗಬೇಕು. ಏಕೆಂದರೆ ಆಸ್ತಿ ಅಕ್ರಮವಾಗಿ ಮಾಡಿರತಕ್ಕಂಥವರು ಆ ಕಡೆಯೂ ಇರಬಹುದು, ಈ ಕಡೆಯೂ ಇರಬಹುದು ಎಂದು ಹೇಳಿದರು. ಆಯಿತು, ಎಲ್ಲರದೂ ತನಿಖೆಯಾಗಲಿ, ಅದರಲ್ಲಿ ತಪ್ಪೇನಾಗುತ್ತದೆ?

**ಶ್ರೀ ಕಿಮ್ಮನೆ ರತ್ನಾಕರ್:** ಲೂಟಿ ಮಾಡಿದವರು ಬೇಕಾದರೆ ಆ ಆಪಾದನೆಯನ್ನು ಸ್ವೀಕರಿಸಲಿ. ಎಲ್ಲರಿಗೂ ಅದೇ ರೀತಿಯ ಆಪಾದನೆ ಮಾಡುವುದಕ್ಕಾಗುವುದಿಲ್ಲ. He should withdraw his allegations. ಎಲ್ಲರೂ ಲೂಟಿ ಹೊಡೆದಿದ್ದಾರೆಂದರೆ, ಏನರ್ಥ? ಎಲ್ಲರೂ ವ್ಯವಹಾರ ಮಾಡುತ್ತಾರೆಂದರೆ, ನಾವು ನಮ್ಮ ಬದುಕಿನಲ್ಲಿ real estate business ಮಾಡಿಲ್ಲ. ಅವರು ಯಾರಿಗೆ allegations ಮಾಡುವುದು?

**(ಗೊಂದಲ)**

**ಶ್ರೀ ಬಿ. ರಾಮಾನಾಥ ರೈ:** CBI enquiry ಮಾಡಬೇಕೆಂದು ಏನು ಹೇಳಿದ್ದಾರೆ ಆ ಮಾತಿನಿಂದ ಅವರು ಹಿಂದೆ ಸರಿಯಬಾರದು. ನಾವು ಅದಕ್ಕೆ ರೆಡಿ ಇದ್ದೇವೆ. ಯಾವ ರೀತಿಯ ತನಿಖೆಗಾದರೂ ನಾವು ರೆಡಿ ಇದ್ದೇವೆ. ಅವರು ಆ ದಂಧೆ ಮಾಡುತ್ತಾರೆಂದು ಅದಕ್ಕೆ ಎಲ್ಲರನ್ನೂ ತೋರಿಸಬಾರದು.

**(ಗೊಂದಲ)**

**ಅಧ್ಯಕ್ಷರು:** ಯಾರಾದರೂ ಒಬ್ಬರು ಮಾತನಾಡಿ. ಎಲ್ಲರೂ ಮಾತನಾಡಿದರೆ ಯಾರ ಮಾತನ್ನು ಅವರು ಕೇಳಬೇಕು?

**(ಗೊಂದಲ)**

**ಶ್ರೀ ಯು.ಟಿ. ಖಾದರ್:** ಸಮಾಜದಲ್ಲಿ ನಮ್ಮ ಗೌರವ ಉಳಿಸಿಕೊಳ್ಳಲಿಕ್ಕೆ ನಾವು ಹಗಲಿರುಳು ಪೇಚಾಡಿ ನಮ್ಮ ಮಾನಮರ್ಯಾದೆಯನ್ನು ಉಳಿಸಿಕೊಂಡು ಬರುವುದು. ಇಲ್ಲಿಗೆ ಬಂದಾಗ ಇಂಥ ಮಾತನ್ನು ನಾವು ಕೇಳುವುದಾದರೆ ನಮಗೆ ಯಾವ ರೀತಿಯ ಗೌರವ ಇಲ್ಲಿ ಸಿಗಬಹುದು? ನಾವು ಶ್ರಮ ಪಟ್ಟಿದ್ದಕ್ಕೆ, ನಾವು ತ್ಯಾಗ ಮಾಡಿದ್ದಕ್ಕೆ ಬೆಲೆ ಇಲ್ಲದ ರೀತಿಯಲ್ಲಿ ಸದನದಲ್ಲಿಯೇ ಅದೂ ಕೂಡ responsibility ಇರುವ ಮಂತ್ರಿಗಳು ಮಾತನಾಡಿದರೆ ನಮ್ಮ ಪರಿಸ್ಥಿತಿ ಏನು? ಹಾಗಾದರೆ, ನಾವು ಇವತ್ತಿನ ದಿವಸ ಸಮಾಜದಲ್ಲಿ ನಿಯತ್ತಿನಿಂದ ಏಕೆ ದುಡಿಯಬೇಕು? ಇವತ್ತು ಇದಕ್ಕೆ ಉತ್ತರ ಹೇಳುವವರು ಯಾರು? ಇದಕ್ಕೆ ಅವರು ಸ್ಪಷ್ಟನೆ ಕೊಡಲಿ. ಮಾನ್ಯ ಅಧ್ಯಕ್ಷರೆ, ನಮಗೆಲ್ಲರಿಗೂ ತಾವೇ ರಕ್ಷಣೆ ಕೊಡಬೇಕು.

**ಶ್ರೀ ಹೆಚ್.ಡಿ. ರೇವಣ್ಣ:** ಮಾನ್ಯ ಅಧ್ಯಕ್ಷರೆ, ಸರ್ಕಾರದ ಸಚಿವ ಸಂಪುಟದಲ್ಲಿ ನಿರ್ಣಯ ಮಾಡಿ ಅವರಿಗೆ ಹೇಳಿರಬೇಕು. ಏಕೆಂದರೆ, ಅವರು Cabinetನ ಒಬ್ಬ ಸಚಿವರಾಗಿ ವಿಧಾನಸಭೆಯೊಳಗೆ ಬಹಿರಂಗವಾರಿ CBIಗೆ refer ಮಾಡುವುದಕ್ಕೆ ಸರ್ಕಾರ, ನಾವು ರೆಡಿ ಇದ್ದೇವೆ, ವಿರೋಧ ಪಕ್ಷದವರು ರೆಡಿ ಇದ್ದೀರಾ ಎಂದು ನಮ್ಮ ವಿರೋಧ ಪಕ್ಷದ ಎಲ್ಲಾ ಶಾಸಕರಿಗೆ ಒಂದು challenging issue ಮಾಡಿದ್ದಾರೆ. ಆದ್ದರಿಂದ, ಇದನ್ನು CBIಗೆ ಕಳುಹಿಸಬೇಕು. ಇಲ್ಲದಿದ್ದರೆ ಶ್ರೀ ಜಯಚಂದ್ರರವರು ಹೇಳಿದ ಹಾಗೆ ಅವರು ಇಲ್ಲಿಯ Assurances Committeeಗಾದರೂ ಕಳುಹಿಸಬೇಕು. ಇಲ್ಲಿ Cabinet ಸಚಿವರು ಹೇಳಿರುವುದರಿಂದ ಸಚಿವರು ಹೇಳುವುದು ಒಂದೇ, ಸರ್ಕಾರ ಹೇಳುವುದೂ ಒಂದೇ ಅಂದರೆ ಎರಡೂ ಒಂದೇ, ಮುಖ್ಯಮಂತ್ರಿಗಳು ಹೇಳುವುದು ಒಂದೇ, Cabinet ಸಚಿವರು ಎಂದರೆ ಮುಖ್ಯಮಂತ್ರಿಯವರು ಅವರಿಗೆ ಪೂರ್ಣ ಅಧಿಕಾರ ಕೊಟ್ಟಿದ್ದಾರೆ. ಹಾಗಾಗಿ, ಮಾನ್ಯ ವಿರೋಧ ಪಕ್ಷದ ನಾಯಕರಾದ ಸಿದ್ದರಾಮಯ್ಯನವರು, ನಾವು ರೆಡಿ ಇದ್ದೇವೆ CBI enquiryಗೆ ಕೊಡಿ ಎಂದು ಹೇಳಿದ್ದಾರೆ. ಅಂತೆಯೇ ನಾವೂ ಕೂಡ ನಮ್ಮ ಪಕ್ಷದಿಂದ ರೆಡಿ ಇದ್ದೇವೆ. ವಿರೋಧ ಪಕ್ಷದ ಶಾಸಕರೆಲ್ಲರೂ ಇವತ್ತು ಭ್ರಷ್ಟರು ಎನ್ನುವ ಮಾತನ್ನು ಒಬ್ಬ ಸಚಿವ ಸಂಪುಟದ ಮಂತ್ರಿ ಹೇಳಿದಾಗ ಅದನ್ನು ಪ್ರೂವ್ ಮಾಡಿ

ತೋರಿಸಬೇಕು. ಏಕೆಂದರೆ, ಇವರು ಕಳ್ಳರೇ, ಹೇಗೆ ಎನ್ನುವ ರೀತಿ ರಾಜ್ಯದ 5 ಕೋಟಿ ಜನ ನಮ್ಮನ್ನು ನೋಡುತ್ತಿದ್ದಾರೆ. ಹಾಗಾಗಿ, CBI enquiry ಆಗಲಿ, ಯಾರ್ಯಾರದು ಏನೇನು ಎನ್ನುವುದು ಈಚೆಗೆ ಬರಲಿ. ಏಕೆಂದರೆ, ನಾವು ಆಡಳಿತ ಪಕ್ಷದ ಸದಸ್ಯರ ಬಗ್ಗೆ ಹೇಳುತ್ತಿಲ್ಲ. ಅವರ ಪಕ್ಷದಲ್ಲಿರುವವರೆಲ್ಲ ಪ್ರಾಮಾಣಿಕರು, ವಿರೋಧ ಪಕ್ಷದಲ್ಲಿ ಯಾವ ಸದಸ್ಯರು ಇದ್ದಾರೆ ಅಷ್ಟೂ ಜನರದ್ದು ಬೇಕಾದರೆ ತನಿಖೆ ನಡೆಯಲಿ, ಮಂತ್ರಿಯವರು ಕೂಡ including ನಾನೂ ರೆಡಿ ಇದ್ದೇನೆಂದು ಹೇಳಿ CBIಗೆ refer ಮಾಡಬೇಕೆಂದು ಹೇಳಿದ್ದಾರೆ. ಸಚಿವ ಸಂಪುಟದ ಎಲ್ಲಾ ಸದಸ್ಯರದು ಮತ್ತು ಅವರದ್ದೂ ಸೇರಿಸಿ ಒಪ್ಪಿಕೊಂಡಿದ್ದಾರೆ. ಅದಕ್ಕೆ CBI enquiry ಮಾಡುವುದಕ್ಕೆ ತಾವು ruling ಕೊಡಬೇಕೆಂದು ತಮ್ಮಲ್ಲಿ ಮನವಿ ಮಾಡುತ್ತಿದ್ದೇವೆ.

**ಶ್ರೀ ಬಿ. ರಮಾನಾಥ ರೈ:** ಮಾನ್ಯ ಕಟ್ಟಾ ಸುಬ್ರಹ್ಮಣ್ಯ ನಾಯ್ಡುರವರು, ಆ ಕಡೆ, ಈ ಕಡೆ ದಂಧೆ ಮಾಡುತ್ತಾರೆಂದು ಹೇಳಿರುವುದರಿಂದ ಆಡಳಿತ ಪಕ್ಷದ ಸದಸ್ಯರ ಸ್ವಾಭಿಮಾನಕ್ಕೂ ಪೆಟ್ಟು ಬಿದ್ದಿದೆ. ಇದನ್ನು ನಾವು ಎಲ್ಲರೂ ಸೇರಿ CBI enquiry ಆಗಬೇಕೆಂದು ಒತ್ತಾಯ ಮಾಡೋಣ.

(ಗೊಂದಲ)

**ಅಧ್ಯಕ್ಷರು:** ಸಿದ್ದು ಸವದಿಯವರೆ, ಒಬ್ಬೊಬ್ಬರು ಮಾತನಾಡಿ ಎಂದು ಹೇಳಿದ್ದೇನೆ. ಏಕೆ ಪರಸ್ಪರ ಕಚ್ಚಾಡುತ್ತೀರಿ? ಅವರು ಮಾತನಾಡುತ್ತಿದ್ದಾರಲ್ಲ? ಬೇಕಾದರೆ ಆಮೇಲೆ ನೀವು ಮಾತನಾಡಿ.

**ಶ್ರೀ ಬಿ. ರಮಾನಾಥ ರೈ:** ನೀವೊಬ್ಬ ಕ್ಯಾಬಿನೆಟ್ ದರ್ಜೆಯ ಸಚಿವರಾಗಿ ಇಷ್ಟು ಲಘುವಾಗಿ ಎಲ್ಲವನ್ನೂ ಮಾತನಾಡುತ್ತಾ ಹೋದರೆ ಈ ಸದನದ ಗೌರವ ಎಲ್ಲಿಗೆ ಹೋಗಬೇಕು? ಆಡಳಿತ ಪಕ್ಷದಲ್ಲಿರುವ ತಾವೂ ಕೂಡ ಅದನ್ನು ಗಂಭೀರವಾಗಿ ಪರಿಗಣಿಸಬೇಕು. ಅವರು ವಿರೋಧ ಪಕ್ಷಕ್ಕೆ ಸೀಮಿತವಾಗಿ ಮಾತನಾಡಿಲ್ಲ. ಆ ಕಡೆ ಈ ಕಡೆ ಎಲ್ಲರೂ ದಂಧೆ ಮಾಡುತ್ತಾರೆಂದು ಹೇಳಿದ್ದಾರೆ. ದಂಧೆ ಮಾಡುವವರು ಇರಬಹುದು. ಪ್ರಾಮಾಣಿಕವಾಗಿ ಬದುಕಿಕೊಂಡು ಬಂದಂಥವರು ಬಹಳಷ್ಟು ಮಂದಿ ಇದ್ದಾರೆ. ಎಲ್ಲರೂ

ಹಾಗೆಯೇ ಇದ್ದಾರೆಂದು ಹೇಳುವುದಕ್ಕಾಗುವುದಿಲ್ಲ. ಹಾಗಾಗಿ, ಇದರಿಂದ ಮನಸ್ಸಿಗೆ ನೋವಾಗುತ್ತದೆ. ಅವರು ಏನು ಹೇಳಿದ್ದಾರೆ ಬಹುಶಃ ಅದಕ್ಕೆ ಅವರು ಬದ್ಧರಾಗಿದ್ದಾರೆಂದು ನಾವು ತಿಳಿದುಕೊಂಡಿದ್ದೇವೆ. ಬಹುಶಃ Cabinet ದರ್ಜೆಯ ಮಂತ್ರಿಯಾಗಿ ಈ ಮಾತನ್ನು ಹೇಳಿದ್ದಾರೆ. ಅದನ್ನು ನಾವೆಲ್ಲರೂ ಒಪ್ಪಿಕೊಂಡಿದ್ದೇವೆ. ಈ ಕಡೆಯವರೂ, ಆ ಕಡೆಯವರೂ ಒಪ್ಪಿಕೊಂಡ ಮೇಲೆ CBI ತನಿಖೆ ಮಾಡಬೇಕೆಂದು ಏನು ಹೇಳಿದ್ದಾರೆ ಅದನ್ನು ಮಾಡಬೇಕು. ಅದಕ್ಕೆ ಅವರು ತಯಾರಾಗಬೇಕೆಂದು ಖಂಡಿತವಾಗಿ ಹೇಳಬೇಕಾಗುತ್ತದೆ. ಅಧ್ಯಕ್ಷರು ನಮ್ಮ ರಕ್ಷಣೆಗೆ ಬರಬೇಕು. ನಮ್ಮ ಮಾನ ಮರ್ಯಾದೆ ಉಳಿಸುವ ಜವಾಬ್ದಾರಿ ನಿಮ್ಮದೂ ಕೂಡ. ಅದನ್ನು ತಾವು ಕಾಪಾಡಿಕೊಂಡು ಬರಬೇಕೆಂದು ನಮ್ಮ ವಿನಂತಿ ಇದೆ.

**ಶ್ರಿ ಸಿದ್ದು ಸವದಿ:** ವಿರೋಧ ಪಕ್ಷದವರು ಈ ಮಾತುಗಳನ್ನು ತಿರುಚಿ ಮಾತನಾಡುತ್ತಿದ್ದಾರೆ.

**(ಗೊಂದಲ)**

**ಅಧ್ಯಕ್ಷರು:** ಆಮೇಲೆ ತಾವು ಏನಾದರೂ ಹೇಳುವುದಿದ್ದರೆ ಹೇಳಿ. ಈಗ ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಕೆ.ಎಂ. ಶಿವಲಿಂಗೇಗೌಡ:** ಅದು ದಾಖಲಾತಿ ಆಗಿದೆ. ಅದನ್ನು ತರಿಸಿ.

**(ಗೊಂದಲ)**

**3.30 P.M.**

**ಅಧ್ಯಕ್ಷರು:** ನೀವು ಆಮೇಲೆ ಮಾತನಾಡಿ. ಅವರು ಮಾತನಾಡಿದ ನಂತರ ನಿಮಗೆ ಅವಕಾಶ ಕೊಡುತ್ತೇನೆ. ಒಬ್ಬೊಬ್ಬರೇ ಮಾತನಾಡಿ. ಯಾರಾದರೂ ಒಬ್ಬರು ಮಾತನಾಡುವಾಗ ಎಲ್ಲರೂ ಎದ್ದು ನಿಂತು ಮಾತನಾಡುವುದು ಸರಿಯಲ್ಲ. ಇದರಿಂದ ಯಾರು ಏನು ಮಾತನಾಡುತ್ತಿದ್ದಾರೆನ್ನುವುದು ಗೊತ್ತಾಗುವುದಿಲ್ಲ.

**ಶ್ರೀ ಸಿದ್ದು ಸವದಿ:** ಅವರು ಮಾತುಗಳನ್ನು ತಿರುಚಿ ಮಾತನಾಡುವ ಪದ್ಧತಿ ಇದೆ. ಯಾರ್ಯಾರು ಜಮೀನು ಹೊಂದಿದ್ದಾರೆ ಅವರೆಲ್ಲರದ್ದೂ ತನಿಖೆ ಮಾಡಿ ಎಂದು ಅಷ್ಟೇ ಅವರು ಹೇಳಿರುವುದು. ಅವರು ಎಲ್ಲಾ ಶಾಸಕರು ಎಂದು ಹೇಳಲಿಲ್ಲ. ಆ ಕಡೆ ಈ ಕಡೆ ಯಾರ್ಯಾರು ಅವ್ಯವಹಾರ ಮಾಡಿದ್ದಾರೆ. ಯಾರ್ಯಾರು ಭೂಮಿ ಹೊಂದಿದ್ದಾರೆ. ಅವರದ್ದು ಮಾತ್ರ ತನಿಖೆ ಮಾಡಿ ಎಂದು ಹೇಳಿದ್ದಾರೆ. ಎಲ್ಲಾ ಶಾಸಕರು ಮಾಡಿದ್ದಾರೆಂದು ಅವರು ಹೇಳಿಲ್ಲ.

**(ಗೊಂದಲ)**

**ಶ್ರೀ ಹೆಚ್.ಸಿ. ಬಾಲಕೃಷ್ಣ:** ಇವರೆಲ್ಲರೂ ಶಾಸಕರಲ್ಲವೇ? ಈ ಕಡೆಯವರು ಆ ಕಡೆಯವರು ಯಾರು ಎಂದು ಹೇಳಲಿ.

**(ಗೊಂದಲ)**

**ಶ್ರೀ ಸಿದ್ದು ಸವದಿ:** ಯಾರು ಮಾಡಿದ್ದಾರೆ ಆ ಶಾಶಕರಿಗೆ ಮಾತ್ರ 224 ಶಾಸಕರೂ ಎಂದು ಅವರು ಹೇಳಿಲ್ಲ.

**(ಗೊಂದಲ)**

**ಶ್ರೀ ಹೆಚ್.ಸಿ. ಬಾಲಕೃಷ್ಣ:** ಹಾಗಾದರೆ, ಅವರು ಯಾರು ಎಂದಾದರೂ ಹೇಳಿ. ಅದನ್ನು ತನಿಖೆಗೆ ಒಪ್ಪಿಸಿ.

**(ಗೊಂದಲ)**

**ಅಧ್ಯಕ್ಷರು:** ಸದಸ್ಯರು ಪರಸ್ಪರ ವಾದ ಮಾಡಬೇಡಿ.

**(ಗೊಂದಲ)**

**ಶ್ರೀ ಸಿ.ಟಿ. ರವಿ:** ಸತ್ಯಹರಿಶ್ಚಂದ್ರರು ಇಲ್ಲಿ ಮಾತ್ರ ಅಲ್ಲ ಆ ಕಡೆಯೂ ಇದ್ದಾರೆಂದು ಅವರು ಹೇಳಿದ್ದಾರೆ. ಇದಕ್ಕೆ ಏಕೆ ನೀವು ಬೇಜಾರು ಮಾಡಿಕೊಳ್ಳುತ್ತೀರಿ?

**(ಗೊಂದಲ)**

**ಶ್ರೀ ಕಿಮ್ಮನೆ ರತ್ನಾಕರ್:** ನನಗೆ ನೋವಾಗುತ್ತಿದೆ. ಅವರು ಹಿರಿಯ ಸದಸ್ಯರಿದ್ದಾರೆ. ನಾವು ಇತ್ತೀಚೆಗೆ ಶಾಸನ ಸಭೆಗೆ ಆರಿಸಿ ಬಂದವರು. ನಾನು ಇಲ್ಲಿಗೆ ಬಂದ ದಿನದಿಂದ ನೋಡುತ್ತಿದ್ದೇನೆ. ಯಾರೇ ಮಾತನಾಡಲಿ, ಸಚಿವರು ಮಾತನಾಡಲಿ, ಮುಖ್ಯಮಂತ್ರಿಯವರು ಮಾತನಾಡಲಿ, ವಿರೋಧ ಪಕ್ಷದವರು ಮಾತನಾಡಲಿ, ಅನೇಕ ಸಲ interfere ಆಗಿ ಮಾತನಾಡುತ್ತಾರೆ. ಇದರಿಂದ ನಮಗೆ ನೋವಾಗುತ್ತದೆ. ಈ ರೀತಿಯಾದರೆ ಸಭೆಯ ಸಮಯ ಹಾಳಾಗುತ್ತದೆ. ನಾವು ಅಲ್ಲಿಂದ ಇಲ್ಲಿಗೆ ಬಂದಿದ್ದೇವೆ. ಈ ರೀತಿ ಅನಾವಶ್ಯಕವಾಗಿ ಸದಸ್ಯರು ಎದುರುಗಡೆ ಇದ್ದಾರೆ. ಸೂರ್ಯ ಪೂರ್ವದಲ್ಲಿ ಹುಟ್ಟುತ್ತಾನೆ ಎಂಬುದು ಇಡೀ ಪ್ರಪಂಚಕ್ಕೆ ಗೊತ್ತು. ಅದನ್ನು ಸಾಬೀತು ಮಾಡುವುದಕ್ಕೆ ನಾವ್ಯಾರು? It is accepted ಇಡೀ ಪ್ರಪಂಚ ಒಪ್ಪಿಕೊಂಡಿದೆ. ಎಲ್ಲರೂ ಮಾಡಿದ್ದಾರೆ. ಎಲ್ಲರೂ business ಮಾಡುತ್ತಿದ್ದಾರೆ ಎಂದು ಹಿರಿಯ ಸಚಿವರೊಬ್ಬರು ಹೇಳಿದ್ದಾರೆ. 5 ಸಾರಿ elect ಆದವರೊಬ್ಬರು ನಮ್ಮ ಮುಂದೆ ಕುಳಿತಿದ್ದಾರೆ. ಅವರಿಗೆ ತಾವು ಸಮರ್ಥನೆ ಮಾಡಿಕೊಳ್ಳಲು ಇನ್ನೊಬ್ಬರ support ಬೇಕಾಗಿಲ್ಲ. Let him answer it. ಆದರೆ, he should substantiate it. ಯಾರೂ ಅಪಾರ್ಥ ಮಾಡಿಕೊಳ್ಳಬಾರದು. ಆಡಳಿತ ಪಕ್ಷ, ವಿರೋಧ ಪಕ್ಷದವರು ಮಾತನಾಡುವ ಸಮಯದಲ್ಲಿ 3–4 ಜನ ಹಿರಿಯರು, treasury bench ನಲ್ಲಿರುವ ಹಿರಿಯರು ಈ ರೀತಿ ಅನಾವಶ್ಯಕವಾಗಿ ಪ್ರಶ್ನೆ ಮಾಡುವುದು ಅದಕ್ಕೆ ಸಂಬಂಧವೇ ಇರುವುದಿಲ್ಲ. There was no connection for it. ಅನಾವಶ್ಯಕವಾಗಿ interfere ಆಗಿ ಸಮಯ ಹಾಳು ಮಾಡುತ್ತಾರೆ. ಅದರಲ್ಲೂ he is the highest person. ನಮಗೆ ನೋವಾಗುತ್ತದೆ.

**ಶ್ರೀ ಬಸವರಾಜ ಬೊಮ್ಮಾಯಿ:** ಯಾರು ಯಾವಾಗ interfere ಆಗುತ್ತಾರೆ, ಸದನ ಸಮಯ ಹಾಳಾಗುತ್ತದೆ ಎನ್ನುವ ಬಗ್ಗೆ ಹೇಳಬೇಡಿ. ನೀವು ವಿಷಯದ ಬಗ್ಗೆ ಮಾತನಾಡಿ, ನಮ್ಮದು ತಕರಾರಿಲ್ಲ.

**(ಗೊಂದಲ)**

**ಶ್ರೀ ಕಿಮ್ಮನೆ ರತ್ನಾಕರ್:** ನಿಮ್ಮ ಹತ್ತಿರ ಪಾಠ ಕಲಿಯಬೇಕಾದ ಅಗತ್ಯ ನನಗಿಲ್ಲ. Let him answer it.

**(ಗೊಂದಲ)**

**ಶ್ರೀ ಬಸವರಾಜ ಬೊಮ್ಮಾಯಿ:** ನೀವು ವಿಷಯದ ಬಗ್ಗೆ ಮಾತನಾಡಿದರೆ ನಮ್ಮ ತಕರಾರು ಇಲ್ಲ. ಎಲ್ಲರೂ interfere ಆಗುತ್ತಾರೆಂದರೆ ಅರ್ಥವೇನು?

**(ಗೊಂದಲ)**

**ಶ್ರೀ ಕಿಮ್ಮನೆ ರತ್ನಾಕರ್:** ನೀವು ಕಡತ ತೆಗೆದು ನೋಡಿ.

**(ಗೊಂದಲ)**

**ಶ್ರೀ ಬಸವರಾಜ ಬೊಮ್ಮಾಯಿ:** ಅವರು ಮಾತನಾಡುವುದಕ್ಕೆ ಅವರಿಗೆ ಅಧಿಕಾರವಿದೆ. ಅವರು ಮಾತನಾಡುತ್ತಾರೆ. ಯಾವಾಗ ಮಾತನಾಡಬೇಕೆಂಬುದು ಅವರಿಗೆ ಗೊತ್ತಿದೆ, ಅವರು ನಿಮ್ಮಿಂದ ಪಾಠ ಕಲಿಯಬೇಕೆ?

**(ಗೊಂದಲ)**

**ಶ್ರೀ ಎನ್. ಸಂಪಂಗಿ:** Real Estate ದಂಧೆ ಮಾಡುತ್ತಾರೆಂದು ಅವರು ಹೇಳಿದ್ದಾರೆ.

**(ಗೊಂದಲ)**

**ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು:** ಅವರು ನನಗೆ ಬುದ್ಧಿವಾದ ಹೇಳುವುದಕ್ಕೆ ಬಂದಿದ್ದಾರೆ. ಮೊದಲು ಸರಿಯಾಗಿ ಮಾತನಾಡುವುದನ್ನು ಕಲಿಯಿರಿ. ಸ್ವಲ್ಪ ಅನುಭವ ಆಗಲಿ, ಗೊತ್ತಾಗುತ್ತದೆ.

**(ಗೊಂದಲ)**

**ಅಧ್ಯಕ್ಷರು:** ನಾಯ್ಡುರವರೆ, address to me. ನನಗೆ address ಮಾಡಿ.

**(ಗೊಂದಲ)**

**ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು:** ನಾನು ಎಲ್ಲಾ ಸದಸ್ಯರನ್ನು ಉದ್ದೇಶಿಸಿ ಹೇಳಲಿಲ್ಲ. ಸನ್ಮಾನ್ಯ ರೇವಣ್ಣನವರು, ವಿರೋಧ ಪಕ್ಷದ ನಾಯಕರಾದ ಸಿದ್ದರಾಮಯ್ಯನವರು ಮಾತನಾಡುವಾಗ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. KIADB ವಿಚಾರವನ್ನು ಪ್ರಸ್ತಾಪ ಮಾಡುವಾಗ ಕೆಲವು ಉಲ್ಲೇಖ ಮಾಡಿದ ಸಂದರ್ಭದಲ್ಲಿ International Airport ವಿಚಾರವನ್ನು ಪ್ರಸ್ತಾಪಿಸಿದರು. ಅದರ ಬಗ್ಗೆ ನಾನು ಉಲ್ಲೇಖ ಮಾಡುತ್ತಾ ಹೇಳಿದಾಗ, ಅವರು ಆಗ ವಿಚಾರವನ್ನು Real Estateಗೆ ತಿರುಗಿಸಿದರು. ಆಗ ನಾನು ಆ ಕಡೆಯ ಕೆಲವರು ಇದ್ದಾರೆ, ಈ ಕಡೆಯ ಕೆಲವರಿದ್ದಾರೆ ಎಂದು ಹೇಳಿದೆ. ಹಾಗಿದ್ದರೆ, ರೇವಣ್ಣನವರು ಇದು CBI ತನಿಖೆ ಆಗಲಿ ಎಂದು ಹೇಳಿದರು. ಆಗುವುದು ಆಗಲಿ ಎಂದು ನಾನು ಹೇಳಿದೆ. ಇಷ್ಟೆ ನಾನು ಹೇಳಿದ್ದು, ನಾನು ಎಲ್ಲರನ್ನೂ ಕುರಿತು ಮಾತನಾಡಿಲ್ಲ. ಕೃಷ್ಣ ಬೈರೇಗೌಡರು ಹೀಗೆ ಮಾಡುತ್ತಿದ್ದಾರೆಂದು ನಾನು ಹೇಳಲಿಲ್ಲ. ಎಲ್ಲಾ ಸದಸ್ಯರಿಗೂ ಅನ್ವಯವಾಗುವಂತೆ ಹೇಳಲಿಲ್ಲ. ಆದರೆ, ಕೆಲವರು ಮಾಡಿದ್ದಾರೆಂದು ಹೇಳಿದ್ದು ನಿಜ. ಅದರಲ್ಲಿ ಏನೂ ಅನುಮಾನವಿಲ್ಲ. ನಾನು ಕೆಲವರು ಎಂದು ಹೇಳಿದ್ದೇನೆ. ಕೆಲವರು ಯಾರು ಎಂದು ಸಿದ್ದರಾಮಯ್ಯನವರಿಗೆ ಗೊತ್ತು ಎಂದೂ ಹೇಳಿದ್ದೇನೆ. ಹಾಗಾಗಿ, ಬೇರೆ ಸದಸ್ಯರಿಗೆ ಏನಾದರೂ ನೋವಾಗಿದ್ದರೆ ನಾನು ವಿಷಾದ ವ್ಯಕ್ತಪಡಿಸುತ್ತೇನೆ. ಅವರು ನೋವು ಪಟ್ಟುಕೊಳ್ಳುವುದು ಬೇಡ.

**ಶ್ರೀ ಹೆಚ್.ಡಿ. ರೇವಣ್ಣ:** CBIಗೆ ಒಪ್ಪಿಸುವ ವಿಷಯ ಹೇಳಿ.

**ಅಧ್ಯಕ್ಷರು:** CBI ವಿಷಯ ಮುಗಿಯಿತು. ಅವರು ಹೇಳಿದರು. ಆ ವಿಷಯ ಮುಗಿಯಿತು. ಈಗ ಈ subject ಅನ್ನು close ಮಾಡೋಣ. ಮಾನ್ಯ ವಿರೋಧ ಪಕ್ಷದ ನಾಯಕರೆ, continue ಮಾಡಿ.

**ಶ್ರೀ ಡಿ.ಎನ್. ಜೀವರಾಜ್:** ರೇವಣ್ಣನವರು ಎಲ್ಲಾ ವಿಷಯಕ್ಕೂ interfere ಆಗದಿದ್ದ ಹಾಗೆ ಮಾಡಬೇಕಲ್ಲಾ? ನೀವು ಬಹಳ senior Member ಆಗಿದ್ದೀರಿ. ನೀವು ಎಲ್ಲಾ ವಿಷಯಕ್ಕೆ interfere ಆದರೆ ಚೆನ್ನಾಗಿರುವುದಿಲ್ಲ. ಯಾವುದೇ

ಸಂದರ್ಭದಲ್ಲಿ ರೇವಣ್ಣ ಏಳಬಾರದು, ಅವರು ನಮಗೆಲ್ಲ ಮಾರ್ಗದರ್ಶಕರು ಆಗಬೇಕು.

**ಶ್ರೀ ವೆಂಕಟರಾವ್ ನಾಡಗೌಡ:** ನೀವು ಸುಮ್ಮ ಸುಮ್ಮನೆ ರೇವಣ್ಣನವರು ಎಂದು ಹೇಳುತ್ತೀರಿ, ಆಗ ಅವರು ಎದ್ದು ಮಾತನಾಡಬೇಕಾಗುತ್ತದೆ. ನೀವು ಅವರ ಹೆಸರು ಪ್ರಸ್ತಾಪ ಮಾಡದಿದ್ದರೆ ಆಗ ಅವರು ಮಾತನಾಡುವುದಿಲ್ಲ.

**ಶ್ರೀ ಡಿ.ಎನ್. ಜೀವರಾಜ್:** ರೇವಣ್ಣನವರ seniority ಇಲ್ಲಿರುವವರಿಗೆಲ್ಲ ಮಾರ್ಗದರ್ಶನವಾಗಬೇಕು. ರೇವಣ್ಣನಂಥವರು ಎಲ್ಲದಕ್ಕೂ ಎದ್ದು ನಿಂತು ಮಾತನಾಡುವುದಕ್ಕೆ ಪ್ರಾರಂಭ ಮಾಡಿದರೆ ರೇವಣ್ಣನವರು ಎದ್ದು ನಿಂತುಕೊಂಡ ಹಾಗೆ ನಿಲ್ಲಬೇಡ ಎಂದು ಹೇಳುವುದಕ್ಕೆ ಶುರು ಮಾಡುತ್ತಾರೆ. ರೇವಣ್ಣನವರು ಯಾವಾಗಲೂ ಒಂದು ಸಾರಿ ಭಾಷಣ ಪ್ರಾರಂಭ ಮಾಡಿದರೆ ಎಲ್ಲರೂ ಆಲಿಸುವ ಹಾಗೆ ಇರಬೇಕೆಂದು ಹೇಳುತ್ತಿದ್ದೇನೆ. ರೇವಣ್ಣನವರ ಬಗ್ಗೆ ನಮಗೆಲ್ಲ ಬಹಳ ಗೌರವವಿದೆ. ಅದರು ಹಿರಿಯರು. ನಿಮ್ಮನ್ನು ನಾವು follow ಮಾಡುತ್ತೇವೆ. ನೀವು ಪದೇ ಪದೇ ಏಳಬಾರದೆಂಬುದು ನನ್ನ ಸಲಹೆ.

**ಶ್ರೀ ಸಿದ್ದರಾಮಯ್ಯ:** ಕಟ್ಟಾ ಸುಬ್ರಹ್ಮಣ್ಯ ನಾಯ್ಡುರವರು ವಿಷಾದ ವ್ಯಕ್ತಪಡಿಸಿದ್ದಾರೆ. ಈ ವಿಷಯವನ್ನು ಇಲ್ಲಿಗೇ ಬಿಡೋಣ. ಇಲ್ಲಿ ಬಹಳ ಜನ ಸದಸ್ಯರು ಪ್ರಾಮಾಣೀಕರಿದ್ದಾರೆ. ಆ ಕಡೆಯೂ ಪ್ರಾಮಾಣೀಕರಿದ್ದಾರೆ. ಇಲ್ಲವೆಂದು ನಾನು ಹೇಳುವುದಿಲ್ಲ. ಎಲ್ಲರೂ ಭ್ರಷ್ಟರೆಂದು ನಾನು ಹೇಳುವುದಿಲ್ಲ. ಎಲ್ಲರೂ ಪ್ರಾಮಾಣೀಕರೆಂದು ಹೇಳುವುದೂ ಕಷ್ಟವಾಗುತ್ತದೆ. ಆದರೆ, ಮಂತ್ರಿಗಳು ಮಾತನಾಡುವಾಗ ಜವಾಬ್ದಾರಿಯಿಂದ ಹೇಳಬೇಕಾಗುತ್ತದೆ. Any way ಅವರು ಈಗ ವಿಷಾದ ವ್ಯಕ್ತಪಡಿಸಿದ್ದಾರೆ. ಬಹಳ ಜನ ಪ್ರಾಮಾಣಿಕ ಸದಸ್ಯರಿಗೆಲ್ಲ ಅವರ ಮಾತಿನಿಂದ ನೋವಾಗುತ್ತದೆ. ಸಾರ್ವಜನಿಕವಾಗಿ ಸಾರಾಸಗಟಾಗಿ ಹೇಳಿದರೆ ಎಲ್ಲಾ MLAಗಳೂ ಭ್ರಷ್ಟರೆಂದು ಜನರು ತಪ್ಪು ತಿಳಿದುಕೊಳ್ಳುತ್ತಾರೆ. ಆ ರೀತಿ ಹೇಳಬಾರದು. ಅದು ಸರಿಯಾದುದಲ್ಲ. ಇವರು ಒಂದು ಕಡೆ ನಂಜುಂಡಪ್ಪ ವರದಿಯ ಪ್ರಕಾರ Regional Imbalance ತೆಗೆಯಬೇಕೆಂದು ಹೇಳುತ್ತಾರೆ. ಇನ್ನೊಂದು ಕಡೆ regional imbalance ಸರಿಪಡಿಸಲಿಕ್ಕೆ ಎಲ್ಲಾ ಪ್ರಯತ್ನ

ಮಾಡುತ್ತೇವೆಂದು ಹೇಳುತ್ತಾರೆ. ಎಲ್ಲಾ ರೀತಿಯಿಂದ ಇವರ actionಗಳ ಮೂಲಕ ಮಾಡುತ್ತಾರೆ. I want to know. ಈ ಸದನದ ಮುಂದಿಡಲಿ. ಶ್ರೀ ಯಡಿಯೂರಪ್ಪನವರು ಮುಖ್ಯಮಂತ್ರಿಗಳಾದ ಮೇಲೆ ನಂಜುಂಡಪ್ಪ ವರದಿಯಲ್ಲಿ ಹೇಳಿರುವ 114 ತಾಲ್ಲೂಕು ಬಿಟ್ಟು ಬೇರೆಯವರಿಗೆ ವಿಶೇಷ ಅನುದಾನವನ್ನು ಎಷ್ಟು ಕೊಟ್ಟಿದ್ದಾರೆ? ನಂಜುಂಡಪ್ಪನವರ ವರದಿಯಲ್ಲಿ ಬಾರದೇ ಇರುವ ತಾಲ್ಲೂಕುಗಳಿಗೆ ಎಷ್ಟು ಹಣ ಹೆಚ್ಚಾಗಿ ಕೊಟ್ಟಿದ್ದಾರೆ? ಈ ಕಡೆಯವರಿಗೆ ಏಕೆ ಕೊಡಲಿಲ್ಲ? ಇದನ್ನು ಕೂಡ ಇಟ್ಟರೆ ಒಳ್ಳೆಯದು. ಇಲ್ಲದೆ ಹೋದರೆ ಇವರು ನಂಜುಂಡಪ್ಪನವರ ವರದಿ ಎಂದು ಅವರ ಹೆಸರು ಮಾತ್ರ ಹೇಳುವುದು, ಅಲ್ಲಿ ಗುಲ್ಬರ್ಗಾಕ್ಕೆ ಹೋಗಿ ಕ್ಯಾಬಿನೆಟ್ ಮೀಟಿಂಗ್ ಮಾಡಿ ಮೂಗಿಗೆ ತುಪ್ಪ ಹಚ್ಚುವುದು, 220 ಹಳ್ಳಿಗಳನ್ನು ಸುವರ್ಣ ಗ್ರಾಮವನ್ನಾಗಿ ಮಾಡುತ್ತೇವೆಂದು ಹೇಳುವುದು, ಅದರಲ್ಲಿ ಒಂದು ಹಳ್ಳಿಯನ್ನೂ ತೆಗೆದುಕೊಳ್ಳುವುದಿಲ್ಲ. ನಂಜುಂಡಪ್ಪನವರ ವರದಿ ಜಾರಿ ಮಾಡುತ್ತೇವೆಂದು ಹೇಳುವುದು. ಆದರೆ ಅಲ್ಲಿಗೆ ಒಂದು ರೂಪಾಯಿ ಕೊಡುವುದಿಲ್ಲ. ಈ ತರಹ ಆಗುತ್ತದೆ. ಇದರಿಂದಾಗಿ inbalance further widen ಆಗುತ್ತದೆ. ದೊಡ್ಡ ವೈಡನಿಂಗ್‌ಗೆ ಇವರೇ ಕಾರಣರಾಗುತ್ತಾರೆ. ಈಗ ಶಿಕಾರಿಪುರ, it is not coming under most backward area. ಅಲ್ಲಿಗೆ ಎಲ್ಲಾ ದುಡ್ಡು ತೆಗೆದುಕೊಂಡು ಹೋಗಿ ಹಾಕಿದರೆ, ಇವರು ಗ್ಯಾಪ್ ಹೇಗೆ ಫಿಲ್‌ಅಪ್ ಮಾಡುತ್ತಾರೆ? ಹೇಳುವುದು ಮತ್ತು ಕೃತಿ ಇವೆರಡು ಒಂದಕ್ಕೊಂದು ಸಂಬಂಧ ಇರಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಈ ತರಹ ತಾರತಮ್ಯ ಮಾಡುವುದನ್ನು ನಿಲ್ಲಿಸಬೇಕೆಂದು ನನ್ನ ಸೂಚನೆ. ಏಕೆಂದರೆ, ಹಳ್ಳಿಗಳ ಅಭಿವೃದ್ಧಿಯ ಜೊತೆಗೆ ಇವೆಲ್ಲಾ ಆಗಬೇಕಾಗುತ್ತದೆ. ನಮ್ಮ ಕಾರಜೋಳರವರು ಎಲ್ಲಿಗೆ ಹೊರಟು ಹೋದರು? ಪಾಪ! ಅವರು ಮೈನರ್ ಇರಿಗೇಷನ್‌ಗೆ ನಾವು ಕೆರೆ ಕಟ್ಟೆಗಳನ್ನು ಮಾಡಲಿಕ್ಕೆ ಬದ್ಧವಾಗಿದ್ದೇವೆ. ಎಷ್ಟು ದುಡ್ಡು ಬೇಕಾದರೂ ಕೊಡುತ್ತೇವೆಂದು ಹೇಳಿದರು ಕಳೆದ ವರ್ಷ ಕೊಟ್ಟಿರುವ ದುಡ್ಡನ್ನೇ ಇವರು ಬಿಡುಗಡೆ ಮಾಡಿಲ್ಲ. ಈ ವರ್ಷ ಕೊಟ್ಟಿರುವ ದುಡ್ಡನ್ನು ಕೂಡ ಅದರಲ್ಲಿ ಎಲ್ಲಾ ಕಡಿಮೆ ಮಾಡಿಟ್ಟಿದ್ದಾರೆ. ರಿವೈಸ್ಡ್ ಎಸ್ಟಿಮೇಟ್ ಮಾಡಿ ಮಾಡಿ ಕಡಿಮೆ

ಮಾಡಿಟ್ಟಿದ್ದಾರೆ. ಹೀಗಿರುವಾಗ ಕೆರೆ ಕಟ್ಟೆಗಳನ್ನು ಇವರು ಹೇಗೆ ಡಿಸಿಲ್ಟ್ ಮಾಡುವುದು? ಅದಕ್ಕೆ ನೀರು ಬರುವ ರೀತಿ ಮಾಡುವುದು, ಅದಕ್ಕೆ ಕೆನಾಲ್‌ಗಳನ್ನು ಮಾಡುವುದು, ಆ ಮೂಲಕ ಅಂತರ್ಜಲವನ್ನು ಹೆಚ್ಚು ಮಾಡುವುದು, ಇವು ಯಾವುದೂ ಕೂಡ ಆಗುತ್ತಿಲ್ಲ. ಏನಾದರೂ ಹೇಳಲಿ, ಅದನ್ನು ಮಾಡಬೇಕು. ಮಾನ್ಯ ಮುಖ್ಯಮಂತ್ರಿಗಳ ಹೇಳಿಕೆಗೆ ನಮ್ಮ ಎಲ್ಲಾ ಸದಸ್ಯರು ಕೂಡ ಬಹಳ ಮೇಜು ಕುಟ್ಟಿ ಸಂತೋಷ ವ್ಯಕ್ತಪಡಿಸಿದ್ದಾರೆ. ಒಬ್ಬ ಶಾಸಕರಿಗೆ ಅವರ ಮತಕ್ಷೇತ್ರಕ್ಕೆ 50 ಕಿ.ಮೀ.ಗೆ ಅದನ್ನು PMGSYನಲ್ಲಿ ಹೇಳಿದ್ದಾರೋ, ಇಲ್ಲಾ ಅಡಿಷನಲ್ಲಾಗಿ ಹೇಳಿದ್ದಾರೋ ತಿಳಿಸಬೇಕು. PMGSY ಅದು ಪೂರಾ ಕೇಂದ್ರ ಸರ್ಕಾರದ ದುಡ್ಡು. ಅಡಿಷನಲ್ಲಾಗಿ ಕೊಟ್ಟಿದ್ದಾರೇನಮ್ಮಾ?

**ಕು: ಶೋಭಾ ಕರಂದ್ಲಾಜೆ:** Annuity ಬೇಸಿಸ್ ಮೇಲೆ ಕೊಡಲಾಗುವುದು.

**ಅಧ್ಯಕ್ಷರು:** Annuity ಬೇಸಿಸ್ ಮೇಲೆ ಕೊಡಲಾಗುವುದು ಎಂದು ಅದರಲ್ಲಿ ಬರೆದಿದ್ದಾರಂತೆ.

**ಶ್ರೀ ಸಿದ್ದರಾಮಯ್ಯ:** ಉತ್ತರ ಹೇಳುವಾಗ ಅವರು ಹೇಳಲಿ. ಏನಾಗಿದೆ ಎಂದರೆ, 50 ಕಿ.ಮೀ. ಪ್ರತಿ ಮತಕ್ಷೇತ್ರದಲ್ಲಿ ಕೊಡುತ್ತೇವೆಂದರೆ ಕನಿಷ್ಠ 20 ರಿಂದ 25 ಕೋಟಿ ರೂಪಾಯಿ ಬೇಕು. 200 ಮತಕ್ಷೇತ್ರಗಳಿಗೂ ಕೊಟ್ಟರೆ ಸುಮಾರು ನಾಲ್ಕು ಸಾವಿರ ಕೋಟಿ ರೂಪಾಯಿ ಬೇಕು. ಕನಿಷ್ಠ ನಾಲ್ಕು ಸಾವಿರ ಕೋಟಿ ರೂಪಾಯಿ ಬೇಕಾಗುತ್ತದೆ. ಈಗ ನೀವು ಘೋಷಣೆ ಮಾಡುವುದು ಸುಲಭ. ಅದರಲ್ಲಿ ನೀವು ಹೇಳುವಾಗ ನಾಲ್ಕು ಸಾವಿರ ಕೋಟಿ ರೂಪಾಯಿಗಳನ್ನು ಎಲ್ಲಿಂದ ಕೊಡುತ್ತೇವೆಂದು ಹೇಳಬೇಕಲ್ಲವೆ? How is it backed up by grants?

**ಶ್ರೀ ಹೆಚ್.ಸಿ. ಬಾಲಕೃಷ್ಣ:** Annuity ಬೇಸಿಸ್ ಮೇಲೆ ಎಂದರೆ ಏನು?

**ಶ್ರೀ ಸಿದ್ದರಾಮಯ್ಯ:** Annuity ಎಂದರೆ ಏನು?

**ಶ್ರೀ ಬಸವರಾಜ ಬೊಮ್ಮಾಯಿ:** ಈಗ private participationನಲ್ಲಿ ಮೂರು ನಾಲ್ಕು ತರಹ ಇರುವುದು ತಮಗೆಲ್ಲ ಗೊತ್ತಿದೆ.

**ಅಧ್ಯಕ್ಷರು:** ಮೊದಲ ಪುಟದಲ್ಲಿ ಎರಡನೇ ಐಟಂ: ಗ್ರಾಮೀಣ ರಸ್ತೆ, ಇದರಲ್ಲಿ ಕೊಟ್ಟಿದ್ದಾರೆ.

**ಶ್ರೀ ಬಸವರಾಜ ಬೊಮ್ಮಾಯಿ:** ಮಾನ್ಯ ರೇವಣ್ಣನವರಿಗೆ ಗೊತ್ತಿದೆ. ಒಂದು PP System, Boot system ಇವೆಲ್ಲದರ ಜೊತೆಗೆ Annuity System ಕೂಡ ಇದೆ.

**ಶ್ರೀ ಹೆಚ್.ಡಿ. ರೇವಣ್ಣ:** ಪತ್ರಿಕೆಯಲ್ಲಿ ಕೊಟ್ಟ ಮೇಲೆ ಈ Annuity ಬೇಸಿಸ್ ಮೇಲೆ ಎಷ್ಟು ಬಂದಿವೆ? ಹತ್ತು ಸಾವಿರ ಕಿ.ಮೀ. ರಸ್ತೆ ತೆಗೆದುಕೊಳ್ಳುತ್ತೇವೆಂದು ಹೇಳಿದಿರಿ. Annuity ಬೇಸಿಸ್ ಮೇಲೆ ಎಂದರೇನು?

**ಅಧ್ಯಕ್ಷರು:** ಅವರು ಹೇಳುತ್ತಾರೆ, ಸ್ವಲ್ಪ ತಾಳಿ.

**ಶ್ರೀ ಬಸವರಾಜ ಬೊಮ್ಮಾಯಿ:** ಅದನ್ನೇ ಹೇಳುತ್ತಿದ್ದೇನೆ. ಈಗ private participationನಲ್ಲಿ Boot system, private participation, joint venture ಜೊತೆಗೆ annuity ಎಂದು ಈಗ Government of India ದಿಂದ ಹಿಡಿದು ಎಲ್ಲಾ ಸರ್ಕಾರಗಳು annuity ಮಾಡುತ್ತಿವೆ. ನನಗೆ 60 ಸೆಕೆಂಡ್ಸ್ ಟೈಮ್ ಕೊಟ್ಟರೆ ಹೇಳುತ್ತೇನೆ. ಈ private participation ನಲ್ಲಿ ಬೇರೆ ಬೇರೆ ಫಾರಂದಲ್ಲಿ ಹೊಸದಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು annuity ಮೇಲೆ ಮಾಡುತ್ತವೆ. ಅಂದರೆ ಉದಾಹರಣೆ ಹೇಳುವುದಾದರೆ, ಎರಡು ವರ್ಷದಲ್ಲಿ ಹತ್ತು ಸಾವಿರ ಕಿ.ಮೀ.ಗೆ ನಾಲ್ಕು ಸಾವಿರ ಕೋಟಿ ರೂಪಾಯಿ ಬೇಕು. ಇದನ್ನು ಸುಮಾರು 20 ರಿಂದ 30 ಜನ ಕಂಟ್ರಾಕ್ಟ್ ತೆಗೆದುಕೊಂಡಿದ್ದಾರೆಂದು ಇಟ್ಟುಕೊಳ್ಳಿ. ಅವರೇ ಬಂಡವಾಳ ಹಾಕಬೇಕು. ಅವರೇ ರಸ್ತೆಗಳನ್ನು ಮಾಡಬೇಕು.

**ಶ್ರೀ ಕೆ. ಅಭಯಚಂದ್ರ ಜೈನ್:** ಗ್ರಾಮೀಣ ಭಾಗದ ರಸ್ತೆಗಳನ್ನು ಮಾಡುವುದಕ್ಕೆ ಯಾರೂ ಬರುವುದಿಲ್ಲ.

**(ಗೊಂದಲ)**

**ಅಧ್ಯಕ್ಷರು:** ಅವರು ಏನು ಹೇಳುತ್ತಾರೆ ಮೊದಲು ಕೇಳಿ.

**ಶ್ರೀ ಸಿ.ಎಸ್. ಪುಟ್ಟೇಗೌಡ:** ಮುಖ್ಯರಸ್ತೆಗಳಿಗೆ ಯಾರೂ ಬರುವುದಿಲ್ಲ. ಹೀಗಿರುವಾಗ ಹಳ್ಳಿಗಳ ರಸ್ತೆಗಳಿಗೆ ಯಾರು ಬರುತ್ತಾರೆ?

**ಅಧ್ಯಕ್ಷರು:** ಪುಟ್ಟೇಗೌಡರವರೆ, ಅವರು ಏನು ಹೇಳುತ್ತಾರೆ ಕೇಳಿ.

**ಶ್ರೀ ಬಿ. ರಮಾನಾಥ ರೈ:** ಪಟ್ಟಣ ರಸ್ತೆಗಳಿಗೆ ಬರುವುದಿಲ್ಲ. ಹಳ್ಳಿಗಳ ರಸ್ತೆಗೆ ಯಾರು ಬರುತ್ತಾರೆ?

**ಶ್ರೀ ಅಮರೇಗೌಡ ಬಯ್ಯಾಪುರ:** ಗ್ರಾಮೀಣ ರಸ್ತೆಗಳನ್ನು ಯಾರು ಕೇಳುತ್ತಾರೆ?

**ಅಧ್ಯಕ್ಷರು:** ಅವರು ಉತ್ತರ ಮುಗಿಸಲಿ, ನಂತರ ನೀವು ಹೇಳಿ. ಬಾಲಕೃಷ್ಣರವರೆ, ಕುಳಿತುಕೊಳ್ಳಿ.

**ಶ್ರೀ ಬಸವರಾಜ ಬೊಮ್ಮಾಯಿ:** ಯಾವುದಾದರೂ ಪ್ರಾಜೆಕ್ಟ್‌ನ್ನು annuity ಬೇಸಿಸ್ ಮೇಲೆ ಕೊಟ್ಟ ಮೇಲೆ ಐದು ವರ್ಷದಲ್ಲಿ repayment ಎಂದು ಇರುತ್ತದೆ. ಪ್ರತಿ ವರ್ಷ $1/5^{th}$ of amount ಅವರಿಗೆ ನಾವು ಕೊಡುತ್ತೇವೆ. ಒಂದು ಕೋಟಿ ರೂಪಾಯಿಯ ಕಂಟ್ರಾಕ್ಟ್‌ನ್ನು annuity ಮೇಲೆ ಕೊಟ್ಟರು ಎಂದು ಇಟ್ಟುಕೊಳ್ಳಿ. ಅದು ಐದು ವರ್ಷದಲ್ಲಿ repayment ಆಗುತ್ತದೆ ಎಂದು agreement. ಅದರಲ್ಲಿ ಪ್ರತಿ ವರ್ಷ $1/5^{th}$ amount ಅನ್ನು ಆ ಕಂಟ್ರಾಕ್ಟ್‌ದಾರರಿಗೆ ಕೊಡುತ್ತೇವೆ. ಉದಾಹರಣೆಗೆ ಹೇಳುವುದಾದರೆ, ಒಂದು ಸಾವಿರ ಕೋಟಿ ರೂಪಾಯಿ ರಸ್ತೆಗೆ ಕೊಟ್ಟರೆ ಐದು ವರ್ಷ repayment ಇರುತ್ತದೆ, ಒಂದೇ ವರ್ಷಕ್ಕೆ ಅಷ್ಟು ಕೊಡುವುದಿಲ್ಲ. ಆದರೆ $1/5^{th}$ of amount ಅಂದರೆ 100 ಕೋಟಿ ಇದ್ದರೆ ಅದರ $1/5^{th}$ of amount ಎಂದರೆ 20 ಕೋಟಿ ಈ ವರ್ಷ ಕೊಡುತ್ತೇವೆ. ಅದರ ಮುಂದಿನ ವರ್ಷ 20 ಕೋಟಿ ಕೊಡುತ್ತೇವೆ. ಆ ತರಹ ಇರುವುದರಿಂದ ಇದು ಖಂಡಿತವಾಗಿ ಫೀಸಿಬಲ್ ಇದೆ, ಆಗುತ್ತದೆ. ನೀವು ಎಲ್ಲರೂ ಕೂಡ actually ಮೆಚ್ಚುಗೆ ವ್ಯಕ್ತಪಡಿಸಬೇಕು. 50 ಕಿ.ಮೀ. PMGSY ಅಲ್ಲದೆ ಇತರೆ ಕಾರ್ಯಕ್ರಮ ಅಲ್ಲದೆ rural roads ಗೆ 50 ಕಿ.ಮೀ. ನಿಮಗೆ ಸರ್ಕಾರ ಘೋಷಣೆ ಮಾಡಿದ್ದಕ್ಕೆ ನೀವು ಎಲ್ಲರೂ ಸರ್ಕಾರವನ್ನು ಅಭಿನಂದಿಸಬೇಕು.

**ಶ್ರೀ ಅಮರೇಗೌಡ ಬಯ್ಯಾಪುರ:** ನೋಡಿ ಇದರಲ್ಲಿ ನೀವು ಹತ್ತು ಕಿ.ಮೀ. ಇಂಪ್ಲಿಮೆಂಟ್ ಮಾಡಿದರೆ ನಾವು ಶರಣಾಗತರಾಗುತ್ತೇವೆ. ಹಳ್ಳಿಯಲ್ಲಿ ಹತ್ತು ಕಿ.ಮೀ. ಮಾಡುವುದಕ್ಕೆ ಯಾರು ಬರುತ್ತಾರೆ?

**ಶ್ರೀ ಬಸವರಾಜ ಬೊಮ್ಮಾಯಿ:** ಈ ಯೋಜನೆಯ ಬಗ್ಗೆ ಹಣಕಾಸಿನ ಇಲಾಖೆಯ ಜೊತೆಗೆ ಸಮಗ್ರವಾಗಿ ಚರ್ಚೆ ಮಾಡಿ ಈ ವರ್ಷ DPR ರೆಡಿ ಮಾಡಿ ಇದೇ ವರ್ಷ ಟೆಂಡರ್ ಪ್ರಕ್ರಿಯೆ ಪ್ರಾರಂಭಿಸಿ ಖಂಡಿತವಾಗಿ ಪೂರ್ಣ ಮಾಡುತ್ತೇವೆ. ಆಗ ನೀವು ಶರಣಾಗತರಾಗುವಿರಂತೆ.

**ಶ್ರೀ ಮಾಲೀಕಯ್ಯ ಏ. ಗುತ್ತೇದಾರ್:** ಮಾಡುವುದಾಗಿದ್ದರೆ ಖಂಡಿತವಾಗಿ ನಾವು ವೆಲ್‌ಕಂ ಮಾಡುತ್ತೇವೆ. ಆಗದೇ ಇದ್ದರೆ ಏನು ಮಾಡುವುದು?

**ಶ್ರೀ ಬಸವರಾಜ ಬೊಮ್ಮಾಯಿ:** ಎರಡು ವರ್ಷದಲ್ಲಿ 200 ಕ್ಷೇತ್ರದಲ್ಲಿ 50 ಕಿ.ಮೀ. ಎಲ್ಲಾ ಯೋಜನೆಗಳನ್ನು ಹೊರತುಪಡಿಸಿ ಇವತ್ತು rural roadsನ್ನು ಮಾಡುವುದಕ್ಕೆ ತೀರ್ಮಾನಿಸಿದ್ದೇವೆ. ಅದನ್ನು ಖಂಡಿತವಾಗಿ ಮಾಡುತ್ತೇವೆ.

**ಶ್ರೀ ಅಮರೇಗೌಡ ಬಯ್ಯಾಪುರ:** ಆಗಲಾರದ್ದನ್ನು ಮಾಡುವುದಕ್ಕೆ ಹೊರಟಿದ್ದೀರಿ.

**ಶ್ರೀ ಬಸವರಾಜ ಬೊಮ್ಮಾಯಿ:** ಆಗಲಾರದನ್ನು ಮಾಡುವುದಕ್ಕೆ ಜನ ಇಲ್ಲಿ ತಂದು ನಮ್ಮನ್ನು ಕೂರಿಸಿರುವುದು. ಅದನ್ನು ನಾವು ಮಾಡುತ್ತೇವೆ.

**ಶ್ರೀ ಅಮರೇಗೌಡ ಬಯ್ಯಾಪುರ:** ಜನರಿಗೆ ಬರೀ ನೀವು ಸುಳ್ಳು ಹೇಳುತ್ತಿದ್ದಿರಿ.

**ಶ್ರೀ ಬಸವರಾಜ ಬೊಮ್ಮಾಯಿ:** ಸುಳ್ಳಲ್ಲ ಖಂಡಿತವಾಗಿ ನಾವು ಎರಡು ವರ್ಷದಲ್ಲಿ ಮಾಡುತ್ತೇವೆ. ಖಂಡಿತವಾಗಿ ಮಾಡುತ್ತೇವೆ.

**ಶ್ರೀ ಸಿ.ಎಸ್. ಅಪ್ಪಾಜಿ ನಾಡಗೌಡ:** ಇದರಲ್ಲಿ ಬಹಳ ಸ್ಪಷ್ಟವಾಗಿ ನೀವು annuity ಬೇಸಿಸ್ ಎಂದು ಹೇಳಿ ನಂತರ ಕನ್ನಡದಲ್ಲಿಯೂ ಕೂಡ ನೀವು ತರ್ಜುಮೆ ಮಾಡಿಸಿದಿರಿ. ವಾರ್ಷಿಕ ಪಾವತಿಯ fixed sum of amount

which is going to be allocated for completion of 50 k.m. per year. ಎಂದು ಹೇಳಿದ ಹಾಗೆ ಆಯಿತು. ಪ್ರತಿ ವರ್ಷ 50 ಕಿ.ಮೀ. ಎಂದರೆ...

**ಶ್ರೀ ಬಸವರಾಜ ಬೊಮ್ಮಾಯಿ:** ಪ್ರತಿ ವರ್ಷ ಅಲ್ಲಾರಿ, ಎರಡು ವರ್ಷದಲ್ಲಿ 50 ಕಿ.ಮೀ.

**ಶ್ರೀ ಸಿ.ಎಸ್. ಅಪ್ಪಾಜಿ ನಾಡಗೌಡ:** Fixed sum of amount for that year ಎಂದರೆ, ನೀವೇ ಹೇಳಿದಿರಿ, ಅದನ್ನು ಸ್ವಲ್ಪ ಬದಲಾವಣೆ ಮಾಡಿ.

**ಶ್ರೀ ಬಸವರಾಜ ಬೊಮ್ಮಾಯಿ:** ನಾವು ಹೇಳಿದ್ದು ಸ್ವಲ್ಪ ತಿಳಿದುಕೊಳ್ಳಿ. ಎರಡು ವರ್ಷದಲ್ಲಿ 50 ಕಿ.ಮೀ. ರಸ್ತೆ ಮಾಡುತ್ತೇವೆ. ಈ contractದು ಐದು ವರ್ಷ repayment period ಇರುತ್ತದೆ. This contractual repayment period is 5 years.

**ಶ್ರೀ ಯು.ಟಿ. ಖಾದರ್:** ಮುಖ್ಯಮಂತ್ರಿಗಳ statementನಲ್ಲಿ ಇದೆ.

**ಶ್ರೀ ಬಸವರಾಜ ಬೊಮ್ಮಾಯಿ:** Repayment period is five years. Repaymentಗೆ 1/5th ಎಂದು ನಾನು ಹೇಳಿದ್ದೆನಲ್ಲ?

**ಶ್ರೀ ಸಿ.ಎಸ್. ಅಪ್ಪಾಜಿ ನಾಡಗೌಡ:** ನೀವು ಅದನ್ನು ಹೇಳಲಿಲ್ಲ. ಬೇಕಾದರೆ ತಮಗೆ ಡಿಕ್ಷನರಿ ಕಳುಹಿಸಿ ಕೊಡುತ್ತೇನೆ. ತಾವು ಓದಿ ನೋಡಿ.

**ಶ್ರೀ ಬಸವರಾಜ ಬೊಮ್ಮಾಯಿ:** ಓದಿದ್ದೇನೆ ಬಿಡಿ, ಓದಿ ಈ ಕಡೆ ಬಂದಿರುವುದು.

**ಶ್ರೀ ಸಿ.ಎಸ್. ಅಪ್ಪಾಜಿ ನಾಡಗೌಡ:** 50 ಕಿ.ಮೀ. ಪ್ರತಿ ವರ್ಷ ಎನ್ನುವ ಅರ್ಥದಲ್ಲಿ ಹೇಳುತ್ತಿದ್ದೀರಿ. ಐದು ವರ್ಷದ ಪ್ರೋಗ್ರಾಮ್ ಎಂದು ಹೇಳುತ್ತಿಲ್ಲ.

**ಶ್ರೀ ಬಸವರಾಜ ಬೊಮ್ಮಾಯಿ:** ತಾವು ಸರಿಯಾಗಿ ಓದಿ. ಎರಡು ವರ್ಷದಲ್ಲಿ ಒಂದು ಕ್ಷೇತ್ರದಲ್ಲಿ 50 ಕಿ.ಮೀ. ಎಂದು ನಮ್ಮ ಕಮಿಟ್‌ಮೆಂಟ್ ಇದೆ.

**ಶ್ರೀ ಸಿ.ಎಸ್. ಅಪ್ಪಾಜಿ ನಾಡಗೌಡ:** ಹಾಗಾದರೆ ಸದನಕ್ಕೆ ಹೇಳಿಬಿಡಿ.

**ಶ್ರೀ ಬಸವರಾಜ ಬೊಮ್ಮಾಯಿ:** ಅದನ್ನೇ ಹೇಳಿರುವುದು. ಅದನ್ನು ಬರೆದು ಕೊಟ್ಟಿರುವುದು. ನೀವು ತಿಳಿದುಕೊಳ್ಳಲಿಲ್ಲ ಎಂದರೆ ನಾನೇನು ಮಾಡಲಿ?

**ಅಧ್ಯಕ್ಷರು:** ಹೋಗಲಿ ಬಿಡಿ, ನೀವು ಮುಂದುವರೆಸಿ.

**ಶ್ರೀ ಹೆಚ್.ಡಿ. ರೇವಣ್ಣ:** ಮಾನ್ಯ ಸಭಾಧ್ಯಕ್ಷರೆ, PWD ಮಿನಿಸ್ಟರ್ ಆಗಿರುವ ಮಾನ್ಯ ಉದಾಸಿಯವರು ಈಗಾಗಲೇ 10 ಸಾವಿರ ಕಿ.ಮೀ. ಜಿಲ್ಲಾ ಮತ್ತು ತಾಲ್ಲೂಕು ರಸ್ತೆಗಳ ಕೆಲಸವನ್ನು ಆನ್ಯುಯಟಿ ಮೇಲೆ ಕರೆದಿದ್ದಾರೆ. ಇದರಲ್ಲಿ ಹಳ್ಳಿಗಳ ರಸ್ತೆಗಳು ಎಷ್ಟಿವೆ ಎಂದು ಹೇಳಿ. ಎಂ.ಡಿ.ಆರ್. ಮತ್ತು ಸ್ಟೇಟ್ ಹೈವೇ ರಸ್ತೆಗಳನ್ನು ಆನ್ಯುಯಿಟಿ ಮೇಲೆ ಕರೆದಿದ್ದಾರೆ. ಅದರಲ್ಲಿ ಎಷ್ಟು ಬಂದಿದೆ ಹೇಳಿ?

**ಶ್ರೀ ಬಸವರಾಜ ಬೊಮ್ಮಾಯಿ:** PWD ಯಲ್ಲಿ private participation ಮೇಲೆ ಕರೆಯಲಾಗಿದೆ. ಆದರೆ, ಇಲ್ಲಿ ಆನ್ಯುಯಿಟಿ ಮೇಲೆ ಮಾಡಲಾಗುತ್ತದೆ. ಇದರಲ್ಲಿ ಇಷ್ಟೆಂದು ಫಿಕ್ಸ್ಡ್ ಹಣವನ್ನು ಕೊಡುವುದರಿಂದ ಗುತ್ತಿಗೆದಾರರು ಖಂಡಿತವಾಗಿ ಮುಂದೆ ಬರುತ್ತಾರೆ. ಅದಕ್ಕೂ ಇದಕ್ಕೂ ಇರುವ ವ್ಯತ್ಯಾಸ ಏನೆಂದರೆ, PWD ಯಲ್ಲಿ ಟೋಲ್‌ನಲ್ಲಿ ದುಡ್ಡು ವಸೂಲ್ಮಾಡುವುದರಿಂದ ಅವರು ಹೂಡಿಕೆ ಮಾಡಿರುವ ಬಂಡವಾಳವನ್ನು ಸುಮಾರು ಏಳೆಂಟು ವರ್ಷಗಳಲ್ಲಿ ಪಡೆದುಕೊಳ್ಳಬೇಕಾಗುತ್ತದೆ. ಅದು ಕಷ್ಟ ಸಾಧ್ಯ. ಆದರೆ, ಇಲ್ಲಿ ಸರ್ಕಾರ ಪ್ರತಿ ವರ್ಷ ಐದನೇ ಒಂದಂಶದ ಭಾಗದ ದುಡ್ಡನ್ನು ಕೊಡುವುದರಿಂದ ಖಂಡಿತವಾಗಿ ಇದಕ್ಕೆ ಒಳ್ಳೆಯ ಪ್ರತಿಕ್ರಿಯೆ ಬರುತ್ತದೆ.

**ಶ್ರೀ ಬಂಡೆಪ್ಪ ಕಾಶೆಂಪೂರ್:** ಮಾನ್ಯ ಅಧ್ಯಕ್ಷರೆ, ಹೊಸದಾಗಿ ಇವರೇ ಪ್ರಾರಂಭ ಮಾಡುತ್ತಿರುವುದರಿಂದ ಕರ್ನಾಟಕ ರಾಜ್ಯದಲ್ಲಿ ಆನ್ಯುಯಿಟಿ ಬೇಸಿಸ್ ಮೇಲೆ ಎಷ್ಟು ರಸ್ತೆಗಳನ್ನು ಇದುವರೆಗೆ ಮಾಡಲಾಗಿದೆ ಎಂಬುದನ್ನು ಮಾನ್ಯ ಮಂತ್ರಿಗಳು ಹೇಳಬೇಕು.

**ಶ್ರೀ ಬಸವರಾಜ ಬೊಮ್ಮಾಯಿ:** ಇಡೀ ದೇಶದಲ್ಲಿ ಬೇರೆ ಬೇರೆ ರಾಜ್ಯದಲ್ಲಿ ಇದು ಈಗಾಗಲೇ ಪ್ರಾರಂಭವಾಗಿದೆ. ನಮ್ಮಲ್ಲಿ ರೂರಲ್ ರಸ್ತೆಗಳಿಗೆ ಮೊದಲ ಬಾರಿಗೆ ಈ ಸಿಸ್ಟಂ ಅನ್ನು ನಮ್ಮ ಸರ್ಕಾರ ಪ್ರಾರಂಭ ಮಾಡಿದೆ.

**ಶ್ರೀ ಬಂಡೆಪ್ಪ ಕಾಶೆಂಪೂರ್:** ಹಿಂದೆ ಯಾವುದಾದರೂ ಸರ್ಕಾರ ಈ ಬೇಸಿಸ್ ಮೇಲೆ ಕೊಟ್ಟಿತ್ತೆ ಅಥವಾ ನೀವೇ ಹೊಸದಾಗಿ ಪ್ರಾರಂಭ ಮಾಡಿದ್ದೀರಾ?

**ಶ್ರೀ ಬಸವರಾಜ ಬೊಮ್ಮಾಯಿ:** ಇದು ಇತ್ತೀಚಿನ ದಿನಗಳಲ್ಲಿ ಬಂದಿದೆ. ಬೇರೆ ಬೇರೆ ರಾಜ್ಯಗಳು ಈಗಾಗಲೇ ಕೊಟ್ಟಿದ್ದಾರೆ. ನಮ್ಮ ಸರ್ಕಾರ ಇಲ್ಲಿ ಮೊದಲ ಬಾರಿಗೆ ರೂರಲ್ ರಸ್ತೆಗಳಿಗೆ ಕೊಡುತ್ತಿದೆ.

**ಶ್ರೀ ಬಂಡೆಪ್ಪ ಕಾಶೆಂಪೂರ್:** ಇವರ ಹತ್ತಿರ ಹಣ ಇಲ್ಲದೆ ಇರುವುದರಿಂದ ಬಂಡವಾಳ ತಂದು ಹಾಕಲೆಂದು ಮಾಡುತ್ತಿದ್ದಾರೆ.

**ಶ್ರೀ ಕೆ.ಎಂ. ಶಿವಲಿಂಗೇಗೌಡ:** ಈ ರಾಜ್ಯದ ಆರ್ಥಿಕ ಪರಿಸ್ಥಿತಿ ಏನಾಗಬೇಕು?

**ಅಧ್ಯಕ್ಷರು:** ಮಾನ್ಯ ಶಿವಲಿಂಗೇಗೌಡರೆ, ಈಗ ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡುತ್ತಾರೆ.

**ಶ್ರೀ ಕೆ.ಎಂ. ಶಿವಲಿಂಗೇಗೌಡ:** ರಾಜ್ಯದ ಆರ್ಥಿಕ ಪರಿಸ್ಥಿತಿ ಬಗ್ಗೆ ಸರ್ಕಾರ ಯೋಚನೆ ಮಾಡಬೇಕು. ಇದಕ್ಕೋಸ್ಕರ ಸಾವಿರಾರು ಕೋಟಿ ರೂಪಾಯಿಗಳನ್ನು ಇನ್‌ವೆಸ್ಟ್ ಮಾಡಬೇಕಾಗುತ್ತದೆ. ಈ ರೀತಿಯಾದರೆ ರಾಜ್ಯದ ಪರಿಸ್ಥಿತಿ ಎನಾಗುತ್ತದೆ ಹೇಳಿ? ಸಂಪನ್ಮೂಲ ಕ್ರೋಢೀಕರಣ ಮಾಡುವುದನ್ನು ಬಿಟ್ಟು ಈ ರೀತಿ ಹೇಳುವುದು ಸರಿಯೇ? ರಾಜ್ಯದ ಹಣವನ್ನು ಲೂಟಿ ಮಾಡುತ್ತಿದ್ದೀರಿ.

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:** ಮಾನ್ಯ ಬಸವರಾಜ ಬೊಮ್ಮಾಯಿರವರೆ, ಅವರು ಹೇಳಿದ್ದಾರೆ ತಾವು ಸುಮ್ಮನಿರಿ.

**ಶ್ರೀ ಬಸವರಾಜ ಬೊಮ್ಮಾಯಿ:** ಎಲ್ಲಾ ಸರ್ಕಾರಗಳು ದುಡ್ಡು ಇಟ್ಟುಕೊಂಡು ಸ್ಕೀಂ ಮಾಡುತ್ತವೆಯೇ? ನಿಮ್ಮ ಪ್ರಕಾರ ಹೋದರೆ ಕರ್ನಾಟಕ ರಾಜ್ಯ 100 ವರ್ಷಗಳಾದರೂ ಅಭಿವೃದ್ಧಿಯಾಗುವುದಿಲ್ಲ.

**ಅಧ್ಯಕ್ಷರು:** ಮಾನ್ಯ ಶಿವಲಿಂಗೇಗೌಡರೆ, ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಸಿದ್ದರಾಮಯ್ಯ:** ಅವರು ಏನು ಮಾಡುತ್ತಾರೆಂಬುದನ್ನು ಸ್ಪಷ್ಟವಾಗಿ ಕ್ಲಾರಿಫೈ ಮಾಡಬೇಕು. ಏಕೆಂದರೆ, ಇಲ್ಲಿ ಬಹಳ confusion create ಆಗುತ್ತಿದೆ. ಆದ್ದರಿಂದ, ಈ confusion ಅನ್ನು ಹೋಗಲಾಡಿಸಬೇಕು. ಎರಡನೆಯದು ಏನೆಂದರೆ, ಇಷ್ಟು ರಸ್ತೆಗಳನ್ನು ಮಾಡುತ್ತೇವೆಂದು ಹೇಳಿದ ಮೇಲೆ ಅಷ್ಟಕ್ಕೆ action plan ಮಾಡಿ ಅದಕ್ಕೆ ಸಂಪನ್ಮೂಲಗಳನ್ನು ಮಾಡಬೇಕು. ಇಲ್ಲದಿದ್ದರೆ ಅದು ಕೇವಲ ಕಾಗದದ ಮೇಲೆ ಉಳಿಯುತ್ತದೆ. 3054 ಹೆಡ್‌ನಲ್ಲಿ ಕೆಲಸ ಮಾಡಬಾರದೆಂದು ಈಗಾಗಲೇ ಜಲ್ಲಾ ಪಂಚಾಯತ್‌ಗಳಿಗೆ ಸೂಚನಾ ಪತ್ರ ಹೋಗಿವೆ. 3055 ಹೆಡ್‌ನಲ್ಲಿ ಎಲ್ಲಿಯೂ ಕೆಲಸ ತೆಗೆದುಕೊಳ್ಳಬಾರದೆಂದು ಸೂಚನೆ ಕೊಟ್ಟು ಮತ್ತೆ ಹೊಸದಾಗಿ ರಸ್ತೆ ಮಾಡುತ್ತೇವೆಂದರೆ, ಇವರ ಹತ್ತಿರ ಹಣ ಎಲ್ಲಿದೆ? ಹಣ ಇವರ ಹತ್ತಿರ ಇಲ್ಲ. ಇದೊಂದು ಸುಳ್ಳು ಭರವಸೆ ಆಗುತ್ತದೆ. 3054 ಹೆಡ್‌ನಲ್ಲಿ ಕಳೆದ 5 ವರ್ಷಗಳಿಂದ ಎಲ್‌ಓಸಿ ಬಿಡುಗಡೆಯಾಗಿಲ್ಲ. ಸುಮಾರು 2000 ಕೋಟಿ ರೂಪಾಯಿ ಹಾಗೆಯೇ ನಿಂತಿದೆ. ಮಾನ್ಯ ಉದಾಸಿಯವರಿಗೆ ಕೇಳಿದರೆ ದುಡ್ಡು ಬಂದಿಲ್ಲ ನಾನೇನು ಮಾಡಲಿ ಎಂದು ಹೇಳುತ್ತಾರೆ. ಕಡತವನ್ನು ಆರ್ಥಿಕ ಇಲಾಖೆಗೆ ಕಳುಹಿಸಿದ್ದೇವೆ. ಕಡತ ಅಲ್ಲಿಯೇ ಓಡಾಡುತ್ತದೆ ಎಂದು ಹೇಳುತ್ತಾರೆ. ಇವತ್ತಿನ ದಿವಸ 3054 ಹೆಡ್‌ನ ಕೆಲಸ ಸಂಪೂರ್ಣವಾಗಿ ಸ್ಥಗಿತವಾಗಿದೆ. ಅದಕ್ಕೆ ಹಣ ಕೊಡುವುದಕ್ಕೆ ಇವರ ಹತ್ತಿರ ಒಂದು ರೂಪಾಯಿ ಕೂಡ ಇಲ್ಲ. ಮತ್ತೆ ಇದೂ ಕೂಡ ಅದೇ ರೀತಿಯ ಒಂದು ಕಾರ್ಯಕ್ರಮವಾಗುತ್ತದೆ. ಸಾವಯವ ಕೃಷಿ ಬಗ್ಗೆ ಬಹಳ ಮಾತನಾಡಿದ್ದಾರೆ. ಇದರ ಬಗ್ಗೆ ಮಾನ್ಯ ಜಯಚಂದ್ರರವರು ಕೂಡ ಹೇಳಿದ್ದಾರೆ. ಸಾವಯವ ಕೃಷಿ ಮಾಡುವುದಕ್ಕೆ ನಮ್ಮದೇನು ವಿರೋಧ ಇಲ್ಲ. ಆ ಕಾರ್ಯಕ್ರಮವನ್ನು ನಾವೂ ಕೂಡ ಸ್ವಾಗತ ಮಾಡಿದ್ದೇವೆ. ಆದರೆ, ನೀವು ಮಾಡುತ್ತಿರುವ ರೀತಿ ಸರಿಯಾಗಿಲ್ಲವೆಂದು ನಾವು ಹೇಳುತ್ತಿದ್ದೇವೆ. ಇದರಲ್ಲಿ ಏನಾಗಿದೆಯೆಂದರೆ, ಪ್ರತಿಯೊಂದು ತಾಲ್ಲೂಕಿನಲ್ಲಿ ಒಂದೊಂದು ಸಮಿತಿಯನ್ನು ಮಾಡಿ ಈ ಕೆಲಸವನ್ನು ಎನ್‌ಜಿಒ ಗಳಿಗೆ ಕೊಟ್ಟಿದ್ದಾರೆ. ಸಮಿತಿಯಲ್ಲಿ ಪ್ರೇರಕರೆಂದು ಸುಮಾರು 15 ಜನ ಸದಸ್ಯರುಗಳನ್ನು ಮಾಡಿದ್ದಾರೆ.

ನಂಜನಗೂಡು ಮತ್ತು ಮೈಸೂರಿನಲ್ಲಿರುವಂತವುಗಳನ್ನು ನಾನು ಮತ್ತು ಶ್ರೀನಿವಾಸ್ ಪ್ರಸಾದ್‌ರವರು ಹೋಗಿ ನೋಡಿದ್ದೇವೆ. ಅಲ್ಲಿರತಕ್ಕಂಥ ಎಲ್ಲಾ ಪ್ರೇರಕರು ನಿಮ್ಮ ಪಕ್ಷದ ಕಾರ್ಯಕರ್ತರಾಗಿದ್ದಾರೆ. ಒಂದು ತಿಂಗಳಿಗೆ ಅವರಿಗೆ ಟಿಎ ಮತ್ತು ಡಿಎ ಎಂದು ಒಂದೂವರೆ ಸಾವಿರ ರೂಪಾಯಿ ಕೊಡಲಾಗುತ್ತದೆ. ಇಬ್ಬರಿಗೆ 7 ಸಾವಿರ ರೂಪಾಯಿ ಕೊಡುತ್ತಾರೆ. ಇವರು ಕೊಡುವ 24 ಲಕ್ಷ ರೂಪಾಯಿಯಲ್ಲಿ 4.60 ಲಕ್ಷ ರೂಪಾಯಿ ಇದಕ್ಕಾಗಿ ಹೋಗುತ್ತದೆ. ಇವರೆಲ್ಲಾ ನಿಮ್ಮ ಪಾರ್ಟಿಯವರಾಗಿದ್ದಾರೆ. ಸಾವಯವ ಎನ್ನುವುದು ನಿಮ್ಮ ಪಾರ್ಟಿ ಕಾರ್ಯಕ್ರಮವೇ? ನೀವು ಈಗ ಮಾಡಿರುವುದರಲ್ಲಿ Scheduled Caste, Backward Class and Minorities ಮತ್ತು ಬೇರೆ ವರ್ಗದವರು ಎಷ್ಟಿದ್ದಾರೆಂಬುದರ ಬಗ್ಗೆ ಒಂದು ಪಟ್ಟಿ ಕೊಡಿ. ಏಕೆಂದರೆ, Social Justice ಆಗಬೇಕಲ್ಲವೇ? ಅಂದರೆ, ಸರ್ಕಾರದ ಹಣವನ್ನು ನಾವು ಖರ್ಚು ಮಾಡುವಾಗ ಅದು ದಲಿತರಿಗೆ, ಹಿಂದುಳಿದ ವರ್ಗದವರಿಗೆ ಮತ್ತು ಬೇರೆಯವರಿಗೆ ಹೋಗುತ್ತಿದೆಯೇ ಅಥವಾ ನಿಮ್ಮ ಪಕ್ಷದ ಕಾರ್ಯಕರ್ತರಿಗೆ ಹೋಗುತ್ತಿದೆಯೇ ಅಥವಾ ಮುಂದುವರೆದ ವರ್ಗದವರಿಗೆ ಹೋಗುತ್ತಿದೆಯೇ ಎಂಬುದು ಈ ರಾಜ್ಯದ ಜನತೆಗೆ ಗೊತ್ತಾಗಬೇಕು. ನನ್ನ ಪ್ರಕಾರ 176 ತಾಲ್ಲೂಕುಗಳಲ್ಲಿಯೂ ಕೂಡ they are all BJP workers. ಇದರಲ್ಲಿ ದಲಿತರು, ಹಿಂದುಳಿದ ವರ್ಗದವರು ಮತ್ತು ಅಲ್ಪಸಂಖ್ಯಾತರು ಯಾರೂ ಇಲ್ಲ. ಆದ್ದರಿಂದ, ಇದನ್ನು ನಾನು ತೀವ್ರವಾಗಿ ಖಂಡಿಸುತ್ತೇನೆ. ನಿಮಗೆ ಸಾವಯವ ಕೃಷಿಯಲ್ಲಿ ನಂಬಿಕೆ ಇಲ್ಲ. ನಿಮ್ಮವರಿಗೆ accommodate ಮಾಡುವುದಕ್ಕೋಸ್ಕರ ಮಾಡಿರುವ ಒಂದು ಕಾರ್ಯಕ್ರಮವೆಂದು ಹೇಳುವುದಕ್ಕೆ ಬಯಸುತ್ತೇನೆ. ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಭವಿಷ್ಯದ ಹೆಜ್ಜೆಗಳು-ಎಂದು ಹೇಳಿರುವುದರಲ್ಲಿ.....

**ಶ್ರೀ ಸಿ.ಟಿ. ರವಿ:** ಮಾನ್ಯ ವಿರೋಧ ಪಕ್ಷದ ನಾಯಕರೆ ಒಂದು ನಿಮಿಷ ನಾನು ಮಾತನಾಡುತ್ತೇನೆ.

**ಶ್ರೀ ಸಿದ್ದರಾಮಯ್ಯ:** ನನ್ನ ಹತ್ತಿರ ಎಲ್ಲಾ ಮಾಹಿತಿಗಳು ಚೆನ್ನಾಗಿವೆ. I have got all the information.

**ಶ್ರೀ ಸಿ.ಟಿ. ರವಿ:** ಕಾಂಗ್ರೆಸ್ ಹೋಬಳಿಯ ಅಧ್ಯಕ್ಷರಾಗಿರುವ ಮಾಡ್ಲ್ ಪ್ರಕಾಶ್ ಎಂಬುವವರು ನನ್ನ ತಾಲ್ಲೂಕಿನಲ್ಲಿ ಅಧ್ಯಕ್ಷರಾಗಿದ್ದಾರೆ. ಅವರು ಸರ್ಕಾರ ಇದ್ದಾಗ ಬೇರೆಯವರನ್ನು ಮಾಡುತ್ತಿರಲಿಲ್ಲ. ಆದ್ದರಿಂದ, ಅವರನ್ನು ಏಕೆ ಮಾಡಿದ್ದೀರಾ ಎಂದು ನಾನು ಕೇಳಿದ್ದೇನೆ. ಈ ಮಾಹಿತಿ ನಿಮ್ಮ ಹತ್ತಿರ ಇಲ್ಲ. ಆದ್ದರಿಂದ, ಈ ವಿಷಯ ಹೇಳಿದೆ.

**ಶ್ರೀ ಸಿದ್ದರಾಮಯ್ಯ:** Scheduled Casteನವರು ಯಾರು ಇರಲಿಲ್ಲವೇ?

**ಶ್ರೀ ಸಿ.ಟಿ. ರವಿ:** ಅವರೂ ಕೂಡ ಇದ್ದಾರೆ.

**ಶ್ರೀ ಸಿದ್ದರಾಮಯ್ಯ:** ಎಲ್ಲಿದ್ದಾರೆ ಹೇಳಿ? Scheduled casteನವರು ಎಷ್ಟು ಜನರಿದ್ದಾರೆ? ಅವರ ಹೆಸರುಗಳನ್ನು ಓದಿ. 176 ತಾಲ್ಲೂಕುಗಳಲ್ಲಿ Scheduled casteನವರು ಎಷ್ಟು ಜನರಿದ್ದಾರೆಂಬುದರ ಬಗ್ಗೆ ದಾಖಲೆ ಕೊಡಿ.

**ಶ್ರೀ ಬಸವರಾಜ ಬೊಮ್ಮಾಯಿ:** ದಾಖಲೆ ಒದಗಿಸಿಕೊಡುತ್ತೇವೆ.

**ಶ್ರೀ ಸಿದ್ದರಾಮಯ್ಯ:** ಆ ಮಾಹಿತಿಯನ್ನು ಒದಗಿಸಿ.

**ಶ್ರೀ ಬಿ. ರಮಾನಾಥ್ ರೈ:** ಫಲಾನುಭವಿಗಳನ್ನು ಗ್ರಾಮಸಭೆಗಳಲ್ಲಿ ಆಯ್ಕೆ ಮಾಡಬಹುದಲ್ಲವೆ?

**ಅಧ್ಯಕ್ಷರು:** ಮಾನ್ಯ ವಿರೋಧ ಪಕ್ಷದ ನಾಯಕರು ಸ್ಪಷ್ಟೀಕರಣ ಕೇಳುತ್ತೀರಾ ಅಥವಾ ಪ್ರತಿಯೊಬ್ಬ ಶಾಸಕರು ಪ್ರತಿ ಹಂತದಲ್ಲಿ ಎದ್ದು ನಿಂತು ಮಾತನಾಡಿದರೆ ಹೇಗೆ?

**ಶ್ರೀ ಸಿದ್ದರಾಮಯ್ಯ:** ನೀವು ಸ್ವಲ್ಪ ಲಿಬರಲ್ ಆಗಿದ್ದೀರಿ ಎಂದು ಎಲ್ಲರೂ ಎದ್ದು ನಿಂತುಕೊಳ್ಳುತ್ತಾರಷ್ಟೆ. ನಾನೇನು ಬಹಳ ಕೇಳುವುದಕ್ಕೆ ಹೋಗುವುದಿಲ್ಲ. ನಮ್ಮ ಭವಿಷ್ಯದ ಹೆಜ್ಜೆಗಳೆಂದು ಇವರು ಕೊಟ್ಟಿರುವ ಉತ್ತರ ಕೃಷಿಗೆ ಭವಿಷ್ಯ ರೂಪಿಸತಕ್ಕಂಥದಲ್ಲ ಮತ್ತು ಗ್ರಾಮೀಣಾಭಿವೃದ್ಧಿ ಕೂಡ ಮಾಡತಕ್ಕಂಥದ್ದಲ್ಲ. ಹಗರಣಗಳ ಬಗ್ಗೆ ಚರ್ಚೆ ಮಾಡುವುದಕ್ಕೋಸ್ಕರ ಸಭೆ ಕರೆಯುತ್ತೇವೆಂದು ಇವರು ಹೇಳಿದರು. ಅದನ್ನು ಮಾಡುವುದಕ್ಕೆ ಆಗಲಿಲ್ಲ. ಆ ಕಾರಣಕ್ಕೋಸ್ಕರವಾಗಿ

ಗ್ರಾಮೀಣ ಅಭಿವೃದ್ಧಿ ಮತ್ತು ಕೃಷಿ ಎಂದು ತೆಗೆದುಕೊಂಡು ಬಂದು ಇವರು ಕಾಟಾಚಾರಕ್ಕೆ ಮಾಡಿರುವುದೇ ಹೊರತು ಇದರಲ್ಲಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬಗ್ಗೆ ಕೂಡ ಇವರಿಗೆ ಬದ್ಧತೆ ಇಲ್ಲ. ಕೇಂದ್ರ ಸರ್ಕಾರ ಅನೇಕ ಕಾರ್ಯಕ್ರಮಗಳಿಗೆ ಕೊಟ್ಟಿರುವ ಹಣವನ್ನು ಇವರಿಗೆ ಬಳಸಿಕೊಳ್ಳುವುದಕ್ಕೆ ಆಗಿಲ್ಲವೆಂದರೆ ಇವರಿಗೆ ಯಾವ ಬದ್ಧತೆ ಇದೆ ಎಂಬುದನ್ನು ಜನ ಇವರನ್ನು ಪ್ರಶ್ನೆ ಮಾಡಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಬಹಳ ಗದ್ಗದಿತರಾಗಿ ಹೇಳಿದರು. ಆದರೆ, ಆ ರೀತಿಯ ಪ್ರಾಮಾಣಿಕತೆಯಾಗಲಿ, ಕಳಕಳಿಯಾಗಲಿ ಇವರ ಉತ್ತರದಲ್ಲಿ ಸ್ವಲ್ಪವೂ ಕೂಡ ಕಾಣಿಸುತ್ತಿಲ್ಲ. ಮೂರು ದಿನಗಳ ಕಾಲ ನಾವು ಇಲ್ಲಿ ಏನೇನು ಸಲಹೆಗಳನ್ನು ಕೊಟ್ಟೆವು, ಅವುಗಳೆಲ್ಲವು ವ್ಯರ್ಥ ಕಸರತ್ತೆಂದು ನನಗನಿಸುತ್ತದೆ. ನಮ್ಮ ಯಾವ ಸಲಹೆಗೂ ಸಹ ಇವರಿಂದ ಸರಿಯಾದಂಥ ಉತ್ತರ ಕೊಡುವುದಕ್ಕೆ ಆಗಿಲ್ಲ. ಮತ್ತೆ ಇವರ ಹತ್ತಿರ ಹಣ ಇಲ್ಲ ಹಾಗೂ ಸಪ್ಲಿಮೆಂಟರಿ ಬಜೆಟ್ ಮಾಡುವುದಕ್ಕೂ ಇವರ ಹತ್ತಿರ ದುಡ್ಡು ಇಲ್ಲ. ಹಾಗೆಯೇ ಈಗ ಇರತಕ್ಕಂಥ ಕಾರ್ಯಕ್ರಮಗಳಿಗೆ ಕೊಡುವುದಕ್ಕೆ ಇವರ ಹತ್ತಿರ ದುಡ್ಡು ಇಲ್ಲ. ಆದ್ದರಿಂದ, ಈ ಕಾರ್ಯಕ್ರಮ ಕೇವಲ ತೋರಿಕೆಗೆ ಮತ್ತು ಜನರನ್ನು ತಪ್ಪು ದಾರಿಗೆ ಎಳೆಯತಕ್ಕಂಥ ಒಂದು ವ್ಯರ್ಥ ಪ್ರಯತ್ನ ಎನ್ನತಕ್ಕಂಥದ್ದನ್ನು ತಮ್ಮ ಮೂಲಕ ಸರ್ಕಾರಕ್ಕೆ ತಿಳಿಸುವುದಕ್ಕೆ ಬಯಸುತ್ತೇನೆ.

**ಶ್ರೀ ಹೆಚ್.ಡಿ. ರೇವಣ್ಣ (ಹೊಳೆನರಸೀಪುರ):** ಮಾನ್ಯ ಅಧ್ಯಕ್ಷರೆ, ಸಭಾನಾಯಕರೂ ಆಗಿರುವ ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿ ಇಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರನ್ನು ಕಾಡಬೇಡಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬಗ್ಗೆ ಚರ್ಚೆ ಮಾಡಲು 3 ದಿವಸಗಳವರೆಗೆ ಸಭೆಯನ್ನು ಕರೆಯಲಾಗಿದೆ ಎಂದು ಹೇಳಿದರು. ಮಾನ್ಯ ಸಭಾನಾಯಕರು ಹೇಳುವಾಗ ಅವರಿಗೆ ಸ್ವಲ್ಪ ಅಳು ಬಂತು. ಆದರೆ, ಇವತ್ತು ಮಾನ್ಯ ಮುಖ್ಯಮಂತ್ರಿಗಳು ಅಳಲಿಲ್ಲ. ಯಾವ ಉದ್ದೇಶಕ್ಕಾಗಿ ಮೂರು ದಿನಗಳು ಅತ್ತರೆಂಬುದು ನನಗೆ ಗೊತ್ತಿಲ್ಲ. ಇವರು ಕೊಟ್ಟಿರುವ ಪುಸ್ತಕದಲ್ಲಿನ ಯಾವುದಾದರೊಂದು ವಿಷಯಕ್ಕೆ

**4.00 P.M.**

ಸಂಬಂಧಪಟ್ಟಂತೆ ಒಂದು ಉತ್ತರ ಕೂಡ ಇವರು ನೀಡಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬಗ್ಗೆ ವಿಧಾನಮಂಡಲದ ಅಧಿವೇಶನದಲ್ಲಿ ನೀಡಿರುವ ಹೇಳಿಕೆಗೆ ಸಂಬಂಧಪಟ್ಟಂತೆ ಒಂದಾದರೂ ಉತ್ತರ ಈ ಪಟ್ಟಿಯಲ್ಲಿ ಇದ್ದರೆ ಅವರು ಏನು ಹೇಳುತ್ತಾರೆಯೇ ಅದಕ್ಕೆ ನಾನು ಭಾಗಿಯಾಗುತ್ತೇನೆ. ಇವತ್ತು ಭವಿಷ್ಯದ ಹೆಜ್ಜೆಗಳು ಅಂದರೆ ಏನು? ಈಗ ಉದಾಹರಣೆಗೆ ಹೇಳುವುದಾದರೆ ನಾವು ಕೇಳಿದ್ದು ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಎರಡು ವಿಷಯಕ್ಕೆ ಮಾತ್ರ ಚರ್ಚೆ ಸೀಮಿತವಾಗಿತ್ತು. ಮಾನ್ಯ ಮುಖ್ಯಮಂತ್ರಿಗಳಿಗೆ ಇವತ್ತು ಬೆಳಿಗ್ಗೆ ಬಂದ ಕ್ಷಣವೇ ಚರ್ಚೆ ಏನಾಯಿತು ಎಂದರೆ ಮಾನ್ಯ ಸಭಾಧ್ಯಕ್ಷರೆ, ಇದರ ಬಗ್ಗೆ 2006 ಇಡೀ ರಾಷ್ಟ್ರದಲ್ಲಿ first time ಕೃಷಿ ನೀತಿಯನ್ನು ಜಾರಿಗೆ ತಂದಿರುವವರು ಯಾರಾದರೂ ಇದ್ದರೆ ಅದು ನಮ್ಮ ಬಂಡೆಪ್ಪ ಕಾಶಂಪೂರ್‌ರವರ ಕಾಲದಲ್ಲಿ ಆಗಿದೆ. ಈ ಪುಸ್ತಕದಲ್ಲಿ ಈ ಕೃಷಿ ನೀತಿಯ ಬಗ್ಗೆ ಏನಾದರೂ ಇದೆಯೇ? ಇದರಲ್ಲಿ ಆ ಬಗ್ಗೆ ಒಂದಾದರೂ ಪ್ರಸ್ತಾಪವಿದೆಯೇ? ಇದರ ಬಗ್ಗೆ ಇಲ್ಲ. ಇನು ಎರಡನೆಯದಾಗಿ ಹೇಳುವುದಾದರೆ, ಹಣಕಾಸು ಇಲಾಖೆಯ ಕಾರ್ಯದರ್ಶಿ ಇಲ್ಲಿಗೆ ಇನ್ನೂ ಬಂದಿಲ್ಲ. ಏಕೆಂದರೆ ಅವರೂ ಸಹ ಮಾನ್ಯ ಮುಖ್ಯಮಂತ್ರಿಯವರ ಜೊತೆಯಲ್ಲಿ ಹೋಗಿರಬಹುದು. ಅದರ ಬಗ್ಗೆ ಏನೂ ಗೊತ್ತಿಲ್ಲ. ಆಮೇಲೆ ಹೇಳುತ್ತೇನೆ. ಈಗ ಇದು "farmer, conditions" ಅವರು 27ನೇ ತಾರೀಖು 14 ಜುಲೈ 2007 ಅದರಲ್ಲಿ ಎಲ್ಲಾ all Secretaries ರಾಜ್ಯದ ಎಲ್ಲಾ ಹಿರಿಯ ಇಲಾಖೆ, ಕೃಷಿ ಇಲಾಖೆಗೆ ಸಂಬಂಧಪಟ್ಟಂತೆ, ರೈತರಿಗೆ ಸಂಬಂಧಪಟ್ಟಂತೆ ಎಲ್ಲಾ ಸಂಘ ಸಂಸ್ಥೆಗಳನ್ನು ಕರೆಸಿ ಹಣಕಾಸು ಇಲಾಖೆಯ ಕಾರ್ಯದರ್ಶಿಗಳು ಈ ರಾಜ್ಯದ ರೈತರ condition ಏನು ಅನ್ನುವುದರ ಬಗ್ಗೆ ಚರ್ಚಿಸಿದರ ಬಗ್ಗೆ ಇಲ್ಲಿ ಚಕಾರವಿಲ್ಲ. ವಿದ್ಯುತ್ತನ್ನು 30% ನಿಂದ 20% ಲಾಸ್ ಇಳಿಸಿಬಿಟ್ಟಿದ್ದೇನೆ ಅಂದರು. ಯಾವ ಲಾಸ್ ಇಳಿಸಿದ್ದಾರೆ? ಅದು ನಿಜ ಒಪ್ಪಿಕೊಳ್ಳುತ್ತೇನೆ. 5 ಕಂಪನಿಯ ಪರಿಸ್ಥಿತಿ ಏನಾಗಿದೆ ಎನ್ನುವ ಬಗ್ಗೆ ಇವತ್ತು ನಾನಲ್ಲ ಹೇಳುತ್ತಿರುವುದು ಇವರು ಹೇಳುತ್ತಿದ್ದಾರೆ. ಇವತ್ತು 5 ಕಂಪನಿಯ ಬಂಡವಾಳ ಏನಾಗಿದೆ ಎಂದರೆ ಲಾಸ್,

ಏಕೆಂದರೆ ಕಳೆದ ವಿಧಾನ ಸಭೆಯಲ್ಲಿ ಇದರಲ್ಲಿ ಮುಖ್ಯಮಂತ್ರಿಗಳು ಹಗರಣಗಳ ಬಗ್ಗೆ ಚರ್ಚೆ ಮಾಡೋಣವೆಂದರೆ ಬೇಡ ಹಗರಣಗಳ ಬಗ್ಗೆ ಇರಲಿ ಆಮೇಲೆ ಮಾಡೋಣ ಎಂದು ಹೇಳಿದರು. ಈ ಬಗ್ಗೆ ನಾನು ಉದಾಹರಣೆಯನ್ನು ಕೊಡುತ್ತೇನೆ. ಹಗರಣಗಳ ಬಗ್ಗೆ ಎಂದು ಹೇಳಿ, Loss of Electricity – Bangalore Company ಇವತ್ತು 1694 ಕೋಟಿ ರೂಪಾಯಿಗಳು ಲಾಸ್ ಆಗಿದೆ. ಅದೇ ರೀತಿಯಾಗಿ ಮಂಗಳೂರು ಕಂಪನಿ ಇದನ್ನು ಕೆಇಆರ್‌ಸಿಗೆ ಅರ್ಜಿ ಹಾಕಿರುವುದು ನಾನಲ್ಲ. ಇದು ಕೆಇಆರ್‌ಸಿ ಮುಂದೆ ನಮ್ಮ ಇಂಧನ ಸಚಿವರ ಗಮನಕ್ಕೆ ಬಂದಿದೆಯಾ ಇಲ್ಲವೋ ಗೊತ್ತಿಲ್ಲ. ಏಕೆಂದರೆ ಅವರೇನಾದರೂ ಹಾಕಿಬಿಟ್ಟರೆ ಅದರ ಬಗ್ಗೆ ನನಗೇನೂ ಗೊತ್ತಿಲ್ಲ. ಮಂಗಳೂರು ಕಂಪನಿ, ಬೆಂಗಳೂರು ಕಂಪನಿ ನಾನು ಇದ್ದಾಗ 480 ಕೋಟಿ ರೂಪಾಯಿಗಳನ್ನು ಎಫ್‌ಡಿಯನ್ನು ಇಟ್ಟಿದ್ದೆವು. ಇವತ್ತು 2008–09ರಲ್ಲಿ 1020 ಕೋಟಿ ರೂಪಾಯಿಗಳು ನಷ್ಟವಾಗಿದೆ. 2009–10ಕ್ಕೆ ಸಂಭಾವಿತ ನಷ್ಟ 1096 ಕೋಟಿ ರೂಪಾಯಿಗಳು ಎಂದು ಇದೆ. ಅದೇ ರೀತಿಯಾಗಿ ಮಂಗಳೂರು ಕಂಪನಿ 2007–08ರಲ್ಲಿ 14 ಕೋಟಿ ರೂಪಾಯಿಗಳು ನಷ್ಟ. 2008–09ರಲ್ಲಿ 52 ಕೋಟಿ ರೂಪಾಯಿಗಳು ನಷ್ಟ 2009ರಲ್ಲಿ ಸಂಭಾವಿತ ನಷ್ಟ 417 ಕೋಟಿ ರೂಪಾಯಿಗಳು, ಗುಲ್ಬರ್ಗಾ ಕಂಪನಿ 2007ರಲ್ಲಿ 15 ಕೋಟಿ ರೂಪಾಯಿಗಳು ನಷ್ಟ. 2008–09ರಲ್ಲಿ 349 ಕೋಟಿ ರೂಪಾಯಿಗಳು ನಷ್ಟ. ಅದೇ ರೀತಿಯಾಗಿ 2009–10ರಲ್ಲಿ 412 ಕೋಟಿ ರೂಪಾಯಿಗಳು ಸಂಭಾವಿತ ನಷ್ಟವೆಂದು ಹೇಳುತ್ತಾರೆ. ಚಾಮುಂಡೇಶ್ವರಿ ಕಂಪನಿ 2007ರಲ್ಲಿ 5 ಕೋಟಿ ರೂಪಾಯಿಗಳು ನಷ್ಟ. 2008–09ರಲ್ಲಿ 181 ಕೋಟಿ ರೂಪಾಯಿಗಳ ನಷ್ಟ. 2009–10ರಲ್ಲಿ ಸಂಭಾವಿತ ನಷ್ಟ 259 ಕೋಟಿ ರೂಪಾಯಿಗಳು. ಹುಬ್ಬಳ್ಳಿ ಕಂಪನಿ 2007–08ರಲ್ಲಿ 247 ಕೋಟಿ ರೂಪಾಯಿಗಳ ನಷ್ಟ. 2008–09ರಲ್ಲಿ 766 ಕೋಟಿ ರೂಪಾಯಿಗಳು ನಷ್ಟ. 2009–10ಕ್ಕೆ ಸಂಭಾವಿತ ನಷ್ಟ 707 ಕೋಟಿ ರೂಪಾಯಿಗಳು. ಒಟ್ಟು 5 ಕಂಪನಿಗಳಿಂದ ಸಂಭಾವಿತ ನಷ್ಟ 2008–09ಕ್ಕೆ 2,348 ಕೋಟಿ ರೂಪಾಯಿಗಳು. ಈಗ 2009–10ಕ್ಕೆ 5 ಕಂಪನಿಗಳ ನಷ್ಟ 5,837 ಕೋಟಿ ರೂಪಾಯಿಗಳು ಸಂಭಾವಿತ ನಷ್ಟ ಎಂದು

ಹೇಳಿ ಕೆಇಆರ್‌ಸಿಯ ಮುಂದೆ ಅರ್ಜಿಯನ್ನು ಹಾಕಿದ್ದಾರೆ. ನಾನು last year ಹಾಗೂ ಈ ವರ್ಷದ್ದು ಸಹ ಹೇಳಿದ್ದೇನೆ. ಇದಲ್ಲದೆಯೇ ಸುಮಾರು 2,587 ಕೋಟಿ ರೂಪಾಯಿಗಳು high cost currentನ್ನು ಇವತ್ತು ಖರೀದಿ ಮಾಡಿದ್ದಾರೆ. ಏಕೆಂದರೆ ಇವತ್ತು ಇದು ಅವರ ಇಲಾಖೆಯವರು ಕೊಟ್ಟಿರುವಂತಹ ಮಾಹಿತಿಯ ಬಗ್ಗೆಯೇ ನಾನು ಹೇಳುತ್ತಿರುವುದು. ನಾನು separate ಆಗಿ ಮಾಹಿತಿಯನ್ನು ಹೇಳುತ್ತಿಲ್ಲ. ಅವರ ಇಲಾಖೆಯಲ್ಲಿ ಏನು ಮಾಹಿತಿಯನ್ನು ಕೊಟ್ಟಿದ್ದಾರೆ? ಇವತ್ತು ಲಿಂಗನಮಕ್ಕಿ 2004–05ರಲ್ಲಿ 14,869 cases ಒಳಹರಿವು ಇದೆ. ಇವತ್ತು 2008–09ಕ್ಕೆ 16,839 cases ಒಳಹರಿವು, ಇನ್ನು 2000 ಜಾಸ್ತಿ ಇದೆ. ಎಲ್ಲಾ ಡ್ಯಾಂಗಳಲ್ಲಿ ಒಳಹರಿವು ಜಾಸ್ತಿ ಇದ್ದರೂ ಕೂಡ ಇವತ್ತು 2004ಕ್ಕೂ ಮತ್ತು 2008ಕ್ಕೂ difference‌ನ್ನು ತೆಗೆದುಕೊಂಡರೆ ಇದರ ಬಗ್ಗೆ ಮಾನ್ಯ ಇಂಧನ ಮಂತ್ರಿಗಳು ಹೇಳಬೇಕಾಗುತ್ತದೆ. ವಿದ್ಯುತ್ ಬೇಡಿಕೆ ಇರುವುದು 2007ಕ್ಕೆ ಬೇಡಿಕೆ ಇರುವುದು 24.92, ಇವತ್ತು 2008–09ಕ್ಕೆ 26.57 ಅಂದರೆ ಬರೀ 1.6 ಮಾತ್ರ. ಇದರ ಬಗ್ಗೆ ಉದಾಹರಣೆ ಹೇಳುವುದಾದರೆ ಈ ಬಗ್ಗೆ ಅವರೇ ಹೇಳಿದ್ದಾರೆ. ನಾವು ಹಿಂದೆ 2500 ಜುಲೈ, ಜೂನ್ 5ರವರೆಗೆ ರೂರಲ್ ಏರಿಯಾದಲ್ಲಿ 9.5 ಸಿಂಗಲ್ ಫೇಸ್ ವಿದ್ಯುತ್ ಕೊಡುತ್ತಿದ್ದೆವು 8 ಪಾಯಿಂಟ್ 3 ಫೇಸ್ ಕೊಡುತ್ತಿದ್ದೆವು. 8.5 ಎಂದು 8 ಗಂಟೆ 5 ನಿಮಿಷ. 8.30 ಗಂಟೆ 3 ಪಾಯಿಂಟ್ ಫೇಸ್ ಕೊಡುತ್ತಿದ್ದೆವು. ಅವರ ಹೇಳಿಕೆ ಇದು. ಇದು ನನ್ನ ಹೇಳಿಕೆಯಲ್ಲ. ಈಗ 6–6 ಗಂಟೆ ಎಂದು ಹೇಳುತ್ತಾರೆ. ಅರ್ಬನ್ ಏರಿಯಾದಲ್ಲಿ 24 ಗಂಟೆ ಕೊಡುತ್ತೇವೆಂದು ಹೇಳುತ್ತಾರೆ. ಅರ್ಬನ್ ಏರಿಯಾದಲ್ಲಿ 24 ಗಂಟೆ ಕರೆಂಟ್ ಕೊಟ್ಟಿದ್ದೇವೆಂದರೆ ಅವರು ಏನು ಹೇಳುತ್ತಾರೆ ಅದಕ್ಕೆ ನಾನು ಶರಣಾಗುತ್ತೇನೆ. 24 ಗಂಟೆಗಳ ಕಾಲ ವಿದ್ಯುತ್ ಕೊಟ್ಟಿದ್ದೇವೆಂದು ಅವರು ಹೇಳಿಕೆಯಲ್ಲಿ ಹೇಳಿದ್ದಾರೆ ಈ ಬಗ್ಗೆ ಇಲ್ಲಿಯೇ ಇದೆ. ಅವರ ಒಂದು statement ಇದೆ. ಅವರು ಇಲಾಖೆಯ statement‌ನ್ನು review ಮಾಡುವಂತಹ ಸಂದರ್ಭದಲ್ಲಿ ಕೊಟ್ಟಿರುವುದು ಇವತ್ತು ನಮ್ಮ ಕಾಲದಲ್ಲಿ high cost current‌ನ್ನು ಖರೀದಿ ಮಾಡಿರುವುದು 2006–07ರಲ್ಲಿ 16 ಕೋಟಿ ರೂಪಾಯಿಗಳು. ಅದೇ 2007–08ರಲ್ಲಿ 40.28 ಕೋಟಿ ರೂಪಾಯಿಗಳು,

ಒಟ್ಟು 40 ಕೋಟಿ ರೂಪಾಯಿಗಳ high cost current. ಇವತ್ತು ಯಾರ್ಯಾರಿಂದ ಎಷ್ಟೆಷ್ಟು ಕರೆಂಟ್ ಖರೀದಿಯಾಗಿದೆ? ಅದನ್ನೂ ಸಹ ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಮುಖ್ಯಮಂತ್ರಿಗಳು 30% ಲಾಸ್ ಆಗಿದೆ ಎಂಬ ಭಾವನೆಯನ್ನು ವ್ಯಕ್ತಪಡಿಸಿದಾಗ ನಾವು ಆ ಬಗ್ಗೆ ಮಾಹಿತಿಯನ್ನು ಕೊಡಬೇಕಾಗುತ್ತದೆ. ಏಕೆಂದರೆ ಇವತ್ತಿನ ದಿವಸ ಉದಾಹರಣೆಗೆ ಹೇಳುವುದಾದರೆ GMR ತಣ್ಣೀರುಬಾವಿ, ಇದರಲ್ಲಿ ಒಂದರಲ್ಲಿಯೇ 434 ಕೋಟಿ ರೂಪಾಯಿಗಳ high cost currentನ್ನು ಖರೀದಿ ಮಾಡಿದ್ದಾರೆ. ಅದೇ ರೀತಿಯಾಗಿ co-generationನಲ್ಲಿ 503 ಕೋಟಿ ರೂಪಾಯಿಗಳ ಕರೆಂಟ್ ಖರೀದಿಯಾಗಿದೆ. ಸುಮಾರು 146 ಕೋಟಿ ರೂಪಾಯಿಗಳ purchase ಆಗಿರುವುದು. JWS, Jindalನಿಂದ ಸುಮಾರು 488 ಕೋಟಿ ರೂಪಾಯಿಗಳು, ಅದೇ ರೀತಿಯಾಗಿ ಟಾಟಾ 1.6 ಕೋಟಿ ರೂಪಾಯಿಗಳು, ಎನರ್ಜಿ ಎಕ್ಸ್ಚೇಂಜ್‌ನಿಂದ 28 ಕೋಟಿ ರೂಪಾಯಿಗಳು, NIPTC VSNನಲ್ಲಿ 32 ಕೋಟಿ ರೂಪಾಯಿಗಳು ಇದು ಅಲ್ಲದೆಯೇ ಛತ್ತೀಸ್‌ಘಡ್ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. 9.5 ರೂಪಾಯಿಯ ಕರೆಂಟ್. ಅವರು ಪುಕ್ಕಟೆಯಾಗಿ ಕರೆಂಟ್‌ನ್ನು ಕೊಟ್ಟಿರುವುದಿಲ್ಲ. ಛತ್ತೀಸ್‌ಘಡ್‌ನಿಂದ ರಾಜ್ಯಕ್ಕೆ 9 ರೂಪಾಯಿ 5 ಪೈಸೆಯದು 296 ಕೋಟಿ ರೂಪಾಯಿಗಳು ಕರೆಂಟ್‌ನ್ನು ಖರೀದಿ ಮಾಡಿದ್ದಾರೆ. ಛತ್ತೀಸ್‌ಘಡ್‌ದು ಏಕೆಂದರೆ ಅಲ್ಲಿ ಬಿಜೆಪಿ ಗೌರ್ನಮೆಂಟ್, ಬಾಕಿಯದು 6.5 ರೂಪಾಯಿಗಳು ಇದ್ದರೆ ಛತ್ತೀಸ್‌ಘಡ್‌ದು 9 ರೂಪಾಯಿ 5 ಪೈಸೆ ಕೊಟ್ಟಿದ್ದಾರೆ. ಇದು ಅಲ್ಲದೆಯೇ GVNLಗೆ ಇವೆಲ್ಲವೂ ಸೇರಿ ಒಟ್ಟು 2598 ಕೋಟಿ ರೂಪಾಯಿಗಳ ಕರೆಂಟ್ ಖರೀದಿಯಾಗಿರುವುದು. ಇದರ ಬಗ್ಗೆ ಒಂದು ಉದಾಹರಣೆಯನ್ನು ಕೊಡುತ್ತೇನೆ. Co-generationಗೆ 2 ರೂ. 8 ಪೈಸೆಗೆ agreement ಆಗಿ 10 ವರ್ಷಕ್ಕೆ, ಅದೇ ನಮ್ಮ ಮಂತ್ರಿಗಳೇ ಸಬ್‌ಕಮಿಟಿ ಮೀಟಿಂಗ್‌ನಲ್ಲಿ ಒಂದು ಆದೇಶವನ್ನು ಕೊಡುತ್ತಾರೆ. ಅಲ್ಲಿ ಏನು ಆದೇಶವನ್ನು ಕೊಟ್ಟಿದ್ದಾರೆಂಬ ಬಗ್ಗೆ ದಯಮಾಡಿ ಮಂತ್ರಿಗಳೇ ಹೇಳಬೇಕಾಗುತ್ತದೆ.

**ಅಧ್ಯಕ್ಷರು:** ಮಾನ್ಯ ರೇವಣ್ಣನವರೆ, ಇಷ್ಟೊಂದು details ಬೇಕಾಗಿಲ್ಲ.

**ಶ್ರೀ ಹೆಚ್.ಡಿ. ರೇವಣ್ಣ:** ಇದರ ಬಗ್ಗೆ clarification ಬೇಕಲ್ಲಾ? ಏಕೆಂದರೆ ನಾನು ಹೇಳುವುದು. ಮಾನ್ಯ ಮಂತ್ರಿಗಳೇ ಸಬ್ ಕಮಿಟಿ ಮೀಟಿಂಗ್‌ನಲ್ಲಿ ಅವರೇ ಹೇಳುತ್ತಾರೆ. ಇದು ಇದ್ದರೆ ಯಾವುದು energyದು ಬೇಕಾಗಿಲ್ಲ. ನಿಮ್ಮ ಕೆಇಆರ್‌ಸಿದು ಪರ್ಮಿಶನ್ ಬೇಕಾಗಿಲ್ಲ. 2 ರೂಪಾಯಿ ಇರುವುದು 7 ರೂಪಾಯಿ ಮಾಡಿ ಎಂದು ಅವರೇ permission ಕೊಡುತ್ತಾರೆ. ಇದರಲ್ಲಿ ಯಾರ್ಯಾರು ಇದ್ದಾರೆ, ಎಲ್ಲವು ಖಾಸಗಿ ಸಕ್ಕರೆ ಕಾರ್ಖಾನೆಯಿಂದ co-generation ಬರುವುದು. ಯಾರ್ಯಾರು ನಿಮ್ಮ ಮಂತ್ರಿಗಳ ಹೊಡೆತ ಬಂತಾ? ಈಗ ಅದರ ಜೊತೆಗೆ ನಾನು ಬೆಳಿಗ್ಗೆ ನಿಲುವಳಿ ಸೂಚನೆಯನ್ನು ಕೊಟ್ಟಿದ್ದೆ. ಆಗ ಏನು ನಿಲುವಳಿ ಸೂಚನೆ ಕೊಟ್ಟಿದ್ದೆ, ಸನ್ಮಾನ್ಯ ಮುಖ್ಯಮಂತ್ರಿಗಳ ಮೇಲೆ ನೇರವಾಗಿ ನಾನು ಇವತ್ತಿನ ದಿವಸ ಬೆಳಿಗ್ಗೆ ಏನು ಕಲ್ಲಿದ್ದಲು ಇದೆ ಅಧರ ಬಗ್ಗೆ ಒಂದು ಸವಿಸ್ತಾರವಾದಂತಹ ಚರ್ಚೆ ಮಾಡುವುದಕ್ಕೆ ರೂಲ್ 60ರಲ್ಲಿ ಅವಕಾಶ ಕೊಡಬೇಕೆಂದು ನಾನು ಇವತ್ತು ಬೆಳಿಗ್ಗೆ ಕೇಳಿದ್ದೆ. ಸನ್ಮಾನ್ಯ ಮುಖ್ಯಮಂತ್ರಿಗಳು... ನಾನು ಒಂದು ಉದಾಹರಣೆಯನ್ನು ಕೊಡುತ್ತೇನೆ. ಮಾನ್ಯ ಸಭಾಧ್ಯಕ್ಷರೆ, ಒಂದು ಲೆಟರ್ ಕೊಡುತ್ತೇನೆ. ಈಗ ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶವಿದೆಯೋ ಅಥವಾ ಮುಖ್ಯಮಂತ್ರಿಗಳೇ ಚರ್ಚೆ ಇಲ್ಲದೆಯೇ ಇವತ್ತಿನ ಸಭೆಯಲ್ಲಿ ಅನೌನ್ಸ್ ಮಾಡಿದ್ದಾರೆ. 2002ರಿಂದ ಇಲ್ಲಿಯವರೆಗೆ ಸಂಪೂರ್ಣವಾಗಿ Retired Judgeನಿಂದ ತನಿಖೆ ಮಾಡಿಸುತ್ತೇನೆಂದು ಹೇಳಿದ್ದಾರೆ. ಆದರೆ 3ನೇ ತಾರೀಖು ಜುಲೈಯಲ್ಲಿ 2009ರಲ್ಲಿ ಹೈಕೋರ್ಟಿನಲ್ಲಿ ಒಂದು ಆದೇಶವಾಗಿದೆ. ಆ ಆದೇಶದಲ್ಲಿ 3 ಜನ ಅಧಿಕಾರಿಗಳಿಗೆ ತಲಾ 25,000 ರೂಪಾಯಿಗಳ ದಂಡವನ್ನು ಹಾಕಿದ್ದಾರೆ. ಮತ್ತೆ ಇದರ ಜೊತೆಗೆ ಮಾನ್ಯ ಮುಖ್ಯಮಂತ್ರಿಗಳ ಮೇಲೂ ಅದರಲ್ಲಿ ಹೈಕೋರ್ಟಿನ ಆರ್ಡರ್‌ನಲ್ಲಿ ಹೇಳಿದ್ದಾರೆ. ಅಂತಹ ಸನ್ನಿವೇಶ ಇರುವಾಗ Retired Judge ರವರಿಂದ enquiryಯನ್ನು ಮಾಡುವುದಕ್ಕಾಗುತ್ತದೆಯೇ? ಹೈಕೋರ್ಟ್ ಆದೇಶ Single Bench, Division bench ಆದೇಶದ ಮೇಲೆ Retired Judge ಏನಾದರೂ ಮಾಡುತ್ತಾರೆಯೇ? ಅದರ ಜೊತೆಗೆ ನೇರವಾಗಿ ಮುಖ್ಯಮಂತ್ರಿಗಳೇ ಇದರಲ್ಲಿ ನೇರವಾಗಿ involve ಆಗಿದ್ದಾರೆ. KPCL Finance Director ಬರೆಯುತ್ತಾರೆ.

ಆ ಪತ್ರವನ್ನು ತಮಗೆ ಕಳುಹಿಸಿಕೊಡುತ್ತೇನೆ. KPCL MDಯವರೂ ಸಹ ಬರೆಯುತ್ತಾರೆ. ಅದರ ವಿರುದ್ಧ ಮಾನ್ಯ ಮುಖ್ಯಮಂತ್ರಿಗಳು 22ನೇ ತಾರೀಖು 8 ಗಂಟೆ 11 ನಿಮಿಷಕ್ಕೆ ಅವರ ಮನೆಯಿಂದ faxನ್ನು ಕಳುಹಿಸುತ್ತಾರೆ. ನೇರವಾಗಿ ಭಾಟಿಯಾ ಕಂಪನಿಯವರು ಇದು...

**ಅಧ್ಯಕ್ಷರು:** ಮಾನ್ಯ ರೇವಣ್ಣನವರೆ, ಮಾನ್ಯ ಮುಖ್ಯಮಂತ್ರಿಗಳು ಕೃಷಿ ಮತ್ತು ಗ್ರಾಮೀಣಾಭಿವೃದ್ಧಿಯ ಬಗ್ಗೆ ಉತ್ತರವನ್ನು ಕೊಟ್ಟಿದ್ದಾರೆ.

**ಶ್ರೀ ಹೆಚ್.ಡಿ. ರೇವಣ್ಣ:** ಅದಕ್ಕೆ ನಾನು ನಿಲುವಳಿ ಸೂಚನೆಯನ್ನು ಕೊಡುತ್ತೇನೆಂದು ತಾವು ಹೇಳಿದರೆ ನನ್ನದೇನೂ ಇಲ್ಲ. ಅದರ ಬಗ್ಗೆ ಬೆಳಕನ್ನು ಚೆಲ್ಲಬೇಕಾಗಿದೆ.

**ಶ್ರೀ ಹೆಚ್.ಸಿ. ಬಾಲಕೃಷ್ಣ:** ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಟ್ಟಿರುವ ಬಗ್ಗೆಯೇ ಚರ್ಚೆ ಮಾಡುತ್ತಿರುವುದು.

**ಶ್ರೀ ಹೆಚ್.ಡಿ. ರೇವಣ್ಣ:** ಮಾನ್ಯ ಮುಖ್ಯಮಂತ್ರಿಗಳು ಅವರು ಕೊಟ್ಟಿರುವ ಉತ್ತರದ ಬಗ್ಗೆಯೇ ಚರ್ಚೆ ಮಾಡುತ್ತಿರುವುದು.

**(ಗೊಂದಲ)**

**ಶ್ರೀ ಹೆಚ್.ಡಿ. ರೇವಣ್ಣ:** ಮುಖ್ಯಮಂತ್ರಿಗಳೇ ಆದೇಶವನ್ನು ಕೊಟ್ಟಿರುವುದು.

**ಶ್ರೀ ವೆಂಕಟರಾವ್ ನಾಡಗೌಡ:** ಅವರು ಅಂದಿರುವುದನ್ನೇ ಹೇಳುತ್ತಿರುವುದು.

**ಶ್ರೀ ಕೆ.ಎಂ. ಶಿವಲಿಂಗೇಗೌಡ:** ಅವರು ಉತ್ತರವನ್ನು ಕೊಟ್ಟಿರುವ ಬಗ್ಗೆಯೇ clarification ಕೇಳುತ್ತಿದ್ದಾರೆ.

**(ಗೊಂದಲ)**

**ಶ್ರೀ ಹೆಚ್.ಡಿ. ರೇವಣ್ಣ:** ಏಕೆಂದರೆ, ...

**ಶ್ರೀ ಹೆಚ್.ಸಿ. ಬಾಲಕೃಷ್ಣ:** ನೀವು ನಿಲುವಳಿ ಸೂಚನೆಗೆ ಅವಕಾಶವನ್ನು ಕೊಡುತ್ತೇನೆಂದರೆ ನಾವು ಚರ್ಚೆಯನ್ನೇ ಮಾಡುವುದಿಲ್ಲ.

**ಅಧ್ಯಕ್ಷರು:** ಮಾನ್ಯ ಬಾಲಕೃಷ್ಣರವರೆ, ...

**ಶ್ರೀ ಹೆಚ್.ಡಿ. ರೇವಣ್ಣ:** ಮಾನ್ಯ ಸಭಾಧ್ಯಕ್ಷರೆ, ಇದರಲ್ಲಿ ನೇರವಾಗಿ ಮುಖ್ಯಮಂತ್ರಿಗಳೇ No.1 ಅಪರಾಧಿ. ಇಲ್ಲಿ ದಾಖಲೆ ಇಲ್ಲ. ಅವರು ಲೆಟರನ್ನು ಬರೆದಿದ್ದಾರೆ. ಭಾಟಿಯಾ ಕಂಪನಿಯ ಜೊತೆಯಲ್ಲಿ ಶಾಮೀಲಾಗಿರುವುದಕ್ಕೆ direct letter ಇದೆ.

**ಅಧ್ಯಕ್ಷರು:** ಮಾನ್ಯ ರೇವಣ್ಣನವರೆ, ನಿಲುವಳಿ ಸೂಚನೆ ನಿಮ್ಮದೂ ಒಂದು ಬಂದಿದೆ. ಮಾನ್ಯ ವಿರೋಧ ಪಕ್ಷದ ನಾಯಕರದೂ ಸಹ ಬಂದಿದೆ.

**ಶ್ರೀ ಹೆಚ್.ಡಿ. ರೇವಣ್ಣ:** ದಾಖಲಾತಿ ಇದೆಯಲ್ಲಾ? ನನ್ನ ಹತ್ತಿರ ಲೆಟರ್ ಇದೆ. ಮಾನ್ಯ ಮುಖ್ಯಮಂತ್ರಿಗಳ ಲೆಟರ್ ಇದೆ.

**ಶ್ರೀ ಶಿವಣ್ಣ:** ರೇವಣ್ಣನವರು ಅಪರಾಧಿ ಎಂದು ಹೇಳುವುದು ಸರಿಯಲ್ಲ. ಆರೋಪಿ ಎಂದು ಬೇಕಾದರೆ ಹೇಳಲಿ. ಅಪರಾಧಿ ಎಂದು ಹೇಳಿದರೆ ಏನೋ ಅರ್ಥ ಬರುತ್ತದೆ.

(ಗೊಂದಲ)

**ಶ್ರೀ ಹೆಚ್.ಡಿ. ರೇವಣ್ಣ:** Finance Director ರವರ ಟಿಪ್ಪಣಿ ಇದೆ.

**ಅಧ್ಯಕ್ಷರು:** ನಿಲುವಳಿ ಸೂಚನೆಯಲ್ಲಿ ಈ ಬಗ್ಗೆ ಪ್ರತ್ಯೇಕವಾಗಿ ಚರ್ಚೆಯನ್ನು ಮಾಡುವಿರಂತೆ.

**ಶ್ರೀ ಹೆಚ್.ಡಿ. ರೇವಣ್ಣ:** ಆ ಮೇಲೆ ಇದು ಬರುವುದಿಲ್ಲ. ಚರ್ಚೆ ಮಾಡುವುದಕ್ಕೆ ಅನುಕೂಲ ಮಾಡಿಕೊಡಿ.

**ಶ್ರೀ ಕೆ.ಎಸ್. ಈಶ್ವರಪ್ಪ (ಇಂಧನ ಸಚಿವರು):** ಮಾನ್ಯ ಅಧ್ಯಕ್ಷರೆ, ಈಗ ಮಾನ್ಯ ರೇವಣ್ಣನವರು ಪ್ರಸ್ತಾಪವನ್ನು ಮಾಡುತ್ತಿದ್ದಾರೆ. ತಾವು ಹೇಗಿದ್ದರೂ ನಿಲುವಳಿ ಸೂಚನೆಯನ್ನು ಮಾನ್ಯ ಅಧ್ಯಕ್ಷರಿಗೆ ಕಳುಹಿಸಿದ್ದೀರಿ. ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕೊಟ್ಟಾಗ ಖಂಡಿತವಾಗಿಯೂ ಚರ್ಚೆಯನ್ನು ಮಾಡಿ. ಇನ್ನು ಎರಡನೆಯದು ಖರೀದಿಯ ಬಗ್ಗೆಯೂ ಕೂಡ ನೀವು

ಪ್ರಸ್ತಾಪವನ್ನು ಮಾಡಿದ್ದೀರಿ. ವಿದ್ಯುತ್ ಖರೀದಿಯ ಬಗ್ಗೆ ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಕೊಡಬೇಕೆಂದು ಎಂದರೆ ನಾನು ನಾಳೆ ಬೆಳಿಗ್ಗೆ ಸೂಕ್ತವಾದಂತಹ ಉತ್ತರವನ್ನು ಕೊಡುತ್ತೇನೆ. ವಿಶೇಷವಾಗಿ ತಾವು 20 ದಿನಗಳ ಕಾಲ ಅಧಿವೇಶನವನ್ನು ಕರೆಯುತ್ತಿದ್ದೀರಿ. ನಿಮ್ಮಲ್ಲಿ ನಾನು ದಯವಿಟ್ಟು ಮತ್ತೆಮತ್ತೆ ಮನವಿಯನ್ನು ಮಾಡುತ್ತೇನೆ. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಈಗ ಉಳಿಯುವುದು ಇನ್ನು ಒಂದೂವರೆ ದಿನಗಳು, ನಾಳೆ ನಾನು ಈ ಬಗ್ಗೆ ಉತ್ತರವನ್ನು ಕೊಡುವ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಹೇಳುತ್ತಿರುವುದು. Extend ಮಾಡುವುದರ ಬಗ್ಗೆ ಹೇಳುವುದು ಬಹಳ ಸುಲಭ. ನಾನು ಇದರ ಬಗ್ಗೆ ಬೆಳಕನ್ನು ಚೆಲ್ಲುವುದರ ಬಗ್ಗೆಯೂ ಕೂಡ ಕಳೆದ ಬಾರಿಯೂ ಕೂಡ ತಮ್ಮಲ್ಲಿ ಪ್ರಾರ್ಥನೆಯನ್ನೂ ಕೂಡ ಮಾಡಿದ್ದೆ. ಮುಂದೆ ನವೆಂಬರ್ ತಿಂಗಳಲ್ಲಿ ಕರೆಯುವಂತಹ ಅಧಿವೇಶನದಲ್ಲಿ ಇದಕ್ಕೋಸ್ಕರ ಎರಡು ಅಥವಾ ಮೂರು ದಿನಗಳು ಇದಕ್ಕೆಂದು ನಿಯುಕ್ತಿ ಮಾಡಿದರೆ ಒಳ್ಳೆಯದು. ಇದು ಬರೀ ಖರೀದಿ ಒಂದಕ್ಕೆ ಸೀಮಿತವಲ್ಲ. ಏನೇನು ತಮಗೆ ಬೇಕು ಎಂಬುದನ್ನು ಈಗಾಗಲೇ ಮಾನ್ಯ ವಿರೋಧಪಕ್ಷದ ನಾಯಕರು ನಮ್ಮ ಕಛೇರಿಗೆ ಏನೇನು ಅವಶ್ಯಕತೆ ಇದೆ ಎಂದು ತಾವು ಕಳುಹಿಸಿದ್ದೀರಿ. ಅದಕ್ಕೆ ಉತ್ತರವನ್ನೂ ಸಹ ನಾವು ಕಳುಹಿಸಿದ್ದೇವೆ. ಇನ್ನು ಏನೇನು ಬೇಕೆಂದು ತಾವು ಮುಂಚಿತವಾಗಿ ಕೇಳಿಕೊಂಡರೆ ಆದಷ್ಟು ಕಳುಹಿಸಿಕೊಡುತ್ತೇವೆ. ಇದಕ್ಕೆ ಎರಡು ದಿನ ತಾವು ಬೆಳಕು ಚೆಲ್ಲಿದರೆ ಆಗುತ್ತದೆ. ಈಗ ಏನಾಗುತ್ತದೆ ಎಂದರೆ ನೀವು ಏನೋ ಒಂದು ಆಪಾದನೆಯನ್ನು ಮಾಡಿದ್ದೀರಿ. ಅದಕ್ಕೆ ನಾವು ಉತ್ತರವನ್ನು ಕೊಟ್ಟುಕೊಂಡು ತಪ್ಪಿಸಿಕೊಂಡು ಹೋಗುವುದಷ್ಟೇ ನಮ್ಮ ಕೆಲಸವಲ್ಲ. ನಿಮ್ಮ ಇಷ್ಟು ವರ್ಷಗಳ ಅನುಭವ. ಇದನ್ನು ಚರ್ಚೆ ಮಾಡಿದಾಗ ನಿಜಕ್ಕೂ ಕೂಡ ಇದರಲ್ಲಿ ತಪ್ಪಾಗಿದ್ದರೆ, ನೇರವಾಗಿ ತಪ್ಪಾಗಿದೆ ಎಂದು ಒಪ್ಪಿಕೊಳ್ಳುತ್ತೇವೆ. ನೀವು ತಪ್ಪು ತಿಳಿದುಕೊಂಡಿದ್ದರೆ, ನಿಮ್ಮ ತಪ್ಪು ತಿಳುವಳಿಕೆಯನ್ನೂ ಸಹ ನಾವು ದೂರ ಮಾಡುತ್ತೇವೆ. ಎರಡೂ ಬೇರೆ ಬೇರೆ. ಈ ಸಭೆ ಖಂಡಿತ ತುಂಬಾ ಪವಿತ್ರವಾದುದು. ಈ ಸಭೆಯಲ್ಲಿ ರಾಜ್ಯದ ಜನಕ್ಕೆ ಏನೇನು ಆಗುತ್ತದೆ ಎಂಬುದೂ ಸಹ ಗೊತ್ತಾಗಬೇಕು. ಏನಾದರೂ ತಪ್ಪಾಗಿದ್ದರೆ ಅದನ್ನು

ತಿದ್ದಿಕೊಳ್ಳಬೇಕಾಗುತ್ತದೆ. ಇಲ್ಲಿ ಎರಡು ಅಂಶ ಇರುವುದರಿಂದ ನಾನು ನಿಮಗೆ ಮನವಿಯನ್ನು ಮಾಡುತ್ತೇನೆ. ಈಗ ಮಾನ್ಯ ಮುಖ್ಯಮಂತ್ರಿಗಳು ಇಲ್ಲದೇ ಇರುವಂತಹ ಸಂದರ್ಭದಲ್ಲಿ ತಾವು ಕಲ್ಲಿದ್ದಲಿನ ಬಗ್ಗೆ ಪ್ರಸ್ತಾಪವನ್ನು ಮಾಡುತ್ತಿದ್ದೀರಿ. ಹಾಗಾಗಿ ನಾಳೆ ಮುಖ್ಯಮಂತ್ರಿಗಳು ಸದನದಲ್ಲಿ ಇರುತ್ತಾರೋ ಇಲ್ಲವೋ ಅದು ತಮಗೆ ಬಿಟ್ಟಿರುವುದು. ಚರ್ಚೆ ಮಾಡುವಂತಹ ಸಂದರ್ಭದಲ್ಲಿ ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳೇ ಉತ್ತರವನ್ನು ಕೊಡಬೇಕಾಗುತ್ತದೆ. KPCL ಛೇರ್ಮನ್ ಅವರೇ ಆಗಿದ್ದಾರೆ. ಹಾಗಾಗಿ ನಾನು ಹೇಳುತ್ತಿರುವುದು, ಅವರು ಇರುವಂತಹ ಸಂದರ್ಭದಲ್ಲಿ ಇದನ್ನು ತೆಗೆದುಕೊಳ್ಳಿ. ಆಗ ಇದನ್ನು ಪ್ರಸ್ತಾಪ ಮಾಡಿ. 'ಮುಖ್ಯಮಂತ್ರಿಗಳೇ ನಂಬರ್–1 ಅಪರಾಧಿಗಳು' ಈ ರೀತಿಯಾಗಿ ನೇರವಾಗಿ ಚಾರ್ಜ್ ಮಾಡುವುದು ಇದೆಯಲ್ಲಾ ಒಬ್ಬ ವಿರೋಧಪಕ್ಷದ ನಾಯಕರಾಗಿ ಅದು ಸರಿಯಲ್ಲ. ಅದಕ್ಕೆ ನಾನು ದಯವಿಟ್ಟು ಮನವಿಯನ್ನು ಮಾಡುತ್ತೇನೆ. ನೀವು ತುಂಬಾ ತೂಕದವರು ಇದ್ದೀರಿ. ನಿಮಗೂ ತುಂಬಾ ಬೆಲೆ ಇದೆ. ಅದಕ್ಕೋಸ್ಕರ ಮಾನ್ಯ ಮುಖ್ಯಮಂತ್ರಿಗಳು ಇರುವಂತಹ ಸಂದರ್ಭದಲ್ಲಿ ಸಭಾಧ್ಯಕ್ಷರು ತಮಗೆ ಅವಕಾಶವನ್ನು ಕೊಟ್ಟಾಗ ಅದನ್ನು ದಯವಿಟ್ಟು ಪ್ರಸ್ತಾಪ ಮಾಡಿ.

**ಶ್ರೀ ಹೆಚ್.ಡಿ. ರೇವಣ್ಣ:** ಮಾನ್ಯ ಸಭಾಧ್ಯಕ್ಷರೆ, ಇಂಧನ ಮಂತ್ರಿಗಳು ಒಂದು ಸಲಹೆಯನ್ನು ಕೊಟ್ಟಿದ್ದಾರೆ ಅದನ್ನು ನಾನು ಸ್ವಾಗತ ಮಾಡುತ್ತೇನೆ. ಏಕೆಂದರೆ, ಅವರ ಉದ್ದೇಶವೇನೆಂದರೆ ರಾಜ್ಯದ ಜನತೆಗೆ ಒಂದು ಒಳ್ಳೆಯ ಕೆಲಸವನ್ನು ಮಾಡಬೇಕೆಂಬ ಉದ್ದೇಶವಿದೆ. ಅದರ ಬಗ್ಗೆ ಏನೂ ಹೇಳುವುದಿಲ್ಲ. ನಾನು ಆವತ್ತಿನಿಂದ ಹೇಳುತ್ತಿದ್ದೇನೆ. ಯಾವ ಪಕ್ಷವೇ ಇರಲಿ, ಅದಕ್ಕೂ ಯಾವ ಸಂಬಂಧ ಇಲ್ಲ. ರಾಜ್ಯದ ಜನತೆಗೆ ಬೇಕಾಗಿರುವುದು ವಿದ್ಯುತ್ ಬಗ್ಗೆ ನಾನು ಖಡಾಖಂಡಿತವಾಗಿ ಮಂತ್ರಿಯಾಗಿದ್ದಾಗಲೂ ಹೇಳಿದ್ದೇವೆ. ನೀವು ಮಂತ್ರಿಯಾದ ಮೇಲೂ 2 ದಿವಸ ಸಭೆ ಮಾಡಿ ಎಂದು ಹೇಳಿದ್ದೇನೆ. ಇಂಧನ ಮಂತ್ರಿಗಳ ಗಮನಕ್ಕೆ ತರುತ್ತೇನೆ. ನೀವಲ್ಲ ಛೇರ್ಮನ್, ನೀವು ಕಳ್ಳತನ ಮಾಡಿದ್ದೀರೆಂದು ಹೇಳುತ್ತಿಲ್ಲ. KPCL ಅಧ್ಯಕ್ಷರು ಮುಖ್ಯಮಂತ್ರಿಗಳು ಇದ್ದಾರೆ. ಮುಖ್ಯಮಂತ್ರಿಗಳೇ ನೇರವಾಗಿ ಲೆಟರ್ ಬರೆದಿದ್ದಾರೆ.

(ಗೊಂದಲ)

**ಅಧ್ಯಕ್ಷರು:** ಮಾನ್ಯ ರೇವಣ್ಣನವರೆ, ಒಂದು ನಿಮಿಷ ಇರಿ. Detail ಹೇಳುವುದು ಬೇಡ.

**ಶ್ರೀ ಕೆ.ಎಸ್. ಈಶ್ವರಪ್ಪ:** ಮಾನ್ಯ ಸಭಾಧ್ಯಕ್ಷರು ಅವಕಾಶವನ್ನು ಕೊಟ್ಟಾಗ ತಾವು ಮಾತನಾಡಿ.

**ಶ್ರೀ ಹೆಚ್.ಡಿ. ರೇವಣ್ಣ:** ನನಗೆ ನಿಲುವಳಿ ಸೂಚನೆಯ ಬಗ್ಗೆ ಮಾತನಾಡುವುದಕ್ಕೆ ಅದರ ಬಗ್ಗೆ ಬೆಳಕನ್ನು ಚೆಲ್ಲುವುದಕ್ಕೆ ಅವಕಾಶವನ್ನು ಕೊಡುತ್ತೀರಾ? ಅಂದರೆ ನನ್ನದೇನೂ ಅಭ್ಯಂತರವಿಲ್ಲ.

**ಅಧ್ಯಕ್ಷರು:** ಮಾನ್ಯ ರೇವಣ್ಣನವರೆ, ನಾನು ಒಂದು ಮಾತನ್ನು ಹೇಳುತ್ತೇನೆ.

**ಶ್ರೀ ಹೆಚ್.ಡಿ. ರೇವಣ್ಣ:** ಮಾನ್ಯ ಮಂತ್ರಿಗಳು ನಿಲುವಳಿ ಸೂಚನೆಯ ಬಗ್ಗೆ ಒಪ್ಪಿಕೊಂಡಿದ್ದಾರೆ. ಮಾನ್ಯ ಸಭಾಧ್ಯಕ್ಷರೆ, ದಯಮಾಡಿ ಮಾನ್ಯ ಮಂತ್ರಿಗಳು ಒಪ್ಪಿಕೊಂಡ ಮೇಲೆ ಬೆಳಕನ್ನು ಚೆಲ್ಲುವುದಕ್ಕೆ ಅವಕಾಶವನ್ನು ಕೊಡುತ್ತೇನೆಂದು ಹೇಳಿದ್ದಾರೆ.

**ಅಧ್ಯಕ್ಷರು:** ನನಗೆ ಕನ್‌ವಿನ್ಸ್ ಆಗಬೇಕು. ಅವರು ಒಪ್ಪಿಕೊಂಡ ತಕ್ಷಣ ಅದಕ್ಕೆ ಅವಕಾಶವನ್ನು ಕೊಡುವುದಕ್ಕೆ ಆಗುತ್ತದೆಯೇ? ಈ ಬಗ್ಗೆ ನನಗೆ ಕನ್‌ವಿನ್ಸ್ ಆಗಬೇಕು.

**ಶ್ರೀ ಹೆಚ್.ಡಿ. ರೇವಣ್ಣ:** ಅದರ ಬಗ್ಗೆ ಹೇಳಬೇಕಲ್ಲ?

**ಅಧ್ಯಕ್ಷರು:** ಆ ಟೈಮ್ ಬಂದಾಗ, ಅದು ಡಿಸ್‌ಕಷನ್ ಬಂದಾಗ, I will take a decision.

**ಶ್ರೀ ಹೆಚ್.ಡಿ. ರೇವಣ್ಣ:** ಈ ಬಗ್ಗೆ ಬೆಳಕನ್ನು ಚೆಲ್ಲಬೇಕಲ್ಲ?

**ಅಧ್ಯಕ್ಷರು:** ಅದನ್ನು ನಾನು ಹೇಳುತ್ತೇನೆ. ಎರಡು ನಿಲುವಳಿ ಸೂಚನೆ ಇದೆ. ನೀವು ನಿಲುವಳಿ ಸೂಚನೆಯ ಮೇಲೆ...

**ಶ್ರೀ ಶಿವಣ್ಣ:** ಮಾನ್ಯ ರೇವಣ್ಣನವರು ಬೆಳಕು ಚೆಲ್ಲಿ ಸಾಕಾಗಿಹೋಗಿದೆ. ಇಡೀ ದೇಶದ ತುಂಬಾ ಬೆಳಕನ್ನು ಚೆಲ್ಲಿ ಸಾಕಾಗಿಹೋಗಿದೆ. ಈಗ ಚೆಲ್ಲುತ್ತಿದ್ದಾರೆ? ದಾನ ಮಾಡಿಕೊಳ್ಳೋಣ ನಾವೆಲ್ಲ.

**ಅಧ್ಯಕ್ಷರು:** ಮಾನ್ಯ ರೇವಣ್ಣನವರೆ ಒಂದು ನಿಮಿಷ. ಈಗ ನಿಲುವಳಿ ಸೂಚನೆಯ ಬಗ್ಗೆ ದಯವಿಟ್ಟು ತಾವು ಮಾತನಾಡುವುದಕ್ಕೆ ಹೋಗಬೇಡಿ. ಏಕೆಂದರೆ ಎರಡು ನಿಲುವಳಿ ಸೂಚನೆಗಳು ಇವೆ. ಒಂದು ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಮಾನ್ಯ ಜಯಚಂದ್ರರವರು ಕೊಟ್ಟಿರುವಂತಹ ಒಂದು ನಿಲುವಳಿ ಸೂಚನೆ ಇದೆ. ತಮ್ಮದು ಒಂದು ನಿಲುವಳಿ ಸೂಚನೆ ಇದೆ. ಅದರಲ್ಲಿ ಯಾವುದು ತೆಗೆದುಕೊಳ್ಳಬೇಕು ಎಂಬ ನಿರ್ಣಯವನ್ನು ತೆಗೆದುಕೊಳ್ಳಬೇಕೆಂಬುದರ ಬಗ್ಗೆ ನೀವು ಪ್ರಸ್ತಾಪ ಮಾಡಿದ ಮೇಲೆ ತೆಗೆದುಕೊಳ್ಳುತ್ತೇನೆ. ಈಗ ಆ subject matterಗೆ ನಾವು touch ಮಾಡುವುದು ಬೇಡ. ಗ್ರಾಮೀಣಾಭಿವೃದ್ಧಿಯ ಬಗ್ಗೆ ಉತ್ತರವನ್ನು ಕೊಟ್ಟಿದ್ದಾರೆ. ಅದರ ಬಗ್ಗೆ ತಾವು ಸ್ಪಷ್ಟೀಕರಣವನ್ನು ಕೇಳಿ. ಈ subjectನ್ನು close ಮಾಡೋಣ. ನಾವು ಮುಂದಿನ ವಿಷಯಕ್ಕೆ ಹೋಗೋಣ. ಇಲ್ಲಿ ಮಾನ್ಯ ಮುಖ್ಯಮಂತ್ರಿಗಳ ಮೇಲೆ ಆಪಾದನೆಯನ್ನು ಮಾಡುವುದು ನಿಮ್ಮ ನಿಲುವಳಿ ಸೂಚನೆಯಲ್ಲಿ specific ಆಗಿ ಏನಾದರೂ mention ಮಾಡಿದ್ದರೆ ಆ ಬಗ್ಗೆ ತಾವು ಪ್ರಸ್ತಾಪ ಮಾಡಿ. ಅದನ್ನು ಬಿಟ್ಟು ನೇರವಾಗಿ ಮುಖ್ಯಮಂತ್ರಿಗಳು No.1 ಎಂದು ಈ ರೀತಿಯಾಗಿ ಮಾಡುವುದು ಸರಿಯಲ್ಲ.

**ಶ್ರೀ ಹೆಚ್.ಸಿ. ಬಾಲಕೃಷ್ಣ:** ಮುಖ್ಯಮಂತ್ರಿಗಳೆ suo motu ಮಾಡಬಹುದು ಎಂದು ಆದೇಶವನ್ನು ಕೊಟ್ಟಿದ್ದಾರಲ್ಲಾ?

**ಅಧ್ಯಕ್ಷರು:** ಅದರ ಬಗ್ಗೆ ನೀವು interpretation ಮಾಡಿ.

**ಶ್ರೀ ಹೆಚ್.ಸಿ. ಬಾಲಕೃಷ್ಣ:** ಆ ಬಗ್ಗೆ ತನಿಖೆಯನ್ನು ಮಾಡುವ ಬಗ್ಗೆ ಆದೇಶವನ್ನು ಕೊಟ್ಟಿದ್ದಾರಲ್ಲ? ಅವರು ಇಲ್ಲಿ ಚರ್ಚೆ ಮಾಡದೇ ಇದ್ದರೆ ಆ ವಿಷಯವೇ ಬರುತ್ತಿರಲಿಲ್ಲ.

**ಅಧ್ಯಕ್ಷರು:** ಬಿಡಿ ಅದನ್ನು interpretation ಮಾಡಿ. ನೋಡಿ ಈ ನಿಲುವಳಿ ಸೂಚನೆಯು ಬಂದಾಗ ಅದರ ಬಗ್ಗೆ detail ಆಗಿ ಚರ್ಚೆ ಮಾಡುವಿರಂತೆ. ಎಲ್ಲಿಂದ ಎಲ್ಲಿಗೋ ಹೋಗುವುದು ಬೇಡ.

**ಶ್ರೀ ಹೆಚ್.ಡಿ. ರೇವಣ್ಣ:** ಮಾನ್ಯ ಸಭಾಧ್ಯಕ್ಷರೆ, ನಾನು ಎರಡು clarificationನ್ನು ಇಂಧನ ಮಂತ್ರಿಗಳಿಂದ ತಮ್ಮ ಮುಖೇನ ಬಯಸುತ್ತೇನೆ. ಇವತ್ತು ಬೆಳಿಗ್ಗೆ ನಿಲುವಳಿ ಸೂಚನೆಯನ್ನು 9.30 ಗಂಟೆಗೆ ಕೊಟ್ಟಿದ್ದೇನೆ. ಕಲ್ಲಿದ್ದಲಿನಲ್ಲಿ ಭಾಟಿಯಾ ಕಂಪನಿ ಮತ್ತು MMTC ಕೊಟ್ಟಿರುವಂತಹದ್ದು ಇದೆ. ನಾನು ಅವರ ಗಮನಕ್ಕೆ ತರಬೇಕಲ್ಲವೇ? ಇದನ್ನು ಅವರು ಹೇಳಿದ್ದಾರಲ್ಲ?

**ಶ್ರೀ ಕೆ.ಎಸ್. ಈಶ್ವರಪ್ಪ:** ಈ ಬಗ್ಗೆ ಮಾನ್ಯ ಸಭಾಧ್ಯಕ್ಷರು ಸ್ಪಷ್ಟವಾಗಿ ಹೇಳಿದ್ದಾರೆ.

**ಶ್ರೀ ಹೆಚ್.ಡಿ. ರೇವಣ್ಣ:** ನಿಲುವಳಿ ಸೂಚನೆ ಇದ್ದ ಮೇಲೆ ಅವರು ಹೇಗೆ ಮಾತನಾಡಿದರು?

**ಶ್ರೀ ಕೆ.ಎಸ್. ಈಶ್ವರಪ್ಪ:** ಮಾನ್ಯ ಸಭಾಧ್ಯಕ್ಷರಿಗೆ ಕನ್‌ವಿನ್ಸ್ ಆದ ಮೇಲೆ ನಿಲುವಳಿ ಸೂಚನೆಯನ್ನು ಕೊಡುವುದು ಬಿಡುವುದು ತೀರ್ಮಾನವನ್ನು ತೆಗೆದುಕೊಳ್ಳುತ್ತೇನೆಂದು ಅವರು ಹೇಳುತ್ತಿದ್ದಾರೆ. ದಯವಿಟ್ಟು ಈ ಸಂದರ್ಭದಲ್ಲಿ ಆ ಬಗ್ಗೆ ಮಾತನಾಡುವುದು ಬೇಡ.

**ಶ್ರೀ ಹೆಚ್.ಡಿ. ರೇವಣ್ಣ:** ಈಗ ನಾನು ಇಂಧನ ಮಂತ್ರಿಗಳಲ್ಲಿ ಮನವಿಯನ್ನು ಮಾಡುವುದು ಇಷ್ಟೆ. ನಾನು ಬೆಳಿಗ್ಗೆ ನಿಲುವಳಿ ಸೂಚನೆಯನ್ನು ಕೊಟ್ಟ ಮೇಲೆ ಮುಖ್ಯಮಂತ್ರಿಗಳು ಹೆದರಿ, ಅವರಿಗೆ ಏನಾಗುತ್ತದೆ ಎಂದರೆ ಎಲ್ಲಿ ನನ್ನ ಮೇಲೆ enquiry ಎಲ್ಲಾ ಆಗುತ್ತದೆ ಎಂದು ತಿಳಿದಿದ್ದಾರೆ. ಅಂತ ಹೇಳುವಂತಹ ಪ್ರಮೇಯ ಏನಿತ್ತು? ನಿಲುವಳಿ ಸೂಚನೆಯ ಮೇಲೆ ಬೆಳಕನ್ನು ಚೆಲ್ಲಬಹುದಾಗಿತ್ತಲ್ಲ?

**ಶ್ರೀ ಕೆ.ಎಸ್. ಈಶ್ವರಪ್ಪ:** ಹೆದರಿ ಎಂದರೆ 2002ನೇ ಇಸವಿಯಿಂದಲೂ ಎಂದರಲ್ಲಾ ಅದಕ್ಕೆ ಹೇಳಿರುವುದು. ನೀವು ಹೆದರುತ್ತಿದ್ದೀರಾ, ಅವರು ಹೆದರುತ್ತಿದ್ದಾರಾ? ದಯವಿಟ್ಟು ಆ ಬಗ್ಗೆ ಮಾತನಾಡುವುದು ಬೇಡ.

**ಶ್ರೀ ಹೆಚ್.ಡಿ. ರೇವಣ್ಣ:** ಕೆಂಗಲ್ ಹನುಮಂತಯ್ಯನವರ ಕಾಲದಿಂದಲೂ ಮಾಡಿ. ನಾನು ಏನೂ ಹಿಡಿದುಕೊಂಡಿಲ್ಲ. ನನ್ನ ಕಾಲದಿಂದಲೂ ಅಲ್ಲಾ, ಕೆಂಗಲ್ ಹನುಮಂತಯ್ಯನವರ ಕಾಲದಿಂದಲೂ ಮಾಡಿ.

**ಶ್ರೀ ಕೆ.ಎಸ್. ಈಶ್ವರಪ್ಪ:** ಮಾನ್ಯ ಸಭಾಧ್ಯಕ್ಷರು ಅವಕಾಶವನ್ನು ಕೊಡುತ್ತೇನೆಂದು ಹೇಳುತ್ತಿದ್ದಾರೆ. ಹೆದರಿ ಓಡಿಹೋಗುವಂತಹ ಅವಶ್ಯಕತೆ ಏನೂ ಇಲ್ಲ. 2002ರಿಂದಲೂ ಮಾಡುತ್ತೇವೆಂದರೆ, ನೀವು ಹೆದರಿದ್ದರೇನೋ ಎಂದು ನನಗೆ ಅನುಮಾನ ಬರುತ್ತಿದೆ.

**ಶ್ರೀ ಹೆಚ್.ಡಿ. ರೇವಣ್ಣ:** ನಾನು ಹೆದರಿಲ್ಲ. ಇವತ್ತು ಹೆದರುವುದಿಲ್ಲ. ಮುಂದೆಯೂ ಕೂಡ ಹೆದರುವುದಿಲ್ಲ.

**ಶ್ರೀ ಕೆ.ಎಸ್. ಈಶ್ವರಪ್ಪ:** ಆ ಹೆದರುವಂತಹ ಕುಲ ನಮ್ಮ ಮುಖ್ಯಮಂತ್ರಿಯದೂ ಅಲ್ಲ. ಅದಕ್ಕೆ ಬೇಡ. ಅವರು ಬಂದಾಗ ಮಾತನಾಡಿ.

**ಶ್ರೀ ಹೆಚ್.ಡಿ. ರೇವಣ್ಣ:** ಲೋಕಾಯುಕ್ತದವರ ಮೇಲೆ ನಿಮಗೆ ನಂಬಿಕೆ ಇದೆಯೇ? Retired Judge ಕೈಯಲ್ಲಿ enquiry ಮಾಡಿಸುತ್ತೇನೆಂದು ಹೇಳುತ್ತೀರಿ.

**ಶ್ರೀ ಕೆ.ಎಸ್. ಈಶ್ವರಪ್ಪ:** ಎಲ್ಲಿಂದ ಎಲ್ಲಿಗೋ ಹೋದರೆ ನಾನು ಏನು ಹೇಳಲಿ? ಇದರ ಬಗ್ಗೆ ಹೇಗೆ ಉತ್ತರ ಕೊಡುವುದು. ಇದು ಒಳ್ಳೆಯದು ಅಲ್ಲ.

**ಶ್ರೀ ಹೆಚ್.ಡಿ. ರೇವಣ್ಣ:** ಮಾನ್ಯ ಸಭಾಧ್ಯಕ್ಷರು ತಾವು ನಿಲುವಳಿ ಸೂಚನೆಗೆ ಅವಕಾಶವನ್ನು ಕೊಡುತ್ತೀರೆಂದ ಮೇಲೆ ಬೆಳಕನ್ನು ಚೆಲ್ಲುವುದಕ್ಕೆ ಅವಕಾಶವಿದೆ ಎಂದು ನಾನು ಭಾವಿಸಿ ಬೇರೆ ವಿಷಯ ಮಾತನಾಡುತ್ತೇನೆ. ಇವರು ಒಂದೊಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಏಕೆಂದರೆ ಒಂದರಿಂದ ಸುಮಾರು 37 ಭವಿಷ್ಯದ ಹೆಜ್ಜೆಗಳು ಎಂದು ಕೊಟ್ಟಿದ್ದಾರೆ. ಅದಕ್ಕೇನಾದರೂ ಹಣಕಾಸು

ಇಲಾಖೆಯವರು ಅನುಮತಿಯನ್ನು ಕೊಟ್ಟಿದ್ದಾರೋ? ಅಥವಾ ಸುಮ್ಮನೆ ಈ ಸರ್ಕಾರದ ಕಳೆದ ಒಂದುಕಾಲು ವರ್ಷದಲ್ಲಿ ನಡೆದಿರುವುದನ್ನು ಮುಚ್ಚಿಕೊಳ್ಳಬೇಕೆಂದು ಹೇಳಿ ಏಕೆಂದರೆ ಹಗರಣಗಳಿವೆ, ಇನ್ನೂ ಚರ್ಚೆಗೆ ಬರುತ್ತವೆ, ಸಿದ್ದರಾಮಯ್ಯನವರು ಹಿಡಿದುಕೊಳ್ಳುತ್ತಾರೆ, ಜಯಚಂದ್ರರವರು ಹಿಡಿದುಕೊಳ್ಳುತ್ತಾರೆ, ರೇವಣ್ಣ, ಬಾಲಕೃಷ್ಣ ಹಿಡಿದುಕೊಳ್ಳುತ್ತಾರೆಂಬ ಅಂಜಿಕೆಗೆ ಇದನ್ನು ಏನಾದರೂ ಬಿಟ್ಟುಬಿಟ್ಟಿದ್ದಾರೋ ಅಥವಾ ಇದಕ್ಕೇನಾದರೂ ಹಣಕಾಸು ಇಟ್ಟಿದ್ದಾರೋ ದಯವಿಟ್ಟು ಹೇಳಿ, ಹಣಕಾಸು ಇದ್ದರೆ ದಯಮಾಡಿ ಈ 37 ಭವಿಷ್ಯದ ಹೆಜ್ಜೆಗಳಿಗೆ ನಾವು ಹಣ ಇಟ್ಟಿದ್ದೇವೆಂದು ಹೇಳಿದರೆ ನಾವು ವಿರೋಧ ಪಕ್ಷದವರೆಲ್ಲಾ ಸರ್ಕಾರಕ್ಕೆ ತಲೆಬಾಗುತ್ತೇವೆ. ಈಗ ಒಂದು ಉದಾಹರಣೆಗೆ ಹೇಳುವುದಾದರೆ, ಇದು ಒಂದು ಸಪ್ಲಿಮೆಂಟರಿ ಬಜೆಟ್ ಏನೋ ಗೊತ್ತಿಲ್ಲ. ಏಕೆಂದರೆ ಒಂದು ಕಡೆ 750 ಕೋಟಿ ರೂ.ಗಳ ಸಾಲ ತೆಗೆದುಕೊಳ್ಳಬೇಕೆಂಬ ಅರ್ಜಿ ಹಾಕಿದ್ದೇವೆಂದು ಮೊನ್ನೆ ಹಣಕಾಸು ಕಾರ್ಯದರ್ಶಿಯವರು ಒಂದು statement ಮಾಡಿದ್ದಾರೆ. ಇನ್ನೊಂದು ಕಡೆ ಬೆಂಗಳೂರು ನಗರಕ್ಕೆ 22,000 ಕೋಟಿ ರೂ.ಗಳು ಇವೆ ಎಮದು ಹೇಳುತ್ತಾರೆ. ಅದರಲ್ಲಿ 10,000–00 ಕೋಟಿ ರೂ.ಗಳನ್ನು ತೆಗೆದು ಹಾಕಿ ಗ್ರಾಮೀಣ ಪ್ರದೇಶಕ್ಕೆ extra finance ಅನ್ನು ಈ 37 itemsಗೆ ಏನಾದರೂ ಇಟ್ಟಿದ್ದೇವೆಂದು ಹೇಳಲಿ. ಏಕೆಂದರೆ ಸಿದ್ದರಾಮಯ್ಯನವರು 5 ವರ್ಷ ಹಣಕಾಸು ಸಚಿವರಾಗಿದ್ದರು. ಅವರು ಈಗ ಸೊನ್ನೆಗೆ ತಿರುಗಿಸುತ್ತಿದ್ದಾರೆ. ಈಗ ಯಾವುದಾದರೂ ಒಂದಕ್ಕಾದರೂ ಗೊತ್ತು ಗುರಿ ಇದೆಯೇ ಸ್ವಾಮಿ? ಅಧ್ಯಕ್ಷರೆ, ಈ 37 items ನಲ್ಲಿ ಯಾವುದಕ್ಕಾದರೂ ಒಂದಕ್ಕೆ ಸ್ಪಷ್ಟವಾದ ಗೊತ್ತುಗುರಿ ಇದೆಯೇ? ಮೂರು ದಿನ 224 ಕ್ಷೇತ್ರದ ವಿಧಾನ ಸಭಾ ಸದಸ್ಯರು ರಾತ್ರಿ 8–9 ಗಂಟೆಯವರೆಗೆ ಚರ್ಚೆ ನಡೆಸಿದ್ದಾರೆ. ಅಧಿಕಾರಿಗಳು ಬರೆದುಕೊಟ್ಟ ಸ್ಟೇಟ್‌ಮೆಂಟ್ ಅನ್ನು ಮುಖ್ಯಮಂತ್ರಿಗಳು ಓದಿದರು. ಹಣಕಾಸು, ಯೋಜನಾ ಇಲಾಖೆಯದು ಇಲ್ಲ. ಅಧಿಕಾರಿಗಳು ಬರೆದುಕೊಟ್ಟ ಸ್ಟೇಟ್‌ಮೆಂಟ್ ಅನ್ನು ಓದಿ ಬಿಟ್ಟು ನಾನು ದೆಹಲಿಗೆ ಹೋಗಬೇಕು ಎಂದರು. ರಾಜ್ಯದ ಐದು ಕೋಟಿ ರೈತರು ಮುಖ್ಯವೋ, ದೆಹಲಿಯಲ್ಲಿ ಯಾವುದೋ ಒಂದು ಪ್ರಶಸ್ತಿ ಕೊಡುತ್ತಾರಲ್ಲಾ, ಆ ಪ್ರಶಸ್ತಿ

ಮುಖ್ಯವೋ ಅದರ ಬಗ್ಗೆ ಹೇಳಲಿ. ಒಂದು ಕಡೆ ರೈತರ ಬಗ್ಗೆ ಪ್ರಮಾಣ ವಚನ ಸ್ವೀಕಾರ ಮಾಡುತ್ತಾರೆ. ಇನ್ನೊಂದು ಕಡೆ ರೈತರ ಹೆಸರಿನಲ್ಲಿ ನಿಮ್ಮ ಗ್ರಾಮೀಣಾಭಿವೃದ್ಧಿ, ಕೃಷಿ ಅಭಿವೃದ್ಧಿ ಎಲ್ಲಾ ಮಾಡುತ್ತೇವೆಂದು ಹೇಳಿ, ವಿರೋಧ ಪಕ್ಷದವರು ಕೈ, ಕಾಲು ಕಟ್ಟಿ ಒಪ್ಪಿಸಿದ್ದೇನೆ ಎಂದು ಹೇಳುತ್ತಾರೆ. ಎಲ್ಲಾ ಮಾಡಿ, ಪುಸ್ತಕ ಪ್ರಿಂಟ್ ಮಾಡಿಸಿ ನೀವು ಕಳುಹಿಸಿದಿರಲ್ಲಾ, ಏನಾಯಿತು ಸ್ವಾಮಿ? ನಿಮ್ಮ ಶ್ರೀನಿವಾಸಮೂರ್ತಿಯವರ ಪುಸ್ತಕ ಏನಾಯಿತು? ಜುಲೈ 14ರಂದು ನಿಮ್ಮ ಶ್ರೀನಿವಾಸಮೂರ್ತಿಯವರು, ಹಣಕಾಸಿನ ಕಾರ್ಯದರ್ಶಿಯವರು ಪುಸ್ತಕವನ್ನು ಪ್ರಿಂಟ್ ಮಾಡಿಸಿ ತಂದರು. ಅದು ಏನಾಯಿತು ಎಂದು ಹಣಕಾಸು ಕಾರ್ಯದರ್ಶಿಯವರನ್ನೇ ನಾವು ಹೇಳುತ್ತೇವೆ. ಇವೆರಡಕ್ಕೂ ಹಣಕಾಸು ಕಾರ್ಯದರ್ಶಿಯವರು, ಹಣಕಾಸು ಸಚಿವರು ಏನು ಉತ್ತರ ಹೇಳುತ್ತಾರೆ? ಅಥವಾ ಸುಳ್ಳು ಹೇಳುವುದಾದರೆ ಸುಳ್ಳು ಹೇಳಿದ್ದೇವೆಂದು ಹೇಳಲಿ. ಇನ್ನೊಂದು ನಮ್ಮ agriculture policy ಅದನ್ನು ತೆಗೆದುಕೊಂಡು ಹೋಗಿ ಪುಸ್ತಕದಲ್ಲಿ ಹಾಕಿದ್ದಾರೆ. ಈ ಅಗ್ರಿಕಲ್ಚರ್ ಪಾಲಿಸಿ ಬಗ್ಗೆ ಏನೂ ಇಲ್ಲವೇ ಇಲ್ಲ. ಇದಕ್ಕೇನಾದರೂ ಇಷ್ಟು ಹಣವನ್ನು ಇಡುತ್ತೇವೆಂದು ಹೇಳಿದ್ದೀರಾ? ಕೃಷಿ ಇಲಾಖೆಯಲ್ಲಿ ಇವತ್ತು ಮೂರು ಸಾವಿರ ಹುದ್ದೆಗಳು ಖಾಲಿ ಇವೆ, ತೋಟಗಾರಿಕೆ ಇಲಾಖೆಯಲ್ಲಿ ಒಂದೂವರೆ ಸಾವಿರ ಹುದ್ದೆಗಳು ಖಾಲಿ ಇವೆ. ಅದಕ್ಕೆನಾದರೂ ಆರು ತಿಂಗಳಲ್ಲಿ ನೇಮಕಾತಿ ಮಾಡಿ ನಮ್ಮ ರೈತಾಪಿ ಜನಕ್ಕೆ ಸರಿಯಾದ ರೀತಿಯಲ್ಲಿ ತಿಳುವಳಿಕೆ ಕೊಡುತ್ತೇವೆಂದು ಏನಾದರೂ ಕಾರ್ಯಕ್ರಮ ಇದರಲ್ಲಿ ಹೇಳಿದ್ದಾರೆಯೇ? ಯಾವುದೂ ಇಲ್ಲ. ತರಬೇತಿ ಪಡೆದು ಈ ಹುದ್ದೆಗೆ ಬರುವ ವೇಳೆಗೆ ಇನ್ನೂ ಮೂರು ವರ್ಷಕ್ಕೆ ಈ ಸರ್ಕಾರ ಇರುತ್ತದೋ ಇಲ್ಲವೋ ಗೊತ್ತಿಲ್ಲವೆಂದು ಅವರೇ ಹೇಳಿದರು. ಇವತ್ತು ರೈತರ ಹೆಸರಿನಲ್ಲಿ ಮುಖ್ಯಮಂತ್ರಿಗಳು ಪ್ರಮಾಣ ವಚನವನ್ನು ತೆಗೆದುಕೊಂಡು, ಮೂರು ದಿವಸ ಸದನ ಕರೆದು ರೈತರ ಹೆಸರಿನಲ್ಲಿ ಎಲ್ಲಾ ಸದಸ್ಯರು ಸಲಹೆಗಳನ್ನು ಕೊಟ್ಟು ಪಾಪ ಅವರು ನಮ್ಮ ಆಡಳಿತ ಪಕ್ಷದವರಿರಬಹುದು, ವಿರೋಧ ಪಕ್ಷದವರಿರಬಹುದು, ಎಲ್ಲರೂ ಏನೋ ನಮ್ಮ ಮುಖ್ಯಮಂತ್ರಿಗಳು ನಮ್ಮ ರೈತಾಪಿ ಜನಕ್ಕೆ ಒಂದು ಕೊಡುಗೆಯನ್ನು ಕೊಡುತ್ತಾರೆ ಅಂದರೆ ಅವರು 2002 ರಿಂದ ಕೆ.ಇ.ಬಿ. ಬಗ್ಗೆ

ತನಿಖೆ ಮಾಡಿಸುತ್ತೇನೆ ಎಂದು ಹೇಳುತ್ತಾರೆ ಮಾಡಿಕೊಳ್ಳಲಿ, ನಾನೇನೂ ಬೇಡವೆನ್ನುವುದಿಲ್ಲ. ಕೆಂಗಲ್ ಹನುಮಂತಯ್ಯನವರ ಕಾಲದಿಂದಲೇ ಮಾಡಲಿ. ಆಮೇಲೆ ಈ energy loss 30-20%. ಏಕೆಂದರೆ 5,000 ಕೋಟಿ ರೂ.ಗಳನ್ನು ಸಾಲ ಮಾಡಿದರಲ್ಲ ಈ ಐದು ಕಂಪನಿಯದು; ಅದು ಒಂದು ಮಾತು ಹೇಳಿದರೆ ಸಾಕಾಗಿತ್ತು. ಇಲ್ಲವೆಂದು ಹೇಳಲಿ. 5,900 ಕೋಟಿ ರೂ.ಗಳಷ್ಟು ಈ ಐದು ಕಂಪನಿಯಿಂದ ನಷ್ಟವಾಗಿಲ್ಲವೆಂದು ಅವರು ಹೇಳಿಬಿಟ್ಟರೆ ಅವರೇನು ಹೇಳುತ್ತಾರೆ ಅದಕ್ಕೆ ನಾನು ಭಾಗಿಯಾಗುತ್ತೇನೆ. ಏಕೆಂದರೆ ಇವತ್ತು ಇದು ಭವಿಷ್ಯದ ಹೆಜ್ಜೆಗಳಲ್ಲ. ಇಡೀ ರಾಜ್ಯದ ಒಂದೂಕಾಲು ವರ್ಷದ ಬಿಜೆಪಿಯ ಆಡಳಿತದ ಬೋಗಸ್ ಹೆಜ್ಜೆಗಳು. ಈ ಒಂದೂಕಾಲು ವರ್ಷದಲ್ಲಿ ಇವರು ಮಾಡಿರುವಂಥ ಹಗರಣಗಳನ್ನು ಮುಚ್ಚಿಹಾಕಲಿಕ್ಕೆ ಇದು. ಮೂರು ದಿವಸ ಏನೋ ವಿರೋಧ ಪಕ್ಷದವರು ಆರೋಪ ಮಾಡುತ್ತಾರೆಂದು ಚರ್ಚೆಯಾಗಿದೆ. ಇವರಿಗೆ ನಿಜವಾದಂಥ ಕಾಳಜಿ ಇದ್ದರೆ ಸದನವನ್ನು ಇನ್ನೂ ಮೂರು ದಿವಸ ಹೆಚ್ಚಿಗೆ ಮಾಡಲಿ, ಪಾಪ ನಮ್ಮ ಇಂಧನ ಸಚಿವರಾದ ಈಶ್ವರಪ್ಪನವರಿಗೆ ಕೆಲಸ ಮಾಡಬೇಕೆಂಬ ಮನಸ್ಸಿದೆ, ಕೆಲಸ ಮಾಡಲಿಕ್ಕೆ ಬಿಡುತ್ತಿಲ್ಲ. ಕೈ ಆಡಿಸುತ್ತಿದ್ದಾರೆ. ಇಂಧನ ಇಲಾಖೆಯ ಸಚಿವರಿಗೆ ಗೊತ್ತಿದೆ.

**(ಗೊಂದಲ)**

**ಅಧ್ಯಕ್ಷರು:** ನೀವೇ ಒಬ್ಬೊಬ್ಬರನ್ನು ಎಬ್ಬಿಸಿ, ಆಗಲೇ ಕಟ್ಟಾರವರ ಕಡೆ ಕೈಮಾಡಿದಿರಿ. ಅವರು ಏಳಲಿಲ್ಲ. ಈಗ ಈಶ್ವರಪ್ಪನವರ ಕಡೆ ಕೈ ಮಾಡುತ್ತಿದ್ದೀರಿ.

**ಶ್ರೀ ಕೆ.ಎಸ್. ಈಶ್ವರಪ್ಪ:** 20–20 ತಿಂಗಳು ಎಂದು ನಾವು ಲೆಕ್ಕ ಹಾಕಿಕೊಂಡಿದ್ದೆವು. 20–0 ಆಯಿತು. ಆ 20 ತಿಂಗಳಿನಲ್ಲಿ ಜನತಾ ದಳದ ಒಬ್ಬ ಶಾಸಕರಿಗೂ ಕೂಡ ಅಧಿಕಾರ ಮಾಡಲು ಅವಕಾಶ ಕೊಡದೇನೇ ಅಣ್ಣ ತಮ್ಮಂದಿರು ಇಬ್ಬರೇ ನಡೆಸಿ ಅದನ್ನೇ ಇವತ್ತು ಮುಖ್ಯಮಂತ್ರಿಗಳು ಮಾಡುತ್ತಿದ್ದಾರೆಂದು ಅಭಿಪ್ರಾಯವನ್ನು ತರುತ್ತಿದ್ದೀರಲ್ಲಾ ದಯವಿಟ್ಟು ನೀವು ಈ ರಾಜ್ಯದ ಜನತೆಯ ಕ್ಷಮೆ ಕೇಳಲಿಕ್ಕೆ ನೀವು ಯೋಗ್ಯರು. ನೀವು ಕೇಳುತ್ತೀರೋ, ಬಿಡುತ್ತೀರೋ ನಿಮಗೆ ಬಿಡುತ್ತೇನೆ.

**ಶ್ರೀ ಹೆಚ್.ಡಿ. ರೇವಣ್ಣ:** ಮಾನ್ಯ ಅಧ್ಯಕ್ಷರೆ, ಆ 20–20 ಇದೆಯಲ್ಲಾ, ಆ 20–20 ಇಲ್ಲಿದೆ ನೋಡಿ.

**ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು:** ಪಾರ್ಲಿಮೆಂಟ್ ಚುನಾವಣೆಯಲ್ಲಿ ಜನ ಏನು ಎಂದು ನಿಮಗೆ ತಿಳಿಸಿದ್ದಾರೆ. ಅಸೆಂಬ್ಲಿ ಬೈ ಎಲೆಕ್ಷನ್‌ನಲ್ಲಿ ಏನು ತೀರ್ಮಾನವೆಂದು ತಿಳಿಸಿದ್ದಾರೆ. ಎಲ್ಲಾ ಕಡೆ ಯಾರ್ಯಾರ ಯೋಗ್ಯತೆ ಏನು ಎಂದು ಎಲ್ಲರೂ ತಿಳಿಸಿದ್ದಾರೆ. ಈ ರಾಜ್ಯದ ಜನತೆ ತೀರ್ಮಾನಿಸಿದ್ದಾರೆ.

(ಗೊಂದಲ)

**ಶ್ರೀ ಹೆಚ್.ಸಿ. ಬಾಲಕೃಷ್ಣ:** ಅಧ್ಯಕ್ಷರೆ, ಈಗ ಚನ್ನಪಟ್ಟಣದಲ್ಲಿ 5.30 ಗಂಟೆ ಆದ ಮೇಲೆ ಏನು ಮಾಡುತ್ತಾರೆ ಕೇಳಿ ಸ್ವಾಮಿ? ಇವರ ತರಹ ಮಾಡಿದರೆ 50–60 ಸೀಟುಗಳು ಬರುತ್ತವೆ.

(ಗೊಂದಲ)

**ಶ್ರೀ ಕಟ್ಟಾಸುಬ್ರಹ್ಮಣ್ಯ ನಾಯ್ಡು:** ನಿಮ್ಮ ತರಹ ದುಂಡಾವರ್ತಿ ಮಾಡುವುದಿಲ್ಲ. ನೀವು ಅಲ್ಲೇ ಇದ್ದಿರಿ. ನಿಮ್ಮ ಕಾರ್ಯಕರ್ತರಿಗೆ ಬೇರೆಯವರ ಮೇಲೆ ಹಲ್ಲೆ ಮಾಡಿ ಎಂದು ಹೇಳಿದಿರಾ? ಇದೇನೇ ನಿಮ್ಮ ಕಾರ್ಯಕರ್ತರಿಗೆ ಕಲಿಸುವುದು? ಇದೇನಾ ನಿಮ್ಮ ರಾಜಕೀಯ? ನಿಮ್ಮ ನಡವಳಿಕೆ ಇದೇನಾ? ನಡೆಯಬೇಕಾಗಿರುವ ವಿಚಾರ ಇದೆ ಏನು? ಇವತ್ತು ಉಪ ಚುನಾವಣೆಗಳಲ್ಲಿ ಯಾರ್ಯಾರಿಗೆ ಏನೇನು ಪಾಠ ಕಲಿಸಬೇಕು, ಎಲ್ಲಾ ಕಲಿಸಿದ್ದಾರೆ. ಇದರಿಂದ 15 ತಿಂಗಳಿನಲ್ಲಿ ಏನೂ ಮಾಡಲಿಲ್ಲ. ಎಲ್ಲಾ ನಾಶವಾಗಿ ಹೋಗಿದೆ. ರಾಜ್ಯ ಛಿದ್ರ ಛಿದ್ರವಾಗಿ ಹೋಗಿದೆ. ಏನು ವರದಿ ಮಾಡುತ್ತಿರುವುದು ನೋಡಿದರೆ, ಯಾರೋ ಹೊತ್ತುಕೊಂಡು ಆ ಕಡೆ ಹಾಸನಕ್ಕೆ ಹೊರಟು ಹೋಗಿಬಿಟ್ಟಿದ್ದಾರೆಂದು ಅನ್ನಿಸುತ್ತಿದೆ. ಸ್ವಾಮಿ, ಹಾಸನಕ್ಕೂ ಹೋಗಲಿಲ್ಲ. ಶಿಕಾರಿಪುರಕ್ಕೂ ಹೋಗಲಿಲ್ಲ. ರಾಜ್ಯದ ಜನತೆ ಸುಖವಾಗಿದ್ದಾರೆ. ಚೆನ್ನಾಗಿ ಆಡಳಿತ ನಡೆಯುತ್ತಿದೆ. ಹಾಗಾಗಿ ರೇವಣ್ಣನವರು ಏನೂ ಆತಂಕಪಡಬೇಕಾದ ಅವಶ್ಯಕತೆ ಇಲ್ಲ.

**ಅಧ್ಯಕ್ಷರು:** ರೇವಣ್ಣನವರು ಒಬ್ಬೊಬ್ಬರನ್ನೇ ಎಬ್ಬಿಸುತ್ತಾರೆ.

**ಶ್ರೀ ಹೆಚ್.ಸಿ. ಬಾಲಕೃಷ್ಣ:** ಈಗ 20 ತಿಂಗಳೂ ಆಪರೇಷನ್ ಕಮಲ ಮಾಡಿದರು. ಸೋಮಣ್ಣ, ಯೋಗೀಶ್‌ರವರು ಆ ಕಥೆ ಮಾಡಲಿಕ್ಕೆ ದಯಮಾಡಿ ಹೋಗಬೇಡಿ, ನೀವು ಅದನ್ನು ನಿಲ್ಲಿಸಿ, ಜನ ಚೆನ್ನಾಗಿ ತೀರ್ಮಾನ ಮಾಡಿದ್ದಾರೆ. ಆಪರೇಷನ್ ಕಮಲಕ್ಕೆ ಏನು ಬುದ್ಧಿ ಕಲಿಸಬೇಕೆಂದು ಜನ ತೀರ್ಮಾನ ಮಾಡಿದ್ದಾರೆ.

**ಒಬ್ಬ ಮಾನ್ಯ ಸದಸ್ಯರು:** ಸೋಮಣ್ಣನವರ ಕ್ಷೇತ್ರದಲ್ಲಿ ಒಳ ಒಪ್ಪಂದ ಆಗಿದೆ.

**ಶ್ರೀ ಹೆಚ್.ಡಿ. ರೇವಣ್ಣ:** ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಎರಡು ವಿಷಯಗಳನ್ನು ಬಹಳ ಗಂಭೀರವಾಗಿ ಚರ್ಚೆ ಮಾಡಿದ್ದಾರೆ, ಏಕೆಂದರೆ ಬೂಕನಕೆರೆಯದು ರಾಜ್ಯದಲ್ಲಿ quote ಮಾಡಿದರು. ಸರ್ ಕ್ಲಾರಿಫಿಕೇಷನ್ ಕೇಳಬೇಕಲ್ಲವೇ? ಅಲ್ಲಿ ಮೂವತ್ತನಾಲ್ಕು ಕೋಟಿ ರೂ.ಗಳಷ್ಟು ಹಣವನ್ನು ಕೊಟ್ಟಿದ್ದಾರೆ....

**ಶ್ರೀ ಕೆ.ಎಸ್. ಈಶ್ವರಪ್ಪ:** ಇವರಿಗೆ ಇನ್ನೂ ಮೂರು ದಿವಸಗಳನ್ನು ಕೊಟ್ಟರೂ ಮತ್ತೆ ಕ್ಲಾರಿಫಿಕೇಷನ್ ಕೇಳುತ್ತಾರೆ. ಇಂಥ ವ್ಯವಸ್ಥೆ ಆದರೆ ಹೇಗೆ? ಬಹಳ ಜನ ಹೊಸ ಶಾಸಕರು ಬಂದಿದ್ದಾರೆ, ಅವರು ಮಾತನಾಡಲಿ, ಕ್ಲಾರಿಫಿಕೇಷನ್ ಅನ್ನು ಹೀಗಾ ಕೇಳುವುದು? ಗಂಟೆ ಗಟ್ಟಲೆ ಮಾತನಾಡಿದರೆ ಹೇಗೆ?

**(ಗೊಂದಲ)**

**ಶ್ರೀ ಹೆಚ್.ಡಿ. ರೇವಣ್ಣ:** ಬೂಕನಕೆರೆಗೆ ನೀವು ದುಡ್ಡೇ ಕೊಟ್ಟಿಲ್ಲವೇ? ಅದರ ಬಗ್ಗೆ ಕ್ಲಾರಿಫಿಕೇಷನ್ ಕೇಳುತ್ತಿದ್ದೇನೆ.

**ಶ್ರೀ ಕೆ.ಎಸ್. ಈಶ್ವರಪ್ಪ:** ನೀವು ಮೂರು ಮೂರು ದಿವಸ ಇಷ್ಟೊತ್ತು ಮಾತನಾಡುತ್ತಾ ಇದ್ದರೆ ಹೇಗೆ? ಸಿದ್ದರಾಮಯ್ಯನವರು ಎಷ್ಟು ಚೆನ್ನಾಗಿ ಪ್ರಸ್ತಾಪ ಮಾಡಿದರು.

**ಶ್ರೀ ಹೆಚ್.ಡಿ. ರೇವಣ್ಣ:** ಸಿದ್ದರಾಮಯ್ಯನವರು ಮಾತನಾಡಿದಾಗ ನೀವು ಹೊರಗಡೆ ಇದ್ದಿರಿ.

**ಶ್ರೀ ಹೆಚ್.ಸಿ. ಬಾಲಕೃಷ್ಣ:** ಈಗ ಸಮಗ್ರವಾಗಿ ಚರ್ಚೆ ಮಾಡಿ ಎಂದು ನೀವೇ ಅಧಿವೇಶನವನ್ನು ಕರೆದಿರುವುದು, ನಾವು ಅಧಿವೇಶನ ಕರೆದಿಲ್ಲ. ಇನ್ನು ಚರ್ಚೆ ಸಮಗ್ರವಾಗಿ ಆಗಿಲ್ಲ. ಸಮಗ್ರವಾಗಿ ಆಗಲಿ ಎಂದು ಚರ್ಚೆ ಮಾಡುತ್ತಿದ್ದೇವೆ. ನಾವು ಅಧಿವೇಶನವನ್ನು ಕರೆದೆವೆ? ನೀವೇ ಅಧಿವೇಶನ ಕರೆದದ್ದು, ಈ ರಾಜ್ಯದ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬಗ್ಗೆ ಸಮಗ್ರವಾಗಿ ಚರ್ಚೆಯಾಗಲಿ ಎಂದು. ಬೂಕನಕೆರೆಯಿಂದ ಹಿಡಿದು ಶಿಕಾರಿಪುರದವರೆಗೆ ಏನೇನು ಗ್ರಾಮೀಣಾಭಿವೃದ್ಧಿ ಆಗಿದೆ ಎಂಬ ವಿಚಾರಗಳನ್ನು ವಿಸ್ತಾರವಾಗಿ ಅವರು ಹೇಳಲಿ ಬಿಡಿ. ಸಿದ್ದರಾಮಯ್ಯನವರು ಬೇರೆ ಥಾಟಿಯಲ್ಲಿ ಹೇಳಿದರು. ಇವರು ಅವರ ಥಾಟಿಯಲ್ಲಿ ಸ್ವಲ್ಪ ಮಾತನಾಡಲಿಕ್ಕೆ ಅವಕಾಶ ಕೊಡಿ. ಆಗಲೇ ಮುಖ್ಯಮಂತ್ರಿಗಳು ಮಾತನಾಡುವಾಗ ಏನು ಹೇಳಿದಿರಿ, ಮಧ್ಯೆ ಮಾತನಾಡಬೇಡಿ ಎಂದಿರಿ. ಆಮೇಲೆ ನಿಮಗೆ ಅವಕಾಶ ಕೊಡುತ್ತೇನೆ ಎಂದು ಹೇಳಿಬಿಟ್ಟು ನೀವು ಈಗಲೂ ಮಾತನಾಡಲಿಕ್ಕೆ ಅವಕಾಶ ಕೊಡದಿದ್ದರೆ ಹೇಗೆ ಸ್ವಾಮಿ?

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:** ಈಗ ಬಹಳ ಜನ ಹೊಸ ಶಾಸಕರು ಇದ್ದಾರೆ. ತಾವೆಲ್ಲರೂ ಕೂಡ ಎರಡೂ ಮೂರು ದಿವಸ ತುಂಬಾ ವ್ಯವಸ್ಥಿತವಾಗಿ, ವಿವರವಾಗಿ ಮಾತನಾಡಿದಿರಿ. ತುಂಬಾ ಚೆನ್ನಾಗಿಯೂ ಮಾತನಾಡಿದ್ದೀರಿ ಎಂದು ಮುಖ್ಯಮಂತ್ರಿಗಳೇ ತುಂಬಾ ಸ್ಪಷ್ಟವಾಗಿ ಹೇಳಿದ್ದಾರೆ. ಈಗ ಕ್ಲಾರಿಫಿಕೇಷನ್ ದೃಷ್ಟಿಯಿಂದ ವಿರೋಧ ಪಕ್ಷದ ನಾಯಕರು ನಿಜಕ್ಕೂ ಚೆನ್ನಾಗಿ ಬೆಳಕು ಚೆಲ್ಲಿದ್ದಾರೆ. ರೇವಣ್ಣನವರೂ ಸಹ ಹಿರಿಯರು, ಅನೇಕ ವರ್ಷಗಳಿಂದ ಈ ಸದನದಲ್ಲಿ ಕೆಲಸ ಮಾಡಿಕೊಂಡು ಬಂದಿದ್ದಾರೆ. ತಮ್ಮ ಕ್ಲಾರಿಫಿಕೇಷನ್ ಏನು ಎಂದು ಕೇಳುವಂಥ ಅಭ್ಯಾಸವನ್ನು ನಮ್ಮ ಹೊಸ ಶಾಸಕರಿಗೂ ತೋರಿಸಿಕೊಟ್ಟರೆ ಅವರೂ ಕಲಿಯುತ್ತಾರೆ. ಅದು ಬಿಟ್ಟು ನೀವು ಮತ್ತೆ ಮೂರು ದಿವಸ ಭಾಷಣ ಮಾಡುತ್ತಾ ಇದ್ದರೆ ಅದು ಕ್ಲಾರಿಫಿಕೇಷನ್ ಆಗುತ್ತದೆಯೇ? ಬಾಲಕೃಷ್ಣರವರೆ, ಇದೇ ಸರಿ ಎಂದು ನೀವು ವಾದ ಮಾಡಿದರೆ ನಾವೇನೂ ಮಾಡಲಿಕ್ಕಾಗುವುದಿಲ್ಲ.

**ಶ್ರೀ ಹೆಚ್.ಸಿ. ಬಾಲಕೃಷ್ಣ:** ಮುಖ್ಯಮಂತ್ರಿಗಳು ಉತ್ತರ ಕೊಡುವ ಸಂದರ್ಭದಲ್ಲಿ ನೈಸ್ ಕಂಪನಿ ಬಗ್ಗೆ ಮಾತನಾಡಿದರು.

**ಶ್ರೀ ಕೆ.ಎಸ್. ಈಶ್ವರಪ್ಪ:** ಛೇ, ಅವರು ಹಾಗೆ ಮಾತನಾಡಿದರು ಎಂದು ನೀವು ಈಗ ಹೀಗೆ ಮಾತನಾಡುತ್ತೀರಾ?

**ಶ್ರೀ ಹೆಚ್.ಸಿ. ಬಾಲಕೃಷ್ಣ:** ಎಲ್ಲ ನೀವೇ ಮಾತನಾಡಿದರೆ ಹೇಗೆ ಸ್ವಾಮಿ?

**ಶ್ರೀ ಕೆ.ಎಸ್. ಈಶ್ವರಪ್ಪ:** ನಾನೇನೂ ಹೇಳುವುದಿಲ್ಲ. ನೀವೆಲ್ಲಾ ಹಿರಿಯರಿದ್ದೀರಿ. ನಾನು ರೇವಣ್ಣನವರಲ್ಲಿ ಪ್ರಾರ್ಥಿಸುವುದು ಇಷ್ಟೆ. ಕ್ಲಾರಿಫಿಕೇಷನ್ ಕೇಳುವಾಗ ಒಂದೊಂದು ವಿಷಯಕ್ಕೆ ಕ್ಲಾರಿಫಿಕೇಷನ್ ಎಂದು ಕೇಳಿದರೆ ಅದಕ್ಕೆ ಸಂಬಂಧಪಟ್ಟ ಮಂತ್ರಿಗಳು ಉತ್ತರ ಕೊಡುತ್ತಾರೆ. ದಯವಿಟ್ಟು ಮೂರು ದಿವಸಗಳವರೆಗೆ ಭಾಷಣ ಮಾಡಬೇಡಿ.

**ಶ್ರೀ ಹೆಚ್.ಡಿ. ರೇವಣ್ಣ:** ಆಯಿತು ಸರ್, ಅಧ್ಯಕ್ಷರೆ, ಬೂಕನಕೆರೆ ಏನೂ ದುಡ್ಡೇ ಕೊಟ್ಟಿಲ್ಲವೆಂದರು. ಮೂವತ್ತೊಂಬತ್ತು ಕೋಟಿ ರೂ.ಗಳ ಟೆಂಡರ್ ಆಗಿದೆಯೆಂದು ನಾನು ಮೊನ್ನೆ ಪತ್ರಿಕೆಯಲ್ಲಿ ನೋಡಿದೆ. ಅದನ್ನು ನಾನು ಅವರಿಗೆ ನೆನಪಿಸುತ್ತಿದ್ದೇನೆ. ಸದನಕ್ಕೆ ಸುಳ್ಳು ಹೇಳಬೇಡಿ. ಮೂವತ್ತೊಂಬತ್ತು ಕೋಟಿ ರೂಪಾಯಿಗಳಷ್ಟು ಟೆಂಡರ್ ಆಗಿದೆಯೇ ಇಲ್ಲವೇ ಎನ್ನುವುದನ್ನು ದಯಮಾಡಿ ಸದನಕ್ಕೆ ಒಂದು ಕ್ಲಾರಿಫಿಕೇಷನ್ ಕೊಡಿ. ಎರಡನೆಯದಾಗಿ, ಹಾಸನ 11ನೇ ಸ್ಥಾನದಲ್ಲಿದೆ ಹಾಗೂ ಶಿವಮೊಗ್ಗ 5ನೇ ಸ್ಥಾನದಲ್ಲಿದೆ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ನಮ್ಮದನ್ನು red ink ಹಾಕಿದಿರಿ. ಒಳ್ಳೆಯದು ಆಯಿತು. ನಾವು ಏನೂ ತಲೆಕೆಡಿಸಿಕೊಳ್ಳುವುದಿಲ್ಲ ಬಿಡಿ. ನಾನು ಅದಕ್ಕೆ clarification ಕೇಳುತ್ತಿದ್ದೇನೆ. ಹಾಸನ 11ನೇ ಸ್ಥಾನದಲ್ಲಿದೆ, ಶಿವಮೊಗ್ಗ 5ನೇ ಸ್ಥಾನದಲ್ಲಿದೆ. ಶಿಕಾರಿಪುರ ಹಾಗೂ ಹೊಳೆನರಸೀಪುರ ಎಷ್ಟನೇ ಸ್ಥಾನದಲ್ಲಿದೆ? ದಯಮಾಡಿ ತಿಳಿಸಬೇಕು ಎಂದು ನಾನು ಮನವಿ ಮಾಡುತ್ತೇನೆ. ಅದಕ್ಕೆ clarification ಬೇಡ ಎನ್ನುವುದಾದರೆ, ಹೊಳೆನರಸೀಪುರದ್ದನ್ನು

ಹೊಡೆದುಕೊಂಡು ಹೋಗುತ್ತೇನೆ ಎನ್ನುವುದಾದರೆ ಅದು ಬೇಡ. ಶಿಕಾರಿಪುರ ಅದೂ ಬೇಡ. ಶಿರಾಡಿಕೊಪ್ಪಲು, ಹೋಬಳಿ heaf-quarters ಅಲ್ಲಿಗೆ ಎಷ್ಟು

**4.30 P.M.**

ಖರ್ಚು ಮಾಡಿದ್ದೀರಿ? ಹೊಳೆನರಸೀಪುರಕ್ಕೆ ಎಷ್ಟು ಖರ್ಚು ಮಾಡಿದ್ದೀರಿ ಎಂದು ಹೇಳಿ. ಏಕೆಂದರೆ, ಮಾನ್ಯ ಕುಮಾರಸ್ವಾಮಿಯವರು ಮುಖ್ಯಮಂತ್ರಿಯಾಗಿದ್ದಾಗ ಅಣ್ಣ-ತಮ್ಮಂದಿರು ಇಬ್ಬರೂ ಸೇರಿ ರಾಮನಗರ ಹಾಗೂ ನನ್ನ ಕ್ಷೇತ್ರಕ್ಕೆ ಹೊಡೆದುಕೊಂಡು ಹೋದರು ಎನ್ನುವುದು ಬೇಡ. ಈಗ ಹಸಿರು ಕಾರ್ಡ್ ಬಗ್ಗೆ ಹೇಳುವುದಾದರೆ, ಮಾನ್ಯ ಸಿದ್ದರಾಮಯ್ಯನವರು order copy ಕೊಡುತ್ತೇನೆ ಎಂದು ಹೇಳಿದ್ದಾರೆ. ಕೊಟ್ಟ ನಂತರ ತಮಗೆ ಕಳುಹಿಸಿಕೊಡುತ್ತೇನೆ. ಮಾನ್ಯ ಹಾಲಪ್ಪನವರೆ, ನೀವು ವಿದ್ಯಾಮಂತ್ರಿಗಳ ಜೊತೆ ಆಮೇಲೆ ಮಾತನಾಡಿ. ಈಗ ನಾನು ಹೇಳುವುದನ್ನು ಕೇಳಿ. ಜಿಲ್ಲಾಧಿಕಾರಿಗಳು, ಪ್ರಥಮ ಹಂತದ ಅಕ್ಷಯ ಯೋಜನೆಯಡಿಯಲ್ಲಿ ವಿತರಿಸಲಾದ ಬಿ.ಪಿ.ಎಲ್. ಶೇಕಡಾ. ...

**(ಗೊಂದಲ)**

**ಅಧ್ಯಕ್ಷರು:** ಮಾನ್ಯ ರೇವಣ್ಣನವರೆ, ನೀವು ಮುಂದುವರೆಸಿರಿ. ಒಂದು ನಿಮಿಷ ಕೇಳಿ. ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿದರು. ಎಲ್ಲರೂ ಮಾತನಾಡಿದರು. ನನಗೆ ಅರ್ಥವಾಗುತ್ತಿಲ್ಲ. I am not understanding. 4-5 ಬಾರಿ ಇದೇ ವಿಷಯವನ್ನು repeat ಮಾಡುತ್ತಿದ್ದೀರಿ. ತುಮಕೂರಿನ ವಿಷಯಕ್ಕೆ ಸಂಬಂಧಪಟ್ಟಂತೆ ನಾಲ್ಕು-ಐದು ಬಾರಿ repeat ಮಾಡುತ್ತಿದ್ದೀರಿ. Statement ಕೊಡುತ್ತೇನೆ ಎಂದು ಅವರು ಹೇಳಿದ್ದಾರೆ. ನೀವು ಈ ಮೊದಲು 2 ತಾಸು ಭಾಷಣ ಮಾಡಿದ್ದೀರಿ. ಈಗ ಒಂದು ತಾಸು ಭಾಷಣ ಮಾಡಿದ್ದೀರಿ.

**(ಗೊಂದಲ)**

**ಶ್ರೀ ಹೆಚ್.ಡಿ. ರೇವಣ್ಣ:** ಮಾನ್ಯ ಅಧ್ಯಕ್ಷರೆ, ಈ ಒಂದು clarification ಕೇಳಬೇಕು. 80% ಕಾರ್ಡ್ ತೆಗೆದು ಹಾಕಿದ್ದಾರೆ. ತುಮಕೂರು ಜಿಲ್ಲೆಯಲ್ಲಿ 80% ಅಗ್ರಿ ಕಾರ್ಡ್‌ಗಳನ್ನು ತೆಗೆದು ಹಾಕಿದ್ದಾರೆ. ಇವತ್ತು ತುಮಕೂರು ಜಿಲ್ಲೆಯಲ್ಲಿ ಬರಗಾಲವಿದೆ. ಅವರು ಹೇಳಲಿ. ಆ ಜಿಲ್ಲಾಧಿಕ್ಯಾರಿಗಳನ್ನು ನೀವು ಸಸ್ಪೆಂಡ್ ಮಾಡುತ್ತೀರಿ ಏನು?

(ಗೊಂದಲ)

**ಶ್ರೀ ಹೆಚ್.ಸಿ. ಬಾಲಕೃಷ್ಣ:** ಅವರ ಮನವಿ ಏನೆಂದರೆ, ಜಿಲ್ಲಾಧಿಕಾರಿಗಳು ದಾರಿ ತಪ್ಪಿಸಿದ್ದಾರೆ ಎನ್ನುವುದನ್ನು ಹೇಳುತ್ತಿದ್ದಾರೆ. ನೀವು ಇದಕ್ಕೆ ಕ್ರಮ ತೆಗೆದುಕೊಳ್ಳುತ್ತೀರಾ? ಎಲ್ಲಾ ಜಿಲ್ಲಾಧಿಕಾರಿಗಳದ್ದೂ ಇದೇ ಕಥೆಯಾದರೆ ಹೇಗೆ ಸ್ವಾಮಿ?

(ಗೊಂದಲ)

**ಅಧ್ಯಕ್ಷರು:** ನಿಮ್ಮ ಭಾಷಣದ ರೆಕಾರ್ಡ್ ಅನ್ನು ಬೇಕಾದರೆ ತೆಗೆದು ತೋರಿಸುತ್ತೇನೆ. ಅದೇ ವಿಷಯ ಮತ್ತೆ repeat ಆಗುತ್ತಿದೆ. ಹಾಗೆಯೇ ಆಗಲಿ. ಇನ್ನೂ ಒಂದು ತಾಸು ಮಾತನಾಡಿ. ಎಲ್ಲರಿಗೂ free ಬಿಡುತ್ತೇನೆ. ಬೇರೆ ವಿಷಯ ಚರ್ಚೆ ಮಾಡುವುದು ಬೇಡ. ಮಾತನಾಡಿಬಿಡಿ. ನೀವು ಮೊದಲು ಏನು ಭಾಷಣ ಮಾಡಿದ್ದೀರಿ, ಅದೇ ವಿಷಯ ಮತ್ತೆ repeat ಆಗುತ್ತಿದೆ. ಹೊಸದು ಏನಾದರೂ ಇದ್ದರೆ ಹೇಳಿ.

**ಶ್ರೀ ಹೆಚ್.ಡಿ. ರೇವಣ್ಣ:** ಮಾನ್ಯ ಅಧ್ಯಕ್ಷರೆ, ಇವತ್ತು ಮೂರು ದಿನಗಳ ಅಧಿವೇಶನ ಏನು ನಡೆದಿದೆ ಎಂದರೆ, ನಮ್ಮ ಜನಸಾಮಾನ್ಯರಿಗೆ, ಹಳ್ಳಿಯ ರೈತರಿಗೆ ಏನಾಗಿದೆ ಎಂದರೆ ಇದು ನಿಮ್ಮ ಭವಿಷ್ಯದ ಹೆಜ್ಜೆಗಳಲ್ಲ. ಬೋಗಸ್ ಹೆಜ್ಜೆಗಳಲ್ಲಿ ರೈತಾಪಿ ಜನರನ್ನು ಮುಗಿಸುತ್ತೇವೆ ಎನ್ನುವ ಒಂದೇ ಒಂದು ಆಶ್ವಾಸನೆ ಕೊಟ್ಟಿದ್ದಾರೆಯೇ ಹೊರತು, ಹಗರಣಗಳನ್ನು ಮುಚ್ಚಿ ಹಾಕುವುದಕ್ಕೋಸ್ಕರ ಈ ಬೋಗಸ್ ಭವಿಷ್ಯದ ಹೆಜ್ಜೆಗಳನ್ನು ನಾವು ರಾಜ್ಯದ ಜನತೆಗೆ 37 itemನಲ್ಲಿ ಕೊಡುತ್ತಿದ್ದೇವೆ ಎಂದು ಹೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ರಾಜ್ಯದ ರೈತಾಪಿ ಜನರ ಹೆಸರಿನಲ್ಲಿ ಪ್ರಮಾಣ ವಚನ

ಸ್ವೀಕಾರ ಮಾಡಿದ್ದಾರೆ. ವಿರೋಧ ಪಕ್ಷದ ನಾಯಕರಾದ ಮಾನ್ಯ ಸಿದ್ದರಾಮಯ್ಯನವರು 5 ಬಾರಿ ಹಣಕಾಸಿನ ಮಂತ್ರಿಗಳಾಗಿದ್ದಾರೆ. ಅವರು ಏನು ಸಲಹೆ ಕೊಡುತ್ತಾರೆ ಹಾಗೂ ಸದಸ್ಯರು ಏನು ಸಲಹೆ ಕೊಡುತ್ತಾರೆ ಎನ್ನುವುದನ್ನು ಕುಳಿತು ಕೇಲುವ ತಾಳ್ಮೆ ಇಲ್ಲದೇ ರೈತರು ಮುಖ್ಯವಲ್ಲ ಎಂದು ಹೇಳುವುದು ಇದೆ. ಇವತ್ತು ಪತ್ರಿಕೆಯಲ್ಲಿ ಕೆಲವರು ಬರೆದಿದ್ದಾರೆ. ಏನೋ ಪ್ರಶಸ್ತಿ ಕೊಡುತ್ತೇವೆ ಎಂದು ಬರೆದಿದ್ದಾರೆ. ಏತಕ್ಕೆ ಪ್ರಶಸ್ತಿ ಕೊಡುತ್ತಾರೋ ಗೊತ್ತಿಲ್ಲ. ಹಗರಣಗಳಿಗೆ ಪ್ರಶಸ್ತಿ ಕೊಡುತ್ತಾರಾ? ಅಥವಾ ಯಾವುದಕ್ಕೆ ಡಾಕ್ಟರೇಟ್ ಕೊಟ್ಟಿದ್ದಾರೆ ಎನ್ನುವುದು ಗೊತ್ತಿಲ್ಲ. 50 ವರ್ಷಗಳಲ್ಲಿ ಮಾಡದೇ ಇರುವ ಭ್ರಷ್ಟಾಚಾರವನ್ನು ಒಂದೂಕಾಲು ವರ್ಷದಲ್ಲಿ ಈ ಸರ್ಕಾರ ಮಾಡಿದೆ ಎಂದು ಡಾಕ್ಟರೇಟ್ ಕೊಡುತ್ತಿದ್ದಾರೋ ಅಥವಾ ಯಾವ ಉದ್ದೇಶ ಇಟ್ಟುಕೊಂಡು ಡಾಕ್ಟರೇಟ್ ಕೊಡುತ್ತಿದ್ದಾರೋ ಗೊತ್ತಿಲ್ಲ. ಅದನ್ನು ಸದನವೇ ತೀರ್ಮಾನ ಮಾಡಬೇಕು. ಇದು ಬೋಗಸ್ ಹೆಜ್ಜೆಗಳ ಒಂದು ಆಶ್ವಾಸನೆ ಎಂದು ಹೇಳಿ, ಸದನದ ಮಾನ್ಯ ಅಧ್ಯಕ್ಷರು ಇದಕ್ಕೆ clarification ಕೊಡಬೇಕು ಎಂದು ಹೇಳಿ ನಾನು ಮನವಿ ಮಾಡುತ್ತೇನೆ.

**ಅಧ್ಯಕ್ಷರು:** ಈ ವಿಷಯವನ್ನು ಮುಗಿಸಿ. ಎಲ್ಲಾ ಅದನ್ನೇ ಮಾತನಾಡುತ್ತಿದ್ದಾರೆ.

**(ಗೊಂದಲ)**

**ಶ್ರೀ ಟಿ.ಬಿ. ಜಯಚಂದ್ರ (ತಿರಾ):** ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಂಥ ಹೇಳಿಕೆ ಮೇಲೆ clarification ಕೇಳುವುದಕ್ಕಿಂತ ಮುಖ್ಯವಾಗಿ ಅವರ ಉದ್ದೇಶವೇನು ಎನ್ನುವುದನ್ನು ನಾನು ಪ್ರಶ್ನೆ ಮಾಡುತ್ತೇನೆ. ಬಹುಶಃ ಇದು ವಿಶೇಷವಾಗಿ ರೈತರಿಗೋಸ್ಕರ ಮಾಡಿರುವುದು. ಗ್ರಾಮೀಣ ಪ್ರದೇಶಗಳಿಂದ ರೈತರು ಪಟ್ಟಣಕ್ಕೆ ವಲಸೆ ಬರುತ್ತಾರೆ. ಅದನ್ನು ತಪ್ಪಿಸುವುದಕ್ಕೋಸ್ಕರ ಮೂರು ದಿವಸಗಳ ಅಧಿವೇಶನ ಕರೆಯಬೇಕು. ಶಾಸಕರ ಸಲಹೆಗಳನ್ನು ಪಡೆಯಬೇಕು. ಅದರ ಜೊತೆಗೆ ಬೇರೆ ಬೇರೆ ಮೂಲಗಳಿಂದ ಮಾಹಿತಿಯನ್ನು ಸಂಗ್ರಹಿಸಿ ಒಂದು ಒಳ್ಳೆಯ ಕಾರ್ಯಕ್ರಮ ಕೊಡುತ್ತಾರೆ ಎನ್ನುವ

ದೃಷ್ಟಿಯಿಂದ ನಾವು ಏನು ಮಾಡಿದ್ದೇವೆ. ಬಹುಶಃ ನಮ್ಮ ಯಾವ ಭಾಷಣದಲ್ಲಿಯೂ ಕೂಡ ಸರ್ಕಾರದ ಕಾರ್ಯಕ್ರಮಗಳನ್ನು ಟೀಕೆ ಮಾಡದೇ ಸಲಹೆಗಳನ್ನು ಕೊಟ್ಟಿವು ಮಾನ್ಯ ಮುಖ್ಯಮಂತ್ರಿಗಳು ಮೊದಲು ಏನು ಮಾತನಾಡಿದ್ದರು? ಪ್ರಾರಂಭದಲ್ಲಿ ಏನು ಮಾತನಾಡಿದ್ದರು? ಬರಗಾಲದ ವಿವಾರವನ್ನು ಪ್ರಸ್ತಾಪ ಮಾಡುವುದಕ್ಕೆ ಹೊರಟಾಗ ಸಭಾಧ್ಯಕ್ಷರ ಕೊಠಡಿಯಲ್ಲಿ ಏನು ಮಾತನಾಡಿದ್ದೀರಿ ಎಂದರೆ ವಿಶೇಷವಾದ ವಿಚಾರಗಳನ್ನು ಚರ್ಚೆ ಮಾಡುವುದಕ್ಕೋಸ್ಕರ ಅಧಿವೇಶನ ಕರೆದಿದ್ದೇವೆ. ಬೇರೆ ವಿಚಾರವನ್ನು ನೀವು ಎತ್ತಿದರೆ ಅದಕ್ಕೆ ಘನತೆ ಹೊರಟು ಹೋಗುತ್ತದೆ ಎನ್ನುವ ಮಾತನ್ನು ಹೇಳಿದ್ದೀರಿ. ಆ ಹಿನ್ನೆಲೆಯಲ್ಲಿ ನಾವು ಒಂದು ಸಂಧಾನಕ್ಕೆ ಬಂದೆವು. ಆಯಿತು ಬರದ ಬಗ್ಗೆ ನಿಲುವಳಿ ಸೂಚನೆ ಕೊಡುತ್ತೇವೆ, ಪ್ರಸ್ತಾಪ ಮಾಡುತ್ತೇವೆ ಎಂದು ಹೇಳಿದೆವು. ಆಮೇಲೆ ನೀವು ಹೇಳಿದ ಹಾಗೆ ನಾವು ಮಾತನಾಡುತ್ತೇವೆ ಎನ್ನುವ ಮಾತನ್ನು ಹೇಳಿದ್ದೀರಿ. ನಿಮ್ಮ ಉದ್ದೇಶಕ್ಕೆ ಧಕ್ಕೆಯಾಗಬಾರದು ಎನ್ನುವ ಮಾತನ್ನು ನೀವು ಹೇಳಿದ್ದೀರಿ. ಆದರೆ, ಇಲ್ಲಿ ಬಂದು ಏನು ಹೇಳಿದಿರಿ ಎಂದರೆ ನಾನು ಕಾಡಿ–ಬೇಡಿ ನಿಮ್ಮನ್ನು ಒಪ್ಪಿಸಿಕೊಳ್ಳಬೇಕಾಯಿತು ಎಂದು ಹೇಳಿದಿರಿ. ಈ ಮಾತು ಮಾನ್ಯ ಮುಖ್ಯಮಂತ್ರಿಗಳಾಗಿ, ಸಭಾನಾಯಕರಾಗಿ ಹೇಳುವ ಮಾತೇ ಎಂದು ನಾನು ಕೇಳುತ್ತೇನೆ? ನಿಮ್ಮ ಉತ್ತರದಲ್ಲಿ, ನೀವು ಮಾತನಾಡುವ ಸಂದರ್ಭದಲ್ಲಿ, ನೀವು ಕೂಡ ನಿಯಮಾವಳಿಯ ಚೌಕಟ್ಟನ್ನು ಮೀರಬಾರದಿತ್ತು. ನೀವು ಮಾತನಾಡಿದ್ದು ಕಲ್ಲಿದ್ದಲಿನ ಬಗ್ಗೆ. ಆದರೆ, ಬೇರೆ ಬೇರೆ ವಿಚಾರಗಳನ್ನು ಮಾತನಾಡಿ, ರಾಜಕೀಯವಾಗಿರತಕ್ಕಂಥ ಭಾಷಣವನ್ನು ಮಾಡಿ, ಪ್ರಿಂಟ್ ಮಾಡಿದಂಥ, ಅಧಿಕಾರಿಗಳು ತಯಾರು ಮಾಡಿದ್ದನ್ನು ಇಲ್ಲಿ ಕೊಟ್ಟು ಹೋಗಿದ್ದೀರಿ ಅಷ್ಟೆ. ಇದರಲ್ಲಿ ಏನಾದರೂ ಅರ್ಥವಿದೆಯೇ? ರೈತರ ವಿಷಯದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಈ ರೀತಿಯಾದ ರಾಜಕಾರಣವನ್ನು ಮಾಡುತ್ತಾರೆ ಎಂದು ನಾವು ನಂಬಿರಲಿಲ್ಲ. ಏನೋ ರೈತರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕಾರ ಮಾಡಿದ್ದಾರೆ. ರೈತರ ಬಗ್ಗೆ ಕಳಕಳಿ ಇಟ್ಟುಕೊಂಡಿದ್ದಾರೆ, ರೈತರ ಬಗ್ಗೆ ಬಹಳಷ್ಟು ರೀತಿಯಲ್ಲಿ ಮಾತನಾಡುತ್ತಾರೆ. ಅವರು ಮಾತನಾಡುವಾಗ

ಅವರ ಭಾಷಣದಲ್ಲಿ ಬಂಧಂಥ ಕಣ್ಣೀರು ಹೇಗೆ ಎಂದರೆ ಒಂದು ಬಾರಿ ಕಣ್ಣೀರು ಬರಲಿಲ್ಲ. ಗಂಟೆಗಟ್ಟಲೆ ಕಣ್ಣೀರು ಬಂತು. ಅವರು ಅಳುತ್ತಿದ್ದನ್ನು ನೋಡಿದರೆ ನಮ್ಮ ಮನಸ್ಸಿನಲ್ಲಿ ಅನಿಸಿತು. ಏನೋ ಮನಸ್ಸಿನಲ್ಲಿ ಬಹಳ ಕಳಕಳಿಯಿದೆ. ಏನೋ ಪರಿಹಾರ ಕೊಡುತ್ತಾರೆ ಎಂದು ನಾವು ತಿಳಿದುಕೊಂಡರೆ ಇವರು ಪರಿಹಾರ ಕೊಟ್ಟಿದ್ದು ಇದು. ನಾನು ಇದರ ಬಗ್ಗೆ ಪ್ರತಿಯೊಂದನ್ನೂ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಈಗಾಗಲೇ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿದ್ದಾರೆ, ಮಾನ್ಯ ರೇವಣ್ಣನವರು ಮಾತನಾಡಿದ್ದಾರೆ. ಇದರಲ್ಲಿ ಇರುವ ಕಾರ್ಯಕ್ರಮಗಳನ್ನು ನೋಡಿದರೆ, ನೀವು ಹಿಂದಿನ 10 ಬಜೆಟ್ ಪುಸ್ತಕಗಳನ್ನು ತೆಗೆಯಿರಿ; ಆ ಪುಸ್ತಕಗಳಲ್ಲಿ ಇರುವ ಕಾರ್ಯಕ್ರಮಗಳನ್ನು ಬಿಟ್ಟರೆ ಬೇರೆ ಯಾವುದೇ ಹೊಸ ಕಾರ್ಯಕ್ರಮಗಳನ್ನು ಮಾಡಿಲ್ಲ. Old wine in a new bottle ಎನ್ನುವ ರೀತಿಯಲ್ಲಿ ಕಾಣುತ್ತದೆ. ಇಂತಹ ಉತ್ತರಗಳನ್ನು ಕೇಳುವುದಕ್ಕೆ ಮೂರು ದಿನಗಳ ಅಧಿವೇಶನವನ್ನು ಮಾಡಬೇಕಾಗಿತ್ತೇ, ನಾವು ಇದಕ್ಕೆ ಬರಬೇಕಾಗಿತ್ತೇ? ಯಾವ ಉದ್ದೇಶಕ್ಕೋಸ್ಕರ ರೈತರ ಹೆಸರನ್ನು ತೆಗೆದುಕೊಂಡು ಈ ರೀತಿಯ ರಾಜಕಾರಣವನ್ನು ಮಾಡುವುದಕ್ಕೆ ಹೊರಟಿರಿ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ಮಾನ್ಯ ಅಧ್ಯಕ್ಷರೆ, ಪ್ರತಿಯೊಂದೂ ಕಾರ್ಯಕ್ರಮಗಳ ಬಗ್ಗೆ ನಾನು ವಿಶ್ಲೇಷಣೆ ಮಾಡುವುದಕ್ಕೆ ಹೋಗುವುದಿಲ್ಲ. ನಾವು ಅನೇಕ ಸಲಹೆಗಳನ್ನು ಕೊಟ್ಟೆವು. ನಾವು ಕೊಟ್ಟಿರುವ ಸಲಹೆಗಳಲ್ಲಿ ನೀವು ಎರಡು–ಮೂರು ಸಲಹೆಗಳನ್ನೂ ಸಹ ಪರಿಗಣನೆ ಮಾಡಲಿಲ್ಲ. ಇವತ್ತು ಬಹಳ ಮುಖ್ಯವಾಗಿರುವುದು ಏನೆಂದರೆ, ರೈತರ ಬಗ್ಗೆ ಕೇಂದ್ರ ಸರ್ಕಾರ ತಂದಂಥ ಕೃಷಿ ನೀತಿಗಳಿವೆ, ರಾಜ್ಯ ಸರ್ಕಾರ ತಂದಂಥ ಕೃಷಿ ನೀತಿಗಳಿವೆ, ಇವೆಲ್ಲಾ ನೀತಿಗಳನ್ನು ತಂದರೂ ಸಹ ರೈತರ ಪರಿಸ್ಥಿತಿ ಬಗೆಹರಿಯುವುದಕ್ಕೆ ಸಾಧ್ಯವಾಗಿಲ್ಲ. ರೈತನ ಜೀವನ ಮಟ್ಟ ಮೇಲೆ ಬರುವುದಕ್ಕೆ ಸಾಧ್ಯವಾಗಿಲ್ಲ. ರೈತರು ಪ್ರತಿನಿತ್ಯ ಎದುರಿಸುತ್ತಿರುವಂಥ ಸಮಸ್ಯೆಗಳನ್ನು ಎದುರಿಸುವ ಸಾಮರ್ಥ್ಯವನ್ನು ನಾವು ತುಂಬಿಸುವುದಕ್ಕೆ ಇವತ್ತು ಸಾಧ್ಯವಾಗಿಲ್ಲ. ನಾವು ಅರ್ಥ ಮಾಡಿಕೊಳ್ಳಬೇಕಾಗಿರುವುದು ಏನೆಂದರೆ, ನಾವು ಕೇವಲ agriculture policy

ಮಾಡುವುದರಿಂದ ಅಥವಾ ಈ ರೀತಿಯಾದ ಭಾಷಣ ಮಾಡುವುದರಿಂದ, ಈ ರೀತಿಯ ಕಾರ್ಯಕ್ರಮಗಳನ್ನು ಘೋಷಣೆ ಮಾಡುವುದರಿಂದ ರೈತರ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಸಾಧ್ಯವಿಲ್ಲ. ಅದನ್ನು ಬಗೆಹರಿಸುವುದಕ್ಕೆ ಪ್ರಾಮಾಣಿಕವಾಗಿರುವಂಥ ಯಾವುದೇ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಿದರೆ ಮಾತ್ರ ಅದಕ್ಕೆ ಒಂದು ರೂಪ ಬರುತ್ತದೆ ಹಾಗೂ ಬರೆಹರಿಸುವುದಕ್ಕೆ ಸಾಧ್ಯವಾಗುತ್ತದೆ. ನಾನು ಇದನ್ನು ಓದಿದರೆ ಇವರಲ್ಲಿ ನಿಜವಾಗಿಯೂ ಸಹ ಅನುಷ್ಠಾನ ಮಾಡುವ ಕಳಕಳಿಯಿದೆಯೇ ಎನ್ನುವ ಪ್ರಶ್ನೆ ನನಗೆ ಬರುತ್ತದೆ. ಇವರ ಕಾರ್ಯಕ್ರಮಗಳು, ಇವರು ಹೇಳಿರತಕ್ಕಂಥ ಮಾತು, ಇದಕ್ಕೆ ಒಂದು ಬಜೆಟ್ ಸಹ ಇಲ್ಲ. ಪರ್ಯಾಯವಾಗಿರುವ ಒಂದು ಬಜೆಟ್ ಅಧಿವೇಶನ ಎನ್ನುವ ರೀತಿಯಲ್ಲಿ ಬಜೆಟ್ ರೂಪದಲ್ಲಿ ಇವತ್ತು ಇವರು ಭಾಷಣ ಮಾಡಿದ್ದಾರೆ. ಇದನ್ನು ಎಷ್ಟರಮಟ್ಟಿಗೆ ಜಾರಿಗೆ ತರುತ್ತಾರೆ ಎನ್ನುವುದನ್ನು ನೋಡಬೇಕಾಗುತ್ತದೆ. ಇವೆಲ್ಲವನ್ನೂ ಮಾಡಬೇಕಾದಾಗ ಸ್ವಲ್ಪ ಮಟ್ಟಿನ ಹಣಕಾಸು ಬೇಕಾಗುತ್ತದೆ ಎಂದರೆ, ಹಣಕಾಸನ್ನು ಯಾವಾಗ ಕೊಡುತ್ತೀರಿ ಎಂದು ಕೇಳಿದರೆ ಮುಂದಿನ ವರ್ಷ ಕೊಡುತ್ತೇವೆ ಎನ್ನುವುದನ್ನು ಮೊದಲೇ ಹೇಳಿದ್ದಾರೆ. ಇದಕ್ಕೆ ಅಷ್ಟೊಂದು ಕಿಮ್ಮತ್ತಿಲ್ಲ ಎನ್ನುವ ಮಾತನ್ನು ಹೇಳಬೇಕಾಗುತ್ತದೆ. ಇವರ ಮಾತನ್ನು ನೋಡಿದರೆ ಇದು ಕೇವಲ ರಾಜಕೀಯನಾಗಿ ಮಾಡಿರತಕ್ಕಂಥ ಭಾಷಣವೇ ವಿನ ಎಲ್ಲೋ ಒಂದು ಕಡೆ ಜನರನ್ನು ನಂಬಿಸುವ ರೀತಿಯಲ್ಲಿ, ವಿರೋಧ ಪಕ್ಷದವರು ನಮಗೆ ಸಹಕಾರ ಕೊಡುತ್ತಿಲ್ಲ ಎಂದು ಹೇಳುತ್ತಾರೆ. ಮಾನ್ಯ ಮುಖ್ಯಮಂತ್ರಿಗಳು ತಂದಿರುವುದು ಯಾವ ಉದ್ದೇಶಕ್ಕಾಗಿಯೇ ತಂದಿರಲಿ ನಾವು ಸಹಕಾರ ಕೊಡಬೇಕು, ಸಲಹೆಗಳನ್ನು ಕೊಡಬೇಕು, ರೈತನಿಗೆ ಒಳ್ಳೆಯದಾದರೆ ಬಹಳ ಸಹಾಯವಾಗುತ್ತದೆ ಎನ್ನುವ ದೃಷ್ಟಿಯಿಂದ ನಾವು ಸಹಕಾರ ಕೊಟ್ಟೆವು. ಆದರೆ ಅವರು ಯಾವ ಉದ್ದೇಶಕ್ಕೋಸ್ಕರ ಈ ಸದನವನ್ನು ಕರೆದಿದ್ದಾರೋ ಅದನ್ನೇ ಇವತ್ತು ರಾಜಕೀಯ ಮಾಡಿ ಹೊರಟು ಹೋದರು. ನಾನು ಇವತ್ತು ಈ ಉದ್ದೇಶ ಸಾರ್ಥಕವಾಗಿಲ್ಲ ಎಂದು ಹೇಳುವುದರ ಜೊತೆಗೆ ಬಹುಶ: ಇವರು ಕಣ್ಣೀರನ್ನು ಹಾಕಿದ್ದನ್ನು ನೋಡಿದಾಗ ನನಗೆ ಏನು ಅನಿಸಿತು ಎಂದರೆ ಏನಪ್ಪ

ಯಾರಿಗಾದರೂ ಕಣ್ಣೀರು ಬಂತೆಂದರೆ ಬಹುಶ: 2–5 ನಿಮಿಷ ಅಳುತ್ತಾರೆ. ಆದರೆ, ಗಂಟಗಟ್ಟಲೆ ಅಳುತ್ತಲೇ ಓದಿದ್ದನ್ನು ನೋಡಿದರೆ ನನಗೆ ಜ್ಞಾಪಕಕ್ಕೆ ಬರುವುದು ಏನೆಂದರೆ, ನಾನು ತಮಿಳುನಾಡಿನಲ್ಲಿ ಯಾರದ್ದೋ ಮಣ್ಣಿಗೆ ಹೋಗಿದ್ದೆ, ಅಲ್ಲಿ ನಾನು ನೋಡಿದೆ. ಅಂದು ಮಣ್ಣಿನ ದಿವಸ ಯಾರೂ ಅಳಲಿಲ್ಲ. ನನಗೆ ಒಂದು ಜ್ಞಾಪಕ ಬರುತ್ತದೆ. ನಾನು ತಮಿಳುನಾಡಿನಲ್ಲಿ ಯಾರೋ ಒಬ್ಬರ ಮಣ್ಣಿಗೆ ಹೋಗಿದ್ದೆ. ಮಣ್ಣಿನ ದಿವಸ ಯಾರೂ ಸಹ ಅಳಲಿಲ್ಲ. ಅದೇ ರೀತಿಯಾಗಿ ಅವರ ತಿಥಿಗೆ ಹೋಗಿದ್ದೆ. ತಿಥಿ ದಿವಸ ಎಲ್ಲಾ ಅಳುತ್ತಿದ್ದರು.

**ಶ್ರೀ ಬಸವರಾಜ ಬೊಮ್ಮಾಯಿ:** Clarification ಕೇಳಿ ಎಂದು ಹೇಳಿದರೆ, ನೀವು ಸಾವುಗೆ ಹೋಗಿದ್ದು, ಅದು ಇದು ಎಂದು ಮಾತನಾಡುತ್ತಿದ್ದೀರಿ, ಇದು ಏನು ಸ್ವಾಮಿ? ನೀವು ಸೀನಿಯರ್ ಆಗಿ, ಹಿಂದೆ ಕೃಷಿ ಸಚಿವರಾಗಿದ್ದವರು.

**ಶ್ರೀ ಟಿ.ಬಿ. ಜಯಚಂದ್ರ:** ನಾನು ಹೇಳುವುದನ್ನು ಸ್ವಲ್ಪ ಕೇಳಿ. ನಾನು yield ಆಗಿಲ್ಲ.

**ಶ್ರೀ ಬಸವರಾಜ ಬೊಮ್ಮಾಯಿ:** ಕೃಷಿಯಲ್ಲಿ ಸಮಸ್ಯೆಗಳಿದ್ದುದಕ್ಕೆ ನಿಮ್ಮದೂ contribution ಇದೆ. ಅದನ್ನು ಅರ್ಥ ಮಾಡಿಕೊಳ್ಳಿ ಸ್ವಲ್ಪ. ಮುಖ್ಯಮಂತ್ರಿಗಳ ಬಗ್ಗೆ ಅಷ್ಟು ಹಗುರವಾಗಿ ಮಾತನಾಡಬಾರದು.

**ಶ್ರೀ ಟಿ.ಬಿ.ಜಯಚಂದ್ರ:** ನಾನೂ ಕೃಷಿ ಸಚಿವನಾಗಿದ್ದೆ. ನನಗೂ ರೈತರ ಸಮಸ್ಯೆ ಗೊತ್ತಿದೆ. ಒಂದಲ್ಲ ನೂರು ಸಲಹೆಗಳನ್ನು ಕೊಟ್ಟಿದ್ದೇನೆ.

**ಶ್ರೀ ಬಸವರಾಜ ಬೊಮ್ಮಾಯಿ:** ನೀವು ಸೀನಿಯರ್ ಇದ್ದೀರಿ. ದಯವಿಟ್ಟು ಅಷ್ಟು ಹಗುರವಾಗಿ ಮಾತನಾಡಬೇಡಿ.

**ಶ್ರೀ ಟಿ.ಬಿ. ಜಯಚಂದ್ರ:** ನಾನೂ ಹೇಳುವುದನ್ನು ಸ್ವಲ್ಪ ಕೇಳಿ. ಏಕೆ ಹೀಗೆಲ್ಲಾ ಮಾತನಾಡುತ್ತೀರಿ? ಮುಖ್ಯಮಂತ್ರಿಗಳನ್ನು ತುಂಬಾ ಓಲೈಸಿಕೊಳ್ಳುವುದು ಬೇಡ. ಸುಮ್ಮನೆ ಕುಳಿತುಕೊಳ್ಳಿ.

**ಶ್ರೀ ಬಸವರಾಜ ಬೊಮ್ಮಾಯಿ:** ಯಾರ್ಯಾರು ಯಾವಾಗ ಕಣ್ಣೀರು ಸುರಿಸಿದ್ದರು ಎನ್ನುವುದು ಈ ರಾಜ್ಯದ ಜನತೆಗೆ ಗೊತ್ತಿದೆ. ವೈಯಕ್ತಿಕವಾಗಿ ಅವರ ಭಾವನೆಗಳನ್ನು ಅರ್ಥ ಮಾಡಿಕೊಳ್ಳಿ. ಅವರ ಭಾವನೆಗಳನ್ನು ಅರ್ಥ ಮಾಡಿಕೊಳ್ಳದೇ ಅಪಹಾಸ್ಯ ಮಾಡುವುದೆಂದರೆ ಹೇಗೆ? ಎಲ್ಲದ್ದಕ್ಕೂ limit ಇದೆ.

**ಶ್ರೀ ಟಿ.ಬಿ. ಜಯಚಂದ್ರ:** ಕೇಳಿ. ನಾನು ಹೇಳುವುದನ್ನು ನೀವು ತಪ್ಪಿಸುವುದಕ್ಕೆ ಸಾಧ್ಯವಿಲ್ಲ. ನಾನು ನಿಮ್ಮ ಮಾತನ್ನು ಕೇಳಲಿಕ್ಕೆ ತಯಾರಿಲ್ಲ.

**ಶ್ರೀ ಬಸವರಾಜ ಬೊಮ್ಮಾಯಿ:** ನಿಮ್ಮಿಷ್ಟ. ನೀವು ಹೇಳುವುದನ್ನು ಜನರು ಒಪ್ಪಿಕೊಳ್ಳುವುದಿಲ್ಲ. ನೀವು ಹೇಳಿದ ತಕ್ಷಣ ಜನರು ಒಪ್ಪಿಕೊಳ್ಳುವುದಿಲ್ಲ. ಜನರು ಒಪ್ಪಿಕೊಳ್ಳುವ ರೀತಿಯಲ್ಲಿ ಜವಾಬ್ದಾರಿಯಿಂದ ಮಾತನಾಡಿ. ಅವರು ಪ್ರಾಮಾಣಿಕವಾಗಿ ಆ ಕಳಕಳಿಯನ್ನು ವ್ಯಕ್ತಪಡಿಸಿದರೆ ಅಪಹಾಸ್ಯ ಮಾಡುತ್ತೀರೆಂದರೆ ಹೇಗೆ?

**ಶ್ರೀ ಟಿ.ಬಿ. ಜಯಚಂದ್ರ:** ಏನು ಪ್ರಾಮಾಣಿಕತೆ?

**ಶ್ರೀ ಬಸವರಾಜ್ ಬೊಮ್ಮಾಯಿ:** ಏನು ಬೇಕು ನಿಮಗೆ? ನಿಮಗೆ ಏನು clarification ಬೇಕು ಕೇಳಿ. ಉತ್ತರವನ್ನು ಕೊಡುತ್ತಾರೆ.

**ಶ್ರೀ ಟಿ.ಬಿ. ಜಯಚಂದ್ರ:** ಅಧಿವೇಶನವನ್ನು ಕರೆಯುವ ಉದ್ದೇಶವೇನಾದರೂ ಇತ್ತೇ? ಏತಕ್ಕೆ ಬೇಕಾಗಿತ್ತು? ಮುಂದಿನ ಅಧಿವೇಶನದಲ್ಲಿ ಇಡುತ್ತೇವೆಂದರೆ ಏಕೆ ಕರೆಯಬೇಕಾಗಿತ್ತು? Supplementary budgetನಲ್ಲಿ ಘೋಷಣೆ ಮಾಡುತ್ತೇವೆಂದು ನೀವು ಹೇಳಬೇಕಾಗಿತ್ತು. ಏಕೆ ಈ ತರಹ ಮಾಡುತ್ತೀರಿ?

**ಶ್ರೀ ಬಸವರಾಜ ಬೊಮ್ಮಾಯಿ:** ಕೃಷಿ ಈಗ ಸ್ಥಗಿತವಾಗಿರುವುದಕ್ಕೆ who is responsible? ನಿನ್ನೆ ಮೊನ್ನೆ ಬಂದವರು ನಾವಾ ಅಥವಾ ಹಿಂದೆ ಆಡಳಿತ ಮಾಡಿ ಅದನ್ನು ಸ್ಥಗಿತಗೊಳಿಸಿದವರು ಯಾರು? ಇವತ್ತು ಇಲ್ಲಿ ಪ್ರತಿಯೊಬ್ಬರೂ ಆತ್ಮಾವಲೋಕನ ಮಾಡಿಕೊಳ್ಳಬೇಕಾಗುತ್ತದೆ.

**ಶ್ರೀ ಟಿ.ಬಿ. ಜಯಚಂದ್ರ:** ಮಾನ್ಯ ಸಭಾಧ್ಯಕ್ಷರೆ, ನಾನು ಇದರಲ್ಲಿ yield ಆಗಿಲ್ಲ. ಆದರೆ, ನಾನು ಹೇಳತಕ್ಕಂಥದ್ದು ಇಷ್ಟೆ.

**ಶ್ರೀ ಬಸವರಾಜ ಬೊಮ್ಮಾಯಿ:** ಮಾನ್ಯ ಸಭಾಧ್ಯಕ್ಷರೆ, ನಾನು ಹೇಳುವುದೇನೆಂದರೆ, ಅವರು clarification ಕೇಳಲಿ. ಅದನ್ನು ಬಿಟ್ಟು ಮುಖ್ಯಮಂತ್ರಿಗಳ ಭಾವನೆಯನ್ನು ಅಪಹಾಸ್ಯ ಮಾಡುವುದು ಸರಿಯಲ್ಲ.

**ಶ್ರೀ ಟಿ.ಬಿ. ಜಯಚಂದ್ರ:** ಈ ಮೊಸಳೆ ಕಣ್ಣೀರು ಯಾವುದಕ್ಕೆ? Clarification ಅಲ್ಲ ನಿಮ್ಮ ಉದ್ದೇಶವನ್ನು ಪ್ರಶ್ನೆ ಮಾಡುತ್ತೇನೆ. ರಾಜಕಾರಣ ಮಾಡುತ್ತಿದ್ದೀರಿ ಎನ್ನುವುದನ್ನು ಹೇಳಬೇಕಾಗುತ್ತದೆ. ಇವತ್ತು ನಿಮ್ಮ ಉದ್ದೇಶವೇನಿದೆ? ಇದರಲ್ಲಿ clarification ಕೇಳುವಂಥದ್ದು ಏನಿದೆ?

**ಶ್ರೀ ಬಸವರಾಜ ಬೊಮ್ಮಾಯಿ:** ಮಾನ್ಯ ಜಯಚಂದ್ರರವರೆ, ನೀವು ಕೋಪ ಮಾಡಿಕೊಂಡರೆ ಏನೂ ಪ್ರಯೋಜನವಿಲ್ಲ. ಇದು ನಿಮ್ಮ ಘನತೆಗೆ ತಕ್ಕದ್ದು ಅಲ್ಲ. I am sorry. ನಿಮ್ಮ ಘನತೆಗೆ ತಕ್ಕಂತೆ ಮಾತನಾಡಿ. ನಿಮ್ಮ ಬಗ್ಗೆ ನನಗೆ ಗೌರವವಿದೆ. ಈ ರೀತಿ ಹಗುರವಾಗಿ ಮಾತನಾಡುವುದಕ್ಕೆ ಹೋಗಬೇಡಿ.

**ಶ್ರೀ ಟಿ.ಬಿ. ಜಯಚಂದ್ರ:** ಉತ್ತರ ಕೊಡುತ್ತಾರಲ್ಲಾ ಆಗ ಹೇಳಲಿ.

**ಶ್ರೀ ಬಸವರಾಜ ಬೊಮ್ಮಾಯಿ:** ಜನ ಒಪ್ಪುವುದಿಲ್ಲ. ವಿಷಯವನ್ನು ಬಿಟ್ಟು ನೀವು ಕಣ್ಣೀರಿನ ಕಥೆ ಹೇಳುತ್ತೀರಲ್ಲ? ಯಾರ್ಯಾರು ಯಾವಾಗ ಕಣ್ಣೀರು ಹಾಕಿದ್ದಾರೆ ಎನ್ನುವುದು ಗೊತ್ತಿದೆ. ಕಣ್ಣೀರಿನ ಬಗ್ಗೆ ನೀವು ಮಾತನಾಡುವಂಥ ಹಕ್ಕಿಲ್ಲ. ಅವರ ಭಾವನೆಗಳನ್ನು ವ್ಯಕ್ತಪಡಿಸಿದ್ದಾರೆ. ಅವರ ಕಣ್ಣೀರಿನ ಬಗ್ಗೆ ನೀವೇಕೆ ಮಾತನಾಡುತ್ತೀರಿ? ನೀವೇಕೆ ಅಪಹಾಸ್ಯ ಮಾಡುತ್ತೀರಿ?

**ಶ್ರೀ ಟಿ.ಬಿ ಜಯಚಂದ್ರ:** ನಾನು ಇದರಲ್ಲಿ yield ಆಗಿಲ್ಲ. ಮೊಸಳೆ ಕಣ್ಣೀರನ್ನು ಹಾಕಿದಾಕ್ಷಣಕ್ಕೆ ರೈತರಿಗೆ ಸಮಾಧಾನವಾಗುತ್ತದೆಯೇ? ನಿಮ್ಮ ಉದ್ದೇಶವೇನು? (ಗೊಂದಲ) ರೈತರಿಗೆ ಅಪಮಾನವನ್ನು ಮಾಡಿದ್ದೀರಿ.

**ಶ್ರೀ ಬಸವರಾಜ ಬೊಮ್ಮಾಯಿ:** 60 ವರ್ಷ ಮೊಸಳೆ ಕಣ್ಣೀರನ್ನು ಸುರಿಸಿದವರು ನೀವು. ನಮ್ಮ ದೇಶದ ಇತಿಹಾಸದಲ್ಲಿ ಮೊಸಳೆ ಕಣ್ಣೀರಿನ patent

ಯಾರಿಗೆ ಎಂದರೆ, ಅದು ಕಾಂಗ್ರೆಸ್‌ಗೆ ಮೊಸಳೆ ಕಣ್ಣೀರಿನ patent ನಿಮಗಿದೆ. ಕಣ್ಣೀರಿನ ಬಗ್ಗೆ ನೀವೇನು ಮಾತನಾಡುತ್ತೀರಿ?

**ಶ್ರೀ ಟಿ.ಬಿ. ಜಯಚಂದ್ರ:** ಒಬ್ಬ ಮಂತ್ರಿಗಳು ನಡೆದುಕೊಳ್ಳುವ ರೀತಿಯೇ ಇದು?

**ಶ್ರೀ ಬಸವರಾಜ ಬೊಮ್ಮಾಯಿ:** ಮೊಸಳೆ ಕಣ್ಣೀರಿನ ಬಗ್ಗೆ ಮಾತನಾಡುತ್ತಿದ್ದೇವೆ. ನೀವು clarification ಕೇಳಿ ಎಂದರೆ, ಕಣ್ಣೀರಿನ ಕಥೆ ಹೇಳುತೀರಲ್ಲಾ, ಒಳ್ಳೆಯ ಸಮಾಚಾರವಾಯಿತಲ್ಲ? ಗೌರವ ಉಳಿಸಿಕೊಳ್ಳುವ ರೀತಿಯಲ್ಲಿ ಮಾತನಾಡಿ.

(ಗೊಂದಲ)

**ಶ್ರೀ ಹೆಚ್.ಸಿ. ಬಾಲಕೃಷ್ಣ:** ಮಾನ್ಯ ಅಧ್ಯಕ್ಷರೆ, 60 ವರ್ಷದ ಅವಧಿಯಲ್ಲಿ ಅವರ ತಂದೆಯವರು ಮುಖ್ಯಮಂತ್ರಿಗಳಾಗಿದ್ದರು.

(ಗೊಂದಲ)

**ಶ್ರೀ ಬಸವರಾಜ ಬೊಮ್ಮಾಯಿ:** ಏನೇನೋ ಹೇಳಿದರೆ ನಾವು ಈ ಕಡೆ ಸುಮ್ಮನೆ ಕುಳಿತು ಕೇಳಬೇಕಾ?

(ಗೊಂದಲ)

**ಶ್ರೀ ಬಸವರಾಜ ಬೊಮ್ಮಾಯಿ:** Irrelevant ರೀತಿಯಲ್ಲಿ ಮಾತನಾಡುವುದನ್ನು ಕೇಳಬೇಕಾ? ನಿಮ್ಮ ಗೌರವವನ್ನು ಉಳಿಸಿಕೊಂಡು ಮಾತನಾಡಿ ಎಂದಷ್ಟೆ ವಿನಂತಿ ಮಾಡುತ್ತೇನೆ.

**ಶ್ರೀ ಟಿ.ಬಿ. ಜಯಚಂದ್ರ:** Waste bodyಗಳು ಎನ್ನತಕ್ಕ ಮಾತನ್ನು ಹೇಳಬೇಕಾಗುತ್ತದೆ.

**ಶ್ರೀ ಬಸವರಾಜ ಬೊಮ್ಮಾಯಿ:** ದಯವಿಟ್ಟು ಆ ಮಾತನ್ನು ತಾವು ವಾಪಸ್ಸು ತೆಗೆದುಕೊಳ್ಳಿ. Waste body ಯಾರು ಎನ್ನುವುದು ಜನರಿಗೂ ಗೊತ್ತಿದೆ. Please take back your word. ಏನ್ರಿ waste body ಎನ್ನುವುದರ ಅರ್ಥ?

**ಶ್ರೀ ಟಿ.ಬಿ. ಜಯಚಂದ್ರ:** ಏನಿದೆ ಇದರಲ್ಲಿ? ರೈತರ ಬಗ್ಗೆ ಕಳಕಳಿ ಇಲ್ಲ. ಇದರಲ್ಲಿ ಯಾವುದೇ ವಿಚಾರವಿಲ್ಲ. ಏನಿದೆ ಇದರಲ್ಲಿ.

**ಶ್ರೀ ಬಸವರಾಜ ಬೊಮ್ಮಾಯಿ:** ಇದು ನಿಮ್ಮ ಸಂಸ್ಕೃತಿಯನ್ನು ತೋರಿಸುತ್ತದೆ. ನೀವು ನಿಮ್ಮ ಮೇಲಿನ ಹಿಡಿತವನ್ನು ತಪ್ಪಿ ಮಾತನಾಡುತ್ತಿದ್ದೀರಿ. ನಿಮ್ಮ ಬಗ್ಗೆ ಗೌರವದಿಂದ ನಾನು ಮಾತನಾಡುತ್ತಿದ್ದರೆ, ನಿಮ್ಮ ಮೇಲೆ ನಿಮಗೆ ಹಿಡಿತವಿಲ್ಲ. ಆದುದರಿಂದ ಹಾಗೆ ಮಾತನಾಡುತ್ತಿದ್ದೀರಿ. ನಾವು ನಿಮಗೆ waste body ಎಂದು ಹೇಳಿದರೆ ನೀವು ಸುಮ್ಮನೆ ಇರುತ್ತೀರಾ?

**ಶ್ರೀ ಟಿ.ಬಿ. ಜಯಚಂದ್ರ:** ನೀವು ಉತ್ತರ ಕೊಡಬೇಕಾದರೆ ಹೇಳಿ.

**ಶ್ರೀ ಬಸವರಾಜ ಬೊಮ್ಮಾಯಿ:** ಎಲ್ಲರಿಗೂ ಗೌರವ ಅಷ್ಟೇ ಇದೆ. ನಿಮ್ಮೊಬರಿಗೇ ಅಲ್ಲ. ವಿರೋಧ ಪಕ್ಷದ ಉಪನಾಯಕರಾಗಿ ಆ ಸ್ಥಾನಕ್ಕೆ ಗೌರವ ಕೊಟ್ಟು ಮಾತನಾಡಿ. ಎಲ್ಲರಿಗೂ ಗೊತ್ತಿದೆ. ಬಾಯಿಗೆ ಬಂದಂತೆ ಮಾತನಾಡಿದರೆ ಏನರ್ಥ? ಬಾಯಿಗೆ ಬಂದಂತೆ ಮಾತನಾಡುವುದನ್ನು ಬಿಟ್ಟು ಆ Chairಗೆ ಗೌರವ ಕೊಟ್ಟು ಮಾತನಾಡಿ. ಇಷ್ಟು ಹಿರಿಯರಿದ್ದೀರಿ ಅದು ನಿಮಗೆ ತಿಳಿಯುವುದಿಲ್ಲವೆ?

**ಶ್ರೀ ಟಿ.ಬಿ. ಜಯಚಂದ್ರ:** ನಾನು ಈ Chairಗೆ ಗೌರವ ಕೊಟ್ಟು ಮಾತನಾಡಬೇಕಾದದ್ದು ನಿಮ್ಮಿಂದ ಕಲಿಯಬೇಕಾಗಿಲ್ಲ.

**ಶ್ರೀ ಬಸವರಾಜ ಬೊಮ್ಮಾಯಿ:** ಮತ್ತೆ ಬಾಯಿಗೆ ಬಂದಂತೆ ಮಾತನಾಡುತ್ತೀರಿ. ಇದು ನಿಮ್ಮ ಸಂಸ್ಕೃತಿಯನ್ನು ತೋರಿಸುತ್ತದೆ. This shows your culture. ನೀವು ನಿಯಂತ್ರಣ ತಪ್ಪಿ ಮಾತನಾಡುತ್ತಿದ್ದೀರಿ. ಯಾರು waste bodyಗಳು ಎನ್ನುವುದನ್ನು ತೋರಿಸುತ್ತೇವೆ. ಜನತೆಗೆ ಗೊತ್ತಿದೆ. ನಿಮ್ಮೊಬ್ಬರಿಗೇ ಮಾತನಾಡುವುದಕ್ಕೆ ಬರುವುದು?

**(ಗೊಂದಲ)**

**ಅಧ್ಯಕ್ಷರು:** ನೋಡಿ, ನಾವು ಎಲ್ಲಿಯವರೆಗೆ ನಿಯಂತ್ರಣ ಮಾಡುವುದಕ್ಕೆ ಸಾಧ್ಯವಿದೆ? ಈ ರೀತಿ seniors ಪರಸ್ಪರ ಮಾತನಾಡಿದರೆ ನಾನು ಏನು

ಮಾಡುವುದಕ್ಕೆ ಆಗುತ್ತದೆ? ಸದಸ್ಯರು ಅರ್ಥ ಮಾಡಿಕೊಳ್ಳಬೇಕು. ಯಾವ ರೀತಿ ಮಾತನಾಡಬೇಕು ಎಂದು ಅರ್ಥಮಾಡಿಕೊಳ್ಳಬೇಕು. ಯಾವಾಗಲೂ ಈ ರೀತಿ ಮಾಡುತ್ತಾ ಕುಳಿತರೆ ಇದು ಕೆಸರಾಟವಾಗುತ್ತದೆ ಅಷ್ಟೆ.

**ಶ್ರೀ ಬಸವರಾಜ ಬೊಮ್ಮಾಯಿ:** ನೀವು ಹೇಳಿದ್ದೆಲ್ಲಾ ವೇದ ವಾಕ್ಯವೇ? ನೀವೇನು ಸರ್ವಜ್ಞರೇ? ನೀವು ಕೃಷಿ ಸಚಿವರಾಗಿ fail ಆಗಿದ್ದಕ್ಕೆ ಇವತ್ತು ಕೃಷಿ ಇಲಾಖೆ ಬಂದಿದೆ. ನೀವು ಕೃಷಿ ಸಚಿವರಾಗಿ ಏನು ಮಾಡಿದ್ದೀರೆಂದು ಗೊತ್ತಿದೆ. ಈ ರೀತಿ ಮಾತನಾಡುತ್ತೀರಲ್ಲ? ನೀವು ಕೃಷಿ ಸಚಿವರಾಗಿ ಕೃಷಿಯಲ್ಲಿ ಏನು ಸಾಧನೆ ಮಾಡಿದ್ದೀರೆಂದು ಎಲ್ಲರಿಗೂ ಗೊತ್ತಿದೆ.

**ಶ್ರೀ ಟಿ.ಬಿ. ಜಯಚಂದ್ರ:** ಮಾನ್ಯ ಅಧ್ಯಕ್ಷರೆ, ನಮ್ಮ ಅಭಿಪ್ರಾಯಗಳನ್ನು ಹೇಳಬಾರದೆಂದು ಹೇಳಿದರೆ ಹೇಗೆ?

**ಶ್ರೀ ಬಸವರಾಜ ಬೊಮ್ಮಾಯಿ:** Clarification ಇದ್ದರೆ ಕೇಳಲಿ. ಅದನ್ನು ಬಿಟ್ಟು ನಾನು ಸಾವಿಗೆ ಹೋಗಿದ್ದೆ. ಅವರ ಕಣ್ಣೀರು ಹಾಗೆ ಎಂದು ಹೇಳಿದರೆ ಹೇಗೆ.

**ಶ್ರೀ ಟಿ.ಬಿ. ಜಯಚಂದ್ರ:** ಏನು ಉತ್ತರ ಹೇಳಬೇಕೋ ಆಮೇಲೆ ಹೇಳಿ.

**ಶ್ರೀ ಕೆ.ಎಸ್. ಈಶ್ವರಪ್ಪ:** ಇವರು individual ಆಗಿ ಒಬ್ಬರಿಗೊಬ್ಬರು ಹೋಗುತ್ತಿದ್ದಾರೆ. ನೀವು ದಯವಿಟ್ಟು ಹೇಳಿ.

**ಶ್ರೀ ಸಿದ್ದರಾಮಯ್ಯ:** ಮೊದಲು ಮಾನ್ಯ ಮಂತ್ರಿಗಳು ಕುಳಿತುಕೊಳ್ಳಲಿ. ಅವರು ಹೇಳುತ್ತಾರೆ.

**ಶ್ರೀ ಬಸವರಾಜ ಬೊಮ್ಮಾಯಿ:** ನೀವು ಹೇಳಿ ಸಾರ್, ನೀವೇ ನ್ಯಾಯ ಹೇಳಿಬಿಡಿ. ನೀವು ಹೇಳಿದ್ದನ್ನು ನಾನು ಒಪ್ಪಿಕೊಳ್ಳುತ್ತೇನೆ....

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:** You have got every right. ಹೇಳಿ.

**ಶ್ರೀ ಟಿ.ಬಿ. ಜಯಚಂದ್ರ:** ಇದರಲ್ಲಿ clarification ಕೇಳುವಂಥದ್ದು ಏನಿದೆ? ಮುಖ್ಯಮಂತ್ರಿಗಳ ಉದ್ದೇಶವೇನಿದೆ? ರೈತರ ಪರವಾಗಿ ಮೊಸಳೆ ಕಣ್ಣೀರನ್ನು ಹಾಕಿದ್ದಾರೆಯೇ ವಿನಾ ರೈತರಿಗೆ ಯಾವ ರೀತಿಯಲ್ಲೂ ಪ್ರಯೋಜನವಾಗುವುದಿಲ್ಲ. ಈಗಾಗಲೇ ಇದರಿಂದ ಯಾವುದೇ ಪ್ರಯೋಜನವಾಗಿಲ್ಲ. ಯಾವ ಕಾರ್ಯಕ್ರಮವನ್ನೂ ಕೊಟ್ಟಿಲ್ಲ. ಇವತ್ತು ರೈತರಿಗೆ ಅಪಮಾನ ಮಾಡಿದ್ದಾರೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತಿದ್ದೇನೆ.

**(ಗೊಂದಲ)**

**ಅಧ್ಯಕ್ಷರು:** ಸಾಕು ಇದನ್ನು ಮುಗಿಸಿ. ಮತ್ತೆ ಅದೇ plate repeat ಆಗುತ್ತದೆ ಅಷ್ಟೆ. ಬೇರೆ ಏನೂ ಆಗುವುದಿಲ್ಲ.

**ಶ್ರೀ ವೆಂಕಟರಾವ್ ನಾಡಗೌಡ:** ಮಾನ್ಯ ಅಧ್ಯಕ್ಷರೆ, ಎರಡು ನಿಮಿಷ ನಮಗೆ ಮಾತನಾಡುವುದಕ್ಕೆ ಅವಕಾಶ ಕೊಡಿ.

**ಅಧ್ಯಕ್ಷರು:** ಎಲ್ಲರೂ ಮತ್ತೆ ಅದೇ ಮಾತನಾಡುತ್ತೀರಿ. ಇದರ ಬಗ್ಗೆ ಭಾಷಣ ಶುರುವಾಗುತ್ತದೆ. ಮತ್ತೆ ಅದೇ ಪ್ರಶ್ನೆ. ಅದೇ ವಿಷಯ, ಇಲ್ಲಿ ಏನಾಗುತ್ತಿದೆ? ಸ್ಪಷ್ಟೀಕರಣಕ್ಕೆ ಏನಾದರೂ ಅರ್ಥವಿದೆಯೇ? ಇದು ಸ್ಪಷ್ಟೀಕರಣ ಅಷ್ಟೆ. ಮತ್ತೊಮ್ಮೆ ಭಾಷಣ ಮಾಡಲು ಅವಕಾಶ ಕೊಟ್ಟಿಲ್ಲ. ಸಾಕು ಇಲ್ಲಿಗೆ ನಿಲ್ಲಿಸಿ.

**ಶ್ರೀ ಸಿ.ಟಿ. ರವಿ:** ಸನ್ಮಾನ್ಯ ಅಧ್ಯಕ್ಷರೆ, ಇದು ಭಾಷಣವಾಗುತ್ತಿದೆ.

**ಶ್ರೀ ವೆಂಕಟರಾವ್ ನಾಡಗೌಡ (ಸಿಂಧನೂರು):** ಭಾಷಣವಲ್ಲ, clarification ಕೇಳುತ್ತೇವೆ. ಮಾನ್ಯ ಮುಖ್ಯಮಂತ್ರಿಗಳು ಮೂರು ದಿವಸ ವಿಶೇಷ ಅಧಿವೇಶನವನ್ನು ಕರೆದಾಗ, ಈ ರಾಜ್ಯದ ರೈತರು ಬಹಳ ನಿರೀಕ್ಷೆಯನ್ನಿಟ್ಟುಕೊಂಡಿದ್ದರು. ಕೊನೆಯಲ್ಲಿ ರೈತ ಸಮುದಾಯಕ್ಕೆ ಒಂದು ಬಹು ದೊಡ್ಡ ಕೊಡುಗೆಯನ್ನು ಕೊಡಬಹುದು ಎನ್ನುವ ನಿರೀಕ್ಷೆಯಲ್ಲಿ ನಾವಾದರೂ ಇದ್ದೆವು. ರಾಜ್ಯದ ರೈತ ಕೂಡ ಇದ್ದ. ರೈತ ಬಯಸುವುದು ಮೂರನ್ನೇ, assured water, quality current and remunerative price. ಆ ಮೂರು ಅಂಶಕ್ಕೆ ಅವರ ಉತ್ತರದಲ್ಲಿ ಏನೂ ಇಲ್ಲ. ಏನಾದರೂ ಬೆಲೆ ನಿಗದಿಗೆ

ಪ್ರಯತ್ನವನ್ನು ಮಾಡುತ್ತಾರೆ, ರೈತ ಬೆಳೆದ ಬೆಳೆಗೆ ವೈಜ್ಞಾನಿಕ ಬೆಲೆ ಈ ಸದನದ ಮೂಲಕ ಸಿಗಬಹುದೇನೋ ಎಂಬ ನಿರೀಕ್ಷೆಯಲ್ಲಿ ಈ ರಾಜ್ಯದ ರೈತ ಇದ್ದ. ಅದರ ಬಗ್ಗೆ ಒಂದು ಮಾತೂ ಕೂಡ ಮಾನ್ಯ ಮುಖ್ಯಮಂತ್ರಿಗಳ ಉತ್ತರದಲ್ಲಿ ಇಲ್ಲ. Quality current ಬಗ್ಗೆ ಒಂದು ಪ್ರಶ್ನೆಯನ್ನೂ ಇದರಲ್ಲಿ ಮಾತನಾಡಲಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಮಾತನಾಡುವಾಗ ಕೆಲವು ರೈತರ, ಹಿರಿಯ ಸಲಹೆಗಳು, ಪತ್ರಗಳು ಬಂದಿವೆ ಎನ್ನುವುದನ್ನು ಓದಿದರು. ಅವರ ಯಾವ ಸಲಹೆಗಳನ್ನೂ ಕೂಡ ಗಣನೆಗೆ ತೆಗೆದುಕೊಂಡಿಲ್ಲ. ಈ ಸದನದಲ್ಲಿ ಚರ್ಚೆಯಾದ ವಿಷಯಗಳನ್ನೂ ಗಣನೆಗೆ ತೆಗೆದುಕೊಳ್ಳದೇ vague ಆಗಿ ಒಂದು ಪತ್ರವನ್ನು ಕೈಯಲ್ಲಿ ಕೊಟ್ಟಿದ್ದಾರೆ. ಇದರಿಂದ ಇವತ್ತು ರೈತ ಉದ್ಧಾರವಾಗುತ್ತಾನೆಂದು ನಾವು ಭಾವಿಸುವುದಕ್ಕಾಗುವುದಿಲ್ಲ. ಬಹಳಷ್ಟು ಆಯೋಗಗಳ ವರದಿಗಳೂ ಕೂಡ ಸರ್ಕಾರದ ಮುಂದೆ ಇದ್ದವು. ಬೆಲೆ ನಿಗದಿ ಬಗ್ಗೆ ಹಿಂದಿನ ಸರ್ಕಾರದಲ್ಲಿ ಡಾ. ಎಸ್. ಬಿಸಲಯ್ಯನವರ ನೇತೃತ್ವದಲ್ಲಿ....

**ಅಧ್ಯಕ್ಷರು:** ನಿಮ್ಮ ನಾಯಕರು ಮಾತನಾಡಿದ್ದಾರೆ. ಮತ್ತೆ ಮತ್ತೆ ಅವಕಾಶ ಕೊಡುವುದಿಲ್ಲ. ಸಾಕು ಈ ವಿಷಯವನ್ನು close ಮಾಡೋಣ. ಮತ್ತೆ ಅದೇ ಮಾತನಾಡುವುದು ಬೇಡ. ನಾಡಗೌಡರೆ, ಮತ್ತೆ ಅದೇ ಡಾ. ಬಿಸಲಯ್ಯ Committee, ಇವೆಲ್ಲದರ ಬಗ್ಗೆ ಮೊದಲು ನೀವು ಮಾತನಾಡಿದ್ದೀರಿ. ನೀವು 20 ನಿಮಿಷ ಮಾತನಾಡಿದ್ದೀರಿ.

**ಶ್ರೀ ವೆಂಕಟರಾವ್ ನಾಡಗೌಡ:** ನಾನೆಲ್ಲಿ ಮಾತನಾಡಿದ್ದೇನೆ. ಸರ್?

**ಶ್ರೀ ಹೆಚ್.ಸಿ. ಬಾಲಕೃಷ್ಣ:** ಮಾನ್ಯ ಅಧ್ಯಕ್ಷರೆ....

**ಅಧ್ಯಕ್ಷರು:** ಮಾನ್ಯ ಬಾಲಕೃಷ್ಣನವರೆ, ನೀವು ಮಾತನಾಡಿದ್ದೀರಲ್ಲವೇ?

**ಶ್ರೀ ಹೆಚ್.ಸಿ. ಬಾಲಕೃಷ್ಣ:** ನಾನು ಮಾತನಾಡಿದ್ದೇನೆ. ಒಂದು clarification ಕೇಳಿಬಿಡುತ್ತಾರೆ. ಎರಡು ನಿಮಿಷ ಅವಕಾಶ ಕೊಡಿ.

**ಅಧ್ಯಕ್ಷರು:** ಇವರಿಗೆ ಅವಕಾಶ ಕೊಟ್ಟರೆ, ಮತ್ತೆ ಯಾರಿಗೆ ಅವಕಾಶ ಸಿಕ್ಕಿಲ್ಲ ಅವರು ಕೇಳುತ್ತಾರೆ. ಮತ್ತೆ ಅದೇ chapter ಶುರುವಾಗುತ್ತದೆ.

**ಶ್ರೀ ವೆಂಕಟರಾವ್ ನಾಡಗೌಡ:** ಇದರಲ್ಲಿ ರಸ್ತೆ ಬಗ್ಗೆ ಪ್ರಸ್ತಾಪಿಸುವಾಗ....

**ಅಧ್ಯಕ್ಷರು:** ಮತ್ತೆ ಅದೇ ಪ್ಲೇಟ್ ರಿಪೀಟ್ ಆಗುತ್ತದೆಯಲ್ಲ? ಬೇರೇನೂ ಬದಲಾವಣೆಯಾಗುವುದಿಲ್ಲ. ನನಗೆ ಗೊತ್ತಿದೆ. ಅದೇ ವಿಷಯ. ಅದನ್ನೇ ಮಾತನಾಡುವುದು. ಏನಾದರೂ ಹೊಸ ವಿಷಯಗಳಿದ್ದರೆ ಮಾತನಾಡಿ. ನಿಮ್ಮ ನಾಯಕರು ಮಾತನಾಡಿರುವುದನ್ನೇ ಪುನಃ ನೀವು ಹೇಳುತ್ತೀರಿ.

**ಶ್ರೀ ವೆಂಕಟರಾವ್ ನಾಡಗೌಡ:** ಬೆಲೆ ನಿಗದಿ ಬಗ್ಗೆ ಯಾರು ಹೇಳಿದ್ದಾರೆ, ಸರ್?

**ಅಧ್ಯಕ್ಷರು:** (ಆಡಳಿತ ಪಕ್ಷದತ್ತ ತಿರುಗಿ) ನೀವು ಸರ್ಕಾರದ ವತಿಯಿಂದ ಉತ್ತರ ಕೊಡುತ್ತೀರೇನು?

**ಶ್ರೀ ವೆಂಕಟರಾವ್ ನಾಡಗೌಡ:** ನಾನು ಮಾತನಾಡಿದ್ದೇನೆ. ಅದರ ಬಗ್ಗೆ ಇದರಲ್ಲಿ ಉತ್ತರವಿಲ್ಲವೆಂದು ಕೇಳುತ್ತಿದ್ದೇನೆ. ಬೆಲೆ ನಿಗದಿ ಬಗ್ಗೆ ಇದರಲ್ಲಿ ಉತ್ತರವಿಲ್ಲ.

**ಅಧ್ಯಕ್ಷರು:** ಮತ್ತೆ ಹೊಸದಾಗಿ ಎಲ್ಲರೂ ಮಾತನಾಡುವುದಕ್ಕೆ ಹೊಸ ಲಿಸ್ಟ್ ಅನ್ನು ನಾನು ಚಾಲೂ ಮಾಡುವುದಿಲ್ಲ. ಅದು ಅಲ್ಲಿಗೇ ಮುಗಿಯಿತು. ನಿಮ್ಮ ನಾಯಕರು ಮಾತನಾಡಿದ್ದಾರೆ. ಮತ್ತು ಅದಕ್ಕೆ ಸ್ಪಷ್ಟೀಕರಣವನ್ನೂ ಕೇಳಿದ್ದಾರೆ. ಅಷ್ಟಕ್ಕೆ ಮುಗಿಯಿತು. ಈಗ ಸರ್ಕಾರದಿಂದ ಯಾರಾದರೂ ಉತ್ತರ ಕೊಡುತ್ತೀರಾ? ಸರ್ಕಾರದಿಂದ ಉತ್ತರ ಕೊಡಿ. ಈಗ ವಿಷಯವನ್ನು ಇಲ್ಲಿಗೆ ಮುಗಿಸೋಣ.

**(ಕೆಲವು ಮಾನ್ಯ ಸದಸ್ಯರುಗಳು ತಮಗೆ ಮಾತನಾಡಲು ಅವಕಾಶ ಕಲ್ಪಿಸಿಕೊಡಬೇಕೆಂದು ಮಾನ್ಯ ಅಧ್ಯಕ್ಷರನ್ನು ಕೋರುತ್ತಿದ್ದರು)**

**ಅಧ್ಯಕ್ಷರು:** ಆಗುವುದಿಲ್ಲ, ಅವಕಾಶ ಕೊಟ್ಟರೆ ಮತ್ತೆ ಭಾಷಣ ಚಾಲೂ ಮಾಡುತ್ತೀರಿ.

**ಶ್ರೀ ಬಸವರಾಜ ಬೊಮ್ಮಾಯಿ:** ಸನ್ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಮುಖ್ಯಮಂತ್ರಿಗಳು....

**ಅಧ್ಯಕ್ಷರು:** ನೋಡಿ, ಒಂದೊಂದೇ ಸ್ಪಷ್ಟೀಕರಣ ಕೇಳಿದರೆ ಅಡ್ಡಿಯಿಲ್ಲ. ಬೊಮ್ಮಾಯಿಯವರೆ, ಒಂದು ನಿಮಿಷ ತಡೆಯಿರಿ. ನಾಡಗೌಡರೆ, ನೀವು ಭಾಷಣ ಮಾಡಬೇಡಿ. ಏನಾದರೂ ಸ್ಪಷ್ಟೀಕರಣವಿದ್ದರೆ, ಕೇಳಿ.

**ಶ್ರೀ ವೆಂಕಟರಾವ್ ನಾಡಗೌಡ:** ಸ್ಪಷ್ಟೀಕರಣವನ್ನೇ ಕೇಳುತ್ತಿದ್ದೇನೆ. ಬೆಲೆ ನಿಗದಿ ಬಗ್ಗೆ ಇದರಲ್ಲಿ ಉತ್ತರವಿಲ್ಲವೆಂದರೆ, ಅದು ಸ್ಪಷ್ಟೀಕರಣ ಅಲ್ಲವೇ?

**ಅಧ್ಯಕ್ಷರು:** ನೀವು ಮಾತನಾಡಿದ್ದೀರಿ. ಹಾಗಾದರೆ, ಪುನಃ ಸ್ಪಷ್ಟೀಕರಣ ಏಕೆ ಕೇಳುತ್ತಿದ್ದೀರಿ? ಯಾರು ಇಲ್ಲಿ ಮಾತನಾಡಿಲ್ಲವೋ, ಅವರು ಮಾತನಾಡಿ ಸ್ಪಷ್ಟೀಕರಣ ಪಡೆದುಕೊಳ್ಳಬೇಕು. ನೀವು ಭಾಷಣವನ್ನೇ ಮಾಡಿಲ್ಲವಲ್ಲ? ನೀವು ಹೇಗೆ ಸ್ಪಷ್ಟೀಕರಣ ಪಡೆದುಕೊಳ್ಳುತ್ತಿದ್ದೀರಿ? ಮಾತನಾಡಿ.

**ಶ್ರೀ ವೆಂಕಟರಾವ್ ನಾಡಗೌಡ:** ರಸ್ತೆ ಬಗ್ಗೆ ಒಂದು ಸ್ಪಷ್ಟೀಕರಣ ನೀಡಿದರು. ರಸ್ತೆ ಬಗ್ಗೆ ಅವರು ಏನು ಹೇಳುತ್ತಿದ್ದಾರೆಂದರೆ, 50 ಕಿಲೋಮೀಟರ್ ರಸ್ತೆಯನ್ನು ಎರಡು ವರ್ಷಗಳಲ್ಲಿ ಪೂರ್ತಿಗೊಳಿಸುತ್ತೇವೆಂದರು. ಮಾನ್ಯ ಬಸವರಾಜ ಬೊಮ್ಮಾಯಿಯವರು ಮಾತನಾಡುವಾಗ ಏನು ಹೇಳಿದರು ಎಂದರೆ, ಐದು ವರ್ಷಗಳಲ್ಲಿ ಆ ಗುತ್ತಿಗೆದಾರರಿಗೆ ವರ್ಷಕ್ಕೆ ಇಂತಿಷ್ಟು ಪೇಮೆಂಟ್ ಮಾಡುತ್ತೇವೆಂದು ಹೇಳಿದರು. ನೀವು ಹಾಗೇನಾದರೂ ತಲೆಯಲ್ಲಿಟ್ಟುಕೊಂಡು ಮಾಡಿದರೆ ಇವತ್ತು ಒಂದು ಲಕ್ಷ ರೂ. ಆಗುವ ರಸ್ತೆಗೆ ಅವರು ಎರಡು ಲಕ್ಷ ರೂ. quote ಮಾಡಿ ಮಾಡಬೇಕಾಗುತ್ತದೆ. ನೀವು 40,000 ರೂ. ಖರ್ಚು ಮಾಡಿದರೆ ಕೆಲಸ ಆಗುತ್ತದೆಂಬ ಭಾವನೆ ಇವತ್ತು ಇಟ್ಟುಕೊಂಡಿದ್ದೀರಲ್ಲ? ಮೂರು ಪಟ್ಟು ಜಾಸ್ತಿ ಬೆಲೆಗೆ ಗುತ್ತಿಗೆದಾರರು ಬರಬೇಕಾಗುತ್ತದೆ. ಏಕೆಂದರೆ, ಅವರಿಗೆ ಐದು ವರ್ಷಗಳಿಗೆ ಸಿಗುತ್ತದೆ. ಹಾಗಾದರೆ, ನೀವು ಇಷ್ಟು ಖರ್ಚು ಮಾಡಿ ಕೆಲಸ ಮಾಡುತ್ತೀರಿ? ಐದೂ ವರ್ಷಗಳದ್ದು ಪೇಮೆಂಟ್ ಮಾಡುತ್ತೇವೆಂದರೆ ಇವತ್ತಿನ DSRಗೆ ಅವರು ಕೆಲಸ ಮಾಡುತ್ತಾರೆಯೇ? ಮಾಡಲು ಸಾಧ್ಯವಿದೆಯೇ? ಐದು ವರ್ಷಗಳಿಗೆ ನೀವು ದುಡ್ಡು ಕೊಡುತ್ತೇವೆಂದರೆ, ಮುಂದಿನ ಐದು ವರ್ಷಗಳ ಆಲೋಚನೆ ಮಾಡಿ ಮೂರು ಪಟ್ಟು ದುಡ್ಡು ಹೆಚ್ಚಿಸುತ್ತಾರೆ. ಹಾಗಾದರೆ, ನೀವು ಹೇಗೆ ಮಾಡಲು ಸಾಧ್ಯ?

ಮೂರು ಪಟ್ಟು ಹೆಚ್ಚಿಗೆ ಹಣ ಖರ್ಚು ಮಾಡಿ ಈ ರಸ್ತೆಗಳನ್ನು ನಿರ್ಮಿಸುತ್ತೀರಾ? ಇದರ ಬಗ್ಗೆ ಕ್ಲಾರಿಫೈ ಮಾಡಬೇಕಲ್ಲ? ನೀವು ಹೇಳಿಬಿಟ್ಟರೆ ನಾವು ಇವತ್ತೇ ತೆಗೆದುಕೊಳ್ಳುತ್ತೇವೆ. ಐದು ವರ್ಷಗಳದ್ದು ಪೇಮೆಂಟ್ ಮಾಡುತ್ತೇವೆಂದರೆ, ಅವರು ಇವತ್ತಿನ DSRಗೆ ಮಾಡಿಬಿಡುತ್ತಾರೆಯೇ? ಅಷ್ಟು ಜಾಸ್ತಿ ದುಡ್ಡು ಖರ್ಚು ಮಾಡಿ ಕೆಲಸ ಮಾಡುವುದಕ್ಕಾಗುತ್ತದೆಯೇ ಎಂಬುದನ್ನೂ ಆಲೋಚನೆ ಮಾಡಬೇಕು. ಆದುದರಿಂದ, ಇದರ ಬಗ್ಗೆ ಕ್ಲಾರಿಫೈ ಮಾಡಬೇಕು. ಅನಂತರ, ಬೆಲೆ ನಿಗದಿ ಬಗ್ಗೆ ಏನನ್ನೂ ಹೇಳಿಲ್ಲ. ಅದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಮತ್ತು ಸಚಿವರು ಹೇಳಬೇಕೆಂದು ತಮ್ಮ ಮೂಲಕ ಮನವಿ ಮಾಡಿಕೊಳ್ಳುತ್ತೇವೆ. ಕ್ವಾಲಿಟಿ ಕರೆಂಟ್ ಬಗ್ಗೆಯೂ ಹೇಳಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

**ಶ್ರೀ ಅಪ್ಪಾಜಿ ಎಸ್. ನಾಡಗೌಡ (ಮುದ್ದೇಬಿಹಾಳ):** ಅಧಿಕಾರಿಗಳಾಗಲಿ, ನೀವಾಗಲಿ, ನಮ್ಮ ಮನಸ್ಸಿಗೆ ಇವತ್ತು ಆಗಿರುವಷ್ಟು ಬೇಸರ ಎಂದು ಆಗಿರಲಿಲ್ಲ. ನಾವು ಇಲ್ಲಿ ಸುಮ್ಮನೆ ಒತ್ತಾಯಕ್ಕೆ ಕುಳಿತುಕೊಂಡಿದ್ದೇವೆ. ನಾವೆಲ್ಲರೂ ಹೊರಗಡೆ ಹೋಗಬೇಕೆಂದು ಮನಸ್ಸು ಮಾಡಿದ್ದೆವು. ಸದನ ಈ ರೀತಿ ನಡೆದರೆ ನಾವು ಇಲ್ಲಿ ಕುಳಿತುಕೊಳ್ಳುವುದಕ್ಕಾಗುವುದಿಲ್ಲ. ಮಾನ್ಯ ಅಧ್ಯಕ್ಷರೆ, ನಾನು ತಮ್ಮಲ್ಲಿ ಒಂದು ಪ್ರಶ್ನೆ ಕೇಳುತ್ತೇನೆ. ಇಲ್ಲಿಯವರೆಗೂ ಮೂರು ದಿವಸಗಳ ಕಾಲ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಕುರಿತಂತೆ ಸದನದಲ್ಲಿ ಚರ್ಚಿಸಿದ್ದೇವೆ. ಕೃಷಿ ಮತ್ತು ಗ್ರಾಮೀಣಾಭಿವೃದ್ಧಿಗೆ ನಾವು ಯಾವ ರೀತಿ ಪ್ರೋತ್ಸಾಹ ನೀಡಬೇಕು ಮತ್ತು ಹೇಗೆ ಅಲ್ಲಿ ವ್ಯವಸ್ಥೆ ಸುಧಾರಿಸಬೇಕು. ಅದರಿಂದ ನಮ್ಮ ನಾಡಿಗೆ ಹೇಗೆ ಪ್ರಯೋಜನವಾಗುತ್ತದೆಂಬ ಮಾತುಗಳನ್ನೂ ಹೇಳಿದ್ದೇವೆ. ಈ ಸರ್ಕಾರಕ್ಕೆ ಒಂದು ಪ್ರಶ್ನೆ ಕೇಳಲು ಇಚ್ಛಿಸುತ್ತೇನೆ. ಸನ್ಮಾನ್ಯ ಮುಖ್ಯಮಂತ್ರಿಗಳು ವಿರೋಧ ಪಕ್ಷದ ನಾಯಕರಾಗಿದ್ದಾಗ ಪದೇ ಪದೇ ಪ್ರಸ್ತಾಪಿಸುತ್ತಿದ್ದರು. ಏನೆಂದರೆ, ಈ ಸರ್ಕಾರ ಸೆರೆಯನ್ನು ಸಂಪೂರ್ಣವಾಗಿ ನಿಷೇಧಿಸುತ್ತದೆಯೇ ಇಲ್ಲವೇ ಎಂದು ಬೊಟ್ಟು ಮಾಡಿ ಕೇಳುತ್ತಿದ್ದರು. ಆ ಪ್ರಶ್ನೆಯನ್ನು ಇವತ್ತು ನಾನು ನಿಮಗೆ ಕೇಳುತ್ತೇನೆ. ಮೊದಲು ಶಿಸ್ತು ತರಬೇಕಾದರೆ ಸೆರೆಯನ್ನು ಸಂಪೂರ್ಣ alcoholನ್ನು ನಿಷೇಧಿಸುವುದಕ್ಕೆ ನೀವೇಕೆ ಹಿಂದೆ ಸರಿಯುತ್ತಿದ್ದೀರಿ? ನೀವು ವಿರೋಧ

ಪಕ್ಷದಲ್ಲಿದ್ದಾಗ ನಿಮ್ಮ ಅಜೆಂಡಾ ಇದೇ ಆಗಿತ್ತು. ಆದರೆ, ಇವತ್ತೇಕೆ ಅದು ಇಲ್ಲ? ಸೆರೆಯನ್ನು ಸಂಪೂರ್ಣವಾಗಿ ನಿಷೇಧಿಸುವುದಕ್ಕೆ ಏಕೆ ಹಿಂಜರಿಯುತ್ತಿದ್ದೀರಿ? ಇದು ಮೊದಲನೆಯದು.

ಎರಡನೆಯದು, ಇದರಲ್ಲಿ ತಾವು ಹೇಳಿಕೆ ನೀಡಿದ್ದೀರಿ. ಹೇಳಿಕೆಯಲ್ಲಿ ವಿದ್ಯುತ್ ಬಗ್ಗೆ ತಾವು ಪ್ರಸ್ತಾಪಿಸಿಲ್ಲ. ವಿದ್ಯುತ್ ಸಮಸ್ಯೆ ಬಗ್ಗೆ, ಜನರೇಟರ್‌ಗಳನ್ನು ಒದಗಿಸುವುದಾಗಲಿ, ಡೀಸೆಲ್ ಸಬ್ಸಿಡಿಯಾಗಲಿ, ಇವತ್ತು ಬಹಳ ಅವಶ್ಯಕವಾಗಿರುವುದರ ಬಗ್ಗೆ ಏನೂ ಹೇಳಿಕೆ ನೀಡಲಿಲ್ಲ. ಮತ್ತು ಅದರ ಬಗ್ಗೆ ನೀವು ಉಲ್ಲೇಖವನ್ನೂ ಮಾಡಲಿಲ್ಲ. ಇನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಕುರಿತು, ಓಂಬುಡ್ಸ್‌ಮನ್ ವ್ಯವಸ್ಥೆ ಜಾರಿಗೆ ತರುತ್ತೇವೆಂದು ಹೇಳಿದ್ದೀರಿ. ಓಂಬುಡ್ಸ್‌ಮನ್ ಎಂದರೇನು? ಒಂದು ಪದ ಉಪಯೋಗಿಸಿಕೊಂಡರೆ ಸಾಕೇ? ಒಬ್ಬ ಅಧಿಕಾರಿ ಪಂಚಾಯಿತಿ ಮಟ್ಟದಲ್ಲಿ ಇಲ್ಲವೇ ಒಬ್ಬ ವ್ಯಕ್ತಿ ಮೇಲೆ ಇನ್‌ವೆಸ್ಟಿಗೇಶನ್ ನಡೆಸುವುದಕ್ಕೆ ಓಂಬುಡ್ಸ್‌ಮನ್ ಎಂದು ಕರೆಯುತ್ತಾರೆ. ಈ ವ್ಯವಸ್ಥೆ ಈಗಾಗಲೇ ಜಾರಿಯಲ್ಲಿದೆ. What is new in this? ನೀವು ಏಕೆ ಮಾಡುತ್ತಿಲ್ಲ? ಇಲ್ಲಿಯವರೆಗೂ ನೀವು ಏಕೆ ಈ ಕುರಿತಂತೆ ಕ್ರಮ ಕೈಗೊಳ್ಳುತ್ತಿಲ್ಲ? Is it new in this? ನಿಮ್ಮ ಆ್ಯಕ್ಟ್‌ನಲ್ಲಿ ಈಗಾಗಲೇ ಇದಕ್ಕೆ ಪ್ರಾವಿಜನ್ ಇದೆ. ಅವರನ್ನು dis-qualify ಮಾಡುವುದಕ್ಕೆ ನಿಮಗೆ ಎಲ್ಲಾ ರೀತಿಯ ಅಧಿಕಾರ ಇದೆ. ಯಾರು ಸರಿಯಾಗಿ ನಡೆದುಕೊಳ್ಳುವುದಿಲ್ಲವೋ, ಅವರ ಮೇಲೆ ಕ್ರಮ ಕೈಗೊಳ್ಳಲು ಈಗ ಅಧಿಕಾರ ಇದೆ. Default ಆಗಲಿ, mis-use of powers ಆಗಲಿ, ಕ್ರಮ ಜರುಗಿಸಲು ಅಧಿಕಾರ ಇದೆ. ಅದನ್ನು ಇವತ್ತು ಏಕೆ ನೀವು ಜಾರಿಗೊಳಿಸುತ್ತಿಲ್ಲ ಎನ್ನುವ ಪ್ರಶ್ನೆಯನ್ನು ಸರ್ಕಾರಕ್ಕೆ ಕೇಳಲಿಚ್ಛಿಸುತ್ತೇನೆ.

**ಅಧ್ಯಕ್ಷರು:** ನೋಡಿ, ಈಗ ಮಾನ್ಯ ಸದಸ್ಯರಾದ ಅಪ್ಪಾಜಿ ನಾಡಗೌಡರು ಒಂದು ಮಾದರಿ ಹಾಕಿಕೊಟ್ಟಿದ್ದಾರೆ. ಅವರು ಭಾಷಣ ಮಾಡಲಾರದೆ 2–3 ಪ್ರಶ್ನೆಗಳನ್ನು ಕೇಳಿದ್ದಾರಲ್ಲ, ಆ ರೀತಿ ಕೇಳಲು ಎಲ್ಲಾ ಮಾನ್ಯ ಸದಸ್ಯರು ಕಲಿತುಕೊಳ್ಳಬೇಕು. ಈ ರೀತಿ ಮಾತನಾಡಿದರೆ ಹತ್ತು ಮಾನ್ಯ ಸದಸ್ಯರುಗಳಿಗೆ

ಮಾತನಾಡಲು ಅವಕಾಶ ಕಲ್ಪಿಸಿಕೊಡಬಹುದು. ಅಪ್ಪಾಜಿ ನಾಡಗೌಡರು ಮಾತನಾಡಿದ್ದಾರಲ್ಲ, ಆ ರೀತಿ ಮಾತನಾಡಿದರೆ ಎಲ್ಲರಿಗೂ ಅವಕಾಶ ಸಿಗುತ್ತದೆ.

**ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್ (ಅಫಜಲಪುರ):** ಸನ್ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆ ಇಷ್ಟೆ. ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಆದಾಯ ಮಿತಿಯನ್ನು 50,000 ದಿಂದ 2,50,000 ರೂ.ಗಳವರೆಗೆ ಹೆಚ್ಚಿಸಿದ್ದೀರಿ. ಅದೇ ರೀತಿ ಹಿಂದುಳಿದ ಮತ್ತು ಅಲ್ಪಸಂಖ್ಯಾತ ವರ್ಗಗಳವರ ಆದಾಯ ಮಿತಿಯನ್ನು ಹೆಚ್ಚಿಸುವ ಪ್ರಸ್ತಾವದ ಕಡತ ತಮ್ಮ ಸರ್ಕಾರದ ಮುಂದಿದೆ. ಉತ್ತರಿಸುವಾಗ ಇದರ ಬಗ್ಗೆ ಹೇಳಬೇಕು. ಎರಡನೆಯದಾಗಿ, ಆಶ್ರಯ ಮನೆಗಳಿಗೆ ಜಮೀನು ಖರೀದಿಸಲು ಮೀಸಲಿರಿಸಿರುವ ಹಣ ಏನೇನು ಸಾಲದು. ಇದನ್ನು ಹೆಚ್ಚಿಸಬೇಕು. ಮತ್ತೊಂದು ಸಲಹೆ ಏನಿದೆಯೆಂದರೆ, ಬಹಳಷ್ಟು ಗ್ರಾಮಗಳಲ್ಲಿ ಸ್ಮಶಾನದ ಸಮಸ್ಯೆಗಳಿವೆ. ಯಾರಾದರೂ ಸತ್ತಾಗ ಅವರನ್ನು ಹೂಳಲು ಅವರಿವರಿಗೆ ಕೈಜೋಡಿಸಬೇಕಾದ ಪರಿಸ್ಥಿತಿ ಇದೆ. ಸರ್ಕಾರ ಇದರ ಬಗ್ಗೆ ವಿಶೇಷ ಕಾಳಜಿ ವಹಿಸಿ ಸ್ಮಶಾನ ಭೂಮಿ ದೊರಕಿಸಿಕೊಡುವ ಕುರಿತಂತೆ ತಮ್ಮ ಉತ್ತರದಲ್ಲಿ ಹೇಳಬೇಕೆಂದು ಬಯಸುತ್ತೇನೆ.

**ಶ್ರೀ ಪ್ರಕಾಶ್ ಬಿ. ಹುಕ್ಕೇರಿ (ಚಿಕ್ಕೋಡಿ):** ಮಾನ್ಯ ಅಧ್ಯಕ್ಷರೆ, ಸದನದಲ್ಲಿ ಈಗ ಸಕ್ಕರೆ ಮತ್ತು ಎಪಿಎಂಸಿ ಸಚಿವರು ಇದ್ದಾರೆ. ನಾನು ಮಾತನಾಡುವಾಗ ಹೇಳಿದ್ದೆ. ಬೆಳಗಾಂ ಜಿಲ್ಲೆಯಲ್ಲಿ ಸಂಕೇಶ್ವರ, ನಿಪ್ಪಾಣಿ ಮತ್ತು ಸದಲಗಾ ಎಪಿಎಂಸಿ ಯಾರ್ಡ್‌ಗಳೇನಿವೆ, ರೈತರು ಬೆಳೆದ ಬೆಲ್ಲ, ಮೆಣಸಿನಕಾಯಿ, ಇತ್ಯಾದಿ ಬೆಳೆಗಳು ಆ ಎಪಿಎಂಸಿ ಯಾರ್ಡ್‌ಗಳಿಗೆ ಬರುವುದಿಲ್ಲ. ಆ ಬೆಳೆಗಳೆಲ್ಲವೂ ಮಹಾರಾಷ್ಟ್ರದ ಸಾಂಗ್ಲಿ, ಕೊಲ್ಲಾಪುರದ ಮಾರುಕಟ್ಟೆಗಳಿಗೆ ಹೋಗುತ್ತವೆ. ಅದನ್ನು ತಡೆಗಟ್ಟುವುದಕ್ಕೆ ನೀವು ಏನು ಕ್ರಮ ಕೈಗೊಳ್ಳುತ್ತೀರಿ? ಮಹಾರಾಷ್ಟ್ರ ಮತ್ತು ಕರ್ನಾಟಕ ರಾಜ್ಯಗಳಲ್ಲಿ ತೆರಿಗೆ ಸಂಬಂಧವಾಗಿ ಏನಾದರೂ ತಾರತಮ್ಯವಿದೆಯೇ? ಇಲ್ಲಿನ ಎಪಿಎಂಸಿ ಯಾರ್ಡ್‌ಗಳು ಸಂಪೂರ್ಣ ಮುಚ್ಚುವ ಪರಿಸ್ಥಿತಿಗೆ ಬಂದಿದೆ. ಪ್ರತಿಯೊಂದು ಎಪಿಎಂಸಿ ಯಾರ್ಡ್‌ಗಳಿಗೆ ಜೆಎಂಎಫ್‌ಸಿ ಕೋರ್ಟ್‌ಗಳನ್ನು ಬಾಡಿಗೆಗೆ ನೀಡಲಾಗಿದೆ. ಇದರ ಬಗ್ಗೆ ತಾವು ಏನು ಕ್ರಮ ಕೈಗೊಳ್ಳುತ್ತೀರೆಂಬುದನ್ನು ಹೇಳಬೇಕು.

(ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಎರಡನೆಯದಾಗಿ, ಈ ಸಲ ರೈತರಿಗೆ ಕಬ್ಬಿನ ಬಂಪರ್ ಬೆಳೆ ಬಂದಿದೆ. ಈಗ ಕರ್ನಾಟಕದಿಂದ ಮಹಾರಾಷ್ಟ್ರಕ್ಕೆ ಕಬ್ಬು ಸಾಗಾಣಿಕೆಯಾಗುತ್ತಿದ್ದು, ಇದರ ಮೇಲೆ ತಾವೇನಾದರೂ ನಿರ್ಬಂಧ ವಿಧಿಸುತ್ತೀರಾ? ಹೇಗೆ? ನಿರ್ಬಂಧ ವಿಧಿಸಬಾರದೆಂದು ನಾವುಗಳು ತಮ್ಮಲ್ಲಿ ಮನವಿ ಮಾಡಿಕೊಂಡಿದ್ದೇವೆ. ಸದನದಲ್ಲಿ ಮಾಜಿ ಸಕ್ಕರೆ ಸಚಿವರಿದ್ದಾರೆ. ದಯಮಾಡಿ ಕಬ್ಬಿನ ಮೇಲೆ ಯಾವುದೇ ರೀತಿಯಲ್ಲೂ ನಿಯಂತ್ರಣ ಹೇರಬಾರದು.

**ಶ್ರೀ ಉಮೇಶ್ ವಿ. ಕತ್ತಿ:** ಕಬ್ಬು ಕರ್ನಾಟಕದಿಂದ ಮಹಾರಾಷ್ಟ್ರಕ್ಕೆ ಸಾಗಾಣಿಕೆ ಮಾಡುವುದಕ್ಕೆ ನಮ್ಮದೇನೂ ಅಭ್ಯಂತರವಿಲ್ಲ. ಮತ್ತು ಮಹಾರಾಷ್ಟ್ರದಿಂದ ಕರ್ನಾಟಕಕ್ಕೆ ಬರುವ ಕಬ್ಬು ಸಹ ನಿಲ್ಲಬಾರದು. ಮಹಾರಾಷ್ಟ್ರದವರು ಕರ್ನಾಟಕದಿಂದ ಬರುವ ಕಬ್ಬಿಗೆ ನಿರ್ಬಂಧ ಹೇರದಿದ್ದರೆ, ನಾವೂ ಹೇರುವುದೂ ಬೇಡ. ಅವರು ನಿರ್ಬಂಧ ವಿಧಿಸಿದರೆ ನಾವೂ ನಿರ್ಬಂಧ ವಿಧಿಸೋಣ.

**ಶ್ರೀ ಪ್ರಕಾಶ್ ಬಿ. ಹುಕ್ಕೇರಿ:** ಮಹಾರಾಷ್ಟ್ರದಿಂದ ಕರ್ನಾಟಕಕ್ಕೆ ಕಬ್ಬು ಬರುವುದೇ ಇಲ್ಲ. ಏಕೆಂದರೆ, ಇಲ್ಲಿ ಪ್ರತಿ ಟನ್ ಕಬ್ಬಿಗೆ 1,400 ರೂ.ಗಿಂತಲೂ ಹೆಚ್ಚಿಗೆ ಕೊಡುವುದಕ್ಕಾಗುವುದಿಲ್ಲ. ಮಹಾರಾಷ್ಟ್ರದಲ್ಲಿ 1,650 ರೂ. ಇದೆ.

**ಶ್ರೀ ಉಮೇಶ್ ವಿ. ಕತ್ತಿ:** ನಾನು ಇಷ್ಟೇ ಹೇಳುವುದು. ಎರಡೂ ಕಡೆಗಳಲ್ಲೂ ಮುಕ್ತವಾಗಿಡೋಣ. ಅಲ್ಲಿಂದ ಕಬ್ಬು ಬರುವುದಿದ್ದರೆ ತೆಗೆದುಕೊಳ್ಳೋಣ. ಅಲ್ಲಿಗೆ ಕಬ್ಬು ಕೊಡಬೇಕೆಂದಿದ್ದರೆ ಕೊಡೋಣ. ಅವರು ಈ ವಿಚಾರದಲ್ಲಿ ಬ್ಯಾನ್ ಮಾಡಿದಾಗ ನಾವೂ ಬ್ಯಾನ್ ಮಾಡಲೇಬೇಕು. ಅವರು ಬ್ಯಾನ್ ಮಾಡದಿದ್ದಾಗ ನಾವೂ ಮಾಡಬಾರದು.

**ಶ್ರೀ ಪ್ರಕಾಶ್ ಬಿ. ಹುಕ್ಕೇರಿ:** ಮಹಾರಾಷ್ಟ್ರದಿಂದ ಕರ್ನಾಟಕಕ್ಕೆ ಕಬ್ಬು ಬರುವುದಕ್ಕೆ ನಮ್ಮದೇನೂ ಅಭ್ಯಂತರವಿಲ್ಲ. ಮತ್ತು ತಕರಾರು ಸಹ ಇಲ್ಲ. ಇದರ ಬಗ್ಗೆ ಮಾನ್ಯ ಸಕ್ಕರೆ ಸಚಿವರು ಸ್ಪಷ್ಟವಾಗಿ ಹೇಳಬೇಕು. ಕಬ್ಬಿನ ಮೇಲೆ ಯಾವುದೇ

ರೀತಿಯ ನಿರ್ಬಂಧ ವಿಧಿಸಬಾರದು. ನಮ್ಮ ಜಿಲ್ಲೆಯಲ್ಲಿ ಏನು APMC ಇವೆ, ಆ APMCಗೆ ಬೆಲ್ಲ ಆಗಲಿ, ಶೇಂಗಾ ಆಗಲಿ, ಮೆಣಸಿನಕಾಯಿ ಆಗಲಿ, ರೈತರು ಬೆಳೆದಂತಹ ಪದಾರ್ಥಗಳು ಮಾರುಕಟ್ಟೆಗೆ ಬರುವುದಕ್ಕೆ ಏನು ವ್ಯವಸ್ಥೆ ಮಾಡುತ್ತೀರಿ? ಅದರ ಬಗ್ಗೆ ಹೇಳಬೇಕು.

**ಶ್ರೀ ಸಿ.ಸಿ. ಪಾಟೀಲ್:** ಮಾನ್ಯ ಉಪಾಧ್ಯಕ್ಷರೆ, ಗೌರವಾನ್ವಿತ ಸದಸ್ಯರಾದ ಪ್ರಕಾಶ್ ಹುಕ್ಕೇರಿಯವರು ವ್ಯಕ್ತಪಡಿಸಿದ ಭಾವನೆಗಳು ಸ್ವಾಗತಾರ್ಹ. ಆದರೆ ಹಿಂದೆ ಅವರೇ ಮಾರುಕಟ್ಟೆ ಸಚಿವರಾಗಿದ್ದರು ಆಗ ಏನು ಕ್ರಮ ತೆಗೆದುಕೊಂಡಿದ್ದರು ಎಂದು ಅದರ ಜೊತೆಗೆ ಸ್ವಲ್ಪ ಹೇಳಿದರೆ ಇವತ್ತಿನ ಸಚಿವರಿಗೆ ದಾರಿದೀಪವಾಗುತ್ತದೆ.

**ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ):** ಮಾನ್ಯ ಉಪಾಧ್ಯಕ್ಷರೆ, ನಾನು ಈಗಾಗಲೇ ಮಾತನಾಡತಕ್ಕಂತಹ ಸಂದರ್ಭದಲ್ಲಿ ನಾನು ಹೇಳಿದ್ದೆ. ಈ

**5.00 P.M.**

ಅಧಿವೇಶನದ ಅವಶ್ಯಕತೆ ಇತ್ತಾ ಎನ್ನತಕ್ಕಂತಹ ಪ್ರಶ್ನೆಯನ್ನು ಹಾಕಿದ್ದೆ. ನಾನು ಏಕೆ ಹೇಳುತ್ತೇನೆಂದರೆ, 3–4 ದಿವಸ ಮಾಡಿದ್ದು ಬೆಟ್ಟ ಅಗೆದು ಇಲಿ ಹಿಡಿದ ಹಾಗಾಯಿತು ಅಷ್ಟೆ. ಇದರಿಂದ ಏನೂ ಪ್ರಯೋಜನ ಆಗಲಿಲ್ಲ. ಇಲಿ ಕೂಡ ಸಿಗಲಿಲ್ಲ. ನಾನು ಮೂರು ಪ್ರಶ್ನೆಗಳನ್ನು ಸರ್ಕಾರಕ್ಕೆ ಕೇಳುವುದಕ್ಕೆ ಇಚ್ಛೆ ಪಡುತ್ತೇನೆ. ಇವತ್ತು ಬರದಿಂದ ತತ್ತರಿಸುತ್ತಿದ್ದೇವೆ. ನೀವೇನೋ ಕೃಷಿ ಬಗ್ಗೆ ಬಹಳ ವಿಶೇಷ ಅಧಿವೇಶನ ಕರೆದಿದ್ದೀರಿ. ಸುಮಾರು 86 ತಾಲ್ಲೂಕುಗಳು ಬರದಲ್ಲಿವೆ. ಬರದಲ್ಲಿರುವಂತಹ ರೈತರು ಏನು ಸಾಲ ಮಾಡಿದ್ದಾರೆ. ಕನಿಷ್ಠ ಅದನ್ನು ಮನ್ನಾ ಮಾಡತಕ್ಕಂಥದ್ದನ್ನು ಮಾಡಬೇಕು. ಈ ಅಧಿವೇಶನ ಕರೆದಿರುವ ವಿಶೇಷತೆಯಿಂದಾಗಿ ಅದನ್ನು ಮಾಡಬೇಕು. ಇದು ಒಂದು. ಬಡ್ಡಿಯಾದರೂ ಮನ್ನಾ ಮಾಡತಕ್ಕಂತಹ ವ್ಯವಸ್ಥೆ ಮಾಡಬೇಕು. ಎರಡನೆಯದಾಗಿ ಪ್ರಧಾನ ಮಂತ್ರಿಗಳೂ ಕೂಡ ರಾಜ್ಯ ಸರ್ಕಾರಗಳಿಗೆ ಹೇಳಿದ್ದಾರೆ. ಆಹಾರ ಉತ್ಪಾದನೆ

ಬಹಳ ಕುಂಠಿತವಾಗುತ್ತದೆ. ಅದನ್ನು ಜಾಸ್ತಿ ಮಾಡುವುದಕ್ಕೋಸ್ಕರ ನೀವು ಸಬ್ಸಿಡಿ ದರದಲ್ಲಿ ಡೀಸೆಲ್ ಕೊಡಿ ರೈತರಿಗೆ ಸರಿಯಾದ ಕರೆಂಟ್ ಕೊಡಿ, ಎನ್ನತಕ್ಕಂತಹ ವಿಚಾರವನ್ನು ಹೇಳಿದ್ದಾರೆ. ನಮ್ಮ ಮಾನ್ಯ ವಿದ್ಯುಚ್ಛಕ್ತಿ ಮಂತ್ರಿಗಳಿದ್ದಾರೆ. ಈ ಮಳೆಗಾಲ ಮುಗಿಯುವವರೆಗೆ ವ್ಯವಸಾಯಕ್ಕೆ ಬಹಳ ಅವಶ್ಯಕವಾಗಿರುವ ವಿದ್ಯುತ್ತನ್ನು ಕನಿಷ್ಠ 10 ಗಂಟೆ ಪ್ರತಿನಿತ್ಯ ಕರೆಂಟ್ ಕೊಡತಕ್ಕಂತಹ ವ್ಯವಸ್ಥೆಯನ್ನು ತಾವು ಮಾಡುತ್ತೀರಾ ಎಂದು ದಯಮಾಡಿ ಸದನಕ್ಕೆ ತಿಳಿಸಬೇಕು. ಮೂರನೆಯದಾಗಿ ಶೌಚಾಲಯದ ಬಗ್ಗೆ ಮಾತನಾಡಿದೆವು. ನಮ್ಮ ಸಚಿವರು ಮಹಿಳೆಯರಿದ್ದಾರೆ. ಮಹಿಳೆಯರ ಪಾಡೇನು ಎಂದು ಅವರಿಗೆ ಗೊತ್ತಿದೆ. 2,5000 ರೂ.ಗಳಲ್ಲಿ ಶೌಚಾಲಯ ಕಟ್ಟಲಿಕ್ಕೆ ಸಾಧ್ಯವಿಲ್ಲ. ಇವತ್ತು ಸಿಮೆಂಟ್ ಹಾಗೂ ಶೀಟುಗಳ ಬೆಲೆಗಳು ಜಾಸ್ತಿಯಾಗಿರುವುದರಿಂದ 5,000 ರೂ.ಗಳನ್ನು ಕೊಡಬೇಕು. Compulsory ಶೌಚಾಲಯಗಳನ್ನು ನಿರ್ಮಾಣ ಮಾಡುವುದಕ್ಕೆ ಸರ್ಕಾರ ಏನಾದರೂ ಮನಸ್ಸು ಮಾಡುತ್ತದಾ? ಈ ಮೂರು ವಿಷಯಗಳಿಗೆ ಉತ್ತರ ಕೊಡಬೇಕೆಂದು ತಮ್ಮ ಮುಖಾಂತರ ಒತ್ತಾಯ ಮಾಡಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಬಿ. ರಮಾನಾಥ ರೈ (ಬಂಟ್ವಾಳ):** ಮಾನ್ಯ ಉಪಾಧ್ಯಕ್ಷರೆ, ಕೃಷಿ ಮತ್ತು ಗ್ರಾಮೀಣಾಭಿವೃದ್ಧಿಯ ಬಗ್ಗೆ ವಿಶೇಷವಾದ ಸದನದನ್ನು ಕರೆದು, ವಿಶಾಲವಾದ ಚರ್ಚೆ ಆಗಿ ಉತ್ತಮವಾದ ಫಲಿತಾಂಶ ಬರುತ್ತದೆ ಎಂದು ನಿರೀಕ್ಷೆ ಇತ್ತು. ಯಾವುದೇ ಉತ್ತರದಾಯಿತ್ವ ಇಲ್ಲದ ಉತ್ತರವನ್ನು ಕೊಟ್ಟು ಕಣ್ಣೊರೆಸುವಂತಹ ಕೆಲಸವನ್ನು ಮಾಡಿದ್ದಾರೆ. ಬಹು ಮುಖ್ಯವಾಗಿ ಗ್ರಾಮದ ಅಭಿವೃದ್ಧಿ; ದೇಶದ ಅಭಿವೃದ್ಧಿ ಎಂದರೆ ಗ್ರಾಮ ಅಭಿವೃದ್ಧಿ ಆದರೆ ದೇಶ ಅಭಿವೃದ್ಧಿ ಆಗುತ್ತದೆ. ಮೂಲಭೂತವಾದ ಕೆಲವು ವಿಷಯಗಳು ಗ್ರಾಮೀಣಾಭಿವೃದ್ಧಿ ಬಗ್ಗೆ ನಾವು ಮಾತನಾಡಬೇಕೆಂದರೆ, ಪಂಚಾಯತ್ ವ್ಯವಸ್ಥೆ ಪ್ರಾರಂಭವಾದಾಗ ಒಂದು ಲಕ್ಷ ರೂ. ಅನುದಾನ ಇಟ್ಟು ಪ್ರಾರಂಭ ಮಾಡಿದರು. ಅದು ಎರಡು ಲಕ್ಷ, ಮೂರು ಲಕ್ಷ, ಆಗಿ ಆರು ಲಕ್ಷ ರೂ.ಗೆ ಬಂದು ನಿಂತಿದೆ. ಆಗ ಪ್ರಾರಂಭವಾದ ಒಂದು ಲಕ್ಷ ರೂ. ಅನುದಾನ ನನ್ನ ದೃಷ್ಟಿಯಲ್ಲಿ ಇವತ್ತಿಗೆ 10 ರಿಂದ 15 ಲಕ್ಷ ರೂ. ಗಳನ್ನಾದರೂ ಕೊಡಬೇಕು. ಬಹುಶಃ ಕೆಲವು ಪಂಚಾಯತಿಗಳಲ್ಲಿ ಅನುದಾನ

ಮತ್ತು ಸಂಪನ್ಮೂಲ ಎರಡನ್ನೂ ಒಟ್ಟಿಗೆ ಸೇರಿಸಿದರೆ ವಿದ್ಯುತ್ ಬಿಲ್ಲನ್ನು ಕಟ್ಟುವುದಕ್ಕೆ ಸಾಧ್ಯವಾಗುತ್ತಿಲ್ಲ. ನಮ್ಮ ಪಂಚಾಯಿತಿಗಳಲ್ಲಿ ತಿಂಗಳಿಗೆ 30,000 ರೂ. ವಿದ್ಯುತ್ ಬಿಲ್ಲನ್ನು ಕಟ್ಟಬೇಕು. ಸಂಪನ್ಮೂಲ ಹಾಗೂ ಅನುದಾನ ಒಟ್ಟಿಗೆ ಸೇರಿಸಿದರೂ ಕೂಡ ಅವರ ಕರೆಂಟ್ ಬಿಲ್ಲನ್ನು ಕಟ್ಟುವುದಕ್ಕಾಗುತ್ತಿಲ್ಲ. ಇದರ ಬಗ್ಗೆ ಬಹಳ ಚರ್ಚೆ ನಡೆದಾಗ ಪಂಚಾಯಿತಿಗಳಿಗೆ ಹೆಚ್ಚಿನ ಅನುದಾನ ಕೊಡುತ್ತೇನೆಂದು ಹೇಳುತ್ತಾರೆಂದು ನಾನು ತಿಳಿದುಕೊಂಡಿದ್ದೆ. ಅದರ ಬಗ್ಗೆ ಪ್ರಸ್ತಾಪ ಇಲ್ಲ. ಕುಡಿಯುವ ನೀರಿಗೆ ವಿದ್ಯುತ್ ಬಿಲ್ಲನ್ನು ಕಟ್ಟುವ ಹಣ ಇಲ್ಲ. ಎಲ್ಲಾ ಜಿಲ್ಲಾ ಪಂಚಾಯಿತಿಗಳಿಗೆ ಸಾಲ ಇದೆ. ಒಂದು ಪಂಚಾಯಿತಿಗೆ ಇಂತಿಷ್ಟು ಕರೆಂಟ್ ಧರ್ಮಾರ್ಥವಾಗಿ ಕೊಡತಕ್ಕಂತಹ ವ್ಯವಸ್ಥೆ ಮಾಡಿ. ಸಂಪೂರ್ಣವಾಗಿ ಕೊಡಿ ಎಂದು ನಾನು ಹೇಳುವುದಿಲ್ಲ. ಇಂತಿಷ್ಟು ಯೂನಿಟ್ ಕೊಡಿ ನಂತರ ಬೇಕಾದರೆ ಪಂಚಾಯಿತಿಯವರು ಕಟ್ಟಿಕೊಳ್ಳಲಿ. ಬಹುಶಃ ಇದು ಹೇಳಿದ್ದರೆ ಅದಕ್ಕೆ ಒಳ್ಳೆಯ ಫಲಿತಾಂಶ ಸಿಗುತ್ತಿತ್ತು ಎಂದು ನನ್ನ ಅನಿಸಿಕೆ. ಬಹುಶಃ ಪಂಚಾಯಿತಿಗಳನ್ನು ಬಲಿ ತೆಗೆದುಕೊಳ್ಳಬೇಕು. ಪಂಚಾಯಿತಿ ಅಧಿಕಾರವನ್ನು ಮೊಟಕುಗೊಳಿಸಬೇಕು ಎನ್ನುವಂತಹ ಪ್ರಯತ್ನ ನಡೆಯುತ್ತಿದೆ ಎಂದು ವ್ಯಾಪಕವಾಗಿ ಚರ್ಚೆ ನಡೆಯುತ್ತಿದೆ. ಒಂದೇ ಒಂದು ಮಾತು ಯಥಾವತ್ತಾಗಿ ಬೇಲೂರು ಘೋಷಣೆಯನ್ನು ಅನುಷ್ಠಾನ ಮಾಡುತ್ತೇವೆಂದು ಒಂದೇ ಒಂದು ಮಾತು ಹೇಳಿದ್ದರೆ ಈ ಚರ್ಚೆಗೆ ಶಕ್ತಿ ಬರುತ್ತಿತ್ತು ಎಂದು ನನ್ನ ಅಭಿಪ್ರಾಯ. ಬೇಲೂರು ಘೋಷಣೆಯನ್ನು ಯಥಾವತ್ತಾಗಿ ನಾವು ಅನುಷ್ಠಾನ ಮಾಡುತ್ತೇವೆ ಎಂದು ಹೇಳಬೇಕು. ಬಹುಶಃ ಅದಕ್ಕೆ ವಿಶೇಷವಾದ ಅಧಿಕಾರ ಕೊಡುವ ಒಂದು ಪ್ರಯತ್ನ ನಡೆಯಬೇಕು. ಬಹುಶಃ ಹಂತಹಂತವಾಗಿ ಪಂಚಾಯಿತಿಗಳನ್ನು ದುರ್ಬಲ ಮಾಡತಕ್ಕಂತಹ ಪ್ರಯತ್ನ ಪ್ರತಿಯೊಂದು ಹಂತದಲ್ಲಿ ನಡೆಯುತ್ತಿದೆ. ಕಾಟಾಚಾರಕ್ಕೆ ಗ್ರಾಮಸಭೆಗಳು ಇವೆ. ಪಂಚಾಯಿತಿಗಳಲ್ಲಿ ಒಂದು ಫಲಾನುಭವಿಗಳನ್ನು ಆಯ್ಕೆ ಮಾಡುವುದು ಕೂಡ ಸರಿಯಾಗಿ ಆಗುತ್ತಿಲ್ಲ. ಆಶ್ರಯ ಮನೆಗಳ ಬಗ್ಗೆ ನಾನು ಹೇಳಿದರೆ ಕೆಲವರು ಅಪಾರ್ಥ ಮಾಡಿಕೊಳ್ಳುತ್ತಾರೆ. ಪಂಚಾಯಿತಿಗಳನ್ನು ದುರ್ಬಲ ಮಾಡತಕ್ಕಂತಹ ಪಂಚಾಯಿತಿಗಳನ್ನು ಬಹಳಷ್ಟು ಶಕ್ತಿಹೀನ ಮಾಡತಕ್ಕಂತಹ ಪ್ರಯತ್ನಗಳು

ಹಂತಹಂತವಾಗಿ ನಡೆಯುತ್ತಾ ಬಂದವು. ಮಾನ್ಯ ಎಸ್.ಎಂ. ಕೃಷ್ಣರವರ ಕಾಲದ ಬೇಲೂರು ಘೋಷಣೆ ಯಥಾವತ್ತಾಗಿ ಜಾರಿ ಮಾಡಿದ್ದರೆ ಗ್ರಾಮೀಣಾಭಿವೃದ್ಧಿ ಬಗ್ಗೆ ಚರ್ಚೆ ಮಾಡುವುದಕ್ಕೆ ಹೆಚ್ಚಿನ ಶಕ್ತಿ ಬರುತ್ತಿತ್ತು ಎನ್ನುವುದು ನನ್ನ ಅಭಿಪ್ರಾಯ. ಇದನ್ನು ಮಾಡಲಿಕ್ಕೆ ಪ್ರಯತ್ನ ಮಾಡಬೇಕು. ಅನುದಾನ ಜಾಸ್ತಿ ಮಾಡಬೇಕು. ಕುಡಿಯುವ ನೀರಿನ ವಿದ್ಯುತ್ ಬಿಲ್ಲನ್ನು ಬಹುಶಃ ಇಂತಿಷ್ಟು ಯೂನಿಟನ್ನು ಸರ್ಕಾರ ಭರಿಸುವ ಹಾಗೆ ಮಾಡಿದರೆ ಪ್ರಯೋಜನವಾಗುತ್ತಿತ್ತು ಎಂದು ನನ್ನ ಅಭಿಪ್ರಾಯ.

**ಶ್ರೀ ಕೆ.ಎಂ. ಶಿವಲಿಂಗೇಗೌಡ (ಅರಸೀಕೆರೆ):** ಮಾನ್ಯ ಉಪಾಧ್ಯಕ್ಷರೆ, ಮೂರು ದಿವಸಗಳ ಕಾಲ ನಡೆದಂತಹ ಗ್ರಾಮೀಣ ಮತ್ತು ಕೃಷಿ ಅಭಿವೃದ್ಧಿ ಬಗ್ಗೆ ವಿರೋಧ ಪಕ್ಷದವರಿಂದ ಮತ್ತು ಆಡಳಿತ ಪಕ್ಷದವರಿಂದ ಒಳ್ಳೆಯ ಸಲಹೆ ಸೂಚನೆಗಳನ್ನು ಕೊಟ್ಟಿದ್ದೆವು. ಅದಕ್ಕೆ ಸಭಾ ನಾಯಕರು ಉತ್ತರವನ್ನು ಕೊಟ್ಟಿದ್ದಾರೆ. ಅವರು ಉತ್ತರ ಕೊಡತಕ್ಕಂತಹ ಸಂದರ್ಭದಲ್ಲಿ ನಾವು ಏನು ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದೆವು ಅದರ ಬಗ್ಗೆ ಮಾತನಾಡಿದ್ದಾರೆ. ಸ್ತ್ರೀಶಕ್ತಿ ಸಂಘಗಳ ಬಗ್ಗೆ ನಾವು ಮಾತನಾಡಿದ್ದೆವು. ಅವರಿಗೆ ಸಹಾಯಧನ ಸೌಲಭ್ಯಗಳನ್ನು ವಿಸ್ತರಿಸುತ್ತೇವೆಂದು ಹೇಳಿದ್ದಾರೆ. ಆದರೆ ಉಪ ಕಸುಬಿನಲ್ಲಿ ಹೈನುಗಾರಿಕೆಯಲ್ಲಿ ಸ್ತ್ರೀಶಕ್ತಿ ಸಂಘವನ್ನು ತೊಡಗಿಸಬೇಕೆಂಬ ಅಭಿಪ್ರಾಯವನ್ನು ಹೇಳಿದ್ದೆವು ಅದರ ಬಗ್ಗೆ ಸ್ಪಷ್ಟವಾದ ಉತ್ತರ ಇಲ್ಲ. ಎರಡನೆಯದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದ ಫುಡ್ ಅನ್ನು ತಯಾರು ಮಾಡಬೇಕಾದರೆ, ಸ್ತ್ರೀಶಕ್ತಿ ಸಂಘದವರನ್ನು ಉಪಯೋಗಿಸಿಕೊಳ್ಳಬೇಕೆಂದು Supreme Court Order ಇದೆ. ಆದರೆ ಈಗ ಕೇವಲ 11 ಜನರಿಗೆ ಮಾತ್ರ ಎರಡು ತಾಲ್ಲೂಕುಗಳು ಸೇರಿ ಒಂದು ಘಟಕ ಮಾಡಿ, ಅವರ ಅಧೀನದಲ್ಲಿ ಕೆಲಸ ಮಾಡಬೇಕು. ಯಾರು ಮದ್ರಾಸ್ ಕಂಪನಿಯವರು ತೆಗೆದುಕೊಂಡಿದ್ದಾರೆ. ಅವರ ಅಧೀನದಲ್ಲಿ ಸ್ತ್ರೀಶಕ್ತಿ ಸಂಘದವರು ಕೆಲಸ ಮಾಡಬೇಕೆಂದು ಹೇಳಿ, ಕೇವಲ 2,500 ರೂ. ಸಂಬಳಕ್ಕೆ ನೀವು ಹೋಗಿ ಕೆಲಸ ಮಾಡಿ ಎಂದು ಹೇಳಿ ಪುನಃ ಇವರನ್ನು ತಂದು ಜೀತದಾಳುಗಳಾಗಿ ಮಾಡಿದ್ದಾರೆ. ಇದು ತಪ್ಪು. ಇವರಿಗೆ ಕೊಡುವಂತಹ ಬಂಡವಾಳವನ್ನು ಸರ್ಕಾರ ಸ್ತ್ರೀಶಕ್ತಿ ಸಂಘಗಳಲ್ಲಿ

ಹೂಡಿ, ಸ್ತ್ರೀಶಕ್ತಿ ಸಂಘದವರೇ ಆ ಫುಡ್ ಅನ್ನು ತಯಾರು ಮಾಡಿ, ಆ ಮಕ್ಕಳಿಗೆ ಕೊಡುವಂತಹ ವ್ಯವಸ್ಥೆ ಮಾಡಿದರೆ, ನಿಜವಾಗಿಯೂ ಅವರ ಆರ್ಥಿಕ ಪರಿಸ್ಥಿತಿಯೂ ಸುಧಾರಿಸುತ್ತದೆ. ಉತ್ತಮ ಗುಣಮಟ್ಟದ ಆಹಾರ ಸಿಗುತ್ತದೆ. ಇದನ್ನು ಇಂತಹ ದೊಡ್ಡ ದೊಡ್ಡ ಮಲ್ಟಿ-ನ್ಯಾಷನಲ್ ಕಂಪನಿಗಳಿಗೆ ಕೊಟ್ಟು, ಗ್ರಾಮೀಣ ಬದುಕನ್ನು ಹಾಳು ಮಾಡಬೇಡಿ. ಇದರ ಬಗ್ಗೆ ಮಾನ್ಯ ಸಚಿವರಿಂದ ಸ್ಪಷ್ಟವಾದ ಉತ್ತರವನ್ನು ಬಯಸುತ್ತೇನೆ. ಬೆಳೆ ವಿಮೆ ಬಗ್ಗೆ ಪ್ರಸ್ತಾಪ ಮಾಡಿದ್ದೆ. ಅದರ ಬಗ್ಗೆಯೂ ಪ್ರಸ್ತಾಪ ಮಾಡಿದ್ದಾರೆ. ಬೆಳೆ ವಿಮೆ ಬಗ್ಗೆ ಪ್ರಸ್ತಾಪ ಮಾಡತಕ್ಕಂತಹ ಸಂದರ್ಭದಲ್ಲಿ ನೀವು ಆ ಗ್ರಾಮ ಪಂಚಾಯಿತಿಯ ಹೋಬಳಿ ಮಟ್ಟದ ಏನು ಮಾಪನ ಇದೆ, ಆ ಮಾಪನವನ್ನು ಆಧರಿಸಿ ನಾವು ಬೆಳೆ ವಿಮೆಗೆ ಆದೇಶವನ್ನು ಕೊಡುತ್ತೇವೆ ಎನ್ನತಕ್ಕಂತಹ ಮಾತನ್ನು ಏನು ಹೇಳಿದ್ದೀರಿ, ಅದು ಸರಿಯಲ್ಲ. ನೀವು ಬೆಳೆ ವಿಮೆ ಮಾಡುವ ಸಂದರ್ಭದಲ್ಲಿ ಮಳೆ ಬಂದಿರುತ್ತದೆ. ಒಂದು ವೇಳೆ ಮಳೆ ಬಾರದೆ ಇದ್ದು, ನೀರಾವರಿ ಮುಖಾಂತರ ಬೆಳೆಯನ್ನು ಬೆಳೆದಿರುತ್ತಾರೆ. ಆದರೆ ವಿದ್ಯುಚ್ಛಕ್ತಿ ಸಿಗುವುದಿಲ್ಲ. ಆಗ ಬೆಳೆ ನಾಶವಾಗುತ್ತದೆ. ಅದಕ್ಕೆ ಬೆಳೆ ಸಂಪೂರ್ಣವಾಗಿ ನಾಶವಾಗುವ ಸಂದರ್ಭದಲ್ಲಿ ಹಾಳಾಗಿರುವುದನ್ನು ಗುರುತಿಸಿ ಬೆಳೆ ವಿಮೆ ಕೊಡಬೇಕು. ಇದು ಒಂದು ಸರ್ಕಾರಕ್ಕೆ ನಾನು clarification ಕೇಳುತ್ತೇನೆ. ಮತ್ತೊಂದು ರಾಜೀವ್ ಗಾಂಧಿ ಗ್ರಾಮೀಣ ವಿದ್ಯುಚ್ಛಕ್ತಿಯಿಂದ ಬಹಳಷ್ಟು ಬಡವರ ಬದುಕಿಗೆ ಬೆಳಕು ಬಂದಿತ್ತು. ನಮ್ಮ ಹಿಂದಿನ ವಿದ್ಯುಚ್ಛಕ್ತಿ ಮಂತ್ರಿಗಳಾದ ರೇವಣ್ಣರವರು ಕ್ರಾಂತಿಕಾರಿ ಬದಲಾವಣೆಯನ್ನು ಮಾಡಿದ್ದರು. ಅದರ ಬಗ್ಗೆ ಇದರಲ್ಲಿ ಪ್ರಸ್ತಾಪ ಇಲ್ಲ. ಅಲ್ಲಲ್ಲಿ ಲೈನ್ ಎಳೆದಿದ್ದಾರೆ, ಕಂಬ ಹಾಕಿದ್ದಾರೆ, ಹಾಗೆಯೇ ನಿಲ್ಲಿಸಿದ್ದಾರೆ, ದಯಮಾಡಿ ಅದಕ್ಕೆ ಚಾಲನೆ ಕೊಟ್ಟು, ಗ್ರಾಮೀಣ ಪ್ರದೇಶದಲ್ಲಿ ಯಾರು ಅಸಹಾಯಕರಾಗಿ ತನ್ನ ಜೀವನದಲ್ಲಿ ವಿದ್ಯುಚ್ಛಕ್ತಿಯನ್ನು ನೋಡಲಿಕ್ಕೆ ಸಾಧ್ಯವಿಲ್ಲ ಎನ್ನತಕ್ಕಂತಹ ಮಟ್ಟದಲ್ಲಿ ಇದ್ದಂತಹ ಗ್ರಾಮೀಣ ಬದುಕಿನ ಜನತೆಗೆ ದಯಮಾಡಿ ಅವರಿಗೆ ಆಶ್ರಯ ಕೊಡಬೇಕು. ಈ ನಿಟ್ಟಿನಲ್ಲಿ ಅದಕ್ಕೆ ಸರ್ಕಾರ ಉತ್ತರವನ್ನು ಕೊಡಬೇಕು. ಮೂರನೆಯದಾಗಿ ಮತ್ತು ಕೊನೆಯದಾಗಿ, ಬೀಜಗಳ ಬಗ್ಗೆ ಹೇಳುತ್ತೇನೆ. ಬೀಜಗಳನ್ನು ತಯಾರು ಮಾಡುವುದಕ್ಕೆ Multi-National Companyಗಳಿಗೆ

ಬಿಡಬಾರದು. ಇಲ್ಲಿ ನಾವು ಕೃಷಿ ವಿಶ್ವವಿದ್ಯಾನಿಲಯಗಳಿಂದ ಮಾಡುತ್ತೇವೆಂದು ಹೇಳಿದ್ದೀರಿ. ಅವುಗಳು ಬೀಜಗಳನ್ನು ತಯಾರು ಮಾಡುವುದಕ್ಕೆ ಪ್ರೋತ್ಸಾಹ ಕೊಡುತ್ತೇವೆಂದು ಹೇಳಿದ್ದೀರಿ. Multi-National Companyಗಳನ್ನು ನಾವು ಇನ್ನು ಮುಂದೆ ಇಟ್ಟುಕೊಳ್ಳುವುದಿಲ್ಲ. ಅವರಿಗೆ ಯಾವುದೇ ರೀತಿಯಾದಂತಹ ಪ್ರಾಧಾನ್ಯತೆಯನ್ನು ಕೊಡುವುದಿಲ್ಲ. ನಿಜವಾಗಿಯೂ ರೈತರಿಂದಲೇ ಬೀಜಗಳನ್ನು ಉತ್ಪತ್ತಿ ಮಾಡಿ, ರೈತರಿಗೆ ಹಂಚಿಕೆ ಮಾಡುತ್ತೇವೆ ಎಂದು ಹೇಳುವಂತಹ ಬದ್ಧತೆ ಸರ್ಕಾರಕ್ಕೆ ಇದೆಯೇ ಅಥವಾ ಇಲ್ಲವೇ ಎಂಬುದಕ್ಕೆ ಸರ್ಕಾರ ದಯಮಾಡಿ ಉತ್ತರವನ್ನು ಕೊಡಬೇಕು. ಸಿಬ್ಬಂದಿ ಬಗ್ಗೆ ಸಹ ನಾನು ಹೇಳಿದ್ದೆ. ಸಿಬ್ಬಂದಿಗಳು ಹೆಚ್ಚು ಇಲ್ಲ. ತಾಲ್ಲೂಕಿಗೆ ಎರಡು ಜನ ಮಾತ್ರ ಇದ್ದಾರೆ. ಕೃಷಿ ಇಲಾಖೆಗೆ ಹೋದರೆ ಕಸ ಹೊಡೆಯುವ peonಗೂ ಸಹ ಬರವಿದೆ. ಅಂತಹ ಒಂದು ಪರಿಸ್ಥಿತಿ ಇದೆ. ಹಿಂದೆ ಕೃಷಿ ಸಹಾಯಕರಿದ್ದರು. ಮತ್ತೊಮ್ಮೆ ಅವರು ಇರುವುದು ಒಳ್ಳೆಯದು, ಅವರನ್ನು ಇಡಬೇಕು. ಅವರು ಹಿಂದೆ ಇದ್ದರು. ಆ ಖಾಲಿ ಇರುವ ಹುದ್ದೆಗಳನ್ನು ತುಂಬುವುದಕ್ಕೆ ಸರ್ಕಾರ ಬದ್ಧವಿದೆಯೇ ಎನ್ನತಕ್ಕಂಥ ಪ್ರಶ್ನೆಯನ್ನು ಈ ಸಂದರ್ಭದಲ್ಲಿ ಸರ್ಕಾರಕ್ಕೆ ಕೇಳಬಯಸುತ್ತೇನೆ. ಅದರ ಜೊತೆಗೆ, ಈ ರಸ್ತೆಗಳ ಬಗ್ಗೆ ನಾನು ಈಗಾಗಲೇ ಹೇಳಿದ್ದೇನೆ. ನೀವು ಆಗಲೇ 64 ಸಾವಿರ ಕಿಲೋ ಮೀಟರ್ ರಸ್ತೆಗಳನ್ನು ಗ್ರಾಮೀಣ ಪ್ರದೇಶಕ್ಕೆ ಎಲ್ಲಾ ಕಡೆ ಕೊಟ್ಟಾಗಿದೆ ಎಂದು ಹೇಳಿದ್ದೀರಿ.

**ಉಪಾಧ್ಯಕ್ಷರು:** Clarification ಇದ್ದರೆ ಕೇಳಿ. ಅದನ್ನು ಬಿಟ್ಟು ಮತ್ತೊಂದು ಭಾಷಣ ಮಾಡಲಿಕ್ಕೆ ನೀವು ಶುರು ಮಾಡಿದ್ದೀರಿ.

**ಶ್ರೀ ಕೆ.ಎಂ. ಶಿವಲಿಂಗೇಗೌಡ:** ಆ ರಸ್ತೆಗಳನ್ನು ಮಾಡತಕ್ಕಂಥ ಸಂದರ್ಭದಲ್ಲಿ ಕರ್ನಾಟಕ ರಾಜ್ಯಕ್ಕೆ ಮುಂದೆ ಬರತಕ್ಕವರಿಗೆ ಆರ್ಥಿಕ ಹೊರೆ ಬರುವ ಬಗ್ಗೆ ಯೋಚನೆ ಮಾಡಿ ಸಮರ್ಪಕವಾದಂತಹ ಉತ್ತರ ಕೊಡಿ. ಇದನ್ನು ಜನರ ಅಭಿಪ್ರಾಯಕ್ಕೆ ಬಿಟ್ಟು, ಜನತೆಯಿಂದ ಅದರ ಬಗ್ಗೆ ಉತ್ತಮವಾದಂತಹ ಪ್ರತಿಕ್ರಿಯೆಯನ್ನು ಬಯಸಿದ ಮೇಲೆ, ಈ ಕಾರ್ಯಕ್ರಮವನ್ನು ಜಾರಿಗೆ ತರಬೇಕು. ಏಕಾಏಕಿಯಾಗಿ ಕಾರ್ಯಕ್ರಮವನ್ನು

ಜಾರಿಗೆ ತರಬಾರದೆಂದು ನಾನು ಈ ಸಂದರ್ಭದಲ್ಲಿ ಸಲಹೆ ಮತ್ತು ಉತ್ತರವನ್ನು ಕೇಳಲಿಕ್ಕೆ ಬಯಸುತ್ತೇನೆ.

**ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ (ಗುಂಡ್ಲುಪೇಟೆ):** ಮಾನ್ಯ ಉಪಾಧ್ಯಕ್ಷರೆ, ಕಳೆದ ಮೂರು ದಿನಗಳಿಂದ ನಡೆದಂತಹ ವಿಶೇಷ ಅಧಿವೇಶನದ ಚರ್ಚೆ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಉತ್ತರವನ್ನು ಕೇಳಿದ ನಂತರ ಬಹಳ ನಿರಾಸೆ ಆಗಿದೆ. ಏಕೆಂದರೆ, ಪತ್ರಿಕೆಗಳಲ್ಲಿ, ಜನರಲ್ಲಿ, ಸಾರ್ವಜನಿಕರಲ್ಲಿ, ಶಾಸಕರಲ್ಲಿ, ಜನಪ್ರತಿನಿಧಿಗಳಲ್ಲಿ ಎಲ್ಲರಲ್ಲೂ ಬಹಳ ವಿಶೇಷವಾದಂತಹ ಆಸಕ್ತಿ ಇತ್ತು. ಈ ವಿಶೇಷ ಅಧಿವೇಶನದಲ್ಲಿ ಬಹಳಷ್ಟು ವಿಚಾರಗಳ ಬಗ್ಗೆ ಸರ್ಕಾರ ಪ್ರಕಟಣೆ ಮಾಡುತ್ತದೆಂದು ನಿರೀಕ್ಷಿಸಲಾಗಿತ್ತು. ರಾಜ್ಯ ಸರ್ಕಾರಕ್ಕೆ ರೈತರ ಬಗ್ಗೆ ಕೃಷಿಕರ ಬಗ್ಗೆ ಮತ್ತು ಗ್ರಾಮೀಣಾಭಿವೃದ್ಧಿ ಬಗ್ಗೆ ಇರುವ ಕಳಕಳಿ ಉತ್ತರದಲ್ಲಿ ಬಿಂಬಿತವಾಗುತ್ತದೆ ಎಂಬ ನಿರೀಕ್ಷೆ ಇತ್ತು. ಇವತ್ತು ಏನಾಗಿದೆ ಎಂದರೆ, ಕನಿಷ್ಠ ಪಕ್ಷ ನಾವು ಶಾಸಕರುಗಳು ಇಲ್ಲಿ ಏನೊಂದು ಸಲಹೆ ಮತ್ತು ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದೆವೋ, ಆ ವ್ಯಕ್ತಪಡಿಸಿದಂತಹ ಅಭಿಪ್ರಾಯಗಳಿಗೆ ಪೂರಕವಾಗಿ ಸರ್ಕಾರದ ಅಭಿಪ್ರಾಯ ಏನಿದೆ ಎನ್ನುವುದನ್ನಾದರೂ ಒಂದೊಂದು ಮಾತಿನಲ್ಲಿ ತಿಳಿಸಿದ್ದರೆ, ಈ ಚರ್ಚೆಗೊಂದು ಮಹತ್ವ ಬರುತ್ತಿತ್ತು. ಅಧಿವೇಶನಕ್ಕೊಂದು ಮಹತ್ವ ಬರುತ್ತಿತ್ತು. ಆದರೆ ಅವರು ಕೊಟ್ಟಂತಹ ಪುಸ್ತಕದಲ್ಲಿ ಅಂತಹ ಯಾವುದೇ ವಿಚಾರಗಳಿಲ್ಲ. ಮಾನ್ಯ ಮುಖ್ಯಮಂತ್ರಿಗಳ ಪ್ರಾಸ್ತಾವಿಕ ನುಡಿಗಳಿಗೂ ಮತ್ತು ಅವರ ಭವಿಷ್ಯದ ಹೆಜ್ಜೆಗಳಿಗೂ ಹಾಗೂ ನಾವು ಮಾಡಿದಂತಹ ಚರ್ಚೆಗೂ ಒಂದಕ್ಕೊಂದಕ್ಕೂ ಹೋಲಿಕೆ ಇಲ್ಲದಿರುವಂತಹ ರೀತಿಯಲ್ಲಿ ಈ ಸದನದಲ್ಲಿ ಚರ್ಚೆ ನಡೆದಿದೆ ಎಂದು ನಾನಾದರೂ ಹೇಳಲಿಕ್ಕೆ ಬಯಸುತ್ತೇನೆ. ಒಂದೊಂದು ರೀತಿಯಲ್ಲಿ 'ಹೊಳೆಯಲ್ಲಿ ಹುಣಸೆಹಣ್ಣು ತೊಳೆದಂತೆ' ಎಂದು ನಮ್ಮ ಕಡೆಯಲ್ಲಿ ಮಾತನಾಡುತ್ತಾರೆ. ಆ ರೀತಿಯಲ್ಲಿ ಈ ಒಂದು ಮೂರು ದಿನದ ಕಲಾಪ ನಡೆದಿದೆ ಎಂದು ನಾನು ಹೇಳಬೇಕಾಗುತ್ತದೆ. ವಿಶೇಷವಾಗಿ ನಾನು ಮೂರು ಇಲಾಖೆಗಳಿಗೆ ಸಂಬಂಧಪಟ್ಟಂತೆ ಕೆಲವು ನಿರ್ದಿಷ್ಟವಾದ ನನ್ನ ಅನುಭವದ ಸಲಹೆಗಳನ್ನು ಸದನದ ಮುಖಾಂತರ ತಿಳಿಸಲಿಕ್ಕೆ ಪ್ರಯತ್ನ ಮಾಡಿದ್ದೆ. ಇವತ್ತು ಕೇಂದ್ರದ ಪರಿಸರ ಇಲಾಖೆ ಫ್ಲೋರೈಡ್ ಕಂಟೆಂಟ್

ತೊಂದರೆ ಇರುವಂತಹ ಸುಮಾರು 20 ಜಿಲ್ಲೆಗಳು ನಮ್ಮ ರಾಜ್ಯದಲ್ಲಿವೆ ಎಂದು ಘೋಷಣೆ ಮಾಡಿದೆ. 10 ವರ್ಷದೊಳಗಿರತಕ್ಕಂಥ ಮಕ್ಕಳಿಗೆ ಇದರಿಂದ ತೊಂದರೆಯಾಗುತ್ತಿದೆ ಎನ್ನುವಂತಹ ವಿಚಾರವನ್ನೂ ಕೂಡ ಆ ವರದಿಯಲ್ಲಿ ಹೇಳಿದ್ದಾರೆ. ಹಾಗಾಗಿ ಇನ್ನೂ 10 ವರ್ಷಗಳ ನಂತರ ನಾವು ಕೊಳವೆ ಬಾವಿಗಳ ಮುಖಾಂತರ ಕುಡಿಯುವ ನೀರನ್ನು ಪಡೆಯುವುದೂ ಕೂಡ ದುರ್ಲಭ ಆಗುವಂತಹ ಸನ್ನಿವೇಶ ನಿರ್ಮಾಣವಾಗುತ್ತದೆ ಎನ್ನುವಂತಹ ಕಾರಣಕ್ಕಾಗಿ ನದಿ ಮೂಲದಿಂದ ಎಲ್ಲಾ ಗ್ರಾಮಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡುವುದಕ್ಕೆ ಈಗಿನಿಂದಲೇ ಯೋಜನೆಯೊಂದನ್ನು ರೂಪಿಸಬೇಕು ಮತ್ತು ಈಗಾಗಲೇ ಸಿದ್ಧಗೊಂಡಿರುವಂತಹ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವ ರೀತಿಯಲ್ಲಿ ಒಂದು ನಿರ್ದಿಷ್ಟವಾದ ಪ್ರಕಟಣೆಯನ್ನು ಸರ್ಕಾರ ಮಾಡಬೇಕು. ಈ ರೀತಿಯಾಗಿ ಯಾವ್ಯಾವ ನದಿ ಮೂಲದ ಯೋಜನೆಗಳಿವೆಯೋ, ಅವುಗಳ ನಿರ್ವಹಣೆಗಾಗಿ ಪುಸ್ತಕ ಮಂಡಳಿಯೊಂದನ್ನು ರಚನೆ ಮಾಡಬೇಕು. ಯಾವ ರೀತಿ Urban Water Supply Borad ಇದೆಯೋ, ಅದೇ ರೀತಿಯಲ್ಲಿ Rural Water Supply Board ಎಂದು ನದಿ ಮೂಲಗಳ ಯೋಜನೆಗಳ ನಿರ್ವಹಣೆಗೆ ಮಾಡಬೇಕೆಂದು ಸಲಹೆ ಕೊಟ್ಟಿದ್ದೆ. ಆದರೆ ಉತ್ತರದಲ್ಲಿ 'ಈಗಾಗಲೇ ಸುಮಾರು 850 ಕೋಟಿ ರೂ.ಗಳ ವೆಚ್ಚದ ಬಹು ಗ್ರಾಮ ವಿಶೇಷ ಯೋಜನೆಯನ್ನು ತಯಾರಿಸಿ, ಭಾರತ ಸರ್ಕಾರಕ್ಕೆ ಕಳುಹಿಸಲಾಗಿದೆ. ವಿಶ್ವ ಬ್ಯಾಂಕ್ ನೆರವಿನ ಜಲ ನಿರ್ಮಲ ಯೋಜನೆಯ ವಿಸ್ತರಣೆಗೂ ಸಹ ವಿಶೇಷ ನೆರವನ್ನು ಕೋರಲಾಗಿದೆ. ಕುಡಿಯುವ ನೀರಿನ ಯೋಜನೆಗಳ ಸಮರ್ಪಕ ನಿರ್ವಹಣೆಗೆ ಹೊರಗುತ್ತಿಗೆ ವ್ಯವಸ್ಥೆಯನ್ನು ಜಾರಿಗೆ ತರಲಾಗುವುದು' ಎಂದು ಹೇಳಿದ್ದಾರೆ. ಇದರಲ್ಲಿ ಯಾವುದೇ ಸ್ಪಷ್ಟವಾದ ಉತ್ತರವಿಲ್ಲ. ಇದನ್ನು ಹೇಳಿದರೂ ಒಂದೇ, ಹೇಳದಿದ್ದರೂ ಒಂದೇ. ಇದೆಲ್ಲಾ ಗೊತ್ತಿರುವಂತಹ ವಿಚಾರವೇ ಆಗಿದೆ. ಕೇಂದ್ರದ ನೆರವು ಕೇಳಿರುವುದು, ವಿಶ್ವಬ್ಯಾಂಕ್ ನೆರವು ಕೇಳಿರುವುದು ಇದ್ದದ್ದೇ. ಆದರೆ ರಾಜ್ಯ ಸರ್ಕಾರದ ಬದ್ಧತೆ ಏನು? ಈ ಯೋಜನೆ ಬಗ್ಗೆ ಅವರು ನೆರವು ಕೊಡಲಿ, ನೆರವು ಕೊಡದಿರಲಿ, ನಾವು ಜಾರಿಗೆ ತರುತ್ತೇವೆ ಎನ್ನುವಂತಹ ಸ್ಪಷ್ಟವಾದ ಸಂದೇಶವನ್ನು ಕೊಡಬೇಕಾಗಿತ್ತು ಅಥವಾ ಈ ಯೋಜನೆಗಳನ್ನು ಈ

ವರ್ಷದಲ್ಲಿ ತೆಗೆದುಕೊಂಡು, ಆ 850 ಕೋಟಿ ರೂ.ಗಳಲ್ಲಿ ಉಳಿದಂತಹ ಯೋಜನೆಗಳನ್ನು ನಾವು ಮುಂದಿನ ಸಾಲಿನಲ್ಲಿ ತೆಗೆದುಕೊಳ್ಳುತ್ತೇವೆ ಎಂಬುದನ್ನಾದರೂ ಹೇಳಿದ್ದರೆ, ನಮ್ಮ ಚರ್ಚೆಗೊಂದು ಮಹತ್ವ ಬರುತ್ತಿತ್ತು. ಇನ್ನು ವಸತಿ ವಿಚಾರದಲ್ಲಿ ಸುಮಾರು 1 ಲಕ್ಷ ಮನೆಗಳು ಇವತ್ತು ವಸತಿ ಇಲಾಖೆಯಲ್ಲಿ ವಿವಿಧ ಹಂತಗಳಲ್ಲಿ ಸ್ಥಗಿತಗೊಂಡಿರುವಂತಹ ವಿಚಾರ ಪ್ರಸ್ತಾಪಿಸಿದ್ದೆ. ಇದು ಇರುವ fact. ಸುಮಾರು 1 ಲಕ್ಷ ಮನೆಗಳು ವಿವಿಧ ಹಂತಗಳಲ್ಲಿ ಸ್ಥಗಿತಗೊಂಡು ನಿಂತಿವೆ. ಈಗ ಸರ್ಕಾರ ಹೊಸದಾಗಿ 30 ಸಾವಿರ ರೂ. ಇದ್ದದ್ದನ್ನು 40 ಸಾವಿರ ರೂ.ಗಳಿಗೆ ಏರಿಸಿದೆ. ಇದರಿಂದ ತಕ್ಕಮಟ್ಟಿಗೆ ಹೊಸದಾಗಿ ಕಟ್ಟುವಂತಹ ಮನೆಗಳಿಗೆ ಅನುಕೂಲವಾಗುತ್ತದೆ. ಆದರೆ ಈ ಹಿಂದೆ basement levelನಲ್ಲಿ ಮತ್ತು lintel levelನಲ್ಲಿ ನಿಂತಿರುವ ಸುಮಾರು 1 ಲಕ್ಷ ಮನೆಗಳನ್ನು ಯಾವ ಕಾರಣಕ್ಕೂ ಪೂರ್ಣಗೊಳಿಸಲಿಕ್ಕಾಗುವುದಿಲ್ಲ. ಅವುಗಳನ್ನು ಪೂರ್ಣಗೊಳಿಸುವುದೂ ಇಲ್ಲ. ಸ್ಥಳೀಯವಾಗಿ ನಮ್ಮ ಕ್ಷೇತ್ರಗಳಲ್ಲೇ ಅಂತಹ ಸಾಕಷ್ಟು ಮನೆಗಳು ಐದಾರು ವರ್ಷಗಳಿಂದ spill-over ಪಟ್ಟಿಯಲ್ಲಿ ಸುಮ್ಮನೆ ಬರುತ್ತಿವೆಯೇ ಹೊರತು ಅವುಗಳನ್ನು ಪೂರ್ಣಗೊಳಿಸುವುದಕ್ಕೆ ಅವಕಾಶವಿಲ್ಲ. ಹೊಸ ಮನೆಗಳಿಗೆ 10 ಸಾವಿರ ರೂ.ಗಳನ್ನು ಇಟ್ಟಿರುವ ರೀತಿಯಲ್ಲಿ, ಪ್ರೋತ್ಸಾಹಕರವಾಗಿ 5 ಸಾವಿರ ರೂ.ಗಳನ್ನು ಆ ಮನೆಗಳಿಗಾಗಿ ಕೊಟ್ಟಲ್ಲಿ ಅವರು ಆ ಮನೆಗಳನ್ನು ಪೂರ್ಣಗೊಳಿಸಿಕೊಳ್ಳುವುದಕ್ಕೆ ಅವಕಾಶವಾಗುತ್ತದೆಂದು ಹೇಳಿದ್ದೆವು. ಆದರೆ ಅದನ್ನು ಮಾಡಲಿಲ್ಲ. ಆಂಧ್ರದ ಮಾದರಿಯಲ್ಲಿ ವಿಶೇಷ ಅನುದಾನವನ್ನು ಮನೆಗಳಿಗೆ ಮತ್ತು ಸೈಟು ಖರೀದಿಗೆ ಮೀಸಲಿರಿಸಬೇಕೆಂದು ಹೇಳಿದ್ದೆವು. ಆದರೆ ಸೈಟು ಖರೀದಿ ಮಾಡುವುದಕ್ಕೆ 100 ಕೋಟಿ ರೂ.ಗಳನ್ನು ಇಡುತ್ತೇವೆ ಎನ್ನುವಂತಹ ಮಾತನ್ನು ಬಿಟ್ಟರೆ, ಉಳಿದಂತೆ ಏನೂ ಹೇಳಿಲ್ಲ. ಅದೂ ಕೂಡ ಮೊದಲೇ ಹೇಳಿದ್ದರು.

**ಉಪಾಧ್ಯಕ್ಷರು:** Clarification ಕೇಳಿ.

**ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್:** ಮಾನ್ಯ ಉಪಾಧ್ಯಕ್ಷರೆ, ನಾನು clarification ಅನ್ನೇ ಕೇಳುತ್ತಿದ್ದೇನೆ. ನಮಗೆ ಬಹಳ ನೋವಾಗುತ್ತದೆ. ನಾವು ಚರ್ಚೆ ಮಾಡಿ, ಅದಕ್ಕೆ ಉತ್ತರ ಸಿಗಲಿಲ್ಲವೆನ್ನುವ ನೋವಿಗೆ ನಾವು

ಮಾತನಾಡುತ್ತಿದ್ದೇವೆ. ಅದೂ ಬೇಡವೆಂದರೆ, attendance ಹಾಕಿಬಿಟ್ಟು ಹೋಗುತ್ತೇವೆ. ನಾವು ಇನ್ನೇನು ಮಾಡುವುದಕ್ಕಾಗುತ್ತದೆ?

**ಉಪಾಧ್ಯಕ್ಷರು:** ಆಯಿತು, clarification ಇದ್ದರೆ ಕೇಳಿ.

**ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್:** ಗ್ರಾಮ ಪಂಚಾಯಿತಿ ವಿಚಾರದಲ್ಲಿ ಮಾನ್ಯ ಸದಸ್ಯರಾದ ನಾಡಗೌಡರು ಹೇಳಿದಂತೆ Ombudsman ನೇಮಕ ಮಾಡಬೇಕೆಂದು ಹೇಳಿದ್ದೆವು. ಈ ಬಗ್ಗೆ ತನಿಖೆ ವಿಚಾರ ಹೇಳಿದ್ದಾರೆಯೇ ಹೊರತು ಅಲ್ಲಿ ಸುಧಾರಣೆ ವಿಚಾರದಲ್ಲಿ ಏನೂ ಮಾತನಾಡಿಲ್ಲ. ಅಲ್ಲಿ ಭ್ರಷ್ಟಾಚಾರ ಏನು ನಡೆಯುತ್ತದೆ, ಕಳಪೆ ಕಾಮಗಾರಿಗಳು ಏನು ನಡೆಯುತ್ತವೆ, ಅಂಥದ್ದನ್ನು ತನಿಖೆ ಮಾಡುವುದಕ್ಕೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ ಎನ್ನುವಂತಹ ವಿಚಾರ ಹೇಳಿದ್ದಾರೆಯೇ ಹೊರತು ವಾಸ್ತವವಾಗಿ ಏನಾಗಿದೆ ಎಂದರೆ, ಕುಡಿಯುವ ನೀರಿಗೆ action plan ಮಾಡುವವರು ಜಿಲ್ಲಾ ಪಂಚಾಯಿತಿಯವರು. ಅವರು ಮಾಡಿ hand over ಮಾಡಿದ ಮೇಲೆ, ಅದನ್ನು maintain ಮಾಡುವವರು ಗ್ರಾಮ ಪಂಚಾಯಿತಿಯವರು. ಈ ಗ್ರಾಮ ಪಂಚಾಯಿತಿಗೂ, ಜಿಲ್ಲಾ ಪಂಚಾಯಿತಿಗೂ ಈಗ ಏನಾಗಿದೆ ಎಂದರೆ, ಈ hand over ಮಾಡಿದ ಮೇಲೆ ಅದನ್ನು maintain ಮಾಡತಕ್ಕ ಸಾಮರ್ಥ್ಯ ಇವತ್ತು ಗ್ರಾಮ ಪಂಚಾಯಿತಿಗಳಿಗೆ ಇಲ್ಲ. ಅದಕ್ಕೆ ಬೇಕಾದಂತಹ ಅನುದಾನಗಳಿಲ್ಲ. ಎಲ್ಲಾ ಗ್ರಾಮ ಪಂಚಾಯಿತಿಗಳಿಗೂ universal ಆಗಿ ಒಂದೇ ರೀತಿಯ ಅನುದಾನ ನೀಡುವ ಬದಲು ಆಯಾ ಗ್ರಾಮ ಪಂಚಾಯಿತಿ ಜನಸಂಖ್ಯೆ ಅಥವಾ ಆ ಗ್ರಾಮ ಪಂಚಾಯತಿಯಲ್ಲಿ ಇರತಕ್ಕಂಥ ಯೋಜನೆಗಳು ಏನೇನಿವೆ, ಅವುಗಳನ್ನು ನಿರ್ವಹಣೆ ಮಾಡತಕ್ಕಂಥ ವೆಚ್ಚ ಏನಿದೆ, ಅದನ್ನು ಭರಿಸತಕ್ಕಂಥ ಪ್ರಮಾಣದಲ್ಲಿ ಅನುದಾನ ನೀಡಬೇಕು. ಕೆಲವು ಗ್ರಾಮ ಪಂಚಾಯತಿಗಳಿಗೆ ಬೇರೆ ಬೇರೆ ಆದಾಯ ಮೂಲಗಳಿವೆ. ಏನೂ ಆದಾಯ ಮೂಲ ಇಲ್ಲದಿರುವಂತಹ ಗ್ರಾಮ ಪಂಚಾಯಿತಿಗಳೂ ಸಾಕಷ್ಟಿವೆ. ಅವುಗಳಿಗೆ ವಿಶೇಷವಾದ ಅನುದಾನ ಕೊಡುವಂತಹ ಯಾವುದಾದರೂ ಒಂದು ಹೊಸ ಕಲ್ಪನೆಯಲ್ಲಿ ಉತ್ತರವನ್ನು ನಾವು ನಿರೀಕ್ಷೆ ಮಾಡಿದ್ದೆವು. ಅದರ ಬಗ್ಗೆ ಒಂದು ಮಾತನ್ನೂ ಕೂಡ ಇದರಲ್ಲಿ ಪ್ರಸ್ತಾಪ ಮಾಡಿಲ್ಲ. ವಿಶೇಷವಾಗಿ ಆಹಾರ ಇಲಾಖೆ

system improvement ಬಗ್ಗೆ ಸಾಕಷ್ಟು ವಿಚಾರಗಳನ್ನು ನಾನು ಚರ್ಚೆ ಮಾಡಿದ್ದೆ. ಕೊನೆಗೆ ಮಾನ್ಯ ಮುಖ್ಯಮಂತ್ರಿಗಳ ಉತ್ತರದಲ್ಲಿ ಯಾರ್ಯಾರು ಬೋಗಸ್ ಪಡಿತರ ಚೀಟಿಗಳನ್ನು ಪಡೆದುಕೊಂಡಿದ್ದಾರೋ, ಅದನ್ನು ಲೋಕಾಯುಕ್ತಕ್ಕೆ ವಹಿಸುತ್ತೇನೆ. ಅವರಿಗೆ ಬೇಕಾದ ಸಿಬ್ಬಂದಿಯನ್ನು ಕೊಡುತ್ತೇನೆಂದು ಹೇಳಿದ್ದಾರೆಯೇ ಹೊರತು, ಆ ಗೊಂದಲ ನಿವಾರಣೆ ಮಾಡತಕ್ಕಂಥ ರೀತಿಯಲ್ಲಿ ಮತ್ತು ಆ ಇಲಾಖೆಯ ವ್ಯವಸ್ಥೆ ಏನಿದೆ, ಅದನ್ನು ಸುಧಾರಣೆ ಮಾಡತಕ್ಕ ನಿಟ್ಟಿನಲ್ಲಿ ನಾವು ಕೊಟ್ಟಂತಹ ಒಂದು ಸಲಹೆಯನ್ನೂ ಕೂಡ ಗಂಭೀರವಾಗಿ ಪರಿಗಣಿಸಿಲ್ಲ. ಇದರಿಂದಾಗಿ ಏನಾಗುತ್ತದೆ ಎಂದರೆ, ನಾವು ಚರ್ಚೆ ಮಾಡಿದ್ದು ನಿರರ್ಥಕ ಎನ್ನುವಂತಹ ಭಾವನೆ ಸೃಷ್ಟಿಯಾಗುತ್ತದೆ. ಆದುದರಿಂದ clarification ಕೊಡುವ timeನಲ್ಲಾದರೂ ಅವರು ಸಮರ್ಪಕವಾಗಿ ಉತ್ತರ ಕೊಟ್ಟರೆ ಸಮಾಧಾನವಾಗುತ್ತದೆ ಎನ್ನುವಂತಹ ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಎಸ್.ಕೆ. ಬೆಳ್ಳುಬ್ಬಿ (ಬಸವನಬಾಗೇವಾಡಿ):** ಸನ್ಮಾನ್ಯ ಅಧ್ಯಕ್ಷರೆ, ತಮ್ಮ ಮೂಲಕ ಮಾನ್ಯ ಗ್ರಾಮೀಣಾಭಿವೃದ್ಧಿ ಇಲಾಖೆ ಸಚಿವರಲ್ಲಿ ವಿನಂತಿ ಮಾಡುವ ವಿಷಯವೇನೆಂದರೆ, ಇವತ್ತು ರಾಜ್ಯಾದ್ಯಂತ Transformer failure ಆದರೆ ರೈತರಿಗೆ ತಕ್ಷಣ ಅದು ಸಿಗುವುದಿಲ್ಲ. ಇದರಿಂದ ಕೋಟಿಗಟ್ಟಲೆ ಬೆಳೆ ಹಾಳಾಗುತ್ತದೆ. ಕುಡಿಯುವ ನೀರಿನ ಸಮಸ್ಯೆ, ಹಿಟ್ಟು ಬೀಸುವ ಸಮಸ್ಯೆ ಇವೆಲ್ಲಾ ರಾಜ್ಯದ ತುಂಬ ಇರುವ ಜ್ವಲಂತ ಸಮಸ್ಯೆಯಾಗಿದೆ. ಅದಕ್ಕೆ ನನ್ನ ವಿನಂತಿ ಏನೆಂದರೆ, ಗ್ರಾಮಪಂಚಾಯಿತಿ ಅನುದಾನದಲ್ಲಿ ಹೆಚ್ಚುವರಿಯಾಗಿ ಒಂದು ಅಥವಾ ಎರಡು ಟ್ರಾನ್ಸ್‌ಫಾರ್ಮರ್‌ಗೆಂದು ಎರಡು ಲಕ್ಷ ರೂಪಾಯಿಗಳನ್ನು ಕೊಟ್ಟರೆ ಸಾಕು, ಇರುವ ಟ್ರಾನ್ಸ್‌ಫಾರ್ಮರ್ ಯಾವಾಗ ಸುಟ್ಟುಹೋಗುತ್ತದೆಯೋ ಆಗ ಬದಲಿಯಾಗಿ ಜೋಡಿಸಿಕೊಳ್ಳಲು ರೈತರಿಗೆ ಅನುಕೂಲವಾಗುತ್ತದೆ. ಅದಕ್ಕೆ ಗ್ರಾಮೀಣಾಭಿವೃದ್ಧಿ ಸಚಿವರಲ್ಲಿ ಒಂದು ಸುತ್ತೋಲೆಯನ್ನು ಕಳುಹಿಸಬೇಕೆಂದು ವಿನಂತಿ ಮಾಡುತ್ತೇನೆ. ಪಂಚಾಯಿತಿಯಲ್ಲಿ ಅನುದಾನವಿದೆ. ಅದರಲ್ಲಿ ಒಂದೆರಡು ಟ್ರಾನ್ಸ್‌ಫಾರ್ಮರ್ ಖರೀದಿ ಮಾಡಿ ಇಟ್ಟುಬಿಟ್ಟರೆ ಅಲ್ಲಿ ಯಾವ ಬೆಳೆ ಹಾಳಾಗುವುದಿಲ್ಲ. ಮೊನ್ನೆ ಶ್ರೀ ಕರಡಿ ಸಂಗಣ್ಣನವರು ಇರುವ ಕೊಪ್ಪಳದ ಕಡೆ

ಸಮಸ್ಯೆಯಾಯಿತು. ನಮ್ಮ ನಾಡಗೌಡರಿಗೆ ಸೇರಿದಂತೆ ಎಲ್ಲರಿಗೂ ಸೇರಿದಂಥ ಒಂದು ಜ್ವಲಂತ ಸಮಸ್ಯೆಯಾಗಿದೆ. ಅದಕ್ಕೆ ಈ ಬಗ್ಗೆ ತಕ್ಷಣ ಆದೇಶವನ್ನು ಕಳುಹಿಸಿ, ಟ್ರಾನ್ಸ್‌ಫಾರ್ಮರ್ ಅನ್ನು ಅವರು ಖರೀದಿ ಮಾಡುವುದಲ್ಲ. ನೀವೇ ಖರೀದಿ ಮಾಡಿ ಅವರಿಗೆ ಕಳುಹಿಸುವಂಥ ವ್ಯವಸ್ಥೆಯಾಗಬೇಕು. ಅದರ ಜೊತೆಗೆ ಇನ್ನೊಂದು ಇವತ್ತು ಬಹು ಹಳ್ಳಿ ಕುಡಿಯುವ ನೀರಿನ ಯೋಜನೆ ತೆಗೆದುಕೊಳ್ಳುತ್ತೇವೆಂದು ಸರ್ಕಾರದವರು ಹೇಳಿದರು. ಬಹಳ ಒಳ್ಳೆಯ ಯೋಜನೆ. 2003ರಲ್ಲಿ ನಾನು ಶಾಸಕನಿದ್ದಾಗ ಬಾಗೇವಾಡಿ ಕ್ಷೇತ್ರದಲ್ಲಿ ಆ ಯೋಜನೆಯನ್ನು ತೆಗೆದುಕೊಂಡುಬಿಟ್ಟೆವು. ಮುದ್ದೇಬಿಹಾಳ ಕ್ಷೇತ್ರದಲ್ಲಿ 30 ಹಳ್ಳಿ, ಬಾಗೇವಾಡಿ ಕ್ಷೇತ್ರದಲ್ಲಿ 80 ಹಳ್ಳಿ, 6 ವರ್ಷದಲ್ಲಿ ಯೋಜನೆ ಮುಗಿದು, ಇವತ್ತು ಹೊಳೆಯಿಂದ ಶುದ್ಧವಾದ ನೀರು ಸಿಗುತ್ತಿದೆ. ಅದನ್ನು ರಾಜ್ಯದ ತುಂಬಾ ಜಾರಿಗೆ ತರಲು ಏನು ಪ್ರಸ್ತಾಪ ಮಾಡಿದ್ದೀರಿ. ಅದನ್ನು ತಕ್ಷಣ ಜಾರಿಗೆ ತಂದರೆ, ಇಡೀ ರಾಜ್ಯದಲ್ಲಿ ಕುಡಿಯುವ ನೀರಿನ ಸಮಸ್ಯೆ ಹೋಗುತ್ತದೆಂದು ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಸುನೀಲ್ ಹೆಗ್ಗಡೆ (ಹಳಿಯಾಳ):** ಮಾನ್ಯ ಅಧ್ಯಕ್ಷರೆ, ಮೂರು ದಿವಸದ ಈ ಅಧಿವೇಶನದಲ್ಲಿ ನಂಜುಂಡಪ್ಪ ವರದಿಯಲ್ಲಿ ಬಂದಂಥ ಅತ್ಯಂತ ಹಿಂದುಳಿದ ತಾಲ್ಲೂಕಾದ ಜೋಯಿಡ ನನ್ನ ಕ್ಷೇತ್ರಕ್ಕೆ ಬರುತ್ತದೆ. ಆ ಕ್ಷೇತ್ರದ ಉದಾಹರಣೆಯನ್ನು ಇಟ್ಟುಕೊಂಡು ಹೇಳುವುದಾದರೆ, ಇಡೀ ಕರ್ನಾಟಕ ರಾಜ್ಯದಲ್ಲಿ ಅರಣ್ಯ ಅತಿಕ್ರಮಣ ಮಾಡಿ ರೈತರೇನು ಕೃಷಿ ಮಾಡುತ್ತಿದ್ದಾರೆ, ಅವರಿಗೆ ಇವತ್ತಿನವರೆಗೆ ಯಾವುದೇ ರೀತಿಯ ಸಕ್ರಮವಾಗಲಿಲ್ಲ. ಅವರಿಗೆ ಯಾವುದೇ ರೀತಿಯಾದ ಬೆಳೆ ಸಾಲ ಸಿಗುವುದಿಲ್ಲ. ಬೆಳೆ ವಿಮೆ ಸಿಗುವುದಿಲ್ಲ ಅಥವಾ ಅರಣ್ಯದಿಂದ ಯಾವುದೇ ರೀತಿಯಾದ ಹಾನಿಯಾದರೆ ಅವರಿಗೆ ಯಾವುದೇ ರೀತಿಯಾದ ಪರಿಹಾರ ಸಿಗುವುದಿಲ್ಲ. ಆ ಕಾರಣದಿಂದ ಈ ಅಧಿವೇಶನದಲ್ಲಿ ಕೃಷಿ ಬಗ್ಗೆ, ಅರಣ್ಯ ಅತಿಕ್ರಮಣದ ಬಗ್ಗೆ ಸ್ಪಷ್ಟವಾದ ಒಂದು ನಿಲುವು ಸರ್ಕಾರದಿಂದ ಸಿಗಬಹುದೆಂದು ಇತ್ತು. ಆದರೆ ಅದು ಇದುವರೆವಿಗೂ ಸಿಗಲಿಲ್ಲ. ದಯವಿಟ್ಟು, ಮುಖ್ಯಮಂತ್ರಿಗಳು ಇದರ ಬಗ್ಗೆ ಹೇಳಬೇಕೆಂದು ಕೇಳುತ್ತೇನೆ. ಅದೇ ರೀತಿ ನಾವು ವಿದೇಶಗಳಿಗೆ ಹೋದಾಗ ಕೃಷಿಗೆ ಪೂರಕವಾಗಿ

ಹೈನುಗಾರಿಕೆ ಮಾಡುವಂಥ ಪರಿಪಾಠವನ್ನು ಅವರೇನು ಬೆಳೆಸಿಕೊಂಡಿದ್ದಾರೆ, ಆ ರೀತಿ ಇಲ್ಲಿ ಕೃಷಿ ನೀತಿಯ ಜೊತೆಗೆ ಹೈನುಗಾರಿಕೆ ನೀತಿಯನ್ನು ತಂದು ಸ್ತ್ರೀಶಕ್ತಿ ಸಂಘದವರಿಗೆ, ಹೆಣ್ಣುಮಕ್ಕಳಿಗೆ ಅದರಲ್ಲಿಯೂ ಮುಖ್ಯವಾಗಿ ಯುವಕರಿಗೆ ಗ್ರಾಮೀಣ ಪ್ರದೇಶದಲ್ಲಿ ನೆಲೆಸುವಂಥ ಪರಿಸರ ನಿರ್ಮಾಣವಾಗದೆ ಇದ್ದರೆ, ಅವರು ನಗರಕ್ಕೆ ವಲಸೆ ಬರುವಂತಾದರೆ ಮುಂದಿನ ದಿವಸಗಳಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಯಾವ ಯುವಕರೂ ಉಳಿಯುವುದಿಲ್ಲ. ಈ ದಿಶೆಯಲ್ಲಿ ಹೈನುಗಾರಿಕೆ ನೀತಿಯನ್ನು ಮಾಡಿ ಯುವಕರಿಗೆ ಮತ್ತು ಸ್ತ್ರೀಶಕ್ತಿ ಸಂಘದವರಿಗೆ ಅದರಲ್ಲಿ ತೊಡಗಿಸಿಕೊಳ್ಳುವಂಥ ಯಾವ ಕಾರ್ಯಕ್ರಮಗಳೂ ಇದರಲ್ಲಿ ಬರಲಿಲ್ಲವೆಂದು ದುಃಖವಾಗುತ್ತಿದೆ. ಅದೇ ರೀತಿ ನನ್ನ ಕ್ಷೇತ್ರದಲ್ಲಿ ಗೌಳಿಜನ, ಕುಣಬಿಜನ ಈ ಬುಡಕಟ್ಟು ಜನರು ಅರಣ್ಯ ಭಾಗದಲ್ಲೇನು ನೆಲೆಸುತ್ತಾರೆ. ಅವರು ಗ್ರಾಮಕ್ಕೂ ಸಂಬಂಧವಿಲ್ಲ ನಗರಕ್ಕೂ ಸಂಬಂಧವಿಲ್ಲ. ಇವತ್ತು ಸಹ ಅವರು ವಾಸಿಸುವಂಥ ಪರಿಸ್ಥಿತಿಯನ್ನು ನೋಡಿದರೆ ಸ್ವಾತಂತ್ರ್ಯ ಬಂದು ಇಷ್ಟು ವರ್ಷವಾದರೂ ಸಹ ಅವರಿಗೆ ಈ ಪರಿಸ್ಥಿತಿ ಇದೆ ಎಂದು ನಮಗನಿಸುತ್ತದೆ. ಆ ಬಗ್ಗೆಯೂ ಮುಖ್ಯಮಂತ್ರಿಗಳಿಂದ ಯಾವುದೇ ರೀತಿಯ ಕ್ಲಾರಿಫಿಕೇಷನ್ ಬಂದಿಲ್ಲ. ಈ ಎಲ್ಲಾ ಕಾರಣಗಳಿಂದ ನನಗೇನು ಅನಿಸುತ್ತಿದೆ ಎಂದರೆ ಈ ಆರ್ಥಿಕ ಮುಗ್ಗಟ್ಟಿನಿಂದ ಕೆಲವೊಂದು ಸಲಹೆಗಳನ್ನು ಸಹ ಕೊಡುವುದಕ್ಕೆ ಹೆದರಿಕೆಯಾಗುತ್ತಿದೆ. ಏಕೆಂದರೆ, ಊಪರ್ ಸೇ ಶೇರ್ವಾನಿ, ಅಂದರ್ ಸೇ ಪರೇಶಾನಿ ಎಂದು ಒಂದು ಗಾದೆ ಇದೆ. ಆ ರೀತಿಯಾಗಿ ಮುಖ್ಯಮಂತ್ರಿಗಳಿಂದ ಉತ್ತರ ಬಂದಿದೆ. ದಯವಿಟ್ಟು ನಾನು ಹೇಳಿದ ವಿಷಯಗಳ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಬೆಳಕನ್ನು ಚೆಲ್ಲಬೇಕೆಂದು ವಿನಂತಿ ಮಾಡುತ್ತೇನೆ.

**ಶ್ರೀ ಎ. ಮಂಜು (ಅರಕಲಗೂಡು):** ಸನ್ಮಾನ್ಯ ಅಧ್ಯಕ್ಷರೆ, ಈಗ ಮೂರು ದಿವಸಗಳ ಅಧಿವೇಶನದಲ್ಲಿ ಸರ್ಕಾರ, ಮುಖ್ಯಮಂತ್ರಿಗಳು ಏನು ಭವಿಷ್ಯದ ಹೆಜ್ಜೆಗಳೆಂದು ನಮ್ಮ ಮುಂದೆ ಕೊಟ್ಟಿದ್ದಾರೆ. ಬಹುಶಃ ಭವಿಷ್ಯದ ಹೆಜ್ಜೆಗಳೆಂದು ಎಲ್ಲಿ ಇಡುತ್ತಾರೆ. ಇಡುವುದಕ್ಕೆ ಹಣವೆಲ್ಲಿದೆ ಎಂಬುದನ್ನು ಮೊದಲು ಇದರಲ್ಲಿ ಘೋಷಣೆ ಮಾಡಬೇಕು. ಜೊತೆಗೆ ಬಹು ಮುಖ್ಯವಾಗಿ ಸರ್ಕಾರ ರೈತರಿಗೆ, ನೀವೇನು ಮಾಡುವುದು ಬೇಕಾಗಿಲ್ಲ. ರೈತ ನೀನು ಸಾಲವನ್ನು ಕೊಡಬೇಕಾಗಿಲ್ಲ.

ಬದ್ಧತೆಯಿಂದ ನಾವು ಕರೆಂಟ್ ಕೊಡುತ್ತೇವೆ. ನೀರನ್ನು ಕೊಡುತ್ತೇವೆ ಮತ್ತು ರೈತ ಬೆಳೆದಂಥ ಬೆಳೆಗೆ ಬೆಂಬಲ ಬೆಲೆಯನ್ನು ಘೋಷಣೆ ಮಾಡಬೇಕು. ಮಾರ್ಕೆಟ್ ಇರಬೇಕು. ಆಗ ಮಾತ್ರ ರೈತನನ್ನು ಸುಧಾರಣೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಜೊತೆಗೆ ಎರಡು ಸಾವಿರ ಜನಸಂಖ್ಯೆಯ ಆಧಾರದ ಮೇಲೆ ಈಗೇನು ಸುವರ್ಣ ಗ್ರಾಮವನ್ನು ಮಾಡಿದ್ದೀರಿ. ಮೊದಲು ಸುವರ್ಣ ಗ್ರಾಮಕ್ಕೆ ತಲಾ ರೂ. 2000ರಂತೆ ಲೆಕ್ಕಾಚಾರ ಹಾಕಿ ಕೊಡುತ್ತಿರುವುದು ಪರಿಪಾಠ. ಆದರೆ ಗ್ರಾಮೀಣಾಭಿವೃದ್ಧಿ ಇಲಾಖೆಯಿಂದ ಆಗಲೇ ಒಂದು ಆದೇಶವನ್ನು ಹೊರಡಿಸಿದ್ದಾರೆ. ಬಹುಶಃ ನಮ್ಮ ಶಾಸಕ ಮಿತ್ರರಿಗೆ ಗೊತ್ತಿದೆ. 1:3 ಪ್ರಕಾರ ಆ ಗ್ರಾಮವನ್ನು ಅಭಿವೃದ್ಧಿಪಡಿಸಬೇಕೆಂದು ಇದ್ದದ್ದು ಆ ಯೋಜನೆ. ಆದರೆ ಅದನ್ನು ಈಗ ಕಡಿತ ಮಾಡಿ ಕೇವಲ ಏನು 2000 ರೂ. ಅಂದಾಜು ಏನಿದೆ ಅದರ ಪ್ರಕಾರ ಮಾಡಬೇಕೆಂದೇನು ಹೇಳಿದ್ದಾರೆ. ಅದನ್ನು ವಾಪಸ್ ತೆಗೆದುಕೊಂಡು ಹಿಂದೆ 1:3, ಎಲ್ಲಾ ಇಲಾಖೆಗಳ ಒಂದು ಸಹಾಯವನ್ನು ಪಡೆದು ಅಭಿವೃದ್ಧಿಪಡಿಸುವುದಕ್ಕೆ ಮಾಡಬೇಕು. ಇನ್ನು ನೀರಾವರಿಗೆ ಸಂಬಂಧಿಸಿದಂತೆ ಈ ಸರ್ಕಾರ ಹಿಂದೆ ಮೋಸ ಹೋಗಿರುವಂಥ ಏತ ನೀರಾವರಿ ಯೋಜನೆಗಳನ್ನು ಎಲ್ಲೆಲ್ಲಿ ಕೈಬಿಟ್ಟಿದ್ದಾರೆ, ತೊಂದರೆಯಾಗಿದೆ, ಮೋಸ ಹೋಗಿದೆ ಅದರ ಬಗ್ಗೆ ಸರ್ಕಾರ ತಕ್ಷಣ ಘೋಷಣೆ ಮಾಡಬೇಕು. ಈ ಟ್ರಿಬ್ಯುನಲ್ ಮೂಲಕ ನಾವು ನೀರಿನ ಹಂಚಿಕೆ ಮಾಡಿಕೊಳ್ಳಬಹುದೆಂದು ಈಗಾಗಲೇ ಕೇಂದ್ರ ಸರ್ಕಾರ ಮತ್ತು ಸುಪ್ರೀಂ ಕೋರ್ಟ್‌ನ ತೀರ್ಮಾನವಾಗಿದೆ. ನಿಂತು ಹೋಗಿರುವ ಆ ಲಿಫ್ಟ್ ಇರಿಗೇಷನ್ ಅನ್ನು ಘೋಷಣೆ ಮಾಡಬೇಕೆಂದು ಹೇಳುತ್ತೇನೆ. ತಾವು ಇವತ್ತು 850 ಕೋಟಿ ಹಣವನ್ನು ಗ್ರಾಮೀಣ ನೀರಿಗೆಂದು ಇಟ್ಟಿದ್ದೀರಿ. ಇದು ಹಿಂದೆ ರಾಜೀವ್ ಗಾಂಧಿ ವಾಟರ್ ಸ್ಕೀಂನಲ್ಲಿರತಕ್ಕಂಥದ್ದು. 850 ಕೋಟಿ ರೂಪಾಯಿಗಳಿಗೆ ಕೆಲವೇ ಶಾಸಕರ ಪ್ರಸ್ತಾವನೆಗಳನ್ನು ಸರ್ಕಾರಕ್ಕೆ ಕಳುಹಿಸಿದ್ದಾರೆ. ಎಲ್ಲಾ ಶಾಸಕರದ್ದು ಕಳುಹಿಸಿಲ್ಲ. ಎಲ್ಲಿ ನದಿ ತೀರದಲ್ಲಿ ಬರುವ ತಾಲ್ಲೂಕುಗಳಿವೆ. ಅವನ್ನು 100% ರಾಜ್ಯಾದ್ಯಂತ ಘೋಷಣೆ ಮಾಡಿ ಮಂತ್ರಿಗಳು ಕಳುಹಿಸಿಕೊಡಬೇಕೆಂದು ಈ ಮೂಲಕ ನಾನು ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ಬಂಡೆಪ್ಪ ಕಾಶೆಂಪೂರ್(ಬೀದರ್ ದಕ್ಷಿಣ):** ಸನ್ಮಾನ್ಯ ಅಧ್ಯಕ್ಷರೆ, ಈ ಮೂರು ದಿವಸದ ಅಧಿವೇಶನದ ಬಗ್ಗೆ ಇತಿಹಾಸದಲ್ಲೆ ಮೊದಲನೆ ಭಾರಿ ಕರೆದಿದ್ದು ಎಂದು ಪತ್ರಿಕೆಗಳಲ್ಲೆಲ್ಲಾ ಬಂದು ಬಹಳ ಮಹತ್ವ ಪಡೆದಿತ್ತು. ಆದರೆ ನಮ್ಮ ಎಲ್ಲಾ ಸದಸ್ಯರು ಬಹಳ ಒಳ್ಳೆಯ ರೀತಿಯಿಂದ ಸರ್ಕಾರದ ಮೇಲೆ ಯಾವುದೇ ಆಪಾದನೆ ಮಾಡದೆ ಒಳ್ಳೆ ಒಳ್ಳೆಯ ಸಲಹೆಗಳನ್ನು ಕೊಟ್ಟು, ಮುಖ್ಯಮಂತ್ರಿಗಳೇನು ರೈತರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕಾರ ಮಾಡಿದ್ದರು, ಈ ಅಧಿವೇಶನದಿಂದ ಇಡೀ ರಾಜ್ಯದ ರೈತಾಪಿ ಜನರಿಗೆ ಒಳ್ಳೆಯದಾಗುತ್ತದೆಂಬ ಭಾವನೆಯಿಂದ ಎಲ್ಲರೂ ಮೂರು ದಿವಸಗಳ ಕಾಲ ಸಲಹೆಗಳನ್ನು ಕೊಟ್ಟಿದ್ದರು. ಆದರೆ ಅವರ ಉತ್ತರವನ್ನು ನೋಡಿದ ಮೇಲೆ, ನಮಗೆ ಅಲ್ಲ ಇಡೀ ರಾಜ್ಯದ ರೈತರಿಗೆ ಇವತ್ತು ಬಹಳ ಬೇಜಾರಾಗಿದೆ. ಏಕೆಂದರೆ, ಇವತ್ತು ನಮ್ಮ ಕಡೆ ಬಂದಾಗ ಬರಗಾಲಕ್ಕೆ ತುತ್ತಾದ ಜನರಿಗೆ ಸನ್ಮಾನ್ಯ ಹೆಚ್.ಡಿ. ಕುಮಾರಸ್ವಾಮಿಯವರು ಮುಖ್ಯಮಂತ್ರಿಗಳಾಗಿದ್ದಾಗ ರೂ. 25,000/– ಮನ್ನಾ ಮಾಡಿದ್ದರು. ಮುಖ್ಯಮಂತ್ರಿಗಳು ಹೇಗೂ ಸಾಲವನ್ನಾದರೂ ಮನ್ನಾ ಮಾಡುತ್ತಾರೆ ಇಲ್ಲವೆಂದರೆ ರೂ. 50,000/– ಕನಿಷ್ಠ ಡಬಲ್ ಮಾಡುತ್ತಾರೆಂದು ಇವತ್ತು ರಾಜ್ಯದ ಎಷ್ಟೋ ಜನ ರೈತರು ಟಿವಿ ನೋಡುತ್ತಿದ್ದಾರೆ. ಆದರೆ ಇವತ್ತು ಒಂದು ರೂಪಾಯಿ ಸಾಲ ಮನ್ನಾ ಮಾಡಿದ್ದು ಈ ಹೆಜ್ಜೆ ಗುರುತಿನಲ್ಲಿಲ್ಲ. ಆಮೇಲೆ ಸುಮಾರು ವಿಷಯಗಳನ್ನು ಪ್ರಸ್ತಾವನೆ ಮಾಡಿದ್ದಾರೆ. ಅದರಲ್ಲಿ ಒಂದೆರಡಕ್ಕೆ ನಾನು ಕ್ಲಾರಿಫಿಕೇಷನ್ ಮಾಡಬೇಕಾದರೆ, ಇವತ್ತು ಬೆಳೆ ವಿಮೆ ವಿಸ್ತರಣೆ ಹಾಗೂ ಸಹಾಯಧನದ ಬಗ್ಗೆ ಅವರು ಮಾತನಾಡಿದ್ದಾರೆ. ಈಗಿರುವ ವಿಮಾ ಯೋಜನೆ ರೈತರಿಗೆ ಸರಿಯಾಗಿ ತಲುಪುತ್ತಿಲ್ಲವೆಂದು ಅವರೇ ಹೇಳಿದ್ದಾರೆ. ಗ್ರಾಮಪಂಚಾಯಿತಿ ಮಟ್ಟದಲ್ಲಿ Tele-metric rain gauge ಅಳವಡಿಸುತ್ತೇವೆಂದು ಹೇಳಿದ್ದಾರೆ ಅದು ಒಳ್ಳೆಯದು. ಏಕೆಂದರೆ, ಇವತ್ತು ಹವಾಮಾನಕ್ಕೆ ಸಂಬಂಧಪಟ್ಟಿದ್ದು ತಾಲ್ಲೂಕು ಮಟ್ಟಕ್ಕೆ ಇದೆ. ನಾನು ಆ ಕೃಷಿ ಇಲಾಖೆಯ ಸಚಿವನಾಗಿದ್ದೆ. ನಮ್ಮ ಶಿವಲಿಂಗೇಗೌಡರು ಮಾತನಾಡಿದರು. ನಮ್ಮ General Insurance ಬಂದಾಗ, ಇವತ್ತು ನಮ್ಮ crop cutting

experiment ಏನಾಗುತ್ತಿದೆ. ಒಂದೇ ಹೋಬಳಿಯಲ್ಲಿ ಕೆಲವು ಜನರಿಗೆ ಸಿಗುತ್ತಿದೆ. ಕೆಲವು ಜನರಿಗೆ ಸಿಗುತ್ತಿಲ್ಲ. ಹಾಗಾಗಿ ಅದರಲ್ಲಿ ಬಹಳಷ್ಟು ಸುಧಾರಣೆ ಮಾಡಬೇಕು. ಆಮೇಲೆ ನಾವು ವಿಮೆ ಕೊಡುವಾಗ ಈಗ ನಾವು ಒಂದು ವರ್ಷಕ್ಕೆ ಒಂದೇ ಸಾರಿ ಕೊಡುತ್ತಿದ್ದೇವೆ. ಈಗ ನಾವು ಲಾಂಗ್ ಟರ್ಮ್ ಶಾರ್ಟ್ ಟರ್ಮ್ ಮಾಡಿದ್ದೇವೆ. ಅದಕ್ಕೆ ಇನ್ನೂ ಕಮ್ಮಿ ಮಾಡಿ, ರೈತರಿಗೆ ಕೂಡಲೆ ವಿಮೆ ಕೊಡುವಂಥ ಕೆಲಸವನ್ನು ಮಾಡಬೇಕು. ಆಮೇಲೆ 2006ರಲ್ಲಿ ಕೃಷಿ ನೀತಿಯನ್ನು ತಂದಿದ್ದು, 2007ರಲ್ಲಿ ಅಧಿಕಾರಿಗಳ ತಂಡ ಏನು ಸಲಹೆಗಳನ್ನು ಕೊಟ್ಟಿತ್ತು. ಅವನ್ನು ಸಂಪೂರ್ಣವಾಗಿ ಗಮನದಲ್ಲಿಟ್ಟುಕೊಂಡು ಮುಂದಿನ ದಿವಸಗಳಲ್ಲಿ ರೈತರಿಗೆ ಒಳ್ಳೆಯದನ್ನು ಮಾಡುವ ಕೆಲಸವನ್ನು ಮಾಡಬೇಕು ಮತ್ತು ಸಲಹೆ ತೆಗೆದುಕೊಳ್ಳಬೇಕೆಂದು ನಾನು ಹೇಳಬಯಸುತ್ತೇನೆ.

**ಶ್ರೀ ಗೋಪಾಲ್ ಭಂಡಾರಿ (ಕಾರ್ಕಳ):** ಮಾನ್ಯ ಅಧ್ಯಕ್ಷರೆ, ಬಹುಶಃ ಭವಿಷ್ಯದತ್ತ ಹೆಜ್ಜೆಗಳು ಹೊಸ ಆಶ್ವಾಸನೆಗಳ ಪಟ್ಟಿ ಇದ್ದ ಹಾಗೆ ಇದೆ. ಇಲ್ಲಿ ನಿವೇಶನಕ್ಕೆ ಭೂಮಿಯನ್ನು ಖರೀದಿ ಮಾಡಿ ಕೊಡುತ್ತೇವೆಂದು ಹೇಳಿದ್ದರು.

**5.30 P.M.**

ಕಳೆದ ಮೂರು ವರ್ಷಗಳಿಂದ ಒಂದೂ ನಿವೇಶನವನ್ನು ಕೊಟ್ಟಿಲ್ಲ. ಖರೀದಿ ಮಾಡುವುದು ಬಿಟ್ಟು, ಸರ್ಕಾರಿ ಜಾಗವಿದ್ದೆಡೆಯಲ್ಲೂ ನಿವೇಶನಗಳನ್ನು ಕೊಟ್ಟಿಲ್ಲ. ಎಷ್ಟು ಸಮಯದೊಳಗೆ ಕೊಡುತ್ತಾರೆಂಬ ಒಂದು ಸ್ಪಷ್ಟೀಕರಣವನ್ನು ಕೊಟ್ಟರೆ ಒಳ್ಳೆಯದು. ಜೊತೆಗೆ ಬಹುಶಃ ನಮ್ಮ ಕರಾವಳಿ ಜಿಲ್ಲೆಯಲ್ಲಿ ಕೃಷಿಯ ಪರಿಸ್ಥಿತಿ ಬಹಳ ಚಿಂತಾಜನಕವಾಗಿದೆ. ಪಶ್ಚಿಮಘಟ್ಟದ ಮೇಲೆ ಬೆಳೆದಂಥ ಬೆಳೆಗಿಂತ ನಾಲ್ಕನೆ ಒಂದು ಪಾಲು ಬೆಳೆ ನಮ್ಮಲ್ಲಿ ಕಮ್ಮಿ ಬರುತ್ತದೆ. ಆದರೆ ನಮ್ಮಲ್ಲಿ ಯಾವುದೇ ರೀತಿಯಾಗಿ ತೆಂಗಿನಕಾಯಿ, ಕೊಬ್ಬರಿಗಾಗಲಿ ಬೆಂಬಲ ಬೆಲೆ ಇಲ್ಲಿಯವರೆಗೆ ಇಲ್ಲ.

ಅಡಿಕೆಗೆ ಅದರಲ್ಲೂ ಬಿಳಿ ಗೋಟು ಅಡಿಕೆಗೆ ಬೆಂಬಲ ಬೆಲೆ ಇಲ್ಲ. ರೈತರ ಪರಿಸ್ಥಿತಿ ಚಿಂತಾಜನಕವಾಗಿದೆ. ಕೃಷಿ ಉಪಕರಣಗಳಿಗೆ ಸಬ್ಸಿಡಿ ಸಿಗುತ್ತಿತ್ತು. ಉದಾಹರಣೆಗೆ ಟ್ರಿಲ್ಲರ್‌ಗೆ ಒಂದು ಲಕ್ಷ ರೂಪಾಯಿ ಇದ್ದಾಗ 50 ಸಾವಿರ ರೂ. ಸಿಗುತ್ತಿತ್ತು. ನಮ್ಮಲ್ಲಿ ಕೃಷಿ ಕಾರ್ಮಿಕರೇ ಸಿಗದಿರುವ ಪರಿಸ್ಥಿತಿಯಲ್ಲಿ, ಈಗ ಟ್ರಿಲ್ಲರ್‌ಗೆ ಒಂದೂವರೆ ಲಕ್ಷ ರೂಪಾಯಿ ಆಗಿದೆ. ಆದರೆ, ಸಬ್ಸಿಡಿ ಈಗಲೂ 50 ಸಾವಿರ ರೂ. ಸಿಗುತ್ತದೆ. ಆದ್ದರಿಂದ ಕೃಷಿ ಉಪಕರಣದ ಬೆಲೆಯ 50 ಪರ್ಸೆಂಟ್ ಹಣವನ್ನು ಸಬ್ಸಿಡಿಯಾಗಿ ಕೊಡುವಂತೆ ಮಾಡಿದರೆ ಟ್ರಾಕ್ಟರ್ ಮತ್ತು ಇನ್ನಿತರ ಕೃಷಿ ಉಪಕರಣಗಳನ್ನು ತೆಗೆದುಕೊಳ್ಳಲು ಅನುಕೂಲವಾಗುತ್ತದೆ. ಸಾವಯವ ಕೃಷಿಗೆ ಹೆಚ್ಚು ಕೊಡುತ್ತೇವೆಂದು ಹೇಳಿದರು. ಆದರೆ, ಇದುವರೆಗೆ ನನ್ನನ್ನೂ ಸೇರಿ ನನ್ನ ತಾಲ್ಲೂಕಿನಲ್ಲಿ ಯಾವ ಜನಪ್ರತಿನಿಧಿಗಳ ಗಮನಕ್ಕೂ ಬಾರದೆ ಹಂಚಿಕೆಯಾಗಿದೆ. ಇದು ಯಾವ ರೀತಿ ಎನ್ನುವುದು ಗೊತ್ತಿಲ್ಲ. ಇದರ ಬಗ್ಗೆ ಸ್ಪಷ್ಟೀಕರಣವನ್ನು ಕೊಟ್ಟರೆ ಒಳ್ಳೆಯದು. ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಯೋಜನೆಗಳು ಅನುಷ್ಠಾನವಾಗಬೇಕಾದರೆ village functionary ಯಾರಿದ್ದಾರೆ, ಕೆಳಮಟ್ಟದ ಅಧಿಕಾರಿಗಳು ಯಾರಿದ್ದಾರೆ ಅವರೆಲ್ಲರೂ ಇರಬೇಕಾಗುತ್ತದೆ. ಇವತ್ತು ವಿಶೇಷವಾದ ಅನುದಾನವನ್ನು ನಬಾರ್ಡ್‌ನಂಥ ಅನುದಾನವನ್ನು ಬಿಡುಗಡೆ ಮಾಡುವಾಗ, ನಮ್ಮಲ್ಲಿ ಮುಖ ನೋಡಿ ಮಣೆ ಹಾಕುವುದು ಎಂದು ಹೇಳುತ್ತಾರೆ. ಆ ರೀತಿ ಪಕ್ಷ ನೋಡಿ ಅನುದಾನವನ್ನು ಬಿಡುಗಡೆ ಮಾಡುವ ವ್ಯವಸ್ಥೆಯಾಗಿ ನಮಗೆ ಬಹಳಷ್ಟು ಕಡಿಮೆ ಅನುದಾನವನ್ನು ಕೊಡುವುದರ ಜೊತೆಗೆ ನನ್ನ ಕ್ಷೇತ್ರದಲ್ಲಿ ಅಧಿಕಾರಿಗಳನ್ನು ಸಾರಾಸಗಟಾಗಿ ವರ್ಗಾವಣೆ ಮಾಡಿದ್ದಾರೆ. ಶೇ. 20 ಹೆಚ್ಚು ಜನರನ್ನು ಗ್ರಾಮಲೆಕ್ಕಾಧಿಕಾರಿಯವರನ್ನೂ ಸೇರಿಸಿ ಎಲ್ಲರನ್ನು ವರ್ಗಾವಣೆ ಮಾಡಿದ್ದಾರೆ. ಅಲ್ಲಿಗೆ substituteನ್ನೇ ಕೊಡದೆ ವರ್ಗಾವಣೆ ಮಾಡಿದ್ದಾರೆ. ನಮ್ಮಲ್ಲಿ Chief Officer Postಗೆ ಮೂರು ಜನ ಅಧಿಕಾರಿಗಳು musical chair ಮಾಡುತ್ತಿದ್ದಾರೆ. ಒಬ್ಬರಿಗೆ ಸರ್ಕಾರವೇ ಆದೇಶ ಮಾಡಿ ಅವರು charge ತೆಗೆದುಕೊಂಡ ಮಾರನೆಯ ದಿವಸವೇ ಅವರ ಹಿಂದೆ ಮತ್ತೊಬ್ಬರು ನಿಂತಿದ್ದಾರೆ. ಅದರ ಹಿಂದೆ ಇನ್ನೊಬ್ಬರು ನಿಂತಿದ್ದಾರೆ. ಈ

ರೀತಿಯಾದರೆ ಅಭಿವೃದ್ಧಿ ಯಾವ ರೀತಿಯಾಗುತ್ತದೆ ಎಂಬ ಬಗ್ಗೆ ಸ್ಪಷ್ಟೀಕರಣವನ್ನು ಕೊಟ್ಟರೆ ಒಳ್ಳೆಯದು.

**ಶ್ರೀ ಎಂ.ಸಿ. ಅಶ್ವತ್ಥ್ (ಚನ್ನಪಟ್ಟಣ):** ಮಾನ್ಯ ಉಪಾಧ್ಯಕ್ಷರೆ, ಕಳೆದ ಮೂರು ದಿವಸಗಳಿಂದ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬಗ್ಗೆ ಚರ್ಚೆ ನಡೆದು ವಿರೋಧ ಪಕ್ಷದ ಮಾನ್ಯ ಸದಸ್ಯರುಗಳು ಹಲವಾರು ಅಭಿಪ್ರಾಯಗಳನ್ನು ಕೊಟ್ಟರು. ಇಂದು ಮಾನ್ಯ ಮುಖ್ಯಮಂತ್ರಿಯವರು ಕೆಲವೇ ಕೆಲವಕ್ಕೆ ಉತ್ತರವನ್ನು ನೀಡಿದರು. ನಮ್ಮ ರಾಮನಗರ, ಚನ್ನಪಟ್ಟಣ, ಕನಕಪುರ ಮತ್ತು ಮಾಗಡಿಯಲ್ಲಿ ರೇಷ್ಮೆ ಕೃಷಿಯು ರೈತರ ಜೀವನಾಡಿ. ಆದರೆ, ಅದರ ಬಗ್ಗೆ ಪ್ರಸ್ತಾಪವಾಗಿಲ್ಲ. ರಾಮನಗರ ಜಿಲ್ಲೆ ರೇಷ್ಮೆನಾಡು ಎಂದು ಹೆಸರುವಾಸಿಯಾಗಿದೆ. ಆದ್ದರಿಂದ ರೇಷ್ಮೆ ಬಗ್ಗೆ ಬೆಳಕನ್ನು ಚೆಲ್ಲಿ ಅನುಕೂಲ ಮಾಡಿಕೊಡಬೇಕೆಂದು ಈ ಸದನದ ಮೂಲಕ ಒತ್ತಾಯ ಮಾಡುತ್ತೇನೆ. ರೈತರ ಸಾಲದ ಬಗ್ಗೆ ಕುಮಾರ ಸ್ವಾಮಿಯವರ 20 ತಿಂಗಳ ಕಾಲದಲ್ಲಿ 25 ಸಾವಿರ ರೂ. ಸಾಲಾ ಮನ್ನಾ ಮಾಡಿದ್ದರು. ಈ ಸರ್ಕಾರ ಕೊನೆಯ ಪಕ್ಷ ಅಸಲು ಬೇಡ ಬಡ್ಡಿಯನ್ನಾದರೂ ಮನ್ನಾ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ನಮ್ಮ ಭಾಗದಲ್ಲಿ ತೆಂಗಿಗೆ ನುಸಿ ರೋಗ ಬಂದು ಸುಮಾರು ಜನ ರೈತರು ಕಂಗಾಲಾಗಿದ್ದಾರೆ. ಆದ್ದರಿಂದ ತೆಂಗಿಗೆ ಬೆಂಬಲ ಬೆಲೆಯನ್ನು ಕೊಟ್ಟು ನಮ್ಮ ಭಾಗದ ರೈತರಿಗೆ ಅನುಕೂಲ ಮಾಡಿಕೊಡಬೇಕು. ಕಳೆದ ಉಪ ಚುನಾವಣೆಯ ಸಂದರ್ಭದಲ್ಲಿ ನಮ್ಮ ತಾಲ್ಲೂಕಿಗೆ 5 ಸಾವಿರ ಮನೆಗಳನ್ನು ಕೊಡುವುದಾಗಿ ಘೋಷನೆ ಮಾಡಿದ್ದರು. ದಯಮಾಡಿ ನಮ್ಮ ತಾಲ್ಲೂಕನ್ನು ಗುಡಿಸಲುರಹಿತ ತಾಲ್ಲೂಕನ್ನಾಗಿ ಮಾಡಿಕೊಡಬೇಕೆಂದು ಮಾನ್ಯ ಮುಖ್ಯಮಂತ್ರಿಯವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟ ತಮಗೆ ಧನ್ಯವಾದಗಳು.

**ಶ್ರೀ ಕೆ. ಸುರೇಶ್‌ಗೌಡ (ನಾಗಮಂಗಲ):** ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ವಿಶೇಷ ಅಧಿವೇಶನವನ್ನು ನಾವೆಲ್ಲಾ ನೋಡುತ್ತಿದ್ದೇವೆ. ಕಳೆದ ಅಧಿವೇಶನದಲ್ಲಿ ಮುಖ್ಯಮಂತ್ರಿಗಳು ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಭ್ರಷ್ಟಾಚಾರದ ಬಗ್ಗೆಯೂ ಕರೆಯುತ್ತೇವೆಂದು ಹೇಳಿದ್ದರು. ಆದರೆ, ಇವತ್ತು ಕೃಷಿ, ಗ್ರಾಮೀಣಾಭಿವೃದ್ಧಿ ಮತ್ತು ಬರದ ಬಗ್ಗೆ ಕೊಟ್ಟಿದ್ದಾರೆ. ಇದು ಸಪ್ಲಿಮೆಂಟರಿ

ಬಜೆಟೋ ಅಥವಾ ಏನೋ ಎಂದು ನಮ್ಮ ನಾಯಕರುಗಳು ಪ್ರಶ್ನೆ ಮಾಡಿದ್ದಾರೆ. ನನಗೆ ಆಗುವ ಆಶ್ಚರ್ಯವೇನೆಂದರೆ ನನ್ನ ಕ್ಷೇತ್ರದಲ್ಲಿ ಸರ್ಕಾರಿ ಚೆಕ್‌ಗಳೇ ಬೌನ್ಸ್ ಆಗುತ್ತಿದೆ. ಇಲ್ಲಿ ವಸತಿ ಮತ್ತು ಕೃಷಿ ಸಚಿವರು ಇಲ್ಲ. ಅದೂ 5–10 ಸಾವಿರ ರೂ. ಮೌಲ್ಯದ ನೂರಾರು ಸರ್ಕಾರಿ ಚೆಕ್‌ಗಳು ಬೌನ್ಸ್ ಆಗಿರಬೇಕಾದರೆ ಇಲ್ಲಿ ಮಂಡಿಸಿರುವುದನ್ನು ನಾವು ಕನಸು ಎಂದು ತಿಳಿದುಕೊಳ್ಳಬೇಕೇ ಅಥವಾ ಆಶ್ವಾಸನೆಯೆಂದು ತಿಳಿದುಕೊಳ್ಳಬೇಕೇ ಅರ್ಥವಾಗುತ್ತಿಲ್ಲ. ದಯಮಾಡಿ ಇದರ ಬಗ್ಗೆ ಸ್ಪಷ್ಟೀಕರಣವನ್ನು ಬಯಸುತ್ತೇನೆ. ನನ್ನ ಕ್ಷೇತ್ರ ಅತ್ಯಂತ ಹಿಂದುಳಿದ ತಾಲ್ಲೂಕು ಎಂದು ಡಾ: ನಂಜುಂಡಪ್ಪನವರ ವರದಿಯಲ್ಲಿದೆ. ಜೊತೆಗೆ ಬರ ಪೀಡಿತವೂ ಆಗಿದೆ. ಇದುವರೆಗೆ ನಿನ್ನೆ ಒಂದು ದಿವಸ ಮಳೆ ಆಗಿರುವುದನ್ನು ಬಿಟ್ಟರೆ ಮತ್ತೆ ಯಾವುದೇ ಮಳೆಯಾಗಿಲ್ಲ. ಆದರೆ ನಮ್ಮಲ್ಲಿ ಎರಡು ಹೋಬಳಿಗಳನ್ನು ಬರ ಎಂದು ಸೇರಿಸಿ ಉಳಿದ ನಾಲ್ಕು ಹೋಬಳಿಗಳನ್ನು ಬಿಟ್ಟುಬಿಟ್ಟಿದ್ದಾರೆ. ಆದರೆ 144 ಮಿ.ಮೀಟರ್ ಮಳೆಯಾಗಿದೆಯೆಂದು ತೋರಿಸುತ್ತಾರೆ. ಆದರೆ, ನಮ್ಮಲ್ಲಿ ನಿನ್ನೆ ಒಂದೇ ಒಂದು ದಿವಸ ಮಳೆಯಾಗಿರುವುದು. ಅವೈಜ್ಞಾನಿಕವಾಗಿ ಈ ಕೆಲಸವನ್ನು ಮಾಡಿದ್ದಾರೆ. ನಮ್ಮ ತಾಲ್ಲೂಕನ್ನು ಸಂಪೂರ್ಣವಾಗಿ ಬರಪೀಡಿತ ಪ್ರದೇಶವೆಂದು ಘೋಷಣೆ ಮಾಡಬೇಕು. ಆರ್.ಡಿ.ಪಿ.ಆರ್. ಇಲಾಖೆಯ ಸಚಿವರು ಇಲ್ಲೇ ಇದ್ದಾರೆ. ಕುಡಿಯುವ ನೀರಿನ ಪಾಯಿಂಟ್ ಮಾಡುವ ಸಂದರ್ಭದಲ್ಲಿ ಜಿಯಾಜಲಿಸ್ಟ್‌ನ್ನು ಕಳುಹಿಸುತ್ತೇವೆ. ಅವರು ಪಾಯಿಂಟ್ ಮಾಡಿದ ಮೇಲೆ ಬೋರ್ ಕೊರೆಸುತ್ತೇವೆಂದು ಹೇಳುತ್ತಾರೆ. ಆದರೆ, ಅವರ ಜಿಯಾಜಲಿಸ್ಟ್‌ನವರು ಎಲ್ಲೆಲ್ಲಿ ಪಾಯಿಂಟ್ ಮಾಡುತ್ತಾರೆ ಅಲ್ಲಿ 600 ಅಡಿಯವರೆಗೆ ಕೊರೆದರೂ ಅರ್ಧ ಇಂಚು ನೀರು ಬರುವುದಿಲ್ಲ. ಖಾಸಗಿಯವರನ್ನು ಕರೆದುಕೊಂಡು ಬಂದು ಮಾಡಿಸಿದರೆ 400 ಅಡಿಗೆಲ್ಲ 5–6 ಇಂಚು ನೀರು ಬರುತ್ತದೆ. ಖಾಸಗಿಯವರು ಮಾಡಿದ್ದಕ್ಕೆ ಅವರು ಸರ್ಟಿಫೈ ಮಾಡುವುದಿಲ್ಲವೆಂದು ಹೇಳತ್ತಾರೆ. ಇದರ ಬಗ್ಗೆ ಆರ್.ಡಿ.ಪಿ.ಆರ್.ನ ಮಾನ್ಯ ಸಚಿವರು ಸೂಕ್ತ ನಿರ್ದೇಶನವನ್ನು ಕೊಟ್ಟು ನೀರು ಹೆಚ್ಚಾಗಿ ಎಲ್ಲಿ ಬರುತ್ತದೆ ಅಲ್ಲಿ ಬೋರ್‌ವೆಲ್‌ನ್ನು ತೆಗೆಸುವ ವ್ಯವಸ್ಥೆ ಮಾಡಬೇಕು. ವಿದ್ಯುಚ್ಛಕ್ತಿ ಸಚಿವರು ಇಲ್ಲೇ ಇದ್ದಾರೆ. ವಿದ್ಯಾರ್ಥಿಗಳು ಬಹಳ ಕಷ್ಟವನ್ನು

ಅನುಭವಿಸುತ್ತಿದ್ದಾರೆ. ರೈತರಿಗಂತೂ ನಿಮಗೆ ವಿದ್ಯುತ್ ಕೊಡಲು ಕಷ್ಟವಾಗುತ್ತಿದೆ. ಆದರೆ, ವಿದ್ಯಾರ್ಥಿಗಳಿಗಾದರೂ ನೀವು ಈಗ ಏನು 5 ರಿಂದ 6 ಗಂಟೆ ವಿದ್ಯುತ್‌ನ್ನು ಕೊಡುತ್ತೀರಿ ಅದನ್ನು 6 ರಿಂದ 9 ಗಂಟೆಯವರೆಗಾದರೂ ಕೊಡಿ. ಕೊನೆಯಪಕ್ಷ ಅವರ ಶಿಕ್ಷಣಕ್ಕಾದರೂ ಅನುಕೂಲವಾಗುತ್ತದೆ. ನೀರಾವರಿ ಸಚಿವರು ಇಲ್ಲೇ ಇದ್ದಾರೆ. ನಮ್ಮ ಭಾಗದಲ್ಲಿ 1992ರಲ್ಲಿ 9 ಏತ ನೀರಾವರಿ ಯೋಜನೆಗಳು ಪ್ರಾರಂಭವಾಗಿದೆ. 80 ಪರ್ಸೆಂಟ್ ಕೆಲಸ ಪೂರ್ಣವಾಗಿದೆ. ಆದರೆ, ಇದುವರೆಗೆ ಒಂದೂ ಕೆಲಸ ಮಾಡುತ್ತಿಲ್ಲ. ನಾವು ಐ.ಸಿ.ಸಿ. ಸಭೆಗಳನ್ನು ಮಾಡುತ್ತೇವೆ. ಆದರೆ, ಅದು ಕೇವಲ ನಾಮಕಾವಸ್ಥೆಯ ಸಭೆಗಳಾಗಿದೆ. ಕೊನೆಯ ಭಾಗದಲ್ಲಿರುವ ಅಚ್ಚುಕಟ್ಟುದಾರರಿಗೆ ಇದುವರೆಗೂ ನೀರನ್ನು ಬಿಡುವುದಕ್ಕೆ ಹೋಗಿಲ್ಲ. ನಿನ್ನೆ ಏನೋ ಮಳೆ ಬಂದಿದೆ. ಸ್ವಲ್ಪ ಉಸಿರಾಡಲು ಸಾಧ್ಯವಾಗಿದೆ. ದಯಮಾಡಿ ಐ.ಸಿ.ಸಿ. ಸಭೆಯನ್ನು ಕರೆದು ಅಧಿಕಾರಿಗಳಿಗೆ ಸೂಚನೆ ಕೊಡಿ. ಇದುವರೆಗೆ ಎರಡು ತಿಂಗಳಿನಿಂದ ನೀರು ಬಿಡುತ್ತಿದ್ದಾರೆ. ಆದರೆ, H.L.B.C. ಅಧಿಕಾರಿಗಳು ನಮ್ಮ ತಾಲ್ಲೂಕಿನಲ್ಲಿ ಒಂದು ಕೆರೆಯನ್ನೂ ತುಂಬಿಸಲು ಆಗಿಲ್ಲ. ದಯಮಾಡಿ ಜಲಸಂಪನ್ಮೂಲ ಸಚಿವರು ಇದರ ಬಗ್ಗೆ ಗಮನ ಹರಿಸಬೇಕು. ಅಲ್ಲಿ 9 ಏತ ನೀರಾವರಿ ಕೇವಲ 10–15 ಲಕ್ಷ ರೂ. ಹಣದಿಂದ ಉಳಿದುಕೊಂಡಿದೆ. ಕೋಟ್ಯಂತರ ರೂಪಾಯಿ ಖರ್ಚು ಮಾಡಿದ್ದರೂ ಇದು ನಿಂತುಹೋಗಿದೆ. ಸುಮಾರು 15 ವರ್ಷಗಳಿಂದ ಇದನ್ನು ಪ್ರಾರಂಭ ಮಾಡುವುದಕ್ಕೆ ಆಗಿಲ್ಲ. ಹಲವಾರು ವಿಶೇಷ ಯೋಜನೆಯಲ್ಲಿ ನಮ್ಮಲ್ಲಿ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಿದ್ದೀರಿ. ರಾಜೀವ್‌ಗಾಂಧಿ ಸಬ್‌ಮಿಷನ್ ಇರಬಹುದು. ನಬಾರ್ಡ್ ಇರಬಹುದು ಅಥವಾ ಮತ್ತೊಂದು ಇರಬಹುದು. ಆದರೆ, ಪ್ರಾಪರ್ ಆಗಿ ನಿರ್ವಹಣೆ ಮಾಡುವುದಕ್ಕೆ ಯಾರೂ ತಯಾರಿಲ್ಲ. ತಾಲ್ಲೂಕು ಪಂಚಾಯಿತಿ, ವಿಲೇಜ್ ಪಂಚಾಯಿತಿಯಿಂದ ಇದನ್ನು ಖಂಡಿತವಾಗಿಯೂ maintain ಮಾಡುವುದಕ್ಕೆ ಆಗುವುದಿಲ್ಲ. ಲಕ್ಷಾಂತರ ರೂಪಾಯಿ ಕೊಟ್ಟು ಯೋಜನೆಯನ್ನು ಮಾಡುತ್ತೀರಿ. ಆದರೆ ಅದರ maintain ಸರಿಯಾಗಿ ಆಗುವುದಿಲ್ಲ. ವಿಲೇಜ್ ಪಂಚಾಯಿತಿ ಮತ್ತು ಆ ವಾಲ್ವ್‌ಮೆನ್ ಕೈಯಲ್ಲಿ ಆಗುವುದಿಲ್ಲ. ಕೊನೆಯ ಪಕ್ಷ ಒಂದು ಜಿಲ್ಲೆಗೆ ಒಂದು ವಿಶೇಷ

ಘಟಕವನ್ನು ಇದಕ್ಕಾಗಿ ಮಾಡಿ ಅವರಿಗೆ ಇದನ್ನು ವಹಿಸಬೇಕು. ಕೆರೆಗಳನ್ನು ಮಾಡುತ್ತೇವೆಂದು ಹೇಳಿದ್ದಾರೆ. ಇರತಕ್ಕ ಕೆರೆಗಳ ಒತ್ತುವರಿ ತೆಗೆಸುತ್ತೇವೆಂದು ಹೇಳಿದ್ದಾರೆ. ಆದರೆ, ಎಷ್ಟು ದಿವಸದಲ್ಲಿ ತೆಗೆಯುತ್ತಾರೆ ಎಂಬ ಬಗ್ಗೆ ಹೇಳಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಕೆ. ರಾಜು (ರಾಮನಗರ):** ಮಾನ್ಯ ಉಪಾಧ್ಯಕ್ಷರೆ, ಮೊದಲನೆಯದಾಗಿ ನನಗೆ ಅವಕಾಶ ಕೊಟ್ಟಿದ್ದಕ್ಕೆ ಧನ್ಯವಾದವನ್ನು ಅರ್ಪಿಸುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಯವರು ಗ್ರಾಮೀಣಾಭಿವೃದ್ಧಿ ಮತ್ತು ಕೃಷಿ ಬಗ್ಗೆ ವಿಶೇಷ ಅಧಿವೇಶನವನ್ನು ಕರೆದಾಗ ನಾವೆಲ್ಲಾ ಬಹಳ ನಿರೀಕ್ಷೆಯನ್ನಿಟ್ಟುಕೊಂಡಿದ್ದೆವು. ಇಲ್ಲಿ ಬಂದಿರುವ ಬಹುತೇಕ ಶಾಸಕರು ಗ್ರಾಮೀಣ ಭಾಗದಿಂದ ಬಂದವರಾಗಿದ್ದೇವೆ. ನಮಗೆ ವಿಶೇಷ ಒತ್ತನ್ನು ಕೊಟ್ಟು ಹೊಸ ನಾಂದಿಯನ್ನು ಹಾಡುತ್ತಾರೆಂದು ನಾವು ಬಹಳ ಆಸೆ ಇಟ್ಟುಕೊಂಡಿದ್ದೆವು. ಆದರೆ, ಮಾನ್ಯ ಮುಖ್ಯಮಂತ್ರಿಗಳ ಉತ್ತರವನ್ನು ನೋಡಿದಾಗ ನಮಗೆ ಬಹಳ ನಿರಾಸೆಯಾಗಿದೆ. ಎಷ್ಟೋ ಕಡೆ ನಮ್ಮ ಗ್ರಾಮೀಣ ಭಾಗದಲ್ಲಿ ರೈತರು ಮತ್ತು ಯುವಕರು ವಲಸೆ ಹೋಗಲು ಕಾರಣವೇನೆಂದರೆ, ಈ ದಿನ ವ್ಯವಸಾಯ ಲಾಭದಾಯಕವಲ್ಲವೆಂದು ತೀರ್ಮಾನಕ್ಕೆ ಬಂದು ಎಲ್ಲಾ ಹಳ್ಳಿಯ ಯುವಕರುಗಳು ಪಟ್ಟಣ ಪ್ರದೇಶಕ್ಕೆ ವಲಸೆ ಹೋಗುತ್ತಿದ್ದಾರೆ. ಆದುದರಿಂದ ಹಳ್ಳಿಗಳಲ್ಲಿ ರೈತರು ಮತ್ತು ಯುವಕರುಗಳು ಇರಬೇಕೆಂದರೆ ಕೆಲವು ಲಾಭದಾಯಕವಾದ ಕಾರ್ಯಕ್ರಮಗಳನ್ನು ಹಾಕಿಕೊಂಡು ರೈತರಿಗೆ ಅನುಕೂಲಕರವಾದ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ. ಮೊದಲನೆಯದಾಗಿ ನೀರಾವರಿ ವಿಷಯಗಳ ಬಗ್ಗೆ ನಾನು ಮಾತನಾಡಿ ನನ್ನ ತಾಲ್ಲೂಕಿನ ಬಗ್ಗೆ ಈ ವಿಚಾರದಲ್ಲಿ ಹೇಳಬಯಸುತ್ತೇನೆ. ಸನ್ಮಾನ್ಯ ನಿಜಲಿಂಗಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ ಆಗಿನ ಕಾಲದಲ್ಲಿ ಶಂಕುಸ್ಥಾಪನೆಯನ್ನು ಮಾಡಿದಂಥ ಮಂಚನಬೆಲೆ ಜಲಾಶಯ ಇನ್ನೂ ಕೂಡ ಮುಗಿದಿಲ್ಲ. ಅಂದರೆ 35 ರಿಂದ 40 ವರ್ಷಗಳ ಕಾಲವಾದರೂ ಹಿಂದೆ ಪ್ರಾರಂಭವಾದ ಈ ಯೋಜನೆ ಮುಗಿಯಲಿಲ್ಲವೆಂದರೆ ರೈತರಿಗೆ ನೀರಾವರಿ ಅನುಕೂಲವನ್ನು ಮಾಡಿಕೊಡುವುದಕ್ಕೆ ಎಷ್ಟರ ಮಟ್ಟಿಗೆ ಸಾಧ್ಯವಾಗುತ್ತದೆ ಎನ್ನುವುದು ಒಂದು ವಿಷಯ. ಎರಡನೆಯದಾಗಿ ರೈತರು ಬೆಳೆಯುವಂಥ ರೇಷ್ಮೆ

ಬೆಳೆ ಇರಬಹುದು, ತೆಂಗಿನ ಬೆಳೆ ಇರಬಹುದು, ಇಂದು ಇವುಗಳು ಬಹಳ ಅಧೋಗತಿಗೆ ತಲುಪಿವೆ. ನಿಮಗೆಲ್ಲರಿಗೂ ಈ ವಿಷಯ ಗೊತ್ತಿದೆ. ನಾನು 1985ನೇ ಇಸವಿಯಲ್ಲಿ ಹಳ್ಳಿಯಲ್ಲಿ ವ್ಯವಸಾಯ ಮಾಡುವುದಕ್ಕೆ ಹೋದಾಗ 5 ರೂಪಾಯಿಗೆ ತೆಂಗಿನಕಾಯಿಯನ್ನು ಮಾರಿದ್ದೇವೆ, 120 ರೂಪಾಯಿಗೆ ರೇಷ್ಮೆಯನ್ನು ಮಾಡಿದ್ದೇವೆ. ಇವತ್ತೂ ಕೂಡ ಅದೇ ರೀತಿಯ ಬೆಲೆ ಇದ್ದಾಗ ರೈತರು ಯಾವ ರೀತಿಯಲ್ಲಿ ಉದ್ಧಾರವಾಗುತ್ತಾರೆ? ನಾವು ಕೊಡುವಂಥ ಕೂಲಿ ಇರಬಹುದು, ನಾವು ತೆಗೆದುಕೊಳ್ಳುವಂಥ ಯೂರಿಯಾ ಇರಬಹುದು ಅಥವಾ ಕೃಷಿಗೆ ಬೇಕಾದಂಥವುಗಳ ಬೆಲೆ ಇಪ್ಪತ್ತು ಪಟ್ಟು, ಮೂವತ್ತು ಪಟ್ಟು ಜಾಸ್ತಿಯಾಗಿ ಇಂದು ರೈತರುಗಳು ಅಧೋಗತಿಗೆ ತಲುಪುತ್ತಿದ್ದಾರೆ. ಯಾವ ಮಟ್ಟದಲ್ಲಿ ಇವುಗಳ ಬೆಲೆ ಹೆಚ್ಚು ಆಗುತ್ತಿದೆಯೋ ಅದೇ ರೀತಿಯಲ್ಲಿ ರೈತರುಗಳು ಬೆಳೆದ ಬೆಳೆಗೆ ಉತ್ತಮ ಬೆಲೆ ಸಿಗಲು ಅನುಕೂಲವಾಗುವಂಥ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂದು ಹೇಳಿ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಎನ್.ಹೆಚ್. ಶಿವಶಂಕ ರೆಡ್ಡಿ (ಗೌರಿಬಿದನೂರು):** ಮಾನ್ಯ ಉಪಾಧ್ಯಕ್ಷರೆ, ಕೃಷಿಗೆ ಸಂಬಂಧಪಟ್ಟಂತೆ ಅಂತರ್ಜಲ ಸಂರಕ್ಷಣೆ ಬಗ್ಗೆ ವಿಶೇಷವಾದಂಥ ಕಾರ್ಯಕ್ರಮಗಳನ್ನು ರೂಪಿಸುತ್ತೇವೆ ಎನ್ನುವಂಥ ಮಾತುಗಳನ್ನು ಹೇಳಿದ್ದಾರೆ. ಇತ್ತೀಚೆಗೆ ಒಂದು ವಾರದ ಹಿಂದೆ ಮರಳು ಗಣಿಗಾರಿಕೆಗೆ ಮುಕ್ತವಾದಂಥ ಅವಕಾಶ ಸರ್ಕಾರ ಕೊಟ್ಟಿದೆ. ಇದರಿಂದೇನಾಗಿಯೆಂದರೆ, ಎಲ್ಲಾ ನದಿ ಪಾತ್ರಗಳಲ್ಲಿ ಮರಳನ್ನು ತೆಗೆಯುತ್ತಿದ್ದಾರೆ. ನಮ್ಮ ಜಿಲ್ಲೆಗಳಲ್ಲಿ ಯಾವುದೇ ನೀರಾವರಿ ಸೌಲಭ್ಯಗಳು ಇರುವುದಿಲ್ಲ. ಕೇವಲ ಕೊಳವೆ ಬಾವಿಗಳ ಮುಖಾಂತರ ಅಥವಾ ಕೆರೆ ಆಧಾರದ ಮೇಲೆ ನೀರಾವರಿ ಸೌಲಭ್ಯವಿದೆ. ಹೀಗಾಗಿ ಈ ನದಿ ಪಾತ್ರದಲ್ಲಿ ಮರಳು ತೆಗೆಯುವುದರಿಂದ ಬಹಳಷ್ಟು ಅಂತರ್ಜಲ ಇನ್ನೂ ಕುಸಿಯುತ್ತದೆ. ಅನೇಕ ನೀರಾವರಿ ಕೊಳವೆ ಬಾವಿಗಳು ಕೂಡ ಒಣಗಿ ಹೋಗತಕ್ಕಂಥ ಪರಿಸ್ಥಿತಿ ಬಂದಿದೆ. ಈಗಾಗಲೇ ರೈತರು ಕೂಡ ಬಹಳಷ್ಟು ಕಂಗಾಲಾಗಿದ್ದಾರೆ. ನಾನು ಈಗಾಗಲೇ ಈ ವಿಚಾರದ ಬಗ್ಗೆ ಮಾನ್ಯ ನೀರಾವರಿ ಸಚಿವರ ಗಮನಕ್ಕೂ ಕೂಡ ತಂದಿದ್ದೇನೆ. ಈಗಾಗಲೇ ಏನು ಆಜ್ಞೆಯನ್ನು

ಮಾಡಿದ್ದಾರೆ, ಅದನ್ನು ನಮ್ಮ ಜಿಲ್ಲೆಗಳಲ್ಲಿ, ಅದರಲ್ಲಿಯೂ ವಿಶೇಷವಾದಂಥ ಬರಪೀಡಿತ ಜಿಲ್ಲೆಗಳಲ್ಲಿ ಅಂದರೆ ಚಿಕ್ಕಬಳ್ಳಾಪುರ ಇರಬಹುದು, ಕೋಲಾರ ಇರಬಹುದು ಅಥವಾ ತುಮಕೂರು ಇರಬಹುದು, ಈ ಜಿಲ್ಲೆಗಳಲ್ಲಿ ವಿಶೇಷವಾಗಿ ಗಣಿಗಾರಿಕೆಯನ್ನು ನಿಷೇಧ ಮಾಡತಕ್ಕಂಥ ಕೆಲಸವನ್ನು ಮಾಡಬೇಕೆಂಬ ಮಾನ್ಯ ಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ):** ಮಾನ್ಯ ಉಪಾಧ್ಯಕ್ಷರೆ, 37 ಭವಿಷ್ಯದ ಹೆಜ್ಜೆಗಳ ಬಗ್ಗೆ ಚರ್ಚೆಯನ್ನು ಮೂರು ದಿವಸಗಳಲ್ಲಿ ಮಾಡಿರತಕ್ಕಂಥದ್ದು ಒಂದು ಕಡೆ ಭವಿಷ್ಯವನ್ನು ನಿರ್ಮಾಣ ಮಾಡತಕ್ಕಂಥದ್ದರ ಬಗ್ಗೆ ಚಿಂತನೆಯಾಗಿದೆಯೆಂದು ಅಂದುಕೊಂಡರೂ ಕೂಡ ಏನಿವತ್ತು 37 ಹೆಜ್ಜೆಗಳಲ್ಲಿ ಬಹಳ ಪ್ರಾಮುಖ್ಯವಾದಂಥ ಹೆಜ್ಜೆಯೆಂದರೆ ಮಾನ್ಯ ಬಸವರಾಜ ಬೊಮ್ಮಾಯಿಯವರ ಹೆಜ್ಜೆಯೆಂದು ಹೇಳಿ ನಾನು ಗುರುತಿಸಿಕೊಂಡಿದ್ದೇನೆ. ಅಂದರೆ ಮುಖ್ಯಮಂತ್ರಿಗಳನ್ನು ಬಿಟ್ಟರೆ ಡೈನಾಮಿಕ್ ಮಂತ್ರಿಗಳೆಂದರೆ ಶ್ರೀ ಬಸವರಾಜ ಬೊಮ್ಮಾಯಿಯವರು ಮತ್ತು ಆರ್.ಡಿ.ಪಿ.ಆರ್. ಮಂತ್ರಿಗಳು ಮತ್ತು ಇನ್ನೂ ಮೂರ್ನಾಲ್ಕು ಮಂದಿ ನಮಗೆ ನೋಡುವುದಕ್ಕೆ ಕಾಣುತ್ತಾರೆ. ನೀರಾವರಿಗೆ ಅವರು ಏನು ಹೇಳಿದ್ದಾರೆಂದರೆ AIDP ಎಂದು ಒಂದು ಸೆಂಟ್ರಲ್ ಸ್ಕೀಂ ಇದೆ. ಅದರಲ್ಲಿ ಹಣಕಾಸಿನ ನೆರವನ್ನು ಒದಗಿಸುತ್ತೇವೆ ಮತ್ತು ಸಂಪನ್ಮೂಲಗಳನ್ನು ಹೆಚ್ಚಿಸುತ್ತೇವೆ ಎನ್ನುವಂಥ ಮಾತನ್ನು ಬಿಟ್ಟರೆ ಇನ್ನೂ ನಮಗೆ 30 ಲಕ್ಷ ಹೆಕ್ಟೇರ್‌ನಷ್ಟು ಜಮೀನಿಗೆ ಕರ್ನಾಟಕ ರಾಜ್ಯದಲ್ಲಿ ನೀರಾವರಿಯಾಗಬೇಕಾಗಿದೆ. ಇದರ ಬಗ್ಗೆ ಅವರು ಏನನ್ನೂ ಹೇಳೇ ಇಲ್ಲ. ತಮ್ಮ ಅಸಹಾಯಕತೆಯನ್ನು ತೋರಿಸುತ್ತಿದ್ದಾರೆ. ಈ ಮೂರು ದಿವಸಗಳಲ್ಲಿ ನಾವೇನು ಚರ್ಚೆ ಮಾಡಿದ್ದೇವಲ್ಲ. ಈ ಗ್ರಾಮೀಣಾಭಿವೃದ್ಧಿ ಮತ್ತು ಕೃಷಿಗೆ ಒಳ್ಳೆಯ ಚಾಲನೆ ಸಿಗಬೇಕಾದರೆ 30 ಲಕ್ಷ ಹೆಕ್ಟೇರ್‌ಗೆ ಈ ರಾಜ್ಯದಲ್ಲಿ ನೀರಾವರಿ ಸೌಲಭ್ಯವನ್ನು ಒದಗಿಸಿದರೆ ಮಾತ್ರ ಈ ಹೊಸ ಭವಿಷ್ಯದ ಹೆಜ್ಜೆಗಳಿಗೆ ಏನಾದರೂ ಒಂದು ಪೂರಕ ಶಕ್ತಿಯನ್ನು ತುಂಬತಕ್ಕಂಥ ಕೆಲಸವಾಗುತ್ತದೆ. ಆ ಕಾರಣಕ್ಕಾಗಿ ಮಾನ್ಯ ಬಸವರಾಜ ಬೊಮ್ಮಾಯಿಯವರು ಈ ವರ್ಷದ ಆಯವ್ಯಯದಲ್ಲಿ ಸುಮಾರು 10 ಸಾವಿರ ಕೋಟಿ ಅನುದಾನವನ್ನು ಇಡತಕ್ಕಂಥ ಪ್ರಾಮಾಣಿಕ ಪ್ರಯತ್ನವನ್ನು

V13-Sd6

ಮಾಡುತ್ತಾರೆಂದು ವಿಶ್ವಾಸವನ್ನು ಇಟ್ಟುಕೊಂಡಿದ್ದೇನೆಂದು ಹೇಳಬಯಸುತ್ತೇನೆ. ಇದಲ್ಲದೆ ಮಾನ್ಯ ಇಂಧನ ಮಂತ್ರಿಗಳೆ, ಮಾನ್ಯ ಬೆಳ್ಳುಬ್ಬಿಯವರು ಒಂದು ಸಣ್ಣ ಸಲಹೆಯನ್ನು ಕೊಟ್ಟಿದ್ದಾರೆ. ನಾನೂ ಕೂಡ ಮೊನ್ನೆ ಮಾತನಾಡತಕ್ಕಂಥ ಸಂದರ್ಭದಲ್ಲಿ ಹೇಳಿದೆ. ಏನು ಓವರ್‌ಲೋಡ್ ಇದೆ, ಏನು ಗ್ರಾಮೀಣ ಮಟ್ಟದಲ್ಲಿರತಕ್ಕಂಥ ಐ.ಪಿ. ಸೆಟ್‌ನ್ನು ಹಾಕಿಕೊಂಡಿರತಕ್ಕಂಥ ರೈತರ ಬಗ್ಗೆ ನೀವು ಅದರ ಬಗ್ಗೆ ಸರ್ವೆ ಮಾಡಿಸಿ detailed project report ಮಾಡಿಸಿ, ಎಲ್ಲಿ ಓವರ್‌ಲೋಡ್ ಇವೆ ಅಲ್ಲಿ ಇನ್ನೂ ಎಷ್ಟು ಟ್ರಾನ್ಸ್‌ಫಾರ್ಮರ್‌ಗಳು ಬೇಕು ಎಂಬ ಬಗ್ಗೆ ಒಂದು ಸರ್ವೆಯನ್ನಾದರೂ ಮಾಡಿಸಿ, ಆ ಕಳಕಳಿ ನಿಮಗೆ ಇದೆಯೋ ಅಥವಾ ಇಲ್ಲವೋ ಎಂಬ ಬಗ್ಗೆ ನನಗೆ ಅರ್ಥವಾಗುತ್ತಿಲ್ಲ. ಇವರು ಆಗಲೇ ತಮ್ಮ ಭಾಷಣದಲ್ಲಿ ಹೇಳಿದರು. 20 ಸಾವಿರ ಮೆಗಾವ್ಯಾಟ್ ವಿದ್ಯುತ್‌ನ್ನು ಉತ್ಪಾದನೆ ಮಾಡುತ್ತೇವೆಂದು ಹೇಳುತ್ತಾರೆ. ಮಾಡಿ, ಸಂತೋಷ. ಆದರೆ ಈಗ ರೈತ ಏನು ಅನುಭವಿಸುತ್ತಿದ್ದಾನೆ, ಈಗ ತಾನೆ ನಮ್ಮ ಸಹೋದರರು ಮಾತನಾಡುವಾಗ ಹೇಳಿದರು. ಮಕ್ಕಳು ಓದುವುದಕ್ಕೆ ಅಗತ್ಯವಿರುವ ವಿದ್ಯುತ್‌ನ್ನು ನೀವು ಕೊಡುವುದಕ್ಕೆ ನಿಮ್ಮ ಕೈಯಲ್ಲಿ ಆಗುತ್ತಿಲ್ಲ. ಟ್ರಾನ್ಸ್‌ಫಾರ್ಮರ್‌ಗಳ ಬಗ್ಗೆ ನೀವು ಸರ್ವೆ ಮಾಡಿಸಿ. ಇವತ್ತು ಓವರ್‌ಲೋಡ್ ಇರುವ ಕಡೆ ಲೋಡ್ ಕಡಿಮೆ ಮಾಡಿದರೆ ಸರ್ಕಾರಕ್ಕೂ ಉಳಿತಾಯವಾಗುತ್ತದೆ ಮತ್ತು ರೈತರಿಗೆ ನೀವು 3 ತಾಸು, 6 ತಾಸು ಏನು 3 ಫೇಸ್‌ನಲ್ಲಿ ವಿದ್ಯುತ್‌ನ್ನು ಸರಬರಾಜು ಮಾಡುತ್ತಿದ್ದಿರಲ್ಲ, ಅದರಲ್ಲಿ ಇದ್ದದ್ದರಲ್ಲಿಯೇ ರೈತ ಬದುಕಿಕೊಳ್ಳುತ್ತೇನೆ. ಆ ಕಾರಣಕ್ಕಾಗಿ ನಾನು ಮಾನ್ಯ ಅಧ್ಯಕ್ಷರ ಮೂಲಕ ಹೇಳುತ್ತಾ ಏನು ಇವತ್ತು ಟ್ರಾನ್ಸ್‌ಫಾರ್ಮರ್‌ಗಳು ಹೆಚ್ಚಾಗಿ ಬೇಕಾಗಿದೆ ಅದನ್ನು ಪೂರೈಕೆ ಮಾಡಬೇಕೆಂದು ನಾನು ಒತ್ತಾಯವನ್ನು ಮಾಡುತ್ತೇನೆ. ಇದರ ಜೊತೆಗೆ ಬೆಳೆ ವಿಮೆ ಬಗ್ಗೆ ಹೇಳುವುದೇನೆಂದರೆ, ನಾನು ಮೊನ್ನೆ ಒಂದು ಪತ್ರಿಕೆಯಲ್ಲಿ ನೋಡಿದೆ. ರಾಜ್ಯಕ್ಕೆ ಬಿಡುಗಡೆಯಾಗಿರತಕ್ಕಂಥದ್ದು 142 ಕೋಟಿ ರೂ.ಗಳ ಹಣ. ಇದರಲ್ಲಿ ಕೇವಲ ಹಾವೇರಿಗೆ 42 ಕೋಟಿ ರೂ.ಗಳನ್ನು ಕೊಡಲಾಗಿದೆ. ಇದೇನೂ ನಮಗೆ ಅರ್ಥವಾಗುತ್ತಿಲ್ಲ. ಒಂದು ಕಡೆ ಬೆಳೆ ವಿಮೆ ಯೋಜನೆಯಲ್ಲಿ ಹಣವನ್ನು ತುಂಬಿರತಕ್ಕಂಥ ಪ್ರದೇಶದಲ್ಲಿ ಒಂದು ಪೈಸೆ ಕೂಡ ಹಣ ರಿಲೀಸ್ ಆಗುತ್ತಿಲ್ಲ.

ಆದರೆ ಹಾವೇರಿಗೆ 42 ಕೋಟಿ ರೂ. ಹಣವನ್ನು ಬಿಡುಗಡೆ ಮಾಡುತ್ತಾರೆ. ಈಗ ತಾವು ಹೇಳಿದಿರಲ್ಲ, ಪಂಚಾಯತಿ ಮಟ್ಟಕ್ಕೆ ತರುವಂಥದ್ದು ಬಹಳ ಒಳ್ಳೆಯದು. ಮತ್ತೆ ಇನ್ನೊಂದು ವಿಚಾರ ಏನೆಂದರೆ, ಪ್ರಾರಂಭಿಕ ಇಳುವರಿ ಮತ್ತು ಮೂಲ ಇಳುವರಿ ಎಂದು ಅವರು ಪ್ರೆಸೆಂಟ್ ಇಳುವರಿ ಎಂದು ಮಾಡಿದ್ದಾರೆ. ಈ ವರ್ಷ ಬರ ಎಂದು ಸರ್ಕಾರ ಘೋಷಣೆಯನ್ನು ಮಾಡಿದೆ. ಆದರೆ ಈ ವರ್ಷದ ಲೆಕ್ಕಕ್ಕೆ ನಾವು ಹೇಳಿರುವುದು ಬರುವುದಿಲ್ಲವಂತೆ, ಹಿಂದಿನ ಮೂರು ವರ್ಷಗಳ ಲೆಕ್ಕವನ್ನು ತೆಗೆದುಕೊಳ್ಳುತ್ತಾರಂತೆ. ಇಂಥದ್ದರಲ್ಲಿ ಬದಲಾವಣೆಯನ್ನು ಮಾಡಬೇಕೆಂದು ನಾನು ಒತ್ತಾಯವನ್ನು ಮಾಡುತ್ತೇನೆ. ಇನ್ನು ಬೆಳೆ ವಿಮೆಯಲ್ಲಿ ಏನು ಗೊಂದಲವಾಗಿದೆ ಅದನ್ನು ಸರಿಪಡಿಸತಕ್ಕಂಥ ಕೆಲಸವನ್ನು ಮಾನ್ಯ ಕಂದಾಯ ಸಚಿವರು ಮಾಡಬೇಕೆಂದು ಹೇಳಿ ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಇನ್ನು ಗಣಿ ಬಗ್ಗೆ ಹೇಳಬೇಕೆಂದರೆ ಗಣಿಯನ್ನು ಅಗೆದು ಅದಿರನ್ನು ಹೊರದೇಶಕ್ಕೆ ಕಳುಹಿಸುತ್ತೇವೆ. ಆದರೆ ಅದರಿಂದ ಹೆಚ್ಚು ಲಾಭವೇನೂ ಈ ರಾಜ್ಯಕ್ಕೆ ಆಗುತ್ತಿಲ್ಲ. ಆದುದರಿಂದ ಸ್ಥಳೀಯವಾಗಿ ಇವತ್ತು ಕಚ್ಚಾ ವಸ್ತುಗಳನ್ನು ಉಪಯೋಗ ಮಾಡುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಡಬೇಕು ಎಂದು ಮಾನ್ಯ ಕೈಗಾರಿಕಾ ಸಚಿವರಿಗೆ ತಮ್ಮ ಮೂಲಕ ಕೇಳಿಕೊಳ್ಳುತ್ತಾ ನನಗೆ ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಕೆ.ಪಿ. ಪಾಟೀಲ್ (ನಿಪ್ಪಾಣಿ):** ಮಾನ್ಯ ಉಪಾಧ್ಯಕ್ಷರೆ, ಈ ಕುಡಿಯುವ ನೀರಿನ ಯೋಜನೆ ಬಗ್ಗೆ ಈಗಾಗಲೇ ಸಾಕಷ್ಟು ಗೌರವಾನ್ವಿತ ಸದಸ್ಯರುಗಳು ಸಲಹೆಯನ್ನು ಕೊಟ್ಟಿದ್ದಾರೆ. ತಮ್ಮ ಮುಖಾಂತರ ಸರ್ಕಾರಕ್ಕೆ ನನ್ನ ವಿನಂತಿಯೇನೆಂದರೆ ಪ್ರತಿಯೊಂದು ಜಿಲ್ಲಾ ಪಂಚಾಯತಿ ವ್ಯಾಪ್ತಿ ಕ್ಷೇತ್ರದಲ್ಲಿ ಒಬ್ಬ ಜೂನಿಯರ್ ಇಂಜಿನಿಯರ್‌ರವರನ್ನು ನಾವು ನೇಮಕಾತಿ ಮಾಡಬೇಕು. ಅಂದರೆ ಆ ಭಾಗದಲ್ಲಿ ಬರುವಂಥ ಎಲ್ಲಾ drinking water supply schemeಗಳೇನಿವೆ ಅಂದರೆ mini water supply schemes ಇರಬಹುದು ಅಥವಾ ಬಹು ಗ್ರಾಮಗಳ ಸ್ಕೀಂ ಇರಬಹುದು, ಅದರ maintenance ಅವರ ಮುಖಾಂತರ ಆಗಬೇಕು ಮತ್ತು ಅದರ ಉಸ್ತುವಾರಿಯನ್ನು ಜಿಲ್ಲಾ ಪಂಚಾಯತಿಯವರು ತೆಗೆದುಕೊಳ್ಳಬೇಕು. ಏಕೆಂದರೆ ಗ್ರಾಮ ಪಂಚಾಯತಿ

ಕಡೆಯಿಂದ ಅವುಗಳನ್ನು ಮಾಡಲು ಸಾಧ್ಯವಿಲ್ಲ. ಇನ್ನು ಎರಡನೆಯದಾಗಿ ಪ್ರತಿಯೊಂದು ಗ್ರಾಮ ಪಂಚಾಯತಿಗೆ ಕನಿಷ್ಠ ಹತ್ತು ಲಕ್ಷ ರೂಪಾಯಿಗಳ ಅನುದಾನವನ್ನು ಕೊಡಬೇಕು. ಪ್ರತಿಯೊಂದು ಗ್ರಾಮ ಪಂಚಾಯತಿ ಸದಸ್ಯರ ಸಂಖ್ಯೆ ಎಷ್ಟಿದೆ ಅದನ್ನೂ ಕೂಡ ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಉದಾಹರಣೆಗೆ ಹೇಳಬೇಕೆಂದರೆ ಬೆಳಗಾಂ ಜಿಲ್ಲೆಯಲ್ಲಿ ಆರು ಗ್ರಾಮಗಳ ಸಂಖ್ಯೆ ಇರತಕ್ಕಂಥ ಗ್ರಾಮ ಪಂಚಾಯಿತಿ ಕೂಡ ಇದೆ. 54 ಗ್ರಾಮಗಳ ಸದಸ್ಯರನ್ನೊಳಗೊಂಡ ಗ್ರಾಮ ಪಂಚಾಯತಿ ಕೂಡ ಇದೆ. 6 ಜನ ಇರುವ ಗ್ರಾಮ ಪಂಚಾಯಿತಿಗೂ ಒಂದೇ ರೀತಿಯ ಅನುದಾನ ಮತ್ತು 54 ಜನ ಸದಸ್ಯರಿರುವ ಗ್ರಾಮ ಪಂಚಾಯಿತಿಗೂ ಒಂದೇ ರೀತಿಯ ಅನುದಾನವನ್ನು ಕೊಡುತ್ತಿದ್ದಾರೆ. ಅನುದಾನವನ್ನು ಹೆಚ್ಚು ಜನ ಸದಸ್ಯರಿರುವ ಕಡೆ ಹೆಚ್ಚು ಮಾಡಬೇಕು. ಇನ್ನು ನನ್ನ ಎರಡನೆಯ ಸಲಹೆಯೇನೆಂದರೆ drinking water supply schemes ಏನಿದೆ ಅದರ ಉಸ್ತುವಾರಿಯನ್ನು ಜಿಲ್ಲಾ ಪಂಚಾಯತಿಯವರು ನೇರವಾಗಿ ತೆಗೆದುಕೊಳ್ಳಬೇಕು. ಈ ರೀತಿಯಾದರೆ ಮಾತ್ರ ಅದರ ಕಂಟ್ರೋಲಿಂಗ್ ಮತ್ತು ಮಾನಿಟರಿಂಗ್ ಮಾಡಲು ಸಾಧ್ಯವಾಗುತ್ತದೆ. ಇನ್ನು ಮೂರನೆಯದಾಗಿ ಈ ನದಿ ಪಾತ್ರಗಳಲ್ಲಿ ಅಥವಾ ಪಾರ್ಟ್ 'ಬಿ'ಯಲ್ಲಿ ಅದರಲ್ಲಿಯೂ ವಿಶೇಷವಾಗಿ ನಮ್ಮ ಚಿಕ್ಕೋಡಿ ತಾಲ್ಲೂಕಿನಲ್ಲಿ ನೀರನ್ನು ಪೂರೈಕೆ ಮಾಡುವ ಕೆಲಸವನ್ನು ತೆಗೆದುಕೊಳ್ಳಬೇಕು. ಇನ್ನು ನಮ್ಮ ಭಾಗದಲ್ಲಿ ತಂಬಾಕು ಬೆಳೆಗೆ ಬಹಳ ಪ್ರಸಿದ್ಧಿಯನ್ನು ಪಡೆದಿದೆ. ಅದರ ಬದಲಾಗಿ ಈಗ 2020ನೇ ಸಾಲಿನವರೆಗೆ W.H.O. ದವರು ಒಂದು ವಾರ್ನಿಂಗ್‌ನ್ನು ಕೊಟ್ಟಿದ್ದಾರೆ. ತಂಬಾಕು ಬೆಳೆಯುವುದನ್ನು ಬಂದ್ ಮಾಡಬೇಕೆಂದು ಹೇಳಿದ್ದಾರೆ. ಆದುದರಿಂದ ಈ ಬೆಳೆಗೆ ಪರ್ಯಾಯವಾಗಿ ಯಾವ ಯಾವ ಬೆಳೆಗಳನ್ನು ಬೆಳೆಯಬೇಕೆಂದು ಮುಖ್ಯಮಂತ್ರಿಗಳ ಉತ್ತರದಲ್ಲಿ ಬರಬೇಕು ಅಥವಾ ಮಾನ್ಯ ಸಚಿವರು ಈ ಬಗ್ಗೆ ಹೇಳಬೇಕೆಂದು ತಮ್ಮ ಮುಖಾಂತರ ಮನವಿಯನ್ನು ಮಾಡಿ ನನಗೆ ಒಂದೆರಡು ಮಾತುಗಳನ್ನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ರಮೇಶ್ ಭೂಸನೂರು (ಸಿಂಧಗಿ):** ಮಾನ್ಯ ಉಪಾಧ್ಯಕ್ಷರೆ, ಹುಬ್ಬಳ್ಳಿ ತಾಲ್ಲೂಕಿನ ರೈತರು ಮುಂಗಾರು ಬೆಳೆಗಳಾದ ಸೋಯಾಬೀನ್ ಮತ್ತು ಅವರೆ ಬೆಳೆಗೆ ಕ್ರಿಮಿಕೀಟಗಳ ಬಾಧೆಯಿಂದ ಅಪಾರ ನಷ್ಟವಾಗಿದೆ. ಈ ಕುರಿತು ತಮ್ಮ ಆತಂಕವನ್ನು ವ್ಯಕ್ತಮಾಡುವುದಕ್ಕೆ ಪ್ರಬಲವಾದ ಒಂದು ಹೋರಾಟವನ್ನು ಮಾಡಿ ಇಂದು ಮಧ್ಯಾಹ್ನ ಜಿಲ್ಲಾಧಿಕಾರಿಗಳಿಗೆ ತಮ್ಮ ಮನವಿಯನ್ನು ಸಲ್ಲಿಸಿದ್ದಾರೆ. ಆ ಕ್ರಿಮಿಗಳಿಂದ ನಷ್ಟಕ್ಕೊಳಗಾದಂಥ ರೈತರಿಗೆ ಅವರಿಗೆ ಕಾಳು ಕೈಗೆ ಬರುವ ಹೊತ್ತಿಗೆ ಬೆಳೆ ನಷ್ಟವಾಗಿದೆ. ಬಹಳ ಆತಂಕದ ಸ್ಥಿತಿಯಲ್ಲಿ ಹುಬ್ಬಳ್ಳಿ ತಾಲ್ಲೂಕಿನ ರೈತರಿದ್ದಾರೆ. ನಮಗೂ ಕೂಡ ಬರುವಾಗ ಮನವಿಯನ್ನು ಕೊಟ್ಟಿದ್ದಾರೆ. ಸರ್ಕಾರ ಈ ಬಗ್ಗೆ ಕೂಡಲೇ ಕ್ರಮವನ್ನು ತೆಗೆದುಕೊಳ್ಳಬೇಕು. ನಷ್ಟಕ್ಕೊಳಗಾಗಿರುವ ಎಲ್ಲಾ ರೈತರ ಜಮೀನುಗಳಿಗೆ ಕೃಷಿ ಇಲಾಖೆಯಿಂದ ಸರ್ವೆ ಮಾಡಿ ಅವರಿಗೆ ನ್ಯಾಯಸಮ್ಮತವಾದ ಪರಿಹಾರವನ್ನು ದೊರಕಿಸಿಕೊಡಬೇಕೆಂದು ಹೇಳಿ ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿಯನ್ನು ಮಾಡಿಕೊಳ್ಳುತ್ತೇನೆ.

**ಶ್ರೀ ಯು.ಟಿ. ಖಾದರ್ (ಮಂಗಳೂರು):** ಮಾನ್ಯ ಅಧ್ಯಕ್ಷರೆ, ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬಗ್ಗೆ ಚರ್ಚೆ ಮಾಡುವ ಈ ಸಂದರ್ಭದಲ್ಲಿ ಮೊದಲಿಗೆ ನಾವು ಸರ್ಕಾರದ ಗಮನವನ್ನು ಸೆಳೆಯುವುದೇನೆಂದರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರೈತರು ಬೆಳೆದ ಬಿಳಿ ಅಡಿಕೆಗೆ ಇನ್ನೂ ಕೂಡ ಬೆಂಬಲ ಬೆಲೆಯನ್ನು ಘೋಷಿಸಿಲ್ಲ. ಅಲ್ಲಿನ ಜನರು ಬಹಳ ಸಂಕಷ್ಟದಲ್ಲಿರುವ ಇವತ್ತಿನ ಸಂದರ್ಭದಲ್ಲಿ ಬೆಂಬಲ ಬೆಲೆಯನ್ನು ಘೋಷಿಸಬೇಕೆಂದು ಮನವಿ ಮಾಡುತ್ತೇನೆ. ಈಗಾಗಲೇ ವಿಳಂಬವಾಗಿದೆ. ಇನ್ನು ಮುಂದೆ ತಾವು ಬೆಂಬಲ ಬೆಲೆಯನ್ನು ಘೋಷಿಸಿದರೂ ಅದು ಶ್ರೀಮಂತ ರೈತರಿಗೆ ಅನುಕೂಲವಾಗುತ್ತದೆಯೇ ಹೊರತು ಸಣ್ಣಪುಟ್ಟ ರೈತರಿಗೆ ಅದರಿಂದ ಯಾವುದೇ ಪ್ರಯೋಜನವಾಗುವುದಿಲ್ಲ.

**ಉಪಾಧ್ಯಕ್ಷರು:** ಆಯಿತು, ತಾವು ಬೆಂಬಲ ಬೆಲೆಯನ್ನು ಕೇಳಿದ್ದಿರಿ. ಮುಗಿಯಿತು. ಈಗ ಕುಮಾರಸ್ವಾಮಿಯವರು.

**ಶ್ರೀ ಯು.ಟಿ. ಖಾದರ್:** ಎರಡು ಪ್ರಶ್ನೆಗಳಿವೆ. ನಮಗೆ ಮಾತನಾಡಲಿಕ್ಕೆ ಎರಡು ನಿಮಿಷ ಅವಕಾಶ ಕೊಡಿ.

**ಶ್ರೀ ಎನ್. ಸಂಪಂಗಿ:** ದಯವಿಟ್ಟು ನೀವು ಮಾತನಾಡುವವರಿಗೆ ಅವಕಾಶ ಕೊಡಿ. ಇಲ್ಲದಿದ್ದರೆ ಮಾತನಾಡುವುದಕ್ಕೆ ಬಿಡಬೇಡಿ. ಮುಗಿಯಿತು ಎಂದರೆ ಅರ್ಥವೇನು? ನಾವು ಬರೀ ಎದ್ದು ಕುಳಿತುಕೊಳ್ಳುವುದೇ? ಇದು ಅನ್ಯಾಯವಾಗುತ್ತದೆ.

**ಶ್ರೀ ಯು.ಟಿ. ಖಾದರ್:** ಎರಡು ನಿಮಿಷ ಮಾತನಾಡಲು ಅವಕಾಶ ಕೊಡಿ.

**ಉಪಾಧ್ಯಕ್ಷರು:** ಇದು ಮಾತನಾಡುವುದಲ್ಲ, clarification ಕೇಳಬೇಕು. ನಂತರ ಸಂಪಂಗಿಯವರಿಗೂ ಕೊಡುತ್ತೇನೆ.

**ಶ್ರೀ ಎನ್. ಸಂಪಂಗಿ:** ಇವರು clear ಆಗಿ ಮಾತನಾಡಲಿ. ಇಲ್ಲಿರುವವರ್ಯಾರೂ clear ಆಗಿ ಮಾತನಾಡುವುದು ಬೇಡವೆ? ನಾವು ಕೇವಲ ಎದ್ದು ಕುಳಿತುಕೊಳ್ಳಬೇಕೆ? ಆ ತರಹ ಮಾಡುವುದಾದರೆ ಬೇಡವೇ ಬೇಡ; ನೀವು ಅವಕಾಶ ಕೊಡುವುದೇ ಬೇಡ; ನಾವು ಮಾತನಾಡುವುದೇ ಬೇಡ.

**ಉಪಾಧ್ಯಕ್ಷರು:** ಆಯಿತು, ಕೊಡುತ್ತೇನೆ.

**ಶ್ರೀ ಸಿ.ಎಸ್. ಪುಟ್ಟೇಗೌಡ:** ಮುಂದುಗಡೆ ಬೆಂಚಿನವರು ಮೂರುಮೂರು ಸಲ ನಿಂತು ಗಂಟೆಗಟ್ಟಲೆ ಮಾತನಾಡಿದರೂ, ಆಗ ನೀವು ಇದು clarification ಎಂದು ಹೇಳುವುದಿಲ್ಲ. ಹಿಂದುಗಡೆಯಿರುವ ಹೊಸದಾಗಿ ಬಂದಿರುವವರು ಯಾರಾದರೂ ನಿಂತರೆ clarification ಎಂದು ಹೇಳುತ್ತೀರಿ. ಅವರು ಸ್ಪಷ್ಟವಾಗಿ ಅವರ ಅಭಿಪ್ರಾಯವನ್ನು ಹೇಳಲಿ.

**ಶ್ರೀ ಎನ್. ಸಂಪಂಗಿ:** ನಾವು ಕಾಟಾಚಾರಕ್ಕೆ ಮಾತನಾಡಲು ಅಲ್ಲ ಇಲ್ಲಿಗೆ ಬಂದಿರುವುದು. ನಮ್ಮ ವಿಚಾರಗಳನ್ನು ಸರಿಯಾಗಿ ನಿಮಗೆ ಅರ್ಥ ಮಾಡಿಸುವಂತೆ ಮಾತನಾಡುವುದಕ್ಕೆ ನಾವು ಬಂದಿದ್ದೇವೆ. ಎದ್ದ ತಕ್ಷಣ ಕುಳಿತುಕೊಳ್ಳಿ ಎನ್ನುವುದಾದರೆ, ಎದ್ದು ಕುಳಿತುಕೊಳ್ಳುವುದಕ್ಕೆ ನಾವು ಏಕೆ ಬೇಕು? ಹಾಗಿದ್ದರೆ ನಮಗೆ ಅವಕಾಶವನ್ನೇ ಕೊಡಬೇಡಿ.

**ಉಪಾಧ್ಯಕ್ಷರು:** ನೀವಿಬ್ಬರೂ ಒಟ್ಟಿಗೆ ಎದ್ದು ನಿಂತರೆ ಏನು ಮಾಡಬೇಕು?

**ಶ್ರೀ ಎನ್. ಸಂಪಂಗಿ:** ನೀವು ಒಬ್ಬರ ಹೆಸರು ಹೇಳಿ. ಅವರಿಗೆ ಮಾತನಡಲು ಹೇಳಿ. ನಾವು ಮಾತನಾಡಿದರೆ, ನಮ್ಮ ವಿಚಾರವೇನಿದೆ ಅದನ್ನು ಪೂರ್ತಿಯಾಗಿ ಹೇಳಿ ಅರ್ಥ ಮಾಡಿಸುವುದಕ್ಕೆ ನೀವು ಅವಕಾಶ ಕೊಡಿ.

**ಉಪಾಧ್ಯಕ್ಷರು:** ಈಗ clarificationಗೆ ಅವಕಾಶ ಕೊಟ್ಟಿದ್ದೇನೆ.

**ಶ್ರೀ ಸಿದ್ದರಾಮಯ್ಯ:** ಶ್ರೀ ಖಾದರ್‌ರವರದ್ದು ಆದ ಮೇಲೆ ಶ್ರೀ ಸಂಪಂಗಿಯವರಿಗೆ clarification ಕೇಳಲು ಅವಕಾಶ ಮಾಡಿಕೊಡಿ.

**ಶ್ರೀ ಯು.ಟಿ. ಖಾದರ್:** ಇನ್ನೂ ಕೂಡ ಬೆಂಬಲ ಬೆಲೆ ಘೋಷಣೆಯಾಗಿಲ್ಲ. ರೈತರು ಬಹಳ ಆತಂಕದ ಪರಿಸ್ಥಿತಿಯಲ್ಲಿದ್ದಾರೆ. ನಮ್ಮ ಕಳಕಳಿಯ ವಿನಂತಿ ಎಂದರೆ, ಯಾವಾಗಲೂ ಬೆಂಬಲ ಬೆಲೆ ಫೆಬ್ರವರಿ–ಮಾರ್ಚ್ ತಿಂಗಳಲ್ಲಿ ಘೋಷಣೆಯಾಗಬೇಕು. ಈಗ ಘೋಷಣೆ ಮಾಡಿದರೂ ಅದರಿಂದ ಸಣ್ಣ ರೈತರಿಗೆ ಯಾವುದೇ ಪ್ರಯೋಜನವಿಲ್ಲ. ಅದು ಏನಿದ್ದರೂ ಶ್ರೀಮಂತ ರೈತರಿಗೆ ಮತ್ತು ಕ್ಯಾಂಪ್ಕೋ ಕಂಪನಿಗೆ ಲಾಭವಾಗುವಂಥ ವ್ಯವಸ್ಥೆಯಾಗುತ್ತದೆ. ಏಕೆಂದರೆ, ಅವರು stock ಇಟ್ಟಿದ್ದಾರೆ. ಆದರೆ ಸಣ್ಣಸಣ್ಣ ರೈತರು ಈಗಾಗಲೇ sale ಮಾಡಿ ಆಗಿದೆ. ಆದ್ದರಿಂದ ಮುಂದಿನ ವರ್ಷಗಳಲ್ಲಿ ಇದನ್ನು ಸರಿಪಡಿಸಬೇಕು.

ಗ್ರಾಮೀಣ ಜನರ ಬಹುಮುಖ್ಯ ಸಮಸ್ಯೆಯಾದ 94–ಸಿ ಬಗ್ಗೆ ಮತ್ತೊಂದು ಅವಕಾಶ ಕೊಡಬೇಕೆಂದು ನಾವು ಕೇಳಿದ್ದೆವು. ಜನಸಾಮಾನ್ಯರ ಬಗ್ಗೆ ಒಂದೂ ಕೂಡ ಆದೇಶವಾಗಿಲ್ಲ. 94–ಸಿ ಬಗ್ಗೆ ಚಕಾರವೆತ್ತಲಿಲ್ಲ. ಗ್ರಾಮೀಣ ಪ್ರದೇಶಗಳಲ್ಲಿ ಬಸ್ಸಿನ ವ್ಯವಸ್ಥೆಯಲ್ಲಿಯೂ ಕೂಡ ಬಹಳಷ್ಟು ಗಂಭೀರವಾದ ಪರಿಸ್ಥಿತಿ ಇದೆ. ಎಲ್ಲಿಗೆ ಈಗಾಗಲೇ ಬಸ್ಸುಗಳಿವೆಯೋ ಅಲ್ಲಿಗೆ ಮತ್ತೆ K.S.R.T.C. ಬಸ್ಸುಗಳನ್ನು ಹಾಕುತಿದ್ದಾರೆ. ಯಾವ ಗ್ರಾಮೀಣ ಪ್ರದೇಶಗಳಿಗೆ ಬಸ್ಸು ಇಲ್ಲ, ಅಲ್ಲಿಗೆ ಬಸ್ಸುಗಳನ್ನೇ ಹಾಕುತ್ತಿಲ್ಲ. ಎಲ್ಲಿ ಈಗಾಗಲೇ ಬಸ್ಸಿನ ಸೌಕರ್ಯವಿದೆಯೋ ಅಲ್ಲಿ ಪುನಃ ಬಸ್ಸಿನ ಅಗತ್ಯವಿಲ್ಲ. ಯಾವ ಗ್ರಾಮಗಳಿಗೆ ಬಸ್ಸುಗಳಿಲ್ಲ ಅಲ್ಲಿಗೆ ಸರ್ಕಾರಿ ಬಸ್ಸುಗಳನ್ನು ಹಾಕುವಂಥ ವ್ಯವಸ್ಥೆ ಆಗಬೇಕೆಂದು ಕೇಳಿಕೊಳ್ಳುತ್ತೇನೆ. ಸುವರ್ಣ ಗ್ರಾಮ ಯೋಜನೆಯ ಮೇಲುಸ್ತುವಾರಿಯನ್ನು

ಶಾಸಕರಿಗೆ ಕೊಡಿ ಎಂದು ನಾವು ಹೇಳಿದ್ದೇವೆ. ಏಕೆಂದರೆ ಈಗ ಅದು ಸರಿಯಾಗಿ implement ಆಗುತ್ತಿಲ್ಲ. ಉದಾಹರಣೆ ಕೊಡುವುದಾದರೆ, ಸುವರ್ಣ ಗ್ರಾಮ ಯೋಜನೆಯಲ್ಲಿ ನೂರು ಜನರನ್ನು ಡ್ರೈವಿಂಗ್ ಕಲಿಯಲು ಕಳುಹಿಸಿ ಲೈಸೆನ್ಸ್ ಕೊಡುತ್ತಾರೆ. ಇವತ್ತು ನಮ್ಮ ಕ್ಷೇತ್ರದಲ್ಲಿ ನೂರು ಜನರಿಗೆ ಲೈಸೆನ್ಸ್ ಕೊಟ್ಟಿದ್ದಾರೆ. ಆದರೆ ಅವರಿಗೆ ಖಂಡಿತವಾಗಿ ಕಾರ್ ಡ್ರೈವಿಂಗ್ ಮಾಡಲು ಬರುವುದಿಲ್ಲ.

ಮಾನ್ಯ ಮುಖ್ಯಮಂತ್ರಿಗಳು ಮಾತನಾಡುವಂಥ ಸಂದರ್ಭದಲ್ಲಿ, ಎಲ್ಲಾದರೂ ಕೋಮು ಗಲಭೆಗಳಾದರೆ, ಇನ್ನಿತರ ಸಮಸ್ಯೆಗಳಾದರೆ ಸಂಬಂಧಪಟ್ಟ ಜಿಲ್ಲಾ ಎಸ್.ಪಿ.ಯವರನ್ನು ಅದಕ್ಕೆ ಹೊಣೆಗಾರರನ್ನಾಗಿ ಮಾಡಲಾಗುವುದು ಎನ್ನುವ ಮಾತನ್ನು ಹೇಳಿದ್ದಾರೆ. ಇವತ್ತು ಪೊಲೀಸ್ ವರಿಷ್ಠಾಧಿಕಾರಿಯವರಿಗೆ ಏನು ಅಧಿಕಾರವನ್ನು ಕೊಟ್ಟಿದ್ದಾರೆ ಎನ್ನುವುದನ್ನು ನೋಡಬೇಕು. ಒಬ್ಬ ಎಸ್.ಐ. ಅನ್ನು ಟ್ರಾನ್ಸ್‌ಫರ್ ಮಾಡಬೇಕಾದರೆ ಅದಕ್ಕೆ ಬೆಂಗಳೂರಿನಿಂದ ಆರ್ಡರ್ ಬರಬೇಕಾಗುತ್ತದೆ. ಎಸ್.ಪಿ.ಗೆ ಯಾವುದೇ ಅಧಿಕಾರವಿಲ್ಲ. ಎಸ್.ಪಿ.ಯವರು ಕೇಸ್ ಹಾಕಿದರೆ, ಈ ಸರ್ಕಾರದವರು ಆ ಕೇಸನ್ನು ಹಿಂದಕ್ಕೆ ಪಡೆಯುತ್ತಾರೆ. ಆದ್ದರಿಂದ ಕೆಲವೊಂದು ನೀತಿ ನಿಯಮಗಳನ್ನು ಮಾಡಿಕೊಂಡು ಪೊಲೀಸ್ ಇಲಾಖೆಗೆ ವಿಶೇಷವಾದ ಅಧಿಕಾರವನ್ನು ಕೊಡಬೇಕು. ರಾಜಕೀಯವಾಗಿ ಯಾವುದೇ ಒಂದು ಹಸ್ತಕ್ಷೇಪವನ್ನು ಮಾಡಬಾರದು. ಪೊಲೀಸಿನವರು ಕೇಸ್ ಹಾಕುವುದು, ಸರ್ಕಾರ ಆ ಕೇಸನ್ನು ತೆಗೆಯುವುದಾದರೆ ಇದು ಪೊಲೀಸ್ ಇಲಾಖೆಯನ್ನು demoralize ಮಾಡಿದ ಹಾಗಾಗುತ್ತದೆ ಎಂದು ಹೇಳಲಿಚ್ಛಿಸುತ್ತೇನೆ.

**ಶ್ರೀ ಹೆಚ್.ಕೆ. ಕುಮಾರಸ್ವಾಮಿ (ಸಕಲೇಶಪುರ)**: ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆಯೂ ಮಾತನಾಡುತ್ತೇನೆ. ಈ ವರ್ಷ ಅತಿವೃಷ್ಟಿಯಿಂದಾಗಿ ಮಲೆನಾಡು ಪ್ರದೇಶದ ರಸ್ತೆಗಳು ಎಷ್ಟು ಹಾಳಾಗಿವೆ ಎನ್ನುವುದೂ ತಮಗೆ ಗೊತ್ತು. ಕಾಫಿ ಬೆಳೆ ಎಷ್ಟೊಂದು ನಷ್ಟವಾಗಿದೆ ಎನ್ನುವುದೂ ಗೊತ್ತು. 2007–08ರಲ್ಲಿ ಸಕಲೇಶಪುರ ತಾಲ್ಲೂಕಿನಲ್ಲಿ ಕಾಫಿ ಬೆಳೆ ನಷ್ಟವಾಗಿದೆ ಎಂದು ಹೇಳಿ ಅಂದಿನ ಸರ್ಕಾರದ ಆದೇಶದ ಮೇರೆಗೆ ಅಲ್ಲಿಗೆ

ಅಧಿಕಾರಿಗಳ ತಂಡ ಹೋಗಿ ಸುಮಾರು 10 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಬೆಳೆದಿದ್ದಂಥ ಸುಮಾರು 6 ಕೋಟಿ 43 ಲಕ್ಷ ರೂಪಾಯಿಗಳಷ್ಟು ಅಂದಾಜು ಕಾಫಿ ಬೆಳೆ ನಷ್ಟವಾಗಿದೆ. ಅದನ್ನು ಸರ್ಕಾರ ಭರಿಸಬೇಕು ಎಂದು ಅಧಿಕಾರಿಗಳ ತಂಡ ಹೇಳಿತ್ತು. ಆದರೆ ಸರ್ಕಾರ ಈವರೆಗೆ ಆ ಹಣವನ್ನು ಬಿಡುಗಡೆ ಮಾಡಿಲ್ಲ. ಅದನ್ನು ಸರ್ಕಾರ ಬಿಡುಗಡೆ ಮಾಡಬೇಕು ಎಂದು ಒತ್ತಾಯ ಮಾಡುತ್ತೇನೆ. ಎರಡನೆಯದಾಗಿ, ನನ್ನ ಭಾಗದಲ್ಲಿ ಆಲೂಗಡ್ಡೆ ಬೆಳೆ ನಷ್ಟವಾಗಿದೆ. ಒಂದು ಕಡೆ ಅತಿವೃಷ್ಟಿಯಿದ್ದರೆ, ನಮ್ಮದು ಅನಾವೃಷ್ಟಿಯಾಗಿದೆ. ನಮ್ಮ ನಾಯಕರಾದ, ಹಾಲಿ ಲೋಕಸಭಾ ಸದಸ್ಯರಾದ, ಮಾಜಿ ಪ್ರಧಾನಿಗಳೂ ಕೂಡ ಒತ್ತಾಯ ಮಾಡಿದ್ದಾರೆ. ಆಲೂಗಡ್ಡೆಗೆ ಬೆಂಬಲ ಬೆಲೆ ಕೊಡಿ ಎಂದು ಹೇಳಿದ್ದಾರೆ. ಆದರೆ ಸರ್ಕಾರ ಈ ಕಡೆಗೆ ಕಿವಿಗೊಡುತ್ತಿಲ್ಲ. ಇವತ್ತು ನೂರಾರು ಕೋಟಿ ರೂಪಾಯಿನ ಆಲೂಗಡ್ಡೆ ಬೆಳೆ ನಷ್ಟವಾಗಿದ್ದು, ಒಂದೇ ಒಂದು ರೂಪಾಯಿಯ ಬೆಳೆಯನ್ನೂ ತೆಗೆಯಲು ಸಾಧ್ಯವಾಗಿಲ್ಲ. ಸರ್ಕಾರ ಕಣ್ಣುಮುಚ್ಚಿಕೊಂಡು ಕುಳಿತಿದೆ. ಅದು ಆ ಕಡೆಗೆ ಗಮನ ಹರಿಸಬೇಕು. ಬೆಂಬಲ ಬೆಲೆಯನ್ನು ಕೊಡಬೇಕು ಎಂದು ಒತ್ತಾಯ ಮಾಡುತ್ತೇನೆ.

ಎಲ್ಲಕ್ಕಿಂತ ಮೂಲವಾಗಿ ನಮ್ಮ ಸಮಸ್ಯೆಗಳನ್ನು ಬಗೆಹರಿಸಲು ಸಾಧ್ಯವಾಗದಿರುವುದು ಜನಸಂಖ್ಯೆಯನ್ನು ಆಧಾರವಾಗಿ ತೆಗೆದು ಕೊಂಡಿರತಕ್ಕಂಥಾದ್ದೇ ಮೂಲವಾಗಿದೆ. ಆದ್ದರಿಂದ ಭೌಗೋಳಿಕ ವಿಸ್ತೀರ್ಣವನ್ನು ಆಧಾರವಾಗಿ ತೆಗೆದುಕೊಳ್ಳಬೇಕು. ಜನಸಂಖ್ಯೆಯನ್ನು ಆಧಾರವಾಗಿ ತೆಗೆದುಕೊಂಡು ಯಾವುದೇ ಸವಲತ್ತನ್ನು ಕೊಡಲಿಕ್ಕೆ ಸಾಧ್ಯವಾಗುತ್ತಿಲ್ಲ. ಅದನ್ನೂ ಕೂಡ ಸರ್ಕಾರ ಪರಿಗಣಿಸಬೇಕು.

ನಮ್ಮಲ್ಲಿ ರಸ್ತೆಗಳು ಬಹಳಷ್ಟು ಹಾಳಾಗಿದ್ದು ಅದಕ್ಕೆ ಎಷ್ಟು ಅನುದಾನ ಕೊಟ್ಟರೂ ಸಾಲದು. ಇನ್ನೂ ಕೂಡ ಹಣ ಬಿಡುಗಡೆಯಾಗಿಲ್ಲ. ನೂರಾರು ಟಿ.ಎಂ.ಸಿ. ನೀರು ಶೇಖರಿಸತಕ್ಕಂಥ ಡ್ಯಾಂಗಳು ತುಂಬುತ್ತವೆ. ಆದರೆ ನಮ್ಮಲ್ಲಿಗೆ ಯಾವುದೇ ಪ್ರಯೋಜನವಾಗುತ್ತಿಲ್ಲ. ಈ ನಿಟ್ಟಿನಲ್ಲಿ ಸರ್ಕಾರ ಹೆಚ್ಚು ಗಮನವನ್ನು ಕೊಡಬೇಕು ಎಂದು ಹೇಳುತ್ತಿದ್ದೇನೆ.

ಮಾನ್ಯ ಮುಖ್ಯಮಂತ್ರಿಗಳು ಬೆಳಗ್ಗೆ ಮಾತನಾಡುವಾಗ, ಸುಮಾರು ಎರಡು ಲಕ್ಷಕ್ಕೂ ಹೆಚ್ಚು ಮನೆಗಳಿಗೆ ನಾವು ಭಾಗ್ಯಜ್ಯೋತಿ ಯೋಜನೆಯನ್ನು ಕೊಡುತ್ತೇವೆ ಎಂದು ಹೇಳಿದರು. ಅದು ಯಾವಾಗ ಪ್ರಾರಂಭವಾಗಿದ್ದು ಎನ್ನುವುದನ್ನು ಅವರು ಹೇಳಬೇಕು. ಈಗ ಅವರು ಹೇಳುತ್ತಿರತಕ್ಕಂಥದ್ದು, ರಾಜೀವ್‌ಗಾಂಧಿ ನಿಗಮದಿಂದ ಬಂದಂಥ ಹಣದಲ್ಲಿ, ಮಾನ್ಯ ರೇವಣ್ಣನವರು ವಿದ್ಯುತ್ ಸಚಿವರಾಗಿದ್ದಾಗ ಮಾಡಿದಂಥ ಕೆಲಸವಿದು. ಆವತ್ತು ಅವರು ಇಚ್ಛಾಶಕ್ತಿ ತೋರಿದ್ದರಿಂದ ಇವತ್ತು ಅದು ಆಗಿದೆ. ಅದರ ಅಂಕಿಅಂಶವನ್ನು ತಾವು ಕೊಡುತ್ತಿದ್ದೀರಿ ಎಂದು ಅನ್ನಿಸುತ್ತದೆ. ಸುಮಾರು 1,200 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಮಾಡಿದಂಥ ಕೆಲಸ ಅದು.

ಆನೆಗಳ ಹಾವಳಿ ಬಗ್ಗೆ ನನಗನ್ನಿಸತಕ್ಕಂಥದ್ದು ಏನೆಂದರೆ, ಸರ್ಕಾರ, ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳು ಅಸಹಾಯಕರಾಗಿದ್ದಾರೇನೋ ಎಂದು ಅನ್ನಿಸುತ್ತಿದೆ. ಅಥವಾ ನಾವು ಇಚ್ಛಾಶಕ್ತಿಯನ್ನು ತೋರುತ್ತಿಲ್ಲ. ನಮ್ಮ ಭಾಗದಲ್ಲಿ ಯಾರಾದರೂ ಸತ್ತರೆ ಅಥವಾ ಗಾಯಗೊಂಡರೆ ಅಲ್ಲಿಗೆ ಹೋಗುವುದಕ್ಕೆ ನಮಗೆ ಭಯವಾಗುತ್ತದೆ. ಏಕೆಂದರೆ, ಜನ ಎಷ್ಟೊಂದು ಕೋಪೋದ್ರಿಕ್ತರಾಗಿದ್ದಾರೆ. ತಾಳ್ಮೆಗೆಟ್ಟಿದ್ದಾರೆ ಎಂದರೆ ಯಾವಾಗ ಬೇಕಾದರೂ ನಮ್ಮ ಮೇಲೆ ಹಲ್ಲೆ ಮಾಡಬಹುದು ಎನ್ನುವಂತಹ ಪರಿಸ್ಥಿತಿ ಅಲ್ಲಿದೆ. ಕಳೆದ ಸಾಲಿನ ಬಜೆಟ್‌ನಲ್ಲಿ ಮಾನ್ಯ ಮುಖ್ಯಮಂತ್ರಿಗಳು ಆನೆಧಾಮವನ್ನು ನಾವು ಸ್ಥಾಪಿಸುತ್ತೇವೆ. ಆನೆಗಳನ್ನು ಹಿಡಿಯುವುದಕ್ಕೆ ನಾವು ಬೇರೆಬೇರೆ ಕ್ರಮಗಳನ್ನು ಕೈಗೊಳ್ಳುತ್ತೇವೆ ಎಂದು ಹೇಳಿದರು. ಇಲ್ಲಿಯವರೆಗೆ ಆ ಇಲಾಖೆಯಿಂದ ಒಂದೇ ಒಂದು ಪ್ರಯತ್ನ ನಡೆದಿಲ್ಲ. ಆನೆ ಹಾವಳಿಯಿಂದ ಉಂಟಾಗುವ ನಷ್ಟಕ್ಕೆ ಪರಿಹಾರವನ್ನು ದುಪ್ಪಟ್ಟು ಮಾಡಿದ್ದಾರೆ. ಅದನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ, ಆನೆಗಳನ್ನು ಸ್ಥಳಾಂತರ ಮಾಡುವುದಕ್ಕೆ ಸರ್ಕಾರ ಏನು ಪ್ರಯತ್ನ ಮಾಡಿದೆ? ಈ ಸಭೆಯ ಮೂಲಕ ನಾನು ತಮಗೆ ಹೇಳುತ್ತಿದ್ದೇನೆ. ಯಾವ ಹಂತದಲ್ಲಿ ಬೇಕಾದರೂ ಸ್ಥಳೀಯ ಜನರು ಜನಪ್ರತಿನಿಧಿಗಳ ಮೇಲೆ, ಅಧಿಕಾರಿಗಳ ಮೇಲೆ ಹಲ್ಲೆ ಮಾಡಬಹುದು, ಯಾವ ಮಟ್ಟಕ್ಕೆ ಬೇಕಾದರೂ ಹೋಗಬಹುದು. ಇದರಿಂದ ಏನಾದರೂ ಹೆಚ್ಚು ಕಡಿಮೆಯಾದರೆ ಸರ್ಕಾರವೇ ಅದರ ಜವಾಬ್ದಾರಿಯನ್ನು

ಹೊರಬೇಕಾಗುತ್ತದೆ ಎಂದು ನಾನು ಹೇಳುತ್ತಿದ್ದೇನೆ. ನಮಗೂ ಕೂಡ ತಾಳ್ಮೆಗೆಟ್ಟುಹೋಗಿದೆ. ಸರ್ಕಾರ ಈ ನಿಟ್ಟಿನಲ್ಲಿ ಕ್ರಮ ವಹಿಸಬೇಕು ಎಂದು ಹೇಳುತ್ತಿದ್ದೇನೆ. ಕೃಷಿ ನೀತಿ ಮತ್ತು ಗ್ರಾಮೀಣಾಭಿವೃದ್ಧಿ ನೀತಿಯನ್ನು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಮೊದಲಿನಿಂದಲೂ ಸರಿಯಾದ ರೀತಿ ಪಾಲಿಸಿಕೊಂಡು ಬರದೇ ಇರುವುದೇ ಇವತ್ತಿನ ಸಮಸ್ಯೆಗಳಿಗೆ ಮೂಲವಾಗಿದೆ ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ.

ಮಲೆನಾಡು ಅಭಿವೃದ್ಧಿ ಮಂಡಳಿಯಂತೆಯೇ ಪಶ್ಚಿಮ ಘಟ್ಟ ಅಭಿವೃದ್ಧಿ ಮಂಡಳಿಯನ್ನು ನಾವು ಸ್ಥಾಪಿಸಿದ್ದೇವೆ ಎಂದು ಬಜೆಟ್‌ನಲ್ಲಿ ಹೇಳಿದಿರಿ. ಅದು ಏನಾಗಿದೆ ಎನ್ನುವ ಬಗ್ಗೆ ಒಂದೇ ಒಂದು ಮಾತಿಲ್ಲ. ಪಶ್ಚಿಮ ಘಟ್ಟ ಮಂಡಳಿ ಮತ್ತು ಮಲೆನಾಡು ಅಭಿವೃದ್ಧಿ ಮಂಡಳಿಗೆ ಹೆಚ್ಚು ಹಣವನ್ನು ಬಿಡುಗಡೆ ಮಾಡಬೇಕು. ಆ ನಿಟ್ಟಿನಲ್ಲಿ, ನಮ್ಮ ಸಮಸ್ಯೆಯನ್ನು ಬಗೆಹರಿಸಬೇಕೆಂದು ಒತ್ತಾಯ ಮಾಡುತ್ತೇನೆ.

**ಶ್ರೀ ಎನ್. ಸಂಪಂಗಿ (ಬಾಗೇಪಲ್ಲಿ):** ಮಾನ್ಯ ಅಧ್ಯಕ್ಷರೆ, ಬಿ.ಪಿ.ಎಲ್. ಕಾರ್ಡ್‌ಗಳನ್ನು ಯಾರಾದರೂ ಹೆಚ್ಚಿಗೆ ತೆಗೆದುಕೊಂಡಿದ್ದರೆ, ಅನರ್ಹರು ತೆಗೆದುಕೊಂಡಿದ್ದರೆ, ಅವರ ಮೇಲೆ criminal case ಹಾಕುತ್ತೇವೆ ಎಂದು ಮುಖ್ಯಮಂತ್ರಿಗಳು ಹೇಳಿದ್ದಾರೆ. ನಮ್ಮ ಭಾಗದಲ್ಲಿ ಸುಮಾರು 13 ಸಾವಿರ ಕಾರ್ಡ್‌ಗಳನ್ನು ನೆಮ್ಮದಿ ಕೇಂದ್ರಗಳಲ್ಲಿ ಕೊಟ್ಟರು. ನೆಮ್ಮದಿ ಕೇಂದ್ರಗಳಲ್ಲಿ ವಿತರಣೆಯಾದಂಥ ಕಾರ್ಡ್‌ಗಳನ್ನು issue ಮಾಡಿದಂಥವರು ಸರ್ಕಾರದವರೇ.

**6.00 P.M.**

Affidavit ಅನ್ನು ಕೇಳಿ ಪಡೆದು ನಂತರ ಪಡಿತರ ಚೀಟಿಯನ್ನು ವಿತರಣೆ ಮಾಡುವಂಥ ಕೆಲಸವನ್ನು ಸರ್ಕಾರ ಮಾಡಿದೆ. ಹಾಗೆ ವಿತರಿಸಿದಂಥ ಕಾರ್ಡುಗಳಿಗೆ ಅಕ್ಕಿ, ಗೋಧಿ, ಸೀಮೆಎಣ್ಣೆಯನ್ನು ಕೊಡುವುದನ್ನು ನಿಲ್ಲಿಸಿದ್ದಾರೆ. ಇಡೀ ರಾಜ್ಯದಲ್ಲಿರುವ ಹಳ್ಳಿಗಳಲ್ಲಿ ಈ ರೀತಿಯ ಪರಿಸ್ಥಿತಿ ಇದೆ. ಗ್ರಾಮಾಂತರ ಪ್ರದೇಶಗಳಲ್ಲಿರುವ ರೈತರ ಪರವಾಗಿ ನಾವು ಈ ಮೂರು ದಿವಸ ಸದನವನ್ನು ನಡೆಸುತ್ತಿದ್ದೇವೆ. ಆದರೆ ಇವತ್ತು ಅಲ್ಲಿ ರೈತರು ಉಪವಾಸ ಬೀಳುತ್ತಿದ್ದಾರೆ.

ಅವರಿಗೆ ಅಕ್ಕಿ ಕೊಡುವುದಕ್ಕೆ ಏಕೆ ಸಾಧ್ಯವಾಗಿಲ್ಲ? ಇವತ್ತಿನವರೆಗೂ ವಿತರಣೆಯಾಗಿಲ್ಲ. ನನ್ನ ಕ್ಷೇತ್ರದಲ್ಲಿ ಸುಮಾರು 13,000 ಪಡಿತರ ಚೀಟಿಗಳು ಕೊಡುವುದಕ್ಕೆ ಆಗದೇ, ಹಳೆಯ ಕಾರ್ಡ್‌ಗಳಿರುವಂಥವರಿಗೆ ಅಕ್ಕಿ ಬಂದಿದ್ದರೂ ಕೂಡ, ನೆಮ್ಮದಿ ಕಾರ್ಡ್‌ಗಳು ಇರುವವರಿಗೆ ಇದು ಸಿಗದ ಕಾರಣ ಇವರು ಗಲಾಟೆ ಮಾಡುತ್ತಿದ್ದಾರೆ. ಇಲ್ಲಿ ಹಳೆಯ ಕಾರ್ಡ್‌ಗಳಿರುವವರಿಗೆ ಕೊಡದೇ ನಿಲ್ಲಿಸಿದ್ದಾರೆ. ಅವರಿಗೆ ಅಕ್ಕಿಯನ್ನು ಯಾವಾಗ ವಿತರಣೆ ಮಾಡುತ್ತೀರೆಂಬುದನ್ನು ಹೇಳಿ. ಬಡವರಿಗೆ ಅಕ್ಕಿಯನ್ನು ವಿತರಣೆ ಮಾಡುವ ನೆಮ್ಮದಿ ಕಾರ್ಡ್‌ಗಳಿಗೆ ಇನ್ನು ಎಷ್ಟು ದಿವಸಗಳವರೆಗೆ ಅಕ್ಕಿಯನ್ನು ವಿತರಣೆ ಮಾಡುತ್ತಾರೆಂಬುದನ್ನು ತಿಳಿಸಬೇಕು. ಮಾನ್ಯ ಆಹಾರ ಮಂತ್ರಿಗಳು ಇಲ್ಲೇ ಇದ್ದಾರೆ. ನಮಗೆ ಅವರು ಉತ್ತರವನ್ನು ಕೊಡಬೇಕು. ಎರಡನೆಯದಾಗಿ ಕುಡಿಯುವ ನೀರಿನ ಸಮಸ್ಯೆ ಕರ್ನಾಟಕದಲ್ಲಿ ಎಲ್ಲಾ ಕಡೆಗಳಲ್ಲೂ ಫ್ಲೋರೈಡ್ ಅತಿ ಹೆಚ್ಚಾಗಿರುವಂಥ ಹಳ್ಳಿಗಳು ಇವೆ. ಅದರಲ್ಲೂ ವಿಶೇಷವಾಗಿ ನಮ್ಮ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಎಲ್ಲಾ ತಾಲ್ಲೂಕುಗಳಲ್ಲಿ ಹೆಚ್ಚಿಗೆ ಫ್ಲೋರೈಡ್ ಇರುವ ನೀರು ನಮಗೆ ಸಿಕ್ಕಿರುವುದರಿಂದ ನಮ್ಮ ಭಾಗದಲ್ಲಿರುವಂಥ ಜನರೆಲ್ಲರೂ ಇವತ್ತು ಅಂಗವಿಕಲರಾಗುತ್ತಿದ್ದಾರೆ. ಇವರು ಫ್ಲೋರೈಡ್ ಇರುವ ನೀರನ್ನು ಕುಡಿದು ಫ್ಲೋರೊಸಿಸ್ ಖಾಯಿಲೆಗೆ ತುತ್ತಾಗಿ ಅಂಗವಿಕಲರಾಗುತ್ತಿದ್ದಾರೆ. ಇವತ್ತು ಅಂತರ್ಜಲ ಕುಸಿಯಲು ಕಾರಣ ಏನೆಂದರೆ ಮರಳು ಸಾಗಾಣಿಕೆ. ಇದಕ್ಕೆ ನಮ್ಮ ಜಿಲ್ಲಾ ಮಂತ್ರಿಗಳ ಸಮ್ಮುಖದಲ್ಲಿ ಒಂದು ದೊಡ್ಡ ಕಮಿಟಿಯನ್ನು ಮಾಡಿ ಇದನ್ನು ನಾವು ನಿಲ್ಲಿಸಿದ್ದೇವೆ. ಈಗ ಮೂರ್ನಾಲ್ಕು ದಿವಸಗಳ ಹಿಂದೆ ಎಲ್ಲರೂ ಶಾಮೀಲಾಗಿ ಮರಳು ದಂಧೆಯನ್ನು ಮಾಡುವುದಕ್ಕೆ ಪ್ರಾರಂಭಿಸಿದ್ದಾರೆ. ಇದೇ ಜಿಲ್ಲಾ ಸಚಿವರ ಸಮ್ಮುಖದಲ್ಲಿ ಇದನ್ನು ನಿಲ್ಲಿಸಿ, ಸುಮಾರು ಮೂರು ತಿಂಗಳು ಕಾಲ ಮರಳು ಸಾಗಿಸುವ ದಂಧೆಯನ್ನು ಕಂಟ್ರೋಲ್ ಮಾಡಿದಂಥ ಜಿಲ್ಲಾ ಸಚಿವರಿಗೂ ಬಾಯಿ ಮುಚ್ಚಿಸಿ, ಈಗ ಮೂರು ದಿವಸಗಳಿಂದ ಮರಳನ್ನು ಸಾಗಿಸುತ್ತಿದ್ದಾರೆ. ಇವತ್ತು ಅಂತರ್ಜಲ ಕುಸಿಯುತ್ತಿರುವುದಕ್ಕೆ ಕಾರಣ ಮರಳು ದಂಧೆಯಾಗುತ್ತಿರುವಂಥದ್ದು. ಇಲ್ಲಿ ಫ್ಲೋರೋಸಿಸ್ ಖಾಯಿಲೆಗೆ ತುತ್ತಾಗುತ್ತಿರುವುದಕ್ಕೆ ಕಾರಣ ಫ್ಲೋರೈಡ್ ನೀರು ಎಂದು ಗೊತ್ತಿದ್ದು, ನಮ್ಮ ಭಾಗದಲ್ಲಿ ಏಕೆ ಮರಳನ್ನು ಸಾಗಿಸುವುದಕ್ಕೆ

permission ಕೊಟ್ಟಿದ್ದಾರೆ? ಅದನ್ನು ನಿಷೇಧ ಮಾಡಬೇಕು. ಇದರ ಬಗ್ಗೆ ಸರ್ಕಾರ ಹೇಳಬೇಕಾಗುತ್ತದೆ. ಆ ಭಾಗದಲ್ಲಿ ಇವತ್ತು ಬರ ಪರಿಸ್ಥಿತಿ ಇದ್ದು, ಇದನ್ನು ಬರ ಪ್ರದೇಶವೆಂದು ಘೋಷಣೆ ಮಾಡಿದಂಥ ಕಂದಾಯ ಸಚಿವರು ಸದನದಲ್ಲಿದ್ದಾರೆ. ಒಂದು ತಿಂಗಳಾಗಿದೆ...

**ಉಪಾಧ್ಯಕ್ಷರು:** ನೀವು clarification ಕೇಳಿ.

**ಶ್ರೀ ಎನ್. ಸಂಪಂಗಿ:** ಮಾನ್ಯ ಅಧ್ಯಕ್ಷರೆ, ನಾನು ಗ್ರಾಮೀಣ ವಿಚಾರವಾಗಿಯೇ ಮಾತನಾಡುತ್ತಿದ್ದೇನೆ. ಮಾನ್ಯ ಕಂದಾಯ ಸಚಿವರು ಒಂದು ತಿಂಗಳ ಹಿಂದೆ ಬರ ಪ್ರದೇಶವೆಂದು ಘೋಷಣೆ ಮಾಡಿ, ಇನ್ನು ಬರ ಕಾಮಗಾರಿಗಳನ್ನು ಹಾಕಿಕೊಂಡಿಲ್ಲ.

**ಉಪಾಧ್ಯಕ್ಷರು:** ಇದು clarification ಆಗುವುದಿಲ್ಲ. ನೀವು clarification ಕೇಳಿ. ನೀವು ಏನು ಹೇಳಬೇಕೋ ಅದನ್ನು ಹೇಳಿ ಆಗಿದೆ.

**ಶ್ರೀ ಎನ್. ಸಂಪಂಗಿ:** ನಾನು ಈಗ ಅದನ್ನೇ ಕೇಳುತ್ತಿದ್ದೇನೆ. ಬರ ಪ್ರದೇಶವೆಂದು ಘೋಷಣೆ ಮಾಡಿದ ಮೇಲೆ ಬರ ಕಾಮಗಾರಿಗಳನ್ನು ಪ್ರಾರಂಭ ಮಾಡಬೇಕಾಗಿತ್ತು. ಇದನ್ನು ಯಾವಾಗ ಪ್ರಾರಂಭ ಮಾಡುತ್ತೀರೆಂಬುದನ್ನು ತಿಳಿಸಬೇಕು.

**ಉಪಾಧ್ಯಕ್ಷರು:** ಇದು clarification ಆಗುವುದಿಲ್ಲ.

**ಶ್ರೀ ಎನ್. ಸಂಪಂಗಿ:** ಮಾನ್ಯ ಅಧ್ಯಕ್ಷರೆ, ನಾವು ಬರ ವಿಚಾರವಾಗಿ ಕೇಳಬಾರದೆ?

**ಉಪಾಧ್ಯಕ್ಷರು:** ನೀವು clarification ಕೇಳಿ.

**ಶ್ರೀ ಎನ್. ಸಂಪಂಗಿ:** ನಾವು ಅದನ್ನೇ ಕೇಳುತ್ತಿದ್ದೇವೆ. ಅವರು ಬರ ಪ್ರದೇಶವೆಂದು ಘೋಷಣೆ ಮಾಡಿದ್ದಾರೆ. ಅದಕ್ಕೆ ಹಣವನ್ನು ಯಾವಾಗ ಬಿಡುಗಡೆ ಮಾಡುತ್ತಾರೆಂದು ಕೇಳುತ್ತಿದ್ದೇನೆ.

**ಉಪಾಧ್ಯಕ್ಷರು:** ಈಗ ಕೊಟ್ಟ ಉತ್ತರದಲ್ಲಿ ಏನು ವಿಷಯವನ್ನು ಕೇಳಬೇಕೋ ಕೇಳಿ. ಅದು ಬಿಟ್ಟು ಭಾಷಣಕ್ಕೆ ಹೋದರೆ ಹೇಗೆ?

**(ಈ ಹಂತದಲ್ಲಿ ಮಾನ್ಯ ಅಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು)**

**ಶ್ರೀ ಎನ್. ಸಂಪಂಗಿ:** ನಾನು ಅದನ್ನೇ ಕೇಳುತ್ತಿದ್ದೇನೆ. ಈಗ ಕಂದಾಯ ಸಚಿವರು ಇಲ್ಲೇ ಇದ್ದಾರೆ. ಅವರು ಬರ ಪ್ರದೇಶವೆಂದು ಘೋಷಣೆ ಮಾಡಿದ್ದಾರೆ. ಇವತ್ತಿನವರೆಗೂ ಹಣವನ್ನು ಬಿಡುಗಡೆ ಮಾಡಿಲ್ಲ. ಸರ್ಕಾರದಲ್ಲಿ ಹಣ ಇಲ್ಲವೇ? ಅಥವಾ ಸರ್ಕಾರದಲ್ಲಿ ಹಣದ ಕೊರತೆಯಾಗಿ ಬರ ಪ್ರದೇಶವೆಂದು ಘೋಷಣೆ ಮಾಡಿ ಕಾಮಗಾರಿಗಳಿಗೆ ಕೊಡಲು ಸಾಧ್ಯವಾಗಿಲ್ಲವೇ? ಇವತ್ತು NREG ಕಾರ್ಯಕ್ರಮ ಇದೆ. ಮಾನ್ಯ ಸಚಿವರು ಇಲ್ಲೇ ಇದ್ದಾರೆ. ಕೇಂದ್ರ ಸರ್ಕಾರದ ಉದ್ಯೋಗ ಖಾತರಿ ಯೋಜನೆ ಇದೆ. ಇದಕ್ಕೆ ಕೇಂದ್ರ ಸರ್ಕಾರ ಹಣವನ್ನು ಬಿಡುಗಡೆ ಮಾಡಿದೆ. ಆ ಹಣ ಕೂಡ ನಮ್ಮ ಭಾಗಕ್ಕೆ ಸರಿಯಾದ ರೀತಿಯಲ್ಲಿ ಬಿಡುಗಡೆಯಾಗುತ್ತಿಲ್ಲ. ಇವತ್ತು ನಾವು ಸುಮಾರು ಕೆಲಸಗಳನ್ನು ಮಾಡುತ್ತಿದ್ದೇವೆ. ಆದರೆ ಸರಿಯಾದ ರೀತಿಯಲ್ಲಿ ಹಣ ಬಿಡುಗಡೆ ಆಗುತ್ತಿಲ್ಲ. ಇವತ್ತು ಗ್ರಾಮೀಣ ಪ್ರದೇಶಗಳಲ್ಲಿ ಉದ್ಯೋಗ ಖಾತರಿ ಯೋಜನೆಯಲ್ಲಿ ನೂರು ದಿವಸಗಳ ಕೆಲಸವನ್ನು ಕೊಡುವಂಥದ್ದು ಏನು ಇದೆ. ಅದನ್ನು 150 ದಿನಗಳಿಗೆ ಹೆಚ್ಚು ಮಾಡುವುದಕ್ಕೆ ಕೇಂದ್ರ ಸರ್ಕಾರಕ್ಕೆ ಈ ಸದನದ ಮೂಲಕ ಮನವಿ ಹೋಗಬೇಕು. ನಾನು ಇದನ್ನು ಕೇಳುತ್ತಿದ್ದೇನೆ. ಇವತ್ತು ನೂರು ದಿವಸಗಳ ಕಾರ್ಯಕ್ರಮಗಳು ಏನು ಇದೆ. ಅದು ಒಳ್ಳೆಯದು ಇರಬಹುದು. ಆದರೆ ನಮ್ಮ ಭಾಗದಲ್ಲಿ ಸರಿಯಾದ ರೀತಿಯಲ್ಲಿ ಆಹಾರ ಪೂರೈಕೆ ಆಗುತ್ತಿಲ್ಲ. ಅದರ ಬಗ್ಗೆ ನಾನು ತಮ್ಮ ಗಮನವನ್ನು ಸೆಳೆದು ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಅಧ್ಯಕ್ಷರು:** ಶ್ರೀ ಕಿಮ್ಮನೆ ರತ್ನಾಕರ್‌ರವರೆ ಮಾತನಾಡಿ.

**ಶ್ರೀ ಕಿಮ್ಮನೆ ರತ್ನಾಕರ್ (ತೀರ್ಥಹಳ್ಳಿ):** ಮಾನ್ಯ ಅಧ್ಯಕ್ಷರೆ, ನಾನು ಎರಡು, ಮೂರು ಪ್ರಶ್ನೆಗಳಿಗೆ ಮಾತ್ರ clarification ಕೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಗ್ರಾಮೀಣಾಭಿವೃದ್ಧಿ

ಸಚಿವರು, ನೀರಾವರಿ ಸಚಿವರು ಇಲ್ಲೇ ಇದ್ದಾರೆ. ಒಂದು ನಾಗರಿಕ ಸರ್ಕಾರ ಒಳ್ಳೆಯ ಆಡಳಿತವನ್ನು ನೀಡಬೇಕೆಂದು ಇದ್ದರೆ ನಾವು ಏನನ್ನು ಮಾಡಬೇಕು? ಮೊದಲು ಖಾಲಿ ಇರುವಂಥ ಹುದ್ದೆಗಳನ್ನು ಭರ್ತಿ ಮಾಡಬೇಕು. ನಾನು ಗ್ರಾಮೀಣ ಸಚಿವರನ್ನು ಪ್ರಶ್ನೆ ಮಾಡುತ್ತೇನೆ. ನೀವು ಖಾಲಿ ಇದ್ದ ಹುದ್ದೆಗಳಿಗೆ ಏನು ಕ್ರಮಗಳನ್ನು ಕೈಗೊಂಡಿದ್ದೀರೆಂಬ ವಿಚಾರ ಮಾನ್ಯ ಮುಖ್ಯಮಂತ್ರಿಯವರು ಕೊಟ್ಟಿರುವಂಥ ಉತ್ತರದಲ್ಲಿ ಇದಕ್ಕೆ ಏನಾದರೂ ಇದೆಯಾ? ನಮ್ಮ ಗ್ರಾಮ ಪಂಚಾಯತಿಗಳಲ್ಲಿ ಎರಡು ದಿವಸಗಳು ಬ್ಯಾಗನ್ನು ಹಿಡಿದುಕೊಂಡು ಓಡಾಡುತ್ತಾರೆ. ಒಬ್ಬ ಇಂಜಿನಿಯರ್ ಇಲ್ಲ. ನೀವು ಯಾವುದೇ ಕೆಲಸ ಕೊಟ್ಟರೂ ಮಾಡುವುದಕ್ಕೆ ಸಾಧ್ಯವಿಲ್ಲ. ಅವರಿಗೆ ಓದುವುದಕ್ಕೂ ಬರುವುದಿಲ್ಲ, ಬರೆಯುವುದಕ್ಕೂ ಬರುವುದಿಲ್ಲ. ನಿಮ್ಮ ಗ್ರಾಮ ಪಂಚಾಯತ್‌ನ ಕಾರ್ಯದರ್ಶಿಗಳಿಗೆ ರಸೀದಿ ಹರಿಯುವುದಕ್ಕೆ ಬರುವುದಿಲ್ಲ. ಈ ಸರ್ಕಾರದಲ್ಲಿ 1,35,000 ಹುದ್ದೆಗಳು ಖಾಲಿ ಇದೆ. ಇದನ್ನು ಇದೇ ಸರ್ಕಾರ ಮಾಡಿದ ತಪ್ಪು ಎಂದು ನಾನು ಹೇಳುವುದಿಲ್ಲ. ಹಿಂದಿನ ಎಲ್ಲಾ ಸರ್ಕಾರಗಳು ಮಾಡಿದ ತಪ್ಪುಗಳು ಇದರಲ್ಲಿ add ಆಗಿದೆ. ನಾವು ಪಾರದರ್ಶಕ ಆಡಳಿತವನ್ನು ಕೊಡುತ್ತೇವೆಂದು ಹೇಳಿದ ಮೇಲೆ ನಿಮ್ಮ ಉತ್ತರದಲ್ಲಿ ಇದು ಇರಬೇಕಾಗಿತ್ತು. ಇಲ್ಲಿ ಮೂರು ದಿವಸಗಳ ಕಾಲ ಗ್ರಾಮೀಣ ಪ್ರದೇಶಗಳ ಬಗ್ಗೆ ಚರ್ಚೆ ನಡೆಸುತ್ತಿರುವಂಥದ್ದು ಖಂಡಿತವಾಗಿಯೂ ಒಳ್ಳೆಯದಾಗಿದೆ. ಆದರೆ ಮಾನ್ಯ ಮುಖ್ಯಮಂತ್ರಿಯವರು ಕೊಟ್ಟಂಥ ಲಿಖಿತ ಹೇಳಿಕೆ ಏನು ಇದೆ. ಅದನ್ನು ವಿರೋಧ ಪಕ್ಷದವರು ಮಾಡಬೇಕಾದಂಥ ಹೇಳಿಕೆಯನ್ನು ಮಾನ್ಯ ಮುಖ್ಯಮಂತ್ರಿಯವರು ನಮ್ಮ ಮುಂದಿಟ್ಟಿದ್ದಾರೆ. ಅದರಲ್ಲಿ ವಾಸ್ತವವಾಗಿ ಯಾವುದೇ ಉತ್ತರಗಳು ಇಲ್ಲ. ಇಲ್ಲಿ ಬೆಟ್ಟವನ್ನು ಅಗೆದು ಇಲಿಯನ್ನಾದರೂ ಹಿಡಿದಿದ್ದರೆ ಪರವಾಗಿಲ್ಲ. ಇದರಲ್ಲಿ ಇಲಿಯನ್ನೂ ಹಿಡಿಯುವುದಕ್ಕೆ ಆಗಿಲ್ಲ. ಮಾನ್ಯ ಮುಖ್ಯಮಂತ್ರಿಯವರು ಕೊಟ್ಟಂಥ ಉತ್ತರ ಹೇಗಿತ್ತೆಂದರೆ ನಮ್ಮ ಮಲೆನಾಡಿನಲ್ಲಿ ಎರಡು ಗಾದೆಯನ್ನು ಹೇಳುತ್ತಾರೆ. ಅದು ಏನೆಂದರೆ, "ಊಟ ಆಯಿತಾ ಮಗನೆ?" ಎಂದು ಅಪ್ಪ ಕೇಳುತ್ತಾನೆ. ಅದಕ್ಕೆ ಮಗ "ಮುಂಡಾಸ

ಮೂರು ಮೊಳ ಇದೆಯೊ ಅಪ್ಪ" ಎಂದು ಹೇಳುತ್ತಾನೆ. ಅಂದರೆ ಪ್ರಶ್ನೆನೇ ಬೇರೆ, ಉತ್ತರವೇ ಬೇರೆ ಇದೆ. ಇಲ್ಲಿ ಪ್ರಸ್ತಾಪ ಮಾಡಿರುವಂಥ ಪ್ರಶ್ನೆಗೆ ಯಾವುದಕ್ಕೂ ಉತ್ತರವಿಲ್ಲ. ಇಲ್ಲಿ ಚರ್ಚೆನೇ ಬೇರೆ, ಉತ್ತರ ಯಾವುದಕ್ಕೂ ಇಲ್ಲ. ನಮ್ಮ ಎದುರಿಗೆ ಇರುವಂಥಾದ್ದು. ಇದು post-dated cheque. ಕೇರಳ ರಾಜ್ಯದಲ್ಲಿ ಒಂದು ಗ್ರಾಮ ಪಂಚಾಯತಿಗೆ 13 ಜನ ನೌಕರರು ಇದ್ದಾರೆ. ಇವತ್ತು ಕೇರಳ ರಾಜ್ಯದಲ್ಲಿ ಗ್ರಾಮ ಪಂಚಾಯತಿ success ಆಗಿದೆಯೆಂದರೆ ಇದೇ ಕಾರಣ. ಒಬ್ಬ ಇಂಜಿನಿಯರ್ ಒಂದು ಗ್ರಾಮ ಪಂಚಾಯತ್‌ಗೆ ಇದ್ದಾನೆ. ನಮ್ಮಲ್ಲಿ 5–10 ಗ್ರಾಮ ಪಂಚಾಯತ್‌ಗಳಿಗೂ ಒಬ್ಬ ಇಂಜಿನಿಯರ್ ಇಲ್ಲ. ನೀವು ಹೇಗೆ estimate ಮಾಡುತ್ತೀರಾ? ನೀವು ಹೇಗೆ ಅದನ್ನು execute ಮಾಡುತ್ತೀರಾ? ಇದರ ಜೊತೆಗೆ ಕುಡಿಯುವ ನೀರಿನ ವಿಚಾರವನ್ನು ಇದರಲ್ಲಿ ಚರ್ಚೆ ಮಾಡಿದ್ದೀರಿ. ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಮಾನ್ಯ ಮುಖ್ಯಮಂತ್ರಿಯವರು "ಚೈನಾ ದೇಶಕ್ಕೆ ಹೋಗಿದ್ದೆ. ನನಗೆ ನಿದ್ರೆ ಬರಲಿಲ್ಲ. ಮನಸ್ಸಿಗೆ ಬೇಜಾರಾಯಿತು" ಎಂದು ಹೇಳಿದರು. ಸತ್ಯ, ಒಪ್ಪಿಕೊಳ್ಳೋಣ. ನಾನು ಸರ್ಕಾರವನ್ನು ಅಭಿನಂದಿಸುತ್ತೇನೆ. ಏಕೆಂದರೆ ನಮ್ಮನ್ನೂ ಕೂಡ ವಿದೇಶಕ್ಕೆ ಕಳುಹಿಸಿದ್ದೀರಿ. ಆದರೆ ನನಗೆ ನೋವಾಗುವಂಥದ್ದು ಏನೆಂದರೆ ಕುಡಿಯುವ ನೀರಿನ ಬಗ್ಗೆ ಇವರು ಕೊಟ್ಟಿರುವಂಥ ಉತ್ತರದಲ್ಲಿ ಏನಾದರೂ ಇದೆಯಾ? ನನ್ನ ಪ್ರಾರ್ಥನೆ ಏನೆಂದರೆ ನೀವು 400 ಕೋಟಿ ರೂಪಾಯಿಗಳನ್ನು ಕುಡಿಯುವ ನೀರಿಗೆ ಎಂದು ಮಾಡಿ, ಪ್ರತಿ ಗ್ರಾಮೀಣ ಪ್ರದೇಶಗಳ ತಾಲ್ಲೂಕುಗಳಿಗೆ ಕೊಡಿ. ನೀವು ಪುರ ಪಂಚಾಯತ್, ಟೌನ್ ಪಂಚಾಯತ್, ನಗರ ಸಭೆ, ಕಾರ್ಪೋರೇಷನ್ ಕೈಬಿಟ್ಟು ಗ್ರಾಮೀಣ ಪ್ರದೇಶದ ಒಂದು ತಾಲ್ಲೂಕಿಗೆ ನೀವು ಎರಡು ಕೋಟಿ ರೂಪಾಯಿಗಳನ್ನು ಕೊಟ್ಟರೆ, ನಾವು 200 ಬಾವಿಗಳನ್ನು ತೆಗೆಯಬಹುದು. ನಾವು ಕುಡಿಯುವ ನೀರಿನ ಸಮಸ್ಯೆಯನ್ನು ಸಂಪೂರ್ಣವಾಗಿ ಬಗೆಹರಿಸಬಹುದು. ತಾವು ಭಯೋತ್ಪಾದನೆ ವಿರೋಧಿ ಅಭಿಯಾನ, ತೀರ್ಥ ಕೊಡುವುದು, ಲಾಡು ಕೊಡುವುದು, ಇವುಗಳನ್ನೆಲ್ಲಾ ಕೈಬಿಡಬೇಕು. ಇದರಿಂದ ಯಾರಿಗೂ ಬೇಜಾರಾಗುವುದಿಲ್ಲ. ಮಠಕ್ಕೆ ಕೊಡುವಂಥದ್ದು ಇವು ಯಾವುದಕ್ಕೂ

ನಾವು ವಿರೋಧವಿಲ್ಲ. ನಾನು ಹೇಳುವಂಥದ್ದು ಈ ಹಣವನ್ನು ನೀರಾವರಿಗೆ ತೊಡಗಿಸಬೇಕಾಗಿತ್ತು. ನೀವು ಕೊಟ್ಟಿರುವ ಉತ್ತರದಲ್ಲಿ ಕುಡಿಯುವ ನೀರಿನ ಬಗ್ಗೆ ಪ್ರಸ್ತಾಪವೇ ಇಲ್ಲ. ನಿಮ್ಮ ಉತ್ತರವನ್ನು ಓದಿದರೆ ಕುಡಿಯುವ ನೀರಿಗೆ ಉತ್ತರವಿಲ್ಲ. ಇವತ್ತು ಮಲೆನಾಡಿನ ಪ್ರದೇಶದ ಹೊಸನಗರ ಮಾನ್ಯ ಹಾಲಪ್ಪನವರ ಕ್ಷೇತ್ರ. ಇಲ್ಲಿ ಇಬ್ಬರು ಹೆಣ್ಣು ಮಕ್ಕಳು ತೇಲಿಕೊಂಡು ಹೋಗಿ ಬಿಟ್ಟರು. ಒಂದು ಮಗು ಸತ್ತು ಹೋಯಿತು. ಸತ್ತ ಹುಡುಗಿ ಮೂರನೇ ತರಗತಿಯವಳು, ಅದಕ್ಕೆ ಉತ್ತರವಿಲ್ಲ. ನೀವು ಯಾವುದನ್ನೇ ತೆಗೆದುಕೊಳ್ಳಿ. ಇಂಥ ಎಲ್ಲಾ ಸಮಸ್ಯೆಗಳನ್ನು ಇಟ್ಟುಕೊಂಡು ಇದು post-dated cheque. ನಮ್ಮಲ್ಲಿ ಹೆಣ್ಣು ಮಕ್ಕಳಿಗೆ ಒಂದು ಗಾದೆಯನ್ನು ಹೇಳುತ್ತಾರೆ. ಅದು "ನಮ್ಮ ಯಜಮಾನರಿಗೆ ಸಂಬಳವಿಲ್ಲ. ಸಾರಿಗೆ ಇಲ್ಲ. ಜಮೇದಾರ" ಎಂದು ಇದೆ. ಆ ರೀತಿ ಇದಕ್ಕೆ ಏನೂ ಇಲ್ಲ. ಇದು ವಾಸ್ತವದಲ್ಲಿ ಉತ್ತರವೇ ಅಲ್ಲ. ನಾನು ಹೇಳುವಂಥದ್ದು ನೀವು ಒಂದು ಕಾಂಕ್ರೀಟ್ programme ಹಾಕಬೇಕು. ನಾವು ಈ ರೀತಿ ಮಾಡುತ್ತೇವೆ. ನಮ್ಮ ಹತ್ತಿರ ಇಷ್ಟೆ ಹಣವಿದೆ. ಇಷ್ಟು ಹಣದಲ್ಲಿ ಈ ಕೆಲಸವನ್ನು ಮಾಡುತ್ತೇವೆಂದು ಹೇಳಬೇಕು. ನಾವು ಗ್ರಾಮೀಣ ಪ್ರದೇಶದ ಜನರಿಗೆ ಏನು ಹೇಳುವುದು? ಇದರಲ್ಲಿ ಯಾರಿಗೆ satisfaction ಇದೆ? ಇನ್ನು ಯೋಜನೆಗಳನ್ನು ಕಡಿಮೆ ಮಾಡಬೇಕೆಂದು ನಾನು ಎಲ್ಲಾ ಮಂತ್ರಿಗಳಲ್ಲೂ ವಿನಂತಿ ಮಾಡಿಕೊಳ್ಳುತ್ತೇನೆ. ನಮ್ಮಲ್ಲಿ ಯೋಜನೆಗಳು ಹೆಚ್ಚಾಗಿವೆ. ಆದರೆ ಅದರ ಅನುಷ್ಠಾನವಾಗುತ್ತಿಲ್ಲ. ಮಾನ್ಯ ಮುಖ್ಯಮಂತ್ರಿಯವರು ಹಾಗೂ ಎಲ್ಲಾ ಗೌರವಾನ್ವಿತ ಸಚಿವರುಗಳು, ನೀವೆಲ್ಲಾ ಅನುಭವಸ್ಥರಾಗಿದ್ದೀರಿ. ನಾನು ಈ ಸಭೆಗೆ ತುಂಬಾ ಕಿರಿಯವನಾಗಿದ್ದೇನೆ. ನಾನು ತಮ್ಮಲ್ಲಿ ಕೇಳಿಕೊಳ್ಳುವಂಥಾದ್ದು ಏನೆಂದರೆ ಯೋಜನೆಗಳು ಹೆಚ್ಚಿಗೆ ಬೇಡ. ಈಗ ಹಾಕುವಂಥ ಯೋಜನೆಗಳಿಗೆ ಒಂದು time-bound programme ಹಾಕಿಕೊಂಡು, ನಾವು ಈ ಕೆಲಸವನ್ನು ಮಾಡಿ ಮುಗಿಸುತ್ತೇವೆನ್ನುವಂಥ ತೀರ್ಮಾನವನ್ನು ತೆಗೆದುಕೊಳ್ಳಬೇಕು. ಈ ರೀತಿ ಆಗದಿದ್ದರೆ ನಿಮಗೂ ಒಳ್ಳೆಯ ಹೆಸರು ಬರುವುದಿಲ್ಲ. ನಮಗೂ ಒಳ್ಳೆಯ ಹೆಸರು ಬರುವುದಿಲ್ಲ. ಮಾನ್ಯ ಮುಖ್ಯಮಂತ್ರಿಯವರು ಬಹಳ interested ಆಗಿದ್ದಾರೆ.

ನನಗೆ ಬಹಳ ಸಂತೋಷವಾಗುತ್ತದೆ. ನಾನು ಸೈದ್ಧಾಂತಿಕವಾಗಿ ಸಂಪೂರ್ಣ ವಿರುದ್ಧವಿದ್ದೇನೆ. ನಾನು ಅವರಿಗೆ ಒಂದು ಪತ್ರವನ್ನು ಬರೆಯಬೇಕೆಂದು ಇದ್ದೇನೆ. ನೀವು ನಮ್ಮನ್ನು ವಿದೇಶ ಪ್ರವಾಸಕ್ಕೆ ಕಳುಹಿಸಿದ್ದೀರಿ. ತುಂಬಾ ಸಂತೋಷ. ಇದರಿಂದ ನಮಗೆ ಬಹಳ ಅನುಕೂಲವಾಗಿದೆ. ಆದರೆ ಅದಕ್ಕೆ ಪೂರ್ವಭಾವಿಯಾಗಿ ಒಂದು workshop ಅನ್ನು ಮಾಡಬೇಕಾಗಿತ್ತು. ನಮಗೆ ಆ ದೇಶದ population ಎಷ್ಟು ಇದೆ. literacy ಎಷ್ಟು ಇದೆ. ಆಡಳಿತ ವ್ಯವಸ್ಥೆ ಹೇಗಿದೆ. ನಮಗಿಂತ ಅವರು ಹೇಗೆ ಮುಂದುವರೆದಿದ್ದಾರೆ. ಕಾರಣ ಏನು? ನಮ್ಮಲ್ಲಿ Tourism Development ಇದೆ. ಇವ್ಯಾವುದಕ್ಕೂ ಉತ್ತರವಿಲ್ಲ. ನಾನು ತಮ್ಮಲ್ಲಿ ಕೇಳುವಂಥದ್ದು ಏನೆಂದರೆ, ಇದರಲ್ಲಿ ಯಾವುದಕ್ಕೆ ಉತ್ತರವಿದೆ? ಈ ಯಾವ ಪ್ರಶ್ನೆಗಳಿಗೂ ಇಲ್ಲ. ನಾವು ನಾಳೆ ಜನರಿಗೆ ಏನು ಉತ್ತರವನ್ನು ಕೊಡುತ್ತೇವೆ? ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುವಂಥದ್ದು. ನೀವು ಗ್ರಾಮ ಪಂಚಾಯತಿಯಲ್ಲಿ ಅಥವಾ ಯಾವುದೇ ಆಡಳಿತದಲ್ಲಿ ಇನ್ನು ಎರಡು ವರ್ಷಗಳೊಳಗಾಗಿ ಎಲ್ಲಾ ಖಾಲಿ ಹುದ್ದೆಗಳನ್ನು ಭರ್ತಿ ಮಾಡಿ. ನಿಮಗೆ ಒಳ್ಳೆಯ ಆಡಳಿತವನ್ನು ಕೊಡುವುದಕ್ಕೆ ಆಗುತ್ತದೆ. ಮಾನ್ಯ ಕಂದಾಯ ಮಂತ್ರಿಯವರು ಇಲ್ಲೇ ಇದ್ದಾರೆ. ಅವರು ಒಳ್ಳೆಯ ರೀತಿಯಲ್ಲಿ ಮಾತನಾಡುತ್ತಾರೆ. ಕೆಲವು ಸಚಿವರು ಇದ್ದಾರೆ. ಅವರು ನಮ್ಮನ್ನು ಮಾತೇ ಆಡಿಸುವುದಿಲ್ಲ. ಅವರಿಗೆ ದೇವರು ಒಳ್ಳೆಯದನ್ನು ಮಾಡಲಿ, ನಮಗೆ ಏನೂ ಬೇಕಾಗಿಲ್ಲ. ನಮ್ಮ ಊರಿಗೆ ಒಂದು ಬಸ್ಸು ಬೇಕು ಎಂದು ನಾಲ್ಕು ಸಾರಿ ಕೇಳಿದೆ. ಆ ಮನುಷ್ಯರು ಮುಖ ಕೊಟ್ಟು ನಮ್ಮನ್ನು ನೋಡುವುದೇ ಇಲ್ಲ. ನಮ್ಮ ತಾಲ್ಲೂಕು ಆಫೀಸಿನಲ್ಲಿ 13 ಜನ ನೌಕರರಿಲ್ಲ. 13 ಖಾಲಿ ಹುದ್ದೆಗಳಿವೆ. ಇಡೀ ನಮ್ಮ ವಿಧಾನಸಭಾ ಕ್ಷೇತ್ರದಲ್ಲಿ 600 ರಿಂದ 800 ಜನ ನೌಕರರಿಲ್ಲ. ಅಷ್ಟು ಖಾಲಿ ಹುದ್ದೆಗಳಿವೆ. ಹೀಗಿರುವಾಗ ನೀವು ಹೇಗೆ ಆಡಳಿತ ಮಾಡುತ್ತೀರಿ? ಶ್ರೀಮತಿ ರೂಪಕಲಾ ಎನ್ನುವ ಒಬ್ಬ ತಹಶೀಲ್ದಾರ್ ಆರು ತಿಂಗಳ ಕಾಲ ಎರಡು ವಿಧಾನಸಭಾ ಕ್ಷೇತ್ರಗಳನ್ನು maintain ಮಾಡಿದ್ದಾರೆ. ನಮ್ಮಲ್ಲಿ ಬರವೂ ಇದೆ, ಅತಿವೃಷ್ಟಿಯೂ ಇದೆ. ನೀವು ಅವುಗಳಿಗೆಲ್ಲ ಇದರಲ್ಲಿ ಎಲ್ಲಿ ಉತ್ತರ ಹುಡುಕುತ್ತೀರಿ? ನಾನು ನಿಮ್ಮಲ್ಲಿ ಪ್ರಾರ್ಥನೆ

ಮಾಡಿಕೊಳ್ಳುತ್ತೇನೆ. ಮೊದಲು ಖಾಲಿ ಹುದ್ದೆಗಳನ್ನು ಭರ್ತಿ ಮಾಡಿ. ಅದನ್ನು ಬಿಟ್ಟು, ಈ ರೀತಿ post-dated cheque ಕೊಡುವುದರಿಂದ ಏನೂ ಉಪಯೋಗವಿಲ್ಲ. ಮುಂದೆ ನಾವು ಏನಾಗುತ್ತೇವೋ ನಮಗೆ ಗೊತ್ತಿಲ್ಲ. ನಾವು ಮುಂದೆ ಏನೂ ಆಗದಿರಬಹುದು. ಆದರೆ ನೀವು ಒಂದು concrete plan ಅನ್ನು ಹೊರತರಬೇಕು. ಈ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ನಾನು ಸರ್ಕಾರಕ್ಕೆ ಅಭಿನಂದಿಸುತ್ತೇನೆ. ಇನ್ನೊಂದು ಕಡೆ, ನಿಮ್ಮ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳಲಿಕ್ಕೆ ನೀವು ಈ ರೀತಿ ಮಾಡಿದಿರಿ ಎನ್ನುವ ಆಪಾದನೆಗೆ ನೀವು ಒಳಗಾಗಬಾರದು ಎಂದು ಹೇಳಿ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಅಧ್ಯಕ್ಷರು:** ಈಗ ಶ್ರೀ ಪ್ರಕಾಶ್‌ರವರು, ನಂತರ ಕೊನೆಯದಾಗಿ ಶ್ರೀ ಸುಧಾಕರ್‌ರವರು.

**ಶ್ರೀ ಹೆಚ್.ಎಸ್. ಪ್ರಕಾಶ್ (ಹಾಸನ):** ಸನ್ಮಾನ್ಯ ಅಧ್ಯಕ್ಷರೆ, ಶಾಸಕರುಗಳಾದ ನಾವುಗಳು ವಿದೇಶ ಪ್ರವಾಸಕ್ಕೆ ಹೋಗಿದ್ದೆವು, ರೈತರುಗಳು ಹೋಗಿದ್ದರು. ಸನ್ಮಾನ್ಯ ಮುಖ್ಯಮಂತ್ರಿಗಳು ಚೈನಾ ಪ್ರವಾಸಕ್ಕೆ ಹೋದ ನಂತರ ನಮ್ಮ ದೇಶದ ಕೃಷಿಯಲ್ಲಿ ಹೆಚ್ಚಿನ ಪ್ರಗತಿಯನ್ನು ಕಾಣುತ್ತಿದ್ದೇವೆ. ಕಾರಣವೆಂದರೆ, ನನ್ನ ತಾಲ್ಲೂಕಿನಲ್ಲಿ ಜೋಳದ ಬೆಳೆಯನ್ನು ಬೆಳೆದಿದ್ದಾರೆ. ಜೋಳ ಬಹಳ ಹುಲುಸಾಗಿ ಬೆಳೆದಿದೆ. ಆದರೆ ತೆನೆ ಮಾತ್ರ ಬಿಟ್ಟಿಲ್ಲ. ಅದಕ್ಕೆ ಕೊಟ್ಟಂಥ ಬಿತ್ತನೆ ಬೀಜವನ್ನು ಚೈನಾದಿಂದ ತಂದರೋ ಅಥವಾ ಈ ದೇಶದ್ದೇ ಎನ್ನುವುದನ್ನು ಮೊದಲು ಪರಿಶೀಲನೆ ಮಾಡಿ. ಏಕೆಂದರೆ, ಇವರು ಚೈನಾಗೆ ಹೋಗಿ ಬಂದ ಮೇಲೆ ಕೃಷಿ ಅಭಿವೃದ್ಧಿಯನ್ನು ಮಾಡುತ್ತೇವೆ ಎಂದು ಹೇಳಿದರು. ಈಗ ಗಿಡ ಚೆನ್ನಾಗಿ ಬಂದಿದೆ. ಆದರೆ ತೆನೆ ಬಂದಿಲ್ಲವೆಂದರೆ ಅದನ್ನು ತೆಗೆದುಕೊಂಡು ಹೋಗಿ ದನಗಳಿಗೆ ಹಾಕಬೇಕಾಗುತ್ತದೆ. ಆದ್ದರಿಂದ, ದಯಮಾಡಿ ಏನು ಜ್ಞಾನೋದಯವಾಗಿದೆ ಅದು ಸ್ವಲ್ಪ ತಿದ್ದುಪಡಿಯಾಗಬೇಕಾಗುತ್ತದೆ. ಎರಡನೆಯದಾಗಿ ರೈತ P.W.D. Officeಗೆ ಅಥವಾ Engineerರವರ

officeಗೆ ಹೋಗುವುದಿಲ್ಲ. ಅವನು ತಾಲ್ಲೂಕು ಆಫೀಸಿಗೆ ಹೋಗುತ್ತಾನೆ. ಕೃಷಿಗೆ ಸಂಬಂಧಪಟ್ಟಂಥ Agriculture, Horticulture, Sericulture ಇಂಥ ಆಫೀಸುಗಳಿಗೆ ಹೋಗುತ್ತಾನೆ. ಸನ್ಮಾನ್ಯ ಕಂದಾಯ ಸಚಿವರ ಗಮನಕ್ಕೆ ತರುತ್ತಿದ್ದೇನೆ. ಹಾಸನ ತಾಲ್ಲೂಕಿಗೆ 2 ತಿಂಗಳಲ್ಲಿ 6 ಜನ ತಹಶೀಲ್ದಾರರು ಬಂದು ಹೋಗಿದ್ದಾರೆ. ಶನಿವಾರ ಜನಸಂಪರ್ಕ ಸಭೆಗೆ ಹೋಗೋಣ ಎಂದು ನಾನು ಹೇಳಿಬಂದಿರುತ್ತೇನೆ. ಶುಕ್ರವಾರ ಅವರು transfer ಆಗಿ ಹೊಸಬರು ಬಂದಿರುತ್ತಾರೆ. ನಾನು ಮೊದಲಿನಿಂದ ಅವರಿಗೆ ಹೇಳಿದ್ದೆಲ್ಲ ಮರೆತು ಹೋಗಿರುತ್ತದೆ. ಅಷ್ಟರಲ್ಲಿ ಹೊಸಬರು ಬಂದು ಕುಳಿತಿರುತ್ತಾರೆ. ಹೀಗಾದರೆ ನಾವು ಯಾವ ರೀತಿ ಕೆಲಸ ಮಾಡಬೇಕು ಎಂದು ಯೋಚನೆ ಮಾಡಬೇಕಾಗುತ್ತದೆ. ಮೂರನೆಯದಾಗಿ, ನಾನು ಯಾರ ಮೇಲೂ ಆಪಾದನೆಯನ್ನು ಮಾಡುತ್ತಿಲ್ಲ. ಈ ಸಲ ರೈತರ ಬಗ್ಗೆ ಕಾಳಜಿ ವಹಿಸಿ, ಅವರ ಕಣ್ಣಲ್ಲಿ ನೀರು ಬಂದಂಥ ಮುಖ್ಯಮಂತ್ರಿಯನ್ನು ನೋಡಿದೆವು. ಆಗ ನನಗೂ ಮನಸ್ಸಿಗೆ ಬಹಳಷ್ಟು ನೋವಾಯಿತು. ಮುಖ್ಯಮಂತ್ರಿಗಳು ಕೃಷಿ ಬಗ್ಗೆ ಇಷ್ಟೊಂದು ಆದ್ಯತೆ ಕೊಟ್ಟು ಮಾತನಾಡುತ್ತಿದ್ದಾರಲ್ಲ ಎಂದು ಅನ್ನಿಸಿತ್ತು. ಅಂಥ ಮುಖ್ಯಮಂತ್ರಿಗಳು ಹೋದ ವರ್ಷ ನನ್ನ ತಾಲ್ಲೂಕಿಗೆ ಬಂದಿದ್ದರು. ಬಂದು ಒಂದು ದೇವಸ್ಥಾನವನ್ನು ಉದ್ಘಾಟನೆ ಮಾಡಿದರು. ಅದರ ಪಕ್ಕದಲ್ಲೇ ನೂರು ಅಡಿ ದೂರದಲ್ಲಿ, ಆಲೂಗಡ್ಡೆ ಬೆಳೆಗೆ ಅಂಗಮಾರಿ ರೋಗ ಬಂದಿದೆ. ಬನ್ನಿ, ದಯಮಾಡಿ ನೋಡಿ ಎಂದು ಹೇಳಿದರೂ ಅವರು ಬರಲಿಲ್ಲ. ನಾನು, ಕುಮಾರಸ್ವಾಮಿಯವರು ಎಲ್ಲರೂ ಹೋಗಿದ್ದೆವು. ಈಗಲೂ ಸಹ ಹಾಸನ ತಾಲ್ಲೂಕಿನಲ್ಲಿ ಆಲೂಗಡ್ಡೆ ಬೆಳೆ ಸಂಪೂರ್ಣವಾಗಿ ನಾಶವಾಗಿದೆ. ಒಂದು ಚೂರೂ ಆಲೂಗಡ್ಡೆ ಬೆಳೆ ಇಲ್ಲ. ಒಂದು ಕ್ವಿಂಟಾಲ್ ಆಲೂಗಡ್ಡೆಗೆ ಈಗ 2,000 ರೂಪಾಯಿ ಇದೆ. ಆದರೆ ರೈತನ ಹತ್ತಿರ ಆಲೂಗಡ್ಡೆ ಇಲ್ಲ. ಆದ್ದರಿಂದ, ದಯಮಾಡಿ ಎಲ್ಲಿ ಆಲೂಗಡ್ಡೆ ಬೆಳೆ ಹಾನಿಯಾಗಿದೆ ಅಲ್ಲಾದರೂ ಸ್ವಲ್ಪ ಹಣವನ್ನು ಬಿಡುಗಡೆ ಮಾಡಿ ರೈತರ ಕಷ್ಟಕ್ಕೆ ಬರಲಿ ಎಂದು ಹೇಳುತ್ತೇನೆ. ನಮ್ಮ ರೆವಿನ್ಯೂ ಮಂತ್ರಿಗಳಲ್ಲಿ ಒಂದು ವಿಷಯವನ್ನು ಕೇಳುತ್ತೇನೆ. ಚಿಕ್ಕಕೊಂಡಗುಳದ ಸರ್ವೆ ನಂಬರ್ 73ರಲ್ಲಿ ಒಂದು

ಎಕರೆ ಜಮೀನು ಹೋಗಿದೆ. ನಾನು ಮಂತ್ರಿಗಳ ಮೇಲೆ ಆಪಾದನೆಯನ್ನು ಮಾಡುತ್ತಿಲ್ಲ. ಇದು 1993ರಲ್ಲಿ ಆಗಿರುವುದು. Revenue Minister ತಕ್ಷಣ ಬರೆದು, ಶಾಸಕರು ಕೊಟ್ಟಿದ್ದು ಸರಿ ಇದ್ದರೆ ಪರಿಶೀಲನೆ ಮಾಡಿ cancel ಮಾಡಿ ಎಂದು 13ನೇ ತಾರೀಖು ಬರೆದು ಕೊಟ್ಟರು. ಬಳಿಗಾರ್ ಸಾಹೇಬರು ಅದನ್ನು inspection ಮಾಡಿ, cancel ಮಾಡಿ ಎಂದು ಬರೆದುಕೊಟ್ಟರು. ಆದರೆ, 22ನೇ ತಾರೀಖು ಬರೆಯುತ್ತಾರೆ, ಯಾರಿಗೆ ಆಗಿದೆಯೋ ಅವರಿಗೇ ಖಾತೆ ಮಾಡಿ ಎಂದು ಬರೆಯುತ್ತಾರೆ. ಇಂಥವುಗಳನ್ನು ನೋಡಿದಾಗ, ನಾವು ನಮ್ಮ ಕ್ಷೇತ್ರದಲ್ಲಿ ಹೇಗೆ ಕೆಲಸವನ್ನು ಮಾಡಬೇಕು ಎಂದು ಅನ್ನಿಸುತ್ತದೆ. ಅಧಿಕಾರಿಗಳನ್ನು ವರ್ಗಾವಣೆ ಮಾಡುತ್ತೇವೆ ಎಂದು ಹೇಳುತ್ತಾರೆ. ಇವತ್ತು ಪತ್ರಿಕೆಯಲ್ಲಿ ಓದಿದೆ, ಯಾವ ಅಧಿಕಾರಿಗಳು ಅಧ್ಯಕ್ಷರಲ್ಲ. ಪ್ರಾಮಾಣಿಕರಲ್ಲ ಅವರನ್ನೆಲ್ಲ ತೆಗೆದು ಹಾಕಿ ಎಂದು ಹೇಳುತ್ತಾರೆ. ಯಾರನ್ನು ತೆಗೆದು ಎಲ್ಲಿ ಹಾಕೋಣ. ನಾವು ಎಲ್ಲಿ ಹುಡುಕೋಣ? ದಯಮಾಡಿ ಇದನ್ನು ಹೇಳಬೇಕು.

ಗ್ರಾಮೀಣಾಭಿವೃದ್ಧಿ ಸಂಬಂಧಪಟ್ಟಂತೆ ಹೇಳುವುದಾದರೆ ಕುಡಿಯುವ ನೀರಿನ ಸಮಸ್ಯೆ ಎಲ್ಲಾ ಕಡೆ ಬಹಳಷ್ಟಿದೆ. ಕುಡಿಯುವ ನೀರಿಗೆ ಒಂದಿಷ್ಟು ಹಣವನ್ನು ತಹಶೀಲ್ದಾರರಿಗೆ ಬಿಡುಗಡೆ ಮಾಡಿ. ತುರ್ತಾಗಿ ಎಲ್ಲಿ ಅವಶ್ಯಕತೆ ಇದೆಯೋ ಅಂಥ ಕಡೆಗಳಲ್ಲಿ ಕುಡಿಯುವ ನೀರಿಗಾದರೂ ಹಣದ ವ್ಯವಸ್ಥೆಯನ್ನು ಮಾಡಬೇಕು ಎಂದು ತಮ್ಮ ಮುಖಾಂತರ ಕೇಳುತ್ತಿದ್ದೇನೆ. ನಾವು ಇಷ್ಟೆಲ್ಲ ಹೇಳುತ್ತಿದ್ದೇವೆ. ಒಬ್ಬರಾದರೂ ಮಂತ್ರಿಗಳು ನಮ್ಮ ಮಾತನ್ನು ಕೇಳುತ್ತಿದ್ದಾರೆಯೇ, ಬರೆದುಕೊಳ್ಳುತ್ತಿದ್ದಾರೆಯೇ? ಹೀಗಾದರೆ ನಾವು ಏಕೆ ಮಾತನಾಡಬೇಕು?

**ಅಧ್ಯಕ್ಷರು:** ಕೇಳುತ್ತಿದ್ದಾರೆ, ಶ್ರೀ ಈಶ್ವರಪ್ಪನವರು ಕೇಳುತ್ತಿದ್ದಾರೆ.

**ಶ್ರೀ ಹೆಚ್.ಎಸ್. ಪ್ರಕಾಶ್:** ಅವರವರು ಅಲ್ಲಲ್ಲಿಯೇ ಮಾತನಾಡುವುದಾದರೆ ನಾವು ಏಕೆ ಮಾತನಾಡಬೇಕು? ಇಲ್ಲಿ ರೆಕಾರ್ಡ್ ಆಗಿದೆ. ಆದರೆ ಅದನ್ನು ಓದುವಷ್ಟು ತಾಳ್ಮೆ ಅವರಿಗೆ ಇರಬೇಕಲ್ಲವೇ? ನಾವು ಕೊಟ್ಟ ಪತ್ರವನ್ನೇ ಓದುವುದಿಲ್ಲ. ನಾವು ಇಷ್ಟು ಚರ್ಚೆ ಮಾಡುತ್ತಿದ್ದೇವೆ. ಅವರೆಲ್ಲರೂ ಅಲ್ಲಲ್ಲಿಯೇ ಮಾತನಾಡುತ್ತಿದ್ದಾರೆ. ಅಶೋಕ್‌ರವರು ಅಲ್ಲಿ ಮಾತನಾಡುತ್ತಾರೆ,

ಇಲ್ಲಿ ಮಾತನಾಡುತ್ತಿರುತ್ತಾರೆ. ನಾವು ಯಾರ ಬಗ್ಗೆ ಮಾತನಾಡಬೇಕು ಎನ್ನುವುದೇ ಅರ್ಥವಾಗುತ್ತಿಲ್ಲ.

**ಶ್ರೀ ಹೆಚ್.ಡಿ. ರೇವಣ್ಣ:** 2 ತಿಂಗಳಲ್ಲಿ 6 ತಹಶೀಲ್ದಾರರು ವರ್ಗಾವಣೆಯಾಗಿದ್ದಾರೆ ಎಂದು ಹೇಳಿದರು. ಆದರೆ, ನಮ್ಮಲ್ಲಿ ನೌಕರರ ಸಂಘದ ಅಧ್ಯಕ್ಷರನ್ನೇ ವರ್ಗ ಮಾಡಿದ್ದಾರೆ. Revenue Minister ರವರಿಗೆ ಆ ವಿಷಯವನ್ನು ಯಾರಾದರೂ ತಿಳಿಸಿದ್ದಾರೋ, ಇಲ್ಲವೋ ಗೊತ್ತಿಲ್ಲ. ಸರ್ಕಾರಿ ನೌಕರರ ಸಂಘದ ಅಧ್ಯಕ್ಷರನ್ನು ಯಾವುದೇ ಕಾರಣಕ್ಕೂ ವರ್ಗಾವಣೆ ಮಾಡುವುದಕ್ಕೆ ಅವಕಾಶವಿಲ್ಲ. ಆದರೂ ಅವರ ವರ್ಗವಾಗಿದೆ. ಇದು ತಮ್ಮ ಕಣ್ಣು ತಪ್ಪಿ ಆಗಿದೆಯೇನೋ ಗೊತ್ತಿಲ್ಲ. ಒಂದು ಸಾರಿ ದಯಮಾಡಿ ಇದರ ಬಗ್ಗೆ ವಿಚಾರ ಮಾಡಿ. 6 ಬಾರಿ ಇಲ್ಲದಿದ್ದರೆ 8 ಬಾರಿ ತಹಶೀಲ್ದಾರರುಗಳನ್ನು ವರ್ಗ ಮಾಡಿ, ನಮಗೇನೂ ಬೇಜಾರಿಲ್ಲ. ಆದರೆ ಸರ್ಕಾರಿ ನೌಕರರ ಸಂಘದ ಅಧ್ಯಕ್ಷರನ್ನೇ ವರ್ಗ ಮಾಡಿದ್ದಾರೆ. ಅದು ತಮ್ಮ ಗಮನದಲ್ಲಿರಲಿ ಎಂದು ಹೇಳುತ್ತಿದ್ದೇನೆ.

**ಡಾ: ಎಂ.ಸಿ. ಸುಧಾಕರ್ (ಚಿಂತಾಮಣಿ):** ಮಾನ್ಯ ಅಧ್ಯಕ್ಷರೆ, ಮೊನ್ನೆ ಕಡೆಯವನಾಗಿ ಮಾತನಾಡಲು ನನಗೆ ತಾವು ಅವಕಾಶ ಕೊಟ್ಟಿದ್ದೀರಿ.

**ಅಧ್ಯಕ್ಷರು:** ಆಗ ಬಿಟ್ಟುಹೋದ ಕೆಲವು ವಿಷಯಗಳನ್ನು ಈಗ ಮಾತನಾಡುತ್ತೀರೇನು?

**ಡಾ: ಎಂ.ಸಿ. ಸುಧಾಕರ್:** ಈಗ ನಾನು ಹೊಸದಾಗಿ ಮಾತನಾಡುವುದಿಲ್ಲ. ಆದರೆ ಮೊನ್ನೆ ಕೇಳಿದಂಥ ವಿಚಾರಗಳ ಬಗ್ಗೆ ಉತ್ತರದಲ್ಲಿ ಏನೂ ಪ್ರಸ್ತಾಪವಾಗಲಿಲ್ಲ. ಈಗಾಗಲೇ ಸಂಪಂಗಿಯವರು ಹೇಳಿದರು. ಅದರಂತೆ ಈಗ ನಮ್ಮ ಭಾಗದಲ್ಲಿ ಮರಳು ದಂಧೆಯನ್ನು ಪ್ರಾರಂಭ ಮಾಡಿದ್ದಾರೆ. ಅದರಿಂದಾಗಿ ನಮ್ಮ ಭಾಗದಲ್ಲಿ ಅಂತರ್ಜಲ ಕುಸಿಯುತ್ತಿದೆ. ಇದರ ಬಗ್ಗೆ ಸರ್ಕಾರ ಸ್ಪಷ್ಟವಾಗಿ ಏನನ್ನೂ ಹೇಳಿಲ್ಲ. ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬಗ್ಗೆ ಚರ್ಚೆಗೆ ಎಂದು ಈ ಅಧಿವೇಶನವನ್ನು ಕರೆದಿದ್ದು, ಅದರ ಅರ್ಥ ಏನು ಎಂದು ಈಗಲೂ ನನಗೆ ಗೊತ್ತಾಗುತ್ತಿಲ್ಲ. ಒಂದು ಕಡೆ ನೀವು, ಅಂತರ್ಜಲ ವೃದ್ಧಿ ಮಾಡುತ್ತೇವೆ.

ಕೆರೆಗಳನ್ನು ತುಂಬಿಸುತ್ತೇವೆ ಎಂದು ಹೇಳುತ್ತಿದ್ದೀರಿ. ಇನ್ನೊಂದು ಕಡೆ ಮರಳು ಎತ್ತುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ. ಇದು ಯಾವ ಪುರುಷಾರ್ಥಕ್ಕೆ ಎಂದು ನನಗೆ ಅರ್ಥವಾಗುತ್ತಿಲ್ಲ. ಇದರ ಬಗ್ಗೆ ಸರ್ಕಾರ ಬಹಳ ಸ್ಪಷ್ಟವಾಗಿ ಉತ್ತರ ಕೊಡಬೇಕಾಗುತ್ತದೆ. ನಮ್ಮ ಕಡೆ ಗ್ರಾಮೀಣ ಪ್ರದೇಶದ ರಸ್ತೆಗಳೆಲ್ಲ ಹಾಳಾಗುತ್ತಿವೆ. Indian Road Congress ನವರ ಪ್ರಕಾರ ಯಾವಯಾವ ವಾಹನ ಎಷ್ಟೆಷ್ಟು ಟನ್ ತೂಕವನ್ನು ಸಾಗಿಸಬಹುದು ಎಂದು ಇದೆಯೋ ಆ ನಿಯಮಗಳನ್ನೆಲ್ಲ ಉಲ್ಲಂಘನೆ ಮಾಡಿ ಸಾಗಿಸುತ್ತಿದ್ದಾರೆ. ಲಾರಿ ಚಾಲಕರ ಮತ್ತು ಲಾರಿ ಮಾಲೀಕರ ಒತ್ತಡಕ್ಕೆ ಸರ್ಕಾರ ಮಣಿದಿದೆ ಎಂದು ಹೇಳಬೇಕಾಗುತ್ತದೆ. ದಯವಿಟ್ಟು ಇದರ ಬಗ್ಗೆ ಸರ್ಕಾರ ತನ್ನ ಸ್ಪಷ್ಟವಾದ ನಿಲುವನ್ನು ಹೇಳಬೇಕು. ನಾವು ಕೆಲವೇ ಕೆಲವು ವ್ಯಕ್ತಿಗಳ ಒತ್ತಡಕ್ಕೆ ಮಣಿಯುತ್ತೇವೆ. ನಮಗೆ ರೈತರ ಮತ್ತು ಆ ಭಾಗದ ಜನರ ಹಿತ ಮುಖ್ಯವಲ್ಲ. ಅವರು ಹಾಗೆಯೇ ಇರಲಿ ಎನ್ನತಕ್ಕಂಥ ನಿಲುವನ್ನು ತಾಳುವುದಾದರೆ ದಯವಿಟ್ಟು ಅದನ್ನೇ ಸ್ಪಷ್ಟ ಮಾಡಿ.

ಇನ್ನು, ಬೆಂಬಲ ಬೆಲೆ ಬಗ್ಗೆ ನಾನು ಕೆಲವು ವಿಚಾರಗಳನ್ನು ಹೇಳಬೇಕು. ಅದು ಆಲೂಗಡ್ಡೆ ಇರಬಹುದು, ಟೊಮ್ಯೊಟೊ ಇರಬಹುದು, ತೊಗರಿ ಇರಬಹುದು, ಮತ್ತೊಂದು ಇರಬಹುದು, ಯಾವುದೇ ಇರಬಹುದು. ಬೆಳೆಗಳಿಗೆ ಬೆಲೆ ಕುಸಿದಾಗ ವೈಜ್ಞಾನಿಕವಾಗಿ ಬೆಂಬಲ ಬೆಲೆ ಕೊಡತಕ್ಕಂಥ ನೀತಿಯನ್ನು ನಾವು ಮಾಡಬೇಕು. ತಕ್ಷಣಕ್ಕೆ ಏನೋ ಒಂದು ಪರಿಹಾರವನ್ನು ಘೋಷಣೆ ಮಾಡಿದರೆ, ಅದು ದಲ್ಲಾಳಿಗಳು ಮತ್ತು ಅಂಥ ಅವಕಾಶಗಳಿಗಾಗಿ ಕಾಯುತ್ತಿರುವಂಥ ದುಷ್ಟರು ಅದರ ದುರುಪಯೋಗ ಮಾಡತಕ್ಕಂಥದ್ದರಿಂದ ರೈತರಿಗೆ ಬಹಳ ನಷ್ಟವಾಗುತ್ತದೆ. ನಾವು ರೈತರ ವಿಶ್ವಾಸವನ್ನು ಪಡೆಯಬೇಕು. ಅದರ ಜೊತೆಗೆ, ರೈತರನ್ನು ತಪ್ಪುದಾರಿಗೆ ಎಳೆಯತಕ್ಕಂಥವರು ಕೆಲವರು ಇರುತ್ತಾರೆ. ಅವರಿಗೂ ಇದು ಸರಿಯಲ್ಲ ಎಂದು ಹೇಳುವ ಮಾರ್ಗದಲ್ಲಿ ನಾವು ಹೋಗಬೇಕಾಗುತ್ತದೆ. ಟೊಮ್ಯೊಟೊ ಬೆಳೆ ಬಗ್ಗೆ ಹೇಳಿದೆ. ದಯವಿಟ್ಟು ಅಧಿಕಾರಿಗಳು ಅದರ ಬಗ್ಗೆ ಗಮನ ಹರಿಸಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ ಹೇಳುವುದಾದರೆ, ಈ ಬಗ್ಗೆ ನಾನು ಈಗ ತಾನೇ ಮಂತ್ರಿಗಳ ಹತ್ತಿರ ಮಾತನಾಡಿದೆ. ಕುಡಿಯುವ ನೀರಿಗೆ ಬೋರ್‌ವೆಲ್ ಕೊರೆಯಬೇಕಾದರೆ ಅದಕ್ಕೆ ಟೆಂಡರ್ ಕರೆಯಬೇಕು ಎಂದು ಮಂತ್ರಿಗಳು ಒಂದು ಆದೇಶ ಮಾಡಿದ್ದಾರೆ. ಒಂದು ಟೆಂಡರ್ ಕರೆಯಬೇಕಾದರೆ ಅದಕ್ಕೆ ಯಾವ ಯಾವ ರೀತಿಯ formalities ಇರುತ್ತದೆ, ಟೆಂಡರ್ ಪ್ರಕ್ರಿಯೆ ಎಷ್ಟು ದಿವಸವಾಗುತ್ತದೆ ಎನ್ನುವುದು ತಮಗೆಲ್ಲರಿಗೂ ಗೊತ್ತಿದೆ. ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿಗಾಗಿ ಪಂಪು, ಮೋಟರ್ ಖರೀದಿ ಮಾಡುವುದು ಟೆಂಡರ್ ಮುಖಾಂತರವೇ, ಪೈಪ್ ಖರೀದಿ ಮಾಡುವುದೂ ಟೆಂಡರ್ ಮುಖಾಂತರವೇ. ಬರೀ ಪೈಪ್‌ಲೈನ್ ಅಗೆಯುವುದನ್ನು ಮಾತ್ರ entrust ಮಾಡುತ್ತಾರೆ. Bescomನವರು ಅವರದೇ ಆದಂಥ ನಿಯಮದ ಪ್ರಕಾರ energization ಮಾಡುತ್ತಾರೆ. ಈಗ ಏಕಾಏಕಿ ಟೆಂಡರ್ ಕರೆಯಬೇಕು ಎಂದರೆ ತೊಂದರೆಯಾಗುತ್ತದೆ. ಅದಲ್ಲದೇ, ಒಂದು ಗ್ರಾಮ ಪಂಚಾಯತಿಯ ವ್ಯಾಪ್ತಿಯಲ್ಲಿ ಬರುವ ಕೆಲವು ಗ್ರಾಮಗಳಲ್ಲಿ ನೀರು ಬರತಕ್ಕಂಥಾದ್ದು ನಿಂತುಹೋದಾಗ ಒಟ್ಟಿಗೆ ಸೇರಿಸಿ ಟೆಂಡರ್ ಕರೆಯಬೇಕು ಎಂದು ಹೇಳುತ್ತಾರೆ. ಯಾವಯಾವ ಗ್ರಾಮಗಳಲ್ಲಿ ನೀರು ಬರತಕ್ಕಂಥಾದ್ದು ನಿಂತುಹೋಗುತ್ತದೆ ಎಂದು ನಾವು ಕಾಯಬೇಕಾಗುತ್ತದೆ. ಎಲ್ಲವನ್ನೂ ಒಟ್ಟಿಗೆ ಸೇರಿಸಿ ಹಣ ಕೇಳಿದರೆ ಹಣ ಇಲ್ಲ ಎಂದು ಹೇಳುತ್ತಾರೆ. ಈ ರೀತಿಯಾದರೆ ನಾವು ಅಲ್ಲಿ ಜನಗಳಿಗೆ ಹೇಗೆ ಉತ್ತರ ಕೊಡಬೇಕು? ದಯವಿಟ್ಟು ಹಿಂದೆ ಏನು ಪದ್ಧತಿ ಇತ್ತೋ ಅದನ್ನೇ ಮುಂದುವರೆಸಬೇಕೆಂದು ಹೇಳುತ್ತೇನೆ. ಇದು ಬರಗಾಲದ ಪರಿಸ್ಥಿತಿ, ತುರ್ತು ಪರಿಸ್ಥಿತಿಯಾಗಿರುವುದರಿಂದ ಹಿಂದೆ ಯಾವ ನಿಯಮಗಳಿದ್ದವೋ, ಆ ನಿಯಮದಡಿಯಲ್ಲೇ ಬೋರ್‌ವೆಲ್ ಕೊರೆಯತಕ್ಕಂಥಾದ್ದಕ್ಕೆ, ಪಂಪು ಮೋಟರ್ ಅಳವಡಿಸತಕ್ಕಂಥದ್ದಕ್ಕೆ ಅವಕಾಶ ಮಾಡಿಕೊಡಬೇಕು. ನಮ್ಮ ಚಿಕ್ಕಬಳ್ಳಾಪುರ ಜಿಲ್ಲೆಗೆ ಕುಡಿಯುವ ನೀರಿಗಾಗಿ ಸುಮಾರು 6 ಕೋಟಿ ರೂಪಾಯಿಗಳ ಬೇಡಿಕೆಯನ್ನಿಟ್ಟಿದ್ದಾರೆ. ನಮ್ಮ ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಬಹಳ ಭೀಕರವಾಗಿದೆ. ನನ್ನ ಕ್ಷೇತ್ರಕ್ಕೆ ಸುಮಾರು 3 ಕೋಟಿ ರೂಪಾಯಿಗಳ

ಪ್ರಸ್ತಾವನೆಯನ್ನು ನಾವು ಕೊಟ್ಟಿದ್ದೇವೆ. ದಯವಿಟ್ಟು ಅದರ ಬಗ್ಗೆ ಹೆಚ್ಚು ಗಮನ ಹರಿಸಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಮತ್ತೊಂದು ವಿಚಾರವೆಂದರೆ, ನಮ್ಮನ್ನೆಲ್ಲ ವಿದೇಶ ಪ್ರವಾಸಕ್ಕೆ ಕಳುಹಿಸಿದ್ದಕ್ಕಾಗಿ ನಮ್ಮ ಸ್ನೇಹಿತರೆಲ್ಲ ಸರ್ಕಾರಕ್ಕೆ ಅಭಿನಂದನೆ ಸಲ್ಲಿಸಿದರು. ಆದರೆ ನನ್ನ ಅಭಿಪ್ರಾಯವೇ ಬೇರೆಯಾಗಿದೆ. ದಯವಿಟ್ಟು ಇನ್ನು ಮೇಲೆ ನಮ್ಮನ್ನು ವಿದೇಶಕ್ಕೆ ಕಳುಹಿಸಬೇಡಿ. ಏಕೆಂದರೆ ನಾವು ಅಲ್ಲಿಗೆ ಹೋಗಿ ನೋಡಿ ಬಂದ ಮೇಲೆ ನಮ್ಮಲ್ಲಿಯೂ ಅಂಥ ಅಭಿವೃದ್ಧಿಯನ್ನು ಮಾಡಬೇಕು ಎನ್ನುವ ನಮ್ಮ ಆಸೆಯನ್ನು airport ನಲ್ಲೇ ಬಿಟ್ಟುಬರಬೇಕಾಗುತ್ತದೆ. ಏಕೆಂದರೆ, ನಮ್ಮಲ್ಲಿರತಕ್ಕಂಥ ಅಧಿಕಾರಿಗಳಿಗೆ ಬದ್ಧತೆಯಿಲ್ಲ. ಸಣ್ಣ ಮಟ್ಟದಲ್ಲಿರುವಂಥ ಅಧಿಕಾರಿಗಳಲ್ಲ; ದೊಡ್ಡದೊಡ್ಡ I.A.S. ಅಧಿಕಾರಿಗಳೇ ಇವತ್ತು, ನಾವು ದೂರದೃಷ್ಟಿಯನ್ನಿಟ್ಟುಕೊಂಡು ಮಾಡತಕ್ಕಂಥ ಕೆಲಸಗಳಿಗೆ ಯಾವುದೇ ರೀತಿಯ ಸಹಕಾರ ಕೊಡದ ಅಧಿಕಾರಿಗಳಿದ್ದಾರೆ. ಇವತ್ತು ಏನೊಂದು ಗ್ರಾಮೀಣಾಭಿವೃದ್ಧಿಯಾಗಬೇಕು, ಮತ್ತೊಂದು ಆಗಬೇಕು ಎಂದು ತಾವು ಹೇಳುತ್ತಿದ್ದೀರಿ. ಅದಕ್ಕೆ ನಮ್ಮ ಸಲಹೆಗಳನ್ನು ತೆಗೆದುಕೊಳ್ಳುವುದರ ಜೊತೆಗೆ, ಅಧಿಕಾರಿಗಳನ್ನು ಸರಿದಾರಿಗೆ ತರತಕ್ಕಂಥ ಕೆಲಸವಾಗಬೇಕು. ಉದಾಹರಣೆಗೆ ಹೇಳುತ್ತೇನೆ, ಇವತ್ತು ರೈತರಿಗಾಗಿ ನಮ್ಮ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ನಾವು milk powder unit ತೆರೆಯುವುದಕ್ಕೆ ಇಂಥ ಸ್ಥಳ ಒದಗಿಸಿ ಎಂದು ಸರ್ಕಾರಿ ಜಾಗದ ಬಗ್ಗೆ ಜಿಲ್ಲಾಧಿಕಾರಿಗಳನ್ನು ನಮ್ಮೆಲ್ಲ ಮುಖಂಡರು ಭೇಟಿ ಮಾಡಿದ್ದರು. ಆ ಜಾಗವನ್ನು ಕೊಡಿ ಎಂದು ಮಂತ್ರಿಯವರೂ ಸಹ ಹೇಳಿದ್ದರು. ಆದರೆ, ಯಾವುದೋ ಒಂದು ಕ್ಷುಲ್ಲಕ ಕಾರಣ ಇಟ್ಟುಕೊಂಡು, ಯಾರೋ ಒಬ್ಬರು ಕೋರ್ಟ್‌ಗೆ ಹೋಗಿದ್ದಾರೆಂದು ಹೇಳಿದರು. ಆದರೆ, ಆ ಕೇಸ್ ಕೋರ್ಟ್‌ನಲ್ಲಿ ವಜಾ ಆಗಿದೆ. ಅಲ್ಲಿಯ Local Court ನಲ್ಲಿ stay ಏನೂ ಆಗಿಲ್ಲ. ಆ ಜಾಗವನ್ನು ಮಂಜೂರು ಮಾಡದೆಯೇ, ರಾಜಕೀಯ ಒತ್ತಡಕ್ಕೆ ಮಣಿದು, ನಮಗೆ ಸಹಕಾರ ಕೊಡುತ್ತಿಲ್ಲ. ಒಂದು Dairyಗೆ 5–6 ಕೋಟಿ ರೂ.ಗಳ ಕೆಲಸವಾಗುವಂಥದ್ದಕ್ಕೆ ಚಿಕ್ಕಬಳ್ಳಾಪುರ ಜಿಲ್ಲಾಧಿಕಾರಿಯವರು ನಮಗೆ ಅವಕಾಶ ಮಾಡಿಕೊಡುತ್ತಿಲ್ಲ. ನಾನು ಎಲ್ಲಾ ಕಡೆ ರಸ್ತೆಗಳನ್ನು ನೋಡಿಕೊಂಡು ಬಂದೆ.

ನನ್ನ ಕ್ಷೇತ್ರದಲ್ಲಿ 2005 ರಿಂದ ರಸ್ತೆಗಳ ಅಗಲೀಕರಣ ಮಾಡಿಕೊಂಡು ಬರುತ್ತಿದ್ದೀರಿ. ರಸ್ತೆಯ ಪಕ್ಕದಲ್ಲಿ ಸರ್ಕಾರಿ ಜಾಗದಲ್ಲಿ ಡಬ್ಬಾ ಅಂಗಡಿ ಇದೆ. ನಮ್ಮ ವ್ಯವಸ್ಥೆ ಯಾವ ರೀತಿ ಇದೆ ಎನ್ನುವುದನ್ನು ಹೇಳುತ್ತೇನೆ. ಅದಕ್ಕೆ ಇವತ್ತು ನಮ್ಮ ನ್ಯಾಯಾಲಯದಲ್ಲಿ stay ಕೊಡುತ್ತಾರೆ. Notice ಕೊಡಬೇಕೆಂದು ಕಾನೂನು ಹೇಳುತ್ತದೆ, notice ಕೊಟ್ಟರೆ stay ಕೊಡುತ್ತಾರೆ, Court ನಲ್ಲಿ ವಜಾಗೊಳಿಸದ್ದನ್ನು ಸರ್ಕಾರ ಅದನ್ನು ತೆರವುಗೊಳಿಸಬೇಕೆಂದು ಡಿ.ಸಿ.ಗೆ ಹೇಳಿದರೆ, ಅವರಿಗೆ ಬೇರೆ ಜಾಗ ಕೊಡಿ ಎಂದು ಒಬ್ಬರು ಡಿ.ಸಿ. ಮಾತನಾಡುತ್ತಾರೆ. ರಾಜಕೀಯ ವ್ಯಕ್ತಿಗಳು ಮಾತನಾಡಬೇಕಾದ ಮಾತನ್ನು ಒಬ್ಬರು ಚಿಕ್ಕಬಳ್ಳಾಪುರ ಜಿಲ್ಲೆಯ ಜಿಲ್ಲಾಧಿಕಾರಿ ಮಾತನಾಡುತ್ತಾರೆಂದರೆ ಹೇಗೆ? ಅವರಿಗೆ 15 ದಿವಸ ಟೈಂ ಕೊಡಿ ಎಂದು ಹೇಳಿ ಮತ್ತೆ ಅವರನ್ನು ಕೋರ್ಟ್‌ಗೆ ಕಳುಹಿಸುತ್ತಾರೆ. ಈ ರೀತಿಯಾದ ಅಧಿಕಾರಿ ಇದ್ದರೆ ನಾವು ಅಭಿವೃದ್ಧಿ ಕೆಲಸ ಮಾಡುವುದಕ್ಕೆ ಸಾಧ್ಯವಿದೆಯೇ? ಅದಕ್ಕೆ ನಾವು ಅಲ್ಲಿಗೆ ಹೋಗುವುದೂ ಬೇಡ, ಈ ಒಂದು ವ್ಯವಸ್ಥೆ, ಇಂಥ ಅಧಿಕಾರಿ ವರ್ಗ, ನಮಗೆ ಸಹಕಾರ ಕೊಡದಿರುವಂಥ ಅಧಿಕಾರಿಶಾಹಿ ಇದೆ, ಇಂಥ ಪರಿಸ್ಥಿತಿ ನಿರ್ಮಾಣವಾಗುವುದು ಬೇಡ. ನಮಗೆ ಬಹಳ ಬೇಸರವಾಗಿದೆ. ಒಳ್ಳೆಯ ಕೆಲಸಕ್ಕೆ ಯಾವುದೇ ಸಹಕಾರವನ್ನು ನೀಡುತ್ತಿಲ್ಲ. ಸಾಮಾನ್ಯವಾಗಿ ನಮ್ಮಂಥವರು ಅಡ್ಡಿಪಡಿಸುತ್ತಾರೆ, ಒಳ್ಳೆಯ ಕೆಲಸ ಮಾಡಬೇಕೆಂದು ನಾವು ಮುಂದೆ ಹೋದಾಗ ಅಧಿಕಾರಿಗಳು ಸಹಕಾರ ಕೊಡದಿದ್ದರೆ ಅದರಲ್ಲಿಯೂ ಜಿಲ್ಲಾಧಿಕಾರಿಗಳಂಥವರೇ ಇಂಥದ್ದಕ್ಕೆ ಅಡ್ಡ ಬಂದರೆ ನಾವು ಯಾರಿಗೆ ಹೇಳಬೇಕು? ದಯವಿಟ್ಟು, ಇಂಥ ಅಧಿಕಾರಿಗಳನ್ನು ಅಂಥ ಹುದ್ದೆಗಳಿಗೆ ನೇಮಕ ಮಾಡಬೇಡಿ. ಎಲ್ಲಾದರೂ ಬೇರೆ ಕಡೆಗೆ ಕೇವಲ file ಗೆ ಸಹಿ ಹಾಕುವ ಜಾಗ ಕೊಟ್ಟುಬಿಡಿ. ದಯವಿಟ್ಟು, ಕೆಲಸ ಮಾಡಬೇಕಾಗಿರುವಂಥ ಕಡೆಗೆ ಇಂಥವರನ್ನು ನೇಮಿಸಬೇಡಿ. ಇಂಥ ಕೆಲವು ಸಲಹೆಗಳನ್ನು ಕೊಡಲಿಕ್ಕೆ ತಾವು ಅವಕಾಶ ಮಾಡಿಕೊಟ್ಟಿದ್ದೀರಿ. ಮುಖ್ಯವಾಗಿ, ಮರಳು ವಿಚಾರದಲ್ಲಿ ನಾವಂತೂ ದೊಡ್ಡ ಹೋರಾಟ ಮಾಡಿಯೇ ಮಾಡುತ್ತೇವೆ. ದಯವಿಟ್ಟು, ತಾವು ಬಹಳ ಗಂಭೀರವಾಗಿ ಪರಿಗಣಿಸಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು):** ಶ್ರೀ ಸಂಪಂಗಿಯವರು ಮತ್ತು ಶ್ರೀ ರೆಡ್ಡಿಯವರು, ಶ್ರೀ ಸುಧಾಕರ್‌ರವರು ಹೇಳಿದ ಹಾಗೆ, Lorry Owners' Association ನವರ ಜೊಎ ಸಾರಿಗೆ ಸಚಿವರು ಮಾತನಾಡಿದ ಮೇಲೆ ನೀವೊಂದು ತೀರ್ಮಾನ ಮಾಡಿದ್ದೀರಿ. ಹಿಂದೆ ಇದ್ದಂಥ restrictions ಎಲ್ಲವನ್ನೂ ತೆಗೆದು ಹಾಕುತ್ತೇವೆನ್ನುವ ಮಾತನ್ನು ಅವರಿಗೆ ಕೊಟ್ಟಿದ್ದೀರಿ. ಆ ಮಾತು ಕೊಟ್ಟ ಮೇಲೆ ಚಿಕ್ಕಬಳ್ಳಾಪುರ, ಕೋಲಾರ ಜಿಲ್ಲೆಗಳಲ್ಲಿ ಮರಳು ತೆಗೆಯುವುದನ್ನು ನಿಲ್ಲಿಸಿಬಿಟ್ಟರು. ಅಲ್ಲಿರುವ ಡಿ.ಸಿ., ತಹಶೀಲ್ದಾರ್ ಮತ್ತು ಬೇರೆ ಬೇರೆ ಅಧಿಕಾರಿಗಳೆಲ್ಲ ತೀರ್ಮಾನ ಮಾಡಿದ್ದಾರೆ. ಚಿಕ್ಕಬಳ್ಳಾಪುರ ಮತ್ತು ಕೋಲಾರಕ್ಕೆ ಯಾವುದೇ ನದಿ ನೀರಿನ ಸೌಕರ್ಯವಿಲ್ಲ. ಅಲ್ಲಿ ನಿಮಗೆಲ್ಲ ಗೊತ್ತಿರುವ ಹಾಗೆ, ಅಂತರ್ಜಲ ಬಹಳ ಕೆಳಗೆ ಹೋಗಿದೆ, 1000, 1500 ಅಡಿ ಕೊರೆಯಬೇಕಾಗುತ್ತದೆ, ಮತ್ತೆ ಮರಳನ್ನು ತೆಗೆಯುವುದಕ್ಕೆ ಬಿಟ್ಟರೆ, ಇನ್ನೊಂದಷ್ಟು ತೊಂದರೆಯಾಗುತ್ತದೆ. ಅದಕ್ಕೋಸ್ಕರವಾಗಿ ನೀವು Lorry Associationನವರಿಗೆ ಮಾತು ಕೊಟ್ಟಿರುವುದರಿಂದ ಅವರು ಪಿನಾಕಿನಿ, ಕುಮುದ್ವತಿ ನದಿಗಳಿಂದ ಮರಳು ತೆಗೆಯುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಮೊದಲು ಹೇಗೆ ನಿಲ್ಲಿಸಲಾಗಿತ್ತೋ ಅದೇ ತರಹ ಅಲ್ಲಿ ಮರಳು ತೆಗೆಯದ ರೀತಿಯಲ್ಲಿ ನೋಡಿಕೊಳ್ಳಬೇಕು. ಸರ್ಕಾರ ಅದಕ್ಕೆ ಸ್ಪಷ್ಟವಾಗಿ ಹಿಂದೆ ಏನಿತ್ತು ಅದೇ ರೀತಿ ಮುಂದುವರಿಸಬೇಕೆಂಬ ಒತ್ತಾಯವನ್ನು ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆಗಳ ಎಲ್ಲಾ ಶಾಸಕರೂ ಮಾಡುತ್ತಿದ್ದಾರೆ. ನೀವು ಅಲ್ಲಿ ಮತ್ತೆ ಮರಳನ್ನು ತೆಗೆಯುವುದಕ್ಕೆ ಅವಕಾಶ ಕೊಡಬಾರದು. ಆ ರೀತಿ ನಿರ್ದೇಶನವನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಕೊಟ್ಟು, ಹಿಂದೆ ಇದ್ದ ರೀತಿಯಲ್ಲಿ ಮರಳು ತೆಗೆಯಬಾರದೆಂದು ಹೇಳಬೇಕೆಂಬುದು ಅವರ ಒತ್ತಾಯ.

**ಶ್ರೀ ಆರ್. ಅಶೋಕ್ (ಸಾರಿಗೆ ಸಚಿವರು):** ಮರಳು ಸಾಗಾಣಿಕೆದಾರರಿಗೆ ತೊಂದರೆಯಾಗುತ್ತಿದೆ ಎಂದು ರಾಜ್ಯಾದ್ಯಂತ ಲಾರಿ ಮುಷ್ಕರ ಮಾಡಿರುವುದು ತಮಗೆಲ್ಲ ಗೊತ್ತಿದೆ. ಮರಳು ಸಾಗಾಣಿಕೆ ಮಾಡಬೇಕಾದರೆ ಬಹಳಷ್ಟು ತೊಂದರೆಯಾಗುತ್ತದೆ ಮತ್ತು ಮರಳು ಬೆಂಗಳೂರಿಗೆ ಅವಶ್ಯಕತೆ ಇದೆ ಮತ್ತು

ಬೇರೆ ಬೇರೆ ಜಿಲ್ಲಾ ಕೇಂದ್ರಗಳಿಗೆ ಮರಳು ಅವಶ್ಯಕತೆ ಇದೆ, ಅದು ಬಂದಿಲ್ಲವೆಂದರೆ development ಕಾರ್ಯಕ್ಕೆ ತೊಂದರೆಯಾಗುತ್ತದೆನ್ನುವ ಬೇಡಿಕೆ ಇಟ್ಟುಕೊಂಡು strike ಮಾಡುವಂಥ ಸಂದರ್ಭ ಬಂತು. ಆ ಸಂದರ್ಭದಲ್ಲಿ ನಾನು ಸಭೆಯನ್ನು ಕರೆದಾಗ, ಇವೆಲ್ಲ ನೋಡಿದ ಮೇಲೆ ನನಗನ್ನಿಸಿದ್ದು ಏನೆಂದರೆ, ನಮ್ಮ ಪಕ್ಕದ ರಾಜ್ಯವಾದ ತಮಿಳುನಾಡಿನಲ್ಲಿ ಮರಳು ನೀತಿಯೊಂದನ್ನು ಮಾಡಿದ್ದಾರೆ. ಅಲ್ಲಿಯ ಸರ್ಕಾರಕ್ಕೆ ಇದರಿಂದ ಪ್ರತಿ ವರ್ಷ ಸುಮಾರು 200 ಕೋಟಿ ರೂಪಾಯಿಗಳಷ್ಟು ಆದಾಯ ಬರುತ್ತದೆ. ಆದರೆ, ನಮ್ಮ ರಾಜ್ಯಕ್ಕೆ ಮರಳಿನಿಂದ ಕೇವಲ 10 ಕೋಟಿ ರೂಪಾಯಿಗಳಷ್ಟು ಮಾತ್ರ ಆದಾಯ ಬರುತ್ತದೆ. ಅಂದರೆ, ಸುಮಾರು 190 ಕೋಟಿ ರೂಪಾಯಿಗಳಷ್ಟು ನಮಗೆ ಗೊತ್ತಿದೆಯೇ ಎಲ್ಲೆಲ್ಲೋ ಹೋಗುತ್ತಿದೆ. ಅಂದರೆ, ಮರಳು ತರಬೇಕಾದರೆ ಯಾವ್ಯಾವ ಇಲಾಖೆಯವರು ಏನೇನು ಮಾಡುತ್ತಾರೆ ಎನ್ನುವುದು ಎಲ್ಲರಿಗೂ ಗೊತ್ತಿದೆ. ನಾನೇನೂ ಹೇಳಬೇಕಾಗಿಲ್ಲ. ಇಲಾಖೆ ಇರಬಹುದು, ಅಲ್ಲಿ ಸಂಘ ಸಂಸ್ಥೆಗಳಿರಬಹುದು, ಆ ದೇವಸ್ಥಾನಕ್ಕೆ collection ಇರಬಹುದು ಅಥವಾ ಊರಿನ ಅಭಿವೃದ್ಧಿ, ಈ ತರಹ ಎಲ್ಲ ಮಾಡಿ ಸರ್ಕಾರಕ್ಕೆ ಬರಬೇಕಾದಂಥ ಆದಾಯದಲ್ಲಿ ಕುಂಠಿತವಾಗಿರುವುದು ನನ್ನ ಗಮನಕ್ಕೆ ಬಂದಿದೆ. ಅದು ಗೊತ್ತಾದ ತಕ್ಷಣವೇ ಗಣಿ ಇಲಾಖೆ, ಸಾರಿಗೆ ಇಲಾಖೆ ಮತ್ತು ಬೇರೆ ಅಧಿಕಾರಿಗಳನ್ನು ಸೇರಿಸಿ ಒಂದು ತಂಡ ಮಾಡಿ ಕಳುಹಿಸಿದ್ದೆ. ಅವರು survey ಮಾಡಿಕೊಂಡು ತಮಿಳುನಾಡಿನ ಅಧಿಕಾರಿಗಳ ಜೊತೆ ಮತ್ತು ಅಲ್ಲಿಯ Principal Secretary ಜೊತೆ ಮಾತನಾಡಿದ್ದಾರೆ. ಅವರು ಅಲ್ಲಿ ಯಾವ ರೀತಿ ಮರಳು ನೀತಿಯನ್ನು ಮಾಡಿದ್ದಾರೆಂದರೆ, DD ಕಟ್ಟಬೇಕು. ಮರಳು ತೆಗೆಯುವಂಥದ್ದಕ್ಕೆ ಒಂದು ಕ್ರಮ ಮಾಡಿದ್ದಾರೆ. Check post ಗಳನ್ನು ಹಾಕಿದ್ದಾರೆ. ಎಲ್ಲಿಂದ ಆಚೆಗೆ ಮರಳು ಬರುತ್ತದೋ ಅಲ್ಲಿಂದ ಆ check postಗೆ ಬಂದ ತಕ್ಷಣ ಅಲ್ಲಿ DD ಮೂಲಕ ಹಣ ಕಟ್ಟಬೇಕು. ಯಾವ spotಗೆ ಮರಳು ಹೋಗಬೇಕೋ ಅದನ್ನು ಅಲ್ಲಿಯೇ ಇಂಥ spotಗೆ ಹೋಗಬೇಕೆಂದು ಬರೆದು ಕೊಡುತ್ತಾರೆ. ಅದು ಬಿಟ್ಟು ಬೇರೆ ಕಡೆಗೆ ಹೋಗುವ ಹಾಗಿಲ್ಲ. ಈ ತರಹ ಕಟ್ಟುನಿಟ್ಟು ಮಾಡಿರುವುದರಿಂದ ಅಲ್ಲಿ ಒಂದು ಕಡೆ ಸರ್ಕಾರಕ್ಕೆ ಆದಾಯ ಬರುತ್ತಿದೆ. ಮಾನ್ಯ ಸುಧಾಕರ್‌ರವರು ಹೇಳಿದ

ಹಾಗೆ ಹಳ್ಳಿಗಾಡಿನ ಜಿಲ್ಲಾಪಂಚಾಯತ್ ರಸ್ತೆಗಳೆಲ್ಲ 20 mm. thickness ಮಾತ್ರ ಇದ್ದು ಅಲ್ಲಿ ಡಾಂಬರು 12 mm ಸಹ ಹಾಕುವುದಿಲ್ಲ ಅದು ನಮಗೆ ಗೊತ್ತಿದೆ. ಅಂಥ ರಸ್ತೆಗಳಲ್ಲಿ ಇಂಥ 15–20 ಟನ್ ಭಾರದ ಲಾರಿಗಳು ಹೋದರೆ ಆ ಜಿಲ್ಲಾ ಪಂಚಾಯತ್ ರಸ್ತೆಗಳು ಸಾಮಾನ್ಯವಾಗಿ ಇದರಿಂದ ಉಳಿಯುವುದಕ್ಕೆ ಸಾಧ್ಯವೇ ಇಲ್ಲ.

**(ಈ ಹಂತದಲ್ಲಿ ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು)**

ಅದರಿಂದ ಇಲ್ಲಿ ಬಂದಂಥ ಹಣ ಸರಿಯಾಗಿ ಉಪಯೋಗವಾಗಬೇಕು ಮತ್ತು ಮರಳನ್ನು ಸಹ ಕೆಲವು ಕಡೆ PWD bridges ಇರುತ್ತದೆ ಅಂಥ ಕಡೆಯೇ ತೆಗೆಯುತ್ತಾರೆ. ಅಂದರೆ bridges ಇರುವ ಕಡೆ ಅದಕ್ಕೆ ಅಪಾಯ ಬರುವಂಥ ಸಾಧ್ಯತೆ ಇರುತ್ತದೆ. ಮಾನ್ಯ ಶಿವಶಂಕರ್‌ರವರು ಹೇಳಿದ ಹಾಗೆ ಕೋಲಾರ, ಚಿಕ್ಕಬಳ್ಳಾಪುರ ಭಾಗದಲ್ಲಿ, especially ಗೌರಿಬಿದನೂರು ಭಾಗದಲ್ಲಿ ನೀರಿನ ಮಟ್ಟ ಪ್ರತಿದಿನ ಕಡಿಮೆಯಾಗುತ್ತಿದೆ ಅಂದರೆ 1000–1200 ಅಡಿಗೆ ಕುಸಿಯುತ್ತಿದೆ. ಒಂದು ಕಡೆ ಸರ್ಕಾರಕ್ಕೆ ಅನ್ಯಾಯವಾಗುತ್ತಿದೆ, ಇನ್ನೊಂದು ಕಡೆ ಪರಿಸರಕ್ಕೆ ಹಾನಿಯಾಗುತ್ತಿದೆ ಇವೆರಡನ್ನೂ ದೃಷ್ಟಿಯಲ್ಲಿಟ್ಟುಕೊಂಡು ನಮ್ಮ ಸರ್ಕಾರ ಮರಳು ನೀತಿಯನ್ನು ತಮಿಳುನಾಡಿನಲ್ಲಿ ಏನಿದೆ ಅದೇ ರೀತಿಯ ಮರಳು ನೀತಿಯನ್ನು ತರಬೇಕೆಂದು ತೀರ್ಮಾನ ಮಾಡಿದೆ. ಅದನ್ನು ತರುತ್ತೇವೆ. ಮುಂದಿನ cabinetಗೆ ಅದನ್ನು ಮಂಡಿಸಬೇಕೆಂದು ನಮ್ಮ ಅಧಿಕಾರಿಗಳಿಗೆ ಸೂಚಿಸಿದ್ದೇನೆ. ಮುಂದಿನ cabinet ನಲ್ಲಿ ಇದಕ್ಕೊಂದು ನೀತಿಯನ್ನು ರೂಪಿಸಿದರೆ ಒಂದು ರೀತಿ ನಾವು ಪರಿಸರವನ್ನೂ ಕಾಪಾಡಿದ ಹಾಗೆ ಆಗುತ್ತದೆ ಮತ್ತು ಸರ್ಕಾರಕ್ಕೆ ಆದಾಯ ಸಹ ಬರುವುದಕ್ಕೆ ಸಾಧ್ಯವಾಗುತ್ತದೆ. ಆ ದೃಷ್ಟಿಯಿಂದ ಮರಳನ್ನು overload ಮಾಡಿ ಏನು ರಸ್ತೆಗಳನ್ನು ಹಾಳು ಮಾಡುತ್ತಿದ್ದಾರೆ...

**ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು)**: That is not the problem. The problem is, ಮರಳು ನೀತಿ ತಂದು ಸರ್ಕಾರಕ್ಕೆ ಆದಾಯ ತರುವುದಕ್ಕೆ ಏನು ಮಾಡಬೇಕೋ ಅದನ್ನು ಮಾಡಿ. ಮಾನ್ಯ ಸದಸ್ಯರು ಹೇಳಿದ

ಸಮಸ್ಯೆ ಏನೆಂದರೆ, ಅವರ ಭಾಗದಲ್ಲಿ ಮರಳು ತೆಗೆಯುವುದನ್ನು 2007ರಿಂದ ನಿಲ್ಲಿಸಿದ್ದಾರೆ. ಆದರೆ, ಸರ್ಕಾರದಿಂದ ನೀವು ಯಾವಾಗ ಇದರ ತೀರ್ಮಾನ ಮಾಡಿದರೋ, ಲಾರಿ ಮಾಲೀಕರ ಸಂಧಾನ ನಿಮ್ಮ ಜೊತೆಯಲ್ಲಿ ಏನಾಯಿತೋ, ಸಂಧಾನವಾಗಿ ತಮಿಳುನಾಡಿನಲ್ಲಿ ಏನು ಮರಳು ನೀತಿ ಮಾಡಿದ್ದಾರೆ ಅದರ ಹಾಗೆ ಇಲ್ಲೂ ಸಹ ಮರಳು ನೀತಿ ಮಾಡುತ್ತೇವೆಂದು ಘೋಷಣೆ ಮಾಡಿದ ಮೇಲೆ, ಅವರೇನು demands ಇಟ್ಟಿದ್ದರು ಆ demands ನ್ನೆಲ್ಲ ಚರ್ಚೆ ಮಾಡಿದ ಮೇಲೆ ಈಗಾಗಲೇ ಅಲ್ಲಿ ಮತ್ತೆ ಮರಳು ತೆಗೆಯುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಅದನ್ನು ಮಾಡಕೂಡದು ಎನ್ನುವುದು ಅವರ ಒತ್ತಾಯವಾಗಿದೆ.

**ಶ್ರೀ ಆರ್. ಅಶೋಕ್:** ಸಿದ್ದರಾಮಣ್ಣನವರೆ, ಹಿಂದೆ ಯಾವ್ಯಾವ ಏರಿಯಾಗಳಲ್ಲಿ ತೆಗೆಯಬೇಕೆಂದು ಮಾಡಿದ್ದರು...

**ಶ್ರೀ ಸಿದ್ದರಾಮಯ್ಯ:** ಹಿಂದೆ ಅಲ್ಲಿ ತೆಗೆಯುತ್ತಿರಲಿಲ್ಲ, ಅದನ್ನು ಹಾಗೆಯೇ ಮುಂದುವರಿಸಬೇಕು. ಅಲ್ಲಿ ಈಗ ಪುನಃ ಮರಳು ತೆಗೆಯುವುದನ್ನು ನಿಲ್ಲಿಸಬೇಕು.

**ಶ್ರೀ ಎನ್. ಸಂಪಂಗಿ:** ಹಿಂದೆ ಅಲ್ಲಿ ಮರಳು ತೆಗೆಯುವುದಕ್ಕೆ ನಿಷೇಧ ಇತ್ತು. ಅದನ್ನೇ ಈಗಲೂ ಮುಂದುವರಿಸಬೇಕು.

**ಶ್ರೀ ಆರ್. ಅಶೋಕ್:** ಮೊದಲು ಯಾವ್ಯಾವ ಏರಿಯಾದಲ್ಲಿ ಮರಳನ್ನು ತೆಗೆಯಬೇಕೆಂಬುದರ ಬಗ್ಗೆ ಒಂದು ಸ್ಪಷ್ಟವಾದ ನಿರ್ದೇಶನವಿತ್ತು. ಅದರ ಆಧಾರದ ಮೇಲೆಯೇ ಮರಳು ತೆಗೆಯುತ್ತಿದ್ದರು. ಆ ಸಂದರ್ಭದಲ್ಲಿ ಗೌರಿಬಿದನೂರು ಇಲ್ಲೆಲ್ಲಾ ಮರಳು ತೆಗೆಯುತ್ತಿರಲಿಲ್ಲ. ಈಗ ಅಲ್ಲಿ ಮರಳು ತೆಗೆಯುತ್ತಿದ್ದಾರೆಂಬುದು ನನ್ನ ಗಮನಕ್ಕೂ ಬಂದಿದೆ. ಆದ್ದರಿಂದ, Grey area ಎಲ್ಲಿರುತ್ತದೆಯೋ ಅಲ್ಲಿ ಅಂದರೆ ಇಂಥಿಂಥ ಜಿಲ್ಲೆ, ತಾಲ್ಲೂಕುಗಳಲ್ಲಿ ಮರಳನ್ನು ಯಾರೂ ತೆಗೆಯಬಾರದೆಂದು ಸರ್ಕಾರದ ಅಧಿಕಾರಿಗಳು ಆದೇಶ ಮಾಡಿದ್ದಾರೆ. ಅದರ ಮಾಹಿತಿ ಇದೆ. ಇಂಥ ಕಡೆ ಮರಳು ತೆಗೆಯಲೇಬಾರದೆಂಬುದು ನಮ್ಮ ಈ ಹೊಸ ನೀತಿಯಲ್ಲಿ ಸೇರಿದೆ. ಬೇರೆ ಕಡೆ ಮರಳನ್ನು ತೆಗೆಯುವುದಕ್ಕೆ ಹೊಸದಾಗಿ ಅನುಮತಿ ಕೊಡುತ್ತಿದ್ದೇವೆ, ಅಲ್ಲಿ ಅವರು ಯಾವ ಮಟ್ಟದಲ್ಲಿ

ಮರಳು ತೆಗೆಯಬೇಕೆನ್ನುವುದರ ಬಗ್ಗೆಯೂ ಸಮಗ್ರವಾದ ನೀತಿಯನ್ನು ಜಾರಿಗೆ ತರುತ್ತಿದ್ದು, ಅದರಿಂದ ಇದಕ್ಕೆಲ್ಲ ಒಳ್ಳೆಯ ಪರಿಹಾರ ಸಿಗುವುದಕ್ಕೆ ಸಾಧ್ಯವಾಗುತ್ತದೆ. ತಾವೇನು ಈ ಭಾಗದಲ್ಲೇನು ಆಗುತ್ತಿದೆ ಎನ್ನುವ ಬಗ್ಗೆ ಗಮನ ಸೆಳೆದಿದ್ದೀರಿ, ನಮ್ಮ ಅಧಿಕಾರಿಗಳಿಗೆ ಹೇಳಿ over-load ಹಾಕುವಂಥದ್ದು, ಮರಳು ತೆಗೆಯುವಂಥದ್ದರ ಬಗ್ಗೆ ನಾನು ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

(ಗೊಂದಲ)

**ಡಾ: ಎಂ.ಸಿ. ನಾಣಯ್ಯ:** Over-load ಹಾಕುವ ಪ್ರಶ್ನೆಯಲ್ಲ. ಅವರು ಹೊಸದಾಗಿ ನೀತಿ ಮಾಡುವವರೆಗೆ ನಮ್ಮ ಎರಡು ಜಿಲ್ಲೆಗಳಲ್ಲಿ ತಕ್ಷಣ ಮರಳು ತೆಗೆಯುವುದನ್ನು ನಿಲ್ಲಿಸಬೇಕು.

**ಶ್ರೀ ಎನ್. ಸಂಪಂಗಿ:** ನಮ್ಮ ಜಿಲ್ಲೆಯಲ್ಲಿ ಮರಳು ತೆಗೆಯುವುದನ್ನು ನಿಲ್ಲಿಸಬೇಕಷ್ಟೆ.

**ಒಬ್ಬ ಮಾನ್ಯ ಸದಸ್ಯರು:** ನನ್ನ ಕ್ಷೇತ್ರದಲ್ಲಿಯೂ ಇದೇ ರೀತಿಯ ಪ್ರಾಬ್ಲಂ ಇದೆ. ದಯಮಾಡಿ, ಹೊಸ ನೀತಿ ರೂಪಿಸುವವರೆಗೆ ಮರಳು ತೆಗೆಯುವುದನ್ನು ನಿಲ್ಲಿಸುವುದಕ್ಕೆ ಹೇಳಿ. Mines and Geology Departmentನ ಪ್ರಕಾರ ನಮ್ಮ ಭಾಗವೆಲ್ಲ dark area ಆಗಿದೆ.

**ಶ್ರೀ ಎನ್. ಸಂಪಂಗಿ:** ಕಳೆದ 10 ದಿವಸಗಳಿಂದ ಕೊಳ್ಳೆ ಹೊಡೆಯುತ್ತಿದ್ದಾರೆ. ಪ್ರತಿ ದಿನ ಹಗಲು ರಾತ್ರಿ ಮರಳು ತೆಗೆಯುತ್ತಿದ್ದಾರೆ.

(ಗೊಂದಲ)

**ಶ್ರೀ ಎನ್.ಹೆಚ್. ಶಿವಶಂಕರರೆಡ್ಡಿ:** ನದಿ ಪಾತ್ರದಲ್ಲಿ ಮರಳು ತೆಗೆಯುತ್ತಿರುವುದರಿಂದ ಸಮಸ್ಯೆಯಾಗುತ್ತಿದೆ. ಇದನ್ನಾದರೂ control ಮಾಡಿ.

(ಗೊಂದಲ)

**ಡಾ: ಎಂ.ಸಿ. ಸುಧಾಕರ್:** ನಮ್ಮ ಎರಡು ಜಿಲ್ಲೆಗಳಲ್ಲಿ ದಯವಿಟ್ಟು ಮರಳು ತೆಗೆಯುವುದನ್ನು ಕೂಡಲೇ ನಿಲ್ಲಿಸಬೇಡಿ.

**ಶ್ರೀ ಸಿದ್ದರಾಮಯ್ಯ:** Clarification ಕೇಳಿ ಉತ್ತರ ಪಡೆಯುವುದಕ್ಕೂ ಸಮಯವಿಲ್ಲ. ನಮ್ಮ ರಾಷ್ಟ್ರೀಯ ಕಾಂಗ್ರೆಸ್ ಪಾರ್ಟಿಯ ಅಧ್ಯಕ್ಷರಾದ ಶ್ರೀಮತಿ ಸೋನಿಯಾ ಗಾಂಧಿಯವರು ಮೈಸೂರಿಗೆ ಬರುತ್ತಿದ್ದಾರೆ. ನಾನು Airportಗೆ ಹೋಗಬೇಕು. Rule 69 ಅಡಿಯಲ್ಲಿ ಬರಗಾಲದ ಬಗ್ಗೆ ಚರ್ಚೆ ಮಾಡುವುದಕ್ಕೆ ಇತ್ತು. ಆದ್ದರಿಂದ, ಬರಗಾಲದ ಬಗ್ಗೆ ಚರ್ಚೆ ಮಾಡಲಿಕ್ಕೆ ಅವಕಾಶ ಕೊಡಿ.

**6.30 P.M.**

**ಉಪಾಧ್ಯಕ್ಷರು:** ಇಬ್ಬರು ಸದಸ್ಯರು ಮಾತನಾಡುವರು ಇದ್ದಾರೆ.

**ಶ್ರೀ ಕೆ.ಬಿ. ಚಂದ್ರಶೇಖರ್ (ಕೆ.ಆರ್. ಪೇಟೆ):** ಕಳೆದ ಮೂರು ದಿನಗಳಿಂದ ಗ್ರಾಮೀಣಾಭಿವೃದ್ಧಿ ಮತ್ತು ಕೃಷಿ ಬಗ್ಗೆ ವಿಧಾನ ಸಭೆಯಲ್ಲಿ ನಮಗೋಸ್ಕರ ಐತಿಹಾಸಿಕ ಚರಿತ್ರೆಯನ್ನು ಬರೆಯತಕ್ಕಂಥ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದಾರೆ. ಗ್ರಾಮಾಂತರ ಪ್ರದೇಶದ ಜನರಿಗೆ ಒಳ್ಳೆಯದಾಗುತ್ತದೆನ್ನುವ ಭಾವನೆಯನ್ನು ಇಡೀ ಕರ್ನಾಟಕ ರಾಜ್ಯದ ಜನ ಬಹಳ ಆಸೆಯಿಂದ ಕಾಯುತ್ತಿದ್ದರು, ನಾನು ಇಂಧನ ಸಚಿವರ ಗಮನ ಸೆಳೆಯುವುದಕ್ಕೆ ಇಚ್ಛೆಪಡುತ್ತೇನೆ.

**ಉಪಾಧ್ಯಕ್ಷರು:** Please, clarification ಕೇಳಿ. ಭಾಷಣ ಮಾಡುವುದಕ್ಕೆ ಹೋಗಬೇಡಿ.

**ಶ್ರೀ ಕೆ.ಬಿ. ಚಂದ್ರಶೇಖರ್:** ರೈತರು ಬೋರ್‌ವೆಲ್ ಹಾಕಿಸಿಕೊಂಡು unauthorized ಆಗಿ ಪವರ್ ತೆಗೆದುಕೊಂಡು ಕಳೆದ ಹತ್ತಾರು ವರ್ಷಗಳಿಂದ ನೀರನ್ನು ಉಪಯೋಗಿಸುತ್ತಿದ್ದಾರೆ. ಅಂಥ ರೈತರನ್ನು ನಿಮ್ಮ ಇಲಾಖೆಯಲ್ಲಿ registration ಮಾಡಿಕೊಳ್ಳದಿರುವುದು ಇಡೀ ರಾಜ್ಯದಲ್ಲಿ ಬಹುತೇಕ ಹೀಗೆ ಆಗಿದೆ. T.C. ಸುಟ್ಟುಹೋದರೆ ಹೊಸ ಟಿ.ಸಿ. ಹಾಕಿಕೊಡಿ ಎಂದರೆ ನಂಬರ್ ಹಾಕದ ವೈರ್‌ಗಳನ್ನು ಕಿತ್ತು ಹಾಕಿ ಇಲಾಖೆಯವರು ಆ ರೈತರಿಗೆ ತೊಂದರೆ ಕೊಡುತ್ತಿರುವುದನ್ನು ತಮ್ಮ ಗಮನಕ್ಕೆ ತರುತ್ತೇನೆ. ಒಬ್ಬ ರೈತ ಒಂದು ಪಂಪ್‌ಸೆಟ್

ಹೊಂದಬೇಕಾದರೆ ಸುಮಾರು ಒಂದು, ಒಂದೂವರೆ ಲಕ್ಷ ರೂಪಾಯಿಗಳು ಬೇಕಾಗುತ್ತದೆ. ಅವನು ಈಗಾಗಲೇ 5–6 ವರ್ಷ unauthorises ಆಗಿ line ಎಳೆದುಕೊಂಡಿದ್ದಾನೆ. ಅವನನ್ನು ನಂಬರ್ ಮಾಡಿಕೊಳ್ಳುವುದು ಇಲಾಖೆಯವರ ಕರ್ತವ್ಯ. ಆದರೆ, ಇಲಾಖೆಯವರು ಅವನನ್ನು ನಂಬರ್ ಮಾಡಿಕೊಳ್ಳದೆ over-load ಆಗಿ ಟಿ.ಸಿ. ಸುಟ್ಟುಹೋದರೆ, ಆಗ ಇಲಾಖೆಯವರು, ನಂಬರ್ ಆಗಿಲ್ಲ, ನಾವು ಲೈನ್ ಕಿತ್ತುಹಾಕುತ್ತೇವೆಂದು ಹೇಳಿ ಮಾಡುತ್ತಿದ್ದಾರೆ. ಈ ಬಗ್ಗೆ ಲೈನ್ ಕಿತ್ತು ಹಾಕದ ಹಾಗೆ ಸಂಬಂಧಪಟ್ಟ ಇಲಾಖೆಗೆ ಮಾನ್ಯ ಮಂತ್ರಿಯವರು ಆದೇಶ ನೀಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು, ಮರಳು ಬಗ್ಗೆ ಬಹಳಷ್ಟು ಸದಸ್ಯರು ಮಾತನಾಡಿದ್ದಾರೆ. ನಾನು ಒಂದೆರಡು ಅಂಶವನ್ನು ನೀರಾವರಿ ಮಂತ್ರಿಯವರಿಗೆ ಹೇಳುತ್ತೇನೆ. ಬೇರೆ ಬೇರೆ ರಾಜ್ಯಗಳಲ್ಲಿ ಯಾವ್ಯಾವ ಡ್ಯಾಂಗಳಿವೆ. ಅಲ್ಲಿ ಹೂಳು ತೆಗೆಯುವ ಕಾರ್ಯಕ್ರಮವನ್ನು ಅವರು ಹಮ್ಮಿಕೊಂಡಿದ್ದಾರೆ. ಆ ಡ್ಯಾಂಗೆ ಮರಳು ಬಂದ ಸಂದರ್ಭದಲ್ಲಿ ಆ ಮರಳನ್ನು ಅಥವಾ ಮರಳನ್ನು ತೆಗೆಯುವುದಕ್ಕೆ ಬೇರೆ contractor ಗಳಿಗೆ ಹರಾಜು ಮಾಡುವ ಸನ್ನಿವೇಶವನ್ನು ಕೆಲವು ರಾಜ್ಯ ಮಾಡಿರುವ ಉದಾಹರಣೆ ಇದೆ. ಆದ್ದರಿಂದ, ಕರ್ನಾಟಕ ರಾಜ್ಯದ ಬಹುತೇಕ ಡ್ಯಾಂಗಳೇನಿವೆ, ಅಲ್ಲಿ ಹೂಳು ತುಂಬಿಕೊಂಡಿರುವುದು ಎಲ್ಲರಿಗೂ ಗೊತ್ತಿರುವ ವಿಚಾರ.

**ಉಪಾಧ್ಯಕ್ಷರು:** ಇದಕ್ಕೆ ಆಗಲೇ ಸ್ಪಷ್ಟೀಕರಣ ಕೊಟ್ಟಿದ್ದಾರೆ. ಪುನಃ ಹೇಳಿದ್ದನ್ನೇ ಏಕೆ ಹೇಳುತ್ತಿದ್ದೀರಿ? ಅವರು ಏನು ಮಾಡುತ್ತೇವೆಂದು ಸರ್ಕಾರದ ನಿಲುವನ್ನು ಹೇಳಿದ್ದಾರೆ. ಮತ್ತೆ ಮತ್ತೆ ಅದನ್ನೇ ಹೇಳಿದರೆ ಏನರ್ಥ?

**ಶ್ರೀ ಕೆ.ಬಿ. ಚಂದ್ರಶೇಖರ್:** ಡ್ಯಾಂನಲ್ಲಿ ಹೂಳು ತುಂಬಿಕೊಂಡಿದೆ, ಮರಳು ತೆಗೆದ ನಂತರ ಅದನ್ನು ಹರಾಜಾದರೂ ಮಾಡಬಹುದು. ಟೆಂಡರ್ ಕರೆದು ಯಾರಿಗಾದರೂ ಹರಾಜು ಮಾಡಿಕೊಟ್ಟರೆ ಅದರಿಂದ ಸಾರ್ವಜನಿಕರಿಗೂ ಮರಳು ಸಿಗುತ್ತದೆ ಮತ್ತು ಡ್ಯಾಂನಲ್ಲಿರುವ ಹೂಳನ್ನೂ ತೆಗೆದ ಹಾಗಾಗುತ್ತದೆ. ಅದರ ಕಡೆ ತಪ್ಪು ಗಮನಹರಿಸಬೇಕೆಂದು ಮನವಿ ಮಾಡುತ್ತೇವೆ. ಅಲ್ಲದೆ, ಇದರಿಂದ water sources ಅನ್ನು ಹೆಚ್ಚು ಮಾಡಿದ ಹಾಗಾಗುತ್ತದೆ. ಮಾನ್ಯ

ಸಚಿವರು ಇದರ ಕಡೆ ಗಮನ ಕೊಟ್ಟು ಒಂದೊಂದು ಡ್ಯಾಂಗಳಿಗೆ ಬೇಕಾದರೆ ನೀವು auction ಆದರೂ ಮಾಡಿ, ಅದರಿಂದ ಬರುವ ಮರಳನ್ನು action ಆದರೂ ಮಾಡಿ ಅಥವಾ ಸರ್ಕಾರ ಏನು ನೀತಿ ನಿಯಮ ಮಾಡುತ್ತದೆ ಅದನ್ನು ಮಾಡಿದರೆ ಸಾರ್ವಜನಿಕರಿಗೆ ಮರಳು ಸಿಗುತ್ತದೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

**ಶ್ರೀ ಎಂ.ಪಿ. ಕುಮಾರಸ್ವಾಮಿ (ಮೂಡಿಗೆರೆ):** ನಾನು ಈ ಹಿಂದೆಯೇ ಅನೇಕ ವಿಷಯಗಳನ್ನು ಪ್ರಸ್ತಾಪಿಸಿದ್ದೆ. ಸನ್ಮಾನ್ಯ ಮುಖ್ಯಮಂತ್ರಿಯವರು ಮಾತನಾಡುತ್ತಿರಬೇಕಾದರೆ ಬರ ಮತ್ತು ಅತಿವೃಷ್ಟಿ ಬಗ್ಗೆ ಮಾತನಾಡಿದರು. ಸರ್ಕಾರಕ್ಕೆ ಮನವಿ ಏನೆಂದರೆ, ಅತಿವೃಷ್ಟಿ ಪ್ರದೇಶದಲ್ಲಿ ಒಂದು ಸಂಪುಟ ಸಭೆ ಆಗಬೇಕು. ಅತಿವೃಷ್ಟಿ ಬಗ್ಗೆ ಎಲ್ಲಾ ಸರ್ಕಾರಗಳೂ ನಿರ್ಲಕ್ಷ್ಯ ಮಾಡಿವೆ ಎನ್ನುವ ಅಭಿಪ್ರಾಯ ಆ ಭಾಗದ ಜನತೆಗಿದೆ. ಚಿಕ್ಕಮಗಳೂರು, ಕೊಡಗು, ಕಾರವಾರ, ಮಡಿಕೇರಿಗೆ ಸಂಬಂಧಪಟ್ಟಂತೆ ಸಂಪುಟ ಸಭೆ ಆ ಭಾಗಗಳಲ್ಲಿ ಆಗಬೇಕು. ಹಾಗೆಯೇ, ಆನೆ ಹಾವಳಿಯಿಂದಾದ ನಷ್ಟಕ್ಕೆ ಹಳೆಯ ಕಾಲದ ಪರಿಹಾರವನ್ನು ಕೊಡುತ್ತಿದ್ದಾರೆ. ಇವತ್ತು ಮಲೆನಾಡಿನಲ್ಲಿ ಯಾರೂ ಸಹ ಬೆಳೆ ಬೆಳೆಯುವ ಪರಿಸ್ಥಿತಿಯಲ್ಲಿಲ್ಲ. ಕಾಡಿನಲ್ಲಿರುವ ಸಂಪನ್ಮೂಲಗಳ ಕೊರತೆಯಾಗಿ, ಮೇವು ಕೊರತೆಯಾಗಿ, ಆನೆಗಳು ಹಳ್ಳಿಗಳಿಗೆ ಬಂದು ನುಗ್ಗುತ್ತಿವೆ. ಮಾನ್ಯ ಉಪಾಧ್ಯಕ್ಷರೆ, ತಮ್ಮ ಊರಿನಲ್ಲಿ ಕೂಡ ಆನೆ ಹಾವಳಿಯಿದೆ. ಆದ್ದರಿಂದ, ಹಳೆಯ ಪರಿಹಾರ ನೀತಿಯನ್ನು ಬಿಟ್ಟು ಹೊಸ ಪರಿಹಾರ ನೀತಿಯನ್ನು ತರಬೇಕು ಮತ್ತು ಆನೆಗಳನ್ನು ಸ್ಥಳಾಂತರ ಮಾಡಲಿಕ್ಕೆ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ. ನೆಮ್ಮದಿ ಕೇಂದ್ರದ ಮೂಲಕ ಕಾರ್ಡ್ ಅನ್ನು ಬದಲಾವಣೆ ಮಾಡಬೇಕು. ಅದರಿಂದ ಜನರಿಗೆ ಬಹಳ ಅಶಾಂತಿ ಆಗಿದೆ. ನೆಮ್ಮದಿ ಕಾರ್ಡ್ ಅನ್ನು ತೆಗೆಯಬೇಕು. ಏಕೆಂದರೆ, computer, website ಅವಧಿಯಲ್ಲಿ ವೇಗ, ಉತ್ಪನ್ನ ಜಾಸ್ತಿಯಾಗುತ್ತದೆನ್ನುವ ಕನಸು ಕಂಡೆವು. ಅತ್ಯಂತ ತದ್ವಿರುದ್ಧವಾದುದು ಎಂದರೆ ನೆಮ್ಮದಿ ಕೇಂದ್ರ. ಅದು ಸುಧಾರಣೆ ಆಗಬೇಕು ಅಥವಾ ಅದನ್ನು stop ಮಾಡಬೇಕೆಂದು ಸರ್ಕಾರಕ್ಕೆ ಮನವಿ ಮಾಡುತ್ತೇನೆ.

**ಶ್ರೀಮತಿ ಸೀಮಾ ಅಶೋಕ್ ಮಸೂತಿ (ಧಾರವಾಡ):** ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬಗ್ಗೆ ವಿಶೇಷವಾದ, ವಿಶಿಷ್ಟವಾದ ಅಧಿವೇಶನವನ್ನು ಕರೆದಿದ್ದು ಇಲ್ಲಿ ಅತ್ಯಂತ ಅರ್ಥಪೂರ್ಣವಾದ ಚರ್ಚೆಯಾಗಿದೆ. ಬೆಳೆ ವಿಮೆ ಯೋಜನೆ ಬಗ್ಗೆ ಸಾಕಷ್ಟು ಚರ್ಚೆಯಾಯಿತು. ಮಾನ್ಯ ಮುಖ್ಯಮಂತ್ರಿಯವರೂ ಸಹ ಇದಕ್ಕೆ ಸ್ಪಂದಿಸಿ ಎಲ್ಲರ ಪ್ರಶ್ನೆಗೂ ಉತ್ತರ ಸಿಗುವ ರೀತಿಯಲ್ಲಿ ಬೆಳೆ ವಿಮೆ ಯೋಜನೆಯನ್ನು ಸರಳೀಕರಣಗೊಳಿಸಿ ಗ್ರಾಮ ಪಂಚಾಯತಿ ಮಟ್ಟದಲ್ಲಿ ಗ್ರಾಮ ಪಂಚಾಯಿತಿ ಘಟಕವನ್ನಾಗಿ ಇಟ್ಟುಕೊಂಡು ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆಯನ್ನು ಜಾರಿಗೊಳಿಸುವುದಾಗಲಿ, ಸಣ್ಣ ಮತ್ತು ಅತಿ ಸಣ್ಣ ರೈತರಿಗೆ premium ಹಣವನ್ನು ಸರ್ಕಾರವೇ 50% ಭರಿಸುವುದೆಂದು ತೀರ್ಮಾನಿಸಿರುವುದೂ ಸಹ ರೈತರಿಗೆ ಸಂತೋಷವನ್ನು ತರುವಂಥ ಒಂದು ವಿಚಾರವಾಗಿದೆ. ಏಕೆಂದರೆ, ರೈತರ ವಿಚಾರವಾಗಿ ಚರ್ಚೆ ಮಾಡಲು ಕರೆದಿರುವ ಈ ಅಧಿವೇಶನ ಇತಿಹಾಸ ಸೃಷ್ಟಿ ಮಾಡಿದೆ. ಬೆಳೆ ವಿಮೆ ಯೋಜನೆಯನ್ನು 1999–2000ನೇ ಸಾಲಿನಲ್ಲಿ ಮಾಜಿ ಪ್ರಧಾನಿಗಳಾದ ಅಟಲ್ ಬಿಹಾರಿ ವಾಜಪೇಯಿಯವರು ಜಾರಿಗೆ ತಂದರು. ನಮ್ಮದು ಹಳ್ಳಿಗಳ ದೇಶ, 70% ರೈತರೇ ಇದ್ದಾರೆ, ರೈತರೇ ನಮ್ಮ ಬೆನ್ನುಲುಬು ಎಂದು ಹಿಂದಿನ ಎಷ್ಟೋ ಸರ್ಕಾರಗಳು ಹೇಳುತ್ತಿರುವುದನ್ನು ಕೇಳುತ್ತಾ ಬಂದಿದ್ದಾಯಿತು. ಕೋಳಿ, ಕುರಿ, ದನ ಸತ್ತರೆ insurance ಇದೆ. ಆದರೆ, ನಮ್ಮ ರೈತ ಬೆಳೆದಂಥ ಬೆಳೆ ನಾಶವಾದಾಗ ಅದಕ್ಕೆ insurance ಇಲ್ಲವೆನ್ನುವ ದೃಷ್ಟಿಕೋನವನ್ನಿಟ್ಟುಕೊಂಡು ಮಾನ್ಯ ಅಟಲ್ ಬಿಹಾರಿ ವಾಜಪೇಯಿಯವರು ವರದಾನವಾಗಿ ಈ ಯೋಜನೆಯನ್ನು ರೈತರಿಗೆ ಕೊಟ್ಟರು. ಮಾನ್ಯ ವಾಜಪೇಯಿಯವರ ಸರ್ಕಾರ ಇದ್ದಂಥ ಕಾಲದಲ್ಲಿ 2–3 ವರ್ಷಗಳ ಕಾಲ ರೈತರು ಈ ಯೋಜನೆಯ ಸದುಪಯೋಗವನ್ನು ಪಡೆದುಕೊಂಡರು. ಆನಂತರ, ಈ ಬೆಳೆ ವಿಮೆ ಯೋಜನೆ ಎಂದರೇನೆಂದು ರೈತರೇ ತಮ್ಮ ತಲೆ ಚಚ್ಚಿಕೊಳ್ಳುವಂಥ ಪರಿಸ್ಥಿತಿ ತಂದಿಟ್ಟಿದ್ದಾರೆ. ಅಂಕಿ ಸಂಖ್ಯೆಗಳ ಇಲಾಖೆಯವರಾಗಲಿ, ಕೃಷಿ ಇಲಾಖೆಯವರಾಗಲಿ, ಕಾರ್ಪೋರೇಷನ್‌ರವರಾಗಲಿ, ಎಲ್ಲರೂ ಸಹಿತ ಅಗ್ರಿಗೇಟ್ ತೆಗೆದು ಆವರೇಜ್‌ನ್ನು ಗಣನೆಗೆ ತೆಗೆದುಕೊಂಡು ಅವರಿಗೆ ಬರುವಂಥದ್ದನ್ನು ಲೆಕ್ಕ

ಹಾಕುತ್ತಾರೆ. ಈಗ ಹತ್ತು ಚೀಲ ಹೆಸರು ಬೆಳೆಯುವಂಥ ರೈತ ಒಂದು ಚೀಲ ಬೆಳೆದಿರುತ್ತಾನೆ. ಅವನು ಕಟ್ಟಿದಂಥ ಪ್ರೀಮಿಯಮ್‌ಗಿಂತಲೂ ಕಡಿಮೆ ಹಣ ಬರುವ ಸಂದರ್ಭ ಇವತ್ತಿನ ದಿವಸ ಬೆಳೆ ವಿಮೆ ಯೋಜನೆಯಲ್ಲಿ ಆಗಿದೆ. ಅದಕ್ಕೆ ವಿಶೇಷ ಅಧಿವೇಶನದಲ್ಲಿ ನಾವೆಲ್ಲರೂ ಕೂಡಿ ಈ ಬಗ್ಗೆ ಚರ್ಚೆ ಮಾಡಬೇಕಾಗಿದೆ. ಎಲ್ಲರೂ ತಮ್ಮ ತಮ್ಮ ಧ್ವನಿ ಎತ್ತಬೇಕಾಗಿದೆ. ಇಲ್ಲಿ ಎಲ್ಲರೂ ಕೂಡ ಶಾಸಕರು ಫೈಲ್‌ಗಳನ್ನು ತಂದು ಮಂತ್ರಿಗಳ ಹತ್ತಿರ ಹೋಗಿ ತಮ್ಮ ವಿಷಯಗಳನ್ನು ಹೇಳಿ ತಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಂಡು ಹೋಗುತ್ತಾರೆ. ಆದರೆ ರೈತ ಬೆಂಗಳೂರಿಗೆ ಬಂದು ಅವನು ತನ್ನ ಸಮಸ್ಯೆಯನ್ನು ಬಗೆಹರಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಅವನ ಪರವಾಗಿ ನಮ್ಮೆಲ್ಲರದೂ ಕೂಡ ಒಂದೇ ಕೂಗು ಆಗಬೇಕು. ಆ ರೈತನಿಗೆ ಇದು ಅವೈಜ್ಞಾನಿಕವಾದ ಬೆಳೆ ವಿಮೆ ಯೋಜನೆಯಾಗಿದ್ದು, ಇಲ್ಲಿ ನಾವೇನು ಅದು ಆಗಬೇಕು ಇದು ಆಗಬೇಕೆಂದು ಬಡಿದಾಡುತ್ತಿದ್ದೇವೆ, ಆದರೆ ಈ ಅವೈಜ್ಞಾನಿಕವಾದ ಬೆಳೆ ವಿಮೆ ಯೋಜನೆಯನ್ನು ಕೇಂದ್ರ ಸರ್ಕಾರದವರು ರೈತರಿಗೆ ವರದಾನವಾಗಿರುವ ಈ ಯೋಜನೆಯನ್ನು ಬಹಳ ಚಿಂತನೆ ಮಾಡಿ ಅವರು ರೈತರಿಗೆ ಒದಗಿಸುವಂಥ ಕೆಲಸ ಆಗಬೇಕೆಂದು ನಾವೆಲ್ಲರೂ ಕೂಡ ಒಕ್ಕೊರಲಿನಿಂದ ಈವತ್ತು ಸಂದೇಶವನ್ನು ಕೇಂದ್ರ ಸರ್ಕಾರಕ್ಕೆ ಕೊಡಬೇಕೆನ್ನುವ ಮಾತನ್ನು ಹೇಳುತ್ತಾ, ಹಿಂದೆ ನಾನು ಜಿಲ್ಲಾ ಪಂಚಾಯತಿಯ ಮೆಂಬರ್ ಇರುವಾಗ ಕೇಂದ್ರ ಸರ್ಕಾರವರು, "ನಮ್ಮ ಹೊಲ ನಮ್ಮ ರಸ್ತೆ" ಯೋಜನೆಯಲ್ಲಿ ರೈತರಿಗೆ ಹೊಲದ ರಸ್ತೆಗಳನ್ನು ಮಾಡಲಿಕ್ಕೆ ವಿಶೇಷವಾದ ಅನುದಾನ ಕೊಡುತ್ತಿದ್ದರು. ನಾವು ಈಗ ಇಲ್ಲಿ ಹೇಳುತ್ತಿದ್ದೇವೆ. ಫಾರಿನ್‌ಗೆ ಹೋಗಿ ಬಂದಿದ್ದೇವೆ. ಅಲ್ಲಿ ಒಬ್ಬ ಎರಡು ಎಕರೆಯಲ್ಲಿ ದ್ರಾಕ್ಷಿ ಬೆಳೆಯುವವನು, ಸೇಬು ಬೆಳೆಯುವವನು, ಕಾರ್ ತೆಗೆದುಕೊಂಡು ಹೊಲಕ್ಕೆ ಹೋಗುತ್ತಾನೆ. ಆದರೆ, ನಮ್ಮ ರೈತ ಈಗ 8–10 ಕಿ.ಮೀ. ದೂರದಲ್ಲಿರುವ ಅವನ ಹೊಲಕ್ಕೆ ಹೋಗಬೇಕಾದರೆ ಅವನು ಮೇನ್ ರೋಡ್‌ನಲ್ಲಿ ಅವನು ತನ್ನ ಚಕ್ಕಡಿ ನಿಲ್ಲಿಸಿ ಹೋಗಬೇಕು. ಕಾರು ತೆಗೆದುಕೊಂಡು ಹೋಗುವ ಪರಿಸ್ಥಿತಿ ನಮ್ಮ ರೈತನಿಗೆ ಯಾವಾಗ ಬರಬೇಕು? ಬರುವುದಕ್ಕೆ ಸಾಧ್ಯವೇ ಇಲ್ಲ. ಅದಕ್ಕೆ ನಾವೆಲ್ಲರೂ ಕೂಡ ಆ ರೈತನಿಗೆ ಹೊಲಕ್ಕೆ ಹೋಗುವ ರಸ್ತೆಯನ್ನು ನಿರ್ಮಿಸುವುದಕ್ಕೆ ಅವಕಾಶ ಮಾಡಿ ಕೊಡಬೇಕು.

ಪ್ರತಿಯೊಂದು ತಾಲ್ಲೂಕುಗಳಲ್ಲಿ ದೊಡ್ಡ ದೊಡ್ಡ ಕೆರೆಗಳಿವೆ. ಈಗ ನಾವು ಯಾರು ಮಂತ್ರಿಗಳ ಬೆನ್ನು ಹತ್ತಿ ಕೆರೆಗಳ ಹೂಳೆತ್ತುವುದಕ್ಕೆ ದುಡ್ಡು ತೆಗೆದುಕೊಳ್ಳುತ್ತೇವೆ. ಆ ಕೆರೆಗಳ ಮಾತ್ರ ಹೂಳುತ್ತುವುದಿಲ್ಲ. ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಇರುವ ಕೆರೆಗಳನ್ನು ಹೂಳೆತ್ತುವುದು ಅವಶ್ಯಕವಿದೆ. ಉದಾಹರಣೆಗೆ ಹೇಳುವುದಾದರೆ, ನನ್ನ ತಾಲ್ಲೂಕಿನಲ್ಲಿ ಸುಮಾರು 108 ಎಕರೆ ಇರುವ ತಡಕೋಡಿ ಕೆರೆ ಎಂಬ ಒಂದು ಕೆರೆ ಇದೆ. ಅದು ಜಿಲ್ಲಾ ಪಂಚಾಯಿತಿಯಿಂದ ಮಾಡಲಿಕ್ಕೆ ಸಾಧ್ಯವಾಗಿಲ್ಲ. ಜೊತೆಗೆ ಅದನ್ನು ಮೈನರ್ ಇರಿಗೇಷನ್ ಇಲಾಖೆಗೆ ವರ್ಗಾಯಿಸಿರುವುದಿಲ್ಲ. ಅದಕ್ಕೆ ಹಿಂದೆ ಆಗಿರುವ ತಪ್ಪುಗಳು ಮುಂದೆ ಆಗಬಾರದು. ಆದುದರಿಂದ ನನ್ನ ಭಾಗದಲ್ಲಿರುವ ಸುಮಾರು 108 ಎಕರೆ ಇರುವ ಕೆರೆಯ ಹೂಳೆತ್ತಿದರೆ ಅಲ್ಲಿರುವ ಸುಮಾರು 15–20 ಹಳ್ಳಿಗಳ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಬಹುದು. ಇಂಥ ಯೋಚನೆ ಮಾಡುವ ಸಂದರ್ಭ ಈ ಅಧಿವೇಶನದಲ್ಲಿ ಸಿಕ್ಕಿದೆ ಎನ್ನುವ ಮಾತನ್ನು ಹೇಳುತ್ತೇನೆ. ನಾವೆಲ್ಲರೂ ಈ ಸ್ತ್ರೀಶಕ್ತಿ ಸಂಘದ ಬಗ್ಗೆ ಮಾತನಾಡಿದ್ದೇವೆ. ಸ್ತ್ರೀಶಕ್ತಿ ಸಂಘದ ಬಗ್ಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಇಲಾಖೆಯ ಸಚಿವರಾದ ಸಹೋದರಿಯಾದ ಕು: ಶೋಭಾ ಕರಂದ್ಲಾಜೆಯವರು ಅಲ್ಲಿ ಟ್ಯಾಕ್ಸ್ ಕಲೆಕ್ಷನ್ ಮಾಡುವುದಕ್ಕೆ ಸಹಿತ ಸ್ತ್ರೀಶಕ್ತಿ ಸಂಘದವರಿಗೆ ಅವಕಾಶ ಕೊಡುತ್ತೇವೆಂದು ಹೇಳಿದರು. ಇದು ಸ್ವಾಗತಾರ್ಹ. ಅವರ ಯೋಚನೆ ಇಡೀ ಸ್ತ್ರೀಶಕ್ತಿ ಸಂಘದವರಿಗೆ ವರದಾನವಾಗಲಿ ಎಂದು ಹೇಳುತ್ತೇನೆ. ಗ್ರಾಮೀಣಾಭಿವೃದ್ಧಿ ಹೇಗೆ ನಾವು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದ ಸ್ತ್ರೀಶಕ್ತಿ ಸಂಘಗಳನ್ನು ರಚನೆ ಮಾಡುತ್ತೇವೆ, ಅದೇ ರೀತಿಯಾಗಿ ಸಿಟಿಯಲ್ಲಿ ಈ ವ್ಯವಸ್ಥೆ ಇಲ್ಲ. ಸಿಟಿಯಲ್ಲಿಯೂ ಕೂಡ ನಾವು ಈ ವ್ಯವಸ್ಥೆಯನ್ನು ತರಬೇಕಾಗಿದೆ. ಮೊದಲು ಸಿಟಿಯಲ್ಲಿ ಈ ವ್ಯವಸ್ಥೆ ಇತ್ತು ಈಗ ಅದು ಬಂದ್ ಆಗಿದೆ. ಅದಕ್ಕಾಗಿ ಗ್ರಾಮೀಣಾಭಿವೃದ್ಧಿ ಭಾಗದಲ್ಲಿ ನಾವೇನು ಸ್ತ್ರೀಶಕ್ತಿ ಸಂಘಗಳನ್ನು ರಚಿಸಿದ್ದೇವೆ ಅದೇ ಮಾದರಿಯಲ್ಲಿ ಸಿಟಿಯಲ್ಲಿಯೂ ಮಾಡುವುದಕ್ಕೆ ಮಹಿಳೆಯರು ಮುಂದಾಗಿದ್ದಾರೆ. ಜೊತೆಗೆ ಸಿಟಿಯಲ್ಲಿರುವಂತ ಪ್ರಜ್ಞಾವಂತ ಮಹಿಳೆಯರು ಸಾಕಷ್ಟು ಮುಂದೆ ಬರುತ್ತಿರುವುದರಿಂದ ವಿಶೇಷವಾದ ಯೋಜನೆಗಳೊಂದಿಗೆ ಸಿಟಿಯಲ್ಲಿಯೂ ಅದನ್ನು ಜಾರಿಗೆ ತರಬೇಕು ಎನ್ನುವ

ಮಾತನ್ನು ಸದನದ ಅಧ್ಯಕ್ಷರ ಮೂಲಕ ಸರ್ಕಾರಕ್ಕೆ ನಾನು ಮನವಿ ಮಾಡುತ್ತೇನೆ. ಸುಮಾರು 86 ತಾಲ್ಲೂಕುಗಳನ್ನು ಬರಪೀಡಿತ ತಾಲ್ಲೂಕುಗಳೆಂದು ಮಾನ್ಯ ಕಂದಾಯ ಸಚಿವರು ಘೋಷಿಸಿದ್ದಾರೆ. ಅದೇ ರೀತಿ ನಮ್ಮ ಧಾರವಾಡ ತಾಲ್ಲೂಕನ್ನು ಬರಪೀಡಿತ ಎಂದು ಘೋಷಿಸಬೇಕು. ಏಕೆಂದರೆ, ನಮ್ಮ ಧಾರವಾಡ ತಾಲ್ಲೂಕಿನಲ್ಲಿ ಮೂರು ಹೋಬಳಿಗಳಿವೆ. ಅಳ್ಳಾವರ ಮಲನಾಡು, ಗರಗ ಸರ್ಕಲ್ ಅದು ಗಡಿನಾಡು, ಇನ್ನು ಅಂಬಿನಮಾವಿ ಮತ್ತು ಧಾರವಾಡ ಇದು ಬೆಳುವಲ ನಾಡು. ಹೀಗೆ ಮೂರು ವಿಧವಾದ ವಾತಾವರಣ ಇರುವುದರಿಂದ ಮಳೆ ಹೆಚ್ಚಾಗಿ ಭತ್ತವನ್ನು ಬಿತ್ತಿರುವ ಜನ, ಬೆಳುವಲದಲ್ಲಿ ಅವರೆ, ಹೆಸರು, ಇಂಥವುಗಳನ್ನು ಬಿತ್ತುತ್ತಾರೆ. ಆದರೆ ಭತ್ತವನ್ನು ಬಿತ್ತಿ ಎರಡು ತಿಂಗಳು ನಂತರ ಸಾಕಷ್ಟು ಮಳೆಯಾದಾಗ ಮಲೆನಾಡಿನವರು ಖುಷಿಯಾಗುತ್ತಾನೆ. ಏಕೆಂದರೆ ಭತ್ತ ಬಿತ್ತಿದ್ದೇನೆ ಬಹಳ ಚೆನ್ನಾಗಿ ಮಳೆಯಾಗಿರುವುದರಿಂದ ನನ್ನ ಭತ್ತ ಚೆನ್ನಾಗಿ ಬೆಳೆ ಬರುತ್ತದೆಂದು ಖುಷಿಯಾಗುತ್ತಾನೆ. ಆದರೆ ಬೆಳುವಲದಲ್ಲಿ ಇರುವಂಥ ಎಲ್ಲಾ ಬೆಳೆಗಳು ಇವತ್ತು ನಾಶವಾಗಿವೆ. ಹೀಗಾಗಿ ನಮ್ಮ ತಾಲ್ಲೂಕಿನಲ್ಲಿ ಈ ರೀತಿಯ ಸಮಸ್ಯೆಯಿರುವುದರಿಂದ ನಮ್ಮ ಇಡೀ ಜಿಲ್ಲೆಯಲ್ಲಿ ನವಲಗುಂದ ಮತ್ತು ಹುಬ್ಬಳ್ಳಿಯ ಕೆಲವು ಹಳ್ಳಿಗಳನ್ನು ಬಿಟ್ಟರೆ ನೀರಾವರಿ ಸೌಲಭ್ಯವಿಲ್ಲ. ಬೃಹತ್ ನೀರಾವರಿ ಸಚಿವರು ನಮ್ಮವರು, ನಾವು ಕೂಡ ಅವರವರು ಎಂದು ತಿಳಿದುಕೊಂಡು ನಮ್ಮ ಜಿಲ್ಲೆಗೆ ನೀರಾವರಿ ಯೋಜನೆಯನ್ನು ಮತ್ತು ವಿಶೇಷವಾಗಿ ನನ್ನ ತಾಲ್ಲೂಕಿನ ಜನತೆಯ ಬಹಳ ದಿನಗಳ ಬೇಡಿಕೆಯಿರುವುದರಿಂದ ನಮ್ಮ ತಾಲ್ಲೂಕಿನಲ್ಲಿ ನೀರಾವರಿ ಯೋಜನೆಯನ್ನು ಕಾರ್ಯರೂಪಕ್ಕೆ ತಂದು ಆ ಬಗ್ಗೆ ರೂಪುರೇಷೆಯನ್ನು ತಯಾರಿಸಿ ಜಾರಿಗೊಳಿಸಬೇಕೆಂದು ಮನವಿ ಮಾಡುತ್ತೇನೆ. ನಾನು ಜಿಲ್ಲಾ ಪಂಚಾಯತಿ ಮೆಂಬರ್ ಆಗಿರುವಾಗ ಸಾಕಷ್ಟು ಮಾತನಾಡುತ್ತಿದ್ದೆ. ಮಾತನಾಡಿ ಮಾತನಾಡಿ ಈಗ ಸುಮ್ಮನಾಗಿದ್ದೇನೆ. ಏಕೆಂದರೆ ನನ್ನ ವಯಸ್ಸಿಗಷ್ಟು ಅನುಭವವಾಗಿರುವಂಥ ಎಲ್ಲರೂ ತಾವು ಇದ್ದೀರಿ. ನಾನು ಏನಾದರೂ ಮಾತನಾಡಿದರೆ ತಪ್ಪಾಗಬಾರದು ಎಂದು ತಿಳಿದುಕೊಂಡಿದ್ದೇನೆ. ಆದರೆ, ಇವತ್ತಿನ ದಿವಸ ತಮ್ಮೆಲ್ಲರ ಸಹಕಾರದೊಂದಿಗೆ ಅಧ್ಯಕ್ಷರ ನಗುಮುಖದೊಂದಿಗೆ ನನ್ನ

ಮಾತುಗಳು ಹೊರಬಂದಿವೆ. ನನಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕೆ ಸರ್ವರಿಗೂ ಕೂಡ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಎನ್. ಯೋಗೀಶ್ ಭಟ್ [ಮಂಗಳೂರು ನಗರ (ದಕ್ಷಿಣ)]:** ಮಾಹಿತಿಯುಳ್ಳ ಉತ್ತರದಲ್ಲಿ ಬಹುಶಃ ನಾವು ಕೇಳಿದಂಥ ಅನೇಕ ಬೇಡಿಕೆಗಳಿಗೆ ಪೂರಕವಾದ ಉತ್ತರಗಳು ಬಂದಿವೆ. ವಿಶೇಷವಾಗಿ ಶ್ರೀ ಕ್ಷೇತ್ರ ಧರ್ಮಸ್ಥಳ rural developmentಗೆ ಸಂಬಂಧಪಟ್ಟಂತೆ Rural development and self-employment training institute ಬಗ್ಗೆ ಸರ್ಕಾರ ಯಾವ ಒಂದು ನಿರ್ಧಾರ ತೆಗೆದುಕೊಂಡಿದೆ ಅದಕ್ಕೆ ನಿಜವಾಗಿಯೂ ನಾನು ಇದನ್ನು ಸ್ವಾಗತಿಸುತ್ತೇನೆ. ಈ ರೀತಿಯಾಗಿ ಇದರ ಕಾರ್ಯವ್ಯಾಪ್ತಿಯನ್ನು ಇಡೀ ರಾಜ್ಯಕ್ಕೆ ವಿಸ್ತರಿಸುವ ಮೂಲಕ ನಿಜವಾದ ಅರ್ಥದಲ್ಲಿ ನಾವು ತಳಮಟ್ಟದಲ್ಲಿ ರೈತರನ್ನು ತಲುಪುವುದಕ್ಕೆ ಸಾಧ್ಯವಾಗುತ್ತದೆ. ನಾನು ಆ ಸಂದರ್ಭದಲ್ಲಿ ಒಂದು ಉಲ್ಲೇಖಿಸಿದ್ದೆ. ಬ್ಯಾಂಕಿಂಗ್ ಲೋನ್‌ನಲ್ಲಿ ಅವರು ಏನು ಸಾಲ ಪಡೆದುಕೊಳ್ಳುತ್ತಿದ್ದಾರೆ. 70% ಮಾತ್ರ ಸಾಲ ರೈತರಿಗೆ ಬ್ಯಾಂಕಿಂಗ್ ಮೂಲಕ ಕೋ–ಆಪರೇಟಿವ್ ಸೆಕ್ಟಾರ್‌ನಲ್ಲಿ ಸಿಗುತ್ತಿದೆ. 20% ಮನಿಲೆಂಡರ್‌ಗಳ ಮೂಲಕ ಸಿಗುತ್ತಿರುವುದರಿಂದ ಅವರು ಬೇರೆ ರೀತಿಯಲ್ಲಿ ಕಿರುಕುಳ ಕೊಡುತ್ತಿರುವುದರಿಂದ ನಾವು ಅದನ್ನು ಎಲ್ಲಿಯವರೆಗೆ ನಿಯಂತ್ರಿಸುವುದಕ್ಕೆ ಸಾಧ್ಯವಾಗುವುದಿಲ್ಲವೋ ಅಲ್ಲಿಯ ತನಕ ರೈತನಿಗೆ ವಿಶೇಷವಾಗಿ ಒಂದು ರೀತಿಯಲ್ಲಿ ಆ 20% ನಿಂದಾಗಿ ಅಥವಾ ಆತ್ಮಹತ್ಯೆಯ ಒತ್ತಡಕ್ಕೆ ನೂಕದ ಹಾಗೆ ಮಾಡಬೇಕೆಂದರೆ ಮನಿಲೆಂಡರ್ಸ್ ಕ್ಲಚ್‌ನಿಂದ ಹೊರಗೆ ತರುವ ರೀತಿಯಲ್ಲಿ ಲೆಜಿಸ್ಲೇಷನ್ ತರುವುದು ಅವಶ್ಯಕತೆಯಿದೆ ಎಂದು ಉಲ್ಲೇಖಿಸುತ್ತೇನೆ. ಮತ್ತೊಂದು ವಿಷಯ ಏನೆಂದರೆ, ನಮ್ಮ ಸರ್ಕಾರದ ಯೋಜನೆಗಳಲ್ಲಿ, ನಮ್ಮ ಸಚಿವರು ಸ್ವಲ್ಪ ಯೋಚಿಸಿ ಇದನ್ನು ಗಮನಿಸಬೇಕು. ಅನೇಕ ಯೋಜನೆಗಳನ್ನು ನಾವು DCC ಕೋ–ಆಪರೇಟಿವ್ ಬ್ಯಾಂಕ್‌ಗಳ ಮೂಲಕ ಕೆಳಗಡೆ ಕೊಡುತ್ತೇವೆ. ಆದರೆ ಅಲ್ಲಿಂದ ಗ್ರಾಮೀಣ ಮಟ್ಟದಲ್ಲಿರುವ ಸಹಕಾರಿ ಬ್ಯಾಂಕ್‌ಗಳಿಗೆ ಸರಕಾರ ಕೊಟ್ಟಿರುವ ಸಾಲ ಬಡ್ಡಿ ಮನ್ನಾ ಇರಬಹುದು ಅಥವಾ ಕೊಟ್ಟಿರುವ ಇನ್ನಿತರ ಸಬ್ಸಿಡಿಗಳಾಗಿರಬಹುದು, ಇನ್ನಿತರ ಯೋಜನೆಗಳಾಗಿರಬಹುದು, ಅವುಗಳು ತಲುಪುವುದಿಲ್ಲ ಎನ್ನುವ

ನೇರವಾದ ದೂರುಗಳು ನಮ್ಮ ಗಮನಕ್ಕೆ ಬಂದಿರುವ ಹಿನ್ನೆಲೆಯಲ್ಲಿ ನೇರವಾಗಿ ನೋಡಲ್ ಏಜೆನ್ಸಿಯಾಗಿ ಇವರನ್ನು ಮಾಡದೇ ಯಾವ ರೀತಿಯಲ್ಲಿ ನೇರವಾಗಿ ಕೇಂದ್ರದಿಂದ ನೇರವಾಗಿ ಗ್ರಾಮ ಪಂಚಾಯಿತಿಗೆ ಕೊಡುವಂಥ ವ್ಯವಸ್ಥೆ ಏನು ಇದೆ ಅದೇ ರೀತಿಯಲ್ಲಿ ನೇರವಾಗಿ ಗ್ರಾಮದಲ್ಲಿರುವ ಕೋ-ಆಪರೇಟಿವ್ ಸೊಸೈಟಿಗಳಿಗೆ ಅದನ್ನು ತಲುಪಿಸುವಂಥ ವ್ಯವಸ್ಥೆ ಸರ್ಕಾರ ಮಾಡಲಿಕ್ಕೆ ಸಾಧ್ಯವಾದಲ್ಲಿ ಖಂಡಿತವಾಗಿ ಇವರನ್ನು ನೋಡಲ್ ಏಜೆನ್ಸಿಯಾಗಿ ಕೇವಲ ಮಾನೀಟರ್ ಮಾಡಲಿಕ್ಕೆ ಬಿಡಬೇಕು. ಹಣ ಇವರ ಮೂಲಕ ತಲುಪಿಸುವಂಥ ವ್ಯವಸ್ಥೆ ಮಾಡಿದರೆ ತಳಮಟ್ಟದಲ್ಲಿ ತಲುಪುವುದಿಲ್ಲ ಎಂದು ದೂರು ಬಂದಿರುವ ಹಿನ್ನೆಲೆಯಲ್ಲಿ ಇದರ ಬಗ್ಗೆ ಪರಿಶೀಲಿಸಬೇಕೆನ್ನುವ ಮನವಿ ಮಾಡಲಿಕ್ಕೆ ಇಚ್ಛಿಸುತ್ತೇನೆ. ಬೇರೆ ಎಲ್ಲಾ ಸಂಗತಿಗಳ ಬಗ್ಗೆ ಸಾಕಷ್ಟು ಒಳ್ಳೆಯ ಉತ್ತರ ಕೊಟ್ಟಿದ್ದಾರೆ. ಪ್ರತಿ ಪಕ್ಷದಲ್ಲಿರುವ ನಮ್ಮ ಮಿತ್ರರು ಕೂಡ ಹೃದಯದಲ್ಲಿ ಅಂತರಾಳದಲ್ಲಿ ಬಹಳವಾಗಿ ಚೆನ್ನಾಗಿ ಇದೆ ಎಂದು ಹೊಗಳುತ್ತಾರೆ. ಹೀಗಿದ್ದರೂ ಕೂಡ ನನ್ನ ಕೋರಿಕೆ ಏನೆಂದರೆ ಇದರ ಜೊತೆ ಜೊತೆಯಲ್ಲಿ ನಾನೊಂದು ವಿಶೇಷವಾಗಿ ಉಲ್ಲೇಖಿಸುತ್ತಿರುವುದು ನದಿಗಳ ಬಗ್ಗೆ. ನಮ್ಮ ಕರಾವಳಿ ಜಿಲ್ಲೆಯಲ್ಲಿ ಹರಿಯುತ್ತಿರುವ ನದಿಗಳಿಂದ ಸುಮಾರು ಎರಡು ಸಾವಿರ ಟಿಎಂಸಿ ಗಳಷ್ಟು ನೀರು ವ್ಯರ್ಥವಾಗುತ್ತದೆ. ಎರಡರಿಂದ ಎರಡೂವರೆ ಪರ್ಸೆಂಟ್ ಮಾತ್ರ ಉಪಯೋಗವಾಗುತ್ತಿದೆ. ಅಲ್ಲಲ್ಲಿ ಚೆಕ್‌ಡ್ಯಾಂಗಳನ್ನು ಹಾಕುವ ಬಗ್ಗೆ ಮತ್ತು ಅದರ ಮೂಲಕ ರೈತಾಪಿ ವರ್ಗದವರಿಗೆ ಅನುಕೂಲವಾಗುವ ನಿಟ್ಟಿನಲ್ಲಿ, ವಿಶೇಷವಾಗಿ ಕರಾವಳಿ ಪ್ರದೇಶದಲ್ಲಿ ಅನುಕೂಲವಾಗುವ ನಿಟ್ಟಿನಲ್ಲಿ ತಾವು ಯೋಜನೆಗಳನ್ನು ಹಮ್ಮಿಕೊಳ್ಳಬೇಕಾಗಿದೆ ಎನ್ನುವ ವಿನಂತಿಯನ್ನು ತಮ್ಮ ಮೂಲಕ ಸರ್ಕಾರಕ್ಕೆ ಮಾಡಲಿಕ್ಕೆ ಇಚ್ಛಿಸುತ್ತೇನೆ.

**ಉಪಾಧ್ಯಕ್ಷರು:** ಬೊಮ್ಮಾಯಿರವರೆ, ಉತ್ತರ ಕೊಡುತ್ತೀರಾ?

**ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು):** ಎಲ್ಲರೂ ಒಪ್ಪುವುದಾದರೆ ಉತ್ತರ ಕೊಡುತ್ತೇನೆ.

**ಶ್ರೀ ಹೆಚ್.ಡಿ. ರೇವಣ್ಣ:** ದಯಮಾಡಿ ತಮಗೆ ಒಂದು ಕ್ಲಾರಿಫಿಕೇಷನ್ ಬೇಕು. ಅವರು ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಉತ್ತರ ಕೊಡುತ್ತಾರೋ ಅಥವಾ ಮಾನ್ಯ ಮುಖ್ಯಮಂತ್ರಿಗಳು ನಾಳೆ ಬಂದ ನಂತರ ಉತ್ತರ ಕೊಡುತ್ತಾರೋ?

**ಶ್ರೀ ಬಸವರಾಜ ಬೊಮ್ಮಾಯಿ:** ತಾವು ಕೇಳಿರುವ ಕ್ಲಾರಿಫಿಕೇಷನ್‌ಗೆ ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಉತ್ತರ ಕೊಡುವುದಕ್ಕೆ ನಾನು ಸಿದ್ಧನಿದ್ದೇನೆ.

**ಉಪಾಧ್ಯಕ್ಷರು:** ಆಯಿತು. ತಾವು ಉತ್ತರಿಸಿ.

**ಶ್ರೀ ಬಸವರಾಜ ಬೊಮ್ಮಾಯಿ:** ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬಗ್ಗೆ ಸುದೀರ್ಘವಾಗಿ ಮೂರು ದಿವಸ ಚರ್ಚೆಯಾಗಿ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಟ್ಟ ಮೇಲೆ ಮತ್ತೆ ಹಲವಾರು ವಿಷಯಗಳು ಇಲ್ಲಿ ಪ್ರಸ್ತಾಪವಾಗಿವೆ. ಕೃಷಿ ಅಭಿವೃದ್ಧಿ ಈ ದೇಶಕ್ಕಾಗಲಿ, ರಾಷ್ಟ್ರಕ್ಕಾಗಲಿ ಹೊಸದಲ್ಲ. ಕಾಲಕಾಲಕ್ಕೆ ತಕ್ಕ ಹಾಗೆ ತನ್ನದೇ ಆದ ಸವಾಲುಗಳನ್ನು ಅದು ಎದುರಿಸುತ್ತಾ ಬಂದಿದೆ. ನಾವು ಇಲ್ಲಿ ಮಾತನಾಡಿರುವಂಥ ಹತ್ತು ಹಲವಾರು ವಿಷಯಗಳು ಯಾವುದೇ ಒಂದು ಕಾಲಮಿತಿಗೆ ನಾವು ಅದನ್ನು ಗುರ್ತಿಸುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ, ಇದು ಡೈನಮಿಕ್ ಪ್ರಾಬ್ಲಂ. ಉದಾಹರಣೆಗೆ ಕುಡಿಯುವ ನೀರು ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಹೇಳುವುದಾದರೆ, ಒಂದು ಗ್ರಾಮಕ್ಕೆ ಕುಡಿಯುವ ನೀರಿನ ಯೋಜನೆ ಮಾಡಿದರೆ ಮುಂದಿನ ಕೆಲವು ದಿನಗಳಲ್ಲಿ ಆ ಯೋಜನೆಯ ಫಲಪ್ರದ ಸಂಪೂರ್ಣವಾಗಿ ಆಗಿ ಶಾಶ್ವತವಾಗಿ ನೀರನ್ನು ಯಾವ ಮಟ್ಟಕ್ಕೆ ಕೊಡಬೇಕೋ ಅದೇ ಮಟ್ಟದಲ್ಲಿ ಇರುತ್ತದೆ ಎಂದು ಹೇಳುವುದಕ್ಕೆ ಆಗುವುದಿಲ್ಲ. ಒಂದು ಜನಸಂಖ್ಯೆ ಹೆಚ್ಚಾಗಿರುತ್ತದೆ ಇನ್ನೊಂದು ಸೋರ್ಸು ಕಡಿಮೆಯಾಗಿರುತ್ತದೆ ಅಥವಾ ಆ ವ್ಯವಸ್ಥೆಯಲ್ಲಿ ತೊಂದರೆಯಾಗಿರುತ್ತದೆ. ಅದೇ ರೀತಿ ಕೃಷಿಯಲ್ಲೂ ಕೂಡ ಬದಲಾವಣೆಯಾಗುತ್ತಿದೆ. ನೀರಿನ ಗುಣಮಟ್ಟ ಕಡಿಮೆಯಾಗಿರುವಂಥದ್ದು ಮತ್ತು ವಿವಿಧ ನೀತಿಗಳನ್ನು ಸರ್ಕಾರಗಳು ತಂದು ಅದಕ್ಕೆ ಒದಗಿಸಿರುವ ಹಣಕಾಸಿನ ಆಧಾರದ ಮೇಲೆ ಇವತ್ತು ಕೃಷಿ ಅಭಿವೃದ್ಧಿಯಾಗುತ್ತದೆ. ಆದ್ದರಿಂದ, ನಾವು ಇದನ್ನು ಕಾಲಕಾಲಕ್ಕೆ ಪರಿಷ್ಕರಣೆ ಮಾಡತಕ್ಕಂಥ ಅವಶ್ಯಕತೆ ಇದೆ. ಈ

ರೀತಿಯಾದಂಥ ಒಂದು ಕೆಲಸ ಕಳೆದ ಮೂರು ದಿವಸಗಳಲ್ಲಿ ಆಗಿದೆ. ಇವತ್ತಿನ ದಿವಸ ಗ್ರಾಮೀಣಾಭಿವೃದ್ಧಿ ಮತ್ತು ಕೃಷಿ ಏನಾಗಿದೆ ಎಂಬುದನ್ನು ಎಲ್ಲರೂ ಸೇರಿ ಒಟ್ಟಿಗೆ ಚರ್ಚೆ ಮಾಡಿದ್ದೇವೆ. ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ರೈತ ಯಾವುದೇ ಪಕ್ಷಕ್ಕೆ ಸೇರಿಲ್ಲ. ಆದರೆ, ಎಲ್ಲಾ ಪಕ್ಷಗಳು ರೈತನಿಗೆ ಸೇರಿವೆ. ಇದನ್ನು ಗಮನದಲ್ಲಿಟ್ಟುಕೊಂಡು ಹತ್ತು ಹಲವಾರು ವಿಚಾರಗಳು ಪ್ರಸ್ತಾಪವಾಗಿವೆ ಎಂದು ನಾನಂತೂ ಭಾವಿಸಿದ್ದೇನೆ. ಎರಡನೆಯದಾಗಿ ಅಭಿವೃದ್ಧಿ ಬಗ್ಗೆ ಮಾತನಾಡುವಾಗ ನಮ್ಮ ಸದಸ್ಯರು ಬಹಳ ಉಪಯುಕ್ತವಾದಂಥ ಮಾತನ್ನು ಹೇಳಿದರು. ಅದೇನೆಂದರೆ, ಯೋಜನೆಗಳು ಮತ್ತು ಪಾಲಿಸಿಗಳು ಬಹಳಷ್ಟು ಆಗಿವೆ. ಆದರೆ, ಯೋಜನೆಗಳಿಂದ ಹತ್ತು ಹಲವಾರು ಸಮಸ್ಯೆಗಳನ್ನು ನಾವು ಬಗೆಹರಿಸಿದ್ದೇವೆಂದು ಆತ್ಮಸ್ಥೈರ್ಯವಾಗಿ ಹೇಳುವಂಥ ಪರಿಸ್ಥಿತಿಯಲ್ಲಿ ನಾವು ಇಲ್ಲ. ಯೋಜನೆಗಳ ಅನುಷ್ಠಾನ ಮತ್ತು ಆ ಯೋಜನೆಗಳು ನಿಜವಾಗಿಯೂ ಕೂಡ ಸಮಸ್ಯೆಗಳನ್ನು ಅರ್ಥಮಾಡಿಕೊಂಡಿವೆ ಎಂದು ಕಾಲಕಾಲಕ್ಕೆ ಮತ್ತೆ ನಾವು ಟೆಸ್ಟ್ ಮಾಡಬೇಕಾಗುತ್ತದೆ.

**ಶ್ರೀ ಹೆಚ್.ಸಿ. ಬಾಲಕೃಷ್ಣ:** ನಿಮ್ಮ ಸ್ಪೀಚ್ ಕೇಳುವುದಕ್ಕೆ ಚೆನ್ನಾಗಿದೆ. ದಯವಿಟ್ಟು ಕ್ಲಾರಿಫಿಕೇಷನ್‌ಗೆ ಮಾತ್ರ ಉತ್ತರ ಕೊಡಿ. ದಯಮಾಡಿ ವಿಚಾರಕ್ಕೆ ಬನ್ನಿ ಎಂದು ಕೇಳಿಕೊಳ್ಳುತ್ತೇನೆ.

**ಶ್ರೀ ಬಸವರಾಜ ಬೊಮ್ಮಾಯಿ:** ಅರ್ಧ ದಿವಸ ಕ್ಲಾರಿಫಿಕೇಷನ್ ಕೇಳಿದ್ದೀರಿ. ಆದ್ದರಿಂದ, ನಾನು ಉತ್ತರ ಕೊಡುವುದಕ್ಕೆ ದಯವಿಟ್ಟು ಸ್ವಲ್ಪ ಅವಕಾಶ ಕೊಡಿ. ಬೇಡವೆಂದರೆ ನನ್ನ ಅಭ್ಯಂತರ ಏನೂ ಇಲ್ಲ.

**ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್:** Let us come to the point.

**ಶ್ರೀ ಬಸವರಾಜ ಬೊಮ್ಮಾಯಿ:** I will come to your point later. ನಿಮ್ಮದೇನು ನನಗೆ ಬಹಳ ಸಮಸ್ಯೆ ಇಲ್ಲ. ನಾನು ಹೇಳಿದರೆ ತಾವು ಎದ್ದು ಹೋಗುತ್ತೀರಿ. ಆದ್ದರಿಂದ, ನೀವು ಇಲ್ಲಿಯೇ ಕುಳಿತುಕೊಳ್ಳಬೇಕೆಂದು ನನಗೆ ಆಸೆ ಇದೆ. I know what point you are speaking about. ಈಗ ಅಭಿವೃದ್ಧಿ ಸುತ್ತಲೂ ಜನರಿದ್ದಾರೆ. ಆದರೆ, ಜನರ ಸುತ್ತಲೂ ಅಭಿವೃದ್ಧಿಯಾಗಬೇಕು. ಈ

ಹಿನ್ನೆಲೆಯಲ್ಲಿ ಬಹಳಷ್ಟು ಉಪಯುಕ್ತವಾದಂಥ ಸಲಹೆಗಳನ್ನು ತಾವು ಕೊಟ್ಟಿದ್ದೀರಿ. ಅದರ ಹಿನ್ನೆಲೆಯಲ್ಲಿ ನಮ್ಮ ಮುಖ್ಯಮಂತ್ರಿಗಳು ಕೂಡ ಉತ್ತರವನ್ನು ಕೊಟ್ಟಿದ್ದಾರೆ. ಇದಾದ ನಂತರವು ಕೂಡ ಹಲವು ಪ್ರಶ್ನೆಗಳು ವಿರೋಧಪಕ್ಷದ ಸಮೇತರಾಗಿ ತಾವೆಲ್ಲ ಪ್ರಸ್ತಾಪ ಮಾಡಿದ್ದೀರಿ. ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಸ್ತಾಪ ಮಾಡಿರುವ ಮೊದಲ ಎರಡು ಪ್ರಮುಖ ವಿಚಾರಗಳ ಬಗ್ಗೆ ಹೇಳುತ್ತೇನೆ. Food production ಬಗ್ಗೆ ಅವರು ಅತ್ಯಂತ ಕಳಕಳಿಯಿಂದ ಹೇಳಿದ್ದಾರೆ. ಮತ್ತೆ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಮಾನ್ಯ ರೇವಣ್ಣನವರು ಸೇರಿ ರಾಜ್ಯ ಕೃಷಿ ನೀತಿ ಮತ್ತು ಕೇಂದ್ರ ಸರ್ಕಾರದ ಕೃಷಿ ನೀತಿಗಳಲ್ಲಿ ನೀವು ಏನೇನು ಅಳವಡಿಸಿಕೊಂಡಿದ್ದೀರೆಂಬ ಮೂಲಭೂತವಾದ ಎರಡು ಪ್ರಶ್ನೆಗಳನ್ನು ಪ್ರಸ್ತಾಪ ಮಾಡಿದ್ದಾರೆ. ಆಹಾರದ ಉತ್ಪಾದನೆ ಬಗ್ಗೆ ನಾನು ಹೇಳುವುದಾದರೆ, 2005–06ರಲ್ಲಿ 96.22 ಲಕ್ಷ ಮೆಟ್ರಿಕ್ ಟನ್ ಉತ್ಪಾದನೆ ಆಯಿತು. 2006–07ರಲ್ಲಿ 97.87 ಲಕ್ಷ ಮೆಟ್ರಿಕ್ ಟನ್ ಉತ್ಪಾದನೆ ಆಗಿದೆ. 2007–08ರಲ್ಲಿ 99.50 ಲಕ್ಷ ಮೆಟ್ರಿಕ್ ಟನ್ ಉತ್ಪಾದನೆ ಆಗಿದೆ. 2008–09ರಲ್ಲಿ 101.27 ಲಕ್ಷ ಮೆಟ್ರಿಕ್ ಟನ್ ಉತ್ಪಾದನೆ ಆಗಿದೆ. ನಮಗೆ ಬೇಕಾಗಿರುವಂಥದ್ದು ಅದಕ್ಕಿಂತ ಸ್ವಲ್ಪ ಹೆಚ್ಚಿಗೆ, ಅಂದರೆ 101.84 ಲಕ್ಷ ಮೆಟ್ರಿಕ್ ಟನ್‌ನಷ್ಟು ಬೇಕಾಗಿದೆ. ಆದರೆ, ಮುಂದಿನ ದಿನಗಳಲ್ಲಿ ನಮ್ಮ ಆಹಾರದ ಬೇಡಿಕೆ ಹೆಚ್ಚಾಗುತ್ತದೆ. ಕನಿಷ್ಠ 4% ಆದರೂ ಆಹಾರ ಉತ್ಪಾದನೆಯಲ್ಲಿ ಗ್ರೋತ್ ಆಗಬೇಕೆಂಬುದು ತಜ್ಞರ ಅಭಿಪ್ರಾಯವಾಗಿದೆ. ಈ ಒಂದು ಹಿನ್ನೆಲೆಯಲ್ಲಿ 2009–10ಕ್ಕೆ ಟಾರ್ಗೆಟ್ ಅನ್ನು ನಾವು 118 ಲಕ್ಷ ಮೆಟ್ರಿಕ್ ಟನ್‌ನಷ್ಟು ಇಟ್ಟುಕೊಂಡಿದ್ದೇವೆ. ಆದರೆ, ಕನಿಷ್ಠ 103 ಲಕ್ಷ ಮೆಟ್ರಿಕ್ ಟನ್ ಆದರೂ ಬೇಕಾಗುತ್ತದೆ. ಇವತ್ತು ರಾಜ್ಯದಲ್ಲಿ ಕೆಲವು ಕಡೆ ಬರಗಾಲ ಬಂದಿದೆ. ಮತ್ತೆ ಅತಿವೃಷ್ಟಿ ಮತ್ತು ಅನಾವೃಷ್ಟಿಯಿಂದ ನಮಗೆ ಬೇಕಾಗಿರುವಂಥ ಆಹಾರ ಉತ್ಪಾದನೆ ಆಗಿಲ್ಲ. ಇವತ್ತಿನ ದಿವಸ ಹಲವಾರು ಆಯಾಮಗಳು ನಮ್ಮ ಕೈ ಮೀರಿ ಇರುವಂಥದ್ದು ನಿಮಗೂ ಕೂಡ ಗೊತ್ತಿದೆ. ಇದರ ಜೊತೆಗೆ ಆಹಾರ ಉತ್ಪಾದನೆ ಕಡಿಮೆಯಾಗುವುದಕ್ಕೆ ಮತ್ತು ಕೃಷಿಯಲ್ಲಿ productivity ಹೆಚ್ಚಾಗುವುದಕ್ಕೆ ಹೊಸ ತಳಿಗಳ ಸಂಶೋಧನೆ 70 ಮತ್ತು 80ರ ದಶಕದಲ್ಲಿ ವೇಗವಾಗಿ ಆದ ರೀತಿಯಲ್ಲಿ ಈಗ ಆಗುತ್ತಿಲ್ಲ. ಮತ್ತೆ ಬೀಜಗಳು

ಮತ್ತು ಗೊಬ್ಬರ ಸಮಯಕ್ಕೆ ಸರಿಯಾಗಿ ಇಲ್ಲದೆ ಇರತಕ್ಕಂಥವೆಲ್ಲವೂ ಕೂಡ man-made problems and nature-made problems ಆಗಿವೆ. ಈ ಎರಡರಿಂದ ಇವತ್ತಿನ ದಿವಸ ಆಹಾರ ಉತ್ಪಾದನೆ ಕಡಿಮೆ ಆಗಿರುವುದನ್ನು ನಾವೆಲ್ಲಾ ಗಮನಿಸಿದ್ದೇವೆ. ನಮ್ಮ ದೇಶದಲ್ಲಿ ವಿಶೇಷವಾಗಿ Pulses and Oil seeds ಎಲ್ಲಾ ರಾಜ್ಯಗಳಲ್ಲಿ ಉತ್ಪಾದನೆ ಆದರೂ ಕೂಡ ಇವತ್ತಿನ ದಿವಸ Pulses and Oil seeds ಕಡಿಮೆ ಆಗುತ್ತಿರುವುದರಿಂದ ಕೆಲವು ಸಂದರ್ಭದಲ್ಲಿ ಆಮದು ಮಾಡಿಕೊಳ್ಳುವ ಪ್ರಸಂಗಗಳು ಬರುತ್ತವೆ. ಅದೇ ರೀತಿಯಲ್ಲಿ ನಮ್ಮ ರಾಜ್ಯದಲ್ಲಿ Pulses and Oil seeds ಉತ್ಪಾದನೆಯನ್ನು ಎರಡುಪಟ್ಟು ಹೆಚ್ಚಿಗೆ ಮಾಡಬೇಕೆಂಬ ದೃಷ್ಟಿಯಿಂದ ನಮ್ಮ ಮುಖ್ಯಮಂತ್ರಿಗಳು ತಮ್ಮ ಉತ್ತರದಲ್ಲಿ ಹೇಳಿದ್ದಾರೆ. ಕೃಷಿ ಬಗ್ಗೆ ಇರುವ ಸಂಶೋಧನೆಗೆ ಹೆಚ್ಚಿನ ಪ್ರೋತ್ಸಾಹ ಕೊಡುವುದರ ಜೊತೆಗೆ Horticulture and Agriculture farm ಗಳು ಕೇವಲ R & Dಗೆ ರಿಸ್ಟ್ರಿಕ್ಟ್ ಆಗದೆ ಅವೂ ಕೂಡ Seeds manufacturing ಮಾಡುವುದಕ್ಕೆ ನಾವು ಪ್ರೋತ್ಸಾಹ ಕೊಡುತ್ತೇವೆಂಬ ಮಾತನ್ನು ಸಹ ಅವರು ಹೇಳಿದ್ದಾರೆ. ಆ ಜಮೀನುಗಳನ್ನು ಬಳಕೆ ಮಾಡುತ್ತೇವೆಂದು ಹೇಳಿದ್ದಾರೆ. ಇದರ ಜೊತೆಗೆ 2006ರ ಕೃಷಿ ನೀತಿಯಲ್ಲಿನ ಹತ್ತು ಹಲವಾರು ವಿಷಯಗಳನ್ನು ತಾವೇನು ಮಂಡಿಸಿದ್ದೀರಿ ಮತ್ತು ಇದರ ಜೊತೆಗೆ 2700 ಅಧಿಕಾರಿಗಳ ತಂಡ ಗುರುತಿಸಿರುವ ಎಲ್ಲಾ ವಿಚಾರಗಳ ಅನ್ವಯ ಇವತ್ತು ಸಾವಯವ ಕೃಷಿಗೆ ಚಾಲನೆ ಕೊಡಬೇಕೆಂದು ನಾವು ಹೇಳಿದ್ದೇವೆ. ಸಾವಯವ ಕೃಷಿಗೆ ನಾವು ಖಂಡಿತವಾಗಿ ಒಂದು ಟಾಸ್ಕ್‌ಫೋರ್ಸ್ ಮಾಡುತ್ತೇವೆ. ಪ್ರಥಮ ಬಾರಿಗೆ ರೈತರ ಮಟ್ಟಿಗೆ ನಿಮ್ಮ ನೀತಿಯ ಆಶಯದಂತೆ ಇದನ್ನು ತೆಗೆದುಕೊಂಡು ಹೋಗುವಂಥ ಪ್ರಯತ್ನವನ್ನು ನಾವು ಮಾಡಿದ್ದೇವೆ. ಅದೇ ರೀತಿಯಾಗಿ ಕೃಷಿ ನೀತಿಯಲ್ಲಿ ರೈತರಿಗೆ ಸಾಲವನ್ನು ಹೆಚ್ಚಿಗೆ ಕೊಡಿಸಬೇಕೆಂದು ಮತ್ತು ನಮ್ಮ ಕ್ರೆಡಿಟ್ ಸಿಸ್ಟಮ್ ಅನ್ನು improve ಮಾಡಬೇಕೆಂದು ನಮ್ಮ ಕೃಷಿ ನೀತಿಯಲ್ಲಿ ಹೇಳಿದೆ. ಅದಕ್ಕೆ ಕಿಸಾನ್ ಕ್ರೆಡಿಟ್ ಕಾರ್ಡ್‌ನ್ನು ಮಾಡಿದರೆ ಪ್ರತಿಯೊಬ್ಬ ರೈತನಿಗೆ ಅಂದರೆ ಸಣ್ಣ ಮತ್ತು ಅತಿ ಸಣ್ಣ ರೈತ ಕನಿಷ್ಠ 25 ಸಾವಿರ ರೂಪಾಯಿ ಸಾಲ ತೆಗೆದುಕೊಳ್ಳುವುದಕ್ಕೆ ಅರ್ಹತೆ ಬರುತ್ತದೆ. ಇದನ್ನು ಒಂದು ಅಭಿಯಾನದ ಮುಖಾಂತರ ಎರಡು ವರ್ಷಗಳಲ್ಲಿ

ಈ ರಾಜ್ಯದ ಎಲ್ಲಾ ಸಣ್ಣ ಮತ್ತು ಅತಿ ಸಣ್ಣ ಹಿಡುವಳಿದಾರರಿಗೆ ಕಿಸಾನ್ ಕಾರ್ಡ್ ಮಾಡುವುದಕ್ಕೆ ನಿಮ್ಮ ಕೃಷಿ ನೀತಿಯ ಮೇಲೆ ನಾವು ಮಾಡಿದ್ದೇವೆ. ಈ ರೀತಿಯಾಗಿ ಹತ್ತು ಹಲವಾರು ಉದಾಹರಣೆಗಳನ್ನು ನಾನು ಕೊಡಬಹುದು. ಇದರ ಜೊತೆಗೆ ತಾವುಗಳು ಹೌಸಿಂಗ್ ಬಗ್ಗೆ ಅತ್ಯಂತ ಕಳಕಳಿಯನ್ನು ವ್ಯಕ್ತಪಡಿಸಿದ್ದೀರಿ.

**ಶ್ರೀ. ಮಾಲಿಕಯ್ಯ ವಿ. ಗುತ್ತೇದಾರ್:** ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬಗ್ಗೆ ಹಲವಾರು ಸಲಹೆಗಳನ್ನು ಕೊಟ್ಟಿದ್ದೇವೆ. ಇದರ ಬಗ್ಗೆ ಉತ್ತರ ಕೊಡಿ. ಮತ್ತೆ ಸಾವಯವ ಕೃಷಿಯಲ್ಲಿ ನಿಮ್ಮ ಕಾರ್ಯಕರ್ತರನ್ನು ಹಾಕಿಕೊಂಡಿದ್ದೇವೆಂದು ಹೇಳಿದ್ದೇವೆ. ಆದರೆ ನೀವು ಹೇಳುತ್ತಿರುವುದು ಕ್ಲಾರಿಫೀಕೇಷನ್‌ಗೆ ಉತ್ತರ ಆಗುವುದಿಲ್ಲ. ನಿಮ್ಮ ಭಾಷಣ ನಮಗೆ ಬೇಡ.

**ಶ್ರೀ ಬಸವರಾಜ ಬೊಮ್ಮಾಯಿ:** ನಾವು ಈಗಾಗಲೇ ಆ ವಿಷಯಕ್ಕೆ ಕ್ಲಾರಿಫೈ ಮಾಡಿದ್ದೇವೆ. ನಾನು ಹೇಳುವುದನ್ನು ದಯವಿಟ್ಟು ಒಂದು ಕೇಳಿ. ನೀವು ಹೇಳಿರುವುದನ್ನೆಲ್ಲಾ ನಾನು ಕೇಳಿದ್ದೇನೆ. ಕೈ ಮುಗಿಯುತ್ತೇನೆ ದಯವಿಟ್ಟು ನಾನು ಹೇಳುವುದನ್ನು ಕೇಳಿ. ಸಾವಯವ ಕೃಷಿಯಲ್ಲಿ ಯಾವುದೇ ಒಂದು ಪಕ್ಷದ ಕಾರ್ಯಕರ್ತರು ಇಲ್ಲ. ಯಾರ್ಯಾರು ಆಸಕ್ತಿ ವಹಿಸಿದ್ದಾರೆ ಮತ್ತು ಇದನ್ನು ಮಾಡಲು ಯಾರ್ಯಾರು ಮುಂದೆ ಬಂದಿದ್ದಾರೆ ಮತ್ತು ಯಾರು ಸಂಘಗಳನ್ನು ರಚನೆ ಮಾಡಿ ಆ ಟ್ರಸ್ಟ್‌ಗೆ ಮೆಂಬರ್ಸ್ ಆಗಿದ್ದಾರೆಯೋ ಅವರಿಗೆಲ್ಲಾ ನಾವು ಪ್ರೋತ್ಸಾಹ ಕೊಟ್ಟಿದ್ದೇವೆ. ನೀವು ಕೂಡ ಅದೇ ರೀತಿಯಲ್ಲಿ ಟ್ರಸ್ಟ್ ಮಾಡಿ ಮುಂದೆ ಬಂದರೆ ನಿಮಗೂ ಕೂಡ ಪ್ರೋತ್ಸಾಹ ಕೊಡುತ್ತೇವೆ. ಕಾಂಗ್ರೆಸ್‌ನ ಬ್ಲಾಕ್ ಅಧ್ಯಕ್ಷರು ಅವರ ತಾಲ್ಲೂಕಿನಲ್ಲಿ ಸಾವಯವ ಕೃಷಿ ಮಿಷನ್‌ನ ಅಧ್ಯಕ್ಷರಾಗಿದ್ದಾರೆಂದು ಮಾನ್ಯ ರವಿಯವರು ಉದಾಹರಣೆ ಕೂಡ ಕೊಟ್ಟಿದ್ದಾರೆ. ಇದನ್ನು ಒಪ್ಪಿಕೊಳ್ಳಬಹುದು ಅಥವಾ ಬಿಡಬಹುದು. ಸಾವಯವ ಕೃಷಿಯಲ್ಲಿ ಯಾರ್ಯಾರಿಗೆ ಆಸಕ್ತಿ ಇದೆಯೋ ಅವರಿಗೆಲ್ಲಾ ಅವಕಾಶ ಕೊಡುತ್ತೇವೆ.

**ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್:** ಅವಕಾಶ ಕೊಟ್ಟು ಒಂದು ವೇಳೆ ಅಲ್ಲಿ ಏನಾದರೂ ಅವ್ಯವಹಾರ ಮಾಡಿದರೆ ಅವರ ಮೇಲೆ ಕ್ರಮ

ತೆಗೆದುಕೊಳ್ಳುತ್ತೀರಾ? ನೀವು on the floor of the House ನಲ್ಲಿ ಕಮಿಟ್ ಮಾಡಿ. ಇದರಲ್ಲಿ ಏನಾದರೂ ಅವ್ಯವಹಾರ ಆದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆಂದು ಮತ್ತು ಯಾವುದೇ ಪಕ್ಷದ ಕಾರ್ಯಕರ್ತರು ಹಣ ಮುಟ್ಟಿಸದಿದ್ದರೆ ಅದನ್ನು ಸರಿಪಡಿಸುತ್ತೇವೆಂದು ಮತ್ತು ಆ ರೀತಿ ಮಾಡುವುದಕ್ಕೆ ಬಿಡುವುದಿಲ್ಲವೆಂದು ಇಲ್ಲಿ ಸ್ಪಷ್ಟವಾಗಿ ಹೇಳಿ. ಏಕೆಂದರೆ, ಇದರ ಬಗ್ಗೆ ನಮ್ಮ ಆರೋಪ ಇದೆ. If you want we will prove it.

**ಶ್ರೀ ಬಸವರಾಜ ಬೊಮ್ಮಾಯಿ:** ಯಾರ್ಯಾರಿಗೆ ಸಾವಯವ ಕೃಷಿಯಲ್ಲಿ ಆಸಕ್ತಿ ಇದೆಯೋ ಅಂಥವರಿಗೆ ನಾವು ಸಂಪೂರ್ಣವಾದಂಥ ಪ್ರೋತ್ಸಾಹವನ್ನು ಕೊಡುತ್ತೇವೆ.

**7.00 P.M.**

**ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್:** ಒಂದು ವೇಳೆ ಬೇರೆ ರೀತಿಯಲ್ಲಿ ಆಗಿದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಾ? ಇದರ ಬಗ್ಗೆ ಸ್ಪಷ್ಟವಾಗಿ ಹೌಸ್‌ನಲ್ಲಿ ಹೇಳಬೇಕು.

**ಶ್ರೀ ಬಸವರಾಜ ಬೊಮ್ಮಾಯಿ:** ಯಾರ್ಯಾರು ಆಸಕ್ತಿ ವಹಿಸಿದ್ದಾರೆಯೋ ಅಂಥವರಿಗೆ ನಾವು ಕೊಟ್ಟಿದ್ದೇವೆ. ಬೇರೆ ಯಾರ್ಯಾರಿಗೆ ಆಸಕ್ತಿ ಇದೆಯೋ ಅಂಥವರಿಗೆ ತಾವು ಶಿಫಾರಸ್ಸು ಮಾಡಿ ಅಂಥವರಿಗೂ ಸಹ ನಾವು ಕೊಡುತ್ತೇವೆ. ಬೇರೆ ಪ್ರಶ್ನೆಯೇ ಇದರಲ್ಲಿ ಇಲ್ಲ. ಪಕ್ಷಾತೀತವಾಗಿ ಕೊಡುತ್ತೇವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

**ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್:** ಅದರಲ್ಲಿ ಅವ್ಯವಹಾರವಾದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆಂದು ನೀವು ಹೇಳಿ.

**ಶ್ರೀ ಬಸವರಾಜ ಬೊಮ್ಮಾಯಿ:** ಯಾರ್ಯಾರು ಆಸಕ್ತಿವಹಿಸಿದ್ದಾರೆ ಖಂಡಿತವಾಗಿ ಪ್ರೋತ್ಸಾಹ ಕೊಡುತ್ತೇವೆ, ಅದರಲ್ಲಿ ಎರಡು ಮಾತಿಲ್ಲ, ಪಕ್ಷಾತೀತವಾಗಿ ಕೊಡುತ್ತೇವೆ.

**ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್:** ಕ್ರಮ ತೆಗೆದುಕೊಳ್ಳುತ್ತೇವೆಂದು ನೀವು ಕಮೀಟ್‌ಮೆಂಟ್ ಮಾಡಿ ಎಂದು ಅಷ್ಟನ್ನು ನಾವು ಕೇಳುತ್ತಿದ್ದೇವೆ.

**ಶ್ರೀ ಬಸವರಾಜ ಬೊಮ್ಮಾಯಿ:** ನೀವು ಎಲ್ಲಿಯಾದರೂ ಸ್ಪೆಸಿಫಿಕ್ಕಾಗಿ ಅವ್ಯವಹಾರವಾಗಿದೆ ಎಂದು ಹೇಳಿ, ಖಂಡಿತವಾಗಿ ಕ್ರಮ ತೆಗೆದುಕೊಳ್ಳುತ್ತೇವೆ. ಅದೇ ರೀತಿ ಕೃಷಿ ಮಾರುಕಟ್ಟೆಯ ಬಗ್ಗೆ ನಿಮ್ಮ ನೀತಿ ಏನು ಎಂದು ಹೇಳಿದಿರಿ; ಕೇಂದ್ರ ಸರ್ಕಾರದ ನೀತಿ ಇದೆ ಮತ್ತು ಕೇಂದ್ರ ಸರ್ಕಾರ ಸನ್ಮಾನ್ಯ ಶರದ್ ಪವಾರ್‌ನವರ ನೇತೃತ್ವದಲ್ಲಿ ಒಂದು APMC Amendment Actನ್ನು ತಂದಿದೆ. ಅದರ ಅನ್ವಯ ಈಗಾಗಲೇ ನಾವು ಹೇಳಿದ್ದೇವೆ. ರೈತನಿಗೆ ಮಧ್ಯವರ್ತಿಗಳು ಈ ಧಾರಣೆಯಲ್ಲಿ ಮೋಸ ಮಾಡುತ್ತಾರೆ ಅದಕ್ಕೆ ಸಂಪೂರ್ಣವಾಗಿ computerize ಮಾಡಿ international price, ಸ್ಥಳೀಯ ಪ್ರೈಸ್ ಎಲ್ಲವೂ ರೈತನಿಗೆ ಗೊತ್ತಾಗುವ ರೀತಿಯಲ್ಲಿ computerization ಮಾಡುತ್ತೇವೆನ್ನುವ ಮಾತನ್ನು ಕೂಡ ಹೇಳಿದ್ದೇವೆ. ಅದನ್ನು ತಾವು 2006ರಲ್ಲಿ ಹೇಳಿದ್ದೀರಿ ಅದನ್ನು ನಾವು ಅನುಷ್ಠಾನ ಮಾಡುತ್ತಿದ್ದೇವೆ. ಇದೇ ರೀತಿ ಹತ್ತು ಹಲವಾರು ವಿಷಯಗಳನ್ನು ಎಲ್ಲೆಲ್ಲಿ ಒಳ್ಳೆಯ ವಿಚಾರಗಳು ಇವೆ ಅವೆಲ್ಲವುಗಳನ್ನು ನಾವು ತೆಗೆದುಕೊಂಡಿರುತ್ತೇವೆ. ಗ್ರಾಮೀಣ ಮನೆಗಳ ಬಗ್ಗೆ ಬಹಳಷ್ಟು ಸದಸ್ಯರು ಆಸಕ್ತಿ ವಹಿಸಿದ್ದರು. ಅದಕ್ಕೆ ನಾನು ಆ ಇಲಾಖೆಯಿಂದ ಕೆಲವು ವಿವರಗಳನ್ನು ತರಿಸಿದ್ದೇನೆ. ನಮ್ಮ ಸದನದ ಮುಂದೆ ಇಡುವುದಕ್ಕೆ ಇಚ್ಛೆಪಡುತ್ತೇನೆ.

**ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್:** ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಇದ್ದಾರೆ ಅವರು ಹೇಳಲಿ, ಅವರು ಇದ್ದಾಗ ಇವರು ಹೇಳಬಾರದು.

**ಉಪಾಧ್ಯಕ್ಷರು:** ಅವರಿಗೆ ಕ್ಲಾರಿಫೈ ಮಾಡುವುದಕ್ಕೆ ಅವಕಾಶ ಮಾಡಿಕೊಡಿ.

**ಶ್ರೀ ಬಸವರಾಜ ಬೊಮ್ಮಾಯಿ:** ತಾವು ಏನು ವಿಚಾರವನ್ನು ಎತ್ತಿದ್ದೀರಿ ಅದಕ್ಕೆ ಉತ್ತರ ಕೊಡುತ್ತಿದ್ದೇನೆ, ಸ್ವಾಮಿ.

**ಶ್ರೀ ಹೆಚ್.ಸಿ. ಬಾಲಕೃಷ್ಣ:** ಇವರು ಹೇಳುವುದನ್ನು ಒಪ್ಪಿಕೊಳ್ಳೋಣ. ಆದರೆ ಇವರು ದುಡ್ಡಿನ ಮೂಲವನ್ನು ಹೇಳಲಿಲ್ಲ. ದುಡ್ಡು ಹೇಗೆ ಕ್ರೋಡೀಕರಿಸುತ್ತೇವೆ, ದುಡ್ಡು ಎಲ್ಲಿಂದ ಬರುತ್ತದೆ, ದುಡ್ಡು ಯಾವ ರೀತಿ ಬರುತ್ತದೆ ಅದನ್ನು ಹೇಗೆ

ಹೊಂದಾಣಿಕೆ ಮಾಡುತ್ತೇವೆ ಎನ್ನುವುದನ್ನು ಅವರು ಹೇಳಲಿಲ್ಲ. ಅದನ್ನು ಮಾಡುತ್ತೇವೆ ಮಾಡುತ್ತೇವೆಂದು ಹೇಳಿದರೆ, ಇದಕ್ಕೆ ಇಷ್ಟು ದುಡ್ಡು ಇದೆ, ಇಷ್ಟನ್ನು ತಂದಿದ್ದೇವೆ ಎನ್ನುವುದರ ಬಗ್ಗೆ ನೀವು ಹೇಳಬೇಕಲ್ಲವೆ?

**ಶ್ರೀ ಬಸವರಾಜ ಬೊಮ್ಮಾಯಿ:** ನೀವು ಮಾಡಿರುವ ಕೃಷಿ ನೀತಿಯನ್ನು ನಾವು ಒಪ್ಪಿಕೊಂಡಿದ್ದೇವೆಂದು ಹೇಳಿದರೂ ಕೂಡ ಸಮಾಧಾನದಿಂದ ಕೇಳುವುದಿಲ್ಲವೆಂದರೆ ಹೇಗೆ? ಈಗ ಗ್ರಾಮೀಣ ವಸತಿ ಬಗ್ಗೆ 2000–01ರಿಂದ ಎಲ್ಲಾ ಯೋಜನೆಯಡಿಯಲ್ಲಿ ಇದುವರೆಗೂ 15,89,000 ಮನೆಗಳನ್ನು ನಿರ್ಮಿಸಲಾಗಿದೆ. ನಗರ ಪ್ರದೇಶಗಳಲ್ಲಿ 1,42,000 ಮನೆಗಳನ್ನು ನಿರ್ಮಿಸಲಾಗಿದೆ. 2008–09ರಲ್ಲಿ 2,94,064 ಮನೆಗಳನ್ನು ನಿರ್ಮಿಸಲಾಗಿದೆ. ಇದಕ್ಕೆ 882 ಕೋಟಿ ರೂ.ಗಳ ವೆಚ್ಚವಾಗಿದೆ. ಇದರಲ್ಲಿ ಹಿಂದೆ ಇದ್ದಂಥ 2007–08 ಮಂಜೂರಾಗಿರುವ ಮನೆಗಳು ಸೇರಿವೆ. 2008ರಲ್ಲಿ ಪ್ರಾರಂಭವಾಗಿರುವ ಮನೆಗಳು ಕೂಡ ಸೇರಿರುತ್ತವೆ. ಅದರಲ್ಲಿ ಕೆಲವು ಹಿಂದೆ ಉಳಿದದ್ದು ಕೂಡ ಇದರಲ್ಲಿ ಸೇರಿವೆ. ಒಂದೇ ವರ್ಷದಲ್ಲಿ ನಾವು ಮಾಡಿದ್ದೇವೆಂದು ಹೇಳುವುದಿಲ್ಲ. ಅದೇ ರೀತಿ 2009–10 ಒಟ್ಟು 3,25,000 ಮನೆಗಳನ್ನು ಪೂರ್ಣಗೊಳಿಸುವಂಥ ಗುರಿ ಇದೆ. ಅದರಲ್ಲಿ ಇಲ್ಲಿಯವರೆಗೆ 92,037 ಮನೆಗಳು ನಿರ್ಮಾಣವಾಗಿದೆ.

**ಶ್ರೀ ಹೆಚ್.ಡಿ. ರೇವಣ್ಣ:** ಮಾನ್ಯ ಅಧ್ಯಕ್ಷರೆ, 92,000 ಮನೆಗಳು ಎಂದು ತಾವು ಹೇಳುತ್ತಿದ್ದೀರಿ. 10 ವರ್ಷದ ಹಿಂದಿನದ್ದು ಕೂಡ ಇನ್ನೂ ಫೈನಲ್ ಬಿಲ್ ಆಗಿಲ್ಲ, ಅದನ್ನೇ ಕೊಟ್ಟಿಲ್ಲ.

**ಶ್ರೀ ಬಸವರಾಜ ಬೊಮ್ಮಾಯಿ:** ಅದನ್ನೆ ನಾನು ಕ್ಲಾರಿಫೈ ಮಾಡುತ್ತಿದ್ದೇನೆ. ಯಾವ ರೀತಿ 2008–09ರಲ್ಲಿ ಹಿಂದಿನ ಎರಡು ವರ್ಷದ್ದು ಸೇರಿದೆ. ಬಾಕಿ ಇರುವುದನ್ನು 2,94,000 ಎಂದು ಹೇಳಿದೆವು. ಅದೇ ರೀತಿ ಹೋದ ವರ್ಷದ್ದು ಸೇರಿ 92,000 ಇದೆ ಎನ್ನುವುದನ್ನು ಸ್ಪಷ್ಟೀಕರಣ ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಈ ವರ್ಷ 3,25,000 ಏನು ಗುರಿ ಇದೆ, ಅದನ್ನು ನಾವು ಸಂಪೂರ್ಣವಾಗಿ ಮಾಡುತ್ತೇವೆ. ಈ ವರ್ಷ ಒಂದು ಮನೆಗೆ 30,000 ರೂ.ಗಳಿಂದ 40,000

ರೂ.ಗಳಿಗೆ ಹೆಚ್ಚಿಸಿರುವುದು ತಮಗೆ ಗೊತ್ತಿದೆ. ಅದೇ ರೀತಿ ಕೇಂದ್ರದ ಇಂದಿರಾ ಆವಾಸ್ ಯೋಜನೆ ಅದಕ್ಕೆ 35,000 ರೂ.ಗಳನ್ನು ಕೇಂದ್ರ ಸರ್ಕಾರ ಕೊಡುತ್ತಿತ್ತು. ಅದರಲ್ಲಿ ಸುಮಾರು 8,750 ರೂ.ಗಳನ್ನು ರಾಜ್ಯ ಸರ್ಕಾರ ಪಾಲು ಇತ್ತು. ನಮ್ಮ ಪಾಲನ್ನು 8,750 ರೂ.ಗಳಿಂದ ಈ ವರ್ಷ 13,750 ರೂ.ಗಳಿಗೆ ಅಂದರೆ 5,000 ರೂ.ಗಳನ್ನು ಹೆಚ್ಚಿಗೆ ಮಾಡಿದ್ದೇವೆ. ಅಲ್ಲಿ ಕಡಿಮೆ ಆಗುತ್ತದೆಂದು ಹೆಚ್ಚಿಗೆ ಮಾಡಿರುತ್ತೇವೆ. ಈ ರೀತಿ ಗ್ರಾಮೀಣ ಅಭಿವೃದ್ಧಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರದ ಯೋಜನೆಗಳಿಗೆ ಚಾಲನೆಯನ್ನು ಕೊಟ್ಟಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ತಮ್ಮ ಉತ್ತರದಲ್ಲಿ ಕೊಟ್ಟಿದ್ದಾರೆ. 100 ಕೋಟಿ ರೂ.ಗಳನ್ನು ಕೊಟ್ಟಿದ್ದು, ಇಲ್ಲಿ ಮುಖ್ಯವಾಗಿ ಜಮೀನಿನ ಅಡಚಣೆ ಇದೆ.

**ಶ್ರೀ ಹೆಚ್.ಡಿ. ರೇವಣ್ಣ:** ಹಿಂದಿನ ಸರ್ಕಾರದಿಂದ ಇಂದಿರಾ ಆವಾಸ್ ಯೋಜನೆಗೆ ಎಷ್ಟು ಹಣ ಬಂದಿದೆ. ಎಷ್ಟು ಹಣವನ್ನು ರಿಲೀಜ್ ಮಾಡಿದ್ದಾರೆ. ಇದಕ್ಕೆ ಹಣಕಾಸು ಇಲಾಖೆಯಲ್ಲಿ ಈ ಹಣ ಇದೆಯೆ? ದಯವಿಟ್ಟು ಅದನ್ನು ಕ್ಲಾರಿಫೈ ಮಾಡಲಿ. ನಿಮ್ಮ ಹಣಕಾಸು ಇಲಾಖೆಯಲ್ಲಿ ದುಡ್ಡು ಇಟ್ಟುಕೊಂಡು ಬಿಟ್ಟು ಮನೆ ಮಾಡಿ, ಮನೆ ಮಾಡಿ ಎಂದರೆ ಹೇಗೆ? ಆ ಹಣವನ್ನು ಡಿ.ಸಿ.ಗಳಿಗೆ ಕಳುಹಿಸಿ. ಡಿ.ಸಿ. ಮತ್ತು ಸಿ.ಇ.ಒ.ಗಳಿಗೆ ಜವಾಬ್ದಾರಿಯನ್ನು ಹಾಕಿ. ನೀವು ಕೇಂದ್ರ ಸರ್ಕಾರದ ಹಣವನ್ನು ಇಟ್ಟುಕೊಂಡು ಮನೆ ಮಾಡಿದ್ದೇವೆಂದು ನೀವು ಹೇಳಿಕೊಂಡು ಕುಳಿತುಕೊಳ್ಳಬೇಡಿ. ಎಷ್ಟು ಹಣ ನಿಮ್ಮ ಹಣಕಾಸು ಇಲಾಖೆಯಲ್ಲಿದೆ, ಎಷ್ಟು ಹಣವನ್ನು ಡಿ.ಸಿ. ಮತ್ತು ಸಿ.ಇ.ಒ.ಗಳಿಗೆ ಕಳುಹಿಸಿಕೊಟ್ಟಿದ್ದೀರಿ? ಏಕೆ ಇಟ್ಟುಕೊಂಡಿದ್ದೀರಿ ಆ ಹಣವನ್ನು? ದಯಮಾಡಿ ಸ್ವಲ್ಪ ಅದನ್ನು ತಿಳಿಸಿ.

**ಶ್ರೀ ಬಸವರಾಜ ಬೊಮ್ಮಾಯಿ:** 2009–10ರ ಆರ್ಥಿಕ ವರ್ಷದಲ್ಲಿ ವಿವಿಧ ವಸತಿ ಯೋಜನೆಗಳಿಗೆ ಸರ್ಕಾರ ಒದಗಿಸಿದ ಅನುದಾನ, ಅದರಲ್ಲಿ ಇಂದಿರಾ ಆವಾಸ್ ಯೋಜನೆಯಡಿ ನಿರ್ಮಿಸಿದ ಮನೆಗಳು 34,473 ಆರ್ಥಿಕ ಸಾಧನೆ 12,065 ಲಕ್ಷ ರೂ.ಗಳು ಆಯವ್ಯಯದಲ್ಲಿ ಒದಗಿಸಿರುವ ಒಟ್ಟು ಹಣ 15,844 ಲಕ್ಷ ರೂ.ಗಳು. ಈ ಹಣವನ್ನು ಬಿಡುಗಡೆ ಮಾಡಿದ್ದು ಉಳಿದ ಹಣವನ್ನು ಬಿಡುಗಡೆ ಮಾಡಲಾಗುವುದು. ಒಟ್ಟು 158 ಕೋಟಿ ರೂ.ಗಳಲ್ಲಿ 120 ಕೋಟಿ

ರೂ.ಗಳನ್ನು ಬಿಡುಗಡೆ ಮಾಡಿರುತ್ತೇವೆ. ಮಿಕ್ಕಿದ ಹಣವನ್ನು ಕೂಡ ಬಿಡುಗಡೆ ಮಾಡುತ್ತೇವೆ.

**ಶ್ರೀ ಹೆಚ್.ಡಿ. ರೇವಣ್ಣ:** ಆ ಬಾಕಿ 20 ಕೋಟಿ ರೂ. ಹಣಕಾಸು ಇಲಾಖೆಯಲ್ಲಿ ಇಧೆಯೋ ಅಥವಾ ಮುಖ್ಯ ಕಾರ್ಯದರ್ಶಿಗಳ ಹತ್ತಿರ ಇದೆಯೋ?

**ಶ್ರೀ ಬಸವರಾಜ ಬೊಮ್ಮಾಯಿ:** ಆ ವಿಚಾರವನ್ನು ಒದಗಿಸುತ್ತೇನೆ. ಈ ರೀತಿಯಾಗಿ ಗ್ರಾಮೀಣಾಭಿವೃದ್ಧಿ ಬಗ್ಗೆ ನಮ್ಮ ಕಳಕಳಿ ಇರುವುದು ಸ್ಪಷ್ಟವಾಗಿದೆ.

**ಉಪಾಧ್ಯಕ್ಷರು:** ಮಧ್ಯೆ ಮಧ್ಯೆ ಕೇಳುವುದಕ್ಕೆ ಅವಕಾಶವಿಲ್ಲ.

**ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್:** ಮಾನ್ಯ ಸಚಿವರೆ ಭೂಮಿಯನ್ನು ಖರೀದಿ ಮಾಡುವುದಕ್ಕೆ 100 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರೆಂದು ಹೇಳಿದ್ದೀರಿ. ಅದರಲ್ಲಿ Land Guidance Valu ಇಲ್ಲದೆಯೇ ನೀವು ಒಂದು ಎಕರೆ ಭೂಮಿಯನ್ನು ಖರೀದಿ ಮಾಡುವುದಕ್ಕಾಗುವುದಿಲ್ಲ.

**ಶ್ರೀ ಬಸವರಾಜ ಬೊಮ್ಮಾಯಿ:** ನಾನು ಉತ್ತರವನ್ನು ಕೊಡುವುದಕ್ಕೆ ಬಿಡಿ ಸ್ವಾಮಿ.

**ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್:** ನೀವು 100 ಕೋಟಿ ರೂಪಾಯಿಗಳನ್ನು ಕೊಟ್ಟರೂ ಕೂಡ ಅಲ್ಲಿ Land Guidance Value ಕಡಿಮೆ ಇರುವುದರಿಂದ ನೀವು ಭೂಮಿಯನ್ನು ಖರೀದಿ ಮಾಡುವುದಕ್ಕಾಗುವುದಿಲ್ಲ.

**ಶ್ರೀ ಬಸವರಾಜ ಬೊಮ್ಮಾಯಿ:** ನೋಡಿ ಸ್ವಾಮಿ, ಒಂದು ನಯಾಪೈಸೆಯೂ ಇರಲಿಲ್ಲ. ಈ ಒಂದು ಅಧಿವೇಶನದ ಪರಿಣಾಮವಾಗಿ ನಿಮ್ಮ ಸಲಹೆಯಂತೆ ಜಮೀನು ಖರೀದಿ ಮಾಡುವುದಕ್ಕೆ ನಮ್ಮ ಸರ್ಕಾರ 100 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ನೀವು ನಮಗೆ ಅಭಿನಂದನೆಯನ್ನು ಸಲ್ಲಿಸಬೇಕು. ಆ ಹಣವು ಸಾಕಾಗುವುದಿಲ್ಲವೆಂದು ಹೇಳುತ್ತೀರಿ.

**ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್:** ಅದು ಫಲಕಾರಿಯಾಗುವುದಿಲ್ಲ ಏಕೆಂದರೆ, land guidance value ಪ್ರಕಾರ ಯಾರೂ ಕೂಡ ಭೂಮಿಯನ್ನು ಕೊಡುವುದಿಲ್ಲ.

**ಶ್ರೀ ಬಸವರಾಜ ಬೊಮ್ಮಾಯಿ:** ಖಂಡಿತವಾಗಿಯೂ ಫಲಕಾರಿಯಾಗುತ್ತದೆ.

**ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್:** ನೀವು ಹೇಳಿರುವುದು ಉಪಯೋಗವಾಗುವುದಿಲ್ಲ. ನೀವು land guidance value ಅನ್ನು increase ಮಾಡಿ market price ಕೊಡುತ್ತೇವೆ, land guidance value ಅನ್ನು higher ಮಾಡುತ್ತೇವೆಂದು ಹೇಳಿದ್ದರೆ ಅದನ್ನು ನಾವು ಒಪ್ಪಿಕೊಳ್ಳುತ್ತಿದ್ದೆವು. ನೀವು ಕೊಟ್ಟಿರುವ ಹಣವು ಉಪಯೋಗವಾಗಿಲ್ಲವೆಂದು ಹೇಳುತ್ತಿರುವುದು.

**ಉಪಾಧ್ಯಕ್ಷರು:** ಅವರು ಯೀಲ್ಡ್ ಆಗಿಲ್ಲ. ಮಧ್ಯೆ ಮಧ್ಯೆ ಹೇಗೆ ಮಾತನಾಡುತ್ತೀರಿ? Please ಕುಳಿತುಕೊಳ್ಳಿ. ಮೊದಲು ಅವರು ಮಾತನಾಡಿ ಮುಗಿಸಲಿ.

**ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್:** ಅದಕ್ಕೆ ನಾನು ಸಹಾಯಕ್ಕೆ ಬರುತ್ತಿದ್ದೇನೆ. ಹಿಂದೆ ಕೊಟ್ಟಿರುವ ಪ್ರಕಾರ ಅವರು ಖರೀದಿ ಮಾಡಿದ್ದಾರೆ. 100 ಕೋಟಿ ರೂಪಾಯಿಯಲ್ಲಿ effective ಆಗಿ ಕೆಲಸ ಆಗುವುದಿಲ್ಲ. ಹೆಚ್ಚಿಗೆ ಕೊಡುವುದರ ಬಗ್ಗೆ ನಾವು clarification ಕೇಳಿದ್ದೇವೆ. ಅದಕ್ಕೆ ಉತ್ತರವು ಬರಬೇಕಲ್ಲ?

**ಉಪಾಧ್ಯಕ್ಷರು:** ಬರುತ್ತದೆ. ನೀವು ಮಾತನಾಡುವುದಕ್ಕೆ ಬಿಡದೇ ಇದ್ದರೆ ಹೇಗೆ?

**ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್:** 100 ಕೋಟಿ ರೂಪಾಯಿ ಕೊಟ್ಟಿದ್ದೇವೆಂದು ಹೇಳುತ್ತಿದ್ದಾರೆ. ಅದರಿಂದ ನಮಗೆ ಸಮಾಧಾನವಾಗುವುದಿಲ್ಲ.

**ಉಪಾಧ್ಯಕ್ಷರು:** ಅವರಿಗೆ ನೀವು ಮಾತನಾಡುವುದಕ್ಕೆ ಬಿಡದಿದ್ದರೆ ಹೇಗೆ?

**ಶ್ರೀ ಬಸವರಾಜ ಬೊಮ್ಮಾಯಿ:** ಅದನ್ನು ಕಾರ್ಯಗತ ಮಾಡಿ ಯಾವಾಗ ಎಷ್ಟೆಷ್ಟು ಅವಶ್ಯಕತೆ ಇದೆಯೋ ಖಂಡಿತವಾಗಿಯೂ ಮಾಡುತ್ತೇವೆ. ಆಶ್ರಯ

ಮನೆಗೆ ನಮ್ಮ priority ಇದೆ. ಅದಕ್ಕೆ ಒದಗಿಸುತ್ತೇವೆ, ಏನೂ ತೊಂದರೆ ಇರುವುದಿಲ್ಲ.

**ಉಪಾಧ್ಯಕ್ಷರು:** ಆಯಿತು.

**ಶ್ರೀ ಬಸವರಾಜ ಬೊಮ್ಮಾಯಿ:** ಅದೇ ರೀತಿ Insurance ಬಗ್ಗೆ ಬಹಳಷ್ಟು ಜನರು ಸದಸ್ಯರು ಹೇಳಿದ್ದಾರೆ.

**ಶ್ರೀ ಬಿ. ಸುರೇಶ್‌ಗೌಡ:** ಫಲಾನುಭವಿಗಳಿಗೆ ಜನಸ್ಪಂದನ ಕಾರ್ಯಕ್ರಮದಲ್ಲಿ ನಮ್ಮ ಕೈಯಿಂದ ಕೊಡಿಸಿರುವ ಚೆಕ್‌ಗಳು ಬೌನ್ಸ್ ಆಗಿವೆ. ಅದನ್ನು ಯಾವಾಗ ಕೊಡುತ್ತೀರಿ ಅದರ ಬಗ್ಗೆ ಹೇಳಬೇಕು.

**ಶ್ರೀ ಬಸವರಾಜ ಬೊಮ್ಮಾಯಿ:** ಅದರ ಬಗ್ಗೆ ದಯವಿಟ್ಟು ವಿವರಗಳನ್ನು ಕೊಡಿ. ಅದಕ್ಕೆ ನಾವು ಪರಿಹಾರವನ್ನು ಒದಗಿಸುತ್ತೇವೆ.

**ಶ್ರೀ ಬಿ. ಸುರೇಶ್‌ಗೌಡ:** ನಾಗಮಂಗಲ ಕ್ಷೇತ್ರದ ನೆಲ್ಲಿಗೆರೆ ಪಂಚಾಯಿತಿಯಲ್ಲಿ ಹಲವಾರು ಆಗಿವೆ.

**ಶ್ರೀ ಬಸವರಾಜ ಬೊಮ್ಮಾಯಿ:** ಖಂಡಿತವಾಗಿಯೂ ಪರಿಶೀಲನೆ ಮಾಡಿ ಹಣವನ್ನು ಬಿಡುಗಡೆ ಮಾಡಿಸುತ್ತೇವೆ.

**ಶ್ರೀ ಬಿ. ಸುರೇಶ್‌ಗೌಡ:** ಸರ್ಕಾರಿ ಚೆಕ್‌ಗಳು ಬೌನ್ಸ್ ಆದರೆ ನಾವು ಏನು ಮಾಡೋಣ?

**ಉಪಾಧ್ಯಕ್ಷರು:** ಆಯಿತು, ಮಾನ್ಯ ಸಚಿವರು ಬಿಡುಗಡೆ ಮಾಡುತ್ತೇನೆಂದು ಹೇಳಿದ್ದಾರೆ.

**ಶ್ರೀ ಬಿ. ಸುರೇಶ್‌ಗೌಡ:** ಸರ್, ಇದು ಎಂತಹ ಅತಂತ್ರ ಎಂದರೆ, ಚೆಕ್‌ಬೌನ್ಸ್ ಆದರೆ ...

**ಶ್ರೀ ಬಸವರಾಜ ಬೊಮ್ಮಾಯಿ:** ಮಾನ್ಯ ಸುರೇಶ್‌ಗೌಡರೆ, ನಿಮಗೆ ಇದು ಗೊತ್ತಿರಬಹುದು, ತಾಂತ್ರಿಕ ಕಾರಣಗಳಿಂದ ಎಲ್ಲಾ ಸರ್ಕಾರಗಳಲ್ಲಿಯೂ ಚೆಕ್ ಬೌನ್ಸ್ ಆಗಿವೆ.

**ಶ್ರೀ ಬಿ. ಸುರೇಶ್‌ಗೌಡ:** ನಮ್ಮ ಮೇಲೆ ಚೆಕ್‌ಬೌನ್ಸ್ ಕೇಸನ್ನು ಸಹ ಹಾಕುವ ಹಾಗಿಲ್ಲ.

**ಉಪಾಧ್ಯಕ್ಷರು:** ಆಯಿತು.

**ಶ್ರೀ ಬಸವರಾಜ ಬೊಮ್ಮಾಯಿ:** ಮಾನ್ಯ ಸಭಾಧ್ಯಕ್ಷರೆ, insurance ಬಗ್ಗೆ ಈಗಾಗಲೇ ಬಹಳಷ್ಟು ಜನ ಸದಸ್ಯರು ಆತಂಕವನ್ನು ವ್ಯಕ್ತಪಡಿಸಿದ್ದಾರೆ. ಇಲ್ಲಿಯೂ ಕೂಡ ನಿಮ್ಮ ನೀತಿಯಲ್ಲಿ insurance ವ್ಯಾಪ್ತಿಯನ್ನು ಹೆಚ್ಚಿಸಬೇಕು ಮತ್ತು ಪರಿಣಾಮಕಾರಿಯಾಗಿ ಮಾಡಬೇಕೆಂದು ತಾವೆಲ್ಲರೂ ಹೇಳಿದ್ದೀರಿ. ಆ ಹಿನ್ನೆಲೆಯಲ್ಲಿ ಮೊದಲನೆಯದು climatic insurance ಇರಬಹುದು ಅಥವಾ crop-cutting ಮಾಡುವಂತಹ general agricultural insurance ಇರಬಹುದು. ಇವೆಲ್ಲಕ್ಕೂ ಕೂಡ ಮಳೆಮಾಪನ ಕೇಂದ್ರ ಬಹಳ ಮುಖ್ಯ. ಅದನ್ನು ಗ್ರಾಮೀಣ ಪ್ರದೇಶದಲ್ಲಿ ಪ್ರತಿಯೊಂದು ಗ್ರಾಮಪಂಚಾಯತಿಗೆ ವಿಸ್ತರಣೆ ಮಾಡುತ್ತಿರುವುದು ನಿಜವಾಗಿಯೂ ಕೂಡ ಅದು ಕ್ರಾಂತಿಕಾರಕ ಬದಲಾವಣೆಯಾಗಿದೆ ಎಂದು ನಾನು ಭಾವಿಸಿದ್ದೇನೆ. ಅದನ್ನು ಆದಷ್ಟು ಬೇಗನೆ ಮಾಡಿದರೆ ಖಂಡಿತವಾಗಿಯೂ ಒಂದು ಹೋಬಳಿಗೆ insurance ಸಿಕ್ಕಿದ್ದು ಒಂದೇ ತಾಲ್ಲೂಕಿನಲ್ಲಿ ಇನ್ನೊಂದು ಕಡೆಯಲ್ಲಿ ಸಿಗುತ್ತಿಲ್ಲ. ಆ ಅನ್ಯಾಯ ಏನು ಇದೆ, ಅದನ್ನು ಸರಿಪಡಿಸುವುದಕ್ಕೆ ಸಾಧ್ಯವಿದೆ. ಅದರ ಬಗ್ಗೆಯೂ ಕೂಡ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಉತ್ತರದಲ್ಲಿ ಹೇಳಿದ್ದಾರೆ.

**ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್:** ಇದು ಯಾವ ರೀತಿಯಾಗಿ ಉಪಯೋಗವಾಗುತ್ತದೆ ಎಂದು ತಾವು ಹೇಳಿ. ನೀವು crop-cutting insuranceಗೆ ನೀವು ಮಳೆ ಮಾಪನ ಕೇಂದ್ರ ಮಾಡಿದರೆ ಏನು? Is it rain dependent? ಮಳೆಯಾಧಾರಿತ insuranceನ್ನು ನೀವು ಕೊಡುತ್ತಿದ್ದೀರಾ? ಈ ರೀತಿಯಾಗಿ ನೀವು ಸದನಕ್ಕೆ ತಪ್ಪು ಮಾಹಿತಿಯನ್ನು ಕೊಟ್ಟರೆ ಹೇಗೆ?

**ಶ್ರೀ ಬಸವರಾಜ ಬೊಮ್ಮಾಯಿ:** ಕೇಂದ್ರ ಸರ್ಕಾರವು insurance policyಯನ್ನು ಮಾಡುವುದು. ಇದನ್ನು ನೀವು ಅರ್ಥ ಮಾಡಿಕೊಳ್ಳಿ.

**ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್:** ಅದು ಆಯಿತು.

**ಶ್ರೀ ಬಸವರಾಜ ಬೊಮ್ಮಾಯಿ:** Agricultural Insuranceಗೆ corporation ಇದೆ.

**ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್:** ಅವರಿಗೆ ಹೇಳಿ, ನೀವು ಇವತ್ತು ನೀವು ಗ್ರಾಮಪಂಚಾಯಿತಿಯ ಮಟ್ಟದಲ್ಲಿ ಮಳೆ ಮಾಪನ ಕೇಂದ್ರವನ್ನು ಮಾಡುತ್ತೇವೆಂದರೆ ಅದು ಎಲ್ಲವೂ ಸರಿಯಾಗುತ್ತದೆ ಎಂದು ನೀವು ತಪ್ಪು ಮಾಹಿತಿಯನ್ನು ಕೊಡುವುದಕ್ಕೆ ಹೋಗಬೇಡಿ. ನೀವು ಕೇಂದ್ರ ಸರ್ಕಾರವು ಮಾಡಬೇಕೆಂದು ಹೇಳುವುದನ್ನು ನಾವು ಕೇಳುತ್ತೇವೆ. ಆದರೆ ನೀವು crop-cutting insuranceಗೆ, ಮಳೆ ಮಾಪನ ಕೇಂದ್ರಕ್ಕೆ ಏನು ಸಂಬಂಧ ಇದೆ ಹೇಳಿ. How is it related?

**ಶ್ರೀ ಬಸವರಾಜ ಬೊಮ್ಮಾಯಿ:** ಸಂಬಂಧವಿಲ್ಲವೇ? ಮಳೆ ಮಾಪನಾ ಕೇಂದ್ರ ...

**ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್:** Insurance claim ಮಾಡುವುದರಲ್ಲಿ ...

**ಶ್ರೀ ಬಸವರಾಜ ಬೊಮ್ಮಾಯಿ:** ಒಂದು ನಿಮಿಷ ತಾವು ಕೇಳಿ.

**ಉಪಾಧ್ಯಕ್ಷರು:** ನೀವು ಮಧ್ಯದಲ್ಲಿ ಈ ರೀತಿಯಾಗಿ ಮಾತನಾಡಿದರೆ ಹೇಗೆ? ನೀವು ಮಾತನಾಡುವುದಕ್ಕೆ ಅನುಮತಿಯನ್ನು ತೆಗೆದುಕೊಳ್ಳುವುದಿಲ್ಲವಲ್ಲ? ಈ ರೀತಿಯಾಗಿ ತಾವು ಪ್ರಶ್ನೆಯನ್ನು ಕೇಳಿದರೆ ಅದು ದಾಖಲೆಗೆ ಹೋಗಬಾರದು ಎಂದು ಹೇಳುತ್ತೇನೆ ಅಷ್ಟೇ.

**ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್:** ನೀವು ಈ ರೀತಿಯಾಗಿ ...

**ಉಪಾಧ್ಯಕ್ಷರು:** ನೀವು ಈ ರೀತಿಯಾಗಿ ಕೇಳಿದರೆ, ನಾನು ದಾಖಲೆಗೆ ಹೋಗಬಾರದು ಎಂದು ಹೇಳುತ್ತೇನೆ.

**ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್:** ಒಂದು ನಿಮಿಷ ನಾನು ಹೇಳುತ್ತೇನೆ.

**ಉಪಾಧ್ಯಕ್ಷರು:** ಮಾನ್ಯ ಪಾಟೀಲ್‌ರವರೆ, ತಾವು ಕುಳಿತುಕೊಳ್ಳಿ. ನೀವು ಹೇಳುವುದು ದಾಖಲೆಗೆ ಹೋಗುವುದಿಲ್ಲ. ನೀವು ಏನೇ ಹೇಳಿದರೂ ಕೂಡ ಅದು ದಾಖಲೆಗೆ ಹೋಗುವುದಿಲ್ಲ. ನೀವು ಮಾತನಾಡುವುದಕ್ಕೆ ಅನುಮತಿಯನ್ನು ಸಹ ಕೇಳುವುದಿಲ್ಲ. ಮಧ್ಯೆಯಲ್ಲಿ ಎದ್ದುನಿಂತುಕೊಂಡು ಹೇಳುತ್ತಿರುತ್ತೀರಿ. Please ಕುಳಿತುಕೊಳ್ಳಿ.

**ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್:** ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸಚಿವರು ಯೀಲ್ಡ್ ಆಗಿದ್ದಾರೆ.

**ಉಪಾಧ್ಯಕ್ಷರು:** ತಾವು ಕುಳಿತುಕೊಳ್ಳಿ.

**ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್:** ನೀವು ಮಾತನಾಡುವುದಕ್ಕೆ ಯಾರಿಗೆ ಅನುಮತಿಯನ್ನು ಕೊಟ್ಟಿದ್ದೀರಿ? ಈ ಬಗ್ಗೆ ಯಾರು ಮಾತನಾಡಬೇಕು?

**ಉಪಾಧ್ಯಕ್ಷರು:** ನೀವು ಸಾಕಷ್ಟು ಮಾತನಾಡಿದ್ದೀರಿ. ಮಾನ್ಯ ಸಚಿವರು ಉತ್ತರವನ್ನು ಹೇಳುತ್ತಾರೆ.

**ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್:** ಅವರು ಯೀಲ್ಡ್ ಆಗಿದ್ದಾರೆ.

**ಉಪಾಧ್ಯಕ್ಷರು:** ಮಾನ್ಯ ಸಚಿವರೇ, ತಾವು ಯೀಲ್ಡ್ ಆಗಿದ್ದೀರಾ?

**ಶ್ರೀ ಬಸವರಾಜ ಬೊಮ್ಮಾಯಿ:** ಇಲ್ಲಾ, ಅವರಿಗೆ ನಾನು ಯೀಲ್ಡ್ ಆಗಿಲ್ಲ. ನಾನು ಇವರಿಗೆ ಯೀಲ್ಡ್ ಆಗಿದ್ದೇನೆ.

**ಶ್ರೀ ಬಂಡೆಪ್ಪ ಕಾಶೆಂಪೂರ್:** ಅವರು ನಮಗೆ ಯೀಲ್ಡ್ ಆಗಿದ್ದಾರೆ.

**(ಗೊಂದಲ)**

**ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್:** ಸರ್ಕಾರವನ್ನು ಸರಿಯಾದ ರೀತಿಯಲ್ಲಿ ತರುವುದರ ಬಗ್ಗೆ ನಾವು ಪ್ರಯತ್ನವನ್ನು ಮಾಡಿದ್ದೇವೆ. ನೀವು ದಾರಿತಪ್ಪಿಸು ಅಂದರೆ ...

**ಶ್ರೀ ಬಸವರಾಜ ಬೊಮ್ಮಾಯಿ:** ಡಾಕ್ಟರೆ ತಾವು ಕೇಳಿ. Crop-cutting Experimentಗೆ ಮೊದಲನೆಯದಾಗಿ ಏನೇನು ನ್ಯೂನತೆಗಳು ಇವೆ. ಅವುಗಳ ಬಗ್ಗೆ Statistics Department, Agriculture Department, Revenue Department ಎಲ್ಲರೂ ಸೇರಿ ಮಾಡುವಂತಹ ಕೆಲಸವಿದೆ. ಕಳೆದ ಐದು ವರ್ಷದ average ತೆಗೆದುಕೊಂಡು regular ಆಗಿ crop-cutting ಮಾಡುತ್ತಿರುತ್ತಾರೆ. ಅದರಲ್ಲಿ ಇನ್ನಷ್ಟು ಜನರನ್ನು ತೊಡಗಿಸಬೇಕಾಗಿದೆ. ಸರಿಯಾದ ರೀತಿಯಲ್ಲಿ crop-cutting insurance ಮಾಡಿ time ಪ್ರಕಾರ ಅದನ್ನು ಕೊಡಬೇಕಾಗಿದೆ. ಅದಕ್ಕೆ ಎಲ್ಲವನ್ನು ವ್ಯವಸ್ಥೆ ಮಾಡುವುದರ ಜೊತೆಗೆ ಮಳೆ ಮಾಪನಾ ಕೇಂದ್ರವನ್ನು ಗ್ರಾಮಪಂಚಾಯತಿಯ ಲೆವೆಲ್‌ನಲ್ಲಿ ಮಾಡುತ್ತೇವೆಂದು ಹೇಳಿದ್ದೇವೆ. ಇಲ್ಲಿ ಎರಡು ತರಹದ insurance ಇರುವ ಬಗ್ಗೆ ತಮಗೆ ಗೊತ್ತಿದೆಯಲ್ಲ?

**ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್:** ಎರಡು ತರಹದ insurance ಇದೆ. ತಾವು ಹೇಳುವುದನ್ನು ನಾನು ಒಪ್ಪುತ್ತೇನೆ.

**ಶ್ರೀ ಬಸವರಾಜ ಬೊಮ್ಮಾಯಿ:** ಒಂದು ಹವಾಮಾನ ಆಧಾರಿತವಾದಂತಹ insurance.

**ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್:** ಅದು ಇಡೀ ರಾಜ್ಯದಲ್ಲಿ ಇಲ್ಲ.

**ಶ್ರೀ ಬಸವರಾಜ ಬೊಮ್ಮಾಯಿ:** ಮುಂದಿನ ದಿನಗಳಲ್ಲಿ ಅತೀ ಶೀಘ್ರದಲ್ಲಿ ಅದೇ insurance ಬರುವುದು ಇದೆ. ಅದೇ ಜಾಸ್ತಿ ಜನ ರೈತರಿಗೆ ಅಳವಡಿಸುವಂತಹ ರಾಷ್ಟ್ರೀಯ ನೀತಿ ಇದೆ. ಒಂದು ನಿಮಿಷ ಕೇಳಿ. ಅದಕ್ಕಾಗಿ ನಮ್ಮ ರಾಜ್ಯ ಸರ್ಕಾರವು ಸಿದ್ಧತೆಯನ್ನು ಮಾಡಿಕೊಳ್ಳುತ್ತಿದೆ. ಅದರ ಜೊತೆಗೆ ಈಗಾಗಲೇ regular insurance ಏನಿದೆ ಅದು Agriculture Insurance Corporation of Indiaದ ನೀತಿಯಿಂದ ನಡೆಯುತ್ತಿದೆ. ಅದಕ್ಕೆ ರಾಷ್ಟ್ರಮಟ್ಟದಲ್ಲಿ ಒಂದು corporation ಇದ್ದರೆ ರಾಜ್ಯ ಮಟ್ಟದಲ್ಲಿ ಒಂದು ಕಮಿಟಿ ಇದೆ. Crop-cutting ಆಧಾರದ ಮೇಲೆ reportನ್ನು ತೆಗೆದುಕೊಳ್ಳುತ್ತೇವೆ. ಇಲ್ಲಿ ಸಮಸ್ಯೆ ಏನಾಗಿದೆ ಎಂದರೆ ಬರೀ ಲೋನ್ ತೆಗೆದುಕೊಂಡ ರೈತರು ಮಾತ್ರ

insurance ತೊಡಗಿಸುತ್ತಿದ್ದಾರೆ. Non-Loanee ರೈತರನ್ನು ಹೆಚ್ಚಿಗೆ ಮಾಡಿದರೆ ಅದರ ಲಾಭ ಸಿಗುತ್ತದೆ. ಹಾವೇರಿ ಜಿಲ್ಲೆಯ ಬಗ್ಗೆ ಕೇಳಿದರು.

**ಶ್ರೀ ಕೆ.ಎಂ. ಶಿವಲಿಂಗೇಗೌಡ:** ಸರ್ಕಾರವು ಅದನ್ನೆ ಮಾಡಿ ಎಂದು ನಾವು ಕೇಳುತ್ತಿರುವುದು.

**ಒಬ್ಬ ಮಾನ್ಯ ಸದಸ್ಯರು:** ಉತ್ತರವು ಸಮರ್ಪಕವಾಗಿಲ್ಲ.

**ಉಪಾಧ್ಯಕ್ಷರು:** ಕುಳಿತುಕೊಳ್ಳಿ.

**ಶ್ರೀ ಕೆ.ಎಂ. ಶಿವಲಿಂಗೇಗೌಡ:** ಅದನ್ನೆ ಬಗೆಹರಿಸಿ ಎಂದು ಕೇಳುತ್ತಿರುವುದು. ಅವರಿಗೆ ಸೌಲಭ್ಯ ಕೊಡಿ ಎಂದು ಕೇಳುತ್ತಿರುವುದು.

**ಶ್ರೀ ಬಂಡೆಪ್ಪ ಕಾಶೆಂಪೂರ್:** ನೀವು Telemetric Rain Gauge Systemನ್ನು ನೀವು ಪಂಚಾಯಿತಿ ಮಟ್ಟದಲ್ಲಿ ಮಾಡುತ್ತೇನೆಂದು ಹೇಳಿದ್ದೀರಿ. ಇದು ಏನು ಹೊಸದಲ್ಲ. ನಾವು 2007ರಲ್ಲಿಯೇ every ಪಂಚಾಯಿತಿಗೆ ಮಾಡುತ್ತೇವೆಂದು ಹೇಳಿದ್ದೆವು. ಈಗ ಎರಡು ವರ್ಷ ಡಿಲೇ ಮಾಡಿದ್ದೀರಿ. ಇದು ಹವಾಮಾನ insuranceಗೆ ಮಾತ್ರ ಸೀಮಿತವಾಗಿರುವುದು. ಇದು general insuranceಗೆ crop-cutting experimentಗೆ ಇದು ಹೋಬಳಿ ಲೆವೆಲ್‌ನಲ್ಲಿ ಆಗುತ್ತಿದೆಯೋ ಅದನ್ನು ಇನ್ನು ವಿಸ್ತಾರ ಮಾಡಿ. ಈಗ already ಇರುವಂತಹ staffನ್ನು ತೆಗೆದುಕೊಂಡು 20% ಹೆಚ್ಚಿಗೆ ಮಾಡಿ. ನಾವು ಆಗ ಕೆಲಸವನ್ನು ಮಾಡಿದ್ದೇವೆ. ಅದರಲ್ಲಿ ಎರಡು type insurance ಇದೆ. Long term and short term ಎಂದು ಮಾಡಿ ಎರಡು ಸಲ insurance ಹಣವನ್ನು ಕೊಡಿಸಿದ್ದೆವು. ನಮ್ಮ staffನ್ನು ಹೆಚ್ಚಿಗೆ ಮಾಡಿಕೊಳ್ಳುವುದಕ್ಕೆ ಕೇಂದ್ರ ಸರ್ಕಾರ ಬೇಕಾಗಿಲ್ಲ. ನಮ್ಮಲ್ಲಿರುವಂತಹ staffನ್ನು ಹೆಚ್ಚಿಗೆ ಮಾಡಿಕೊಂಡು ...

**ಶ್ರೀ ಬಸವರಾಜ ಬೊಮ್ಮಾಯಿ:** Staffಗಳ ಕೊರತೆಯನ್ನು ನೀಗಿಸುತ್ತೇವೆಂದು ನೀವು ಹೇಳಿರುವುದನ್ನು ನಾನು ಆಗಲೇ ಹೇಳಿದ್ದೇನೆ.

**ಶ್ರೀ ಬಂಡೆಪ್ಪ ಕಾಶೆಂಪೂರ್:** ಅದಕ್ಕೆ ಡಿಲೇ ಮಾಡುವುದು ಬೇಡ.

**ಶ್ರೀ ಬಸವರಾಜ ಬೊಮ್ಮಾಯಿ:** Staffನ್ನು ಹೆಚ್ಚಿಗೆ ಮಾಡುತ್ತೇವೆ.

**ಶ್ರೀ ಬಂಡೆಪ್ಪ ಕಾಶೆಂಪೂರ್:** ಹೋದ ಸಲ ನಾವು Short term, Long term, ಎಂದು ನಾವು ಎರಡು ಸಲ insurance ಕೊಟ್ಟಿದ್ದೇವೆ.

**ಶ್ರೀ ಬಸವರಾಜ ಬೊಮ್ಮಾಯಿ:** ಅದನ್ನು ನಾವು ಹೇಳಿದ್ದೇವೆ.

**ಶ್ರೀ ಬಂಡೆಪ್ಪ ಕಾಶೆಂಪೂರ್:** ಅದು ಕಟ್ ಆಗಿ ಒಂದೇ ಒಂದು ಸಲ insuranceನ್ನು ಕೊಡುತ್ತಿದ್ದಾರೆ.

**ಶ್ರಿ ಸಿ.ಎಂ. ಉದಾಸಿ:** ಅದರಲ್ಲಿ ಹಿಂಗಾರು ಮತ್ತು ಮುಂಗಾರು ಇದೆಯಲ್ಲವೇ?

**ಶ್ರೀ ಬಸವರಾಜ ಬೊಮ್ಮಾಯಿ:** ಹಿಂಗಾರು ಮತ್ತು ಮುಂಗಾರು ಎರಡನ್ನು ಸಹ ಕೊಡುತ್ತಾರೆ.

**ಶ್ರೀ ಸಿ.ಎಂ. ಉದಾಸಿ:** ನೀವು ತಪ್ಪು ಅರ್ಥ ಮಾಡಿಕೊಳ್ಳುವುದು ಬೇಡ.

**ಶ್ರೀ ಬಂಡೆಪ್ಪ ಕಾಶೆಂಪೂರ್:** ಅದರಲ್ಲಿ ತಪ್ಪಿಲ್ಲ.

**ಶ್ರೀ ಸಿ.ಎಂ. ಉದಾಸಿ:** ಒಂದೇ ಪ್ರಶ್ನೆಯನ್ನು ಕೇಳಿ. ಈಗ ಏನಾಗಿದೆ ಎಂದರೆ 1986ರಿಂದ 2000ದವರೆಗೆ ಬೆಳೆ ಸಾಲದ ವಿಮೆ ಮಾತ್ರ ಇತ್ತು. 2000–01ರಿಂದ ಬೆಳೆ ವಿಮೆ ಪ್ರಾರಂಭವಾಗಿದೆ. ಇದು ಪ್ರಾರಂಭವಾದಾಗ ಅದಕ್ಕೆ option ಇದೆ. ಬೆಳೆ ಸಾಲದ ವಿಮೆಯನ್ನು ಕಡ್ಡಾಯವಾಗಿ ಬ್ಯಾಂಕಿನಲ್ಲಿ ಅದು automatic ಆಗಿ ಆಗುತ್ತದೆ. ಬೆಳೆ ವಿಮೆಯನ್ನು ಮಾಡಿಸಬೇಕಾಗಿತ್ತು. ಇದಕ್ಕೆ ಜನರು ಮುಂದೆ ಬರಬೇಕಾಗಿತ್ತು. ಈಗ ಏನಾಗಿದೆ ಎಂದರೆ ಹಾವೇರಿ ಜಿಲ್ಲೆಯಲ್ಲಿ ಹೆಚ್ಚು ಜನರು ಬೆಳೆ ವಿಮೆಯನ್ನು ಮಾಡಿಸುವುದಕ್ಕೆ ಪ್ರಾರಂಭ ಮಾಡಿದ್ದಾರೆ. 2002–03 ರಿಂದ ರಾಜ್ಯದಲ್ಲಿ ಎಲ್ಲಾ ಕಡೆಯಲ್ಲಿಯೂ ಮಾಡುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಈ ವರ್ಷ 10.50 ಲಕ್ಷ ಜನರು ಬೆಳೆ ವಿಮೆ ಹಾಗೂ ಬೆಳೆ ಸಾಲದ ವಿಮೆಯನ್ನು ಸೇರಿಸಿಕೊಂಡು ಮಾಡಿಸಿದ್ದಾರೆ. ಆದರೆ ಏನಾಗಿದೆ ಎಂದರೆ ಸಾಲದ ವಿಮೆಯು 5 ಪಟ್ಟು ಜನರು ಬೆಳೆ ವಿಮೆಯನ್ನು ಮಾಡಿಸಬೇಕಾಗಿದೆ. ಉದಾಹರಣೆಗೆ ಏನಾಗಿದೆ ಎಂದರೆ, ನಮ್ಮ ಹಾವೇರಿ ಜಿಲ್ಲೆಯಲ್ಲಿ 15 ಸಾವಿರ ಜನರು ಸಾಲ ಮಾಡಿರುವವರು ಇದ್ದರೆ 75,00 ಜನರು

ಸಾಲ ಮಾಡದೆ ಇದ್ದವರು ಬೆಳೆ ವಿಮೆ ಮಾಡಿದವರು ಇದ್ದಾರೆ. ಹೀಗೆ ಇರುವುದರಿಂದ 5 ಪಟ್ಟು ಅದು ಹೆಚ್ಚಾಗಿದೆ. ಇವತ್ತು ಉತ್ತರ ಕರ್ನಾಟಕದಲ್ಲಿ ಅದು ಆಗಿಲ್ಲ. ಅಲ್ಲಿ 25,000 ಜನರು ಸಾಲದ ವಿಮೆಯನ್ನು ಮಾಡಿಸಿದವರು ಇದ್ದರೆ, ಬೆಳೆ ವಿಮೆಯನ್ನು ಮಾಡಿಸಿದವರು 6,500 ಜನರು ಇದ್ದಾರೆ.

**ಶ್ರೀ ಬಂಡೆಪ್ಪ ಕಾಶೆಂಪೂರ್:** ಅದಕ್ಕೆ Governmentನವರು ಜವಾಬ್ದಾರರು ಇದ್ದಾರೆ. ನಾನು ಹೇಳುತ್ತೇನೆ ಕೇಳಿ. ಕೆಲವು ಕಡೆಯಲ್ಲಿ ನಾವು awarenessನ್ನು ತರಬೇಕಾಗುತ್ತದೆ.

**ಶ್ರೀ ಸಿ.ಎಂ. ಉದಾಸಿ:** ಇದು ಆಗಿ 10 ವರ್ಷಗಳು ಆಗಿದೆ.

**ಶ್ರೀ ಬಂಡೆಪ್ಪ ಕಾಶೆಂಪೂರ್:** ಅದನ್ನು ತರುತ್ತಿಲ್ಲ. ಏಕೆಂದರೆ, ಬೀದರ್, ಗುಲ್ಬರ್ಗಾ ಅಲ್ಲೆಲ್ಲಾ ನಾವು ಒಂದೊಂದು ಸಾರಿ awarenessನ್ನು ತಂದು ಬಹಳಷ್ಟು ...

**ಶ್ರೀ ಸಿ.ಎಂ. ಉದಾಸಿ:** ತೊಗರಿ ಒಂದು ಸಲ ಬಂದ ಮೇಲೆ ...

**ಶ್ರೀ ಬಂಡೆಪ್ಪ ಕಾಶೆಂಪೂರ್:** ನಾನು ಪೂರ್ಣವಾಗಿ ಮುಗಿಸಿದ ಮೇಲೆ ತಾವು ಮಾತನಾಡಿ. Crop-cutting experiments ಇನ್ನು ಹೆಚ್ಚಿನ ಪ್ರಮಾಣದಲ್ಲಿ ಆಗಬೇಕು. ಅದು ಬಹಳಷ್ಟು ಮಾಡುವುದು ಇದೆ. ಆಮೇಲೆ ಕೇಂದ್ರ ಸರ್ಕಾರದ ಜೊತೆಯಲ್ಲಿ ತಮ್ಮದೇ ಆದ ಒಂದು systemನಲ್ಲಿ ಹೋಗಿದ್ದರೆ ಮುಂದಿನ ದಿನಗಳಲ್ಲಿ ಈ ರೈತರಿಗೆ ಒಳ್ಳೆಯದಾಗುತ್ತದೆ. ಮತ್ತೆ special ವಿಮೆಯ ಬಗ್ಗೆ ಬಹಳ ದೊಡ್ಡ ಚಿಂತನೆಯಾಗಿ ಅದಕ್ಕೆ ರೈತರಿಗೆ ನೇರವಾಗಿ immediate ಆಗಿ ಸಿಗುವಂತಹ ಪ್ರಯತ್ನವನ್ನು ಇಬ್ಬರು ಸೇರಿ ಮಾಡಬೇಕಾಗುತ್ತದೆ.

**ಶ್ರೀ ಬಸವರಾಜ ಬೊಮ್ಮಾಯಿ:** ಶೌಚಾಲಯಗಳ ಬಗ್ಗೆ ಬಹಳ ಮುಖ್ಯವಾಗಿದ್ದು ಬಹಳಷ್ಟು ಚರ್ಚೆಯಾಗಿದೆ. I will convince you. Don't worry.

**ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್:** Insuranceದು Horticultureಗೂ ಕೂಡ ಅಳವಡಿಸುವ ಹಾಗೆ ಮಾಡಬೇಕು.

**ಶ್ರೀ ಬಸವರಾಜ ಬೊಮ್ಮಾಯಿ:** I am not misleading.

**ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್:** ಬಾಳೆ, ಕಬ್ಬು, Horticulture Crop ಏನಿದೆ.

**(ಗೊಂದಲ)**

**ಶ್ರೀ ಬಸವರಾಜ ಬೊಮ್ಮಾಯಿ:** I am not misleading the House. You have mis-understood.

**Dr. Sharana Prakash Rudrappa Patil:** No, No, You cannot mislead the House like this.

**ಉಪಾಧ್ಯಕ್ಷರು:** ಆಯಿತು.

**ಶ್ರೀ ಬಸವರಾಜ ಬೊಮ್ಮಾಯಿ:** ಶೌಚಾಲಯಗಳ ಬಗ್ಗೆ ಬಹಳಷ್ಟು ಚರ್ಚೆಯಾಯಿತು. ಈಗಾಗಲೇ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸೇರಿ 2500 ರೂಪಾಯಿಯನ್ನು ಕೊಡುತ್ತಿದ್ದಾರೆ.

**ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್:** 2500 ರೂಪಾಯಿಯನ್ನು ಕೊಡುವುದು total sanitation programmeನಲ್ಲಿ ಕೇಂದ್ರ ಸರ್ಕಾರವು ಕೊಡುತ್ತಿದೆ. ಈ ರೀತಿಯಾದಂತಹ ತಪ್ಪು ಮಾಹಿತಿಯನ್ನು ಕೊಡಬೇಡಿ.

**ಶ್ರೀ ಬಸವರಾಜ ಬೊಮ್ಮಾಯಿ:** ಬಿಪಿಎಲ್ ಇದ್ದವರಿಗೆ ಕೊಡುವಂತಹ ಯೋಜನೆ ಇದೆ. ಅದನ್ನು ನಮ್ಮ ರಾಜ್ಯ ಸರ್ಕಾರದವರು ಇನ್ನಷ್ಟು 500 ರೂಪಾಯಿಗಳಿಗೆ ಹೆಚ್ಚಿಗೆ ಮಾಡುವುದರ ಬಗ್ಗೆ ನಾವೆಲ್ಲರೂ ತೀರ್ಮಾನವನ್ನು ಮಾಡಿದ್ದೇವೆ.

**ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್:** 3000 ರೂಪಾಯಿಯನ್ನು ಕೊಟ್ಟರೆ ಏನಾಗುತ್ತದೆ?

**ಉಪಾಧ್ಯಕ್ಷರು:** ನೀವು ಹೇಳುವುದನ್ನು ಬಿಡದಿದ್ದರೆ ಹೇಗೆ? ಡಾಕ್ಟರೆ, ನೀವು ಪ್ರತಿಯೊಂದಕ್ಕೂ ಕೇಳುತ್ತಾ ಹೋದರೆ ಹೇಗೆ?

**ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್:** ನಾವು ಜವಾಬ್ದಾರಿಯಿಂದ ಕೊಡುತ್ತಿದ್ದೇವೆ. 2500 ರೂಪಾಯಿಯನ್ನು ಕೊಡಲಾಗುತ್ತಿದೆ. ನೀವು 2500 ರೂ. ಕೊಟ್ಟು ಒಟ್ಟು 5000 ರೂಪಾಯಿಯನ್ನು ಕೊಡುತ್ತೇವೆಂದರೆ ಏನಾದರೂ problem solve ಆಗುತ್ತದೆ.

**ಉಪಾಧ್ಯಕ್ಷರು:** ನೀವು ಪ್ರತಿಯೊಂದಕ್ಕೂ ಮಾತನಾಡುವುದಕ್ಕೆ ಎದ್ದು ನಿಲ್ಲುತ್ತಿದ್ದೀರಿ?

**ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್:** ನೀವು ಪ್ರತಿಯೊಂದಕ್ಕೂ 500 ರೂಪಾಯಿಯನ್ನು ಕೊಡುತ್ತೇವೆಂದರೆ, problem solve ಆಗುವುದಿಲ್ಲ.

**ಶ್ರೀ ಬಸವರಾಜ ಬೊಮ್ಮಾಯಿ:** 1500 ರೂಪಾಯಿಯನ್ನು ಕೇಂದ್ರ ಸರ್ಕಾರದವರು ಕೊಡುತ್ತಾರೆ. 1000 ರೂಪಾಯಿಯನ್ನು ರಾಜ್ಯ ಸರ್ಕಾರದವರು ಕೊಡುತ್ತಾರೆ. ಈಗ 500 ರೂಪಾಯಿಯನ್ನು ಜಾಸ್ತಿ ಮಾಡಿದ್ದೇವೆ. 1500 ರೂಪಾಯಿಯನ್ನು ಕೇಂದ್ರ ಸರ್ಕಾರವು ಕೊಡುತ್ತದೆ. 1000 ರೂಪಾಯಿಯನ್ನು ನಾವು ಕೊಡುತ್ತಿದ್ದೆವು. ಈಗ 500 ರೂಪಾಯಿಯನ್ನು ಸೇರಿಸಿ 3,000 ರೂಪಾಯಿಗಳು ಆಗಿವೆ. ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರದ್ದು ತಲಾ 1500 ರೂಪಾಯಿಗಳು ಅಂದರೆ ಒಟ್ಟು 3000 ರೂಪಾಯಿಗಳು. ಇದು ಒಂದು ಸಾಮಾಜಿಕ ಆಂದೋಲನದ ರೀತಿಯಲ್ಲಿ ಆಗಬೇಕು. ಯಾವುದೇ ಹಿಂದಿನ ಸರ್ಕಾರವಾಗಲಿ, ಈಗಿನ ಸರ್ಕಾರವೇ ಆಗಲಿ, ಅಥವಾ ಕೇಂದ್ರ ಸರ್ಕಾರವೇ ಆಗಲಿ, ಇಷ್ಟು ದೊಡ್ಡ ಪ್ರಮಾಣ ಇದ್ದಾಗ ಸಮಸ್ಯೆ ಇದ್ದಾಗ ಅದು ಆಂದೋಲನದ ರೂಪದಲ್ಲಿಯಾಗಬೇಕು. ಅದರಲ್ಲಿ ಸಮಾಜ, ಶಾಸಕರು ಎಲ್ಲರೂ ಸೇರಬೇಕು. ಈಗ ಉದಾಹರಣೆಗೆ ನಮ್ಮ ಪ್ರಕಾಶ್ ಹುಕ್ಕೇರಿಯವರು ನಿಮ್ಮ ಪಕ್ಷದವರು ಇದ್ದಾರೆ. ಶೌಚಾಲಯಕ್ಕೆ ತಮ್ಮ ಎಂಎಲ್ಎ ಫಂಡ್ ...

**ಶ್ರೀ ಬಂಡೆಪ್ಪ ಕಾಶೆಂಪೂರ್:** ಎಂಎಲ್ಎ ಫಂಡ್ ...

**ಉಪಾಧ್ಯಕ್ಷರು:** ಅವರು ಹೇಳುವುದಕ್ಕೆ ಅವಕಾಶವನ್ನು ಕೊಡಿ.

**ಶ್ರೀ ಬಂಡೆಪ್ಪ ಕಾಶೆಂಪೂರ್:** ನಾವು ಕೊಟ್ಟಿಬಿಡುತ್ತೇವೆ. ನಾನು ನೀವು ಮಾಡುವ ಒಳ್ಳೆಯ ಕೆಲಸದ ಬಗ್ಗೆ immediate ಆಗಿ ಹೇಳುತ್ತಿದ್ದೇನೆ.

**ಉಪಾಧ್ಯಕ್ಷರು:** ಅವರು ಹೇಳುವುದಕ್ಕೆ ಅವಕಾಶವನ್ನು ಕೊಡದೆ ಇದ್ದರೆ ಹೇಗೆ?

**ಶ್ರೀ ಬಸವರಾಜ ಬೊಮ್ಮಾಯಿ:** ನೀವು ಮಂತ್ರಿಗಳಾಗಿ ಹಿಂದೆ ಕೆಲಸವನ್ನು ಮಾಡಿದ್ದೀರಿ. ನೀವು ಈ ರೀತಿಯಾಗಿ ಮಾಡಬಾರದು.

**ಶ್ರೀ ಬಂಡೆಪ್ಪ ಕಾಶೆಂಪೂರ್:** ತಮಗೆ ನಾನು ನೆರವಾಗುತ್ತಿದ್ದೇನೆ.

**ಶ್ರೀ ಬಸವರಾಜ ಬೊಮ್ಮಾಯಿ:** ನಮಗೆ ನೆರವು ಬೇಕಾಗಿಲ್ಲ.

**ಶ್ರೀ ಬಂಡೆಪ್ಪ ಕಾಶೆಂಪೂರ್:** ಶಾಸಕರು ...

**ಉಪಾಧ್ಯಕ್ಷರು:** ನೀವು ಅನುಮತಿಯನ್ನು ಸಹ ಕೇಳುವುದಿಲ್ಲ. ನಿಮ್ಮಿಷ್ಟಕ್ಕೆ ಎದ್ದು ಉತ್ತರವನ್ನು ಹೇಳುತ್ತಿದ್ದರೆ where is the end for it?

**ಶ್ರೀ ಬಂಡೆಪ್ಪ ಕಾಶೆಂಪೂರ್:** ಅವರ ಹತ್ತಿರ ನಾನು ದುಡ್ಡನ್ನು ಕೇಳುತ್ತಿಲ್ಲ.

**(ಗೊಂದಲ)**

**ಶ್ರೀ ಬಸವರಾಜ ಬೊಮ್ಮಾಯಿ:** ಈಗಾಗಲೇ ಪ್ರಕಾಶ್ ಹುಕ್ಕೇರಿಯವರು ಶಾಸಕರ ನಿಧಿಯನ್ನು ಬಳಕೆ ಮಾಡಿ ಮತ್ತಿತರೆ ತಮ್ಮ ದುಡ್ಡನ್ನು ಬಳಕೆ ಮಾಡಿ ದೊಡ್ಡ ಪ್ರಮಾಣದ ಆಂದೋಲನವನ್ನು ಅವರ ಕ್ಷೇತ್ರದಲ್ಲಿ ಮಾಡಿದ್ದಾರೆ.

**(ಗೊಂದಲ)**

**ಶ್ರೀ ಮಾಲೀಕಯ್ಯ ಗುತ್ತೇದಾರ್:** ಶಾಸಕರ ದುಡ್ಡನ್ನು on-line schemeನಲ್ಲಿ ತೆಗೆದುಕೊಳ್ಳಲಿಕ್ಕೆ ಬರುವುದಿಲ್ಲ. ಹೊಸದಾಗಿ ತೆಗೆದುಕೊಳ್ಳಬೇಕಾಗುತ್ತದೆ.

**ಶ್ರೀ ಬಸವರಾಜ ಬೊಮ್ಮಾಯಿ:** ಆಯಿತು, ಹೊಸದಾಗಿ ತೆಗೆದುಕೊಳ್ಳಿ. ನಿಮಗೇನು ಬೇಕು ಅದನ್ನು ಮಾರ್ಪಾಡು ಮಾಡಿ ಕೊಡೋಣ.

(ಗೊಂದಲ)

**ಉಪಾಧ್ಯಕ್ಷರು:** MLA Grant ಅನ್ನು ಯಾವ ರೀತಿ ಕೊಡಬೇಕೆಂಬುದಕ್ಕೆ ಗೈಡ್‌ಲೈನ್ಸ್ ಇದೆ. ಅದು ನಮಗೆ ನಿಮಗೆ ಎಲ್ಲರಿಗೂ ಗೊತ್ತಿದೆ. There is a guideline. ಅದನ್ನು ಎಂ.ಎಲ್.ಎ. ಗ್ರಾಂಟ್ ವಿಷಯ ಬಂದಾಗ ಮಾತನಾಡಿ. ಬೇಗ ಉತ್ತರ ಮುಗಿಸಿ.

(ಗೊಂದಲ)

**ಶ್ರೀ ಬಸವರಾಜ ಬೊಮ್ಮಾಯಿ:** ಹೇಳಿ, ನೀವು ಮಾಡಿರುವುದನ್ನು ಹೇಳಿ.

**ಉಪಾಧ್ಯಕ್ಷರು:** ಆಯಿತು, ಕುಳಿತುಕೊಳ್ಳಿ.

(ಗೊಂದಲ)

**ಶ್ರೀ ಬಂಡೆಪ್ಪ ಕಾಶೆಂಪೂರ್:** ಸಾಮೂಹಿಕವಾಗಿ ನಾವು ಕೊಡುತ್ತಿದ್ದೇವೆ. ಇದು ಬಹಳ ಮುಖ್ಯವಾದುದು. Individual ಆಗಿ ಮಾತನಾಡುತ್ತಿದ್ದೇವೆ. ಇದರ ಬಗ್ಗೆ ಸದನದಲ್ಲಿ ಕ್ಲಾರಿಫೈ ಮಾಡಿದರೆ ಇಡೀ ರಾಜ್ಯದಲ್ಲಿ ಜನತೆಗೆ ಅನುಕೂಲವಾಗುತ್ತದೆ.

(ಗೊಂದಲ)

**ಉಪಾಧ್ಯಕ್ಷರು:** ಈಗ ಗೈಡ್‌ಲೈನ್ಸ್ ಬಿಟ್ಟು ಯಾರಿಗೂ ಕೊಡಲಿಕ್ಕಾಗುವುದಿಲ್ಲ.

**ಶ್ರೀ ಬಸವರಾಜ ಬೊಮ್ಮಾಯಿ:** ನಮ್ಮ ರಾಜ್ಯದಲ್ಲಿ ಈಗ waste land ಏನಿದೆ ಅದನ್ನು ಅಭಿವೃದ್ಧಿ ಮಾಡುವ ಸಲುವಾಗಿ 'ಹಸಿರು ವನ' ಎಂಬ ಕಾರ್ಯಕ್ರಮವನ್ನು ಹೊಸದಾಗಿ ರೂಪಿಸಿದ್ದೇವೆ. ನೀವೇನು ಮಾಡಿದ್ದೀರಿ ಎಂದು ಹೇಳಿದಿರಿ? ಇವತ್ತು ಆ ಒಂದು ಪ್ರದೇಶದಲ್ಲಿ ಎಲ್ಲೆಲ್ಲಿ ರೈತರು ಮುಂದೆ ಬರುತ್ತಾರೆ ಅವರಿಗೆ ಸಸಿಯನ್ನು ಕೊಡುವುದರ ಜೊತೆಗೆ ಬೀಜ ಉತ್ಪಾದನೆ

ಏನಾಗುತ್ತದೆ ಅದಕ್ಕೂ ಕೂಡ ಪ್ರೋತ್ಸಾಹ ಧನವನ್ನು ಕೊಡುವುದಾಗಿ ಹೇಳಿದ್ದೇವೆ. ಎಲ್ಲಾ ತಾಲ್ಲೂಕುಗಳಿಗೆ ಕೊಟ್ಟಿದ್ದೇವೆ. ಆದುದರಿಂದ ಇವತ್ತು ನಮ್ಮ dry landನಲ್ಲಿರುವಂಥ waste land ನಮ್ಮ ರೈತರಲ್ಲಿ ಬೇಕಾದಷ್ಟಿರುತ್ತದೆ. ಅದನ್ನು ಅವರು ತಮ್ಮ ವ್ಯಾಪ್ತಿಯಲ್ಲಿರುವಂಥ ಜಮೀನನ್ನು ಬಳಕೆ ಮಾಡುವುದಕ್ಕೆ ಪ್ರೋತ್ಸಾಹವನ್ನು ಕೊಡುತ್ತಿದ್ದೇವೆ. ಈ ರೀತಿ ಹತ್ತು ಹಲವಾರು ಯೋಜನೆಗಳನ್ನು ಇವತ್ತು ನಾವು ಮಾಡಿದ್ದೇವೆ. ಗ್ರಾಮೀಣ ರಸ್ತೆಯ ಬಗ್ಗೆ ಈಗಾಗಲೇ ಚರ್ಚೆಯಾಗಿದೆ. ಪುನಃ ನಾನು ಚರ್ಚಿಸಲಿಕ್ಕೆ ಹೋಗುವುದಿಲ್ಲ. ಆದ್ದರಿಂದ ಇವತ್ತು ಸಂಪೂರ್ಣವಾಗಿ ಗ್ರಾಮೀಣ ಮತ್ತು ರೈತರ ಅಭಿವೃದ್ಧಿಗೆ ಒಂದು ದಿಟ್ಟವಾದಂಥ ಹೆಜ್ಜೆ ಸರಿಯಾದ ದಿಕ್ಕಿನಲ್ಲಿ ನಮ್ಮ ಮುಖ್ಯಮಂತ್ರಿಗಳೂ ಹಾಗೂ ನಮ್ಮ ಸರ್ಕಾರ ಇಟ್ಟಿದೆ. ಇನ್ನೂ ಹತ್ತು ಹಲವಾರು ಸಲಹೆಗಳನ್ನು ತಾವು ಕೊಟ್ಟಿದ್ದೀರಿ. ನಮ್ಮ ಮುಖ್ಯಮಂತ್ರಿಗಳೂ ಅವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ಮಾಡುತ್ತೇವೆಂದು ಭಾಷಣದ ಕೊನೆಯಲ್ಲಿ ಹೇಳಿದ್ದಾರೆ. ಅದಕ್ಕೆ ನಿರಂತರವಾಗಿ ಆಗಬೇಕೆನ್ನುವುದು ನಮ್ಮ ಕಲ್ಪನೆ ಇದೆ. ಒಂದೇ ಚರ್ಚೆಯಲ್ಲಿ, ಒಂದೇ ದಿವಸದಲ್ಲಿ ಸಾಧನೆ ಮಾಡಲಿಕ್ಕಾಗುವುದಿಲ್ಲ. ನಮ್ಮ ಜಯಚಂದ್ರರವರು "Rome cannot be built in a day" ಎಂದು ಹೇಳಿದರು. ಆದ್ದರಿಂದ ನಾನು ಮೊದಲೇ ಹೇಳಿದೆ, dynamic problem, ಇದು static ಅಲ್ಲವೆಂದು. ಆದ್ದರಿಂದ ಇವತ್ತು ನೀವು ಇನ್ನಷ್ಟು ಸಲಹೆ ಸೂಚನೆಗಳನ್ನು ಕೊಟ್ಟಿದ್ದೀರಿ. ಅವುಗಳನ್ನು ಮುಖ್ಯಮಂತ್ರಿಗಳ ಉನ್ನತ ಸಮಿತಿಯಲ್ಲಿ ಅವೆಲ್ಲವನ್ನು ಇಟ್ಟು ಪರಿಶೀಲನೆ ಮಾಡಿ ಮುಂದಿನ ದಿನಗಳಲ್ಲಿ ಅದಕ್ಕೆ ಬಜೆಟ್‌ನಲ್ಲಿ ಹಣವನ್ನು ಒದಗಿಸಿ ಕೃಷಿ ನಮ್ಮ ಆದ್ಯತೆ, ಕೃಷಿ ನಮ್ಮ ಗುರಿ, ಕೃಷಿ ನಮ್ಮ ಉಸಿರು, ಹಸಿರೇ ನಮ್ಮ ಉಸಿರು ಎಂಬುದು ನಮ್ಮ ಸರ್ಕಾರದ ನೀತಿ ಇದೆ. ಆ ನಿಟ್ಟಿನಲ್ಲಿ ಒಂದು ದೊಡ್ಡ ಹೆಜ್ಜೆಯನ್ನು ಇವತ್ತು ನಾವಿಟ್ಟಿದ್ದೇವೆ. ನೀವೆಲ್ಲ ಸಲಹೆಗಳನ್ನು ಕೊಟ್ಟಿದ್ದೀರಿ, ನಿಮಗೂ ಕೂಡ ಧನ್ಯವಾದಗಳನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

**ಡಾ: ಶರಣಪ್ರಕಾಶ್ ಪಾಟೀಲ್:** ಈಗ ಹಣದ ಮೂಲ ಹೇಳಿ, ಉತ್ತರವಂತೂ ಸಂಪೂರ್ಣವಾಗಿ ಸಮರ್ಪಕವಾಗಿರಲಿಲ್ಲ. ಏನೋ ಗಾಳಿಯಲ್ಲಿ ಗೋಪುರ ಕಟ್ಟಿದ್ದೀರಿ ಅಷ್ಟೆ.

**ಉಪಾಧ್ಯಕ್ಷರು:** ಪ್ಲೀಸ್, ಕುಳಿತುಕೊಳ್ಳಿ.

**ಶ್ರೀ ಹೆಚ್.ಡಿ. ರೇವಣ್ಣ:** ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಯವರ ಪರವಾಗಿ ಮಾನ್ಯ ನೀರಾವರಿ ಮಂತ್ರಿಗಳು ಸುದೀರ್ಘವಾಗಿ ಉತ್ತರ ಕೊಟ್ಟಿದ್ದಾರೆ, ಆದರೆ ಅದರಲ್ಲೇನು ಮಾಡಿದ್ದಾರೆಂದು ಹೇಳಬೇಕಾದರೆ, 37ರಲ್ಲಿ ಐದು ಆರಕ್ಕೆ ಕೊಟ್ಟು ಉಳಿದವುಗಳನ್ನು ತೇಲಿಸಿ ಬಿಟ್ಟರು. ಏಕೆಂದರೆ ಇದು ಭವಿಷ್ಯದ ಹೆಜ್ಜೆಗಳಲ್ಲ. ಏಕೆಂದರೆ ಯಾವುದಕ್ಕಾದರೂ ಒಂದಕ್ಕೆ ಹಣವನ್ನು ಇಟ್ಟಿದ್ದೀರಾ, ಎಲ್ಲಿ, ಯಾವ ಮೂಲದಿಂದ ಹಣ ಬರುತ್ತದೆ?

**(ಗೊಂದಲ)**

**ಉಪಾಧ್ಯಕ್ಷರು:** ಈಗ clarificationಗೆ ಮತ್ತೆ clarification ಕೇಳುವುದು ಎಲ್ಲಿದೆ? No, ಮೂರು ದಿವಸಗಳಿಂದ ಏನು ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬಗ್ಗೆ ಚರ್ಚೆ ಮಾಡಿದೆ ಆ ಚರ್ಚೆಯನ್ನು ಇಲ್ಲಿಗೆ ಮುಕ್ತಾಯಗೊಳಿಸಲಾಗಿದೆ. ದಯವಿಟ್ಟು ನಿಲುವಳಿ ಸೂಚನೆಯನ್ನು ನಾಳೆ ಪ್ರಸ್ತಾಪ ಮಾಡಿ.

ಈಗ ಸದನವನ್ನು ನಾಳೆ ಬೆಳಿಗ್ಗೆ 11.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

**(ಸದನವು ರಾತ್ರಿ 7.25 ಗಂಟೆಗೆ ಮುಕ್ತಾಯಗೊಂಡು ಪುನಃ ದಿನಾಂಕ: 15ನೇ ಸೆಪ್ಟೆಂಬರ್ 2009ರ ಮಂಗಳವಾರ ಬೆಳಿಗ್ಗೆ 11.00 ಗಂಟೆಗೆ ಸೇರುವಂತೆ ನಿಃಶ್ಚಯಿಸಿತು).**

*****

ಕರ್ನಾಟಕ ವಿಧಾನಸಭೆ

ಮಂಗಳವಾರ 15ನೇ ಸೆಪ್ಟೆಂಬರ್ 2009ರಂದು

ಸದನವು ವಿಧಾನ ಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 11 ಗಂಟೆ 25 ನಿಮಿಷಕ್ಕೆ ಸಮಾವೇಶಗೊಂಡಿತ್ತು.

ಅಧ್ಯಕ್ಷರು ಶ್ರೀ ಜಗದೀಶ್ ಶೆಟ್ಟರ್‌ರವರು ಪೀಠವನ್ನು ಅಲಂಕರಿಸಿದ್ದರು.

**11–00 AM**

**ಅಧ್ಯಕ್ಷರು:** ಈಗ Rule 69ರ ಅಡಿಯಲ್ಲಿ ಬರಗಾಲಕ್ಕೆ ಸಂಬಂಧಪಟ್ಟ ಹಾಗೆ ಚರ್ಚೆ ಪ್ರಾರಂಭ ಮಾಡಿ.

**ಶ್ರೀ ಹೆಚ್.ಡಿ. ರೇವಣ್ಣ:** ಮಾನ್ಯ ಅಧ್ಯಕ್ಷರೆ, ನಿಲುವಳಿ ಸೂಚನೆ ಮೇಲೆ ಚರ್ಚಿಸಲು ನಾನೊಂದು ನೋಟೀಸ್ ಕೊಟ್ಟಿದ್ದೇನೆ.

**ಅಧ್ಯಕ್ಷರು:** ಅದನ್ನು ಮಧ್ಯಾಹ್ನದ ಮೇಲೆ ತೆಗೆದುಕೊಳ್ಳೋಣ.

**ಶ್ರೀ ಹೆಚ್.ಡಿ. ರೇವಣ್ಣ:** ಈ ಬಗ್ಗೆ ಈಗ ನಾನು ಎರಡು ನಿಮಿಷ ಪ್ರಸ್ತಾವನೆ ಮಾಡುತ್ತೇನೆ.

**ಅಧ್ಯಕ್ಷರು:** ನೀವು ಈ ಬಗ್ಗೆ 5 ನಿಮಿಷ preliminary submission ಮಾಡಿ, ಆಮೇಲೆ, I will take decision.

**ಶ್ರೀ ಟಿ. ಬಿ. ಜಯಚಂದ್ರ:** ಮಾನ್ಯ ಅಧ್ಯಕ್ಷರೆ, ಅಧಿವೇಶನ ಇವತ್ತು ಮತ್ತು ನಾಳೆ ಮಾತ್ರ ಇದೆ. ನಾವು ಮತ್ತು ಆ ಪಕ್ಷದವರು ನಿಲುವಳಿ ಸೂಚನೆ ಮೇಲೆ ಚರ್ಚಿಸಲು ನೋಟೀಸ್ ಕೊಟ್ಟಿದ್ದೇವೆ. ಅದರ ಜೊತೆಗೆ, ಬರದ ಬಗ್ಗೆ ಚರ್ಚೆಯಾಗಬೇಕು. ಇದನ್ನು ಯಾವ ರೀತಿಯಾಗಿ ತಾವು manage ಮಾಡುತ್ತೀರಿ? ಏಕೆಂದರೆ, ನಾಳೆಯೊಳಗಡೆ ಎಲ್ಲವೂ ಮುಗಿಯಬೇಕು.

**ಅಧ್ಯಕ್ಷರು:** ಜಯಚಂದ್ರರವರೆ, ಇವತ್ತು ರೇವಣ್ಣನವರೇನು subject move ಮಾಡಿದ್ದಾರೆ ಅದನ್ನು ತೆಗೆದುಕೊಳ್ಳೋಣ. ಮಧ್ಯಾಹ್ನದ ಮೇಲೆ ಅದನ್ನು ಚರ್ಚೆ ಮಾಡೋಣ. ಇದಾದ ತಕ್ಷಣ ಬರದ ಮೇಲಿನ ಚರ್ಚೆಯಲ್ಲಿ

ಮಾನ್ಯ ಶಾಸಕರು ಯಾರ್ಯಾರು ಭಾಗವಹಿಸುತ್ತಾರೆ ಅವರೆಲ್ಲ ಭಾಗವಹಿಸಲಿ. ನೀವು ಕೊಟ್ಟಿರುವ ನಿಲುವಳಿ ಸೂಚನೆಯನ್ನು ನಾಳೆ ಬೆಳಗ್ಗೆ ತೆಗೆದುಕೊಳ್ಳೋಣ.

**ಶ್ರೀ ಟಿ. ಬಿ. ಜಯಚಂದ್ರ:** ಆಯಿತು.

**1. ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿ ಚರ್ಚೆ:**

**ವಿಷಯ:** ಕರ್ನಾಟಕ ವಿದ್ಯುತ್ ನಿಗಮ ನಿಯಮಿತ ಸಂಸ್ಥೆಯು ನಿಯಮಬಾಹಿರವಾಗಿ **M/s Bhatia International Ltd., Indore ಹಾಗೂ Chennai ಸಂಸ್ಥೆಗಳಿಂದ MMTC, Bangalore ಇಲ್ಲಿಗೆ ಆಮದು ಕಲ್ಲಿದ್ದಲನ್ನು ಖರೀದಿಸಿರುವ ಬಗ್ಗೆ.**

**ಶ್ರೀ ಹೆಚ್.ಡಿ. ರೇವಣ್ಣ (ಹೊಳೆನರಸೀಪುರ):** ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದ ಜನತೆ ವಿದ್ಯುತ್ ಸಂಕಷ್ಟದಲ್ಲಿರುವಾಗ ಕರ್ನಾಟಕ ವಿದ್ಯುತ್ ನಿಗಮ ನಿಯಮಿತ ಸಂಸ್ಥೆಯು ನಿಯಮಬಾಹಿರವಾಗಿ M/s Bhatia International Ltd., Indore ಹಾಗೂ Chennai ಈ ಸಂಸ್ಥೆಗಳಿಂದ MMTC, Bangalore ಇಲ್ಲಿಗೆ ಆಮದು ಕಲ್ಲಿದ್ದಲನ್ನು ಖರೀದಿಸಿರುವ ಬಗ್ಗೆ ಈಗಾಗಲೇ ಪತ್ರಿಕೆಗಳಲ್ಲಿ, ವಿದ್ಯುನ್ಮಾನಗಳಲ್ಲಿ ಪ್ರಕಟವಾಗಿರುವಂತೆ ಸುಮಾರು ಕೋಟ್ಯಾಂತರ ರೂಪಾಯಿಗಳು ರಾಜ್ಯದ ಬೊಕ್ಕಸಕ್ಕೆ ನಷ್ಟವಾಗಿರುವ ಬಗ್ಗೆ ನಾನು ತಮ್ಮ ಗಮನಕ್ಕೆ ತರಲು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇನೆ. M/s Bhatia International Ltd., ಸಂಸ್ಥೆಯಿಂದ ಕಲ್ಲಿದ್ದಲನ್ನು ಖರೀದಿಸಿರುವ ಬಗ್ಗೆ Karnataka Power Corporationನಲ್ಲಿ ದಿನಾಂಕ: 31–05–2005ರಲ್ಲಿ tender Notification ಹೊರಡಿಸಿದರು 15% ಪ್ಲಸ್ or ಮೈನಸ್ 6 ಲಕ್ಷ ಟನ್ ಇದೆ. ನಮ್ಮ ರಾಯಚೂರು ಘಟಕದಲ್ಲಿ ನೂರಕ್ಕೆ 80ರಷ್ಟು Indian Coal ಬೇಕಾಗುತ್ತದೆ. ಇಲ್ಲಿರುವ Boilerಗೆ import coal adjust ಆಗುವುದಿಲ್ಲ. ಆದರೆ, maximum 10% or 15% ಆಮದು ಕೋಲ್ ಉಪಯೋಗಿಸಬಹುದಷ್ಟೆ. ಹಾಗಾಗಿ, ಒಂದು ತಿಂಗಳಿಗೆ 50–60 ಸಾವಿರ ಟನ್ ಆಮದು ಕೋಲ್ ಬೇಕಾಗಬಹುದು. ಆದರೆ, ಇವರು 12 ಲಕ್ಷ ಟನ್ ಕೋಲ್ ಅನ್ನು ಒಟ್ಟಿಗೆ ಖರೀದಿ ಮಾಡಿದ್ದಾರೆ. ದಿನಾಂಕ: 13–08–2008ರಲ್ಲಿ M/s Bhatia

International Ltd., ರವರಿಂದ 15% plus or minus 6 lakhs tonne, ದಿನಾಂಕ:20–08–2008ರಲ್ಲಿ MMTC ಗೆ 6 ಲಕ್ಷ ಟನ್ ಕೋಲ್ ಅನ್ನು direct allotment ಮಾಡಿದ್ದಾರೆ. ಒಟ್ಟು 12 ಲಕ್ಷ ಟನ್ ಕೋಲ್‌ಗೆ ದಿನಾಂಕ: 13/8/2008ರಲ್ಲಿ ಆದೇಶವನ್ನು ಕೊಟ್ಟಿದ್ದಾರೆ. ದಿನಾಂಕ: 20–08–2008ರಲ್ಲಿ MMTC ಗೆ without tender ಆದೇಶ ಕೊಟ್ಟಿದ್ದಾರೆ. M/s Bhatia Internataional Ltd., ನಿಂದ MMTCಗೆ ಕೊಡುವ ಸಂದರ್ಭದಲ್ಲಿ 15% ಕಡಿಮೆಯಾದರೂ ತೆಗೆದುಕೊಳ್ಳಬಹುದು ಅಥವಾ ಜಾಸ್ತಿಯಾದರೂ ತೆಗೆದುಕೊಳ್ಳಬಹುದು. ಅಂದರೆ 6 ಲಕ್ಷದ 90 ಸಾವಿರ ಟನ್ ಆದರೂ ತೆಗೆದುಕೊಳ್ಳಬಹುದು, 5 ಲಕ್ಷದ 10 ಸಾವಿರ ಟನ್‌ಗಾದರೂ ನಿಲ್ಲಿಸಬಹುದು. ಆದರೆ ಟೆಂಡರ್ condition ಹಾಕುವುದರಲ್ಲಿಯೂ ಅಧಿಕಾರಿಗಳು ಯಾವ ರೀತಿ ಮಾಡಿದ್ದಾರೆಂದರೆ, ಯಾವಾಗಲೂ tender condition ನಲ್ಲಿ rate ಇಳಿದ ಹಾಗೆ rate ಹಾಕಬೇಕಾಗುತ್ತದೆ. ಅದನ್ನೂ ಹಾಕಲಿಲ್ಲ. ಏನಾಗಿದೆ ಎಂದರೆ, ಮೊಲನೆಯದಾಗಿ tender ಹಾಕಿರುವುದೇ ತಪ್ಪು. ಅದನ್ನು ಕಾನೂನು ಬಾಹಿರವಾಗಿಯೇ ಕೊಟ್ಟಿದ್ದಾರೆ. M/s. Bhatia International Ltd., ರವರು ಮೂರು ಸಲ tender ಹಾಕಿದ್ದರು. ಮೂರು ಸಲ ಮೊರು ತಿಂಗಳು, ಎರಡು ತಿಂಗಳು ಮುಂದಕ್ಕೆ ಹಾಕಿದರು. ಆಗಸ್ಟ್ 13ನೇ ತಾರೀಖು ಕೊಟ್ಟರೆ ಅಕ್ಟೋಬರ್‌ನಲ್ಲಿ ಒಂದೇ ಸಾರಿ ರೂ. 7889 ದರ ಇದ್ದದ್ದು ರೂ.5000 ಚಿಲ್ಲರೆ ರೂ.ಗೆ ಬಂತು. ಅವರು ರೂ. 7899ಕ್ಕೆ ಕೊಟ್ಟಿದ್ದಾರೆ. ಅದನ್ನು ಕೊಟ್ಟಮೇಲೆ ಅದು 2899 ರೂಪಾಯಿ ಕಡಿಮೆ ಆಯಿತು. ಇದರಲ್ಲಿ ನಾನು ತಮ್ಮ ಗಮನಕ್ಕೆ ತರುವುದು ಇಷ್ಟೆ. KPCL ನ Finance Director, including Managing Director, Managing Directorರವರು 4 ಪುಟಗಳ ಲೆಟರ್ ಬರೆದಿದ್ದಾರೆ. ಆ ಆದೇಶದ ಕಾಪಿಯನ್ನು ತಮಗೆ ಕಳುಹಿಸಿಕೊಡುತ್ತೇನೆ. ಇದಾದ ಮೇಲೂ ಸಹ ಮುಖ್ಯಮಂತಿಯವರು ಏನು ಮಾಡುತ್ತಾರೆಂದರೆ, ಅವರ ಮನೆಯಿಂದ KPTCL MD, Finance Director ರವರು ಸಂಸ್ಥೆಗೆ ಕೋಟ್ಯಾಂತರ ರೂಪಾಯಿ ನಷ್ಟವಾಗುತ್ತದೆ, ಇದನ್ನು

ಕಾನೂನುಬಾಹಿರವಾಗಿ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ ಎಂದು ಹೇಳುತ್ತಾರೆ. ಅದರಲ್ಲಿ ಹೇಳಿರುವ ಪದವನ್ನೇ ತಮಗೆ ಹೇಳಿಬಿಡುತ್ತೇನೆ.

**ಅಧ್ಯಕ್ಷರು:** ರೇವಣ್ಣನವರೆ, detail ಆಗಿ ಚರ್ಚೆಯನ್ನು ಮಧ್ಯಾಹ್ನದ ನಂತರ ಮಾಡಿ.

**ಶ್ರೀ ಹೆಚ್.ಡಿ. ರೇವಣ್ಣ:** ನಾನೀಗ submission ಮಾಡುತ್ತಿದ್ದೇನೆ.

**ಅಧ್ಯಕ್ಷರು:** ಈಗ ಮುಖ್ಯಮಂತ್ರಿಯವರು ಸದನದಲ್ಲಿ ಇಲ್ಲ. ಅವರು ನನ್ನ permission ತೆಗೆದುಕೊಂಡು ಮೈಸೂರಿಗೆ ಹೋಗಿದ್ದಾರೆ.

**ಶ್ರೀ ಹೆಚ್.ಡಿ. ರೇವಣ್ಣ:** ನಾನು 10 ನಿಮಿಷ submission ಮಾಡಿ ಬಿಡುತ್ತೇನೆ.

**ಅಧ್ಯಕ್ಷರು:** ನಿಮ್ಮಲ್ಲಿ ನನ್ನದೊಂದು request ಎಂದರೆ ಅದನ್ನೆಲ್ಲ ಮುಖ್ಯಮಂತ್ರಿಯವರು ಸದನದಲ್ಲಿದ್ದಾಗ discuss ಮಾಡಿ. ತಾವು ಮುಖ್ಯಮಂತ್ರಿಯವರ ಪತ್ರವನ್ನು refer ಮಾಡುತ್ತಿದ್ದೇನೆ. ಅವರು ಸದನದಲ್ಲಿದ್ದಾಗ ಇದನ್ನು ಪ್ರಸ್ತಾಪ ಮಾಡಿದರೆ ಒಳ್ಳೆಯದು.

**ಶ್ರೀ ಆರ್. ಅಶೋಕ್, ಸಾರಿಗೆ ಸಚಿವರು:** ಮಾನ್ಯ ಸದಸ್ಯರು ವಿಷಯ ಪ್ರಸ್ತಾಪ ಮಾಡಿದ್ದಾರೆ. ಅವರು ಈಗಲೇ detail ಆದ ಚರ್ಚೆಗೆ ಹೋಗುತ್ತಿದ್ದಾರೆ. ಅದು ಸರಿಯಲ್ಲ.

**ಅಧ್ಯಕ್ಷರು:** ಅದಕ್ಕೆ ನಾನು ಹೇಳಿದ್ದು. ತಾವು ಮುಖ್ಯಮಂತ್ರಿಗಳ ಪತ್ರವನ್ನು refer ಮಾಡುತ್ತಿದ್ದಾರೆ. ಅವರು ಈಗ ಸದನದಲ್ಲಿಲ್ಲ. ಅವರು ಮಧ್ಯಾಹ್ನದ ನಂತರ ಬರುತ್ತೇನೆಂದು ಹೇಳಿದ್ದಾರೆ.

**ಶ್ರೀ ಹೆಚ್.ಡಿ. ರೇವಣ್ಣ:** ಆಯಿತು. ಮೂರು ದಿನಗಳ ಅಧಿವೇಶನ ಕರೆದ ಉದ್ದೇಶವೇನು? ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಇಲಾಖೆ ಮೇಲೆ ಚರ್ಚಿಸಲು ಸದನ ಕರೆದಿರುವುದು. ಅದು ಪತ್ರಿಕೆಯಲ್ಲಿ ಬಂದ ತಕ್ಷಣ ಮುಖ್ಯಮಂತ್ರಿಗಳು ನಿನ್ನೆ ಚರ್ಚೆಯೇ ಇಲ್ಲದೇ direct ಆಗಿ enquiry ಗೆ order ಮಾಡಿದರು. ಇದ

ಉದ್ದೇಶವೇನು? ಒಂದು ಕಡೆ Bhatia company ಯ ವಿಚಾರದಲ್ಲಿ ಮುಖ್ಯಮಂತ್ರಿಯವರೇ ನೇರವಾಗಿ ಭಾಗಿಯಾಗಿದ್ದಾರೆ.

**ಶ್ರೀ ಬಸವರಾಜ ಎಸ್. ಬೊಮ್ಮಾಯಿ, ಜಲಸಂಪನ್ಮೂಲ ಸಚಿವರು:** ದಯವಿಟ್ಟು yield ಆಗಿ ಸರ್. ಮಾನ್ಯ ಅಧ್ಯಕ್ಷರೆ, ತಾವು ಅವರಿಗೆ preliminary submission ಮಾಡಲಿಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ. ಅವರು ಪ್ರಮುಖವಾದ ವಿಷಯಗಳನ್ನು ಈಗಲೇ ಪ್ರಸ್ತಾಪ ಮಾಡುತ್ತಿದ್ದಾರೆ. ಅದಕ್ಕೆ ನಮ್ಮದೇನೂ ತಕರಾರು ಇಲ್ಲ. ನೀವು ಯಾವುದೇ ವಿಷಯಗಳನ್ನು ಪ್ರಸ್ತಾಪ ಮಾಡಿ. ಯಾವುದಕ್ಕೂ ನಾವು ತಕರಾರು ಮಾಡುವುದಿಲ್ಲ. ಸತ್ಯಾಂಶ ಹೊರಗಡೆ ಬರಲಿ. ನಮ್ಮ ಸರ್ಕಾರ ಅದಕ್ಕೆ ಬದ್ಧವಾಗಿದೆ. ಇವತ್ತು ಮುಖ್ಯಮಂತ್ರಿಯವರು ಅದರ ತನಿಖೆಗೆ ಏಕೆ ಆದೇಶ ಮಾಡಿದ್ದಾರೆ, ನಿಮ್ಮ ಆರೋಪವೇನಿದೆ ಎನ್ನುವ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರೇ ಬಂದು ಹೇಳಬೇಕಾಗುತ್ತದೆ. ಆದ್ದರಿಂದ, ಈ ಎಲ್ಲಾ ವಿಷಯಗಳನ್ನು ಅವರ ಎದುರುಗಡೆಯೇ ಪ್ರಸ್ತಾಪಿಸಿ ಅವರಿಂದ ಉತ್ತರ ಪಡೆದರೆ ಈ ಸದನದ ಮುಖಾಂತರ ರಾಜ್ಯದ ಜನತೆಗೆ ಸರಿಯಾದ picture ಹೋಗುತ್ತದೆ. ಆ ಹಿನ್ನಲೆಯಲ್ಲಿ ಸನ್ಮಾನ್ಯ ಸಭಾಧ್ಯಕ್ಷರು ತಮಗೆ ಅವಕಾಶ ಕೊಡುತ್ತೇನೆಂದು ಹೇಳಿದ್ದಾರೆ. ಮಧ್ಯಾಹ್ನ ಅವರು ಬಂದ ಕೂಡಲೇ ನೀವು ಈ ವಿಷಯವನ್ನು ಪ್ರಸ್ತಾಪ ಮಾಡಿ. ನಮ್ಮ ತಕರಾರು ಇಲ್ಲ. ತಾವು ಕೆಲವು ನಿರ್ಣಯಗಳಿಂದ ನಷ್ಟವಾಗಿದೆಯೆಂದು ಏನು ಹೇಳಿದ್ದೀರಿ ಅಷ್ಟು ಹೇಳಿ ತಾವು ದಯವಿಟ್ಟು ಮುಗಿಸಬೇಕೆಂದು ಎಂದು ನಾನು ಸಭಾಧ್ಯಕ್ಷರ ಮೂಲಕ ತಮಗೆ ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ಹೆಚ್.ಡಿ. ರೇವಣ್ಣ:** ನಾನು ಮನವರಿಕೆ ಮಾಡಬೇಡವೇ?

**ಶ್ರೀ ಬಸವರಾಜ ಎಸ್.ಬೊಮ್ಮಾಯಿ:** ಮನವರಿಕೆಯಾಗಿದೆ.

**ಶ್ರೀ ಹೆಚ್.ಡಿ. ರೇವಣ್ಣ:** ನಾನು ಒಂದು item ಬಗ್ಗೆ ಹೇಳಿದ್ದೇನೆ. ಇನ್ನೊಂದು item ಬಗ್ಗೆ ಹೇಳಲಿಲ್ಲ.

**(ಗೊಂದಲ)**

**ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್:** ತಾವು preliminary submissionಗೆ ಅವಕಾಶ ಕೊಟ್ಟಿದ್ದೀರಿ. ಮಂತ್ರಿಗಳು ಅದಕ್ಕೆ ಅಡ್ಡಿಪಡಿಸಬಾರದು. (ಗೊಂದಲ) ಅವರು ಪ್ರಸ್ತಾಪ ಮಾಡಲಿ.

**(ಗೊಂದಲ)**

**ಶ್ರೀ ಬಸವರಾಜ ಎಸ್. ಬೊಮ್ಮಾಯಿ:** ನಾವು ಪೂರ್ಣ ಪ್ರಮಾಣದ ಚರ್ಚೆಗೆ ಸಿದ್ದರಿದ್ದೇವೆ.

**(ಗೊಂದಲ)**

**ಶ್ರೀ ಹೆಚ್. ಡಿ. ರೇವಣ್ಣ:** ನಾನು 10 ನಿಮಿಷದೊಳಗೆ ಮಾತನಾಡಿ ಮುಗಿಸುತ್ತೇನೆ.

**ಶ್ರೀ ಬಸವರಾಜ ಎಸ್. ಬೊಮ್ಮಾಯಿ:** ಈ ವಿಷಯ ಮುಖ್ಯಮಂತ್ರಿಗಳ ಸಮಕ್ಷಮದಲ್ಲಿ ಚರ್ಚೆಯಾಗಲಿ. ಅವರೇ ಸಂಬಂಧಪಟ್ಟವರಿದ್ದಾರೆ.

**ಅಧ್ಯಕ್ಷರು:** ನಾನು ನಿಮಗೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುವುದಿಲ್ಲ ಅಥವಾ ನಿಮ್ಮ ನಿಲುವಳಿ ಸೂಚನೆಯನ್ನು ತಿರಸ್ಕಾರ ಮಾಡಿದ್ದೇನೆ ಎನ್ನುವ ಪ್ರಶ್ನೆ ಇಲ್ಲಿ ಇಲ್ಲ. ನಾನೇನು ಹೇಳಿದೆ ಎಂದರೆ, ಮಾನ್ಯ ಮಂತ್ರಿಯವರು ಸರ್ಕಾರದ ಕಡೆಯಿಂದ ನಾವು ಚರ್ಚೆ ಮಾಡಲಿಕ್ಕೆ ತಯಾರಿದ್ದೇವೆಂದು ಹೇಳಿದರು. ಅದಕ್ಕೆ ನನ್ನ request ಏನೆಂದರೆ ಮಾನ್ಯ ಮುಖ್ಯಮಂತ್ರಿಯವರು ನನ್ನ permission ತೆಗೆದುಕೊಂಡು ಮೈಸೂರಿಗೆ ಹೋಗಿದ್ದಾರೆ. ಮಧ್ಯಾಹ್ನದ ವೇಳೆ ನಾನು ಬರುತ್ತೇನೆಂದು ಹೇಳಿದ್ದಾರೆ. ಹೀಗಾಗಿ ಇಲ್ಲಿ ಮುಖ್ಯಮಂತ್ರಿಯವರ ಪತ್ರ ಇವೆಲ್ಲವನ್ನು reference ಇರುವುದರಿಂದ ಅವರ ಸಮಕ್ಷಮವೇ ಚರ್ಚೆಯಾದರೆ ಒಳ್ಳೆಯದಾಗುತ್ತದೆನ್ನುವುದು ನನ್ನ ಅಭಿಪ್ರಾಯ.

**ಶ್ರೀ ಹೆಚ್.ಡಿ.ರೇವಣ್ಣ:** ನಾನು ನನ್ನ ಅಭಿಪ್ರಾಯ ಮಂಡಿಸುತ್ತೇನೆ.

**(ಗೊಂದಲ)**

**ಶ್ರೀ ಎಂ.ಎಸ್. ಸೋಮಲಿಂಗಪ್ಪ:** ಪದೇ ಪದೇ ಅದನ್ನೆ ಮಾತನಾಡಿ ಕಾಲಹರಣ ಮಾಡುತ್ತಿದ್ದಾರೆ.

**(ಗೊಂದಲ)**

**ಅಧ್ಯಕ್ಷರು:** ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಎಂ.ಎಸ್. ಸೋಮಲಿಂಗಪ್ಪ:** ರೇವಣ್ಣನವರು ತಾಳ್ಮೆ ಕಳೆದುಕೊಳ್ಳಬಾರದು.

**(ಗೊಂದಲ)**

**ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್:** ತಾವು ಅವರಿಗೆ ಅವಕಾಶ ಕೊಟ್ಟಿದ್ದೀರಿ. ಅವರು ಮಾತನಾಡಲಿ.

**(ಗೊಂದಲ)**

**ಶ್ರೀ ಕೆ.ಎಂ. ಶಿವಲಿಂಗೇಗೌಡ:** ಒಳ್ಳೆಯ ವಿಷಯ ಪ್ರಸ್ತಾಪ ಮಾಡಿದ ತಕ್ಷಣ ಕಾಲಹರಣ ಮಾಡುತ್ತಾರೆಂದು ಹೇಳುತ್ತಾರೆ ವಿಷಯ ಪ್ರಸ್ತಾಪಿಸದಿದ್ದರೆ ಚೆನ್ನಾಗಿರುತ್ತಾರೆ.

**(ಗೊಂದಲ)**

**ಶ್ರೀ ಆರ್. ಅಶೋಕ್:** ನಾನು ಹೇಳಿಕೆ ಕೊಟ್ಟ ತಕ್ಷಣ ಹೆದರಿಕೊಳ್ಳುತ್ತಾರೆ ಎನ್ನುತ್ತಾರೆ. ಆದರೆ, ಹೆದರುವ ಪ್ರಶ್ನೆಯೇ ಇಲ್ಲ. ಬಹಳ ವರ್ಷಗಳಿಂದ ಏನೇನು ಆಗಿದೆ ಎಂದು ಹೇಳಿದ್ದಾರೆ. ಆ ರೀತಿ ಹೇಳಿರುವುದರಿಂದ ನಮಗೂ ತನಿಖೆ ಬೇಕು. ರೇವಣ್ಣನವರು ಪ್ರಸ್ತಾಪ ಮಾಡಿರುವುದನ್ನು ನಾವು ಸ್ವಾಗತ ಮಾಡುತ್ತೇನೆ. ಅದಕ್ಕೋಸ್ಕರ, 2000 ದಿಂದ 2009ನೇ ಇಸವಿವರೆಗೆ ಏನಾಗಿದೆ ...

**(ಗೊಂದಲ)**

**ಶ್ರೀ ಹೆಚ್.ಡಿ. ರೇವಣ್ಣ:** 2000ನೇ ಇಸವಿಯಿಂದ ತನಿಖೆ ಮಾಡಬೇಡಿ ಎಂದು ತಡೆಹಿಡಿದಿದ್ದೇನೆಯೇ? ನಾನು ಪ್ರಸ್ತಾಪ ಮಾಡಿರುವುದಕ್ಕೂ 2002ನೇ ಇಸವಿಯದಕ್ಕೂ ಏನು ಸಂಬಂಧ?

**(ಗೊಂದಲ)**

**ಶ್ರೀ ಆರ್. ಅಶೋಕ್:** ಒರಿಸ್ಸಾದಿಂದ ಕಲ್ಲಿದ್ದಲ್ಲನ್ನು ಯಾವ ರೀತಿ ತರಬೇಕಾಗಿತ್ತು ಆ ರೀತಿ ತರದೆ ಸರ್ಕಾರಕ್ಕೆ ...

**(ಗೊಂದಲ)**

**ಅಧ್ಯಕ್ಷರು:** ಇದನ್ನು Rule 69ಗೆ convert ಮಾಡಿಕೊಂಡು ಮಧ್ಯಾಹ್ನ ಮಾತನಾಡಿ.

**(ಗೊಂದಲ)**

**ಶ್ರೀ ಹೆಚ್.ಡಿ. ರೇವಣ್ಣ:** ನಾನು ಇನ್ನೂ submission ಮಾಡಿಲ್ಲ.

**(ಗೊಂದಲ)**

**ಶ್ರೀ ಹೆಚ್.ಡಿ.ರೇವಣ್ಣ:** ನಾನು ಇನ್ನೂ submission ಮಾಡಿಲ್ಲ.

**(ಗೊಂದಲ)**

**ಅಧ್ಯಕ್ಷರು:** ಮಧ್ಯಾಹ್ನ ಮಾತನಾಡಿ

**(ಗೊಂದಲ)**

**ಶ್ರೀ ಹೆಚ್.ಡಿ. ರೇವಣ್ಣ:** Submission ಗೆ ಅವಕಾಶ ಕೊಡಿ.

**(ಗೊಂದಲ)**

**ಅಧ್ಯಕ್ಷರು:** ಆಮೇಲೆ ನಿಮಗೆ ಅವಕಾಶ ಕೊಡುತ್ತೇನೆ.

**(ಗೊಂದಲ)**

**ಶ್ರೀ ಹೆಚ್.ಡಿ. ರೇವಣ್ಣ:** ನಾನು ಇನ್ನೂ ವಿಷಯವನ್ನೇ ತಿಳಿಸಿಲ್ಲ.

(ಗೊಂದಲ)

**ಅಧ್ಯಕ್ಷರು:** ಚರ್ಚೆಗೆ ಸರ್ಕಾರವೂ ತಯಾರಿದೆ. (ಗೊಂದಲ) ಇದನ್ನೇ ಮಧ್ಯಾಹ್ನ submit ಮಾಡಿ

(ಗೊಂದಲ)

**ಶ್ರೀ ಹೆಚ್.ಡಿ. ರೇವಣ್ಣ:** ಅವಕಾಶ ಸಿಗಲಿಲ್ಲವೆಂದರೆ ಧರಣಿ ಕೂರಬೇಕಾಗುತ್ತದೆ.

(ಗೊಂದಲ)

**ಅಧ್ಯಕ್ಷರು:** ಅವಕಾಶ ಕೊಡುವುದಿಲ್ಲವೆಂದು ನಾನು ಹೇಳಲಿಲ್ಲ. ಅದನ್ನೇ ಸಾಯಂಕಾಲ ಮಾಡಿ ಎಂದು ಹೇಳಿದೆ.

(ಗೊಂದಲ)

**ಶ್ರೀ ಬಸವರಾಜ ಎಸ್. ಬೊಮ್ಮಾಯಿ:** ಅಧ್ಯಕ್ಷರು ಈ ವಿಷಯವನ್ನು Rule 69ಗೆ convert ಮಾಡಿ ಸಾಯಂಕಾಲ ಅವಕಾಶ ಕೊಡುತ್ತೇನೆಂದು ಹೇಳಿದ್ದಾರೆ. (ಗೊಂದಲ) ನಾವೂ ಚರ್ಚೆಗೆ ಸಿದ್ದರಿದ್ದೇವೆ.

(ಗೊಂದಲ)

**ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್:** ಮಾನ್ಯ ರೇವಣ್ಣನವರು ನಿಲುವಳಿ ಸೂಚನೆ ಮೇಲೆಯೇ ಮಂಡನೆ ಮಾಡಬೇಕೆಂದು ತಮ್ಮನ್ನು convince ಮಾಡುವ ಪ್ರಯತ್ನ ಮಾಡುತ್ತಿದ್ದಾರೆ. ಅದರಲ್ಲಿ ತಪ್ಪೇನಿದೆ?

(ಗೊಂದಲ)

**ಶ್ರೀ ಬಸವರಾಜ ಎಸ್ ಬೊಮ್ಮಾಯಿ:** ರೇವಣ್ಣನವರ ಹತ್ತಿರ ಮಾಹಿತಿ ಇದೆ. ಅವರಿಗೆ ನಾವು ಹೀಗೇ ಮಾತನಾಡಿ ಎಂದು ಹೇಳುವುದಕ್ಕಾಗುವುದಿಲ್ಲ.

(ಗೊಂದಲ)

**ಡಾಃ ಶರಣಪ್ರಕಾಶ್ ರುದ್ರಪ್ಪ ಪಾಟೀಲ್:** ನಿಲುವಳಿ ಸೂಚನೆಯಲ್ಲಿಯೇ ಇದನ್ನು ತೆಗೆದುಕೊಳ್ಳಬೇಕೆಂಬುದು ಅವರ ಒತ್ತಾಯವಿದೆ.

**(ಗೊಂದಲ)**

**ಶ್ರೀ ಬಸವರಾಜ ಎಸ್. ಬೊಮ್ಮಾಯಿ:** ಅವರಿಗೆ ಸಂಪೂರ್ಣ ಸ್ವಾತಂತ್ರ್ಯ ವಿದೆ.

**(ಗೊಂದಲ)**

**ಅಧ್ಯಕ್ಷರು:** ಎಲ್ಲರೂ ಮಧ್ಯೆ ಎದ್ದು ಮಾತನಾಡಿ

**(ಗೊಂದಲ)**

**ಡಾಃ ಶರಣಪ್ರಕಾಶ್ ರುದ್ರಪ್ಪ ಪಾಟೀಲ್:** Preliminary submissionಗೆ ಅಡ್ಡಿಪಡಿಸುವುದು ಸರಿಯಲ್ಲ. ರಾಜ್ಯದಲ್ಲಿ ಏನು ನಡೆದಿದೆ ಎಂದು ಈ ಸದನಕ್ಕೆ ಗೊತ್ತಾಗಲಿ.

**(ಗೊಂದಲ)**

**ಅಧ್ಯಕ್ಷರು:** ಶರಣಪ್ರಕಾಶ್‌ರವರೆ, ಕುಳಿತುಕೊಳ್ಳಿ.

**ಶ್ರೀ ಬಸವರಾಜ ಎಸ್. ಬೊಮ್ಮಾಯಿ:** ರೇವಣ್ಣನವರ ಹತ್ತಿರ ಸಂಪೂರ್ಣ ಮಾಹಿತಿ ಇದೆ. ರೇವಣ್ಣನವರು ಅತ್ಯಂತ ಮಹತ್ವವಾದ ವಿಚಾರ ಪ್ರಸ್ತಾಪಿಸಿದ್ದಾರೆ. ಅವರ ಹತ್ತಿರ ಇರುವ ಸಂಪೂರ್ಣ ಮಾಹಿತಿಯನ್ನು ಅವರು ಯಾವ ರೀತಿ ಬಳಕೆ ಮಾಡಿಕೊಳ್ಳಬೇಕೋ ಅದಕ್ಕೆ ಅವರು ಸ್ವತಂತ್ರರಿದ್ದಾರೆ. ಅದಕ್ಕೆ ನಾವು ಅಡ್ಡಿಪಡಿಸುವುದಿಲ್ಲ. ಎಲ್ಲ ವಿಷಯಗಳನ್ನು ಹೇಳುವುದಕ್ಕೆ ಅವರಿಗೆ ಅಧಿಕಾರವಿದೆ. ನಮ್ಮ ಪ್ರಶ್ನೆ ಇಷ್ಟೆ. ಇದರ ಪ್ರಾಮುಖ್ಯತೆಯನ್ನು ಅರಿತು ಮುಖ್ಯಮಂತ್ರಿಯವರೇ ಬಂದು ಉತ್ತರ ಕೊಡುತ್ತೇವೆಂಬ ಸಂದೇಶ ಕೊಟ್ಟಿದ್ದಾರೆ. ಆ ಹಿನ್ನೆಲೆಯಲ್ಲಿ ತಾವು ಸಂಪೂರ್ಣ submission ಅನ್ನು ಮುಖ್ಯಮಂತ್ರಿಯವರ .ಎದುರುಗಡೆಯೇ ಹೇಳಿದರೆ ತಾವು ಪ್ರಸ್ತಾಪಿಸುವ ಎಲ್ಲಾ ಪ್ರಶ್ನೆಗಳಿಗೆ ಅವರೇ ಉತ್ತರ ಕೊಡುತ್ತಾರೆ.

**ಶ್ರೀ ಹೆಚ್.ಡಿ. ರೇವಣ್ಣ:** Submission ಮಾಡುವುದಕ್ಕೆ Speaker allow ಮಾಡಿದ್ದಾರೆ. ಮಂತ್ರಿಗಳು interference ಆಗಬಾರದು. Submission ಗೆ ಅವಕಾಶ ಕೊಟ್ಟ ಮೇಲೆ ನೀವೇಕೆ ಮಾತನಾಡುತ್ತೀರಿ?

**(ಗೊಂದಲ)**

**ಶ್ರೀ ಬಸವರಾಜ ಎಸ್. ಬೊಮ್ಮಾಯಿ:** ಇದರಲ್ಲಿ ಚರ್ಚೆಗೆ ಹಿಂದೇಟು ಹಾಕುವ ಪ್ರಶ್ನೆಯೇ ಇಲ್ಲ. ಎಲ್ಲಾ ಸತ್ಯಾಂಶ ಹೊರಗಡೆ ಬರಬೇಕು. ತಾವು ಪ್ರಸ್ತಾಪಿಸುವ ವಿಷಯಕ್ಕೆ ಸಮರ್ಪಕವಾಗಿ ಉತ್ತರ ಕೊಡುವುದಕ್ಕೆ ನಮ್ಮ ಸರ್ಕಾರ ಸಿದ್ಧವಿದೆ. ಅದಕ್ಕೆ ಮುಖ್ಯಮಂತ್ರಿಯವರ ಸಮಕ್ಷಮ ಪ್ರಸ್ತಾಪ ಮಾಡಿ ಎಂದು ಹೇಳುತ್ತಿದ್ದೇವೆ. ಆದ್ದರಿಂದ, ಇಲ್ಲಿ ಹೆದರುವ ಪ್ರಶ್ನೆಯೇ ಇಲ್ಲ. ನಡೆದಂಥ ಘಟನೆಗಳು, ಅದಕ ಹಿನ್ನೆಲೆ, ಅದರ ಹಿಂದೆ ನಡೆದಂಥ ಘಟನೆಗಳು ಎಲ್ಲವೂ ಚರ್ಚೆಯಾಗಬೇಕು.

**ಶ್ರೀ ಹೆಚ್.ಡಿ. ರೇವಣ್ಣ:** ನಾನು ಈಗ ಸಬ್‌ಮಿಷನ್ ಮಾಡುತ್ತೇನೆ, ಆಮೇಲೆ ಬೇಕಾದರೆ ಮಾನ್ಯ ಮುಖ್ಯಮಂತ್ರಿಗಳು ಬಂದ ಮೇಲೆ ಉತ್ತರ ಕೊಡಲಿ. ಮುಖ್ಯಮಂತ್ರಿಗಳ ಎದುರುಗಡೆಯೆ ಚರ್ಚೆಯಾಗಲಿ. ನನ್ನದೇನೂ ಅಭ್ಯಂತರವಿಲ್ಲ.

**ಶ್ರೀ ಸಿ.ಸಿ. ಪಾಟೀಲ್:** ರೇವಣ್ಣನವರೆ ನಾವು ಹೇಳುವುದು ಅದೇ. ಮುಖ್ಯಮಂತ್ರಿಗಳು ಬಂದ ಮೇಲೆ ಅವರು ಚರ್ಚೆ ಮಾಡಲಿ.

**(ಗೊಂದಲ)**

**ಶ್ರೀ ಆರ್. ಅಶೋಕ್:** ತಾವು ಈಗಾಗಲೇ ರೂಲಿಂಗ್ ಕೊಟ್ಟು ಬಿಟ್ಟಿದ್ದೀರಿ. 69ಗೆ ಕನವರ್ಟ್ ಮಾಡಿ ಮಧ್ಯಾಹ್ನದ ಮೇಲೆ ಚರ್ಚೆ ಮಾಡಿ ಎಂದು ಈಗಾಗಲೇ ರೂಲಿಂಗ್ ಕೊಟ್ಟಿದ್ದೀರಿ

**ಅಧ್ಯಕ್ಷರು:** ನಾನು ರೂಲಿಂಗ್ ಕೊಟ್ಟುಬಿಡುತ್ತೇನೆ.

**ಶ್ರೀ ಆರ್. ಅಶೋಕ್:** ಈಗಾಗಲೇ ಕೊಟ್ಟು ಬಿಟ್ಟಿದ್ದೀರಿ. 69ಗೆ ಕನವರ್ಟ್ ಮಾಡಿದಿರಿ.

(ಗೊಂದಲ)

**ಶ್ರೀ ಆರ್. ರೋಷನ್ ಬೇಗ್:** ಸಲಹೆ ಕೊಟ್ಟಿರುವುದು ರೂಲಿಂಗ್ ಅಲ್ಲ. ತಾವು ಅವರಿಗೆ ಪರ್ಮಿಷನ್ ಕೊಟ್ಟಿದ್ದೀರಿ. ಅವರು ಸಬ್‌ಮಿಷನ್ ಮಾಡಿದಾಗ ಮುಖ್ಯಮಂತ್ರಿಗಳು ಇರಲೇಬೇಕೆಂದು ಇಲ್ಲ. ಅವರು ಮುಗಿಸಲಿ.

(ಗೊಂದಲ)

**ಶ್ರೀ ಬಸವರಾಜ್ ಬೊಮ್ಮಾಯಿ:** 69ಗೆ ಕನವರ್ಟ್ ಮಾಡಿ ರೂಲಿಂಗ್ ಕೊಟ್ಟಿದ್ದಾರೆ.

ಗೊಂದಲ

**ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್:** ಮಾನ್ಯ ಅಧ್ಯಕ್ಷರೆ, ಪಾಯಿಂಟ್ ಆಪ್ ಆರ್ಡರ್.

**ಅಧ್ಯಕ್ಷರು:** ನೋಡಿ ರೇವಣ್ಣನವರೆ, ರೋಷನ್‌ಬೇಗ್‌ರವರೆ, ಈಗೇನು ಮಾನ್ಯ ರೇವಣ್ಣನವರು ಮತ್ತು ಇನ್ನಿತರೆ ಸದಸ್ಯರು ಏನು ಇವತ್ತು ರೂಲ್ 60 ಪ್ರಕಾರ ನಿಲುವಳಿ ಸೂಚನೆ ಮಂಡನೆ ಮಾಡಿದ್ದಾರೆ, ಅದಕ್ಕೆ ಸರಕಾರದವರು ಕೂಡ ಚರ್ಚೆಗೆ ನಾವು ತಯಾರಿದ್ದೇವೆಂದು ಹೇಳಿದ್ದಾರೆ. ಹೀಗಾಗಿ ಈ ಒಂದು ನಿಲುವಳಿ ಸೂಚನೆಯನ್ನು ರೂಲ್ 69ಗೆ ಪರಿವರ್ತನೆ ಮಾಡಿ, ಮಧ್ಯಾಹ್ನದ ಮೇಲೆ ಈ ಚರ್ಚೆ ನಾನು ತೆಗೆದುಕೊಳ್ಳುತ್ತೇನೆ.

**ಶ್ರೀ ಹೆಚ್. ಡಿ. ರೇವಣ್ಣ:** ಸಬ್‌ಮಿಷನ್ ಮಾಡುವುದಕ್ಕೆ ಅವಕಾಶ ಕೊಡಿ.

**ಅಧ್ಯಕ್ಷರು:** ಬೇಡಿ, ಸ್ವಲ್ಪ ಯೋಚನೆ ಮಾಡಿ. ಇವತ್ತೇ ನೀವು ಚರ್ಚೆ ಮಾಡಿ. ಈಗ 12 ಗಂಟೆಗೆ ಸಂಜೆ 4 ಗಂಟೆಗೆ ಏನು ಪರಕ್ ಆಗುತ್ತದೆ? 4 ಗಂಟೆಗೆ ನೀವು ಮಾತನಾಡಿ ಯಾರು ಬೇಡ ಎನ್ನುತ್ತಾರೆ?

**ಶ್ರೀ ಹೆಚ್.ಡಿ. ರೇವಣ್ಣ:** ನಿನ್ನೆ ಮುಖ್ಯಮಂತ್ರಿಗಳು ನೇರವಾಗಿ ಹೇಳಿದ್ದಾರೆ.

**ಅಧ್ಯಕ್ಷರು:** ಅವರು ಉತ್ತರ ಕೊಡುವಾಗ ಹೇಳಿದ್ದಾರೆ.

**ಶ್ರೀ ಬಂಡೆಪ್ಪ ಕಾಶಂಪೂರ್:** ಅಧ್ಯಕ್ಷರೆ ತಕ್ಷಣವೇ ಈಗ ಚರ್ಚೆಗೆ ತೆಗೆದುಕೊಳ್ಳಿ.

**ಅಧ್ಯಕ್ಷರು:** ನಾನು ಮಧ್ಯಾಹ್ನದ ಮೇಲೆ ಅವಕಾಶ ಕೊಡುತ್ತೇನೆಂದು ಹೇಳಿದ್ದೇನೆ. 4 ಗಂಟೆಗೆ ನಿಮ್ಮದೇ ಚರ್ಚೆ. ಬೇರೆ ಯಾವ ವಿಷಯವೂ ಇಲ್ಲ.

**ಶ್ರೀ ಆರ್. ಅಶೋಕ:** ಸಭಾಧ್ಯಕ್ಷರ ರೂಲಿಂಗ್‌ಗೆ ಅಗೌರವ ಕೊಡುತ್ತಿದ್ದಾರೆ. ಇವರು ತಾವು ಕೊಟ್ಟಿರುವ ರೂಲಿಂಗ್‌ಗೆ ಅಗೌರವ ಮಾಡುತ್ತಿದ್ದಾರೆ. ತಾವು 69ಗೆ ಕನವರ್ಟ್ ಮಾಡಿ ಚರ್ಚೆಗೆ ಕೊಟ್ಟಿರುವುದಕ್ಕೆ ಸರ್ಕಾರ ಒಪ್ಪಿದೆ, ಹೀಗಿರುವಾಗ ನಿಮ್ಮ ರೂಲಿಂಗ್ ಅನ್ನು ಪ್ರಶ್ನೆ ಮಾಡುತ್ತಿದ್ದಾರೆ.

**ಶ್ರೀ ಹೆಚ್.ಡಿ.ರೇವಣ್ಣ:** 2002 ರಿಂದ ತನಿಖೆ ಮಾಡುತ್ತೇನೆಂದು ಹೇಳಿದ್ದಾರೆ, ಎಲ್ಲ ಮಾಡಲಿ ನಾವೇನು ಬೇಡ ಎನ್ನುತ್ತೇವೆಯೇ?

**ಶ್ರೀ ಸಿ. ಟಿ. ರವಿ:** ರೇವಣ್ಣನವರು ಎಳೆ ಮಗುವಿನ ತರಹ ರಚ್ಚೆ ಹಿಡಿದಿರುವುದನ್ನು ನೋಡಿದರೆ, ಇದು 12 ಗಂಟೆಯೊಳಗೆ ಮುಗಿಯಬೇಕೆಂದು ಎಲ್ಲೋ ಫಳಿಗೆ ಕೇಳಿಕೊಂಡು ಬಂದ ಹಾಗೆ ಇದೆ. ಇದಾದ ಮೇಲೆ ಅದು ನಿಷ್ಪಲವಾಗಿ ಬಿಡುತ್ತದೆ ಎಂದು ಹೇಳಿರಬೇಕು. ಇಲ್ಲಾಂದ್ರೆ ಈ ರೀತಿಯಾಗಿ ಎಳೆ ಮಕ್ಕಳ ರೀತಿ ರಚ್ಚೆ ಹಿಡಿಯುತ್ತಿರಲಿಲ್ಲ. ಎಳೆ ಮಕ್ಕಳು ಮಾತ್ರ ನನಗೆ ಬಲೂನು ಕೊಡಿಸು, ಚೆಂಡು ಕೊಡಿಸು ಎಂದು ರಚ್ಚೆ ಹಿಡಿಯುವುದು. ಮಧ್ಯಾಹ್ನದ ಮೇಲೆ ಚರ್ಚೆಗೆ ಅವಕಾಶ ಕೊಡುತ್ತೇನೆಂದು ಹೇಳಿದರೂ ಈ ರೀತಿ ರಚ್ಚೆ ಹಿಡಿಯುತ್ತಾರೆಂದರೆ ಏನರ್ಥ? ಬರಗಾಲ, ಅತಿವೃಷ್ಟಿ ಬಗ್ಗೆ ಬಿಟ್ಟು ಬಿಟ್ಟಿರಿ. ಅದರ ಬಗ್ಗೆ ಚರ್ಚೆ ಮಾಡುವುದಿಲ್ಲವೇ?

**ಅಧ್ಯಕ್ಷರು:** ರೇವಣ್ಣನವರೆ ಮಧ್ಯಾಹ್ನದ ಮೇಲೆ ಮಾತನಾಡಿ.

**ಶ್ರೀ ಹೆಚ್.ಡಿ. ರೇವಣ್ಣ:** ನಾನಿನ್ನು ಸಬ್‌ಮಿಷನ್ ಮಾಡಿಲ್ಲ.

**ಅಧ್ಯಕ್ಷರು:** ಆಗಲೇ ಎಲ್ಲಾ ಮಾಡಿದಿರಿ, ಹೇಳಿದಿರಿ, ಸರ್ಕಾರವೂ ಚರ್ಚೆ ಮಾಡಲಿಕ್ಕೆ ಒಪ್ಪಿಗೆ ಕೊಟ್ಟಿದ್ದಾರೆ. ದಯವಿಟ್ಟು ಸಹಕರಿಸಿ ಬರಗಾಲದ ವಿಷಯದ ಬಗ್ಗೆ ಚರ್ಚೆ ಮಾಡಲಿಕ್ಕೆ ಶಾಸಕರು ಕಾತುರದಿಂದ ಕಾಯುತ್ತಿದ್ದಾರೆ.

**ಶ್ರೀ ಹೆಚ್.ಡಿ. ರೇವಣ್ಣ:** ಚರ್ಚೆಗೆ ಅವಕಾಶ ಕೊಡಲಿಲ್ಲವೆಂದರೆ ನಾವು ದರಣಿ ಕೂಡುತ್ತೇವೆ ಸ್ವಾಮಿ.

**ಅಧ್ಯಕ್ಷರು:** ನಿಮಗೆ ಬಿಟ್ಟಿದ್ದು. It is my request, ಸಹಕಾರ ಕೊಡಿ ಎಂದು ನನ್ನ request ಇದೆ. ನಿಮಗೆ ಅವಕಾಶ ಕೊಟ್ಟಿಲ್ಲ ಎಂದರೆ ದರಣಿ ಮಾಡಿ. ನಿಮಗೆ ಅವಕಾಶ ಕೊಡುತ್ತೇನೆಂದು ಹೇಳಿದ ಮೇಲೂ ಸಹಿತ, ರೂಲ್ 69ಗೆ ಕನವರ್ಟ್ ಮಾಡಿ ಡಿಟೇಲ್ ಆಗಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುತ್ತೇನೆಂದು ಹೇಳಿದರೂ ಸಹಿತ ನೀವು ಧರಣಿ ಮಾಡುತ್ತೇವೆಂದು ಹೇಳಿದರೆ ಅದು ನಿಮಗೆ ಬಿಟ್ಟದ್ದು. ಈಗ ಬರಗಾಲದ ಬಗ್ಗೆ ಮಾತನಾಡುವುದಕ್ಕೆ ಮಾನ್ಯ ಸದಸ್ಯರುಗಳು ತಯಾರಾಗಿದ್ದಾರೆ.

**(ಗೊಂದಲ)**

**ಶ್ರೀ ಸಿ. ಟಿ. ರವಿ:** ಯಾರೂ ಈ ಸದನವನ್ನು ಬ್ಲಾಕ್‌ಮೇಲೆ ಮಾಡಬಾರದು. ಬ್ಲಾಕ್‌ಮೇಲ್ ಮಾಡುವ ಕೆಲಸ ಮಾಡುತ್ತಿದ್ದಾರೆ. ರೇವಣ್ಣನವರು ಬ್ಲಾಕ್ ಮೇಲ್ ಮಾಡುತ್ತಿದ್ದಾರೆ. ನೀವು ಮಧ್ಯಾಹ್ನದ ಮೇಲೆ ಚರ್ಚೆ ಮಾಡಿದರೆ ತಲೆ ಮೇಲೆ ಆಕಾಶ ಕಳಚಿ ಬೀಳುತ್ತದೆಯೇ?

**(ಗೊಂದಲ)**

**ಶ್ರೀ ಹೆಚ್.ಡಿ. ರೇವಣ್ಣ:** ಬ್ಲಾಕ್‌ಮೇಲ್ ಮಾಡುತ್ತಿರುವುದು ನೀವು. ನಾವಲ್ಲ. ಯಾರು ಬ್ಲಾಕ್‌ಮೇಲ್ ಮಾಡುತ್ತಿದ್ದಾರೆಂದು ರಾಜ್ಯದ ಜನತೆಗೆ ಗೊತ್ತಾಗುತ್ತದೆ.

**(ಗೊಂದಲ)**

**ಶ್ರೀ ಎಂ.ಟಿ. ಕೃಷ್ಣಪ್ಪ:** ದಯಮಾಡಿ ಚರ್ಚೆಗೆ ಅವಕಾಶ ಮಾಡಿ ಕೊಡಿ.

**ಶ್ರೀ ಹೆಚ್.ಡಿ. ರೇವಣ್ಣ:** ಎರಡೇ ನಿಮಿಷದಲ್ಲಿ ಮಾಡಿ ಮುಗಿಸುತ್ತೇನೆ.

**ಅಧ್ಯಕ್ಷರು:** ಮಧ್ಯಾಹ್ನ ಅವಕಾಶ ಕೊಡುತ್ತೇನೆ. ರೂಲಿಂಗ್ ಕೊಟ್ಟು ಬಿಟ್ಟಿದ್ದೇನೆ. ಬೇಡ! ಏಕೆ ಸುಮ್ಮನೆ ಹಠ ಮಾಡುತ್ತೀರಿ, ಸಂಜೆ ಬೇಕಾದಷ್ಟು ಮಾತನಾಡಿ. ನಿಮಗೆ ಅವಕಾಶವಿದೆ ನಾನು ಪರ್ಮಿಷನ್ ಕೊಟ್ಟಿದ್ದೇನೆ, ನೀವು ಮಾತನಾಡಿ. ರೇವಣ್ಣನವರೆ ಏಕೆ ಸುಮ್ಮನೆ ಹಠ ಮಾಡುತ್ತೀರಿ. ಬೇರೆ ಶಾಸಕರು ಬರಗಾಲದ ಬಗ್ಗೆ ಮಾತನಾಡಬೇಕೆಂದು ಕೇಳುತ್ತಿದ್ದಾರೆ, ಅವರಿಗೆ ಅವಕಾಶ ಕೊಡೋಣ. ಸುಮ್ಮನೆ ನಮ್ಮ ಟೈಂ ವೇಸ್ಟ್ ಆಗುತ್ತದೆ. ನಮ್ಮ ಟೈಂ ಇದರಲ್ಲಿ ವೇಸ್ಟ್ ಆಗುತ್ತದೆ. ಹಠ ಮಾಡಬೇಡಿ ಮಧ್ಯಾಹ್ನದ ಮೇಲೆ ನಿಮಗೆ ಅವಕಾಶ ಕೊಡುತ್ತೇನೆ.

**ಶ್ರೀ ಹೆಚ್.ಡಿ. ರೇವಣ್ಣ:** ನಾನಿನ್ನು ಸಬ್‌ಮಿಷನ್ ಮಾಡಿಲ್ಲ.

**(ಗೊಂದಲ)**

**ಅಧ್ಯಕ್ಷರು:** ನೀವು ಸಬ್‌ಮಿಷನ್ ಮಾಡದೇ ಮೇಲೆ ನಾವು ಕನ್‌ವಿನ್ಸ್ ಆದಮೇಲೆ ರೂಲ್ 69ನಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಬೇಕೆನ್ನುವ ದೃಷ್ಟಿಯಿಂದ ಪ್ರಿಲಿಮಿನರಿ ಸಬ್‌ಮಿಷನ್ ಆಗುತ್ತದೆ. ಈಗ ನೀವು ಸಬ್‌ಮಿಷನ್ ಮಾಡಿದ್ದು ನನಗೆ ಕನ್‌ವಿನ್ಸ್ ಆಗಿ ನಿಮಗೆ ರೂಲ್ 69ನಲ್ಲಿ ಅವಕಾಶ ಕೊಟ್ಟು ಮಧ್ಯಾಹ್ನ ನಿಗಧಿ ಮಾಡಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಸಭೆಯಲ್ಲಿ ಇದ್ದರೆ ಈಗಲೇ ನಿಮಗೆ ಕಂಟಿನ್ಯೂ ಮಾಡುವುದಕ್ಕೆ ಹೇಳುತ್ತಿದ್ದೆ. ಆದರೆ, ಮಾನ್ಯ ಮುಖ್ಯಮಂತ್ರಿಗಳು ಪರ್ಸನಲಿ ನನಗೆ ಫೋನು ಮಾಡಿ ಮನವಿ ಮಾಡಿ ಲೆಟರ್ ಕೊಟ್ಟಿದ್ದಾರೆ. ಒಂದು ನಿಮಿಷ ತಾಳಿ, ನಾನು ಮಾತನಾಡುವುದು ತಮಗೆ ಗೊತ್ತಾಗುವುದಿಲ್ಲವೆ?

**(ಗೊಂದಲ)**

**ಶ್ರೀ ಬಿ.ಸಿ.ಪಾಟೀಲ್:** ಅಶೋಕ್‌ರವರು ಹೇಳಿದ ಮೇಲೆ ತಾವು ರೂಲಿಂಗ್ ಕೊಟ್ಟಿದ್ದೀರಿ.

**ಅಧ್ಯಕ್ಷರು:** ರೀ ಬಿ.ಸಿ. ಪಾಟೀಲ್ ವೇಯ್ಟ್ ಮಾಡಿ. ಅಲ್ಲಾರಿ ನಾನು ಮಾತನಾಡುತ್ತಿದ್ದೇನೆ ನಿಮಗೆ ಇದು ಅರ್ಥವಾಗುವುದಿಲ್ಲವೇ? ಒಂದು ನಿಮಿಷ ಕುಳಿತುಕೊಳ್ಳಿ. ದಯಮಾಡಿ ಕುಳಿತುಕೊಳ್ಳಿ. ನೋಡಿ ಮಾನ್ಯ ಮುಖ್ಯಮಂತ್ರಿಗಳು ನನಗೆ ಮನವಿ ಮಾಡಿದ್ದಾರೆ. ಬೆಳಗ್ಗೆ ಅವರು ಫೋನು ಮಾಡಿ ಮನವಿ ಮಾಡಿ, ಏನು ಹೇಳಿದರು ಎಂದರೆ, ನಿಲುವಳಿ ಸೂಚನೆಯ ಬಗ್ಗೆ ಚರ್ಚೆ ಬಂದರೆ, ದಯವಿಟ್ಟು ಚರ್ಚೆಗೆ ಅವಕಾಶ ಕೊಡಿ, ನಾನು ಆ ಚರ್ಚೆಯಲ್ಲಿ ಭಾಗವಹಿಸುತ್ತೇನೆ. ಚರ್ಚೆ ಅವಾಯ್ಡ್ ಮಾಡುವುದಂಥದ್ದು ಇಲ್ಲ. ಅನಿವಾರ್ಯ ಕಾರಣಗಳಿಂದಾಗಿ ನಾನು ಮೈಸೂರಿಗೆ ಹೋಗಬೇಕಾಗಿದೆ. ನಾನು ಮಧ್ಯಾಹ್ನ 3–4 ಗಂಟೆಯೊಳಗೆ ಬರುತ್ತೇನೆ. ನಾನು ಬಂದ ಮೇಲೆ ನನ್ನ ಸಮಕ್ಷಮದಲ್ಲಿ ಚರ್ಚೆಯಾಗಲಿ ಎಂದು ಅವರು ಮನವಿ ಮಾಡಿದ್ದಾರೆ. ಇಷ್ಟು ನೀವು ಟಾಲರೈಟ್ ಮಾಡಲಿಕ್ಕೆ ಆಗಲಿಲ್ಲವೆಂದರೆ ಇನ್ನೇನು ಮಾಡಬೇಕು? ಬೇರೆಯವರಿಗೆ ಅವಕಾಶ ಕೊಡೋಣ ಮುಖ್ಯಮಂತ್ರಿಗಳು ಸದನದಲ್ಲಿ ಈಗ ಇದ್ದರೆ ನಿಮಗೆ ಕಂಟಿನ್ಯೂ ಮಾಡಿ ಎಂದು ಹೇಳುತ್ತಿದ್ದೆ. ಇಷ್ಟು ಹೇಳಿದರೂ ನೀವು ಏಕೆ ಹಠ ಮಾಡುತ್ತೀರಿ? ಐದು ನಿಮಿಷದಲ್ಲಿ ನೀವು ಮಾತನಾಡುವ ಎಲ್ಲಾ ವಿಷಯ ಮುಗಿದು ಹೋಗುತ್ತಿದೆಯೇ? ಇದು ನನಗೆ ಅರ್ಥವಾಗುತ್ತಿಲ್ಲ ಬಿಡಿ. ಇನ್ನು ನಿಮಗೆ ಬಿಟ್ಟಿದ್ದು. ಇನ್ನೇನು ನಿಮಗೆ ಹೇಳಬೇಕು? ಇಷ್ಟೆಲ್ಲಾ ರಿಕ್ವೆಸ್ಟ್ ಮಾಡಿದರೂ ನೀವು ಕೇಳಲ್ಲ ಎಂದರೆ ನಾವೇನು ಮಾಡಬೇಕು?

**(ಗೊಂದಲ)**

**ಶ್ರೀ ಸಿ.ಸಿ. ಪಾಟೀಲ:** ಮಾನ್ಯ ರೇವಣ್ಣನವರು ಹಿರಿಯ ಸದಸ್ಯರು ಹೀಗಾಗಿ ತಾವು ಅರ್ಥ ಮಾಡಿಕೊಳ್ಳಬೇಕು. ಬೇರೆಯವರಿಗೆ ಮಾತನಾಡಲಿಕ್ಕೆ ಅವಕಾಶ ಕೊಡಿ.

**(ಗೊಂದಲ)**

**ಶ್ರೀ ಆರ್. ಅಶೋಕ್:** ಸರ್ಕಾರ ಒಪ್ಪಿದೆ, ತಾವು ಒಪ್ಪಿಕೊಂಡು ಅವರಿಗೆ ಚರ್ಚೆಮಾಡಲಿಕ್ಕೆ ರೂಲ್ 69ನಲ್ಲಿ ಅವಕಾಶ ಕೊಟ್ಟಿದ್ದೀರಿ.

**ಶ್ರೀ ಹೆಚ್.ಡಿ.ರೇವಣ್ಣ:** ಐದು ನಿಮಿಸ ಅವಕಾಶ ಕೊಡಿ ನಾನು ಸಬ್‌ಮಿಷನ್ ಮಾಡುತ್ತೇನೆ.

**ಅಧ್ಯಕ್ಷರು:** ಅವರಿಗೆ ಇಷ್ಟು ಹೇಳಿದರೂ ಅರ್ಥವಾಗುತ್ತಿಲ್ಲವಲ್ಲ. ರೇವಣ್ಣನವರೆ ಸಹಕಾರ ಕೊಡಿ. ನೀವು ಮಧ್ಯಾಹ್ನ ಮಾತನಾಡಿ. ಈಗ ಬರಗಾಲದ ವಿಷಯದ ಬಗ್ಗೆ ಚರ್ಚೆಗೆ ತೆಗೆದುಕೊಳ್ಳುತ್ತೇನೆ. ಯಾರು ಮಾತನಾಡುತ್ತೀರಿ? ರೇವಣ್ಣನವರೆ ಸಹಕಾರ ಕೊಡಿ, ಆಯಿತು ಮುಗಿಯಿತು ಬಿಡಿ, ನೋಡಿ ಇಷ್ಟೆಲ್ಲಾ ಹೇಳಿದ ಮೇಲೂ ನಿಮಗೆ ಅರ್ಥವಾಗಲಿಲ್ಲವೆಂದರೆ ನಾನು ಏನು ಮಾಡಲಿ. ರೇವಣ್ಣನವರೆ ಐದು ನಿಮಿಷದಲ್ಲಿ ಎಲ್ಲಾ ಕವರ್ ಆಗುತ್ತದೆಯೆ? ಸಾಧ್ಯವೇ ಇಲ್ಲ. ನೀವು ಕನಿಷ್ಟ ಒಂದು ತಾಸು ಇಲ್ಲದೆ ಮಾತನಾಡುತ್ತೀರಾ? ಕನಿಷ್ಟ ನಿಮಗೆ ಒಂದು ತಾಸು ಬೇಕು. ಒಂದು ತಾಸು ಇಲ್ಲದೆ ನೀವು ನಿಮ್ಮ ಸಬ್ಜೆಕ್ಟ್‌ನ್ನು ಮುಗಿಸುತ್ತೀರಾ? ಐದು ನಿಮಿಷದಲ್ಲಿ ಎಲ್ಲಿ ಮುಗಿಯುತ್ತದೆ? ನಾನು ರೂಲಿಂಗ್ ಕೊಟ್ಟಿದ್ದೇನೆ. It is left you.

**ಶ್ರೀ ಗೋವಿಂದ ಎಂ. ಕಾರಜೋಳ:** ನೋಡಿ ಪ್ರಿಲಿಮಿನರಿ ಸಬ್‌ಮಿಷನ್ ಯಾವಾಗ ಮಾಡಬೇಕು. ಸರ್ಕಾರ ಒಪ್ಪದಿದ್ದಾಗ, ನೀವು ಒಪ್ಪದಿದ್ದಾಗ ಮಾಡಬೇಕು. ಈಗಾಗಲೇ ಒಪ್ಪಿ 69ನಲ್ಲಿ ಕನವರ್ಟ್ ಮಾಡಿ ಕೊಟ್ಟಿದ್ದಾರೆ.

**ಶ್ರೀ ಹೆಚ್.ಡಿ. ರೇವಣ್ಣ:** ನಾನಿನ್ನು ಸಬ್‌ಮಿಷನ್ ಮಾಡಿಲ್ಲವಲ್ಲ.

**ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ:** ಅದನ್ನು ನೀವು ಏಕೆ ಹೇಳುತ್ತೀರಿ. ಅಧ್ಯಕ್ಷರು ಹೇಳಲಿ. ಸಬ್‌ಮಿಷನ್ ಮಾಡಲಿಕ್ಕೆ ಅವಕಾಶ ಕೊಡಲಿಲ್ಲವೆಂದರೆ ಹೇಗೆ?

**ಶ್ರೀ ಗೋವಿಂದ ಎಂ. ಕಾರಜೋಳ:** ನಾವು ಹೇಳಲಿಲ್ಲ. ಅಧ್ಯಕ್ಷರು ಹೇಳಿದ್ದಾರೆ.

(ಗೊಂದಲ)

**ಅಧ್ಯಕ್ಷರು:** ಈಗ ಬರಗಾಲದ ವಿಷಯದ ಬಗ್ಗೆ ಯಾರು ಮಾತನಾಡುತ್ತೀರಿ. ಮಾಲೀಕಯ್ಯ ಗುತ್ತೇದಾರ್‌ರವರೇ ನೀವು ಶುರು ಮಾಡುತ್ತೀರಾ? ಮಾಡಿ.

(ಗೊಂದಲ)

**ಅಧ್ಯಕ್ಷರು:** ರೂಲ್ 69ನಲ್ಲಿ ಬರಗಾಲದ ವಿಷಯಕ್ಕೆ ಸಂಬಂಧಪಟ್ಟಂತೆ ಯಾರು ಮಾತನಾಡುತ್ತೀರಿ? ನೆಕ್ಸ್ಟ್ ಸಬ್ಜೆಕ್ಟ್ ಕರೆದಿದ್ದೇನೆ. ಯಾರು ಮಾತನಾಡಲಿಲ್ಲವೆಂದರೆ ಈ ಸಭೆ ಅಡ್ಜರ್ನ್ ಮಾಡುತ್ತೇನೆ.

**ಶ್ರೀ ಹೆಚ್.ಡಿ. ರೇವಣ್ಣ:** ನನಗೆ ನಿಲುವಳಿ ಸೂಚನೆಯ ಮೇಲೆ ಮಾತನಾಡಬೇಕೆಂದು ತಮ್ಮನ್ನು ಕೇಳುತ್ತೇನೆ.

**ಅಧ್ಯಕ್ಷರು:** ಈಗಾಗಲೇ ಆ ವಿಷಯದ ಬಗ್ಗೆ ಚಾಪ್ಟರ್ ಕ್ಲೋಸ್ ಆಗಿದೆ. ಬರಗಾಲದ ಬಗ್ಗೆ ಮಾತನಾಡುವುದಕ್ಕೆ ಹಲವಾರು ಸದಸ್ಯರು ಇಲ್ಲಿ ಹೆಸರು ಕೊಟ್ಟಿದ್ದಾರೆ. ಜಯಚಂದ್ರರವರೆ ತಾವು ಮಾತನಾಡುತ್ತೀರಾ?

**ಶ್ರೀ ಟಿ.ಬಿ. ಜಯಚಂದ್ರ:** ಸನ್ಮಾನ್ಯ ಸಭಾಧ್ಯಕ್ಷರೆ,

**ಶ್ರೀ ಹೆಚ್.ಡಿ. ರೇವಣ್ಣ:** ನನಗೆ ಅವಕಾಶ ಕೊಡಿ ಇಲ್ಲಾಂದ್ರೆ ನಾವು ಧರಣಿ ಮಾಡುತ್ತೇವೆ.

**(ಈ ಹಂತದಲ್ಲಿ ಜೆಡಿ(ಎಸ್) ಸದಸ್ಯರು ಸದನದ ಬಾವಿಗೆ ಬಂದು ಧರಣಿ ನಿರತರಾದರು)**

**ಅಧ್ಯಕ್ಷರು:** ಇದು ವಿಚಿತ್ರ ಇದೆ ನೋಡಿ. ಚರ್ಚೆಗೆ ಅವಕಾಶ ಕೊಡುತ್ತೇನೆಂದು ಹೇಳಿದರು ನೀವು ಈ ರೀತಿ ಮಾಡಿದರೆ ಹೇಗೆ?

(ಗೊಂದಲ)

**ಶ್ರೀ ಸಿ.ಟಿ. ರವಿ:** ಅವರಿಗೆ ರೈತರ ಬಗ್ಗೆ ಕಾಳಜಿ ಇಲ್ಲ.

(ಗೊಂದಲ)

**ಅಧ್ಯಕ್ಷರು:** ಇಲ್ಲಿ ವೆಲ್‌ನಲ್ಲಿ ನಿಂತು ಮಾತನಾಡಿದರೆ ಯಾವುದೂ ರೆಕಾರ್ಡ್‌ಗೆ ಹೋಗುವುದಿಲ್ಲ.

**ಶ್ರೀ ಸಿ.ಟಿ. ರವಿ:** ಕೇವಲ ಪತ್ರಿಕೆಗಳಲ್ಲಿ ಬರಬೇಕು.

(ಗೊಂದಲ)

**ಅಧ್ಯಕ್ಷರು:** ಈ ವೆಲ್‌ಗೆ ಬಂದು ಸುಮ್ಮನೆ ಈ ಸದನದ ಸಮಯವನ್ನು ವ್ಯರ್ಥ ಮಾಡುತ್ತಿದ್ದೀರಿ. ಈ ಸದನಕ್ಕೆ ಬಂದು ನಿಮ್ಮ ಸಮಯವನ್ನು ವೇಸ್ಟ್ ಮಾಡುತ್ತಿದ್ದೀರಿ. ಸಾರ್ವಜನಿಕರ ಸಮಯವನ್ನು ವೇಸ್ಟ್ ಮಾಡುತ್ತಿದ್ದೀರಿ. ಸದನದ ಕಾಲಾವಕಾಶವನ್ನು ತಾವುಗಳು ವೇಸ್ಟ್ ಮಾಡುತ್ತಿದ್ದೀರಿ. ಬರಗಾಲದ ಬಗ್ಗೆ ಬೇರೆ ಶಾಸಕರುಗಳು ಮಾತನಾಡಬೇಕೆಂದು ಬಯಸುತ್ತಿದ್ದರೂ ಕೂಡ ನಿಮ್ಮ ಹಠದ ಸಲುವಾಗಿ ಮತ್ತು ನಿಮ್ಮ ಒಂದು ಪ್ರಿಸ್ಟೇಟ್ ಸಲುವಾಗಿ ಇವತ್ತಿನ ಸದನದ ಸಮಯವನ್ನು ವೇಸ್ಟ್ ಮಾಡುತ್ತಿದ್ದೇವೆ. ನಾನು ಅವಕಾಶ ಕೊಡುತ್ತೇನೆಂದು ನಿಮಗೆ ಹೇಳಿದರೂ ಕೂಡ ಈ ರೀತಿಯಾಗಿ ಹಠಮಾರಿತನ ಮಾಡುವುದು ಸರಿಯಲ್ಲ. ನನಗೆ convince ಆಗಿದೆ ಎಂದೆ ನಿಮಗೆ ಅವಕಾಶ ಕೊಟ್ಟಿದ್ದೇನೆ. ಮತ್ತೆ ಮತ್ತೆ ಅದನ್ನೇ ಹೇಳುವುದು ಮತ್ತು ಸದನ ಬಾವಿಗೆ ಬರುವುದು ಸರಿಯಲ್ಲ. ನಿಮ್ಮ ಸ್ಥಳಕ್ಕೆ ಹೋಗಿ ಎಂದು ನಾನು ಮತ್ತೊಮ್ಮೆ ಕೊನೆಯದಾಗಿ ವಿನಂತಿ ಮಾಡಿಕೊಳ್ಳುತ್ತೇನೆ. ಬರಗಾಲ ವಿಷಯದ ಬಗ್ಗೆ ಬೇರೆ ಶಾಸಕರು ಮಾತನಾಡುವುದಕ್ಕೆ ಅವಕಾಶ ಕೊಡಿ. ಈ ಸದನದ ಗೌರವವನ್ನು ಉಳಿಸಿಕೊಳ್ಳಿ. ಮತ್ತೆ ಸಮಯವನ್ನು ಉಳಿಸುವಂಥ ಕೆಲಸ ಮಾಡಿ. ಬೇರೆ ವಿಷಯಗಳು ಬಂದಾಗ ಕೇವಲ 5 ನಿಮಿಷ ಮಾತನಾಡುವುದಕ್ಕೂ ಸಹ ಬೇರೆ ಶಾಸಕರಿಗೆ ಅವಕಾಶ ಸಿಗುವುದಿಲ್ಲ. ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಪ್ರಾರಂಭ ಮಾಡಿ ಈಗಾಗಲೇ ಅರ್ಧ ಗಂಟೆ ಆಯಿತು.

(ಗೊಂದಲ)

**ಶ್ರೀ ಆರ್.ಅಶೋಕ:** ಮೊದಲು ಟೆಂಡರ್ ಕರೆದಿರುವಂಥದ್ದನ್ನು ಮೂರು ವರ್ಷಗಳವರೆಗೆ ಎಕ್ಸ್‌ಟೆಂಡ್ ಮಾಡಿದವರು ಯಾರು?

**(ಗೊಂದಲ)**

**ಶ್ರೀ ಸಿ. ಟಿ. ರವಿ:** ಮಾನ್ಯ ಅಧ್ಯಕ್ಷರೆ, ಅನ್ನ ಬೆಂದಿದೆಯೇ ಅಥವಾ ಇಲ್ಲವೇ ಎಂದು ನೋಡುವುದಕ್ಕೆ ...

**(ಗೊಂದಲ)**

**ಶ್ರೀ ಬಸವರಾಜ ಬೊಮ್ಮಾಯಿ:** ಮಾನ್ಯ ರೇವಣ್ಣನವರು ವಿಷಯ ಪ್ರಸ್ತಾಪ ಮಾಡಿ ನಿಮಗೆ convince ಮಾಡಿದ್ದಾರೆ..

**ಶ್ರೀ ಹೆಚ್.ಡಿ. ರೇವಣ್ಣ:** ನಾನು ಪ್ರಸ್ತಾಪವನ್ನೇ ಮಾಡಿಲ್ಲ.

**(ಗೊಂದಲ)**

**ಶ್ರೀ ಬಸವರಾಜ ಬೊಮ್ಮಾಯಿ:** ಮಾನ್ಯ ಅಧ್ಯಕ್ಷರೆ, ತಾವು ರೂಲಿಂಗ್ ಕೊಟ್ಟ ಮೇಲೆ ನಿಮ್ಮ ರೂಲಿಂಗ್ ವಿರುದ್ಧ ಈ ರೀತಿಯಾಗಿ ಧರಣಿ ಮಾಡುವುದು Contempt of the House ಆಗುತ್ತದೆ. ಆದ್ದರಿಂದ, ತಮ್ಮ ಮುಖಾಂತರ ಜೆಡಿಎಸ್ ಪಕ್ಷದ ಮಿತ್ರರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಈಗ ಬರಗಾಲದ ಬಗ್ಗೆ ಚರ್ಚೆ ಮಾಡುವುದಕ್ಕೆ ಎಲ್ಲಾ ಸದಸ್ಯರು ತಯಾರಿದ್ದಾರೆ. ರೈತರ ಬಗ್ಗೆ ನಿಮಗೂ ಕೂಡ ಕಳಕಳಿ ಇದೆ ಎಂದು ನಾನು ಭಾವಿಸಿದ್ದೇನೆ. ತಾವುಗಳು ಬೇರೆಯವರ ಹಕ್ಕನ್ನು ಮೊಟಕುಗೊಳಿಸಬೇಡಿ. ಈ ವಿಷಯವನ್ನು ನಾಳೆ ದಿವಸ ಪ್ರಸ್ತಾಪ ಮಾಡೋಣವೆಂದು ಮಾನ್ಯ ಈಶ್ವರಪ್ಪನವರು ನೆನ್ನೆ ದಿವಸ ಹೇಳಿದರು ನೆನ್ನೆಯಿಂದ ಇವತ್ತಿನವರೆಗೂ ಕಾಯ್ದಿದ್ದೀರಿ. ಸಾಯಂಕಾಲದವರೆಗೆ ಕಾಯ್ದರೆ ಏನು ಆಗುವುದಿಲ್ಲ. ಉತ್ತರ ಕೊಡುವುದಕ್ಕೆ ನಾವೆಲ್ಲ ಸಿದ್ದರಿದ್ದೇವೆ. ಎರಡು–ಮೂರು ತಾಸು ಕಾಯ್ದರೆ ಏನು ಆಗುವುದಿಲ್ಲ. ನಾನು ನಿಮ್ಮಲ್ಲಿ ಕಳಕಳಿಯ ವಿನಂತೆ ಮಾಡುವುದೇನೆಂದರೆ, ಬರಗಾಲದ ಬಗ್ಗೆ ಮತ್ತು ಅತಿವೃಷ್ಟಿ ಹಾಗೂ ಅನಾವೃಷ್ಟಿ ಬಗ್ಗೆ ಮಾತನಾಡುವುದಕ್ಕೆ ಎಲ್ಲಾ ಶಾಸಕರ

ಹಕ್ಕನ್ನು ಮೊಟಕುಗೊಳಿಸಬೇಡಿ. ಮಾತನಾಡುವುದಕ್ಕೆ ಅವಕಾಶ ಮಾಡಿ ಕೊಡಿ. ಇದರ ಬಗ್ಗೆ ಚರ್ಚೆಮಾಡೋಣ. ಮಧ್ಯಾಹ್ನದ ನಂತರ ಅಂದರೆ, ಮಾನ್ಯ ಮುಖ್ಯ ಮಂತ್ರಿಗಳು ಬಂದ ತಕ್ಷಣ ಕಲ್ಲಿದ್ದಲಿನ ವಿಷಯವನ್ನು ಮೊದಲನೆಯದಾಗಿ ತೆಗೆದುಕೊಳ್ಳೋಣ. ಸಮರ್ಪಕವಾಗಿ ಚರ್ಚೆಯಾಗಲಿ ಮತ್ತೆ ಅದರ ಸತ್ಯ ಹೊರಗಡೆ ಬರಲಿ ಎಂಬುದು ನಮ್ಮ ಉದ್ದೇಶ ಆಗಿದೆ. ನೀವು ಕೂಡ ಅದಕ್ಕೆ ಸಹಕಾರ ಮಾಡುತ್ತೀರೆಂದು ನಾನು ನಿಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಸಿ.ಟಿ. ರವಿ:** ಮಾನ್ಯ ಅಧ್ಯಕ್ಷರೆ, ಅನ್ನ ಬೆಂದಿದೆಯೋ ಅಥವಾ ಇಲ್ಲವೋ ಎಂದು ನೋಡುವುದಕ್ಕೆ ಎಲ್ಲಾ ಅಗಳನ್ನು ಇಚುಕಬೇಕೆಂದು ಮಾನ್ಯ ರೇವಣ್ಣನವರು ಬಯಸುತ್ತಾರೆ. ನಾಲ್ಕು ಅಗಳು ಇಚುಕಿದರೆ ಸಾಕು. ನೀವು ಒಪ್ಪಿಗೆ ಕೊಟ್ಟ ಮೇಲೆ ಅವರು ಮತ್ತೆ ನಿಮಗೇನು convince ಮಾಡುವುದು? ನೀವು ಈಗಾಗಲೇ ಒಪ್ಪಿಗೆ ಕೊಟ್ಟಿದ್ದೀರಿ. ಅನ್ನ ಬೆಂದಿದೆಯೋ ಅಥವಾ ಇಲ್ಲವೋ ಎಂದು ಎಲ್ಲಾ ಅಗಳನ್ನು ಇಚುಕುತ್ತೀರಾ? ಅಂದರೆ ಅನ್ನವನ್ನು ಯಾರು ತಿನ್ನಬಾರದೆಂದು ಎಲ್ಲಾ ಅಗಳನ್ನು ಇಚುಕು ನೋಡುತ್ತಿದ್ದಾರೆ. ಈಗಾಗಲೇ ಮಾನ್ಯ ಅಧ್ಯಕ್ಷರಿಗೆ convince ಆಗಿದೆ. ಇದಕ್ಕೆ ಸರ್ಕಾರ ಕೂಡ ಒಪ್ಪಿಕೊಂಡಿದೆ. ನಾವು ಮಣ್ಣಿನ ಮಕ್ಕಳೆಂದು ಪೇಟೆಂಟ್ ತೆಗೆದುಕೊಂಡಿದ್ದೇವೆಂದು ತಾವು ಹೇಳುತ್ತಿದ್ದೀರಿ. ಪೇಟೆಂಟ್ ತೆಗೆದುಕೊಂಡಿರುವ ಮಣ್ಣಿನ ಮಕ್ಕಳು ಬರ ಮತ್ತು ಅತಿವೃಷ್ಟಿ ಬಗ್ಗೆ ಚರ್ಚೆ ಮಾಡುವುದಕ್ಕೆ ತಯಾರಿಲ್ಲ.

**(ಗೊಂದಲ)**

**ಶ್ರೀ ಹೆಚ್.ಡಿ. ರೇವಣ್ಣ:** ನಿಮ್ಮ ಮುಖ್ಯ ಮಂತ್ರಿಗಳು ಕೃಷಿ ಬಗ್ಗೆ ಕ್ಲಾರಿಫಿಕೇಶನ್ ಕೊಡದೆ ಹೋಗಿದ್ದಾರೆ.

**(ಗೊಂದಲ)**

**ಶ್ರೀ ಸಿ.ಟಿ. ರವಿ:** ಯಾವ್ಯಾವುದರಲ್ಲಿ ಎಷ್ಟೆಷ್ಟು ಸಿಗುತ್ತದೆಂದು ಅವರಿಗೆ ಚೆನ್ನಾಗಿ ಗೊತ್ತಿದೆ. ಅದು ಈ ಸದನಕ್ಕೂ ಕೂಡ ಗೊತ್ತಾಗಬೇಕು. ಅದರ

ಅನುಭವದ ಆಧಾರ ಹಿನ್ನೆಲೆಯಲ್ಲಿ ರೈತರ ಮೇಲೆ ಮತ್ತು ಬರಗಾಲದ ಮೇಲೆ ಪ್ರೀತಿ ಬಿಟ್ಟು ಕಲ್ಲಿದ್ದಲಿನ ಮೇಲೆ ಪ್ರೀತಿ ತೋರಿಸುತ್ತಿದ್ದಾರೆ. ಏಕೆಂದರೆ ಯಾವುದರಲ್ಲಿ ಎಷ್ಟು ಪರ್ಸೆಂಟೇಜ್ ಸಿಗುತ್ತದೆಂದು ಇವರಿಗಿಂಥ ಈ ಸದನದಲ್ಲಿ ಬೇರೆ ಯಾರಿಗೂ ಸಹ ಗೊತ್ತಿಲ್ಲ. ಅದಕ್ಕಾಗಿಯೇ ಆ ಪ್ರೀತಿಯನ್ನು ತೋರಿಸುತ್ತಿದ್ದಾರೆ. ಮಧ್ಯಾಹ್ನದ ಮೇಲೆ ಚರ್ಚೆಗೆ ಅವಕಾಶ ಕೊಡಲಾಗಿದೆ. ಆದ್ದರಿಂದ, ನಿಮಗೆ ರೈತರ ಬಗ್ಗೆ ಏನಾದರೂ ಕಾಳಜಿ ಇದ್ದರೆ ಮತ್ತು ಬರ, ಅತಿವೃಷ್ಟಿ ಬಗ್ಗೆ ಚರ್ಚೆ ಮಾಡಬೇಕೆಂದು ಇದ್ದರೆ ದಯಮಾಡಿ ಅವಕಾಶ ಮಾಡಿಕೊಡಿ. ಎಳೆಯ ಮಕ್ಕಳ ತರಹ ರಚ್ಚೆ ಮಾಡತಕ್ಕಂಥ ಕೆಲಸ ಮಾಡುವುದಕ್ಕೆ ಹೋಗಬೇಡಿ.

**(ಮಾನ್ಯ ಹೆಚ್.ಡಿ.ರೇವಣ್ಣನವರು ಅವರ ಸ್ಥಾನಕ್ಕೆ ಹೋಗಿ ಮಾತನಾಡಿದರು)**

**ಶ್ರೀ ಹೆಚ್.ಡಿ. ರೇವಣ್ಣ:** ಮಾನ್ಯ ಸಭಾಧ್ಯಕ್ಷರೆ, ನಾನು ಇನ್ನು ಸಬ್‌ಮಿಷನ್ ಮಾಡಿಲ್ಲ. ನಾನು ನೆನ್ನೆ ದಿವಸ ನಿಲುವಳಿ ಸೂಚನೆ ಬಗ್ಗೆ ನೋಟಿಸ್ ಕೊಟ್ಟಿದ್ದೇನೆ. ಆದರೆ, ಮಾನ್ಯ ಮುಖ್ಯ ಮಂತ್ರಿಗಳು ಕೃಷಿ ಬಗ್ಗೆ ಉತ್ತರ ಕೊಡುವುದನ್ನು ಬಿಟ್ಟು ಅವರು ಈ ರಾಜ್ಯದಲ್ಲಿ 2002ನೇ ಇಸವಿಯಿಂದ ಇಲ್ಲಿಯವರೆ ತನಿಖೆ ಮಾಡಿಸುತ್ತೇನೆಂದು ಹೇಳಿದರು. ಅವರು ತನಿಖೆಯನ್ನು ಎಲ್ಲಿವರೆಗೂ ಬೇಕಾದರೆ ಮಾಡಿಸಲಿ. ಇವರ ಕಾಲದಲ್ಲಿ ಆಗರತಕ್ಕಂಥದರ ಬಗ್ಗೆ ಅಂದರೆ, ಮಾನ್ಯ ಮುಖ್ಯ ಮಂತ್ರಿಯವರು ನೀಡಿರುವ ಪತ್ರದ ಮೇಲೆ ಆಗಿರುವುದೆಂದು ಸಿಂಗಲ್ ಜಡ್ಜ್ ಕೋರ್ಟ್‌ನಲ್ಲಿ ಆದೇಶವಾಗಿರುವುದರಿಂದ ಇದರಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ನೇರವಾಗಿ ಕಾರಣಕರ್ತರೆಂದು ಹೇಳುತ್ತೇನೆ. ಆದ್ದರಿಂದ, ಮಾನ್ಯ ಮುಖ್ಯ ಮಂತ್ರಿಗಳು ರಾಜೀನಾಮೆ ಕೊಟ್ಟು enquiry face ಮಾಡಬೇಕಾಗುತ್ತದೆ. ಸಿಂಗಲ್ ಜಡ್ಜ್ ಕೋರ್ಟ್‌ನಲ್ಲಿ ಆದೇಶವಾದ ಮೇಲೆ ಮತ್ತೇನು ಇದೆ?

**ಅಧ್ಯಕ್ಷರು:** ದಯವಿಟ್ಟು ನಿಮ್ಮ ಸ್ಥಳಗಳಿಗೆ ಹೋಗಿ ಎಂದು ನಾನು ನಿಮ್ಮಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಈಗ ಬರಗಾಲದ ವಿಷಯದ ಬಗ್ಗೆ ಚರ್ಚೆ ಪ್ರಾರಂಭ ಮಾಡಿ.

**ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್:** House order ನಲ್ಲಿ ಇಲ್ಲ. ಹೇಗೆ ಚರ್ಚೆ ಪ್ರಾರಂಭ ಮಾಡುವುದು?

**ಅಧ್ಯಕ್ಷರು:** ಆರ್ಡರ್‌ನಲ್ಲಿ ಇಲ್ಲವೆಂದರೆ ನಾನು ಅಡ್ಜರ್ನ್ ಮಾಡಿ ಹೋಗುತ್ತೇನಷ್ಟೆ. ನೀವು ಮಾತನಾಡುವುದಕ್ಕೆ ತಯಾರಿಲ್ಲವೆಂದರೆ ನಾನೇನು ಮಾಡಬೇಕು. ನಿಮ್ಮ ಸ್ಥಳಗಳಿಗೆ ಹೋಗಿ ಎಂದು ನಾನು ಈಗಾಗಲೇ ರಿಕ್ವೆಸ್ಟ್ ಮಾಡಿದ್ದೇನೆ. ಆದರೂ ಕೂಡ ಅವರು ಹೋಗುತ್ತಿಲ್ಲ. ಮತ್ತೆ ಮಾತನಾಡುವುದಕ್ಕೆ ನೀವು ತಯಾರಿಲ್ಲವೆಂದರೆ ನಾನು ಅಡ್ಜರ್ನ್ ಮಾಡಿ ಮನೆಗೆ ಹೋಗುತ್ತೇನಷ್ಟೆ. ಇಲ್ಲದಿದ್ದರೆ ನಾನು ಏನು ಮಾಡಬೇಕು?

**ಶ್ರೀ ಹೆಚ್.ಡಿ.ರೇವಣ್ಣ:** ಬರಗಾಲದ ಬಗ್ಗೆ ಚರ್ಚೆ ಮಾಡಲು ನಮ್ಮದೇನು ವಿರೋಧ ಇಲ್ಲ. ಆದರೆ, ಮೊದಲು ಕಲ್ಲಿದ್ದಲಿನ ಹಗರಣದ ಬಗ್ಗೆ ಸಬ್‌ಮಿಷನ್ ಮಾಡಲು ಅವಕಾಶ ಕೊಡಿ.

**(ಗೊಂದಲ)**

**ಶ್ರೀ ಆರ್. ಅಶೋಕ:** ಬಾವಿಯಲ್ಲಿರುವ ಕೇವಲ 8-9 ಜನ ಸದಸ್ಯರಿಂದ ಇಡೀ ಸದನದಲ್ಲಿರುವ ಸುಮಾರು 60-70 ಜನರ ಹಕ್ಕನ್ನು ಮೊಟಕುಮಾಡುವುದು ಬೇಡ. ಚರ್ಚೆಗೆ ಸರ್ಕಾರ ಸಿದ್ದವಾಗಿದೆ.

**(ಗೊಂದಲ)**

**ಅಧ್ಯಕ್ಷರು:** ಚರ್ಚೆ ಮಾಡುವುದಕ್ಕೆ ಅವರು ತಯಾರಿಲ್ಲ.

**ಶ್ರೀ ಆರ್. ಅಶೋಕ:** ಪ್ರಸ್ತಾವನೆಯನ್ನು ಒಪ್ಪಿದ ಮೇಲೆ ಮತ್ತೆ ಹಠಮಾಡುವಂಥದ್ದು ಬೇಡ. ಬರದ ಬಗ್ಗೆ ಚರ್ಚೆ ಮಾಡಿ.

**(ಗೊಂದಲ)**

**ಅಧ್ಯಕ್ಷರು:** ಬರಗಾಲದ ಬಗ್ಗೆ ನೀವು ಮಾತನಾಡುವುದಾದರೆ ಮಾತನಾಡಿ. ಇಲ್ಲದಿದ್ದರೆ ನಾನು ಅಡ್ಜರ್ನ್ ಮಾಡುತ್ತೇನೆ. ಹೌಸ್ ಪೂರ್ಣವಾಗಿ ಆರ್ಡರ್‌ನಲ್ಲಿ ಇಲ್ಲದೆ ಇದ್ದಾಗ ಮಾತನಾಡುವುದಕ್ಕೆ

ಆಗುವುದಿಲ್ಲ. ಆದರೆ, ಈ ರೀತಿಯಾಗಿ ಸಾಕಷ್ಟು ಸಲ ಆಗಿದೆ. ಸದನ ಬಾವಿಯಲ್ಲಿದ್ದಾಗಲೂ ಕೂಡ ಸಾಕಷ್ಟು ಸಲ ಚರ್ಚೆಯಾಗಿದೆ.

**ಶ್ರೀ ಆರ್. ಅಶೋಕ್:** ನೀವು ಇವತ್ತು ಏನೇ ಮಾತನಾಡಿದರೂ ಕೂಡ ನಾಳೆ ದಿವಸವೇ ಪತ್ರಿಕೆಯಲ್ಲಿ ಬರುವುದು. ಇದರಲ್ಲಿ ಯಾರ್ಯಾರು ಇದ್ದಾರೆಂದು ಗೊತ್ತಾಗಬೇಕು. ಆದ್ದರಿಂದ, ಇದರ ಬಗ್ಗೆ ತನಿಖೆ ಮಾಡಿಸುತ್ತೇನೆಂದು ನೆನ್ನೆ ದಿವಸ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ.

**(ಗೊಂದಲ)**

**ಅಧ್ಯಕ್ಷರು:** ನಾನು ನಿಮ್ಮ ವಿಷಯವನ್ನು ರಿಜೆಕ್ಟ್ ಮಾಡಿಲ್ಲ ಮತ್ತೆ ನಾಳೆಗೂ ಕೂಡ ಮುಂದಕ್ಕೆ ಹಾಕಿಲ್ಲ. ಇವತ್ತು ಮಧ್ಯಾಹ್ನ ತೆಗೆದುಕೊಳ್ಳೋಣವೆಂದು ಹೇಳುತ್ತಿದ್ದೇನೆ. 5 ನಿಮಿಷದಲ್ಲಿ ಸಬ್‌ಮಿಷನ್ ಮಾಡುವುದರ ಬದಲು ಮಧ್ಯಾಹ್ನ 1 ಗಂಟೆ ಅವಧಿ ತೆಗೆದುಕೊಂಡು ಮಾತನಾಡಿ.

**ಶ್ರೀ ಹೆಚ್.ಡಿ. ರೇವಣ್ಣ:** 5 ನಿಮಿಷ ನಮಗೆ ಅವಕಾಶ ಕೊಡಿ.

**ಅಧ್ಯಕ್ಷರು:** 5 ನಿಮಿಷದಲ್ಲಿ ಎಲ್ಲಾ ಮುಗಿಸುತ್ತೀರಾ? 5 ನಿಮಿಷದಲ್ಲಿ ಮುಗಿಯುವುದಿಲ್ಲ.

**(ಗೊಂದಲ)**

**ಶ್ರೀ ಆರ್. ಅಶೋಕ್:** ಮಾನ್ಯ ಅಧ್ಯಕ್ಷರೆ, ಬರಗಾಲದ ಬಗ್ಗೆ ಚರ್ಚೆ ಮಾಡಲು ಅವಕಾಶ ಕೊಡಿ.

**ಅಧ್ಯಕ್ಷರು:** ನಿಮ್ಮ ಎಲ್ಲಾ ವಿಷಯಗಳು 5 ನಿಮಿಷದಲ್ಲಿ ಮುಕ್ತಾಯ ಮಾಡುತ್ತೀರಾ? 5 ನಿಮಿಷದಲ್ಲಿ ಮುಕ್ತಾಯ ಮಾಡುತ್ತೇನೆಂದರೆ ಮತ್ತೆ ಮಧ್ಯಾಹ್ನ ಅವಕಾಶ ಕೊಡುವುದಿಲ್ಲ.

**(ಗೊಂದಲ)**

**ಶ್ರೀ ಅರವಿಂದ ಲಿಂಬಾವಳಿ:** ಅವರಿಗೆ ಟಿ.ವಿ. ಮತ್ತು ಪತ್ರಿಕೆಯಲ್ಲಿ ಬರಬೇಕೆಂಬ ಉದ್ದೇಶ ಬಿಟ್ಟರೆ ಬೇರೇನು ಇಲ್ಲ.

**(ಗೊಂದಲ)**

**ಅಧ್ಯಕ್ಷರು:** 5 ನಿಮಿಷದಲ್ಲಿ ಮುಕ್ತಾಯ ಮಾಡುತ್ತೀರಾ? ಮಧ್ಯಾಹ್ನ ಮತ್ತೆ ಚರ್ಚೆಗೆ ಅವಕಾಶ ಕೊಡುವುದಿಲ್ಲ.

**ಶ್ರೀ ಅರವಿಂದ ಲಿಂಬಾವಳಿ:** ಮಾನ್ಯ ಅಧ್ಯಕ್ಷರೆ, ಮಾನ್ಯ ರೇವಣ್ಣನವರಿಗೆ ಟಿ.ವಿ. ಮತ್ತು ಪತ್ರಿಕೆಯಲ್ಲಿ ಹೈಲೈಟ್ ಆದರೆ ಸಾಕಷ್ಟೆ.

**(ಗೊಂದಲ)**

**ಅಧ್ಯಕ್ಷರು:** Submission and final discussion ಎಲ್ಲವನ್ನು ಈಗ ಮುಗಿಸುತ್ತೀರಾ? ಮುಗಿಸುವುದಕ್ಕೆ ಆಗದಿದ್ದರೆ ಬಿಡಿ. ಮಧ್ಯಾಹ್ನ ಡೀಟೇಲ್ ಆಗಿ ಚರ್ಚೆ ಮಾಡಿ. ಡೀಟೇಲ್ ಆಗಿ ಚರ್ಚೆ ಮಾಡುವುದಕ್ಕೆ 5 ನಿಮಿಷದಲ್ಲಿ ಸಾಧ್ಯವೇ? ಮತ್ತೇಕೆ ಮಾಡುವುದಕ್ಕೆ ಹೋಗುತ್ತೀರಿ? ಸುಮ್ಮನೆ ಏನೊಂದು ಹೇಳಿ ಮುಗಿಸುವುದೆ? ಮಾಧ್ಯಮಕ್ಕೆ ಹೋಗಬೇಕೆಂಬ ದೃಷ್ಟಿಯಿಂದ ಮಾತನಾಡುತ್ತಿದ್ದೀರಾ? ಇದರಲ್ಲಿ ಅರ್ಥ ಇಲ್ಲ. ಬರಗಾಲದ ಬಗ್ಗೆ ಚರ್ಚೆ ಮಾಡುವುದಕ್ಕೆ ಯಾರು ತಯಾರಿಲ್ಲ. ಈಗ ಸದನವನ್ನು 15 ನಿಮಿಷಗಳ ಕಾಲ ಮುಂದಕ್ಕೆ ಹಾಕಿದ್ದೇನೆ.

**(ಸದನವು 11 ಗಂಟೆ 57 ನಿಮಿಷಕ್ಕೆ ಮುಕ್ತಾಯಗೊಂಡು ಮತ್ತೆ 15 ನಿಮಿಷದ ನಂತರ ಸೇರಲು ನಿಶ್ಚಯಿಸಿತು)**

**1–00 PM**

**(ಸದನವು ಪುನಃ ಮಧ್ಯಾಹ್ನ 1.16 ಗಂಟೆಗೆ ಸಮಾವೇಶಗೊಂಡಿತು)**

**(ಮಾನ್ಯ ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)**

**ಶ್ರೀ ಬಸವರಾಜ್ ಬೊಮ್ಮಾಯಿ:** ಮಾನ್ಯ ಅಧ್ಯಕ್ಷರೆ, ಬಾವಿಯಿಂದ ಹೊರಗಡೆ ಬಂದಿದ್ದಕ್ಕೆ ಜೆ.ಡಿ.(ಎಸ್) ನವರಿಗೆ ತಮ್ಮ ಮುಖಾಂತರ ನಾನು ಧನ್ಯವಾದಗಳನ್ನು ಅರ್ಪಿಸುತ್ತೇನೆ.

**ಶ್ರೀ ಹೆಚ್.ಡಿ. ರೇವಣ್ಣ:** ನಾವು ಧರಣಿ ವಾಪಸ್ ತೆಗೆದುಕೊಂಡಿಲ್ಲ.

**ಅಧ್ಯಕ್ಷರು:** ಮಾನ್ಯ ರೇವಣ್ಣನವರೆ, ನೀವು ಏನು ಹೇಳುವುದಿದೆಯೋ, ಅದನ್ನು ಹೇಳಿಬಿಡಿ. ಅದೇನೋ ನಿಮ್ಮ Subject matter ಓದಬೇಕೆಂದಿದ್ದೀರಲ್ಲಾ, ಅದನ್ನು ಓದಿಬಿಡಿ.

**(ಈ ಹಂತದಲ್ಲಿ ಜೆ.ಡಿ.(ಎಸ್) ಪಕ್ಷದ ಸದಸ್ಯರು ಸದನದ ಬಾವಿಯಲ್ಲಿ ಧರಣಿ ನಿರತರಾದರು)**

**ಶ್ರೀ ಹೆಚ್.ಡಿ. ರೇವಣ್ಣ:** ಮಾನ್ಯ ಸಭಾಧ್ಯಕ್ಷರೆ, ...

**ಶ್ರೀ ಸಿ.ಎಸ್. ನಾಡಗೌಡ:** ಒಂದು ನಿಮಿಷ, ನಾನು ಸಹಾಯಕ್ಕೆ ಬರುತ್ತೇನೆ The House is not in order. ಈಗ ತಾವು ಏನೇ submission ಮಾಡಿದರೂ ಕೂಡ ಅದು ಸರಿಯಾಗುವುದಿಲ್ಲ. Speaker allow ಮಾಡಿ, ಅವರು ಒಪ್ಪಿದ ನಂತರವೂ ನೀವು well ನಲ್ಲಿ ನಿಂತುಕೊಳ್ಳುವುದು ಸರಿಯಲ್ಲ. Go back to your seats. ಇದು ಸರಿಯಾದ ಸಂಪ್ರದಾಯವಲ್ಲ.

**(ಗೊಂದಲ)**

**ಶ್ರೀ ಆರ್. ಅಶೋಕ್:** ಮಾನ್ಯ ಅಧ್ಯಕ್ಷರೆ, ಇವರು ಎರಡು ಪಾತ್ರ ಮಾಡುವುದಕ್ಕಾಗುವುದಿಲ್ಲ. Double acting ಮಾಡಲಿಕ್ಕಾಗುವುದಿಲ್ಲ, Single acting ಮಾಡಬೇಕಾಗುತ್ತದೆ. ರಾಮನ ಪಾತ್ರ ಮತ್ತು ರಾವಣನ ಪಾತ್ರ ಎರಡನ್ನೂ ಮಾಡಲಿಕ್ಕಾಗುವುದಿಲ್ಲ.

**(ಗೊಂದಲ)**

**ಅಧ್ಯಕ್ಷರು:** ಅದನ್ನು ಓದಿಬಿಡಿ.

(ಗೊಂದಲ)

**ಶ್ರೀ ಹೆಚ್.ಡಿ. ರೇವಣ್ಣ:** ಮಾನ್ಯ ಸಭಾಧ್ಯಕ್ಷರೆ, ರಾಮನ ಪಾತ್ರ ಮತ್ತು ರಾವಣನ ಪಾತ್ರ ಎಂದು ಮಾನ್ಯ ಅಶೋಕ್‌ರವರು ಹೇಳುವುದಾದರೆ, ನಾವು ಅಲ್ಲೇ ಕುಳಿತುಕೊಳ್ಳುತ್ತೇವೆ.

(ಗೊಂದಲ)

**ಶ್ರೀ ಹೆಚ್.ಡಿ. ರೇವಣ್ಣ:** ಮಾನ್ಯ ಅಧ್ಯಕ್ಷರೆ, ದಯವಿಟ್ಟು ಅದನ್ನು ಕಡತದಿಂದ ವಾಪಸ್ ತೆಗೆಸಬೇಕು. ಇಲ್ಲದಿದ್ದರೆ ನಾವು ಮತ್ತೆ ಅಲ್ಲೇ ಕುಳಿತುಕೊಳ್ಳಬೇಕಾಗುತ್ತದೆ. ಬೆಳಿಗ್ಗೆಯಿಂದ ರಾಮನ ಪಾತ್ರ ಮತ್ತು ರಾವಣನ ಪಾತ್ರ ಮಾಡುತ್ತಿರುವವರು ನೀವು. ನಾನು ಅದನ್ನು ಮಾಡುತ್ತಿಲ್ಲ. ಏಕೆ ಹೆದರಬೇಕು? ರಾಮನಾಗಿಯೇ ಇರಬೇಕು. ಮಾನ್ಯ ಅಧ್ಯಕ್ಷರೆ, ನಿಮ್ಮ ಕೊಠಡಿಯಲ್ಲಿ ಏನು ತೀರ್ಮಾನವಾಯಿತು ಎನ್ನುವುದನ್ನು ಇಲ್ಲಿ ತಿಳಿಸಬೇಕಾಗುತ್ತದೆ.

(ಗೊಂದಲ)

**ಶ್ರೀ ಹೆಚ್.ಡಿ. ರೇವಣ್ಣ:** ಮಾನ್ಯ ಅಧ್ಯಕ್ಷರೆ, ತಾವು ನನಗೆ submission ಮಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ. ಅದಕ್ಕೋಸ್ಕರ ನಾನು...

(ಗೊಂದಲ)

**ಶ್ರೀ ಗೋವಿಂದ ಎಂ. ಕಾರಜೋಳ:** ರಾವಣನ ಪೂಜೆ ಮಾಡುವವರೂ ಇದ್ದಾರೆ ...

(ಗೊಂದಲ)

**ಅಧ್ಯಕ್ಷರು:** ಶ್ರೀ ಕಾರಜೋಳ್‌ರವರೆ, ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

**ಶ್ರೀ ಹೆಚ್.ಡಿ. ರೇವಣ್ಣ:** ಮಾನ್ಯ ಗೋವಿಂದ ಕಾರಜೋಳ್‌ರವರು ಬೇಕಾದರೆ ರಾಮನನ್ನಾದರೂ ಪೂಜೆ ಮಾಡಿಕೊಳ್ಳಲಿ, ರಾವಣನನ್ನಾದರೂ ಪೂಜೆ ಮಾಡಿಕೊಳ್ಳಲಿ.

**(ಗೊಂದಲ)**

**ಅಧ್ಯಕ್ಷರು:** ಮಾನ್ಯ ರೇವಣ್ಣನವರೆ, ಮತ್ತೆ ಬೇರೆ subjectಗೆ ಹೋಗಬೇಡಿ. ತಮ್ಮ ಹತ್ತಿರ ಇರುವುದನ್ನು ಓದಿಬಿಡಿ.

**(ಗೊಂದಲ)**

**ಶ್ರೀ ಹೆಚ್.ಡಿ. ರೇವಣ್ಣ:** ಮಾನ್ಯ ಅಧ್ಯಕ್ಷರು ಈಗ ಸಂಧಾನ ಮ್ಯಾಡಿದ್ದಾರೆ. ಮಾನ್ಯ ವಿರೋಧ ಪಕ್ಷದ ಉಪ ನಾಯಕರಾದಂತಹ ಜಯಚಂದ್ರರವರು ಮತ್ತು ಮಾನ್ಯ ಸಭಾ ನಾಯಕರು ಇದ್ದಾಗ ಹೇಳಿದ್ದಾರೆ. ನನಗೆ ನಿಯಮ 60ರಲ್ಲಿ submissionಗೆ ಅವಕಾಶ ಕೊಡುತ್ತೇನೆಂದು ಹೇಳಿದ್ದಾರೆ. ಆದ್ದರಿಂದ ನಾನು ಈಗ submission ಮಾಡುತ್ತೇನೆ. ಸಂಜೆ 4.30 ಗಂಟೆಗೆ ಚರ್ಚೆಗೆ ಅವಕಾಶ ಕೊಡುತ್ತೇನೆಂದು ಹೇಳಿದ್ದಾರೆ.

**(ಈ ಹಂತದಲ್ಲಿ ಮಾನ್ಯ ಜೆ.ಡಿ.(ಎಸ್) ಪಕ್ಷದ ಸದಸ್ಯರು ಸದನದ ಬಾವಿಯಿಂದ ನಿರ್ಗಮಿಸಿದರು)**

ಮಾನ್ಯ ಸಭಾಧ್ಯಕ್ಷರೆ, ನಾನು ಇದನ್ನು ಪ್ರಸ್ತಾಪ ಮಾಡಿರುವ ಹಿಂದೆ ಬೇರೆ ಯಾವ ಉದ್ದೇಶವೂ ಇಲ್ಲ. ನಿನ್ನೆ ಬೆಳಿಗ್ಗೆಯೇ ನಾನು ನಿಮಗೆ ನಿಲುವಳಿ ಸೂಚನೆಯನ್ನು ಕೊಟ್ಟಿದ್ದೆ. ಮೊನ್ನೆ BACಯಲ್ಲಿ ಮೂರು ದಿವಸ ಯಾವುದೇ ಹಗರಣಗಳ ಚರ್ಚೆಯ ಬಗ್ಗೆ ತೀರ್ಮಾನ ಮಾಡಬಾರದು ಎಂದು ತಮ್ಮ ಅಧ್ಯಕ್ಷತೆಯಲ್ಲಿ ನಿರ್ಣಯವಾಗಿತ್ತು. ಅದರಂತೆ ವಿರೋಧ ಪಕ್ಷದ ಸದಸ್ಯರುಗಳಾದ ನಾವು ನಡೆದುಕೊಂಡಿದ್ದೇವೆ. ನಾವು ಯಾವ ವಿಷಯವನ್ನೂ ಮೂರು ದಿವಸ ಪ್ರಸ್ತಾಪ ಮಾಡಿಲ್ಲ. ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬಿಟ್ಟು ಬೇರೆ ಯಾವ ವಿಷಯವನ್ನೂ ಸಹ ನಾವು ಚರ್ಚೆ ಮಾಡಿಲ್ಲ. ರಾಜ್ಯದ ಜನತೆಗೆ ತಪ್ಪು message ಹೋಗಬಾರದು ಎಂಬ

ದೃಷ್ಟಿಯಿಂದ ನಾವು ಮೂರು ದಿವಸ ಮಾನ್ಯ ಸಭಾ ನಾಯಕರು ಮತ್ತು ನಿಮ್ಮ ಸಮ್ಮುಖದಲ್ಲಿ BACಯಲ್ಲಿ ಏನು ತೀರ್ಮಾನವಾಯಿತೋ, ಅದರಂತೆ ನಡೆದುಕೊಂಡಿದ್ದೇವೆ. ಆದರೆ ನಿನ್ನೆ ನಾನು ನಿಲುವಳಿ ಸೂಚನೆ ಕೊಟ್ಟ ಮೇಲೆ ಕೃಷಿ ವಿಷಯದ ಬಗ್ಗೆ ಉತ್ತರ ಕೊಡುವ ಸಮಯದಲ್ಲಿ ಮುಖ್ಯಮಂತ್ರಿಗಳು ಒಂದು ಹೇಳಿಕೆಯನ್ನು ಕೊಟ್ಟರು. ನಿನ್ನೆಯೇ ನಾನು ಹೇಳಿದೆ, ಮುಖ್ಯಮಂತ್ರಿಗಳು ಏನು ಹೇಳಿದರೆಂದರೆ, ಈಗ ಮಂತ್ರಿಗಳಿಲ್ಲ, ನಾಳೆ ಬೆಳಿಗ್ಗೆ ಬಂದ ಮೇಲೆ ನೀವು ಮಾತನಾಡಿ, ಅವರು ಆ ಬಗ್ಗೆ ಸಂಬಂಧಪಟ್ಟವರು, ಎಂದು ನಿನ್ನೆ ಮುಖ್ಯ ಮಂತ್ರಿಗಳು ಹೇಳಿದ್ದಕ್ಕೆ, ಮತ್ತೆ ನಾನು ಇವತ್ತು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇನೆ. ಏಕೆಂದರೆ, ಮುಖ್ಯಮಂತ್ರಿಗಳು 2002–09ವರೆಗೆ ಮಾಡುವುದಕ್ಕೆ ನನ್ನದೇನು ಅಭ್ಯಂತರವಿಲ್ಲ. ಆದರೆ 2008–09ರಲ್ಲಿ ನಡೆದಿರುವ ಹಗರಣದ ಬಗ್ಗೆ ಸಿಂಗಲ್ ಬೆಂಚ್‌ನಲ್ಲಿ ಈಗಾಗಲೇ ಆದೇಶವಾಗಿದೆ, ಡಬಲ್ ಬೆಂಚ್‌ನಲ್ಲೂ ಆದೇಶವಾಗಿದೆ. ಇಡೀ ರಾಷ್ಟ್ರದ ಇತಿಹಾಸದಲ್ಲಿ ಒಬ್ಬ ರಿಟೈರ್ಡ್ ಜಡ್ಜ್ ಇದನ್ನು ತನಿಖೆ ಮಾಡುವುದಕ್ಕೆ ಅವಕಾಶವಿದೆಯೇ?

**ಶ್ರೀ ಬಸವರಾಜ ಬೊಮ್ಮಾಯಿ (ಭಾರಿ ನೀರಾವರಿ ಮಂತ್ರಿಗಳು):** ಅವರು ಓದುವುದನ್ನು ಬಿಟ್ಟು ಮತ್ತೆ ಪ್ರಸ್ತಾಪ ಮಾಡುತ್ತಿದ್ದಾರೆ.

**(ಗೊಂದಲ)**

**ಶ್ರೀ ಹೆಚ್.ಡಿ. ರೇವಣ್ಣ:** ಸಬ್‌ಮಿಷನ್ ಮಾಡುವಾಗ ಹೇಳಬೇಕಾಗುತ್ತದೆ.

**(ಗೊಂದಲ)**

**ಅಧ್ಯಕ್ಷರು:** ರೇವಣ್ಣನವರೆ ನಿಲುವಳಿ ಸೂಚನೆಯ ವಿಷಯವನ್ನು ಓದಿಬಿಡಿ.

**(ಗೊಂದಲ)**

**ಶ್ರೀ ನೆಹರು ಓಲೆಕಾರ್:** ಮಾನ್ಯ ಸಭಾಧ್ಯಕ್ಷರೆ, ಸದನದ ಕಾಲಾವಕಾಶ ಮುಗಿಯುತ್ತಿದೆ, ನಾವು ಬರಗಾಲ, ಫ್ಲಡ್ ಬಗ್ಗೆ ಮಾತನಾಡಬೇಕಾಗಿದೆ, ಇವರೊಬ್ಬರೆ ಮಾತನಾಡುವುದಲ್ಲ.

**(ಗೊಂದಲ)**

**ಶ್ರೀ ಟಿ.ಬಿ. ಜಯಚಂದ್ರ:** ಯಾವ ವಿಚಾರವಾಗಿ ನಿಲುವಳಿ ಸೂಚನೆಯನ್ನು ತಂದಿದ್ದೀರೆಂಬುದನ್ನು ದಯಮಾಡಿ ಈ ಸದನದ ಮುಂದಿಡಿ.

**ಶ್ರೀ ಹೆಚ್.ಡಿ. ರೇವಣ್ಣ:** ಮಾನ್ಯ ಸಭಾಧ್ಯಕ್ಷರೆ, ಕರ್ನಾಟಕ ರಾಜ್ಯದ ಜನತೆ ಹಾಗೂ ರೈತರ ವಿದ್ಯುತ್ ಸಮಸ್ಯೆ ಸಂಕಷ್ಟಕ್ಕೊಳಗಾಗಿರುವಾಗ ಕರ್ನಾಟಕ ವಿದ್ಯುತ್ ನಿಗಮ ನಿಯಮಿತ ಸಂಸ್ಥೆಯು ನಿಯಮ ಬಾಹಿರವಾಗಿ ಮೆ: ಬಾಟಿಯಾ ಇಂಟರ್ ನ್ಯಾಷನಲ್ ಲಿಮಿಟೆಡ್, ಇಂದೂರ್ ಹಾಗೂ ಚೆನ್ನೈ ಮತ್ತು ಮೇ: ಎಂ.ಎಂ.ಟಿ.ಸಿ. ಲಿಮಿಟೆಡ್, ಬೆಂಗಳೂರು ಈ ಸಂಸ್ಥೆಗಳಿಂದ ಆಮದಾದ ಕಲ್ಲಿದ್ದಲ್ಲನ್ನು ಖರೀದಿಸಿರುವ ಬಗ್ಗೆ ಈಗಾಗಲೇ ಪತ್ರಿಕೆ ಹಾಗೂ ವಿದ್ಯುನ್ಮಾನಗಳಲ್ಲಿ ಪ್ರಕಟವಾಗಿದ್ದು ಇದರಿಂದ ಸುಮಾರು ಕೋಟ್ಯಾಂತರ ರೂಪಾಯಿಗಳು ರಾಜ್ಯದ ಬೊಕ್ಕಸಕ್ಕೆ ನಷ್ಟವಾಗಿರುವುದರಿಂದ ಉಂಟಾಗಿರುವ ವಿಷಯವನ್ನು ನಿಯಮ 60ರಲ್ಲಿ ಪ್ರಸ್ತಾಪ ಮಾಡುವುದಕ್ಕೂ ತಮ್ಮ ಮುಂದೆ ಇಟ್ಟಿದ್ದೇನೆ. ಇದು ರಾಜ್ಯದ ಇತಿಹಾಸದಲ್ಲಿ ಎಂದೂ ನಡೆದಿಲ್ಲ, ಇಂಥ ದೊಡ್ಡ ಘೋರವಾದಂಥ ಒಂದು ಹಗರಣ ನಡೆದಿದೆ. (xxx xxx xxx) ಅದಕ್ಕೆ ಈ ಬಗ್ಗೆ ಚರ್ಚೆ ಮಾಡಲು ಅವಕಾಶ ಕೊಡಬೇಕೆಂದು.....

**(ಗೊಂದಲ)**

**ಶ್ರೀ ಬಸವರಾಜ ಬೊಮ್ಮಾಯಿ:** ನ್ಯಾಯಾಲಯದ ವಿಷಯಗಳ ಬಗ್ಗೆ ಸರ್ಕಾರ ನೇರವಾಗಿ ಸಮರ್ಪಕವಾದ ಉತ್ತರವನ್ನು ಕೊಡುತ್ತದೆ, ಯಾವ್ಯಾವ

---

ಸಮಯದಲ್ಲಿ ಏನೇನು ಆಗಿದೆ ಎಂಬ ಉತ್ತರವನ್ನು ಕೊಡುವುದಕ್ಕೆ ನಾವು ಸಿದ್ಧರಿದ್ದೇವೆ.

**ಶ್ರೀ ಹೆಚ್.ಡಿ. ರೇವಣ್ಣ:** ಇದಕ್ಕೆ ನೇರವಾಗಿ ಮುಖ್ಯಮಂತ್ರಿಗಳೆ ಹೊಣೆಗಾರರು, ಆದುದರಿಂದ .....

**(ಗೊಂದಲ)**

**ಶ್ರೀ ಬಸವರಾಜ ಬೊಮ್ಮಾಯಿ:** ಸರ್, ನೀವು ಚರ್ಚೆಗೆ ಅವಕಾಶ ಕೊಟ್ಟಿದ್ದೀರಾ? ಇದು ಅತಿಯಾಯಿತು, ಅಲ್ಲಿ (ಸ್ಪೀಕರ್ ಟೀ ರೂಂ) ಒಪ್ಪಿಕೊಂಡು ಬಂದು, ಮತ್ತೆ ಇಲ್ಲಿ ಮಾತನಾಡುತ್ತಿದ್ದಾರೆ, ಇದು ಸರಿಯಲ್ಲ, ಮುಖ್ಯಮಂತ್ರಿಗಳು ಹೊಣೆಯಾಗಿದ್ದಾರೆಂಬುದಕ್ಕೆ ಕಾರಣ ಕೊಡಿ ..

**(ಗೊಂದಲ)**

**ಶ್ರೀ ಗೋವಿಂದ ಕಾರಜೋಳ (ಸಣ್ಣ ನೀರಾವರಿ ಸಚಿವರು):** ಮಾನ್ಯ ಸಭಾಧ್ಯಕ್ಷರೆ, ಓದಿದ್ದನ್ನು ಬಿಟ್ಟು ಉಳಿದ್ದನ್ನೆಲ್ಲಾ ಕಡತದಿಂದ ತೆಗೆಯಬೇಕು.

**(ಗೊಂದಲ)**

**ಮಾನ್ಯ ಸದಸ್ಯರೊಬ್ಬರು:** ವಿದ್ಯುತ್ ಇಲಾಖೆ ತುಂಬಾ ಹಾನಿಗೊಳಗಾಗುವುದಕ್ಕೆ ರೇವಣ್ಣ ಕಾರಣರಾಗಿದ್ದಾರೆ, ಬೇಕಾಬಿಟ್ಟಿಯಾಗಿ ಆ ಇಲಾಖೆಯನ್ನು ಉಪಯೋಗ ಮಾಡಿಕೊಂಡು, ರಾಜ್ಯದ ಬೊಕ್ಕಸಕ್ಕೆ ನಷ್ಟವನ್ನುಂಟು ಮಾಡಿರುವ ರಾಜ್ಯವನ್ನು ಲೂಟಿ ಮಾಡಿರುವ ರೇವಣ್ಣನವರು ಹೊಣೆಗಾರರು.

**(ಗೊಂದಲ)**

**ಶ್ರೀ ಬಸವರಾಜ ಬೊಮ್ಮಾಯಿ:** ಹಿಂದೆ ಇಂಧನ ಸಚಿವರಾಗಿದ್ದವರು ಕೂಡ ಅಪರಾಧಿಗಳಾಗಿದ್ದಾರೆ

**(ಗೊಂದಲ)**

**ಅಧ್ಯಕ್ಷರು:** ಅವರಿಗೆ ಬರಗಾಲದ ಚರ್ಚೆ ಮಾಡುವುದು ಬೇಕಾಗಿಲ್ಲ, ಆ ನಿಲುವಳಿ ಸೂಚನೆಯಲ್ಲಿ ಯಾವ ಒಬ್ಬ ವ್ಯಕ್ತಿಯ ಬಗ್ಗೆ, ಮಂತ್ರಿಗಳ ಬಗ್ಗೆ ಆಗಲಿ, ಮುಖ್ಯಮಂತ್ರಿಗಳ ಬಗ್ಗೆ ಆಗಲಿ ಯಾವುದನ್ನೂ ಪ್ರಸ್ತಾಪ ಮಾಡದೆ, ಅವರ ಬಗ್ಗೆ ಅಪಾದನೆ ಮಾಡಲಾರದೆ, ನಿಲುವಳಿ ಸೂಚನೆಯಲ್ಲಿ ಯಾವುದೇ subject matter ಇಲ್ಲದೆ, ಈ ರೀತಿ ಮುಖ್ಯಮಂತ್ರಿಗಳ ಮೇಲೆ ಆಪಾದನೆ ಮಾಡುವುದು ಸರಿಯಾದುದ್ದಲ್ಲ, ಅದನ್ನು ಕಡತದಿಂದ ನಾನು ತೆಗೆದುಹಾಕಿದ್ದೇನೆ. ಅದು ನಿಮ್ಮ ನಿಲುವಳಿ ಸೂಚನೆಯಲ್ಲಿ ಅದು ಬರಬೇಕು, ಆ ಈ ರೀತಿ ನಿಲುವಳಿ ಸೂಚನೆಯಲ್ಲಿ ನೀವು ಹೇಳಿದ್ದೀರಾ? ಈ ರೀತಿ ಬೇಜವಾಬ್ದಾರಿಯಾಗಿ ಆಪಾದನೆ ಮಾಡುವುದು ಸರಿಯಲ್ಲ, ಇದು ನಿಮ್ಮ ನಿಲುವಳಿ ಸೂಚನೆಯಲ್ಲಿ ಎಲ್ಲಿದೆ? ನಿಮ್ಮ ನಿಲುವಳಿ ಸೂಚನೆ ನೋಟಿಸ್‌ನಲ್ಲಿ ಯಾರಾದರೂ ಒಬ್ಬ ಮಂತ್ರಿಗಳ ಬಗ್ಗೆ, ಮುಖ್ಯಮಂತ್ರಿಗಳ ಬಗ್ಗೆ ಆಪಾದನೆ ಮಾಡಿರುವುದು ಇದೆಯೇ?

**ಶ್ರೀ ಹೆಚ್.ಡಿ. ರೇವಣ್ಣ:** ಸರ್, ಸಬ್‌ಮಿಷನ್‌ನಲ್ಲಿ ಹೇಳುತ್ತಿದ್ದೇನೆ.

**(ಗೊಂದಲ)**

**ಅಧ್ಯಕ್ಷರು:** ನಿಮಗೆ ಆಪಾದನೆ ಮಾಡುವುದಷ್ಟೆ ಗೊತ್ತಿದೆ, ನಿಮಗೆ ಸಬ್ಜೆಕ್ಟ್ ಮ್ಯಾಟರ್ ಡಿಸ್‌ಕಷನ್ ಮಾಡುವ ಅವಶ್ಯಕತೆ ನಿಮಗಿಲ್ಲ, ಕೇವಲ ಮುಖ್ಯಮಂತ್ರಿಗಳ ಮೇಲೆ ಆಪಾದನೆ ಮಾಡುವುದಷ್ಟೆ ನಿಮಗೆ ಬೇಕಾಗಿದೆ, ನಿಮಗೆ ನಿಲುವಳಿ ಸೂಚನೆ ಮೇಲೆ ಚರ್ಚೆ ಮಾಡುವುದು ಬೇಕಾಗಿಲ್ಲ, ನಿಮಗೆ ಆಸಕ್ತಿ ಇಲ್ಲ.

**(ಗೊಂದಲ)**

**ಶ್ರೀ ಬಸವರಾಜ ಬೊಮ್ಮಾಯಿ:** ಮಾನ್ಯ ಸದಸ್ಯರು ಬೇಜವಾಬ್ದಾರಿಯಿಂದ ನಡೆದುಕೊಂಡಿದ್ದಾರೆ, ಅವರು ಈ ಸದನದ ಕ್ಷಮೆ ಕೇಳಬೇಕು, ಅವರ ಕಾಲದಲ್ಲಿ ಏನೇನು ಆಗಿದೆ ಅದು ನಮ್ಮ ಹತ್ತಿರವಿದೆ.

**(ಗೊಂದಲ)**

**ಕು. ಶೋಭಾ ಕರಂದ್ಲಾಜೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):** ಸರ್, ಅವರು ಈ ಸದನದ ಕ್ಷಮೆ ಕೇಳಲಿ, ನೀವು ಏನು ಮಾಡಿದ್ದೀರೆಂದು ನಮ್ಮ ಹತ್ತಿರವು ದಾಖಲೆ ಇದೆ.

**(ಗೊಂದಲ)**

**ಶ್ರೀ ಹೆಚ್.ಡಿ. ರೇವಣ್ಣ:** ನಾನು ಚರ್ಚೆ ಮಾಡಲು ತಯಾರಿದ್ದೇನೆ.

**(ಗೊಂದಲ)**

**ಶ್ರೀ ಬಸವರಾಜ ಬೊಮ್ಮಾಯಿ:** 2002ರಲ್ಲಿ ಇಂಧನ ಸಚಿವರಾಗಿದ್ದವರ ಬಗ್ಗೆಯೂ ಚರ್ಚೆಯಾಗಲಿ, ಹಿಂದಿನ ಇಂಧನ ಸಚಿವರೂ ಕೂಡ ಅಪರಾಧಿ ಸ್ಥಾನದಲ್ಲಿದ್ದಾರೆ, ಅವರು ಅಕ್ಯೂಸ್ಡ್ ಇದ್ದಾರೆ, ಅವರ ಮೇಲೂ ಕೂಡ ಆಪಾದನೆ ಇದೆ, ಅದು ಕೂಡ ವಿಚಾರಣೆಯಾಗಲಿ, ಅವರು ಅಪರಾಧಿ ಸ್ಥಾನದಲ್ಲಿದ್ದು ಇನ್ನೊಬ್ಬರ ಬಗ್ಗೆ ಹೇಳುತ್ತಿದ್ದಾರೆ.

**(ಗೊಂದಲ)**

**ಕು. ಶೋಭಾ ಕರಂದ್ಲಾಜೆ:** ಮುಖ್ಯಮಂತ್ರಿಗಳ ಹೆಸರು ನಿಲುವಳಿ ಸೂಚನೆಯಲ್ಲಿಲ್ಲದೆ, ಅವರ ಹೆಸರನ್ನು ಹೇಗೆ ಪ್ರಸ್ತಾಪ ಮಾಡುತ್ತಾರೆ ಸಭಾಧ್ಯಕ್ಷರೇ?

**(ಗೊಂದಲ)**

**ಶ್ರೀ ಆರ್. ಅಶೋಕ್ (ಸಾರಿಗೆ ಸಚಿವರು):** ಮಾನ್ಯ ಸಭಾಧ್ಯಕ್ಷರೆ, ತಮ್ಮ ಟೀ ರೂಂನಲ್ಲಿ ನಡೆದ ಮಾತುಕತೆ ಏನಿದೆ ಅದಕ್ಕೆ, ತಮ್ಮ ಕಚೇರಿಗೆ ಗೌರವವನ್ನು ಕೊಟ್ಟಿಲ್ಲ, ತಾವು ರೂಲಿಂಗ್ ಅನ್ನು 69ಗೆ ಕನ್ವರ್ಟ್ ಮಾಡುತ್ತೇನೆಂದು ಹೇಳಿದ್ದೀರಿ, ಇಡೀ ಸದನಕ್ಕೆ ಅವರು ಅಗೌರವವನ್ನು ತಂದಿದ್ದಾರೆ, ಹೀಗಾದರೆ ಸದನವನ್ನು ಹೇಗೆ ನಡೆಸುವುದು? ನಾವು ಚರ್ಚೆಗೆ ತಯಾರಾಗಿದ್ದೇವೆಂದು ಹೇಳಿದ್ದೇವೆ, 2002 ರಿಂದ ಯಾರ್ಯಾರು ಇಂಧನ ಮಂತ್ರಿಗಳಾಗಿದ್ದರು, ಮುಖ್ಯಮಂತ್ರಿಗಳಾಗಿದ್ದರು ಅಲ್ಲಿಂದಲೂ ನಾನು ತನಿಖೆ ಮಾಡಿಸುತ್ತೇನೆಂದು ಈಗಾಗಲೇ ಮುಖ್ಯಮಂತ್ರಿಗಳು ಸ್ಪಷ್ಟವಾಗಿ

ಹೇಳಿರುವುದರಿಂದ, ಸರ್ಕಾರ ಸಿದ್ಧವಿದೆ, ಟೆಂಡರ್ ಕರೆಯದೆ ಮೂರು ಮೂರು ವರ್ಷ ಯಾರು ಮಾಡಿದರು?

(ಗೊಂದಲ)

**ಶ್ರೀ ಬಸವರಾಜ ಬೊಮ್ಮಾಯಿ:** ರೇವಣ್ಣನವರೆ, ನೀವು ಏಕೆ ಭಯಪಡುತ್ತೀರಿ?

**ಶ್ರೀ ಆರ್. ಅಶೋಕ್:** ಅಧ್ಯಕ್ಷರೆ, ಮಾನ್ಯ ಜಯಚಂದ್ರರವರು ವಿರೋಧಪಕ್ಷದ ಉಪ ನಾಯಕರು ಅವರ ಮುಂದೆ ನಾವು ಚರ್ಚೆ ಮಾಡಿದ್ದೇವೆ, ಮಾತುಕತೆ ಮಾಡುವುದೊಂದು ಇಲ್ಲಿ ಬಂದು ಚರ್ಚೆ ಮಾಡುವುದೊಂದು.

**ಶ್ರೀ ಬಸವರಾಜ ಬೊಮ್ಮಾಯಿ:** ಸರ್, ನಾವೇ ಮಾಡಿಕೊಂಡಿರುವ ರೂಲ್ಸ್‌ಗಳಿವೆ, ಒಬ್ಬ ವ್ಯಕ್ತಿ ಕುರಿತು ಆಪಾದನೆ ಮಾಡಬೇಕಾದಲ್ಲಿ, ಕೈಗೊಳ್ಳಬೇಕಾದ ಕಾರ್ಯವಿಧಾನ 328, ಇದರನ್ವಯ ಅವರು ನೋಟೀಸ್ ಕೊಡಬೇಕಾಗುತ್ತದೆ, ಯಾರ ಮೇಲೂ ಆಪಾದನೆ ಮಾಡಬೇಕಾದರೂ ನೋಟೀಸ್ ಕೊಡಬೇಕಾಗುತ್ತದೆ, ಆ ನೋಟೀಸ್ ಕೊಡದೆ ರೇವಣ್ಣನವರು ಏನು ಮಾಡುತ್ತಿದ್ದಾರೆಂದರೆ hit and run case ಮಾಡುತ್ತಿದ್ದಾರೆ, ಸುಮ್ಮನೆ ಒಂದು ಆಪಾದನೆ ಮಾಡಿಬಿಡುವುದು ಓಡಿ ಹೋಗುವುದು, ರೇವಣ್ಣನವರೆ, ದಯವಿಟ್ಟು ಈ hit and run case ಮಾಡುವುದಕ್ಕೆ ಹೋಗಬೇಡಿ, ಹಿಂದಿನ ಸದನದಲ್ಲೆ hit and run case ಮಾಡಿದ್ದೀರಿ, ಇದರಿಂದ ಯಾವ ಪ್ರಯೋಜನವಾಗುವುದಿಲ್ಲ, hit and run case ಮಾಡುವುದಕ್ಕೆ ಹೋಗಬೇಡಿ, ಮುಖ್ಯಮಂತ್ರಿಗಳ ಮೇಲೆ ಆಪಾದನೆ ಮಾಡಿದರೆ ಅದಕ್ಕೆ ಉತ್ತರವನ್ನು ಕೊಡುತ್ತೇವೆ.

**ಮಾನ್ಯ ಸದಸ್ಯರೊಬ್ಬರು:** ಯಾರ್ಯಾರು ಏನೇನು ಹಗರಣವನ್ನು ಮಾಡಿದ್ದಾರೆ ಅವನ್ನೆಲ್ಲಾ ಒಂದು ಸಾರಿ ಚರ್ಚೆಯಾಗಲಿ, ಹಗರಣಗಳ ಬಗ್ಗೆ ಒಂದು ಸಾರಿ ತನಿಖೆಯಾಗಲಿ.

(ಗೊಂದಲ)

**ಶ್ರೀ ಬಿ.ಎನ್. ಬಚ್ಚೇಗೌಡ (ಕಾರ್ಮಿಕ ಸಚಿವರು):** ರೇವಣ್ಣನವರು ಕ್ಷಮಾಪಣೆಯನ್ನು ಕೇಳಬೇಕು.

(ಗೊಂದಲ)

**ಶ್ರೀ ಹೆಚ್.ಡಿ. ರೇವಣ್ಣ:** (xxx xxx xxx)

**1.30 PM**

**ಶ್ರೀ ಆರ್. ಅಶೋಕ್:** ಅಧ್ಯಕ್ಷರೆ, ತಾವು ಈಗಾಗಲೇ ರೂಲಿಂಗ್ ಕೊಟ್ಟಿದ್ದೀರಿ. ತಾವು ಕೊಟ್ಟಿರುವಂತಹ ರೂಲಿಂಗ್ ಪ್ರಶ್ನೆ ಮಾಡುತ್ತಾರೆಂದರೆ ಈ ಸದನವನ್ನು ಯಾವು ರೀತಿ ತೆಗೆದುಕೊಂಡು ಹೋಗುತ್ತಿದ್ದಾರೆ, ಯಾವ ರೀತಿ ನಡೆಯುತ್ತಿದೆ, ತಮ್ಮ ರೂಲಿಂಗ್‌ಗೆ ಏನು ಗೌರವ ಇದೆ?

**ಶ್ರೀ ಬಂಡೆಪ್ಪ ಕಾಶಂಪೂರ್:** ನಿನ್ನೆ ನಾವು ಸುಮ್ಮನೆ ಕುಳಿತಿದ್ದೆವು. ನಿನ್ನೆ ನೀವು ಏಕೆ ತನಿಖೆ ಮಾಡುವುದಕ್ಕೆ ಹೇಳಿದಿರಿ,

**ಶ್ರೀ ಆರ್. ಅಶೋಕ್:** ಅಧ್ಯಕ್ಷರ ಕೊಠಡಿಯಲ್ಲಿ ಮಾತುಕತೆ ಆಗಿ ತೀರ್ಮಾನ ಆಗಿದೆ. ಹೀಗೇ ಮಾಡಬೇಕೆಂದು ಹೇಳಿದ್ದೀರಿ. ನಾನು ಏನೂ ಮಾತನಾಡುವುದಿಲ್ಲ ಏನು ನಿಲುವಳಿ ಸೂಚನೆ ಕೊಡುತ್ತಿದ್ದೇನೆ, ಅದನ್ನು ಓದುತ್ತೇನೆಂದು ಹೇಳಿದರು.

**ಶ್ರೀ ಬಂಡೆಪ್ಪ ಕಾಶಂಪೂರ:** ಅಷ್ಟೇ ಓದಿದ್ದು, ನಿಮಗೇಕೆ ಬೆಂಕಿ ಬಿದ್ದಿತು?

**ಶ್ರೀ ಆರ್. ಅಶೋಕ್:** ಒಬ್ಬ ವ್ಯಕ್ತಿ ಮೇಲೆ ಏಕಾಏಕಿ ಆಪಾದನೆ ಮಾಡಿದರೆ ಹೇಗೆ? ಅದಕ್ಕೆ ತಕ್ಕ ದಾಖಲೆಗಳನ್ನು ಕೊಡಬೇಕು.

**ಅಧ್ಯಕ್ಷರು:** ಮಾನ್ಯ ರೇವಣ್ಣರವರು ಮತ್ತು ಇತರೆ ಶಾಸಕರು ಯಾರಿದ್ದಾರೆ ನಿಮಗೆ ಬೇರೆ ವಿಷಯ ಚರ್ಚೆ ಮಾಡುವುದಕ್ಕೆ ಇಷ್ಟ ಇಲ್ಲ.

---

(xxx) ಮಾನ್ಯ ಸಭಾಧ್ಯಕ್ಷರ ಆದೇಶದಂತೆ ಕಡತದಿಂದ ತೆಗೆದುಹಾಕಲಾಗಿದೆ

You are not interested. ಕೇವಲ ಬೇಜವಾಬ್ದಾರಿಯುತವಾಗಿ ಆಪಾದನೆ ಮಾಡುವುದು ಅಷ್ಟೇ ನಿಮಗೆ ಗೊತ್ತಿದೆ. ಯಾವುದೇ ವಿಷಯ ಡೀಟೇಲಾಗಿ ಚರ್ಚೆ ಮಾಡಿ ಅದಕ್ಕೆ ಸರಿಯಾದ ರೀತಿಯಲ್ಲಿ ಮಾಹಿತಿ ಕೊಟ್ಟು ಆಪಾದನೆ ಮಾಡುವುದು ಎಂದು ಅರ್ಥ ಅಲ್ಲ.. ನಾನು ಮಧ್ಯಾಹ್ನ ಒಂದು ತೀರ್ಪನ್ನು ಕೊಟ್ಟಿದ್ದೇನೆ. ಮಧ್ಯಾಹ್ನ ನಿಮಗೆ ಮಾತನಾಡಲಿಕ್ಕೆ ಅವಕಾಶ ಕೊಡುತ್ತೇನೆಂದು ಹೇಳಿದ ಮೇಲೆ ಸಹಿತ ನಿಮ್ಮ ಉದ್ದೇಶ ಏನಿದೆ ಎಂದರೆ, ನಿಮ್ಮ ನಿಲುವಳಿ ಸೂಚನೆಯ ಆ ನೋಟಿಸ್‌ನಲ್ಲಿ ಯಾವುದೇ ರೀತಿ ಸ್ಪಷ್ಟವಾಗಿ ಯಾರ ಬಗ್ಗೆ ಆಪಾದನೆ ಮಾಡಲಾರದೆ ಕೇವಲ ತೋರಿಕೆಗಾಗಿ ಮಾನ್ಯ ಮುಖ್ಯ ಮಂತ್ರಿಗಳ ಮೇಲೆ ನೇರವಾಗಿ ಆಪಾದನೆ ಮಾಡುವುದು ನಿಮ್ಮ ಮಾತಿನಲ್ಲಿ ಹೇಳುವುದು ಇದೆ, ನಿಮ್ಮ ಉದ್ದೇಶ ಇಷ್ಟೇ ಇದೆ. ಇದು ಸರಿಯಾದುದು ಅಲ್ಲ. ನೀವು ಮಾತನಾಡಿರುವುದು ಒಳ್ಳೆಯದಲ್ಲ. ಒಳ್ಳೆಯ ಲಕ್ಷಣ ಅಲ್ಲ. ಈ ಸದನಕ್ಕೆ ಗೌರವ ತರುವಂಥದ್ದು ಅಲ್ಲ. ನಿಮ್ಮಂತಹ ಸೀನಿಯರ್ಸ್ ಈ ರೀತಿ ಚರ್ಚೆ ಮಾಡಲಾರದೆ ಈ ರೀತಿ ಆಪಾದನೆ ಮಾಡುವುದು ಸರಿಯಲ್ಲವೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಅದಕ್ಕಾಗಿ ನಿಮಗೆ ನಿಜವಾಗಿ ಚರ್ಚೆ ಮಾಡಬೇಕಾದರೆ ಡೀಟೇಲಾಗಿ ಚರ್ಚೆ ಮಾಡಿ. ಆ ಮೇಲೆ ಹೇಳಿ ಯಾರು ಜವಾಬ್ದಾರರು ಎಂದು. ಕೇವಲ ಆಪಾದನೆ ಮಾಡುವುದು ಅಷ್ಟೇ. Hit and run ಕೇಸ್ ಅಷ್ಟೇ ಮಾಡುವುದು ಇದೆ. ಇದು ಸರಿಯಾದುದು ಅಲ್ಲ ಒಳ್ಳೆಯ ಶಾಸಕರಾಗಿ ಮಾಡುವುದು ಅಲ್ಲ ಇದು ಸರಿಯಾದುದು ಅಲ್ಲ. ಇನ್ನು ಮೇಲೆ ನಿಮಗೆ ಬಿಟ್ಟಿರುವುದು ಸದನಕ್ಕೆ ಬಿಟ್ಟಿರುವುದು. ನೀವೇ ಅರ್ಥ ಮಾಡಿಕೊಳ್ಳಿ. ಯಾವ ಹಿನ್ನೆಲೆಯಲ್ಲಿ ಹೇಳುತ್ತಿದ್ದೀರಿ, ಯಾವ ಉದ್ದೇಶದಲ್ಲಿ ಹೇಳುತ್ತಿದ್ದೀರಿ, ಇನ್ನು ಹೆಚ್ಚಿಗೆ ನಾನು ಇದರ ಬಗ್ಗೆ interpretation ಮಾಡುವುದಿಲ್ಲ. ಇದು ನಿಮಗೆ ಬಿಟ್ಟದ್ದು. It is left to you. ಸದನಕ್ಕೆ ಬಿಟ್ಟು ಬಿಡುತ್ತೇನೆ. ನೀವು ಚರ್ಚೆ ಮಾಡುವುದಾದರೆ ಬರಗಾಲದ ಮೇಲೆ ಚರ್ಚೆ ಮಾಡಿ ಇದು ಒಳ್ಳೆಯ ರೀತಿಯ ನಡವಳಿಕೆ ಅಲ್ಲ. ನೀವು ಈಗ ಬರಗಾಲದ ಮೇಲೆ ಚರ್ಚೆ ಮಾಡಿ ಮಾನ್ಯ ಮುಖ್ಯ ಮಂತ್ರಿಗಳು ಬಂದ ನಂತರ 4.30ಕ್ಕೆ ಚರ್ಚೆ ಮಾಡೋಣ.

**ಅಧ್ಯಕ್ಷರು:** ಬರಗಾಲದ ಮೇಲೆ ಮಾತನಾಡುವವರು ಮಾತನಾಡಲಿ.

**ಶ್ರೀ ಹೆಚ್.ಡಿ. ರೇವಣ್ಣ:** 4.30 ಗಂಟೆಗೆ ಚರ್ಚೆಗೆ ಅವಕಾಶ ಕೊಟ್ಟಿದ್ದೀರಿ.

**ಶ್ರೀ ಆರ್. ಅಶೋಕ:** ಮಾನ್ಯ ಅಧ್ಯಕ್ಷರೆ, ಅವರು ಏನು ಹೇಳಿದ್ದಾರೆ ಅದು ಕಡತದಿಂದ ತೆಗೆಸಿ ಹಾಕಬೇಕು.

**ಅಧ್ಯಕ್ಷರು:** ಕಡತದಿಂದ ತೆಗೆಸಿ ಹಾಕಿದ್ದೇನೆ.

**ಶ್ರೀ ಹೆಚ್. ಡಿ. ರೇವಣ್ಣ:** ಅದನ್ನು ಕಡತದಿಂದ ತೆಗೆದು ಹಾಕುವುದು ಬೇಡ

**(ಜೆಡಿಎಸ್ ಶಾಸಕಾಂಗ ಪಕ್ಷದ ಸದಸ್ಯರು ಬಾವಿಯಲ್ಲಿ ಬಂದು ಧರಣಿ ಪ್ರಾರಂಭಿಸಿದರು)**

**ಅಧ್ಯಕ್ಷರು:** ಅವರಿಗೆ ಏನೂ interest ಇಲ್ಲ. ಅಧಿವೇಶನ ನಡೆಸುವ ಬಗ್ಗೆ ಆಸಕ್ತಿ ಇಲ್ಲ. ಚರ್ಚೆ ಮಾಡಬೇಕು. ವಿಷಯ ಮಂಡನೆ ಮಾಡಬೇಕು, ಯಾವುದೂ ಇಷ್ಟವಿಲ್ಲ. ಸದನ ನಡೆಸುವ ಆಸಕ್ತಿ ನಿಮಗೆ ಇಲ್ಲ ಚರ್ಚೆ ಮಾಡಲಿಕ್ಕೆ ಆಸಕ್ತಿ ಇಲ್ಲ. This is not a good behavior.

**(ಸದನ ಪುನಃ 3.00 ಗಂಟೆಗೆ ಸೇರುವಂತೆ ಮುಂದೂಡಲಾಯಿತು)**

**3–00 pm**

**ಸದನದ ಕಲಾಪವು 3.00 ಗಂಟೆ 18 ನಿಮಿಷಕ್ಕೆ ಪ್ರಾರಂಭವಾಯಿತು ಮಾನ್ಯ ಅಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು**

**(ಸದನದ ಕಲಾಪ ಆರಂಭವಾಗುತ್ತಿದ್ದಂತೆ ಜೆಡಿ(ಎಸ್) ಶಾಸಕರು ಸದನದ ಬಾವಿಗೆ ಬಂದು ಧರಣಿಯನ್ನು ಮುಂದುವರೆಸಿದರು)**

**ಶ್ರೀ ಹೆಚ್. ಡಿ. ರೇವಣ್ಣ:** ಮಾನ್ಯ ಅಧ್ಯಕ್ಷರೇ, ಏನು ತೀರ್ಮಾನ ಮಾಡಿದ್ದೀರೆಂದು ಹೇಳಿ.

**ಅಧ್ಯಕ್ಷರು:** ನಾನು ಈಗಾಗಲೇ ಹೇಳಿಬಿಟ್ಟಿದ್ದೇನೆ.

**ಶ್ರೀ ಹೆಚ್.ಡಿ. ರೇವಣ್ಣ:** ತಾವು ತೀರ್ಮಾನ ಏನು ಎಂದು ಹೇಳಿದರೆ ಹೇಳುತ್ತೇನೆ.

**ಅಧ್ಯಕ್ಷರು:** ನಾನು ಕಡತದಿಂದ ತೆಗೆದು ಹಾಕಿದಂತಹ...

**(ಗೊಂದಲ)**

**ಒಬ್ಬರು ಮಾನ್ಯ ಸದಸ್ಯರು:** ನಿಂಬೆಹಣ್ಣು ಜೇಬಿನಲ್ಲಿ ಇಟ್ಟುಕೊಂಡು ಬಂದಿದ್ದರೆ, ಬಲಮಗುಲಲ್ಲಿ ಎದ್ದಿದ್ದರೆ ಹೀಗಾಗುತ್ತಿರಲಿಲ್ಲ. ಬಲಮಗುಲಲ್ಲಿ ಎದ್ದಿಲ್ಲ, ನಿಂಬೆ ಹಣ್ಣು ಜೇಬಿನಲ್ಲಿ ಇಟ್ಟುಕೊಂಡು ಬಂದಿಲ್ಲ. ಬೇಕಾದರೆ ನೀವು ಪರೀಕ್ಷೆ ಮಾಡಿ.

**ಅಧ್ಯಕ್ಷರು:** ನೋಡಿ, ರೇವಣ್ಣನವರು ಏನು ಹೇಳಿದರು, ಅದನ್ನು ಕಡತದಿಂದ ತೆಗೆದು ಹಾಕಿದ್ದೇನೆ. (xxx xxx xxx)

**ಶ್ರೀ ಹೆಚ್.ಡಿ. ರೇವಣ್ಣ:** ಚರ್ಚೆಗೆ ತೆಗೆದುಕೊಳ್ಳಬೇಕು.

**ಅಧ್ಯಕ್ಷರು:** ಚರ್ಚೆಗೆ ಅವಕಾಶ ಕೊಡುತ್ತೇನೆ, ಮಾನ್ಯ ಮುಖ್ಯಮಂತ್ರಿಗಳು ಬರುತ್ತಾರೆ, ನಾಲ್ಕೂವರೆಗೆ ಅವಕಾಶ ಕೊಡುತ್ತೇನೆ.

**ಶ್ರೀ ಹೆಚ್.ಡಿ. ರೇವಣ್ಣ:** ನಾಲ್ಕೂವರೆಗೆ ಫಿಕ್ಸ್ ಮಾಡಿ. ನಾನು ನಾಲ್ಕೂವರೆಗೆ ಎಲ್ಲಾ ದಾಖಲೆ ಸಮೇತ ಇಲ್ಲಿ ಇಡುತ್ತೇನೆ.

**ಅಧ್ಯಕ್ಷರು:** ಆಯಿತು.

---

(xxx xxx) ಮಾನ್ಯ ಸಭಾಧ್ಯಕ್ಷರ ಆದೇಶದಂತೆ ಕಡತದಿಂದ ತೆಗೆದುಹಾಕಲಾಗಿದೆ.

## 2. ನಿಯಮ 69ರ ಮೇರೆಗೆ ಚರ್ಚೆ:

**ವಿಷಯ:** ರಾಜ್ಯದಲ್ಲಿ ಉಂಟಾಗಿರುವ ಭೀಕರ ಬರ ಹಾಗೂ ಅತಿವೃಷ್ಟಿಯಿಂದ ಜನ ಹಾಗೂ ಜಾನುವಾರುಗಳಿಗೆ ತೀವ್ರ ಸ್ವರೂಪದ ತೊಂದರೆಯಾಗಿರುವ ಬಗ್ಗೆ.

****

**ಶ್ರೀ ಟಿ. ಬಿ. ಜಯಚಂದ್ರ (ಸಿರಾ):** ಮಾನ್ಯ ಅಧ್ಯಕ್ಷರೆ, ಕಳೆದ ಅಧಿವೇಶನದಲ್ಲೂ ಕೂಡ ಬರದ ವಿಚಾರವನ್ನು ಪ್ರಸ್ತಾಪ ಮಾಡಿದ್ದೆವು. ಇದಕ್ಕೆ ಮಾನ್ಯ ಸಚಿವರಿಂದ ಉತ್ತರವನ್ನು ಸಹ ಬಯಸಿದ್ದೆವು. ಆದರೆ ಯಾವ್ಯಾವುದೋ ಕಾರಣಕ್ಕೋಸ್ಕರ ಸರ್ಕಾರದಿಂದ ನಮಗೆ ಉತ್ತರ ಬರಲಿಲ್ಲ. ಅದು ಆದಮೇಲೆ ಈಗ ಸದನ ಪ್ರಾರಂಭವಾದ ತಕ್ಷಣವೇ, ಮೊದಲನೆಯ ದಿವಸವೇ ತಮ್ಮ ಅಪ್ಪಣೆಯನ್ನು ಪಡೆದು ಕೃಷಿ ಮತ್ತು ಗ್ರಾಮೀಣಾಭಿವೃದ್ಧಿಯ ಇಲಾಖೆಯ ಮೇಲೆ ಚರ್ಚೆ ಮಾಡುವಂಥ ಸಂದರ್ಭದಲ್ಲಿ ಬರವನ್ನು ಒಂದು ಪ್ರತ್ಯೇಕವಾದ ವಿಷಯವನ್ನಾಗಿ ಚರ್ಚೆ ಮಾಡಬೇಕು. ರಾಜ್ಯದ ಎಲ್ಲಾ ತಾಲ್ಲೂಕುಗಳ ಬಗ್ಗೆ ಮೂಲೆ ಮೂಲೆಯಲ್ಲಿರುವಂಥ ಶಾಸಕರುಗಳ ಭಾವನೆಗಳನ್ನು ಅರ್ಥ ಮಾಡಿಕೊಳ್ಳಲು ಸಹಾಯವಾಗಬೇಕೆನ್ನುವ ಕಾರಣಕೋಸ್ಕರ ಇವತ್ತು ನಾವು ನಿಲುವಳಿ ಸೂಚನೆ ಮೂಲಕ ಸರ್ಕಾರದ ಗಮನ ಸೆಳೆದೆವು ತಾವು ಅದಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದೀರಿ. ಆದರೆ ನನಗೆ ಬರ ಎನ್ನುವಂಥ ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ಹೊರಟಾಗ ರಾಜ್ಯಕ್ಕೆ ಬರ ಇರುವುದರ ಜೊತೆಗೆ, ವಿಧಾನ ಸಭೆಯಲ್ಲಿ ಆ ವಿಚಾರವನ್ನು ಚರ್ಚೆ ಮಾಡುವುದಕ್ಕೆ ಬರ ಇದೆಯೆನ್ನುವಂಥ ರೀತಿಯಲ್ಲಿ ನಾವು ನಡೆದುಕೊಳ್ಳುತ್ತಿದ್ದೇವೆಂಬ ಭಾವನೆ ನಮ್ಮೆರಲ್ಲೂ ಇದೆ. ಆದರೆ ನಮ್ಮ ನಮ್ಮದೇ ಆದಂಥ ಕಾರಣಗಳಿಂದ ನಾವು ಹೇಳದೆ ಇದ್ದರೂ ಕೂಡ, ರಾಜ್ಯದ ಜನತೆ ಇದನ್ನು ಗಮನಿಸುತ್ತಿಲ್ಲವೆಂದಲ್ಲ. ಅದನ್ನು ರಾಜ್ಯದ ಜನರು ಗಮನಿಸಿದ್ದಾರೆ. ಆದರೆ ಏನೇ ಆಗಲಿ, ಇವತ್ತು ಕಾಲಾವಕಾಶ ಬಹಳ ಕಡಿಮೆ ಇದೆ. ಸದನ ನಾಳೆ ಮುಗಿಯುವ ಸಂದರ್ಭದಲ್ಲಿ. ನಾವು ಇವತ್ತು ಸರ್ಕಾರದಿಂದ ಅಂತಿಮವಾದಂಥ ಉತ್ತರವನ್ನು ಬಯಸಬೇಕು. ಇಲ್ಲಿ

ಚರ್ಚೆಯಲ್ಲಿ ಹೆಚ್ಚು ಸದಸ್ಯರು ಭಾಗವಹಿಸಬೇಕೆಂಬ ಕಾರಣಕ್ಕೋಸ್ಕರ ನಾನು ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ನಾನು ಪ್ರಾಸ್ತಾವಿಕವಾಗಿ ಕೆಲವು ಮಾತುಗಳನ್ನು ಹೇಳುತ್ತೇನೆ. ತದನಂತರ ನಮ್ಮ ಎಲ್ಲಾ ಹಿರಿಯ ಸದಸ್ಯರು ಧ್ವನಿಗೂಡಿಸುವುದಕ್ಕೆ ತಯಾರಾಗಿದ್ದಾರೆ. ನಾನು ಬಹಳ ಮುಖ್ಯವಾದಂಥ ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ಇಚ್ಛಿಸುತ್ತೇನೆ. ರಾಜ್ಯದ ಭೌಗೋಳಿಕವಾಗಿರುವಂಥ ಪ್ರದೇಶ ಏನು ಇದೆ. ಶೇ.70ರಷ್ಟು ಪ್ರದೇಶ ಮಳೆ ಆಶ್ರಿತವಾದ ಪ್ರದೇಶದಲ್ಲಿ ಬರುವಂಥ ಒಂದು ಪ್ರದೇಶ ಕರ್ನಾಟಕವಾಗಿದೆ. ಅದರಲ್ಲಿ ಸುಮಾರು 29 ಜಿಲ್ಲೆಗಳಲ್ಲಿ 21 ಜಿಲ್ಲೆಗಳು ಮಳೆಯನ್ನು ನಂಬಿರುವಂಥಾದ್ದು ಬರಗಾಲಕ್ಕೆ ತುತ್ತಾಗಿರುವಂಥ ಪ್ರದೇಶದಲ್ಲಿ ಬರುವಂಥ ಜಿಲ್ಲೆಗಳು ಆಗಿವೆ. ಇನ್ನು ಮಿಕ್ಕ ಜಿಲ್ಲೆಗಳು ಏನು ಇವೆ, ಅವುಗಳು ಅತಿವೃಷ್ಟಿಯಿಂದ ಪ್ರವಾಹಕ್ಕೆ ಸಿಕ್ಕಿ, ಇವತ್ತು ಅವುಗಳು ನಲಗುತ್ತಿರುವಂಥ ಜಿಲ್ಲೆಗಳಾಗಿವೆ. ಒಟ್ಟಾರೆ ನಮ್ಮಲ್ಲಿ ಏನಾಗಿದೆಯೆಂದರೆ ಈ ವರ್ಷ ನಾವು ಒಂದಲ್ಲ ಒಂದು ರೀತಿಯಲ್ಲಿ ಅತಿವೃಷ್ಟಿ, ಅನಾವೃಷ್ಟಿಯ ಪರಿಣಾಮದಿಂದಾಗಿ ರಾಜ್ಯದ ಜನರು ಕಷ್ಟವನ್ನು ವಿವರಿಸುವುದಕ್ಕೆ ಸಾಧ್ಯವಿಲ್ಲದೇ ಇರುವಂಥ ರೀತಿಯಲ್ಲಿ ಇದ್ದಾರೆ. ಆ ಚಿತ್ರವನ್ನು ನಾವೆಲ್ಲರೂ ಶಾಸಕರಾಗಿ ಅದು ಆ ಭಾಗದಲ್ಲಿರುವ ಶಾಸಕರಾಗಿರಬಹುದು, ಈ ಭಾಗದ ಶಾಸಕರುಗಳಾಗಿರಬಹುದು. ಎಲ್ಲರಿಗೂ ಅನುಭವಕ್ಕೆ ಬಂದಿರುವಂಥಾದ್ದು, ಅದನ್ನು ನಾವೆಲ್ಲರೂ ಅನುಭವಿಸಿದ್ದೇವೆ. ಅದರೆ ಎಲ್ಲೋ ಒಂದು ಕಡೆ ಸರ್ಕಾರದ ಗಮನವನ್ನು ಸೆಳೆಯುವುದಕ್ಕೆ ಇವತ್ತು ತೊಂದರೆಯಾಗಿರುವಂಥಾದ್ದು. ಆದರೂ ಅಲ್ಪ ಕಾಲದಲ್ಲೆ ಸರ್ಕಾರದ ಗಮನವನ್ನು ಸೆಳೆಯುವುದಕ್ಕೆ ನಾವು ಪ್ರಯತ್ನ ಪಡುತ್ತಿದ್ದೇವೆ. ಇವತ್ತು ನಮ್ಮ ರಾಜ್ಯದ ಸುಮಾರು 21 ಜಿಲ್ಲೆಗಳಲ್ಲಿ ಶೇ.76ರಷ್ಟು ಪ್ರದೇಶದಲ್ಲಿ ಮಳೆಯನ್ನು ನಂಬಿರುವಂಥ ಪ್ರದೇಶಗಳೇ ಇರುವಂಥಾದ್ದು. ಅದರಲ್ಲಿ ಈ ವರ್ಷದ ಪರಿಸ್ಥಿತಿ ಏನಾಯಿತೆಂದರೆ ಬಿತ್ತನೆ ಕಾರ್ಯ ಕುಂಠಿತವಾಯಿತು, ಪ್ರಾರಂಭದಲ್ಲೇ ಮಳೆಯೂ ಪ್ರಾರಂಭವಾಯಿತು, ರೈತರಿಗೆ ಒಂದು ರೀತಿಯಲ್ಲಿ ಆಶಾಭಾವನೆಯನ್ನು ಮೂಡಿಸಿತು. ರೈತರು ಕಷ್ಟ ಇದೆಯೋ, ಸುಖ

VB/135/09

ಇದೆಯೋ ಯಥೇಚ್ಛವಾಗಿ ಬಿತ್ತನೆ ಬೀಜ, ಗೊಬ್ಬರವನ್ನು ತಗೆದುಕೊಂಡು ಭೂಮಿಗೆ ಹಾಕುವಂಥ ಕೆಲಸವನ್ನು ಮಾಡಿದರು. ಆದರೆ ಬಹಳಷ್ಟು ಕಡೆಗಳಲ್ಲಿ ಸಸಿಗಳು ಹುಟ್ಟಲೇ ಇಲ್ಲ. ಹುಟ್ಟಿದ ಸಸಿಗಳು ಕೂಡ ನಲುಗಿ ಹೋದವು. ಇದಕ್ಕೆ ಕಾರಣವೇನೆಂದರೆ ನಮಗೆ ಬಂದಂಥ long term dry spell ಏನು ಇದೆ. ಇದರಿಂದ ನಮ್ಮ ಎಲ್ಲಾ crops suffer ಆದವು. ನಮ್ಮಲ್ಲಿ ಮುಂಗಾರಿನಲ್ಲಿ ಏನು ಬೆಳೆ ಬಿತ್ತನೆ ಆಗಿತ್ತು. ನಮ್ಮ ಅಂದಾಜು ಇದರಿಂದ ಸುಮಾರು 69 ರಿಂದ 70 ಲಕ್ಷ ಟನ್ ಆಗಬೇಕೆಂಬ ಅಂದಾಜು ಏನು ಇತ್ತು, ಆ ಅಂದಾಜಿನಲ್ಲಿ ಶೇ.50 ರಿಂದ ಶೇ.60ರಷ್ಟು ನಲುಗಿ ಹೋಯಿತು. ತೊಂದರೆಗೆ ಒಳಗಾದವು. ಆದರೆ ಇವತ್ತು ಏನು ಆಗಿದೆಯೆಂದರೆ ಎಲ್ಲೋ ಒಂದು ಕಡೆಗೆ ಮಳೆ ಬರುತ್ತಿದೆಯೆಂಬ ವಾತಾವರಣ ಸೃಷ್ಟಿಯಾಗಿದೆ. ಅಲ್ಲಿ ಇಲ್ಲಿ ಎಲ್ಲಾ ಕಡೆಗಳಲ್ಲೂ ಮಳೆ ಪ್ರಾರಂಭವಾಗಿದೆ. ಇದು ಒಳ್ಳೆಯದೆಂಬ ಮಾತನ್ನು ನಾವು ಹೇಳೋಣ. ಇಷ್ಟು ಮಳೆಯೂ ಬರದೇ ಹೋದರೆ ಪರಿಸ್ಥಿತಿ ಏನಾಗುತ್ತಿತ್ತೆಂಬುದನ್ನು ಹೇಳುವುದಕ್ಕೆ ಸಾಧ್ಯವಿಲ್ಲ. ಇವತ್ತು ಮಳೆ ಪ್ರಾರಂಭವಾಗಿದೆ. ಅದು ಅಕಾಲಿಕವಾಗಿ ಈಗ ಬಂದಂಥ ಮಳೆಯಿಂದ ನಮಗೆ ರಬಿ crop ನಮ್ಮಲ್ಲಿ ಬಹಳ ಕಡಿಮೆ ಇರುತ್ತದೆ. ಇವತ್ತು summer ಗೆ ಪೂರಕವಾಗಿ ಬೇಕಾಗಿರುವಂಥ ಮಳೆ ಬಂದಿದೆ. ಆದರೆ ಎಷ್ಟರಮಟ್ಟಿಗೆ ನಡೆಸುತ್ತದೆಂಬುದು ಗೊತ್ತಿಲ್ಲ. ಆದರೆ ಸ್ವಲ್ಪಮಟ್ಟಿಗೆ ಸಮಾಧಾನವೇನೆಂದರೆ ಅಲ್ಲೋ ಇಲ್ಲೋ ಒಂದು ಕಡೆಗೆ ದನಕರುಗಳಿಗೆ ಮೇವು ಮತ್ತು ನೀರು ಸಿಗುವಂಥ ವಾತಾವರಣ ಇವತ್ತು ಸೃಷ್ಟಿಯಾಗಿರುವಂಥ ಸಂದರ್ಭದಲ್ಲಿ ನಾನು ಒಂದು ಮಾತನ್ನು ಹೇಳಲಿಚ್ಚಿಸುತ್ತೇನೆ. ಈಗಾಗಲೇ ಸರ್ಕಾರದವರು ಸುಮಾರು 86 ತಾಲ್ಲೂಕುಗಳನ್ನು ಬರಗಾಲ ಪೀಡಿತವಾದ ಪ್ರದೇಶಗಳೆಂದು declare ಮಾಡಿರುವ ಹಿನ್ನೆಲೆಯಲ್ಲಿ ನಾವು ಒಂದು ವಿಷಯವನ್ನು ಗಮನಿಸಬೇಕಾಗಿರುವಂಥಾದ್ದು. ನಾವು ತಾತ್ಕಾಲಿಕವಾಗಿ ಅತ್ಯಂತ ತೊಂದರೆಗೆ ಒಳಗಾಗಿರುವಂಥ ರೈತರಿಗೆ ಯಾವ ರೀತಿಯಾಗಿ ಸ್ಪಂದನೆ ಮಾಡುತ್ತೇವೆ. ಅವರ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಪ್ರಾಮಾಣಿಕವಾದ ಪ್ರಯತ್ನಗಳನ್ನು ಮಾಡುತ್ತೇವೆಂಬುದು ಒಂದು ಕಡೆಯಾದರೆ, ಇನ್ನೊಂದು ಕಡೆ ಇದು ಕಳೆದ

50, 60 ವರ್ಷಗಳಿಂದ ಆ ಸರ್ಕಾರಗಳು ಯಾವುದೇ ಇರಲಿ, ಆಳುವಂಥವರು ಯಾರೇ ಇದ್ದರೂ ಬರ ಎನ್ನುವಂಥಾದ್ದು ಏನು ಇದೆ. ಇದು ನಿರಂತರವಾಗಿ ಈ ರಾಜ್ಯವನ್ನು ಕಾಡುತ್ತಿರುವಂಥಾದ್ದು ಆಗಿದೆ. ನಮ್ಮ ದುರದೃಷ್ಟವೇನೆಂದರೆ ಈ ದೇಶದಲ್ಲಿ ರಾಜಸ್ಥಾನದ ನಂತರ ಅರೆ ಖುಸ್ಕಿಯಿಂದ ಜೀವನ ಮಾಡುತ್ತಿರುವಂಥ ನಮ್ಮ ರಾಜ್ಯದಲ್ಲಿ ಇದು ನಿರಂತರವಾಗಿದೆ. ಇವತ್ತು ಈ ಬರಗಾಲವನ್ನು ನಾವು 60 ವರ್ಷವಾದರೂ ಕೂಡ ಇದನ್ನು ಎದುರಿಸುವಂಥ ಸಾಮರ್ಥ್ಯವನ್ನು ಇವತ್ತು ಪಡೆಯುವುದಕ್ಕೆ ಸಾಧ್ಯವಾಗಿಲ್ಲ. ನಾನು ಯಾರನ್ನು ಟೀಕೆ ಮಾಡುತ್ತೇನೆಂಬ ಪ್ರಶ್ನೆ ಅಲ್ಲ. ಬರ ಶಾಶ್ವತವಾಗಿ ನಿರಂತರವಾಗಿದೆ, ಇದು ಮುಂದೆಯೂ ಇರುತ್ತದೆ. ಅದನ್ನು ತಡೆಗಟ್ಟುವುದಕ್ಕೆ ನಾವು ಯಾವ ರೀತಿಯಾದಂಥ ಕ್ರಮಗಳನ್ನು ಅನುಸರಿಸುತ್ತೇವೆಂಬುದು ಬಹಳ ಮುಖ್ಯ. ಬರ ಎನ್ನುವ ವಿಚಾರವನ್ನು ಮಾತನಾಡುವಾಗ ಆಯಾ ರಾಜ್ಯಗಳು ಅವರಿಗೆ ಸೀಮಿತವಾಗಿರುವಂಥ, ಸ್ಥಳೀಯ ಸನ್ನಿವೇಶನದ ಹಿನ್ನೆಲೆಯಲ್ಲಿ ಬರವೆಂದು ಘೋಷಣೆ ಮಾಡುವುದಕ್ಕೆ ಅವರದೇ ಆದಂಥ ಮಾನದಂಡಗಳನ್ನು ಇಟ್ಟುಕೊಂಡಿರುತ್ತಾರೆ. ಆದರೆ ನಾವು ಇತ್ತೀಚೆಗೆ ಸುಮಾರು ನಾಲ್ಕೈದು ವರ್ಷಗಳಲ್ಲಿ ಆ ಮಾನದಂಡಗಳನ್ನು ಸ್ವಲ್ಪಮಟ್ಟಿಗೆ ಬದಲಾವಣೆಗಳನ್ನು ಮಾಡಿ, ಇವತ್ತು ಬರವನ್ನು ಶಾಶ್ವತವಾಗಿ ಎದುರಿಸಬೇಕು. ಅದನ್ನು ಶಾಶ್ವತವಾಗಿ ಎದುರಿಸಬೇಕಾದಂಥ ಸಂದರ್ಭದಲ್ಲಿ ನಾವು ಯಾವ ರೀತಿಯಲ್ಲಿ ಕಾರ್ಯಕ್ರಮಗಳನ್ನು ಹಾಕಬೇಕೆಂಬುದರ ಹಿನ್ನೆಲೆಯಲ್ಲಿ ಅನೇಕ ಸಮಿತಿಗಳನ್ನು ಮಾಡಿದೆವು. ರಾಜ್ಯ ಮಟ್ಟದಲ್ಲೂ ಕೂಡ ಇವತ್ತು ಒಂದು ಸಮಿತಿಯನ್ನು ಮಾಡಿದ್ದೇವೆ. ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಮಾಡಿದ್ದೇವೆ. ಪ್ರಕೃತಿ ವಿಕೋಪದಲ್ಲಿ ಅದನ್ನು ನಿರ್ವಹಣೆ ಮಾಡಬೇಕಾದಾಗ ಜಿಲ್ಲಾ ಮಟ್ಟದಲ್ಲೂ ಸಮಿತಿಗಳನ್ನು ಮಾಡಿದ್ದೇವೆ. ತಾಲ್ಲೂಕು ಮಟ್ಟದಲ್ಲೂ ಸಮಿತಿಗಳನ್ನು ಮಾಡಿದ್ದೇವೆ ಇದೆಲ್ಲದರ ಜೊತಗೆ ಇವೆಲ್ಲವನ್ನು over view ಮಾಡುವುದಕ್ಕೋಸ್ಕರ ಇದರಲ್ಲಿ ಏನು ನಡೆಯುತ್ತಿದೆಯೆಂಬುದನ್ನು ನೋಡುವುದಕೋಸ್ಕರ

permanent ಆಗಿ ಒಂದು ಸಚಿವ ಸಂಪುಟದ ಉಪ ಸಮಿತಿ ಕೂಡ ಇದೆ. ಇದೆಲ್ಲಕ್ಕಿಂತ ಹೆಚ್ಚಾಗಿ ಜಿಲ್ಲಾ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಪ್ರಕೃತಿ ವಿಕೋಪಕ್ಕೆ ಯಾವ ರೀತಿಯಾಗಿ ಕಾರ್ಯಾಚರಣೆಯನ್ನು ಮಾಡಬೇಕೆನ್ನುವುದಕ್ಕೆ, ಹಣವನ್ನು ಯಾವ ರೀತಿಯಾಗಿ ಬಳಕೆ ಮಾಡಬೇಕೆನ್ನುವುದಕ್ಕೆ, ಯಾವ ರೀತಿಯಾಗಿ ಕಾರ್ಯ ಯೋಜನೆಗಳನ್ನು ಮಾಡಬೇಕೆನ್ನುವುದಕ್ಕೂ ಕೂಡ ಒಂದು ಸಮಿತಿಯನ್ನು ಮಾಡಿರುವಂಥಾದ್ದು ಇದೆ. ನಾವು ಎಷ್ಟರಮಟ್ಟಿಗೆ ಈ ಸಮಿತಿಗಳನ್ನು ಕರೆದು ಸಮಸ್ಯೆಗಳು ಏನೆಂಬುದರ ಬಗ್ಗೆ ಯಾವ ರೀತಿಯಾಗಿ ತೀರ್ಮಾಣಗಳನ್ನು ಮಾಡಿದ್ದೇವೆಂಬುದು ಬಹಳ ಮುಖ್ಯ. ಇದು ಅಲ್ಲದೇ ಇವತ್ತು ಕರ್ನಾಟಕ ರಾಜ್ಯ ನೈಸರ್ಗಿಕ ವಿಪತ್ತು ನಿರ್ವಹಣ ಕೇಂದ್ರವೆಂದು ಇದು ನಿಮ್ಮ ಅಧೀನದಲ್ಲೇ ಬರುತ್ತದೆ. ಕಳೆ 60, 100 ವರ್ಷಗಳಿಂದ ಯವ್ಯಾವ ಪ್ರದೇಶಗಳಲ್ಲಿ ಎಷ್ಟು ಮಳೆಯಾಗಿದೆಯೆಂಬುದು ಮತ್ತು ಆ ಮಳೆಯಲ್ಲಿ ಸ್ವಲ್ಪ ಮಟ್ಟಿಗೆ deviation ಇರುತ್ತದೆ. ಅದನ್ನು ನಮ್ಮ 21 ಜಿಲ್ಲೆಗಳಲ್ಲಿ ನೋಡಿದಾಗ ಮಳೆ ಯಾವಾಗ ಬರುತ್ತದೆ, ಯಾವಾಗ dry spell ಆಗುತ್ತದೆ, ಯಾವ ರೀತಿಯಾಗಿ ಬೆಳೆಗೆ ತೊಂದರೆಯಾಗುತ್ತದೆನ್ನುವಂಥಾದ್ದು ಕಳೆದ 50, 100 ವರ್ಷಗಳ ಇತಿಹಾಸವನ್ನು ಇಟ್ಟುಕೊಂಡು ನಾವು ಅದರ ಚಿತ್ರಣವನ್ನು ಮಾಡಬೇಕೆಂಬುದು ಕಲ್ಪನೆ. ಅದಕ್ಕೂ ಕೂಡ ಒಂದು ಸಮಿತಿ ಇದೆ. ಆ ಸಮಿತಿಯೂ ಕೂಡ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿರುವ ಸಮಿತಿ ಕೂಡ ಸಕಾಲಕ್ಕೆ ಕುಳಿತು ಸಕಾಲಕ್ಕೆ ನಿರ್ಣಯವನ್ನು ಮಾಡಿ ಸರ್ಕಾರದ ಗಮನಕ್ಕೆ ತರಬೇಕಾಗುತ್ತದೆ. ಇದರಿಂದ ನಮಗೆ ಅರ್ಥವಾಗುವುದೇನೆಂದರೆ ಯಾವ್ಯಾವ ತಾಲ್ಲೂಕುಗಳಲ್ಲಿ ನೀರಿನ ಮಟ್ಟ ಎಷ್ಟು ಪ್ರಮಾಣದಲ್ಲಿದೆ, ಎಷ್ಟು ಆಳಕ್ಕೆ ಹೋಗಿದೆ. ಇವತ್ತು ನೀರನ್ನು ಎಷ್ಟಮಟ್ಟಿಗೆ exploit ಮಾಡಿದ್ದೇವೆನ್ನುವಂಥ ಅಂಕಿ ಅಂಶಗಳನ್ನು ಒದಗಿಸುವಂಥ ಸಮಿತಿ ಕೂಡ ಇದೆ. ಮಳೆಯ ಮಾಪನಗಳ ಮುಖೇನಾ ಸಂಗ್ರಹಿಸುವುದರ ಜೊತೆಗೆ imaginary picture ಕೂಡ ಇವತ್ತು ಸಿಗುತ್ತದೆ. ಅದನ್ನು ಆಧರಿಸಿ ನಾವು ಬರವನ್ನು ಯಾವ ರೀತಿಯಾಗಿ ನಿರ್ವಹಣೆ ಮಾಡಬಹುದೆಂಬುದಕ್ಕೆ

ನಿಮ್ಮದೇ ಆದಂಥ ಒಂದು ready reckoner ಅನ್ನು ನೀವು ಇಟ್ಟುಕೊಳ್ಳಬೇಕಾಗುತ್ತದೆ. ಅದನ್ನು ಆಧರಿಸಿ ಇವತ್ತು ನಾವು ಕೆಲಸವನ್ನು ಮಾಡಬೇಕಾಗುತ್ತದೆ. ಅದಕೋಸ್ಕರ ವಿಶೇಷವಾಗಿ ಈಗಾಗಲೇ ಕಂದಾಯ ಇಲಾಖೆಯಿಂದ ಒಬ್ಬ ಕಾರ್ಯದರ್ಶಿಯವರನ್ನು ನೇಮಕ ಮಾಡಿದ್ದೀರಿ. ಇವತ್ತು ಮುಖ್ಯ ಕಾರ್ಯದರ್ಶಿಗಳಾಗಿರುವವರು CRF ಸಮಿತಿಯ ಅಧ್ಯಕ್ಷರು ಕೂಡ ಆಗಿರುತ್ತಾರೆ.

**3–30 P.M.**

ಈ ರೀತಿಯಾಗಿರತಕ್ಕಂಥ ಆಡಳಿತಾತ್ಮಕವಾಗಿರತಕ್ಕಂಥ ಅನೇಕ ರೀತಿಯಾದಂಥ ವೈವಿಧ್ಯತೆಯನ್ನು ಅರ್ಥ ಮಾಡಿಕೊಂಡು, ಸಮಸ್ಯೆಗಳನ್ನು ಬಗೆಹರಿಸುವುದಕ್ಕೋಸ್ಕರ ವಿವಿಧ ಸಮಿತಿಗಳನ್ನು ನೀವು ಮಾಡಿದ್ದೀರಿ ಆದರೆ ಆ ಸಮಿತಿಗಳು ಎಷ್ಟರ ಮಟ್ಟಿಗೆ ಕೆಲಸವನ್ನು ನಿರ್ವಹಿಸುತ್ತಿವೆ ಎನ್ನತಕ್ಕಂಥಾದ್ದು ಬಹಳ ಮುಖ್ಯ. 86 ತಾಲ್ಲೂಕುಗಳನ್ನು ಬರಪೀಡಿತ ತಾಲ್ಲೂಕುಗಳು ಎಂದು ನೀವು declare ಮಾಡಿರುವುದನ್ನು ಮೇಲ್ನೋಟಕ್ಕೆ ನಾವು ನೋಡಿದಾಗ ನಮಗೆ ಒಂದು ಅನುಮಾನ ಬರುತ್ತದೆ ನೀವು ನಿಜವಾಗಲೂ ಕೂಡ ವಾಸ್ತವಾಂಶದ ಹತ್ತಿರದಲ್ಲಿದ್ದೀರೋ ಅಥವಾ ಯಾವುದೋ ಒಂದು ಅಂಕಿ ಅಂಶದ ಆಧಾರದ ಮೇಲೆ ಮಾಡುತ್ತಿದ್ದೀರೋ ಎನ್ನತಕ್ಕಂಥ ಅನುಮಾನ ಬರುವಂಥ ರೀತಿಯಲ್ಲಿದೆ. ಬರ ಎಂದು ತೀರ್ಮಾನ ಮಾಡುವ ನಿಮ್ಮ ನಿಯಮಾವಳಿಗಳನ್ನು ಬದಲು ಮಾಡುವುದಕ್ಕೆ ಅವಕಾಶವಿದೆ. ಹಳೆ ನಿಯಮಾವಳಿಗಳನ್ನು ನೀವು ಬದಲು ಮಾಡಿ. ಬೇರೆ ರಾಜ್ಯಗಳಲ್ಲಿ ಮಾಡತಕ್ಕಂಥಾದ್ದನ್ನು ನೀವು ಮಾಡತಕ್ಕದ್ದಲ್ಲ. ನಮ್ಮ ಸ್ಥಳಿಯವಾಗಿರತಕ್ಕಂಥ ಸನ್ನಿವೇಶ ಮತ್ತು ಪರಿಸ್ಥಿತಿಗನುಗುಣವಾಗಿ ನಮ್ಮ ಮಾನದಂಡಗಳನ್ನೂ ಕೂಡ ಬದಲು ಮಾಡಬೇಕಾಗುತ್ತದೆ. ಬಹಳ ಮುಖ್ಯವಾಗಿ ನಾವು ಅವಲಂಬಿಸಿರತಕ್ಕಂಥಾದ್ದು ಎಂದರೆ ಮಳೆಯ ಮಾಪನಗಳು. ಮಳೆಯ ಮಾಪನಗಳು ಒಂದು ತಾಲ್ಲೂಕಿನಲ್ಲಿ 4–5–6–7 ಇರುತ್ತವೆ. ನಮ್ಮಲಿರತಕ್ಕಂಥ ಮಳೆಯ ಮಾಪನಗಳು ಬಹಳಷ್ಟು

ಕೆಟ್ಟುಹೋಗಿರತಕ್ಕಂಥವು. ಇರತಕ್ಕಂಥವುಗಳಲ್ಲಿ 3–4 ಕೆಲಸ ಮಾಡಿದರೆ ಹೆಚ್ಚಾಗಿದೆ. ಅದರ ಜೊತೆ ಇವತ್ತು Bio metric method ಅನ್ನೂ ಕೂಡ ಮಾಡಿದ್ದೀರಿ. ಅದು 300 ಕಿ.ಮೀ. ವ್ಯಾಪ್ತಿಯಲ್ಲಿ ಬಿದ್ದಂಥ ಮಳೆಯನ್ನು ಸಂಗ್ರಹಿಸುತ್ತದೆ. ಅದನ್ನು ಹೋಬಳಿ ಮಟ್ಟಕ್ಕೆ, ತಾಲ್ಲೂಕು ಮಟ್ಟಕ್ಕೆ ತರತಕ್ಕಂಥ ಕೆಲಸವನ್ನು ಮಾಡಬೇಕು. ಮಾಪನ ಕೇಂದ್ರಗಳನ್ನು ಜಾಸ್ತಿ ಮಾಡಿ, ಅದರಿಂದ ಬರತಕ್ಕಂಥ ಮಾಹಿತಿಯನ್ನು ಸಂಗ್ರಹ ಮಾಡುವುದರಿಂದ ವಾಸ್ತವಾಂಶವನ್ನು ಇವತ್ತು ಹೆಚ್ಚಿನ ರೀತಿಯಲ್ಲಿ ಒರೆ ಹಚ್ಚಿ ನೋಡುವುದಕ್ಕೆ ಸಾಧ್ಯವಾಗುತ್ತದೆ ಎನ್ನತಕ್ಕಂಥ ಕಾರಣದಿಂದ ಇವುಗಳನ್ನು ನಾವು ಹೆಚ್ಚು ಮಾಡಬೇಕಾಗಿರತಕ್ಕಂಥ ಅನಿವಾರ್ಯತೆ ಇದೆ. 21 ಜಿಲ್ಲೆಗಳ ವ್ಯಾಪ್ತಿಯಲ್ಲಿ ಬರತಕ್ಕಂಥ ತಾಲ್ಲೂಕುಗಳಲ್ಲಿ ಪರಿಸ್ಥಿತಿ ಏನಿದೆ ಎನ್ನುವುದನ್ನು ನಾವು ಅಂದಾಜು ಮಾಡಬೇಕಾಗುತ್ತದೆ. ಅಂತರ್ಜಲ ಎಷ್ಟರ ಮಟ್ಟಿಗೆ exploit ಆಗಿದೆ ಎನ್ನತಕ್ಕಂಥಾದ್ದನ್ನು ನೋಡಬೇಕಾಗುತ್ತದೆ. Semi critical, critical and over exploited (over critical) ವರ್ಗಗಳಲ್ಲಿ ಬರತಕ್ಕಂಥ ಗ್ರಾಮಗಳ್ಯಾವುವು, ತಾಲ್ಲೂಕುಗಳ್ಯಾವುವು ಎನ್ನುವುದನ್ನು ವಿಂಗಡಿಸಿ ಅದನ್ನು Black and Grey area ಎಂದೇನು ಮಾಡುತ್ತಿದ್ದೇವೆ, ಅದನ್ನು ಶಾಶ್ವತವಾಗಿ ನಿರ್ವಹಿಸಲು, ಶಾಶ್ವತವಾಗಿ ತೆಗೆದುಹಾಕಲು ಇರುವ ಮಾರ್ಗೋಪಾಯಗಳೇನು ಎಂದು ಯೋಚನೆ ಮಾಡಬೇಕು. ಮಾರ್ಗೋಪಾಯಗಳು ಎಂದರೆ, ವ್ಯರ್ಥವಾಗಿ ಹರಿದು ಹೋಗತಕ್ಕಂಥ ನೀರನ್ನು ತಡೆಗಟ್ಟತಕ್ಕಂಥಾದ್ದು, ಮಳೆಗಾಲದಲ್ಲಿ ಬರತಕ್ಕಂಥ ನೀರನ್ನು ತಡೆಗಟ್ಟತಕ್ಕಂಥ ರೀತಿಯಲ್ಲಿ, underground charging ಅನ್ನು ಜಾಸ್ತಿ ಮಾಡಲು ಸಹಾಯವಾಗತಕ್ಕಂಥ ರೀತಿಯಲ್ಲಿ ಕಾರ್ಯಾಚರಣೆಯನ್ನು permanent ಆಗಿ ಮಾಡಬೇಕಾಗುತ್ತದೆ. ಮಳೆ ಬಂದ ತಕ್ಷಣ ನಾವು ಎಲ್ಲವನ್ನೂ ಮರೆತು ಬಿಡುತ್ತೇವೆ. ಆ ಬಗ್ಗೆ ಇರುವ ಸಮಿತಿಯೂ ಸಭೆ ಸೇರುವುದಿಲ್ಲ, ಏನೂ ಮಾಡುವುದಿಲ್ಲ. ನಮ್ಮಲ್ಲಿರತಕ್ಕಂಥ ಎಲ್ಲ ಯೋಜನೆಗಳನ್ನು, ಅದು ತಾಲ್ಲೂಕು ಪಂಚಾಯಿತಿ ಇರಲಿ, ಜಿಲ್ಲಾ ಪಂಚಾಯಿತಿ ಇರಲಿ, ಆಯಾ ತಾಲ್ಲೂಕುಗಳಲ್ಲಿ ಅಂತರ್ಜಲವನ್ನು ಜಾಸ್ತಿ

ಮಾಡುವುದಕ್ಕೆ ಯಾವ ರೀತಿಯಾದಂಥ ಕಾರ್ಯಾಚರಣೆಗಳನ್ನು ಮಾಡಬೇಕು ಎನ್ನುವುದನ್ನು ಯೋಚಿಸಿ, ಅದು ನಿರಂತರವಾಗಿ ನಡೆಯುವಂತಾಗಬೇಕು. ಮಳೆ ಬಂದಾಗ ನಾವು ಅದನ್ನು ಮರೆತುಬಿಡುವುದು, ಮಳೆ ಇಲ್ಲದಾಗ ಮಾತ್ರ ಅದನ್ನು ಹುಡುಕತಕ್ಕಂಥಾದ್ದು ಸರಿಯಾಗುವುದಿಲ್ಲ ಎಂದು ಹೇಳುತ್ತೇನೆ. ಸಾಕಷ್ಟು ರೀತಿಯಲ್ಲಿ ನಾಲಾ ಒಡ್ಡುಗಳನ್ನು, ಸಣ್ಣ ಸಣ್ಣ ಒಡ್ಡುಗಳನ್ನು ಕಟ್ಟತಕ್ಕಂಥಾದ್ದು, ಇಂಗು ಗುಂಡಿಗಳನ್ನು ನಿರ್ಮಾಣ ಮಾಡತಕ್ಕಂಥಾದ್ದು, ಈ ರೀತಿಯಾಗಿರತಕ್ಕಂಥ ಕೆಲಸಗಳನ್ನು ಮಾಡಬೇಕಾಗುತ್ತದೆ. ಇವತ್ತಿಗೂ ಕೂಡ ಹೊಸದಾಗಿ ಕೊಳವೆ ಬಾವಿಗಳನ್ನು ತೆಗೆಯುವುದರಿಂದ ಅಂತರ್ಜಲವನ್ನು ಜಾಸ್ತಿ ಮಟ್ಟಕ್ಕೆ exploit ಮಾಡುವುದಕ್ಕೆ ಸಾಧ್ಯವಾಗಿದ್ದು, ಅದರಿಂದ ತೊಂದರೆಯಾಗಿದೆ. ಅದರಿಂದ ಕುಡಿಯುವ ನೀರಿಗೆ ಯಾವ ರೀತಿಯಾಗಿ ತೊಂದರೆಯಾಗುತ್ತದೆ ಎಂದರೆ, ಮಳೆ ಬರದೇ ಇದ್ದಂಥ ಸಂದರ್ಭದಲ್ಲಿ, ಅಂತರ್ಜಲ ಕೆಳಗೆ ಹೋದಂಥ ಸಂದರ್ಭದಲ್ಲಿ surface water ನಲ್ಲಿ ನಮಗೆ ಸಿಗತಕ್ಕಂಥಾದ್ದು ಫ್ಲೋರೈಡ್ ಯುಕ್ತವಾಗಿರತಕ್ಕಂಥ ನೀರು, ನೈಟ್ರೇಟ್‌ಯುಕ್ತವಾಗಿರತಕ್ಕಂಥ ನೀರು, ಐರನ್ ಯುಕ್ತವಾಗಿರತೆಕ್ಕಂಥ ನೀರು. ಈ ರೀತಿ ಕಲ್ಮಶವಾಗಿರತಕ್ಕಂಥ ನೀರು ಆರೋಗ್ಯದ ಮೇಲೆ ದುಷ್ಪರಿಣಾಮವನ್ನು ಬೀರಿ ಒಂದೊಂದು ತಾಲ್ಲೂಕಿನಲ್ಲಿ 10 ಸಾವಿರ, 20 ಸಾವಿರ, 30 ಸಾವಿರದಷ್ಟು ಜನ ಇವತ್ತು physically handicapped persons ಇರುವುದನ್ನು ನಾವು ನೋಡುತ್ತಿದ್ದೇವೆ. ಇವತ್ತು ನಾವು ಅನೇಕ ಯೋಜನೆಗಳನ್ನು ಮಾಡಿದ್ದೇವೆ. Physically handicapped ಗಳಿಗೆ ಯೋಜನೆಗಳನ್ನು ಮಾಡಿದ್ದೇವೆ, ಸಂಧ್ಯಾ ಸುರಕ್ಷಾ ಯೋಜನೆಗಳನ್ನು ಮಾಡಿದ್ದೇವೆ. ಈ ಯೋಜನೆಗಳಲ್ಲಿ, ಬಹುತೇಕ ಅಂಗವಿಕಲರೇ ಜಾಸ್ತಿಯಾಗಿರುವುದನ್ನು ನಾವು ನೋಡುತ್ತೇವೆ. ಅಂಗವಿಕಲರು ಜಾಸ್ತಿಯಾಗುವುದಕ್ಕೆ ಕಾರಣ ಎಂದರೆ ನಾವು ಕೊಡತಕ್ಕಂಥ ನೀರು ಗುಣಮಟ್ಟದ್ದು ಅಲ್ಲದೇ ಇರುವುದರಿಂದ ಇವತ್ತು ಈ ಚಿತ್ರ ನಮ್ಮ ಮುಂದೆ ಇದೆ ಎನ್ನತಕ್ಕಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಆದ್ದರಿಂದ ಅಂತರ್ಜಲವನ್ನು ಜಾಸ್ತಿ ಮಾಡುವುದಕೋಸ್ಕರ ನಾವು ಕಾರ್ಯಾಚರಣೆಯನ್ನು ಮಾಡಬೇಕಾಗುತ್ತದೆ. ನಿರಂತರವಾಗಿ ಕೊಳವೆ ಬಾವಿಗಳನ್ನು ಕೊರೆಯತಕ್ಕಂಥ ಕೆಲಸವಾಗುತ್ತಿದೆ. ಕೊಳವೆ ಬಾವಿಗಳನ್ನು ನಂಬಿಯೇ ಇವತ್ತು ಶಾಶ್ವತವಾಗಿರತಕ್ಕಂಥ ಬೆಳೆಗಳನ್ನು ಇಟ್ಟಿದ್ದಾರೆ. ಅದನ್ನು ನಂಬಿಯೇ ವ್ಯಫಸಾಯವನ್ನು ಮಾಡಬೇಕಾಗಿರತಕ್ಕಂಥ ಬೆಳೆಗಳನ್ನು ಇಟ್ಟಿದ್ದಾರೆ. ಅದನ್ನು ನಂಬಿಯೇ ವ್ಯವಸಾಯವನ್ನು ಮಾಡಬೇಕಾಗಿರತಕ್ಕಂಥ ಅನಿವಾರ್ಯತೆ ಇವತ್ತು ರೈತರ ಮುಂದೆ ಇರುವುದರಿಂದ ಕೊಳವೆ ಬಾವಿಗಳನ್ನು ಕೊರೆಸುವುದನ್ನು ನಿಲ್ಲಿಸುವುದಕ್ಕೆ ಸಾಧ್ಯವಿಲ್ಲದಂತಾಗಿದೆ. ಅದರ ಜೊತೆಗೆ, ನಾವು ರೈತರಿಗೆ ತಿಳುವಳಿಕೆ ಕೊಡಬೇಕು. ನಾನು ಒಂದು ಉದಾಹರಣೆ ಹೇಳುತ್ತೇನೆ. ನಾನು ಪಾವಗಡಕ್ಕೆ ಹೋಗಿದ್ದೇನೆ. ಇಂಥ ಬರಗಾಲವಿರುವಂಥ ಸಂದರ್ಭದಲ್ಲೂ ಕೂಡ, ವಿದ್ಯುತ್ತಿಗೆ ಅಭಾವವಿರುವಂಥ ಇಂಥ ಕಷ್ಟಪರಿಸ್ಥಿತಿಯಲ್ಲೂ ಕೂಡ ಐ.ಪಿ. ಸೆಟ್ಟುಗಳ ಮೂಲಕ ಬರತಕ್ಕಂಥ ನೀರಿನಲ್ಲಿ ಭತ್ತವನ್ನು ಹಾಕಿರತಕ್ಕಂಥ ದೃಷ್ಯಗಳನ್ನು ನೋಡಿದ್ದೇನೆ. ನಾವು ಬೆಳೆಯಬೇಕು, ನಾವು ತಿನ್ನಬೇಕು. ನಾವು ಕೊಳ್ಳಬಾರದು ಎನ್ನುವ ಮನೋಭಾವನೆ ರೈತರಲ್ಲಿ ಇರತಕ್ಕಂಥ ಹಿನ್ನೆಲೆಯಲ್ಲಿ ರೈತರು ಈ ರೀತಿಯಾಗಿ ಭತ್ತವನ್ನು ಬೆಳೆಯುತ್ತಿರುವುದರಿಂದ ನೀರೂ waste ಆಗುತ್ತಿದೆ, ಅವರೂ ಕೂಡ ಸಂಕಷ್ಟಕ್ಕೆ ಈಡಾಗುತ್ತಿದ್ದಾರೆ. ಕುಡಿಯುವ ನೀರಿಗೆ ಸಮಸ್ಯೆಯಾಗಿರತಕ್ಕಂಥ ಈ ಸಂದರ್ಭದಲ್ಲಿ, ಇಂಥಾದ್ದನ್ನು ನಿಯಂತ್ರಣ ಮಾಡತಕ್ಕಂಥಾದ್ದಕ್ಕೆ ರೈತರನ್ನು ಒಲಿಸುವ ಕೆಲಸವನ್ನು ಮಾಡಬೇಕಾಗುತ್ತದೆ ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ. ಶಾಶ್ವತವಾಗಿರತಕ್ಕಂಥ ಯೋಜನೆಗಳನ್ನು ರೂಪಿಸಿ, ಅದಕ್ಕೆ ನಿರಂತರವಾಗಿರತಕ್ಕಂಥ ಕಾರ್ಯಕ್ರಮಗಳನ್ನು ಹಾಕಬೇಕಾಗುತ್ತದೆ. ನಮ್ಮಲ್ಲಿ 500 ಮಿಲಿಮೀಟರ್‌ಗಿಂತ ಕಡಿಮೆ ಮಳೆ ಬರತಕ್ಕಂಥ ಸುಮಾರು 90 ತಾಲ್ಲೂಕುಗಳು ನಮ್ಮ ರಾಜ್ಯದಲ್ಲಿ ಇವೆ ಎಂದು ಹೇಳಿದರೆ ತಪ್ಪಾಗಲಾರದು. 500 ಮಿಲಿಮೀಟರ್‌ಗಿಂತ ಜಾಸ್ತಿ ಮತ್ತು ಸುಮಾರು 750 ಮಿಲಿಮೀಟರ್ ಅಥವಾ 1000 ಮಿಲಿಮೀಟರ್ ಅಂದಾಜು ಮಳೆ ಬೀಳತಕ್ಕಂಥ ಸುಮಾರು 50 ತಾಲ್ಲೂಕುಗಳು ಇವೆ. ಅದರ ಜೊತೆ,

1000 ಮಿಲಿಮೀಟರ್‌ನಿಂದ 1500 ಮಿಲಿಮೀಟರ್‌ವರೆಗೆ ಮಳೆ ಬೀಳತಕ್ಕಂಥಾದ್ದರಲ್ಲಿ 6–7 ತಾಲ್ಲೂಕುಗಳು ಬರುತ್ತವೆ. 1500 ಮಿಲಿಮೀಟರ್‌ಗಿಂತ ಹೆಚ್ಚಿನ ಅಂದರೆ 4500, 5000 ಮಿಲಿಮೀಟರ್‌ವರೆಗೂ ಮಳೆ ಬರತಕ್ಕಂಥ ತಾಲ್ಲೂಕುಗಳು ಪಶ್ಚಿಮ ಘಟ್ಟ, ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿವೆ. ಅಲ್ಲೂ ಕೂಡ ಸಮಸ್ಯೆಗಳನ್ನು ಬಗೆಹರಿಸುವುದರ ಬಗ್ಗೆ ನಾವು ಕೆಲವು ಚಿಂತನೆಗಳನ್ನು ಮಾಡಿ ಕಾರ್ಯಕ್ರಮಗಳನ್ನು ಹಾಕಬೇಕಾಗುತ್ತದೆ ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ. ಕಂದಾಯ ಸಚಿವರೇ ಸಚಿವ ಸಂಪುಟದ ಉಪ ಸಮಿತಿಯ ಅಧ್ಯಕ್ಷರಾಗಿದ್ದಾರೆ. ನೀವು (ಕಂದಾಯ ಸಚಿವರು) ಆಯ್ಕೆಯಾಗಿ ಬಂದಿರತಕ್ಕಂಥ ಬಳ್ಳಾರಿಯಲ್ಲಿಯೂ ಕೂಡ ಒಂದು ಕಡೆ ನೀರಾವರಿ ಪ್ರದೇಶವನ್ನು ನೋಡುತ್ತೀರಿ, ಇನ್ನೊಂದು ಕಡೆ ಅಷ್ಟೇ ಬರಗಾಲಕ್ಕೆ ತುತ್ತಾಗಿರತಕ್ಕಂಥ ಪ್ರದೇಶವನ್ನು ನೋಡುತ್ತೀರಿ. ನಿನ್ನೆಯೆಲ್ಲ ಸತತವಾಗಿ 12 ಗಂಟೆಗಳ ಕಾಲ ನಿರಂತರವಾಗಿ ಮಳೆ ಬಂದು ಪ್ರವಾಹ ಬಂದು ಹೋಗಿರತಕ್ಕಂಥಾದ್ದನ್ನು ನಾವು ನೋಡುತ್ತೇವೆ. ಆದರೆ ಅದು ನಿರಂತರವಾಗಿ ಇರುವುದಿಲ್ಲ. ಕೆಲವು ದಿವಸಗಳ ನಂತರ ಅದು ಹೋಗುತ್ತದೆ. ಆದರೆ ಅಂತರ್ಜಲವನ್ನು ಹಿಡಿದಿಡಬೇಕಾದರೆ ನಾವು ಶಾಶ್ವತವಾಗಿರತಕ್ಕಂಥ ಪರಿಹಾರ ಕಾರ್ಯಕ್ರಮಗಳನ್ನು ಮಾಡಬೇಕು. ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ತಾತ್ಕಾಲಿಕವಾಗಿ ನಾವು ಏನು ಮಾಡಬೇಕಾಗುತ್ತದೆ ಎಂದರೆ ಹಿಂಗಾರಿನಲ್ಲಿ ಸಂಪೂರ್ಣವಾಗಿ ನಾವು ಬೆಳೆಯನ್ನು ನಿಶ್ಚಿತ ಮಾಡಿಕೊಳ್ಳಬಹುದು. ಆದರೆ ಎಲ್ಲೂ ಕೂಡ ನಮಗೆ ಬೆಳೆ ಕೈಗೆ ಸಿಗುವುದಕ್ಕೆ ಸಾಧ್ಯವಿಲ್ಲ. ಕರ್ನಾಟಕದ ಬರಪೀಡಿತ 21 ಜಿಲ್ಲೆಗಳಲ್ಲಿರುವ ಎಲ್ಲ ತಾಲ್ಲೂಕುಗಳಲ್ಲಿಯೂ ಕೂಡ ಈ ಸಮಸ್ಯೆ ಇದೆ. ಇತ್ತೀಚೆಗೆ ಬಂದ ಮಳೆಯಿಂದ ಬೆಳೆಗೆ ಪ್ರಯೋಜನವಾಗುವುದಿಲ್ಲ. ದನಕರುಗಳಿಗೆ ಪ್ರಯೋಜನವಾಗಬಹುದು ಮತ್ತು ಮೇವಿಗೆ ಪ್ರಯೋಜನವಾಗಬಹುದೇ ಹೊರತು ಬೇರೆ ಯಾವುದಕ್ಕೂ ಪ್ರಯೋಜನವಾಗುವುದಿಲ್ಲ. ಇವತ್ತು ನದಿಗಳು ತುಂಬಿರತಕ್ಕಂಥಾದ್ದನ್ನು ಬಿಟ್ಟರೆ, ಕೆರೆಕಟ್ಟೆಗಳಿಗೆ ನೀರು ಬಂದಿಲ್ಲ. ಅಲ್ಲೋ,

ಇಲ್ಲೋ, ಸ್ವಲ್ಪ ಷಟ್ಟಿಗೆ ಕೆರಕಟ್ಟೆಗಳಿಗೆ ನೀರು ಬಂದಿದೆಯೇ ವಿನ: ಬೇರೆ ಕಡೆಗಳಲ್ಲಿ ಬಂದಿಲ್ಲ. ನಮ್ಮ ಜಿಲ್ಲೆಯಲ್ಲಿ, ನಮ್ಮ ತಾಲ್ಲೂಕಿನಲ್ಲಿ ಪರಿಸ್ಥಿತಿ ಏನಾಗಿದೆ ಎನ್ನುವ ಬಗ್ಗೆ ನಾನು ಇವತ್ತು ಬೆಳಗ್ಗೆಯೂ ಕೂಡ ವರದಿ ತರಿಸಿಕೊಂಡು ನೋಡಿದ್ದೇನೆ. ಅಲ್ಲಿ 10% ಕೂಡ ನೀರು ಬಂದಿಲ್ಲ. ಮುಂದೆ ನಮಗೆ ಬೇಕಾಗುವಂಥ ಬಿತ್ತನೆ ಬೀಜಗಳನ್ನು ಬೇರೆ ರಾಜ್ಯಗಳಿಂದ ತರಿಸತಕ್ಕಂಥ ಬದಲು ಈ ಒಂದು ಮಾರ್ಗೋಪಾಯವನ್ನು ಇಟ್ಟುಕೊಳ್ಳಬಹುದು. ಯಾವ ಯಾವ ಡ್ಯಾಂಗಳಲ್ಲಿ, ಟೇಲ್ ಎಂಡ್ (tale end) ಗಳಲ್ಲಿ ನೀರು ಕೊರತೆ ಬೀಳುತ್ತದೋ ಅಂಥ ಕಡೆಗಳಲ್ಲಿ ರೈತರ ಮನವೊಲಿಸಿ ಕೃಷಿ ಇಲಾಖೆಯವರು ಅವರಿಗೆ ಪ್ರೋತ್ಸಾಹ ಧನವನ್ನು ಕೊಟ್ಟು, ಕಡಲೇಕಾಯಿಯನ್ನು ಜಾಸ್ತಿ ಬೆಳೆಸತಕ್ಕಂಥಾದ್ದು ಅಥವಾ ಬಿತ್ತನೆ ಬೀಜಕ್ಕೆ ಸಹಾಯವಾಗತಕ್ಕಂಥಾದ್ದನ್ನು ಬೆಳೆಸಬೇಕು. ಈ ರೀತಿ ಮುಂದಿನ ವರ್ಷಕ್ಕೆ ಬೇಕಾಗತಕ್ಕಂಥ ಬಿತ್ತನೆ ಬೀಜಗಳನ್ನು ಉತ್ಪತ್ತಿ ಮಾಡಿಟ್ಟುಕೊಳ್ಳತಕ್ಕಂಥಾದ್ದು ಆಗಬೇಕು. ಇತ್ತೀಚಿನ ದಿನಗಳಲ್ಲಿ ಸರ್ಕಾರ ಸಬ್ಸಿಡಿ ಮುಖೇನ ಹೊಸ ತಳಿಗಳನ್ನು, ಹೊಸ ಬೀಜಗಳನ್ನು ಕೊಡುವುದರಿಂದ ರೈತರು ತಾವು ಬೆಳೆದಂಥ ಬೀಜದ ಮೇಲೆ ನಂಬಿಕೆಯಿಲ್ಲದೇ ಎಲ್ಲವನ್ನೂ ಮಾರಾಟ ಮಾಡಿಬಿಡುತ್ತಾರೆ. ನಂತರ ಅವರು ಬಿತ್ತನೆ ಬೀಜಕ್ಕಾಗಿ ಸಂಪೂರ್ಣವಾಗಿ ಸರ್ಕಾರವನ್ನು ನಂಬಿರುವುದರಿಂದ, ನಾವು ಬಿತ್ತನೆ ಬೀಜವನ್ನು ಅವನು ಕೇಳಿದಾಗ ಕೊಡುವುದಕ್ಕೆ ಉತ್ಪಾದನೆ ಮಾಡತಕ್ಕಂಥಾದ್ದರ ಬಗ್ಗೆ ಚಿಂತನೆಯನ್ನು ಹರಿಸಬೇಕು. ಮುಂದಿನ ವರ್ಷಕ್ಕೆ ಬೇಕಾಗತಕ್ಕಂಥ ಬಿತ್ತನೆ ಬೀಜಗಳಿಗೆ ನಾವು ಈಗಿನಿಂದಲೇ ತಯಾರಿ ಕೆಲಸವನ್ನು ಮಾಡಬೇಕು ಎನ್ನುವುದನ್ನು ನಾನು ಸಲಹೆ ಕೊಡುವುದಕ್ಕೆ ಇಷ್ಟಪಡುತ್ತೇನೆ. ಮತ್ತೊಂದು ವಿಚಾರವೆಂದರೆ, ಇತ್ತೀಚೆಗೆ ಬಿದ್ದ ಮಳೆಯಿಂದಾಗಿ ಮನೆಗಳು ಸಾಕಷ್ಟು ಹಾಳಾಗಿವೆ. ಎಷ್ಟು loss ಆಗಿದೆ ಎಂದರೆ ಮಳೆ ಬಂದಂಥ ಪ್ರದೇಶಗಳಲ್ಲೂ ಆಗಿದೆ, ಮಳೆ ಬರದೇ ಇರುವ ಕಡೆ ಕೂಡ ಸಾಕಷ್ಟು ಹಾನಿಯಾಗಿರತಕ್ಕಂಥಾದ್ದು ಇದೆ. ಸಾವಿರಾರು ಎಕರೆ ಜಮೀನಿನಲ್ಲಿ ಬಳೆದ crops damage ಆಗಿರತಕ್ಕಂಥಾದ್ದನ್ನು ಕೂಡ ನಾವು

ನೋಡುತ್ತೇವೆ. Agriculture field ನಲ್ಲಿ ಸುಮಾರು 14–15 ಸಾವಿರ ಹೆಕ್ಟೇರ್‌ನಷ್ಟು ಭೂಮಿಯಲ್ಲಿ ಬೆಳೆ ನಷ್ಟವಾಗಿದೆ. ರೈತರಿಗೆ ಆ ನಷ್ಟವನ್ನು ತುಂಬಿಕೊಡಲಿಕ್ಕೆ ಸಾಧ್ಯವಿಲ್ಲ. ಅದೇ ರೀತಿ ಶಾಶ್ವತ ಬೆಳೆಗಳಾದಂಥ ತೆಂಗು ಇರಬಹುದು, ಅಡಿಕೆ ಇರಬಹುದು, ಈ ರೀತಿಯಾಗಿರತಕ್ಕಂಥ ಸುಮಾರು 3–4–5 ಸಾವಿರ ಎಕರೆವರೆಗೂ ಕೂಡ ಬೆಳೆ ಹಾಳಾಗಿರುವುದನ್ನು ನೋಡುವುದರ ಜೊತೆಗೆ 160 ರಿಂದ 170 ಜನ ಮಳೆಗೆ ಸಿಕ್ಕಿ ಮನೆ ಕುಸಿದು ಸತ್ತುಹೋಗಿದ್ದಾರೆ. ಸುಮಾರು 200–250 ರೈತರ ಆತ್ಮಹತ್ಯೆ ಪ್ರಕರಣಗಳು ನಮ್ಮ ರಾಜ್ಯದಲ್ಲಿ ಕಂಡಿದೆ. ಪರಿಹಾರ ಕೊಟ್ಟಿರುವುದು ಕೇವಲ 25–30 ಜನರಿಗೆ ಅದು ಬಿಟ್ಟರೆ ಎಲ್ಲರಿಗೂ ಕೊಡುವುದಕ್ಕೆ ಸಾಧ್ಯವಾಗಿಲ್ಲ. Ministerial enquiry ಯಲ್ಲಿ ಬಹಳ delay ಆಗುತ್ತಿರುವ ಸೂಕ್ಷ್ಮವನ್ನು ನಿಮ್ಮ ಗಮನಕ್ಕೆ ತರತ್ತೇನೆ. ಕೊನೆಯ ಪಕ್ಷ ಅವನು ಸತ್ತ ಒಂದು ತಿಂಗಳೊಳಗಾಗಿ ಅದನ್ನು ಬಗೆಹರಿಸುವ ರೀತಿಯಲ್ಲಿ ಮಾಡಿ ಪರಿಹಾರ ಕೊಡಿಸುವ ಕೆಲಸವನ್ನು ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಇನ್ನು Cattle loss ಸುಮಾರು 20 ಸಾವಿರದಷ್ಟು ಆಗಿದೆ. ಅದು ದನ, ಕರು, ಹಸು, ಎಮ್ಮೆ, ಕುರಿಗಳು ಈ ರೀತಿಯಾದಂಥ losses ಜಾಸ್ತಿಯಾಗಿದೆ. ಅದಕ್ಕೆ ಯಾವುದೇ ರೀತಿಯ ಪರಿಹಾರಗಳಿಲ್ಲ. ಈ ರೀತಿ ನಷ್ಟವಾದಂಥ crop ಗಳಿಗೆ ಪರಿಹಾರ ಕೊಡಬೇಕೆಂದಾಗ ನಮ್ಮ ಪ್ರಕೃತಿ ವಿಕೋಪ ನಿಧಿಯ ಅಡಿಯಲ್ಲಿ ನಮಗೆ ಅವಕಾಶಗಳು ಕೂಡ ಇದೆ. ಮನೆ ಬಿದ್ದಂಥ ಸಂದರ್ಭದಲ್ಲಿ ಅದು ಭಾಗಶ: ಬಿದ್ದರೆ ಅದಕ್ಕೆ 10 ಸಾವಿರ ರೂ. ವರೆಗೆ ಕೊಡಬೇಕೆಂದಿದೆ. ಆದರೆ, ನಮ್ಮ ರಾಜ್ಯದಲ್ಲಿ ಸುಮಾರು 10–15 ಸಾವಿರ ಮನೆಗಳು ಬಿದ್ದರೂ ಕೂಡ ಎಲ್ಲೂ ಕೂಡ ಕೊಟ್ಟಿರುವ ಪರಿಹಾರ 500 ರೂ. ನಿಂದ 1,500 ರೂ. ಮಾತ್ರ. ಏಕೆಂದರೆ, ಅವನಿಗೆ loss ಆಗಿದೆ ಅವನು ಮನೆ ಕಟ್ಟಿಕೊಳ್ಳಲಿ ಎಂದು ಹಣ ಕೊಡುವುದಿಲ್ಲ. ಸರ್ಕಾರದಿಂದ ಏನೋ ಕೊಡಬೇಕು, ಕೊಡುತ್ತೇವೆ, ಅವನು ಕೊಟ್ಟಷ್ಟು ತೆಗೆದುಕೊಳ್ಳುತ್ತಾನೆಂದು ಕೊಟ್ಟರೆ ಅದರಿಂದ ಅವನಿಗೆ ಏನೂ ಪ್ರಯೋಜನವಾಗುವುದಿಲ್ಲ. ಆದ್ದರಿಂದ, ಪ್ರಕೃತಿ ವಿಕೋಪ ನಿಧಿ ನಿಮ್ಮ ವ್ಯಾಪ್ತಿಯಲ್ಲಿರುವಾಗ ಇಂಥದ್ದಕ್ಕೆ ಆದ್ಯತೆಗಳನ್ನು ಕೊಡಬೇಕು. ಕೊನೆಯ ಪಕ್ಷ

ಬಿದ್ದಿರುವ ಮನೆಗಳಿಗೆ 10 ಸಾವಿರ ರೂ.ಗಳನ್ನಾದರೂ ಕೊಟ್ಟರೆ ಅದೇ ಮನೆಯನ್ನು ರಿಪೇರಿ ಮಾಡಿಕೊಂಡು ವಾಸ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇಂಥ ದೃಶ್ಯ ರಾಜ್ಯದ ಮೂಲೆ ಮೂಲೆಗಳಲ್ಲಿ ಕೂಡ ಎಲ್ಲಾ ಹಳ್ಳಿಗಳಲ್ಲಿ ಕಂಡುಬರುತ್ತಿದ್ದು ಅದನ್ನು ಬಗೆಹರಿಸುವ ಕೆಲಸವನ್ನು ಸರ್ಕಾರ ಮಾಡಬೇಕು. ಪ್ರಕೃತಿ ವಿಕೋಪ ನಿಧಿಯಲ್ಲಿ ಕಳೆದ ವರ್ಷ ಬಿಡುಗಡೆಯಾದ ಹಣವನ್ನು ಸಹ ನೀವು ಖರ್ಚು ಮಾಡುವುದಕ್ಕೆ ಸಾಧ್ಯವಾಗಿಲ್ಲ. ನಾನು ಅಂಕಿ ಅಂಶಗಳನ್ನು ಹೇಳುವುದಿಲ್ಲ. ಈ ವರ್ಷದಲ್ಲಿ ಬಿಡುಗಡೆಯಗಿರುವ ಹಣ ಅದು CRF ನಲ್ಲಿರಬಹುದು NCCF ನಲ್ಲಿರಬಹುದು ಆ ಹಣವನ್ನು ನೀವು ಸಂಪೂರ್ಣ ಖರ್ಚು ಮಾಡುವುದಕ್ಕಾಗಿಲ್ಲ. ಅದರಲ್ಲಿ ಕಳೆದ ವರ್ಷವೂ ಖರ್ಚು ಮಾಡಿಲ್ಲ. ಈ ವರ್ಷವೂ ಖರ್ಚು ಮಾಡಿಲ್ಲ, ಅಂದಾಗ ಈ ರೀತಿಯಾಗಿ Deputy Commissioner ರವರ head ನಲ್ಲಿ ಹಣ ಇದೆಯೆಂದು ಹೇಳಿದರೆ ಪ್ರಯೋಜನವಾಗುವುದಿಲ್ಲ. ಆ ಹಣ ಸದ್ಬಳಕೆಯಾಗಬೇಕು; ಸದ್ವಿನಿಯೋಗವಾಗಬೇಕು, ಪ್ರಯೋಜನವಾಗಬೇಕು. ಒಂದು ಕಡೆ ಹಣವನ್ನು ಬಿಡುಗಡೆ ಮಾಡಿ ಇನ್ನೊಂದು ಕಡೆ ಎಲ್ಲೋ ಒಂದು ಕಡೆಗೆ ಹಣಕಾಸು ಇಲಾಖೆಯಿಂದ ಹಣ ಖರ್ಚು ಮಾಡಬೇಡಿ ಎನ್ನುವ ಮೌಖಿಕ ಆದೇಶ ಹೋದಾಗ ಹಣ ಖರ್ಚಾಗುವುದಕ್ಕೆ ಸಾಧ್ಯವಿಲ್ಲ. ನಮ್ಮ ಜಿಲ್ಲೆಯದು ಹೇಳುವುದಾದರೆ ಸುಮಾರು 4–5 ಕೋಟಿ ರೂ. ಜಿಲ್ಲಾಧಿಕಾರಿಗಳ ಹತ್ತಿರ ಇದೆ. ಆದರೆ, ಯಾವುದಕ್ಕಾದರೆ ಹಣ ಕೇಳಿದರೆ ನಮ್ಮ ಹತ್ತಿರ ಹಣವಿಲ್ಲವೆಂದು ಹೇಳುತ್ತಾರೆ. ಹಾಗಾಗಿ ಹಣ ಬಿಡುಗಡೆಯಾಗುವುದಿಲ್ಲ. ಆದರೆ, ನಮ್ಮ ಹತ್ತಿರ ಹಣವಿಲ್ಲ, ಬಿಡುಗಡೆ ಮಾಡಬೇಡಿ ಎನ್ನುವ ಮೌಖಿಕವಾದ ಆದೇಶವಿರುತ್ತದೆ. ಕೇವಲ paper ಆದೇಶ ಹೋಗುತ್ತಿದೆಯೇ ವಿನ: ನಿಜವಾಗಿ ಹಣ ಖರ್ಚು ಮಾಡುವುದಕ್ಕೆ ಆಗುತ್ತಿಲ್ಲ. ಇನ್ನು ಮುಖ್ಯವಾದ್ದು ಏನೆಂದರೆ, ಬರಪೀಡಿತ ಪ್ರದೇಶವೆಂದು 86 ತಾಲ್ಲೂಕುಗಳನ್ನು declare ಮಾಡಲಾಗಿದೆ. ಇದನ್ನು ಮಾಡಿದ ತಕ್ಷಣ ಕೇಂದ್ರಕ್ಕೆ ಹೋಗಿ memorandum ಕೊಡುವುದು, ನಂತರ ಕೇಂದ್ರದಿಂದ ಒಂದು team ಬರುತ್ತದೆ. ಅವರು 4–5 ತಂಡವಾಗಿ ಬಂದು ಎಲ್ಲವನ್ನೂ

ನೋಡಿ ಒಂದು ವರದಿಯನ್ನು ಕೇಂದ್ರಕ್ಕೆ ಕೊಡುತ್ತಾರೆ. ಆದರೆ, ಈ ಸಲ ಕೇಂದ್ರದಿಂದ ಬಂದಂಥ ತಂಡ ನಮ್ಮ ಜಿಲ್ಲೆಗೆ ಬಂದಾಗ ಅದರಲ್ಲಿ ಇಬ್ಬರು ಸದಸ್ಯರು ನಮ್ಮಲ್ಲಿಗೆ ಬಂದಿದ್ದರು. ನಾನು ಅವರ ಹತ್ತಿರ ಬಹಳ close ಆಗಿ interact ಮಾಡಿದೆ. ಬೆಳಗ್ಗೆಯಿಂದ ಸಾಯಂಕಾಲದ ವರೆಗೆ ಕೂಡ ಅವರ ಜೊತೆಯಲ್ಲಿಯೇ ಇದ್ದೆವು. ಇದು ಯಾವ ರೀತಿಯಾಗಿ ಸಹಾಯವಾಗುತ್ತದೆಂದು ನಾನು ಅರ್ಥಮಾಡಿಕೊಂಡೆ, ಅವರು ಎಲ್ಲಾ ಸಂದರ್ಭದಲ್ಲಿ review ಮಾಡುತ್ತಿದ್ದದ್ದು, ಮಾಹಿತಿ ಕೇಳುತ್ತಿದ್ದದ್ದು ಏನೆಂದರೆ ನೀವು NREGA ಅನ್ನು ಯಾವ ರೀತಿಯಾಗಿ ಖರ್ಚು ಮಾಡುತ್ತಿದ್ದೀರಿ, NREGA ಯ ಹಣವನ್ನು ನೀವು ಹೆಚ್ಚು ಖರ್ಚು ಮಾಡಿ, ಹಣವನ್ನು ಕೊಡಿ, ನೀವು ಖರ್ಚು ಮಾಡಿ, ಎಷ್ಟು ಬೇಕಾದರೂ ಖರ್ಚು ಮಾಡಿ ಎನ್ನುವ ಮಾತನ್ನು ಆ ಸಂದರ್ಭದಲ್ಲಿ ಹೇಳುತ್ತಾರೆ. ಇವತ್ತು NREGA ಎನ್ನುವ ಯೋಜನೆ ಬಹಳ ಉಪಯುಕ್ತವಾಗಿದೆ. ನಮ್ಮ ರಾಜ್ಯದಂಥ ಬರಗಾಲಕ್ಕೆ ತುತ್ತಾದಂಥ ರಾಜ್ಯಗಳಿಗೆ ಅದು ವರದಾನ ರೂಪದಲ್ಲಿರುವ ಯೋಜನೆಯಾಗಿದ್ದು ಅದರ ಸದ್ಬಳಕೆಯಾಗಬೇಕಾಗಿದೆ, ಮತ್ತು ಅದರಿಂದ ಹೆಚ್ಚು ಪ್ರಯೋಜನೆ ಪಡೆದುಕೊಳ್ಳಬೇಕಾಗಿದೆ. ಇವತ್ತಿನ ಸಂದರ್ಭದಲ್ಲಿ, ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರದಲ್ಲಿಗೆ ಹೋಗಿ memorandum ಕೊಟ್ಟಿದ್ದೀರಿ, ಕೇಂದ್ರಸರ್ಕಾರದಲ್ಲಿ ಕೂಡ ಕಾಲಾನುಕಾಲಕ್ಕೆ ಅಂದರೆ ಆ ಪರಿಸ್ಥಿತಿಗೆ ಅನುಗುಣವಾಗಿ ಅದರ ನಿಯಮಾವಳಿಗಳನ್ನು ಬದಲಾವಣೆ ಮಾಡುತ್ತಿದ್ದಾರೆ. ಹಣವನ್ನು ಹೆಚ್ಚು ಖರ್ಚು ಮಾಡುವುದಕ್ಕೆ ಸಹಾಯವಾಗುವ ರೀತಿಯಲ್ಲಿ ಮೂಲಭೂತವಾಗಿರುವ human resources ಅನ್ನು ಜಾಸ್ತಿ ಮಾಡುವ ಜೊತೆಗೆ equipments ಅನ್ನು ಉಪಯೋಗ ಮಾಡಿ ಕೆಲಸ ಮಾಡುವುದಕ್ಕೆ ಅವಕಾಶಗಳನ್ನು ಕೂಡ ಮಾಡುತ್ತಿದ್ದಾರೆ. ನಾನು ಸರ್ಕಾರಕ್ಕೆ ಒತ್ತಾಯ ಮಾಡುವುದೇನೆಂದರೆ, ನಮ್ಮ ರಾಜ್ಯದ ಪರಿಸ್ಥಿತಿಗೆ ಅನುಗುಣವಾಗಿ ಇವತ್ತು ನಾವು ಅದಕ್ಕೆ ಹೆಚ್ಚು ಹಣವನ್ನು ಖರ್ಚು ಮಾಡಬೇಕು, ಒಂದು ಕಡೆ ಮೂಲಭೂತ ಸೌಕರ್ಯಗಳನ್ನು ಹೆಚ್ಚು ಮಾಡುವುದರ ಜೊತೆಗೆ ಇನ್ನೊಂದು ಕಡೆಯಲ್ಲಿ ಜನರಿಗೆ ಉದ್ಯೋಗವನ್ನು ಕೊಡುವ ಕೆಲಸ ಆಗಬೇಕಾದಾಗ ಹೆಚ್ಚು

ಪರಿಣಾಮಕಾರಿಯಾದ ರೀತಿಯಲ್ಲಿ ಯೋಜನೆಯನ್ನು ಬಳಸುವುದು ಬಹಳ ಅವಶ್ಯಕತೆ ಇದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ, ಒಂದು ಮಾತನ್ನು ನಾನು ಮಾನ್ಯ ಕಂದಾಯ ಸಚಿವರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಡಾ: ಸ್ವಾಮಿನಾಥನ್ ಎನ್ನುವವರು ಕೃಷಿ ತಜ್ಞರಾಗಿದ್ದಾರೆ. ದಿನಾಂಕ:01–06–2009ರಲ್ಲಿ ಹಿಂದೂ ಪತ್ರಿಕೆಯಲ್ಲಿ ಅವರ ಒಂದು ಲೇಖನ ಬಂದಿದ್ದು ಅದನ್ನು ನಾನು ಓದಿದ್ದೇನೆ. The Heading is "Synergy between Food Security Act & NRGA". The successful implementation of NREGA and the Right to information Act indicates that the climate is conducive for a far-reaching, rights-based legislation to eliminate hunger and deprivation. ಅದು ಬಹಳ ಚೆನ್ನಾಗಿದೆ. ಅದನ್ನು ನಾವು ಸ್ವಲ್ಪ ಮಟ್ಟಿಗೆ ಅಧ್ಯಯನ ಮಾಡಿದರೆ ನಮ್ಮ food Security ಬಗ್ಗೆ ಯಾವ ರೀತಿಯಾದ ವಾತಾವರಣ ರಾಜ್ಯದಲ್ಲಿ, ದೇಶದಲ್ಲಿ ಸೃಷ್ಟಿಯಾಗುತ್ತಿದೆ ಎನ್ನುವ ಮಾತನ್ನು ಬಹಳ ಚೆನ್ನಾಗಿ ಹೇಳಿದ್ದಾರೆ. ಅವರು food access ಬಗ್ಗೆ ಒಂದು ಮಾತನ್ನು ಹೇಳುತ್ತಾರೆ. ಬಹುಶ: ಮಾನ್ಯ ಬಸವರಾಜ ಬೊಮ್ಮಾಯಿಯವರು ಇದನ್ನು ಅರ್ಥಮಾಡಿಕೊಳ್ಳುತ್ತಾರೆಂದು ಭಾವಿಸಿದ್ದೇನೆ.

**ಶ್ರೀ ಬಸವರಾಜ ಎಸ್. ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು):** NREGA ಮತ್ತು Food Security Synergy ಬಗ್ಗೆ ತಾವು ಮಾತನಾಡಿದಿರಿ. ಅದಕ್ಕೆ ತಕ್ಕ ಹಾಗೆ Nobel ಪ್ರಶಸ್ತಿ ಪಡೆದ ಅಮರ್ತ್ಯ ಸೇನ್ ರವರು ಒಂದು ಮಾತನ್ನು ಹೇಳಿದ್ದಾರೆ. ಮೊದಲು west Bengal famine, 1960's famineನಲ್ಲಿ hunger was the main issue. ಈಗಿರುವ draught, famine ಬಗ್ಗೆ ಅವರೇನು ಹೇಳುತ್ತಾರೆಂದರೆ, "The modern day famines are temporary lockout on employment". NREGA ಅದಕ್ಕೆ ಹೇಗೆ Synergy ಆಗಿದೆ? If you take care of that employment, lot of other things can betaken care of. ಅದಕ್ಕೆ ನಾವು stress ಕೊಡಬೇಕಾಗಿದೆ.

ಶ್ರೀ ಟಿ.ಬಿ. ಜಯಚಂದ್ರ: ಮತ್ತೊಂದು ಮಾತನ್ನು ಹೇಳುತ್ತಾರೆ. ತಾವು ಹೇಳಿದ್ದಕ್ಕೆ ಹೇಳುತ್ತೇನೆ. This is a function of livelihood opportunities and purchasing power. (As early as in 1859, a Famine Commission appointed by the colonical government said: "Indian famines are not famines of food, but of works; where there is work there is money and where there is money there is food." This is why Mahatma Gandhi said in 1946 at Noakhali. "To a people famishing and idle, the only acceptable from in which God can dare appear is work and promise of food as wages." And there is another important word: To provide political oversight and to foster a pan-political approach in matters relating to food security, the NCF recommended the establishment of a National Food Security and Sovereignty Board under the chairmanship of the Prime Minister and with members drawn from different political parties, Union Ministers and Chief Ministers. Such a poliical support and oversight body should become an integral part of the legislation. The another important word he says: the priorities of the work to be undertaken include watershed management and water conservation, drought-proofing, flood protection, land development, minor irrigation and rural connectivity. Such work is important to strengthen the ecological foundations of sustainable agriculture. The NREGA is probably the world's largest ecological security programme. Because it is an Act of parliament, it is passed with the conscience of all the parties. ಇದರ ಹೆಚ್ಚು ಪ್ರಯೋಜನವನ್ನು

ಮಾಡಿಕೊಳ್ಳುವುದಕ್ಕೆ ಹೊರಡಬೇಕು. ಮುಖ್ಯಮಂತ್ರಿಯವರು ನಿನ್ನೆ ಮಾತನಾಡುವಾಗ ನಾವು ಈಗಾಗಲೇ 2000 ಕೋಟಿ ರೂ.ಗಳನ್ನು ಖರ್ಚು ಮಾಡುತ್ತೇವೆಂದು ಹೇಳಿದವರು. ಆ ಮಾತನ್ನು ನಾನು ಒಪ್ಪುತ್ತೇನೆ. ಆ ದಿಸೆಯಲ್ಲಿ ನಮ್ಮ ಚಿಂತನೆಯಾಗಬೇಕು, ಆ ರೀತಿಯಾದಂಥ ಪ್ರೋತ್ಸಾಹ ನಮ್ಮ ಶಾಸಕರಿಗೂ ಆಗಬೇಕು. 2000 ಕೋಟಿ ರೂ. ಗಳನ್ನು ಖರ್ಚು ಮಾಡಿದಾಗ ನಾವು ಎಲ್ಲೋ ಒಂದು ಕಡೆಗೆ ಆ ಬಡತನ ಮತ್ತು ಬರದಿಂದಾಗಿ ಈ ಸಮಸ್ಯೆಗಳನ್ನು ಎದುರಿಸುವುದಕ್ಕೆ ಸಾಧ್ಯವಾಗುತ್ತದೆ. ಉದ್ಯೋಗವನ್ನು ಕೊಡಬಹುದು, Food Security ಕೊಡುವುದಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ, ಈ ಕಾರ್ಯಕ್ರಮಕ್ಕೆ ಹೆಚ್ಚು ಒತ್ತು ಕೊಡಬೇಕು. ಬರ ಮತ್ತು ಪ್ರವಾಹ ಬಂದ ಪ್ರದೇಶಗಳಿಗೆ ಸಂಬಂಧಿಸಿದಂತೆ ಪರಿಹಾರ ಕೇಳಲು ಕೇಂದ್ರ ಸರ್ಕಾರವನ್ನು ಕೇಳುವುದು, ಅವರು ಹಣ ಕೊಟ್ಟಿದ್ದಾರೆಂದು ನಾವು ಹೇಳುವುದು, ಕೊಟ್ಟಿಲ್ಲವೆಂದು ನೀವು ಹೇಳುವುದು, ಹಣ ಕೊಟ್ಟಿದ್ದರೂ ಖರ್ಚು ಮಾಡಿಲ್ಲವೆಂದು ನಾವು ಹೇಳುವುದು ಅದು ಇವತ್ತು political weapon ಆಗುತ್ತದೆಯೇ ವಿನ: ನಿಜವಾಗಿಯೂ ಈ ಸಮಸ್ಯೆಗಳನ್ನು ಪರಿಹರಿಸಬೇಕಾದರೆ 2000 ಕೋಟಿ ರೂ.ಗಳನ್ನು ಖರ್ಚು ಮಾಡುವುದಕ್ಕೆ ಪ್ರಾಮಾಣಿಕ ಪ್ರಯತ್ನ ಪಟ್ಟರೆ ನಾವೆಲ್ಲೋ ಒಂದು ಕಡೆಯಲ್ಲಿ ಬರವನ್ನು ನಿರ್ವಹಣೆ ಮಾಡುವುದರಲ್ಲಿ ಸಾಧ್ಯವಾಗುತ್ತದೆ. ಹಣವನ್ನು ಖರ್ಚು ಮಾಡುವಂಥ ಸಂದರ್ಭದಲ್ಲಿ, ಬರ ಬಂದಾಗ ನಾವು ಹೆಚ್ಚು ಹಣವನ್ನು ಕೃಷಿ ಚಟುವಟಿಕೆಗಳಿಗೆ ಖರ್ಚು ಮಾಡಬೇಕು. ಇಲ್ಲಿಯವರೆಗಿನ ನಿಮ್ಮ budgeted amount ಎಷ್ಟು? Release ಮಾಡಿರುವುದೆಷ್ಟು? ಎನ್ನುವ ಅಂಕಿ ಅಂಶವನ್ನು ನೋಡಿದರೆ, ನನಗೆ ದು:ಖವಾಗುತ್ತದೆ. ಏಕೆಂದರೆ, ಹಣವೇ ಬಿಡುಗಡೆಯಾಗಿಲ್ಲ. ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದಿಂದ ಒಟ್ಟಾರೆಯಾಗಿ ಹಣ ಬಿಡುಗಡೆಯಾಗಬೇಕಾಗಿತ್ತು. ಆ ರೀತಿ ಬಿಡುಗಡೆಯಾಗದಿರುವುದಕ್ಕೆ ಯಾವ ಪರಿಸ್ಥಿತಿಯಲ್ಲಿ ಲೋಪವಾಗಿದೆ ಎನ್ನುವುದು ಬೇರೆ. ಆದರೆ, ಯಾವುದೇ ಕಾರ್ಯಕ್ರಮಗಳಿಗೂ ಹಣ ಬಿಡುಗಡೆಯಾಗದಿರುವುದರ ಚಿತ್ರ ನನ್ನ ಮುಂದಿದೆ. ನಾನು ಅದೆಲ್ಲವನ್ನೂ

ವಿವರಿಸಿ ಹೇಳುವುದಕ್ಕೆ ಸಮಯವಿಲ್ಲ. ಬಹಳ ಮುಖ್ಯವಾದ ಸಲಹೆ ಏನೆಂದರೆ, ಶಾಸಕರ ಅಧ್ಯಕ್ಷತೆಯಲ್ಲಿ ಸಹ ಒಂದು ಸಮಿತಿ ಇದೆ. ನಾನು ಪ್ರಾಮಾಣಿಕವಾಗಿ ಹೇಳುವುದಾದರೆ, ಈ ವರ್ಷದಲ್ಲಿ ನಾನು ಒಂದೇ ಒಂದು ಸಭೆಯನ್ನು ಮಾತ್ರ ಕರೆದು ನಾವು ಕಾರ್ಯಯೋಜನೆಗಳನ್ನು ಮಾಡಿದೆವು. ಅದರಲ್ಲಿ ನಾನು ಇವರಲ್ಲವನ್ನೂ ಅಳವಡಿಸಿಕೊಂಡೆ. ಶಾಶ್ವತವಾಗಿ ಬರವನ್ನೆದುರಿಸಬೇಕಾದರೆ ಏನೆಲ್ಲಾ ಮಾಡಬೇಕು, check dams ಕಟ್ಟಬೇಕು, ಸಮುದ್ರಕ್ಕೆ ಹೋಗುವ ನೀರನ್ನು ತಡೆಯುವುದಕ್ಕೆ, ಬೇರೆ ರಾಜ್ಯಕ್ಕೆ ಹರಿದು ಹೋಗುವ ನೀರನ್ನು ತಡೆಯುವುದಕ್ಕೆ ಏನೆಲ್ಲಾ ಮಾಡಬೇಕೋ ಅದೆಲ್ಲ ಮಾಡಿದೆವು. ಆದರೆ, ನಮ್ಮ ಯೋಜನೆಗಳು ಯೋಜನೆಗಳಾಗಿಯೇ ಇವೆ ಗ್ರಾಮೀಣಾಭಿವೃದ್ಧಿ ಸಚಿವರು ನಮ್ಮ ಜಿಲ್ಲೆಗೆ ಬಂದಾಗ ಅವರಿಗೆ ಬಿಡುಗಡೆಯಾದ ಹಣದ ಬಗ್ಗೆ ಮತ್ತು ಇತರೆ ಬಗ್ಗೆ ಅಂಕಿ ಅಂಶ ಕೊಟ್ಟಿದ್ದೇವೆ. ಇಲ್ಲಿಯವರೆಗೆ ಕೇವಲ 8 ಲಕ್ಷ ರೂ.ಗಳು ನಮ್ಮ ಜಿಲ್ಲೆಗೆ ಬಿಡುಗಡೆಯಾಗಿದೆ. ಈ ಹಣದಲ್ಲಿ ನಾವು ಯಾವ ರೀತಿಯಾದ ಕಾರ್ಯ ಯೋಜನೆಗಳನ್ನು ಮಾಡುವುದಕ್ಕಾಗುತ್ತದೆ? ಈ ರೀತಿಯಾಗಿ ಸಮಿತಿಗಳನ್ನು ರಚಿಸುವುದರಿಂದ ಪ್ರಯೋಜನವೇನಾಗುತ್ತದೆ? ಕುಡಿಯುವ ನೀರಿನ ಸಮಸ್ಯೆ ನಿವಾರಿಸಲು ನಲ್ಲಿ ರಿಪೇರಿ ಮಾಡಿಸಲು, ಹೊಸದಾಗಿ ಕೊಳವೆ ಹಾಕಿಸುವುದಕ್ಕೆ ಇವತ್ತು ನಮಗೆ ಹಣ ಸಾಕಾಗುತ್ತಿಲ್ಲ. ಆ ರೀತಿಯಾದ ಸನ್ನಿವೇಶವಿರುವಾಗ ನಿಮ್ಮಲ್ಲಿ ಹಣ ಕೊಡುವುದಕ್ಕೆ ಎಷ್ಟು ಅವಕಾಶವಿದೆಯೋ ಆ ಹಣವನ್ನು ಸಂಪೂರ್ಣವಾಗಿ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸುವುದಕ್ಕೋಸ್ಕರ ಕೊಡಬೇಕು. ನಮಗೆ ವಿದ್ಯುಚ್ಛಕ್ತಿ ಇಲ್ಲದೆ ಕುಡಿಯುವ ನೀರಿನ ಸಮಸ್ಯೆ ಉಂಟಾಗುತ್ತಿದೆ ವಿದ್ಯುತ್ over load ನಿಂದ Transformer ಗಳು ಸುಟ್ಟು ಹೋಗುವುದು ಒಂದು ಕಡೆಯಾದರೆ, Mini Water Supplyಗೆ 65 ಸಾವಿರ ರೂ.ಗಳನ್ನು ಕಟ್ಟದೇ ಇದ್ದರೆ KEB ಯವರು ಅದಕ್ಕೆ connection ಕೊಡುವುದಿಲ್ಲ. ನನ್ನ ಕ್ಷೇತ್ರದ್ದೇ ಹೇಳಬೇಕೆಂದರೆ, ಸುಮಾರು 20 ಹಳ್ಳಿಗಳಿಗೆ ಕೊಡಬೇಕಾಗುತ್ತದೆ. 65 ಸಾವಿರ ರೂ.ಗಳಂತೆ 20 ಹಳ್ಳಿಗಳಿಗೆ ಕೊಡಬೇಕಾದರೆ ಎಷ್ಟು ಹಣ ಬೇಕಾಗುತ್ತದೆ? ಅದನ್ನು

ಕೊಡುವುದಕ್ಕೆ ಜಿಲ್ಲಾ ಪಂಚಾಯತ್‌ನಲ್ಲಿಯೂ ಹಣವಿಲ್ಲ, ನಾವೂ ಕಟ್ಟುವುದಕ್ಕಾಗುತ್ತಿಲ್ಲ. ಕಳೆದ 2–3 ವರ್ಷಗಳಿಂದಲೂ ಅದು ಹಾಗೆಯೇ ನಡೆದುಕೊಂಡು ಬರುತ್ತಿದೆ. ಕುಡಿಯುವ ನೀರಿಗೆಂದು ತಾತ್ಕಾಲಿಕವಾಗಿ ಏನು ಮಾಡುತ್ತಿದ್ದಾರೆಂದರೆ, ಕೊಕ್ಕೆ ಹಾಕಿ ವಿದ್ಯುತ್ ತಂತಿಗೆ ತಗುಲಿಸುತ್ತಾರೆ ಅದರಿಂದ transformers ಸುಟ್ಟು ಹೋಗುತ್ತವೆ. ಈ ರೀತಿಯಾಗಿ ಸಮಸ್ಯೆಗಳಾಗಿವೆ. ದಯಮಾಡಿ, ಇದಕ್ಕೆ ಹೆಚ್ಚು ಹಣವನ್ನು ಬಿಡುಗಡೆ ಮಾಡಿ, ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ. ಕಂದಾಯ ಸಚಿವರ ಗಮನಕ್ಕೆ ತರುವುದೇನೆಂದರೆ, ಎಲ್ಲಾ ಹಂತದ ಸಭೆಗಳೂ ನಡೆಯಲಿ, ನಿಮ್ಮ ಅಧ್ಯಕ್ಷತೆಯಲ್ಲಿ ಶಾಶ್ವತವಾಗದ ಕೆಲಸವನ್ನು ಮಾಡುವುದಕ್ಕೆ ನಮ್ಮ NREGS ಅನ್ನು ಹೇಗೆ ಬಳಕೆ ಮಾಡುಬಹುದು? ಮತ್ತು ಪರಿಹಾರ ಕಾರ್ಯಕ್ರಮಗಳನ್ನು ಮಾಡುವುದಕ್ಕೆ CRF/NCCF ನಿಂದ ಬರುವ ಹಣವನ್ನು ಎಷ್ಟರಮಟ್ಟಿಗೆ ಪ್ರಯೋಜನ ಮಾಡಿಕೊಳ್ಳಬಹುದೆನ್ನುವುದರ ಬಗ್ಗೆ ಕುಳಿತು ಚರ್ಚಿಸಿ ಮಾಡಬೇಕು. ನಮ್ಮ Irrigation Potential ಇರುವುದು 30–31 ಲಕ್ಷ ಅಷ್ಟೇ. ಅದಕ್ಕಿಂತ ಹೆಚ್ಚು ನಾವು ಮಾಡುವುದಕ್ಕಾಗಿಯೇ ಇಲ್ಲ. ನೀವೇ ಹೇಳುವ ಹಾಗೆ upper riparian ನಲ್ಲಿ advantageous ಜಾಸ್ತಿ ಇದೆ, ಪ್ರವಾಹ ಬಂದು ನೀರು ಸಮುದ್ರಕ್ಕೆ ಮತ್ತು ಬೇರೆ ರಾಜ್ಯಕ್ಕೆ ಲಿಮಿಟ್ ಮೀರಿ ಹೋಗುವ ನೀರನ್ನು ತಡೆಹಿಡಿಯಬೇಕಾದರೆ storage tanks, ಬಾಂದಾರಗಳನ್ನು ಕಟ್ಟಬೇಕು. ಅಂತರಜಲವನ್ನು ಜಾಸ್ತಿ ಮಾಡುವ ಕೆಲಸ ಮಾಡಬೇಕಾಗುತ್ತೆ. ನಮ್ಮೆಲ್ಲ ಅಭಿಪ್ರಾಯದಂತೆ, ನಮ್ಮ Irrigation ನಲ್ಲಿರುವ 38 on going projects ಏನಿವೆ ಅದಕ್ಕೆ ನೀವು ಬಜೆಟ್‌ನಲ್ಲಿ 3995 ಕೋಟಿ ರೂ. ಕೊಟ್ಟಿದ್ದೀರಿ. ಅದರಲ್ಲಿ 1000 ಕೋಟಿ ರೂ.ಗಳನ್ನು cut ಮಾಡಿದರು. ಉಳಿದದ್ದು 3000 ಕೋಟಿ ರೂ.ಗಳು ಮಾತ್ರ. ಅದರಲ್ಲಿಯೂ ಸಾಲ ಸೋಲ, pending bills ಗೆ ಹೋಗಿ, ಹೊಸ ಕೆಲಸ ಮಾಡುವುದಕ್ಕೆ ಏನು ಸಾಧ್ಯವಾಗುತ್ತದೆ? ನಾನು ಟೀಕೆ ಮಾಡುತ್ತಿದ್ದೇನೆಂದು ತಾವು ತಿಳಿದುಕೊಳ್ಳಬಾರದು. ಈ ಸದನ ನಿಮ್ಮ ಜೊತೆಯಲ್ಲಿರುತ್ತದೆ ಮತ್ತು

ಮುಖ್ಯಮಂತ್ರಿಯವರಿಗೆ ಬೆಂಬಲ ಕೊಡುತ್ತದೆ. ನಾವೊಂದು ನಿರ್ಣಯ ಮಾಡೋಣ. ಇವತ್ತು ನಮ್ಮ ಬಜೆಟ್ 60000 ಕೋಟಿ ರೂ.ಗಳಿಗಿಂತಲೂ ಹೆಚ್ಚಿರುವಾಗ 10000 ಕೋಟಿ.ರೂ.ಗಳನ್ನು ಏಕೆ ನೀರಾವರಿಗೆ ಇಡಬಾರದು? 10000 ಕೋಟಿ.ರೂ.ಗಳನ್ನು ನೀರಾವರಿಗೆ ಕೊಟ್ಟರೆ ಉಳಿಸಿರುವ ಕೆಲಸ ಮಾಡಲು 45000 ಕೋಟಿ.ರೂ.ಗಳು ಬೇಕೆಂಬುದು ನಿಮ್ಮ ಅಂದಾಜಿದೆ. ಕೊನೆಯ ಪಕ್ಷ ನಿಮ್ಮ ಅಧಿಕಾರದ ಅವಧಿಯಲ್ಲಿ ಎಲ್ಲಾ ಯೋಜನೆಗಳನ್ನು ಮುಗಿಸುವ ತೀರ್ಮಾನವನ್ನು ಮಾಡಿದರೆ ಬಹುಶ: ಇದಕ್ಕಿಂತ ಒಳ್ಳೆಯ ಕೆಲಸವನ್ನು ರೈತರಿಗೆ ಮಾಡುವಂಥದ್ದು ಬೇರಾವುದೂ ಇಲ್ಲ. ನೀವು 37 point programme ಯಾವುದೇ ಕೊಡಿ, ಅವೆಲ್ಲಕ್ಕಿಂತ ಬಹಳ ಮುಖ್ಯವಾಗಿರುವುದು, ನಮಗೆ ನೀರು ಕೊಡುವುದಾಗಿದೆ.

**ಅಧ್ಯಕ್ಷರು:** ನಾನು ನಿಮಗೆ time restriction ಮಾಡುವುದಿಲ್ಲ. ನೀವೇ ಅರ್ಥ ಮಾಡಿಕೊಂಡು ಮುಗಿಸಬೇಕು. ಬೇರೆ ಶಾಸಕರು ಮಾತನಾಡಬೇಕೆಂಬ ಒತ್ತಡವಿದೆ. It is left to you. (ಗೊಂದಲ) 10–15 ನಿಮಿಷ ಮಾತನಾಡಿ ಮುಗಿಸಿದರೆ ಎಲ್ಲರಿಗೂ ಅವಕಾಶ ಸಿಗುತ್ತದೆ. ತಾವು ಚೆನ್ನಾಗಿ ಮಾತನಾಡುತ್ತಿದ್ದೀರಿ, ಅದರ ಬಗ್ಗೆ ಎರಡು ಮಾತಿಲ್ಲ. ಒಳ್ಳೆಯ ಸಲಹೆಗಳನ್ನು ಕೊಡುತ್ತಿದ್ದೀರಿ. ಅದಕ್ಕೆ ಯಾವುದೇ ಅಡೆತಡೆ ಮಾಡುವುದಿಲ್ಲ. ಆದರೆ, ಪರಿಸ್ಥಿತಿಯನ್ನು ಅರ್ಥಮಾಡಿಕೊಂಡು ಬೇಗ ಮುಗಿಸಿ.

**ಶ್ರೀ ಟಿ.ಬಿ. ಜಯಚಂದ್ರ:** ಮುಖ್ಯಮಂತ್ರಿಯವರ ಪರವಾಗಿ ಉತ್ತರ ಹೇಳುವಾಗ 10000 ಕೋಟಿ ರೂ.ಗಳನ್ನು ಇದಕ್ಕೆ ಇಡುತ್ತೇವೆಂದು ಹೇಳುತ್ತೀರಿ ಎಂದು ನಾನು ಭಾವಿಸಿದ್ದೆ. ಆದರೆ, ಏಕೋ ನಿನ್ನೆ ದಿವಸ ನಿಮ್ಮ mind ಕೆಟ್ಟುಹೋಗಿಬಿಟ್ಟಿತು. ರೈತರ ಬಗ್ಗೆ ನಿಜವಾಗಿಯೂ ಕಳಕಳಿ, ಚಿಂತನೆ ಇದ್ದರೆ, ತಮ್ಮ ಆದ್ಯತೆ, ರಾಜ್ಯದ ಆದ್ಯತೆ ಇದ್ದರೆ ನೀರಿಗೆ ಆದ್ಯತೆ ಕೊಡಬೇಕು. ಇವತ್ತು ರಾಜಶೇಖರರೆಡ್ಡಿಯವರನ್ನು ನೆನೆಸಿಕೊಳ್ಳುತ್ತೇವೆ. ಏಕೆಂದರೆ, ಅವರು 71 ಲಕ್ಷ ಎಕರೆಗೆ 1 ಲಕ್ಷದ 65 ಸಾವಿರ ಕೋಟಿ.ರೂ.ಗಳಲ್ಲಿ 66000 ಕೋಟಿ ರೂ.ಗಳನ್ನು ಖರ್ಚು ಮಾಡಿದ ಧೀಮಂತರ ನಾಯಕರಾಗಿದ್ದರು. ಅವರು

ಸತ್ತು ಹೋದರೆನ್ನುವ ಕಾರಣಕ್ಕಾಗಿ 430 ಜನರು ಪ್ರಾಣಬಿಟ್ಟರು. ಆದರೆ, ಯಾರು ಪ್ರಾಣ ಬಿಟ್ಟರೆ ಏನಾಗುತ್ತದೆನ್ನುವ ಪ್ರಶ್ನೆಯಲ್ಲ. ಸಾವಿಗೋಸ್ಕರ ಸಾಯುತ್ತಿರುವ ಜನ, ವಿಷ ಕುಡಿದು ಸಾಯುತ್ತಿರುವ ಜನ ಜಾಸ್ತಿ ಇರುವಾಗ ಮುಂದಿನ Food security ದೃಷ್ಟಿಯಿಂದ ಎಲ್ಲೋ ಒಂದು ಕಡೆ ಆಹಾರೋತ್ಪಾದನೆ ಜಾಸ್ತಿಯಾಗಬೇಕು ಎಂದಾಗ ಮಳೆಯನ್ನು ಆಧರಿಸಿರುವ ಪ್ರದೇಶದ ಜನರಿಂದ ಸಾಧ್ಯವಿಲ್ಲ. ಅದಕ್ಕೇ ಆದೇ ರೀತಿಯಲ್ಲಿ ಮಾರ್ಗೋಪಾಯಗಳನ್ನು ಕಂಡುಹಿಡಿಯುವ ಕೆಲಸವನ್ನು ಮಾಡುವುದರ ಜೊತೆಗೆ ನೀರಾವರಿಗೆ ಹೆಚ್ಚು ಹಣವನ್ನು ಮೀಸಲಾಗಿಡಬೇಕು, ಅದನ್ನು ಖರ್ಚು ಮಾಡುವುದಕ್ಕೆ resolution ಮಾಡಬೇಕೆಂದರೂ ಅದನ್ನು ಮಾಡುವುದಕ್ಕೆ ನಾವು ತಯಾರಿದ್ದೇವೆ. ದಯಮಾಡಿ, ಅಂಥ ವಿಚಾರಗಳ ಬಗ್ಗೆ ಚರ್ಚೆ ಮಾಡಬೇಕು. ಇವತ್ತು ಈ ಬಗ್ಗೆ ಎಲ್ಲರೂ ಧ್ವನಿಗೂಡಿಸಬೇಕೆನ್ನುವ ಕಾರಣಕ್ಕಾಗಿ ಪ್ರಾರಂಭವಾಗಿರುವ ಕೆಲವು ವಿಚಾರಗಳನ್ನು ನಾನು ಪ್ರಸ್ತಾಪಿಸಿದೆ.

**ಶ್ರೀ ಬಂಡೆಪ್ಪ ಕಾಶೆಂಪುರ್(ಬೀದರ್ ದಕ್ಷಿಣ):** ಬರದ ವಿಷಯದ ಮೇಲೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳು. ಇಡೀ ನಮ್ಮ ಭಾಗ ಸಂಕಷ್ಟದಲ್ಲಿದ್ದಾಗ ಸದನದಲ್ಲಿ ನಾವು ಬರಗಾಲದ ಬಗ್ಗೆ ಚರ್ಚೆ ಮಾಡುತ್ತೇವೆ, ಪ್ರವಾಹದ ಬಗ್ಗೆ ಚರ್ಚೆಯಾಯಿತು. ಆಗಲೂ ನಮಗೆ ಅವಕಾಶ ಸಿಗಲಿಲ್ಲ. ಇವತ್ತು ಬರಗಾಲದ ಬಗ್ಗೆಯೇ ಚರ್ಚೆ ಮಾಡುತ್ತೇವೆಂದು ಹೇಳಿದಾಗ ಅಲ್ಲಿ ಅರ್ಧ ಮಳೆಯಾಗಿದೆ. ಹೇಗಾಗಿದೆ ಎಂದರೆ, ನಮ್ಮ ಭಾಗದಲ್ಲಿ 1972ರಲ್ಲಿಯೇ ಬಹಳ ಭೀಕರ ಬರಗಾಲ ಬಂದಿತ್ತೆಂದು ನಾವು ಕೇಳಿದ್ದೆವು.

**4-00 PM**

ಆದರೆ ಮೊನ್ನೆ ಮಳೆ ಇಲ್ಲದ ಕಡೆ ಏನು ನಮ್ಮ ಭಾಗದಲ್ಲಿ, ಹೈದರಾಬಾದ್ ಕರ್ನಾಟಕ, ಉತ್ತರ ಕರ್ನಾಟಕದಲ್ಲಿ affect ಆಗಿತ್ತು, ಅದು 1972ಕ್ಕಿಂತ ಪರಿಸ್ಥಿತಿ ಗಂಭೀರವಾಗಿದೆ ಎಂದು ಜನ ಮಾತನಾಡಿಕೊಳ್ಳುತ್ತಿದ್ದಾರೆ.

ಸುಮಾರು ವಿಷಯಗಳನ್ನು ಮಾನ್ಯ ಜಯಚಂದ್ರರವರು ಮಾತನಾಡಿದ್ದಾರೆ. ಇವತ್ತು ಅದರಲ್ಲಿ ಮಳೆ ಆಧಾರಿತ 70% ರೈತರಿದ್ದಾಗ, ... ಅದು ಖರೀಫ್, ರಬ್ಬಿಗೆ ನಾವು compare ಮಾಡಿದರೆ ಖರೀಫ್ ನಮ್ಮ ದೇಶದಲ್ಲಿ important. ಈ ಖರೀಫ್ ಬೆಳೆ ರೈತರೆಲ್ಲ timing ಅನುಸಾರವಾಗಿ ಬಿತ್ತಿ, ಬೀಜ, ಗೊಬ್ಬರ, ಕೂಲಿ ಎಲ್ಲವನ್ನೂ ಖರ್ಚು ಮಾಡಿದ್ದಾರೆ. ಇವತ್ತು ಖರೀಫ್ ಬೆಳೆ complete failure ಆಗಿದೆ. ನನಗನ್ನಿಸಿದ ಹಾಗೆ ಎಲ್ಲಾ ಜಿಲ್ಲಾಧಿಕಾರಿಗಳು ಮಂತ್ರಿಗಳಿಗೆ report ಕಳುಹಿಸಿರಬೇಕು. Dry spell ಆಗಿ ಸುಮಾರು 90%, ಮೊದಲು 40%, 50%, 60% ಎಂದು ಹೇಳಿ report ಬಂತು. ಆಮೇಲೆ ಬರುತ್ತಾ ಬರುತ್ತಾ ಇವತ್ತು 90% to 100% crop loss ಆಗಿದೆ ಎಂಬ ನಿಟ್ಟಿನಲ್ಲಿ ವರದಿ ಬಂದು official ಆಗಿದೆ. ಆ ಭಾಗದವರು, ಇಡೀ ರೈತರು ಬರಗಾಲ ಎಂದು announce ಮಾಡಿ ಎಂದು strike ಮಾಡಿದರು. ನಾವು ಸದನದಲ್ಲಿ ಎಲ್ಲಾ ಶಾಸಕರು ನಿಂತು ಬರಗಾಲವೆಂದು announce ಮಾಡಿ ಎಂದು ಹೇಳಿದೆವು. ನಮ್ಮ ಭಾಗದಲ್ಲಿ ಸುಮಾರು ಹತ್ತು ಸಾವಿರ ಇಪ್ಪತ್ತು ಸಾವಿರ ರೈತರು strike ನಲ್ಲಿ ಭಾಗಿಯಾದರು. ಆದರೆ ಆಗ ಸರ್ಕಾರ ಯಾವ ರೀತಿಯ ಗಮನ ಹರಿಸಲಿಲ್ಲ. ಈಗ ಎಲ್ಲದ್ದಕ್ಕಿಂತ important ಏನೆಂದರೆ ಆ ಭಾಗದಲ್ಲಿ ಮಳೆ ಇಲ್ಲದ ಕಡೆಯಿಂದ ರೈತರು ... crop loss ಆಗಿದ್ದು ಬೇರೆ, ದನಗಳು ಅವರ ಪರಿಸ್ಥಿತಿ ಇಷ್ಟೊಂದು ಖರಾಬ್ ಇದೆ ಎಂದರೆ, ನಾನೊಂದು ಹಳ್ಳಿಗೆ visit ಮಾಡುವುದಕ್ಕೆ ಹೋಗಿದ್ದೆ. ಆ ಹಳ್ಳಯಲ್ಲಿ ಯಾವುದೇ ಒಂದು ಹೊಂಡದಲ್ಲಾಗಲಿ, ಬೇರೆ ಒಂದು ಕಡೆ general ಆಗಿ ನೀರು ನಿಂತಿರುವಂತಹ ಪರಿಸ್ಥಿತಿ ಇಲ್ಲ. ಬಾವಿಯಲ್ಲಂತೂ ಇಲ್ಲವೇ ಇಲ್ಲ. ಕೊನೆಗೆ ರೈತರ ಪರಿಸ್ಥಿತಿ ಹೇಗಾಯಿತೆಂದರೆ ನಮ್ಮ ದನಗಳನ್ನು ತಮ್ಮ ಮನೆಗೆ ತಂದು ಕುಡಿಯುವ ನೀರಿನಲ್ಲಿ ಸ್ವಲ್ಪ ನೀರು ಕುಡಿಸುವಂತಹ ಪರಿಸ್ಥಿತಿ ನಮ್ಮ ರೈತರಿಗೆ ಬಂತು. ಆಗಲೂ ಯಾರೂ ಎಚ್ಚರಗೊಂಡಿಲ್ಲ. ಅದು ಆದ ನಂತರ ಮೇವಿನದು ದೊಡ್ಡ ಸಮಸ್ಯೆ ಆಯಿತು. ಇವತ್ತು Specialy drought hit ಪ್ರದೇಶಗಳಿಂದ ಬಹಳಷ್ಟು ಸಚಿವರಾಗಲಿ, ಶಾಸಕರಾಗಲಿ ಆ ಭಾಗದಿಂದ

ಬಂದಿದ್ದಾರೆ. ಇವತ್ತು ಎಷ್ಟೋ ಜನ ಮೇವು ಹಾಕಿಲ್ಲದ ಕಡೆಯಿಂದ ಹೈದರಾಬಾದ್ ಮತ್ತು ಬೇರೆ ಬೇರೆ ಕಡೆ ದನಗಳನ್ನು ಮಾರಿಕೊಂಡಂತಹ ದಾಖಲೆಗಳಿವೆ. ಮತ್ತೆ ಬೇರೆ ಕಡೆ ಎಲ್ಲಿ ಅವಕಾಶವಿದೆ ಅಲ್ಲಿಗೆ ಒಯಿದು ಬಿಟ್ಟು ಬಂದಂತಹ ರೈತರು ಇವತ್ತು ಬಹಳಷ್ಟು ಸಂಕಷ್ಟಕ್ಕೆ ಒಳಗೊಂಡಿದ್ದಾರೆ. ಹಾಗಾಗಿ ಇವತ್ತು ನೋವು ಏನಿದೆ ಎಂದರೆ ನಮ್ಮ ಭಾಗದಲ್ಲಿ ನಾವು ನೋಡಬೇಕಾದರೆ ಯಾರೇ ಜಿಲ್ಲಾ incharge ಮಂತ್ರಿಗಳು ಬಂದು ಬರ ಪರಿಸ್ಥಿತಿಯನ್ನು time ನಲ್ಲಿ ಬಂದು review ಮಾಡಲಿಲ್ಲ. ಅಲ್ಲಿನ ಅಧಿಕಾರಿಗಳಿಗೆ correct ಆಗಿ instruction ಕೊಡಲಿಲ್ಲ. proper ಆಗಿ ಹಣ ಮೇಲಿನಿಂದ ಬಿಡುಗಡೆಯಾಗಲಿಲ್ಲ. ಹಾಗಾಗಿ ನಾವು ನಮ್ಮ ಭಾಗದಲ್ಲಿ ಬಹಳಷ್ಟು ಸಂಕಷ್ಟವನ್ನು ಅನುಭವಿಸುತ್ತಿದ್ದೇವೆ. ಎಲ್ಲದ್ದಕ್ಕಿಂತ important ಇವತ್ತು ನಿಮ್ಮ ಭಾಗದಲ್ಲಿ ರೈತರ ಸರಣಿ ಆತ್ಮಹತ್ಯೆಯಾಗಿದೆ. ಇವತ್ತು ಒಬ್ಬ ರೈತ ನೇರವಾಗಿ ಮಾನ್ಯ ಮುಖ್ಯಮಂತ್ರಿಗಳ ಹೆಸರಿಗೆ ಪತ್ರ ಬರೆದು ನಾನು ನನ್ನ ಜಮೀನಿನಲ್ಲಿ ಇಷ್ಟು ಭತ್ತ ಹಾಕಿದ್ದೇನೆ, ಮೆಣಸಿನಕಾಯಿ ಹಾಕಿದ್ದೇನೆ, ಇಷ್ಟು ಖರ್ಚು ಮಾಡಿದ್ದೇನೆ, ಮಳೆ ಇಲ್ಲದಿರುವುದರಿಂದ current ಇಲ್ಲ. Current ಎಂದರೆ electricity. ಅದರ ಕಡೆಯಿಂದ ನಾನು ಬಹಳಷ್ಟು ತೊಂದರೆಯಿಂದಿದ್ದೇನೆ ಎಂದು ಹೇಳಿ ನೇರವಾಗಿ ಪತ್ರ ಬರೆದು ಅವನು poison ತೆಗೆದುಕೊಂಡು ಆತ್ಮಹತ್ಯೆ ಮಾಡಿಕೊಂಡ ಬಗ್ಗೆ ದಾಖಲೆ ನಾನು ಹೋದ ಅಧಿವೇಶನದಲ್ಲಿ ಕೊಟ್ಟಿದ್ದೇನೆ. ಇಂತಹ ಪರಿಸ್ಥಿತಿ ಇವತ್ತು ರಾಜ್ಯದ ರೈತರು ಅನುಭವಿಸುತ್ತಿರುವಾಗ ಬಹಳಷ್ಟು ಕ್ರಮಗಳನ್ನು ಸರ್ಕಾರ ತೆಗೆದುಕೊಳ್ಳಬೇಕಾಗುತ್ತದೆ. ನಾವಾದರೂ ಕೆಲವು ಪತ್ರಿಕೆಗಳಲ್ಲಿ ನೇರವಾಗಿ ಹೇಳಿದ್ದೇವೆ. ಆಪರೇಷನ್ ಕಮಲ ಮುಖಾಂತರ ಸೀಟ್‌ಗಳು ತೆರವಾಗಿದ್ದಕ್ಕೆ ಒಂದೊಂದು ಹೋಬಳಿಗೆ ಒಬ್ಬ ಮಂತ್ರಿ ಒಂದೊಂದು ಹಳ್ಳಿಗೆ ಒಬ್ಬರು ಎಂ.ಎಲ್.ಎ., ಇಷ್ಟೆಲ್ಲಾ ಮಾಡುವುದಕ್ಕೆ ಹೊರಟಿದ್ದಾರೆ, ನಮ್ಮ ಬರ ಪರಿಸ್ಥಿತಿ..

**ಶ್ರೀ ಸಿ.ಸಿ.ಪಾಟೀಲ್:** ಚಾಮುಂಡಿ ಕ್ಷೇತ್ರದ ಬೈ ಎಲೆಕ್ಷನ್‌ನಲ್ಲಿ ಯಾರ್ಯಾರು ಎಷ್ಟೆಷ್ಟು ಹೊಗಳಿದರು ಎಂಬುದು ಹೇಳಿ.

**ಶ್ರೀ ಬಂಡೆಪ್ಪ ಕಾಶಂಪುರ:** ಆಯಿತು. ನಮಗೆ ಗೊತ್ತಿದೆ. ಆಪರೇಷನ್ ಕಮಲ ಮಾಡುವುದಕ್ಕೆ ಹೋಗುವುದಿಲ್ಲ.

**ಶ್ರೀ ಸಿ.ಸಿ. ಪಾಟೀಲ್:** ಚಾಮುಂಡಿ ಬೈ ಎಲೆಕ್ಷನಲ್ಲಿ ಯಾರ್ಯಾರು ಎಲ್ಲೆಲ್ಲಿ ಇದ್ದರು ಎಂಬುದನ್ನೂ ಹೇಳಿ.

**ಶ್ರೀ ಬಂಡೆಪ್ಪ ಕಾಶಂಪುರ್:** ಆದರೆ ಬರ ಪರಿಸ್ಥಿತಿಯಲ್ಲಿ ಎಷ್ಟು ಮಂತ್ರಿಗಳು, ಎಷ್ಟು ಅಧಿಕಾರಿಗಳು ಇವತ್ತು review ಮಾಡಿ ಅಲ್ಲಿ ಜನರಿಗೆ ಧೈರ್ಯ ಕೊಟ್ಟಿದ್ದಾರೆ ಎನ್ನುವುದು ಬೇಕು. ಇವತ್ತು ಬಹಳಷ್ಟು ತಾಲ್ಲೂಕುಗಳು, ಅದರಲ್ಲಿಯೂ ಬಹಳ ಪೈಸೋಟಿ ಇದೆ. ಮಾನ್ಯ ಮುಖ್ಯಮಂತ್ರಿಗಳು ಗುಲ್ಬರ್ಗಾಗೆ ಬಂದಾಗ ಅಷ್ಟು strike ಅಷ್ಟು ಜನ ಒದರಾಡುವುದನ್ನು ನೋಡಿದರೂ, ಇನ್ನೂ ಎರಡು ದಿವಸ ನಾನು ಪರಿಸ್ಥಿತಿಯನ್ನು ನೋಡಿ ಬರಗಾಲ declare ಮಾಡುತ್ತೇನೆಂದು ಹೇಳಿದರು. ಆದರೆ ಕಂದಾಯ ಸಚಿವರು ಅವತ್ತಿನ ದಿನವೇ ಸಂಜೆಗೆ ಬರಗಾಲ declare ಮಾಡಿದರು. ಇವತ್ತು ರಾಜ್ಯದ ರೈತರು ಬಹಳಷ್ಟು ಆಸೆ ಇಟ್ಟುಕೊಂಡಿದ್ದಾರೆ. ಬರಗಾಲ declare ಆದರೆ ನಿಜಕ್ಕೂ ನಮಗೇನಾದರೂ ಸಹಾಯ ಸಿಗುತ್ತದೆ ಎಂಬ ನಿಟ್ಟಿನಲ್ಲಿ ನೋಡಿಕೊಂಡು ಕುಳಿತುಕೊಂಡಿದ್ದಾರೆ. ಇವತ್ತು 86 ತಾಲ್ಲೂಕುಗಳಲ್ಲಿ ಬರಗಾಲ ಎಂದು declare ಮಾಡಿದ್ದಾರೆ. ಬಹಳಷ್ಟು ಅಂಕಿ ಅಂಶಗಳು ಕೇಂದ್ರ ಸರ್ಕಾರದಿಂದ, ಸಿ.ಆರ್.ಎಫ್.ನಿಂದ ಡಿ.ಸಿ.ಗಳಿಗೆ ಎಷ್ಟು ದುಡ್ಡು ಹೋಗಿದೆ, ಅಲ್ಲಿ ಎಷ್ಟು ಖರ್ಚು ಮಾಡಿದ್ದಾರೆ, ಎಷ್ಟು ಬಿಟ್ಟಿದ್ದಾರೆ ಎಂದು ಮಂತ್ರಿಗಳು ತಮ್ಮ ಉತ್ತರದಲ್ಲಿ ಹೇಳುತ್ತಾರೆ. ಆದರೆ ಒಂದು ನಾನು ಹೇಳುವುದನ್ನು ಬಯಸುತ್ತೇನೆ. ಇವತ್ತು ಬರಗಾಲ ಪರಿಸ್ಥಿತಿಯಲ್ಲಿ ರೈತರ ಬೆಳೆಗಳು ನಾಶವಾಗಿದೆ. ನಮ್ಮ ಕಡೆ ಉದ್ದು, ಹೆಸರು, ತೊಗರಿ ಬೆಳೆಗಳು ನಾಶವಾಗಿವೆ. ಮತ್ತು ಕೆಲವು ಭಾಗದಲ್ಲಿ ಬಿತ್ತನೆಯೇ ಆಗಿಲ್ಲ. ನೀವು ಬೇಕಾದರೆ report ತರಿಸಿಕೊಳ್ಳಿ. ನಾವೇನೂ ಬೇರೆ ರೀತಿಯಲ್ಲಿ ಮಾತನಾಡುತ್ತಿಲ್ಲ. ಹಾಗಾಗಿ ಇಂತಹ ಪರಿಸ್ಥಿತಿಯಲ್ಲಿ ಸರ್ಕಾರ ಏನೇನು ಮಾಡಿದೆ, ಅದು ಎಲ್ಲಾ ಮುಗಿದು ಹೋಗಿದೆ. ಈಗ ನಾವು ಅದರ ಬಗ್ಗೆ

ಚರ್ಚೆ ಮಾಡುವುದರಲ್ಲಿ ಅರ್ಥವಿಲ್ಲ. ಆದರೆ ಇವತ್ತು ಸರ್ಕಾರ ಅವರಿಗೆ ಒಳ್ಳೆಯ ರೀತಿಯಲ್ಲಿ ಸವಲತ್ತನ್ನು ಕೊಟ್ಟಾದರೂ ಖುಷಿ ಮಾಡುವಂತಹ ಕೆಲಸ ಮಾಡಬೇಕಾಗುತ್ತದೆ. ಇತ್ತೀಚೆಗೆ, ಒಂದು ಎಂಟು ಹತ್ತು ದಿನಗಳಲ್ಲಿ ನಮ್ಮ ಕಡೆ ಸ್ವಲ್ಪ ಮಳೆಯಾಗಿದೆ. ಹಾಗಾಗಿ ತಮಗೆ ಹೇಳಬೇಕಾದರೆ 2009ರಲ್ಲಿ ಈ ಬರಗಾಲ ಪರಿಸ್ಥಿತಿಯಲ್ಲಿ ರೈತರು ಬಹಳಷ್ಟು ಆಸೆ ಇಟ್ಟುಕೊಂಡು ಕುಳಿತಿದ್ದಾರೆ. ಮೊದಲನೆಯದು compensation ಬಗ್ಗೆ ಹೇಳುವುದಾದರೆ, ರೈತರಿಗೆ ತಾವು ಎಕರೆವಾರು compensation ಕೊಡಿ. ಸಿ.ಆರ್.ಎಫ್. ಫಂಡ್‌ನಲ್ಲಿ ಎಕರೆಗೆ 800 ರೂಪಾಯ ಬರುತ್ತದೆ. ಅದು ಯಾವುದಕ್ಕೂ ಆಗುವುದಿಲ್ಲ. ನೀವು ಪ್ರಾಮಾಣಿಕವಾಗಿ ಎದೆ ಮುಟ್ಟಿ ಹೇಳಿ. ಬೀಜ, ಗೊಬ್ಬರ, ಕೂಲಿ ಎಲ್ಲಕ್ಕೂ ಖರ್ಚು ಮಾಡಿಕೊಂಡು ಅವರು ಬಹಳಷ್ಟು ಕಷ್ಟಕ್ಕೆ ಸಿಕ್ಕಿಹಾಕಿಕೊಂಡಿದ್ದಾರೆ. ಎಕರೆಗೆ Minimum ಹತ್ತು ಸಾವಿರ ರೂಪಾಯಿ ಕೊಡುತ್ತೇವೆಂದು ಸರ್ಕಾರ ಘೋಷಣೆ ಮಾಡಬೇಕೆಂದು ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಅದೇ ರೀತಿ ಇವತ್ತು ಕುಡಿಯುವ ನೀರಿನ ಪರಿಸ್ಥಿತಿ. ಬರಗಾಲ ಸಿಕ್ಕಾಪಟ್ಟೆ ಇತ್ತು. ನಾವು ನೋಡುವುದಕ್ಕೆ ಆಗುತ್ತಿರಲಿಲ್ಲ. ಶಾಶ್ವತವಾದಂಥ ಕುಡಿಯುವ ನೀರು ಕೊಡಬೇಕು. ಮಾನ್ಯ ಗ್ರಾಮೀಣ ಸಚಿವರೂ ಇದ್ದಾರೆ. ಡಾ. ನಂಜುಂಡಪ್ಪ ಸಮಿತಿಯ ಮುಖಾಂತರವೂ ಸಿಕ್ಕಾಪಟ್ಟೆ ಹಣ ನಮ್ಮ ಕಡೆ ಬರುತ್ತಿದೆ. ಅದನ್ನೆಲ್ಲಾ Synchronize ಮಾಡಿ ಆ ಭಾಗದಲ್ಲಿ ಶಾಶ್ವತವಾಗಿ ಕುಡಿಯುವ ನೀರಿನ ಸಮಸ್ಯೆಗಳನ್ನು ಬಗೆಹರಿಸಬೇಕು. ಏಕೆಂದರೆ ಬರಗಾಲ ಯಾವ ಭಾಗಗಳಲ್ಲಿ ಪದೇ ಪದೇ ಬರುತ್ತದೆ ಎಂಬುದು important ಇದೆ. ಇವತ್ತು ಅಂತಹ ಪ್ರದೇಶಗಳಲ್ಲಿ ನಾವು ಪೂರ್ವಭಾವಿ ಸಿದ್ಧತೆಗಳನ್ನು ಮಾಡಿಕೊಂಡು ಬಹಳಷ್ಟು support ಕೊಡುವಂಥ ಕೆಲಸ ಮಾಡಬೇಕಾಗುತ್ತದೆ.

**ಶ್ರೀ ಬಂಡಪ್ಪ ಕಾಶಂಪೂರ್: (ಮುಂದು)** ಯಾವ ರೈತರು ತಮ್ಮ ಜಾನುವಾರುಗಳನ್ನು ಉಳಿಸಿಕೊಂಡಿಲ್ಲವೋ ಅಂಥವರಿಗೆ ಜಾನುವಾರುಗಳನ್ನು ಸಬ್ಸಿಡಿ ಮೂಲಕ ಅಥವಾ ಉಚಿತವಾಗಿ ಕೊಡಿಸುವಂಥ ಕೆಲಸವನ್ನು ಸರ್ಕಾರ ಮಾಡಬೇಕಾಗುತ್ತದೆ. ಏಕೆಂದರೆ, ನಮ್ಮ ಕಾಲದಲ್ಲಿ ಬಂಡಿ ಮತ್ತು

ಎತ್ತುಗಳನ್ನು ತೆಗೆದುಕೊಳ್ಳುವುದಕ್ಕೆ 10 ಸಾವಿರ ರೂಪಾಯಿ ಸಬ್ಸಿಡಿ ಕೊಟ್ಟಿದ್ದೆವು. ಜಾನುವಾರಗಳು ಇಲ್ಲದೆ ಇರತಕ್ಕಂಥವರು ಬಹಳಷ್ಟು ಜನರಿದ್ದಾರೆ. ಆದ್ದರಿಂದ, ಜಾನುವಾರಗಳನ್ನು ಖರೀದಿ ಮಾಡುವುದಕ್ಕೆ ಸರ್ಕಾರ ಮುಂದಾಗಿ ಅವರಿಗೆ ಸಪೋರ್ಟ್ ಮಾಡಬೇಕೆಂದು ಈ ಸಂದರ್ಭದಲ್ಲಿ ಮಾನ್ಯ ಸಚಿವರಲ್ಲಿ ಆಗ್ರಹ ಮಾಡುತ್ತೇನೆ. ಈಗ ಖರೀಫ್ ಬೆಳೆ ಹೊರಟು ಹೋಗಿದೆ. ರಬ್ಬಿ ಬೆಳೆಗೆ ಈಗ ಚಾಲನೆ ಇದೆ. ರಬ್ಬಿ ಬೆಳೆಗೆ ಬೀಜ ಮತ್ತು ಗೊಬ್ಬರವನ್ನು ಉಚಿತವಾಗಿ ಕೊಡಬೇಕು. ಇವತ್ತಿನದಿವಸ 50% ಸಬ್ಸಿಡಿಯನ್ನು ಕೊಡುತ್ತಿದ್ದೀರಿ. ಮಾನ್ಯ ಕುಮಾರಸ್ವಾಮಿಯವರು ಮುಖ್ಯಮಂತ್ರಿಯಾಗಿದ್ದಂಥ ಸಂದರ್ಭದಲ್ಲಿ ನಾವು 75% ಸಬ್ಸಿಡಿ ಕೊಟ್ಟಿದ್ದೆವು. ಎಲ್ಲೆಲ್ಲಿ ಇದರ ತೊಂದರೆ ಆಗಿದೆಯೋ ಅಂಥ ಕಡೆ ಬೀಜ, ಗೊಬ್ಬರವನ್ನು ಉಚಿತವಾಗಿ ಕೊಡಬೇಕು ಮತ್ತು ಒಳ್ಳೆಯ ರೀತಿಯಲ್ಲಿ ಕ್ರೆಡಿಟ್ ಫೆಸಿಲಿಟಿ ಸಿಗುವಂತೆ ಬ್ಯಾಂಕ್‌ಗಳ ಮುಖಾಂತರ ಮಾಡಬೇಕೆಂದು ನಾನು ಮಾನ್ಯ ಸಚಿವರಲ್ಲಿ ಆಗ್ರಹ ಮಾಡಿಕೊಳ್ಳುತ್ತೇನೆ. ಇನ್ನೊಂದು ಮುಖ್ಯವಾದ ವಿಷಯ ಏನೆಂದರೆ, ಮಾನ್ಯ ಮುಖ್ಯ ಮಂತ್ರಿಗಳ ಮೇಲೆ ರೈತರು ಬಹಳಷ್ಟು ಆಸೆ ಇಟ್ಟುಕೊಂಡಿದ್ದರು. ಆದರೆ, ನೆನ್ನೆದಿವಸ ರೈತರಿಗೆ ಒಂದು ನಿರಾಸೆಯಾಗಿದೆ. ಏಕೆಂದರೆ, ನಾಲ್ಕು ದಿವಸ ಚರ್ಚೆ ಮಾಡಿದ ಮೇಲೆ ಫಲವತ್ತಾದ ರಿಸಲ್ಟ್ ಬಂದಿಲ್ಲವೆಂದು ನೆನ್ನೆದಿವಸ ಗೊತ್ತಾಗಿದೆ. ಆದರೂ ಕೂಡ ಬರದ ಮೇಲಿನ ಚರ್ಚೆಯಲ್ಲಿಯಾದರು ಒಳ್ಳೆಯ ಭರವಸೆಯನ್ನು ಕೊಡಿ. ಮಾನ್ಯ ಕಂದಾಯ ಸಚಿವರು ಮಾನ್ಯ ಮುಖ್ಯ ಮಂತ್ರಿಯವರನ್ನು ಕೇಳದೆ ಬರಗಾಲದ ಪ್ರಕಟಣೆ ಮಾಡಿರುವುದು ಪತ್ರಿಕೆಯಲ್ಲಿ ಬಂದಿದೆ.

**ಶ್ರೀ ಕೆ. ಕರುಣಾಕರ ರೆಡ್ಡಿ:** ಗುಲ್ಬರ್ಗಾದಲ್ಲಿ ಕ್ಯಾಬಿನೆಟ್ ಸಬ್ ಕಮಿಟಿ ಸೇರಿದಂಥ ಸಂದರ್ಭದಲ್ಲಿ ಅಲ್ಲಿನ ಸ್ಥಿತಿ ಈ ರೀತಿಯಾಗಿದೆ ಎಂದು ಅವರಿಗೆ ಹೇಳಿ ಅವರಿಂದ ಪರ್ಮಿಷನ್ ತೆಗೆದುಕೊಂಡು ಪ್ರಕಟಣೆ ಮಾಡಿದ್ದೇನೆ. ಈ ವಿಷಯ ನಿಮ್ಮ ಗಮನಕ್ಕೆ ಮತ್ತು ರಾಜ್ಯದ ಗಮನಕ್ಕೆ ಇರಲೆಂದು ಹೇಳುತ್ತೇನೆ.

**ಶ್ರೀ ಮಾಲೀಕಯ್ಯ ಏ. ಗುತ್ತೇದಾರ್:** ಮಾನ್ಯ ಉಪಾಧ್ಯಕ್ಷರೆ, ಅದು ಏಕೆ confuse ಆಗಿದೆ ಎಂದರೆ, ನಿಮ್ಮ ಸ್ಟೇಟ್‌ಮೆಂಟ್ ಏನಾದರು ಮಾನ್ಯ ಮುಖ್ಯ ಮಂತ್ರಿಯವರಿಗೆ ...

**ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್:** ಮಾನ್ಯ ಮುಖ್ಯ ಮಂತ್ರಿಯವರಿಗೆ ಫುತ್ತು ನಿಮಗೇನಾದರು ಮನಸ್ತಾಪ ಏನಾದರು ಇತ್ತೋ ಏನೋ ಗೊತ್ತಿಲ್ಲ. ಓಟ್ಟಿನಲ್ಲಿ ಪತ್ರಿಕೆಯವರು ಆ ರೀತಿಯಾಗಿ ಬರೆದಿದ್ದಾರೆ.

**ಶ್ರೀ ಮಾಲೀಕಯ್ಯ ಏ. ಗುತ್ತೇದಾರ್:** ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಕಂದಾಯ ಸಚಿವರ ಗಮನಕ್ಕೆ ತರುವುದೇನೆಂದರೆ, ಮಾನ್ಯ ಬಂಡೆಪ್ಪ ಕಾಶಂಪೂರ್ ಈ ವಿಷಯವನ್ನು ಏಕೆ ಪ್ರಸ್ತಾಪ ಮಾಡಿದರೆಂದರೆ, ಬರಗಾಲವೆಂದು ಮಾನ್ಯ ಕಂದಾಯ ಮಂತ್ರಿಗಳು ಘೋಷಣೆ ಮಾಡಿದಂಥ ವಿಷಯ ಪತ್ರಿಕೆಯಲ್ಲಿ ಬಂತು. ಮಳೆಗೆ ಇನ್ನು ಕಾಯುತ್ತಿದ್ದೇವೆಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿರುವಂಥ ಹೇಳಿಕೆ ಕೂಡ ಪತ್ರಿಕೆಯಲ್ಲಿ ಬಂತು. ಈ ರೀತಿಯಾದ ಹೇಳಿಕೆಗಳನ್ನು ಇವರಿಬ್ಬರು ಕೊಟ್ಟಿರುವುದರಿಂದ ಅವರು ಈ ವಿಷಯವನ್ನು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ಸುಮ್ಮನೆ ತಪ್ಪು ಮಾಹಿತಿ ಹೇಳುವುದು ಬೇಡ.

**ಶ್ರೀ ಕೆ. ಕರುಣಾಕರ ರೆಡ್ಡಿ:** ನಾನೂ ಕೂಡ ಸುಮ್ಮನೆ ಹೇಳುತ್ತಿಲ್ಲ.

**ಶ್ರೀ ಬಂಡೆಪ್ಪ ಕಾಶೆಂಪೂರ್:** ತಾವು ಸರಿಯಾಗಿ ಮಾಡಿದ್ದೀರೆಂದು ನಾವು ನಿಮಗೆ ಶಭಾಷ್‌ಗಿರಿ ಕೊಡುತ್ತಿದ್ದೇವೆ.

**ಶ್ರೀ ಕೆ. ಕರುಣಾಕರ ರೆಡ್ಡಿ:** ಮಾನ್ಯ ಮುಖ್ಯ ಮಂತ್ರಿಗಳಿಗೆ ಕೇಳಿಲ್ಲದೆ ಮಾಡಿದ್ದೇನೆಂದು ಹೇಳಿದ್ದೀರಿ.

**ಶ್ರೀ ಬಂಡೆಪ್ಪ ಕಾಶೆಂಪೂರ್:** 11ನೇ ತಾರೀಖಿನ ದಿವಸ ಮಾನ್ಯ ಮುಖ್ಯ ಮಂತ್ರಿಗಳು ಗುಲ್ಬರ್ಗಾಕ್ಕೆ ಬಂದಾಗ ಇನ್ನೆರಡು ದಿವಸದಲ್ಲಿ ಪರಿಸ್ಥಿತಿ ನೋಡಿ ಮಾಡುತ್ತೇವೆಂದು ಹೇಳಿದ ದಿವಸವೇ ನೀವು ಕೂಡ ಈ ವಿಷಯ ಪ್ರಕಟಣೆ ಮಾಡಿದ್ದರಿಂದ ನಾನು ಹೇಳಿದೆಯಷ್ಟೆ.

**ಶ್ರೀ ಸಿ. ಸಿ. ಪಾಟೀಲ್:** ನೆನ್ನೆದಿವಸದ ರಿಸಲ್ಟ್ ನೋಡಿ ಎಲ್ಲಾ ರೈತರಿಗೆ ಆಗಾತವಾಗಿದೆ ಎಂದು ತಾವು ಈಗಾಗಲೇ ಹೇಳಿದ್ದೀರಿ. ಆದರೆ, ಪತ್ರಿಕೆಗಳನ್ನು ಏನು ಬಂದಿದೆ ಎಂಬುದನ್ನು ಇವತ್ತಿನ ಎಲ್ಲ ಪತ್ರಿಕೆಗಳನ್ನು ತೆಗೆದು ನೋಡಿ. ನೀವು ಮಾನ್ಯ ಕಂದಾಯ ಸಚಿವರ ಮೇಲೆ ಆರೋಪ ಮಾಡುತ್ತಿದ್ದೀರಿ.

**ಶ್ರೀ ಬಂಡೆಪ್ಪ ಕಾಶೆಂಪೂರ್:** ಆರೋಪ ಮಾಡುತ್ತಿಲ್ಲ. ಅವರಿಗೆ ಶಭಾಷ್‌ಗಿರಿಯನ್ನು ಕೊಡುತ್ತಿದ್ದೇನೆ. ನೆನ್ನೆದಿವಸ ಬಿಟ್ಟು ಹೋಗಿರುವಂಥದ್ದನ್ನು ಬರಗಾಲದ ಮೇಲೆ ಉತ್ತರ ಕೊಡುವಂಥ ಸಂದರ್ಭದಲ್ಲಿಯಾದರು ಹೇಳಿ. ಮಾನ್ಯ ಕುಮಾರಸ್ವಾಮಿಯವರು ಮುಖ್ಯ ಮಂತ್ರಿಯಾಗಿದ್ದಂಥ ಕಾಲದಲ್ಲಿ ರೈತರ ಪರಿಸ್ಥಿತಿ ಕೆಟ್ಟು ಹೋಗಿ ರೈತರು ಆತ್ಮಹತ್ಯೆ ಮಾಡಿಕೊಂಡಾಗ ನೋವು ತಾಳಲಾರದೆ 25 ಸಾವಿರ ಸಾಲ ಮನ್ನಾ ಮಾಡಿದರು.

**ಶ್ರೀ ಕಟ್ಟಾಸುಬ್ರಮಣ್ಯ ನಾಯ್ಡು:** ಆ ಸಂದರ್ಭದಲ್ಲಿ ನಾವು ಕೂಡ ಇದ್ದೆವು ನಮ್ಮನ್ನು ಸೇರಿಸಿಕೊಂಡು ಹೇಳಿ.

**ಶ್ರೀ ಬಂಡೆಪ್ಪ ಕಾಶೆಂಪೂರ್:** ಅವರು ಮಾಡಿದ್ದಕ್ಕೆ ಮಾಡಿದ್ದಾರೆಂದು ಹೇಳಿದ್ದೇನೆ. ನೀವು ಈ ಕೆಲಸವನ್ನು ಮಾಡುವವರೆಗೂ ಅವರ ಹೆಸರು ಇದ್ದೇ ಇರುತ್ತದೆ. ಇವತ್ತಿನ ದಿವಸ ಯಾವ ಭಾಗದಲ್ಲಿ ರೈತರು ಸಂಕಷ್ಟದಲ್ಲಿ ಸಿಕ್ಕಿಕೊಂಡು ನೋವಿನಲ್ಲಿರುವಂಥವರಿಗೆ ಸಾಲ ಮನ್ನಾ ಮಾಡಿ ಇಲ್ಲದಿದ್ದರೆ ಅವರು 25 ಸಾವಿರ ಸಾಲ ಮನ್ನಾ ಮಾಡಿರುವಂಥದ್ದನ್ನು ತಾವು ಸ್ವಲ್ಪ ಹೆಚ್ಚಿಗೆ ಆದರೂ ಮಾಡಿ. ಏಕೆಂದರೆ, ನೀವು ರೈತರ ಹೆಸರಿನಲ್ಲಿ ಪ್ರಮಾಣವಚನ ಮಾಡಿರುವುದರಿಂದ 50 ಸಾವಿರ ರೂಪಾಯಿಗಳವರೆಗೆ ರೈತರ ಸಾಲವನ್ನು ಮನ್ನಾ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಹಿಂದೆ ನಾವು ನೀವು ಇದ್ದಾಗಲೇ ಘಾಡಿದ್ದೇವೆ. ನಾನು ಹೇಳುವುದನ್ನು ಸ್ವಲ್ಪ ಕೇಳಿ ಕ್ಯಾಪ್ಟನ್ ಯಾರೆಂಬುದು ಮುಖ್ಯ. ಬೇರೆ ಬೇರೆ ಬ್ಯಾಟ್ಸ್‌ಮ್ಯನ್‌ಗಳು ಎಷ್ಟು ರನ್ ಮಾಡಿದ್ದಾರೆಂಬುದು ಮುಖ್ಯವಲ್ಲ. ಕೊನೆಯಲ್ಲಿ ಹೆಸರು ಬರುವುದು ತಂಡದ

ಕ್ಯಾಪ್ಟನ್‌ಗೆ. ಆದ್ದರಿಂದ, ಇದರ ಬಗ್ಗೆ ಮಾನ್ಯ ಕಂದಾಯ ಸಚಿವರು ಗಮನ ಹರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಮಾನ್ಯ ಜಯಚಂದ್ರರವರು ಮಾತನಾಡುವಂಥ ಸಂದರ್ಭದಲ್ಲಿ ಒಂದು ವಿಷಯವನ್ನು ಹೇಳಿದರು. ಅದೇನೆಂದರೆ, NERG ಯೋಜನೆಯಲ್ಲಿ ಕಾಮಗಾರಿಗಳನ್ನು ತೆಗೆದುಕೊಳ್ಳಬೇಕೆಂದು ಇವತ್ತಿನ ದಿವಸ ಎಲ್ಲರು ಸಹ ಹೇಳಿದ್ದಾರೆ. ಆದರೆ, ಇವತ್ತಿನ ದಿವಸ ಅಲ್ಲಿಗೆ ಹೋಗಿ ನೋಡಿದಾಗ ಅಲ್ಲಿ ಏನಾಗಿದೆ ಎಂದರೆ ಟಾರ್ಗೆಟ್ ಕೊಟ್ಟಿರುವುದರಿಂದ ನಿಜವಾದ ಲೇಬರ್‌ಗಳು ಯಾರು ಇದ್ದಾರೆಯೋ ಅಂಥವರಿಗೆ ದುಡ್ಡು ಹೋಗುತ್ತಿಲ್ಲ. ಇದರ ಬಗ್ಗೆ ಗಮನಹರಿಸಬೇಕೆಂದು ಮಾನ್ಯ ಸಚಿವರಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಏಕೆಂದರೆ, ಗ್ರೌಂಡ್‌ಲೆವಲ್‌ನಲ್ಲಿ ಅಂದರೆ ಪಂಚಾಯತ್ ಲೆವಲ್‌ನಲ್ಲಿ ಈ ಪರಿಸ್ಥಿತಿಯನ್ನು ನೋಡುತ್ತಿದ್ದೇವೆ. ಪಂಚಾಯಿತಿ ಅಧ್ಯಕ್ಷಕರು ನಮಗೆ ಇಷ್ಟು ಟಾರ್ಗೆಟ್ ಬಂದಿದೆ ಎಂದು ರಾತ್ರೋರಾತ್ರಿ ಬುಲ್ಡೋಜರ್ ಉಪಯೋಗ ಮಾಡಿ ಕೆಲಸ ಮಾಡಿ ರೈತರ ಪಾಸ್‌ಬುಕ್ ತೆಗೆದುಕೊಂಡು ಅವರಿಗೆ 100 ರೂಪಾಯಿ ಕೊಟ್ಟು ಬಾಕಿ ಹಣವನ್ನು ಅವರು ಪಡೆದುಕೊಳ್ಳುತ್ತಿದ್ದಾರೆ. ಈ ರೀತಿಯಾಗಿ ಕೆಲಸ ನಮ್ಮ ರಾಜ್ಯದಲ್ಲಿ ಮೊದಲು ನಿಲ್ಲಬೇಕು. ಅಕಸ್ಮಾತ್ ಬಡ ಕೂಲಿಕಾರನಿಗೆ ಕೂಲಿ ಕೊಡತಕ್ಕಂಥದ್ದು ಕಡಿಮೆ ಬಿದ್ದರೆ ಬೇರೆ ಯಾವುದಾದರೊಂದು ರೀತಿಯಲ್ಲಿ ಸಹಾಯ ಮಾಡತಕ್ಕಂಥ ಕೆಲಸವನ್ನು ಸರ್ಕಾರ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ಒಂದು ಯೋಜನೆಯಲ್ಲಿ ಕೆಲಸ ಮಾಡುವುದನ್ನು ನಾವು ಹೋಗಿ ನೋಡಿದಾಗ ಅವರು ಏನು ಹೇಳುತ್ತಾರೆಂದರೆ, ಈ ಒಂದು ಕೆಲಸಕ್ಕೆ ಇನ್ನು ಜಾಸ್ತಿ ದುಡ್ಡು ಬೇಕಾಗುತ್ತದೆ. ಈಗ 100 ರೂಪಾಯಿ ಮಾಡಿರುವುದು ಕಡಿಮೆಯಾಗಿದೆ ಎಂದು ಹೇಳುತ್ತಿದ್ದಾರೆ. ಆದ್ದರಿಂದ, ಇದರ ಬಗ್ಗೆ ತಾವು ಸ್ವಲ್ಪ ಬೆಳಕು ಚೆಲ್ಲಬೇಕೆಂದು ಕೇಳಿಕೊಳ್ಳುತ್ತೇನೆ. ನಿಜಕ್ಕೂ ಕೂಡ ಈ ಸ್ಕೀಂನಿಂದ ಕೂಲಿ ಮಾಡುವಂಥ ಜನರ ಅಕೌಂಟ್‌ಗೆ ಹೋಗಿ ಅವರು ಜೀವನ ಮಾಡುವುದಕ್ಕೆ ಅನುಕೂಲವಾಗುವಂಥ ಕೆಲಸ ಆಗಬೇಕೆಂಬ ನಿಟ್ಟಿನಲ್ಲಿ ಮಾಡಬೇಕೆಂದು ನಾನು ಸರ್ಕಾರದವರಲ್ಲಿ ಒತ್ತಾಯ ಮಾಡುತ್ತೇನೆ. ಇನ್ನೊಂದು ವಿಷಯ

ಏನೆಂದರೆ, Insurance ಮಾಡಿಸುವಂಥದ್ದು ಕೂಡ ಬಹಳ ಮುಖ್ಯವಾಗಿದೆ. Weather Insurance or General Insurance ಬಗ್ಗೆ ಸರಿಯಾದಂಥ ರೀತಿಯಲ್ಲಿ ರೈತರಲ್ಲಿ ಅವೇರ್‌ನೆಸ್ ತರಬೇಕು. ಇವತ್ತಿನ ದಿವಸ ಲೋನ್ ಯಾರು ತೆಗೆದುಕೊಳ್ಳುತ್ತಾರೆಯೋ ಅವರ Insurance ಹಣ ಬ್ಯಾಂಕ್ ಲೋನ್ ಕಟ್ ಆಗುತ್ತಿದೆ. ಆದ್ದರಿಂದ, ಅವರಿಗೆ Insurance ಹಣ ಹೋಗುತ್ತಿದೆ. ಆದರೆ, ಇವತ್ತಿನ ಬಹಳ ಪ್ರದೇಶದಲ್ಲಿ Non-loanee Insurance ನ್ನು ಮಾಡುತ್ತಿಲ್ಲ. ಆದ್ದರಿಂದ ಇಂಥ ರೈತರಿಗೆ ಸರ್ಕಾರದ ಕಡೆಯಿಂದ ಅವೇರ್‌ನೆಸ್ ತಂದು ಸರ್ಕಾರದ ಕಡೆಯಿಂದ ಈ ರೈತರಿಗೆ ಸಹಾಯ ಮಾಡಬೇಕು. ಮತ್ತೆ crop cutting experiments ಹೋಬಳಿ ಲೆವಲ್‌ನಲ್ಲಿ ಮಾತ್ರ ಇದೆ. ಇದನ್ನು ಪಂಚಾಯತ್ ಅಥವಾ ಊರ ಲೆವೆಲ್‌ನಲ್ಲಿ ತಂದರೆ ಸ್ವಲ್ಪ ಸ್ಟಾಫ್ ಕೂಡ ಜಾಸ್ತಿಯಾಗುತ್ತದೆ. ಇವತ್ತಿನದಿವಸ ರೈತರಿಗೆ ಒಳ್ಳೆಯ ರೀತಿಯಿಂದ ಪರಿಹಾರ ಸಿಗುವಂಥ ಕೆಲಸ ಆಗುತ್ತದೆ. ಏಕೆಂದರೆ, ಒಂದೇ ಹೋಬಳಿಯಲ್ಲಿರುವ ಒಂದು ಊರಿಗೆ Insurance ಸಿಗುತ್ತದೆ. ಇನ್ನೊಂದು ಊರಿಗೆ Insurance ಸಿಗುವುದಿಲ್ಲ. ಇಂಥ ಕೆಲಸವನ್ನು ಸರಿಪಡಿಸಬೇಕೆಂಬ ನಿಟ್ಟಿನಲ್ಲಿ ಆಗಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ವಿದ್ಯುತ್ ಬಗ್ಗೆ ಮಾತನಾಡುವುದಕ್ಕೆ ಸಾಕಷ್ಟು ವಿಷಯ ಇತ್ತು. ಏಕೆಂದರೆ ನಮ್ಮ ಭಾಗದಲ್ಲಿ ಬರಗಾಲ ಇದ್ದಾಗ ಕರೆಂಟ್ ಇಲ್ಲದೆ ಭತ್ತ, ರಾಗಿ ಬಿತ್ತಿ ತಿನ್ನುವವರಿಗೆ ಬಹಳಷ್ಟು ಸಂಕಷ್ಟವಾಗಿದೆ. ಈ ಎಲ್ಲಾ ಅಂಗಳನ್ನು ಸರ್ಕಾರ ಗಮನಕ್ಕೆ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಏಕೆಂದರೆ, ಈಗೆ ಬರಗಾಲದ ಮೇಲೆ ಚರ್ಚೆ ಮಾಡುವುದರಲ್ಲಿ ಏನು ಅರ್ಥ ಇಲ್ಲ. ಏಕೆಂದರೆ, ಮಳೆ ಬಂದು ಬರಗಾಲ ಹೊರಟು ಹೋಗಿದೆ. ಆದರೆ, ಈಗ ತಮ್ಮದು ಏನು ಸಹಾಯ ಇದೆಯೋ ಅದನ್ನು ಮಾಡಿ. ಈಗಲಾದರು ಏನಾದರು ಮಾಡಿ ಎಂದು ಹೇಳುತ್ತಿದ್ದೇನೆ. ರೈತರಿಗೆ ಏನಾದರು ಸಹಾಯ ಮಾಡಿ ಎಂದು ಹೇಳುವುದಕ್ಕೆ ಬಯಸುತ್ತೇನೆ.

**ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್:** ತಾವು ಮಂತ್ರಿಯಾಗಿ ಕೆಲಸ ಮಾಡಿದ್ದೀರಿ. ಒಂದು ವಿಷಯವನ್ನು ತಮಗೆ ಕೇಳುವುದಕ್ಕೆ ಬಯಸುತ್ತೇನೆ.

ಇವತ್ತಿನ ದಿವಸ ಮಳೆ ಬಂದರ ರೈತರದು ಉದ್ಧಾರ ಆಗುತ್ತದೆಯೇ? ಏಕೆಂದರೆ, ಸದನಕ್ಕೆ ತಪ್ಪು ಮಾಹಿತಿ ಹೋಗಬಾರದು. ರೈತರು ಇವತ್ತಿನದಿವಸ ಸಾಕಷ್ಟು ಕಷ್ಟದಲ್ಲಿದ್ದಾರೆ. ಆದ್ದರಿಂದ, ಅವರಿಗೆ ಏನು ಪರಿಹಾರ ಕೊಡಬೇಕೆಂಬುದುರ ಬಗ್ಗೆ ಮಾತನಾಡಿ.

**ಶ್ರೀ ಕರಡಿ ಸಂಗಣ್ಣ ಅಮರಪ್ಪ:** ಸರ್ಕಾರದವರು ಸಹಾಯ ಮಾಡಿ ಎಂದು ಕೇಳುತ್ತಿದ್ದಾರೆ. ಮಳೆ ಬಂದಿದೆ ಬೇಡವೆಂದು ಹೇಳುತ್ತಿಲ್ಲ.

**ಶ್ರೀ ಬಂಡೆಪ್ಪ ಕಾಶೆಂಪೂರ್:** ನಾನು ಹೇಳುವುದೇನೆಂದರೆ, 8 ದಿವಸಗಳಿಂದೀಚೆಗೆ ಸ್ವಲ್ಪವಾದರು ಮಳೆಯನ್ನು ಕಂಡಿದ್ದೇವೆ. 1972ರಲ್ಲಿ ಬಂದಂಥ ಬೀಕರ ಬರಗಾಲವನ್ನು ನಾವು ಈ ವರ್ಷ ಕಂಡೆವು ಎಂದು ನಾನು ಹೇಳಿದ್ದೇನೆ. ಈ ಎಲ್ಲಾ ಅಂಶಗಳನ್ನು ಸರ್ಕಾರ ಗಮನದಲ್ಲಿಟ್ಟುಕೊಂಡು ಉತ್ತರ ಕೊಡುವಾಗ ರೈತರಿಗೆ ಒಳ್ಳೆಯ ರೀತಿಯಲ್ಲಿ ಸಹಾಯವಾಗುವಂಥ ಕೆಲಸ ಮಾಡಬೇಕೆಂದು ಕೇಳುತ್ತೇನೆ. ಇವತ್ತಿನದಿವಸ ಮಳೆ ಬಂದಿದೆ ಆದರೆ, ಬೆಳೆ ಇಲ್ಲ. ಕುಡಿಯುವುದಕ್ಕೆ ಸ್ವಲ್ಪ ನೀರು ಬಂದಿದೆ. ಆದರೂ ಕೂಡ ಕೆಲವು ಹಳ್ಳಿಗಳಲ್ಲಿ ಕುಡಿಯುವುದಕ್ಕೂ ನೀರಿನ ಸಮಸ್ಯೆ ಇದೆ. ನೆನ್ನೆದಿವಸ ಮಾತನಾಡುವಾಗ ಒಂದು ವಿಷಯ ಬಿಟ್ಟು ಹೋಗಿತ್ತು. ಇವತ್ತು ಗ್ರಾಮೀಣಾಭಿವೃದ್ಧಿ ಇಲಾಖೆ ಸಚಿವರು ಇಲ್ಲಿಯೇ ಇರುವುದರಿಂದ ಅವರ ಗಮನಕ್ಕೆ ಒಂದು ವಿಷಯ ತರುವುದಕ್ಕೆ ಬಯಸುತ್ತೇನೆ. ಪಂಚಾಯಿತಿಗೊಂದು ಡೆವಲಪ್‌ಮೆಂಟ್ ಆಫೀಸರ್ ಎಂದು ನೇಮಕ ಮಾಡುವುದಕ್ಕೆ ತಾವು ಹೊರಟಿದ್ದೀರಿ ಅದು ಒಳ್ಳೆಯದು, ಆದರೆ ನನ್ನದು ಒಂದು ಸಲಹೆ ಏನೆಂದರೆ, ಇವತ್ತು ಆ Development Officer ಗಳು ಬೇರೆ ಯಾವುದೆ ಒಂದು Qualificationದವರು ಬೇಡ, Agriculture, Horticulture ಮತ್ತು Sericulture qualification ದವರನ್ನು ತೆಗೆದುಕೊಂಡರೆ ಆ ಗ್ರಾಮೀಣ ಭಾಗಕ್ಕೆ ಹೆಲ್ಪ್ ಆಗುತ್ತದೆ. ಏಕೆಂದರೆ ನೇರವಾಗಿ ಪಂಚಾಯತಿ ಲೆವಲ್‌ನಲ್ಲಿ ಒಬ್ಬ Agriculture Graduate ಇದ್ದ ಎಂದರೆ, ಅವನಿಗೆ ಇನ್ನು ಹೆಚ್ಚು ಪ್ರಮಾಣದಲ್ಲಿ ರೈತನಿಗೆ ಸಹಾಯವಾಗುವಂಥ ಕೆಲಸವಾಗುತ್ತದೆ. ಅದಕ್ಕೆ ದಯವಿಟ್ಟು ನಾವು ನಮ್ಮ

ರೀತಿಯಲ್ಲಿ ಹೇಳಿರುತ್ತೇವೆ. ಪಂಚಾಯತಿಗೊಂದು Agriculture Consultant and Agriculture Assistant ನೇಮಕ ಮಾಡುತ್ತೇವೆಂದು ನಾವು ಹೇಳಿದ್ದೆವು, ನೀವು ತೆಗೆದುಕೊಳ್ಳಿ, ಇಲ್ಲವೆಂದು ಹೇಳುವುದಿಲ್ಲ. ಆದರೆ Agriculture Graduates ಗಳು ಇವತ್ತು E.O. ಗಳು ಆಗಿದ್ದಾರೆ. ಬೇರೆ ಬೇರೆ ಹುದ್ದೆಯಲ್ಲಿ ಹೋಗಿದ್ದಾರೆ. ಆದರೆ ಈ ಪೋಸ್ಟಿಗೆ ಮಾತ್ರ Agriculture Graduates ತೆಗೆದುಕೊಂಡರೆ ಅಥವಾ Horticuture, Sericulture, Forest Graduates ದವರನ್ನು ತೆಗೆದುಕೊಂಡರೆ ಮತ್ತೆ ಇನ್ನು ಹೆಚ್ಚಿನ ಪ್ರಮಾಣದಲ್ಲಿ ರೈತರಿಗೆ ಸ್ವಲ್ಪ ಅನುಕೂಲವಾಗುತ್ತದೆಂದು ಹೇಳುತ್ತೇನೆ. ಮಾನ್ಯ ಕಂದಾಯ ಸಚಿವರು ಇವೆಲ್ಲದಕ್ಕೂ ಒಳ್ಳೆಯ ರೀತಿಯಿಂದ ಪರಿಗಣಿಸಿ ತಮ್ಮ ಉತ್ತರದಲ್ಲಿ ಹೇಳಬೇಕೆಂದು ಹೇಳಿ, ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಪ್ರಕಾಶ್ ಈಶ್ವರ ಖಂಡ್ರೆ (ಭಾಲ್ಕಿ):** ಮಾನ್ಯ ಉಪಾಧ್ಯಕ್ಷರೆ, ತಾವು ನನಗೆ ಮಾತನಾಡಲು ಸಮಯವನ್ನು ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಹೇಳುತ್ತೇನೆ. ಈ ಸಲ ಮುಂಗಾರು ಮಳೆಯ ವೈಫಲ್ಯದಿಂದ ನಮ್ಮ ಬೀದರ್ ಜಿಲ್ಲೆಯಲ್ಲಿ ಸಂಪೂರ್ಣವಾಗಿ ಮುಂಗಾರು ಬೆಳೆ ನಾಶವಾಗಿದೆ. ನಮ್ಮ ಜಿಲ್ಲೆಯಲ್ಲಿ 4,11,000 ಹೆಕ್ಟೇರ್ ಭೂಮಿಯಲ್ಲಿ ಬಿತ್ತನೆಯಾಗಬೇಕಾಗಿತ್ತು. ಬರೀ 70% ಮಾತ್ರ ಬಿತ್ತನೆಯಾಯಿತು. ಆದರೆ 30% ಬಿತ್ತನೆಯಾಗಲಿಲ್ಲ. ನಮ್ಮ ಜಿಲ್ಲೆಯಲ್ಲಿ ವಿಶೇಷವಾಗಿ ಬರೀ 11% ಮಾತ್ರ ನೀರಾವರಿ ಕ್ಷೇತ್ರ ಇದೆ. 89% ಜಮೀನು ಮಳೆ ಆಧಾರಿತ ಕೃಷಿಯ ಮೇಲೆ ಅವಲಂಬಿತವಾಗಿದೆ. ಅದಕ್ಕೆ ಕಾರಣಗಳಲ್ಲಿ ಒಂದು ಅಂದರೆ, ಎಲ್ಲಾ ನೀರಾವರಿ ಯೋಜನೆಗಳು ಪೂರ್ತಿಯಾಗಲಿಲ್ಲ. ಕಾರಂಜಾ ಯೋಜನೆ 40 ವರ್ಷದ ಕೆಳಗಡೆ ಪ್ರಾರಂಭವಾಗಿ 9 ಕೋಟಿ ರೂ.ಗಳ ಅಂದಾಜು ವೆಚ್ಚದಲ್ಲಿ ಪೂರ್ತಿಯಾಗಬೇಕಾಗಿದ್ದರು ಇವತ್ತಿಗೆ ಅದು 500 ಕೋಟಿ ರೂ.ಗಳಿಗೆ ಆಗಿದೆ. ಸ್ವಲ್ಪಮಟ್ಟಿಗೆ ಮಾತ್ರ ಈಗ ಪೂರ್ತಿಯಾಗುತ್ತಾ ಬಂದಿದೆ. ಆದರೆ ಇನ್ನು ಪೂರ್ತಿಯಾಗಲಿಲ್ಲ. 4 ಬ್ರಿಡ್ಜ್ ಕಂ ಬ್ಯಾರೇಜ್‌ಗಳು 2008ಕ್ಕೆ ಪೂರ್ತಿಯಾಗಬೇಕಾಗಿತ್ತು. ಆದರೆ ಅವು ಪೂರ್ತಿಯಾಗಲಿಲ್ಲ. ಹೀಗಾಗಿ

ನಾನು ಸರ್ಕಾರಕ್ಕೆ ಮನವಿಯನ್ನು ಮಾಡುತ್ತೇನೆ. ಈ ಎಲ್ಲಾ ನೀರಾವರಿ ಯೋಜನೆಗಳು ತಕ್ಷಣ ಆದಷ್ಟು ಕಾಲಮಿತಿಯಲ್ಲಿ ಪೂರ್ತಿ ಮಾಡಬೇಕು. ಕಾಮಗಾರಿಗಳನ್ನು ಮಾಡದಿರುವ ಗುತ್ತಿಗೆದಾರರು ಮತ್ತು ನಮ್ಮ ಅಧಿಕಾರಗಳ ಮೇಲೆ ಕ್ರಮ ಕೈಗೊಳ್ಳಬೇಕೆಂದು ನಾನು ತಮ್ಮ ಮುಖಾಂತರ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಮ್ಮಲ್ಲಿ ಮಳೆ ಜೂನ್ ಮೊದಲನೆಯ ವಾರದಲ್ಲಿ ಬೀಳಬೇಕಾಗಿತ್ತು. ಎಲ್ಲಾ ರೈತರು ಬಿತ್ತನೆ ಮಾಡುತ್ತಿದ್ದರು. ಅವರು ಅಲ್ಲಿ ಇಲ್ಲಿ ಸಾಲವನ್ನು ಮಾಡಿ ಬಿತ್ತನೆ ಮಾಡಿದ್ದು ಸಂಪೂರ್ಣ 95% ಬೆಳೆ ನಾಶವಾಗಿದೆ. ಸರ್ಕಾರ ನಮ್ಮೆಲರ ಆಗ್ರಹದ ಮೇರೆಗೆ ಬರಗಾಲವೆಂದು ಹೇಳಿ ಸ್ವಲ್ಪ ವಿಳಂಬವಾಗಿ, ಏಕೆಂದರೆ ಹಿಂದೆ ನಡೆದಂಥ ಅಧಿವೇಶನದಲ್ಲಿ ನಾನು ಪ್ರಶ್ನೆಯನ್ನು ಕೇಳಿದ್ದೆ. ಮಾನ್ಯ ಕಂದಾಯ ಸಚಿವರು ನಿಮ್ಮಲ್ಲಿ ಮೇವಿನ ಮತ್ತು ನೀರಿನ ಕೊರತೆ ಇಲ್ಲವೆಂದು ಉತ್ತರವನ್ನು ಕೊಟ್ಟಿದ್ದರು. ಅಂದರೆ ಅಧಿಕಾರಿಗಳು ಇವರಿಗೆ ತಪ್ಪು ಮಾಹಿತಿಯನ್ನು ಕೊಟ್ಟಿದ್ದರು. ಮೇವು ಮತ್ತು ನೀರಿನ ಕೊರತೆ ಇತ್ತು. ಆದರೂ ಸದನಕ್ಕೆ ಮಾಹಿತಿಯನ್ನು ಕೊಡುವಂಥ ಸಂದರ್ಭದಲ್ಲಿ ಮೇವಿನ ಮತ್ತು ನೀರಿನ ಕೊರತೆ ಇಲ್ಲವೆಂದು ನಾವು ಉತ್ತರವನ್ನು ಓದಿದ ತಕ್ಷಣ ಅಲ್ಲಿ ಅನೇಕ ಮೇವಿನ ಕೊರತೆಯಿಂದ ದನಕರುಗಳು ಇವತ್ತಿನ ದಿವಸ ಸತ್ತುಹೋಗಿರುವಂಥ ಕೆಲವು ಘಟನೆಗಳು ಆಗ ಆದವು. ಅದು ಆದ ಮೇಲೆ ಎಲ್ಲರ ಆಗ್ರಹದ ಮೇರೆಗೆ ಬರಗಾಲವೆಂದು ಘೋಷಣೆ ಮಾಡಿದ ತಕ್ಷಣ ಎಲ್ಲಾ ರೈತರು ನಿರೀಕ್ಷೆ ಮಾಡುತ್ತಿದ್ದರು. ಸರ್ಕಾರದ ವತಿಯಿಂದ ಏನಾದರೊಂದು ಪರಿಹಾರ ಸಿಗುತ್ತದೆ ಎಂದು ತಿಳಿದುಕೊಂಡಿದ್ದೆವು. ಆದರೆ ದುರಾದೃಷ್ಟವಶಾತ್ ಇಲ್ಲಿಯವರೆಗೆ ರೈತರು ಏನು ಪರಿಹಾರವನ್ನು ನಿರೀಕ್ಷೆ ಮಾಡುತ್ತಿದ್ದರು ಅವರಿಗೆ ಒಂದು ನೈಯಾಪೈಸೆ ಪರಿಹಾರ ಆ ರೈತರಿಗೆ ಸಿಗಲಿಲ್ಲ. ನಮ್ಮ ಒಂದೆ ಭಾಲ್ಕಿ ತಾಲ್ಲೂಕಿನಲ್ಲಿ ಸುಮಾರು 72,000 ಹೆಕ್ಟೇರ್ ಪ್ರದೇಶದಲ್ಲಿ ಅಂದರೆ ಒಂದುವರೆ ಲಕ್ಷ ಎಕರೆ ಬಿತ್ತಣಿಕೆಯಾಗದೆ ಇರುವಂಥದ್ದು ಮತ್ತು ಬಿತ್ತನೆಯಾಗಿರುವುದು ಎಲ್ಲವೂ ನಾಶವಾಗಿದೆ. ಸುಮಾರು 150 ಕೋಟಿ ರೂ.ಗಳು 200 ಕೋಟಿ ರೂ.ಗಳು ನಮ್ಮ ತಾಲ್ಲೂಕಿನಲ್ಲಿ ನಷ್ಟವಾದರೂ ಒಂದು ನೈಯಾಪೈಸೆ ಅವರಿಗೆ ಪರಿಹಾರ

ಸಿಗದಿದ್ದ ಕಾರಣ ರೈತ ಕಂಗಾಲಾಗಿದ್ದಾನೆ. ರೈತ ಸಾಕಷ್ಟು ಸಂಕಷ್ಟದಲ್ಲಿದ್ದಾನೆ. ಇದಾದ ಮೇಲೆ ಸನ್ಮಾನ್ಯ ಮುಖ್ಯಮಂತ್ರಿಗಳು ಬೀದರ್‌ಗೆ ಬಂದಿದ್ದರು. ಬರ ಪರಿಹಾರ ವೀಕ್ಷಣೆ ಮಾಡಿ ಏನಾದರೂ ಮಾಡುತ್ತೇವೆಂದು ಭರವಸೆಯನ್ನು ಕೊಟ್ಟಿದ್ದರು. ಆದರೆ ನನ್ನ ಒಂದು ಮನವಿ ಏನೆಂದರೆ, ಮಾನ್ಯ ಬಂಡೆಪ್ಪ ಕಾಶೆಂಪೂರರವರು ಈಗಾಗಲೇ ರೈತರ ಬಗ್ಗೆ ಹೇಳಿದರು. ಪ್ರತಿ ಎಕರೆಗೆ 800 ರೂ.ಗಳನ್ನು ಏನು ಕೊಡುತ್ತಿದ್ದೀರಿ ಅದರ ಬಗ್ಗೆ ಮೊದಲು ಕೂಡ ಚರ್ಚೆಯಾಗಿತ್ತು. ಇದು ಓಬಿರಾಯನ ಕಾಲದಲ್ಲಿದ್ದಂಥ ಒಂದು ಪರಿಹಾರವಿದೆ. ಇದನ್ನು ಪರಿಶೀಲನೆ ಮಾಡಬೇಕು. ಇದನ್ನು ಪುನ: ಪರಿಶೀಲನೆ ಮಾಡಿ ಇದನ್ನು 4 ಪಟ್ಟು ಹೆಚ್ಚು ಮಾಡಬೇಕು..

**ಉಪಾಧ್ಯಕ್ಷರು:** ಒಂದು ನಿಮಿಷ, Smt. & Sri orna sagiv Consul General; Consulate General of Israel, Mumbai are witnessing the proceedings of this August House from the Speaker's Gallery. On behalf of all the Members I welcome them.

**ಶ್ರೀ ಪ್ರಕಾಶ್ ಈಶ್ವರ ಖಂಡ್ರೆ:** ಮಾನ್ಯ ಉಪಾಧ್ಯಕ್ಷರೆ, ರೈತರ ಮತ್ತು ನಮ್ಮೆಲ್ಲರ ಬೇಡಿಕೆ ಪ್ರತಿ ಒಂದು ಎಕರೆಗೆ 10,000 ರೂ.ಗಳು ಎಂದು ಇತ್ತು, 800 ರೂ.ಗಳು ಇರುವುದನ್ನು ಅದನ್ನು ಎರಡು ಪಟ್ಟು ಜಾಸ್ತಿ ಮಾಡುತ್ತೇವೆಂದು ಮಾನ್ಯ ಮುಖ್ಯಮಂತ್ರಿಗಳು ಮೊದಲನೆಯ ಅಧಿವೇಶನದಲ್ಲಿ ಹೇಳಿದ್ದರು. ಅದನ್ನು 4–5 ಪಟ್ಟು ಆದರೂ ಮಾಡಿ ತಕ್ಷಣ ಪರಿಹಾರವನ್ನು ಕೊಡಬೇಕೆಂದು ನಾನು ಮನವಿಯನ್ನು ಮಾಡಿಕೊಳ್ಳುತ್ತೇನೆ. ಅದೇ ರೀತಿ ಆಗಸ್ಟ್ 18ನೇ ತಾರೀಖಿನವರೆಗೆ ಮಳೆ ಬಿದ್ದಿರಲಿಲ್ಲ. ಈ ರಬಿ ಬೆಳೆಯಲಿಕ್ಕೆ ಸ್ವಲ್ಪ ಮಟ್ಟಿಗೆ ಮಳೆಯಾಗಿದೆ. ಅರೆ ರಬಿ ಬೆಳೆಯಬೇಕೆಂದರೆ, ರೈತರಿಗೆ ಮುಖ್ಯವಾಗಿ ಒಳ್ಳೆಯ ಗುಣಮಟ್ಟದ ಬೀಜ ಬೇಕು. ಮಾನ್ಯ ಮುಖ್ಯಮಂತ್ರಿಗಳು ಬಂದಾಗ 50% ಇರುವುದನ್ನು 75% ರಿಯಾಯಿತಿ ಮಾಡುತ್ತೇನೆಂದು ನಮ್ಮೆಲ್ಲರ ಬೇಡಿಕೆಯಂತೆ ಮುಫತ್ತಾಗಿ ಬೀಜಗಳನ್ನು

ಕೊಡಬೇಕೆಂದು ಇತ್ತು. ಆದರೆ ಈಗ ಕಡಲೆಯನ್ನು ಬಿತ್ತುತ್ತಾರೆ. ಈಗ ಎಲ್ಲಾ ರೈತ ಸಂಪರ್ಕ ಕೇಂದ್ರದಲ್ಲಿ ಕಡಲೆ ಬೀಜದ ವ್ಯವಸ್ಥೆ ನಡೆಯುತ್ತಿದೆ. ರೈತರು ಬಿತ್ತನೆಯನ್ನು ಪ್ರಾರಂಭ ಮಾಡುವವರು ಇದ್ದಾರೆ. ಆದರೆ ಸನ್ಮಾನ್ಯ ಮುಖ್ಯಮಂತ್ರಿಗಳು ಬಂದು ಹೋಗಿ 20 ದಿವಸಗಳು ಕಳೆದರೂ ಆದೇಶ ಬರಲಿಲ್ಲ. 75% ರಿಯಾಯಿತಿ ದರದಲ್ಲಿ ಬೀಜಗಳನ್ನು ಕೊಡುತ್ತೇನೆಂದು ಏನು ಘೋಷಣೆ ಮಾಡಿದ್ದರು, ಆ ಆದೇಶ ಇನ್ನು ಬರದಿರುವ ಕಾರಣ ರೈತರು ಮತ್ತು ಇನ್ನು ಆ ಬೀಜವನ್ನು ಖರೀದಿ ಮಾಡುವವರು ಈಗ ವೇಟ್ ಮಾಡುತ್ತಿದ್ದಾರೆ. ಯಾವತ್ತು ಆದೇಶ ಬರುತ್ತದೆ ಯಾವುತ್ತು ಖರೀದಿ ಮಾಡುತ್ತೇವೆಂದು ವೇಟ್ ಮಾಡುತ್ತಿದ್ದಾರೆ. ಯಾವಾಗ ಘೋಷಣೆ ಮಾಡಿದಿರಿ ತಕ್ಷಣ ಅದನ್ನು ಜಾರಿಯಲ್ಲಿ ತರಬೇಕೆಂದು ಹೇಳಿ ನಾವು ತಮ್ಮ ಮುಖಾಂತರ ಸರ್ಕಾರಕ್ಕೆ ಒತ್ತಾಯವನ್ನು ಮಾಡುತ್ತೇನೆ. ನಮ್ಮ ಜಿಲ್ಲೆಯಲ್ಲಿ ಬಹಳಷ್ಟು peculiar ಸಮಸ್ಯೆಗಳು ಇವೆ. ಮಳೆ ಆದ ತಕ್ಷಣ ನಮ್ಮಲ್ಲಿ ಬಹಳಷ್ಟು ಜನ ಕಬ್ಬು ಬೆಳೆಯುತ್ತಾರೆ. ಆ ಕಬ್ಬು ಬೆಳೆದಂಥ ಜನ, ಇವತ್ತು ಮಳೆ ಹೋದ ತಕ್ಷಣ ಸಂಪೂರ್ಣ ಕಬ್ಬು ಹೋಯಿತು. ಎಲ್ಲಾ ಹೊಡೆದು ಹಾಕಿ ಬಿಡಬೇಕಾಗುತ್ತದೆಂದು ಹೇಳಿ ಅನೇಕ ಜನ ಆತ್ಮಹತ್ಯೆ ಮಾಡಿಕೊಳ್ಳುವಂಥ ಒಂದು ಸಂದರ್ಭವು ಬರುತ್ತಿತ್ತು. ಆದರೆ ಈಗ ಮಳೆಯಾಗಿದೆ. ಆದರೆ ನಮ್ಮಲ್ಲಿ ಮುಖ್ಯವಾದ ಸಮಸ್ಯೆ ಏನು ಇದೆ ಎಂದು ಹೇಳಿದರೆ, ವಿದ್ಯುತ್ ಸಮಸ್ಯೆ ಇದೆ. ಗಡೀ ಭಾಗದಲ್ಲಿ ವಿದ್ಯುತ್ ಸಮಸ್ಯೆ ಎಷ್ಟು ಇದೆ ಎಂದರೆ, ಕರ್ನಾಟಕದ ತುತ್ತತುದಿಯಲ್ಲಿ ಇರುವಂಥ ಬೀದರ್ ಜಿಲ್ಲೆ. ಅಲ್ಲಿ ತಾಲ್ಲೂಕಾ ಮಟ್ಟದಲ್ಲಿ ಸಮರ್ಪಕವಾದಂಥ ಯಾವುದೇ ಅಧಿಕಾರಿಗಳು ಇಲ್ಲ. 3 ಫೇಸ್ ವಿದ್ಯುತ್‌ನ್ನು ಇವತ್ತು ಕೊಡುತ್ತಿದ್ದೀರಿ ಅದರಲ್ಲಿ 5–6 ಗಂಟೆ ಸಿಗುವುದು. 6 ಗಂಟೆ ಕೂಡ ಒಳ್ಳೆಯ ರೀತಿಯಲ್ಲಿ ವಿದ್ಯುತ್ ಸಿಗುತ್ತಿಲ್ಲ. ಅದರ ಜೊತೆಯಲ್ಲಿ ಇವತ್ತು transformer ಗಳು ಏನು ಸುಡುತ್ತಿವೆ, ನಮ್ಮಲ್ಲಿ ಒಂದು transformer ಸುಟ್ಟರೆ ಮೂರು ತಿಂಗಳವರೆಗೆ ಗಡಿ ಭಾಗದಲ್ಲಿ ರೀಪ್ಲೇಸ್‌ಮೆಂಟ್ ಮಾಡುತ್ತಿಲ್ಲ. ಈ ಮೂರು ತಿಂಗಳವರೆಗೆ ಒಂದು ವೇಳೆ transformerನ್ನು ರೀಪ್ಲೇಸ್‌ಮೆಂಟ್ ಮಾಡದಿದ್ದರೆ ರೈತರ ಗತಿ ಏನು?

ರೈತರಿಗೆ ನಾವು ವಿದ್ಯುತ್‌ನ್ನು ಕೊಟ್ಟಿಲ್ಲವೆಂದು ಹೇಳಿದರೆ, ಅವರು ಯಾವ ರೀತಿ ಅಲ್ಪಸ್ವಲ್ಪ ತೆರೆದಬಾವಿಯಲ್ಲಿ ಏನು ನೀರಿದೆ, ಆ ನೀರನ್ನು ಬಳಕೆ ಮಾಡಿಕೊಳ್ಳುವುದಕ್ಕೆ ಅವರಿಂದ ಆಗುತ್ತಿಲ್ಲ. ಇಂತಹ ಪರಿಸ್ಥಿತಿ ಇದೆ ಎಂದು ನಾನು ಪದೇ ಪದೇ ಸರ್ಕಾರದ ಗಮನಕ್ಕೆ ತಂದಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಬಂದಿದ್ದಾಗ ನಾನು ಅವರ ಗಮನಕ್ಕೆ ತಂದಿದ್ದೆ. ಆದರೆ ಅವರು ಹೋದ ತಕ್ಷಣ ಇನ್ನು ಹೆಚ್ಚಿನ ಸಮಸ್ಯೆಗಳು ಆಗಿದೆ. ಇರುವ ಒಬ್ಬನೆ ಅಧಿಕಾರಿ ಅವನು ಕೂಡ transfer ಆಗಿ ಹೋಗಿದ್ದಾನೆ. ನಮ್ಮ ತಾಲ್ಲೂಕಿನಲ್ಲಿ ಆ ಒಂದು ಇಲಾಖೆಯಲ್ಲಿ ಅಧಿಕಾರಿ ಇಲ್ಲದಂಥ ಒಂದು ಪರಿಸ್ಥಿತಿ ಇದೆ. ಇಂತಹ ಒಂದು ಪರಿಸ್ಥಿತಿಯಲ್ಲಿ ಹೈದ್ರಾಬಾದ್-ಕರ್ನಾಟಕ ಅಭಿವೃದ್ಧಿ ಆಗಬೇಕೆಂದು ನಾವು ಮಾತನಾಡುತ್ತಿದ್ದೇವೆ. ಮಾನ್ಯ ನಂಜುಂಡಪ್ಪ ವರದಿಯನ್ನು ತಂದಿದ್ದೇವೆ. ಇವೆಲ್ಲವನ್ನು ಅನುಷ್ಠಾನಕ್ಕೆ ತರುತ್ತೇವೆಂದು ಹೇಳಿದ್ದರೂ ಆಯಕಟ್ಟಿನ ಪ್ರದೇಶಗಳಲ್ಲಿ ಇಲಾಖೆಯಲ್ಲಿ ಯಾವುದೇ ಒಂದು ಅಧಿಕಾರಿಗಳು ಇಲ್ಲದಿದ್ದರೆ ಅಲ್ಲಿ ಎಷ್ಟ ಹಣವನ್ನು ಬಿಡುಗಡೆ ಮಾಡಿದರು ಅಲ್ಲಿ ಯಾವ ರೀತಿ ಕೆಲಸ ಕಾರ್ಯಗಳನ್ನು ಮಾಡುವುದಕ್ಕೆ ಸಾಧ್ಯವಾಗಬಹುದು, ನಾವು ಅದನ್ನು ವಿಚಾರ ಮಾಡಬೇಕಾಗಿದೆ. ಸಮಾಜ ಕಲ್ಯಾಣ ಇಲಾಖೆ ಇದೆ, 13 ಅಧಿಕಾರಿಗಳು ಅಲ್ಲಿಗೆ ಅನುಮೋದನೆಯಾಗಿದೆ. ಅದು ಭರ್ತಿಯಾಗಬೇಕು. ಅಲ್ಲಿ ಒಬ್ಬ ತಾಲ್ಲೂಕಾ ಅಧಿಕಾರಿಯೂ ಇಲ್ಲ. ಇಂತಹ ಒಂದು ಪರಿಸ್ಥಿತಿಯಲ್ಲಿ ಯಾವುದೇ ಅಭಿವೃದ್ಧಿ ಆಗಲಿಕ್ಕೆ ಸಾಧ್ಯವಿಲ್ಲ. ಹೀಗಾಗಿ ಕನಿಷ್ಟ 12 ತಾಸುಗಳವರೆಗೆ 3 ಫೇಸ್ ವಿದ್ಯುತ್ ಹಿಂದುಳಿದ ಬೀದರ್ ಜಿಲ್ಲೆಯ ಗ್ರಾಮೀಣ ಭಾಗದಲ್ಲಿ ಕೊಡಬೇಕೆಂದು ಸರ್ಕಾರದ ಮುಖಾಂತರ ನಾನು ಮನವಿಯನ್ನು ಮಾಡುತ್ತಿದ್ದೇನೆ. ಅದರ ಜೊತೆಯಲ್ಲಿ ರೈತರಿಗೆ ರೈತ ಸಂಪರ್ಕ ಕೇಂದ್ರದಿಂದ ಕೃಷಿ ಇಲಾಖೆಯ ವತಿಯಿಂದ ನೀವು ಸಬ್ಸಿಡಿಯಲ್ಲಿ ಬೇರೆ ಬೇರೆಯದನ್ನು ಕೊಡುತ್ತಿದ್ದೀರಿ. ಅದರಲ್ಲಿ ನೀವು ಜನರೇಟರ್ ಮಾತ್ರ ರೈತರಿಗೆ ಹಾಗೂ ವಿದ್ಯುತ್ ಸಮಸ್ಯೆ ಕಡಿಮೆಯಾಗಿದೆ ಬೇಡಿಕೆಯೂ ಜಾಸ್ತಿಯಾಗಿದೆ ಎನ್ನುವಂತಹ ಹಿನ್ನೆಲೆಯಲ್ಲಿ ರೆಡಿಮೇಡ್ ಉತ್ತರವು ಬರುತ್ತಿದೆ. ಇಂತಹ ಪರಿಸ್ಥಿಯಲ್ಲಿ ಕನಿಷ್ಟ ಜನರೇಟರ್ ಆದರೂ

ಸಬ್ಸಿಡಿಯಲ್ಲಿ ರೈತರಿಗೆ ಕೊಡುವಂತಹ ಕೆಸಲವನ್ನು ಮಾಡಿದರೆ ರೈತರು ಕಬ್ಬುಬೆಳೆಯನ್ನು ಏನು ಬೆಳೆಯುತ್ತಿದ್ದಾರೆ. ಆ ಕಬ್ಬು ಬೆಳೆಯ ಮೇಲೆ ಅವರು ಅವಲಂಬಿತರಾಗಿದ್ದಾರೆ. ಅಂತಹವರು ಬೆಳೆಯುವುದಕ್ಕೆ ಸಾಧ್ಯವಾಗುತ್ತದೆ. ವಿದ್ಯುತ್ ಸಮಸ್ಯೆ ತಕ್ಷಣವೇ ಇತ್ಯರ್ಥ ಮಾಡಬೇಕು. ನಮ್ಮ ರೈತರಿಗೆ ಜನರೇಟರನ್ನು ಸಬ್ಸಿಡಿ ರಿಯಾಯಿತಿ ದರದಲ್ಲಿ ಕೊಡಬೇಕೆಂದು ಹೇಳಿ ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ಮನವಿಯನ್ನು ಮಾಡಿಕೊಳ್ಳುತ್ತೇನೆ. ಅದರ ಜೊತೆಯಲ್ಲಿ ಅಕ್ಕಿಬೆಳೆಯನ್ನು ಬೆಳೆಯಬೇಕು. ಏಕೆಂದರೆ ಆಹಾರದ ಉತ್ಪಾದನೆಯು ಹೆಚ್ಚಾಗಬೇಕು. ಇಡೀ ದೇಶದಲ್ಲಿ 20% ಮಳೆಯ ಕೊರತೆ ಇದೆ. ಆಹಾರದ ಉತ್ಪಾದನೆಯ ಹೆಚ್ಚಿಗೆ ಆಗದೆ ಸಮಸ್ಯೆಯಾಗುತ್ತಿದೆ ಎಂದು ನಾವು ಹೇಳುತ್ತಿದ್ದೇವೆ. ಇದಕ್ಕೆ ನಾವು ಪೂರಕವಾದಂತಹ ವ್ಯವಸ್ಥೆಯನ್ನು ನಾವು ಮಾಡುತ್ತಿಲ್ಲ. ಈಗ ಗ್ರಾಮೀಣ ಭಾಗದಲ್ಲಿ ನಮ್ಮ ಪ್ರದೇಶದಲ್ಲಿ ಸಮಸ್ಯೆ ಆಗಿದೆ. ಈಗ ರೈತರಿಗೆ ಏನು ಬೇಕಾಗಿದೆ. ಅವರಿಗೆ ಕನಿಷ್ಟ ಸರಳವಾದಂತಹ ರೀತಿಯಲ್ಲಿ ಸಾವು ಅವರಿಗೆ ಸಿಗಬೇಕು. ಆದರೆ ನಮ್ಮಲ್ಲಿ ಕೆಲವೊಂದು ಖಾಸಗಿ ಬ್ಯಾಂಕುಗಳು ಇವೆ. ವೈಶ್ಯಾ ಬ್ಯಾಂಕು ಇದೆ, ಅನೇಕ ಹಳ್ಳಿಗಳು ಅದನ್ನು ಅಡಾಪ್ಟ್ ಮಾಡಿಕೊಂಡಿವೆ. ಆ ವೈಶ್ಯಾ ಬ್ಯಾಂಕ್ ಏನು ಖಾಸಗಿ ಬ್ಯಾಂಕು ಇದೆ, ರಾಷ್ಟ್ರೀಕೃತ ಕೆಲವೊಂದು ಬ್ಯಾಂಕುಗಳು ರೈತರಿಗೆ ಸಹಕಾರಿ ಬ್ಯಾಂಕುಗಳು ಎಲ್ಲಾ ರೈತರಿಗೆ ಅವರು ಸರಳವಾಗಿ 3% ಬಡ್ಡಿಯಲ್ಲಿ ಸಾಲವನ್ನು ಕೊಡುತ್ತಿದ್ದೇವೆಂದು ಹೇಳುತ್ತಿದ್ದೇವೆ. ಇದರಿಂದ ಎಷ್ಟು ಜನ ರೈತರು ಲಾಭವನ್ನು ಪಡೆದುಕೊಳ್ಳುತ್ತಿದ್ದಾರೆ. ನಾನು ಮೊನ್ನೆ ದಿನ ಈ ಬಗ್ಗೆ ಸಮೀಕ್ಷೆಯನ್ನು ಮಾಡಿದಾಗ ಸುಮಾರು 40% ರೈತರು ಈ ಒಂದು ಸಾಲದಿಂದ ವಂಚಿತರಾಗಿದ್ದಾರೆ. ಅವರಿಗೆ ಸಾಲವೇ ಸಿಗುತ್ತಿಲ್ಲ, ಅವರು ಸಹಕಾರ ಬ್ಯಾಂಕಿಗೆ ಹೋದರೆ ಮೊದಲನೆ ಸಲ ಯಾರು ಸಾಲಕ್ಕೆ ಅರ್ಜಿಯನ್ನು ಹಾಕುತ್ತಾರೆ. ಅಂತಹವರಿಗೆ ಬರಿ 5 ರಿಂದ 10 ಸಾವಿರ ಮಾತ್ರ ಅದು ಅವರ ಹೊಲವನ್ನು ಅವರು mortgage ಮಾಡಿಕೊಂಡು ಸಾಲವನ್ನು ಕೊಡುತ್ತಿದ್ದಾರೆ. ಅದು ಕಾನೂನು ವಿರುದ್ಧವಾಗಿ ಸಾಲವನ್ನು ಕೊಡುತ್ತಿದ್ದಾರೆ. ಅದೇ ರೀತಿಯಾಗಿ ರಾಷ್ಟ್ರೀಕೃತ ಬ್ಯಾಂಕುಗಳು ನಮ್ಮ ಸರ್ವೀಸ್‌ನಲ್ಲಿ

ಬರುವುದಿಲ್ಲವೆಂದು ಕೊಡುವುದಿಲ್ಲ. ಖಾಸಗಿ ಬ್ಯಾಂಕುಗಳಂತು ಸಾಲವನ್ನು ಕೊಡುವುದಿಲ್ಲ. ಇಂತಹ ಕಡೆ ಸರ್ಕಾರವು ತಕ್ಷಣವೇ ಅದನ್ನು ಗಂಭೀರವಾಗಿ ಪರಿಗಣನೆ ಮಾಡಿ ಯಾವಯಾವ ರೈತರು ಅರ್ಹತೆ ಇದ್ದವರು ಇದ್ದಾರೆ, ಸಣ್ಣ ರೈತರು ಇದ್ದಾರೆ, ಅಂತಹವರಿಗೆ ಸಾಲವನ್ನು ಸರಳವಾಗಿ ಕೊಡುವಂತಹ ವ್ಯವಸ್ಥೆ ಸರ್ಕಾರದ ವತಿಯಿಂದ ಮಾಡಬೇಕೆಂದು ಹೇಳಿ ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ಮನವಿಯನ್ನು ಮಾಡುತ್ತಿದ್ದೇನೆ. ನಮ್ಮಲ್ಲಿರುವಂತಹ ಕೃಷಿ ಆಧಾರಿತ NREGA ಬಗ್ಗೆ ಒಂದು ಮಾತನ್ನು ಹೇಳಬಯಸುತ್ತೇನೆ. ಏಕೆಂದರೆ NREGA ದಲ್ಲಿ ಏನಾಗುತ್ತಿದೆ, ಅಲ್ಲಿ ಏನು ಮೂಲಭೂತವಾಗಿ ಸಮಸ್ಯೆ ಇದೆ ಬೇಸಿಕ್ ಆಗಿ ಗ್ರಾಮಪಂಚಾಯಿತಿಯಲ್ಲಿ ಕಾರ್ಯದರ್ಶಿಗಳು ಇಲ್ಲ. ಅದರ ಬಗ್ಗೆ ಕ್ರಮವು ಆಗುತ್ತಿದೆ, development officers ಗಳು ನೇಮಕಾತಿ ಆದರೆ ಒಳ್ಳೆಯದು ಎಂಬ ನಮ್ಮ ಅನಿಸಿಕೆ ಇದೆ. ಆದರೆ ಈಗ NREGA ಉದ್ದೇಶ ಏನಿದೆ, ಆಸ್ತಿ ನಿರ್ಮಾಣ ಮಾಡಬೇಕು. ಯಾರಿಗೆ ಕೂಲಿ ಮಾಡುವವರಿಗೆ ಯಾರಿಗೆ ಕೆಲಸವಿಲ್ಲ ಎನ್ನುವವರಿಗೆ ಕೂಲಿಯನ್ನು ಕೊಡಬೇಕು. ಆದರೆ ಇವತ್ತು ನಮ್ಮ ತಾಲ್ಲೂಕಿನಲ್ಲಿ ಹೇಳುತ್ತಿದ್ದೇನೆ. ಅನೇಕ ಕಡೆಯಲ್ಲಿ ನಮಗೆ ನಾವು ಸಂಚಾರವನ್ನು ಮಾಡುತ್ತಿದ್ದಾಗ ಮಹಿಳೆಯರು, ಕೂಲಿಕಾರ್ಮಿಕರು ನಮಗೆ ತಡೆಯುತ್ತಿದ್ದಾರೆ. ಏಕೆಂದರೆ, ಅವರು ಏನು ಕೆಲಸವನ್ನು ಮಾಡುತ್ತಿದ್ದಾರೆ. ಅವರಿಗೆ 2 ರಿಂದ 3 ತಿಂಗಳವರೆಗೆ ಅವರಿಗೆ ಕೂಲಿ ಸಿಗುತ್ತಿಲ್ಲ. ಅವರಿಗೆ ಬ್ಯಾಂಕಿನಲ್ಲಿ ಹಣವನ್ನು ಜಮಾ ಮಾಡಬೇಕು ಇದು ಏನೆಂದು ಅನೇಕ ಸಲ ಪ್ರಗತಿ ಪರಿಶೀಲನಾ ಸಭೆಯಲ್ಲಿ ವಿಚಾರಣೆಯನ್ನು ಮಾಡಿದಾಗ ಏನೇನೋ ಸಬೂಬನ್ನು ಹೇಳುತ್ತಿದ್ದಾರೆ. ಆದರೆ ನಿಯಮದ ಪ್ರಕಾರ 15 ದಿವಸದೊಳಗಾಗಿ ಕೂಲಿಯನ್ನು ಕೊಡಬೇಕೆಂದು ಇದೆ. ಆದರೆ 2 ರಿಂದ 3 ತಿಂಗಳಾದರೂ ಸಹ ಅವರಿಗೆ ಕೂಲಿಯನ್ನು ಕೊಟ್ಟಿರುವುದಿಲ್ಲವೆಂದರೆ ಅವರ ಪರಿಸ್ಥಿತಿ ಏನಾಗಬೇಕು. ಬೆಳಿಗ್ಗೆ ಕೂಲಿ ಮಾಡಿದರೆ ಸಾಯಂಕಾಲ ಕೊಡಬೇಕು, ಕನಿಷ್ಟ 8 ರಿಂದ 15 ದಿವಸದೊಳಗೆ ಆದರೂ ಕೂಲಿ ಕೊಡುವಂತಹ ವ್ಯವಸ್ಥೆ ಸರ್ಕಾರದ ವತಿಯಿಂದ ಆಗಬೇಕೆಂದು ನಾನು ಆಗ್ರಹ ಮಾಡುತ್ತಿದ್ದೇನೆ. ಆ

ಒಂದು ಕೆಲಸ NREGA ಜಾಗದಲ್ಲಿ ತಕ್ಷಣ ಎಲ್ಲಾ ಇಲಾಖೆಯಿಂದ ಬೇರೆಬೇರೆ ಇಲಾಖೆಯವರು ಕೆಲಸ ಮಾಡಬೇಕೆಂದು ಹೇಳಿದರೆ ಅಧಿಕಾರಿಗಳು ಮುಂದೆ ಬರುತ್ತಿಲ್ಲ. ಜಲಾನಯನ ಇಲಾಖೆ, ಅರಣ್ಯ ಇಲಾಖೆ, ಕೃಷಿ ಇಲಾಖೆ ಇದೆ, ನೀರಾವರಿ ಇಲಾಖೆ ಆದರೆ ಬರಿ ಪಿಆರ್‌ಇ ಮೇಲೆ ಹಾಕಿ ಬಿಟ್ಟುಬಿಡುತ್ತಾರೆ. ಇಂತಹದು ಹೋಗಬೇಕೆಂದರೆ ಸಮರ್ಪಕವಾಗಿ ಒದೊಂದು ಗ್ರಾಮಪಂಚಾಯಿತಿಯಲ್ಲಿ ಒಂದು ಕೋಟಿ ರೂಪಾಯಿಗಳ ಕ್ರಿಯಾಯೋಜನೆಯನ್ನು ಮಾಡಿದ್ದು ಇದೆ. ಏನೋ ಅನೇಕ ಕಾರಣಗಳಿಂದಾಗಿ ಇಲ್ಲಿಯವರೆಗೆ ಆ ಯೋಜನೆಯು ಪ್ರಾರಂಭ ಆಗಲಿಲ್ಲ. ತಕ್ಷಣವೇ ಅದನ್ನು ಪ್ರಾರಂಭ ಮಾಡಿ ಈ ಮುಂಬರುವ ದಿನಗಳಲ್ಲಿ ನಾವು ಹಣವನ್ನು ಖರ್ಚು ಮಾಡಬಹುದು ಎಂದು ಹೇಳಿದರೆ ಜನರಿಗೂ ಹಾಗೂ ಕೂಲಿ ಕಾರ್ಮಿಕರಿಗೂ ಸಹಾಯವಾಗುತ್ತದೆ, ಆಸ್ತಿಯೂ ನಿರ್ಮಾಣವಾಗುತ್ತದೆ, ಈ ಭಾಗದ ಅಭಿವೃದ್ಧಿಯೂ ಸಹ ಆಗುತ್ತದೆ. ಈ ಒಂದು ನಿಟ್ಟಿನಲ್ಲಿ ತಕ್ಷಣ ಕಾರ್ಯಪ್ರವೃತ್ತರಾಗಬೇಕೆಂದು ಹೇಳಿ ನಾನು ಮನವಿಯನ್ನು ಮಾಡಿಕೊಂಡು ನಮ್ಮಲ್ಲಿರುವಂತಹ ಕೃಷಿ ಆಧಾರಿತ ಏನು ಸಹಕಾರಿ ಕ್ಷೇತ್ರದಲ್ಲಿ ಕಾರ್ಖಾನೆಗಳು ಇವೆ ಸುಮಾರು ನಮ್ಮ ಜಿಲ್ಲೆಯಲ್ಲಿ 50,000 ಸಣ್ಣ ರೈತರು ಕಬ್ಬನ್ನು ಬೆಳೆಯುತ್ತಿದ್ದಾರೆ. ಆದರೆ ಹಳೆಯ ಕಾರ್ಖಾನೆಗಳು ಇದ್ದೆ ಕಾರಣ ಅಲ್ಲಿ ಸಮಸ್ಯೆಯಾಗುತ್ತಿದೆ. ಅದಕ್ಕೆ Co-Generation ಆಗಲಿ, ಅದನ್ನು ಪುನ:ಶ್ಚೇತನ ಮಾಡುವಂತಹ ಕಾರ್ಯಕ್ರಮವನ್ನು ಸರ್ಕಾರದಿಂದ ಮಾಡಿದರೆ ಅದರ ಮೇಲೆ ಅವಲಂಬಿತರಾಗಿರುವಂತಹ ಸುಮಾರು 50,000 ಕುಟುಂಬಗಳು ಅವರು ಆರ್ಥಿಕವಾಗಿ ಶ್ರೇಯೋಭಿವೃದ್ಧಿ ಆಗುವುದಕ್ಕೆ ಸಾಧ್ಯತೆ ಇದೆ ಎಂದು ಹೇಳಿ ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ಮನವಿಯನ್ನು ಮಾಡಿಕೊಳ್ಳುತ್ತೇನೆ. ತಕ್ಷಣವೇ ಬರಪರಿಹಾರ ರೈತರಿಗೆ ನೇರವಾಗಿ ಮುಟ್ಟಿಸುವಂತಹ ಕೆಲಸಗಳು ಆಗಬೇಕು ಹಾಗೂ ನಮ್ಮ ಜಿಲ್ಲೆಗೆ 5 ಕೋಟಿ ರೂಪಾಯಿಗಳು ಮಾತ್ರ ಹಣ ಕುಡಿಯುವ ನೀರಿಗಾಗಿ ಬಿಡುಗಡೆಯಾಗಿದೆ. ಅದು ಸಾಕಾಗುವುದಿಲ್ಲ, ಏಕೆಂದರೆ ಬೇಸಿಗೆಯಲ್ಲಿ ಕೆಲವೊಂದು ಕಾಮಗಾರಿಗಳನ್ನು ತೆಗೆದು

ಕೊಂಡಿದ್ದಾರೆ. 100 ರಿಂದ 200 ಬೋರ್‌ವೆಲ್‌ಗಳನ್ನು ಹಾಕಿಸಿದ್ದಾರೆ. ಆದರೆ ಪೇಮೆಂಟಾಗಲಿಲ್ಲ. ಬೋರ್‌ವೆಲ್ ಹಾಕಿದ್ದರೂ ಮೋಟಾರನ್ನು ಕೂಡಿಸಲಿಲ್ಲ. ಇಂತಹ ಅನೇಕ ಸಮಸ್ಯೆಗಳು ಇವೆ. ಹೀಗಾಗಿ ಇನ್ನು ಹೆಚ್ಚಿನ ಹಣವನ್ನು ಬಿಡುಗಡೆ ಮಾಡಿ ಅದರ ಬಗ್ಗೆ ಕ್ರಮವನ್ನು ಕೈಗೊಳ್ಳಬೇಕೆಂದು ಹೇಳಿ ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದಕ್ಕಾಗಿ ತಮಗೆ ಧನ್ಯವಾದಗಳನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

**ಉಪಾಧ್ಯಕ್ಷರು:** ಮಾನ್ಯ ಸುರೇಶ್‌ಬಾಬು ರವರು ಮಾತನಾಡಲಿ. ಅವರು ಸದನದಲ್ಲಿ ಇಲ್ಲವೇ. ಈಗ ಶ್ರೀಕಾಂತ್ ಕುಲಕರ್ಣಿಯವರೆ ತಾವು ಮಾತನಾಡಿ.

**ಶ್ರೀ ಶ್ರೀಕಾಂತ್ ಕುಲಕರ್ಣಿ (ಜಮಖಂಡಿ):** ಮಾನ್ಯ ಉಪಾಧ್ಯಕ್ಷರೆ, ಬರಗಾಲದ ಹಿನ್ನೆಲೆಯಲ್ಲಿ ಇಲ್ಲಿ ನಡೆಯುತ್ತಿರುವಂತಹ ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ನನಗೆ ಕೊಟ್ಟಿರುವಂತಹ ಅವಕಾಶಕ್ಕಾಗಿ ತಮಗೆ ಹಾರ್ದಿಕವಾಗಿ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಇವತ್ತು ರಾಜ್ಯದಲ್ಲಿ ಮುಂಗಾರು ಮಳೆ ಸಂಪೂರ್ಣವಾಗಿ ವಿಫಲವಾಗಿ ಹಿಂಗಾರು ಮಳೆಯು ಕೂಡ ಸಕಾಲಕ್ಕೆ ಆಗದೆಯೆ ಒಂದು ವಿಶೇಷವಾದಂತಹ ಪರಿಸ್ಥಿತಿ ಬಂದಿರುವಂತಹ ಹಿನ್ನೆಲೆಯಲ್ಲಿ ವಿಶೇಷವಾದಂತಹ ಅಧಿವೇಶನವನ್ನು ಕರೆದು ಗ್ರಾಮೀಣಜನರ ಸಮಸ್ಯೆಗಳ ಬಗ್ಗೆ ಅದರಲ್ಲಿಯೂ ವಿಶೇಷವಾಗಿ ಅತಿವೃಷ್ಟಿ ಮತ್ತು ಅನಾವೃಷ್ಟಿಯ ಬಗ್ಗೆ ಚರ್ಚೆ ಮಾಡುವುದಕ್ಕಾಗಿ ಇಲ್ಲಿ ಅವಕಾಶವನ್ನು ಕೊಟ್ಟಿರುವಂತಹ ಸನ್ಮಾನ್ಯ ಮುಖ್ಯಮಂತ್ರಿಗಳಿಗೂ ಹಾಗೂ ಕರ್ನಾಟಕ ಸರ್ಕಾರಕ್ಕೂ ಕೂಡ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆ. ಬಹುಶ: ಈ ವರ್ಷ ವಿಶೇಷವಾಗಿ 86 ತಾಲ್ಲೂಕುಗಳಲ್ಲಿ ಬರ ಇದೆ ಎಂದು ಸರ್ಕಾರವು ಘೋಷಣೆಯನ್ನು ಮಾಡಿ ಅನೇಕ ದೃಷ್ಟಿಯಿಂದ ಅವರಿಗೆ ಪರಿಹಾರವನ್ನು ಕೊಡುವಂತಹ ಚಿಂತನೆಯು ಕೂಡ ನಡೆದಿದೆ. ಬರಗಾಲ ಅಂದಾಗ ಎರಡು ತರಹದ ಸರ್ಕಾರದಿಂದ ಜನರು ಪರಿಹಾರವನ್ನು ಬಯಸುತ್ತಾರೆ. ಒಂದು ತಾತ್ಪೂರ್ತಿಕವಾಗಿ ತಕ್ಷಣ ಸಿಗಬೇಕಾದಂತಹ ಪರಿಹಾರ ಇನ್ನೊಂದು

ಪದೇಪದೇ ಬರಗಾಲಕ್ಕೆ ತುತ್ತಾಗುವಂತಹ ಪ್ರದೇಶಕ್ಕೆ ಶಾಶ್ವತವಾಗಿ ಬರ ಬಂದಾಗ ಅದನ್ನು ತಡೆದುಕೊಳ್ಳುವಂತಹ ಶಕ್ತಿ, ಬರ ಬರದೇ ಇರುವುದನ್ನು ತಡೆಯುವಂತಹ ಪ್ರಯತ್ನವನ್ನು ಕೂಡ ಸರ್ಕಾರವು ಮಾಡಬೇಕೆನ್ನುವಂತಹ ಅಪೇಕ್ಷೆಯು ಸಾರ್ವಜನಿಕರಲ್ಲಿ ಇರುತ್ತದೆ. ಇವತ್ತು ಉತ್ತರ ಕರ್ನಾಟಕದ ಬಗ್ಗೆ ಅದರಲ್ಲೂ ವಿಶೇಷವಾಗಿ ಬಿಜಾಪುರ ಜಿಲ್ಲೆ, ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಯನ್ನು ಅಖಂಡ ಬಿಜಾಪುರ ಜಿಲ್ಲೆ ಎಂದು ನಾವು ಕರೆಯುತ್ತೇವೆ. ಅಖಂಡ ಬಿಜಾಪುರ ಜಿಲ್ಲೆ ಪದೇಪದೇ ಬರಗಾಲಕ್ಕೆ ತುತ್ತಾಗುವಂತಹ ಒಂದು ಪರಿಸ್ಥಿತಿ ಇದೆ. ಬಹುಶ: ನಮ್ಮ ಅನೇಕ ಹಿರಿಯ ಸ್ನೇಹಿತರು ತಮ್ಮ ಅಭಿಪ್ರಾಯವನ್ನು ವ್ಯಕ್ತ ಮಾಡಿದ ಹಾಗೆ 1977ರಲ್ಲಿ ಭೀಕರವಾದಂತಹ ಬರ ಬಂದಿತ್ತು. ಅಂತಹ ಬರಗಾಲವು ಬಹುಶ: ಬಹಳ ಜನರು ನೋಡಿರುವುದಿಲ್ಲ. ಬಿಜಾಪುರ ಜಿಲ್ಲೆಯಲ್ಲಿ ಅಖಂಡ ಜಿಲ್ಲೆಯಲ್ಲಿ 5 ನದಿಗಳು ಹರಿಯುತ್ತವೆ. ದೋಣಿ ಒಂದು ನದಿ ಎಂದು ನಾವು ಕಲ್ಪನೆಯನ್ನು ಮಾಡಿಕೊಂಡರೆ 5 ನದಿಗಳು ಹರಿಯುವಂತಹ ಈ ಜಿಲ್ಲೆ ಎರಡನೇ ಪಂಜಾಬ್ ಎಂದು ನಾವು ಹೇಳಬಹುದು. ಅಷ್ಟೊಂದು ನದಿಯ ನೀರು ಹರಿದು ಹೋಗಿ ಸಮುದ್ರಕ್ಕೆ ಹೋದರೂ ಕೂಡ ಅಲ್ಲಿ ಹರಿಯುವಂತಹ ನೀರನ್ನು ತಡೆದು ನೀರನ್ನು ಎತ್ತಿ ರೈತರ ಜಮೀನಿಗೆ ಕೊಡತಕ್ಕಂತಹ ಯೋಜನೆಯು ಬಹುಶ: ಹಿಂದಿನ ಸರ್ಕಾರಗಳು ಚಿಂತನೆ ಮಾಡಿ ಅದನ್ನು ಕಾರ್ಯರೂಪಕ್ಕೆ ತಂದಿದ್ದರೆ ಇವತ್ತು ಯಾವುದು ಮುಂಗಾರು ಮಳೆ ವಿಫಲವಾದಾಗ ಹಿಂಗಾರು ಮಳೆಯೂ ಹೋದಾಗ ಭಯಪಡುವಂತಹ ಅವಶ್ಯಕತೆ ಇರಲಿಲ್ಲ. ಆದರೆ ನದಿ ನೀರನ್ನು ತಡೆಗಟ್ಟಿ ಈ ಕಾರ್ಯಕ್ರಮವನ್ನು ಸರ್ಕಾರ ಹಾಕುವ ಬಗ್ಗೆ ವಿಫಲವಾದ ಪರಿಣಾಮ 5 ನದಿ ಹರಿಯುವಂತಹ ಜಿಲ್ಲೆಗೆ ಇವತ್ತು ಕುಡಿಯುವ ನೀರು ಬಿಜಾಪುರದಂತಹ ನಗರ ಇರಬಹುದು, ಬೇರೆ ಜಮಖಂಡ ಮತ್ತು ಬಾಗಲಕೋಟೆಯಂತಹ ನಗರಗಳು ಇರಬಹುದು. ಪ್ರತಿನಿತ್ಯ ನೀರನ್ನು ಕೊಡುವುದಕ್ಕಾಗುವುದಿಲ್ಲ. ಅದಕ್ಕೆ ಯೋಜನೆಗಳೇ ಕಾರಣವೆಂದು ನಾನು ಬಹಳ ವಿಷಾದದಿಂದ ಹೇಳುತ್ತೇನೆ. ಬಹುಶ: ಇವತ್ತು ಬಿಜಾಪುರ ಜಿಲ್ಲೆಯು ಹೆಚ್ಚು ಕಡಿಮೆ ಉತ್ತರ ಕರ್ನಾಟಕದ ಅನೇಕ ಭಾಗಗಳಲ್ಲಿ ಮುಂಗಾರು

ಬೆಳೆಯು ಸಂಪೂರ್ಣವಾಗಿ ವಿಫಲವಾಗಿದೆ. ದೊಡ್ಡಪ್ರಮಾಣದಲ್ಲಿ ಲಕ್ಷಾಂತರ ಹೆಕ್ಟೇರ್ ಭೂಮಿಯಲ್ಲಿ ರೈತರು ಮುಂಗಾರು ಬೆಳೆಯನ್ನು ಬೆಳೆಯುವುದು ಅವಶ್ಯಕವಾಗಿದೆ. ಮುಂಗಾರು ಬೆಳೆಯನ್ನು ಬೆಳೆಯುವಂತಹ ಪ್ರದೇಶದಲ್ಲಿ ಇವತ್ತು ಹಿಂಗಾರು ಬೆಳೆಯಾದರೆ ಹಿಂಗಾರು ಬೆಳೆ ಬರುವುದಿಲ್ಲ. ಆ ಒಂದು ವಾತಾವರಣಕ್ಕೆ ಆ ಒಂದು ಮುಂಗಾರು ಬೆಳೆಗೆ ಮಾತ್ರ ಬೆಳೆಯುವಂತಹ ಬೆಳೆಗಳು ಆ ಪ್ರದೇಶದಲ್ಲಿ ಇರುತ್ತದೆ. ಅದು ಈ ವರ್ಷ ಸ್ವಲ್ಪ ಪ್ರಮಾಣದಲ್ಲಿ ಜೂನ್ ಮೊದಲನೆಯ ವಾರದಲ್ಲಿ ಸ್ವಲ್ಪ ಆ ಕಡೆ ಮತ್ತು ಈ ಕಡೆಯಲ್ಲಿ ಮಳೆಯು ಬಂದಾಗ ಬಹಳ ಅಶಾಭಾವನೆಯಿಂದ ರೈತರು ಬೀಜವನ್ನು ಖರೀದಿ ಮಾಡಿ ಗೊಬ್ಬರವನ್ನು ಖರೀದಿ ಮಾಡಿ ಮುಂಗಾರು ಭಿತ್ತನೆಯನ್ನು ಮಾಡಿದರು. ಕೆಲವು ಕಡೆಗಳಲ್ಲಿ ಭಿತ್ತಿದಂತಹ ಬೀಜಗಳು ಮೊಳಕೆ ಓಡೆದು ಹೊರಗೆ ಬಂದಾಗ ಸಕಾಲಕ್ಕೆ ಆಗಬೇಕಾದಂತಹ ಮಳೆಯು ಆಗದೆ ಇದ್ದುದರ ಪರಿಣಾಮ ಇವತ್ತು ಸಂಪೂರ್ಣವಾಗಿ ಮುಂಗಾರು ಬೆಳೆಯು ವಿಫಲವಾಗಿದೆ. ಕೆಲವು ಸಂದರ್ಭಗಳಲ್ಲಿ ಕೆಲವು ಕಡೆಗಳಲ್ಲಿ ಮಳೆಯಾದರೂ ಕೂಡ ಆ ಮಳೆಗೆ ಬೆಳೆಗೆ ಅದು ಹಿತಕಾರಿಯಾಗಲಿಲ್ಲ. ಕಾರಣ ಯಾವ ಕಾರಣಕ್ಕೆ ಮಳೆಬೆಳೆಗೆ ಸಿಗಬೇಕೋ ಆ 'ಕಾಲಕ್ಕೆ ಸಿಗದೇ ಇದ್ದುದರಿಂದ ಸಂಪೂರ್ಣವಾಗಿ ಮುಂಗಾರು ಬೆಳೆ 100ಕ್ಕೆ 100ರಷ್ಟು ವಿಫಲವಾಗಿದೆ. ಇವತ್ತು ಆ ಭಾಗದಲ್ಲಿ ಮುಂಗಾರು ಬೆಳೆ ಹೋದ ನಂತರ ಹಿಂಗಾರು ಬೆಳೆ ಸಕಾಲಕ್ಕೆ ಬಿತ್ತಬೇಕೆಂದು ರೈತನು ಸಿದ್ದತೆಯನ್ನು ಮಾಡಿಕೊಂಡಂತಹ ಸಂದರ್ಭದಲ್ಲಿ ಕೆಲವು ಕಡೆಯಲ್ಲಿ ಮಳೆಯಾಗಿದೆ ಕೆಲವು ಕಡೆಯಲ್ಲಿ ಮಳೆಯಾಗಿಲ್ಲ. ಈ ರೀತಿಯಾದಂತಹ ಒಂದು ಸಂದರ್ಭದಲ್ಲಿ ಬಂದಾಗ ಹಿಂಗಾರು ಮಳೆ ಒಂದೆರಡು ಕಡೆಯಲ್ಲಿ ಆದರೂ ಕೂಡ ಆ ಬೆಳೆಯು ಬರುವಂತಹ ಭರವಸೆಯೂ ಇಲ್ಲದಾಗಿದೆ. ವಿಶೇಷವಾಗಿ ರೈತರು ಬಹಳ ಚಿಂತಾಕ್ರಾಂತರಾಗಿ ಈ ಬರದಿಂದ ಪರಿಹಾರವನ್ನು ಯಾವ ರೀತಿಯಾಗಿ ತೆಗೆದುಕೊಳ್ಳಬೇಕು, ಯಾವ ರೀತಿಯಾಗಿ ಜೀವನ ಮಾಡಬೇಕೆಂದು ಅವರಿಗೆ ಗೊತ್ತಿಲ್ಲ. ಉತ್ತರ ಕರ್ನಾಟಕದಲ್ಲಿ ಗ್ರಾಮಾಂತರ ಭಾಗದಲ್ಲಿ ರೈತರು ಮಾತನಾಡುತ್ತಿದ್ದಾರೆ. ನಾನು ಕೂಡ ಒಂದು ಗ್ರಾಮದಲ್ಲಿ

ರೈತನ ಮಗನಾಗಿ ಹುಟ್ಟಿಬಂದಿರುವುದರಿಂದ ಅದರ ಬಗ್ಗೆ ನನಗೆ ಗೊತ್ತಿದೆ. ಒಂದು ನಾಣ್ಣುಡಿ ಏನು ಎಂದರೆ ಉತ್ತರಿ ಮಳೆ ಎಂದು ಬರುತ್ತದೆ. "ಉತ್ತರಿ ಮಳೆ ಆದರೆ ಜೋಳ ಬಿತ್ತರಿ, ಆಗದೇ ಇದ್ದರೆ ಇಟ್ಟಂಗಿ ಮಾಡಲು ಬಸ್ ಹತ್ತಿರಿ" ಎನ್ನುವುದು ಇದೆ. ಉತ್ತರಿ ಮಳೆ ಸಕಾಲಕ್ಕೆ ಆಗದಿದ್ದರೆ ಬೀಜ ಬಿತ್ತನೆ ಆಗದಿದ್ದರೆ 20–50 ಎಕರೆ ಜಮೀನು ಹೊಂದಿರುವ ರೈತರು ಸಹ ತಮ್ಮ ಹೆಂಡತಿ ಮಕ್ಕಳೊಂದಿಗೆ ಬದುಕಬೇಕಾದರೆ ಮಹಾರಾಷ್ಟ್ರದಲ್ಲಿ ಇಟ್ಟಿಗೆ ತಯಾರು ಮಾಡುವ ಅನಿವಾರ್ಯ ಪ್ರಸಂಘ ಇದೆ, ಹೀಗಾಗಿ ಸಂಪೂರ್ಣವಾಗಿ ಹಿಂಗಾರು ವಿಫಲವಾಗಿರುವುದರಿಂದ ಸಮಸ್ಯೆ ಪರಿಹಾರ ಮಾಡಬೇಕೆನ್ನುವ ಕಡೆ ಚಿಂತನೆ ಮಾಡಬೇಕು. ನಮ್ಮ ರಾಜ್ಯದ ಮುಖ್ಯಮಂತ್ರಿಯವರಾದ ಯಡಿಯೂರಪ್ಪನವರು ಆ ಭಾಗದಲ್ಲಿ ವಿಶೇಷವಾದ ಚಿಂತನೆ ಮಾಡಿ 37 ಕಾರ್ಯಕ್ರಮಗಳನ್ನು ತರುವುದರ ಜೊತೆ ಗ್ರಾಮಾಂತರ ಪ್ರದೇಶದಲ್ಲಿ ವಿಶೇಷ ಕ್ರಾಂತಿಯನ್ನು ಮಾಡಬೇಕು. ಆರ್ಥಿಕವಾಗಿ ರೈತರು ಗ್ರಾಮಾಂತರ ಪ್ರದೇಶ ಭಾಗದ ಜನರಿಗೆ ಸಂಪೂರ್ಣವಾಗಿ ಸ್ವಾಭಿಮಾನದಿಂದ ಕೂಡಿರುತ್ತಾರೆ. ಹಾಗಾಗಿ ಅವರಿಗೆ ನೆರವು ಸಿಗಬೇಕು ಎಂದು ಘೋಷಣೆ ಮಾಡಿದ್ದಾರೆ. ಇವತ್ತು ವಿಧಾನಸಭೆಯಲ್ಲಿ ಚರ್ಚೆ ಮಾಡುವ ಮೂಲಕ ಸಮೂಹ ಮಾಧ್ಯಮ ಮೂಲಕ ಕರ್ನಾಟಕ ರಾಜ್ಯದ ಕೋಟಿ ಜನರಿರುವ ಭಾಗದಲ್ಲಿ ಈ ವ್ಯವಸ್ಥೆಯಲ್ಲಿ ಸಂಪೂರ್ಣವಾಗಿ ಜಾರಿಗೆ ಬಂದು ಯಡಿಯೂರಪ್ಪನವರ ಮುಂದಿನ ಕಲ್ಪನೆ ಸಾಕಾರವಾದರೆ ಬಹುಶ: ಅನೇಕ ಸಂದರ್ಭಗಳಲ್ಲಿ ನಮ್ಮ ರೈತರ ಸಮಸ್ಯೆಗಳಿಗೆ ಪರಿಹಾರ ಸಿಗುತ್ತದೆ. ಇವತ್ತು ನಮ್ಮ ಉತ್ತರ ಕರ್ನಾಟಕದಲ್ಲಿ ಬಿದ್ದ ಮಳೆ ನೀರನ್ನು ಹಿಂಗಿಸುವಂಥ ಪ್ರಯತ್ನ ಮಾಡಬೇಕು. ಗ್ರಾಮಾಂತರ ಪ್ರದೇಶದಲ್ಲಿ ಕಡಿಮೆ ಮಳೆಯಾಗುವಂತಹ ಕಡೆಗಳಲ್ಲಿ ಮಳೆಯಿಂದ ಬಂದ ನೀರನ್ನು ಕೆರೆ ಕಟ್ಟೆಗಳಲ್ಲಿ ಇರುವಂತೆ ಪ್ರಯತ್ನ ಮಾಡಬೇಕು ನೀರನ್ನು water table ಅನ್ನು, ಅಂತರ್ಜಲ ಮಟ್ಟ ಹೆಚ್ಚಾಗಿ ಬಹಳ ದೊಡ್ಡ ಪ್ರಮಾಣದಲ್ಲಿ ಆ ಭಾಗದಲ್ಲಿ ಪರಿಹಾರ ಸಿಗುತ್ತದೆಂದು ಪತ್ರಿಕೆಯಲ್ಲಿ ಓದುತ್ತೇವೆ. ಮಳೆ ಬಿದ್ದಾಗ ತ್ವರಿತವಾಗಿ ಆ ಕೆಲಸವಾದರೆ ಹರಿಯುತ್ತಿರುವ ನೀರು ಸಣ್ಣಸಣ್ಣ ಬಂದಾರುಗಳನ್ನು ಮಾಡುವ

ಮೂಲಕ, ಸಣ್ಣ ಸಣ್ಣ ಕೆರೆಗಳನ್ನು ಕಟ್ಟುವುದರ ಮೂಲಕ ನದಿಯ ನೀರನ್ನು ಹಿಂಗಾರು ಪ್ರಾರಂಭವಾದಾಗ ಆ ಕೆಲಸವನ್ನು ಸರ್ಕಾರ ಮಾಡಿದರೆ ಬಹುಶ: ನಮಗೆ ಮಳೆ ಕೈಕೊಟ್ಟರೂ ಆ ಭಾಗದ ಜನ ಕೃಷಿಯನ್ನು ಮಾಡಬಹುದು ಎಂಬ ಭರವಸೆ ಬರುತ್ತದೆ. ಇವತ್ತೇನಾಗಿದೆ ಎಂದರೆ ಹರಿಯುವ ನೀರನ್ನು ಸಂಗ್ರಹ ಮಾಡಿಕೊಳ್ಳದಿದ್ದರೆ ಕೃಷಿ ಮಾಡಲು ರೈತರಿಗೆ ಆಗುವುದಿಲ್ಲ. ಹೀಗಾಗಿ ಕೆರೆಗಳ ನಿರ್ಮಾಣವಾಗಬೇಕು. ಅದರೊಂದಿಗೆ ಹರಿಯುವಂಥ ನೀರನ್ನು ಕೆರೆಗಳಿಗೆ ತುಂಬುವಂಥ ಪ್ರಯತ್ನ ಆಗಬೇಕೆಂದು ಕಳಿಕಳಿಯಿಂದ ಕೇಳುತ್ತೇವೆ. ಇದಾದರೆ ಬಹುಶ: ಹಿಂದಿನ ಯಾವುದೇ ಸರ್ಕಾರ ಮಾಡದೇ ಇರುವಂಥ ಕಾರ್ಯಕ್ರಮ ಆಗುತ್ತದೆ. ಹರಿಯುವ ನದಿಯ ನೀರನ್ನು ಕೆರೆಗಳಿಗೆ ತುಂಬುವಂಥ ಯೋಜನೆ 8 ಹಂತಗಳಲ್ಲಿ ಸರ್ಕಾರ ಈಗಾಗಲೇ ಘೋಷಣೆ ಮಾಡಿದೆ. ಮೊದಲನೇ ಹಂತದಲ್ಲಿ ಕೃಷ್ಣ ನದಿಯಿಂದ ಹರಿಯುವ ನೀರನ್ನು ಸಂಗ್ರಹ ಮಾಡಿದರೆ ಜಮಖಂಡಿ ಕ್ಷೇತ್ರದಲ್ಲಿ 8 ಕೆರೆಗಳಿಗೆ ತುಂಬಿ, ಬಿಜಾಪುರ ಜಿಲ್ಲೆಯಲ್ಲಿ 5 ಬಂದಾರು ಮಾಡಲು ಅನುಕೂಲವಾಗುತ್ತದೆ. ಅದಕ್ಕೆ ಈಗಾಗಲೇ ಸುಮಾರು 100–109 ಕೋಟಿ ರೂ.ಗಳ ಬಜೆಟ್‌ನಲ್ಲಿ ಘೋಷಣೆ ಮಾಡಿದ್ದು ಆ ಕಾರ್ಯ ಈಗಾಗಲೇ ಪ್ರಾರಂಭವಾಗಿದೆ. ಅಂಥ ಕೆಲಸ ರಾಜ್ಯ ತುಂಬಾ ನಡೆದರೆ ಮಳೆಯಿಂದ ದೊರೆಯುವ ನೀರು ಹರಿದು ಸಮುದ್ರಕ್ಕೆ ಸೇರುವ ಮುನ್ನ ಆ ನೀರನ್ನು ಪ್ರವಾಹ ಬಂದಾಗ ಮಳೆಗಾಲದಲ್ಲಿ ಕೆರೆಗಳಿಗೆ ನೀರನ್ನು ತುಂಬುವಂಥ ಪ್ರಯತ್ನ ಮಾಡಿದರೆ ಬಹುಶ: ಅಂತರ್ಜಲ ಮಟ್ಟ ಹೆಚ್ಚಾಗಿ ಆದಷ್ಟು ಜನರಿಗೆ ಅನುಕೂಲವಾಗುವ ಸಂದರ್ಭ ಇದೆ. ಆ ರೀತಿ ಕೆರೆಗಳನ್ನು ತುಂಬುವಂಥ ವ್ಯವಸ್ಥೆ ಮಾಡಿ ವಿಶೇಷವಾಗಿ ಮಳೆ ಸಂಪೂರ್ಣ ವಿಫಲವಾದಾಗ ನನ್ನ ಕ್ಷೇತ್ರ ಜಮಖಂಡಿಯ ಮೂರು ಹೋಬಳಿ ಸೇರಿ ತೇರದಾಳ, ಸಾವಳಗಿ ಗ್ರಾಮ ಇದೆ. ಸವಳಗಿಯಲ್ಲಿ ಅತ್ಯಂತ ಕಡಿಮೆ ಮಳೆ ಅಂದರೆ ಶೇಕಡ 43 ಮಿಲಿ ಮೀಟರ್ ಮಳೆಯಾಗಿದೆ. ತೇರದಾಳದಲ್ಲಿ 262 ಮಿಲಿ ಮೀಟರ್, ಜಮಖಂಡಿಯಲ್ಲಿ 367 ಮಿಲಿ ಮೀಟರ್ ಆಗಿದೆ. ಹೀಗಾಗಿ ಒಟ್ಟಾರೆ ಆಗುವಂಥ ಮಳೆಯ ಸರಾಸರಿ ಮಳೆಯ ಪ್ರಮಾಣಕ್ಕಿಂತ

ಕಡಿಮೆಯಾದರೆ ಈ ಬಾರಿ ಬಹಳ ದೊಡ್ಡ ಪ್ರಮಾಣದಲ್ಲಿ ಬೇಸಿಗೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಆಗುವ ಭಯ ಇದೆ. ನನ್ನ ಸಲಹೆ ಏನೆಂದರೆ ಸರ್ಕಾರ ಈಗಾಗಲೇ ಜಮಖಂಡಿ ನಗರದಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಕೃಷ್ಣಾ ನದಿಯಿಂದ ನೀರನ್ನು ಲಿಫ್ಟ್ ಮಾಡಿ ಶುದ್ಧೀಕರಿಸುವಂಥ ವ್ಯವಸ್ಥೆ ಮಾಡಿದೆ. ಬಹುಶ: 25 ವರ್ಷಗಳ ನಂತರ ಜಮಖಂಡಿ ಜನಕ್ಕೆ ನೀರು ಸಿಗುವಂತಾಗಬೇಕು. ಅದಕ್ಕೆ ಬೇಕಾದಷ್ಟು ನೀರಿನ ವ್ಯವಸ್ಥೆಯನ್ನು ಸರ್ಕಾರ ಮಾಡಿದೆ. ಈ ಮಳೆ ನೀರು ವರ್ಷದ ಹಿಂದೆ ಜಮಖಂಡಿ ಕೆರೆಗಳಿಗೆ ಕೃಷ್ಣಾ ನದಿಯಿಂದ ಸಾವಳಗಿ ಹತ್ತಿರ ಲಿಫ್ಟ್ ಮಾಡಿ ಸಾರ್ವಜನಿಕರಿಗೆ ನೀರು ಕೊಡುವಂಥ ವ್ಯವಸ್ಥೆ ಮಾಡಿದ್ದಾರೆ. ಆ ಯೋಜನೆ ಹಾಗೆ ಇದೆ, ಹೀಗೇ ಜಮಖಂಡಿ ನಗರಕ್ಕೆ ತೆರೆದ ಬಾವಿಗಳಿಂದ ನೀರು ತುಂಬುವಂಥ ಕಲ್ಪನೆ ಮಾಡಬೇಕು. ನೀರು ಬರಬೇಕಾದರೆ ಅಲ್ಲಿ ಕಟ್ಟೆಕೆರೆ ಎಂಬ ಐತಿಹಾಸಿಕ ಕೆರೆ ಇದೆ, ಆ ಕೆರೆಯನ್ನು ಅಭಿವೃದ್ಧಿ ಮಾಡಿ ಆ ಕೆರೆಯನ್ನು ತುಂಬುವಂಥ ವ್ಯವಸ್ಥೆ ಮಾಡಲು ಪೈಪ್‌ಲೈನ್ ಮಾಡಿದರೆ 2–3 ಕೋಟಿ ರೂ.ಗಳನ್ನು ಖರ್ಚು ಮಾಡಿ ಆ ನದಿ ನೀರನ್ನು ಈ ಕಟ್ಟೆ ಕೆರೆಗೆ ತುಂಬುವಂಥ ವ್ಯವಸ್ಥೆ ಸರ್ಕಾರ ಮಾಡಿದರೆ ಸುತ್ತಮುತ್ತಲಿನ ಸುಮಾರು ಹತ್ತಾರು ಗ್ರಾಮಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಆಗುತ್ತದೆ. ಅಂತರ್ಜಲ ಮಟ್ಟ ಹೆಚ್ಚಾಗಿ ಅನೇಕ ಬಾವಿಗಳಿಗೆ, ಬೋರ್‌ವೆಲ್‌ಗಳಿಗೆ ನೀರು ಬರುತ್ತದೆ. ಹೀಗಾಗಿ ಆ ವ್ಯವಸ್ಥೆ ಮಾಡಬೇಕೆಂದು ನಾನು ವಿನಂತಿಸುತ್ತೇನೆ. ಜಮಖಂಡಿ ತಾಲ್ಲೂಕಿನಲ್ಲಿ ಸಾವಳಗಿ ಗ್ರಾಮದಲ್ಲಿ ಸನ್ಮಾನ್ಯ ಬಿ.ಡಿ.ಜತ್ತಿಯವರು ಜನಿಸಿದ್ದಾರೆ. ಅದರ ಸುತ್ತಮುತ್ತ 23 ಗ್ರಾಮಗಳಿಂದ ಒಂದು revenue pockets ಇದೆ, ವಿಶೇಷವಾಗಿ ಪದೇಪದೇ ಬರಗಾಲಕ್ಕೆ ತುತ್ತಾಗುವ ಪ್ರದೇಶವೆಂದರೆ ಸಾವಳಗಿ ಗ್ರಾಮ. ಆ ಭಾಗದಲ್ಲಿ ಸಾವಿರ ಅಡಿ ಅಗೆದರೂ ನೀರು ಸಿಗುವುದಿಲ್ಲ. ಹಾಗಾಗಿ ಇಲ್ಲಿ ವಿಶೇಷವಾಗಿ ಒಂದು ಪರಿಹಾರ ಮಾಡುವಂಥದ್ದು ಅವಶ್ಯವಾಗಿದೆ. ನಮ್ಮ ಸನ್ಮಾನ್ಯ ಮುಖ್ಯಮಂತ್ರಿಗಳು ಆ ಭಾಗದಲ್ಲಿ ಎರಡು Multi village scheme ಘೋಷಣೆ ಮಾಡಿ ಒದೊಂದು ಸ್ಕೀಂ ಮೂಲಕ ಐದಾರು ಗ್ರಾಮಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕೆಂದು

ಟೆಂಡರ್ ಕರೆದಿದ್ದು ಈಗಾಗಲೇ ಅಲ್ಲಿ ಕೆಲಸ ಪ್ರಾರಂಭವಾಗಿದೆ. ಅದೇ ರೀತಿ ಅಲ್ಲಿ 519.6 ಮೀಟರ್ ಹಿನ್ನೀರಿನ ಸಂಗ್ರಹವಾದರೂ ಕೂಡ ಆ ಜನರಿಗೆ ಕುಡಿಯುವ ನೀರು, ಕೃಷಿಕರಿಗೆ ನೀರು ಸಿಗುತ್ತಿಲ್ಲ. ಹೀಗಾಗಿ ಅಲ್ಲಿ ವಿಶೇಷವಾದ ವ್ಯವಸ್ಥೆ ಮಾಡುವ ಅವಶ್ಯಕತೆ ಇದೆ. ಈ ಹಿಂದೆ ಸಾವಳಗಿಯಲ್ಲಿ ಕುಡಿಯುವ ನೀರಿನ ಯೋಜನೆ ಮಾಡಬೇಕೆಂದು ಸರ್ಕಾರ ಯೋಚನೆ ಮಾಡಿದೆ ಅದು ಬಹಳಷ್ಟು ಉತ್ತ ಮಟ್ಟದ ಕೆಲಸ ಆಗದಿದ್ದರೆ ಪರಿಣಾಮ ಒಳ್ಳೆಯದಾಗುವುದಿಲ್ಲ. ಅಲ್ಲಿ duplicate pipeline ಗಳನ್ನು ಹಾಕಿದ್ದಾರೆ. ಅದರ ಪರಿಣಾಮವಾಗಿ ನೀರು ಸರಿಯಾಗಿ ಸಾವಳಗಿ ಗ್ರಾಮಕ್ಕೆ ಬರುತ್ತಿಲ್ಲ. ಆ ಪೈಪ್‌ಲೈನ್‌ಗಳನ್ನು ಬದಲಾವಣೆ ಮಾಡಿ ಹೊಸ ಪೈಪ್‌ಲೈನ್‌ಗಳನ್ನು ಹಾಕಿದರೆ ಆ ಗ್ರಾಮಕ್ಕೆ ನೀರು ಸಿಗುತ್ತದೆ. ಆದುದರಿಂದ ಈ ಕಾರ್ಯವನ್ನು ಸರ್ಕಾರ ಗಮನದಲ್ಲಿ ಇಟ್ಟುಕೊಂಡು ಆ ಪೈಪ್‌ಲೈನ್‌ಗಳನ್ನು ಬದಲಾವಣೆ ಮಾಡಿದರೆ ಮಾತ್ರ ಆ ಸಾವಳಗಿ ಗ್ರಾಮದ ಸುತ್ತಮುತ್ತ ಹತ್ತಾರು ಗ್ರಾಮಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಆಗುತ್ತದೆ. ನದಿ ನೀರು ಸಮೀಪದಲ್ಲಿದ್ದಾಗ ಆ ನದಿ ನೀರನ್ನು ರೈತರ ಜಮೀನುಗಳಿಗೆ ಬರುವಂಥದ್ದಕ್ಕೆ ವ್ಯವಸ್ಥೆ ಮಾಡುವಂಥ ಯೋಜನೆಗಳನ್ನು ಮಾಡಿ ಕೊಡಿ. ಸಣ್ಣ ಸಣ್ಣ ಸ್ಕೀಮ್‌ಗಳನ್ನು ಮಾಡಿದರೆ ಹೆಚ್ಚು ಭಾಗಗಳಿಗೆ ಅಪಾರ ನೀರು ಸಿಗುತ್ತದೆ ಹಾಗಾಗಿ ಇದನ್ನು ಮಾಡಬೇಕೆಂದು ಸರ್ಕಾರದಲ್ಲಿ ಒತ್ತಾಯಿಸುತ್ತೇನೆ. ಚಿಕ್ಕಲಕಿ ಕ್ರಾಸ್ ಎಂದು ಜಮಖಂಡಿ, ಬಿಜಾಪುರದ ಬಳಿ ಒಂದು ರಸ್ತೆ ಮಾಡುತ್ತಿದ್ದಾರೆ. ಅಲ್ಲಿ ಸುಮಾರು ಐದು ಸಾವಿರ ಎಕರೆ ಪ್ರದೇಶ ಬರುತ್ತದೆ. Minor irrigation department ಮೂಲಕ 6 ಕಿ.ಮೀ. ಅಂತರದಲ್ಲಿರುವ ನೀರನ್ನು ಎತ್ತಿ 5 ಸಾವಿರ ಎಕರೆಗೆ ನೀರಾವರಿ ಮಾಡಬೇಕು ಎನ್ನುವ ಉದ್ದೇಶ ಇಟ್ಟುಕೊಂಡು 31 ಕೋಟಿ ರೂಪಾಯಿಗಳನ್ನು ಖರ್ಚು ಮಾಡಬಹುದು ಎಂದು ಈಗಾಗಲೇ ಯೋಜನೆ ಅಂದಾಜು ಪತ್ರಕ್ಕೆ technical approval ಕೂಡ ಆಗಿದೆ. ಸರ್ಕಾರ ಮನಸ್ಸು ಮಾಡಿದರೆ 31 ಕೋಟಿ ರೂಪಾಯಿಗಳನ್ನು ಖರ್ಚು ಮಾಡಬಹುದು. ಸಣ್ಣ ನೀರಾವರಿ ಇಲಾಖೆ ಅಥವಾ ಬೃಹತ್ ನೀರಾವರಿ ಇಲಾಖೆಗಳಿಂದ ಎಲ್ಲಿ ನೀರು

ಸಿಕ್ಕುವುದಿಲ್ಲ ಆ ಪ್ರದೇಶಗಳಿಗೆ ಕೂಡ ನೀರಾವರಿ ಮಾಡುವುದಕ್ಕೆ ಸಾಧ್ಯವಿದೆ. ಅದೇ ರೀತಿಯಲ್ಲಿ ಸರ್ಕಾರ ಮನಸ್ಸು ಮಾಡಿ ಹೊಳೆ ಸಮೀಪದಲ್ಲಿ ಇರುವಂಥ ಗ್ರಾಮಗಳಿಗೆ ಸಣ್ಣ ಸಣ್ಣ lift irrigation ಯೋಜನೆಗಳನ್ನು ಮಾಡಿ ನೀರನ್ನು ಕೊಟ್ಟರೆ ಬಹುಶ: ಬರಗಾಲಕ್ಕೆ ಹೆದರುವ ಅವಶ್ಯಕತೆ ಇರುವುದಿಲ್ಲ. ಬಿಜಾಪುರ ಜಿಲ್ಲೆಯ ಅಖಂಡ ಭೂಮಿಯಲ್ಲಿ ಬೋರ್‌ವೆಲ್‌ನಲ್ಲಿ ಕೇವಲ ಒಂದೂವರೆ–ಎರಡು ಇಂಚು ನೀರು ಇದ್ದರೂ ಸಹ ದ್ರಾಕ್ಷಿ, ಮಾವು, ಗೋಡಂಬಿ, ದಾಳಿಂಬೆ ಹೀಗೇ ಹಲವಾರು ರೀತಿಯ ಹಣ್ಣುಗಳನ್ನು ಬೆಳೆಯುತ್ತಾರೆ. ಜಗತ್ ಪ್ರಸಿದ್ಧವಾದ ಅತ್ಯಂತ ಶ್ರೇಷ್ಠ ಗುಣಮಟ್ಟದ ಹಣ್ಣುಗಳನ್ನು ಇಲ್ಲಿ ಬೆಳೆಯುತ್ತಾರೆ. ಹೀಗಾಗಿ ಆ ಭಾಗದಲ್ಲಿ ಸ್ವಲ್ಪ ನೀರಾವರಿ ವ್ಯವಸ್ಥೆ ಮಾಡುವುದಕ್ಕೆ ಸರ್ಕಾರ ಮನಸ್ಸು ಮಾಡಬೇಕು. ಕೃಷ್ಣಾ ನದಿ ಇರಬಹುದು, ಘಟಪ್ರಭಾ ಇರಬಹುದು, ತುಂಗೆ ಇರಬಹುದು, ಭೀಮಾ ನದಿ ಇರಬಹುದು ಆ ನದಿಗಳ ಮೂಲಕ ಸಣ್ಣ ಸಣ್ಣ ನೀರಾವರಿ ಯೋಜನೆಗಳನ್ನು ಜಾರಿಗೆ ತಂದರೆ ಒಂದೂವರೆ ವರ್ಷದಲ್ಲಿ ಆದಷ್ಟು ಬೇಗ ಈ ಯೋಜನೆಯ ಫಲ ಜನರಿಗೆ ಸಿಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇವತ್ತು ಆ ಭಾಗದಲ್ಲಿ ಬರಗಾಲ ಘೋಷಣೆ ಆಗಿದ್ದರಿಂದ ಸರ್ಕಾರಕ್ಕೆ ಕೊಡಬೇಕಾದ ಅನೇಕ ರೀತಿಯ ಕರಗಳನ್ನು ನಿಲ್ಲಿಸುವ ಅಗತ್ಯವಿದೆ. ಆದ್ದರಿಂದ, ಆ ಕರವನ್ನು ಸರ್ಕಾರ ನಿಲ್ಲಿಸುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ. ಈಗಾಗಲೇ ಈ ಮನೆಯಲ್ಲಿ ಅನೇಕ ಹಿರಿಯರು ಸಲಹೆ ಕೊಟ್ಟರು. ಉದ್ಯೋಗ ಖಾತ್ರಿ ಯೋಜನೆ ಅತ್ಯಂತ ಯಶಸ್ವಿಯಾಗಿ ಜಾರಿಗೆ ಬರಬೇಕು, ಅದರ ಮೂಲಕ ಗ್ರಾಮಾಂತರ ಪ್ರದೇಶಗಳಲ್ಲಿ ಚೆಕ್ ಡ್ಯಾಮ್‌ಗಳನ್ನು ನಿರ್ಮಿಸುವುದು ಇರಬಹುದು, ರಸ್ತೆಗಳ ನಿರ್ಮಾಣ ಕಾರ್ಯವಿರಬಹುದು ಅಥವಾ ಇನ್ನೂ ಯಾವುದೋ ಕಾರ್ಯಕ್ರಮ ವಿರಬಹುದು, ಅವುಗಳನ್ನು ತೆಗೆದುಕೊಂಡು ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಬೇಕು. ಅದು ಬಹಳ ಯಶಸ್ವಿಯಾಗಿ ಆಗಬೇಕು. ನಾವು ಅಲ್ಲಲ್ಲಿ ನೋಡಬಹುದು. ಎಲ್ಲಾ ಕಡೆಗಳಲ್ಲಿಯೂ ಪ್ರಾಮಾಣಿಕತೆ ಎದ್ದು ಕಾಣುವುದಿಲ್ಲ. "ಉದ್ಯೋಗ ಖಾತ್ರಿ ಹೋಗಿ ಉದ್ಯೋಗ

ಕತ್ರಿ" ಯೋಜನೆ ಆಗಿದೆ ಎಂದು ಕೆಲವರು ಹೇಳುತ್ತಾರೆ. ಭ್ರಷ್ಟಾಚಾರವಾಗಬಾರದು. ಅತ್ಯಂತ ಪ್ರಾಮಾಣಿಕವಾಗಿ ಯೋಜನೆ ಜಾರಿಗೆ ಬರಬೇಕು. ಈ ಬಗ್ಗೆ ಹಿರಿಯ ಅಧಿಕಾರಿಗಳು ಗಮನ ಕೊಟ್ಟು ವಿಶೇಷವಾದ ಪ್ರಯತ್ನ ಮಾಡಿದರೆ ಬಹುಶ: ಅನೇಕ ಅಭಿವೃದ್ಧಿ ಕಾರ್ಯಕ್ರಮಗಳನ್ನು ಜಾರಿಗೆ ತರುವುದಕ್ಕೆ ಸಾಧ್ಯವಾಗುತ್ತದೆ. ಅಥಣಿ ತಾಲ್ಲೂಕಿನಲ್ಲಿ ಏತ ನೀರಾವರಿ ಯೋಜನೆಗೆ ಸರ್ಕಾರ ಸಾಕಷ್ಟು ಹಣ ಬಿಡುಗಡೆ ಮಾಡಿದೆ. ಅದನ್ನು ಆದಷ್ಟು ಬೇಗನೆ ಇನ್ನಷ್ಟು ಕ್ರಿಯಾಶೀಲಗೊಳಿಸಿದರೆ ದೊಡ್ಡಪ್ರಮಾಣದಲ್ಲಿ ಇವತ್ತು ಜಮೀನಿಗೆ ನೀರು ಬರುವ ವ್ಯವಸ್ಥೆ ಆಗುತ್ತದೆ. ನನ್ನ ಸಲಹೆ ಏನೆಂದರೆ, ಬೆಳಗಾವಿ ಅಧಿವೇಶನದಲ್ಲಿ ಸರ್ಕಾರ ಬೃಹತ್ ನೀರಾವರಿ ಮಂತ್ರಿಗಳ ಗಮನವನ್ನು ನಾನು ಸೆಳೆದಿದ್ದೆ. ಸಾವಳಗಿ ಯೋಜನೆಗೆ 40 ಕಿ.ಮೀ. ನಲ್ಲಿ ಬರುವಂಥ ಅಥಣಿ ನೀರು ಸಾಕಾಗುವುದಿಲ್ಲ. 25–30 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ವಿಶೇಷವಾದ ಲಿಫ್ಟ್ ಮಾಡಿ ನೀರನ್ನು ಎತ್ತಿ ಕೆನಾಲ್‌ಗೆ ಹಾಕಿದರೆ ಯಾರು ನೀರಾವರಿ ಸೌಲಭ್ಯದಿಂದ ವಂಚಿತರಾಗಿದ್ದಾರೆ ಅಂತಹವರಿಗೆ ನೀರನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ. ಈ ಯೋಜನೆಯನ್ನು ಸರ್ಕಾರ ತಕ್ಷಣವೇ ಜಾರಿಗೆ ತರಬೇಕು ಎಂದು ಈ ಸಂದರ್ಭದಲ್ಲಿ ವಿನಂತಿ ಮಾಡುತ್ತೇನೆ. ಅನೇಕ ಸಂದರ್ಭಗಳಲ್ಲಿ ಆ ಭಾಗದ ರೈತರು ಕಂಗಾಲಾಗಿ ಇರುವಂಥ ಜಮೀನನ್ನೂ ಮಾರಿಕೊಂಡು ಕೃಷಿ ಬಿಟ್ಟು ಪಟ್ಟಣಕ್ಕೆ ಬರುವುದು ಇಂದು ಸ್ವಾಭಾವಿಕವಾಗಿದೆ ಎಂಬುದನ್ನು ನಾನು ಬಹಳ ದು:ಖದಿಂದ ಹೇಳುತ್ತೇನೆ. ಜಂಬಗಿ ಖೇಡ ಗ್ರಾಮದಲ್ಲಿ ಭೀರಪ್ಪ ರಾಮಪ್ಪ ಅಸಂಗಿ ಎಂಬ ಒಬ್ಬ ರೈತರು ಎರಡು ಲಕ್ಷ ರೂಪಾಯಿಗಳ ಸಾಲ ಪಡೆದಿದ್ದು, ಸಹಕಾರಿ ಸಂಘದಲ್ಲಿ 30 ಸಾವಿರ ರೂಪಾಯಿಗಳನ್ನು ಸಾಲ ಪಡೆದಿದ್ದು ಆ ಸಾಲವನ್ನು ತೀರಿಸಲು ಸಾಧ್ಯವಾಗದೇ, ಈ ವರ್ಷ ಬರಗಾಲ ಬಂದ ಪರಿಣಾಮದಿಂದ ಬಹಳ ದು:ಖತಪ್ತರಾಗಿ ಆತ್ಮಹತ್ಯೆಗೆ ಶರಣಾಗಿದ್ದಾರೆ. ಈ ಬಗ್ಗೆ ಮಾನ್ಯ ಕಂದಾಯ ಮಂತ್ರಿಗಳಿಗೆ ನಾನು ಪತ್ರ ಬರೆದು ಇದರ ಬಗ್ಗೆ ವಿಶೇಷವಾದ ತನಿಖೆ ಮಾಡಿಸಿ ಆ ರೈತನ ಕುಟುಂಬ ಇವತ್ತು ಬೀದಿಗೆ

ಬಿದ್ದಿದೆ ಅವರಿಗೆ ಆರ್ಥಿಕವಾಗಿ ಸಹಾಯ ಮಾಡಬೇಕೆಂದು ವಿನಂತಿ ಮಾಡಿದ್ದೇನೆ.

**ಉಪಾಧ್ಯಕ್ಷರು:** ತಮ್ಮ ಭಾಷಣವನ್ನು ಬೇಗ ಮುಗಿಸಿ.

**ಶ್ರೀ ಶ್ರೀಕಾಂತ್ ಕುಲಕರ್ಣಿ:** ಒಂದು ಭಾಗದಲ್ಲಿ ಅನಾವೃಷ್ಟಿ ಇದ್ದರೆ ಇನ್ನೊಂದು ಭಾಗದಲ್ಲಿ ಅತೀವೃಷ್ಟಿ ಪರಿಣಾಮಗಳು ನೋಡುವುದಕ್ಕೆ ಸಿಗುತ್ತವೆ. ಬೆಳೆಗೆ ಹಿನ್ನೀರು ನಿಂತಾಗ, ಒಂದೊಂದು ಸಲ ಸಿಕ್ಕಾಪಟ್ಟೆಯಾಗಿ ಹೇಳದೇ ಕೇಳದೇ ಮಳೆ ಬರುವುದರಿಂದ ಹೆಚ್ಚು ಪ್ರದೇಶ ನೀರಿನಲ್ಲಿ ಮುಳಗಿ ಆ ಭಾಗದಲ್ಲಿ ವಿಶೇಷವಾದ ಸಮಸ್ಯೆಗಳು ಉಂಟಾಗುತ್ತವೆ. ಅಲ್ಲಿ ರಸ್ತೆಗಳು ಕೊಚ್ಚಿ ಹೋಗಿರುವುದರಿಂದ ಆ ಸಮಸ್ಯೆಗಳನ್ನು ಸರಿಪಡಿಸಬೇಕಾಗಿದೆ. ಕಂಕಣವಾಡಿ ಗ್ರಾಮದ 500 ಎಕರೆ ಜಮೀನು ಹತ್ತಾರು ವರ್ಷಗಳಿಂದ ಕೃಷ್ಣಾ ನದಿಯ ಹಿನ್ನೀರಿನಿಂದ ಹೆಚ್ಚಾಗಿ ಸುತ್ತುವರೆದಿದ್ದು ಸವಳು-ಜವಳು ಇರುವುದರಿಂದ ಯಾವುದೇ ಬೆಳೆ ಬರುತ್ತಿಲ್ಲ. ಆದ್ದರಿಂದ ಸವಳು-ಜವಳು ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಬೇಕು ಎಂದು ಈಗಿನ ಮಾನ್ಯ ಮುಖ್ಯಮಂತ್ರಿಗಳು ಈ ಹಿಂದೆ ಉಪ ಮುಖ್ಯಂತ್ರಿಗಳಾಗಿದ್ದಾಗ ಸರ್ಕಾರದ ಮಟ್ಟದಲ್ಲಿ ನಿರ್ಣಯ ಆಗಿತ್ತು. ಆದರೆ, ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ಕಾರ್ಯ ಇನ್ನೂ ಆಗಿಲ್ಲವೆಂದು ಈ ಸಂದರ್ಭದಲ್ಲಿ ಮಾನ್ಯ ಉಪಾಧ್ಯಕ್ಷರ ಗಮನ ಸೆಳೆಯುವುದಕ್ಕೆ ಇಚ್ಛೆಪಡುತ್ತೇನೆ. ಯಾವ್ಯಾವ ರಸ್ತೆಗಳು ಹದಗೆಟ್ಟು, ಹಿನ್ನೀರಿನ ಪರಿಣಾಮದಿಂದ ರಸ್ತೆಗಳು ಮತ್ತು ಸೇತುವೆಗಳು ಮುಳುಗಿ ಹೋಗಿವೆ, ಈ ಬಗ್ಗೆ ನಾನು ಸರ್ಕಾರಕ್ಕೆ ಮನವಿ ಮಾಡುವುದೇನೆಂದರೆ, ರಸ್ತೆಗಳ ಸಂಪರ್ಕ ಕಲ್ಪಿಸುವ ದೃಷ್ಟಿಯಿಂದ ಆ ಭಾಗಗಳಲ್ಲಿ ದುರಸ್ತಿ ಕಾರ್ಯಕ್ರಮಗಳನ್ನು ತಕ್ಷಣವೇ ಕೈಗೊಳ್ಳಬೇಕೆಂದು ಒತ್ತಾಯಿಸುತ್ತೇನೆ. ರಾಜ್ಯ ಸರ್ಕಾರ ಘೋಷಣೆ ಮಾಡಿರುವಂಥ ಎಲ್ಲಾ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತಂದು ವಿಶೇಷವಾಗಿ ಉತ್ತರ ಕರ್ನಾಟಕದ ಅಖಂಡ ಬಿಜಾಪುರ ಜಿಲ್ಲೆಯಲ್ಲಿ ಬರಗಾಲದಿಂದ ಒದ್ದಾಡುತ್ತಿರುವ ರೈತರಿಗೆ ವಿಶೇಷವಾದ ಯೋಜನೆಗಳನ್ನು ಹಮ್ಮಿಕೊಳ್ಳಬೇಕು. ಎಂದು ಹೇಳುತ್ತೇನೆ. ಸರ್ಕಾರ ಸಕ್ರಿಯವಾಗಿ ಕೆಲಸ ಮಾಡಬೇಕು ಎಂದು ಹೇಳಿ ಇಷ್ಟು ಹೊತ್ತು

ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಮಾಲಿಕಯ್ಯ ಏ. ಗುತ್ತೇದಾರ್ (ಅಫ್‌ಜಲ್‌ಪುರ):** ಮಾನ್ಯ ಉಪಾಧ್ಯಕ್ಷರೆ, ಬರಗಾಲದ ಬಗ್ಗೆ ನಮ್ಮ ನಾಯಕರು, ಉಪ ನಾಯಕರು ತಂದಂಥ ನಿಲುವಳಿ ಸೂಚನೆಗೆ ಸ್ಪಂದಿಸಿ ನನಗೆ ಮಾತನಾಡಲು ಅವಕಾಶ ಕಲ್ಪಿಸಿರುವ ತಮಗೆ ಧನ್ಯವಾದಗಳನ್ನು ಸಲ್ಲಿಸಿ ಈಗ ನನ್ನ ಭಾವನೆಗಳನ್ನು ವ್ಯಕ್ತಪಡಿಸುತ್ತೇನೆ. ಇನ್ನೂ 70 ಪ್ರತಿಶತ ಭಾಗ ಒಣ ಬೇಸಾಯದ ಮೇಲೆ ಅವಲಂಭಿತವಾದ ಪ್ರದೇಶ ಕರ್ನಾಟಕ ರಾಜ್ಯದಲ್ಲಿ ಕಾಣುತ್ತಿದೆ. ನಾನು ಆ ಸರ್ಕಾರ, ಈ ಸರ್ಕಾರ ಎಂದು ಹೇಳುವುದಕ್ಕೆ ಹೋಗುವುದಿಲ್ಲ. ಈ ಸದನದ ಮುಖಾಂತರ ನಾನು ಹೇಳುವುದು ಇಷ್ಟೆ ಯಾರು ಅಧಿಕಾರದಲ್ಲಿದ್ದಾಗ ಮೂಲಭೂತವಾದ ಯೋಜನೆಗಳ ಬಗ್ಗೆ ಹಾಗೂ ಈ ರಾಜ್ಯದ ರೈತರ ಬಗ್ಗೆ ಕಾಳಜಿ ವಹಿಸಿ ಕೆಲಸಗಳನ್ನು ಮಾಡುತ್ತಾರೆಯೋ ಆಗ ಬಹಳ ಅರ್ಥಪೂರ್ಣವಾದ ಯೋಜನೆಗಳು ನಮ್ಮ ಕರ್ನಾಟಕ ರಾಜ್ಯಕ್ಕೆ ಬರುತ್ತವೆ. ಉದಾಹರಣೆಗೆ ಹೇಳುವುದಾದರೆ ನಮ್ಮ ಗುಲ್ಬರ್ಗ ಹಾಗೂ ಬೀದರ್ ಪ್ರದೇಶಗಳು ಯಾವತ್ತೂ ಸಹ ಭೀಕರ ಬರಗಾಲಕ್ಕೆ ತುತ್ತಾಗುವ ಪ್ರದೇಶಗಳು. ಈ ಬಗ್ಗೆ ಮಾನ್ಯ ಬಂಡೆಪ್ಪ ಕಾಶೆಂಪೂರ್‌ರವರು ಸಹ ಹೇಳಿದ್ದಾರೆ. ಅಮರ್ಜ್ಯ ಇರಬಹುದು, ಬೆಣ್ಣೆತೊರೆ ಇರಬಹುದು ಈ ಯೋಜನೆಗಳು ಇನ್ನೂ ಪೂರ್ತಿಯಾಗಿಲ್ಲ. ಪೂರ್ತಿ ಕೆನಾಲ್ ಸರಿಯಾಗಿ ಇದ್ದಿದ್ದರೆ ಸುಮಾರು 5 ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಆಗುತ್ತಿತ್ತು. ಇದರಿಂದ ಬಹಳ ಅನುಕೂಲವಾಗುವಂಥ ವಾತಾವರಣ ನಮ್ಮ ರೈತರಿಗೆ ಆಗುತ್ತಿತ್ತು. ನಮ್ಮ ಅಫ್‌ಜಲ್‌ಪುರ ಮತ ಕ್ಷೇತ್ರದಲ್ಲಿ ಭೀಮಾ ನದಿಯಿಂದ ಮಹಾರಾಷ್ಟ್ರ ಹಾಗೂ ಆಂಧ್ರದವರೆಗೆ ನೀರು ಹೋಗಬೇಕಾಗುತ್ತದೆ. ಒಟ್ಟಾರೆ 110 ಕಿ.ಮೀ. ಉದ್ದ ಹರಿಯುವ ನೀರಿನಲ್ಲಿ 66 ಕಿ.ಮೀ. ನೀರು ನಮ್ಮ ಕ್ಷೇತ್ರದಲ್ಲಿ ಹೋಗುತ್ತದೆ. ಭೀಮಾ ಏತನೀರಾವರಿ ಯೋಜನೆಯನ್ನು ಪ್ರಾರಂಭದಿಂದಲೇ ತರುವಂಥ ಕಾರ್ಯಕ್ರಮ ರೂಪಿಸಿರುವುದನ್ನು ನೋಡಿದರೆ ನಾವು ಮಾನ್ಯ

KN_015

ಜೆ.ಹೆಚ್.ಪಟೇಲ್, ಮಾನ್ಯ ಬಂಗಾರಪ್ಪನವರು, ಮಾನ್ಯ ದೇವೇಗೌಡರು ಹಾಗೂ ಮಾನ್ಯ ಎಸ್.ಎಂ.ಕೃಷ್ಣರವರನ್ನು ನೆನಪಿಸಿಕೊಳ್ಳಬೇಕಾಗುತ್ತದೆ.

**5-00 PM**

ಇದಕ್ಕೆ ಬೇಕಾಗಿರುವಂಥ ಹಣವನ್ನು ಆ ಸಂದರ್ಭದಲ್ಲೇ ಬಿಡುಗಡೆ ಮಾಡಿ. ಈ ಯೋಜನೆಗೆ ಹೆಚ್ಚು ಒತ್ತು ಕೊಡಬೇಕು. ಗುಲ್ಬರ್ಗಾ ಜಿಲ್ಲೆಯ ಉಸ್ತುವಾರಿ ಸಚಿವರಾಗಿ ಕೆಲಸ ಮಾಡುವಂಥ ಅವಕಾಶ ನನಗೆ ಸಿಕ್ಕಿತು. ಆ ಸಂದರ್ಭದಲ್ಲಿ ಅಗತ್ಯ ಕ್ರಮ ಕೈಗೊಳ್ಳಲಾಗಿತ್ತು.

**(ಈ ಹಂತದಲ್ಲಿ ಮಾನ್ಯ ಅಧ್ಯಕ್ಷರಾದ ಶ್ರೀ ಜಗದೀಶ್ ಶೆಟ್ಟರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)**

ಗುಲ್ಬರ್ಗಾ ಜಿಲ್ಲೆಯಲ್ಲಿ ಭೀಮಾ ನದಿ ಯೋಜನೆಯು ನೆನೆಗುದಿಗೆ ಬಿದ್ದಿದೆ. ಭೀಮ flow ಯೋಜನೆ ಮಾಡುವುದರಿಂದ ಅನೇಕ ಹಳ್ಳಿಗಳು ಮುಳುಗಡೆಯಾಗುತ್ತಿವೆ. ಭೀಮ flow ಬದಲಾಗಿ ಭೀಮ ಬ್ಯಾರೇಜ್‌ಗಳಾಗಿ ಪರಿವರ್ತನೆ ಮಾಡಿದರೆ ಅನುಕೂಲವಾಗುತ್ತದೆ. ಸನ್ಮಾನ್ಯ ಜೆ.ಹೆಚ್. ಪಟೇಲ್‌ರವರು ಈ ವಿಷಯವನ್ನು ಕ್ಯಾಬಿನೆಟ್ ಮುಂದೆ ತಂದಿದ್ದರು. ಮಾನ್ಯ ಶ್ರೀ ಎಸ್.ಎಂ.ಕೃಷ್ಣ ಅವರು ಅಧಿಕಾರಕ್ಕೆ ಬಂದಾಗ ಭೀಮ flow ಅನ್ನು ಬದಲಾವಣೆ ಮಾಡಿ ಬ್ಯಾರೇಜ್‌ಗಳಾಗಿ ಪರಿವರ್ತನೆ ಮಾಡಿ ಭೀಮ ನದಿಗೆ ಸುಮಾರು 11 ಬ್ಯಾರೇಜ್‌ಗಳನ್ನು ಮಾಡತಕ್ಕಂಥ ಅವಕಾಶ ಮಾಡಿಕೊಟ್ಟಿದ್ದರು. ಅದರಲ್ಲಿ ಐದು ಬ್ಯಾರೇಜ್‌ಗಳು ನಮ್ಮ ಮತ ಕ್ಷೇತ್ರದಲ್ಲಿದೆ. ನಿಮಗೆ ಹೇಳಬೇಕೆಂದರೆ, ಭೀಮ ನದಿ ಯೋಜನೆಯಿಂದ Central Water Commission ಒಪ್ಪಂದದ ಮೇರೆಗೆ 15 ಟಿ.ಎಂ.ಸಿ ನೀರನ್ನು ಬಳಕೆ ಮಾಡಲು ಅವಕಾಶ ಮಾಡತಕ್ಕಂಥ ಪ್ರಾಜೆಕ್ಟ್‌ನಲ್ಲಿ 14 ಟಿ.ಎಂ.ಸಿ ನೀರು ಅಫ್ಜಲ್‌ಪುರಕ್ಕೆ ಬರುವ ಯೋಜನೆಯನ್ನು ಹಮ್ಮಿಕೊಂಡಿದ್ದಾರೆ. ಈ ವೇದಿಕೆ ಮೂಲಕ ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುವುದೇನೆಂದರೆ, ಬ್ಯಾರೇಜ್‌ಗಳನ್ನು ನಿರ್ಮಾಣ ಮಾಡಬೇಕಾದರೆ, ಅದು ಸಣ್ಣ ನದಿಗಳು ಇರಬಹುದು, ಅಮರ್ಜಾ ಇರಬಹುದು, ಭೀಮ ನದಿ ನೀರು ಇರಬಹದು. ಯಾವಾಗ

ನಮ್ಮಲ್ಲಿ ನೀರು ಇರುತ್ತದೆ ಎಂದರೆ, ಮಳೆಗಾಲದಲ್ಲಿ ನದಿಗಳು ತುಂಬಿ ಹರಿಯುತ್ತವೆ. ಬರಗಾಲದಲ್ಲಿ ಒಂದು ಹನಿ ನೀರು ಕೂಡ ಇರುವುದಿಲ್ಲ. ಅದನ್ನು ನಾವು ಮನಸ್ಸಿನಲ್ಲಿಟ್ಟುಕೊಂಡು ಬ್ಯಾರೇಜ್ ಮಾಡಬೇಕೆಂದು ಹಟ ಹಿಡಿದು ಆ ಕೆಲಸವನ್ನು ಮಾಡಿಸಿದ್ದೇನೆ. ಅದೇ ರೀತಿ ಎಲ್ಲಾ ಕ್ಷೇತ್ರದಲ್ಲಿಯೂ ಸರ್ಕಾರವು ಮುತುವರ್ಜಿ ವಹಿಸಿ ಎಲ್ಲೆಲ್ಲಿ ನದಿಗಳು ಇವೆ, ಒಂದೂವರೆ ಕಿ.ಮೀ. ಅಂತರದಲ್ಲಿ barrage-cum-bridge ಮಾಡಿದರೆ ಸಾಕಷ್ಟು ಅನುಕೂಲವಾಗುತ್ತದೆ. ಈ ಒಂದು ಸಲಹೆಯನ್ನು ಸ್ವೀಕರಿಸಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇನ್ನೂ ಮಾತನಾಡುವುದಕ್ಕೆ ಅನೇಕ ವಿಷಯಗಳಿವೆ. ಆದರೆ, ಅನೇಕ ಹೊಸ ಸದಸ್ಯರು ಇದ್ದಾರೆ ಅವರಿಗೂ ತಮ್ಮ ಅಭಿಪ್ರಾಯಗಳನ್ನು ಹೇಳುವುದಕ್ಕೆ ಅವಕಾಶ ಕೊಟ್ಟಿದ್ದೀರಿ ಬೇರೆಯವರು ಮಾತನಾಡುವುದರಿಂದ ಅವಕಾಶ ವಂಚಿತರಾಗಬಾರದು. ಆದುದರಿಂದ ನಾನು ಹೆಚ್ಚಿಗೆ ಮಾತನಾಡದೇ, ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಉದ್ಯೋಗ ಖಾತ್ರಿ ಯೋಜನೆ ಇದೆ. ಇದು ಅತ್ಯಂತ ಅಮೂಲ್ಯವಾದ ಕೊಡುಗೆಯಾಗಿದ್ದು ಇದು ಕೇಂದ್ರ ಸರ್ಕಾರದ ಯೋಜನೆಯಾಗಿದೆ. ಅದನ್ನು ಸಮಗ್ರವಾಗಿ ಬಳಸತಕ್ಕಂಥ ಅಧಿಕಾರಿಗಳು ಇರಬೇಕು. ಈ ಯೋಜನೆಯನ್ನು ಸರಿಯಾಗಿ monitor ಮಾಡಿದಾಗ ಮಾತ್ರ ಯೋಜನೆಯು ಯಶಸ್ವಿಯಾಗುತ್ತದೆ. ಮಾಜಿ ರಾಷ್ಟ್ರಪತಿಗಳಾದ ಡಾಃ ಅಬ್ದುಲ್ ಕಲಾಂ ಅವರು ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಅದನ್ನು ಮಾನ್ಯ ಮುಖ್ಯಮಂತ್ರಿಗಳು ಇಂದು ಕರೆದಿರುವ ವಿಶೇಷ ಅಧಿವೇಶನದಲ್ಲಿ ತಮ್ಮ ಕಾರ್ಯಕ್ರಮಗಳಲ್ಲಿ ಅಳವಡಿಸಿಕೊಂಡಿದ್ದಾರೆ. ಗ್ರಾಮ ಮಟ್ಟದಲ್ಲಿ ಕೆರೆಗಳ ನಿರ್ಮಾಣವಾಗಬೇಕು. ಈ ರೀತಿ ಕೆರೆಗಳನ್ನು ಮಾಡಲು ಯಾರು ಜಮೀನನ್ನು ಕೊಡುತ್ತಾರೆ. ಅವರಿಗೆ ಪರಿಹಾರ ಕೊಡುವ, ಕಾರ್ಯಕ್ರಮ ಮಾಡಬೇಕು. ಗ್ರಾಮಗಳಲ್ಲಿ ವನಮಹೋತ್ಸವ ಆಗಬೇಕು. ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಅವಕಾಶ ಒದಗಿಸಿಕೊಡಬೇಕು. ಈಗ ಕ್ರಮೇಣವಾಗಿ ಕೆರೆ ಒತ್ತುವರಿ ಮಾಡಿ ಮನೆಗಳನ್ನು ನಿರ್ಮಾಣ ಮಾಡುತ್ತಿದ್ದಾರೆ ಅದಕ್ಕೆ ಕಡಿವಾಣ ಹಾಕಬೇಕು. ಈ ಅಧಿವೇಶನದಲ್ಲಿ ಸಾವಯವ ಕೃಷಿಯ ಬಗ್ಗೆ

ಮಾತನಾಡಿದ್ದಾರೆ. ಅದಕ್ಕಾಗಿ ವಿಶೇಷ ಒತ್ತು ಕೊಡುವ ಬಗ್ಗೆ ಸಮಗ್ರವಾದ ಚಿಂತನೆಯನ್ನು ಮಾಡಬೇಕು. ಕೃಷಿ ಬಗ್ಗೆ ವಿಶೇಷವಾದಂತಹ ಕಾಳಜಿಯನ್ನು ವಹಿಸದೇ ಇದ್ದರೆ ಮುಂಬರುವ ದಿನಗಳಲ್ಲಿ ಭೀಕರವಾದ ಅಹಾರೋತ್ಪಾದನೆಯ ಕೊರತೆಯನ್ನು ಎದುರಿಸಬೇಕಾಗಿ ಬರುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಚೈನಾ ಪ್ರವಾಸದಿಂದ ಬಂದ ಕೂಡಲೇ ತಮ್ಮ ಅನಿಸಿಕೆಯಲ್ಲಿ ಕರ್ನಾಟಕ ರಾಜ್ಯವನ್ನು ಒಂದು ಉತ್ತಮವಾದ ದಿಕ್ಕಿನಲ್ಲಿ ಕೊಂಡೊಯ್ಯುತ್ತೇವೆಂದು ಹೇಳಿದ್ದಾರೆ. ಅದನ್ನು ಕಾರ್ಯರೂಪಕ್ಕೆ ತರತಕ್ಕಂಥ ವಿಶ್ವಾಸವಿದೆ. ಆದರೆ ಅವರು ಇದಕ್ಕೆ ಯಾವ ಮೂಲದಿಂದ ಹಣ ಕೊಡುತ್ತೇವೆಂದು ಹೇಳಿಲ್ಲ. ಹಣದ ಇತಿಮಿತಿಯನ್ನು ನೋಡಿಕೊಂಡು ಒಂದು time bound programme ಅನ್ನು ಮಾಡಬೇಕು. ವಿಶೇಷ ಕಾರ್ಯಕ್ರಮವನ್ನು ಹಮ್ಮಿಕೊಂಡರೆ ಖಂಡಿತವಾಗಿಯೂ ಬರಗಾಲ, ಅತಿವೃಷ್ಟಿ–ಅನಾವೃಷ್ಟಿಯನ್ನು ಎದುರಿಸಲು ಶಕ್ತಿ ಬರುತ್ತದೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಜಿಲ್ಲಾ ಉಸ್ತುವಾರಿ ಸಚಿವರು ಇಲ್ಲಿದ್ದಾರೆ. ಗುಲ್ಬರ್ಗಾದಲ್ಲಿ ಭೀಕರ ಬರಗಾಲವಿದೆ. ಅಲ್ಲಿ ಸರ್ಕಾರ ಕೊಡತಕ್ಕಂಥ ಹಣ ಖರ್ಚಾಗುತ್ತಿಲ್ಲ. ಅವರು ಒಂದು ವೇಳೆ ಅಧಿಕಾರಿಗಳ ಸಭೆ ಮಾಡಿದ್ದರೆ, ಎಷ್ಟೋ effective ಆಗಿ ಕೆಲಸ ಸಾಧ್ಯವಾಗುತ್ತಿತ್ತು. ಕೇವಲ ಆಗಸ್ಟ್ 15, ಜನವರಿ 26ರಂದು ಸೆಲ್ಯೂಟ್ ಸ್ವೀಕರಿಸುವುದಷ್ಟೇ ಅಲ್ಲ. Effective ಆಗಿ ಕೆಲಸ ಮಾಡಬೇಕಾದದ್ದು ಅವರ duty. ಅದರ ಬಗ್ಗೆ ಯಾರೂ ಚಿಂತನೆ ಮಾಡಿಲ್ಲ. ಟೀಕೆ ಮಾಡುವುದಕ್ಕೋಸ್ಕರ ನಾನು ಹೇಳಲಿಲ್ಲ. ಇದು ಅವರು ಕೆಲಸ ಮಾಡುತ್ತಿರುವ ರೀತಿಯಾಗಿದೆ. ಆ ಜಿಲ್ಲೆಯಲ್ಲಿ ಅನೇಕ ಅಭಿವೃದ್ಧಿ ಕಾಮಗಾರಿಗಳು ಕುಂಠಿತವಾಗಿದೆ. ಆಡಳಿತ ಯಂತ್ರಕ್ಕೆ ತಾವು direction ಕೊಡಬೇಕು. ಯಾವ ಅಧಿಕಾರಿಗಳೂ ಸರಿಯಾಗಿ ಕೆಲಸ ಮಾಡುತ್ತಿಲ್ಲ. ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ village accountant ಹಳ್ಳಿಗಳಲ್ಲಿ ಇರುವುದಿಲ್ಲ. ಬೆಳೆ ವಿಮೆ ಬಗ್ಗೆ ಸಾಕಷ್ಟು ಮಾತನಾಡಿದ್ದಾರೆ. ರೈತರು ಬೆಳೆದ ಬೆಳೆಯ ಸಮೀಕ್ಷೆಯನ್ನು ಗ್ರಾಮ ಮಟ್ಟದಿಂದ ತರಿಸಿದರೆ ರೈತರಿಗೆ ಅನುಕೂಲವಾಗುತ್ತದೆ. ಪ್ರಸ್ತಾಪ

ಮಾಡಲಿಕ್ಕೆ ಇನ್ನೂ ಅನೇಕ ವಿಷಯಗಳಿವೆ. ಸದಸ್ಯರೆಲ್ಲರೂ ಮಾತನಾಡಬೇಕಾಗಿರುವುದನ್ನು ತಿಳಿದುಕೊಂಡು ಸಮಯವನ್ನು ಹೆಚ್ಚಿಗೆ ತಗೆದುಕೊಳ್ಳದೇ ನನಗೆ ಮಾತನಾಡಲು ತಾವು ಅವಕಾಶ ಕೊಟ್ಟಿದ್ದಕ್ಕೆ ಧನ್ಯವಾದಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತಿದ್ದೇನೆ.

**ಶ್ರೀ ಹೆಚ್.ಡಿ. ರೇವಣ್ಣ:** ಮಾನ್ಯ ಅಧ್ಯಕ್ಷರೆ, ನನ್ನದೊಂದು ವಿಷಯವಿದೆ.

**(ಗೊಂದಲ)**

**ಅಧ್ಯಕ್ಷರು:** ಮಾನ್ಯ ರೇವಣ್ಣನವರೆ, ಮಾನ್ಯ ಮುಖ್ಯಮಂತ್ರಿಗಳು ಬಂದಿದ್ದಾರೆ. ಬರಗಾಲ ವಿಷಯಕ್ಕೆ ಸಂಬಂಧಿಸಿದಂತೆ ಈಗ continue ಮಾಡೋಣ. ನಾಳೆ ಬೆಳಗ್ಗೆ ನಿಮಗೆ ಮಾತನಾಡಲು ಅವಕಾಶ ಕೊಡುತ್ತೇನೆ. ಜಯಚಂದ್ರರವರೂ ನಾಳೆ ಬೆಳಗ್ಗೆ ಮಾತನಾಡಬೇಕಾಗಿದೆ.

**ಶ್ರೀ ಹೆಚ್. ಡಿ. ರೇವಣ್ಣ:** ಬರಗಾಲದ ಬಗ್ಗೆ ಮಾನ್ಯ ಜಯಚಂದ್ರ ಅವರು ಮಾತನಾಡಲಿ ನನ್ನದೇನು ಅಭ್ಯಂತರವಿಲ್ಲ.

**(ಗೊಂದಲ)**

**ಅಧ್ಯಕ್ಷರು:** ಕೆಲವರು ಹೊಸ ಸದಸ್ಯರು ಇದ್ದಾರೆ. ಅವರು ಮಾತನಾಡಲಿ ಎಲ್ಲರಿಗೂ ಅವಕಾಶ ಕೊಡುತ್ತೇನೆ. ಕಳೆದ ಬಾರಿ ಕೊಟ್ಟ ಹಾಗೆ ಎಲ್ಲ ಪಕ್ಷದ ಶಾಸಕರಿಗೂ ಅವಕಾಶವನ್ನು ಕೊಡುತ್ತೇನೆ. ಇವತ್ತು ಮಧ್ಯಾಹ್ನ ಎರಡು ತಾಸು ಏನೂ ಚರ್ಚೆ ಇಲ್ಲದೇ waste ಆಗಿದೆ. ಮತ್ತೆ ಅವಕಾಶ ಕೊಟ್ಟರೆ ಪದೇ ಪದೇ repeat ಆಗುತ್ತದೆ.

**(ಗೊಂದಲ)**

**ಶ್ರೀ ಕಟ್ಟಾಸುಬ್ರಮಣ್ಯ ನಾಯ್ಡು** (ಅಬಕಾರಿ ವಾರ್ತಾ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಸಚಿವರು):

ಎಲ್ಲರಿಗೂ ಅವಕಾಶ ಕೊಡಬೇಕು. ಸದನ ಪ್ರಾರಂಭವಾಗುವ ಮೊದಲು ಬರಗಾಲದ ಬಗ್ಗೆ ಚರ್ಚೆ ಮಾಡಬೇಕೆಂದು ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದರು. ನಾಳೆಯೂ ಕೂಡ ಪೂರ್ತಿ ಚರ್ಚೆಯಾಗಲಿ.

(ಗೊಂದಲ)

**ಅಧ್ಯಕ್ಷರು:** ಸಂಜೆ 6 ಗಂಟೆಯವರೆಗೆ ಎಷ್ಟು ಜನರಿಗೆ ಅವಕಾಶವಾಗುತ್ತದೆಯೋ ಅವರಿಗೆ ಮಾತನಾಡಲು ಅವಕಾಶವನ್ನು ಕೊಡುತ್ತೇನೆ.

**ಅಧ್ಯಕ್ಷರು:** ಯಾರಾದರೂ ಒಬ್ಬರು ಮಾತನಾಡಿ. ಎಲ್ಲರೂ ಎದ್ದು ನಿಂತು ಮಾತನಾಡಿದರೆ ಯಾರಿಗೆ ಕೇಳಿಸುತ್ತದೆ?

**ಶ್ರೀ ಹೆಚ್.ಡಿ. ರೇವಣ್ಣ:** ನಾಳೆ ಬೆಳಗ್ಗೆ ಮೊದಲು ನಿಯಮ 69 ಅನ್ನು ತೆಗೆದುಕೊಳ್ಳಿ. ನಂತರ, ಬರಗಾಲದ ಮೇಲಿನ ಚರ್ಚೆಗೆ ಉತ್ತರ ಕೊಡಿ. ನಾವು ನಿಮ್ಮ ರೂಲಿಂಗ್ ಒಪ್ಪಿಕೊಂಡಿದ್ದೇವೆ.

**ಅಧ್ಯಕ್ಷರು:** ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ವಿಷಯದಲ್ಲಿ ಯಾರ್ಯಾರು ಮಾತನಾಡಿದ್ದೀರೋ, ಅವರೆಲ್ಲರೂ ಸಹಕರಿಸಬೇಕು. ಅನಂತರ, ಸಮಯ ಉಳಿದಿದ್ದರೆ, ಮಾತನಾಡದಿರುವ ಉಳಿದವರಿಗೂ ಅವಕಾಶ ಕಲ್ಪಿಸಿಕೊಡುತ್ತೇನೆ. ಇಲ್ಲದಿದ್ದರೆ, ಮಾತನಾಡದಿರುವ ಉಳಿದವರಿಗೂ ಅವಕಾಶ ಕಲ್ಪಿಸಿಕೊಡುತ್ತೇನೆ. ಇಲ್ಲದಿದ್ದರೆ, ಪದೇ ಪದೇ ಮಾತನಾಡಿರುವವರೇ ಮಾತನಾಡುವಂತಾಗುತ್ತದೆ. ಈಗ ಹರೀಶ್‌ರವರೆ, ತಾವು ಮಾತನಾಡಿ.

**ಶ್ರೀ ಎ.ಎಸ್. ಪಾಟೀಲ್ ನಡಹಳ್ಳಿ:** ಮಾನ್ಯ ಅಧ್ಯಕ್ಷರೆ, ತಮ್ಮಲ್ಲಿ ನಮ್ಮದೊಂದು ಮನವಿ ಇದೆ. ಬರಗಾಲದ ಬಗ್ಗೆ ಚರ್ಚಿಸಲು ಕಾಂಗ್ರೆಸ್ ಪಕ್ಷದವರಾದ ನಾವೆಲ್ಲರೂ ಸೇರಿ ನಿಲುವಳಿ ಸೂಚನೆಯನ್ನು ತಂದಿದ್ದೇವೆ. ಆದರೆ, ಅವರು ಸರ್ಕಾರದಲ್ಲಿದ್ದಾರೆ. ದಯಮಾಡಿ ನಮಗೆ ಹೆಚ್ಚು ಮಾತನಾಡಲು ಅವಕಾಶ ಕಲ್ಪಿಸಿಕೊಡಬೇಕು.

**ಅಧ್ಯಕ್ಷರು:** ರೂಲ್ 69ರಡಿ ಚರ್ಚಿಸಲು ಅಅವಕಾಶ ಕಲ್ಪಿಸಿಕೊಟ್ಟಾಗ ಮಾತನಾಡುವುದಕ್ಕೆ ಎಲ್ಲರಿಗೂ ಅವಕಾಶ ಸಿಗುತ್ತದೆ (ಗದ್ದಲ) ಈಗ ಸುಮ್ಮನೆ ಸಮಯ ಹಾಳಾಗುತ್ತದೆ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಬೇಕು. ಹರೀಶ್‌ರವರೆ, ತಾವು ಪ್ರಾರಂಭಿಸಿ. ಶರಣ ಪ್ರಕಾಶ್‌ರವರೆ, ತಾವು ಕುಳಿತುಕೊಳ್ಳಿ, ಪ್ಲೀಸ್.

**ಶ್ರೀ ಶರಣಪ್ರಕಾಶ್ ರುದ್ರಪ್ಪ ಪಾಟೀಲ್:** ನಮ್ಮ ಮಾತೂ ಕೇಳುವುದಿಲ್ಲ, ನಮಗೇನೂ ಮಾಡುವುದಿಲ್ಲ. ಅದಕ್ಕೋಸ್ಕರ, ನಾವು ಸದನಕ್ಕೇ ಮೊರೆ ಹೋಗಬೇಕಾಗುತ್ತದೆ. ಅವರೆಲ್ಲರೂ ರೂಲಿಂಗ್ ಪಾರ್ಟಿಗೆ ಸೇರಿದವರಿದ್ದಾರೆ ತಮ್ಮ ಕೆಲಸಗಳನ್ನು ಮಾಡಿಸಿಕೊಳ್ಳುತ್ತಾರೆ.

**(ಗೊಂದಲ)**

**ಶ್ರೀ ಸಿದ್ದು ಸವದಿ:** ಅವರಿಗೆ ಬರಗಾಲದ ಬಗ್ಗೆ ಚರ್ಚೆ ಬೇಕಿಲ್ಲ, ರೈತರ ಬಗ್ಗೆ ಕಾಳಜಿಯೂ ಇಲ್ಲ, ಬರ ಪರಿಹಾರದ ಬಗ್ಗೆಯೂ ಕಳಕಳಿ ಇಲ್ಲ. ಇವರು ಬರೀ ಕಣ್ಣೀರು ಒರೆಸುವ ಕೆಲಸ ಮಾಡುತ್ತಿದ್ದಾರೆ.

**ಅಧ್ಯಕ್ಷರು:** ಸಿದ್ದು ಸವದಿಯವರೆ, ಸುಮ್ಮನೆ ಏಕೆ ಮಾತು ಬೆಳೆಸುತ್ತೀರಿ?

**ಶ್ರೀ ಬಿ.ಪಿ. ಹರೀಶ್ (ಹರಿಹರ):** ಸನ್ಮಾನ್ಯ ಸಭಾಧ್ಯಕ್ಷರೆ, ಈ ಸದನದಲ್ಲಿ ಪ್ರಪ್ರಥಮವಾಗಿ ನನಗೆ ಮಾತನಾಡಲು ಅವಕಾಶ ಕಲ್ಪಿಸಿಕೊಟ್ಟ ತಮಗೆ ಕೃತಜ್ಞತೆಗಳನ್ನು ಸಲ್ಲಿಸುತ್ತಾ; ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬಗ್ಗೆ ಮಾತನಾಡಲು ಪ್ರಯತ್ನಿಸಿದೆ. ಆದರೆ, ಅವಕಾಶ ಸಿಗಲಿಲ್ಲ. ಬರಗಾಲದ ಮೇಲಿನ ಚರ್ಚೆಯ ಸಂದರ್ಭದಲ್ಲಿ ನನಗೆ ಮಾತನಾಡಲು ಅವಕಾಶ ಕಲ್ಪಿಸಿಕೊಟ್ಟಿದ್ದೀರಿ. ಅಧ್ಯಕ್ಷರೆ, ನಾನು ಹರಿಹರ ವಿಧಾನಸಭಾ ಕ್ಷೇತ್ರದಿಂದ ಆರಿಸಿ ಬಂದವನಾಗಿದ್ದು, ಹರಿಹರ ವಿಧಾನಸಭಾ ಕ್ಷೇತ್ರವು ಶೇಕಡ 80ರಷ್ಟು ಭದ್ರಾ ಅಚ್ಚುಕಟ್ಟು ಪ್ರದೇಶ ನೀರಾವರಿಗೆ ಸೇರಿರುವ ತಾಲ್ಲೂಕಾಗಿದೆ. ಹೀಗಿದ್ದಾಗಲೂ ನಾವು ಬರದ ಪರಿಸ್ಥಿತಿಯಲ್ಲಿದ್ದೇವೆ. ಶೇಕಡ 80ರಷ್ಟು ಭದ್ರಾ

ಅಚ್ಚಕಟ್ಟು ಪ್ರದೇಶದಲ್ಲಿದ್ದು, ಕೊನೆಯ ಭಾಗದ ರೈತರಾಗಿದ್ದು, ಭದ್ರಾ ಜಲಾಶಯದಿಂದ ನಮಗೆ ನೀರು ಕೂಡ ಸಿಗುತ್ತಿಲ್ಲ. ಉಳಿದಿರುವ ಶೇಕಡ 20ರಷ್ಟು ಪ್ರದೇಶ ಬರದಿಂದ ತತ್ತರಿಸಿ ಹೋಗಿದೆ. ಇವತ್ತು ಸರ್ಕಾರ ಭದ್ರಾ ಅಚ್ಚುಕಟ್ಟು ಪ್ರದೇಶದ ಆಧುನೀಕರಣಕ್ಕಾಗಿ ಸುಮಾರು 900 ಕೋಟಿ ರೂ.ಗಳನ್ನು ಸನ್ಮಾನ್ಯ ಶ್ರೀ ಹೆಚ್.ಡಿ.ಕುಮಾರಸ್ವಾಮಿ ಹಾಗೂ ಶ್ರೀ ಬಿ.ಎಸ್. ಯಡಿಯೂರಪ್ಪನವರ ನೇತೃತ್ವದಲ್ಲಿ 900 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದ್ದು, ನಮ್ಮ ಭಾಗದ ರೈತರಿಗೆ ಅತೀವ ಸಂತೋಷವುಂಟು ಮಾಡಿತ್ತು. ಆದರೆ, ಸುಮಾರು ಎರಡು ವರ್ಷಗಳಿಂದ ಆಧುನೀಕರಣ ಕಾಮಗಾರಿ ಪ್ರಾರಂಭವಾಗಿ ಇನ್ನು ನಮ್ಮ ಜಲಾಶಯದ ಮೇಲ್ಭಾಗದ ಭದ್ರಾವತಿ ಹಾಗೂ ಶಿವಮೊಗ್ಗ ವಿಭಾಗದ ಮುಖ್ಯ ನಾಲೆಯ ಆಧುನೀಕರಣ ಪ್ರಾರಂಭವಾಗಲಿಲ್ಲ. ಕೊನೆಯ ಭಾಗದ ಮಲೆಬೆನ್ನೂರು, ದಾವಣಗೆರೆ ಹಾಗೂ ಹೊನ್ನಾಳಿ ಭಾಗಗಳಲ್ಲಿ ಅಧುನೀಕರಣದ ಕೆಲಸ ಉತ್ತಮ ರೀತಿಯಲ್ಲಿ ನಡೆದಿದ್ದು, ಆಧುನೀಕರಣವಾದ ಕಾರಣ ನಮ್ಮ ಜಲಾಶಯದ 1,05,000 ಹೆಕ್ಟೇರ್ ಪ್ರದೇಶವು ಅಚ್ಚುಕಟ್ಟಿಗೆ ಸೇರಿದ್ದು, ಕೊನೆಯ ಭಾಗದ ಸುಮಾರು 10,000 ಹೆಕ್ಟೇರ್‌ಗಳಿಗೆ ನಮ್ಮ ಜಲಾಶಯದ ಮೂಲಕ ನೀರನ್ನು ತಲುಪಿಸಲು ಸಾಧ್ಯವಾಗುತ್ತಿಲ್ಲ. ಇದಕ್ಕೆ ಅನೇಕ ಕಾರಣಗಳಿವೆ. ಮೊದಲನೆಯದಾಗಿ, ಮೇಲ್ಭಾಗದ ಮುಖ್ಯ ಕಾಲುವೆ ತುಂಬಾ ಹಾಳಾಗಿರುವುದಲ್ಲದೆ, ತಮಗೆಲ್ಲರಿಗೂ ಗೊತ್ತಿರುವಂತೆ ಅಕ್ರಮ ಪಂಪುಸೆಟ್ಟುಗಳ ಹಾವಳಿ. ಮೇಲ್ಭಾಗದ ನಾಲೆಯಲ್ಲಿ ಅತಿ ಹೆಚ್ಚು ಅಕ್ರಮ ಪಂಪುಸೆಟ್ಟುಗಳಿರುವ ಕಾರಣ ಈ ದಿನ ಹರಿಹರ ತಾಲ್ಲೂಕಿಗೆ ಭದ್ರಾ ನಾಲೆಯ ನೀರು ಸಿಗುವುದು ಕಷ್ಟವಾಗಿದೆ. ಭದ್ರಾ ಜಲಾಶಯದ ನೀರು ನಮ್ಮ ಭಾಗದ ರೈತರಿಗೆ ಕಣ್ಣೀರಾಗಿದೆ. ಆ ಕಾರಣದಿಂದ ಸರ್ಕಾರವು ಆದಷ್ಟು ಹೆಚ್ಚು ಒತ್ತು ನೀಡಿ ಮೇಲ್ಭಾಗದ ಮುಖ್ಯ ನಾಲೆಗಳನ್ನು ಆಧುನೀಕರಣಗೊಳಿಸಬೇಕು. ಸುಮಾರು 900 ಕೋಟಿ ರೂ.ಗಳಷ್ಟು ಹಣ ಬಿಡುಗಡೆಯಾಗಿರುವುದು ಉಪಯೋಗವಾಗಬೇಕಾದರೆ ಕೊನೆಯ ಭಾಗದ ಹರಪನಹಳ್ಳಿ, ದಾವಣಗೆರೆ ಮತ್ತು ಹರಿಹರ ಭಾಗದ ರೈತರುಗಳಿಗೆ ಭದ್ರಾ ಜಲಾಶಯದ ನೀರು ಸಿಗಬೇಕಾದರೆ ಮೇಲ್ಭಾಗದಲ್ಲಿರುವ ಭದ್ರಾವತಿ, ತರೀಕೆರೆ

ಹಾಗೂ ಶಿವಮೊಗ್ಗ ಭಾಗಗಳ ಮುಖ್ಯ ನಾಲೆಗಳ ಆಧುನೀಕರಣವಾಗಬೇಕು. ಅದಕ್ಕೆ ಸರ್ಕಾರ ತಕ್ಷಣವೇ ಕ್ರಮ ಕೈಗೊಂಡು ಕೊನೆಯ ಭಾಗದ ರೈತರುಗಳಿಗೆ ಅನುಕೂಲ ಕಲ್ಪಿಸಿಕೊಡಬೇಕೆಂದು ಈ ಸಂದರ್ಭದಲ್ಲಿ ನಾನು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಇದರ ಜೊತೆಗೆ ನಮ್ಮ ಭಾಗದ ತುಂಗಭದ್ರಾ ನದಿ ಪಕ್ಕದಲ್ಲಿರುವ ನಮ್ಮ ತಾಲ್ಲೂಕು ಪ್ರತಿ ವರ್ಷವೂ ನೆರೆ ಹಾವಳಿಯಿಂದ ತತ್ತರಿಸುತ್ತಿದೆ. ಸುಮಾರು 8–10 ಗ್ರಾಮಗಳು ಮಳೆಗಾಲದಲ್ಲಿ ಅತಿವೃಷ್ಟಿವುಂಟಾಗಿ ನಗರ, ತಾಲ್ಲೂಕು, ಇನ್ನಿತರ ಗ್ರಾಮಗಳ ಸಂಪರ್ಕವೇ ಕಡಿತಗೊಳ್ಳುತ್ತದೆ. ಪ್ರತಿ ವರ್ಷ ಪ್ರತಿ ಮಳೆಗಾಲದಲ್ಲೂ ಇದನ್ನು ನಾವು ಗಮನಿಸುತ್ತಿರುತ್ತೇವೆ. ಮಳೆ ಬರುತ್ತದೆ, ಆ ಗ್ರಾಮಗಳಿಗೆ ಸಂಪರ್ಕ ತಪ್ಪಿ ಹೋಗುತ್ತದೆ, ನಾವು ಹೋಗುತ್ತೇವೆ, ಅಧಿಕಾರಿಗಳೂ ಹೋಗುತ್ತಾರೆ, ಅಲ್ಲಿರುವವರಿಗೆ ಪರಿಹಾರ ಕೊಡುವುದು ಪ್ರತಿ ವರ್ಷವೂ ನಡೆಯುತ್ತಿದೆ. ಆದರೆ, ಮುಖ್ಯವಾಗಿ ಗ್ರಾಮಗಳಿಗೆ ಸಂಪರ್ಕ ಕಡಿತಗೊಳ್ಳುವುದನ್ನು ತಪ್ಪಿಸಬೇಕೆಂದರೆ ಆ ಗ್ರಾಮಗಳಿಗೆ ಅಗತ್ಯವಿರುವ ಸೇತುವೆಗಳನ್ನು ನಿರ್ಮಿಸಬೇಕು. ಅನೇಕ ವರ್ಷಗಳಿಂದ ನಾವು ಬರೀ ಪರಿಹಾರ ಕೊಡುತ್ತಿದ್ದೇವೆ ಆ ಗ್ರಾಮಗಳಿಗೆ ಹೋಗುವುದು ತಪ್ಪಿದ ತಕ್ಷಣವೇ ಪರಿಹಾರ ಕೊಡುವುದೊಂದೇ ದಾರಿಯಲ್ಲ. ಮುಖ್ಯವಾಗಿ ಸಂಪರ್ಕ ಸೇತುವೆಗಳನ್ನು ನಿರ್ಮಿಸಿದಲ್ಲಿ, ನಿಜವಾಗಿಯೂ ರೈತರಿಗೆ ಒಳ್ಳೆಯ ಕೆಲಸ ಮಾಡಿದಂತಾಗುತ್ತದೆಂಬ ಭಾವನೆ ಬರುತ್ತದೆ.

ಹರಿಹರ ತಾಲ್ಲೂಕು ಬೆಸ್ಕಾಂ ಅಂದರೆ ಬೆಂಗಳೂರು ವಿಭಾಗಕ್ಕೆ ಸೇರಿದೆ. ಈ ವಿಭಾಗದಲ್ಲಿ ನಮ್ಮ ಜಿಲ್ಲೆಗೆ 180 ಮೆಗಾವ್ಯಾಟ್ ವಿದ್ಯುಚ್ಛಕ್ತಿಯ ಅವಶ್ಯಕತೆ ಇದೆ. ಆದರೆ, ನಮಗೆ ಈಗ ದೊರಕುತ್ತಿರುವುದು ಕೇವಲ 80 ರಿಂದ 90 ಮೆಗಾವ್ಯಾಟ್ ವಿದ್ಯುತ್ ಮಾತ್ರ. ನಮಗೆ ಮೊದಲನೆಯ ತೊಂದರೆಯಾಗಿರುವುದೇನೆಂದರೆ, ಬೆಸ್ಕಾಂ ವ್ಯಾಪ್ತಿಗೆ ಬೆಂಗಳೂರು ಜಿಲೆ, ಕೋಲಾರ, ಚಿತ್ರದುರ್ಗ, ತುಮಕೂರು ಮತ್ತು ದಾವಣಗೆರೆ ಸೇರಿದೆ. ಅತಿ ಹೆಚ್ಚಿನ ವಿದ್ಯುತ್ತಿನ ಉಪಯೋಗವನ್ನು ಬೆಂಗಳೂರು ನಗರ, ಕೋಲಾರ

ಜಿಲ್ಲೆಗಳು ಪಡೆದುಕೊಳ್ಳುತ್ತಿರುವುದರಿಂದ ದಾವಣಗೆರೆ ಜಿಲ್ಲೆಗೆ ವಿದ್ಯುತ್ ವಿಷಯದಲ್ಲಿ ತುಂಬಾ ತೊಂದರೆಯಾಗಿದೆ. ಆ ಕಾರಣದಿಂದ ಸರ್ಕಾರ ಬೇಗನೇ ಗಮನಹರಿಸಿ ದಾವಣಗೆರೆ ಜಿಲ್ಲೆಗೆ ಬೇಕಾಗಿರುವ, ಈಗ ಕೇವಲ 70 ರಿಂದ 80 ಮೆಗಾವ್ಯಾಟ್‌ಗಳಷ್ಟು ವಿದ್ಯುತ್ ಕೊಡುತ್ತಿದ್ದಾರೆ. ಈ ಸಂದರ್ಭದಲ್ಲಿ ನಾವು 180 ಮೆಗಾವ್ಯಾಟ್‌ಗಳಷ್ಟು ವಿದ್ಯುತ್ ಬೇಕೆಂದು ಕೇಳುವುದಿಲ್ಲ. ಆದರೂ 120 ರಿಂದ 130 ಮೆಗಾವ್ಯಾಟ್‌ಗಳಷ್ಟಾದರೂ ವಿದ್ಯುತ್ತನ್ನು ನಮ್ಮ ಜಿಲ್ಲೆಗೆ ಸಿಗುವ ರೀತಿಯಲ್ಲಿ ವ್ಯವಸ್ಥೆ ಮಾಡಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ.

ಇನ್ನು ಆಶ್ರಯ ಮನೆಗಳು ಮತ್ತು ಸ್ಮಶಾನಗಳ ಕುರಿತು ಹೇಳಬೇಕಾಗಿದೆ. ನಾವು ಆಶ್ರಯ ಮನೆಗಳನ್ನು ಕೊಡುತ್ತಿದ್ದೇವೆ. ನಾವು ಯಾವುದೇ ಗ್ರಾಮದಲ್ಲೂ, ಎಲ್ಲಿಯೂ ಕೂಡ ಹೊಸದಾಗಿ ಗುಂಪು ಮನೆಗಳನ್ನು ಕೊಡುತ್ತಿಲ್ಲ. ಇವತ್ತು ಇರುವ ಮನೆಗಳಿಗೆ ಗ್ರಾಮ ಪಂಚಾಯಿತಿಯ ಸದಸ್ಯರು ಬಿಲ್‌ಗಳನ್ನು ಮಾಡುತ್ತಿರುವುದನ್ನು ಎಲ್ಲಾ ಶಾಸಕರು ಸರ್ಕಾರದ ಗಮನಕ್ಕೆ ತಂದಿದ್ದಾರೆ. ಆ ಕಾರಣಕ್ಕೆ ನನ್ನ ಕಳಕಳಿಯ ಮನವಿ ಏನೆಂದರೆ, ಬಡವರಿಗೆ ಅನುಕೂಲವಾಗಬೇಕೆಂದರೆ ಸರ್ಕಾರವು ಗ್ರಾಮಗಳಲ್ಲಿರುವ ಜಮೀನನ್ನು ಕೊಂಡುಕೊಳ್ಳುವ ವ್ಯವಸ್ಥೆ ಮಾಡುವ ಮೂಲಕ ಆ ಜಮೀನಿನಲ್ಲಿ ಗುಂಪು ಮನೆಗಳನ್ನು ಕಟ್ಟಿದಾಗ ಮಾತ್ರ ಆಶ್ರಯ ಯೋಜನೆಗೆ ಹೆಸರು ಬರುತ್ತದೆ. ಆದರೆ, ಇವತ್ತು ಸರ್ಕಾರವು ಜಮೀನಿಗೆ ಕೊಡುತ್ತಿರುವ ಬೆಲೆಯು ಬಹಳ ಕಡಿಮೆ ಇದೆ. ಇದು ಕೇವಲ ಹರಿಹರದ ಪ್ರಶ್ನೆಯಾಗಿರದೆ, ಇಡೀ ರಾಜ್ಯದ ಪ್ರಶ್ನೆಯಾಗಿದೆ. ಆದಕಾರಣ, ಸರ್ಕಾರವು ಸ್ಮಶಾನಕ್ಕಾಗಲಿ, ಆಶ್ರಯ ಮನೆಗಳಿಗಾಗಲಿ ಕೊಡುತ್ತಿರುವ ನಿವೇಶನಗಳ ಬೆಲೆಯನ್ನು, ಜಮೀನು ಖರೀದಿ ಮಾಡುವ ಬೆಲೆಯನ್ನು ಹೆಚ್ಚಿಸಬೇಕು. ಸರ್ಕಾರ ನಿಗದಿಪಡಿಸಿರತಕ್ಕಂಥ ಬೆಲೆ ತುಂಬಾ ಕಡಿಮೆ ಇದೆ. ಇಷ್ಟು ಬೆಲೆ ಇದ್ದರೆ ಯಾರೂ ಕೂಡ ಜಮೀನನ್ನು ಕೊಡುವುದಿಲ್ಲ. ಆ ಕಾರಣ ಸರ್ಕಾರ ಆಶ್ರಯ ಮನೆಗಳಿಗೆ ಇರಬಹುದು, ಸ್ಮಶಾಣಕ್ಕೆ ಜಮೀನು ಇರಬಹುದು, ಹೆಚ್ಚಿನ ಬೆಲೆ ಕೊಡತಕ್ಕ ತೀರ್ಮಾನ ತೆಗೆದುಕೊಂಡಾಗ ಮಾತ್ರ ಇದರ

ಉಪಯೋಗವಾಗುತ್ತದೆ. ಮೊದಲ ಸಾರಿ ಈ ಅಧಿವೇಶನದಲ್ಲಿ ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ಕೃತಜ್ಞತೆಯನ್ನು ಸಲ್ಲಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಎಸ್.ಎ. ರಾಮಚಂದ್ರಪ್ಪ (ಜಗಳೂರು):** ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ಮೊದಲನೆಯದಾಗಿ ತಮಗೆ ಅಭಿನಂದನೆ ಸಲ್ಲಿಸುತ್ತೇನೆ. ನನ್ನ ಜಗಳೂರು ವಿಧಾನಸಭಾ ಕ್ಷೇತ್ರ ಅತೀ ಹಿಂದುಳಿದಂಥ ಬಹಳ ಬಡತನದಿಂದ ಬಳಲುತ್ತಿರುವ ಪ್ರದೇಶ. ನನ್ನ ಕ್ಷೇತ್ರದಲ್ಲಿ ಎಸ್.ಸಿ. ಮತ್ತು ಎಸ್.ಟಿ. ಜನಸಂಖ್ಯೆ ಜಾಸ್ತಿಯಾಗಿದೆ. ಸದಾ ಬರದಿಂದ ಬಳಲುತ್ತಿರುವ ಪ್ರದೇಶ ನನ್ನದು. ಸುಮಾರು 100 ವರ್ಷಗಳ ಇತಿಹಾಸದಲ್ಲಿ ಸುಮಾರು 70 ವರ್ಷ ಬರಗಾಲವನ್ನು ಅನುಭವಿಸಿದೆ. ಆದರೆ, ನನ್ನ ವಿಧಾನಸಭಾ ಕ್ಷೇತ್ರಕ್ಕೆ ಯಾವುದೇ ಮೂಲಭೂತ ಸೌಲಭ್ಯಗಳಿಲ್ಲ. ಕುಡಿಯುವ ನೀರಿಗಾಗಿಯೂ ನನ್ನ ಕ್ಷೇತ್ರ ಪರಿತಪಿಸುತ್ತಿದೆ. ನೀರು ಸಿಕ್ಕಿದರೂ ಸಹಾ ಅದರಿಂದ ವಂಚಿತವಾಗಿದೆ. ಅಂಥ ಪ್ರದೇಶವನ್ನು ಪ್ರಜ್ಞಾವಂತರಾದ ಡಾಃ ನಂಜುಂಡಪ್ಪನವರು ಅತೀ ಹಿಂದುಳಿದ ಪ್ರದೇಶವೆಂದು ಘೋಷಿಸಿದ್ದು ರಾಜ್ಯದಲ್ಲಿ ನನ್ನ ಕ್ಷೇತ್ರ ಹಿಂದುಳಿದ ಪ್ರದೇಶದಲ್ಲಿ ಎರಡನೆಯ ಸ್ಥಾನದಲ್ಲಿದೆ. ಆದರೆ, ಅಂಥ ಪ್ರದೇಶವನ್ನು ಹಿಂದುಳಿದ ಪ್ರದೇಶವೆಂದು ಸಾರಿದ್ದು ನೀರಾವರಿ ಆಶ್ರಿತ ಪ್ರದೇಶವಾದ ಚೆನ್ನಗಿರಿಯನ್ನು ಅತೀ ಹಿಂದುಳಿದ ಪ್ರದೇಶವೆಂದು ಸೇರಿಸಿದ್ದಾರೆ. ಆದ್ದರಿಂದ, ಸದಾ ಬರದಿಂದ ನರಳುತ್ತಿರುವ ನನ್ನ ಕ್ಷೇತ್ರಕ್ಕೆ ಮಾನ್ಯ ಮುಖ್ಯಮಂತ್ರಿಯವರಲ್ಲಿ ಕೇಳಿದ್ದೇನೆ. ಭದ್ರಾ ಮೇಲ್ದಂಡೆ ಯೋಜನಾ ಹೋರಾಟ ಸಮಿತಿಯು ಸುಮಾರು 142 ದಿವಸಗಳ ಉಪವಾಸ ಸತ್ಯಾಗ್ರಹವನ್ನು ಸಹಾ ಮಾಡಿದ್ದಾರೆ. ಆ ಪ್ರದೇಶದಲ್ಲಿ ಭದ್ರಾಮೇಲ್ದಂಡೆ ಯೋಜನೆಯಿಂದ ಸುಮಾರು 30 ಕಿಲೋಮೀಟರ್ ದೂರದಲ್ಲಿ ನಮಗೆ ನೀರು ಸಿಗತಕ್ಕ ವ್ಯವಸ್ಥೆ ಇದೆ. ಆದರೆ, ಸುಮಾರು 300 ಕಿಲೋಮೀಟರ್‌ವರೆಗೆ ಕೋಲಾರಕ್ಕೆ ಭದ್ರಾಮೇಲ್ದಂಡೆ ನೀರನ್ನು ತೆಗೆದುಕೊಂಡು ಹೋಗುತ್ತಿದ್ದಾರೆ. ಸದಾ ಬರಗಾಲದಿಂದ ಬಳಲುತ್ತಿರುವ ನನ್ನ ಪ್ರದೇಶಕ್ಕೆ ಭದ್ರಾಮೇಲ್ದಂಡೆ ನೀರು ಹರಿದರೆ ಖಂಡಿತವಾಗಿ ನಮ್ಮ ಜನರು,

ಮುಂದಿನ ಪೀಳಿಗೆ, ಈಗಿನ ಜನರ ಉದ್ಧಾರವಾಗುತ್ತಾರೆ. ಆದ್ದರಿಂದ ಭದ್ರಾಮೇಲ್ದಂಡೆ ನೀರನ್ನು ನಮ್ಮ ಜಗಳೂರಿಗೆ ಹರಿಸಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಮಾನ್ಯ ಕಂದಾಯ ಸಚಿವರ ಕ್ಷೇತ್ರವಾದ ಹರಪನಹಳ್ಳಿಯ ದಂಡಯಲ್ಲೇ ನಾವಿದ್ದೇವೆ. ಧಣಿಗಳು ನಮ್ಮ ಕಡೆ ಸ್ವಲ್ಪ ನೋಡಿದ್ದರೆ ನನ್ನ ಕ್ಷೇತ್ರವನ್ನು ಬರಗಾಲ ಪೀಡಿತ ಪ್ರದೇಶಕ್ಕೆ ಸೇರಿಸಬಹುದಾಗಿತ್ತು. ನನ್ನ ದುರಾದೃಷ್ಟ, ತಾವು ಅದನ್ನು ಘೋಷಣೆ ಮಾಡಿದಾಗ ನಾನು ಸರ್ಕಾರದಿಂದ ಕಳುಹಿಸಿದಂಥ ವಿದೇಶಿ ಪ್ರವಾಸದಲ್ಲಿದೆ. ಆಗ ಬರದಿಂದ ಇಲ್ಲಿ ಸಾಯುತ್ತಿದ್ದೇವೆ, ನಮ್ಮ ಶಾಸಕರು ಮಜಾ ಮಾಡಲು ವಿದೇಶಕ್ಕೆ ಹೋಗಿದ್ದಾರೆಂದು ಕೆಲವು ಪತ್ರಿಕೆಗಳು ಟೀಕೆ ಮಾಡಿ ಬರೆದಿದ್ದನ್ನು ಅನುಭವಿಸಿದ್ದೇನೆ. ಆದ್ದರಿಂದ, ಈಗಲೂ ಕಾಲ ಮಿಂಚಿಲ್ಲ, ಮುಂಗಾರು ಪ್ರಾರಂಭವಾದಾಗ ಬಿತ್ತಿ ಬೆಳೆದಂಥ ಸಂದರ್ಭದಲ್ಲಿ, ಕಾಳು ಆಗುವಂಥ ಸಮಯದಲ್ಲಿ ಮಳೆ ಇಲ್ಲದೆಯೇ ಧಾನ್ಯದ ಬೆಳೆ ಹಾಳಾಗಿದೆ. ನಮ್ಮ ಜಗಳೂರಿನ ಹಣೆಯಬರಹವೋ, ಪಾಪ ದೃಷ್ಟಿಯೋ, ಈಗ ನಿನ್ನೆ ಮೊನ್ನೆಯಿಂದ ಧಾರಾಕಾರವಾಗಿ ಮಳೆ ಬರುತ್ತಿದೆ. ಇದ್ದ ಎಲ್ಲ ಕೆರೆಗಳು ತುಂಬಿ ಕೋಡಿ ಹೊಡಿದು ಹರಿದಿದೆ. ಆದ್ದರಿಂದ ಈಗಲಾದರು ಕೆಲವೊಂದು ಕಾಮಗಾರಿಗಳು ದಕ್ಕಿದರೂ ಜನಸಾಮಾನ್ಯರಿಗೆ ಅನುಕೂಲವಾಗುತ್ತದೆ. ದಯಮಾಡಿ ಸಾಧ್ಯವಾದ ಮಟ್ಟಿಗೆ ಪ್ರಯತ್ನ ಮಾಡಿ ನನ್ನ ಪ್ರದೇಶವನ್ನು ಬರಗಾಲ ಪೀಡಿತ ಪ್ರದೇಶವೆಂದು ಘೋಷಣೆ ಮಾಡಬೇಕೆಂದು ಮಾನ್ಯ ಕಂದಾಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ. ನನ್ನ ಕಣ್ಣಲ್ಲಿ ನೀರು ಬರುತ್ತದೆ, ಅಂಥ ಪ್ರದೇಶ ನಮ್ಮದು. ಕುಡಿಯುವುದಕ್ಕೂ ನೀರು ಇಲ್ಲ, ಯಾವುದೇ ಮೂಲಭೂತ ಸೌಲಭ್ಯಗಳಿಲ್ಲ. ಡಾ॥ ನಂಜುಂಡಪ್ಪನವರ ವರಿದಯ ಪ್ರಕಾರ ಒಂದು ಪಾಲಿಟೆಕ್ನಿಕ್ ಕಾಲೇಜನ್ನು ಕೊಡಿಯೆಂದು ಮಾನ್ಯ ಸಚಿವರಾದ ಅರವಿಂದ ಲಿಂಬಾವಳಿಯವರಲ್ಲಿ ಕಳಿಕಳಿಯಿಂದ ಬೇಡಿಕೊಂಡೆ. ಹಿಂದುಳಿದ 22 ತಾಲ್ಲೂಕುಗಳಿಗೆ ಕೊಟ್ಟಿದ್ದಾರೆ. ಆದರೆ, ನನ್ನ ತಾಲ್ಲೂಕನ್ನು ಕಡೆಗಣಿಸಿದ್ದಾರೆ. ನಾನು ಹೊಟ್ಟೆ ಉರಿದು ಮಾತಾನಾಡುತ್ತಿದ್ದೇನೆ. ನಾನು ಅವರನ್ನು ವೈಯಕ್ತಿಕವಾಗಿ ಮೂರ್ನಾಕು ಸಲ ಇದರ ಬಗ್ಗೆ

ಬೇಡಿಕೊಂಡಿದ್ದೇನೆ. ಆದ್ದರಿಂದ ನನ್ನ ತಾಲ್ಲೂಕನ್ನು ಕಡೆಗಣಿಸದೆಯೇ ಈ ಸರ್ಕಾರ ನಡೆಸತಕ್ಕ ಎಲ್ಲಾ ಸಚಿವರುಗಳು ಮತ್ತು ತಾವುಗಳು ದಯಮಾಡಿ ಈ ಸರ್ಕಾರದಿಂದ ನನ್ನ ತಾಲ್ಲೂಕನ್ನು ಉದ್ಧಾರ ಮಾಡಿ. ತಮ್ಮೆಲ್ಲರ ದಯೆ ನನ್ನ ತಾಲ್ಲೂಕಿನ ಮೇಲಿರಲಿಯೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಕರಡಿ ಸಂಗಣ್ಣ (ಕೊಪ್ಪಳ):** ಮಾನ್ಯ ಅಧ್ಯಕ್ಷರೆ, ಬರದ ವಿಚಾರದಲ್ಲಿ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ಮೊದಲನೆಯದಾಗಿ ಅಭಿನಂದನೆಯನ್ನು ಹೇಳಲು ಬಯಸುತ್ತೇನೆ. ರಾಜ್ಯದಲ್ಲಿ 20 ಜಿಲ್ಲೆಗಳಲ್ಲಿ ಬರದ ಛಾಯೆಯನ್ನು ನೋಡುತ್ತಿದ್ದೇವೆ. 84 ತಾಲ್ಲೂಕುಗಳಲ್ಲಿ ಬರವಿದೆಯೆಂದು ಕಂದಾಯ ಸಚಿವರು ಘೋಷಣೆ ಸಹ ಮಾಡಿದ್ದಾರೆ. ನಮ್ಮ ರಾಜ್ಯದಲ್ಲಿ ಸುಮಾರು 72 ಲಕ್ಷ ಎಕರೆ ಬಿತ್ತನೆ ಪ್ರದೇಶವಿದೆ. ಅದರಲ್ಲಿ 53 ಲಕ್ಷ ಎಕರೆ ಮಾತ್ರ ಬಿತ್ತನೆಯಾಗಿದೆ. ಇನ್ನೂ 13 ಲಕ್ಷ ಎಕರೆ ಬಿತ್ತನೆಯಾಗಿಲ್ಲ. ಬಿತ್ತನೆಯಾದಂಥದ್ದೂ ಕೂಡ ಪ್ರಾರಂಭದ ಹಂತದಲ್ಲಿ ಮೇ, ಜೂನ್ ತಿಂಗಳಿನಲ್ಲಿ ಸಾಕಷ್ಟು ಮಳೆ ರಾಜ್ಯದಲ್ಲಿ ಆಯಿತು. ಆಗ ರೈತ ಅತ್ಯಂತ ಸಂತೋಷದಿಂದ ಈ ವರ್ಷ ಮಳೆ ಚೆನ್ನಾಗಿ ಆಗುತ್ತದೆ, ಬೀಜವನ್ನು ತರಬೇಕು, ಗೊಬ್ಬರ ಹಾಕಬೇಕು, ಮುಂದಿನ ದೈನಂದಿನ ಬದುಕಿಗೆ ಆರ್ಥಿಕ ಭದ್ರತೆಯನ್ನು ಗುರುತಿಸಿಕೊಳ್ಳಬೇಕೆಂದು ಬಹಳಷ್ಟು ಉತ್ಸಾಹದಿಂದ ಅವನಲ್ಲಿ ಇರತಕ್ಕ ಹಣವನ್ನು ಉಪಯೋಗ ಮಾಡಿಕೊಂಡ. ಆದರೆ ಏನಾಯಿತು, ಜುಲೈ ನಂತರ ಸುಮಾರು 6 ವಾರ ಈ ರಾಜ್ಯದಲ್ಲಿ ಮಳೆಯೇ ಆಗಲಿಲ್ಲ. ಆದ್ದರಿಂದ ಏನು ಬೆಳೆ ಮೊಳಕೆ ಹೊಡೆಯಿತು, ಬೆಳೆ ಬೆಳೆಯಬೇಕಾದಂಥ ಸಂದರ್ಭದಲ್ಲಿ ಅದು ಕುಂಠಿತವಾಯಿತು. ಆದ್ದರಿಂದ ಒಂದು ವರದಿಯ ಪ್ರಕಾರ ರಾಜ್ಯದಲ್ಲಿ ಅಂದಾಜು 2972 ಕೋಟಿ ಬೆಳೆ ಹಾನಿಯನ್ನು ಅನುಭವಿಸಬೇಕಾದ ವಾತಾವರಣ ನಿರ್ಮಾಣವಾಗಿದೆ. ಆ ಕಾರಣಕ್ಕಾಗಿ ರೈತ ಇವತ್ತು ಏನು ಬೆಳೆ ತೆಗೆಯಬೇಕೆಂದು ಸಂಪನ್ಮೂಲವನ್ನು ಅದರಲ್ಲಿ ಹಾಕಿದ್ದ ಇವತ್ತು ರೈತ ಸಂಪೂರ್ಣವಾಗಿ ಕುಸಿದಿದ್ದಾನೆ. ಇದರ ಬಗ್ಗೆ ಮಾನ್ಯ ಕಂದಾಯ ಮಂತ್ರಿಗಳು ಚಿಂತನೆ ಮಾಡುತ್ತಾರೆಂದು ನಾವೆಲ್ಲಾ ಆಶಯವನ್ನಿಟ್ಟುಕೊಂಡಿದ್ದೇವೆ. ಇವತ್ತು ರೈತನಿಗೇನು ಹಾನಿಯಾಗಿದೆ,

ಮುಂದಿನ ರಬಿ ಬೆಳೆಯನ್ನು ಬೆಳೆಯಬೇಕು, ನಮ್ಮ ರಾಜ್ಯದಲ್ಲಿ ಇರತಕ್ಕದ್ದೇ ಕರೀಫ್ ಬೆಳೆ. ಆದ್ದರಿಂದ ರೈತರ ನೆರವಿಗೆ ಸರ್ಕಾರ ಬರಬೇಕೆಂದು ವಿನಂತಿ ಮಾಡುತ್ತೇನೆ. ಮಾನ್ಯ ಕಂದಾಯ ಮಂತ್ರಿಗಳು ಒಂದು ಎಕರೆಗೆ ಕನಿಷ್ಠ 4 ಸಾವಿರ ರೂಪಾಯಿ ಪರಿಹಾರವನ್ನು ಘೋಷಣೆ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಆದ್ದರಿಂದ ರೈತರಿಗೆ ಸ್ವಲ್ಪಮಟ್ಟಿಗೆ ಆತ್ಮಸ್ಥೈರ್ಯ ಬರುತ್ತದೆ. ಇಲ್ಲದಿದ್ದರೆ ಅವನ ಬದುಕು ಹೇಗೆ ನಿರ್ಮಾಣವಾಗಬೇಕು? ಇವತ್ತು ಪರಿಸರಿ ನಮ್ಮ ವಿರುದ್ಧ ದಿಕ್ಕಿನಲ್ಲಿ ಹೊಗುತ್ತಿದೆ. ಅದಕ್ಕೆ ನಾವೆಲ್ಲರೂ ಜವಾಬ್ದಾರರು ಎಂದು ಭಾವಿಸಬೇಕಾಗುತ್ತದೆ. ಸುಮಾರು 60 ಪರ್ಸೆಂಟ್ ಇದ್ದ ಅರಣ್ಯ ಇವತ್ತು 10 ಪರ್ಸೆಂಟ್‌ಗೆ ಇಳಿದಿದೆಯೆಂದರೆ ನಾಚಿಕೆಗೇಡು ಎಂದು ಭಾವಿಸಬೇಕಾಗುತ್ತದೆ. ಆ ಕಾರಣಕ್ಕಾಗಿ ಸರ್ಕಾರದ ಮೇಲೆ ಒತ್ತಾಯ ಮಾಡುವುದೇನೆಂದರೆ, ಒಂದು ಬಿಲ್ಲನ್ನು ಮಾನ್ಯ ಕಂದಾಯ ಮಂತ್ರಿಗಳು ಇಂಟ್ರಡ್ಯೂಸ್ ಮಾಡಬೇಕಾಗುತ್ತದೆ. ಯಾರು ನಾಲ್ಕು ಎಕರೆ ಜಮೀನನ್ನು ಹೊಂದಿರುವ ರೈತರ್ಯಾರಿದ್ದಾರೆ ಅವರಿಗೆ ಕಡ್ಡಾಯವಾಗಿ ಇಪ್ಪತ್ತು ಗುಂಟೆ ಜಮೀನಿನಲ್ಲಿ ಯಾವುದಾದರೂ ಮರಗಳನ್ನು ಬೆಳೆಸಬೇಕು ಎಂದು ಬಿಲ್ಲನ್ನು ತರಬೇಕು. ಅದಕ್ಕೆ ಸರ್ಕಾರದಿಂದ ಒಂದು support ನ್ನು input ನ್ನು ಸರ್ಕಾರದಿಂದ ಕೊಡಬೇಕಾಗುತ್ತದೆ. ನೀನು 20 ಗುಂಟೆ ಜಮೀನಿನಲ್ಲಿ ಮರಗಳನ್ನು ಬೆಳೆಸಿದರೆ ನಾವು ಎಷ್ಟು ಹಣವನ್ನು ಸಬ್ಸಿಡಿ ಮೂಲಕ ಕೊಡುತ್ತೇವೆಂಬ ಕಾರ್ಯಕ್ರಮವನ್ನು ಜಾರಿ ಮಾಡಬೇಕು. ಈ ಹಿಂದೆ ಗ್ರಾಮೀಣ ಪ್ರದೇಶಗಳಲ್ಲಿ ನೆಡುತೋಪು, ಗುಂಡುತೋಪು, ಕೆರೆಕಟ್ಟೆಗಳನ್ನು ನೋಡುತ್ತಿದ್ದೆವು. ಅವೆಲ್ಲವೂ ಇವತ್ತು ಸಂಪೂರ್ಣವಾಗಿ ನಾಶವಾಗಿದೆ. ಮಾನವನ ಸ್ವಾರ್ಥದಿಂದಾಗಿ, ನಾನು ಬದುಕಬೇಕೆಂದು ನಿಸರ್ಗವನ್ನು ಹಾಳು ಮಾಡತಕ್ಕ ಭಾವನೆಯಿಂದ ನಾವು ಇವತ್ತು ಹೊರಟಿದ್ದೇವಲ್ಲಾ ಅದಕ್ಕೆ ಕಡಿವಾಣವನ್ನು ಜವಾಬ್ದಾರಿಯುತವಾದ ಯಾವುದೇ ಸರ್ಕಾರ ಇರಬಹುದು ಮಾಡಬೇಕಾಗುತ್ತದೆ. ಜನರು ನಿಮಗೆ ಆಶೀರ್ವಾದವನ್ನು ಮಾಡಿದ್ದಾರೆ ತಮಗೆ ಇರತಕ್ಕ ಅವಧಿಯಲ್ಲಿ ಒಳ್ಳೊಳ್ಳೆಯ ಕಾರ್ಯಕ್ರಮಗಳನ್ನು, ರೈತರ ಪರವಾಗಿರತಕ್ಕ ಯೋಜನೆಗಳನ್ನು ಪ್ರಾರಂಭ ಮಾಡಿದರೆ ನಿಮ್ಮ ಹೆಸರು

ಇರುತ್ತದೆ. ಮಾನ್ಯ ವಿಶ್ವೇಶ್ವರಯ್ಯರಂಥ ಪ್ರಸಿದ್ಧ ಇಂಜಿನಿಯರ್ ಬಗ್ಗೆ ನಾವು ಇಂದು ಏನು ಮಾತನಾಡುತ್ತೇವೆ ಆ ರೀತಿ ಈ ಸರ್ಕಾರಕ್ಕೆ ಹೆಸರು ಬರಬೇಕಾದರೆ ಇಂಥ ಕಾರ್ಯಕ್ರಮಗಳಿಗೆ ಒತ್ತುಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳಲು ಬಯಸುತ್ತೇನೆ. ಕೃಷಿಗೆ ಸಂಬಂಧಪಟ್ಟ ಉಪಕಸುಬುಗಳೆಂದು ನಾವೇನು ಕರೆಯುತ್ತೇವೆ, ಇವತ್ತು ರೈತರು ಕೇವಲ ಕೃಷಿ ಕಸುಬನ್ನು ಮಾಡಿ ಬದುಕುವುದು ಕಷ್ಟವಾಗಿದೆ. ಆದ್ದರಿಂದ, ಗ್ರಾಮೀಣ ಪ್ರದೇಶದಲ್ಲಿರುವ ಯುವಕರಿಗೆ ಉದ್ಯೋಗವನ್ನು ಕಲ್ಪಿಸುವಂಥ ಹೈನುಗಾರಿಕೆ, ಕುರಿ,ಕೋಳಿ, ಜೇನು ಸಾಕಾಣಿಕೆ ಇರಬಹುದು, ಇವತ್ತು ಏನು ಯುವಕರಿದ್ದಾರೆ ಅವರ ಸಭೆಗಳನ್ನು ಮಾಡಿ ಇಷ್ಟೊಂದು ಯುವಕರಿಗೆ ಉದ್ಯೋಗದ ಭರವಸೆ ಕೊಡುತ್ತೇವೆ ಎಂಬ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

**5–30 PM**

**ಶ್ರೀ ಕರಡಿ ಅಮರಪ್ಪ ಸಂಗಣ್ಣ (ಮುಂದು):** ಇನ್ನು ಕೊಪ್ಪಳ ಜಿಲ್ಲೆ ಬಗ್ಗೆ ಮಾತನಾಡುವುದಾದರೆ, ಗಂಗಾವತಿ ತಾಲ್ಲೂಕಿನಲ್ಲಿ ಮೂರು ಹೋಬಳಿಗಳಲ್ಲಿ ನೀರಾವರಿ ಇದೆ. ಅಲ್ಲೂ ಕೂಡ ಒಂದು ಹೋಬಳಿ ಇವತ್ತು ಒಣ ಪ್ರದೇಶದ ವ್ಯಾಪ್ತಿಗೆ ಬರುತ್ತದೆ. ಕೊಪ್ಪಳದಲ್ಲಿ ಒಂದು ಹೋಬಳಿಯಲ್ಲಿ ನೀರಾವರಿ ಇದೆ, ಮೂರು ಹೋಬಳಿ ಒಣ ಪ್ರದೇಶದಲ್ಲಿ ಬರುತ್ತವೆ. ಯಲಬುರ್ಗಾ ಸಂಪೂರ್ಣವಾಗಿ ಒಣ ಪ್ರದೇಶದಲ್ಲಿ ಬರುತ್ತದೆ. ಕುಷ್ಟಗಿ ಸಂಪೂರ್ಣ ಒಣ ಪ್ರದೇಶದಲ್ಲಿ ಬರುತ್ತದೆ. ಕನಕಗಿರಿ ಕೂಡ part ಇವತ್ತು ಒಣ ಪ್ರದೇಶವಿದೆ. ಮಾನ್ಯ ಕಾರ್‌ಜೋಳ್‌ರವರಲ್ಲಿ ನಾನು ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಸದನದಲ್ಲಿ ಈಗ ಮಾನ್ಯ ನೀರಾವರಿ ಮಂತ್ರಿಗಳಿಲ್ಲ. ಮಾನ್ಯ ಸಣ್ಣ ನೀರಾವರಿ ಮಂತ್ರಿಗಳಾದ ತಾವು ಇದ್ದೀರಿ. ತಮಗೊಂದು concept ಇದೆ. ಮಾನ್ಯ ಹೆಗಡೆಯವರ ಕಾಲದಲ್ಲಿ ಬೆಳೆದಂತಹ ಒಬ್ಬ ವ್ಯಕ್ತಿ ತಾವಾಗಿದ್ದೀರಿ. ಆ ಕಾರಣಕ್ಕಾಗಿ ನಾನು ತಮ್ಮಲ್ಲಿ ಒತ್ತಾಯ ಮಾಡುವುದೇನೆಂದರೆ, ನಮಗೆ ಇರತಕ್ಕಂಥ ಕೃಷ್ಣಾ ನದಿ ನೀರಿನ ಪಾಲನ್ನು

ಅಂದರೆ ಇವತ್ತು 'ಬಿ' ಸ್ಕೀಮ್‌ನಲ್ಲಿ ಇರತಕ್ಕಂಥ 11 ಟಿಎಂಸಿ ನೀರನ್ನು ನಮ್ಮ ಕೊಪ್ಪಳ ಜಿಲ್ಲೆಗೆ ತರತಕ್ಕಂಥ ಕೆಲಸ ಮಾಡಬೇಕಾಗಿದೆ. ಇವತ್ತು ಆ ಬಗ್ಗೆ ನೀವು ಹೇಳುತ್ತೀರಿ. ಆದರೆ ಹಿರಿಯ ಅಧಿಕಾರಿಗಳನ್ನು ಸಂಪರ್ಕ ಮಾಡಿದರೆ, ಕಾನೂನು ತೊಡಕಿದೆ, ಅದು ಇನ್ನೂ ಕೇಂದ್ರದಿಂದ award ಆಗಬೇಕಾಗಿದೆ ಎನ್ನುತ್ತಾರೆ. ಆದರೆ ಬೇರೆ ಬೇರೆ ರಾಜ್ಯಗಳ ಸ್ಥಿತಿಯನ್ನು, ವಾಸ್ತವಾಂಶವನ್ನು ನೋಡಿದಾಗ, ನಾವೆಲ್ಲಾ ನಾಚಿಕೆ ಪಡಬೇಕಾಗಿದೆ. ನಮ್ಮ ಹಕ್ಕಿಗೋಸ್ಕರ ನಾವು ಏನೂ ಕಾರ್ಯಕ್ರಮಗಳನ್ನು ರೂಪಿಸುತ್ತಿಲ್ಲ. ತಾಂತ್ರಿಕ ಕಾರಣಗಳನ್ನು ಹೇಳುತ್ತಾ ಮುಂದೂಡುತ್ತಿದ್ದೇವೆ. ನಮ್ಮ ಮುಂದಿನ ಭವಿಷ್ಯಕ್ಕೆ ಮತ್ತು ಜನಾಂಗಕ್ಕೆ ಅನ್ಯಾಯವನ್ನು ಮಾಡುತ್ತಿದ್ದೇವೆ ಎನ್ನುವುದನ್ನೂ ಕೂಡ ಇವತ್ತು ಜ್ಞಾಪಿಸಿಕೊಳ್ಳಬೇಕಾಗುತ್ತದೆ. ನೀವು ಕಾರ್ಯಕ್ರಮಗಳಿಗೆ ಚಾಲನೆಯನ್ನು ಕೊಡಿ. ಯಾವಾಗ ಸರ್ಕಾರದಿಂದ clearance ಬರುತ್ತದೋ, ಆಗ ಅದರ ಲಾಭವನ್ನು ಪಡೆದುಕೊಳ್ಳಲಿಕ್ಕೆ ಸಾಧ್ಯವಿದೆ. ಕೊಪ್ಪಳ ಜಿಲ್ಲೆ ಇವತ್ತು ಸಂಪೂರ್ಣವಾಗಿ ಬರಗಾಲದ ವ್ಯಾಪ್ತಿಯಲ್ಲಿದೆ. ಇದು ತಮಗೆ ಗೊತ್ತಿದೆ. ತುಂಗಭದ್ರಾ ನದಿ ನೀರು ಇವತ್ತು ಯಥೇಚ್ಛವಾಗಿ ಆಂಧ್ರ ಪ್ರದೇಶಕ್ಕೆ ಹೋಗುತ್ತಿದೆ. ಅದಕ್ಕಾಗಿ ನಾವು ಸಿಂಗಟಲೂರು ಯೋಜನೆ ಜಾರಿಗೊಳಿಸಿ ಎಂದು ಕೇಳುತ್ತಿದ್ದೇವೆ. ನಾನು ಮಾನ್ಯ ಕಂದಾಯ ಸಚಿವರಾದ ಕರುಣಾಕರರೆಡ್ಡಿಯವರಲ್ಲಿ ಕಳಕಳಿಯ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಸಿಂಗಟಲೂರು rehabilitation committee ಇವತ್ತು ರಚನೆಯಾಗಿದೆಯೋ, ಇಲ್ಲವೋ ಎಂಬುದನ್ನು ಮಾನ್ಯ ಮಂತ್ರಿಗಳಾಗಿ ತಾವು ನೋಡಬೇಕಾಗಿದೆ. ತಾವು ಅಲ್ಲಿ ಸಭೆ ಕರೆದು ಮುಳುಗಡೆ ಆಗತಕ್ಕಂಥ ಪ್ರದೇಶಕ್ಕೆ ಅನುದಾನವನ್ನು ಕೊಟ್ಟರೆ ಅನುಕೂಲವಾಗುತ್ತದೆ. ಈಗ ಕ್ರೇಸ್ಟ್‌ಗೇಟ್ ಅನ್ನು ನಿರ್ಮಾಣ ಮಾಡಬೇಕು. ಕೆಲಸ ಮುಗಿಯುವ ಹಂತದಲ್ಲಿ ಒಂದು ಕಡೆ ಬದಂಡೆ ಕೆನಾಲ್‌ಗೆ ನೀರನ್ನು ಕೊಡತಕ್ಕಂಥ ವ್ಯವಸ್ಥೆ ಇದ್ದರೂ ಕೂಡ ಸರ್ಕಾರ ಅದಕ್ಕೆ ಒತ್ತು ಕೊಡತಕ್ಕಂಥ ಕೆಲಸ ಮಾಡುತ್ತಿಲ್ಲ. ನಮ್ಮ ಸಿಂಗಟಲೂರು ಯೋಜನೆಯಿಂದ ಗದಗ್ ಮತ್ತು ಕೊಪ್ಪಳ ಜಿಲ್ಲೆಗೆ ಇವತ್ತು ನೀರಾವರಿಯನ್ನು ಕಲ್ಪಿಸತಕ್ಕಂಥ ಅವಕಾಶವಿದೆ. ಅದಕ್ಕೆ ನೀರು ಲಭ್ಯವಿದೆ. ಸುಮಾರು

200 ಟಿಎಂಸಿ ನೀರು ಇವತ್ತು ಆಂಧ್ರ ಪ್ರದೇಶಕ್ಕೆ ಹರಿದು ಹೋಗುತ್ತಿದೆ. ಆ ಕಾರಣಕ್ಕಾಗಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಇವತ್ತು ಈ ರಾಜ್ಯದ ಜನರ ಆರ್ಥಿಕ ಭದ್ರತೆಗೆ ಮತ್ತು ಸ್ವಾವಲಂಬಿ ಬದುಕಿಗೆ ನೀವೇನಾದರೂ ಒತ್ತು ಕೊಡಬೇಕಾದರೆ, ಅದಕ್ಕೆ ಹಣಕಾಸಿನ ನೆರವನ್ನು ಕೊಡತಕ್ಕಂಥದ್ದು ಕೂಡ ಆಗಬೇಕೆಂದು ನಾನು ಒತ್ತಾಯವನ್ನು ಮಾಡುತ್ತೇನೆ. ಇಸ್ರೇಲ್ ಟೆಕ್ನಾಲಜಿ ಬಗ್ಗೆ ಕೂಡ ತಾವು ಆಲೋಚನೆಯನ್ನು ಮಾಡಬೇಕಾಗುತ್ತದೆ. ಇಷ್ಟೊಂದು ನಮ್ಮಲ್ಲಿ ನೀರಿದ್ದರೂ ಕೂಡ ಅದರ ಸದುಪಯೋಗವಾಗುತ್ತಿಲ್ಲ. Drip irrigation ಇರಬಹುದು, sprinkler irrigation ಇರಬಹುದು, ಅದಕ್ಕೆ ತಾವು ಆದ್ಯತೆಯನ್ನು ಕೊಡಿ. ಇವತ್ತು ಲಭ್ಯವಿರುವಂತಹ ನೀರಿನಲ್ಲಿ ಕರ್ನಾಟಕ ರಾಜ್ಯದ ಎಲ್ಲಾ ಪ್ರದೇಶವನ್ನು ನೀರಾವರಿಗೆ ಒಳಪಡಿಸಲಿಕ್ಕೆ ಅವಕಾಶವಿದೆ. ಆ ಅವಕಾಶವನ್ನು ಇವತ್ತು ಬಳಸಿಕೊಳ್ಳಬೇಕಾದರೆ, ನೀವು ಕ್ರಿಯಾಶೀಲರಾಗಬೇಕಾಗುತ್ತದೆ, ಆಸಕ್ತಿಯನ್ನು ವಹಿಸಬೇಕಾಗುತ್ತದೆ. ಆ ಕೆಲಸಗಳನ್ನು ನೀವು ಮಾಡಬೇಕೆಂದು ಮಾನ್ಯ ಕಾರ್‌ಜೋಳ್‌ರವರಲ್ಲಿ ಇವತ್ತು ಒತ್ತಾಯವನ್ನು ಮಾಡುತ್ತೇನೆ. ಇವತ್ತು ಅನೇಕ ಬೇರೆ ಬೇರೆ ಕುಡಿಯುವ ನೀರಿನ ಯೋಜನೆ ವಿಚಾರವನ್ನು ಎಲ್ಲರೂ ಕೂಡ ಮೊತನಾಡಿದ್ದಾರೆ. ರಾಜ್ಯದಲ್ಲಿ ಅಂತರ್ಜಲ ಹೆಚ್ಚಿಸುವಲ್ಲಿ ಸಣ್ಣ ನೀರಾವರಿ ಇಲಾಖೆ ಬಹಳ ದೊಡ್ಡ ಪಾತ್ರವನ್ನು ವಹಿಸಬೇಕಾಗುತ್ತದೆ. 10 ಲಕ್ಷ ಹೆಕ್ಟೇರ್‌ಗಳಷ್ಟು ನೀರಾವರಿಯನ್ನು ಈ ರಾಜ್ಯದಲ್ಲಿ ಮಾಡಲಿಕ್ಕೆ ಅವಕಾಶವಿದೆ, ಗುರಿ ಇದೆ. ಹಿಂದೆ ಸಮೀಕ್ಷೆ ಮಾಡಿದ ವರದಿ ಇದೆ. ಆದರೆ ಅದು ಆಗುತ್ತಿಲ್ಲ. ನೀವು ಇವತ್ತು ಮಾನ್ಯ ಮುಖ್ಯಮಂತ್ರಿಗಳಲ್ಲಿ ಒತ್ತಾಯ ಮಾಡಬೇಕಾಗುತ್ತದೆ. ನಮ್ಮ ಇಲಾಖೆಗೆ ಇಷ್ಟು ಹಣ ಬೇಕಾಗುತ್ತದೆ, ಸಣ್ಣ ನೀರಾವರಿಯಿಂದ ನಾವು ಇಷ್ಟನ್ನು ನೀರಾವರಿ ಮಾಡಬೇಕಾಗುತ್ತದೆ ಎಂಬ ಒತ್ತಾಯವನ್ನು ಮಾಡಿ, ನೀವು ಹಣ ಪಡೆದುಕೊಂಡರೆ ಅನುಕೂಲವಾಗುತ್ತದೆ. ಇವತ್ತು ರಾಜ್ಯದಲ್ಲಿರುವ 36 ಸಾವಿರ ಕೆರೆಗಳಿಗೆ ಪುನರ್ಜೀವವನ್ನು ಕೊಡತಕ್ಕಂಥ ಕೆಲಸವನ್ನು ನೀವು ಮಾಡಬೇಕಾಗುತ್ತದೆ. ವಿದ್ಯುತ್ತಿನ ಸಮಸ್ಯೆ ಎಂಬುದು ಹೇಳತೀರದಂತಹ ಸಮಸ್ಯೆಯಾಗಿದೆ. ಸಾಕಷ್ಟು ಸಾರಿ ನಾವು ವಿದ್ಯುತ್ತಿನ

ಸಮಸ್ಯೆ ಬಗ್ಗೆ ವಿಧಾನಸೌಧದ ಒಳಗಡೆ ಮಾತನಾಡಿದ್ದೇವೆ. ಅಧ್ಯಕ್ಷರ ಮೂಲಕ ಎಲ್ಲಾ ಕೇಳಿಕೊಂಡಿದ್ದೇವೆ. ಇವರಿಗೆ ಒಂದು concept ಇಲ್ಲ. ಏಕೆ ಟಿಸಿ fail ಆಗುತ್ತವೆ? ಅದನ್ನು detail survey ಮಾಡಿ. Over load ಇದೆ, ಆ ಕಾರಣಕ್ಕಾಗಿ ನೀವು ಹೆಚ್ಚು ಟಿಸಿಗಳನ್ನು ಹಾಕಬೇಕಾಗುತ್ತದೆ. ಆ ಬಗ್ಗೆ ಅನೇಕ ಸಲ ಸರ್ಕಾರವನ್ನು ಕೇಳಿಕೊಂಡರೂ ಕೂಡ, ಅದರ ಬಗ್ಗೆ ಇವತ್ತು action ಆಗುತ್ತಿಲ್ಲ. ಆ ಕೆಲಸ ಬೇಗ ಆಗಬೇಕಾಗಿದೆ. ಮಾನ್ಯ ಉದಾಸಿಯಂತಹ ಹಿರಿಯರು ಮಂತ್ರಿಗಳಾಗಿದ್ದಾರೆ. ಕೃಷಿ ಮತ್ತು ಅಲ್ಲಿಯ ಗ್ರಾಮೀಣ ಭಾಗದ ಬದುಕಿನ ಹಿನ್ನೆಲೆಯಲ್ಲಿ ಬಂದಿರತಕ್ಕಂಥವರಾದ ತಾವು ಇಂತಹ concept ಅನ್ನು ಜಾರಿಗೊಳಿಸಬೇಕಾಗುತ್ತದೆ. ಆ ದಿಸೆಯಲ್ಲಿ ಇವತ್ತು ಕೃಷಿಯ ಬಗ್ಗೆ ನೀವು ಕೆಲಸಗಳನ್ನು ಮಾಡಬೇಕೆಂದು ಕೇಳುತ್ತೇನೆ. ಇನ್ನು ಇವತ್ತು ಸದ್ಯದ ಪರಿಸ್ಥಿತಿಯಲ್ಲಿ ಹಿಂಗಾರಿಗೆ ಏನು ರೈತ ಹೋಗುತ್ತಿದ್ದಾನೆ, ಅವನಿಗೆ ಇವತ್ತು ಬೀಜವನ್ನು ನೀವು free ಆಗಿ ಕೊಡಬೇಕಾಗಿದೆ. ಗೊಬ್ಬರವನ್ನೂ ಕೂಡ ಇವತ್ತು freeಯಾಗಿ ಕೊಡಬೇಕಾಗಿದೆ. ಈಗಾಗಲೇ ನಾನು ಹೇಳಿದಂತೆ ಕಡಿಮೆ ಎಂದರೂ ಹೆಕ್ಟೇರ್‌ಗೆ 4 ಸಾವಿರ ರೂಪಾಯಿಗಳನ್ನು ಬರ ಪರಿಹಾರವಾಗಿ ಕೊಡಬೇಕಾಗಿದೆ. ಇವತ್ತು ರೈತ ಹಿಂಗಾರಿಗೆ ಹೋಗಬೇಕಾದರೆ ಅವನಿಗೆ ಮೂಲಭೂತ ಸೌಲಭ್ಯಗಳನ್ನು ನೀವು ಕಲ್ಪಿಸಿಕೊಡಬೆಕಾಗಿದೆ. ಆ ಕಾರಣಕ್ಕಾಗಿ ಇವತ್ತು ಮೊದಲು ಗೊಬ್ಬರ ಮತ್ತು ಬೀಜವನ್ನು free ಯಾಗಿ ಕೊಡುತ್ತೇವೆಂದು ಘೋಷಣೆ ಮಾಡಬೇಕು. ಏಕೆಂದರೆ, ಮುಂಗಾರು fail ಆಗಿದೆ, ರೈತ ಅದರಲ್ಲಿ ಕೈ ಸುಟ್ಟುಕೊಂಡಿದ್ದಾನೆ. ಇನ್ನು ಮುಂದಿನ ಬೆಳೆಯಿಂದ ಆಹಾರ ಉತ್ಪಾದನೆ ಆಗುವುದಕ್ಕೆ ಚಾಲನೆಯನ್ನು ಕೊಡಬೆಕೆಂದು ಕಳಕಳಿಯನ್ನು ಮನವಿ ಮಾಡುತ್ತೇನೆ. ಅದಕ್ಕಾಗಿ ಸರ್ಕಾರದವರು ಉಚಿತ ಗೊಬ್ಬರ ಮತ್ತು ಬೀಜವನ್ನು ಕೊಡುವ ಬಗ್ಗೆ ಘೋಷನೆಯನ್ನು ಮಾಡಬೇಕೆಂದು ಒತ್ತಾಯಿಸುತ್ತೇನೆ. ಇವತ್ತು ರೈತರು ಸರಣಿ ಆತ್ಮಹತ್ಯೆಗಳಾಗುತ್ತಿರುವುದನ್ನು ನಾವೆಲ್ಲರೂ ನೋಡಿದ್ದೇವೆ. ಆ ಸರಣಿ ಆತ್ಮಹತ್ಯೆ ನಿಲ್ಲಬೇಕಾದರೆ, ವೈಜ್ಞಾನಿಕ ವರದಿಯ ಆಧಾರದ ಮೇಲೆ ಕೃಷಿಯ ಜೊತೆ ಅದರ ಉಪ ಕಸುಬುಗಳಿಗೆ ನೀವು ಅವಕಾಶವನ್ನು ಕೊಡಬೆಕಾಗುತ್ತದೆ.

ಹಾಗಾದಾಗ ಮಾತ್ರ ಆತ್ಮಹತ್ಯೆಗಳು ನಿಲ್ಲತಕ್ಕದ್ದು ಆಗುತ್ತದೆ. ರೈತರ ಆತ್ಮಹತ್ಯೆ ನಿವಾರಣೆಗಾಗಿ ಕೇಂದ್ರದವರು ಕರ್ನಾಟಕ ರಾಜ್ಯದ ಆರು ಜಿಲ್ಲೆಗಳಲ್ಲಿ ವಿದರ್ಭ ಮಾದರಿ ಪ್ಯಾಕೇಜ್ ಘೋಷಣೆ ಮಾಡಿದ್ದಾರೆ. ಅದನ್ನು ಇಡೀ ರಾಜ್ಯಕ್ಕೆ ವಿಸ್ತರಿಸಬೇಕು. ಕೇಂದ್ರದವರೂ ಕೂಡ ಅದಕ್ಕೆ ಸಹಕಾರವನ್ನು ಕೊಡಬೇಕು. ಇನ್ನು ಬೆಳೆ ವಿಮೆ ಬಗ್ಗೆ ಹೇಳುವುದಾದರೆ, ಅದರ ಬಗ್ಗೆ ಎಲ್ಲರೂ ಕೂಡ ಮಾತನಾಡಿದ್ದಾರೆ. ಅದರ ಬಗ್ಗೆ ಇನ್ನಷ್ಟು ಚರ್ಚೆ ಆಗಬೇಕಾಗಿದೆ. ಅದರ ಬಗ್ಗೆ ಗೊಂದಲವಿದೆ. ಯಾವ ತಹರ ವಿಮೆ ಆಗುತ್ತದೋ ಎನ್ನುವುದು ಗೊತ್ತಾಗುತ್ತಿಲ್ಲ. ಈಗ ಹಳ್ಳಿ ಮಟ್ಟಕ್ಕೆ ತಂದರೂ ಕೂಡ ಅವರು ಐದು ವರ್ಷಗಳ assessment ನೋಡುತ್ತಾರೆ. ಅದರ ಆಧಾರದ ಮೇಲೆ present ಇಳುವರಿ ನೋಡಿದರೆ, ಐದು ವರ್ಷಗಳಲ್ಲಿ ಹೆಚ್ಚು ಬೆಳೆ ಬಂದಿದ್ದರೆ ಅದಕ್ಕೆ ಏನೂ ಸಿಗುವುದಿಲ್ಲ. ಅದಕ್ಕಾಗಿ ಇವೆಲ್ಲವನ್ನೂ ಸರಳೀಕರಣಗೊಳಿಸಬೇಕಾಗುತ್ತದೆ. ಮಾನ್ಯ ಉದಾಸಿಯವರು 42 ಕೋಟಿ ರೂ.ಗಳನ್ನು ಹೇಗೆ ತೆಗೆದುಕೊಂಡಿದ್ದಾರೆ ಎನ್ನುವ ಬಗ್ಗೆ ನಾವು ವಿಮರ್ಶೆ ಮಾಡಿದೆವು. ಈಗ non-borrower and borrower ಬಗ್ಗೆ ಉತ್ತರದಲ್ಲಿ ಹೇಳಿದರು. ಆ awareness ಕೂಡ ಇವತ್ತು ರೈತರಲ್ಲಿ ತರಬೇಕಾಗಿದೆ. ನನಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟಂತಹ ಅಧ್ಯಕ್ಷರಿಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಬಿ.ಸಿ.ಪಾಟೀಲ್ (ಹಿರೇಕೆರೂರು):** ಮಾನ್ಯ ಅಧ್ಯಕ್ಷರೆ, ಈ ಮುಂದುವರೆದ ಅಧಿವೇಶನದಲ್ಲಿ ಈ ಬರ ಪರಿಸ್ಥಿತಿ ಬಗ್ಗೆ ಚರ್ಚೆ ಮಾಡಲಿಕ್ಕೆ ನನಗೆ ಅವಕಾಶ ಕೊಟ್ಟಿದ್ದಾಗಿ ತಮಗೆ ವಂದಿಸುತ್ತೇನೆ. 'ಸರ್ವಜ್ಞನೆಂಬುವನು ಗರ್ವದಿಂದಿ ಆದವನೇ' ಸರ್ವಜ್ಞ ಸರ್ವರಿಂದ ಒಂದೊಂದು ಪದವ ಕಲಿತು ವಿದ್ಯೆಯ ಪರ್ವತವೇ ಆದ. ನಾನು ಏಕೆ ಈ ಮಾತನ್ನು ಹೇಳುತ್ತೇನೆ ಎಂದರೆ, ನಾನು ಸರ್ವಜ್ಞನು ಹುಟ್ಟಿದ ತಾಲ್ಲೂಕಿನಿಂದ ಬಂದವನು, ಸರ್ವಜ್ಞನ ನಾಡಿನಿಂದ ಬಂದವನು. ಮೊನ್ನೆ ಕರ್ನಾಟಕ ಸರ್ಕಾರದ ಮುಖ್ಯಮಂತ್ರಿಗಳು ತಿರುವಳ್ಳವರ್ ಮೂರ್ತಿಯನ್ನು ಬೆಂಗಳೂರಿನಲ್ಲಿ ಸ್ಥಾಪನೆ ಮಾಡಿ, ತಮಿಳುನಾಡಿನಲ್ಲಿ ಸರ್ವಜ್ಞನ ಮೂರ್ತಿಯನ್ನು ಸ್ಥಾಪನೆ

ಮಾಡಿದರು. ಇದು ಬಹಳ ಸಂತೋಷದ ವಿಷಯ. ಆದರೆ ಇಲ್ಲಿ ನನಗೆ ಒಂದು ಸಂಶಯವಿವೆ. ಸರ್ವಜ್ಞ ಹುಟ್ಟಿದ ಊರಿನಲ್ಲೇ ಅನಾಥನಾಗಿ ಬಿದ್ದಿದ್ದಾನೆ. 2006–07ನೇ ಇಸವಿಯಲ್ಲಿ ಮಾನ್ಯ ಯಡಿಯೂರಪ್ಪನವರು ಉಪ ಮುಖ್ಯಮಂತ್ರಿಗಳಾಗಿದ್ದಾಗ, ಹಾವೇರಿ ಜಿಲ್ಲಾ ಉತ್ಸವಕ್ಕೆ ಬಂದಾಗ ಸರ್ವಜ್ಞನ ಪ್ರಾಧಿಕಾರವನ್ನು ಮಾಡುತ್ತೇವೆಂದು ಹೇಳಿ ಬಂದರು. ಇದು ಮಾನ್ಯ ಉದಾಸಿಯವರಿಗೆ ಗೊತ್ತಿದೆ. ಆದರೆ ಇದುವರೆಗೂ ಸರ್ವಜ್ಞನ ಪ್ರಾಧಿಕಾರ ಆಗಿಲ್ಲ. ಸರ್ವಜ್ಞನ ಬಗ್ಗೆ ಅಧ್ಯಯನವಾಗಿಲ್ಲ.

**ಶ್ರೀ ನೆಹರೂ ಓಲೇಕಾರ:** ಬರದ ಬಗ್ಗೆ ಚರ್ಚೆ ಮಾಡಿ ಎಂದರೆ ಬೇರೆ ವಿಷಯವನ್ನು ಹೇಳುತ್ತಿದ್ದೀರಲ್ಲಾ?

**ಶ್ರೀ ಬಿ.ಸಿ. ಪಾಟೀಲ್:** ಅದರ ಬಗ್ಗೆ ಬರುತ್ತೇನೆ ಇರಿ.

**(ಗೊಂದಲ)**

**ಶ್ರೀ ಬಿ.ಸಿ. ಪಾಟೀಲ್:** ನಾನು ಯೀಲ್ಡ್ ಆಗಿಲ್ಲ. ದಯವಿಟ್ಟು ಕುಳಿತುಕೊಳ್ಳಿ.

**(ಗೊಂದಲ)**

**ಅಧ್ಯಕ್ಷರು:** ಯಾವ ಶಾಸಕರು ಯವುದನ್ನು ಚರ್ಚೆ ಮಾಡಬೇಕು, ಯಾವುದನ್ನು ಚರ್ಚೆ ಮಾಡಬಾರದು ಎಂಬುದನ್ನು ಹೇಳಿಯೇ ಚರ್ಚೆಗೆ ತೆಗೆದುಕೊಂಡಿದ್ದೇನೆ. ನೀವು ಅದನ್ನು ಹೇಳಿದರಲ್ಲಾ, ಸಾಕು ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಬಿ.ಸಿ. ಪಾಟೀಲ್:** ಸರ್ವಜ್ಞ ಬರದ ಬಗ್ಗೆ ಹೇಳಿದ್ದಾನೆ. ಅದನ್ನೂ ಕೂಡ ನಾನು ಹೇಳುತ್ತೇನೆ. ಸರ್ವಜ್ಞ ರೈತರ ಬಗ್ಗೆಯೂ ಹೇಳಿದ್ದಾನೆ. ಅದೆಲ್ಲವನ್ನೂ ನಾನು ಹೇಳುತ್ತೇನೆ.

**ಅಧ್ಯಕ್ಷರು:** ಬರದ ಬಗ್ಗೆ ಹೇಳಿರುವುದನ್ನು ಮೊದಲು ಹೇಳಿ.

**ಶ್ರೀ ಬಿ.ಸಿ. ಪಾಟೀಲ್:** ಅದನ್ನು ಹೇಳುತ್ತೇನೆ. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ, ಬಹುಶ: ಇಲ್ಲಿ ತಿರುವಳ್ಳವರ್ ಮೂರ್ತಿಯನ್ನು ಮುಂದಿನ ಕಾರ್ಪೋರೇಷನ್ ಚುನಾವಣೆಯ ಉದ್ದೇಶವನ್ನು ಇಟ್ಟುಕೊಂಡು ಸ್ಥಾಪನೆ ಮಾಡಿದ್ದೀರಾ? ಅಥವಾ ಸರ್ವಜ್ಞ ಈ ನಾಡಿನಲ್ಲೇ ಇರುವುದು ಬೇಡ ಎಂದು ತಮಿಳುನಾಡಿಗೆ ಕಳುಹಿಸಬೇಕೆಂದು ಮಾಡಿದ್ದೀರಾ? ಎಂದು ನನಗೊಂದು ಸಂಶಯ ಬರುತ್ತಿದೆ. ಅದಾಗ್ಯೂ ಕೂಡ ತಾವು ಇವತ್ತು ಸರ್ವಜ್ಞನ ಮೂತಿಯನ್ನು ತಮಿಳುನಾಡಿನಲ್ಲಿ ಸ್ಥಾಪಿಸಿ ಏನೊಂದು ಪ್ರೀತಿಯನ್ನು ತೋರಿಸಿದ್ದೀರಿ, ಅದಕ್ಕೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ರಾಜ್ಯದಲ್ಲಿ ಸರ್ವಜ್ಞನ ಪ್ರಾಧಿಕಾರವನ್ನು ಸ್ಥಾಪಿಸಿದಲ್ಲಿ ಸರ್ವಜ್ಞನ ಪ್ರತಿಮೆಯನ್ನು ತಮಿಳುನಾಡಿನಲ್ಲಿ ಸ್ಥಾಪಿಸಿದ್ದಕ್ಕೂ ಸಾರ್ಥಕವಾಗುತ್ತದೆ. ಸರ್ವಜ್ಞನ ಪ್ರಾಧಿಕಾರವನ್ನು ಮಾಡಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಲ್ಲಿ ಒತ್ತಾಯವನ್ನು ಮಾಡುತ್ತೇನೆ. ಎರಡನೆಯದಾಗಿ, 'ಒಕ್ಕಲಿಗ ಒಕ್ಕದಿರೆ ಬಿಕ್ಕುವುದು ಜಗವೆಲ್ಲಾ' ಎಂದು ಸರ್ವಜ್ಞ ಹೇಳಿದ್ದಾನೆ. ಮಾನ್ಯ ಓಲೇಕಾರ್‌ರವರೆ, ತಾವು ಕೋರಿದಂತೆ ಈಗ ಬರದ ವಿಷಯಕ್ಕೆ ಬರುತ್ತಿದ್ದೇನೆ. ಇವತ್ತು ಏನಾಗಿದೆ ಪರಿಸ್ಥಿತಿ ಎಂದರೆ, ಒಕ್ಕಲಿಗ ಒಕ್ಕಿದರೂ ಕೂಡ ಬಿಕ್ಕಿ ಬಿಕ್ಕಿ ಅಳುವುದು ತಪ್ಪಿಲ್ಲ ಇವತ್ತು ಏಕೆ ಈ ಪರಿಸ್ಥಿತಿ ಆಗುತ್ತಿದೆ?

**ಶ್ರೀ ಬಿ.ಸಿ. ಪಾಟೀಲ್ (ಮುಂದು):** ಇದೆ ಬರಗಾಲ ಯಾವುದೇ ಸರ್ಕಾರದಿಂದ ಆಯಿತೆಂದು ನಾನು ಹೇಳುವುದಿಲ್ಲ, ಶಾಶ್ವತವಾದ ಬರಪರಿಹಾರ ಮಾಡುವಂಥ ಕೆಲಸವನ್ನು ಸರ್ಕಾರ ಮಾಡಬೇಕಾಗುತ್ತದೆ. Indian farmers are gambling with monsoon. ಭಾರತದ ರೈತರು ಇವತ್ತು ಮಾನ್‌ಸೂನ್ ಜೊತೆ ಇವತ್ತು ಗ್ಯಾಂಬ್ಲಿಂಗ್ ಮಾಡುತ್ತಿದ್ದಾರೆ, ಆಕಾಶವನ್ನು ನೋಡಿ ಬದಕುವಂಥ ಪರಿಸ್ಥಿತಿ ಇವತ್ತು ನಮ್ಮ ರೈತರಿಗೆ ಬಂದಿದೆ. ಇವತ್ತು ನಮ್ಮಲ್ಲಿ ಸಾಕಷ್ಟು ಜಲಸಂಪನ್ಮೂಲಗಳಿವೆ. 86 ತಾಲ್ಲೂಕುಗಳನ್ನು ಬರಪೀಡಿತ ತಾಲ್ಲೂಕುಗಳೆಂದು ಗುರುತಿಸಲಾಗಿದೆ, ಸ್ವಲ್ಪ ತಾತ್ಕಾಲಿಕ ಪರಿಹಾರ ಕೊಟ್ಟರೆ ಶಾಶ್ವತವಾದ ಬರಪರಿಹಾರವಾಗುವುದಿಲ್ಲ.

ನನ್ನ ಒಂದು ಸಲಹೆ ಏನೆಂದರೆ, ಇವತ್ತು ಶಾಶ್ವತವಾದ ಬರ ಪರಿಹಾರವಾಗಬೇಕೆಂದರೆ, ಎಲ್ಲೆಲ್ಲಿ ನದಿಗಳು ಹರಿದುಹೋಗಿವೆ, ಆ ನದಿಗಳಿಂದ ಕೆರೆಗಳಿಗೆ ನೀರನ್ನು ಶಾಶ್ವತವಾಗಿ ತುಂಬಿಸುವಂಥ ಕೆಲಸವನ್ನು ಸರ್ಕಾರ ಮಾಡಿದರೆ ಕನಿಷ್ಟ ಒಂದು ಬೆಳೆ ಆ ರೈತರಿಗೆ ಶಾಶ್ವತವಾಗಿ ಸಿಗುವುದರಲ್ಲಿ ಯಾವುದೇ ಸಂದೇಹವಿಲ್ಲ. ಇಲ್ಲಿ ನಮ್ಮ ಸಣ್ಣ ನೀರಾವರಿ ಸಚಿವರಿದ್ದಾರೆ, ನಾವು ಏತ ನೀರಾವರಿಗಳನ್ನು ಮಾಡುತ್ತೇವೆ. ನನ್ನ ಗಮನಕ್ಕೆ ಬಂದಂತೆ ಏತನೀರಾವರಿಗಳು ಎಲ್ಲೂ ಯಶಸ್ವಿಯಾಗಿಲ್ಲ. ಕಾರಣ ಇಷ್ಟೆ, ಇವತ್ತು ನಾವು ಏತನೀರಾವರಿಯನ್ನು ಮಾಡುತ್ತೇವೆ, ಏತ ನೀರಾವರಿಗೆ ಬಳಸುವ ಕರಂಟ್ ಬಿಲ್ಲನ್ನು ರೈತ ಕಟ್ಟಬೇಕಾಗುತ್ತದೆ, ಅಲ್ಲಿ ಯಾವ ರೈತ ಕೂಡ ಕರೆಂಟ್ ಬಿಲ್ಲನ್ನು ಕಟ್ಟುವುದಿಲ್ಲ, ಯಾವಾಗ ಆ ಕರೆಂಟ್ ಬಿಲ್ಲನ್ನು ಕಟ್ಟುವುದಿಲ್ಲ, ಏತನೀರಾವರಿ ಸ್ಥಗಿತವಾಗುತ್ತದೆ. ನಮ್ಮ ತಾಲ್ಲೂಕಿನ ಒಂದು ಭೈರನ ಪಾದದಲ್ಲಿ ಇನ್ನೊಂದು ರಾಮತೀರ್ಥದಲ್ಲಿ ಬಂಗಾರಪ್ಪನವರು ಇದ್ದ ಕಾಲದಲ್ಲಿ ಈ ಎರಡು ಏತನೀರಾವರಿ ಪ್ರಾರಂಭ ಮಾಡಿದರು. ಇವು ಪ್ರಾರಂಭವಾದ ದಿವಸವೇ ಬಂದ್ ಆಗಿವೆ, ಇಲ್ಲಿಯವರೆಗೆ ಒಂದು ಹನಿನೀರನ್ನು ಎತ್ತಿಲ್ಲ, ಅಲ್ಲಿ 20–25 ಲಕ್ಷ ರೂಪಾಯಿಗಳ ವಿದ್ಯುತ್ ಬಿಲ್ ಬಾಕಿ ಇದೆ, ಅಲ್ಲಿಂದ ಯಾವ ಪ್ರಯೋಜನವಾಗಿಲ್ಲ. ಆದುದರಿಂದ ನಾನು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಿಸುವುದೇನೆಂದರೆ, ಈಗ ಸಚಿವರಾದ ಉದಾಸಿಯವರಿಗೆ ಗೊತ್ತಿದೆ, ನಮ್ಮ ಹಾವೇರಿ ಜಿಲ್ಲೆಯ ಹಿರೆಕೆರೂರು ತಾಲ್ಲೂಕಿನಲ್ಲಿ ವರದಾ ನದಿ, ಕುಮದ್ವತಿ ನದಿ ಮತ್ತು ತುಂಗಾಭದ್ರಾ ನದಿ ಸೇರಿದಂತೆ ಮೂರು ನದಿಗಳು ಹರಿಯುತ್ತವೆ, ಈ ಮೂರು ನದಿಗಳು ನಮ್ಮ ಜಿಲ್ಲೆಯಲ್ಲಿ ಹರಿದರು ಕೂಡ ಇವತ್ತು ನಮ್ಮ ಜಿಲ್ಲೆಯ ಪರಿಸ್ಥಿತಿ ಹೇಗಾಗಿದೆ ಎಂದರೆ, ಸಮುದ್ರದ ನಂಟು ಉಪ್ಪಿಗೆ ಬರವೆನ್ನುವ ಹಾಗೆ ಆಗಿದೆ. ಮೂರು ನದಿಗಳು ನಮ್ಮ ಜಿಲ್ಲೆಯಲ್ಲಿ ಹರಿದರು, ಡಾಃ ನಂಜುಂಡಪ್ಪ ವರದಿಯ ಪ್ರಕಾರ ಹಿಂದುಳಿದ ಮತ್ತು ಅತಿ ಹಿಂದುಳಿದ ತಾಲ್ಲೂಕಿನವರಾಗಿದ್ದೇವೆ, ನೀರಾವರಿಯಿಂದ ನಾವು ವಂಚಿತರಾಗಿದ್ದೇವೆ. ಈಗ ಹಾನಗಲ್ ತಾಲ್ಲೂಕು ಚೆನ್ನಾಗಿದೆ, ಇದ್ದದ್ದರಲ್ಲಿ ಅವರಲ್ಲಿ ಧರ್ಮಾನದಿ ಡ್ಯಾಂ ಇದೆ, ಇವತ್ತು

ಸಾಕಷ್ಟು ನೀರಾವರಿ ಭತ್ತದ ಖಣಜವಿದೆ, ಮೇಲಾಗಿ ಮಂತ್ರಿಗಳಿದ್ದಾರೆ, ಸಾಕಷ್ಟು ಅಭಿವೃದ್ಧಿಯಾಗುತ್ತಿದೆ. ಡಾಃ ನಂಜುಂಡಪ್ಪ ವರದಿಯ ಪ್ರಕಾರ ಹಾವೇರಿ ಜಿಲ್ಲೆಯಲ್ಲಿ ಅತೀ ಹಿಂದುಳಿದ ತಾಲ್ಲೂಕಿನವರು ನಾವು. ಮಂತ್ರಿಗಳಿಗೆ ಒಂದು ಕಡೆ ಮಳೆ ಒಂದು ಕಡೆ ಡ್ಯಾಂ ಇದೆ ಚೆನ್ನಾಗಿದ್ದಾರೆ. ಆ ಜಿಲ್ಲೆಯ ಎಲ್ಲಾ ಕೆರೆಗಳನ್ನು ತುಂಬಿಸಿದರೆ ಶಾಶ್ವತವಾದ ಪರಿಹಾರ ಸಿಗುತ್ತದೆ, ಇಲ್ಲವೆಂದರೆ, ಸುಮ್ಮನೆ ನಾವು ಬರಪರಿಹಾರಕ್ಕೆ ಇಷ್ಟೊಂದು ತಾಲ್ಲೂಕುಗಳಿಗೆ ಕೋಟ್ಯಾಂತರ ರೂಪಾಯಿಗಳನ್ನು ಬಿಡುಗಡೆ ಮಾಡುವುದು, ಪ್ರತಿಯೊಂದು ಸಾರಿ ಹಣ ಬಿಡುಗಡೆಯಾಗುತ್ತಿರುತ್ತದೆ, ಅದು ರೈತರಿಗೂ ಮತ್ತು ಕೂಲಿ ಕಾರ್ಮಿಕರಿಗೂ ಮುಟ್ಟುವುದಿಲ್ಲ, ಪ್ರಗತಿ ಕೆಲಸಗಳಾಗುವುದಿಲ್ಲ, ಈ ರೀತಿ ಹಾಳಾಗುವುದು ತಪ್ಪುವುದಿಲ್ಲ. ಆದುದರಿಂದ ಶಾಶ್ವತವಾದ ಬರಪರಿಹಾರ ಮಾಡುವ ನಿಟ್ಟಿನಲ್ಲಿ ಸರ್ಕಾರ ಚಿಂತನೆ ನಡೆಸಬೇಕೆಂದು ನಾನು ಇವತ್ತು ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ. ಇವತ್ತು ಬರಗಾಲದಲ್ಲಿ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಆಕಾಶ ನೋಡಿ ಬಿತ್ತಿರುತ್ತಾನೆ, ಬೆಳೆ ಬರುವುದಿಲ್ಲ, ಸಕಾಲಕ್ಕೆ ಮಳೆಯಾಗುವುದಿಲ್ಲ, ಮಳೆ ಬಂದರು ಕೆಲವು ಸಾರಿ ಅತೀ ಮಳೆಯಾಗುತ್ತದೆ. ನಮ್ಮಲ್ಲಿ ಈ ವರ್ಷ ಮೊದಲು ಮಳೆ ಕಡಿಮೆಯಾಯಿತು, ಈಗ ಅತೀ ಮಳೆಯಾಗಿ ಅತಿವೃಷ್ಟಿ, ಒಂದು ಕಡೆ ಅತಿವೃಷ್ಟಿ ಮತ್ತೊಂದು ಕಡೆ ಅನಾವೃಷ್ಟಿಯಾಗಿ ಇಲ್ಲಿ ರೈತ ಆತ್ಮಹತ್ಯೆಗೆ ಶರಣಾಗುವ ಸ್ಥಿತಿ ಆಗಾಗ್ಗೆ ನಿರ್ಮಾಣವಾಗುತ್ತಿರುತ್ತದೆ. ಈ ನಿಟ್ಟಿಲ್ಲಿ ಸರ್ಕಾರ ಎರಡು ಲಕ್ಷ ರೂಪಾಯಿಗಳನ್ನು ಆತ್ಮಹತ್ಯೆ ಕೈಗೊಂಡ ರೈತನಿಗೆ ಪರಿಹಾರವೆಂದು ಇಟ್ಟಿದೆ. ಆದರೆ ಬಿಡುಗಡೆಯಾದ ಹಣ 50 ಲಕ್ಷ ಆದರೆ ವೆಚ್ಚವಾಗಿರುವುದು ಕೇವಲ 26 ಲಕ್ಷ. ಹಣ ಬಿಡುಗಡೆಯಾದರೂ ಕೂಡ ಇವತ್ತು ಅಲ್ಲಿ ಯಾವ ರೈತನೊಂದು ಆತ್ಮಹತ್ಯೆ ಮಾಡಿಕೊಂಡ ಅವನಿಗೆ ಇದುವರೆವಿಗೂ ಪರಿಹಾರ ಸಿಕ್ಕಿಲ್ಲ. ಅವನಿಗೆ ಪರಿಹಾರ ಕೊಡುವ ಕೆಲಸವನ್ನು ಸರ್ಕಾರ ಕೂಡಲೇ ಮಾಡಬೇಕೆಂದು ಸರ್ಕಾರವನ್ನು ನಾನು ಒತ್ತಾಯ ಮಾಡುತ್ತೇನೆ. ಈಗ ನಮ್ಮ ಬಂಡೆಪ್ಪ ಕಾಶೆಂಪೂರ್ ಅವರು ಇಲ್ಲ, ಹಿಂದೆ ಕುಮಾರ ಸ್ವಾಮಿಯವರು ಮುಖ್ಯಮಂತ್ರಿಯಾಗಿದ್ದಾಗ, ಅವರು ಕೃಷಿಮಂತ್ರಿಯಾಗಿದ್ದಾಗ ಕೃಷಿಪಂಡಿತ್

ಪ್ರಶಸ್ತಿ ಎಂದು ಕೊಡುತ್ತಿದ್ದರು. ಅದಕ್ಕಾಗಿ ಈ ವರ್ಷ ಸರ್ಕಾರ 13 ಲಕ್ಷ ರೂಪಾಯಿಗಳನ್ನು ಇಟ್ಟಿದ್ದಾರೆ, ಆದರೆ ಇದುವರೆಗೆ ಯಾರನ್ನು ಕೃಷಿ ಪಂಡಿತರನ್ನಾಗಿ ಮಾಡಲಿಲ್ಲ, ಒಂದು ಪೈಸೆ ಕೂಡ ಹಣ ಬಿಡುಗಡೆಯಾಗಿಲ್ಲ, ಖರ್ಚಾಗಿಲ್ಲ. ಇದರ ಜೊತೆಗೆ ಕೃಷಿ ಯಾಂತ್ರೀಕರಣಕ್ಕೆ ಒಂದು ಸಾವಿರ ಲಕ್ಷ ರೂಪಾಯಿಗಳನ್ನು ಇಟ್ಟಿದ್ದಾರೆ, ಬಿಡುಗಡೆಯಾದ ಹಣ ಐದುನೂರು ಲಕ್ಷ, ಆದರೆ ಇದುವರೆವಿಗೂ ಒಂದು ಪೈಸೆ ಕೂಡ ವೆಚ್ಚವಾಗಿಲ್ಲ. ಬೆಳೆ ಸಾಲಕ್ಕೆ ಸಹಾಯಧನವೆಂದು 2401 ಹೆಡ್‌ಆಫ್ ಅಕೌಂಟ್‌ನಲ್ಲಿ 20 ಸಾವಿರ ಲಕ್ಷ ಹಣವನ್ನಿಟ್ಟಿದ್ದಾರೆ, ಆದರೆ ಒಂದು ಪೈಸೆ ಹಣ ಬಿಡುಗಡೆಯಾಗಿಲ್ಲ, ಮತ್ತು ಖರ್ಚಾಗಿಲ್ಲ. ದಿನಾಂಕ:11–6–2009ರ ಉದಯವಾಣಿ ಪತ್ರಿಕೆಯಲ್ಲಿ ಒಂದು ಬರವಣಿಗೆ ಬಂದಿದೆ, ಅದರಲ್ಲಿ ರೈತರ ಪಾಲಿಗೆ ಬವಣೆ, ಕಂಪನಿ ಪಾಲಿಗೆ ಸಹಾಯಧನ ಎಂದಿದೆ. ಇವತ್ತು ರೈತರು ಈ ಪವರ್ ಟಿಲ್ಲರ್ ಟ್ರ್ಯಾಕ್ಟರ್‌ಗಳನ್ನು ಕೊಳ್ಳಬೇಕಾದರೆ, ತನಗೆ ಯಾವ ಕಂಪನಿಯ ಇಚ್ಛೆ ಇದೆಯೊ ಆ ಕಂಪನಿಯದನ್ನು ಕೊಳ್ಳಬೇಕೆ ಹೊರತು, ಸರ್ಕಾರ ನಿಗದಿಪಡಿಸಿದ ಟಿಲ್ಲರ್‌ಗಳನ್ನು ಕೊಳ್ಳುವಂಥ ಕೆಲಸ ಇವತ್ತು ಆಗಬಾರದು. ಪತ್ರಿಕೆಯಲ್ಲಿ ಬಂದ ವಿಷಯ, ಆದರೆ ಸರ್ಕಾರ ಏನು ಮಾಡಿದೆ ಎಂದರೆ ಪವರ್ ಟಿಲ್ಲರ್ ಅನ್ನು ಇಂತಿಂಥ ಕಂಪನಿಯಲ್ಲೆ ಕೊಂಡುಕೊಳ್ಳಬೇಕೆನ್ನುವ ಒಂದು ಒಳ ಒಪ್ಪಂದವಾಗಿದೆ ಏನೋ ಎಂದು ಒಂದು ಸಂಶಯವನ್ನು ಈ ಪತ್ರಿಕೆಯಲ್ಲಿ ವ್ಯಕ್ತಪಡಿಸಿದ್ದಾರೆ. ಇದೆ ಪವರ್ ಟಿಲ್ಲರ್ ಮಹಾರಾಷ್ಟ್ರದಲ್ಲಿ 70,000 ರೂಪಾಯಿಗಳಿಗೆ ದೊರೆತರೆ, ಅದೆ ಕರ್ನಾಟಕದಲ್ಲಿ ರೂ. 1,20,000 ಬರುತ್ತದೆ. ಮೊದಲು ಇದಕ್ಕೆ ಒಂದು ಲಕ್ಷ ರೂಪಾಯಿ ಇತ್ತು, ಯಾವಾಗ ಮಂತ್ರಿಗಳು ಮತ್ತು ಸರ್ಕಾರ ಅವರ ಜೊತೆಗೆ ಹೊಂದಾಣಿಕೆಯಾದ ನಂತರ ಒಂದು ಲಕ್ಷ ಇದ್ದದ್ದನ್ನು ರೂ.1,20,000 ಮಾಡಿದ. ಆಗ ರೈತನಿಗೆ 50% ಸಬ್ಸಿಡಿ ಸಿಗುತ್ತಿತ್ತು. ಈಗ ರೂ. 1,20,000 ಆಗಿರುವುದರಿಂದ ರೈತರಿಗೆ ರೂ.10,000 ಹೊರೆ ಜಾಸ್ತಿಯಾಗಿ 50% ಸಬ್ಸಿಡಿ ಸಿಗುವುದರಲ್ಲಿ 40% ಸಬ್ಸಿಡಿ ಸಿಗುತ್ತಿದೆ. ಆದುದರಿಂದ ರೈತರು ನೇರವಾಗಿ ಯಾವ ಕಂಪನಿಯ ಪವರ್ ಟಿಲ್ಲರನ್ನು ತೆಗೆದುಕೊಳ್ಳುತ್ತಾರೆ,ಅದನ್ನು ತೆಗೆದುಕೊಳ್ಳುವುದಕ್ಕೆ ಅವರಿಗೆ

ಅವಕಾಶ ಕೊಟ್ಟು, ರೈತರು ರಿಜಿಸ್ಟ್ರೇಷನ್ ಸರ್ಟಿಫಿಕೇಟ್ ತಂದ ಮೇಲೆ ಸಬ್ಸಿಡಿ ಹಣವನ್ನು ಕೊಡುವ ಕೆಲಸವನ್ನು ಸರ್ಕಾರ ಮಾಡಬೇಕೆಂದು ಸರ್ಕಾರವನ್ನು ನಾನು ಒತ್ತಾಯ ಮಾಡುತ್ತಿದ್ದೇನೆ.

ಇನ್ನು ಉದ್ಯೋಗ ಖಾತ್ರಿ ಯೋಜನೆ ಬಹಳ ಮಹತ್ವವಾದ ಯೋಜನೆ, ಆದರೆ ಇವತ್ತು ಇದರ ಅನುಷ್ಠಾನವಾಗುತ್ತಿಲ್ಲ. ಅನುಷ್ಠಾನ ಏಕೆ ಆಗುತ್ತಿಲ್ಲವೆಂದರೆ ಬಹುತೇಕ ಗ್ರಾಮಪಂಚಾಯತಿಗಳಲ್ಲಿ ಕಾರ್ಯದರ್ಶಿಗಳಿಲ್ಲ. ಇವತ್ತು ನಮ್ಮ ಹಿರೆಕೆರೂರು ತಾಲ್ಲೂಕಿನಲ್ಲಿ 37 ಗ್ರಾಮಪಂಚಾಯತಿಗೆ 17 ಜನ ಕಾರ್ಯದರ್ಶಿಗಳಿದ್ದಾರೆ, ಕೆಲವು ಎರಡೆರಡು ದೊಡ್ಡ ಗ್ರಾಮ ಪಂಚಾಯತಿಗಳಿಗೆ ಒಬ್ಬೊಬ್ಬ ಕಾರ್ಯದರ್ಶಿ, ಕೆಲವು ಕಡೆ 4 ಗ್ರಾಮಪಂಚಾಯತಿಗೆ ಒಬ್ಬ ಕಾರ್ಯದರ್ಶಿ ಇದ್ದಾನೆ. ಅಳ್ಳೂರು ಗ್ರಾಮಪಂಚಾಯತಿಯಲ್ಲಿ ಒಂದು ವರ್ಷದಿಂದ ಇಲ್ಲಯವರೆಗೆ ಕಾರ್ಯದರ್ಶಿ ಒಂದೇ ಒಂದು ಸಭೆಯನ್ನೂ ಕೂಡ ಮಾಡಿಲ್ಲದ, ಒಂದು ಪೈಸೆ ಹಣ ಖರ್ಚಾಗಿಲ್ಲ, ಖರ್ಚಾಗಿದ್ದರಲ್ಲು ಹಲವಾರು ಅನ್ಯಾಯಗಳಾಗಿದ್ದಾವೆ. ಮೊನ್ನೆ ನಮ್ಮ ಗ್ರಾಮೀಣಾವೃದ್ಧಿ ಸಚಿವರ ಗಮನಕ್ಕು ತಂದ್ದೆ ನಿಟ್ಟನೇಗಿಲು ಗ್ರಾಮಪಂಚಾಯತಿಯಲ್ಲಿ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಒಂದು ದೊಡ್ಡ ಕೆರೆ ಇದೆ, ಅಲ್ಲಿ ಊಳೆತ್ತುವುದಕ್ಕೆ ರೂ.3,00,000 ಖರ್ಚು ಮಾಡಿದ್ದಾರೆ, ಆದರೆ ಒಂದೇ ಒಂದು ಬುಟ್ಟಿ ಮಣ್ಣನ್ನು ಆ ಕೆರೆಯಿಂದ ತೆಗೆದಿಲ್ಲ. ಅದಕ್ಕೆ ಎಂಡಿ ಬರೆದರು, ಲೀಸ್ಟ್ ಮಾಡಿದರು, ಎಲ್ಲರ ಹೆಬ್ಬೆಟ್ಟು ಸಹಿಗಳನ್ನು ತೆಗೆದುಕೊಂಡರು. ಸಹಿ ತೆಗೆದುಕೊಂಡಾಗ ಅದಕ್ಕೆ ಸಿಂಧುತ್ವ ತೆಗೆದುಕೊಳ್ಳಬೇಕು. ಅಲ್ಲಿಯ ಗ್ರಾಮಪಂಚಾಯತಿಯ ಅಧ್ಯಕ್ಷ, ಕಾರ್ಯದರ್ಶಿ ಮತ್ತು ಸಂಬಂಧಿಸಿದ ಇಂಜಿನಿಯರ್ ಈ ಮೂವರು ಸೇರಿ, ಆ ಇಂಜಿನೀಯರ್ ಮೇಲು ಸಹಿ ಕೂಡ ಮಾಡಿದ್ದರೆ, ಒಂದು ಬುಟ್ಟಿ ಮಣ್ಣನ್ನು ತೆಗೆದಿಲ್ಲ, ರೂ.3,00,000 ಮಂಜೂರು ಮಾಡಿ ಇನ್ನೇನು ತಾಲ್ಲೂಕು ಕಛೇರಿಗೆ ಹೋಗಿ ಹಣ ಬಿಡುಗಡೆಯಾಗಬೇಕೆಮ್ನುವ ಸಂದರ್ಭದಲ್ಲಿ ಆ ಗ್ರಾಮದಲ್ಲಿರುವ ಜನರಿಗೆ ಗೊತ್ತಾಗಿ ಗ್ರಾಮಪಂಚಾಯತಿಗೆ ಕಛೇರಿಗೆ ಬೀಗ ಹಾಕಿದರು. ಗ್ರಾಮಪಂಚಾಯತಿಗೆ ಕಛೇರಿಗೆ ಬೀಗ ಹಾಕಿದ ನಂತರ ಅಲ್ಲಿಗೆ

V/13-4ಕ

ಅಧಿಕಾರಿಗಳು ಬಂದು ಪರಿಶೀಲನೆ ಮಾಡಿದಾಗ ಅಲ್ಲಿಯ ಗ್ರಾಮ ಪಂಚಾಯತಿ ಕಾರ್ಯದರ್ಶಿ, ಈ ಗ್ರಾಮಪಂಚಾಯತಿ ಅಧ್ಯಕ್ಷರ ಒತ್ತಾಯದ ಮೇರೆಗೆ ನಾವೆಲ್ಲಾ ಮಾಡಿದೆವು ಎಂದು ಬರೆದುಕೊಡುತ್ತಾನೆ. ಈ ರೀತಿಯಾದರೆ ಉದ್ಯೋಗ ಖಾತ್ರಿ ಯೋಜನೆ ಎಷ್ಟು ಸಫಲವಾಗುತ್ತದೆ, ಅಲ್ಲಿಯ ಸರಿಯಾದ ಅಧಿಕಾರಿಗಳಿಲ್ಲ. ಇವತ್ತು ಗ್ರಾಮಪಂಚಾಯತಿಗಳಲ್ಲಿ ಕಾರ್ಯದರ್ಶಿಗಳಿದ್ದಾರೆ, ಯಾವತ್ತೊ ಬಿಲ್ ಕಲೆಕ್ಟರ್ ಆಗಿ ಸೇರಿಕೊಂಡು ಈಗ ಕಾರ್ಯದರ್ಶಿಯಾಗಿದ್ದಾರೆ. ಇವತ್ತು ಕೋಟ್ಯಾಂತರ ರೂಪಾಯಿಗಳ ಹಣ ಗ್ರಾಮಪಂಚಾಯತಿ, ಗ್ರಾಮಸಭೆಗಳ ಮೂಲಕ ಹೋಗಬೇಕಾಗುತ್ತದೆ, ಅಲ್ಲಿ ಸರಿಯಾದ ಅಧಿಕಾರಿಗಳಿಲ್ಲದೆ ಹೋದರೆ, ಅಲ್ಲಿರುವ ಯಾರೋ ಹೆಬ್ಬೆಟ್ಟಿನವರು, ಅಲ್ಲಿ ಬಿಲ್ ಕಲೆಕ್ಟರ್ ಆಗಿ ಕೆಲಸ ಮಾಡುವವರು ಗ್ರಾಮಪಂಚಾಯತಿ ಕಾರ್ಯದರ್ಶಿಯಾಗಿ ಕೆಲಸ ಮಾಡುವ ಪದ್ಧತಿ ಇವತ್ತು ನಿಲ್ಲಬೇಕು. ಯಾವುದೇ ಕಾರ್ಯಕ್ರಮವಿರಬಹುದು, ವಸತಿ ಯೋಜನೆ ಇರಬಹುದು, ನೀರಾವರಿ ಯೋಜನೆ ಇರಬಹುದು, ಕುಡಿಯುವ ನೀರಿನ ವ್ಯವಸ್ಥೆ ಇರಬಹುದು, ಇವೆಲ್ಲಾ ಸರಿಯಾಗಿ ಜಾರಿಯಾಗಬೇಕೆಂದರೆ ಪ್ರತಿಯೊಂದು ಗ್ರಾಮಪಂಚಾಯತಿಗೆ ಕನಿಷ್ಟಪಕ್ಷ ನಮ್ಮ ರೆವಿನ್ಯು ಇನ್ಸ್ಪೆಕ್ಟರ್‌ಗೆ ಸಮನಾದ ಹುದ್ದೆಯವರನ್ನು ಗ್ರಾಮಪಂಚಾಯತಿ ಕಾರ್ಯದರ್ಶಿಯನ್ನಾಗಿ ನೇಮಕ ಮಾಡಬೇಕು, ಮಾಡಿದರೆ ಅದು ಸಫಲವಾಗುತ್ತದೆ ಎನ್ನುವ ಮಾತನ್ನು ಹೇಳುತ್ತೇನೆ. ಅದು ಸಫಲವಾಗುತ್ತದೆ. ಈಗಾಗಲೇ ನಿಟ್ಟನೇಗಿಲು ಪಂಚಾಯಿತಿಯ ಬಗ್ಗೆ ಏನು ಹೇಳಿದ್ದೇನೆ ಅದು ಮುಖ್ಯ ಕಾರ್ಯದರ್ಶಿಯವರ ಗಮನಕ್ಕೂ ಬಂದಿದೆ. ನಾನೂ ಕೂಡ ಪತ್ರವನ್ನು ಬರೆದಿದ್ದೇನೆ. ಆದರೆ, ಇದುವರೆಗೂ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಈ ಹಿಂದೆ ಇದೇ ಗ್ರಾಮಪಂಚಾಯತಿಯ ಅಧ್ಯಕ್ಷರು ನಮ್ಮ ಜಿಲ್ಲೆಯ ಉಸ್ತುವಾರಿ ಸಚಿವರಾಗಿದ್ದ ಮಾನ್ಯ ಉದಾಸಿಯವರು ಆರ್.ಡಿ.ಪಿ.ಆರ್. ಸಚಿವರಾಗಿದ್ದಾಗ ಸುಮಾರು ಒಂದು ಲಕ್ಷ ರೂಪಾಯಿಗಳನ್ನು ದುರುಪಯೋಗ ಮಾಡಿದ್ದರು. ಆಗಲೂ ಅದು ಸಿಂಧುತ್ವವಾಗಿ ಸರ್ಕಾರಕ್ಕೆ ಬಂತು, ಇದುವರೆಗೂ ಅವರ ಮೇಲೆ ಯಾವುದೇ ಕ್ರಮವನ್ನು ಸರ್ಕಾರ ಜರುಗಿಸುತ್ತಿಲ್ಲ. ಶೌಚಾಲಯಗಳ

ಬಗ್ಗೆ ಎಲ್ಲರೂ ಬಹಳ ಮಾತನಾಡಿದ್ದಾರೆ. ಅದರ ಅವಶ್ಯಕತೆ ಎಲ್ಲರಿಗೂ ಇದೆಯೆಂದು ತಮಗೆಲ್ಲಾ ಗೊತ್ತಿದೆ. ಆದರೆ, ಶೌಚಾಲಯ ಕಟ್ಟಲು ಬಿಡುಗಡೆಯಾಗಿರುವ ಹಣದಿಂದ ಶೌಚಾಲಯವನ್ನು ಕಟ್ಟುವುದಕ್ಕೆ ಸಾಧ್ಯವಾಗುತ್ತಿಲ್ಲ. ಇವತ್ತು ನಮ್ಮಲ್ಲಿ ತಡಕನಳ್ಳಿ ಪಂಚಾಯಿತಿಯಲ್ಲಿ 9 ಲಕ್ಷ ಹಣ ದುರುಪಯೋಗವಾಗಿದೆ. ಆರ್.ಡಿ.ಪಿ.ಆರ್.ನ ಪ್ರಧಾನ ಕಾರ್ಯದರ್ಶಿಯವರು ಈ ವಾರ ಆ ಅಧ್ಯಕ್ಷರನ್ನು ಕರೆದು ಮೌಖಿಕ ಹೇಳಿಕೆಯನ್ನು ಕೊಡಬೇಕೆಂದು ಹೇಳಿದ್ದಾರೆ. ಆದರೆ, ಅವರನ್ನು ರಕ್ಷಣೆ ಮಾಡುವ ಕೆಲಸ ನಡೆಯುತ್ತಿದೆಯೆಂದು ನಮ್ಮ ಗಮನಕ್ಕೆ ಬಂದಿದೆ. ಆದ್ದರಿಂದ, ಯಾವ ಪಕ್ಷದ ಅಧ್ಯಕ್ಷರೇ ಇರಲಿ, ಕಾರ್ಯಕರ್ತರೇ ಇರಲಿ ಎಲ್ಲಿ ಸರ್ಕಾರದ ಹಣವನ್ನು ದುರುಪಯೋಗ ಮಾಡಿಕೊಳ್ಳುತ್ತಾರೆ ಅವರ ಮೇಲೆ ನಿರ್ದಾಕ್ಷಣ್ಯವಾಗಿ ಕ್ರಮ ಕೈಗೊಳ್ಳದಿದ್ದರೆ ಸರ್ಕಾರ ಏನೆಲ್ಲಾ ಯೋಜನೆಗಳನ್ನು ತಂದೂರು ಅದು ಸಫಲವಾಗುವುದಿಲ್ಲ.

**ಅಧ್ಯಕ್ಷರು:** ಸಮಯ ಆಯಿತು ಮುಗಿಸಿ.

**ಶ್ರೀ ಬಿ.ಸಿ. ಪಾಟೀಲ್:** ನಾನು ಎಷ್ಟು ಬೇಕೋ ಅಷ್ಟೇ ಮಾತನಾಡುವುದು. ಮಾತಿಗೆ ಬರ ಇದೆ ಎನ್ನುವುದು ಬೇಡ ಮಾತಿಗೆ ಬರ ಬರುವುದು ಬೇಡ

**ಅಧ್ಯಕ್ಷರು:** ಮಾತಿಗೇನು ಬರವಿಲ್ಲ. ಮಾತಿಗೇನು ಬರ ಬರುವುದಿಲ್ಲ.

**ಶ್ರೀ ಬಿ.ಸಿ. ಪಾಟೀಲ್:** ವಿದ್ಯುತ್. ಲಿಂಗನಮುಕ್ಕಿ ಡ್ಯಾಂ ತುಂಬಿದೆ. ರಾಜ್ಯದ ಎಲ್ಲಾ ಡ್ಯಾಂಗಳು ತುಂಬಿ ಹರಿಯುತ್ತಿವೆ. ಎಲ್ಲಾ ಕಡೆಗೆ ನಮ್ಮ ಸಚಿವರುಗಳು ಬಾಗಿನ ಕೊಟ್ಟಿದ್ದೇ ಕೊಟ್ಟಿದ್ದು ಫೋಟೋ ಹೊಡೆಸಿಕೊಂಡಿದ್ದೇ ಕೊಂಡಿದ್ದು, ಟಿ.ವಿ.ಯಲ್ಲಿ ಹಾಕಿಸಿಕೊಂಡಿದ್ದೇ ಕೊಂಡಿದ್ದು. ಆದರೆ power cut ಮಾತ್ರ ನಿಂತಿಲ್ಲ. ನಮ್ಮ ಹಿರೇಕೆರೂರಿನಲ್ಲಿ power cut ಇದೆ. ಆದರೆ, ಪಕ್ಕದ ಶಿಕಾರಿಪುರದಲ್ಲಿ power cut ಇಲ್ಲ. ಇದು ಯಾವ ನ್ಯಾಯ?

**ಶ್ರೀ ಬಿ.ಎಸ್. ಯಡಿಯೂರಪ್ಪ (ಮಾನ್ಯ ಮುಖ್ಯಮಂತ್ರಿಯವರು):** ಯಾರು ಹೇಳಿದ್ದು ಹಾಗೆ?

**ಶ್ರೀ ಬಿ.ಸಿ. ಪಾಟೀಲ್:** ಜನರು ಬಂದು ಹೇಳುತ್ತಾರೆ.

**ಶ್ರೀ ಬಿ.ಎಸ್. ಯಡಿಯೂರಪ್ಪ:** ನಿಮ್ಮ ಬಗ್ಗೆ ನಾನು ಬಹಳ ವಿಶ್ವಾಸವನ್ನು ಇಟ್ಟುಕೊಂಡಿದ್ದೆ. ಶಿಕಾರಿಪುರದ ಬಗ್ಗೆ ನೀವು ಏನೇ ಹೇಳಿದರೂ ಜನರು ತಿರುಗಿ ಬೀಳುತ್ತಾರೆ. ನಿಮ್ಮ ಊರಿನ ಬಗ್ಗೆ ನಾನು ಏನೇ ಹೇಳಿದರೂ ಜನರು ತಿರುಗಿ ಬೀಳುತ್ತಾರೆ. ಆದರೆ, ವಾಸ್ತವಿಕ ಸತ್ಯಾಂಶವನ್ನು ಈ ಮನೆಗೆ ಹೇಳಿ. ನಿಮ್ಮ ಊರಿಗೆ ಒಂದು ಶಿಕಾರಿಪುರಕ್ಕೆ ಮತ್ತೊಂದು ಆಗಿದೆಯೆಂದರೆ ನೀವು ಏನು ಹೇಳಿದರೂ ಅದನ್ನು ಕೇಳಲು ನಾನು ಸಿದ್ದನಾಗಿದ್ದೇನೆ. ದಯಮಾಡಿ ನಿಮ್ಮ ಬಾಯಿಯಿಂದ ಈ ರೀತಿ ಮಾತು ಬಂದರೆ ಜನರು ಏನೆಂದುಕೊಳ್ಳಬೇಕು. ಜಯಚಂದ್ರಾರವರೆ ಇದನ್ನು ನೀವೂ ಸಪೋರ್ಟ್ ಮಾಡಿದ್ದೀರಾ?

**ಶ್ರೀ ಟಿ.ಬಿ. ಜಯಚಂದ್ರ:** political power ಇತ್ತು ಎಂದರೆ ಎಲ್ಲಾ power ಇತ್ತು ಎಂದು ಅರ್ಥ;

**ಶ್ರೀ ಬಿ.ಸಿ. ಪಾಟೀಲ್:** ಮಾನ್ಯ ಮುಖ್ಯಮಂತ್ರಿಯವರ ಕ್ಷೇತ್ರಕ್ಕೆ ಪಕ್ಕಕ್ಕೆ ನಾವು ಇರುವಂಥವರು. ಇವತ್ತು ಅವರ ಕಡೆನಂದಹಳ್ಳಿಯೆಂದು ಇದೆ. ಅದು ನಮ್ಮ ಹಿರೇಕೆರೂರಿಗೆ ಮೂರೇ ಕಿಲೋಮೀಟರ್, ಅಲ್ಲಿ 24 ಗಂಟೆ ಲೈಟ್ ಇರುತ್ತದೆ. ಅವರು ಸಂತೆ ಮಾಡುವುದು ನಮ್ಮ ಹಿರೇಕೆರೂರಿನ ಸಂತೆಯಲ್ಲೇ. ಆದರೆ, ನಮ್ಮಲ್ಲಿ ಲೈಟ್ ಇರುವುದಿಲ್ಲ. ಜನರು ಬಂದು ಅಲ್ಲಿ 24 ಗಂಟೆ ಲೈಟ್ ಇರುತ್ತದೆ, ಪಂಪುಸೆಟ್ ಇರುತ್ತದೆ ನಮ್ಮಲ್ಲಿ ಏಕೆ ಇಲ್ಲವೆಂದು ಕೇಳುತ್ತಾರೆ. ಅವರು ಮುಖ್ಯಮಂತ್ರಿಗಳು ಇದೆ. ನಾನು ಮುಖ್ಯಮಂತ್ರಿಯಲ್ಲ, ನಾವು ಕೇವಲ ಶಾಸಕರು, ಅದರಲ್ಲೂ ವಿರೋಧ ಪಕ್ಷದ ಶಾಸಕರು ಎಂದು ಏನೋ ಹೇಳಿಕೊಂಡು ಬಜಾವಾಗಬೇಕಾಗುತ್ತದೆ. ತಾವು ಮೊನ್ನೆ ಚೈನಾ ದೇಶಕ್ಕೆ ಹೋಗಿ ಬಂದಿರಿ. ಅನಂತರ ರೈತರ ಪರವಾಗಿ ವಿಶೇಷವಾದಂಥ ಅಧಿವೇಶನವನ್ನು ಕರೆದಿದ್ದೀರಿ. ಆದರೆ, ರೈತರು ಮತ್ತು ಬರಗಾಲದ ಬಗ್ಗೆ

ಸಂಪೂರ್ಣವಾಗಿ ಕರ್ನಾಟಕದ ಬಗ್ಗೆ ಚಿಂತನೆ ಮಾಡಬೇಕೇ ಹೊರತು ಕೇವಲ ಬಿ.ಜೆ.ಪಿ. ಶಾಸಕರು, ಮಂತ್ರಿಗಳು ಇರುವಂಥ ರೈತರನ್ನು ಉದ್ಧಾರ ಮಾಡುವುದಕ್ಕೆ ಹೋಗಬೇಡಿ. ಇಡೀ ಕರ್ನಾಟಕದ ಸಮಗ್ರ ಅಭಿವೃದ್ಧಿಯಾಗಬೇಕೆಂದರೆ ರಾಜ್ಯದ ಎಲ್ಲಾ ರೈತರನ್ನು ಪರಿಗಣಿಸಬೇಕು. ಅದರಿಂದ ಮುಂದಿನ ದಿವಸಗಳಲ್ಲಿ ಒಳ್ಳೆಯ ಹೆಸರು ಬರುತ್ತದೆ. ಇವತ್ತು ಗುತ್ತೇದಾರರು ಮಾತನಾಡುತ್ತಾ ಜೆ.ಹೆಚ್. ಪಟೇಲರನ್ನು, ದೇವೇಗೌಡರನ್ನು, ಬಂಗಾರಪ್ಪನವರನ್ನು ನೆನೆಸಿಕೊಂಡರು. ನಾವು ಈಗ ಹೊದಾಗಿ ಸದನಕ್ಕೆ ಬಂದಂಥವರು. ಮುಂದೆ ಯಡಿಯೂರಪ್ಪನವರ ಕಾಲದಲ್ಲಿ ಈ ರೀತಿ ಆಯಿತು, ಅವರು ಯಾರ ಬಗ್ಗೆಯೂ ತಾರತಮ್ಯ ಮಾಡಲಿಲ್ಲ. ಎಲ್ಲರ ಬಗ್ಗೆಯೂ ಚೆನ್ನಾಗಿ ನೋಡಿಕೊಂಡರು ಎಂದು ನೆನಪಿಸಿಕೊಳ್ಳುತ್ತೇವೆ.

**ಶ್ರೀ ಸಿದ್ದು ಸವದಿ:** ಈಗಲೂ ಯಡಿಯೂರಪ್ಪನವರ ಫೋಟೊವನ್ನು ಇಟ್ಟುಕೊಂಡಿದ್ದಾರೆ.

**ಶ್ರೀ ಬಿ.ಸಿ. ಪಾಟೀಲ್:** ನೀವು ಅವರು 50 ಫೋಟೋವನ್ನು ಇಟ್ಟುಕೊಂಡರೂ ನೀವಂತ್ತು ಮಂತ್ರಿಯಾಗುವುದಿಲ್ಲ. ಸುಮ್ಮನೆ ಏಕೆ ಹೊಗಳುತ್ತೀರಿ? ಹೊಗಳು ಭಟ್ಟರನ್ನು ನಂಬಬಾರದು ಎಂದು ಹೇಳುತ್ತಾರೆ. ಹೊಗಳೀ ಹೊಗಳೀ ಎನ್ನ ಹೊನ್ನ ಶೂಲಕ್ಕೇರಿಸಿದರು ಎಂದು ಬಸವಣ್ಣನವರು ಹೇಳಿದರು.

**ಶ್ರೀ ಸಿದ್ದು ಸವದಿ:** ಹಾಲಿಗೆ ಸಬ್ಸಿಡಿ ಇದೆ, ವಿಧವಾ ವೇತನ ಇದೆ, ಅಮೃತ ಯೋಜನೆ ಬಂದಿದೆ. ಅವೆಲ್ಲವನ್ನು ಸ್ವಲ್ಪ ನೋಡಿ. ಹಿಂದೆ ಇಂಥವುಗಳನ್ನು ಯಾವಾಗಲಾದರು ತಂದಿದ್ದರೇ ಎಂದು ನಿಮಗೆ ಅನ್ನಿಸುತ್ತದೆಯೇ? ಕಾಂಗ್ರೆಸ್‌ನವರು ಬಡವರಿಗಾಗಿ ಇಂಥವನ್ನು ತಂದಿದ್ದಾರೆಯೇ? ಒಂದು ಕೋಟಿ ಕುಟುಂಬಗಳಿಗೆ ಸರ್ಕಾರದ ಹಣ ನೇರವಾಗಿ ಹೋಗುತ್ತದೆ. ಇದು ನಿಮ್ಮ ಕಾಂಗ್ರೆಸ್‌ನವರಿಗೆ ನೆನಪು ಇದೆಯೇ?

**ಶ್ರೀ ಬಿ.ಸಿ. ಪಾಟೀಲ್:** ಮುಖ್ಯಮಂತ್ರಿಗಳಲ್ಲಿ ಒಂದು ವಿನಂತಿ. ಈ ಹೊಗಳು ಭಟ್ಟರ ಬಗ್ಗೆ ಸ್ವಲ್ಪ ಹುಷಾರಾಗಿರುವುದು ಒಳ್ಳೆಯದು. ಏಕೆಂದರೆ

ಜೆ.ಹೆಚ್. ಪಟೇಲರು ಹೇಳಿರುವ ಒಂದು ಮಾತು ನನಗೆ ನೆನಪಿಗೆ ಬರುತ್ತದೆ. ಇಲ್ಲಿ ಎಂ.ಪಿ. ಪ್ರಕಾಶ್‌ರವರು ಹೋದ ಸಲ ಜೆ.ಹೆಚ್.ಪಟೇಲರ ಆ ಮಾತನ್ನು repeat ಮಾಡಿದ್ದರು. ಓ ದೇವರೇ ನನ್ನ ವೈರಿಗಳಿಂದ ನನ್ನನ್ನು ರಕ್ಷಿಣೆ ಮಾಡಿಕೊಳ್ಳುತ್ತೇನೆ. ಆದರೆ, ನನ್ನ ಬೆನ್ನ ಹಿಂದೆ ಇರುವಂಥ ನನ್ನ ಸ್ನೇಹಿತರಿಂದ ನನ್ನನ್ನು ರಕ್ಷಣೆ ಮಾಡು ಎಂದು. ಆದ್ದರಿಂದ ಈ ಹೊಗಳು ಭಟ್ಟರ ಬಗ್ಗೆ ವಿಶೇಷವಾಗಿ ಎಚ್ಚರಿಗೆ ವಹಿಸಿದರೆ ಒಳ್ಳೆಯದು. ಮಾನ್ಯ ಮುಖ್ಯಮಂತ್ರಿಗಳು ಯುವಕರೇ ಗ್ರಾಮವನ್ನು ಬಿಟ್ಟು ಹೋಗಬೇಡಿ, ಗ್ರಾಮೀಣ ಪ್ರದೇಶದಲ್ಲೇ ಇರಿ ಎಂದು ಪತ್ರಿಕೆಯಲ್ಲಿ ಒಂದು ಹೇಳಿಕೆಯನ್ನು ಕೊಟ್ಟರು. ಬಹಳ ಸಂತೋಷ. ಇವತ್ತು ಗ್ರಾಮೀಣ ಪ್ರದೇಶದಿಂದ ಯುವಕರು ಪಟ್ಟಣಕ್ಕೆ ಏಕೆ ಬರುತ್ತಾರೆ? ಅವರನ್ನು ಗ್ರಾಮೀಣ ಪ್ರದೇಶದಿಂದ ಪಟ್ಟಣ ಪ್ರದೇಶಕ್ಕೆ ಬರುವುದನ್ನು ತಡೆಹಿಡಿಯುವುದಕ್ಕೆ ಸರ್ಕಾರ ಚಿಂತನೆ ಮಾಡಬೇಕಾಗುತ್ತದೆ. ಇವತ್ತು ಸದನದ ಸದಸ್ಯರು ಹಲವಾರು ಜನ ವಿದೇಶ ಪ್ರವಾಸಕ್ಕೆ ಹೋಗಿದ್ದರು. ಮುಖ್ಯಮಂತ್ರಿಗಳು ನಮ್ಮನ್ನು ಕಳಿಸಿದ್ದೀರಿ. ತಮಗೆ ಧನ್ಯವಾದಗಳು. ನಾವು ಆಸ್ಟ್ರೇಲಿಯಾ ಮತ್ತು ನ್ಯೂಜಿಲ್ಯಾಂಡ್‌ಗೆ ಹೋಗಿದ್ದೆವು. ಇವತ್ತು ಅಲ್ಲಿ ಕಾರ್ಪೆಂಟರಿ ಮತ್ತು ಕುಕ್ಕಿಂಗ್‌ಗೆ ಬಹಳ ಬೇಡಿಕೆ ಇದೆ. ನಮ್ಮಲ್ಲಿ ಬಹಳ ಉತ್ತಮವಾದ ಕಾರ್ಪೆಂಟರ್ಸ್, ಶಿಲ್ಪಿಗಳಿದ್ದಾರೆ. ಆದರೆ, ಅವರು ಹೊರ ದೇಶಗಳಿಗೆ ಹೋಗುವ ಚೈತನ್ಯ ಇದ್ದರೂ ಭಾಷೆಯ ತೊಂದರೆ ಇದೆ. ಅವರಿಗೆ ಅವರ ಉದ್ಯೋಗದ ಬಗ್ಗೆ ಸರ್ಟಿಫಿಕೇಟ್ ಇರುವುದಿಲ್ಲ. ಆದ್ದರಿಂದ, ಇವತ್ತು ಟಿ.ವಿ.ಯಲ್ಲೇನು ವೈಭವೀಕರಿಸುತ್ತಾರೆ. ಅದನ್ನು ನೋಡಿ ಯುವಕರು ಪಟ್ಟಣಕ್ಕೆ ಬರುತ್ತಾರೆ. ಇಲ್ಲಿ ಎಂಥಹದ್ದೋ ಒಂದು ನೌಕರಿ ಸಿಗುತ್ತದೆ. ಎಸ್.ಎಸ್.ಎಲ್.ಸಿ. ಆದಮೇಲೆ ಹಳ್ಳಿಯಲ್ಲಿರಲು ಇಷ್ಟವಿಲ್ಲ. ಪಟ್ಟಣಕ್ಕೆ ಬರಬೇಕು, ಸಿನಿಮಾ ನೋಡಬೇಕು, ಒಳ್ಳೊಳ್ಳೆಯ ವೇಷಭೂಷಣವನ್ನು ಹಾಕಬೇಕು ಎಂದು ಹೇಳುತ್ತಾರೆ. ಪಟ್ಟಣಕ್ಕೆ ಬಂದರೆ ಯಾವುದಾದರು ಒಂದು ಉದ್ಯೋಗ ಸಿಗುತ್ತದೆ ಎಂಬ ಭರವಸೆ ಅವನಿಗಿದೆ. ಏಕೆಂದರೆ ಎಲ್ಲಾ ಕಾರ್ಖಾನೆಗಳು ಪಟ್ಟಣ ಪ್ರದೇಶದಲ್ಲೇ ಇರುವುದು. ಈ ಕಾರ್ಖಾನೆಗಳನ್ನು ಬೆಂಗಳೂರಿನಂತ ದೊಡ್ಡ ದೊಡ್ಡ ನಗರಗಳಲ್ಲಿ ಮಾಡುವುದಕ್ಕೆ ಲೈಸೆನ್ಸ್

ಕೊಡುವುದನ್ನು ನಿಲ್ಲಿಸಿ ಅವುಗಳನ್ನೆಲ್ಲಾ ಜಿಲ್ಲಾ ಮತ್ತು ತಾಲ್ಲೂಕು ಮಟ್ಟಕ್ಕೆ ಕಳುಹಿಸಿಕೊಡಿ. ಆಗ ಗ್ರಾಮೀಣ ಪ್ರದೇಶದ ಯುವಕರಿಗೆ ಅಲ್ಲೇ ನೌಕರಿ ಸಿಗುತ್ತದೆ. ಅವರು ಅಲ್ಲೇ ಉತ್ತಮವಾದ ಜೀವನವನ್ನು ಪ್ರಾರಂಭ ಮಾಡಬೇಕೆಂದು ಬಂದಾಗ ಗ್ರಾಮೀಣ ಪ್ರದೇಶದಿಂದ ಪಟ್ಟಣ ಪ್ರದೇಶಕ್ಕೆ ಬರುವಂಥ ವ್ಯವಸ್ಥೆ ನಿಲ್ಲುತ್ತದೆ. ಐ.ಟಿ.ಐ. ಮಾಡುವಂಥ ಸಂದರ್ಭದಲ್ಲಿ ಕಾರ್ಪೆಂಟರಿ ಮತ್ತು ಕುಕ್ಕಿಂಗ್ ಕೋರ್ಸ್‌ನ್ನು ಮಾಡಬೇಕು. ಆಸ್ಟ್ರೇಲಿಯಾ ಮತ್ತು ನ್ಯೂಜಿಲ್ಯಾಂಡ್‌ನಲ್ಲಿ ಇಂಥ ಕೆಲಸಗಾರರನ್ನು ನಾವು read carpet ಹಾಕಿ ಸ್ವಾಗತ ಮಾಡುತ್ತೇವೆಂದು ಹೇಳುತ್ತಿದ್ದರು. ಆದ್ದರಿಂದ ಆ ಕೋರ್ಸ್‌ಗಳನ್ನು ಮಾಡಿದರೆ ಅವರಿಗೆ ಒಂದು ಸರ್ಟಿಫಿಕೇಟ್ ಸಿಗುತ್ತದೆ. ಅದರ ಜೊತೆಗೆ ಭಾಷೆಯ ಜ್ಞಾನ ಬರುತ್ತದೆ. ಇಂಗ್ಲೀಷ್ ಭಾಷೆ ಬಾರದೆ ಆ ದೇಶಗಳಿಗೆ ಹೋಗಲು ಆಗುವುದಿಲ್ಲ. ಮುಸ್ಲಿಂ ದೇಶಗಳಲ್ಲಿ ಹೇಗೋ ನಡೆದುಕೊಂಡು ಹೋಗುತ್ತದೆ. Local ಭಾಷೆಯನ್ನು ಅಳವಡಿಸಿಕೊಳ್ಳುತ್ತಾರೆ ಆದರೆ, ಅವರಿಗೆ communicate ಮಾಡುವುದಕ್ಕೆ ಭಾಷೆಯ ಅವಶ್ಯಕತೆ ಇದೆ. ಆದ್ದರಿಂದ ಕಾರ್ಪೆಂಟರಿ ಮತ್ತು ಕುಕ್ಕಿಂಗ್ ಕೋರ್ಸ್‌ಗಳನ್ನು ಐ.ಟಿ.ಐ. ಮತ್ತು ಡಿಪ್ಲೊಮಾದಲ್ಲಿ ತರಬೇಕು. ಕುಡಿಯುವ ನೀರಿನ ವ್ಯವಸ್ಥೆಯ ಬಗ್ಗೆ ಹೇಳುವುದಾದರೆ, ನಾವು ಇತ್ತು ಬೋರ್‌ವೆಲ್‌ಗಳನ್ನು ಹಾಕಿಸುತ್ತೇವೆ. ಎರಡು ಮೂರು ಕಿಲೋಮೀಟರ್ ಪೈಪ್ ಲೈನ್ ಮಾಡಿ ಗ್ರಾಮಗಳಿಗೆ ನೀರನ್ನು ಕೊಡುತ್ತೇವೆ. ಇದಕ್ಕೆ ಸಾವಿರಾರು ಕೋಟಿ ಹಣವನ್ನು ಸರ್ಕಾರದಿಂದ ಖರ್ಚು ಮಾಡುತ್ತೇವೆ. ಆ ಬೋರ್‌ವೆಲ್ ಬತ್ತಿಹೋಯಿತು ಎಂದರೆ ಆ ಜಾಗ ಬಿಟ್ಟು ಇನ್ನೊಂದು ಕಡೆ ಬೋರ್ ಮಾಡುತ್ತೇವೆ. ಆ ರೀತಿ ಇನ್ನೊಂದು ಕಡೆ ಬೋರ್ ಮಾಡಿದಾಗ ಹಳೆಯ ಬೋರ್‌ವೆಲ್‌ಗೆ ಹಾಕಿದಂಥ ಮಿಷನ್ ಮತ್ತು ಪೈಪುಗಳೇನಾಯಿತು ಎಂಬ ಬಗ್ಗೆ ಯಾರೂ ಚಿಂತನೆ ಮಾಡುವುದಿಲ್ಲ. ಅದು ಅಷ್ಟೂ ವೇಸ್ಟ್, ಮಣ್ಣಲ್ಲಿ ಹಾಕಿದ್ದು ಮಣ್ಣಲ್ಲೇ ಮುಚ್ಚಿಹೋಗುತ್ತದೆ. ಮತ್ತೆ ಹೊಸದಾಗಿ ಯೋಜನೆ ಮಾಡಿ ಹಣವನ್ನು ಖರ್ಚು ಮಾಡುತ್ತೇವೆ. ಆದ್ದರಿಂದ, ಕುಡಿಯುವ ನೀರಿನ ಈ ವ್ಯವಸ್ಥೆ ತಾತ್ಕಾಲಿಕವಾದ ವ್ಯವಸ್ಥೆ. ಅದ್ದರಿಂದ, ಬಹುಗ್ರಾಮಗಳ ಕುಡಿಯುವ ನೀರಿನ ಈ ವ್ಯವಸ್ಥೆ

ತಾತ್ಕಾಲಿಕವಾದ ವ್ಯವಸ್ಥೆ. ಆದ್ದರಿಂದ, ಬಹುಗ್ರಾಮಗಳ ಕುಡಿಯುವ ನೀರಿನ ವ್ಯವಸ್ಥೆಯೇನಿದೆ, ಹೊಳೆಗಳಿಂದ 20–30–50 ಗ್ರಾಮಗಳಿಗೆ ನೀರನ್ನು ಕೊಡುವ ವ್ಯವಸ್ಥೆಯೇನಿದೆ ಇದು ರಾಜ್ಯದ ಎಲ್ಲಾ ಗ್ರಾಮಗಳಿಗೂ ಮಾಡದೆಯೇ ಬೋರ್‌ವೆಲ್‌ಗಳಿಂದ ಎಲ್ಲಿಯವರೆಗೆ ನೀರನ್ನು ಕೊಟ್ಟುಕೊಂಡು ಹೋಗುತ್ತೇವೋ ಅಲ್ಲಿಯವರೆಗೆ ಸರ್ಕಾರದ ಹಣ ವ್ಯಯವಾಗುತ್ತದೆಯೇ ಹೊರತು ಶಾಶ್ವತವಾದ ಕುಡಿಯುವ ನೀರಿನ ವ್ಯವಸ್ಥೆಯಾಗುವುದಿಲ್ಲ. ಆದ್ದರಿಂದ ಬಹು ಗ್ರಾಮಗಳ ಕುಡಿಯುವ ನೀರಿನ ಯೋಜನೆಗೆ ಹೆಚ್ಚಿನ ಆದ್ಯತೆಯನ್ನ ಕೊಡುವ ಬಗ್ಗೆ ಸರ್ಕಾರ ಚಿಂತನೆ ಮಾಡಬೇಕೆಂದು ಹೇಳಿ, ಇವತ್ತು ಈ ಸಭೆಯಲ್ಲಿ ಬರ ಪರಿಸ್ಥಿತಿಯ ಬಗ್ಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**6-00 P.M.**

**ಅಧ್ಯಕ್ಷರು:** ಈಗ ಈಶಣ್ಣ ಗುಳಗಣ್ಣನವರ್‌ರವರೆ, ತಾವು ಮಾತನಾಡಿ.

**ಶ್ರೀ ಹೆಚ್.ಡಿ. ರೇವಣ್ಣ:** ಮಾನ್ಯ ಅಧ್ಯಕ್ಷರೆ, ಈಗ ಸಭಾನಾಯಕರಾದ ಮುಖ್ಯಮಂತ್ರಿಗಳಿದ್ದಾರೆ. ಆರು ಜಿಲ್ಲೆಗಳಲ್ಲಿ ಅಂಗನವಾಡಿ ಕಾರ್ಯಕರ್ತರ ಮೇಲೆ ಪೋಲಿಸರು ಲಾಠಿ ಛಾರ್ಜ್ ಮಾಡಿದ್ದಾರೆ. ಇದನ್ನು ಪ್ರಸ್ತಾಪ ಮಾಡಲು ಅವಕಾಶ ಮಾಡಿಕೊಡಬೇಕು. ಅಂಗನವಾಡಿ ಕಾರ್ಯಕರ್ತರು ತಮ್ಮ ಬೇಡಿಕೆಗಳನ್ನು ಈಡೇರಿಸಬೇಕೆಂದು ಮನವಿ ಕೊಡಲು ಹೋದಾಗ ಲಾಠಿ ಛಾರ್ಜ್ ಮಾಡಿದ್ದಾರೆ.

**ಅಧ್ಯಕ್ಷರು:** ಅಂಗನವಾಡಿ ಕಾರ್ಯಕರ್ತರ ವಿಷಯವನ್ನು ಪ್ರಸ್ತಾಪ ಮಾಡುವ ಸಮಯ ಇದಲ್ಲ. ನಾಳೆ ಬೆಳಿಗ್ಗೆ ಅವಕಾಶ ಕೊಡುತ್ತೇನೆ. ಆಗ ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಿ. ನೀವು ಒಂದು ಪತ್ರವನ್ನಾದರೂ ಇದಕ್ಕೆ ಸಂಬಂಧಪಟ್ಟಂತೆ ನಮಗೆ ಕಳುಹಿಸಬೇಕು. ಏನು ಸಮಸ್ಯೆಯಾಗಿದೆ, ಯಾವ ವಿಷಯವನ್ನು ಪ್ರಸ್ತಾಪ ಮಾಡುತ್ತೀರಿ ಎಂಬ ಬಗ್ಗೆ ಕಡೇ ಪಕ್ಷ ಒಂದು ಪತ್ರವನ್ನಾದರೂ ನನಗೆ ನೀವು ಬರೆಯಬೇಕಲ್ಲವೆ? ಪತ್ರವೂ ಇಲ್ಲ, ಏನೂ

ಇಲ್ಲ, ಹಾಗೆಯೇ ಎದ್ದುನಿಂತುಕೊಂಡು ಪ್ರಸ್ತಾಪ ಮಾಡುತ್ತೀನಿ ಎಂದರೆ ಹೇಗೆ?

**ಶ್ರೀ ಹೆಚ್.ಡಿ. ರೇವಣ್ಣ:** ಪತ್ರಿಕೆಗಳಲ್ಲಿ ಬಂದಿದೆ.

**ಅಧ್ಯಕ್ಷರು:** ಪತ್ರಿಕೆಗಳಲ್ಲಿ ಬರುತ್ತದೆ. ಆದರೆ ನೀವು ನಮಗೆ ಪತ್ರ ಬರೆದು ವಿಷಯ ಪ್ರಸ್ತಾಪ ಮಾಡಲು ಅನುಮತಿ ಪಡೆಯಬೇಕಲ್ಲವೇ?

**(ಗೊಂದಲ)**

**ಅಧ್ಯಕ್ಷರು:** ಈಶಣ್ಣ ಗುಳಗಣ್ಣನವರೆ ನೀವು ಮಾತನಾಡಿ

**(ಗೊಂದಲ)**

**ಶ್ರೀ ಈಶಣ್ಣ ಗುಳಗಣ್ಣನವರ್ (ಯಲಬುರ್ಗಾ):** ಮಾನ್ಯ ಅಧ್ಯಕ್ಷರೆ, ಬರಗಾಲ ವಿಷಯದ ಬಗ್ಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ಮೊಟ್ಟ ಮೊದಲನೆಯದಾಗಿ ಧನ್ಯವಾದಗಳನ್ನು ಸಲ್ಲಿಸಬಯಸುತ್ತೇನೆ. ಇವತ್ತು ಕರ್ನಾಟಕ ರಾಜ್ಯದಲ್ಲಿ ಒಟ್ಟು ಭೌಗೋಳಿಕವಾಗಿ 20.18 ದಶ ಲಕ್ಷದಷ್ಟು ಇರುವುದರಲ್ಲಿ ಇದರಲ್ಲಿ ಅರ್ಧದಷ್ಟು ಭಾಗ ಸಾಗುವಳಿಗೆ ಯೋಗ್ಯವಾಗಿರತಕ್ಕಂಥ ಜಮೀನಾಗಿದೆ. ಅಂದರೆ 10.18 ದಶ ಲಕ್ಷದಷ್ಟು ಜಮೀನು ಇವತ್ತು ಸಾಗುವಳಿಗೆ ಯೋಗ್ಯವಾಗಿರತಕ್ಕಂಥದ್ದಾಗಿದೆ. ಇದರಲ್ಲಿ ಬಾರಿ ಪಂಪ್‌ಸೆಟ್‌ಗಳ ಮೂಲಕ ನೀರಾವರಿ ಮತ್ತು ನದಿ ಮೂಲಕ ನೀರಾವರಿಯಾಗುತ್ತಿದೆ. ಒಟ್ಟು ಭೌಗೋಳಿಕ ಕ್ಷೇತ್ರದಲ್ಲಿ ಒಂದೊಂದು ಜಿಲ್ಲೆಯಲ್ಲಿ ಒಂದೊಂದು ಭಾಗದಲ್ಲಿ ಒಂದೊಂದು ರೀತಿಯಾಗಿ ನಾವು ಬೆಳೆಗಳನ್ನು ತೆಗೆಯುತ್ತೇವೆ. ಅದಕ್ಕಾಗಿ ನಮಗೆ ಒಂದೊಂದು ರೀತಿಯಾಗಿ ಒಂದು ಎಕರೆಗೆ ಆದಾಯ ಬರುತ್ತದೆ. ಇವತ್ತು ಒಂದು ಭಾಗದಲ್ಲಿ ಒಂದು ರೀತಿಯಲ್ಲಿ ನಮಗೆ ಆದಾಯ ಬಂದರೆ ಮತ್ತೊಂದು ಭಾಗದಲ್ಲಿ ಮತ್ತೊಂದು ರೀತಿಯಲ್ಲಿ ಆದಾಯ ಬರುತ್ತದೆ. ಉದಾಹರಣೆಗಾಗಿ ಹೇಳುವುದಾದರೆ, ಇವತ್ತು ಕೊಡಗು, ಚಿಕ್ಕಮಗಳೂರಿನಲ್ಲಿ ಕಾಫಿಯನ್ನು ಬೆಳೆಯುತ್ತಾರೆ. ಅವರ ಆದಾಯ ಎಕರೆಗೆ ಒಂದು ಲಕ್ಷ ರೂಪಾಯ ಇದೆ. ಇವತ್ತು ಕೋಸ್ಟಲ್

LM_17

ಬೆಲ್ಟ್‌ನಲ್ಲಿ ತೆಂಗು, ಅಡಿಕೆ, ಮೆಣಸು, ಇತ್ಯಾದಿ ವಾಣಿಜ್ಯ ಬೆಳೆಗಳನ್ನು ಬೆಳೆಯುತ್ತಾರೆ. ಅಲ್ಲಿ ಕೂಡ ಎಕರೆಗೆ ಒಂದು ಲಕ್ಷ ರೂಪಾಯಿಗಳ ಆದಾಯವಿದೆ. ಇವತ್ತು ಹಾವೇರಿ, ಧಾರವಾಡ, ಗದಗ್ ಜಿಲ್ಲೆ ಮತ್ತು ಬೆಳಗಾಂ ಜಿಲ್ಲೆಯಲ್ಲಿ ಉಳ್ಳಾಗೆಡ್ಡೆ, ಮೆಣಸಿನಕಾಯಿ, ಹತ್ತಿ, ಇತ್ಯಾದಿ ಬೆಳೆಗಳನ್ನು ಬೆಳೆಯುವುದರ ಮೂಲಕ ಅವರ ಆದಾಯ ಎಕರೆಗೆ ಇಪ್ಪತ್ತೈದು ಸಾವಿ ರೂಪಾಯಿ ಇದೆ. ಇವತ್ತು ಬೆಂಗಳೂರಿನಲ್ಲಾಗಲಿ, ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಾಗಲಿ, ಕೋಲಾರ ಜಿಲ್ಲೆಗಳಲ್ಲಿ, ಅಂದರೆ ಬೇರೆ ಬೇರೆ ಜಿಲ್ಲೆಗಳಲ್ಲಿ ಬೇರೆ ಬೇರೆ ರೀತಿಯ ಬೆಳೆಗಳನ್ನು ಬೆಳೆಯುತ್ತಿದ್ದಾರೆ. ಇವತ್ತು ಬರಗಾಲಕ್ಕೆ ಹೆಸರುವಾಸಿಯಾಗಿರತಕ್ಕಂಥ ಬೀದರ್, ಗುಲ್ಬರ್ಗಾ, ರಾಯಚೂರು, ಬಳ್ಳಾರಿ, ಕೊಪ್ಪಳ, ಬಾಗಲಕೋಟೆ ಮತ್ತು ಬಿಜಾಪುರ ಜಿಲ್ಲೆಗಳಲ್ಲಿ ಹತ್ತಿ, ಜೋಳ, ಶೇಂಗಾ, ಕಡ್ಲೆ, ಇತರ ಕಾಳುಗಳನ್ನು ಬೆಳೆಯುತ್ತೇವೆ. ನಮ್ಮ ಆದಾಯ ಎಕರೆಗೆ ಎಷ್ಟಿದೆಯೆಂದರೆ ತಮಗೆ ಆಶ್ಚರ್ಯವೆನಿಸುತ್ತದೆ. ನಮಗೆ ಎಕರೆಗೆ ಒಣ ಬೇಸಾಯದಲ್ಲಿ 4 ಸಾವಿರದಿಂದ 5 ಸಾವಿರ ರೂಪಾಯಿಗಳ ಆದಾಯವಿದೆ. ಇವತ್ತು ಕೋಸ್ಟಲ್ ಏರಿಯಾದಲ್ಲಿ ಮತ್ತು ಒಣಬೇಸಾಯದಲ್ಲಿ, ಬೇರೆ ಬೇರೆ ಕಡೆಗಳಲ್ಲಿ ಏನು ಆದಾಯವಿದೆ ಅವರ ರೀತಿಯಲ್ಲಿ ಒಂದು ಲಕ್ಷದ ರೂಪಾಯಿವರೆಗಿನ ಆದಾಯವನ್ನು ನಾವು ಪಡೆಯಬೇಕಾದರೆ ಇವತ್ತು ನಾವು ಬಹಳಷ್ಟು ಬದಲಾವಣೆಗಳನ್ನು ಮಾಡಬೇಕಾಗಿದೆ. ಇವತ್ತು ನಮ್ಮಲ್ಲಿಯೇ 20 ಎಕರೆ ಜಮೀನಿದ್ದಂಥ ರೈತ ಇವತ್ತು ರತ್ನಗಿರಿಗೆ ಮೀನನ್ನು ಹಿಡಿಯುವುದಕ್ಕೆ ಹೋಗತಕ್ಕಂಥ ಪರಿಸ್ಥಿತಿ ನಿರ್ಮಾಣವಾಗಿದೆ. ನಮ್ಮ ಕೊಪ್ಪಳ ಜಿಲ್ಲೆಯಲ್ಲಿಯೇ ಸುಮಾರು ಹತ್ತು ಸಾವಿರ ಜನರು ಸುಮಾರು 16 ವರ್ಷ, 18 ವರ್ಷದಿಂದ 35 ವರ್ಷದೊಳಗಿನ ಯುವಕರು ಏನಿದ್ದಾರೆ ಅವರೆಲ್ಲರೂ ಇವತ್ತು ರತ್ನಗಿರಿ, ಗೋವಾ, ಮಂಗಳೂರು, ಉಡುಪಿ ಮತ್ತು ಬೆಂಗಳೂರಿಗೆ ವಲಸೆ ಹೋಗತಕ್ಕಂಥದ್ದನ್ನು ಕಳೆದ ಮೂವತ್ತು ವರ್ಷಗಳಿಂದ ನಾವು ನೋಡುತ್ತಿದ್ದೇವೆ. ಈಗಾಗಲೇ ಇದರ ಬಗ್ಗೆ ಸಾಕಷ್ಟು ಚರ್ಚೆಗಳು ಕೂಡ ಆಗಿರತಕ್ಕಂಥದ್ದಾಗಿದೆ. ಇವತ್ತು ಬರಗಾಲ ನಮಗೆ ಬೆನ್ನತ್ತಿಕೊಂಡು ಬಂದಿರತಕ್ಕಂಥದ್ದರ ಬಗ್ಗೆ ತಮಗೆಲ್ಲರಿಗೂ ಗೊತ್ತಿದೆ. ಪ್ರಾಚೀನ

ಕಾಲದಲ್ಲಿಯೂ ಕೂಡ ಡೋಗಿ ಬರ ಎನ್ನತಕ್ಕಂಥ ಬರಗಾಲವನ್ನು ಬಂದಿದ್ದನ್ನು ನಾವು ಓದಿ, ಕೇಳಿ ತಿಳಿದುಕೊಂಡಿದ್ದೇವೆ. ಈಗ ಈ ಒಂದು ಪರಿಸ್ಥಿತಿಯಲ್ಲಿ ಇವತ್ತು ನಾವು ಹೊಸ ಬದಲಾವಣೆಯನ್ನು ಮಾಡಬೇಕಾದರೆ ಇವತ್ತು ಕೃಷಿ ವಿಶ್ವವಿದ್ಯಾಲಯ ಧಾರವಾಡದಲ್ಲಾಗಲಿ, ರಾಯಚೂರಿನಲ್ಲಾಗಲಿ, ಬೆಂಗಳೂರಿನಲ್ಲಾಗಲಿ ಇರತಕ್ಕಂಥದ್ದರಲ್ಲಿ ಹಲವಾರು ಅವಿಷ್ಕಾರಗಳಾಗಿವೆ. ಒಂದೊಂದು ಭಾಗದಲ್ಲಿ, ಒಂದೊಂದು ಜಿಲ್ಲೆಯಲ್ಲಿ ಹಲವಾರು Innovations, ಹೊಸ ಹೊಸ ಯೋಜನೆಗಳು ಆಗಿವೆ. ನಾವು ಅಂಥ ಅವಿಷ್ಕಾರಗಳನ್ನು ಒಂದು ಮಾಡೆಲ್ ಆಗಿಟ್ಟುಕೊಂಡು ಅವುಗಳಿಗೆ ನಮ್ಮ ಭಾಗದಲ್ಲಿರತಕ್ಕಂಥ ಬರಗಾಲ ಪೀಡಿತವಾಗಿರತಕ್ಕಂಥ ಪ್ರದೇಶ, ಏನು ಡೆಡ್‌ಮಾರ್ಕ್ ಆಗಿದೆ ಅಂಥ ನಮ್ಮ ಪ್ರದೇಶಗಳಲ್ಲಿ ಅಂಥ ಅವಿಷ್ಕಾರಗಳನ್ನು ಮೂಲವಾಗಿಟ್ಟುಕೊಂಡು ಮತ್ತು ಅದನ್ನು ಮಾಡೆಲ್ಲ ಅಗಿಟ್ಟುಕೊಂಡು ಹೊಸ ಹೊಸ ಊರಿಗೊಬ್ಬ ರೈತನನ್ನು ನಾವು ಗುರುತು ಮಾಡಿ ಅಂಥ ಅವಿಷ್ಕಾರಗಳ ಮೂಲಕವಾಗಿ ನಾವು ನಮ್ಮ ಜಮೀನಿನ ಆದಾಯವನ್ನು ಹೆಚ್ಚು ಮಾಡುವುದಕ್ಕೆ ಪ್ರಾಮಾಣಿಕವಾಗಿ ಪ್ರಯತ್ನವನ್ನು ಮಾಡಬೇಕು. ಈ ಒಂದು ದಿಸೆಯಲ್ಲಿ ನಮ್ಮ ಯಲಬುರ್ಗಾ ತಾಲ್ಲೂಕಿನಲ್ಲಿಯೂ ಕೂಡ ಒಂದು ಬ್ಲಾಕ್ ಸಾಯಲ್‌ನಲ್ಲಿ, ಅಂದರೆ ಕಪ್ಪು ಭೂಮಿ ಇರತಕ್ಕಂಥ ಪ್ರದೇಶದಲ್ಲಿ ಈ ಹುಸುಕು ಹಾಕುವುದರ ಮೂಲಕ ಅಥವಾ ಮರಳು ಹಾಕುವುದರ ಮೂಲಕ ಫಲವತ್ತತೆ ಹೆಚ್ಚಿಸಿ ಒಂದು ಎಕರೆಗೆ ಹಿಂದೆ ಏನು ನಾಲ್ಕೈದು ಸಾವಿರದಷ್ಟು ವರಮಾನ ಬರುತ್ತಿತ್ತೋ ಅದನ್ನು ಇವತ್ತು ಇಪ್ಪತ್ತೈದರಿಂದ ಮೂವತ್ತು ಸಾವಿರ ರೂಪಾಯಿಗಳವರೆಗೆ ಆದಾಯವನ್ನು ಹೆಚ್ಚು ಮಾಡತಕ್ಕಂಥ ಒಂದು ಅನ್ವೇಷಣೆಯನ್ನು, ಅವಿಷ್ಕಾರಗಳನ್ನು ಕಳೆದ ಹದಿನೈದು ಇಪ್ಪತ್ತು ವರ್ಷಗಳಿಂದ ನಾವು ಮತ್ತು ನಮ್ಮ ರೈತರು ಮಾಡಿರತಕ್ಕಂಥ ಉದಾಹರಣೆಗಳಿವೆ. ಅಂಥ ಅವಿಷ್ಕಾರಗಳನ್ನು ನಾವು ಮಾಡೆಲ್ ಆಗಿಟ್ಟುಕೊಂಡು ಮತ್ತು ಇನ್ನಿತರ ಯಾವ ಯಾವ ಭಾಗದಲ್ಲಿ ಹೊಸ ಹೊಸ ಅವಿಷ್ಕಾರಗಳಾಗಿವೆ ಅವುಗಳನ್ನು ನಾವು ಮಾಡೆಲ್ ಆಗಿಟ್ಟುಕೊಂಡು ಅದನ್ನು ಪ್ರತಿ ಪ್ಲಿಗಳಲ್ಲಿಯೂ ಪ್ರಯೋಗವನ್ನು ಮಾಡಿ ಆದಾಯವನ್ನು

ಹೆಚ್ಚಿಸಬಹುದಾಗಿದೆ. ಈ ರೀತಿಯ ವ್ಯವಸ್ಥೆಯಾಗಬೇಕಾಗಿದೆ. ಈಗಾಗಲೇ ಕಳೆದ ನಾಲೈದು ದಿವಸಗಳಿಂದ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿಯಲ್ಲಿ ಹಲವಾರು ಚರ್ಚೆಗಳಾಗಿವೆ ಆ ಒಂದು ಚರ್ಚೆಗಳಿಗೆ ಪೂರಕವಾಗಿ ಇಂಥ ಒಂದು ಗ್ರಾಮಾಂತರ ಪ್ರದೇಶಗಳಲ್ಲಿ ಉದ್ಯೋಗಗಳನ್ನು ಸೃಷ್ಠಿ ಮಾಡತಕ್ಕಂಥ ಕೆಲಸವಾಗಬೇಕಾಗಿದೆ. ಏಕೆಂದರೆ ದಿನದಿಂದ ದಿನಕ್ಕೆ ವಲಸೆ ಹೋಗತಕ್ಕಂಥದ್ದು ಮತ್ತು ಹಳ್ಳಿಯಲ್ಲಿರತಕ್ಕಂಥ ಯುವಕರು ಪಟ್ಟಣ ಪ್ರದೇಶಗಳಿಗೆ ಹೋಗತಕ್ಕಂಥದ್ದು ಸತತವಾಗಿ ನಡೆಯುತ್ತಿದೆ. ಇದನ್ನು avoid ಮಾಡುವುದಕ್ಕೆ ಹೊಸ ಹೊಸ ಯೋಜನೆಗಳನ್ನು ಮತ್ತು ಉದ್ಯೋಗಗಳನ್ನು ಸೃಷ್ಟಿ ಮಾಡತಕ್ಕಂಥ ಕೆಲಸ ಮಾಡಿ ಆ ಉದ್ಯೋಗಗಳನ್ನು ಗ್ರಾಮಾಂತರ ಪ್ರದೇಶಗಳಿಗೆ ತರತಕ್ಕಂಥ ಕೆಲಸವನ್ನು ಸರ್ಕಾರ ಮಾಡಬೇಕೆನ್ನುವ ಒತ್ತಾಯವನ್ನು ನಾನು ಮಾಡಿ ನನಗೆ ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

**(ಈ ಹಂತದಲ್ಲಿ ಸಭಾದ್ಯಕ್ಷರಾದ ಶ್ರೀ ಜಗದೀಶ್ ಶೆಟ್ಟರ್‌ರವರು ಅಧ್ಯಕ್ಷ ಪೀಠದಿಂದ ನಿರ್ಗಮಿಸಿದಾಗ ಉಪಾಧ್ಯಕ್ಷರಾದ ಶ್ರೀ ಕೆ.ಜಿ. ಬೋಪಯ್ಯನವರು ಅಧ್ಯಕ್ಷ ಪೀಠದಲ್ಲಿ ಕುಳಿತು ಕಲಾಪವನ್ನು ಮುಂದುವರೆಸಿದರು)**

**ಉಪಾಧ್ಯಕ್ಷರು:** ಈಗ ಕಲ್ಪನಾ ಸಿದ್ದರಾಜುರವರು ಮಾತನಾಡಲಿ. ಅವರ ನಂತರ ಸುಭಾಷ್ ಗುತ್ತೇದಾರ್‌ರವರೆ, ತಾವು ಮಾತನಾಡಿ.

**ಶ್ರೀಮತಿ ಕಲ್ಪನಾ ಸಿದ್ಧರಾಜು (ಮದ್ದೂರು):** ಮಾನ್ಯ ಉಪಾಧ್ಯಕ್ಷರೆ, ನಮ್ಮ ಮದ್ದೂರು ತಾಲ್ಲೂಕು ಕೆ.ಆರ್.ಎಸ್. ನ ಕೊನೆಯ ಭಾಗವಾಗಿದೆ. ಅದುದರಿಂದ ನೀರಿಗೆ ಅಲ್ಲಿ ತುಂಬಾ ಅಭಾವವಾಗಿದೆ. ಶೇಕಡ 50 ರಷ್ಟು ಭಾಗ ಮಳೆಯನ್ನೇ ಆಧರಿಸಬೇಕಾಗಿದೆ. ಈ ಬಾರಿ ಮಳೆ ಸರಿಯಾಗಿ ಆಗದೆ ತುಂಬಾ ಸಂಕಷ್ಟ ಪರಿಸ್ಥಿತಿಯನ್ನು ಎದುರಿಸುತ್ತಿದ್ದಾನೆ. ನಮ್ಮ ಭಾಗದಲ್ಲಿ ಕುಡಿಯುವ ನೀರಿಗೂ ಕೂಡ ತುಂಬಾ ಅಭಾವವಾಗಿರುವುದರಿಂದ ಮದ್ದೂರು ಭಾಗವನ್ನು ಬರಪೀಡಿತ ಪ್ರದೇಶವೆಂದು ಮಾನ್ಯ ಸಚಿವರು

ಘೋಷಣೆ ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ.

**ಶ್ರೀ ಸುಭಾಷ್ ಗುತ್ತೇದಾರ್ (ಆಳಂದ):** ಮಾನ್ಯ ಉಪಾಧ್ಯಕ್ಷರೆ, ಬರಗಾಲ ವಿಷಯದ ಬಗ್ಗೆ ಮಾತನಾಡಲು ನನಗೆ ಅವಕಾಶ ಮಾಡಿಕೊಟ್ಟ ತಮಗೆ ಮೊದಲನೆಯದಾಗಿ ವಂದಿಸುತ್ತೇನೆ. ಈಗ ನನ್ನ ಒಂದು ಕ್ಷೇತ್ರದಲ್ಲಿ ಮೇ ತಿಂಗಳ ಕೊನೆಯ ವಾರದಲ್ಲಿ ಮತ್ತು ಜೂನ್ ತಿಂಗಳ ಮೊದಲನೆಯ ವಾರದಲ್ಲಿ ಅಲ್ಪಸ್ವಲ್ಪ ಮಳೆ ಬಂತು. ಪತ್ರಿಕೆಗಳಲ್ಲಿ ಮತ್ತು ಟಿ.ವಿ. ಮಾಧ್ಯಮದಲ್ಲಿ ಮಾನ್‌ಸೂನ್ ಈ ಬಾರಿ ಚುರುಕಾಗಿದೆ, ಒಂದು ವಾರ ಮುಂಚಿತ ಮಾನ್‌ಸೂನ್ ಮಳೆ ಬರುತ್ತದೆ ಎಂದು ಹೇಳಿದ್ದರಿಂದ ರೈತ ಅದನ್ನು ನಂಬಿ ಬೀಜ ಬಿತ್ತನೆಯನ್ನು ಮಾಡಿದ್ದಾನೆ. ಇವತ್ತು ರೈತ ಬಿತ್ತನೆ ಮಾಡಿದ್ದಾನೆ. ಸುಮಾರು 60,333 ಹೇಕ್ಟೇರ್ ಬಿತ್ತನೆ ಮಾಡಿದ್ದಾನೆ. ಎರಡೂವರೆ ತಿಂಗಳು ಹಿಂದೆ ಮಳೆ ಹೋಯಿತು. ಮತ್ತೆ ಮಳೆ ಬರಲಿಲ್ಲ. ನಮ್ಮ ಕಡೆ ಬಿತ್ತನೆ ಮಾಡಿದಂತಹ ಎಳ್ಳು, ಹೆಸರು, ಉದ್ದು, ಸೂರ್ಯಕಾಂತಿ ಎಲ್ಲಾ ಒಣಗಿ ಹೋದವು. ಈಗ ಮಳೆ ಬರದಿರುವುದರಿಂದ ಒಂದು ಹೋಬಳಿಯಲ್ಲಿ 26,684 ಹೆಕ್ಟೇರ್ ಬಿತ್ತನೆ ಮಾಡಿಲ್ಲ. ನಮ್ಮ ಕ್ಷೇತ್ರದಲ್ಲಿ ಪೂರ್ತಿಯಾಗಿ ಭೀಕರ ಬರಗಾಲ ಬಂದಿದೆ. 1972ರಲ್ಲಿ ಬರಗಾಲ ಬಂದಿತ್ತು, ಆಗ ಕುಡಿಯುವ ನೀರು ಸಿಗುತ್ತಿತ್ತು, ನೀರಿನ ಮಟ್ಟ ಮೇಲೆಯೇ ಇತ್ತು. ಆದರೆ ಈ ಸಲ ಬರಗಾಲ ಯಾವ ರೀತಿ ಇದೆ ಎಂದರೆ ನೀರಿನ ಮಟ್ಟ ಬಹಳ ಕೆಳಗೆ ಹೋಗಿದೆ. ಮಳೆ ಬಂದಿದೆಯೆಂದರೂ ಕೂಡ ಬಾವಿಗೆ ನೀರು ಆಗಿಲ್ಲ. ಬೇಸಿಗೆಯಲ್ಲಿ ಕುಡಿಯುವ ನೀರಿಗೆ ನಮಗೆ ಬಹಳಷ್ಟು ತೊಂದರೆ ಇದೆ. ಇವತ್ತು ಕೆಲವು ಹೋಬಳಿಗಳಾದ ಮಾದನಿಪರ್ಗ, ನಿಂಬರ್ಗ ಇಲ್ಲಿ ಬಿತ್ತನೆಯಾಗಿಲ್ಲ. ಆಳಂದ, ಕಜೂರಿ, ನರುಣ ಅಲ್ಲಿ ಅಲ್ಪಸ್ವಲ್ಪ ಮಳೆಯಾಗಿ ಬಿತ್ತನೆ ಮಾಡಿ ಬೀಜ ಮತ್ತು ಗೊಬ್ಬರ ಹಾಳು ಮಾಡಿಕೊಂಡಿದ್ದಾರೆ. ಉದ್ದು, ಎಳ್ಳು, ಹೆಸರು, ಸೂರ್ಯಕಾಂತಿ ಬೆಳೆಗೆ ಔಷಧ ಮತ್ತು ಗೊಬ್ಬರ ಹಾಕಿ, ನಂತರ ಅಲ್ಲಿ ತೊಗರಿ ಬೆಳೆ ತೆಗೆಯುತ್ತಿದ್ದರು. ಉದ್ದು, ಹೆಸರು, ಎಳ್ಳು ಬೆಳೆ ಪೂರ್ತಿ ಹೋಗಿದೆ. ಅವುಗಳು ಒಂದು ಕಾಳೂ ಕೂಡ ಆಗಿಲ್ಲ. ಇನ್ನು ತಗರಿ

ಬೆಳೆಯನ್ನು ನಾವು ತೆಗೆದುಕೊಳ್ಳಬೇಕಾದರೆ ಮುಂದೆ ಮಳೆ ಬರಬೇಕು. ಮಳೆ ಬಂದರೆ ತೊಗರಿಯಾಗುತ್ತದೆ. ಅದಕ್ಕೆ ಔಷಧ, ಗೊಬ್ಬರ ಹಾಕಬೇಕಾದರೆ ಏನೂ ಇಲ್ಲ. ರೈತ ಬಹಳ ಸಂಕಷ್ಟದಲ್ಲಿ ಇದ್ದಾನೆ. ಈ ಒಂದು ಉದ್ದೇಶದಿಂದ ನಮ್ಮ ಕ್ಷೇತ್ರ ಬಹಳಷ್ಟು ಬರಗಾಲ ಪರಿಸ್ಥಿತಿ ಎದುರಿಸುತ್ತಿದೆ. ಅದೇ ಪ್ರಕಾರ ಈಗ ಹಿಂಗಾರು ಬಿತ್ತನೆ ಮಾಡಬೇಕೆಂದರೆ ಅದಕ್ಕೆ ಬೇಕಾದಂತಹ ಬೀಜ ಗೊಬ್ಬರಕ್ಕೆ ರೈತನ ಹತ್ತಿರ ದುಡ್ಡಿಲ್ಲ. ಇನ್ನು ಸರ್ಕಾರದಿಂದ ಬೀಜ ಸಬ್ಸಿಡಿ ಬಗ್ಗೆ ಆದೇಶ ಬಂದಿಲ್ಲವೆಂದು ಕೃಷಿ ಅಧಿಕಾರಿಗಳು ಹೇಳುತ್ತಾರೆ. ರೈತರಿಗೆ ಸಬ್ಸಿಡಿ 75%, 50% ಸಬ್ಸಿಡಿ ಕೊಡುತ್ತಾರೋ ಅಥವಾ free ಕೊಡುತ್ತಾರೋ, ಅದರ ಬಗ್ಗೆ ಏನೂ ಆದೇಶ ಬಂದಿಲ್ಲ. ಬೀಜ ಇದ್ದರೂ ಕೂಡ ರೈತ ಬಿತ್ತನೆ ಮಾಡಬೇಕೆಂದರೆ ಅಗ್ರಿಕಲ್ಚರ್ ಆಫೀಸಿನಲ್ಲಿ ಬೀಜ ಕೊಡುತ್ತಿಲ್ಲ. ಆದ್ದರಿಂದ ನೀವು ಎಷ್ಟು ಸಬ್ಸಿಡಿ ಕೊಡುತ್ತೀರಿ ಎಂದು ಆದಷ್ಟು ಬೇಗ ಆದೇಶ ಕಳುಹಿಸಬೇಕು. ನಾನು ತಮ್ಮಲ್ಲಿ ಕೇಳಿಕೊಳ್ಳುವುದೇನೆಂದರೆ ಸರ್ಕಾರದವರು ರೈತನ ಸಾಲ ಮನ್ನಾ ಮಾಡಬೇಕು. ಏಕೆಂದರೆ ಈ ಬಾರಿ ಬೆಳೆಯನ್ನೇ ಬೆಳೆದಿಲ್ಲ. ಆದ್ದರಿಂದ ಸಾಲ, ಬಡ್ಡಿ ಮನ್ನಾ ಮಾಡಬೇಕು. ಮಾನ್ಯ ಸಂಗಣ್ಣನವರು ಹಾಗೂ ಕಾಶೆಂಪೂರ್‌ರವರು ಹೇಳಿದ ಹಾಗೆ ಒಂದು ಎಕರೆಗೆ ಕನಿಷ್ಟ 5–6 ಸಾವಿರ ರೂಪಾಯಿ ಪರಿಹಾರ ಕೊಟ್ಟರೆ ರೈತ ಉಳಿಯುತ್ತಾನೆ, ಇಲ್ಲವೆಂದರೆ ಈ ವರ್ಷ ರೈತನ ಆತ್ಮಹತ್ಯೆಗಳು ಇನ್ನು ಮುಂದೆ ಹೆಚ್ಚಾಗುವ ಸಂಭವ ಇದೆ. ಈಗ ನಿಮ್ಮ ಸರ್ಕಾರ ಸಹಾಯ ಮಾಡಲಿಲ್ಲವೆಂದರೆ ಹೆಚ್ಚಿನ ಸಂಖ್ಯೆಯಲ್ಲಿ ರೈತ ಆತ್ಮಹತ್ಯೆಗೆ ಶರಣಾಗುತ್ತಾನೆ ಎಂದು ನನಗೆ ಅನಿಸುತ್ತದೆ. ಅದಕ್ಕೆ ಅವಕಾಶ ಕೊಡಬಾರದೆಂದು ನಾನು ಹೇಳುತ್ತೇನೆ.

ಊರಿಗೆ ಒಂದು ಕೆರೆ ಮಾಡುತ್ತೇವೆಂದು ತಾವು ಹೇಳಿದಿರಿ. ಅದನ್ನು ಆದಷ್ಟುಬೇಗ ಕಾರ್ಯಗತಕ್ಕೆ ತರಬೇಕು. ನಮ್ಮ ಕಡೆ ಪ್ರತಿಯೊಂದು ಊರಲ್ಲಿ ಒಂದೊಂದು ಕೆರೆ ಮಾಡುವುದಕ್ಕೆ ಒಂದೊಂದು ಜಾಗ ಇದೆ. ಅದರಲ್ಲಿ ಬೆಳ್ಳಿಕೊಳ ಎಂದು ದೊಡ್ಡ ಕೆರೆ ಅಥವಾ ಡ್ಯಾಂ ಆಗುವಂತಹ ಒಂದು ಜಾಗವಿದೆ ಎಂದು ನಾನು ಮಾನ್ಯ ಬಸವರಾಜ್ ಬೊಮ್ಮಾಯಿಯವರಿಗೆ ಕೇಳಿಕೊಳ್ಳುತ್ತೇನೆ. ಆಳಂದದಲ್ಲಿ ಅಮರ್ಜ ಯಾವ ರೀತಿ ಮಾಡಿದಿರಿ, ಆ

ಅಮರ್ಜದಿಂದ ಎರಡೇ ಊರಿಗೆ ಉಪಯೋಗವಾಗುವುದು. ಅಪ್ಜಲ್‌ಪುರದ ಕಡೆಗೆ ಕೆನಾಲ್ ಇದ್ದರೂ ಕೂಡ ನೀರು ಹೋಗುತ್ತಿಲ್ಲ. ಆದ್ದರಿಂದ ಬೆಳ್ಳಿಕೊಳ ಎಂದು ಒಂದು ಡ್ಯಾಂ ಆಗುವಂತಹ ಒಂದು ಸೈಟ್ ಇದೆ, ಅಲ್ಲಿ ಕೆರೆಯನ್ನು ಮಾಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಇವತ್ತು ಉದ್ಯೋಗ ಖಾತ್ರಿ ಯೋಜನೆಯಲ್ಲಿ ಪ್ರತಿಯೊಂದು ಹೊಲದಲ್ಲಿ ಕೃಷಿ ಹೊಂಡ ಮತ್ತು ಚೆಕ್‌ಡ್ಯಾಂ ಮಾಡಿ ನೀರಿನ ಮಟ್ಟ ಹೆಚ್ಚಿಸಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತಾ, ಆದಷ್ಟು ಬೇಗ ನಮ್ಮ ರೈತರಿಗೆ ಬೀಜ, ಗೊಬ್ಬರ ಮತ್ತು ಸಬ್ಸಿಡಿ ಸಿಗುವ ಹಾಗೆ ಮಾಡಬೇಕೆಂದು ಕೇಳಿಕೊಳ್ಳುತ್ತ, ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಪಿ.ಎಂ. ಅಶೋಕ (ರಾಮದುರ್ಗ):** ಮಾನ್ಯ ಅಧ್ಯಕ್ಷರೇ, ರಾಮದುರ್ಗ ತಾಲ್ಲೂಕಿನಲ್ಲಿ ಭಾಗಶ: ಎಲ್ಲಾ ಜಮೀನುಗಳು ಕೂಡ ಮಳೆ ಆಧಾರಿತವಾಗಿದ್ದು, ಈ ಬಾರಿ ಮುಂಗಾರು ಮಳೆ ಸಮಯಕ್ಕೆ ಸರಿಯಾಗಿ ಬಾರದಿರುವುದರಿಂದ ಬೆಳೆಯೆಲ್ಲಾ ಹಾಳಾಗಿದೆ. ಈಗ ಕೆಲವು ಕಡೆ ಹಿಂಗಾರು ಮಳೆ ಬಂದಿದೆ. ನಮ್ಮ ಕಡೆ ಮಲಪ್ರಭಾ ಭಾಗದಲ್ಲಿ ಕೆಲವು ಹಳ್ಳಿಗಳು ಬರುತ್ತವೆ. ಅಲ್ಲಿ ಸಣ್ಣ ಸಣ್ಣ ಕಾಲುವೆಗಳು ಇವೆ. ಆ ಸಣ್ಣ ಸಣ್ಣ ಕಾಲುವೆಯೊಳಗೆ ಕಂಟಿ ಮತ್ತು ಹುಲ್ಲುಕಡ್ಡಿ ಬೆಳೆದು ನೀರು ಹರಿಯದೆ ಬಹಳ ತೊಂದರೆಯಾಗಿದೆ. ಆದ್ದರಿಂದ ರೈತರ ಜಮೀನಿಗೆ ಕೊಡುತ್ತಿರುವಂತಹ ನೀರು ಕೂಡ ಸದ್ಬಳಕೆಯಾಗುತ್ತಿಲ್ಲ, ವಿನಾಕಾರಣ ಆ ನೀರು ಪೋಲಾಗುತ್ತಿದೆ. ರಾಮದುರ್ಗ ತಾಲ್ಲೂಕಿನಲ್ಲಿ ಶೇಕಡ 75ರಷ್ಟು ಪ್ರದೇಶ ನೀರಾವರಿ ಇಲ್ಲದೆ ಒಣ ಬೇಸಾಯಕ್ಕೆ ಒಳಪಟ್ಟಿದೆ. ಮಳೆ ಪ್ರಮಾಣ ವರ್ಷದಿಂದ ವರ್ಷಕ್ಕೆ ಗಣನೀಯವಾಗಿ ಕುಸಿಯುತ್ತಿರುವುದರಿಂದ ರೈತರಿಗೆ ವ್ಯವಸಾಯ ಮಾಡುವುದು ಬಹಳ ದುಸ್ತರವಾಗಿದೆ. ಈಗ ಆ ಕ್ಷೇತ್ರದಲ್ಲಿ ಮಹಾತ್ವಾಕಾಂಕ್ಷೆಯ ರಾಮಲಿಂಗೇಶ್ವರ ಏತ ನೀರಾವರಿ ಯೋಜನೆ ಏನಿದೆ, ಅದು ಬಹಳ ತಡವಾಗಿ ನಡೆಯುತ್ತಿದೆ. ಮಾನ್ಯ ನೀರಾವರಿ ಸಚಿವರು ಅದಕ್ಕೆ

ಪ್ರೋತ್ಸಾಹ ಕೊಟ್ಟು ಆ ಏತ ನೀರಾವರಿಯನ್ನು ಬೇಗನೆ ಮಾಡಬೇಕೆಂದು ನಾನು ಕೇಳುತ್ತಿದ್ದೇನೆ. ಇನ್ನೊಂದು ವೀರಭದ್ರೇಶ್ವರ ಏತ ನೀರಾವರಿ ಯೋಜನೆ ಇದೆ. ಈ ಏತ ನೀರಾವರಿಯನ್ನು ಮಾಡಿದರೆ ಸವದತ್ತಿ ಮತ್ತು ರಾಮದುರ್ಗ ಭಾಗದಲ್ಲಿ ಸುಮಾರು 50 ಹಳ್ಳಿಯ ರೈತರಿಗೆ ನೀರು ಕೊಡುವುದಕ್ಕೆ ಆಗುತ್ತದೆ. ಆದ್ದರಿಂದ ಆ ವೀರಭದ್ರ ಏತ ನೀರಾವರಿಗೆ ತಾವು ಒತ್ತು ಕೊಟ್ಟು ಸರ್ಕಾರದಿಂದ ಪ್ರೋತ್ಸಾಹ ಕೊಟ್ಟು ಮಾಡಬೇಕೆಂದು ನಾನು ಕಳಕಳಿಯ ವಿನಂತಿ ಮಾಡುತ್ತೇನೆ. 2008ರಲ್ಲಿ ಹವಾಮಾನ ಇಲಾಖೆಯ ಅಂದಾಜು ಮಾಡಿದ ಪ್ರಕಾರ ವಾರ್ಷಿಕ 562.30 ಮಿ.ಮಿ, 2009ರಲ್ಲಿ 538.00 ಮಿ.ಮಿ ಮಳೆಯಾಗಬೇಕಾಗಿತ್ತು. ಆದರೆ ವಾಸ್ತವಿಕವಾಗಿ ಆಗಸ್ಟ್ 2008ಕ್ಕೆ ಕೊನೆಗೊಂಡಂತೆ 305.00 ಮಿ.ಮಿ ಮಳೆಯಾಗಬೇಕಾಗಿತ್ತು. ಆದರೆ 291 ಮಿ.ಮಿ ಮಳೆಯಾಗಿದೆ. ಆದರೆ ಆಗಸ್ಟ್ 2009ಕ್ಕೆ ಕೊನೆಗೊಂಡ ತಿಂಗಳಿನಲ್ಲಿ 290 ಮಿ.ಮಿ ಮಳೆ ಯಾಗಬೇಕಾಗಿತ್ತು, ಆದರೆ ಕೇವಲ 105.00 ಮಿ.ಮಿ ಮಳೆಯಾಗಿದೆ. ಎಂದರೆ ಒಟ್ಟು 185 ಮಿ. ಮಿ. ಮಳೆ ಕಡಿಮೆಯಾದ ಹಾಗೆ ಆಯಿತು. ಆದ್ದರಿಂದ ಆ ತಾಲ್ಲೂಕಿನ ಭಾಗಶ: ಹಳ್ಳಿಗಳು ಬರ ಪರಿಸ್ಥಿತಿಯನ್ನು ಎದುರಿಸುತ್ತಿವೆ. ಮುಂದೆ ದನಕರುಗಳಿಗೆ ನೀರು ಮತ್ತು ಮೇವು ಇಲ್ಲದಂತಹ ಪರಿಸ್ಥಿತಿ ಬಂದೊದಗುತ್ತದೆ. ಆದ್ದರಿಂದ ರಾಮದುರ್ಗ ತಾಲ್ಲೂಕು ಪೂರ್ತಿ ಬರ ಎಂದು ಘೋಷಣೆ ಮಾಡಬೇಕಾಗಿಲ್ಲ, ಭಾಗಶ: ಬರವಾಗಿದೆ ಎಂದು ಘೋಷಣೆ ಮಾಡಿದರೆ ರೈತರಿಗೆ ಸಹಾಯ ಮಾಡಿದ ಹಾಗೆ ಹಾಗುತ್ತದೆ.

ಇನ್ನು ಕೃಷಿ ಉತ್ಪನ್ನಗಳಿಗೆ ನೀಡುತ್ತಿರುವ ಬೆಂಬಲ ಬೆಲೆ ಬಹಳ ದಿನಗಳಿಂದ ಅದೇ ಬೆಲೆಯನ್ನು ಕೊಡುತ್ತಿದ್ದೀರಿ. ನಮ್ಮ ಭಾಗದಲ್ಲಿ ಗೋವಿನ ಜೋಳ ಮತ್ತು ಗೋಧಿ ಬೆಳೆಯುತ್ತಿರುವಂತಹ ರೈತರು ಬಹಳ ಕಷ್ಟದಲ್ಲಿದ್ದಾರೆ. ಖಾಸಗಿ ಫ್ಯಾಕ್ಟರಿಯವರು ಬೆಲೆಗಳನ್ನು ಜಾಸ್ತಿ ಕೊಡುತ್ತಿದ್ದಾರೆ. ಆದುದರಿಂದ ರೈತರಿಗೆ ಅವರು ನೀಡುತ್ತಿರುವ ಬೆಲೆಯನ್ನು ಕೊಟ್ಟರೆ ಅನುಕೂಲವಾಗುತ್ತದೆಂದು ಕಳಕಳಿಯಿಂದ ಮನವಿ ಮಾಡುತ್ತೇನೆ.

ಇನ್ನು ಬೆಳೆ ಪರಿಹಾರ ವಿಮೆಯನ್ನು ವೈಜ್ಞಾನಿಕ ರೀತಿಯಲ್ಲಿ ನಿಗದಿಪಡಿಸಿದರೆ ಬಹಳ ಅನುಕೂಲವಾಗುತ್ತದೆ. ಏಕೆಂದರೆ ರೈತರು ಬೆಳೆದಂತಹ ಬೆಳೆಗಳು ಅತೀವೃಷ್ಟಿ ಅನಾವೃಷ್ಟಿಯಿಂದ ಹಾಳಾದರೆ ಆ ಬೆಳೆಗೆ ವೈಜ್ಞಾನಿಕವಾಗಿ ಪರಿಹಾರ ಸಿಗಬೇಕೆ ಹೊರತಾಗಿ, ರೈತರು ಮಾಡಿದ ಖರ್ಚು ಮತ್ತು ಪರಿಶ್ರಮಕ್ಕೆ ತಕ್ಕಂತೆ ವಿಮೆ ಹಣ ನಿಗದಿಯಾಗಬೇಕೆ ಹೊರತು, ಪ್ರತಿ ಹೆಕ್ಟೇರ್‌ಗೆ ನಿಗದಿ ಪಡಿಸಿದ ಒಂದೇ ದರದಲ್ಲಿ ಪರಿಹಾರ ನೀಡುವುದನ್ನು ನಿಲ್ಲಿಸಬೇಕು. ಇಲ್ಲದಿದ್ದರೆ ರೈತರಿಗೆ ಬಹಳ ಅನ್ಯಾಯವಾದ ಹಾಗೆ ಆಗುತ್ತದೆ.

ಇನ್ನು ಪ್ರತಿಯೊಬ್ಬ ರೈತನಿಗೂ ಕೃಷಿ ಪಾಸ್ ಬುಕ್ ವಿತರಣೆ ಮಾಡುವುದು ಸೂಕ್ತ. ಇದರಿಂದ ರೈತರ ಗುರುತು ಮತ್ತು ಅವರಿಗೆ ಸರ್ಕಾರದಿಂದ ನೀಡಲಾದ ಸಹಾಯ ಧನ ಮತ್ತು ಸವಲತ್ತುಗಳನ್ನು ನಮೂದು ಮಾಡುವುದರಿಂದ ಎಲ್ಲರಿಗೂ ಅನುಕೂಲವಾಗುತ್ತದೆ. ರೈತರಿಗೆ ನೀಡುವ ಸಹಾಯಧನ ಮತ್ತು ಸವಲತ್ತುಗಳನ್ನು ಸದುಪಯೋಗಪಡಿಸಿಕೊಳ್ಳಲು ಅನುಕೂಲವಾಗುವಂತೆ ರೈತರು ಸಬ್ಸಿಡಿಯಲ್ಲಿ ಪಡೆಯುವ ಬೀಜ, ರಸಗೊಬ್ಬರ ಮತ್ತು ಇತರ ಉಪಕರಗಳನ್ನು ನೀಡಿದ ಬಗ್ಗೆಯೂ ಪುಸ್ತಕದಲ್ಲಿ ದಾಖಲಾಗುವುದರಿಂದ ಯಾವ್ಯಾವ ರೈತರಿಗೆ ಎಷ್ಟೆಷ್ಟು ಕೊಟ್ಟಿದೆ ಎಂದು ಡಿಟ್ಟೈಲ್ ಸಿಕ್ಕಹಾಗೆ ಆಗುತ್ತದೆ. ಸಾವಯವ ಕೃಷಿ ಬಗ್ಗೆ ರೈತರಿಗೆ ಸರ್ಕಾರದವರು ಒಂದು ಒಳ್ಳೆಯ ಯೋಜನೆ ಮಾಡಿದ್ದಾರೆ. ಇದರಿಂದ ರೈತರು ತಮ್ಮ ಗುಂಪುಗಳಿಂದ ಸಾಕಷ್ಟು ಪ್ರಗತಿಯಾಗುವುದಕ್ಕೆ ಸಾಧ್ಯವಾಗುತ್ತದೆ. ಆದರೆ ಸರ್ಕಾರದವರು ಪ್ರತಿ ತಾಲ್ಲೂಕಿಗೆ ಒಂದರಂತೆ ಮಂಜೂರು ಮಾಡಿದ್ದು, ಪ್ರತಿ ಹೋಬಳಿಗೆ ಮಾಡಿದರೆ ಸಾವಯವ ಕೃಷಿಯಿಂದ ರೈತರಿಗೆ ಬಹಳ ಒಳ್ಳೆಯದಾಗುತ್ತದೆ ಎಂದು ಮನವಿ ಮಾಡುತ್ತಿದ್ದೇನೆ. ನಾವು ಮನವಿಯನ್ನು ಮಾಡುತ್ತಿದ್ದೇವೆ. ದಯವಿಟ್ಟು ನಮ್ಮ ರಾಮದುರ್ಗ ತಾಲ್ಲೂಕಿನ ಬಗ್ಗೆ ಮಾನ್ಯ ನೀರಾವರಿ ಸಚಿವರು ಗಮನವನ್ನು ಕೊಡಬೇಕು. ಮುಳ್ಳೂರು, ಕೊಡಲಿಕೊಪ್ಪ, ಕಲ್ಲೂರು ಮತ್ತು ಲಕ್ಕನಾಯಕಪ್ಪ ಗ್ರಾಮಗಳಿಗೆ ಸಿರಸಂಗಿ 26ನೇ distributor ಇದೆ. ಅಲ್ಲಿ ಸಾಕಷ್ಟು un authorized pump ಗಳನ್ನು ಹಾಕಿಕೊಂಡಿದ್ದಾರೆ. ನಮ್ಮ ರಾಮದುರ್ಗ

ತಾಲ್ಲೂಕಿನ ಹಳ್ಳಿಗಳು ಸುಮಾರು 8–10 ಹಳ್ಳಿಗಳಲ್ಲಿ ಕಲ್ಲೂರು, ಲಕ್ಕನಾಯಕಪ್ಪ ಗ್ರಾಮ, ಮಳ್ಳೂರು, ಕೊಡಲಿಕೊಪ್ಪ ಇಲ್ಲಿ un authorized pump ಗಳನ್ನು ಹಾಕಿರುವುದರಿಂದ ಈ ಹಳ್ಳಿಗಳಿಗೆ ನೀರು ಬರುವುದಿಲ್ಲ. ತಾವು ಇವುಗಳನ್ನು stop ಮಾಡಿಸಬೇಕು. ಆ ರೀತಿ ಆಗದಿದ್ದರೆ ಅವರಿಗೆ ಒಂದು ವಾರ ರಜಾ ಕೊಟ್ಟು ಪಂಪ್‌ಗಳನ್ನು ನಿಲ್ಲಿಸಿದರೆ ನಮ್ಮ ರಾಮದುರ್ಗ ತಾಲ್ಲೂಕಿನಲ್ಲಿ 10–15 ಹಳ್ಳಿಗಳಿಗೆ ಅನುಕೂಲವಾಗುತ್ತದೆ. ಆ ರೀತಿ ಮಾಡಿದರೆ ಒಳ್ಳೆಯದಾಗುತ್ತದೆ, ಇಲ್ಲವೆಂದರೆ ನರಗುಂದ LBC ಯಿಂದ ಬರುವ ಮುಖ್ಯ ಕಾಲುವೆಯನ್ನು ಮಾನ್ಯ ನೀರಾವರಿ ಸಚಿವರು re-modeling ಮಾಡಿಸಿದರೆ ಅನುಕೂಲವಾಗುತ್ತದೆ. ಈಗಾಗಲೇ ಈ proposal ಸರ್ಕಾರದ ಲೆವಲ್‌ನಲ್ಲಿ pending ಇದೆ. ಅದನ್ನು ಮಾಡಿದರೆ ನೀರು ಸರಬರಾಜು ಆಗುತ್ತದೆ. ರೈತರಿಗೆ ಒಳ್ಳೆಯದಾಗುತ್ತದೆಂದು ನಾನು ತಮ್ಮಲ್ಲಿ ಕಳಕಳಿಯ ಮನವಿಯನ್ನು ಮಾಡುತ್ತೇನೆ. ಆದುದರಿಂದ ರಾಮದುರ್ಗ ತಾಲ್ಲೂಕಿನ ಭಾಗಶ: ಹಳ್ಳಿಗಳನ್ನು ಬರ ಪ್ರದೇಶವೆಂದು ಘೋಷಿಸಿದರೆ ಇದರಿಂದ ಸರ್ಕಾರದಿಂದ ಸವಲತ್ತು ದೊರೆತು ರೈತರಿಗೆ ಅನುಕೂಲವಾಗುತ್ತದೆಂದು ಹೇಳುತ್ತೇನೆ. ನನಗೆ ಮಾತನಾಡಲು ಅವಕಾಶ ಕೊಟ್ಟದ್ದಕ್ಕೆ ತಮಗೆ ಧನ್ಯವಾದಗಳನ್ನು ಅರ್ಪಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

**ಉಪಾಧ್ಯಕ್ಷರು:** ನೆಹರು ಓಲೇಕಾರ್‌ರವರೆ ಮಾತನಾಡಿ.

**ಶ್ರೀ ನೆಹರು ಓಲೇಕಾರ (ಹಾವೇರಿ):** ಮಾನ್ಯ ಉಪಾಧ್ಯಕ್ಷರೆ, ರೈತರ ಸಮಸ್ಯೆಗಳ ಹಾಗೂ ಬರ ಪರಿಸ್ಥಿತಿಗೆ ಯಾವ ರೀತಿಯಲ್ಲಿ ಪರಿಹಾರ ಮಾಡಬೇಕೆಂಬ ನಿಟ್ಟಿನಲ್ಲಿ ಚರ್ಚೆ ಮಾಡಲು ನನಗೆ ಅವಕಾಶ ಕೊಟ್ಟದ್ದಕ್ಕಾಗಿ ತಮಗೆ ವಂದಿಸುತ್ತೇನೆ. ಮೊಟ್ಟಮೊದಲನೆಯದಾಗಿ ಈ ರಾಜ್ಯದ ಮುಖ್ಯಮಂತ್ರಿಯವರಿಗೆ ಸದನದ ಮೂಲಕ ಅಭಿನಂದನೆಗಳನ್ನು ಹೇಳಬಯಸುತ್ತೇನೆ. ರಾಜ್ಯದ ಮುಖ್ಯಮಂತ್ರಿಗಳಾಗುವಂಥ ಸಂದರ್ಭದಲ್ಲಿ ಹಸಿರು ಶಾಲನ್ನು ಹಾಕಿ, ನಾವು ರೈತರ ಪರವಾಗಿದ್ದೇವೆನ್ನುವ ಮಾತನ್ನು ಹೇಳುವುದರ ಮೂಲಕ ಪ್ರಮಾಣವಚನವನ್ನು ಸ್ವೀಕರಿಸಿದಂಥ ಮಾನ್ಯ ಮುಖ್ಯ ಮಂತ್ರಿಯವರು ಮೊಟ್ಟ ಮೊದಲನೆಯದಾಗಿ ನಮ್ಮ ರಾಜ್ಯದ ರೈತರಿಗೆ

17 ಲಕ್ಷ ಪಂಪ್ ಸೆಟ್‌ಗಳಿಗೆ ಉಚಿತ ವಿದ್ಯುತ್ ಅನ್ನು ಕೊಡುವುದರ ಮೂಲಕ ರೈತರಿಗೆ ಒಂದು ಕೊಡುಗೆಯನ್ನು ಈ ರಾಜ್ಯದಲ್ಲಿ ಕೊಟ್ಟಿದ್ದಾರೆಂದು ಹೇಳುವುದಕ್ಕೆ ಬಹಳ ಹೆಮ್ಮೆ ಎನಿಸುತ್ತದೆ.

**ಡಾ: ಶರಣ ಪ್ರಕಾಶ ಪಾಟೀಲ್:** ಹಾಗೆ ಎಷ್ಟೆಷ್ಟು ಗಂಟೆಗಳ ಕಾಲ ವಿದ್ಯುತ್ ಕೊಟ್ಟಿದ್ದಾರೆಂಬುದನ್ನು ಹೇಳಿ.

**ಶ್ರೀ ನೆಹರು ಓಲೇಕಾರ:** ಅದನ್ನು ಹೇಳುತ್ತೇನೆ.

**ಶ್ರೀ ಎಂ.ಪಿ. ಕುಮಾರಸ್ವಾಮಿ:** ನಿಮಗೆ ಸಮಾಧಾನವಾಗಿ ಕೇಳುವುದಕ್ಕೆ ತಾಳ್ಮೆ ಇಲ್ಲವಲ್ಲಾ. ...

**ಶ್ರೀ ನೆಹರು ಓಲೇಕಾರ:** ಅದರ ಜೊತೆಯಲ್ಲಿ ಎರಡನೆಯ ಹೆಜ್ಜೆಯನ್ನು ನಮ್ಮ ಮಾನ್ಯ ಮುಖ್ಯಮಂತ್ರಿಯವರು ಇವತ್ತಿನ ದಿವಸ ಇಟ್ಟಿದ್ದಾರೆಂದು ಹೇಳುವುದಕ್ಕೆ ನಮಗೆ ಬಹಳ ಹೆಮ್ಮೆ ಎನಿಸುತ್ತದೆ. ನಮ್ಮ ಈ ರಾಜ್ಯದ ರೈತರ ಸಮಸ್ಯೆಗಳು ಮತ್ತು ಬರ ಪೀಡಿತ ಪ್ರದೇಶಗಳ ಬಗ್ಗೆ ಚರ್ಚೆ, ಅತೀ ಹೆಚ್ಚು ಮಳೆಯಾಗಿ ಬೆಳೆ ಹಾನಿಯಾಗಿರುವ ಪರಿಸ್ಥಿತಿಯ ಬಗ್ಗೆ ಚರ್ಚೆ ಮಾಡುವುದಕ್ಕೆ ಇವತ್ತು ವಿಶೇಷ ಅಧಿವೇಶನವನ್ನು ಕರೆದಿರುವಂಥಾದ್ದು. ಇದು ಇತಿಹಾಸದಲ್ಲೇ ಮೊದಲೆಯದಾಗಿದ್ದು, ಬಹಳ ಉತ್ತಮವಾದಂಥ ಕೆಲಸವನ್ನು ಮಾಡಿದ್ದಾರೆಂದು ಹೇಳುವುದಕ್ಕೆ ನಮಗೆ ಬಹಳ ಹೆಮ್ಮೆ ಎನಿಸುತ್ತದೆ. ಈ ಸಂದರ್ಭದಲ್ಲಿ ಈ ರಾಜ್ಯದ ರೈತರು ಒಂದಲ್ಲ ಒಂದು ಸಮಸ್ಯೆಗಳನ್ನು ಎದುರಿಸುತ್ತಲೇ ಬಂದಿದ್ದಾರೆ. ಮಳೆ ಹೆಚ್ಚಾದಾಗ ಪೈರುಗಳು ನಾಶವಾಗಿರುವಂಥಾದ್ದು, ಮಳೆ ಬಾರದೇ ಇದ್ದಾಗ ಅನಾವೃಷ್ಟಿಯಿಂದ ಪೈರುಗಳು ಬಾರದೇ ಇರುವಂಥಾದ್ದು. ಈ ರೀತಿಯಾಗಿ ಪ್ರತಿ ಹಂತದಲ್ಲೂ ರೈತ ಈ ರಾಜ್ಯದಲ್ಲಿ ತೊಂದರೆಯನ್ನು ಅನುಭವಿಸುತ್ತಾ ಬಂದಿದ್ದಾರೆ. ರೈತರು ಮೂರ್ನಾಲ್ಕು ವರ್ಷಗಳಿಗೊಮ್ಮೆ ಬೆಳೆಯನ್ನು ಸರಿಯಾಗಿ ಬೆಳೆದರೆಂದರೆ ಆ ಬೆಳೆಗೆ ಸರಿಯಾದ ಬೆಲೆ ಸಿಗದೇ ರೈತ ನಲುಗಿರುವಂಥಾದ್ದನ್ನು ನಾವು ಈ ರಾಜ್ಯದಲ್ಲಿ ಕಂಡಿದ್ದೇವೆ. ಆ ಕಾರಣಕ್ಕಾಗಿ ಈ ಎಲ್ಲಾ ಸಮಸ್ಯೆಗಳಿಂದ ರೈತರ ತೊಂದರೆಗಳನ್ನು ಯಾವ ರೀತಿಯಾಗಿ ದೂರ ಮಾಡಬೇಕೆನ್ನುವ

ಉದ್ದೇಶದಿಂದ ಇವತ್ತಿನ ದಿವಸ ಸದನ ಏನು ನಡೆಯುತ್ತಿದೆ, ಈ ಸದನ ನಡೆಯುವುದರಲ್ಲಿ ಅನೇಕ ಜನ ಸದಸ್ಯರು ರೈತರ ಸಮಸ್ಯೆಗಳ ಬಗ್ಗೆ, ಏನೇನು ಸಮಸ್ಯೆಗಳನ್ನು ಎದರಿಸುತ್ತಾರೆಂಬ ಬಗ್ಗೆ ಇಲ್ಲಿ ಸಾಕಷ್ಟು ಚರ್ಚೆ ನಡೆಯುತ್ತಿರುವಂಥ ಸಂದರ್ಭದಲ್ಲಿ ನಾನು ಸಹ ಕೆಲವು ಸಲಹೆಗಳನ್ನು ಸರ್ಕಾರಕ್ಕೆ ಸದನದ ಮೂಲಕ ಹೇಳಬಯಸುತ್ತೇನೆ. ರೈತರು ಏನು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ, ತೊಂದರೆಗಳನ್ನು ಅನುಭವಿಸುತ್ತಿದ್ದಾರೆ, ಅದಕ್ಕೆ ಪರಿಹಾರವಾಗಿ ಇವತ್ತು ಉದ್ಯೋಗ ಖಾತರಿ ಯೋಜನೆ ಎಂದು ಏನು ಜಾರಿಗೆ ಬಂದಿದೆ. ಈ ಯೋಜನೆಯಲ್ಲಿ ಈಗಾಗಲೇ ರೈತರ ಹೊಲಗಳಿಗೆ ಗಿಡಗಳನ್ನು ನೆಡುವುದಕ್ಕೆ, ಹಣ್ಣಿನ ಸಸಿಗಳನ್ನು ನೆಡುವುದಕ್ಕೆ, ಅವಕಾಶವನ್ನು ಸರ್ಕಾರ ಕಲ್ಪಿಸಿಕೊಟ್ಟಿದೆ, ಬಹಳ ಸಂತೋಷ. ಇದರ ಜೊತೆಗೆ ರೈತಾಪಿ ಕೆಲಸವನ್ನು ಮಾಡುವಂಥ, ಬೇರೆ ಬೆಳೆಗಳನ್ನು ಬೆಳೆಯುವುದಕ್ಕೂ ಸಹಿತ, ಈ ಉದ್ಯೋಗ ಖಾಸತಿ ಯೋಜನೆಯಲ್ಲಿ ಅವಕಾಶವನ್ನು ಕಲ್ಪಿಸಿ ಕೊಟ್ಟಿರೆಂದರೆ ರೈತರಿಗೆ ಬಹಳ ಅನುಕೂಲವಾಗುತ್ತದೆನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ಹೇಳ ಬಯಸುತ್ತೇನೆ. ಇವತ್ತು ಉದ್ಯೋಗ ಖಾತರಿ ಯೋಜನೆ ಕೆಲಸ ಪಾರಂಭವಾದಾಗಿನಿಂದ ರೈತಾಪಿ ಕೆಲಸಗಳನ್ನು ಮಾಡುವುದಕ್ಕೆ ಜನರು ಬರುತ್ತಾ ಇಲ್ಲ. ಅವರು ರೈತಾಪಿ ಕೆಲಸಗಳನ್ನು ಮಾಡಲು ಬರಬೇಕೆಂದರೆ NREGಯಲ್ಲಿ ಇವತ್ತು ಉದ್ಯೋಗ ಖಾತ್ರಿ ಯೋಜನೆಯಲ್ಲಿ ಕೊಡುವಷ್ಟು ಹಣವನ್ನು ರೈತರು ಕೂಲಿ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ರೈತರು ಇಷ್ಟು ಹಣವನ್ನು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲವೆನ್ನುವ ಕಾರಣದಿಂದ, ಜನರು ಉದ್ಯೋಗ ಖಾತ್ರಿ ಯೋಜನೆ ಕೆಲಸಕ್ಕೆ ಹೋಗುತ್ತಿರುವುದರಿಂದ ರೈತರು ಕೆಲಸವನ್ನು ಮಾಡುವುದಕ್ಕೆ ರೈತಾಪಿ ಕೆಲಸ ಮಾಡುವುದಕ್ಕೆ ಜನರು ಬಾರದೇ ಇರುವುದರಿಂದ ರೈತರ ಭೂಮಿ ಇವತ್ತು ಪಾಳು ಬೀಳುವಂತೆ ಆಗಿರುವುದರಿಂದ ರೈತರು ಅನೇಕ ರೀತಿಯಲ್ಲಿ ಸಂಕಷ್ಟವನ್ನು ಎದುರಿಸುವಂತೆ ಆಗಿದೆ. ಆ ಕಾರಣದಿಂದ ಕೂಡಲೇ ಸರ್ಕಾರ ಈ ಬಗ್ಗೆ ಗಮನವರಿಸಬೇಕು. ರೈತರು ಬೆಳೆಯುವಂಥ ಎಲ್ಲಾ ಬೆಳೆಗಳಿಗೂ ಕೆಲಸವನ್ನು ಮಾಡಿಸುವುದಕ್ಕೆ

ಅವಕಾಶವನ್ನು ಮಾಡಿಕೊಡಬೇಕೆಂಬ ಮನವಿಯನ್ನು ತಮ್ಮ ಮೂಲಕ ಮಾಡುತ್ತೇನೆ.

ಇದರ ಜೊತೆಗೆ ಬೆಳೆ ವಿಮೆಯನ್ನು ಹೋಬಳಿ ಮಟ್ಟದಲ್ಲಿ ಜಾರಿಗೆ ತರಲಾಗಿದೆ. ಇದನ್ನು ಹೋಬಳಿ ಮಟ್ಟಕ್ಕೆ ತಂದಿದ್ದರೂ ಅನೇಕ ರೈತರಿಗೆ ಇದರ ಬಗ್ಗೆ ಸಂಪೂರ್ಣ ಮಾಹಿತಿ ಇಲ್ಲ. ಇದಕ್ಕೆ ಒಂದು ತಜ್ಞರ ಸಮಿತಿಯನ್ನು ನೇಮಕ ಮಾಡಿ, ಬೆಳೆ ವಿಮೆ ಯೋಜನೆಯನ್ನು ಪಂಚಾಯಿತಿ ಮಟ್ಟಕ್ಕೆ ತರುವಂಥ ಕೆಲಸವನ್ನು ಮಾಡಿದರೆ ಎಲ್ಲಾ ರೈತರು ಇದರಲ್ಲಿ ಭಾಗಿಯಾಗುವುದಕ್ಕೆ ಸಾಧ್ಯವಾಗುತ್ತದೆ. ಆ ಕಾರಣದಿಂದ ತಜ್ಞರ ಸಮಿತಿಯನ್ನು ನೇಮಕ ಮಾಡಿ, ಅನುಭವಿ ಶಾಸಕರನ್ನು ಈ ಸಮಿತಿಯಲ್ಲಿ ಸೇರಿಸಿದರೆ ಇದರಿಂದ ಖಂಡಿತವಾಗಿಯೂ ಈ ರಾಜ್ಯದ ರೈತರಿಗೆ ಸಹಾಯ ಮಾಡಿದಂತೆ ಆಗುತ್ತದೆನ್ನುವ ಮಾತನ್ನು ತಮ್ಮ ಮೂಲಕ ಸರ್ಕಾರದ ಗಮನ ಸೆಳೆಯಬಯಸುತ್ತೇನೆ.

ಇದರ ಜೊತೆಯಲ್ಲಿ ಬೆಂಬಲ ಬೆಲೆಯ ಬಗ್ಗೆ ಹೇಳುವುದಾದರೆ, ಇವತ್ತು ರಾಜ್ಯದಲ್ಲಿ ಏನಾದರೂ ಒಂದು ವರ್ಷ ಸರಿಯಾದ ರೀತಿಯಲ್ಲಿ ಬೆಳೆಯನ್ನು ಬೆಳೆದರೆಂದರೆ, ಅದಕ್ಕೆ ಸರಿಯಾದ ಬೆಲೆ ಸಿಗುವುದಿಲ್ಲ. ಅದಕ್ಕೆ ಸರ್ಕಾರ ಇವತ್ತು ಏನು ಬೆಲೆಯನ್ನು ಘೋಷಣೆ ಮಾಡಿದೆ. ಗೋವಿನ ಜೋಳವನ್ನು ಖರೀದಿ ಮಾಡಬೇಕೆಂದರೆ 840 ರೂಪಾಯಿಗಳನ್ನು ನಿಗದಿ ಪಡಿಸಿದೆ. ಈ 840 ರೂಪಾಯಿಗಳಂತೆ ಬೆಳೆದ ರೈತರಿಂದ ಖರೀದಿ ಮಾಡಿದರೆ ಅದು ಸಾಕಾಗುವುದಿಲ್ಲ. ಅವನು ಇದನ್ನು ಬೆಳೆಯಲು ಏನು ಹಣ ಖರ್ಚು ಮಾಡುತ್ತಾನೆ. ಆ ಖರ್ಚು ಈ 840 ರೂಪಾಯಿಗಳಿಗೆ ಸಮವಾಗುತ್ತದೆಯೇ ಹೊರತು ರೈತರಿಗೆ ಜೀವನ ಮಾಡಲು ಅವನು ದುಡಿದಿರುವುದಕ್ಕೆ ಸರಿಯಾದ ಪ್ರತಿಫಲ ಸಿಗದ ರೀತಿಯಲ್ಲಿ ಇವತ್ತು ಆಗುತ್ತಿರುವುದನ್ನು ನೋಡಿದರೆ ಇದು ನಿಜಕ್ಕೂ ಖೇದವೆನಿಸುತ್ತದೆ. ಆ ಕಾರಣದಿಂದ ಇವತ್ತು ಸರ್ಕಾರ ಏನು ಬೆಂಬಲ ಬೆಲೆಯನ್ನು ಘೋಷಣೆ ಮಾಡಿದೆ. ಸರ್ಕಾರ ಗೊವಿನ ಜೋಳಕ್ಕೆ 840 ರೂ.ಗಳು, ತೊಗರಿಗೆ 2,000,

ಹತ್ತಿಗೆ 1,800 ರೂಪಾಯಿಗಳೆಂದು ಏನು ಮಾಡಿದೆ. ಈ ಎಲ್ಲಾ ಬೆಳೆಗಳಿಗೂ 500 ರೂಪಾಯಿಗಳನ್ನು ಹೆಚ್ಚು ಮಾಡಿ, ಬೆಂಬಲ ಬೆಲೆಯನ್ನು ನಿಗದಿ ಮಾಡಬೇಕೆನ್ನುವ ಮಾತನ್ನು ತಮ್ಮ ಮೂಲಕ ಸರ್ಕಾರಕ್ಕೆ ಹೇಳಬಯಸುತ್ತೇನೆ. ಇದರ ಜೊತೆಯಲ್ಲಿ ಇನ್ನೂ ಅನೇಕ ಸಮಸ್ಯೆಗಳು ಇವೆ.

ಇವತ್ತು ಹೆಚ್ಚು ಜನರು ಕೆಲಸಕ್ಕೆ ಸಿಗದೇ ಇರುವುದರಿಂದ ಯಂತ್ರಗಳನ್ನು ಬಳಕೆ ಮಾಡುವಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಇವತ್ತು ಸರ್ಕಾರ ಟ್ರಾಕ್ಟರ್‌ಗೆ ಹಿಂದೆ 30,000 ರೂಪಾಯಿಗಳ ಸಬ್ಸಿಡಿಯನ್ನು ಕೊಡುತ್ತಿತ್ತು. ಅದನ್ನು 60,000 ರೂಪಾಯಿಗಳಿಗೆ ಏರಿಕೆ ಮಾಡಿರುವಂಥಾದ್ದು ಬಹಳ ಸಂತೋಷ. ಆದರೆ 60,000 ರೂಪಾಯಿಗಳಿಗೆ ಏರಿಸಿರುವಂಥ ಸಬ್ಸಿಡಿ ಇದೆಯಲ್ಲಾ, ಅದು ಈಗಾಗಲೇ ಯಂತ್ರಗಳ ರೇಟ್ ಹೆಚ್ಚಾಗಿರುವುದರಿಂದ ಸರ್ಕಾರ ಅದಕ್ಕೆ ಇನ್ನೂ ಹೆಚ್ಚಿನ ಉತ್ತೇಜನವನ್ನು ಕೊಡುವುದರ ಮೂಲಕ ಒಂದು ಲಕ್ಷ ರೂಪಾಯಿಗಳನ್ನು ಟ್ರಾಕ್ಟರ್‌ಗಳಿಗೆ ಸಬ್ಸಿಡಿ ಮಾಡಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಹೇಳಬಯಸುತ್ತೇನೆ. ಈ ಹಣವನ್ನು ಹೆಚ್ಚು ಮಾಡಿದರೆ ಸಣ್ಣ ರೈತರು ಸಹಿತ ಟ್ರಾಕ್ಟರ್‌ಗಳನ್ನು ಬಳಕೆ ಮಾಡುವುದಕ್ಕೆ ಅನುಕೂಲವಾಗುತ್ತದೆ.

**ಶ್ರೀ ಎ. ಮಂಜು:** ಟ್ರಾಕ್ಟರ್‌ಗೆ ಕೇಂದ್ರ ಸರ್ಕಾರ ಎಷ್ಟು ಕೊಡುತ್ತಿದೆ ಎಂಬುದನ್ನು ಹೇಳಿ.

**ಶ್ರೀ ನೆಹರೂ ಓಲೇಕಾರ:** ನಾವು ರಾಜ್ಯ ಸರ್ಕಾರಕ್ಕೆ ವಿಷಯವನ್ನು ಹೇಳುತ್ತಿದ್ದೇವೆ. ನೀವು ಹೇಳಿ ಕೇಂದ್ರಸರ್ಕಾರದಿಂದ ಒಂದಷ್ಟು ಹಣವನ್ನು ತರಿಸಿಕೊಡಿ, ಆಗ ಸರಿಯಾಗುತ್ತದೆ. ಸಣ್ಣ ರೈತರು ಯಂತ್ರಗಳನ್ನು ಬಳಕೆ ಮಾಡಿಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ಇದರಿಂದ ಹೆಚ್ಚು ರೈತರು ಹೆಚ್ಚಿಗೆ ಬೆಳೆಯನ್ನು ಬೆಳೆಗಳನ್ನು ಬೆಳೆದು, ರಾಜ್ಯದಲ್ಲಿರುವ ಆಹಾರ ಸಮಸ್ಯೆಯನ್ನು, ತೊಂದರೆಯನ್ನು ಬಗೆಹರಿಸುವುದಕ್ಕೆ ಸಾಧ್ಯವಾಗುತ್ತದೆನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ.

**6–30 PM**

**ಶ್ರೀ ನೆಹರೂ ಓಲೇಕಾರ:** ಇವತ್ತು ನಮ್ಮ ರಾಜ್ಯದಲ್ಲಿ ಅನೇಕ ನದಿಗಳು ಹರಿಯುತ್ತಿರುವಂಥ ಸಂದರ್ಭದಲ್ಲಿ ಮಳೆಗಾಲದಲ್ಲಿ ನದಿಗಳು ತುಂಬಿ, ನೀರು ಹರಿದು ಹೋಗುತ್ತದೆ, ಬೇಸಿಗೆಯಲ್ಲಿ ಒಂದು ಹನಿ ನೀರೂ ಸಹ ನದಿಗಳಲ್ಲಿ ಇರುವುದಿಲ್ಲ. ಆದ್ದರಿಂದ, ನದಿ ದಡಗಳಲ್ಲಿರುವ ಗ್ರಾಮಗಳಲ್ಲಿ ಚೆಕ್ ಡ್ಯಾಂಗಳನ್ನು ಅಥವಾ ಬ್ಯಾರೇಜುಗಳನ್ನು ಕಟ್ಟುವುದರ ಮೂಲಕ ನೀರನ್ನು ತಡಹಿಡಿಯುವಂಥ ಕೆಲಸವನ್ನು ಮಾಡಿದರೆ ನದಿಯ ದಡದಲ್ಲಿರುವಂಥ ರೈತರು ಆ ನದಿಯ ನೀರನ್ನು ಬಳಕೆ ಮಾಡಿಕೊಂಡು ಮುಂದಿನ ದಿನಗಳಲ್ಲಿ ಫಸಲನ್ನು ತೆಗೆಯಲಿಕ್ಕೆ, ದನಕರುಗಳಿಗೆ, ಪಶುಪಕ್ಷಿಗಳಿಗೆ ಅನುಕೂಲವಾಗುತ್ತದೆ ಮತ್ತು ಅದರಿಂದ ವಿಶೇಷವಾಗಿ ಅಂತರ್ಜಲದ ಮಟ್ಟ ಹೆಚ್ಚಾಗುತ್ತದೆ. ಇವತ್ತು ಅತ್ಯಂತ ಅವಶ್ಯವಾಗಿರುವಂಥಾದ್ದು ಎಂದರೆ ಬ್ಯಾರೇಜುಗಳ ನಿರ್ಮಾಣ ಮಾಡುವಂಥಾದ್ದು. ಅದಕ್ಕೆ ನಮ್ಮ ನೀರಾವರಿ ಮಂತ್ರಿಗಳು ಕೂಡಲೇ ಆ ಕಾರ್ಯವನ್ನು ಮಾಡಬೇಕು ಎಂದು ಈ ಸಂದರ್ಭದಲ್ಲಿ ನಾನು ವಿನಂತಿಯನ್ನು ಸಹ ಮಾಡುತ್ತೇನೆ. ಅದರ ಜೊತೆಯಲ್ಲಿ, ಬಿತ್ತನೆ ಬೀಜಗಳನ್ನು, ಗೊಬ್ಬರವನ್ನು ....

**ಉಪಾಧ್ಯಕ್ಷರು:** ಬೇಗ ಮುಗಿಸಿ.

**ಶ್ರೀ ನೆಹರೂ ಓಲೇಕಾರ:** ಕೃಷಿ ಬಗ್ಗೆ ನಾನು ಸಲಹೆಗಳನ್ನು ಕೊಡುತ್ತಿದ್ದೇನೆ. ಆ ಸಲಹೆಗಳನ್ನು ಸರ್ಕಾರ ಗಮನಿಸಬೇಕಾಗುತ್ತದೆ. ನಾನು ಸಂಪೂರ್ಣವಾಗಿ ಯಾವುದೇ ವಿಚಾರಗಳನ್ನು ಪ್ರಸ್ತಾಪ ಮಾಡುತ್ತಿಲ್ಲ. ರೈತರ ಸಮಸ್ಯೆಗಳನ್ನು ನಾನು ಹೇಳುತ್ತಿದ್ದೇನೆ. ರೈತರ ಸಮಸ್ಯೆಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಸಲಹೆಗಳನ್ನು ಕೊಡುತ್ತಿದ್ದೇನೆ. ಉಳಿದ ವಿಚಾರಗಳನ್ನು ನಾನು ಪ್ರಸ್ತಾಪ ಮಾಡುತ್ತಿಲ್ಲ. ಮಳೆ ಬರುವುದಕ್ಕೆ 15–20 ದಿನ ಮುಂಚಿತವಾಗಿ ಬಿತ್ತನೆ ಬೀಜಗಳನ್ನು ಮತ್ತು ಗೊಬ್ಬರವನ್ನು ಎಲ್ಲ ಜಿಲ್ಲೆಗಳಿಗೆ ಕಳುಹಿಸುವಂಥ ವ್ಯವಸ್ಥೆಯನ್ನು ನಮ್ಮ ಕೃಷಿ ಸಚಿವರು ಮಾಡಬೇಕಾಗುತ್ತದೆ. ಇದರಲ್ಲಿ

ವಿಳಂಬವಾದರೆ ಬಿತ್ತನೆಗೆ ತೊಂದರೆಯಾಗುತ್ತದೆ. ಭೂಮಿ ಹದವಾದಂಥ ಸಂದರ್ಭದಲ್ಲಿ ಸರಿಯಾಗಿ ಬೀಜವನ್ನು ಬಿತ್ತಲಿಲ್ಲ ಎಂದರೆ ಬೆಳೆ ಕುಂಠಿತವಾಗವಂಥ ಪ್ರಸಂಗ ಬರುತ್ತದೆ. ಬಿತ್ತನೆ ಬೀಜ ಮತ್ತು ಗೊಬ್ಬರದ ಕಾರಣಕ್ಕೆ ಅನೇಕ ಕಡೆಗಳಲ್ಲಿ ತೊಂದರೆಗಳಾಗಿರುವುದನ್ನು ನಾವು ಗಮನಿಸಿದ್ದೇವೆ. ಉದಾಹರಣೆಗೆ ಹೇಳಬೇಕಾದರೆ, ಹಾವೇರಿ ಜಿಲ್ಲೆಯಲ್ಲಿ ಗೊಬ್ಬರದ ಬಗ್ಗೆ, ಬಿತ್ತನೆ ಬೀಜದ ಬಗ್ಗೆ ಗಲಾಟೆಯಾಗಿರುವುದನ್ನೂ ಸಹ ತಾವು ಗಮನಿಸಿದ್ದೀರಿ. ಆದ್ದರಿಂದ ಎಲ್ಲ ಜಿಲ್ಲೆಗಳಿಗೂ ಗೊಬ್ಬರ ಮತ್ತು ಬಿತ್ತನೆ ಬೀಜಗಳನ್ನು ಮುಂಚಿತವಾಗಿಯೇ ಕಳುಹಿಸಿಕೊಡುವಂಥ ವ್ಯವಸ್ಥೆಯನ್ನು ಕೃಷಿ ಸಚಿವರು ಮಾಡಬೇಕು ಎಂದು ನಾನು ತಮ್ಮ ಮೂಲಕ ವಿನಂತಿಯನ್ನು ಮಾಡುತ್ತೇನೆ.

ಇನ್ನು, ನೀರಾವರಿ ಯೋಜನೆಗಳ ಬಗ್ಗೆ ಹೇಳಬೇಕೆಂದರೆ, ಕೃಷ್ಣಾ ಕೊಳ್ಳದಲ್ಲಿರುವಂಥ ನೀರನ್ನು ಬಳಕೆ ಮಾಡಿಕೊಳ್ಳಲು ನಮಗೆ A Scheme ನಲ್ಲಿ ಅವಕಾಶವನ್ನು ಕೊಟ್ಟಿದ್ದರೂ ಸಹ ನಾವು ಸರಿಯಾದ ರೀತಿಯಲ್ಲಿ ಆ ಅವಕಾಶವನ್ನು ಉಪಯೋಗ ಮಾಡಿಕೊಳ್ಳುತ್ತಿಲ್ಲ. ಕೃಷ್ಣಾ ಕೊಳ್ಳದಲ್ಲಿರತಕ್ಕಂಥ ನೀರನ್ನು ಎರಡು ಭಾಗಗಳಾಗಿ ವಿಂಗಡಣೆ ಮಾಡಿ allotment ಮಾಡಲಾಗಿದೆ. ಒಂದು, ಹನಿ ನೀರಾವರಿ ಯೋಜನೆಗಳಿಗಾಗಿ allotment ಮಾಡಿರುವಂಥಾದ್ದು. ಹಿಂದಿನ ಅಧಿವೇಶನ ಸಂದರ್ಭದಲ್ಲಿ ನಾನು ಪ್ರಶ್ನೆಯನ್ನು ಹಾಕಿ, ನೀರಾವರಿ ಸಚಿವರಿಗೆ ....

**ಉಪಾಧ್ಯಕ್ಷರು:** ಬೇಗ ಮುಗಿಸಿ.

**ಶ್ರೀ ನೆಹರೂ ಓಲೇಕಾರ:** ನನಗೆ ಅವಕಾಶ ಕೊಟ್ಟು ಇನ್ನೂ ಹತ್ತು ನಿಮಿಷಗಳಾಗಿಲ್ಲ. ಬಹಳ ಮಹತ್ವದ ವಿಚಾರಗಳನ್ನು ಪ್ರಸ್ತಾಪ ಮಾಡುತ್ತಿದ್ದೇನೆ.

**ಶ್ರೀ ಬಂಡಪ್ಪ ಕಾಶೆಂಪೂರ್:** ಹಸಿರು ಶಾಲು ಹಾಕಿಕೊಂಡು ಅಷ್ಟು ಮಾಡಿದ್ದಾರೆ, ಇಷ್ಟು ಮಾಡಿದ್ದಾರೆ ಎಂದು ಮೊದಲು ಹೇಳಿದರು. ಮತ್ತೆ ನೂರೆಂಟು ಸಲಹೆಗಳನ್ನು ನೀವೇ ಕೊಡುತ್ತೀರಿ ಎನ್ನುವುದಾದರೆ ಮೊದಲು ಅಷ್ಟೆಲ್ಲ ಏಕೆ ಹೇಳಿದಿರಿ?

**ಶ್ರೀ ನೆಹರೂ ಓಲೇಕಾರ:** ಎಲ್ಲ ಸಮಸ್ಯೆಗಳನ್ನು ಪರಿಹಾರ ಮಾಡಿದ್ದಾರೆ ಎಂದು ಹೇಳಲಿಲ್ಲ. ನಮ್ಮ ಸರ್ಕಾರ ಬಂದು ಕೇವಲ ಒಂದುಕಾಲು ವರ್ಷವಾಯಿತು. ನೀವು ಬಹಳ ವರ್ಷ ಆಡಳಿತ ಮಾಡಿದಾಗ ಏನು ಮಾಡಿದಿರಿ ಎನ್ನುವುದನ್ನು ಹೇಳಬಾಕಾಗುತ್ತದೆ. ನಮ್ಮ ಸರ್ಕಾರ ಬಂದ ಒಂದು ವರ್ಷದಲ್ಲಿ ಇಷ್ಟೆಲ್ಲ ಮಾಡುತ್ತಿದ್ದಾರೆ ಎನ್ನುವುದಕ್ಕೆ ಸಂತೋಷ ಪಡೇಕು, ಅಭಿನಂದನೆ ಹೇಳಬೇಕು. ಅದನ್ನು ಬಿಟ್ಟು ನೀವು ಅದನ್ನೇನು ಮಾಡಿದಿರಿ, ಇದನ್ನೇನು ಮಾಡಿದರೆ ಎಂದರೆ ನಾವು ಆಡಳಿತ ಮಾಡಲು ಪ್ರಾರಂಭ ಮಾಡಿ ಹತ್ತು ವರ್ಷಗಳಾಗಿಲ್ಲ. ನಾವು ಆಡಳಿತವನ್ನು ಮಾಡಲು ಪ್ರಾರಂಭ ಮಾಡಿ ಒಂದೂಕಾಲು ವರ್ಷವಾಗಿದೆ. ಆ ಒಂದೂಕಾಲು ವರ್ಷದಲ್ಲಿ ಇಷ್ಟನ್ನು ಮಾಡಿದ್ದೇವೆ ಎನ್ನುವಂಥಾದ್ದನ್ನು ಹೇಳುತ್ತಿದ್ದೇವೆ. ನಂತರ ನೀವು ನಿಮ್ಮ ಸಾಧನೆ ಏನು ಎನ್ನುವುದನ್ನು ಹೇಳುವಿರಂತೆ.

ನೀರಾವರಿ ಬಗ್ಗೆ ಹೇಳಬೇಕು ಎಂದರೆ, ಹನಿ ನೀರಾವರಿ ಯೋಜನೆಯಲ್ಲಿ ನಿಗದಿಪಡಿಸಿರುವ ನೀರನ್ನು ಸಮರ್ಪಕವಾಗಿ ಬಳಕೆಯನ್ನು ಮಾಡಿಕೊಳ್ಳುತ್ತಿದ್ದಾರೆ.

**ಉಪಾಧ್ಯಕ್ಷರು:** ನೀವು ಬೇಗ ಮುಗಿಸಿ.

**ಶ್ರೀ ಡಿ.ಎನ್. ಜೀವರಾಜ್:** ಅಧ್ಯಕ್ಷರೆ, ಅವರು ಬರದ ಊರಿನಿಂದ ಬಂದಿದ್ದಾರೆ, ಬರ ಜಾಸ್ತಿ ಇದೆ. ಹಗಾಗಿ ಅವರು ಮಾತನಾಡುವುದು ಅನಿವಾರ್ಯವಾಗುತ್ತದೆ.

**ಶ್ರೀ ನೆಹರೂ ಓಲೇಕಾರ:** ಈ ರಾಜ್ಯದಲ್ಲಿ ಸುಮಾರು 193 ಏತ ನೀರಾವರಿ ಯೋಜನೆಗಳನ್ನು ಮಾಡಲಾಗಿದೆ ಎನ್ನುವುದನ್ನು ನಾನು ಕೇಳಿದ್ದೇನೆ. ನನಗೆ ಸಿಕ್ಕಂಥ ಮಾಹಿತಿಯ ಪ್ರಕಾರ ಈ 193 ಏತ ನೀರಾವರಿ ಯೋಜನೆಗಳನ್ನು ಸುಮಾರು 150ಕ್ಕಿಂತ ಹೆಚ್ಚು ಏತ ನೀರಾವರಿ ಯೋಜನೆಗಳು ನೀರನ್ನು ಬಳಕೆ ಮಾಡಿಕೊಳ್ಳದೇ, ನದಿಗಳಿಂದ ನೀರನ್ನು ಎತ್ತದೇ ಇವುಗಳೆಲ್ಲವೂ ಅನೇಕ ಕರಣಗಳಿಂದ ಸ್ಥಗಿತಗೊಂಡಿವೆ ಎನ್ನುವುದನ್ನು ಕೇಳಿದ್ದೇನೆ. ಇವತ್ತು ನಮಗೆ ಸಿಕ್ಕಿರುವ ಅವಕಾಶವನ್ನು

ಉಪಯೋಗಿಸಿಕೊಂಡು ನೀರನ್ನು ಸರಿಯಾಗಿ ಬಳಕೆ ಮಾಡಿಕೊಳ್ಳದೇ ಇರುವುದರಿಂದ ಅದು ಬೇರೆ ರಾಜ್ಯಗಳಿಗೆ ಹರಿದು ಹೋಗುತ್ತಿರುವುದರಿಂದ ನಮ್ಮ ರಾಜ್ಯದ ರೈತರು ಸಮಸ್ಯೆಯನ್ನು ಎದುರಿಸುವಂತೆ ಆಗಿದೆ. ನಮ್ಮ ರಾಜ್ಯದ ರೈತರಿಗೆ ಅನುಕೂಲವಾಗಬೇಕು ಎಂದರೆ ಎಲ್ಲ ಏತ ನೀರಾವರಿ ಯೋಜನೆಗಳನ್ನು ತಕ್ಷಣ ಪ್ರಾರಂಭ ಮಾಡುವಂಥ ಕೆಲಸವನ್ನು ಮಾಡಬೇಕು ಎನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ತಮ್ಮ ಮೂಲಕ ಹೇಳಬಯಸುತ್ತೇನೆ. ಅದರೆ ಜೊತೆಗೆ, ನಮ್ಮ ಜಿಲ್ಲೆಯಲ್ಲಿ ಬರುವಂಥ ಅಪ್ಪರ್ ತುಂಗ ಯೋಜನೆ ಪ್ರಾರಂಭವಾಗಿ ಈಗಾಗಲೇ ಬಹಳ ವರ್ಷಗಳಾಗಿದ್ದು ನಮ್ಮ ನೀರಾವರಿ ಸಚಿವರು ಇವತ್ತು ಒಂದು ಮಹತ್ವದ ಹೆಜ್ಜೆಯನ್ನಿಟ್ಟಿದ್ದಾರೆ ಎಂದು ಹೇಳಲು ನನಗೆ ಹೆಮ್ಮೆ ಎನಿಸುತ್ತದೆ. ಅನೇಕ ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದಂಥ ಅಪ್ಪರ್ ತುಂಗ ಯೋಜನೆಯ ಕೆಲಸವನ್ನು ಅತ್ಯಂತ ಹೆಚ್ಚು ತೀಕ್ಷ್ಣದಲ್ಲಿ, ಪ್ರಗತಿಯನ್ನು ಸಾಧಿಸಿ, ಬಸವರಾಜ ಬೊಮ್ಮಾಯಿ ಸಾಹೇಬರು 187 ಕಿ.ಮೀ ವರೆಗೆ testing ಆಗಿ ನೀರನ್ನು ಮೊನ್ನೆಯ ದಿವಸ ಬಿಟ್ಟಿದ್ದು ಆ ಅಚ್ಚುಕಟ್ಟು ಪ್ರದೇಶದ ಎಲ್ಲ ಜನರ ಪರವಾಗಿ ಸನ್ಮಾನ್ಯ ನೀರಾವರಿ ಸಚಿವರನ್ನು ನಾನು ಅಭಿನಂದಿಸುತ್ತೇನೆ. ಇಂಥ ಒಂದು ಮಹತ್ತರವಾದಂಥ ಹೆಜ್ಜೆಯನ್ನು ನಮ್ಮ ಸಚಿವರು ಇಟ್ಟಿದ್ದಾರೆ. ಬಹಳ ಸಂತೋಷ. ರೈತರ ಪರವಾಗಿ ಅವರಿಗೆ ಮತ್ತೊಮ್ಮೆ ಅಭಿನಂದನೆಗಳನ್ನು ಹೇಳುತ್ತೇನೆ.

ಇನ್ನು, ವಿದ್ಯುತ್ತಿನ ಸಮಸ್ಯೆಯ ಬಗ್ಗೆ ಹೇಳುವುದಾದರೆ, ವಿದ್ಯುತ್ತಿಲ್ಲದೇ ಬಹಳ ತೊಂದರೆಯಾಗಿದೆ, ಹೆಚ್ಚು ಹೆಚ್ಚು ವಿದ್ಯುತ್ ಉತ್ಪಾದನೆಯನ್ನು ಮಾಡುವಂಥ ಘಟಕಗಳನ್ನು ಪ್ರಾರಂಭ ಮಾಡಬೇಕು ಎನ್ನುವಂಥ ಚಿಂತನೆ ನಮ್ಮ ಸರ್ಕಾರಕ್ಕಿದೆ, ನಮ್ಮ ಮುಖ್ಯಮಂತ್ರಿಗಳಿಗಿದೆ. ಆ ನಿಟ್ಟಿನಲ್ಲಿ ಯೋಜನೆಯನ್ನು ಹಾಕಿಕೊಂಡಿದ್ದಾರೆ, ಹಂತಹಂತವಾಗಿ ಪ್ರಾರಂಭವನ್ನು ಮಾಡಿದ್ದಾರೆ, ಮುಂದಿನ 5 ವರ್ಷಗಳಲ್ಲಿ ಸಂಪೂರ್ಣವಾಗಿ ಎಲ್ಲ ರೈತರಿಗೂ, ಎಲ್ಲ ಜನರಿಗೂ ಸಮರ್ಪಕವಾಗಿ ವಿದ್ಯುತ್ತನ್ನು ಕೊಡುವಂಥ ಕೆಲಸವನ್ನು ಮಾಡುತ್ತೇವೆ ಎನ್ನುವಂಥಾದ್ದರಲ್ಲಿ ಎರಡು ಮಾತಿಲ್ಲ. ಅದನ್ನು ಖಂಡಿತವಾಗಿ ಮಾಡುತ್ತಾರೆ ಎನ್ನುವ ವಿಶ್ವಾಸ ನಮಗಿದೆ. ಹೆಚ್ಚು ಆಸಕ್ತಿಯನ್ನು ವಹಿಸಿ

ಅದನ್ನು ಮಾಡಬೇಕು ಎನ್ನುವುದು ನನ್ನ ಕಳಕಳಿ. ಇನ್ನು, ಟ್ರಾನ್ಸ್‌ಫಾರ್ಮರ್‌ಗಳ ಬಗ್ಗೆ ಹೇಳಬೇಕೆಂದರೆ, ಇವತ್ತು ಹಳ್ಳಿಗಳಲ್ಲಿ ಟ್ರಾನ್ಸ್‌ಫಾರ್ಮರ್‌ಗಳು ಸುಟ್ಟರೆ ಸುಮಾರು 2 ತಿಂಗಳವರೆಗೆ ಆ ಟ್ರಾನ್ಸ್‌ಫಾರ್ಮರ್‌ಗಳನ್ನು ಹಾಕಲಿಕ್ಕೆ ಆಗುವುದಿಲ್ಲ. ಸುಮಾರು 200–300 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ ಎನ್ನುವ ಮಾಹಿತಿಯನ್ನು ನಾನು ಪಡೆದುಕೊಂಡಿದ್ದೇನೆ. ಎಲ್ಲೆಲ್ಲಿ ಎಷ್ಟೆಷ್ಟು ಟ್ರಾನ್ಸ್‌ಫಾರ್ಮರ್‌ಗಳಿವೆ, ಎಷ್ಟು ಟ್ರಾನ್ಸ್‌ಫಾರ್ಮರ್‌ಗಳನ್ನು ಎಲ್ಲೆಲ್ಲಿಂದ ಖರೀದಿ ಮಾಡಿದ್ದೀರಿ ಎನ್ನುವ ಮಾಹಿತಿಯೆಲ್ಲವನ್ನು ಮಾನ್ಯ ಮುಖ್ಯಮಂತ್ರಿಗಳು ಅಥವಾ ಸಂಬಂಧಪಟ್ಟ ವಿದ್ಯುತ್ ಮಂತ್ರಿಗಳು ನಮಗೆ ಒದಗಿಸಬೇಕಾಗುತ್ತದೆ. ಈ ರಾಜ್ಯದಲ್ಲಿರುವ ಟ್ರಾನ್ಸ್‌ಫಾರ್ಮರ್‌ಗಳ ಸಮಸ್ಯೆ ಹೇಳತೀರದು. ಒಂದು ಕಡೆ ಟ್ರಾನ್ಸ್‌ಫಾರ್ಮರ್ ಸುಟ್ಟರೆ ಅದನ್ನು ಬದಲಾಯಿಸಲು ಒಂದು ತಿಂಗಳು, ಎರಡು ತಿಂಗಳು ಬೇಕಾಗುತ್ತದೆ. ಸಾಕಷ್ಟು ಹಣವನ್ನು ಆ ಯೋಜನೆಗೆ ಖರ್ಚು ಮಾಡಿರುವುದರಿಂದ ಅದರ ಬಗ್ಗೆ ಸಂಪೂರ್ಣವಾದಂಥ ಮಾಹಿತಿಯನ್ನು ನಮಗೆ ಒದಗಿಸಬೇಕಾಗುತ್ತದೆ ಎನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ.

(ಗೊಂದಲ)

**ಉಪಾಧ್ಯಕ್ಷರು:** ಆಯಿತು, ನಾನು ಬೇರೆಯರನ್ನು ಕರೆಯುತ್ತೇನೆ. ಈಗ ನಾಡಗೌಡರು.

(ಗೊಂದಲ)

**ಶ್ರೀ ಶರಣ ಪ್ರಕಾಶ್ ಪಾಟೀಲ್:** ಸರ್ಕಾರದ ಯೋಜನೆಗಳನ್ನು ಕೇಳಲಿಕ್ಕೆ ನಾವು ಇಲ್ಲಿಗೆ ಬಂದಿದ್ದೇವೆಯೇ?

(ಗೊಂದಲ)

**ಶ್ರೀ ನೆಹರೂ ಓಲೇಕಾರ್:** ಮೊನ್ನೆ ನೀನು ಎರಡು ತಾಸು ಮಾತನಾಡಿದೆಯಲ್ಲಪ್ಪ.

(ಗೊಂದಲ)

**ಉಪಾಧ್ಯಕ್ಷರು:** At east decorum ಇರಲಿ, ಅಲ್ಲಿಂದ ಏಕೆ ಮಾತನಾಡುತ್ತೀರಿ?

(ಬರದ ಬಗ್ಗೆ ಮಾತನಾಡಿ ಎಂದರೆ ಸರ್ಕಾರದ ಬಗ್ಗೆ ಮಾತನಾಡುತ್ತಿದ್ದಾರೆ, ನಮಗೆ ಅವಕಾಶವನ್ನು ಕೊಡುತ್ತಿಲ್ಲ, ನಾವು ಸಭಾತ್ಯಾಗ ಮಾಡುತ್ತೇವೆಂದು ಸದಸ್ಯರಾದ ಶ್ರೀ ಶರಣ ಪ್ರಕಾಶ್ ಪಾಟೀಲ್‌ರವರು ಮತ್ತು ಎ.ಎಸ್. ಪಾಟೀಲ್ (ನಡಹಳ್ಳಿ)ಯವರು ತಮ್ಮ ಸ್ಥಾನವನ್ನು ಬಿಟ್ಟು ಮಾತನಾಡುತ್ತಿದ್ದರು)

**ಉಪಾಧ್ಯಕ್ಷರು:** ಅಲ್ಲಿಂದ ಮಾತನಾಡಬೇಡಿ.

(ಗೊಂದಲ)

**ಒಬ್ಬ ಮಾನ್ಯ ಸದಸ್ಯರು (ಬಿ.ಜೆ.ಪಿ):** ನಿಮ್ಮ ಕಾಂಗ್ರೆಸ್ ಆಫೀಸಿನಲ್ಲಿ ಮೀಟಿಂಗ್ ಇದೆ, ದಯವಿಟ್ಟು ನೀವು ಹೋಗಿಬನ್ನಿ.

(ಗೊಂದಲ)

**ಉಪಾಧ್ಯಕ್ಷರು:** ನೀವು ಅಲ್ಲಿಂದ ಮಾತನಾಡುವುದ್ಯಾವುದೂ ದಾಖಲೆಗೆ ಹೋಗಬಾರದು.

(ಗೊಂದಲ)

**ಶ್ರೀ ಆರ್. ಅಶೋಕ್:** 6 ಗಂಟೆಗೆ ಕಾಂಗ್ರೆಸ್ ಆಫೀಸಿನಲ್ಲಿ ಮೀಟಿಂಗ್ ಇದೆ. ಅದಕ್ಕೋಸ್ಕರ ಅವರು ಹೋಗುತ್ತಿದ್ದಾರೆ.

**ಒಬ್ಬ ಮಾನ್ಯ ಸದಸ್ಯರು:** ಒಬ್ಬ ದಲಿತರು ಮಾತನಾಡುತ್ತಾರೆ ಎಂದರೆ ನಿಮಗೆ ಕೇಳುವುದಕ್ಕೆ ಆಗುವುದಿಲ್ಲ ಅಲ್ಲವೇ?

(ಗೊಂದಲ)

**ಶ್ರೀ ಆರ್. ಅಶೋಕ್:** 6 ಗಂಟೆಗೆ ಮೀಟಿಂಗ್ ಇದೆ ಎಂದು ಆಗಲೇ ಜಯಚಂದ್ರವರು ಹೇಳಿದ್ದಾರೆ.

**(ಗೊಂದಲ)**

**ಉಪಾಧ್ಯಕ್ಷರು:** ನಿಮಗೆ ನಾನು ಅವಕಾಶ ಕೊಟ್ಟಿಲ್ಲ Please ಕುಳಿತುಕೊಳ್ಳಿ. (ಗೊಂದಲ) ಒಂದೇ ನಿಮಿಷದಲ್ಲಿ ಮಾತನಾಡಿ ಮುಗಿಸಬೇಕು.

**ಶ್ರೀ ಓಲೇಕಾರ್ ನೆಹರು ಚನ್ನಬಸಪ್ಪ:** ಇವತ್ತು ಸದನದಲ್ಲಿ ಸರ್ಕಾರಕ್ಕೆ ಸಲಹೆಗಳನ್ನು ಕೊಡುವ ಸಂದರ್ಭದಲ್ಲಿ ವಿರೋಧ ಪಕ್ಷದ ಸದಸ್ಯರು ಈ ರೀತಿಯಾದ ಮಾತುಗಳನ್ನು ಹೇಳುವುದು ಸರಿಯಲ್ಲ. ವಿರೋಧ ಪಕ್ಷದವರು ಮಾತನಾಡುವಾಗ ನಾವಾಗಲಿ, ನಮ್ಮ ಸರ್ಕಾರವಾಗಲಿ ಕುಳಿತು ಸಂಯಮದಿಂದ ಅವರ ಮಾತುಗಳನ್ನು ಕೇಳಿದ್ದೇವೆ. ಆದರೂ ಸಹ ಅವರು ಈ ರೀತಿಯಾಗಿ ವರ್ತನೆ ಮಾಡುವಂಥದ್ದು ಅವರಿಗೆ ಘನತೆ ಗೌರವ ತರುವಂಥದ್ದಲ್ಲ ಎನ್ನುವಂಥದ್ದನ್ನು ಸ್ಪಷ್ಟವಾಗಿ ಹೇಳಬಯಸುತ್ತೇನೆ. ಆ ಕಾರಣದಿಂದ, ಇವತ್ತಿನ ದಿವಸ ಸರ್ಕಾರಕ್ಕೇನು ನಾವು ಸಲಹೆಗಳನ್ನು ಕೊಟ್ಟಿದ್ದೇವೆ, ಅದನ್ನು ಸರ್ಕಾರ ಕೂಡಲೇ ಕೈಗೆತ್ತಿಕೊಳ್ಳಬೇಕೆಂದು ತಮ್ಮ ಮೂಲಕ ಹೇಳುತ್ತೇನೆ. ಈ ಸದನದಲ್ಲಿ ಬರ ಮತ್ತು ಸಮಸ್ಯೆಗಳ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟದ್ದಕ್ಕೆ ತಮಗೆ ಧನ್ಯವಾದಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಎಂ. ಟಿ. ಕೃಷ್ಣಪ್ಪ (ತುರುವೇಕೆರೆ):** ಇವತ್ತು ಬರಗಾಲದ ಬಗ್ಗೆ ಚರ್ಚೆ ಮಾಡುವ ಸಂದರ್ಭದಲ್ಲಿ ನಾನು ನನ್ನ ಕ್ಷೇತ್ರಕ್ಕೆ ಸೀಮಿತವಾಗಿ ಮಾತನಾಡಬಯಸುತ್ತೇನೆ. ಬರಗಾಲ ಪ್ರದೇಶವೆಂದು declare ಮಾಡುವುದಕ್ಕೆ ಇರುವ ಮಾನದಂಡವೇನು? ಎಂಬುದು ನನಗೆ ತಿಳಿಯಬೇಕು. ಬರಗಾಲ ಪ್ರದೇಶವೆಂದು declare ಮಾಡಿರುವುದರಲ್ಲಿ ಸಂಶಯವಿದೆ. ನಮ್ಮ ತುರುವೇಕೆರೆ ಕ್ಷೇತ್ರದಲ್ಲಿ 59 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗಬೇಕಾಗಿತ್ತು. ಆದರೆ, ಕೇವಲ 29 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಮಾತ್ರ ಬಿತ್ತನೆಯಾಗಿದೆ. ನಿನ್ನೆ ಮೊನ್ನೆ ಮಳೆಯಾಗಿರುವುದರಿಂದ ಈಗ ಬಿತ್ತನೆ

ಪ್ರಾರಂಭ ಮಾಡಿದ್ದಾರೆ. ಈಗ ಬಿತ್ತನೆ ಮಾಡಿರುವುದರಿಂದ ಅದರಲ್ಲಿ ಯಾವ ಬೆಳೆಯನ್ನೂ ಬೆಳೆಯುವುದಕ್ಕಾಗುವುದಿಲ್ಲ. ತುರುವೇಕೆರೆ ಪ್ರದೇಶವನ್ನು ಇಲ್ಲಿಯವರೆಗೆ ಏತಕ್ಕೋಸ್ಕರ ಬರಗಾಲಪೀಡಿತ ಪ್ರದೇಶವೆಂದು declare ಮಾಡಿಲ್ಲವೆಂಬುದು ನನಗೆ ದು:ಖದ ವಿಷಯ. ನಮ್ಮ ತುರುವೇಕೆರೆ ತಾಲ್ಲೂಕನ್ನು ಬರಗಾಲಪೀಡಿತ ಪ್ರದೇಶವೆಂದು ಘೋಷಣೆ ಮಾಡಬೇಕೆಂದು ಮಾನ್ಯ Revenue Minister ರವರು ಸದನದಲ್ಲಿಯೇ ಇರುವುದರಿಂದ ಅವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಇನ್ನು ಕುಡಿಯುವ ನೀರಿನ ಬಗ್ಗೆ ಹೇಳುವುದಾದರೆ, RDPR ಸಚಿವರು ಸಹ ತುಮಕೂರು ಜಿಲ್ಲೆಯಲ್ಲಿ ಸಭೆ ನಡೆದ ಕಾಲದಲ್ಲಿ ಕುಡಿಯುವ ನೀರಿಗೆ ಹೆಚ್ಚು ಒತ್ತನ್ನು ಕೊಡುವುದಕ್ಕೆ ಅವರು ಚಿಂತನೆ ಮಾಡಿದ್ದರು. ಇವತ್ತು ನಮ್ಮಲ್ಲಿ ಹೇಮಾವತಿ ನದಿಯ ನೀರು 80 ಅಡಿ ಆಳದಲ್ಲಿ ಹರಿಯುತ್ತಿದೆ. ಆದರೂ ನಮಗೆ ಕುಡಿಯಲಿಕ್ಕೆ ನೀರು ಸಿಗುತ್ತಿಲ್ಲ. ಆ ನೀರನ್ನು ಕೆರೆಗೆ ತುಂಬಿಸಿ, surface ನೀರನ್ನು ಕುಡಿಯುವ ನೀರಿಗೆ ಕೊಟ್ಟರೆ ಒಳ್ಳೆಯದಾಗುತ್ತದೆ. ಇನ್ನು, ಪಡಿತರ ಚೀಟಿ ವಿತರಣೆ ಬಗ್ಗೆ ಈಗಾಗಲೇ ಸುದೀರ್ಘವಾಗಿ ಮಾತನಾಡಿದ್ದೇವೆ. ಪಡಿತರ ಚೀಟಿ ವಿತರಣೆಯಲ್ಲಿ ಏನು ಲೋಪದೋಷವಾಗಿದೆ, ಅದನ್ನು ಕೂಡಲೇ ಸರ್ಕಾರ ಸರಿಪಡಿಸಬೇಕು. ಮೊನ್ನೆ ನಾನು ಪೇಪರ್‌ನಲ್ಲಿ ಓದಿದೆ. ಇಡೀ ರಾಷ್ಟ್ರದಲ್ಲಿ ಅನೇಕ ಜಿಲ್ಲೆಗಳನ್ನು ಬರಪೀಡಿತ ಪ್ರದೇಶಗಳೆಂದು ಘೋಷಣೆ ಮಾಡಿದರು. ಅದರೆ, ನಮ್ಮ ರಾಜ್ಯದ ಯಾವುದೇ ಜಿಲ್ಲೆಯನ್ನೂ ಸಹ ಕೇಂದ್ರ ಸರ್ಕಾರ ಬರಪೀಡಿತ ಪ್ರದೇಶವೆಂದು ಘೋಷಣೆ ಮಾಡಿಲ್ಲ. ಈ ಸರ್ಕಾರದಿಂದ ಕೇಂದ್ರ ಸರ್ಕಾರಕ್ಕೆ ವರದಿ ಹೋಗಿದೆಯೋ, ಇಲ್ಲವೋ ಎನ್ನುವ ಸಂಶಯ ನನಗೆ ಮೂಡಿದೆ. ಇವತ್ತು ನಮ್ಮ ರೈತರು ಬಹಳಷ್ಟು ಬೆಳೆಯನ್ನು ಬೆಳೆಯುತ್ತಾರೆ. ವರ್ತಕ ಬಂಡವಾಳ ಹಾಕಿ ಇವತ್ತು ನಮ್ಮ ರೈತರು ಬಹಳಷ್ಟು ಬೆಳೆಯನ್ನು ಬೆಳೆಯುತ್ತಾರೆ. ವರ್ತಕ ಬಂಡವಾಳ ಹಾಕಿ ಲಾಭ ಪಡೆಯುತ್ತಾನೆ, ನೌಕರರು ಕೆಲಸ ಮಾಡಿ ಸಂಬಳ ಪಡಯುತ್ತಾರೆ. ವಿವಿಧ ರೀತಿಯಲ್ಲಿ ಅವರ ಬದುಕನ್ನು ನಡೆಸಿಕೊಂಡು ಬರುತ್ತಿದ್ದಾರೆ. ಆದರೆ, ರೈತ ಬೆಳಗ್ಗೆ ಎದ್ದು ಆಕಾಶ ನೋಡಿ ಭೂಮಿಗೆ ಬಿತ್ತನೆ ಮಾಡುತ್ತಾನೆ. ಭಗವಂತ ಏನಾದರೂ ಕಣ್ಣಿಟ್ಟರೆ

ಅವನು ಬೆಳೆ ಬೆಳೆಯುವುದಕ್ಕಾಗುತ್ತದೆ, ಇಲ್ಲದಿದ್ದರೆ ಖಂಡಿತವಾಗಿಯೂ ರೈತರ ಸಂಕಷ್ಟವೆದುರಿಸಬೇಕಾಗುತ್ತದೆ. ಹಾಗಾಗಿ, ಹೈನುಗಾರಿಕೆಗೆ ಸರ್ಕಾರ ಹೆಚ್ಚು ಒತ್ತು ಕೊಡಲು ಮುಂದಾಗಬೇಕು. ಮುಖ್ಯಮಂತ್ರಿಯವರು ತಿಪಟೂರಿಗೆ ಬಂದು Lift Irrigation ಉದ್ಘಾಟನೆ ಮಾಡಿದರು. ನಮ್ಮಲ್ಲಿ 80–100 ಅಡಿ ಆಳದಲ್ಲಿ ನೀರು ಹರಿಯುತ್ತದೆ. ಅದರ ಪಕ್ಕದಲ್ಲಿಯೇ ತೆಂಗಿನ ಗಿಡ, ಅಡಿಕೆ ಗಿಡ ಒಣಗಿ ಹೋಗಿದೆ. Irrigation ಮಾಡುವುದಕ್ಕಾಗುವುದಿಲ್ಲ. ಹಾಗಾಗಿ, ಕಳೆದ ಸಮ್ಮಿಶ್ರ ಸರ್ಕಾರದಲ್ಲಿ ಸುಮಾರು 30–35 ಲಕ್ಷ. ರೂ.ಗಳನ್ನು ವೆಚ್ಚ ಮಾಡಿ ಸರ್ವೆ ಮಾಡಿಸಿ, ಎಸ್ಟಿಮೇಟ್ ಮಾಡಿದ್ದು ಅದು ಸರ್ಕಾರದ ಮುಂದಿದೆ. ಹೆಬ್ಬೂರಿಗೆ ಆಗಿದೆ. ಹಾಗೆಯೇ ತಿಪಟೂರಿಗೂ ಅಗಿದೆ. ದಯಮಾಡಿ, ಸನ್ಮಾನ್ಯ ನೀರಾವರಿ ಸಚಿವರು ತುರುವೇಕೆರೆಗೂ ಸಹ ಒಳ್ಳೆಯ ದೃಷ್ಟಿಯಲ್ಲಿ ಏತ ನೀರಾವರಿಯನ್ನು ಮಂಜೂರು ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. Task Force ಬಗ್ಗೆ ನಾನು ಹಿಂದೆ ಸಹ ಮಾತನಾಡಿದ್ದೆ. ಏಕೋ ಮಾನ್ಯ ಮುಖ್ಯಮಂತ್ರಿಯವರು ಇದರ ಬಗ್ಗೆ ಗಮನಹರಿಸುತ್ತಿಲ್ಲ. ಕಳೆದ ಸಮ್ಮಿಶ್ರ ಸರ್ಕಾರದಲ್ಲಿ ಮಾನ್ಯ ಯಡಿಯೂರಪ್ಪನವರೆ ಹಣಕಾಸಿನ ಸಚಿವರಾಗಿದ್ದರು. ಶಾಸಕರ ಅಧ್ಯಕ್ಷತೆಯಲ್ಲೊಂದು Task Force ಅನ್ನು ಮಾಡಬೇಕೆಂದು ಅವರೇ ಒಂದು decision ತೆಗೆದುಕೊಂಡಿದ್ದರು. ಕಳೆದ ಸಾರಿ ಕುಡಿಯುವ ನೀರಿಗೋಸ್ಕರ ಬಹಳಷ್ಟು ಬೋರ್‌ವೆಲ್ ಕೊರೆಯಲಾಯಿತು. ಅದರ ಬಿಲ್ ಇವತ್ತಿಗೂ ಕೂಡ ಪೆಂಡಿಂಗ್‌ನಲ್ಲಿದೆ. ಕೇವಲ ಬೋರ್ ಕೊರೆದಿದ್ದಾರೆ, ಪೈಪ್ ಹಾಕಿಲ್ಲ, ನೀರಿಗೆ ಸರ್ವಿಸ್ ಕೊಟ್ಟಿಲ್ಲ. ದಯಮಾಡಿ ಆದಷ್ಟು ಬೇಗ Task Force ಕಾರ್ಯಕ್ರಮ complete ಮಾಡಲು ಹಣ ಬಿಡುಗಡೆ ಮಾಡಬೇಕು. ಇನ್ನು, ಈ ಬಾರಿ ಬರಗಾಲ ಬಂದಿರುವುದರಿಂದ ರೈತರಿಗೆ ಬಡ್ಡಿ ಇಲ್ಲದೆ ಸಾಲ ಕೊಡಬೇಕೆಂದು ನಾನು ತಮ್ಮ ಮೂಲಕ ಸನ್ಮಾನ್ಯ ಮುಖ್ಯಮಂತ್ರಿಯವರಲ್ಲಿ ಒತ್ತಾಯ ಮಾಡುತ್ತೇನೆ. ಇಲ್ಲದಿದ್ದರೆ ರೈತರಿಗೆ ಬಹಳ ತೊಂದರೆಯಾಗುತ್ತದೆ, ಅವರು ಕಷ್ಟದ ಪರಿಸ್ಥಿತಿಯಲ್ಲಿದ್ದಾರೆ ಇನ್ನು, ಶಿಂಷಾ ನದಿ ಹರಿಯುತ್ತಿದೆ, ಅಲ್ಲಿಗೆ ಹೇಮಾವತಿ ನದಿಯ ನೀರು ಸಹ ಜಾಯಿನ್ ಆಗುತ್ತದೆ. ಹಾಗಾಗಿ,

3–4 ಕಡೆ pick up ಮಾಡಿದರೆ ಆ ಭಾಗದ ರೈತರಿಗೆ ಅನುಕೂಲವಾಗುತ್ತದೆ, ಬೋರ್‌ವೆಲ್ ಸಹ ಒಣಗುವುದಿಲ್ಲವೆಂದು ಸಣ್ಣ ನೀರಾವರಿ ಸಚಿವರಾದ ಕಾರಜೋಳವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಬಹಳ ಮುಖ್ಯವಾದ ಇನ್ನೊಂದು ಅಂಶವೇನೆಂದರೆ, ಕರ್ನಾಟಕ ರಾಜ್ಯದಲ್ಲಿ ಜನರು ಅನೇಕ ಕಾಯಿಲೆಗಳಿಗೆ ತುತ್ತಾಗುತ್ತಿದ್ದಾರೆ. ಇವತ್ತು H1 N1, ಡೆಂಗ್ಯೂ ಜ್ವರದಂಥ ಅನೇಕ ಕಾಯಿಲೆಗಳು ಬರುತ್ತಿವೆ. ಅದರ ಪೂರ್ವಭಾವಿಯಾಗಿ ಕಳೆದ 10 ತಿಂಗಳ ಹಿಂದೆ ಈ ರಾಜ್ಯದಲ್ಲಿರುವ Doctors ಎಲ್ಲ strike ಮಾಡಿದ್ದರು. ಆ ಸಂದರ್ಭದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಯವರು ಒಂದು ಸಮಿತಿಯನ್ನು ರಚನೆ ಮಾಡಿ ಆದಷ್ಟು ಬೇಗ ವರದಿ ಕೊಡಬೇಕು. ನಂತರ, ಅದನ್ನು ತೀರ್ಮಾನ ಮಾಡುತ್ತೇವೆಂದು ಹೇಳಿದ್ದರು. ಆದರೂ ಸಹ ಇಲ್ಲಿಯವರೆಗೆ ಆ ಬಗ್ಗೆ ಯಾವುದೇ ವರದಿಯನ್ನೂ ಪಡೆದಿಲ್ಲ ಈ ತಿಂಗಳ 29ನೇ ತಾರೀಖಿಗೆ ಎಲ್ಲಾ Doctors ಸಾಮೂಹಿಕವಾಗಿ ರಾಜೀನಾಮೆ ಕೊಡುತ್ತೇವೆಂದು ಹೇಳಿರುವ ವರದಿಯನ್ನು ನೋಡಿದ್ದೇನೆ. ಈ ಬಗ್ಗೆ ಸರ್ಕಾರಕ್ಕೂ ಸಹ ಪತ್ರ ಬಂದಿದೆ. ಅವರ ಬೇಡಿಕೆ ಬಹಳ ಜಾಸ್ತಿ ಏನೂ ಇಲ್ಲ 6227 sanctioned posts ಇದ್ದರೆ ಕೇವಲ 3000 ಚಿಲ್ಲರೆ Doctors post fill up ಆಗಿದೆ. ಅಂದರೆ, 50% ಸಹ Doctors post fill up ಆಗಿಲ್ಲ. ಹಾಗಾಗಿ, Doctors ಬೆಳಗ್ಗೆಯಿಂದ ಸಂಜೆಯವರೆಗೆ 24 hours ಸಹ ಕೆಲಸ ಮಾಡಬೇಕಾಗಿದೆ. ಈ ಕೆಲಸದ ಮಧ್ಯೆ ಕೆಲವು ಡಾಕ್ಟರುಗಳು H1N1 ಕಾಯಿಲೆಗೆ ಸಹ ತುತ್ತಾಗಿದ್ದಾರೆ. ಸುಮಾರು 2228 vacant posts ಇವೆ. ಅದರಲ್ಲಿ Specialist posts 700 ಖಾಲಿ ಇವೆ. ಅವರ ಬೇಡಿಕೆ ಏನೆಂದರೆ, MBBS ಮಾಡಿ Doctors ಆಗಿ ಹಳ್ಳಿಗೆ ಹೋದರೆ ಅವರಿಗೆ ಬರುವ ಸಂಬಳ ಕೇವಲ 18299 ರೂ. ಅವರ ಜೊತೆ MBBS ಮಾಡಿ Lecturer postಗೆ ಹೋದರೆ ಅಂಥವರಿಗೆ 38000 ರೂ. ಸಂಬಳ ಕೊಡುತ್ತಾರೆ. ಹೀಗಾಗಿ, ಈ ತಾರತಮ್ಯವನ್ನು ಸರಿಪಡಿಸಿ ಎಂದು ಕೇಳುತ್ತಿದ್ದಾರೆ. ಅವರು ತಮಿಳುನಾಡಿನಲ್ಲಿ ಕೊಡುವ ರೀತಿ ಕೊಡಿ ಅಥವಾ ಕೇಂದ್ರ ಸರ್ಕಾರದಲ್ಲಿ ಕೊಡುವ ರೀತಿ ಕೊಡಿ ಎಂದು ಕೇಳುತ್ತಿಲ್ಲ. ನಾವಿಬ್ಬರೂ ಒಟ್ಟಿಗೆ ಪಾಸ್ ಮಾಡಿದ್ದೇವೆ, ನಾನು

Health Officer ಆಗಿ ಕೆಲಸ ಮಾಡುತ್ತಿದ್ದೇನೆ, ನನ್ನ ಜೊತೆ MBBS Pass ಮಾಡಿದವರು Medical Tutor ಆಗಿ ಕೆಲಸ ಮಾಡುತ್ತಿದ್ದಾರೆ, ಅವನಿಗೆ 32000 ರೂ. ಸಂಬಳ, ತನಗೆ 18000 ರೂ. ಸಂಬಳವೆನ್ನುವ ವರದಿಯನ್ನು ಕೊಟ್ಟಿದ್ದಾರೆ. ಅವರ demand ಬಹುಶ: ಸಾಧುವಾಗಿದೆ. ಈ ನಿಟ್ಟಿನಲ್ಲಿ ಸರ್ಕಾರ ಗಮನಹರಿಸಬೇಕಾಗುತ್ತದೆ. ಇವತ್ತು 10 ವರ್ಷ Lineman ಆಗಿ ಕೆಲಸ ಮಾಡಿದವನಿಗೆ ಮಾಸಿಕ 22000 ರೂಪಾಯಿ ಸಂಬಳ ಕೊಡುತ್ತಾರೆ. KSRTC ಯಲ್ಲಿ 10–12 ವರ್ಷ Driver ಆಗಿ ಕೆಲಸ ಮಾಡಿದವನಿಗೆ 20,000 ರೂ. ಸಂಬಳ ಕೊಡುತ್ತಾರೆ. ನಾಲ್ಕೂವರೆ ವರ್ಷ MBBS Course ಮಾಡಿದವನಿಗೆ ನೀವು 18900 ರೂ. ಸಂಬಳ ಕೊಟ್ಟರೆ ಯಾರು ಬರುತ್ತಾರೆ? ಅದರ ಹಿನ್ನೆಲೆ ಏನು ಎನ್ನುವುದು ಮಾನ್ಯ ಅಶೋಕ್‌ರವರಿಗೆ ಗೊತ್ತಿದೆ. ಒಂದು ವೇಳೆ ಎಲ್ಲಾ Doctorsಗಳು 29ನೇ ತಾರೀಖಿನಿಂದ ಸಂಪೂರ್ಣವಾಗಿ ರಾಜೀನಾಮೆ ಕೊಟ್ಟರೆ ಆಗ ಈ ರಾಜ್ಯದ ಜನರಿಗೆ ತೊದರೆಯಾಗುತ್ತದೆ. ಸರ್ಕಾರ ಸಹ ಇಕ್ಕಟ್ಟಿಗೆ ಸಿಲುಕುತ್ತದೆ. ನಾನು ನಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಯವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಆದಷ್ಟು ಬೇಗ ಆ ಒಂದು ಸಭೆಯನ್ನು ಕರೆದು ತಾರತಮ್ಯವೇನಿದೆ ಅದನ್ನು ಸರಿಪಡಿಸುವುದಕ್ಕೆ ಗಮನಹರಿಸಬೇಕು. ಇದನ್ನು ಸರಿಪಡಿಸುವುದಕ್ಕೆ ಸುಮಾರು 88 ಕೋಟಿ ರೂ. ಖರ್ಚಾಗುತ್ತದೆನ್ನುವ ಸಣ್ಣ ವರದಿಯನ್ನು ಕೊಟ್ಟಿದ್ದಾರೆ 50% posts vacant ಇರುವಾಗ ಅಷ್ಟು ಹಣ ಖರ್ಚಾಗಲಿಕ್ಕಿಲ್ಲ Via media negotiate ಮಾಡಿದರೆ ಒಳ್ಳೆಯದಾಗಬಹುದು. ಆ ನಿಟ್ಟಿನಲ್ಲಿ ಸರ್ಕಾರ ಗಮನಹರಿಸಬೇಕು. ಎಲ್ಲಾ Doctorsಗಳು ರಾಜೀನಾಮೆ ಕೊಟ್ಟು ಹೊರಗಡೆ ಬಂದರೆ, ಕರ್ನಾಟಕ ಸರ್ಕಾರ, ಕೇಂದ್ರಸರ್ಕಾರ investment ಮಾಡಿರುವ ಸಾವಿರಾರು ಕೋಟಿ ರೂಪಾಯಿಗಳ ಕಟ್ಟಡ, ರಾಜ್ಯದಲ್ಲಿರುವ Bowring Hospital, KC General Hospital, ಅನೇಕ PHC, General Hospitals ಎಲ್ಲ ಮುಚ್ಚಿಕೊಂಡರೆ ಈ ರಾಜ್ಯದ ಜನತೆಯ ಗೌರವವೇನಾಗುತ್ತದೆ? ಅವರ ಬದುಕೇನಾಗುತ್ತದೆ? ಇತ್ತೀಚಿನ ದಿನಗಳಲ್ಲಿ epidemic disease ಅನ್ನು control ಮಾಡುವುದು

ಹೇಗೆ? ಆದಷ್ಟು ಬೇಗ ಆ ಸಂಘದವರನ್ನು ಕರೆದು discussion ಮಾಡಿ ಅವರ ಬೇಡಿಕೆಯನ್ನು ಈಡೇರಿಸಿ ಕೊಡಬೇಕು. ತನ್ಮೂಲಕ ಈ ರಾಜ್ಯದಲ್ಲಿ ಶಾಂತ ರೀತಿಯಲ್ಲಿ ಆಡಳಿತ ನಡೆಸಬೇಕೆಂದು ಹೇಳಿ ನನಗೆ ಈ ಸಂದರ್ಭದಲ್ಲಿ ಮಾತನಾಡಲಿಕ್ಕೆ ಅವಕಾಶ ಮಾಡಿಕೊಟ್ಟಂಥ ತಮಗೆ ವಂದಿಸಿ ನನ್ನ ಮಾತು ಮುಗಿಸುತ್ತೇನೆ.

(ಗೊಂದಲ)

**ಶ್ರೀ ಹೆಚ್. ಡಿ. ರೇವಣ್ಣ:** ಸಭಾನಾಯಕರು ಸದನದಲ್ಲಿರುವುದರಿಂದ ನಮ್ಮ ಪಾರ್ಟಿಯ ಸದಸ್ಯನಾಗಿ ನಾನು ಅವರ ಗಮನಕ್ಕೆ ತರಬೇಕಾಗಿದೆ. (ಗೊಂದಲ) ನಾನು ಕಲ್ಲಿದ್ದಲು ಬಗ್ಗೆ ಮಾತನಾಡುತ್ತಿಲ್ಲ.

(ಗೊಂದಲ)

**ಶ್ರೀ ಸಿದ್ದು ಸವದಿ:** ನಮ್ಮ ತಾಲ್ಲೂಕು ಸಹ ಬರಗಾಲ ಪ್ರದೇಶವಾಗಿದೆ. ಅದರ ಬಗ್ಗೆ ಮಾತನಾಡಲು ದಯಮಾಡಿ ನನಗೆ ಅವಕಾಶ ಮಾಡಿಕೊಡಬೆಕು.

**ಉಪಾಧ್ಯಕ್ಷರು:** ಎಲ್ಲರಿಗೂ ಅವಕಾಶ ಕೊಡುತ್ತೇನೆ. (ಗೊಂದಲ) ಸಿದ್ದು ಸವದಿಯವರೆ, ನಾಳೆ ಬೆಳಗ್ಗೆ ನಿಮಗೆ ಅವಕಾಶ ಕೊಡುತ್ತೇನೆ.

(ಗೊಂದಲ)

**ಶ್ರೀ ಸಿದ್ದು ಸವದಿ:** ಅವರು ಈಗಾಗಲೇ ಮಾತನಾಡಿದ್ದಾರೆ. ಮಾತನಾಡಿದವರೇ ಮಾತನಾಡುವುದು ಬೇಡ.

(ಗೊಂದಲ)

**ಶ್ರೀ ಕೆ.ಎಂ. ಶಿವಲಿಂಗೇಗೌಡ:** ಜೆಡಿಎಸ್ ಪಕ್ಷದ ಶಾಸಕಾಂಗ ಪಕ್ಷದ ನಾಯಕರು ಮಾತನಾಡಲು ಎದ್ದು ನಿಂತರೆ ನೀವು ಬೇಡವೆಂದು ಹೇಳುತ್ತೀರಾ?

(ಗೊಂದಲ)

**ಉಪಾಧ್ಯಕ್ಷರು:** ಶಿವಲಿಂಗೇಗೌಡರವರೆ, ಕುಳಿತುಕೊಳ್ಳಿ. ತಮಗೆ ಆಮೇಲೆ ಅವಕಾಶ ಕೊಡುತ್ತೇನೆ.

(ಗೊಂದಲ)

**ಶ್ರೀ ಬಿ.ಎಸ್. ಯಡಿಯೂರಪ್ಪ:** ಬರಗಾಲದ ಬಗ್ಗೆ ನೀವು ಮಾತನಾಡಬೇಕೆಂದರೆ ನಾಳೆ ಮಾತನಾಡಿ. ನಿಮಗೆ ಒಳ್ಳೆಯ coverage ಸಿಗುತ್ತದೆ.

**ಶ್ರೀ ಹೆಚ್.ಡಿ. ರೇವಣ್ಣ:** ನನಗೆ coverage ಬೇಡ, ನಾನು ನಿಮ್ಮ ಗಮನಕ್ಕೆ ತರುತ್ತೇನೆ.

**ಶ್ರೀ ಬಿ.ಎಸ್. ಯಡಿಯೂರಪ್ಪ:** ಸುದೀರ್ಘವಾಗಿ ಮಾತನಾಡುವುದಕ್ಕೆ ನಿಮಗೆ ಸಮಯ ಸಿಗುತ್ತದೆ, ನಾಳೆ ಮಾತನಾಡಿ.

**ಶ್ರೀ ಹೆಚ್.ಡಿ. ರೇವಣ್ಣ:** ನಾಳೆ ಬೆಳಗ್ಗೆಯೇ ಮಾತನಾಡುತ್ತೇನೆ. ನಾನು ಸಭಾನಾಯಕರಿಗೆ ಮನವಿ ಮಾಡುವುದೇನೆಂದರೆ, ಮೊನ್ನೆ ಕೃಷಿ ಇಲಾಖೆಯ ಬಗ್ಗೆ ಮಾತನಾಡುವಾಗ NICE company ಬಗ್ಗೆ ಒಂದು ದಿವಸ ಪ್ರತ್ಯೇಕವಾಗಿ ಚರ್ಚೆ ಮಾಡೋಣವೆಂದು ತಾವು ಹೇಳಿದ್ದೀರಿ. ನಾಳೆ ಬೇಕಾದರೂ ಆ ಬಗ್ಗೆ ಚರ್ಚೆ ಮಾಡಿ ಅಥವಾ ನವೆಂಬರ್‌ನಲ್ಲಿ 20 ದಿವಸ ಅಧಿವೇಶನ ನಡೆಯುವ ಸಮಯದಲ್ಲಿ ಯಾವಾಗಲಾದರೊಂದು ದಿವಸ ತೆಗೆದುಕೊಳ್ಳಿ. ಯಾವಾಗ ಚರ್ಚೆ ಮಾಡಬೇಕೆನ್ನುತ್ತೀರಿ ಎಂಬ ಬಗ್ಗೆ ಆಶ್ವಾಸನೆ ಕೊಟ್ಟರೆ ಒಳ್ಳೆಯದು. ಅದಕ್ಕೆ ನಾನು clarification ಕೇಳುತ್ತಿದ್ದೇನೆ. ಅದರ ಬಗ್ಗೆ ಸಮಗ್ರವಾಗಿ ಚರ್ಚೆ ಮಾಡಿ ಸಾರ್ವಜನಿಕರಿಗೆ ಬೆಳಕು ಚೆಲ್ಲಬೇಕು.

**ಶ್ರೀ ಬಿ. ಎಸ್. ಯಡಿಯೂರಪ್ಪ:** ರೇವಣ್ಣನವರು ಈ ವಿಷಯ ನಾಳೆಯೇ ಚರ್ಚೆಯಾಗಬೇಕೆಂದು ಹೇಳಿದರೆ ನಾಳೆಯೇ ಚರ್ಚೆ ಮಾಡುವುದಕ್ಕೆ ಸಿದ್ಧನಿದ್ದೇನೆ. (ಗೊಂದಲ) ಈ ಮನೆಯಲ್ಲಿ ತಾವೊಂದು ತೀರ್ಮಾನ ತೆಗೆದುಕೊಂಡು ಹೇಳಬೇಕು. NICE ವಿಷಯದಲ್ಲಿ ಗೊಂದಲದ ವಾತಾವರಣವಿದೆ, ಈ ಬಗ್ಗೆ ಜನರಲ್ಲಿಯೂ ಗೊಂದಲವಿದೆ, ಸುದೀರ್ಘವಾದ

ಚರ್ಚೆಯ ಅಗತ್ಯವಿದೆ ಎಂದು ನಾನೇ ಹೇಳಿದ್ದೇನೆ. ಸಮಯದ ಅಭಾವದಿಂದ reply ಮಾಡುವಾಗಲೂ ಅದನ್ನೇ ಹೇಳಿದ್ದೇನೆ. ನಾಳೆ ಚರ್ಚೆ ಮಾಡಬೇಕೆಂದು ಹೇಳಿದರೆ ನಾನು ಸಿದ್ಧನಿದ್ದೇನೆಂದು ಹೇಳಿದ್ದೇನೆ. ಯಾವುದಕ್ಕೆ ಆದ್ಯತೆ ಕೊಡಬೇಕೆನ್ನುವ ತೀರ್ಮಾನ ಈ ಮನೆಗೆ ಬಿಟ್ಟದ್ದು.

**ಶ್ರೀ ಟಿ.ಬಿ. ಜಯಚಂದ್ರ:** Speaker Chamber ನಲ್ಲಿ ನಾವು ಕೊಟ್ಟ ನಿಲುವಳಿ ಸೂಚನೆಗಳ ಜೊತೆಗೆ ಸಾಕಷ್ಟು ಬೇರೆ ವಿಚಾರಗಳೂ ಸಹ ಚರ್ಚೆಗೆ ಇವೆ.

(ಗೊಂದಲ)

**ಶ್ರೀ ಬಿ.ಎಸ್. ಯಡಿಯೂರಪ್ಪ:** ಕಾಂಗ್ರೆಸ್ ಪಕ್ಷ ಮತ್ತು ಜೆಡಿ(ಎಸ್) ಪಕ್ಷದ ನಾಯಕರಾದ ರೇವಣ್ಣನವರು ನೀವೆಲ್ಲ ಇಷ್ಟೊಂದು ಅನ್ಯೋನ್ಯವಾಗಿರುವಾಗ ನೀವು ಯಾವುದು ಹೇಳುತ್ತೀರಾ ಅದನ್ನು ಚರ್ಚೆ ಮಾಡುವುದಕ್ಕೆ ನಾವು ಸಿದ್ಧರಿದ್ದೇವೆಂದು ನಾನು ಹೇಳಿದ್ದೇನೆ. ನನ್ನದೇನೂ ಅಭ್ಯಂತರವಿಲ್ಲ.

**ಶ್ರೀ ಟಿ.ಬಿ. ಜಯಚಂದ್ರ:** ಎಲ್ಲ ವಿಚಾರದಲ್ಲಿಯೂ ಅಲ್ಲ. ಮುಂದೆ ಸದನ ಕರೆದಾಗ ನೋಡಿಕೊಳ್ಳೋಣ.

(ಗೊಂದಲ)

**ಶ್ರೀ ಹೆಚ್.ಡಿ. ರೇವಣ್ಣ:** ನವೆಂಬರ್‌ನಲ್ಲಿ 20 ದಿವಸ ಅಧಿವೇಶನ ನಡೆಸುತ್ತೀರಲ್ಲ, ಆಗ NICE companyಯ ಚರ್ಚೆಯನ್ನು ತೆಗೆದುಕೊಳ್ಳುತ್ತೀರಾ? ನಾಳೆ ಬೇಡವೆಂದರೆ ಪರವಾಗಿಲ್ಲ.

**ಶ್ರೀ ಬಿ.ಎಸ್. ಯಡಿಯೂರಪ್ಪ:** ಈ ಮನೆಯಲ್ಲಿ ನನ್ನ ಸಲಹೆ ಏನೆಂದರೆ, NICE ಬಗ್ಗೆ ಇರಬಹುದು, ನೀರಾವರಿ ಬಗ್ಗೆ ಇರಬಹುದು, Health ಬಗ್ಗೆ ಇರಬಹುದು ಆ ಇಲಾಖೆಗಳ ಬಗ್ಗೆ ನಾವು 20 ದಿವಸಗಳ ಅಧಿವೇಶನ ಕರೆದಾಗ ಒಂದೊಂದು ವಿಷಯದಲ್ಲಿ 2–2 ದಿವಸ ಸುದೀರ್ಘವಾಗಿ ಚರ್ಚೆಯಾದರೆ ಏನೇನು ಕೊರತೆಗಳಾಗಿವೆ, ನ್ಯೂನ್ಯತೆಗಳಿವೆ

ಅದನ್ನು ಸರ್ಕಾರ ಸರಿಪಡಿಸಿಕೊಂಡು ಸರಿದಾರಿಯಲ್ಲಿ ಹೋಗುವುದಕ್ಕೆ ತುಂಬಾ ಉಪಯುಕ್ತವಾಗುತ್ತದೆ. ಅದಕ್ಕಾಗಿ 20 ದಿವಸಗಳ ಅಧಿವೇಶನ ಕರೆಯುತ್ತಿರುವುದು. ತುರ್ತಾಗಿ NICE company ಯ ಬಗ್ಗೆ ಚರ್ಚೆ ಮಾಡಬೇಕಾಗಿದ್ದರೆ ನಾಳೆಯೇ ಮಾಡೋಣವೆಂದು ಹೇಳಿದೆ ಅಷ್ಟೆ. ಆ ತೀರ್ಮಾನ ನಿಮಗೆ ಬಿಟ್ಟಿದ್ದು.

**ಶ್ರೀ ಹೆಚ್.ಡಿ. ರೇವಣ್ಣ:** 20 ದಿವಸಗಳ ಅಧಿವೇಶನ ಕರೆದಾಗ ಈ ವಿಷಯದ ಬಗ್ಗೆ ಮಾತನಾಡುತ್ತೇನೆ.

**ಶ್ರೀ ರಹೀಮ್ ಖಾನ್ (ಬೀದರ್):** ಮಾನ್ಯ ಮುಖ್ಯಮಂತ್ರಿಯವರು ಬರದ ಪರಿಸ್ಥಿತಿ ಪರಿಶೀಲಿಸಲು ಬೀದರ್‌ಗೆ ವಿಸಿಟ್ ಮಾಡಿದ್ದರು. ಅದು ಒಳ್ಳೆಯ ಸಭೆಯಾಗಿತ್ತು. ಅದರಲ್ಲಿ ಆಗ ಬೊಮ್ಮಾಯಿಯವರು, ಶೋಭಾ ಮೇಡಂನವರು ಇದ್ದರು. ಮುಖ್ಯಮಂತ್ರಿಯವರು, ಕುಡಿಯುವ ನೀರಿನ ಸಲುವಾಗಿ ಬೀದರ್ ಸಿಟಿಯಲ್ಲಿ ಯಾವುದೇ ತೊಂದರೆಯಾಗಬಾರದೆಂದು ಹೇಳಿದ್ದರು. ಅಲ್ಲಿ 10–10 ದಿವಸಗಳವರೆಗೆ ನೀರು ಇರುವುದಿಲ್ಲ. ಎರಡು ವರ್ಷಗಳಿಂದ ಬೀದರ್ ಸಿಟಿಯಲ್ಲಿನ ಕುಡಿಯುವ ನೀರಿಗಾಗಿ 90 ಕೋಟಿ ರೂಪಾಯಿಗಳನ್ನು ಇಡಲಾಗಿದೆ. ಆದರೆ, ಆ ಕೆಲಸಕ್ಕೆ ಟೆಂಡರ್ ಕರೆದಿಲ್ಲ. ಮಾನ್ಯ ಮುಖ್ಯಮಂತ್ರಿಯವರು ತುರ್ತು ಕುಡಿಯುವ ನೀರಿ ಸಮಸ್ಯೆ ನೀಗಿಸುವ ಸಲುವಾಗಿ 1 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಅಲ್ಲಿನ Government staff ರವರೆಲ್ಲ ಹಳೆಯ ಕೆಲಸಗಳಿಗಾಗಿಯೇ ಆ ಹಣವನ್ನು ಉಪಯೋಗಿಸಿದ್ದಾರೆ. ಹೊಸ programme ಯಾವುದಕ್ಕೂ ಆ ಹಣವನ್ನು ಉಪಯೋಗ ಮಾಡಲಿಲ್ಲ. ಇನ್ನು, 75% discount ಅನ್ನು ಬೀಜ ಖರೀದಿಗೆ ಕೊಡಬೇಕೆಂದು ಆ ದಿನವೇ ಇಲ್ಲಿಂದ order ಮಾಡಿದ್ದರು. ಆ ಬಗ್ಗೆ ಇನ್ನೂ ಅಲ್ಲಿ order ಆಗಿಲ್ಲ. ಬೀದರ್ ರೈತರೆಲ್ಲ ಬೀಜ purchase ಮಾಡುವುದಕ್ಕೆ ಯಾವಾಗ ಆದೇಶವಾಗುತ್ತದೆಂದು ಕಾಯುತ್ತಿದ್ದಾರೆ. ಬೀದರ್ Municipality ತುಂಬಾ ಲಾಸ್‌ನಲ್ಲಿದೆ. ಅಲ್ಲಿ ಸರಿಯಾದ ರಸ್ತೆ, drainage ಇಲ್ಲ. ಬೀದರ್ ಬಹಳ backwad area ಇದ್ದು, fund release ಮಾಡಬೇಕೆಂದು

ಕೇಳಿಕೊಳ್ಳುತ್ತಿದ್ದೇನೆ. 1 ಕೋಟಿ ರೂಪಾಯಿಗಳನ್ನೇನು ಕುಡಿಯುವ ನೀರಿಗಾಗಿ ಮಂಜೂರು ಮಾಡಿದ್ದಾರೆ, ಅದನ್ನು ಹಳೆಯ ಬಿಲ್‌ಗಳಿಗೆ ಅಥವಾ ಹಳೆಯ ಕೆಲಸಕ್ಕೆ ಉಪಯೋಗಿಸದೆ, ಹೊಸದಾಗಿ ಕುಡಿಯುವ ನೀರಿನ ಸಲುವಾಗಿ ಉಪಯೋಗ ಮಾಡುವುದಕ್ಕೆ ತಕ್ಷಣ ಆದೇಶ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಆ ಸಂದರ್ಭದಲ್ಲಿ ಅಲ್ಲಿ ಕಟ್ಟಾ ಸುಬ್ರಮಣ್ಯನಾಯ್ಡುರವರು ಬಂದಿದ್ದರು. ಅಲ್ಲಿ ರೈತರ ಸಲುವಾಗಿ ಒಳ್ಳೆಯ ಸಭೆ ನಡೆದು, ಒಳ್ಳೆಯ ಚರ್ಚೆಯಾಗಿತ್ತು. Lucky ಏನೆಂದರೆ, ಅವರು ಯಾವಾಗ ನಮ್ಮ ಸಿಟಿಗೆ ಬಂದಿದ್ದರೋ ಅವತ್ತೇ ನೀರು ಬಂದಿತ್ತು. ಮತ್ತು 4 ದಿವಸಗಳ ನಂತರ ಅಲ್ಲಿ ನೀರು ಬರಲಿಲ್ಲ. ಅದರ ಸಲುವಾಗಿ ನಾನು request ಮಾಡುತ್ತೇನೆ, ರೈತರಿಗೆ immediate relief ಕೊಡಬೇಕು. ಬೀಜ ಖರೀದಿ ಸಲುವಾಗಿ 75% subsidy ಕೊಡುವ ಬಗ್ಗೆ ತಕ್ಷಣ order ಮಾಡಬೇಕು. ಏಕೆಂದರೆ, ರೈತರು ಯಾವಾಗ ಆದೇಶ ಬರುತ್ತದೆಂದು ಕಣ್ಣೀರಿಡುತ್ತಾ ಕಾಯುತ್ತಿದ್ದಾರೆ.

(ಗೊಂದಲ)

**ಶ್ರೀ ವೆಂಕಟರಾವ್ ನಾಡಗೌಡ:** ಯಾರಿಗೂ ನಾಳೆ ಮಾತನಾಡುವುದಕ್ಕಾಗುವುದಿಲ್ಲ.

(ಗೊಂದಲ)

**ಉಪಾಧ್ಯಕ್ಷರು:** ನಾಳೆ ಮಾತನಾಡಿ. (ಗೊಂದಲ) ಈಗ ಸದನವನ್ನು ನಾಳೆ ಬೆಳಗ್ಗೆ 10–30 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

**(ಸದನವು ಸಾಯಂಕಾಲ 6 ಗಂಟೆ 59 ನಿಮಿಷಕ್ಕೆ ಮುಕ್ತಾಯಗೊಂಡು ಪುನ: ದಿನಾಂಕ: 16ನೇ ಸೆಪ್ಟೆಂಬರ್ 2009ರ ಬುಧವಾರದಂದು ಬೆಳಗ್ಗೆ 10–30 ಗಂಟೆಗೆ ಸೇರಲು ನಿಃಶ್ಚಯಿಸಿತು)**

*****

ಕರ್ನಾಟಕ ವಿಧಾನಸಭೆ

ಬುಧವಾರ 16ನೇ ಸೆಪ್ಟೆಂಬರ್ 2009 ರಂದು ಸದನವು
ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ
ಬೆಳಿಗ್ಗೆ 11 ಗಂಟೆ 5 ನಿಮಿಷಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರು: ಶ್ರೀ ಜಗದೀಶ್ ಶೆಟ್ಟರ್‌ರವರು ಪೀಠವನ್ನು ಅಲಂಕರಿಸಿದ್ದರು.

(ಸದನವು ಬೆಳಿಗ್ಗೆ 11 ಗಂಟೆ 05 ನಿಮಿಷಕ್ಕೆ ಪ್ರಾರಂಭಗೊಂಡಾಗ ಸನ್ಮಾನ್ಯ ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದ್ದರು)

1. ಶಾಸನ ರಚನೆ:

ಕರ್ನಾಟಕ ವಿಧಾನಮಂಡಲದ ವೇತನಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ (ಎರಡನೇ ತಿದ್ದುಪಡಿ) ವಿಧೇಯಕ 2009

ವಿಧೇಯಕದ ಮಂಡನೆ

**ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು) (ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರ ಪರವಾಗಿ)** :– ಮಾನ್ಯ ಅಧ್ಯಕ್ಷರೆ, 2009 ರ ಕರ್ನಾಟಕ ವಿಧಾನಮಂಡಲದವರ ವೇತನಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ (ಎರಡನೇ ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

**ಅಧ್ಯಕ್ಷರು** :– ಪ್ರಸ್ತಾವ ಏನೆಂದರೆ,

"2009ರ ಕರ್ನಾಟಕ ವಿಧಾನಮಂಡಲದವರ ವೇತನಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ (ಎರಡನೇ ತಿದ್ದುಪಡಿ) ವಿಧೇಯಕ"ವನ್ನು ಮಂಡಿಸಲು ಅನುಮತಿ ನೀಡುವುದು.

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

**ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು) (ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರ ಪರವಾಗಿ)** :– ಮಾನ್ಯ ಅಧ್ಯಕ್ಷರೆ, 2009 ರ ಕರ್ನಾಟಕ ವಿಧಾನಮಂಡಲದವರ ವೇತನಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ (ಎರಡನೇ ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

**ಅಧ್ಯಕ್ಷರು** :– ವಿಧೇಯಕವನ್ನು ಮಂಡಿಸಲಾಗಿದೆ.

ಪ್ರಯೋಜನಾ ಪ್ರಸ್ತಾವ

**ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು) (ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರ ಪರವಾಗಿ)**:– ಮಾನ್ಯ ಅಧ್ಯಕ್ಷರೆ, 2009ರ ಕರ್ನಾಟಕ ವಿಧಾನಮಂಡಲದವರ

ವೇತನಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ (ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಅಧ್ಯಕ್ಷರು** :– ಪ್ರಸ್ತಾವ ಏನೆಂದರೆ,

"2009ರ ಕರ್ನಾಟಕ ವಿಧಾನಮಂಡಲದವರ ವೇತನಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ (ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು**

ಖಂಡ 2

**ಅಧ್ಯಕ್ಷರು**:– "ಖಂಡ 2 ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ :

**ಅಧ್ಯಕ್ಷರು** –: ಪ್ರಸ್ತಾವ ಏನೆಂದರೆ,

"ಮೊದಲನೆ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು) (ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರ ಪರವಾಗಿ)** :– ಮಾನ್ಯ ಅಧ್ಯಕ್ಷರೆ, 2009ರ ಕರ್ನಾಟಕ ವಿಧಾನಮಂಡಲದವರ ವೇತನಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ (ಎರಡನೇ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಅಧ್ಯಕ್ಷರು** : ಪ್ರಸ್ತಾವ ಏನೆಂದರೆ,

"2009ರ ಕರ್ನಾಟಕ ವಿಧಾನಮಂಡಲದವರ ವೇತನಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ (ಎರಡನೇ ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.**

**2. ಅಧ್ಯಕ್ಷರೆ ಅಪ್ಪಣೆ ಮೇರೆಗೆ ಚರ್ಚಿಸಲಾದ ವಿಷಯ:**

**(ಅ) ವಿಷಯ:– ಕಲ್ಲಿದ್ದಲು ಖರೀದಿ ವ್ಯವಹಾರದಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರದ ಬಗ್ಗೆ ಚರ್ಚಿಸಲು ಅನುಮತಿ ಕೋರಿಕೆ.**

**ಶ್ರೀ ಬಿ. ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು)** :– ಮಾನ್ಯ ಅಧ್ಯಕ್ಷರೆ, ನಿನ್ನೆ ದಿವಸ ನಿಮ್ಮ ಅಪ್ಪಣೆ ಪಡೆದು ಮಾನ್ಯ ಸಭಾಪತಿಗಳಿಗೂ ಪತ್ರ ಬರೆದು infosysನ ನಾರಾಯಣಮೂರ್ತಿಯವರು, ಶ್ರೀಮತಿ ಸೋನಿಯಾ ಗಾಂಧಿಯವರು, ಬಂದಿದ್ದರು. ವಿಶೇಷ ಕಾರ್ಯಕ್ರಮ ಇತ್ತೆಂದು ಅನಿವಾರ್ಯವಾಗಿ ನಾನು ಹೋಗಬೇಕಾಯಿತು. ಆ ಸಂದರ್ಭದಲ್ಲಿ ನಮ್ಮ ಮಾನ್ಯ ಹಿರಿಯ ಸದಸ್ಯರು ಜೆಡಿಎಸ್ ಮುಖಂಡರಾದ ರೇವಣ್ಣನವರು,.....

**ಶ್ರೀ ಹೆಚ್.ಡಿ. ರೇವಣ್ಣ** :– ಚರ್ಚೆ ಈಗ ಶುರು ಮಾಡಿ ಎಂದರೆ ನನ್ನದೇನೂ ಅಭ್ಯಂತರವಿಲ್ಲ.

**ಅಧ್ಯಕ್ಷರು** :– ಅವರು ಏನು ಹೇಳುತ್ತಾರೆ ಕೇಳಿ. ಆಮೇಲೆ ನೀವು ಹೇಳಿ.

**ಶ್ರೀ ಬಿ.ಎಸ್. ಯಡಿಯೂರಪ್ಪ** :– ಮಾತನಾಡುವುದಕ್ಕೆ ಬಿಡಲಿಲ್ಲ ಎಂದರೆ ಹೇಗೆ?

**(ಗೊಂದಲ)**

**ಶ್ರೀ ಹೆಚ್. ಡಿ. ರೇವಣ್ಣ** :– ಮೊನ್ನೆ ಮುಖ್ಯಮಂತ್ರಿಗಳು ಹೇಳಿಕೆ ಕೊಟ್ಟಿದ್ದಾರೆ.

**ಅಧ್ಯಕ್ಷರು** :– ಚರ್ಚೆಗೂ ಅವಕಾಶ ಕೊಡುತ್ತೇನೆ.

**ಶ್ರೀ ಹೆಚ್. ಡಿ. ರೇವಣ್ಣ** :– ನಾನು ಸೂಚನೆ ಕೊಟ್ಟಿದ್ದೇನೆ. ಚರ್ಚೆಗೆ ಅವಕಾಶ ಕೊಡಿ.

**ಅಧ್ಯಕ್ಷರು** :– ಚರ್ಚೆಗೆ ಅವಕಾಶ ಕೊಡುತ್ತೇನೆಂದು ಹೇಳಿದ್ದೆನ್ನೆಲ್ಲಾ, ಮಾನ್ಯ ಮುಖ್ಯಮಂತ್ರಿಗಳು ಅವರೇನು ಹೇಳುತ್ತಾರೆ ನೋಡೋಣ. ಅವರು ಇನ್ನು ಏನೂ ಹೇಳಿಲ್ಲ. ಅವರು ಏನು ಮಾತನಾಡಿಲ್ಲ. ನನಗೆ ಇದು ಅರ್ಥವಾಗುತ್ತಿಲ್ಲ.

**(ಗೊಂದಲ)**

ಎಲ್ಲರೂ ಮಾತನಾಡಬೇಡಿ. ಮಾನ್ಯ ಮುಖ್ಯಮಂತ್ರಿಗಳು ಎದ್ದು ನಿಂತಿದ್ದಾರೆ. ಅವರೇನು ಹೇಳುತ್ತಾರೆ ಕೇಳೋಣ.

**ಶ್ರೀ ಹೆಚ್. ಡಿ. ರೇವಣ್ಣ** :– ಚರ್ಚೆಯಾಗಿಲ್ಲದೆ ಅವರು ಏನು ಉತ್ತರ ಕೊಡುತ್ತಾರೆ?

**ಅಧ್ಯಕ್ಷರು** :– ಅವರು ಉತ್ತರ ಕೊಡುತ್ತಿಲ್ಲ. ಅವರೇನು ಹೇಳುತ್ತಾರೆ ಕೇಳಿ. ಆಮೇಲೆ ನೀವು ಹೇಳಿ.

**ಶ್ರೀ ಬಿ. ಎಸ್. ಯಡಿಯೂರಪ್ಪ** :– ಕಲ್ಲಿದ್ದಲು ಖರೀದಿನಲ್ಲಿ ಅವ್ಯವಹಾರ ನಡೆದಿದೆ ಎನ್ನುವ ಗುರುತರವಾದ ಆರೋಪ ಮಾಡಿದ್ದಾರೆ. ನಾನು ನಿಮ್ಮಲ್ಲಿ ವಿನಂತಿ ಮಾಡುತ್ತಿರುವುದು, ಬೇರೆ ಎಲ್ಲಾ ಕಲಾಪವನ್ನು ಬದಿಗೊತ್ತಿ ಅದನ್ನು ಚರ್ಚೆಗೆ ಅವಕಾಶ ಮಾಡಿಕೊಡಬೇಕು. ರೇವಣ್ಣನವರು ಪೂರ್ಣವಾಗಿ ಮಾತನಾಡಿದ ಮೇಲೆ, ನಾನು ಮಾತನಾಡುವಾಗ ಅವರು ಮಧ್ಯದಲ್ಲಿ interfere ಆಗಬಾರದು, ಇದೊಂದೇ ನನ್ನ ಮನವಿ. ನಾನು ನಿಮ್ಮಲ್ಲಿ ರಿಕ್ವೆಸ್ಟ್ ಮಾಡುತ್ತಿದ್ದೇನೆ. ತಾವು ಅಲೌ ಮಾಡಿದಾಗ ನಾವು ಏನು ಬೇಕಾದರೂ ಡೆಮಾಕ್ರಿಸಿಯಲ್ಲಿ ವಿಷಯ ಹೇಳಬೇಕು, ಅವರು ವಿಷಯ ಹೇಳಬೇಕು, ಮಧ್ಯದಲ್ಲಿ ಚರ್ಚೆ, ಕ್ಲಾರಿಫಿಕೇಷನ್ ಇವೆಲ್ಲಾ ಇದ್ದದ್ದೆ. ಆದರೆ, ನನ್ನ ವಿನಂತಿ ಏನೆಂದರೆ, ನನ್ನ ಸದಸ್ಯರಿಗೆ ನಾನು ಹೇಳುತ್ತೇನೆ, ರೇವಣ್ಣನವರು ಏನೇ ವಿಷಯ ಹೇಳುತ್ತಾರೆ ಅವರು ಪೂರ್ಣವಾಗಿ ಹೇಳುವವರೆವಿಗೂ ಮಧ್ಯದಲ್ಲಿ ನಮ್ಮ ಸದಸ್ಯರ್ಯಾರು ಮಾತನಾಡಬಾರದು. ನಂತರ ಇದರ ಬಗ್ಗೆ ಸಂಪೂರ್ಣವಾದಂಥ ಉತ್ತರ ಕೊಡುತ್ತೇನೆ. ಈ ಸಂದರ್ಭದಲ್ಲಿ ನೀವ್ಯಾರು ಮಧ್ಯದಲ್ಲಿ interfere ಆಗಬಾರದೆಂದು ಮುಖ್ಯ ಮಂತ್ರಿಯಾಗಿ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಈಗ ಸನ್ಮಾನ್ಯ ರೇವಣ್ಣನವರು ಚರ್ಚೆ ಪ್ರಾರಂಭ ಮಾಡುವುದಕ್ಕೆ ತಾವು ಅವಕಾಶ ಮಾಡಿಕೊಡಿ ಎಂದು ಕೇಳಿಕೊಳ್ಳುತ್ತೇನೆ.

**ಶ್ರೀ ಟಿ.ಬಿ. ಜಯಚಂದ್ರ** :– ಮಾನ್ಯ ಅಧ್ಯಕ್ಷರೆ, ಮೂರು ದಿವಸಗಳ ಹಿಂದೆ ನಿಲುವಳಿ ಸೂಚನೆಗೆ ಸಂಬಂಧಪಟ್ಟಂತೆ ಪತ್ರ ಕೊಟ್ಟಿದ್ದೇನೆ. ಸದನದಲ್ಲಿ ಈ ವಿಷಯ ಪ್ರಸ್ತಾಪ ಮಾಡಿದ ಹಿನ್ನೆಲೆಯಲ್ಲಿ ಬೇರೆ ಬೇರೆ ವಿಚಾರಗಳು ಬಂದಿದ್ದರಿಂದ ಈ ವಿಷಯವನ್ನು ತೆಗೆದುಕೊಳ್ಳುವುದಕ್ಕೆ ಆಗಲಿಲ್ಲ.

**ಅಧ್ಯಕ್ಷರು** :– ಮಾನ್ಯ ಜಯಚಂದ್ರರವರೆ, ತಾವು 5 ನಿಮಿಷದಲ್ಲಿ preliminary submission ಅನ್ನು ಮಾಡಿ.

**ಶ್ರೀ ಸಿದ್ದುಸವದಿ** :– ಮಾನ್ಯ ಅಧ್ಯಕ್ಷರೆ ಬರಗಾಲದ ಬಗ್ಗೆ ನಾವು ಮಾತನಾಡಬೇಕಾಗಿದೆ. ನಮಗೆ ಅವಕಾಶ ಕೊಡಿ.

**ಅಧ್ಯಕ್ಷರು** :– ಒಂದೊಂದೆ ವಿಷಯವನ್ನು ಮುಗಿಸೋಣ. ಈ ರೀತಿಯಾಗಿ ಏಕೆ ಮಾಡುತ್ತೀರಿ? ಮೊದಲು ಈ ವಿಷಯ ಮುಗಿಯಲಿ. ನಿಲುವಳಿ ಸೂಚನೆ ಬಗ್ಗೆ preliminary submission ಮಾಡುವುದಕ್ಕೆ ಸ್ಪೀಕರ್ ಆಗಿ ನಾನು ಅವಕಾಶ ಕೊಡಬೇಕಾಗುತ್ತದೆ. ನೀವು ದಯವಿಟ್ಟು ಅರ್ಥ ಮಾಡಿಕೊಳ್ಳಿ. ನೀವು ಎಲ್ಲದಕ್ಕೂ ಪದೇ ಪದೇ ಎದ್ದು ನಿಂತರೆ ಹೇಗೆ? ಈ ವಿಷಯ ಮುಗಿದ ಮೇಲೆ

ಹೇಳಿ. ನೆನ್ನೆ ದಿವಸ ಕೂಡ ನಾನು ಅವಕಾಶ ಕೊಟ್ಟಿದ್ದೇನೆ. ಮಾನ್ಯ ಸಿದ್ದುಸವದಿಯವರೆ, ಈ ರೀತಿಯಾಗಿ ಪದೇಪದೇ ಎದ್ದು ನಿಂತರ ಹೇಗೆ? ನೀವು ಎಲ್ಲದಕ್ಕೂ interfere ಆಗುತ್ತಿದ್ದೀರಿ. ನನಗೆ ನಿಜಕ್ಕೂ ಕೂಡ ಅರ್ಥವಾಗುತ್ತಿಲ್ಲ.

**ಶ್ರೀ ಟಿ.ಬಿ. ಜಯಚಂದ್ರ** :– ಮಾನ್ಯ ಅಧ್ಯಕ್ಷರೆ, ಇವತ್ತಿನದಿವಸ ನಿಲುವಳಿ ಸೂಚನೆಯನ್ನು ನಾವು ತಂದಿದ್ದೇವೆ. ಲೆಕ್ಕಾಚಾರವಾಗಿ ನೋಡಿದರೆ ನಾವು ಪ್ರತಿಪಾದನೆ ಮತ್ತು ಇದರ ಬಗ್ಗೆ ಮಾತನಾಡಬೇಕಾಗಿತ್ತು. ಬರದ ವಿಚಾರ ಇಡೀ ರಾಜ್ಯಕ್ಕೆ ಸಂಬಂಧಪಟ್ಟಿರುವುದರಿಂದ ಎಲ್ಲರೂ ಮಾತನಾಡಲೆಂಬ ದೃಷ್ಟಿ ನಮದಾಗಿತ್ತು. ಇದರ ಬಗ್ಗೆ ಮಾತನಾಡುವುದಕ್ಕೆ ಅವರಿಗೂ ಕೂಡ ಅವಕಾಶ ಇದೆ. ಮತ್ತೆ ತಾವು ಈಗಾಗಲೇ ಅವಕಾಶ ಕೊಟ್ಟಿರುವುದರಿಂದ ಅವರು ಮಾತನಾಡಿದ್ದಾರೆ. ನೆನ್ನೆ ದಿವಸ ಒಂದು ಪ್ರಮುಖವಾದಂಥ ವಿಚಾರವನ್ನು ನಾವು ಪ್ರಸ್ತಾಪ ಮಾಡಬೇಕಾಗಿತ್ತು. ಸಭೆಯ ನಡವಳಿಕೆಗಳು ಬಹಳ ಸುಸೂತ್ರವಾಗಿ ನಡೆಯಬೇಕೆಂದು ಮತ್ತು ಅದರಲ್ಲಿಯೂ ವಿಶೇಷವಾಗಿ ಬರಗಾಲದ ವಿಚಾರ ಚರ್ಚೆ ಮಾಡಬೇಕೆಂಬ ಕಾರಣಕೋಸ್ಕರ ಅವಕಾಶ ನೀಡಲಾಗಿದೆ. ಮತ್ತೆ ನೆನ್ನೆ ದಿವಸ ಮಾನ್ಯ ಮುಖ್ಯ ಮಂತ್ರಿಗಳು ಮತ್ತು ನಮ್ಮ ವಿರೋಧಪಕ್ಷದ ನಾಯಕರು ಇಲ್ಲದೇ ಇರತಕ್ಕಂಥ ಸಂದರ್ಭದಲ್ಲಿ ಇದರ ಬಗ್ಗೆ ಪ್ರಸ್ತಾಪ ಮಾಡೋಣವೆಂದು ನಮ್ಮಲಿಯೇ ಹೊಂದಾಣಿಕೆಯಾಗಿ ನಾವು ಒಂದು ತೀರ್ಮಾನಕ್ಕೆ ಬಂದೆವು. ಆದರೆ, ಆ ತೀರ್ಮಾನದಂತೆ ಇವತ್ತು ನಡೆಯಲಿಲ್ಲ. ನಿಮ್ಮ ಕೊಠಡಿಯಲ್ಲಿ ಕುಳಿತು ಮಾತನಾಡಿದ ಪ್ರಕಾರ ಇವತ್ತು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಡಬೇಕೆಂದು ಕೇಳಿಕೊಂಡಿದ್ದೇವೆ. ಲೋಪವಾಗಿರತಕ್ಕಂತದ್ದು ಏನೆಂದರೆ, ಬರಗಾಲದ ಬಗ್ಗೆ ಚರ್ಚೆಯಾಗಬೇಕು, ಏನೆಂದರೆ, ಇದರ ಬಗ್ಗೆ ಮಾತನಾಡುವುದಕ್ಕೆ ಎಲ್ಲರೂ ಕೂಡ ಕಾಳಜಿ ವಹಿಸಿದ್ದಾರೆ. ಬಹುಶ: ನಾನು ಈ ವಿಷಯ ಪ್ರಸ್ತಾಪ ಮಾಡಿದ ಮೇಲೆ ಬರಗಾಲದ ಬಗ್ಗೆ ಕೂಡ ಚರ್ಚೆ ಮಾಡಬೇಕು. ಇಲ್ಲದಿದ್ದರೆ ಏನಾಗುತ್ತದೆಂದರೆ, ಬರಗಾಲ ongoing. ಆ ವಿಷಯ ಚರ್ಚೆಯಲ್ಲಿದೆ. ಇದನ್ನು ರೂಲ್ 69ಗೆ ಕನ್ವರ್ಟ್ ಮಾಡಿರುವುದರಿಂದ ತಾವು ತದನಂತರ ಇದೇ ವಿಚಾರವನ್ನು ತೆಗೆದುಕೊಳ್ಳುವುದಕ್ಕೆ ಬರುತ್ತದೆ. ಈಗ ಬಹಳ ಮುಖ್ಯವಾಗಿ ಪ್ರಸ್ತಾಪ ಮಾಡಬೇಕಾಗಿರತಕಂಥ ವಿಷಯ ಏನೆಂದರೆ, ವಿಶ್ವ ಬಂಡವಾಳ ಹೂಡಿಕೆದಾರರ ಸಮ್ಮೇಳನಕ್ಕೆ ಸಂಬಂಧಪಟ್ಟಂತೆ ಮುನ್ನೋಟ ಕಾರ್ಯಕ್ರಮವೆಂದು ಮಾನ್ಯ ಮುಖ್ಯ ಮಂತ್ರಿಗಳು ಒಂದು ಸಭೆಯನ್ನು ಕರೆದಿದ್ದಾರೆ. ಇದು ಬಹುಶ: ಸಮಯೋಜಿತ, ಸಂದರ್ಭಾನ್ವಿತ ಅಂದರೆ ಈ ವಿಷಯವನ್ನು ಸರಿಯಾದ ಸಮಯಕ್ಕೆ ಪ್ರಸ್ತಾಪ ಮಾಡುತ್ತಿದ್ದೇನೆಂದು ನಾನು ಭಾವನೆ ಮಾಡಿಕೊಂಡಿದ್ದೇನೆ. ಜಾಗತಿಕ ಮಟ್ಟದಲ್ಲಿ ವಿಶ್ವ ಬಂಡವಾಳ

ಹೂಡಿಕೆದಾರರ ಸಮಾವೇಶವನ್ನು ನಾನು ಸ್ವಾಗತ ಮಾಡುತ್ತೇನೆ. ಏಕೆಂದರೆ ರಾಜ್ಯದ ಅಭಿವೃದ್ಧಿ ದೃಷ್ಟಿಯಿಂದ ಇದು ಆಗಬೇಕಾಗುತ್ತದೆ. ಇವತ್ತಿನದಿವಸ ಆರ್ಥಿಕ ಕುಸಿತವಾಗಿರುವ ಹಿನ್ನೆಲೆಯಲ್ಲಿ ಈ ರೀತಿಯಾದಂಥ ಸಮಾವೇಶಗಳು ಮಾಡತಕ್ಕಂಥದ್ದು ಬಹಳ ಸುಸೂತ್ರವಾಗಿರತಕ್ಕಂಥದೆಂದು ನನ್ನ ಭಾವನೆ. ಕರ್ನಾಟಕ ಬಹಳ ವೇಗವಾಗಿ ಚೇತರಿಸಿಗೊಳ್ಳುವ ಮಟ್ಟದಲ್ಲಿ ಆಗುತ್ತಿದೆ ಎಂದು ಮಾನ್ಯ ಮುಖ್ಯ ಮಂತ್ರಿಗಳು ನೆನ್ನೆದಿವಸ ಮೈಸೂರಿನಲ್ಲಿ ಹೇಳಿದ್ದಾರೆ. ಈ ಒಂದು ಹಿನ್ನೆಲೆಯಲ್ಲಿ ಹೇಳುವುದಾದರೆ ನಮ್ಮ ರಾಜ್ಯಕ್ಕೆ ಬಂಡವಾಳ ಹರಿದು ಬರಬೇಕು. ಬಂಡವಾಳ ನಮ್ಮ ರಾಜ್ಯಕ್ಕೆ ಹರಿದು ಬರುವಾಗ ಎಲ್ಲಿಯೋ ಒಂದು ಕಡೆ ನಿಮ್ಮ ಗಮನಕ್ಕೆ ಬಂದು ಅಥವಾ ಬಾರದೆ ಕೆಲವು ತಪ್ಪುಗಳಾಗಿರುವಂಥದ್ದನ್ನು ನಿಮ್ಮ ಗಮನಕ್ಕೆ ತರತಕ್ಕಂಥದ್ದು ನಮ್ಮ ಜವಾಬ್ದಾರಿಯಾಗಿದೆ. ಬಹುಶ: ಈ ವಿಚಾರವನ್ನು ಪ್ರಸ್ತಾಪ ಮಾಡುವುದರಿಂದ ಸರ್ಕಾರ ನಡೆಸುತ್ತಿರುವಂಥ ಮಾನ್ಯ ಮುಖ್ಯ ಮಂತ್ರಿಯವರಿಗೆ ಇದರಿಂದ ಹೆಚ್ಚು ಸಹಾಯವಾಗುತ್ತದೆಂದು ನಾನು ಭಾವಿಸಿದ್ದೇನೆ. ಇವತ್ತಿನ ದಿವಸ ಲ್ಯಾಂಡ್ ಅಕ್ವೈರ್ ಮಾಡಿ ಅದನ್ನು ಮಂಜೂರು ಮಾಡುವಂಥ ಸಂದರ್ಭದಲ್ಲಿ ಯಾವ್ಯಾವ ಮಾನದಂಡಗಳನ್ನು ಇಟ್ಟುಕೊಂಡು ಮಾಡಲಾಗಿದೆ ಎಂಬುದಕ್ಕೆ ನಿಯಮಾವಳಿಗಳು ಮತ್ತು ಕಾನೂನು ಇದೆ. ಆದರೆ, ಇವೆಲ್ಲವನ್ನು ಮೀರಿ ತಪ್ಪಾಗಿರುವಂಥ ಸನ್ನಿವೇಶಗಳು ಅನೇಕ ಕಡೆ ಇವೆ. ಇದರಿಂದ ಸರ್ಕಾರದ ಬೊಕ್ಕಸಕ್ಕೆ ನಾವು ಕಂಡಂತೆ ಕೋಟ್ಯಾಂತರ ರೂಪಾಯಿ ನಷ್ಟವಾಗುತ್ತಿದೆ. ಬಹುಶ: ನಾನು ಪ್ರಸ್ತಾಪಮಾಡುವಂಥದರಲ್ಲಿ ಮೇಲ್ನೋಟಕ್ಕೆ ಕಂಡಂತೆ ಸುಮಾರು 200–300 ಕೋಟಿ ರೂಪಾಯಿ ನಷ್ಟವಾಗಿರುವಂಥ ನಿದರ್ಶನಗಳು ನಮ್ಮ ಹತ್ತಿರ ಇವೆ. ಮಾನ್ಯ ಅಧ್ಯಕ್ಷರೆ, ನಿಮ್ಮ ಮತಕ್ಷೇತ್ರವಾದ ಧಾರವಾಡಕ್ಕೆ ಸಂಬಂಧಪಟ್ಟಿರುವ ಬೇಲೂರು ಇಂಡಸ್ಟ್ರೀಯಲ್ ಎಸ್ಟೇಟ್‌ನಲ್ಲಿ ಆಗಿರುವ ವ್ಯತ್ಯಾಸ ಮತ್ತು ಬೆಂಗಳೂರು ಇಂಡಸ್ಟ್ರಿಯಲ್ ಎಸ್ಟೇಟ್‌ನಲ್ಲಿ ಆಗಿರುವ ವ್ಯತ್ಯಾಸಗಳೂ ಏನಿವೆ ಅವುಗಳನ್ನು ನಮ್ಮ ನಿಯಮಾವಳಿ ಅಥವಾ ಕಾನೂನುಗಳನ್ನು ಯಾವ ರೀತಿಯಾಗಿ ಗಾಳಿಗೆ ತೂರಿ ಮಂಜೂರಾತಿ ಮತ್ತು ಅಕ್ವೈರ್ ಮಾಡಿದ್ದಾರೆಂಬ ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೋಸ್ಕರ ಇವತ್ತು ತಮ್ಮ ಗಮನವನ್ನು ಸೆಳೆಯುವುದಕ್ಕೆ ಬಯಸುತ್ತೇನೆ. ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ದಯಮಾಡಿ ನನಗೆ ಅವಕಾಶ ಕೊಡಬೇಕೆಂಬ ಮನವಿಯನ್ನು ಈ ಸಂದರ್ಭದಲ್ಲಿ ಮಾಡುವುದಕ್ಕೆ ಇಷ್ಟಪಡುತ್ತೇನೆ. ವಿಷಯದ ಬಗ್ಗೆ ಹೆಚ್ಚು ಹೋಗದೇ ಪ್ರಾಸ್ತಾವಿಕವಾದಂಥ ವಿಚಾರವನ್ನು ಪ್ರಸ್ತಾಪ ಮಾಡುತ್ತೇನೆ. ಇದಕ್ಕೆ ತಮ್ಮ ಅನುಮತಿ ಇದ್ದರೆ ಈ ನಿಮಿಷದಲ್ಲಿಯೇ ಚರ್ಚೆ ಮಾಡುವುದಕ್ಕೆ ನಾನು

ತಯಾರಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಹಾಕಿಕೊಂಡಿರುವ ಕಾರ್ಯಕ್ರಮದ ಹಿನ್ನಲೆಯಲ್ಲಿ. ಇದು ಬಹಳ ಮಹತ್ವದ ವಿಚಾರವಾಗಿದೆ ಎಂಬ ಮಾತನ್ನು ಹೇಳುತ್ತಾ ಇದಕ್ಕೆ ಸಭಾನಾಯಕರು ಒಪ್ಪಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇದರಲ್ಲಿ ನಿಮಗೆ ಗೊತ್ತಿಲ್ಲದೆ ಆಗಿರುವ ತಪ್ಪುಗಳು ಏನೆಂಬುದನ್ನು ನಿಮಗೂ ಕೂಡ ಅರಿವಾಗಬೇಕೆಂಬ ದೃಷ್ಟಿಯಿಂದ ಪ್ರಸಾಪ ಮಾಡುವುದಕ್ಕೆ ಅವಕಾಶ ಕೇಳುತ್ತಿದ್ದೇನೆ.

**ಶ್ರೀ ಬಿ. ಎಸ್. ಯಡಿಯೂರಪ್ಪ (ಮುಖ್ಯ ಮಂತ್ರಿಗಳು) :-** ಮಾನ್ಯ ಅಧ್ಯಕ್ಷರೆ, ಬಹಳ ಗಹನವಾದಂಥ ವಿಚಾರವನ್ನು ಪ್ರತಿಪಕ್ಷದ ಉಪನಾಯಕರಾಗಿರುವ ಮಾನ್ಯ ಜಯಚಂದ್ರರವರು ಪ್ರಸ್ತಾಪ ಮಾಡಿದ್ದಾರೆ. ನಿಮಗೆ ಈಗಾಗಲೇ ಗೊತ್ತಿರುವ ಹಾಗೆ Global Investor's Meet ಕೇವಲ ನಾಮಕಾವಸ್ತೆಯಾಗದೆ ಬಂಡವಾಳ ಹೂಡಿಕೆದಾರರಿಗೆ ಇಲ್ಲಿ ಏನೇನು ಅವಕಾಶಗಳಿವೆ ಎಂದು ಮತ್ತು ನಾವು ಇಲ್ಲಿ ಮೂಲಭೂತ ಸೌಕರ್ಯಗಳನ್ನು ಏನೇನು ಡೆವಲಪ್ ಮಾಡಿದ್ದೇವೆಂದು ಮತ್ತು ಅವರು ಬರುತ್ತೇವೆಂದು ಹೇಳಿದ ಕೆಲವೇ ದಿವಸಗಳಲ್ಲಿ ಅವರಿಗೆ ಲ್ಯಾಂಡ್, ಪವರ್, ವಾಟರ್ ವ್ಯವಸ್ಥೆಗಳನ್ನು ಮಾಡಿ ಬಂಡವಾಳ ಹೂಡಿಕೆದಾರರನ್ನು ಆಕರ್ಷಿಸಬೇಕೆಂಬ ಚಿಂತನೆ ಇದೆ. ಈ ಹಿನ್ನಲೆಯಲ್ಲಿ ಒಂದೆರಡು ತಂಡಗಳನ್ನು ಮಾಡಿ ಜಗತ್ತಿನ ಬೇರೆ ಬೇರೆ ಅಂದರೆ ಮುಂದುವರಿದ ಮತ್ತು ಬಂಡವಾಳ ಹೂಡಿಕೆ ಮಾಡುವಂಥ ದೇಶಗಳಿಗೆ ಸಚಿವರುಗಳು ಮತ್ತು ಅಧಿಕಾರಿಗಳು ಹೋಗಿ ನಮ್ಮ ವಿಚಾರವನ್ನು ಅವರಿಗೆ ಮನದಟ್ಟು ಮಾಡಿ ದೊಡ್ಡ ಪ್ರಮಾಣದಲ್ಲಿ ಬಂಡವಾಳ ಹೂಡಿಕೆದಾರರನ್ನು ಆಕರ್ಷಣೆ ಮಾಡಬೇಕೆಂಬ ಉದ್ದೇಶ ಇದೆ. ಮತ್ತೆ ಇದಕ್ಕೆ ನಿಮ್ಮೆಲ್ಲರ ಸಹಕಾರ ಕೂಡ ಬೇಕು. ಬೆಂಗಳೂರಿನಲ್ಲಿರುವಂತ ದೊಡ್ಡ ದೊಡ್ಡ ಹೂಡಿಕೆದಾರರು ಇಡೀ ಜಗತ್ತಿನಲ್ಲಿ ಒಂದಲ್ಲಾ ಒಂದು ರೀತಿಯಲ್ಲಿ ಅವರುಗಳಿಗೆ ಪರಿಚಯ ಇದೆ. ಮತ್ತೆ ಅವರುಗಳು ಬೇರೆ ಕಡೆ ವ್ಯವಹಾರವನ್ನು ನಡೆಸುತ್ತಿದ್ದಾರೆ. ಇವರೆಲ್ಲರ ಸಹಕಾರವನ್ನು ನಾನು ಬೇಡಿದ್ದೇನೆ. ಮತ್ತೆ ಅವರ ಜೊತೆ ಸಮಾಲೋಚನೆ ಮಾಡಿದ್ದು ಎಲ್ಲರೂ ಸಹ ಸಂಪೂರ್ಣ ಸಹಕಾರವನ್ನು ಕೊಡುತ್ತೇನೆಂದು ಒಪ್ಪಿಕೊಂಡಿದ್ದಾರೆ. ಈ ಸಂದರ್ಭದಲ್ಲಿ ಕಾನೂನು ಚೌಕಟ್ಟಿನೊಳಗೆ ಏನಾದರೂ ತಪ್ಪಾಗಿದ್ದರೆ ಅಥವಾ ರೈತರಿಗೆ ಇದರಿಂದ ಅನ್ಯಾಯವಾಗಿದ್ದರೆ ಅಥವಾ ಅದರಲ್ಲಿ ನಮ್ಮ ಉದ್ದೇಶ ಬೇರೆ ಏನಾದರು ಇದ್ದರೆ ಅಂದರೆ ಸ್ವಂತ ಲಾಭ ಮಾಡುಕೊಳ್ಳುವಂಥ ಅಥವಾ ಬೇರೆ ಏನಾದರು ಉದ್ದೇಶ ಇದ್ದರೆ ಖಂಡಿತ ಒಂದಲ್ಲ ಈ ರೀತಿಯಾದ 10 ವಿಷಯಗಳ ಬಗ್ಗೆ ಚರ್ಚೆ ಮಾಡೋಣ. ಮುಕ್ತ ಮನಸ್ಸಿನಿಂದ ನಾನು ನಿಮ್ಮ ಜೊತೆ ಇದ್ದೇನೆಂದು ಹೇಳುವುದಕ್ಕೆ ಬಯಸುತ್ತೇನೆ.

ತಪ್ಪು ಅಥವಾ ಕೊರತೆಗಳಾಗಿದ್ದರೆ ಅದನ್ನು ಸರಿಪಡಿಸುವುದಕ್ಕೂ ಕೂಡ ನಾನು ಸಿದ್ದನಾಗಿದ್ದೇನೆ. ನಾವ್ಯಾರು ಡಿಕ್ಟೇಟರ್ಸ್ ಅಲ್ಲ. ಜನರ ಕಸ್ಟೋಡಿಯನ್ ಆಗಿ ಇಲ್ಲಿಗೆ ಬಂದಾಗ ಎಲ್ಲರ ಹಿತದೃಷ್ಟಿಯಿಂದ ಚರ್ಚೆ ಮಾಡಿದಾಗ ಕೆಲವು ಕೊರತೆಗಳು ಆಗಿರಬಹುದು, ಇಲ್ಲವೆಂದು ನಾನು ಹೇಳುವುದಿಲ್ಲ. ಆದರೆ, ಅದರ ಉದ್ದೇಶ ಏನೆಂಬುದು ಬಹಳ ಮುಖ್ಯವಾಗುತ್ತದೆ. ನಿಮ್ಮಂಥ ಹಿರಿಯ ಸದಸ್ಯರಿಗೆ ನಾನು ಹೇಳುವಂಥ ಅಗತ್ಯ ಇಲ್ಲ. ಚರ್ಚೆ ನಂತರ ನೀವೇ ಒಪ್ಪಿಕೊಳ್ಳುತ್ತೀರೆಂದು ನಾನು ಭಾವಿಸಿದ್ದೇನೆ. ಅಥವಾ ಸರಿಯಾಗಿಲ್ಲದಿದ್ದರೆ ಅದನ್ನು ಸರಿಪಡಿಸಿಕೊಳ್ಳುವುದಕ್ಕೆ ನಾನು ಸಿದ್ಧನಿದ್ದೇನೆ. ಮಾನ್ಯ ಜಯಚಂದ್ರರವರೆ, ನನ್ನ ನೋವು ಏನೆಂದರೆ, ಈ ಸಾರಿ ಬಹಳ ಗಂಭೀರವಾದಂಥ ಚರ್ಚೆ ಇಲ್ಲಿ ಆಗಿದೆ. ನನಗೆ ಆಗಿರುವಷ್ಟು ಆನಂದ ಮತ್ತು ನಿಮ್ಮಂಥವರಿಗೆ ಆಗಿರುವಷ್ಟು ಆನಂದ ಬೇರೆಯಾರಿಗೂ ಸಹ ಆಗಿಲ್ಲ. ಏಕೆಂದರೆ, 14–15 ತಿಂಗಳ ನಂತರ ನಿಮ್ಮೆಲ್ಲರ ಸಹಕಾರದಿಂದ ಅನೇಕ ಗಂಭೀರವಾದಂಥ ವಿಷಯಗಳು ಇಲ್ಲಿ ಚರ್ಚೆಯಾಗಿವೆ. ಮಾಧ್ಯಮದಲ್ಲಿಯೂ ಸಹ editorials ಬರುತ್ತಿವೆ. ಸರಿ ತಪ್ಪುಗಳ ಬಗ್ಗೆ ಚರ್ಚೆಯಾಗುತ್ತಿವೆ. ಮತ್ತೆ ಚಿಂತನ ಮಂಥನ ಆಗುತ್ತಿದೆ ಮತ್ತೆ ಸಾರ್ವಜನಿಕರು ಇದರ ಬಗ್ಗೆ ಆಸಕ್ತಿ ತೋರಿಸುತ್ತಿದ್ದಾರೆ. ಒಂದು ರೀತಿಯಲ್ಲಿ ಏನೋ ಒಂದು ಬದಲಾವಣೆಯನ್ನು ನಾವು ಕಾಣುತ್ತಿದ್ದೇವೆ. ಕೊರತೆಗಳನ್ನು ನಿವಾರಿಸಕೊಂಡು ನಾವು ಮುಂದಕ್ಕೆ ಹೋಗಬೇಕು. ರಾಜ್ಯದ ಉದ್ದಗಲಕ್ಕೂ ಕಲ್ಲಿದ್ದಲಿನ ಅವ್ಯವಹಾರ ನಡೆದಿದೆ ಎಂದು ಮತ್ತು ಮಾನ್ಯ ರೇವಣ್ಣನವರ ಪ್ರಕಾರ ಕೆಪಿಸಿಯಲ್ಲಿ 6 ಲಕ್ಷ ಟನ್ ಕಲ್ಲಿದ್ದಲಿನ ಖರೀದಿಯಲ್ಲಿ 477 ಕೋಟಿ ನಷ್ಟವಾಗಿದೆ ಎಂದು ಹೇಳಿದ್ದಾರೆ. ಆದರೆ, 6 ಲಕ್ಷ ಟನ್ ಖರೀದಿಗೆ ನಾವು ಅವರಿಗೆ ಕೊಟ್ಟಿರುವುದೆ 477 ಕೋಟಿ. ಆದರೆ ಅವರ ಪ್ರಕಾರ 477 ಕೋಟಿ ಲುಕ್ಸಾನ್ ಆಗಿದೆ ಎಂದು ಹೇಳುತ್ತಿದ್ದಾರೆ. ಇದರ ವಿವರಕ್ಕೆ ನಾನು ಹೋಗುವುದಿಲ್ಲ. ಸನ್ಮಾನ್ಯ ರೇವಣ್ಣನವರು ಚರ್ಚೆಯನ್ನು ಪ್ರಾರಂಭ ಮಾಡಲಿ ಈ ವಿಷಯ ಮುಗಿದ ಮೇಲೆ ಯಾವುದಕ್ಕೆ ಆದ್ಯತೆಯನ್ನು ಮಾನ್ಯ ಅಧ್ಯಕ್ಷರು ಕೊಡುತ್ತಾರೆಯೊ ಅದಕ್ಕೆ ನಾನು ಸಿದ್ಧನಿದ್ದೇನೆಂದು ಹೇಳುವುದಕ್ಕೆ ಬಯಸುತ್ತೇನೆ.

**ಅಧ್ಯಕ್ಷರು:–** ಮಾನ್ಯ ಜಯಚಂದ್ರರವರೆ, ನಾನು ನಿಮಗೆ ಹೇಳುವುದೇನೆಂದರೆ, ತಾವು ಮತ್ತು ಇತರೇ ಗೌರವಾನ್ವಿತ ಸದಸ್ಯರು ಈಗ ನಿಲುವಳಿ ಸೂಚನೆ ತೆಗೆದುಕೊಂಡು ಬಂದಿದ್ದೀರಿ. ಈ ವಿಷಯ ಬಹಳ ಮಹತ್ವದಾಗಿದೆ. ಆದ್ದರಿಂದ, ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ನಾನು ತಯಾರಿದ್ದೇನೆಂದು ಸರ್ಕಾರದ ಪರವಾಗಿ ಮಾನ್ಯ ಮುಖ್ಯಮಂತ್ರಿಗಳು ಒಪ್ಪಿಕೊಂಡಿದ್ದಾರೆ. ರೂಲ್ 60 ಮೇಲೆ ತಂದಿರುವ ನಿಲುವಳಿ ಸೂಚನೆಯನ್ನು

ರೂಲ್ 69ಕ್ಕೆ ಕನ್ವರ್ಟ್ ಮಾಡಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುತ್ತೇನೆ. ಇವತ್ತು ಮಧ್ಯಾಹ್ನ 3.00 ಗಂಟೆಗೆ ಇದರ ಮೇಲೆ ಚರ್ಚೆ ಮಾಡಲು ಸಮಯವನ್ನು ನಿಗದಿ ಮಾಡಿದ್ದೇನೆ.

**ಶ್ರೀ ಟಿ. ಬಿ. ಜಯಚಂದ್ರ** :– ಮಾನ್ಯ ಅಧ್ಯಕ್ಷರೆ, ಬರಗಾಲದ ಚರ್ಚೆಗೂ ಕೂಡ ಆದ್ಯತೆ ಕೊಡಬೇಕಾಗುತ್ತದೆ. ಏಕೆಂದರೆ, ಬರಗಾಲದ ಬಗ್ಗೆ ಈಗಾಗಲೇ ಸಾಕಷ್ಟು ಜನ ಮಾತನಾಡಿದ್ದಾರೆ. ಇನ್ನು ಒಬ್ಬಿಬ್ಬರು ಮಾತನಾಡಿದ ನಂತರ ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡಲಿ.

**ಅಧ್ಯಕ್ಷರು** :– ಮೊದಲು ಆ ವಿಷಯನ್ನು ಮುಗಿಸೋಣ. ಮಾನ್ಯ ರೇವಣ್ಣನವರೆ ತಾವು ಪ್ರಾರಂಭ ಮಾಡಿ.

**ಶ್ರೀ ಬಿ. ಎಸ್. ಯಡಿಯೂರಪ್ಪ** :– ತಾವು ಹೇಳಿದ ವಿಚಾರದ ಬಗ್ಗೆ ಚರ್ಚೆ ಮಾಡೋಣ. ಮೊದಲು ಮಾನ್ಯ ರೇವಣ್ಣನವರು ಚರ್ಚೆ ಪ್ರಾರಂಭ ಮಾಡಲೆಂದು ನಾನು ರಿಕ್ವೆಸ್ಟ್ ಮಾಡಿಕೊಳ್ಳುತ್ತೇನೆ. ಬರದ ಮಹತ್ವ ನನಗೂ ಕೂಡ ಅರ್ಥವಾಗಿದೆ. ಇವತ್ತು ಆ ವಿಷಯ ಚರ್ಚೆ ಮಾಡಲು ದಯಮಾಡಿ ನನಗೆ ಸಹಕಾರ ಕೊಡಿ. ಮಾನ್ಯ ರೇವಣ್ಣನವರು ಚರ್ಚೆ ಪ್ರಾರಂಭ ಮಾಡಲಿ.

**ಶ್ರೀ ಟಿ.ಬಿ. ಜಯಚಂದ್ರ** :– ನನ್ನ ಅಭಿಪ್ರಾಯ ಏನೆಂದರೆ, ಇಡೀ ದಿವಸ ಅದಕ್ಕೆ ಹೋಗುತ್ತದೆ. ಇವತ್ತು ಸದನ ಕೊನೆಯದಿನವಸ ಇರುವುದರಿಂದ ಚರ್ಚೆ ಆಗಬೇಕು. ನೆನ್ನೆ ಅರ್ಧ ದಿವಸ ಸದನ ಸಮಯ ಹೋಗಿದೆ. ಅದು ಯಾರಿಂದ ಆಯಿತೆಂಬ ಪ್ರಶ್ನೆ ಬೇರೆ. ಇದು ಮಾನ್ಯ ಅಧ್ಯಕ್ಷರಿಗೂ ಸಹ ಗೊತ್ತಿದೆ. ನಿನ್ನೆ ಅರ್ಧ ದಿವಸ ಸದನದ ಸಮಯವನ್ನು ತಿಂದು ಹಾಕಿರುವ ಹಿನ್ನಲೆಯಲ್ಲಿ ಅದು ಮರುಕಳಿಸಬಾರದು.

**ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು)** :– ಮಾನ್ಯ ಅಧ್ಯಕ್ಷರೆ, ಮಾನ್ಯ ರೇವಣ್ಣನವರಿಗೆ ಎಷ್ಟು ಸಮಯ ಬೇಕು ಕೇಳಿ ಅವರಿಗೆ ಹೇಳಿ. ನನಗೆ ಎಷ್ಟು ಸಮಯ ಕೊಡುತ್ತೀರಿ ಅಷ್ಟು ಸಮಯದಲ್ಲಿ ನಾನು ಉತ್ತರವನ್ನು ಕೊಡುತ್ತೇನೆ. ಸರ್ ಸಮಯವನ್ನು ನಿಗದಿ ಮಾಡಿ. ಪಾರ್ಲಿಮೆಂಟಿನಲ್ಲಿ ಒಂದು ನಿಶ್ಚಿತ ಸಮಯವನ್ನು ಕೊಟ್ಟು ಮಾತನಾಡಲಿಕ್ಕೆ ಮಾಡುತ್ತಾರೆ. ಇಲ್ಲಿ ಆ ಪದ್ಧತಿಯನ್ನು ಮಾಡೋಣ. ರೇವಣ್ಣನವರಿಗೆ ಎಷ್ಟು ಸಮಯ ಬೇಕು ಕೇಳಿ ಸರ್, ಮಧ್ಯದಲ್ಲಿ ನಾನು ಯಾರು ಏಟಿಣಜಡಿಜಿಜಡಿಜ ಆಗುವುದಿಲ್ಲ. ಅವರು ಏನು ಹೇಳಬೇಕು ಹೇಳಲಿ, ಆಮೇಲೆ ನನಗೆ ಎಷ್ಟು ಸಮಯ ಕೊಡುತ್ತೇರಿ ಅಷ್ಟರಲ್ಲಿ ನಾನು ನನ್ನ ಉತ್ತರವನ್ನು ಕೊಡುತ್ತೇನೆ.

**ಅಧ್ಯಕ್ಷರು** :– ರೇವಣ್ಣನವರ ವಿಷಯಕ್ಕೆ ಮಾನ್ಯ ಮುಖ್ಯಮಂತ್ರಿಗಳು ಒಪ್ಪಿದ್ದಾರೆ.

**ಶ್ರೀ ಟಿ. ಬಿ. ಜಯಚಂದ್ರ** :– ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಒಪ್ಪಿರುವುದರಿಂದ ಕಾಲವನ್ನು ನಿಗದಿ ಮಾಡಿ. ಒಂದು ಚೌಕಟ್ಟಿನಲ್ಲಿ ನಮ್ಮ ನಡವಳಿಕೆಗಳು ಬರಲಿ. ಈಗ ನಮ್ಮಲ್ಲಿ ಏನಾಗಿದೆ ಎಂದರೆ, ಯಾವ ವಿಚಾರಕ್ಕೆ ಎಷ್ಟು ಮಹತ್ವ ಕೊಡಬೇಕು ಏನು ಎನ್ನುವುದೆ ಇಲ್ಲ. ಮಾನ್ಯ ಶ್ರೀನಿವಾಸ್ ಪ್ರಸಾದರವರು ಕೇಳುತ್ತಿದ್ದರು. ಅವರು ಸಾಕಷ್ಟು ಸಮಯ ಪಾರ್ಲಿಮೆಂಟಿನಲ್ಲಿದ್ದವರು, ಕ್ಲಾರಿಫಿಕೇಶನ್‌ನ್ನು 50 ಜನ 25 ಜನ ಕೇಳುವುದಕ್ಕೆ ಹೋದರೆ ಎಷ್ಟು ಸಮಯವಾಗುತ್ತದೆ. ನಾವು ಎಲ್ಲೋ ಒಂದು ಕಡೆ ನಿಯಮಗಳ ಚೌಕಟ್ಟಿನಲ್ಲಿ ಕೆಲಸ ಮಾಡಿದರೆ ಅದಕ್ಕೆ ಒಂದು ಅರ್ಥ ಬರುತ್ತದೆಂದು ನಾನು ಹೇಳುತ್ತೇನೆ.

**ಅಧ್ಯಕ್ಷರು** :– ಅದಕ್ಕಾಗಿ ನಾನು ಪದೆ ಪದೆ ಹೇಳುತ್ತಿರುತ್ತೇನೆ. ಸದಸ್ಯರುಗಳು ಒಂದು ಸಮಯವನ್ನು ನಿಗದಿ ಮಾಡಿಕೊಳ್ಳಿ.

**ಶ್ರೀ ಟಿ. ಬಿ. ಜಯಚಂದ್ರ** :– ಕಾಲವನ್ನು ನಿಗದಿ ಮಾಡಬೇಕು ಎಂದಿರುವುದಕ್ಕೆ ನಾನು ಈ ಮಾತನ್ನು ಹೇಳಬೇಕಾಯಿತು. ದಯಮಾಡಿ ಅದನ್ನು ಗಮನದಲ್ಲಿಟ್ಟುಕೊಂಡು ಮಾತನಾಡಬೇಕು.

**ಅಧ್ಯಕ್ಷರು** :– ಯಾವುದೇ ಒಂದು ವಿಷಯ ಬಂದಾಗ, ನಿಯಮ 69ಕ್ಕೆ ಛಿಠಟಿತಜಡಿಣ ಮಾಡುತ್ತೇನೆ. ಬರಗಾಲ ವಿಷಯ ಬಂದಾಗ, ಮೊನ್ನೆ ಕೃಷಿಯ ವಿಷಯ ಬಂತು, ಅದಕ್ಕಾಗಿ ನೀವು ನಿಮ್ಮ ಪಕ್ಷದಲ್ಲಿ ಒಂದು ಚಿಂತನೆಯನ್ನು ಮಾಡಿ 10 ಜನ ಶಾಸಕರು ಈ ವಿಷಯದ ಮೇಲೆ ಮಾತನಾಡಲಿ, ಬರಗಾಲ ವಿಷಯಕ್ಕೆ ಸಂಬಂಧಪಟ್ಟಂತೆ 10 ಜನ ಶಾಸಕರು ಮಾತನಾಡಲಿ. ಆ ಮೇಲೆ ಯಾವುದೇ ಒಂದು ರೂಲ್ 69ನ ಮೇಲೆ ಕಲ್ಲಿದ್ದಲು ವಿಷಯ ಈಗ ಬಂತು, ಮಾನ್ಯ ರೇವಣ್ಣನವರು ಮಾತನಾಡಿದ ಮೇಲೆ ಅದು ಮುಗಿಯಿತು. ಮತ್ತೆ ಅದರ ಮೇಲೆ 8 ಜನ ಮಾತನಾಡಿದರೆ ಅದಕ್ಕೆ ಅರ್ಥ ಏನಿದೆ? ಈ ರೀತಿ ಒಂದು ಹೊಂದಾಣಿಕೆ ಮಾಡಿದರೆ ಬಹಳಷ್ಟು ವಿಷಯಗಳನ್ನು ಚರ್ಚೆ ಮಾಡಲಿಕ್ಕೆ ಅವಕಾಶ ಸಿಗುತ್ತದೆ. ಬಹಳಷ್ಟು ಜನ ಶಾಸಕರು ಇನ್‌ವಾಲ್ವ್ ಆಗುವುದಕ್ಕೆ ಸಾಧ್ಯವಿದೆ. ಸರ್ಕಾರದಿಂದ ಸರಿಯಾದ ಒಂದು ಉತ್ತರ ಕೂಡ ಬರುವುದಕ್ಕೆ ಸಾಧ್ಯವಿದೆ. ಪ್ರತಿಯೊಂದು ವಿಷಯಕ್ಕೂ ಎಲ್ಲರೂ ಮಾತನಾಡುತ್ತೇವೆಂದರೆ ಯಾರಿಗೂ ಅವಕಾಶ ಕೊಡುವುದಕ್ಕೆ ಸಾಧ್ಯವಿಲ್ಲ, ಇರುವ ಸಮಯದಲ್ಲಿ ಲಿಮಿಟ್ ಹಾಕಿಕೊಳ್ಳಬೇಕು. ಆ ದೃಷ್ಟಿಕೋನದಿಂದ ಎಲ್ಲರ ಸಹಕಾರ ಇದಕ್ಕೆ ಬೇಕು.

**ಶ್ರೀ ಟಿ. ಬಿ. ಜಯಚಂದ್ರ** :– ಆ ಅಧಿಕಾರ ತಮಗೆ ಇದೆ.

**ಅಧ್ಯಕ್ಷರು :–** ಅಧಿಕಾರ ಇದ್ದರೂ ನಿಮ್ಮ ಸಹಕಾರ ಇಲ್ಲದಿದ್ದರೆ ನಾನು ಏನು ಮಾಡುವುದಕ್ಕಾಗುವುದಿಲ್ಲ. ಅಧಿಕಾರವನ್ನು ಉಪಯೋಗ ಮಾಡಿದರೆ ಅದು ಒಂದು ತರಹ ಆಗುತ್ತದೆ.

**ಶ್ರೀ ಟಿ. ಬಿ. ಜಯಚಂದ್ರ :–** ಅಧಿಕೃತ ಒಂದು ರಾಜಕೀಯ ಪಕ್ಷವಾಗಿ ನಮ್ಮ ವಿಚಾರಧಾರೆಗಳು ಏನೆಂದರೆ, ವಿಶೇಷವಾಗಿ ಚರ್ಚೆಯಾಗಬೇಕು. ಅರ್ಥಪೂರ್ಣವಾಗಿ ಚರ್ಚೆಯಾಗಬೇಕು, ಸರ್ಕಾರದಿಂದು ಉತ್ತರ ಬರಬೇಕು. ಸರ್ಕಾರ ತಪ್ಪು ಮಾಡಿದರೆ ಟೀಕೆ ಮಾಡುವುದಕ್ಕೆ ಅವಕಾಶ ಇರಬೇಕೆನ್ನುವಂಥದ್ದು.

**ಶ್ರೀ ವಿ. ಶ್ರೀನಿವಾಸ್ ಪ್ರಸಾದ್ (ನಂಜನಗೂಡು) :–** ಮಾನ್ಯ ಅಧ್ಯಕ್ಷರೆ, ನಾನು ಒಂದು ವಿಷಯವನ್ನು ಸಬ್‌ಮಿಷನ್ ಮಾಡುವುದಕ್ಕೆ ದಯಮಾಡಿ ಅವಕಾಶವನ್ನು ಮಾಡಿ ಕೊಡಿ. ಮಾನ್ಯ ಮುಖ್ಯಮಂತ್ರಿಗಳು ವಿಶೇಷ ಅಧಿವೇಶನದ ಬಗ್ಗೆ ಬಹಳ ಮುಖ್ಯವಾಗಿ ಒಂದು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ತಮ್ಮ ಪ್ರಾಸ್ತಾವಿಕ ನುಡಿಗಳಲ್ಲಿ ಬಹುಶ: ವಿಶೇಷ ಅಧಿವೇಶನ ಅಥವಾ ಮುಂದುವರೆದ ಅಧಿವೇಶನವೆಂದು ಏನು ಹೇಳುತ್ತಿದ್ದೀರಿ. ಬಹುಶ: ಈ ತರಹದ ಅಧಿವೇಶನ ದೇಶದ ಶಾಸಕಾಂಗ ಇತಿಹಾಸದಲ್ಲಿ ಮೊಟ್ಟಮೊದಲನೆಯದಾಗಿ ಕರೆದಿರುವಂಥ ಒಂದು ವಿಶೇಷವಾದ ಈ ಅಧಿವೇಶನ. ಈ ಅಧಿವೇಶನವನ್ನು ಕರೆದ ನಂತರ ಇಲ್ಲಿ ನಾವು ಕೃಷಿ ಮತ್ತು ಗ್ರಾಮೀಣಾಭಿವೃದ್ಧಿಯ ವಿಷಯಗಳ ಬಗ್ಗೆ ಚರ್ಚೆ ಮಾಡಬೇಕು. ಪ್ರಾರಂಭದಲ್ಲಿ ನೀವು ಮೂರು ದಿವಸಗಳ ಕಾಲ ಚರ್ಚೆಯಾಗಬೇಕೆಂದು ಹೇಳುತ್ತಿದ್ದೀರಿ, ಶುಕ್ರವಾರ ಮಧ್ಯಾಹ್ನ ಇದು ಮುಗಿಯಬೇಕೆಂದು ಹೇಳುತ್ತಿದ್ದೀರಿ. ಇಲ್ಲಿ ಎಲ್ಲಾ ಸದಸ್ಯರ ಭಾವನೆಗಳನ್ನು ಅರ್ಥಮಾಡಿಕೊಂಡು ತಾವೆಲ್ಲರೂ ಇದು ಬಹಳ ಮುಖ್ಯವಾದ ವಿಷಯ ನಾವೆಲ್ಲರೂ ಕೂಡ ಈ ಚರ್ಚೆಯಲ್ಲಿ ಭಾಗವಹಿಸಬೇಕೆಂದು ಹೇಳುತ್ತಿದ್ದೀರಿ. ಇಲ್ಲಿ ಎಲ್ಲಾ ಸದಸ್ಯರ ಭಾವನೆಗಳನ್ನು ಅರ್ಥಮಾಡಿಕೊಂಡು ತಾವೆಲ್ಲರೂ ಇದು ಬಹಳ ಮುಖ್ಯವಾದ ವಿಷಯ ನಾವೆಲ್ಲರೂ ಕೂಡ ಈ ಚರ್ಚೆಯಲ್ಲಿ ಭಾಗವಹಿಸಬೇಕೆಂದು ಆಯಿತು. ಮೂರು ದಿವಸವಾಗಿ ನಾಲ್ಕನೇ ದಿವಸಕ್ಕೆ ಮುಂದುವರೆಯಿತು. ಒಟ್ಟು ಮೂರು ದಿನವಸ ಮುಂದುವರೆಸಿದ್ದೀರಿ. ಈ 6 ದಿವಸಗಳಲ್ಲಿ 4 ದಿವಸ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿಯ ಬಗ್ಗೆ ಚರ್ಚೆಯಾಯಿತು. ಅದು ಆದ ನಂತರ ಮತ್ತೊಂದು ಬಹಳ ಪ್ರಮುಖವಾದ ವಿಷಯದ ಬಗ್ಗೆ ನಾವು ಇವತ್ತು ಚರ್ಚೆ ಮಾಡುತ್ತಿದ್ದೇವೆ. ಬರ ಮತ್ತು ಅತಿವೃಷ್ಟಿಯ ಬಗ್ಗೆ ಚರ್ಚೆ ಮಾಡುವಂಥ ಸಮಯದಲ್ಲಿ ನಿನ್ನೆ ಅರ್ಧ ದಿವಸ ಕಲಾಪ ನಡೆದಿಲ್ಲ. ಮೂರು ಗಂಟೆಯ

V13-54

ಮೇಲೆ ಈ ಚರ್ಚೆಯನ್ನು ತೆಗೆದುಕೊಂಡಿರುವಂಥದ್ದು. ಬರ ಮತ್ತು ಅತಿವೃಷ್ಟಿ ಬಹಳ ಮುಖ್ಯವಾಗಿ ಇವತ್ತು ಚರ್ಚೆಯಾಗಬೇಕಾಗಿದೆ, ಇದು ಗ್ರಾಮೀಣ ಮಟ್ಟದ ಜನರ ಜೀವನ್ಮರಣದ ಪ್ರಶ್ನೆಯಾಗಿರುವಂಥದ್ದು. Natural calamities, ಬರ ಅಥವಾ ಅತಿವೃಷ್ಟಿ ಇರಬಹುದು, ಈ ಎರಡನ್ನು ಕೂಡ ನಾವು ಸುಮ್ಮನೆ passing remarks ಮಾಡಿ, ಏನೋ ಬಂತು, ಚರ್ಚೆ ಮಾಡಿ ಮುಗಿಸೋಣ ಎನ್ನುವುದು ಬೇಡ. ಕೃಷಿ ಮತ್ತು ಗ್ರಾಮೀಣಾಭಿವೃದ್ಧಿಯ ಬಗ್ಗೆ ನಾನು ಮಾತನಾಡಬೇಕೆಂದು ಇದ್ದೆ. ಬಹುಶ: ನನಗೆ ತಿಳಿದ ಮಟ್ಟಿಗೆ ಈ ಅಧಿವೇಶನದಲ್ಲಿ ತಾವು Business Advisory Committee ಯಲ್ಲಿ ಬಹಳ ಶಿಸ್ತಾಗಿ ತೆಗೆದುಕೊಂಡಿರುವಂಥದ್ದು, ಯಾವ ಪಕ್ಷದ ಸ್ಟ್ರೆಂಥ್ ಎಷ್ಟು ಇದೆ, ಅದಕ್ಕೆ ತಕ್ಕಂತೆ ಮಾತನಾಡುವುದಕ್ಕೆ ಇಷ್ಟಿಷ್ಟು ಸಮಯ ಅವಕಾಶವನ್ನು ಕೊಡಬೇಕು, ಹೆಚ್ಚು ಸಮಯ ಕೊಡುವುದಕ್ಕೆ ಆಗುವುದಿಲ್ಲವೆಂದು ಹೇಳಿದಿರಿ, ಅದಕ್ಕಾಗಿ ಅದರಲ್ಲಿ ನಾನು ಮಾತನಾಡಲಿಲ್ಲ. ಈಗ ಬರ ಮತ್ತು ಅತಿವೃಷ್ಟಿಯ ವಿಷಯದಲ್ಲಿ ನಾನು ಮಾತನಾಡಬೇಕೆಂದು ಹೇಳಿದಾಗ, ನಾನು ನಿನ್ನೆ ಪ್ರಯತ್ನ ಮಾಡಿದೆ ಆಗಲಿಲ್ಲ. ಇವತ್ತು ಆ ವಿಷಯ ಮುಂದುವರೆಯುತ್ತದೆ ಸ್ವಲ್ಪ ಅದರ ಬಗ್ಗೆ ಇನ್ನು ಹೆಚ್ಚು ಚರ್ಚೆ ಬೇಕಾದರೆ ಇನ್ನು ಒಂದು ದಿವಸ ಮುಂದುವರೆಸಿ. ನಿಮ್ಮ ಹಗರಣಗಳು ಬೇರೆ ವಿಷಯಗಳು, ಏನೇನು ಕೆಸರಾಟ ಮಾಡುತ್ತೀರೆನ್ನುವುದು ನಮಗೆ ಗೊತ್ತಿದೆ. ಹಗರಣಗಳು ಬಂದಾಗ ನಾನು ಮಾತನಾಡುವುದಕ್ಕೆ ಇಷ್ಟಪಡುವುದಿಲ್ಲ. ಯಾವ ಸರ್ಕಾರ, ಯಾವ ಆಡಳಿತದಲ್ಲಿ scam free ಇರತಕ್ಕಂಥ ಹಗರಣಗಳೂ ನಡೆದಿದೆ? ಇದು ಒಬ್ಬರಿಗೊಬ್ಬರಿಗೆ, ನಮ್ಮ ವೈಯಕ್ತಿಕವಾದಂಥ ದ್ವೇಷ ಅಸೂಯೆಗಳಿಗೆ, ಇವತ್ತು ರಾಜಕೀಯದ ಲಾಭ-ನಷ್ಟ ಆಗತಕ್ಕಂಥದ್ದನ್ನು ನೀವು ಆಮೇಲೆ ಮಾತನಾಡಿಕೊಳ್ಳಿ, ಬೇಡವೆಂದು ಹೇಳುವುದಿಲ್ಲ. ಆದರೆ ಇಲ್ಲಿರತಕ್ಕಂಥದ್ದು ಬರ ಮತ್ತು ಅತಿವೃಷ್ಟಿ. ಅದರ ಹಿನ್ನೆಲೆಯಲ್ಲಿ ಬೇರೆ ಇನ್ನಿತರ ವಿಷಯಗಳನ್ನು ನಾನು ಪ್ರಸ್ತಾಪ ಮಾಡಬೇಕೆಂದು ಇದ್ದೇನೆ. ಏಕೆಂದರೆ, ಮಾನ್ಯ ಮುಖ್ಯಮಂತ್ರಿಗಳು ಹೇಳಿದ ಹಾಗೆ, ಆಯವ್ಯಯದಲ್ಲಿ ಮಂಡಿಸಿದ ಸಂದರ್ಭದಲ್ಲಿ ಅವರ ವಿಶೇಷ ಯೋಜನೆಗಳು ಇರಬಹುದು. ಮುಖ್ಯವಾಗಿ ಆಯವ್ಯಯದಲ್ಲಿ ಡಿಮಾಂಡ್ಸ್ ಬಗ್ಗೆ, ವಿಶೇಷ ಯೋಜನೆಗಳ ಬಗ್ಗೆ ಇವತ್ತು ಚರ್ಚೆ ಆಗಬೇಕಾಗಿರುವಂಥದ್ದು, ಕಳೆದ ಅಧಿವೇಶನದಲ್ಲಿ ಅದು ಆಗಲಿಲ್ಲ. ಬಹುಶ: ಅದಕ್ಕೋಸ್ಕರ ಇದಕ್ಕೆ ಹೆಚ್ಚು ಒತ್ತು ಕೊಟ್ಟು ಇವತ್ತು ವಿಶೇಷವಾದ ಅಧಿವೇಶನವನ್ನು ನೀವು ಕರೆದಿರುವಂಥ ಸನ್ನಿವೇಶದಲ್ಲಿ, ಇವತ್ತು ನೀವು ಹಗರಣಗಳ ಬಗ್ಗೆ ಮಾತನಾಡೋಣ. ಬರದ ಬಗ್ಗೆ ಚರ್ಚೆ ಮಾಡುವಾಗ ಬೇಗ ಮುಗಿಸಿ ಎಂದು ಹೇಳುವುದು ಅಲ್ಲ. ಇದರ

ಬಗ್ಗೆ ನಾನು ಸಹ ಮಾತನಾಡಬೇಕಾಗಿದೆ. ಏಕೆಂದರೆ, ಈಗ ಬಂಡವಾಳ ಹೂಡಿಕೆದಾರರು, ನೀವು ಚೈನಾ ದೇಶಕ್ಕೆ ಹೋಗಿದ್ದೀರಿ, ವಿಶೇಷವಾದ ಭೇಟಿ ಏನು? ಸರ್ಕಾರದ ಬೊಕ್ಕಸದಿಂದ ಮಾನ್ಯ ಶಾಸಕರುಗಳು ವಿದೇಶಿ ಪ್ರವಾಸಕ್ಕೆ ಹೋದರು, ಯಾವುದೇ ಸಮಿತಿ ಇರಬಹುದು, ಅದಕ್ಕೆ ಒಂದು ಉದ್ದೇಶ ಇರುವಂಥದ್ದು, ಮೋಜು ಮಾಡುವಂಥದ್ದು ಅಲ್ಲ. ಇವತ್ತೇ ಜನ ನಮ್ಮ ಬಗ್ಗೆ ಮೂಗು ಮುರಿಯುವಂಥದ್ದು ಮತ್ತು ಅಸಹ್ಯ ಪಡುವಂಥದ್ದು ಇದೆ. ಯಾವುದೇ ಶಾಸನ ಸಭೆಗಳ ಬಗ್ಗೆ ಗೌರವ ಇದೆಯೇನು? ಇವತ್ತು ನಾವು economy measures ಇಟ್ಟುಕೊಂಡು ಹೋಗಿದ್ದೆವು. ನೀವು ಈ ಸರ್ಕಾರ ಬಂದ ಮೇಲೆ ಒಂದು ತೀರ್ಮಾನವನ್ನು ಮಾಡಿದ್ದೀರಿ. 5 ವರ್ಷದೊಳಗಡೆ ಪ್ರತಿಯೊಬ್ಬ ಶಾಸಕನಿಗೂ ಕೂಡ ವಿದೇಶಕ್ಕೆ ಹೋಗತಕ್ಕಂಥ ಅವನಿಗೆ ಹೆಚ್ಚಿನ ಅನುಭವ ಬರತಕ್ಕಂಥ ಬೇರೆ ಬೇರೆ ದೇಶಗಳಿಗೆ ಹೋಗಿ ಬೇರೆ ಬೇರೆ ವಿಷಯಗಳನ್ನು ಗ್ರಹಿಸಿ ಅವನು ಬರತಕ್ಕಂಥ ಅವಕಾಶವನ್ನು ಕೊಡುತ್ತೇವೆನ್ನುವುದನ್ನು ಮಾಡಿದ್ದೀರಿ ಅದನ್ನು ಮಾಡಿ. ಇವತ್ತು ನೀವು ವಿಶೇಷವಾಗಿ ಚೈನಾ ದೇಶಕ್ಕೆ ಹೋದ ಸಂದರ್ಭದಲ್ಲಿ ಏನು ಬೆಳಕನ್ನು ಚೆಲ್ಲಿದ್ದೀರಿ, ಇಷತ್ತು ಬಂಡವಾಳ ಹೂಡಿಕೆದಾರರ ಬಗ್ಗೆ ಮಾತನಾಡುತ್ತಿದ್ದೀರಿ, ಚೈನಾ ದೇಶದಿಂದ ನಿಮಗೆ ಏನು ಬಂಡವಾಳ ಬರುತ್ತದೆ? ನಾನು ಮಾತನಾಡಬೇಕೆಂದು ಇದ್ದೆ, ನಮ್ಮಲ್ಲಿರತಕ್ಕಂಥ red tapism ಗೂ ಕೂಡ ಚೈನಾ ದೇಶದಲ್ಲಿ ಅವರು red carpet ಹಾಕಿ ತೆಗೆದುಕೊಂಡು ಹೋಗತಕ್ಕಂಥದ್ದು, ಅವರಿಗೂ ನಮಗೂ ಬಹಳ ವ್ಯತ್ಯಾಸ ಇರತಕ್ಕಂಥದ್ದು. ಇವತ್ತು globalization ಹಿನ್ನೆಲೆಯಲ್ಲಿ ಇದನ್ನು ಹೇಳುತ್ತಿದ್ದೇನೆ. ನಿಮಗೆ ಚೈನಾ ದೇಶದ ಪ್ರವಾಸದಿಂದ ಏನು ಲಾಭವಾಗಿದೆ. ಅದರ ಬಗ್ಗೆ ನಾನು ಸ್ವಲ್ಪ ಮಾತನಾಡಬೇಕಾಗಿದೆ. ನನಗೆ ನೀವು ಸ್ವಲ್ಪ ಅವಕಾಶವನ್ನು ಕೊಡಬೇಕು. ಏಕೆಂದರೆ ಕೂಡ ನಾನು ಕೂಡ ಅನುಭವ ಇರತಕ್ಕಂಥವನು. ನಾನು ಈ ಸದನದಲ್ಲಿ ಮಾತನಾಡಬೇಕೆನ್ನುವ ರೀತಿಯಲ್ಲಿ ನಾನು ಇಷ್ಟಪಟ್ಟಿರತಕ್ಕಂಥವನು. ಮಾನ್ಯ ಸದಸ್ಯರುಗಳು ಸ್ಪಷ್ಟೀಕರಣ ಸಾಕಷ್ಟು ಕೇಳಿದ್ದಾರೆ. ನಾನು ಒಂದು ಸ್ಪಷ್ಟೀಕರಣ ಕೇಳಬೇಕೆಂದು ಇದ್ದೇನೆ, ನಾನು ಪ್ರಾರಂಭ ಮಾಡುತ್ತೇನೆ. ದಯಮಾಡಿ ನನಗೆ ಅವಕಾಶವನ್ನು ಕೊಡಬೇಕೆಂದು ನಾನು ತಮ್ಮಲ್ಲಿ ಮನವಿಯನ್ನು ಮಾಡುತ್ತೇನೆ.

**ಅಧ್ಯಕ್ಷರು :** ಮಾನ್ಯ ಶಿವಲಿಂಗೇಗೌಡರೆ, ಮಾನ್ಯ ಮುಖ್ಯಮಂತ್ರಿಗಳು ಏನೋ ಹೇಳುತ್ತಿದ್ದಾರೆ. ನೀವು ಅವರು ಮಾತನಾಡಿದ ನಂತರ ಹೇಳಿ. ಅವರು ಏನು ಹೇಳುತ್ತಾರೆ ಕೇಳೋಣ. ಅವರು ಮಾತನಾಡಿದ ನಂತರ ನೀವು ಮಾತನಾಡಿ.

**ಶ್ರೀ ಹೆಚ್. ಸಿ. ಬಾಲಕೃಷ್ಣ** : ಮಾನ್ಯ ಶ್ರೀನಿವಾಸ ಪ್ರಸಾದ್‌ರವರು ಮಾತನಾಡತಕ್ಕಂಥ ಸಂದರ್ಭದಲ್ಲಿ, ಹಗರಣದಲ್ಲಿ, ಹಗರಣಗಳ ಬಗ್ಗೆ ಮಾತನಾಡಿದರು. ಇದರ ಬಗ್ಗೆ ತಪ್ಪು ಸಂದೇಶ ಹೋಗಬಾರದು.

**(ಗೊಂದಲ)**

**ಅಧ್ಯಕ್ಷರು** : ಮಾನ್ಯ ಮುಖ್ಯಮಂತ್ರಿಗಳು ಮಾತನಾಡಿದ ನಂತರ ನೀವು ಏನು ಹೇಳಬೇಕು ಹೇಳಿ, ಮಾತನಾಡುವುದಕ್ಕೆ ನಿಮಗೆ ಯಾರು ಬೇಡವೆನ್ನುತ್ತಾರೆ[2].

**(ಗೊಂದಲ)**

**ಶ್ರೀ ಬಿ. ಎಸ್. ಯಡಿಯೂರಪ್ಪ** : ಮಾನ್ಯ ಶ್ರೀನಿವಾಸ ಪ್ರಸಾದರವರು ಅನುಭವಿ ಇರತಕ್ಕಂಥವರು.

**ಅಧ್ಯಕ್ಷರು** : ನೀವು ಏಕೆ ಪರಸ್ಪರ ಮಾತನಾಡುತ್ತೀರಿ. ಇದು ಒಳ್ಳೆಯದು ಅಲ್ಲ. ನೀವು ಪರ್ಮಿಷನ್ ತೆಗೆದುಕೊಂಡು ಮಾತನಾಡಿ. ಪರಸ್ಪರ ಮಾತನಾಡಿದರೆ ಈ ಸದನಕ್ಕೆ ಗೌರವ ಬರುವುದಿಲ್ಲ. ಮಾನ್ಯ ರೇವಣ್ಣನವರೆ ಕುಳಿತುಕೊಳ್ಳಿ.

**(ಗೊಂದಲ)**

ಮಾನ್ಯ ಕಟ್ಟಾಸುಬ್ರಮಣ್ಯ ನಾಯ್ಡುರವರೆ ತಾವು ಸುಮ್ಮನೆ ಕುಳಿತುಕೊಂಡು ಬಿಡಿ. ಆ ರೀತಿ ಏನಾದರೂ ಮಾತನಾಡಿದ್ದು ಇದ್ದರೆ ಕಡತದಿಂದ ತೆಗೆಯೋಣ ಬಿಡಿ.

**(ಗೊಂದಲ)**

**ಶ್ರೀ ಮಾಲೀಕಯ್ಯ ಗುತ್ತೇದಾರ** : ಈ ರೀತಿಯಾದರೆ ಸದನವನ್ನು ನಡೆಸುವುದಕ್ಕಾಗುವುದಿಲ್ಲ.

**ಅಧ್ಯಕ್ಷರು** : ಪ್ಲೀಸ್ ಗುತ್ತೇದಾರವರೆ ಕುಳಿತುಕೊಳ್ಳಿ. ಮಾನ್ಯ ಬಾಲಕೃಷ್ಣ ಪ್ಲೀಸ್.

**ಶ್ರೀ ಹೆಚ್. ಸಿ. ಬಾಲಕೃಷ್ಣ** : ಎಲ್ಲರದ್ದು ಎಲ್ಲಾ ಗೊತ್ತಿದೆ ಎಂದು ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ, ದಯವಿಟ್ಟು ಅವರಿಗೆ ಏನು ಗೊತ್ತಿದೆ ಎನ್ನುವುದನ್ನು ಹೇಳಬೇಕು.

**ಶ್ರೀ ಬಿ.ಎಸ್. ಯಡಿಯೂರಪ್ಪ** : ಮಾನ್ಯ ಬಾಲಕೃಷ್ಣರವರೆ ನಾನು ಮಾತನಾಡಲು ಎದ್ದು ನಿಂತಿದ್ದೇನೆ. ಮಾನ್ಯ ಶ್ರೀನಿವಾಸ ಪ್ರಸಾದರವರು ಅನುಭವಿ ಸಂಸದೀಯ ಪಟುಗಳು. ಅವರು ಹೆಚ್ಚು ಮಾತನಾಡಬೇಕು, ಹೆಚ್ಚು ಮಾರ್ಗದರ್ಶನ ಮಾಡಬೇಕು. ಇಲ್ಲಿರುವ ಅನೇಕ ಹೊಸ ಸದಸ್ಯರು ಅವರಿಂದ ಕಲಿಯುವಂಥದ್ದು ಬಹಳ ಇದೆ. Global investors ವಿಷಯದಲ್ಲಿ ಜಗತ್ತಿನ ಬೇರೆ ಬೇರೆ ಭಾಗದಿಂದ ಹೂಡಿಕೆದಾರರನ್ನು invite ಮಾಡುವ ವಿಷಯದಲ್ಲಿ

ಪ್ರತಿ ಪಕ್ಷದ ನಾಯಕರು, ಮಾನ್ಯ ಶ್ರೀನಿವಾಸ ಪ್ರಸಾದರವರನ್ನು ಸೇರಿದಂತೆ ನಾನು ಪ್ರಮುಖರ ಒಂದು ಸಭೆಯನ್ನು ಕರೆಯುತ್ತೇನೆ. ಹೇಗೆ ಮಾಡಬೇಕು, ಹೇಗೆ ಆಕರ್ಷಣೆ ಮಾಡಬೇಕು, ಯಾರನ್ನು ಕರೆಯಬೇಕು ಇದರ ಬಗ್ಗೆಯೂ ನಿಮ್ಮ ಸಲಹೆಯನ್ನು ತೆಗೆದುಕೊಳ್ಳುತ್ತೇನೆ. ಚೈನಾ ದೇಶಕ್ಕೆ ನಾನು request ಮಾಡಿ ಹೋಗಿರಲಿಲ್ಲ. ಪ್ರತಿವರ್ಷ ಕೇಂದ್ರ ಸರ್ಕಾರ ಕೆಲವು ರಾಜ್ಯದ ಮುಖ್ಯಮಂತ್ರಿಗಳನ್ನು ಕಳುಹಿಸುತ್ತಾರೆ. ಅದರಂತೆ ನನಗೆ ಹೋಗಬೇಕೆಂದು ಆಮಂತ್ರಣ ಬಂದಿತ್ತು ನಾನು ಹೋಗಿದ್ದೆ. ನಾನು ಚೈನಾ ದೇಶಕ್ಕೆ ಹೋದಾಗ ಸುಮಾರು 65 ರಿಂದ 70 ಜನ ಕೈಗಾರಿಕೋದ್ಯಮಿಗಳು ಯಾರು ದೇಶದ ಜಗತ್ತಿನ ಬೇರೆ ಬೇರೆ ಭಾಗದಲ್ಲಿ ಕೈಗಾರಿಕೆಗಳನ್ನು ಮಾಡುವುದಕ್ಕೆ invest ಮಾಡಿದ್ದಾರೆ ಅಂತಹವರ ಜೊತೆಯಲ್ಲಿ ಗಂಭೀರವಾದಂತಹ ಚರ್ಚೆಗಳು ಆಗಿವೆ. ಅವರಿಗೆ ದೆಹಲಿ ಮತ್ತು ಬೆಂಗಳೂರು ಎರಡೇ ಗೊತ್ತಿರುವುದು. ಆ ತರಹದ ಜನರು ಯಾರು ಎಂದು ಆ ಬಗ್ಗೆ ವಿವರಕ್ಕೆ ಹೋಗದೆಯೇ Global Investors' Meetಗೆ ಅವರು ಬರುವುದಕ್ಕೆ ಒಪ್ಪಿಕೊಂಡಿದ್ದಾರೆ ಅವರು invest ಮಾಡುವುದಕ್ಕೂ ಸಹ ರೆಡಿ ಇದ್ದಾರೆ. ಈಗಾಗಲೇ invest ಮಾಡಿರುವಂತಹವರು ಇತರರನ್ನು ಜೊತೆಯಲ್ಲಿ ಕರೆದುಕೊಂಡು ಬರುತ್ತೇವೆಂದು ಹೇಳಿದ್ದಾರೆ. ಯಾರ್ಯಾರು ಬಂದಿದಾರೆಂಬ ಬಗ್ಗೆ ಸುದೀರ್ಘವಾಗಿ ನಾನು ಮಾತನಾಡುತ್ತೇನೆ. ಆದರೆ ಚೈನಾ ದೇಶಕ್ಕೆ ಅವರಿಗೆ ಏನೋ ಕೊರತೆಯಾಗಿದೆ ಅವರು ಬಂದು invest ಮಾಡುತ್ತಾರೆಂದು ನಾನು ಸಹ ಅಂದುಕೊಂಡಿರುವುದಿಲ್ಲ, ನಾನು ಅದರ ಭ್ರಮೆಯಲ್ಲಿಲ್ಲ. ಅಲ್ಲಿ invest ಮಾಡಿ ಕೆಲಸದಲ್ಲಿರುವಂತಹವರು ಭಾರತದ ಬಗ್ಗೆ ದೆಹಲಿಯ ಬಗ್ಗೆ, ಬೆಂಗಳೂರಿನ ಬಗ್ಗೆ ಆಸಕ್ತಿ ಇರುವಂತಹವರು ದೊಡ್ಡದೊಡ್ಡ ಕಂಪನಿಯವರು, ಆ ಮೀಟಿಂಗ್‌ಗೆ ಬಂದಿದ್ದರು. ಅವರು ನಾವು ಬರುತ್ತೇವೆಂದು ಹೇಳಿದ್ದಾರೆ. ಅವರು ಬಂದರೆ ಲಾಭವಾಗುತ್ತದೆ ಎಂದು ನಾನು ಅಂದುಕೊಂಡಿದ್ದೇನೆ. ಲಾಭ ಆಗುತ್ತದೆಯೋ ಅಥವಾ ಬಿಡುತ್ತದೆಯೋ ನನಗೆ ಗೊತ್ತಿಲ್ಲ. ಇದರಲ್ಲಿ ನನ್ನ ಪ್ರಯತ್ನವಷ್ಟೇ. ನೀವು ಹೇಳಿರುವುದಕ್ಕೆ ವಿವರವಾದಂತಹ ಮಾಹಿತಿಯನ್ನು ಹೇಳೋಣ. ಈಗ ಚರ್ಚೆಯನ್ನು ಮಾಡುವುದಕ್ಕೆ ಪ್ರಾರಂಭ ಮಾಡೋಣ.

**ಶ್ರೀ ಸಿದ್ದರಾಮಯ್ಯ: (ಮಾನ್ಯ ವಿರೋಧಪಕ್ಷದ ನಾಯಕರು)**: ಮಾನ್ಯ ಅಧ್ಯಕ್ಷರೆ, ಮಾನ್ಯ ಶ್ರೀನಿವಾಸಪ್ರಸಾದ್‌ರವರು ಏನು ಪ್ರಸ್ತಾಪ ಮಾಡಿದ್ದಾರೆ. ಇಲ್ಲಿ ನಮ್ಮ ಅಜೆಂಡಾದಲ್ಲಿ ನೋಡಿದ್ದೇನೆ. ನಿನ್ನೆ ದಿನ ನಿಯಮ 60 ಇರುವುದನ್ನು ನಿಯಮ 69ಗೆ Convert ಮಾಡಿದ್ದೀರಿ. ಬರಗಾಲದ ಬಗ್ಗೆ 9ನೇ ತಾರೀಖಿಗೆ ಇಲ್ಲಿ ನಾವು

ರೂಲ್ 60ರಲ್ಲಿ ಪ್ರಸ್ತಾಪ ತೆಗೆದುಕೊಂಡು ಬಂದಿದ್ದೇವೆ. ಅದು ಗ್ರಾಮೀಣಾಭಿವೃದ್ಧಿ ಮತ್ತು ಕೃಷಿ ಬಗ್ಗೆ ಚರ್ಚೆ ಮಾಡಬೇಕೆಂದು ಸರ್ಕಾರವು ಇಚ್ಛೆಪಟ್ಟಿರುವುದರಿಂದ ಮತ್ತೆ ಈ ರಾಜ್ಯದ ಜನರು ಕೂಡ ನಮ್ಮ ಮೇಲೆ ತಪ್ಪನ್ನು ತಿಳಿದುಕೊಳ್ಳಬಾರದು ಎನ್ನುವ ಕಾರಣಕೊಸ್ಕರವಾಗಿ ಬರಗಾಲವು ಬಹಳ ಪ್ರಾಮುಖ್ಯವಾಗಿದೆ ಎಂದು 3 ದಿನಗಳ ಕಾಲ ನಾನು ಚರ್ಚೆಯನ್ನು ಮಾಡಿದ್ದೇವೆ ಅದರಲ್ಲಿ ನಾವು ಕೂಡ ಭಾಗವಹಿಸಿದ್ದೇವೆ. ನಮ್ಮ ಸಲಹೆ ಮತ್ತು ಅಭಿಪ್ರಾಯಗಳನ್ನು ಕೃಷಿ ಮತ್ತು ಗ್ರಾಮೀಣಾಭಿವೃದ್ಧಿಯ ಬಗ್ಗೆ ಕೊಟ್ಟಿದ್ದೇವೆ. ಈಗ ನಿನ್ನೆ ದಿನ ಬರದ ಮೇಲೆ ಚರ್ಚೆಯು ಪ್ರಾರಂಭವಾಗಿದೆ. ನಿನ್ನೆಯ ದಿನ ಮಾನ್ಯ ಸದಸ್ಯರಾದ ಶ್ರೀ ರೇವಣ್ಣನವರು ನಿಲುವಳಿ ಸೂಚನೆಯ ಬಗ್ಗೆ ಎತ್ತಿದ್ದಾರೆ. ರೂಲ್ 60ರಲ್ಲಿ ಕೊಟ್ಟಿರುವುದನ್ನು ತಾವು ರೂಲ್ 69ಗೆ convert ಮಾಡಿದ್ದೀರಿ. ಇವತ್ತು ಮಾನ್ಯ ಜಯಚಂದ್ರರವರು ಪ್ರಸ್ತಾಪ ಮಾಡಿದ್ದಾರೆ, ನಾವು ಅದನ್ನು ಮೊನ್ನೆಯ ದಿನ ಕೊಟ್ಟಿದ್ದೇವು. ಅದನ್ನು ಕೂಡ ತಾವು convert ಮಾಡಿದ್ದೀರಿ. ನಮಗೆ ಇದರ ಬಗ್ಗೆ ಚರ್ಚೆ ಮಾಡುವುದು ಬೇಡವೆಂದು ಹೇಳುವುದಿಲ್ಲ. ಅವು ಕೂಡ ಚರ್ಚೆಯಾಗಬೇಕು. ಆದರೆ ಮೊದಲು ಬರಗಾಲದ ಬಗ್ಗೆ ಚರ್ಚೆಯಾಗಬೇಕು. ಈಗ ಬರಗಾಲದ ಬಗ್ಗೆ ರೂಲ್ 69ರಲ್ಲಿ ಚರ್ಚೆಯು ಪ್ರಾರಂಭವಾಗಿಬಿಟ್ಟಿದೆ. ಅದನ್ನು ರೂಲ್ 69ಗೆ convert ಮಾಡಿ ಅದು 9ನೇ ತಾರೀಖು ಆಗಿದೆ. ಚರ್ಚೆಯು ನಿನ್ನೆಯ ದಿನ ಪ್ರಾರಂಭವಾಗಿದೆ. ನಾನು ನಿನ್ನೆಯ ದಿನ ಸದನದಲ್ಲಿರಲಿಲ್ಲ. ಈಗ ಅದು ಮುಂದುವರಿಯಲಿ ಎಂದು ಕೆಲವು ಜನ ಸ್ನೇಹಿತರು ಆ ಕಡೆಯವರು ಭಾಗವಹಿಸಿದ್ದಾರೆ ಈ ಕಡೆಯವರು ಸಹ ಭಾಗವಹಿಸಿದ್ದಾರೆ. ಮಾನ್ಯ ಸದಸ್ಯರಾದ ಶ್ರೀ ಶ್ರೀನಿವಾಸ್ ಪ್ರಸಾದ್‌ರವರು ಮಾತನಾಡಲಿ, ನಾನು ಕೂಡ ಬರಗಾಲದ ಬಗ್ಗೆ ಮಾತನಾಡಬೇಕಾಗಿದೆ. ಬರಗಾಲದ ಬಗ್ಗೆ ನಮಗೆ ಸರ್ಕಾರದಿಂದ ಉತ್ತರ ಬೇಕಾಗುತ್ತದೆ. ರೈತರು ಇವತ್ತು ಬಹಳ ಜನರು ತೊಂದರೆಯಲ್ಲಿದ್ದಾರೆ. ಇವತ್ತು ಬರಗಾಲವು ಬಹಳ ಭೀಕರವಾಗಿದೆ. ಮುಂಗಾರು ಮಳೆಯು ಕೈಕೊಟ್ಟಿದೆ. ಬೆಳೆಯನ್ನು ಹಾಕಿರುವುದೆಲ್ಲವನ್ನು ಅವರುಗಳು ಕಳೆದುಕೊಂಡಿದ್ದಾರೆ. ಮನೆಯಲ್ಲಿದ್ದಂತಹ ಬೀಜ ಮತ್ತು ಗೊಬ್ಬರವನ್ನು ಸಹ ಕಳೆದುಕೊಂಡಿದ್ದಾರೆ. ಆ ಕಾರಣದಿಂದ ಸರ್ಕಾರವು ಏನು ಮಾಡುತ್ತಿದೆ ಎನ್ನುವುದರ ಬಗ್ಗೆ ಜನರಿಗೆ ಗೊತ್ತಾಗಬೇಕಾಗಿದೆ, ರೈತರಿಗೆ ನಾವು ವಿಶ್ವಾಸವನ್ನು ಮೂಡಿಸಬೇಕಾಗುತ್ತದೆ. ಆ ಕಾರಣದಿಂದ ಬರಗಾಲದ ಬಗ್ಗೆ ಮೊದಲು ಮಾತನಾಡುವುದಕ್ಕೆ ಶ್ರೀನಿವಾಸಪ್ರಸಾದ್‌ರವರು ಮಾತನಾಡುವುದಕ್ಕೆ ತಾವು ಅವಕಾಶವನ್ನು ಮಾಡಿಕೊಡಬೇಕು. ಅಮೇಲೆ ಬೇರೆಯವರು ಯಾರಾದರೂ ಮಾತನಾಡಲಿ, ನಂತರ ನಾನು ಮಾತನಾಡುತ್ತೇನೆ.

**ಶ್ರೀ ಹೆಚ್.ಸಿ. ಬಾಲಕೃಷ್ಣ:** ಮಾನ್ಯ ಸದಸ್ಯರಾದಂತಹ ಶ್ರೀನಿವಾಸಪ್ರಸಾದ್‌ರವರು ಮಾತನಾಡುವಂತಹ ಸಂದರ್ಭದಲ್ಲಿ ಒಂದು ಮಾತನ್ನು ಹೇಳಿದರು. ಹಗರಣಗಳ ಬಗ್ಗೆ ಒಬ್ಬರಿಗೊಬ್ಬರು.... ಅವರು ಏನು ಹೇಳಿದ್ದಾರೆ ಅದನ್ನು ನಾವು ಹೇಳಬೇಕಾಗುತ್ತದೆ. ಈಗ ಹಗರಣಗಳ ಬಗ್ಗೆ ಚರ್ಚೆಯನ್ನು ಮಾಡುವುದನ್ನು ಬಿಟ್ಟು ಅದನ್ನು ಬಿಟ್ಟು ಬೇರೆ ವಿಚಾರವನ್ನು ಚರ್ಚೆಗೆ ಕೊಡಿ ಅದು ಎಲ್ಲಾ ಸರ್ಕಾರಗಳಲ್ಲೂ ನಡೆದುಕೊಂಡು ಬಂದಿದೆ ಎಂಬ ಮಾತನ್ನು ಹೇಳಿದ್ದರು. ಹಿರಿಯ ಸದಸ್ಯರಾದ ಶ್ರೀನಿವಾಸ ಪ್ರಸಾದ್‌ರವರಿಗೆ ಒಂದು ಮಾತನ್ನು ಹೇಳುತ್ತೇನೆ. ಎಲ್ಲೋ ಒಂದು ಕಡೆಯಲ್ಲಿ ಈ ಸರ್ಕಾರದ ಹಣವನ್ನು ಸರಿಯಾದ ರೀತಿಯಲ್ಲಿ ಬಳಸಲಿಲ್ಲವೆನ್ನುವುದನ್ನು ಕೂಡ ನಾವು ಜನಸಾಮಾನ್ಯರಿಗೆ ತಿಳಿಸಬೇಕಾಗುತ್ತದೆಯಲ್ಲಲವೇ?

**ಶ್ರೀ ವಿ. ಶ್ರೀನಿವಾಸ ಪ್ರಸಾದ್:** ಮಾಡಪ್ಪಾ, ಬೇಡ ಅಂದವರು ಯಾರು?

**ಶ್ರೀ ಹೆಚ್. ಸಿ. ಬಾಲಕೃಷ್ಣ :** ಆಮೇಲೆ ಚರ್ಚೆಮಾಡುವುದಕ್ಕೆ ಅವಕಾಶವನ್ನು ಕೊಡಲಿ, ಬರಗಾಲದ ಬಗ್ಗೆ ಮೊದಲು ಚರ್ಚೆಯಾಗಲಿ, ಅದಕ್ಕೆ ಏನು ಉತ್ತರವನ್ನು ಕೊಡುತ್ತಾರೋ ಕೊಡಲಿ, ಅದು ಆದಮೇಲೆಯೂ ಕೂಡ ಹಗರಣಗಳ ಬಗ್ಗೆ ಚರ್ಚೆಯನ್ನು ಮಾಡುವುದಕ್ಕೆ ಅವಕಾಶವನ್ನು ಕೊಡಬೇಕಲ್ಲಾ? ಅದರ ಬಗ್ಗೆ ತಪ್ಪಾಗಿ ಅರ್ಥೈಸುವುದು ಬೇಡವೆಂದು ನಾನು ಹೇಳುತ್ತೇನೆ.

**ಶ್ರೀ ಸಿದ್ದರಾಮಯ್ಯ:** ಮೊದಲು ಬರಗಾಲದ ಬಗ್ಗೆ ಚರ್ಚೆಯು ಮುಗಿಯಲಿ.

**ಶ್ರೀ ಹೆಚ್. ಸಿ. ಬಾಲಕೃಷ್ಣ :** ಅದನ್ನು ನಾವು ಒಪ್ಪಿಕೊಳ್ಳುತ್ತೇನೆ.

**(ಗೊಂದಲ)**

**ಒಬ್ಬ ಮಾನ್ಯ ಸದಸ್ಯರು :** ಅದನ್ನು ಮಾಡೋಣ ಇದನ್ನು ಮಾಡೋಣ.

**ಶ್ರೀ ಹೆಚ್. ಸಿ. ಬಾಲಕೃಷ್ಣ :** ಅದನ್ನು ಮಾಡುವುದಕ್ಕೆಯೇ ನಾವು ಇಲ್ಲಿಗೆ ಬಂದಿರುವುದು.

**ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು):** ಸನ್ಮಾನ್ಯ ಸಭಾಧ್ಯಕ್ಷರೆ, ನಿನ್ನೆಯ ದಿನ ಬರಗಾಲದ ಬಗ್ಗೆ ಚರ್ಚೆ ಮಾಡುವುದಕ್ಕೆ ತಾವು ಅವಕಾಶವನ್ನು ಕೊಟ್ಟಿದ್ದೀರಿ. ಎರಡು ಕಡೆಯಿಂದಲೂ ಬಹಳಷ್ಟು ಜನರು ಮಾತನಾಡಿದ್ದಾರೆ. ಆಗ ವಿರೋಧ ಪಕ್ಷದ ನಾಯಕರು ಸದನದಲ್ಲಿ ಇರಲಿಲ್ಲ. ಈಗ ಶ್ರೀನಿವಾಸ ಪ್ರಸಾದ್‌ರವರು ಮತ್ತು ವಿರೋಧಪಕ್ಷದ ನಾಯಕರು ಮಾತನಾಡುವುದಕ್ಕೆ ಅಭ್ಯಂತರವಿಲ್ಲ. ಇದಕ್ಕೆ ಉತ್ತರವನ್ನು ಕೊಡುವುದಷ್ಟೇ ಬಾಕಿ ಇದೆ. ಆದರೆ ಅದನ್ನು ಮಾಡಬಹುದು. ಈಗಾಗಲೇ ಬರದ ಬಗ್ಗೆ ಚರ್ಚೆಯಾಗಿದೆ, ಉತ್ತರವನ್ನು ಕೊಡುವುದು ಬಾಕಿ ಇದೆ. ಇದು ಪ್ರಮುಖವಾಗಿದೆ. ನಿನ್ನೆಯ ದಿನ ಮಾನ್ಯ ರೇವಣ್ಣನವರು ವಿಷಯ ಪ್ರಸ್ತಾಪ

ಮಾಡಿದಾಗ ಮುಖ್ಯಮಂತ್ರಿಗಳು ಸದನದಲ್ಲಿ ಇರಲಿಲ್ಲ. ಅವರು ಬಂದ ಮೇಲೆ ತಾವು ಚರ್ಚೆ ಮಾಡಿ ಎಂದು ಹೇಳಿದ್ದಾರೆ.

**ಶ್ರೀ ಹೆಚ್. ಡಿ. ರೇವಣ್ಣ:** ಮಾನ್ಯ ಅಧ್ಯಕ್ಷರೆ, . . .

**ಅಧ್ಯಕ್ಷರು :** ಅವರು ಏನು ಹೇಳುತ್ತಾರೆಂದು ತಾವು ಕೇಳಿ.

**ಶ್ರೀ ಬಸವರಾಜ ಬೊಮ್ಮಾಯಿ :** ಅದಕ್ಕಾಗಿ ಸದನಕ್ಕೆ ಬಂದ ಮುಖ್ಯಮಂತ್ರಿಗಳು ಕಲ್ಲಿದ್ದಲಿನ ಬಗ್ಗೆಯೇ ಮೊದಲು ಚರ್ಚೆಗೆ ತೆಗೆದುಕೊಳ್ಳಿ ಎಂದು ಹೇಳಿದ್ದಾರೆ. ಅದಕ್ಕೆ ತಾವು ಅನುಮತಿಯನ್ನು ಕೊಟ್ಟಿದ್ದೀರಿ. ಅದಕ್ಕಾಗಿ ಮಾನ್ಯ ರೇವಣ್ಣನವರು ಪ್ರಸ್ತಾಪ ಮಾಡಲಿ, ಅನಂತರ ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಡುತ್ತಾರೆ. ಆಮೇಲೆ ಬರಗಾಲದ ಬಗ್ಗೆ ಮಾತನಾಡಲಿ. ಏನು ತೊಂದರೆ ಇಲ್ಲ.

**ಶ್ರೀ ಕೆ. ಎಂ. ಶಿವಲಿಂಗೇಗೌಡ :** ಆಮೇಲೆ ಬರಗಾಲದ ಬಗ್ಗೆಯೂ ಮಾತನಾಡುವುದಕ್ಕೂ ಬರೋಣ.

**ಶ್ರೀ ಸಿದ್ದರಾಮಯ್ಯ:** ಹಗರಣಗಳ ಬಗ್ಗೆ ಚರ್ಚೆ ಮಾಡುವುದಕ್ಕೆ ಸರ್ಕಾರಕ್ಕೆ ಉತ್ತರ ಕೊಡುವುದಕ್ಕೆ ನಮ್ಮದು ಕೂಡ ಒಂದು ಇದೆ. ಅವರದು ಸಹ ಇದೆ.

**ಶ್ರೀ ಬಸವರಾಜ ಬೊಮ್ಮಾಯಿ:** ಎರಡನ್ನು ಮಾಡಲಿ.

**ಶ್ರೀ ಸಿದ್ದರಾಮಯ್ಯ:** ಬರಗಾಲದ ಬಗ್ಗೆ ಚರ್ಚೆಯು ಪ್ರಾರಂಭವಾಗಿ ಅದು ಮುಗಿದ ಮೇಲೆ ಆ ಬಗ್ಗೆ ಚರ್ಚೆಯನ್ನು ಮಾಡಲಿ. 69ಕ್ಕೆ ಮೊದಲೇ convert ಮಾಡಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳೇ,. ನೀವು ಬರಗಾಲದ ಬಗ್ಗೆ ಚರ್ಚೆ ಮಾಡುವುದಿಲ್ಲವೆಂದರೆ ಸರ್ಕಾರಕ್ಕೆ ಆಸಕ್ತಿ ಇಲ್ಲವೆಂದು ಹೇಳಬೇಕಾಗುತ್ತದೆ. ಈಗಾಗಲೇ ಚರ್ಚೆಯೂ ಪ್ರಾರಂಭವಾಗಿದೆ.

**ಶ್ರೀ ಬಿ. ಎಸ್. ಯಡಿಯೂರಪ್ಪ (ಮಾನ್ಯ ಮುಖ್ಯಮಂತ್ರಿಗಳು) :** ನೀವು ಏನು ಹೇಳಿಲ್ಲ ಅಂದೆ. ಬೇಡವೆಂದು ಹೇಳುವುದಕ್ಕೆ ನಾನು ಯಾರು. ನನ್ನ ಸರ್ಕಾರದ ಮೇಲೆ ಆರೋಪ ಮಾಡುವುದು ಬೇಡವೆಂದು ಹೇಳುವುದಕ್ಕೆ ನಾನು ಯಾರು? ನಿಮಗೆ ಏನು ಅನಿಸುತ್ತದೆ ಅದನ್ನು ಹೇಳಿ ಅಂದೆ.

**ಶ್ರೀ ಸಿದ್ದರಾಮಯ್ಯ :** ಕಲ್ಲಿದ್ದಲಿನ ಬಗ್ಗೆ ಚರ್ಚೆಯನ್ನು ಮೊದಲು ತೆಗೆದುಕೊಳ್ಳಿ ಎಂದು ಏತಕ್ಕೆ ಹೇಳುತ್ತೀರಿ? ಬರಗಾಲದ ಬಗ್ಗೆ ಚರ್ಚೆಯು ಪ್ರಾರಂಭವಾಗಿದೆಯಲ್ಲಾ?

**ಶ್ರೀ ಬಿ. ಎಸ್. ಯಡಿಯೂರಪ್ಪ:** ನಾನು ಏತಕ್ಕೆಂದು ಹೇಳುತ್ತೇನೆ.

**ಶ್ರೀ ಸಿದ್ದರಾಮಯ್ಯ:** ಅಜೆಂಡಾವನ್ನು ಚೇಂಜ್ ಮಾಡುವುದಕ್ಕೆ ಅವರಿಗೆ ಅಧಿಕಾರವಿದೆ.

**ಶ್ರೀ ಹೆಚ್. ಡಿ. ರೇವಣ್ಣ :** ಮಾನ್ಯ ಅಧ್ಯಕ್ಷರೆ. . .

**ಶ್ರೀ ಬಿ. ಎಸ್. ಯಡಿಯೂರಪ್ಪ:** ಮಾನ್ಯ ರೇವಣ್ಣನವರೆ ಒಂದು ನಿಮಿಷ ತಾಳಿ. ನೀವು ಹೇಳುವುದು ಸರಿ ಇದೆ. ಬರಗಾಲದ ಬಗ್ಗೆ ಚರ್ಚೆ ಮಾಡುವುದು ಈ ಮನೆಯ ಸದಸ್ಯರಿಗೆ ಬೇರೆ ಎಲ್ಲಕ್ಕಿಂತ ಆದ್ಯತೆ ಇರುವಂತಹ ವಿಷಯ. ಅದಕ್ಕಾಗಿಯೇ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬಗ್ಗೆಯೇ ಆದ್ಯತೆಯನ್ನು ಕೊಟ್ಟಿರುವುದು. ನಾನು ನಿಜಕ್ಕೂ ನಿಮಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ನಿನ್ನೆಯ ಮಧ್ಯಾಹ್ನದಿಂದಲೇ ಈ ಬಗ್ಗೆ ಚರ್ಚೆಯಾಗಬೇಕಾಗಿತ್ತು. ನೀವು ಅನಿವಾರ್ಯವಾಗಿ ಮೈಸೂರಿಗೆ ಬಂದಿದ್ದೀರಿ, ನಾನು ಕೂಡ ಅನಿವಾರ್ಯವಾಗಿ ಮೈಸೂರಿಗೆ ಬಂದಿದ್ದೇನೆ. ಆದರೂ ಕೂಡ ಸನ್ಮಾನ್ಯ ಅಧ್ಯಕ್ಷರು ಬರಗಾಲದ ಬಗ್ಗೆ ಚರ್ಚೆಯನ್ನು ಪ್ರಾರಂಭ ಮಾಡಿಸಿದ್ದಾರೆ. ಈಗ ಏನಾಗಿದೆ ಮಾನ್ಯ ವಿರೋಧಪಕ್ಷದ ನಾಯಕರಾದ ಸಿದ್ದರಾಮಣ್ಣನವರೆ, ಇಡೀ ರಾಜ್ಯದಲ್ಲಿ ಈ ಕೋಲ್ ಸಪ್ಲೈ ಖರೀದಿ ವಿಷಯದಲ್ಲಿ ಬಹಳಷ್ಟು ಗೊಂದಲದ ವಾತಾವರಣವು ಉಂಟಾಗಿ ಮಾಜಿ ಮುಖ್ಯಮಂತ್ರಿಗಳೊಬ್ಬರು ಮಾತನಾಡುತ್ತಾ ಮುಖ್ಯಮಂತ್ರಿಗಳಿಗೆ ಚಪ್ಪಲಿ ಹೊಡೆಯುವಂತಹ ಕಾಲ ಬಂದಿದೆ ಎಂದು ಹೇಳಿರುವುದು ಪತ್ರಿಕೆಯಲ್ಲಿ ಬಂದಿದೆ. ಆಮೇಲೆ ಅದನ್ನು ವಾಪಸ್ಸು ತೆಗೆದುಕೊಂಡಿದ್ದಾರೆ. ಹಾಗಾದರೆ ಏನು ಗಂಭೀರವಾದ ವಿಷಯ ಇರಬೇಕು. ಆ ಗಂಭೀರವಾದಂತಹ ವಿಷಯವನ್ನು ಜನತೆಯ ಮುಂದೆ ಮನವರಿಕೆಯನ್ನು ಮಾಡಿಕೊಡುವುದು ನನ್ನ ಕರ್ತವ್ಯವೆಂದು ನಾನು ತಿಳಿದುಕೊಂಡಿದ್ದೇನೆ. ಅದಕ್ಕಾಗಿ ಒಂದು ಗಂಟೆಯೊಳಗಾಗಿ ಇದನ್ನು ಮುಗಿಸೋಣ. ನಂತರ ಬರದ ಬಗ್ಗೆ ಚರ್ಚೆ ಮಾಡುವುದಕ್ಕೆ ದಯಮಡಿ ಸನ್ಮಾನ್ಯ ಅಧ್ಯಕ್ಷರೆ ಅವಕಾಶವನ್ನು ಮಾಡಿಕೊಡಿ. ಇದಕ್ಕೆ ನನ್ನ ಆದ್ಯತೆ ಇದೆ. ನಾನು ತಮ್ಮ ಹತ್ತಿರ request ಮಾಡಿಕೊಂಡಿದ್ದೇನೆ. ತಾವು ಇದಕ್ಕೆ ಒಪ್ಪಿಕೊಂಡಿದ್ದೀರಿ. ದಯಮಾಡಿ ಚರ್ಚೆಗೆ ಅವಕಾಶವನ್ನು ಮಾಡಿಕೊಡಬೇಕು.

**ಶ್ರೀ ಸಿದ್ದರಾಮಯ್ಯ** : ಇದನ್ನು ನಾವು ಒಪ್ಪುವುದಕ್ಕಾಗುವುದಿಲ್ಲ. ಇಲ್ಲಿ ಸದನವು ನಡೆಯುವುದು. ಒಂದು ನಿಯಮಾವಳಿಗಳ ಪ್ರಕಾರ ನಡಯಬೇಕಾಗುತ್ತದೆ. ನಿಯಮಾವಳಿಗಳನ್ನು ಬಿಟ್ಟು ಅದನ್ನು ಗಾಳಿಗೆ ತೂರಿ ಚರ್ಚೆಯನ್ನು ಮಾಡುವುದಕ್ಕಾಗುವುದಿಲ್ಲ. ಈಗಾಗಲೇ ಪ್ರಾರಂಭವಾಗಿದೆ, 9ನೇ ತಾರೀಖು ಪ್ರಸ್ತಾಪ ಮಾಡಿರುವಂತಹ ವಿಷಯ ಅದು convert ಆಗಿ ರೂಲ್ 69ಕ್ಕೆ ಆಗಿ ಚರ್ಚೆಯು ಪ್ರಾರಂಭವಾಗಿದೆ. ಅದು ಇನ್ನು ಮುಕ್ತಾಯವಾಗಿಲ್ಲ. ಸರ್ಕಾರವು ಅದರ ಮೇಲೆ ಉತ್ತರವನ್ನು ಕೊಟ್ಟಿಲ್ಲ. ಇನ್ನೊಂದು ಯಾವುದೋ ಬಂದಿದೆ, ಅದು ಪತ್ರಿಕೆಯಲ್ಲಿ ಪ್ರಚಾರವಾಗಿಬಿಟ್ಟಿದೆ, ಅದು ಕೆಟ್ಟದಾಗಿ ಪ್ರಚಾರವಾಗಿದೆ, ಅದಕೋಸ್ಕರವಾಗಿ ಅದಕ್ಕೆ ಮೊದಲು ನಾವು ಉತ್ತರವನ್ನು

V/3-55

ಕೊಡುತ್ತೇನೆ ಎಂದು ಸರ್ಕಾರವು ಆ ತರಹ priority ಮಾಡುವುದಕ್ಕೆ ಬರುವುದಿಲ್ಲ. ಇದು ಮುಗಿಯಲಿ, ಆಮೇಲೆ ಏನು ಬೇಕಾದರೂ ಮಾಡಲಿ.

**ಶ್ರೀ ಹೆಚ್. ಡಿ. ರೇವಣ್ಣ:** ನಾನು 9ನೇ ತಾರೀಖು ನಿಲುವಳಿ ಸೂಚನೆಯನ್ನು ತಂದಿದ್ದೆ. ಮತ್ತೇ ನಾನು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇನೆ. ಅದನ್ನು ನಾನು ವಿರೋಧಪಕ್ಷದ ನಾಯಕರು ಗಮನಕ್ಕೂ ಕೂಡ ತರುತ್ತಿದ್ದೇನೆ. 9ನೇ ತಾರೀಖಿನ ಬಗ್ಗೆ ನಿಲುವಳಿ ಸೂಚನೆಯನ್ನು ಕೊಟ್ಟಿದ್ದೆ. ಮಾನ್ಯ ಮುಖ್ಯಮಂತ್ರಿಗಳು ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ, ಮತ್ತೆ ಅದು ಆದಮೇಲೆ ಬರಗಾಲದ ಬಗ್ಗೆ ಆಯಿತು. ಮತ್ತೇ ನಿನ್ನೆ ಬೆಳಿಗ್ಗೆ ನಾನು ನಿಲುವಳಿ ಸೂಚನೆಯನ್ನು ಕೊಟ್ಟು ನಿನ್ನೆ ಮಧ್ಯಾಹ್ನ 4.30 ಗಂಟೆಗೆ ಎಂದು ಫಿಕ್ಸ್ ಮಾಡಿದ್ದರು. ಸನ್ಮಾನ್ಯ ಮುಖ್ಯಮಂತ್ರಿಗಳು ಮೈಸೂರಿನಲ್ಲಿ function ಇದೆ ಅದಕ್ಕೆ ಹೋಗಿದ್ದಾರೆಂದು 4.30 ಗಂಟೆಯಿಂದ ನಾನು ತಮಗೆ ಚರ್ಚೆಗೆ ಅವಕಾಶವನ್ನು ಕೊಡುತ್ತೇನೆಂದು ಮೊನ್ನೆ ರೂಲ್ 60 ಯಿಂದ 69ನಲ್ಲಿ ಮಾಡಿದ್ದಾರೆ. ಒಂದು ಕಡೆಯಲ್ಲಿ ನಾನು ವಿರೋಧಪಕ್ಷದ ನಾಯಕರಲ್ಲಿ, ಉಪನಾಯಕರನ್ನು, ಸಭಾನಾಯಕರನ್ನು ಮನವಿಯನ್ನು ಮಾಡುವುದು ಇಷ್ಟೆ. ಅವತ್ತು ಬಿಎಸಿ ಮೀಟಿಂಗ್‌ನಲ್ಲಿ ಏನು ತೀರ್ಮಾನವಾಗಿತ್ತು? ಅದರಲ್ಲಿ 3 ದಿನಗಳ ಕಾಲ ಈ ರಾಜ್ಯದ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿಯ ಬಗ್ಗೆ ಚರ್ಚೆ ಮಾಡಬೇಕೆನ್ನುವುದು ಆಗಿತ್ತು. ಇದು ಮಾನ್ಯ ಮುಖ್ಯಮಂತ್ರಿಗಳ ಅಭಿಲಾಷೆಯಾಗಿತ್ತು. ಅದರ ಪ್ರಕಾರ ನಾನು ಯಾರು ಅಡ್ಡಿಪಡಿಸಿಲ್ಲ, ವಿರೋಧಪಕ್ಷದ ನಾಯಕರು ಸಹ ಅಡ್ಡಿ ಪಡಿಸಿಲ್ಲ. ಆದರೆ ಸನ್ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಡುವಂತಹ ಸಂದರ್ಭದಲ್ಲಿ ಬೆಳಿಗ್ಗೆ ನಿಲುವಳಿ ಸೂಚನೆ ಇದೆ. ನಾನು 9.30 ಗಂಟೆಗೆ ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇನೆ. ನಾನು ಪ್ರಾಸ್ತಾವಿಕವಾಗಿ ಹೇಳಬೇಕಲ್ಲ. ನನಗೆ ಮಾಡನಾಡುವುದಕ್ಕೆ ಅವಕಾಶವನ್ನು ಕೊಡಿ.

**ಅಧ್ಯಕ್ಷರು:** ಬರಗಾಲದ ವಿಷಯವನ್ನು ಮೊದಲು ತೆಗೆದುಕೊಳ್ಳಬೇಕೋ ಅಥವಾ ನಿಮ್ಮ ವಿಷಯವನ್ನು ಮೊದಲು ತೆಗೆದುಕೊಳ್ಳಬೇಕೋ ಅದರ ಬಗ್ಗೆ ಮೊದಲು ನಿರ್ಧಾರವಾಗಲಿ. Details ಹೇಳುವುದಕ್ಕೆ ಹೋಗಬೇಡಿ. ಮೊದಲು ಅದನ್ನು ಹೇಳಿ.

**ಶ್ರೀ ಹೆಚ್. ಡಿ. ರೇವಣ್ಣ:** ನಾನು 1 ಗಂಟೆಯ ಒಳಗೆ ಮುಗಿಸುತ್ತೇನೆ. ಮೊದಲು ನನ್ನ ವಿಷಯವನ್ನು ತೆಗೆದುಕೊಳ್ಳಿ. ನಾನು ವಿರೋಧಪಕ್ಷದ ನಾಯಕರಲ್ಲಿಯೂ ಸಹ ನಾನು ಮನವಿಯನ್ನು ಮಾಡಿಕೊಳ್ಳುತ್ತೇನೆ.

ದಯಮಾಡಿ 1 ಗಂಟೆಯೊಳಗಡೆ ಮುಗಿಸುತ್ತೇನೆ. ದಯಮಾಡಿ ನನಗೆ ಅವಕಾಶವನ್ನು ಕೊಡಿ. ಸಭಾ ನಾಯಕರು ಸಹ ಒಪ್ಪಿಕೊಂಡಿದ್ದಾರೆ.

**ಅಧ್ಯಕ್ಷರು:** ಆ ರೀತಿಯಾಗಿ ಹೇಳಿ.

**(ಗೊಂದಲ)**

**ಶ್ರೀ ಬಸವರಾಜ ಬೊಮ್ಮಾಯಿ :** ಅಜೆಂಡಾದಲ್ಲಿ ಮೊದಲು ಯಾವುದಿದೆ, ವಿಧೇಯಕಗಳ ಮಂಡನೆ ಆದ ಮೇಲೆ ರೇವಣ್ಣನವರು ಹೇಳಿದಂತೆ ಅಜೆಂಡಾದಲ್ಲಿ "ಶ್ರೀಯುತರುಗಳಾದ ಹೆಚ್. ಡಿ. ರೇವಣ್ಣ, ಸಿ.ಎಸ್. ಪುಟ್ಟೇಗೌಡ, ಸಿ.ಬಿ.ಸುರೇಶ್‌ಬಾಬು, ವೆಂಕಟರಾವ್ ನಾಡಗೌಡ, ಹೆಚ್. ಕೆ. ಕುಮಾರಸ್ವಾಮಿ ಹಾಗು ಇತರರು ಕರ್ನಾಟಕ ವಿದ್ಯುತ್ ನಿಗಮ ನಿಯಮಿತ ಸಂಸ್ಥೆಯು ನಿಯಮ ಬಾಹಿರವಾಗಿ ವಿವಿಧ ಸಂಸ್ಥೆಗಳಿಂದ ಆಮದಾದ ಕಲ್ಲಿದ್ದಲ್ಲನ್ನು ಖರೀದಿಸಿರುವುದರಿಂದ ರಾಜ್ಯದ ಬೊಕ್ಕಸಕ್ಕೆ ಕೋಟ್ಯಾಂತರ ರೂಪಾಯಿಗಳ ನಷ್ಟವುಂಟಾಗಿರುವ ಕುರಿತು ಚರ್ಚೆ, ಅದೇ ಮೊದಲಿದೆ, ಅಜೆಂಡಾ ಪ್ರಕಾರ ಹೋಗೋಣ.

**ಅಧ್ಯಕ್ಷರು :** ಅದು ಅವರಿಗೆ ಗೊತ್ತಿದೆ.

**ಶ್ರೀ ಸಿದ್ದರಾಮಯ್ಯ (ಮಾನ್ಯ ವಿರೋಧ ಪಕ್ಷದ ನಾಯಕರು):** ಮಾನ್ಯ ಅಧ್ಯಕ್ಷರೇ, ನಾನು ಅಜೆಂಡಾವನ್ನು ಓದಿದ್ದೇನೆ. ನಿಯಮ 69 ರಡಿಯಲ್ಲಿ ಶ್ರೀ ರೇವಣ್ಣನವರು ಎತ್ತಿರುವಂಥ ಕಲ್ಲಿದ್ದಲು ವಿಷಯವನ್ನು ತೆಗೆದುಕೊಳ್ಳಬೇಕೆಂದು ಮೊದಲನೇ ವಿಷಯವಾಗಿ ಬಂದಿದೆ. ನಿಮಗೆ ಯಾವಾಗಲೂ ಕೂಡ ಅಧಿಕಾರ ಇದೆ. ಏಕೆಂದರೆ ನಿನ್ನೆ ಜಯಚಂದ್ರರವರು ಮೊದಲು ಬರಗಾಲದ ಬಗ್ಗೆ ನಿಲುವಳಿ ಸೂಚನೆಯಲ್ಲಿ ಚರ್ಚೆಗೆ ಕೊಟ್ಟಿದ್ದರು. ರೇವಣ್ಣನವರು ಮೊದಲು ಪ್ರಸ್ತಾಪ ಮಾಡಿದ್ದರಿಂದ ಹೋಗಲಿ ಎಂದು ಇವರು ಸುಮ್ಮನಾದರು. ಹಾಗೆಂದು ನಾವು ಬರಗಾಲವನ್ನು ಬಿಟ್ಟು ಬೇರೆ ವಿಷಯವನ್ನು ಹೇಗೆ ಚರ್ಚೆ ಮಾಡುವುದು, ಸದನ ಇವತ್ತೇ ಕೊನೆ ದಿನವೆಂದು ಬೇರೆ ಹೇಳುತ್ತಿದ್ದೀರಿ. ಬರಗಾಲದ ಬಗ್ಗೆ ಅರ್ಧ ಚರ್ಚೆ ಮಾಡಿ ಅದಕ್ಕೆ ಉತ್ತರ ಸಿಗದೆ ಬೇರೆಯವರಿಗೆ ನಾವು ಅವಕಾಶ ಕೊಟ್ಟು ಬಿಟ್ಟು ನಾವು ಸುಮ್ಮನೆ ಕುಳಿತರೆ ಜನ ನಮ್ಮ ಬಗ್ಗೆ ಏನಂದುಕೊಳ್ಳುತ್ತಾರೆ. ಇಲ್ಲ, ಆದ್ದರಿಂದ ಮಾನ್ಯ ಅಧ್ಯಕ್ಷರೇ, ದಯಮಾಡಿ ನಾವು ಸಹ ನಿಮ್ಮಲ್ಲಿ ವಿನಂತಿ ಮಾಡುತ್ತೇವೆ, ನಾವು ಕೂಡ ಅಧಿಕೃತವಾದ ವಿರೋಧ ಪಕ್ಷದವರಾಗಿ ಬರಗಾಲದಲ್ಲಿ ಇಷ್ಟೊಂದು ಚರ್ಚೆ ಮಾಡಬೇಕೆಂದು ಬಂದರೆ ಇಲ್ಲ ನಾವು ಬೇರೆ ವಿಚಾರ ತೆಗೆದುಕೊಳ್ಳುತ್ತೀರಿ ಎಂದರೆ ಇದು ಸರಿಯಲ್ಲ, ನಿಯಮಾವಳಿ ಪ್ರಕಾರ ಮಾಡಬೇಕು. ಆದುದರಿಂದ ನಾವು ಎತ್ತಿರತಕ್ಕಂಥ ವಿಚಾರವನ್ನು ಮುಗಿದ ಮೇಲೆ ಬೇರೆ ವಿಚಾರ

ತೆಗೆದುಕೊಳ್ಳಬೇಕು. ಬರಗಾಲದ ಬಗ್ಗೆ ನಾನು ಮಾತನಾಡಿಲ್ಲ, ನಮ್ಮ ಸ್ನೇಹಿತರು ನಮ್ಮ ಕಡೆಯವರಾರೂ ಮಾತನಾಡಿಲ್ಲ. ನಾವು ಮಾತನಾಡಿದ ನಂತರ ನೀವು ನಾಳೆಯೂ ಸದನವನ್ನು ಮುಂದುವರೆಸಿ ಚರ್ಚೆ ಹಗರಣಗಳ ಬಗ್ಗೆ ಮಾಡೋಣ. ಇವತ್ತು ಬರಗಾಲದ ಬಗ್ಗೆ ಚರ್ಚೆಯಾಗಬೇಕು ಅದಕ್ಕೆ ಉತ್ತರ ಕೊಡಬೇಕಾಗುತ್ತದೆ. ಈಗ ಶ್ರೀನಿವಾಸ್ ಪ್ರಸಾದ್‌ರವರು ಈಗ ಮಾತನಾಡಲಿಕ್ಕೆ ಅವಕಾಶ ಕೊಡಿ.

**ಅಧ್ಯಕ್ಷರು:** ನಾನು ತೀರ್ಮಾನ ತೆಗೆದುಕೊಳ್ಳಬೇಕು. ಶ್ರೀನಿವಾಸ್ ಪ್ರಸಾದ್‌ರವರನ್ನು ನೀವು ಕರೆಯುವುದಲ್ಲ, ನಾನು ಕರೆಯಬೇಕು. ಇನ್ನೂ ಅದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕು. Whether we have to take your or Revanna's subject ಯಾವುದೆಂದು I will take a decision. ಈಗ ಯಾವ ವಿಷಯವನ್ನು ತೆಗೆದುಕೊಳ್ಳಬೇಕೆಂಬ ಬಗ್ಗೆ ನಾನು ಇನ್ನೂ ತೀರ್ಮಾನ ತೆಗೆದುಕೊಳ್ಳುತ್ತೇನೆ. ಆಮೇಲೆ ಯಾವ ವಿಷಯ ಏನೆಂದು ತೀರ್ಮಾನ ತೆಗೆದುಕೊಳ್ಳುತ್ತೇನೆ. ಶ್ರೀನಿವಾಸ್ ಪ್ರಸಾದ್‌ರವರೇ ನಾನು ಇನ್ನೂ ಯಾರಿಗೂ allow ಮಾಡಿಲ್ಲ. ಯಾವುದನ್ನು ಮೊದಲು ತೆಗೆದುಕೊಳ್ಳಬೇಕೆಂಬ ಬಗ್ಗೆ ನಾನು ಇನ್ನು ಯಾರಿಗೂ allow ಮಾಡಿಲ್ಲ. ಅದರ ಬಗ್ಗೆ ನಾನು ನಿರ್ಣಯ ಕೊಡಬೇಕು. ಈಗ ವಿರೋಧ ಪಕ್ಷದ ನಾಯಕರು ವಿನಂತಿ ಮಾಡಿದ್ದಾರೆ. ಅಜೆಂಡಾದಲ್ಲಿ ರೇವಣ್ಣನವರ ವಿಷಯ ಮೊದಲು ಇದೆ. ಎರಡನೆ ವಿಷಯ ಬರಗಾಲದ್ದು ಇದೆ, ಅದಕ್ಕೆ ಮಾನ್ಯ ವಿರೋಧ ಪಕ್ಷದ ನಾಯಕರು ವಿನಂತಿ ಮಾಡಿದ್ದಾರೆ. ನಿಮ್ಮ ಅಧಿಕಾರವನ್ನು ಉಪಯೋಗ ಮಾಡಿಕೊಂಡು ನಿಮ್ಮ ಅಜೆಂಡಾವನ್ನು ಬದಲಾವಣೆ ಮಾಡಿ ಎಂದು ಹೇಳುತ್ತಿದ್ದಾರೆ.

**SRI. SIDDARAMAIAH**: No, No, I don't know how it has come in the agenda.

**ಅಧ್ಯಕ್ಷರು :** ಆ ಪರಿಸ್ಥಿತಿ ಹೇಗೆ ಬಂದಿತು ಎಂಬುದರ ಬಗ್ಗೆಯೂ ಹೇಳುತ್ತೇನೆ. ನನಗೆ ಮಾತನಾಡಲಿಕ್ಕೆ ಬಿಡಿ. ನೀವೇ ಶ್ರೀನಿವಾಸ್ ಪ್ರಸಾದ್‌ರವರಿಗೆ ಮಾತನಾಡಲಿಕ್ಕೆ ಕರೆದುಬಿಟ್ಟರೆ ಹೇಗೆ? ನಾನು ಇನ್ನೂ ಅದರ ಬಗ್ಗೆ ಚರ್ಚೆ ಮಾಡಲಿಕ್ಕೆ ಆ ನಿಯಮ 69 ಅನ್ನು allow ಮಾಡಿಲ್ಲ. ಯಾವುದನ್ನು ತೆಗೆದುಕೊಳ್ಳಬೇಕೆಂದು ನಾನು ಹೇಳುತ್ತೇನೆ. ನಿಯಮ 69 ರಡಿಯಲ್ಲಿ ಈಗ ಬರಗಾಲದ ಬಗ್ಗೆ ತೆಗೆದುಕೊಳ್ಳಬೇಕೋ, ರೇವಣ್ಣನವರ ವಿಚಾರ ತೆಗೆದುಕೊಳ್ಳಬೇಕೋ ಎಂಬುದನ್ನು ಇನ್ನು ನಾನು ನಿರ್ಣಯ ಮಾಡಿಲ್ಲ.

**ಶ್ರೀ ಟಿ. ಬಿ. ಜಯಚಂದ್ರ** : ಒಂದು submission, ರೊಟ್ಟಿಯನ್ನು ಯಾವ ಮೂಲೆಯಿಂದ ಮುರಿಯಬೇಕು ಅನ್ನುವುದು ಒಂದು ಗಾದೆಯಿದೆ, ಯಾವ ಮೂಲೆಯಿಂದ ಮುರಿದರೂ ಹೊಟ್ಟೆಗೆ ಹೋಗುವುದೇ.....

**ಅಧ್ಯಕ್ಷರು** : ಜಯಚಂದ್ರರವರೇ, ನಿಮ್ಮ ಪ್ರತಿಪಕ್ಷದಲ್ಲಿ ನೀವೇ ಒಂದು conscious ಗೆ ಬಂದುಬಿಟ್ಟಿದ್ದರೆ ಈ ಸಮಸ್ಯೆಯೇ ಇರುತ್ತಿರಲಿಲ್ಲ. ನೀವೇ ವಿಚಾರ ಮಾಡಿಕೊಂಡು ಹೇಳಿಬಿಡಿ.

**ಶ್ರೀ ಟಿ. ಬಿ. ಜಯಚಂದ್ರ:** ಈ ಸದನ ಯಾವುದಕ್ಕೆ ಆದ್ಯತೆಯನ್ನು ಕೊಡುತ್ತದೆ ಎನ್ನುವುದು. ಹಗರಣಗಳಿಗೆ ಆದ್ಯತೆ ಕೊಡುತ್ತದೋ, ಬರಗಾಲಕ್ಕೆ ಆದ್ಯತೆ ಕೊಡುತ್ತದೋ? ಎನ್ನುವುದೇ ಈಗ ಮುಖ್ಯವಾದಂಥದ್ದು.

**(ಗೊಂದಲ)**

**ಶ್ರೀ ಬಿ.ಎನ್. ಬಚ್ಚೇಗೌಡ** : ಯಾವ ಮೂಲೆಯಿಂದ ರೊಟ್ಟಿ ಮುರಿದರೂ ಒಂದೇ, ಯಾರು ಮಾತನಾಡಿದರು ಅಷ್ಟೇ ಬಿಡಿ, ಏನಾಗುತ್ತದೆ.

**(ಗೊಂದಲ)**

**ಅಧ್ಯಕ್ಷರು** : ಪ್ರತಿಪಕ್ಷದವರು ನೀವೇ adjournment motion ಕೊಟ್ಟು ಈಗ ನೀವೇ ಈಗ ಈ ರೀತಿ ಮಾತನಾಡುವುದಾದರೆ ನಾನು ಹೇಗೆ ತೀರ್ಮಾನ ಮಾಡಲಿ?

**(ಗೊಂದಲ)**

**ಅಧ್ಯಕ್ಷರು** : I will take decision ಕುಳಿತುಕೊಳ್ಳಿ.

**ಶ್ರೀ ಟಿ. ಬಿ. ಜಯಚಂದ್ರ:** ಸದನದ ಎಲ್ಲರ ಅಭಿಪ್ರಾಯವನ್ನು ತೆಗೆದುಕೊಂಡು ತೀರ್ಮಾನ ಮಾಡಿ ನನ್ನದೇನೂ ಅಭ್ಯಂತರವಿಲ್ಲ.

**ಶ್ರೀ ಸಿದ್ದರಾಮಯ್ಯ:** ನಾನು ಕಳಕಳಿಯಿಂದ ಕೇಳುತ್ತೇನೆ.

**ಅಧ್ಯಕ್ಷರು** : ಸಿದ್ದರಾಮಯ್ಯ, ಈಗ ನೀವು ಅವರೂ ಮಾತನಾಡಿ ಯಾವ ವಿಷಯ ಎಂದು conscious ಆಗಿ ಹೇಳಿದರೆ ಮುಗಿದುಹೋಯಿತು. ಹಾಗಾದರೆ ನನಗೆ ತೀರ್ಪು ಕೊಡಲಿಕ್ಕೆ ಬಿಡಿ. ನಾನು ಅದರ ಬಗ್ಗೆ ನಿರ್ಣಯ ಕೊಡುತ್ತೇನೆ. ಅಜೆಂಡಾದಲ್ಲಿ ಆ ವಿಷಯ ಏಕೆ ಬಂತು ಎನ್ನುವುದರ ಬಗ್ಗೆ ನಾನು ಹೇಳುತ್ತೇನೆ, ನಾನು ಮಾತನಾಡಲಿಕ್ಕೆ ಅವಕಾಶವೇ ಕೊಡುತ್ತಿಲ್ಲವಲ್ಲ. ನಾನು ಹೇಳುತ್ತೇನೆ.

**ಶ್ರೀ ಸಿದ್ದರಾಮಯ್ಯ:** ಈಗಾಗಲೇ ಆ ವಿಷಯದ ಬಗ್ಗೆ ಚರ್ಚೆ ಪ್ರಾರಂಭವಾಗಿದೆ. ಚರ್ಚೆ ಆಗಿರುವುದು ಪ್ರಾಮುಖ್ಯವೋ, ಹೊಸ ವಿಚಾರಕ್ಕೆ ಅವಕಾಶ ಕೊಡುವುದು ಮುಖ್ಯವೇ?

**ಅಧ್ಯಕ್ಷರು:** ಅಜೆಂಡಾದಲ್ಲಿ ಏಕೆ ಬಂತು ಎನ್ನುವ ಬಗ್ಗೆಯೂ ಸಹ ನಾನು ಹೇಳುತ್ತೇನೆ. ನೀವು ಅದನ್ನು ಹೇಳಲಿಕ್ಕೆ ಅವಕಾಶ ಕೊಡುತ್ತಿಲ್ಲ.

**ಶ್ರೀ ಸಿದ್ದರಾಮಯ್ಯ:** ಹೇಳಿ, ನೀವು ತೀರ್ಮ ಕೊಡುವುದಕ್ಕಿಂತ ಮುಂಚಿತವಾಗಿ ಆ ವಿಷಯ ಏಕೆ ಬಂತು ಅದನ್ನು ಹೇಳಿ.

**ಅಧ್ಯಕ್ಷರು:** ನಿನ್ನೆ ಬೆಳಿಗ್ಗೆ ಮಾನ್ಯ ರೇವಣ್ಣನವರು ಒಂದು ನಿಲುವಳಿ ಸೂಚನೆಯನ್ನು ಮಂಡನೆ ಮಾಡಿ Preliminary Submission ಮಾಡಿದರು. ಆ ಸಂದರ್ಭದಲ್ಲಿ ನನ್ನ ಛೇಂಬರ್‌ಗೆ ಮಾನ್ಯ ಜಯಚಂದ್ರರವರು ಬಂದಿದ್ದರು. ಆ KIADB ಗೆ ಸಂಬಂಧಪಟ್ಟಂತೆ ನಮ್ಮದು ಒಂದು ನಿಲುವಳಿ ಸೂಚನೆ ಇದೆ, ನಮಗೂ ಅವಕಾಶ ಕೊಡಬೇಕೆಂದು ವಿನಂತಿ ಮಾಡಿದರು. ಆಮೇಲೆ ನಿಮ್ಮಿಬ್ಬರಲ್ಲೇ ನೀವು preference ಮಾಡಿಕೊಳ್ಳಿ, ಒಂದು ಇವತ್ತು ಅವರಿಗೆ ಅವಕಾಶ ಕೊಡುತ್ತೇನೆ. ಮತ್ತೊಂದು ನಾಳೆಗೆ ಅವಕಾಶ ಕೊಡುತ್ತೇನೆ ಎಂದು ಅವರಿಬ್ಬರ ವಿನಂತಿ ಮೇರೆಗೆ ರೇವಣ್ಣನವರು ಬೆಳಿಗ್ಗೆ ಅದನ್ನು ಪ್ರಸ್ತಾಪ ಮಾಡಿದರು. ಜಯಚಂದ್ರರವರಿಗೆ ನಾನು ನಾಳೆ ಇದನ್ನು ಪ್ರಸ್ತಾಪ ಮಾಡಿ ಎಂದು ಪ್ರಾಮಿಸ್ ಮಾಡಿದ್ದೆನು, ಈಗ ರೇವಣ್ಣನವರದು ನಿನ್ನೆಯೆ ಮುಗಿಸಬೇಕೆಂದು ನಿರ್ಣಯವಾಗಿತ್ತು, ನಿನ್ನೆ ಬೆಳಿಗ್ಗೆ ಪ್ರಸ್ತಾಪ ಮಾಡಿದರು, ಐದು ನಿಮಿಷ ಅವರು ಅದನ್ನು submission ಮಾಡಿದ ಮೇಲೆ ಮಾನ್ಯ ಮುಖ್ಯಮಂತ್ರಿಯವರು ಮೈಸೂರಿಗೆ ಹೋಗಿದ್ದರು, ಮಾನ್ಯ ಮುಖ್ಯಮಂತ್ರಿಗಳು ನಾನು ಮಧ್ಯಾಹ್ನ ಸದನಕ್ಕೆ ಬಂದ ಮೇಲೆ ಅದನ್ನು ಚರ್ಚೆಗೆ ತೆಗೆದುಕೊಳ್ಳಬೇಕೆಂದು ಅವರೂ ಸಹ ನನ್ನಲ್ಲಿ ವಿನಂತಿ ಮಾಡಿದ್ದರು. ಆ ಸಂದರ್ಭದಲ್ಲಿ ನಾನು ಸದನದಲ್ಲಿ ಏನೊಂದು ತೀರ್ಮ ಕೊಟ್ಟೆ ಅದನ್ನು ನಿಯಮ 69ಕ್ಕೆ convert ಮಾಡಿ ಸಂಜೆ 4.30ಕ್ಕೆ ಅದರ ಬಗ್ಗೆ ಚರ್ಚಿಸಲು ಅವಕಾಶ ಕೊಟ್ಟೆ. ಮಾನ್ಯ ಮುಖ್ಯಮಂತ್ರಿಗಳು ಆ ಸಮಯಕ್ಕೆ ಬಂದರು, ಆದರೆ 3.00 ಗಂಟೆಗೆ ಬರಗಾಲ ವಿಷಯಕ್ಕೆ ಸಂಬಂಧಪಟ್ಟಂತೆ ಆ ನಿಯಮ 69ರ ಪ್ರಕಾರ ಚರ್ಚೆಯನ್ನು ಮುಂದುವರಿಸಿದೆ, ಆ ಚರ್ಚೆ 4.30–5.00 ಗಂಟೆಗೆ ಮುಗಿದಂಥ ಸಂದರ್ಭದಲ್ಲಿ ಮತ್ತೆ ಈ ಸದನದ ಒಂದು conscience ತೆಗೆದುಕೊಂಡಾಗ ಇನ್ನೂ ಈ ಚರ್ಚೆಯನ್ನು 7.00 ಗಂಟೆಯವರೆಗೆ ನಡೆಸಿ ಇನ್ನೂ ಹೆಚ್ಚು ಶಾಸಕರಿಗೆ ಬರಗಾಲದ ಬಗ್ಗೆ ಮಾತನಾಡಲಿಕ್ಕೆ ಅವಕಾಶ ಕೊಡಬೇಕೆಂಬ ಅಭಿಪ್ರಾಯ ಬಂದಾಗ ನಿನ್ನೆ 7.00 ಗಂಟೆಯವರೆಗೆ ನಿನ್ನೆ ಬಹುಶ: 10–15 ಶಾಸಕರು ಆ ಚರ್ಚೆಯಲ್ಲಿ ಭಾಗವಹಿಸಿ ಬರಗಾಲದ ವಿಷಯದ ಬಗ್ಗೆ ಚರ್ಚೆ ಮಾಡಲಾಯಿತು. ಆಮೇಲೆ ಇವತ್ತು ಬೆಳಿಗ್ಗೆ

ರೇವಣ್ಣನವರ ವಿಚಾರ ಚರ್ಚೆಗೆ ತೆಗೆದುಕೊಳ್ಳುತ್ತೇನೆ ಎಂದು ಹೇಳಿದೆ, ಏಕೆಂದರೆ ಈ ವಿಷಯ ನಿನ್ನೆ 4.30 ಗಂಟೆಗೆ ಚರ್ಚೆಯಾಗಬೇಕಾಗಿತ್ತು. ಹಾಗಾದರೆ 3.00 ಗಂಟೆಯಿಂದ 4.30 ಗಂಟೆಯಲ್ಲಿ break ಮಾಡಿ ಈ ಚರ್ಚೆಗೆ ಅವಕಾಶ ಕೊಡಬೇಕಾಗಿತ್ತು. ಬರಗಾಲ ಆಗ ಮತ್ತೆ discontinue ಆಗುತ್ತಿತ್ತು. ಆ ದೃಷ್ಟಿಯಿಂದ ಅವರಿಗೆ preference ಕೊಟ್ಟು ಇವತ್ತು ಅಜೆಂಡಾದಲ್ಲಿ ಮೊದಲನೆಯ ವಿಷಯವಾಗಿ ಇಟ್ಟಿದ್ದೇನೆ. ಇದಕ್ಕೆ ಒಂದು ಗಂಟೆಯನ್ನು ನಾನು ನಿಗದಿ ಮಾಡುತ್ತೇನೆ. ಆ ಒಂದು ಗಂಟೆಯಾದ ನಂತರ ಮತ್ತೆ ಬರಗಾಲದ ಬಗ್ಗೆ ನಾವು ಚರ್ಚೆಯನ್ನು ಮುಂದುವರೆಸಬಹುದು.

**ಶ್ರೀ ಸಿದ್ದರಾಮಯ್ಯ:** ಈ ಸದನವನ್ನು ಕರೆದಿರುವುದೇ ಬಹಳ ಮುಖ್ಯವಾಗಿ ರೈತರ, ಗ್ರಾಮೀಣಾಭಿವೃದ್ಧಿ ಬಗ್ಗೆ ಚರ್ಚೆ ಮಾಡಲಿಕ್ಕೆ, ಕೃಷಿ ಬಗ್ಗೆ ಚರ್ಚೆ ಮಾಡಲಿಕ್ಕೆ. ಬರಗಾಲದ ಬಗ್ಗೆ ಚರ್ಚೆ ಮಾಡಬೇಕು. ರೈತರ ಬವಣೆಗಿಂತ ಇದು ಬಹಳ ಮುಖ್ಯವೇನು? No, No, ಇದು ಮುಗಿಯಬೇಕು, ಇದು ಮುಗಿದ ಮೇಲೆ ಯಾವುದಾದರು ಚರ್ಚೆ ಮಾಡಲಿ. ಬರಗಾಲಕ್ಕೆ ಸರ್ಕಾರದಿಂದ ಉತ್ತರ ಕೊಟ್ಟಾಯಿತೇ?

**ಶ್ರೀ ಬಸವರಾಜ ಬೊಮ್ಮಾಯಿ:** ಮಾನ್ಯ ಅಧ್ಯಕ್ಷರು ರೂಲಿಂಗ್ ಕೊಟ್ಟಿದ್ದಾರೆ, ಅವರು ರೂಲಿಂಗ್ ಕೊಟ್ಟಿರುವುದನ್ನು ನಾವು ನೀವು ಇಬ್ಬರು ಒಪ್ಪಿಕೊಳ್ಳಬೇಕು. ಒಂದು ಗಂಟೆ ಎಂದು ಹೇಳಿದ್ದಾರೆ.

**ಶ್ರೀ ಸಿದ್ದರಾಮಯ್ಯ:** ರೂಲಿಂಗ್ ಎಲ್ಲಿ ಕೊಟ್ಟಿದ್ದಾರೆ?

**ಅಧ್ಯಕ್ಷರು:** ನಾನು ಈಗ ರೇವಣ್ಣನವರ ವಿಷಯಕ್ಕೆ ಒಂದು ಗಂಟೆ ಕಾಲಾವಕಾಶ ನಿಗದಿ ಮಾಡಿದ್ದೇನೆ. ಒಂದು ಗಂಟೆ ಸಮಯದಲ್ಲಿ ಮುಕ್ತಾಯ ಮಾಡಿ, ನಿಮ್ಮ ಚರ್ಚೆಗೆ ಉತ್ತರ ಕೊಡಲಿ, ನಂತರ ನಾನು ಬರಗಾಲದ ಚರ್ಚೆಗೆ ಅವಕಾಶ ಕೊಡುತ್ತೇನೆ.

**ಶ್ರೀ ಸಿದ್ದರಾಮಯ್ಯ:** ಮಾನ್ಯ ಅಧ್ಯಕ್ಷರೆ, ನಾನು ಇದನ್ನು ಒಪ್ಪುವುದಿಲ್ಲ. No, No, I don't agree.

**(ಗೊಂದಲ)**

(ಈ ಹಂತದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಸಿದ್ದರಾಮಯ್ಯನವರು ಹಾಗೂ ಕಾಂಗ್ರೆಸ್ ಪಕ್ಷದ ಸದಸ್ಯರೆಲ್ಲರೂ ಧರಣಿ ಮಾಡಲು ಬಾವಿಗಿಳಿದು ಸರ್ಕಾರದ ವಿರುದ್ಧ ಘೋಷಣೆ ಕೂಗುತ್ತಿದ್ದರು)

**ಶ್ರೀ ಬಸವರಾಜ ಬೊಮ್ಮಾಯಿ:** ನೀವು ಯಾರ ವಿರುದ್ಧ ಧರಣಿ ಮಾಡುತ್ತಿದ್ದೀರಿ? ಸ್ಪೀಕರ್ ರೂಲಿಂಗ್ ವಿರುದ್ಧ ಧರಣಿ ಮಾಡುತ್ತಿರುವಿರಾ?

**ಅಧ್ಯಕ್ಷರು:** ನಿನ್ನೆ ಎಲ್ಲರಿಗೂ ಅವಕಾಶ ಕೊಟ್ಟಿದ್ದೇನೆ. ಪದೇ ಪದೇ ಒಂದು ಕಡೆ ರೇವಣ್ಣನವರು, ಒಂದು ಕಡೆ ಪ್ರತಿಪಕ್ಷದವರು, ನಿಮ್ಮಲ್ಲೆ ಪರಸ್ಪರ ಹೊಂದಾಣಿಕೆ ಇಲ್ಲ. ಮೊದಲು ನಿಮ್ಮಲ್ಲಿ ಹೊಂದಾಣಿಕೆ ಮಾಡಿಕೊಳ್ಳಿ.

**ಶ್ರೀ ಬಸವರಾಜ ಬೊಮ್ಮಾಯಿ:** ನಾವು ಇಲ್ಲಿ ಕುಳಿತಿರುವುದು ನಿರ್ಣಯ ಮಾಡುವುದಕ್ಕೆ ಆಗುವುದಿಲ್ಲ, ಒಂದು ನಿಮಿಷ, ಯಾವುದಾದರೂ ಒಂದು ವಿಷಯದಲ್ಲಿ conscious ಇರಬೇಕು, ಇಲ್ಲವಾದರೆ ಅಧ್ಯಕ್ಷರ ತೀರ್ಮಾನವನ್ನು ಒಪ್ಪಿಕೊಳ್ಳಬೇಕು. ಅವರ ನಿರ್ಣಯವನ್ನು ಒಪ್ಪಿಕೊಳ್ಳದಿದ್ದರೆ ಹೇಗೆ?

**ಅಧ್ಯಕ್ಷರು:** ಮೊದಲು ನಿಮ್ಮಲ್ಲಿ ಹೊಂದಾಣಿಕೆ ಮಾಡಿಕೊಂಡು ನಡೆದುಕೊಳ್ಳಿ, ನಿಮಗೆ ಎಲ್ಲದಕ್ಕೂ ಅವಕಾಶ ಕೊಟ್ಟರೂ ಸಹಿತ ಪದೇಪದೇ ಎಲ್ಲದಕ್ಕೂ ನಿಲ್ಲುವುದು, ಇದು ಸರಿಯಲ್ಲ, ಸಭಾಧ್ಯಕ್ಷರು ಒಂದು ಸಾರಿ ರೂಲಿಂಗ್ ಕೊಟ್ಟ ಮೇಲೆ ಅದನ್ನು ಪ್ರಶ್ನೆ ಮಾಡುವುದು ಸರಿಯಲ್ಲ. ಎಲ್ಲಾ ನಿಯಮಗಳ ಪ್ರಕಾರ ನಡೆಯುತ್ತದೆ.

**ಶ್ರೀ ಬಸವರಾಜ ಬೊಮ್ಮಾಯಿ:** ಒಂದು ನಿಮಿಷ, ಅಧ್ಯಕ್ಷರ ರೂಲಿಂಗ್ ಅನ್ನೆ ನೀವು ಪ್ರಶ್ನೆ ಮಾಡುತ್ತೀರೆಂದರೆ ಹೇಗೆ? Are you questioning Speaker's Ruling?

**(ಗೊಂದಲ)**

**ಶ್ರೀ ಬಿ. ಎಸ್. ಯಡಿಯೂರಪ್ಪ :** ನಿಮಗೆಲ್ಲೋ ತಲೆ ಕೆಟ್ಟಿದೆ. ನಾಚಿಕೆಯಾಗಬೇಕು ನಿಮಗೆ.

**(ಗೊಂದಲ)**

**ಅಧ್ಯಕ್ಷರು :** ಬಾವಿಯಲ್ಲಿ ನಿಂತು ಮಾತನಾಡಿದ್ದು ಯಾವುದು ದಾಖಲಾಗುವುದಿಲ್ಲ.

**(ಗೊಂದಲ)**

**ಶ್ರೀ ಬಸವರಾಜ ಬೊಮ್ಮಾಯಿ:** ನಿನ್ನೆ ಅವರು ಧರಣಿಗೆ ಬಂದಾಗ ನೀವು ಹೇಳಬೇಕಾಗಿತ್ತು ನಾವು ಬರಗಾಲದ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳುತ್ತೇವೆಂದು. ಆಗ ಎಲ್ಲೋ ಹೋಗಿತ್ತು ಈ ಕಾಳಜಿ. ನಿಮ್ಮ ನಿಮ್ಮ ರಾಜಕೀಯದ ಗಲಭೆಯಲ್ಲಿ ನೀವುಗಳು ಇಂದು ಸದನವನ್ನು ನೀವು ಬ್ಲಾಕ್‌ಮೇಲ್ ಮಾಡುತ್ತಿದ್ದೀರಿ.

**ಅಧ್ಯಕ್ಷರು:** ನಾನು ಎರಡು ಗಂಟೆಗಳವರೆಗೆ ಎಲ್ಲರಿಗೂ ನಿನ್ನೆ ಅವಕಾಶ ಕೊಟ್ಟಿದೇನೆ. ಬರಗಾಲದ ಬಗ್ಗೆ ಚರ್ಚೆ ಆಗಲಿಲ್ಲವೇ? ಚರ್ಚೆಗೆ ಅವಕಾಶವೇ ಕೊಡುತ್ತಿಲ್ಲ, ಒಂದು ಸಾರಿ ಅವರು ಧರಣಿ ಮಾಡುತ್ತಾರೆ, ಒಂದು ಸಾರಿ ನೀವು ಧರಣಿ ಮಾಡುತ್ತೀರಿ.

(ಗೊಂದಲ)

**ಶ್ರೀ ಕೆ. ಎಸ್. ಈಶ್ವರಪ್ಪ** : ಪ್ರತಿಪಕ್ಷದ ನಾಯಕರಿಗೆ ನಾನು ಹೇಳುತ್ತೇನೆ. ನಿನ್ನೆಯಾದರೂ ಈ ಮಾತು ಹೇಳಬಹುದಿತ್ತು. ಈಗ ಸಭಾಧ್ಯಕ್ಷರು ರೂಲಿಂಗ್ ಕೊಟ್ಟಿದ್ದಾರೆ, ಅವರ ವಿರುದ್ಧ ಕಾಂಗ್ರೆಸ್ ಪಕ್ಷ ಧರಣಿ ಕೂಡುತ್ತಿರುವುದು ರಾಜ್ಯದಲ್ಲೇ ಅಲ್ಲ, ದೇಶದಲ್ಲೇ ನಾನು ನೋಡಿಲ್ಲ. ಇದು ಕರ್ನಾಟಕ ರಾಜ್ಯದಲ್ಲೇ ಮೊದಲನೇ ಸಾರಿ ನಡೆಯುತ್ತಿರುವುದು. ಇದು ಯಾವ ನ್ಯಾಯವೆಂದು ನನಗೆ ಅರ್ಥವಾಗುತ್ತಿಲ್ಲ.

(ಗೊಂದಲ)

**(ಈ ಹಂತದಲ್ಲಿ ವಿರೋಧ ಪಕ್ಷದ ಸದಸ್ಯರು ಸದನದ ಬಾವಿಯಲ್ಲಿ ಧರಣಿಯಲ್ಲಿ ನಿರತರಾಗಿದ್ದರು)**

**ಶ್ರೀ ಕೆ. ಎಸ್. ಈಶ್ವರಪ್ಪ** : ಮಾನ್ಯ ಸಭಾಧ್ಯಕ್ಷರ ವಿರುದ್ಧ ಕಾಂಗ್ರೆಸ್ ಪಕ್ಷ ಧರಣಿಗೆ ಕುಳಿತಿರುವುದನ್ನು ಬರೀ ರಾಜ್ಯದಲ್ಲಿ ಅಲ್ಲ, ನಾನು ಇಡೀ ದೇಶದಲ್ಲೇ ನೋಡಿಲ್ಲ. ಸಭಾಧ್ಯಕ್ಷರ ವಿರುದ್ಧ ಕಾಂಗ್ರೆಸ್ ಪಕ್ಷ ಧರಣಿಗೆ ಕುಳಿತಿರುವುದು ದೇಶದಲ್ಲೇ ಮೊದಲನೇ ಬಾರಿ ಎಂದರೆ ಅದು ಕರ್ನಾಟಕ ರಾಜ್ಯದಲ್ಲಿ ಮಾತ್ರ. ಇದು ಯಾವ ನ್ಯಾಯ ಎಂದುನನಗೆ ಅರ್ಥವಾಗುತ್ತಿಲ್ಲ.'

(ಗೊಂದಲ)

**ಶ್ರೀ ಸಿದ್ದರಾಮಯ್ಯ:** ಇದು ಮಾನ್ಯ ಮುಖ್ಯಮಂತ್ರಿಗಳ ವಿರುದ್ಧ. ನಿಮ್ಮ ವಿರುದ್ಧವಲ್ಲ. ನಿಮ್ಮ ನಿರ್ಣಯದ ವಿರುದ್ಧವಲ್ಲ. ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಬಂದು ಬರಗಾಲದ ವಿಷಯವಾಗಿ ಚರ್ಚೆ ಮಾಡುವುದನ್ನು ಬಿಟ್ಟು ಹಗರಣಗಳ ಮೇಲೆ ಚರ್ಚೆ ಮಾಡಿ ಎಂದರೆ ನಾವು ಏಕೆ ಮಾಡಬೇಕು.

(ಗೊಂದಲ)

**ಅಧ್ಯಕ್ಷರು** : ದಯವಿಟ್ಟು ತಾವು ತಮ್ಮ ಸ್ಥಾನಗಳಿಗೆ ಹೋಗಿ. ಒಂದೊಂದು ವಿಷಯವನ್ನು ಪ್ರತ್ಯೇಕವಾಗಿ ಚರ್ಚೆಗೆ ತೆಗೆದುಕೊಳ್ಳೋಣ. ಮೊದಲು ರೂಲ್ 69ರ ಬಗ್ಗೆ ಚರ್ಚೆ ಮಾಡೋಣ. ನಂತರ ಬರಗಾಲದ ಬಗ್ಗೆಯೂ ಚರ್ಚೆ ಮಾಡೋಣ. (ಗೊಂದಲ) ದಯವಿಟ್ಟು ತಮ್ಮ ಸ್ಥಾನಗಳಿಗೆ ಹೋಗಿ. ಅದಕ್ಕೂ ಸಹ ಚರ್ಚೆಗೆ ಅವಕಾಶ ಕೊಡುತ್ತೇನೆ. ಇವತ್ತು ರಾತ್ರಿ 8 ಗಂಟೆಯವರೆಗೆ ಮಾತನಾಡಿ. ನಿನ್ನೆ 7 ಗಂಟೆಯವರೆಗೆ ಸದನದಲ್ಲಿ ಕುಳಿತ್ತಿದ್ದೇವೆ. ಇವತ್ತು ರಾತ್ರಿ 8 ಗಂಟೆಯವರೆಗೆ ಎಲ್ಲರೂ ಕುಳಿತು ಚರ್ಚೆ ಮಾಡೋಣ. ಮಾನ್ಯ ಸಿದ್ದರಾಮಯ್ಯನವರೇ, ಅದರ ಬಗ್ಗೆ ಮಾತನಾಡಲು ಸಹ ಅವಕಾಶ ಕೊಡುತ್ತೇನೆ. (ಗೊಂದಲ) ಮಾನ್ಯ ಸಿದ್ದರಾಮಯ್ಯನವರೇ, ಬರಗಾಲದ ವಿಷಯ ಮಹತ್ವವಾದದ್ದು, ಅದರ ಬಗ್ಗೆ ಮಾತನಾಡಲು ಅವಕಾಶ ಕೊಡುತ್ತೇನೆ. ರೂಲ್

69ಅನ್ನು ಒಂದು ತಾಸಿನಲ್ಲಿ ಮುಗಿಸೋಣ. ದಯವಿಟ್ಟು ತಮ್ಮ ಸ್ಥಾನಗಳಿಗೆ ಹೋಗಿ. ಹೀಗಾದರೆ ಏನಾಗುತ್ತದೆ ಎಂದರೆ ವಿಶೇಷ ಅಧಿವೇಶನವನ್ನು ನಾವು ಏಕೆ ಕರೆದಿದ್ದೇವೆ? (ಗೊಂದಲ) ಚರ್ಚೆಯಾಗಬೇಕು. ಯಾವುದಾದರೂ ಒಂದು ವಿಷಯ ಚರ್ಚೆಯಾಗಬೇಕು. ಎಲ್ಲವೂ ಮಹತ್ವವಾದಂಥ ವಿಷಯಗಳೇ ಆಗಿವೆ. ಎಲ್ಲಾ ವಿಷಯಗಳು ಚರ್ಚೆಯಾಗಬೇಕು. (ಗೊಂದಲ) ದಯವಿಟ್ಟು ತಮ್ಮ ಸ್ಥಾನಗಳಿಗೆ ಹೋಗಿ ಕುಳಿತುಕೊಳ್ಳಿ.

(ಗೊಂದಲ)

**ಶ್ರೀ ಕೆ. ಎಸ್. ಈಶ್ವರಪ್ಪ :** ಮಾನ್ಯ ಅಧ್ಯಕ್ಷರೆ, ಕಾಂಗ್ರೆಸ್ ಪಾರ್ಟಿ ಒಂದು National Party ಪಾರ್ಟಿಯಾಗಿದೆ. (ಗೊಂದಲ) ಸಭಾಧ್ಯಕ್ಷರ ವಿರುದ್ಧ, ರೂಲಿಂಗ್ ಧರಣಿ ಕುಳಿತಿದ್ದಾರೆ ಎಂದರೆ ಇದು ಪ್ರಜಾಪ್ರಭುತ್ವಕ್ಕೆ ಮಾಡುತ್ತಿರುವಂಥ ಅನ್ಯಾಯ. ಯಾವುದೇ ಕಾರಣಕ್ಕೂ ಸಭಾಧ್ಯಕ್ಷರ ರೂಲಿಂಗ್ ವಿರುದ್ಧವಾಗಿ ಧರಣಿ ಕುಳಿತುಕೊಳ್ಳಬಾರದು.

(ಗೊಂದಲ)

**ಶ್ರೀ ಸಿದ್ದರಾಮಯ್ಯ:** ಇದು ಮಾನ್ಯ ಮುಖ್ಯಮಂತ್ರಿಗಳ ವಿರುದ್ಧ. ರೈತರ ಬಗ್ಗೆ ಇವರಿಗೆ ಕಾಳಜಿಯಿಲ್ಲ. ಇವರು ಬರಗಾಲಕ್ಕಾಗಿ ಒಂದು ರೂಪಾಯಿಯನ್ನು ಖರ್ಚು ಮಾಡಿಲ್ಲ.

(ಗೊಂದಲ)

**ಅಧ್ಯಕ್ಷರು:** ದಯವಿಟ್ಟು ಎಲ್ಲರೂ ತಮ್ಮ ಸ್ಥಾನಗಳಿಗೆ ಹೋಗಿ ಕುಳಿತುಕೊಳ್ಳಿ. ಈಗ ಸದನವನ್ನು 15 ನಿಮಿಷಗಳ ಕಾಲ ಮುಂದೂಡುತ್ತೇನೆ.

**(ಸದನವು ಬೆಳಿಗ್ಗೆ 11 ಗಂಟೆ 52 ನಿಮಿಷಕ್ಕೆ ಮುಕ್ತಾಯಗೊಂಡು ಪುನ: 15 ನಿಮಿಷಗಳ ನಂತರ ಸೇರಲು ನಿಶ್ಚಯಿಸಿತು)**

**(ಸದನವು ಮತ್ತೆ ಮಧ್ಯಾಹ್ನ 1 ಗಂಟೆ 06 ನಿಮಿಷಕ್ಕೆ ಪುನರ್ ಸಮಾವೇಶಗೊಂಡಿತು. ಅಧ್ಯಕ್ಷ ಪೀಠದಲ್ಲಿ ಸಭಾಧ್ಯಕ್ಷರಾದ ಶ್ರೀ ಜಗದೀಶ್ ಶೆಟ್ಟರ್‌ರವರು ಉಪಸ್ಥಿತರಿದ್ದರು)**

**ಅಧ್ಯಕ್ಷರು:** ಸಭೆಯ ಗಮನಕ್ಕೆ ತಿಳಿಸಬಯಸುವ ವಿಷಯವೇನೆಂದರೆ, ಮಾನ್ಯ ಪ್ರತಿ ಪಕ್ಷದ ನಾಯಕರು ಮತ್ತು ಜೆ.ಡಿ. (ಎಸ್)ನ ಫ್ಲೋರ್ ಲೀಡರ್ ಮತ್ತು ಕೆಲವೊಂದು ಮಾನ್ಯ ಸಚಿವರು ನನ್ನ ಛೇಂಬರ್‌ಗೆ ಬಂದು ಯಾವ ಯಾವ ವಿಷಯಗಳನ್ನು ಯಾವ ಯಾವ ಸಂದರ್ಭದಲ್ಲಿ ಚರ್ಚೆಗೆ ತೆಗೆದುಕೊಳ್ಳಬೇಕು

ಎನ್ನುವ ಬಗ್ಗೆ ಚರ್ಚೆ ಮಾಡಿ ನಾವೆಲ್ಲರೂ ಸೇರಿ ಈಗ ಒಂದು ಅಭಿಪ್ರಾಯಕ್ಕೆ ಬಂದಿದ್ದೇವೆ. ಈಗಾಗಲೇ ನಾನೇನು ತೀರ್ಪನ್ನು ಕೊಟ್ಟಿದ್ದೆ ಅದನ್ನು Re-consider ಮಾಡಿ ಎಂದು ಪ್ರತಿ ಪಕ್ಷದ ನಾಯಕರು Request ಮಾಡಿದ್ದರು. ಆ ಹಿನ್ನೆಲೆಯಲ್ಲಿ ಇವತ್ತು ನಾವೆಲ್ಲರೂ ಕುಳಿತು ಒಂದು ತೀರ್ಮಾನಕ್ಕೆ ಬಂದಿದ್ದೇವೆ. ಈಗ ಎಲ್ಲ ವಿಷಯಗಳೂ ಚರ್ಚೆಯಾಗಬೇಕಾಗಿದೆ. ಆ ದೃಷ್ಟಿಯಿಂದ ಯಾವುದಕ್ಕೆ ಮಹತ್ವ ಕೊಡಬೇಕು, ಯಾವುದಕ್ಕೆ ಇಲ್ಲವೆನ್ನುವಂಥದಲ್ಲ. ಎಲ್ಲ ವಿಷಯಗಳೂ ಮಹತ್ವದ ವಿಷಯಗಳೇ ಆಗಿವೆ. ಆ ದೃಷ್ಟಿಯಿಂದ ಮೊದಲು ಬರಗಾಲದ ವಿಷಯದ ಬಗ್ಗೆಯೂ ಇನ್ನೂ ಮಾತನಾಡಬೇಕು ಎಂದು ಪ್ರತಿ ಪಕ್ಷದ ನಾಯಕರ್ಲು ಮತ್ತು ಇತರ ಹಿರಿಯ ಸದಸ್ಯರುಗಳೂ ಕೂಡ ಹೇಳಿದರು. ಹೀಗಾಗಿ ಈ ಬಗ್ಗೆ ನಾವುಗಳೆಲ್ಲರೂ ಒಂದು understanding ಗೆ ಬಂದಿದ್ದೇವೆ. ಮೊದಲನೆಯದಾಗಿ ಒಂದು ಗಂಟೆಗಳ ಕಾಲ ಬರಗಾಲ ವಿಷಯಕ್ಕೆ ಸಂಬಂಧಪಟ್ಟಂತೆ ನಾವು ಚರ್ಚೆಯನ್ನು ಮಾಡೋಣ. ಆ ಸಮಯದಲ್ಲಿ ಪ್ರತಿ ಪಕ್ಷದ ನಾಯಕರು ಮತ್ತು ಮಾನ್ಯ ಶ್ರೀನಿವಾಸ್‌ಪ್ರಸಾದ್‌ರವರು ಕಾಂಗ್ರೆಸ್ ಪಕ್ಷದ ಕಡೆಯಿಂದ ಮಾತನಾಡುತ್ತಾರೆ. ನಂತರ ಜೆ. ಡಿ. (ಎಸ್) ಪಕ್ಷದಿಂದ ಮಾನ್ಯ ರೇವಣ್ಣನವರು ಮಾತನಾಡುತ್ತಾರೆ. ತದನಂತರ ಇದಕ್ಕೆ ಮುಖ್ಯಮಂತ್ರಿಗಳು ಅಥವಾ ಮಾನ್ಯ ಕಂದಾಯ ಸಚಿವರು ಉತ್ತರವನ್ನು ಕೊಡುತ್ತಾರೆ. ಇವೆಲ್ಲವೂ ಒಂದು ಗಂಟೆಯ ಅವಧಿಯೊಳಗೆ ಮುಗಿಯಬೇಕು. ನಂತರ ಮತ್ತೆ 3.00 ಗಂಟೆಯಿಂದ ನಿಗದಿ ಮಾಡಿರುವ ಒಂದು ಗಂಟೆಯ ಸಮಯದೊಳಗೆ ರೇವಣ್ಣನವರು ನಿಯಮ 69ರಡಿಯಲ್ಲಿ ಕಲ್ಲಿದ್ದಲಿನ ವಿಷಯಕ್ಕೆ ಸಂಬಂಧಪಟ್ಟಂತೆ ಚರ್ಚೆ ಮಾಡಲು ಅವಕಾಶ ಕೇಳಿದ್ದಾರೆ. ಆ ವಿಷಯದ ಚರ್ಚೆ ಮತ್ತು ಅದಕ್ಕೆ ಉತ್ತರವನ್ನು ಒಂದು ಗಂಟೆಯ ನಿಗದಿತ ಸಮಯದಲ್ಲಿ ಮುಗಿಯಬೇಕು. ಈ ವಿಷಯಕ್ಕೆ ಸಂಬಂಧಪಟ್ಟಂತೆ ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಡುತ್ತಾರೆ. ಇದಾದ ನಂತರ ಮುಂದಿನ ಒಂದು ಗಂಟೆಯ ಅವಧಿಯಲ್ಲಿ ಅಂದರೆ 4.00 ಗಂಟೆಯಿಂದ ಮಾನ್ಯ ಜಯಚಂದ್ರರವರು ನಿಯಮ 69 ರಡಿಯಲ್ಲಿ ಕೆ.ಐ.ಎ.ಡಿ.ಬಿ. ವಿಷಯದ ಬಗ್ಗೆ ಪ್ರಸ್ತಾಪ ಮಾಡಲು ಏನು ಅವಕಾಶವನ್ನು ಕೇಳಿದ್ದಾರೆ ಆ ವಿಷಯಕ್ಕೆ ಸಂಬಂಧಪಟ್ಟಂತೆ ಪ್ರಸ್ತಾಪ ಮಾಡುವುದು, ಚರ್ಚೆ ಮಾಡುವುದು ಮತ್ತು ಅದಕ್ಕೆ ಸರ್ಕಾರದ ಕಡೆಯಿಂದ ಉತ್ತರವನ್ನು ಕೊಡುವುದು ಎಂದು ಈ ರೀತಿಯಲ್ಲಿ ತೀರ್ಮಾನವನ್ನು ಮಾಡಿದ್ದೇವೆ. ಈ ಮೂರು ವಿಷಯಗಳ ಚರ್ಚೆ, ಅದಕ್ಕೆ ಉತ್ತರ, ಇವೆಲ್ಲವುಗಳೂ ಆದಮೇಲೆ ಇನ್ನೂ

ಕೆಲವೊಂದು ರೂಲ್ 69 ಬಗ್ಗೆ ವಿಷಯಗಳಿವೆ. ಅದನ್ನು ತದನಂತರದಲ್ಲಿ ತೆಗೆದುಕೊಳ್ಳೋಣ.

**ಶ್ರೀ ಹೆಚ್. ಸಿ. ಬಾಲಕೃಷ್ಣ** : ಈ ತೀರ್ಮಾನವೆಲ್ಲವೂ Business Advisory Committee Meetingನಲ್ಲಿ ಆಯಿತೆ?

**ಅಧ್ಯಕ್ಷರು** : Business Advisory Committee ಯಲ್ಲಿ ಯಾರು ಯಾರು ಪ್ರಮುಖರುಗಳು ಇರಬೇಕೋ ಅವರೆಲ್ಲರ ಸಮ್ಮುಖದಲ್ಲಿ ಚರ್ಚೆ ಮಾಡಿ ಅಲ್ಲಿಯೇ ಈ ರೀತಿಯ ತೀರ್ಮಾನವನ್ನು ತೆಗೆದುಕೊಂಡಿರುವುದು. ನಿಮ್ಮ ನಾಯಕರಾದ ರೇವಣ್ಣನವರೂ ಇದ್ದರು. ಹೀಗಾಗಿ ಈ ರೀತಿಯ ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ದಯವಿಟ್ಟು ಸಹಕಾರವನ್ನು ಕೊಡಬೇಕು. ಈಗಾಗಲೇ ನಿಗದಿಯಾಗಿರುವ ಸಮಯದಲ್ಲಿ ಯಾರು ಯಾರು ಮಾತನಾಡಬೇಕು ಎಂದು ನಿರ್ಧಾರ ಮಾಡಲಾಗಿದೆಯೋ ಅವರನ್ನು ಬಿಟ್ಟು ಬೇರೆ ಶಾಸಕರುಗಳು ಮತ್ತೆ ತಾವು ಮಾತನಾಡಬೇಕೆಂದು ಒತ್ತಡ ತರುವಂಥ ಕೆಲಸವನ್ನು ಮಾಡಬಾರದೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಈಗ ಬರಗಾಲ ವಿಷಯಕ್ಕೆ ಸಂಬಂಧಪಟ್ಟಂತೆ ಚರ್ಚೆಯನ್ನು ಪ್ರಾರಂಭ ಮಾಡೋಣ. ಮಾನ್ಯ ಶ್ರೀನಿವಾಸ್‌ಪ್ರಸಾದ್‌ರವರು ಮೊದಲು ಚರ್ಚೆಯನ್ನು ಪ್ರಾರಂಭ ಮಾಡಲಿ.

**ಶ್ರೀ ವಿ. ಶ್ರೀನಿವಾಸ್‌ಪ್ರಸಾದ್ (ನಂಜನಗೂಡು)**: ಮಾನ್ಯ ಅಧ್ಯಕ್ಷರೆ, ಕ್ಷಮಿಸಬೇಕು. ಇವತ್ತು ತಮ್ಮ ರೂಲಿಂಗ್‌ನ್ನು ಪ್ರಶ್ನೆ ಮಾಡಿದಂಥದ್ದಲ್ಲ. ನಾನೂ ಕೂಡ ಸಂಸತ್ತಿನಲ್ಲಿ ಬಹಳ ವರ್ಷಗಳ ಕಾಲ ಇದ್ದಂಥವನು. ಯಾವಾಗಲೂ ಕೂಡ ಸದನದಲ್ಲಿ ಎರಡೂ ಕಡೆ ಚರ್ಚೆಯಾಗಿ ತಮ್ಮ ಗಮನಕ್ಕೆ ತಂದಮೇಲೆ ತಾವೇನು ರೂಲಿಂಗ್‌ನ್ನು ಕೊಡುತ್ತೀರೋ ಅದಕ್ಕೆ ನಾವೆಲ್ಲರೂ ಕೂಡ ಬದ್ಧರಾಗಬೇಕಾಗಿರುವುದು ನಮ್ಮೆಲ್ಲರ ಕರ್ತವ್ಯವಾಗಿರುತ್ತದೆ. ಆದರೆ ನಾನು ಈ ಸಂದರ್ಭದಲ್ಲಿ ಚರ್ಚೆ ಮಾಡತಕ್ಕಂಥ ವಿಷಯದ ಆಳವನ್ನು ಯೋಚನೆ ಮಾಡಿಕೊಂಡು ನಾವು ಪುನರ್ ಪರಿಶೀಲನೆಯನ್ನು ಮಾಡಬೆಕು ಎನ್ನುವ ಮನವಿಯನ್ನು ಮಾಡಿದ್ದೇವೆ. ಹೀಗಾಗಿ ತಾವು ಪುನರ್ ಪರಿಶೀಲನೆಯನ್ನು ಮಾಡಿರುವುದು ಬಹಳ ಸಂತೋಷ. ಬರಗಾಲದ ವಿಷಯದ ಬಗ್ಗೆ ಮತ್ತೆ ಚರ್ಚೆ ಮುಂದುವರೆಯಲು ತಾವು ಅವಕಾಶವನ್ನು ಕೊಟ್ಟಿದ್ದೀರಿ. ಈಗಾಗಲೇ ತಾವು ಒಂದು ಗಂಟೆಯ ಸಮಯವನ್ನು ನಿಗದಿ ಮಾಡಿ ಅಷ್ಟರೊಳಗೆ ಮುಗಿಸಬೇಕೆಂದು ಹೇಳಿದ್ದೀರಿ. ನಾನು ಮತ್ತು ಶಾಸಕಾಂಗ ಪಕ್ಷದ ನಾಯಕರು ಮತ್ತು ರೇವಣ್ಣನವರು ಚರ್ಚೆಯನ್ನು ಮಾಡಿ ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಕೂಡ ಉತ್ತರವನ್ನು ಕೊಡುವವರಿದ್ದಾರೆ. ಸ್ವಲ್ಪ ಹೆಚ್ಚು ಸಮಯ

ಮಾತನಾಡೋಣವೆಂದು ಯೋಚನೆ ಮಾಡಿದ್ದೆ. ಆದರೆ ಸಮಯದ ಮಿತಿಯಲ್ಲಿ ಕಡಿವಾಣವನ್ನು ಹಾಕಿಕೊಂಡು ನಾನು ಆದಷ್ಟು ಬೇಗ ನನ್ನ ಮಾತುಗಳನ್ನು ಮುಗಿಸುತ್ತೇನೆ. ಮಾನ್ಯ ಅಧ್ಯಕ್ಷರೆ, ನಾನು ಈ ಅಧಿವೇಶನದ ಬಗ್ಗೆ ಕೂಡ ಹೇಳುತ್ತಿದ್ದೆ. ನಮ್ಮ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಪ್ರಾಸ್ತಾವಿಕ ನುಡಿಗಳಲ್ಲಿ ತಿಳಿಸಿರುವಂತೆ ನಾವೆಲ್ಲರೂ ಕೂಡ ಹೆಮ್ಮೆ ಪಡತಕ್ಕಂಥ ರೀತಿಯಲ್ಲಿ ಒಂದು ವಿಶೇಷ ಅಧಿವೇಶನ ಕರೆದಿರುವಂಥದ್ದು ಇದಾಗಿದೆ. ಈ ದೇಶದ ಶಾಸಕಾಂಗದ ಇತಿಹಾಸದಲ್ಲಿ ವಿಶೇಷವಾದಂಥ ಚರ್ಚೆಯನ್ನು ಮಾಡುವುದಕ್ಕಾಗಿ ನಾವು ಅವಕಾಶವನ್ನು ಮಾಡಿಕೊಟ್ಟಿದ್ದೇವೆ ಎನ್ನತಕ್ಕಂಥ ಒಂದು ಹೆಗ್ಗಳಿಕೆ ಕೂಡ ನಿಮ್ಮ ಪಾಲಿಗೆ ಇದೆ. ಇಲ್ಲ ಎಂದು ಹೇಳತಕ್ಕಂಥದ್ದಲ್ಲ. ಆದರೆ ಈ ಅಧಿವೇಶನದಲ್ಲಿ ಯಾವ ವಿಷಯಗಳು ಚರ್ಚೆಯಾಗಬೇಕು ಎಂದು ಹೇಳಿ ಪ್ರಾರಂಭ ಮಾಡಿದ್ದರು ತುಂಬಾ ಒಳ್ಳೆಯದು. ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ವಿಷಯ ಮತ್ತು ಇದಕ್ಕೆ ಪೂರಕವಾಗಿರತಕ್ಕಂತ ವಿಷಯಗಳಾದ ಬರ ಮತ್ತು ಅತಿವೃಷ್ಟಿ ವಿಷಯಗಳೂ ಕುಡ ಇದಕ್ಕೆ ಸೇರಸಿಕೊಂಡಂತೆ ಇರುವುದಾಗಿದೆ.

**ಆ) ವಿಷಯ : ರಾಜ್ಯದಲ್ಲಿ ಉಂಟಾದ ಭೀಕರ ಬರ ಹಾಗೂ ಅತೀವೃಷ್ಟಿಯ ಬಗ್ಗೆ ಚರ್ಚೆ**

**ಶ್ರೀ ವಿ. ಶ್ರೀನಿವಾಸ್ ಪ್ರಸಾದ್ (ಮುಂದು):** ಮೊದಲನೇ ಭಾಗದಲ್ಲಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬಗ್ಗೆ ಚರ್ಚೆ ನಾಲ್ಕು ದಿನಗಳ ಕಾಲ ಬಹಳ ಸುದೀರ್ಘವಾಗಿ ಚರ್ಚೆಯಾಗಿ, ಪೂರ್ಣವಾಗಿದೆ. ಈಗ ಇದು ಎರಡನೇ ಭಾಗ. ಈ ಅಧಿವೇಶನದಲ್ಲಿ ಎರಡನೇ ಭಾಗ ಬರ ಮತ್ತು ಅತೀವೃಷ್ಟಿ ಬಗ್ಗೆ ಚರ್ಚೆಯನ್ನು ಮಾಡುತ್ತಿದ್ದೇವೆ. ಈ ನಾಲ್ಕು ದಿನಗಳು ನಡೆದಂತಹ ಚರ್ಚೆಯ ಬಗ್ಗೆ ನಾನು ಯಾವುದೇ ಸೃಷ್ಟೀಕರಣ ಕೇಳುವುದಿಲ್ಲ. ಮಾನ್ಯ ಬಸವರಾಜ್ ಬೊಮ್ಮಾಯಿಯವರು ಕೂಡ ಮಾನ್ಯ ಮುಖ್ಯಮಂತ್ರಿಗಳ ಕೂಡ ತೃಪ್ತಿಯಾಗಲಿಲ್ಲ. ಅದಕ್ಕೆ ಕಾರಣ ಕೂಡ ಇದೆ. ಒಂದು ವರ್ಷದ ಹಿಂದೆ ಚುನಾವಣೆ ಸಂದರ್ಭದಲ್ಲಿ ಬಿಜೆಪಿ ಪಕ್ಷದ ಚುನಾವಣಾ ಪ್ರಣಾಳಿಕೆ ಏನಿತ್ತು, ಬಹುಶ: ಆಗ ಕೊಟ್ಟಂತಹ ಆಶ್ವಾಸನೆಗಳನ್ನು ಮಾಧ್ಯಮದ ಮಿತ್ರರು ಈಗಾಗಲೇ ಪ್ರಶ್ನೆ ಮಾಡಿದರು. ನೀವು ಚುನಾವಣೆ ಸಂದರ್ಭದಲ್ಲಿ ನಮ್ಮ ಪಕ್ಷ ಅಧಿಕಾರಕ್ಕೆ ಬಂದರೆ ಕಾರ್ಯಗತ ಮಾಡುತ್ತೇವೆಂದು ಇಷ್ಟು ಆಶ್ವಾಸನೆಗಳನ್ನು ಕೊಟ್ಟಿದ್ದೀರಲ್ಲ, ಇದಕ್ಕೆ ಸುಮಾರು ಒಂದು ಲಕ್ಷ ಕೋಟಿ ರೂಪಾಯಿ ಬೇಕು, ಇಷ್ಟು ಡಿಜಠಣಡಿಛಿಜ ಟಠಛಿಟುದಜ ಮಾಡುವುದಕ್ಕೆ ನಿಮಗೆ ಸಾಧ್ಯವಿದೆಯೇ ಎಂದು

ಕೇಳಿದಾಗ ಅಂದು ಪಕ್ಷದ ನಾಯಕರಾಗಿದ್ದಂತಹ ಮಾನ್ಯ ಯಡಿಯೂರಪ್ಪನವರು ನಾನು ಮಾಡಿ ತೋರಿಸುತ್ತೇನೆಂದು ಹೇಳಿದರು. ನೀವು ಬಂದಮೇಲೆ ಬಜೆಟ್ ಒಂದು ಲಕ್ಷ ಕೋಟಿ ರೂಪಾಯಿ ಅಲ್ಲ, 65 ಸಾವಿರ ಕೋಟಿ ರೂಪಾಯಿಗೆ ಇಳಿಯಿತು. ಮತ್ತೆ ಅದು ಖೋತಾ ಆಯಿತು, 65 ಸಾವಿರ ಕೋಟಿ ರೂಪಾಯಿ ಕೂಡ ಆಗಲಿಲ್ಲ. ಏಕೆಂದರೆ resources mobilization ಆಗಲಿಲ್ಲವೆಂದು ಹೇಳಿದೆ. ಈಗಲೂ ಕೂಡ ನೀವು ಈ ನಾಲ್ಕು ದಿನಗಳಲ್ಲಿ ಪ್ರಸ್ತಾಪ ಮಾಡಿರುವಂತಹ ಪ್ರಾಸ್ತಾವಿಕ ನುಡಿಗಳು ನೋಡಿದರೆ ಮತ್ತೆ ನೀವು ಭವಿಷ್ಯದ ಹೆಜ್ಜೆಗಳು 37 ಅಂಶಗಳ ಕಾರ್ಯಕ್ರಮವನ್ನು ಕೊಟ್ಟಿದ್ದೀರಿ. ಅದರ ಬಗ್ಗೆ ಮಾನ್ಯ ಸದಸ್ಯರು, ನೀವು ಇಷ್ಟು ಕೊಟ್ಟಿದ್ದೀರಲ್ಲ, resources mobilization ಎಲ್ಲಿ ಮಾಡುತ್ತೀರಿ? ಇದಕ್ಕೆ ಬೇಕಾದಂತಹ ಸಂಪನ್ಮೂಲಗಳ ಕೊರತೆ ಇಲ್ಲವೇ ಎನ್ನುವುದನ್ನು ಅಂದು ಪ್ರಶ್ನೆ ಮಾಡಿದರು. ಬಹುಶ: ಅದು ಇಲ್ಲ, ಏಕೆಂದರೆ ಮಾನ್ಯ ಜಯಚಂದ್ರರವರು ಮಾತನಾಡಿದಂತಹ ಸಮಯದಲ್ಲಿ ಬರ ಪರಿಹಾರಕ್ಕೆ ಸಂಬಂಧಪಟ್ಟಂತೆ ಬಹಳ ಮಾರ್ಮಿಕವಾಗಿ ಮಾತನಾಡಿದರು. ಇಲ್ಲಿ ನಮ್ಮ ಕಂದಾಯ ಮಂತ್ರಿಗಳೂ ಕೂಡ ಇದ್ದಾರೆ. ನೀವು ಇದಕ್ಕೆ ಸಿದ್ಧತೆ ಮಾಡಿದ್ದೇವೆ, ಸಾಕಷ್ಟು ಹಣ ಇದೆ ಎಂದು ಹೇಳಿದ್ದಿರಲ್ಲ, ಆದರೆ ಮೌಖಿಕವಾಗಿ ನೀವು ಜಿಲ್ಲಾಧಿಕಾರಿಗಳಿಗೆ ತಿಳಿಸಿರುವ ಪ್ರಕಾರ ನಮಗೆ ಹಣದ ಕೊರತೆ ಇದೆ ಎನ್ನುವುದನ್ನು ತೋರಿಸುತ್ತದೆ. ಅದಕ್ಕೋಸ್ಕರ ಹಿನ್ನೆಲೆಯನ್ನು ಹೇಳಿದೆ. ನೀವು ಹೋಗತಕ್ಕಂಥ ವೇಗ ಇದೆಯಲ್ಲ, ಅದನ್ನು ನೀವು ಸ್ವಲ್ಪ ಯೋಚನೆ ಮಾಡಬೇಕು. ಏಕೆಂದರೆ ಮಾನ್ಯ ಮುಖ್ಯಮಂತ್ರಿಗಳ ಹತ್ತಿರವೇ ಹಣಕಾಸಿನ ಇಲಾಖೆ ಇದೆ. ಸಂಪನ್ಮೂಲಗಳ ಕೊರತೆ ಇದೆ, ಸಂಪನ್ಮೂಲಗಳನ್ನು ಕ್ರೂಢೀಕರಿಸಿದಾಗ ಮಾತ್ರ ನೀವು ಕೊಟ್ಟಂತಹ ಆಶ್ವಾಸನೆಗಳು, ನಿಮ್ಮ ಪ್ರಾಸ್ತಾವಿಕ ನುಡಿಗಳು, ಭವಿಷ್ಯದ ಹೆಜ್ಜೆಗಳು, ಬಜೆಟ್‌ನಲ್ಲಿ ನಿಮ್ಮ ಭರವಸೆಗಳೂ ಕೂಡ ಈಡೇರುವುದಕ್ಕೆ ಸಾಧ್ಯ. ಇಲ್ಲದಿದ್ದರೂ ಇವೆಲ್ಲವೂ ಬಹಳ ಕಷ್ಟಕರವಾಗಿವೆ ಎನ್ನುವ ರೀತಿಯಲ್ಲಿ ಇದೆ. ಆದಾಗ್ಯೂ ನೀವು ಬಹಳ ಉತ್ಸಾಹದಿಂದ ಹೇಳುತ್ತಿರುವುದು ಏನಾಗಿದೆ ಎಂದರೆ ಆ ಒಂದು ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರುವುದಕ್ಕಾಗುತ್ತಿಲ್ಲ ಎಂದು ನಿಮ್ಮದ್ದು derail ಆಗುತ್ತಿದೆ, ಹಳಿ ತಪ್ಪುತ್ತಿದೆ. ಏಕೆಂದರೆ over speed ಆದರೆ derail ಆಗುವುದು ಸಾಧ್ಯ. ಆದ್ದರಿಂದ ಮಾತಿನ ಭರವಸೆಗಳ ಉತ್ಸಾಹದಿಂದ ಇದು ಆಗುತ್ತಿಲ್ಲ. ನಾನು ಮಾನ್ಯ ಸಚಿವರ ಗಮನಕ್ಕೆ ತರುತ್ತಾ, ಇದಕ್ಕೆ ಸ್ಪಷ್ಟೀಕರಣ ಕೊಡಿ ಎಂದು ಕೇಳುತ್ತಿಲ್ಲ. ಇವತ್ತು ಗ್ರಾಮೀಣ ಭಾರತದ ಹಿನ್ನೆಲೆಯಲ್ಲಿ ಇದು

ತುಂಬಾ ಚೆನ್ನಾಗಿ ಚರ್ಚೆಯಾಗಿದೆ. ನಿಜ, ಇವತ್ತು ನಮ್ಮಲ್ಲಿ ಎರಡು ಭಾರತಗಳು ಇವೆ. 21ನೇ ಶತಮಾನಕ್ಕೆ ನಾವು ಬಂದಾಗಲೂ ಕೂಡ ಈ ಸ್ಪರ್ಧಾತ್ಮಕವಾದಂತಹ, ವೈಜ್ಞಾನಿಕವಾದಂತಹ ಯುಗದಲ್ಲಿ, ದಿನೇದಿನೇ ವೈಜ್ಞಾನಿಕವಾದಂತಹ ಸಂಶೋಧನೆಗಳಿಂದ ಮನುಷ್ಯನ ಮುಂದೆ ಒಂದು ಪ್ರಶ್ನೆ ಬಂದಿದೆ. ನಮಗೆ ಇಂತಹ ಅದ್ಭುತವಾದ ಬುದ್ಧಿಶಕ್ತಿ ಇದೆ ಎನ್ನುವಂತಹ ಯುಗದಲ್ಲೂ ಕೂಡ ತಾರತಮ್ಯ ಇರುವುದನ್ನು ಕಾಣುತ್ತಿದ್ದೇವೆ. ನಗರ ಪಟ್ಟಣಗಳಿಂದ ಕೂಡಿರುವಂತಹ ಭಾರತ ಮತ್ತು ಗ್ರಾಮೀಣ ಭಾರತ. ಹಾಗಾಗಿ ನಾವು ಬಹುತೇಕ ಸದಸ್ಯರು ಗ್ರಾಮೀಣ ಪ್ರದೇಶದಿಂದ ಆಯ್ಕೆಯಾಗಿ ಬಂದಂತಹ ಪ್ರತಿನಿಧಿಗಳು, ಆದಾಗ್ಯೂ ಗ್ರಾಮೀಣ ಭಾರತದ ಹಿನ್ನೆಲೆಯಲ್ಲಿ ಇವತ್ತು ಬಹಳ ಮುಖ್ಯವಾದಂತಹ ವಿಶೇಷ ಚರ್ಚೆ ಕೂಡ ಆಗಿದೆ. ಇವತ್ತು ಆಯವ್ಯಯದಲ್ಲಿ ಕೂಡ ನಮಗೆ ಇರುವಂತಹ ಬೇಡಿಕೆಗಳ ಬಗ್ಗೆ ಚೆನ್ನಾಗಿ ಚರ್ಚೆಯಾಗಬೇಕಾಗಿತ್ತು, ವಿಶೇಷ ಯೋಜನೆಗಳ ಬಗ್ಗೆ ಚರ್ಚೆಯಾಗಬೇಕಾಗಿತ್ತು, ಆದರೆ ಅರ್ಥಪೂರ್ಣವಾದಂತಹ ಚರ್ಚೆಯಾಗಲಿಲ್ಲ. ಇವತ್ತು ಈ ವಿಶೇಷವಾದಂತಹ ಅಧಿವೇಶನದಲ್ಲಿ ತಾವು ,ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದೀರಿ. ಮಾನ್ಯ ಮುಖ್ಯಮಂತ್ರಿಗಳು ಈಗ ಇಲ್ಲಿ ಇಲ್ಲ. ನಾನು ತಮಗೆ ಹೇಳುತ್ತಿದ್ದೆ. ಇದಕ್ಕಿಂತಲೂ ಕೂಡ ಇದೇ ರೀತಿಯಾಗಿ ಕಿತ್ತು ತಿನ್ನುವಂತಹ ಅನೇಕ ಇಲಾಖೆಗಳ ಬಗ್ಗೆ, ಜನರ ಬಗ್ಗೆ ನಾವು ಚರ್ಚೆ ಮಾಡಬೇಕಾಗಿದೆ. ಉದಾಹರಣೆಗೆ ನಾನು ಹೇಳುವುದಾದರೆ ಸಮಾಜ ಕಲ್ಯಾಣ ಇಲಾಖೆಯಡಿಯಲ್ಲಿ ಬರುವಂತಹ ದಲಿತರು ಮತ್ತು ಆದಿವಾಸಿಗಳು. ಇದರ ಬಗ್ಗೆ ಮೊನ್ನೆ ತಾನೆ ನೋಡಿದಿರಿ. ಬರದ ಬಗ್ಗೆ ಚರ್ಚೆ ಮಾಡುತ್ತೇವೆ. ಈ ದೇಶದ ಆದಿವಾಸಿಗಳ ಸ್ಥಿತಿಗತಿಗಳು ಹೇಗಿದೆ? ನಾನು ಮೂರ್ನಾಲ್ಕು ದಿನಗಳ ಹಿಂದೆ ಒಂದು ಪತ್ರಿಕೆಯಲ್ಲಿ ಓದಿದೆ. ಹಾದಿಯಲ್ಲಿರುವಂತಹ ಆದಿವಾಸಿಗಳ ಜನಜೀವನದ ವ್ಯವಸ್ಥೆ ಹೇಗಿದೆ ಎಂದು ನಾವು ಅರ್ಥ ಮಾಡಿಕೊಳ್ಳುವುದಕ್ಕೆ ಆಗುತ್ತಿಲ್ಲ. ಇವತ್ತೂ ಕೂಡ ಅವರಿಗೆ ನಾಗರೀಕ ಸಮಾಜದಲ್ಲಿ ಯಾವುದೇ ರೀತಿಯಾದಂತಹ ಕನಿಷ್ಟ ಸೌಲಭ್ಯಗಳು ಕೂಡ ಇಲ್ಲ. ಅವರ ಮಕ್ಕಳಿಗೆ ಸರಿಯಾದಂತಹ ಪೌಷ್ಟಿಕ ಆಹಾರಗಳು ಇಲ್ಲ, ಅವರ ಕೈಗಳಿಗೆ ಕೆಲಸವಿಲ್ಲ, ಆಶ್ರಮ ಶಾಲೆಗಳಿಂದ ಅವರಿಗೆ ಯಾವುದೇ ರೀತಿಯಾದಂತಹ ಅನುಕೂಲತೆಗಳು ಆಗುತ್ತಿಲ್ಲ. ಅವರಿಗೆ ಸಿಗುತ್ತಿರುವಂತಹ 30 ರೂಪಾಯಿ ದಿನಗೂಲಿಯಲ್ಲಿ ಅವರ ಜೀವನ ಹೇಗೆ ನಡೆಯುತ್ತದೆ? ಒಂದು ಕಡೆ ಪ್ರಕೃತಿ ವಿಕೋಪದಿಂದ

ಬರುವಂತಹ ಅತೀವೃಷ್ಟಿ ಮತ್ತು ಬರದ ಬಗ್ಗೆ ಚರ್ಚೆ ಮಾಡುತ್ತೇವೆ. ಆದರೆ ತಲಾತಲಾಂತರದಿಂದ ಬರದಲ್ಲೇ ನರಳುವಂತಹ ಜನರಿದ್ದಾರಲ್ಲ, ಅವರಿಗೆ ಮಾನವೀಯತೆ ದೃಷ್ಟಿಯಿಂದ, ನಾವು ಬೇಡಿಕೆ ಬಗ್ಗೆ ಮಾತನಾಡುವುದರ ಜೊತೆಗೆ ಈ ವಿಚಾರಕ್ಕೆ ಮಾತನಾಡುವುದಕ್ಕೆ ಅವಕಾಶ ಕೊಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳುತ್ತೇನೆ. ವಿಶೇಷ ಅಧಿವೇಶನ ಎಂದರೆ ಆ ರೀತಿಯ ವಿಚಾರಗಳನ್ನು ಚರ್ಚೆ ಮಾಡಬೇಕು. ಇವತ್ತು ದಲಿತರ ಮೇಲೆ ಈ ಕ್ಷಣದಲ್ಲಿ ಕೂಡ for stupid reason, ಒಂದು ಕ್ಷುಲಕವಾದಂತಹ ಕಾರಣಕ್ಕೋಸ್ಕರ ಎಂತಹ ದೌರ್ಜನ್ಯ, ದಬ್ಬಾಳಿಕೆಗಳು ಇವತ್ತು ನಡೆಯುತ್ತಿದೆ. ಇವತ್ತು ಕೂಡ ಗ್ರಾಮೀಣ ಪ್ರದೇಶದಲ್ಲಿ ಅವರ ಸ್ಥಿತಿಗತಿಗಳು ಹೇಗಿದೆ ಎಂದು ಅರ್ಥ ಮಾಡಿಕೊಂಡಿದ್ದೇವೆಯೇ? ಇವತ್ತು ಗ್ರಾಮೀಣಾಭಿವೃದ್ಧಿಯ ಬಗ್ಗೆ ನಾವು ಯೋಚನೆ ಮಾಡುತ್ತಿದ್ದೇವೆ. ನಾವೆಲ್ಲರೂ ಕೂಡ ಜನ ಪ್ರತಿನಿಧಿಗಳಾಗಿರುವಂಥವರು. ಇವತ್ತು ಹಳ್ಳಿಗಳಲ್ಲಿ ಸಾಮಾಜಿಕ ಸಾಮರಸ್ಯ ಇದೆಯೇ ಎಂದು ಯೋಚನೆ ಮಾಡಬೇಕಾಗಿದೆ. ಗ್ರಾಮೀಣಾಭಿವೃದ್ಧಿಯ ಕನಸನ್ನು ನನಸು ಮಾಡುವುದಕ್ಕೆ ಇವತ್ತು ಸಾಧ್ಯವೇ? ಅಲ್ಲಿ ಹೇಗಿದೆ? ಇವತ್ತು ಗ್ರಾಮೀಣಾಭಿವೃದ್ಧಿಯ ಬಗ್ಗೆ, ಅಲ್ಲಿ ಕುಡಿಯುವ ನೀರಿನ ಬಗ್ಗೆ ಬಹಳಷ್ಟು ಮಾತನಾಡುತ್ತಿದ್ದೇವೆ. ಎಲ್ಲಿಂದ ಗ್ರಾಮೀಣಾಭಿವೃದ್ಧಿ? ಒಂದು ಕೊಳವೆ ಬಾವಿಯಿಂದ ಇಡೀ ಗ್ರಾಮಕ್ಕೆ ನೀರು ತೆಗೆದುಕೊಂಡು ಹೋಗುವುದಕ್ಕಾಗುತ್ತದೆಯೇ? ಒಂದೊಂದು ಜಾತಿಗೆ ಒಂದೊಂದು ಕೊಳವೆ ಬಾವಿಗಳನ್ನು ನೀವು ಕೊಡಬೇಕಾಗಿತ್ತು. ಯಾರಾದರೂ ಒಬ್ಬ ದಲಿತ ವಾಸ ಮಾಡುವ ಕಡೆ ಒಂದು ಬೋರ್‌ವೆಲ್ ಕೆಟ್ಟರೆ ಇನ್ನೊಬ್ಬರ ಹತ್ತಿರ ಒಂದು ಕೊಡ ನೀರು ತೆಗೆದುಕೊಳ್ಳುವುದಕ್ಕಾಗುತ್ತದೆಯೇ? ನಿಮಗೆ ಎಲ್ಲಿಂದ ಗ್ರಾಮೀಣಾಭಿವೃದ್ಧಿಯ ಕನಸು[2]. ಮಾನ್ಯ ಮುಖ್ಯಮಂತ್ರಿಗಳು ಚೈನಾ ದೇಶವನ್ನು ವಿಸಿಟ್ ಮಾಡಿ ಬಂದರಲ್ಲ. ಅಲ್ಲಿ ಏನು ನೋಡಿದಿರಿ ಎಂದು ಕೇಳೋಣ ಎಂದಿದ್ದೇನೆ. ಅಲ್ಲಿ ಆಡಳಿತ ವ್ಯವಸ್ಥೆ ಬೇರೆ. ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಅದರ ಬಗ್ಗೆ ಮಾತನಾಡಿ ಅವರ ಗಮನವನ್ನು ಸೆಳೆಯೋಣವೆಂದು ಇದ್ದೇನೆ. ಒಂದು ಸಮುದಾಯ ಭವನ, ಇನ್ನೂ ಕೂಡ ಅಂತರರಾಷ್ಟ್ರೀಯ ಮಟ್ಟದಲ್ಲಿ ಇನ್ನೂ ಚರ್ಚೆಯಾಗುತ್ತಿದೆ. ನಾವು ಗ್ರಾಮೀಣಾಭಿವೃದ್ಧಿ ಬಗ್ಗೆ ಚರ್ಚೆ ಮಾಡುತ್ತೇವೆ, ಇನ್ನೂ two glass system, ನಮ್ಮ ಗ್ರಾಮೀಣಾಭಿವೃದ್ಧಿಯಲ್ಲಿ ಎಲ್ಲಿದ್ದೇವೆ ಎಂದು ಹೇಳಿದರೆ ಇನ್ನು ಎರಡು ಲೋಟದ ಪದ್ಧತಿಯಲ್ಲಿ ಇನ್ನೂ

ಜೀವಂತವಾಗಿದೆ. ನಾವೆಲ್ಲರೂ ಕೂಡ ನಮಗೆ ಗೊತ್ತಿಲ್ಲವೇನೋ, ಯಾವ ಗ್ರಾಮೀಣಾಭಿವೃದ್ಧಿ ಬಗ್ಗೆ ಚರ್ಚೆ ಮಾಡುತ್ತೇವೆ? ಏನು ಪ್ರಗತಿಯನ್ನು ಕಂಡಿದ್ದೇವೆ? ಇದರಲ್ಲಿ ಗ್ರಾಮೀಣಾಭಿವೃದ್ಧಿಯ ವಿಚಾರದಲ್ಲಿ ಚರ್ಚೆ ಮಾಡುತ್ತಿರುವಂತಹ ಸಂದರ್ಭದಲ್ಲಿ ಹೇಳುತ್ತಿರುವುದು. ಯುವಕರಲ್ಲಿ, ನನಗೆ ಆಶ್ಚರ್ಯವಾಗುತ್ತದೆ, ನಾನು ಅತ್ಯಂತ ಸಣ್ಣ ವಯಸ್ಸಿನಲ್ಲಿ ರಾಜಕೀಯಕ್ಕೆ ಬಂದು 30 ವರ್ಷದಿಂದ ನಾನು ಸದಸ್ಯನಾಗಿ ಲೋಕಸಭೆ ಪ್ರವೇಶ ಮಾಡಿದವನು. ನಾನು ಈ ದೇಶದ ಸ್ಥಿತಿಗತಿಗಳನ್ನು ಸಾಮಾಜಿಕ ವ್ಯವಸ್ಥೆಯನ್ನು ಅರ್ಥ ಮಾಡಿಕೊಂಡಿರತಕ್ಕಂಥವನು. ನಾನು ಪಾರ್ಲಿಮೆಂಟ್‌ನಲ್ಲಿ ಕೂಡ ಮಾತನಾಡುತ್ತಾ ಈ ಮಾತನ್ನು ಹೇಳುತ್ತಿದ್ದೆನು. India is such a resourceful country. ಇದು ಬಹಳ ಸಂಪದ್ಭರಿತವಾದಂತಹ ದೇಶ. Human resources, natural resources, ಇವೆರಡನ್ನು ಬಳಸದೆ ಇರುವಂತಹ manpower ಜಗತ್ತಿನಲ್ಲಿ ಎಲ್ಲೂ ಕೂಡ ಇಲ್ಲ. ಚೈನಾ ದೇಶಕ್ಕೂ ಕೂಡ ಸಾಧ್ಯವಿಲ್ಲ. ಆದರೆ ಇದು ಮುಂದುವರೆದಂತಹ ರಾಷ್ಟ್ರವಾಗಿದೆ ಏನು? ಇಲ್ಲ, ಏಕೆ? ಏಕೆ ಆರ್ಥಿಕವಾಗಿ ಎಲ್ಲರೂ ಸಬಲರಾಗಲಿಲ್ಲ. ಸಾಮಾಜಿಕವಾಗಿ ಏಕೆ ಸಮಾನತೆ ಬರಲಿಲ್ಲ. ಏಕೆ ರಾಜಕೀಯವಾಗಿ ಎಲ್ಲರಿಗೂ ಅವಕಾಶಗಳು ಸಿಗಲಿಲ್ಲ. ಬಹುಶ: ಇದಕ್ಕೆ ಕಾರಣ ಇದೆ. ಇಷ್ಟು ಸಂಪದ್ಭರಿತವಾದಂತಹ ದೇಶದಲ್ಲಿ ಇನ್ನೂ ನಾವು BPL card ಹೇಗೆ ಕೊಡಬೇಕು, below the poverty line ಹೇಗಿದೆ ಎಂದು ಗೊತ್ತಿಲ್ಲ. ಬರ ಬಂದಿರುವಂತಹ ಸಂದರ್ಭದಲ್ಲಿ ಅವರು ಗುಳೆ ಹೋಗದಿರುವಂತಹ ರೀತಿಯಲ್ಲಿ ಬದುಕನ್ನು ನಡೆಸುವಂತಹ ವಿಚಾರದಲ್ಲಿ ಎಲ್ಲೋ ಒಂದು ಮುಖ್ಯವಾದಂತಹ ಕೊರತೆ, ನ್ಯೂನ್ಯತೆ ನಮ್ಮ ಸಮಾಜದಲ್ಲಿ ಎದ್ದು ಕಾಣುತ್ತಿದೆ. ತಾವು ಗ್ರಾಮೀಣಾಭಿವೃದ್ಧಿ ಬಗ್ಗೆ ಯೋಚನೆ ಮಾಡುವಂತಹ ಸಂದರ್ಭದಲ್ಲಿ ತಮ್ಮ ಗಮನವನ್ನು ಸೆಳೆಯುತ್ತಿದ್ದೇನೆ. ಯುವಕರು, ಭಾರತ ದೇಶದಲ್ಲಿ ಒಂದು ಗ್ರಾಮದಲ್ಲಿ ಕೂಡ ಒಂದು ಯುವಕ ಸಂಘ ಇರುವುದನ್ನು ಎಲ್ಲಾದರೂ ಕಾಣುತ್ತಿದ್ದೇವೇಯೇ? ಇಲ್ಲ. ಆದರೆ ಯಾವುದೋ ಒಂದು ಕೋಮಿಗೆ ಸೇರಿದವರಿಗೆ ಬಸವೇಶ್ವರ ಯುವಕರ ಸಂಘ ಆಗಬೇಕು, ಕುವೆಂಪು ಯುವಕರ ಸಂಘವೇ ಆಗಬೇಕು, ಇನ್ನೆಲ್ಲೊ ನಾವಿದ್ದೇವೆಂದರೆ ಅಂಬೇಡ್ಕರ್ ಸಂಘವೇ ಆಗಬೇಕು, ಇನ್ನೆಲ್ಲೋ ಇದ್ದೇವೆಂದರೆ ಜನಜೀವನ ರಾಂ ಸಂಘವೇ ಆಗಬೇಕು, ಇನ್ನೆಲ್ಲೊ ಇದ್ದೇವೆಂದರೆ ಮದಕರಿ ಯುವಕ ಸಂಘವಾಗಬೇಕು, ಇನ್ನೆಲ್ಲೊ ಇದ್ದಾರೆಂದರೆ ಭಗೀರಥ ಯುವಕರ ಸಂಘವೇ ಆಗಬೇಕು. ನನಗೆ

ಮನಸ್ಸಿಗೆ ಬಹಳ ನೋವಾಗುತ್ತಿರುವಂತಾದ್ದು, ಏನೆಂದರೆ ನಾವು ಗ್ರಾಮೀಣ ಭಾರತದ ಬಗ್ಗೆ ಬಹಳ ಚಿಂತನೆ ಮಾಡುತ್ತೇವೆ. ಮೂಲತಃ ನಾವು ಎಲ್ಲಿ ಎಡವಿದ್ದೇವೆ? ಅಲ್ಲಿ ಜನಜೀವನದ ವ್ಯವಸ್ಥೆ ಹೇಗಿದೆ? ಅದನ್ನು ಯಾವರೀತಿ ಸರಿಪಡಿಸಬೇಕು ಎಂದು ಯೋಚನೆ ಮಾಡಬೆಕು ಎನ್ನುವುದು ಇನ್ನೂ ಕೂಡ ಇಲ್ಲ. ಹಾಗಾಗಿ ಈ ತರಹದ ವಿಚಾರದಲ್ಲಿ ಚರ್ಚೆ ಮಾಡುವುದಕ್ಕೆ ವಿಶೇಷವಾದಂತಹ ಅಧಿವೇಶನಗಳು ನಡೆಯಬೇಕು. ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ವಿಚಾರದಲ್ಲಿ ಮಾಡಿದಂತಹ ರೀತಿಯಲ್ಲಿ ಈ ರೀತಯ ಒಂದು ಸಾಮಾಜಿಕವಾದಂತಹ ಚಿಂತನೆಗಳು, ಶತಶತಮಾನಗಳಿಂದ ಶೋಷಣೆಗೊಳಗಾಗಿರುವಂತಹ ಆದಿವಾಸಿಗಳು, ದಲಿತರು, ಹಿಂದುಳಿದವರ ಬಗ್ಗೆ ಕೂಡ ನಾವು ವಿಶೇಷವಾದಂತಹ ಅಧಿವೇಶನದಲ್ಲಿ ಚರ್ಚೆಯನ್ನು ಮಾಡಬೇಕು. ನೀವು ಕೇವಲ ಬಜೆಟ್‌ನಲ್ಲಿ allocation ಕೊಟ್ಟು ಆಯಿತು ಎಂದು ಕೈತೋರಿಸಿ ಬಿಡುವುದಲ್ಲ. ಹಾಗಾಗಿ ಇಂತಹ ಅಧಿವೇಶನಗಳು ಇನ್ನು ಹೆಚ್ಚೆಚ್ಚು ರೀತಿಯಲ್ಲಿ ನಡೆಯಬೇಕು ಎಂದು ನಾನು ಸರ್ಕಾರಕ್ಕೆ ಹೇಳುತ್ತೇನೆ. ತಮ್ಮ ಸರ್ಕಾರ ವಿಶೇಷ ಅಧಿವೇಶನದ ಬಗ್ಗೆ ಬಹಳ ಒಳ್ಳೆಯ ಯೋಚನೆ ಮಾಡಿದ್ದೀರಿ. ಇನ್ನು ಕೃಷಿ ನೀತಿ, ಗ್ರಾಮೀಣಾಭಿವೃದ್ಧಿ ಮತ್ತು ಬರ, ಅತೀವೃಷ್ಟಿ ಇವೆಲ್ಲ ಒಂದಕ್ಕೊಂದು ಪೂರಕವಾಗಿರುತ್ತದೆ. ಏಕೆಂದರೆ ಇಲ್ಲಿ ಮಾತನಾಡುತ್ತ ಎಲ್ಲರಿಗೂ ಗೊತ್ತಿರುವ ಹಾಗೆ ಪ್ರಸ್ತಾಪ ಮಾಡಿದರು. ಪಂಚವಾರ್ಷಿಕ ಯೋಜನೆಗಳು, ನಾವು ಎಷ್ಟೋ ಲಕ್ಷಾಂತರ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ವಿಶೇಷ ಯೋಜನೆಗಳ ಬಗ್ಗೆ ಮಾತನಾಡುವಾಗ ಹೇಳಿದರು. ಅದು IRDP, National Rural Employment Scheme ಗಳು ಇರಬಹುದು, ಇವೆಲ್ಲವುಗಳ ಮುಖಾಂತರ ನಾವು ಎಷ್ಟು ಸಾವಿರ, ಲಕ್ಷಾಂತರ, ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಈ ಖರ್ಚು ಮಾಡಿದಂತಹ ಹಣದಲ್ಲಿ ಕೃಷಿ ನೀತಿ ಒಂದು ಸಾಧನೆಯನ್ನು ಮಾಡಿದರೆ ಕೃಷಿಕರ ಜೀವನ ಉತ್ತಮವಾಗಿದ್ದರೆ, ಗ್ರಾಮೀಣಾಭಿವೃದ್ಧಿ ಬೆಳವಣಿಗೆಯಾದರೆ, ಗ್ರಾಮೀಣಾಭಿವೃದ್ಧಿ ಸುಧಾರಣೆಯಾಗಿದೆ ಎಂದು ಹೇಳಿದರೆ ಬರದ ಪರಿಸ್ಥಿತಿಯನ್ನು ಎದುರಿಸುವುದಕ್ಕೆ ಏಕೆ ಆಗುತ್ತಿರಲಿಲ್ಲ. ಆದರೆ ಆಗಿಲ್ಲ. ನಾವು ಇಷ್ಟೆಲ್ಲಾ ಪಂಚವಾರ್ಷಿಕ ಯೋಜನೆಗಳನ್ನು ಮಾಡಿದರೂ ಕೂಡ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಎಷ್ಟೇ ಸಾಮಾಜಿಕ, ಆರ್ಥಿಕ ಕಾರ್ಯಕ್ರಮಗಳನ್ನೂ ಹಾಕಿದರೂ, ಎಷ್ಟೇ ನಾವು ಸಂಪನ್ಮೂಲಗಳನ್ನು ಕ್ರೋಢೀಕರಿಸಿದರೂ ಕೂಡ ಅದರಲ್ಲಿ ಗ್ರಾಮೀಣಾಭಿವೃದ್ಧಿ ಸುಧಾರಣೆಯಾಗಿದ್ದರೆ,

ನಮ್ಮ ಕೃಷಿ ನೀತಿಯಿಂದ, ನಮ್ಮ ಕೃಷಿಯ ಕಾರ್ಯಕ್ರಮಗಳಿಂದ ನಾವೇನಾದರೂ ಸಾಧನೆಯನ್ನು ಮಾಡಿದ್ದರೆ, ಅಭಿವೃದ್ಧಿಯನ್ನು ಕಂಡಿದ್ದರೆ ಈ ರೀತಿಯ ಬರ ಮತ್ತು ಅತೀವೃಷ್ಟಿಯನ್ನು ಎದುರಿಸುವಂತಹ ಸಮಸ್ಯೆಯೇ ಇರಲಿಲ್ಲ. ತಾವೇ ಪ್ರಸ್ತಾಪ ಮಾಡಿದಂತೆ ತಮ್ಮಗೆಲ್ಲರಿಗೂ ಗೊತ್ತಿರುವ ಹಾಗೆ ನಮಗೆ ಕಾರಣ ಗೊತ್ತಿದೆ. ನಮಗೆಲ್ಲರಿಗೂ ಕಾರಣ ಏನೆಂಬುದು ಗೊತ್ತಿದೆ. ಇವತ್ತು 100 ಕ್ಕೆ 85 ರೂಪಾಯಿಗಳು ಅಂದರೆ, 15 ರೂ.ಗಳು ಮಾತ್ರ ಅಭಿವೃದ್ಧಿಗೆ ತಲುಪುತ್ತಿರುವಂಥಾದ್ದು ಎಂದು ಮಾನ್ಯ ರಾಜೀವ್‌ಗಾಂಧಿಯವರು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಆ 85 ರೂಪಾಯಿಗಳು ದುರುಪಯೋಗವಾಗುತ್ತಿದೆ. ಇದು ಯಾವ ಕನಸಿನ ಕಾರಣ. ನೂರು ರೂಪಾಯಿಗಳಲ್ಲಿ 15 ರೂಪಾಯಿಗಳು ಹಳ್ಳಿಗೆ ತಲುಪಿದರೆ ಯಾವ ಗ್ರಾಮೀಣಾಭಿವೃದ್ಧಿ ಆಗುತ್ತದೆ? ಯಾವ ಗ್ರಾಮಗಳು ಅಭಿವೃದ್ಧಿ ಆಗುತ್ತದೆ? ಯಾವ ಕೃಷಿ ನೀತಿಯಲ್ಲಿ ರೈತನಿಗೆ ನಾವು ಸಹಾಯ ಮಾಡುವುದಕ್ಕೆ ಆಗುತ್ತದೆ? ನಮ್ಮ ಕಾರ್ಯಕ್ರಮಗಳನ್ನು ನೋಡಿದರೆ ನಾವು ಅವರಿಗೆ ಕೊಡುವಂಥ ಹಣಕಾಸನ್ನು ನೋಡಿದರೆ, ನನಗೆ ತಿಳಿದಮಟ್ಟಿಗೆ ಅಂತರಾಷ್ಟ್ರೀಯ ಮಟ್ಟದಲ್ಲೂ ಕೃಷಿಯ ಬಗ್ಗೆ ಚರ್ಚೆಯಾದಂಥ ಸಮಯದಲ್ಲಿ ನಾವು ಭಾರತದಿಂದ ಭಾಗವಹಿಸಿದಂಥ ಸಂದರ್ಭದಲ್ಲಿ ಅವರಿಗೆ ಆಶ್ಚರ್ಯವಾಗುತ್ತದೆ. ನಾವು ರೈತರಿಗೆ ಇಷ್ಟೊಂದು benefits ಕೊಡುತ್ತಿದ್ದೆವಾ? ಇಷ್ಟೊಂದು ಸಬ್ಸಿಡಿ ಇದೆಯಾ? ರೈತನಿಗೆ ಇಷ್ಟು ಉತ್ತೇಜನಕಾರಿ ಪ್ರೋತ್ಸಾಹದಾಯಕವಾದಂಥ ಕಾರ್ಯಕ್ರಮಗಳು ಭಾರತ ದೇಶದಲ್ಲಿ ಇದೆಯಾ ಎಂದು ಅಲ್ಲಿ ಅವರು ಆಶ್ಚರ್ಯ ಪಡುತ್ತಾರೆ. ಆದರೆ ಅದರ ಟಿಜಣ ಡಿಜಿಣಟಣ ಫಲಿತಾಂಶವನ್ನು ನೋಡಿದಾಗ ನಮಗೆ ಇಲ್ಲಿ ಅರ್ಥವಾಗುತ್ತಿದೆ. ಇದು ಯಾವ ರೀತಿಯಾಗುತ್ತಿದೆಯೆಂಬುದು ನಮಗೆ ಗೊತ್ತಿದೆ. ಹಾಗಾಗಿ ಇದು ನಮ್ಮ ನಿರೀಕ್ಷೆಗೆ ತಕ್ಕಂತೆ ಆಗುತ್ತಿಲ್ಲವೆಂಬ ಕೊರಗು ಇದೆ. ಇವತ್ತು ದುರುಪಯೋಗ ಎಷ್ಟರ ಮಟ್ಟಿಗೆ ಆಗುತ್ತಿದೆಯೆಂಬುದು ನಮಗೆಲ್ಲರಿಗೂ ಗೊತ್ತಿದೆ. ನಾವು ನಿರೀಕ್ಷಿತ ಮಟ್ಟದಲ್ಲಿ ಇದನ್ನು ಸಾಧಿಸುವುದಕ್ಕೆ ಆಗಿಲ್ಲವೆಂಬುದನ್ನು ನಾನು ಈ ಸಂದರ್ಭದಲ್ಲಿ ತಿಳಿಸುತ್ತೇನೆ. ನಾನು ಕೊನೆಯ ದಿವಸದಂದು ಮಾತನಾಡುವಂಥ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಯವರು ಚೈನಾ ದೇಶಕ್ಕೆ ಭೇಟಿ ಕೊಟ್ಟಿರುವಂಥಾದ್ದು. ನಿಜ, ಅವರಿಗೆ ಕೇಂದ್ರ ಸರ್ಕಾರ ನಮ್ಮ Federal Systemನಲ್ಲಿ ಪ್ರತಿಯೊಂದು ರಾಜ್ಯದ ಮುಖ್ಯಮಂತ್ರಿಗಳು ಚೈನಾ ದೇಶಕ್ಕೆ ಭೇಟಿ ಕೊಡಬೇಕು ಎನ್ನುವಂಥದ್ದು. ನಮ್ಮ ಮತ್ತು ಚೈನಾ ದೇಶದ ಹೋಲಿಕೆಗಳು

ಇರುವಂಥದ್ದು. ಅಲ್ಲಿಗೆ ಅವರು ಭೇಟಿ ಕೊಡಬೇಕು ಎಂದು. ಇಲ್ಲವೆಂದರೆ ಬಿ.ಜೆ.ಪಿ.ಯ ಮುಖಂಡರು ಸಾಮಾನ್ಯವಾಗಿ ರಷ್ಯಾ ಮತ್ತು ಚೈನಾ ದೇಶಕ್ಕೆ ಹೋಗುವಂಥಾದ್ದು ಅಲ್ಲ. ಇದನ್ನು ತಾತ್ವಿಕ ಮತ್ತು ಸೈದ್ಧಾಂತಿಕವಾದಂಥ ಹಿನ್ನೆಲೆಯಲ್ಲಿ ನೋಡಿದಾಗ ಇದು ಬಹಳ ಕಡಿಮೆ. ಅದು ರಾಷ್ಟ್ರ ಮಟ್ಟದ ಬಿ.ಜೆ.ಪಿ.ಯ ನಾಯಕರಿರಬಹುದು, ರಾಜ್ಯ ಮಟ್ಟದ ನಾಯಕರಿರಬಹುದು, ಸಾಮಾನ್ಯವಾಗಿ ನಿಮ್ಮ ಸ್ವಂತಿಕೆಯಲ್ಲಿ ಯೋಚನೆ ಮಾಡಿ ರಷ್ಯಾ ಮತ್ತು ಚೈನಾ ದೇಶಕ್ಕೆ ತಾತ್ವಿಕವಾಗಿ ನಿಮಗೆ ಆಡಳಿತ ವ್ಯವಸ್ಥೆಯ ಬಗ್ಗೆ ಬಹಳ ವಿರೋಧ ಇರುವಂಥದ್ದು. ಆದರೂ ಕೂಡ ನೀವು ಅಲ್ಲಿಗೆ ಹೋಗಿ ಬಂದ ಮೇಲೆ ಅಲ್ಲಿನ ಪ್ರಗತಿಯ ಬಗ್ಗೆ, ಅಲ್ಲಿ ಆಗಿರುವಂಥ ಬೆಳವಣಿಗೆಯ ಬಗ್ಗೆ ಜಗತ್ತೇ ಅಚ್ಚರಿ ಪಡುವಂಥ ರೀತಿಯಲ್ಲಿ ಸಾಧನೆ ಮಾಡಿದಾಗಲೂ ಕೂಡ ತಾವು ಮಾತನಾಡುವುದಿಲ್ಲ. ಆದರೆ ಮಾನ್ಯ ಯಡಿಯೂರಪ್ಪನವರು ಕೇಂದ್ರ ಸರ್ಕಾರದ ಅವಕಾಶವನ್ನು ಬಳಸಿಕೊಂಡು ಹೋಗಿದ್ದಾರೆ. ನಾನು ಅದನ್ನು ಸುದ್ದಿ ಮಾಧ್ಯಮದಲ್ಲಿ ನೋಡಿದ್ದೇನೆ. ಆದರೆ ಅವರು ಮಾತನಾಡುವಾಗ ಹೇಳಿರುವಂಥಾದ್ದು, ಬರೀ ಬಂಡವಾಳ ಹೂಡಿಕೆದಾರರ ಜೊತೆಗೆ ಪ್ರಸ್ತಾಪ ಮಾಡಿದ್ದೇನೆ, ನಮ್ಮಲ್ಲಿಗೆ ಬಂಡವಾಳವನ್ನು ಯಾವ ರೀತಿಯಲ್ಲಿ ತರಬೇಕು, ನಮಗೆ ಬಂಡವಾಳದ ಕೊರತೆ ಇದೆ ಎನ್ನುವಂಥ ಮಾತುಗಳನ್ನು ಆಡಿದರು. ಆದರೆ ಅದರ ಜೊತೆ ಜೊತೆಯಲ್ಲಿ ಅವರು ರೈತರ ಪರವಾಗಿ ಹೋರಾಟ ಮಾಡಿಕೊಂಡು ಬಂದಂಥವರು, ಅದು ತಮಗೆಲ್ಲರಿಗೂ ಗೊತ್ತಿರಬಹುದು. ಅಂದಿನ ಸರ್ಕಾರ ನಡೆಸಿದಂಥ ಕಾಲದಲ್ಲಿ 20 ಅಂಶಗಳ ಕಾರ್ಯಕ್ರಮದ ದುರುಪಯೋಗವಾಗಿದೆ ಎಂದು ಹೋರಾಟ ಮಾಡಿ ಶಿಕಾರಿಪುರದಿಂದ ಶಾಸಕರಾಗಿರುವಂಥವರು. ಅವರು ಶಾಸಕರಾಗಿದ್ದಾರೆ, ವಿರೋಧಪಕ್ಷದ ನಾಯಕರಾಗಿದ್ದಾರೆ, ಉಪ ಮುಖ್ಯಮಂತ್ರಿಗಳಾಗಿ, ಹಣಕಾಸಿನ ಸಚಿವರಾಗಿ ಮತ್ತೆ ದಕ್ಷಿಣ ಭಾರತದ ಹೆಬ್ಬಾಗಿಲನ್ನು ಮಾಡಿ ಇವತ್ತು ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳೂ ಕೂಡ ಆಗಿದ್ದಾರೆ. ಒಂದು ರಾಷ್ಟ್ರೀಯ ಪಕ್ಷದ ಅಧ್ಯಕ್ಷರನ್ನಾಗಿ ಕೂಡ ಮಾಡಿದ್ದರು. ಅವರು ರೈತರ ಹಿನ್ನೆಲೆಯಲ್ಲಿ ಹೋರಾಟವನ್ನು ಮಾಡಿಕೊಂಡು ಬಂದಿರುವವರು. ನಾನು ಮಾಧ್ಯಮದಲ್ಲಿ ಮಾತನಾಡಿರುವುದನ್ನೂ ಸಹ ನೋಡಿದೆ. ಅಲ್ಲಿನ ಆಡಳಿತ ವ್ಯವಸ್ಥೆ ಬಗ್ಗೆ ಕೂಡ ಚರ್ಚೆ ಮಾಡಿದ್ದಾರೆ. Agriculture experts ಯಾರಿದ್ದಾರೆ ಅವರ ಜೊತೆಯಲ್ಲೂ ಸಹ ಚರ್ಚೆ ಮಾಡಿದ್ದಾರೆ. ನಮಗೂ ಅವರಿಗೂ similarities

ಇದೆ. ನಮಗಿಂತ ಜನಸಂಖ್ಯೆಯಲ್ಲಿ ಅವರು ಸ್ವಲ್ಪ ಹೆಚ್ಚು ಇರಬಹುದು. ಆದರೆ, ಅಲ್ಲಿರತಕ್ಕಂಥದ್ದು ನಮಗಿಂತಲೂ cultivation land ತುಂಬ ಕಡಿಮೆ ಇರುವಂಥದ್ದು. ಅವರು ಉತ್ಪಾದನೆಯಲ್ಲಿ all time record production ಆಗುತ್ತದೆ. all time record procurement ಮಾಡುತ್ತಾರೆ. ಅವರು ದಾಖಲೆಯಾದಂಥ ಉತ್ಪಾದನೆ ಮತ್ತೆ ಅವರಲ್ಲಿ ದಾಸ್ತಾನನ್ನು ಇಟ್ಟುಕೊಂಡಿರುವಂಥ ದೇಶವಾಗಿದೆ. ರೈತರು ಅಲ್ಲಿ ದೊಡ್ಡ ಪ್ರಗತಿಯನ್ನು ಸಾಧಿಸಿರುವಂಥವರು. Cultivation ಅಲ್ಲಿ ನಮಗಿಂತ ತುಂಬಾ ಕಡಿಮೆ ಇರುವಂಥವರು. ನಾನು ಆಹಾರ ಸಚಿವನಾಗಿ comparative studies ಅನ್ನು ಕೂಡ ಮಾಡಿಸಿದ್ದೇನೆ. ಹಾಗಾಗಿ ಅದರ ಬಗ್ಗೆ ಗಮನ ಸೆಳೆದಿರುವಂಥಾದ್ದನ್ನು ನೋಡಿದ್ದಾರೆ. ಅಲ್ಲಿ ಯಾವ ರೀತಿಯಾಗಿ ಚರ್ಚೆಯನ್ನು ಮಾಡಿ ಅವರ ಜೊತೆಯಲ್ಲಿ ವಿಷಯಗಳನ್ನೂ ಕೂಡ ಪ್ರಸ್ತಾಪ ಮಾಡಿದ್ದಾರೆ. ರೈತರ ಜೊತೆಗೂ interaction ಮಾಡಿರುವಂಥದ್ದನ್ನು ನೋಡಿದೆ, ಅವರು ರೈತರ ಜೊತೆಗೂ ಕೂಡ ಹೋಗಿ ಮಾತನಾಡಿದ್ದಾರೆ. ಅವರು ಯಾವ ರೀತಿ ಶ್ರಮ ಪಡುತ್ತಾರೆ, ಅವರ ಕೃಷಿಯಲ್ಲಿ ಯಾವ ರೀತಿಯಾಗಿ ಬೆಳವಣಿಗೆಯಾಗಿದೆ, ಅವರು ಯಾವ ರೀತಿಯಾಗಿ ಬೆಳೆಯನ್ನು ಹೆಚ್ಚು ಹೆಚ್ಚು ಬೆಳೆಯುವುದಕ್ಕೆ ಕಾರಣವಾಗಿದೆ ಎಂಬುದನ್ನು ನೋಡಿದ್ದಾರೆ. ನಮ್ಮಲ್ಲಿ cropping pattern ಅಥವಾ climatic zones ಇವೆಲ್ಲ ನಮ್ಮಲ್ಲಿ ಇಲ್ಲ. ಆದರೂ ಕೂಡ ಅದನ್ನೆಲ್ಲ ನೋಡಿ ಅಧ್ಯಯನ ಮಾಡಿ ತಿಳಿದುಕೊಂಡಿದ್ದಾರೆ. ನಮಗೆ ಚೈನಾ ಎಂದ ತಕ್ಷಣ ಬಾಯಿಯಲ್ಲಿ ನೀರೂರುತ್ತದೆ. ನಾವೂ ಏಕೆ ಹಾಗೆ ಆಗಬಾರದೆಂದು ಕೂಡ ಯೋಚನೆ ಮಾಡುತ್ತಿರುತ್ತೇವೆ. ನಾನು ಬಂಡವಾಳದ ಬಗ್ಗೆ ಮಾತನಾಡುವುದಕ್ಕೆ ಕಷ್ಟ ಇದೆ, ಏಕೆಂದರೆ ನನ್ನ ಕ್ಷೇತ್ರದಲ್ಲಿ ಒಬ್ಬ ಕೈಗಾರಿಕೋದ್ಯಮಿ ಚೈನಾಕ್ಕೆ ಹೋಗಿದ್ದರು. ಅವರು ಅಲ್ಲಿಗೆ ಹೋಗಿ ಬಂದ ತಕ್ಷಣ ಬಾಯಿ ಮೇಲೆ ಬೆರಳನ್ನಿಟ್ಟುಕೊಂಡರು. ಅಲ್ಲಿ ಯಾರಾದರೂ ಒಬ್ಬರು ಬಂಡವಾಳವನ್ನು ಹಾಕಲು ಹೋಗುತ್ತಾರೆಂದರೆ ಅವರು ಯಾವ ರೀತಿ ರತ್ನಗಂಬಳಿಯನ್ನು ಹಾಸುತ್ತಾರೆಂದರೆ ಅಲ್ಲಿ ಅವರಿಗೆ ಎಷ್ಟು ಉತ್ತೇಜನ, ಪ್ರೋತ್ಸಾಹ ಅಲ್ಲಿ ಸಿಗುತ್ತದೆ ಎಂಬ ಬಗ್ಗೆ ಆ ಕೈಗಾರಿಕೋದ್ಯಮಿ ಬಹಳ ಚೆನ್ನಾಗಿ ಹೇಳುತ್ತಿದ್ದರು. ನಮ್ಮಲ್ಲಿ ಅದು ಎಲ್ಲಿದೆ? Red carpet ಹಾಸಿದರೆ, ಇಲ್ಲಿ redtapism ಇರತಕ್ಕಂಥದ್ದು. ಇಲ್ಲಿ ಬಹಳ ಕಷ್ಟ. ಇಲ್ಲಿ ಯಾರಾದರೂ ಬಂಡವಾಳ ಹೂಡಲು ಬರುತ್ತಾರೆಂದರೆ ಅವರಿಗೆ ಆಗುವಂಥ ಹಿಂಸೆ

ಏನೆಂದರೆ ಅವರು ಇಲ್ಲಿ ಬಿಟ್ಟು ಹೊರಟು ಹೋದರೆ ಸಾಕು ಎನ್ನುವಂಥ ರೀತಿಯಲ್ಲಿ ನಾವು ಮಾಡುತ್ತಿದ್ದೇವೆ. ಅದು ಇತಿಹಾಸಗಳು ಇವೆ. ಇಲ್ಲಿಗೆ ಯಾವ ರೀತಿಯಾಗಿ ಬಂಡವಾಳ ಹೂಡಿಕೆದಾರರು ಬರುತ್ತಾರೋ? ಬಹಳ ಸಂತೋಷ, ನಾನು ಅದರ ಬಗ್ಗೆ ಈಗ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ಒಂದು ಮಾತನ್ನು ನಾನು ಈ ಸಂದರ್ಭದಲ್ಲಿ ಚೈನಾ ಮತ್ತು ಭಾರತ ದೇಶದ ಬಗ್ಗೆ ತಿಳಿಸಬೇಕು. ನನ್ನ ಮನಸ್ಸಿನಲ್ಲಿರುವಂಥ ವಿಷಯವನ್ನು ಈ ಸದನದ ಗಮನ ಸೆಳೆಯಬೇಕೆಂದು ಇದೆ. ಈ ಎರಡೂ ರಾಷ್ಟ್ರಗಳ similarities ಇದೆ ಎನ್ನುವಂಥದ್ದು ಇತಿಹಾಸವನ್ನು ಕೆದಕಿದಾಗ ಅಲ್ಲೂ ಕೂಡ ಇದೆ. ನಮ್ಮ ದೇಶ 1947ರಲ್ಲಿ ಸ್ವಾತಂತ್ರ್ಯವಾಯಿತು. ಸ್ವಾತಂತ್ರ್ಯದ ಮಂಚೂಣಿಯಲ್ಲಿ ಮಹಾತ್ಮಾ ಗಾಂಧಿಯವರು ಇದ್ದರು. ಅದೇ ರೀತಿ ಚೈನಾ ದೇಶದಲ್ಲಿ ವಿಮೋಚನೆ ಆಗಬೇಕಾದರೆ, ನಮಗೆ ಸ್ವಾತಂತ್ರ ಸಿಕ್ಕಿ ಎರಡು ವರ್ಷಗಳಾದ ಮೇಲೆ 1949ನೇ ಇಸವಿಯಲ್ಲಿ ಅಲ್ಲಿ ಸ್ವಾತಂತ್ರ್ಯ ಸಿಕ್ಕಿದ್ದು. ಅಲ್ಲಿ ಮಾವೋತ್ಸತುಂಗ್‌ರ long march, ಅವರೂ ಕೂಡ ಹೋರಾಟ ಮಾಡಿದವರು. ಇಲ್ಲಿ ಗಾಂಧೀಜಿಯವರು ಅಲ್ಲಿ ಮಾವೋತ್ಸತುಂಗ್. ಇಬ್ಬರೂ ಕೂಡ contemporaries. ನಾವು ಇದನ್ನು ಅರ್ಥ ಮಾಡಿಕೊಳ್ಳಬೇಕು. ಅವರಿಬ್ಬರೂ ಸಮಕಾಲೀನರಾಗಿರುವಂಥವರು. ಇಲ್ಲಿ ಗಾಂಧೀಜಿಯವರು ಬ್ರಿಟೀಷ್ imperialism ಬಗ್ಗೆ, ಬ್ರಿಟೀಷ್ ಸಾಮ್ರಾಜ್ಯಶಾಹಿ ವಿರುದ್ಧ ಹೋರಾಟ ಮಾಡಿ 1947ರಲ್ಲಿ Quit India Movement ಮುಖಾಂತರ ಒಂದು shape ತೆಗೆದುಕೊಂಡಿರುವಂಥದ್ದು. Sepoy Mutiny 1857ರಲ್ಲಾದರೂ ಕೂಡ ಗಾಂಧೀಜಿಯವರ ಮುಖಂಡತ್ವದಲ್ಲಿ ಹೋರಾಟ ಮಾಡಿ ಅಹಿಂಸಾತ್ಮಕ ಚಳುವಳಿಯ ಮೂಲಕ ನಮಗೆ ಸ್ವಾತಂತ್ರ ಸಿಕ್ಕಿದ್ದು. ಅದೇ ರೀತಿ 1935ನೇ ಇಸವಿಯಲ್ಲಿ ಲಾಂಗ್‌ಮೋರ್‌ನಲ್ಲಿ landless peasants ಮತ್ತು ದುಡಿಯತಕ್ಕಂಥ ಕಾರ್ಮಿಕರ ಪರವಾಗಿ ಮಾವೋ 14 ವರ್ಷಗಳ ಕಾಲ ಹೋರಾಟ ಮಾಡುತ್ತಾರೆ. ಅಲ್ಲೂ ಕೂಡ Japanese imperialism ಇರುತ್ತದೆ. ಆಂತರಿಕವಾದಂಥ feudal lordsಗಳು ಕೂಡ ಅಲ್ಲಿರುತ್ತಾರೆ. ಅವರ ವಿರುದ್ಧ ಸುಮಾರು 14 ವರ್ಷಗಳ ಕಾಲ ಸತತವಾಗಿ ಹೋರಾಟ ಮಾವೋರವರು ಮಾಡಿರುವಂಥದ್ದು. ಇಬ್ಬರೂ contemporaries. ನಮಗೆ 1947ರಲ್ಲಿ ಗಾಂಧೀಜಿಯವರ ಮುಖಾಂತರ ವಿಮೋಚನೆಯಾಗುತ್ತದೆ. ನಾವು

1949ರಲ್ಲಿ ಚೈನಾ ದೇಶದ Japanese imperialism ನಿಂದ ವಿಮೋಚನೆಯಾಗುವಂಥದ್ದನ್ನು ಕಾಣುತ್ತಿದ್ದೇವೆ. ಇವರಿಬ್ಬರೂ ಸಮಕಾಲೀನರಾಗಿದ್ದಂಥವರು. ಇಲ್ಲಿ ನಾವು ಗಾಂಧೀಜಿಯವರು ಮತ್ತು ಮಾವೋರವರ ಬಗ್ಗೆ ಯೋಚನೆ ಮಾಡಿದಾಗ ಮಾವೋರವರು ಒಂದು ಕಡೆ ಯೋಚನೆ ಮಾಡುತ್ತಾರೆ, ನಾವು ಇಷ್ಟು long march ಅನ್ನು ಮಾಡಿ 14 ವರ್ಷಗಳ ಕಾಲ ಹೋರಾಟ ಮಾಡಿ ಇವತ್ತು ದುಡಿಯತಕ್ಕಂಥ ವರ್ಗದವರ ಕೈಗೆ ಅಧಿಕಾರವನ್ನು ಈಗ ನಾನು ಕೊಟ್ಟಿದ್ದೇನೆ. ಈಗ ಈ ಚೈನಾ ದೇಶವನ್ನು ಹೇಗೆ ಕಟ್ಟಬೇಕೆನ್ನುವಂಥದ್ದನ್ನು ಅವರಿಗೆ ಬಿಟ್ಟಿದ್ದೇನೆ. ಅವರಿಗೆ ಅರ್ಥ ಮಾಡಿಸಿದ್ದೇನೆಂದು ಯೋಚನೆ ಮಾಡುತ್ತಾರೆ. ಆದರೆ ಅವರು ರಾತ್ರಿ ಮಲಗಿದಾಗ ಮಾವೋರವರಿಗೆ ನಿದ್ರೆ ಬರುವುದಿಲ್ಲ, ಅವರು ಮತ್ತೆ ಯೋಚನೆ ಮಾಡುತ್ತಾರೆ. ನಾನು 14 ವರ್ಷಗಳ ಕಾಲ ಶ್ರಮ ಪಟ್ಟು ಈ ರೀತಿಯಾಗಿ ಸಂಘಟನೆಯನ್ನು ಮಾಡಿ ಭೂ ರಹಿತರ ಮತ್ತು ಕಾರ್ಮಿಕರ ಪರ ಸಂಘಟನೆ ಮಾಡಿ ಆ ನೋವನ್ನು ಅನುಭವಿಸಿ ಮತ್ತೆ ನನ್ನ ಕನಸಿನ ಚೈನಾ ಹೇಗಿದೆ, ಮುಂದೆ ಬರುವವರಿಗೆ ನಾನು ಯಾರಿಗೆ ಅಧಿಕಾರವನ್ನು ಕೊಡುತ್ತೇನೋ ಅವರಿಗೆ ಆ ರೀತಿಯ ಕನಸುಗಳು ಇದೆಯಾ? ನನಸು ಮಾಡುವಂಥ ದಿಕ್ಕಿನಲ್ಲಿ ಅವರ ಪ್ರಯತ್ನಗಳು ಆಗುತ್ತದೆಯೇ? ಆ ರೀತಿಯ ಕಾರ್ಯಕ್ರಮಗಳು ಆಲೋಚನೆಗಳು ಆಗುತ್ತದೆಯೇ? ಎಂಬ ಬಗ್ಗೆ ಮಾವೋರವರು ರಾತ್ರಿಯೆಲ್ಲಾ ಯೋಚನೆ ಮಾಡುತ್ತಾರೆ. ಅದು ಸಾಧ್ಯವಿಲ್ಲವೆಂದು ಗೊತ್ತಾಗುತ್ತದೆ. ಈಗ ಏನು second thought ಎಂದು ಹೇಳುತ್ತೇವೆ. ನಾವು ಚರಿತ್ರೆಯನ್ನು ನೋಡಿದಾಗ ಎರಡು ಯೋಚನೆಗಳನ್ನು ಕೊಡುತ್ತಾರೆ. ಇಲ್ಲ, ಇದು ಸಾಧ್ಯವಿಲ್ಲ. ಆ ನೋವು ನನಗೆ ಅರ್ಥವಾಗಿದೆ. ನಾನು ಯಾವ ರೀತಿಯಾಗಿ long march ಮಾಡಿದೆ ಎಂಬುದನ್ನು ಯೋಚನೆ ಮಾಡುತ್ತಾರೆ. ನಾನು ಚೈನಾ ದೇಶದ ಬುನಾದಿಯಾಗಬೇಕೆಂದು ಯೋಚನೆ ಮಾಡುತ್ತಾರೆ. ಹಾಗಾಗಿ ಮಾವೋ built China ಎಂಬುದನ್ನು ನಾವು ಅರ್ಥಮಾಡಿಕೊಳ್ಳಬೇಕಾಗುತ್ತದೆ. ಅದಕ್ಕೆ ಮಾವೋ ಅದು ಅಲುಗಾಡದಂತೆ foundation ಹಾಕಿರುವುದರಿಂದ ಇಂದು ಚೈನಾ ದೇಶ 1949ರಿಂದ ಇವತ್ತಿನವರೆಗೂ, ಇಡೀ ಜಗತ್ತೇ ಆಶ್ಚರ್ಯ ಪಡುವಂಥ ರೀತಿಯಲ್ಲಿ ಬೆಳವಣಿಗೆ ಯಾಗಿದೆ. ನಮ್ಮಲ್ಲಿ ಆಗಿರುವಂಥದ್ದು ಏನು? 1947ರಲ್ಲಿ ನಮಗೆ ಸ್ವತಂತ್ರ್ಯ ಸಿಕ್ಕಾಗ ಗಾಂಧೀಜಿಯವರು ದೇಶವನ್ನು ಕಟ್ಟಬೇಕು ಎನ್ನುವಂಥದ್ದು

ಇತ್ತು. ಅವರ ಗ್ರಾಮೀಣ ಸ್ವರಾಜ್ಯದ ಕಲ್ಪನೆ ಜಗತ್ತಿನಲ್ಲಿ ಯಾರೂ ಯೋಚನೆ ಮಾಡಲಿಲ್ಲ. ಅವರ ಅಂತ್ಯೋದಯ ಮತ್ತು ಸರ್ವೋದಯದ ಆಲೋಚನೆಗಳು, ಗುಡಿ ಕೈಗಾರಿಕೆಗಳು, ಇಲ್ಲಿ ಅಂತ್ಯೋದಯ ಎಂದರೆ ಸಮಾಜದ ಕೆಳ ಸ್ಥರದಲ್ಲಿ ಭಂಗಿ ಕಾಲೋನಿಗೆ ಹೋಗಿ ಬೆಳಗ್ಗೆ ಚಹಾವನ್ನು ಕುಡಿದು ಆನಂತರ ಸರ್ವೋದಯದ ಬಗ್ಗೆ ಯೋಚನೆ ಮಾಡತಕ್ಕಂಥ ರೀತಿಯಲ್ಲಿ ಕಾರ್ಯಕ್ರಮಗಳು, ಚಿಂತನೆಗಳು ತಮ್ಮ ಜೀವನದಲ್ಲಿ ಅಳವಡಿಸಿಕೊಂಡಿದ್ದಂಥ ಗಾಂಧೀಜಿಯವರು ಹೆಚ್ಚು ದಿವಸ ಬದುಕುವುದಕ್ಕೆ ಆಗಲಿಲ್ಲ. ಸ್ವಾತಂತ್ರ ಬಂದ ಆರು ತಿಂಗಳಲ್ಲೇ shot deathಗೆ ಬಲಿಯಾಗುವಂಥ ಸಂದರ್ಭ, ಒಂದು ದುರಂತ ಈ ದೇಶಕ್ಕೆ ಆಗಿಹೋಯಿತು. ಅಲ್ಲಿ ಮಾವೋ ಬದುಕಿ ಚೈನಾ ದೇಶವನ್ನು ಕಟ್ಟಿದರು. ಇಲ್ಲಿ ನಮ್ಮ ಗಾಂಧೀಜಿಯವರ ಕನಸುಗಳ ಬಗ್ಗೆ ಆಗಲಿಲ್ಲ. ಇವತ್ತು ಅದಕ್ಕೆ ಸರಿಯಾದಂಥ foundation ಸಿಕ್ಕಿದ್ದರೆ ನಾವು ಭಾರತವನ್ನು ಆ ರೀತಿ ಕಟ್ಟಬಹುದಾಗಿತ್ತು. ನಾವು ಇದನ್ನು ನೋಡಬೇಕಾಗಿದೆ. ಅಲ್ಲಿ ಮಾವೋ ಮತ್ತು ಗಾಂಧೀಜಿಯವರಿಗೆ ಇರುವಂಥ ವ್ಯತ್ಯಾಸಗಳನ್ನು ನೋಡಿದಂಥ ಸಂದರ್ಭದಲ್ಲಿ ನಮ್ಮ ದುರಂತ ಇಲ್ಲಿ ಗಾಂಧೀಜಿಯನ್ನು ನಾವು ಕಳೆದುಕೊಳ್ಳುತ್ತೇವೆ. ಇವತ್ತಿಗೂ ಕೂಡ ಗಾಂಧೀಜಿಯವರ ಚಿಂತನೆಗಳನ್ನು ಅನುಷ್ಠಾನಕ್ಕೆ ತರುವಂಥ ರೀತಿಯಲ್ಲಿ ನಾವು ಅಧಿಕಾರವನ್ನು ಎಷ್ಟೇ ವಿಕೇಂದ್ರೀಕರಣ ಮಾಡಿ ಗಾಂಧೀಜಿಯವರ ಕನಸಿನಲ್ಲಿದ್ದಂಥ ರೀತಿಯಲ್ಲಿ ನಾವು ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ, ಇವೆಲ್ಲವೂ ಕೂಡ Local Governments ಎಂದು ಹೇಳುತ್ತೇವೆ. ನಾವು ಇಲ್ಲಿ ಸ್ಥಳೀಯ ಸರ್ಕಾರಗಳು ಅದರ ಮುಖಾಂತರ ಆಡಳಿತ ಜೀವನ ಉತ್ತಮ ಆಗಬೇಕೆನ್ನುವ ರೀತಿಯಲ್ಲಿ ಏನು ಪ್ರಯತ್ನವನ್ನು ಮಾಡುತ್ತಿದ್ದಾರೆ. ಅದಕ್ಕೆ ಇನ್ನೂ ಸರಿಯಾದಂಥ ಬುನಾದಿ ಸಿಗದೇ ಇವತ್ತು ನಾವು ಅದರ ಬಗ್ಗೆ ಇನ್ನೂ ತಡವರಿಸುವಂಥಾದನ್ನು ಕೂಡ ತಾವು ನೋಡುತ್ತಿದ್ದೇವೆ. ಇವತ್ತು ಚೈನಾ ದೇಶಕ್ಕೆ ಸಿಕ್ಕಿರುವಂಥ ಬುನಾದಿ ಮೇಲೆ ಇವತ್ತು ಇಡೀ ಜಗತ್ತಿನಲ್ಲಿ ಯಾರೂ ಅಮೇರಿಕಾಗೆ ಅಥವಾ ಫ್ರಾನ್ಸ್‌ಗೆ ಹೋಗಬೇಕೆಂದು ಇಲ್ಲ. ಇವತ್ತು ಯಾರೂ America ಅಥವಾ France ಗಳಿಗೆ ಹೋಗಬೇಕಾಗಿಲ್ಲ. ಎಲ್ಲಿ ಹೋದರೂ ಕೂಡ ಬೀಜಿಂಗ್, ಶಾಂಘೈ ಸಿಟಿಗಳಿಗೆ ಹೋಗಿ ನೋಡಿಕೊಂಡು ಬನ್ನಿ ಎಂದು ಹೇಳುತ್ತಾರೆ. Globalization ಹಿನ್ನೆಲೆಯಲ್ಲಿ Parliamentನಲ್ಲಿ

ಅದರ ಬಗ್ಗೆ ಚರ್ಚೆಯಾದಂಥ ಸಂದರ್ಭದಲ್ಲಿ, ನಾವು W.T.O. agreementಗೆ ಹೋದಂಥ ಸಂದರ್ಭದಲ್ಲಿ ಚೈನಾ ದೇಶ ಅದಕ್ಕೆ ಬರಲಿಲ್ಲ. ವಿಶ್ವ ವಾಣಿಜ್ಯ ಒಪ್ಪಂದದಿಂದ ನಾವು ಏನಾಗುತ್ತೇವೋ ಎಂದು ನಾವೆಲ್ಲ ನಡುಗಿಹೋಗಿದ್ದೇವೆ, ತತ್ತರಿಸಿ ಹೋಗಿರುವುದನ್ನು ನಾವು ಕಾಣುತ್ತಿದೇವೆ. ಅದಕ್ಕೆ ಕಾರಣ ಕೂಡ ಇದೆ. ಚೈನಾ ಮತ್ತು ಭಾರತ ದೇಶವನ್ನು ನಾನು ಹೋಲಿಸಿ ನೋಡುತ್ತಿದ್ದೆ. ನಾನು ಚೈನಾ ದೇಶಕ್ಕೆ ಹೋಗಲು ಸಾಧ್ಯವಾಗಲಿಲ್ಲ. ಆದರೆ ನಾನು ಕೇಂದ್ರದಲ್ಲಿ Consumer Affairs Minister ಆಗಿದ್ದಾಗ, Public Distribution System Minister ಆಗಿದ್ದಾಗ ಅಮೇರಿಕಕ್ಕೆ ಹೋದಂಥ ಸಂದರ್ಭದಲ್ಲಿ Chainese Departmental Storesಗೆ ಭೇಟಿ ಕೊಟ್ಟಿದ್ದೆ. ನಾನು ಅಲ್ಲಿ ನೋಡಿದ ಪ್ರಕಾರ ನನಗೆ ಆಶ್ಚರ್ಯವಾದದ್ದು ಏನೆಂದರೆ, ಅಲ್ಲಿ ಒಂದು ಡಾಲರ್‌ಗೆ ದಿನ ನಿತ್ಯ ಬಳಕೆಯ ವಸ್ತುಗಳು, cosmetics ಏನು ಬೇಕೋ ಅವು ಸಿಗುತ್ತವೆ. ಚೀನಾ ದೇಶದಲ್ಲಿ ಉತ್ಪಾದನೆಯಾದಂಥ ವಸ್ತುಗಳಿಗೆ ಅಮೇರಿಕಾ ದೇಶದ ಮಧ್ಯಮ ವರ್ಗದ ಜನ ಮುಗಿಬೀಳುತ್ತಾರೆ. ಇದು ಹೇಗೆ ಸಾಧ್ಯವಾಯಿತು? ವಿಶ್ವ ವಾಣಿಜ್ಯ ಒಪ್ಪಂದವೆಂದರೆ a free trade, ಮುಕ್ತವಾದಂಥ ವಾಣಿಜ್ಯ. ಅದರಲ್ಲಿ cost of production and quality ಇವರೆಡೂ ಮುಖ್ಯ. ಉತ್ಪಾದನಾ ವೆಚ್ಚ ಕಡಿಮೆ ಇರಬೇಕು ಮತ್ತು ಗುಣಮಟ್ಟ ಚೆನ್ನಾಗಿರಬೇಕು. ಚೈನಾ ದೇಶದ ಉತ್ಪನ್ನಗಳನ್ನು ಒಂದು ಡಾಲರ್‌ಗೆ ಕೊಡಬೇಕಾದರೆ ಅದರ ಉತ್ಪಾದನಾ ವೆಚ್ಚ ಮತ್ತು ಗುಣಮಟ್ಟವನ್ನು ಹೇಗೆ ಸರಿದೂಗಿಸಿದ್ದಾರೆ ಎಂದು ನನಗೆ ಆಶ್ಚರ್ಯವಾಯಿತು. ಅವರು ಅಮೇರಿಕಾ ದೇಶದಲ್ಲಿ ಕೂಡ ವ್ಯಾಪಾರದಲ್ಲಿ ಪೈಪೋಟಿಯನ್ನು ಮಾಡುತ್ತಿದ್ದಾರೆ. ಈಗ ಅವರು W.T.O. ವನ್ನು ಸವಾಲಾಗಿ ಸ್ವೀಕರಿಸಿ W.T.O. agreementಗೆ ಬಂದಿದ್ದಾರೆ. ನಮ್ಮ ದೇಶದಲ್ಲಿ ಇಷ್ಟೊಂದು ಜನಸಂಖ್ಯೆಯಿದ್ದು, ಮಾನವ ಸಂಪನ್ಮೂಲ ಇದ್ದು, ಇದು ಏಕೆ ಸಾಧ್ಯವಾಗಲಿಲ್ಲವೆಂದರೆ ನನಗನ್ನಿಸುತ್ತದೆ ಮತ್ತು ಚೈನಾ ದೇಶಕ್ಕೆ ಹೋಗಿ ಬಂದಿರುವವರಿಗೆ ಗೊತ್ತಾಗುತ್ತದೆ, ಅಲ್ಲಿರತಕ್ಕಂಥ 120–130 ಕೋಟಿ ಜನರಲ್ಲಿ ದುಡಿಯತಕ್ಕಂಥ ಇಲ್ಲ ಕೈಗಳಿಗೂ ಕೆಲಸವನ್ನು ಕೊಟ್ಟಿದ್ದಾರೆ. ಅಲ್ಲಿ ನಿರುದ್ಯೋಗದ ಸಮಸ್ಯೆ ಇಲ್ಲ, ಹಸಿವೆಯೂ ಇಲ್ಲ, ಹಸಿವೆಯಿಂದ ಸಾವೂ ಸಹ ಇಲ್ಲ. ಅಂದರೆ ಅಲ್ಲಿರತಕ್ಕಂಥ ಎಲ್ಲರನ್ನೂ ಉತ್ಪಾದನೆಯಲ್ಲಿ ತೊಡಗಿಸಿಕೊಳ್ಳತಕ್ಕಂಥ ಅವಕಾಶಗಳು ಇವೆ. ಮುಖ್ಯಮಂತ್ರಿಗಳು ಚೈನಾ ದೇಶದಲ್ಲಿ ಅದನ್ನೇನಾದರೂ ಸೂಕ್ಷ್ಮವಾಗಿ

ನೋಡಿದರೇ ಎಂದು ಕೇಳೋಣವೆಂದಿದ್ದೆ. ಆದರೆ ನಮ್ಮ ದೇಶದಲ್ಲಿ ಆ ರೀತಿ ಆಗಿಲ್ಲ. ಏಕೆ ಆಗಿಲ್ಲವೆಂದರೆ ಮತ್ತೆ ನಾವು ಯೋಚನೆ ಮಾಡಬೇಕಾಗಿದೆ. ಈ ದೇಶದಲ್ಲಿರತಕ್ಕಂಥ ಶೇ.30 ರಷ್ಟಿರುವ ಶೋಷಿತ ವರ್ಗಗಳವರು, ದಲಿತರು ಅಥವಾ ಅಸ್ಪೃಶ್ಯರು ಇನ್ನೂ ಕೂಲಿ ಮಾಡಿ ಬದುಕಬೇಕು, hand to mouth, ಇವತ್ತು ಅವರು ತಮ್ಮ ಶ್ರಮದಿಂದ ದುಡಿದು ಬದುಕಬೇಕು, ಯಾರೂ ಅವರನ್ನು ಹತ್ತಿರಕ್ಕೆ ಸೇರಿಸುವುದಿಲ್ಲ. ಅದಕ್ಕೇ ನಮಗೆ ಭಯ ಇರತಕ್ಕಂಥಾದ್ದು. ಈ ದೇಶದಲ್ಲಿರುವ ಶೋಷಿತರು ಅಸಹಾಯಕರಾಗಿದ್ದಾರೆ, ಆರ್ಥಿಕವಾಗಿ ಅಶಕ್ತರಾಗಿರುವ ವರ್ಗದವರಿಗೆ, ದುಡಿಮೆ ಮಾಡಿ ತಿನ್ನತಕ್ಕಂಥವರಿಗೆ ಈ ದೇಶದ ಉತ್ಪಾದನೆಯಲ್ಲಿ ಅವಕಾಶವನ್ನೇ ಕೊಟ್ಟಿಲ್ಲ. ಹೀಗಿರುವಾಗ ಇನ್ಯಾವಾಗ ನೀವು ವಿಶ್ವ ವಾಣಿಜ್ಯ ಒಪ್ಪಂದವನ್ನು ಸವಾಲಾಗಿ ಸ್ವೀಕರಿಸತಕ್ಕಂಥಾದ್ದು? ಇದು ಚೈನಾ ಮತ್ತು ನಮಗಿರತಕ್ಕಂಥ ವ್ಯತ್ಯಾಸ. ಇಲ್ಲಿ ಬರವಿದ್ದಾಗ ಮುಖ್ಯಮಂತ್ರಿಗಳು ಚೈನಾ ದೇಶಕ್ಕೆ ಹೋಗಿದ್ದರು. ಅಲ್ಲಿಗೆ ಹೋದಾಗ ಅವರು ನೋಡಬಹುದಾಗಿತ್ತು, ಇಲ್ಲಿ ಬರ ಬಂದರೆ, natural calamitites ಆದರೆ ಯಾವ ರೀತಿ ಎದುರಿಸುತ್ತೀರಿ, ಬರ ಇದ್ದರೆ ಯಾವ ರೀತಿ ಎದುರಿಸುತ್ತೀರಿ, ಅತಿವೃಷ್ಟಿಯಾದರೆ, ಪ್ರವಾಹ ಬಂದರೆ, ಮಳೆ ಹೆಚ್ಚಾದರೆ ಏನು ಮಾಡುತ್ತೀರಿ ಎನ್ನುವುದನ್ನು ಅವರು ತಿಳಿದುಕೊಂಡು ಬರಬಹುದಾಗಿತ್ತು. ಅವರು ಇಲ್ಲಿಗೆ ವಾಪಸ್ಸು ಬಂದ ಮೇಲೆ ಇಲ್ಲಿ ಆ ದೃಷ್ಟಿಯಲ್ಲಿ ಬೆಳಕನ್ನು ಚೆಲ್ಲುತ್ತಾರೆ ಎಂದು ಭಾವಿಸಿದ್ದೆ. ಆದರೆ ಅವರು ಬರೀ ಬಂಡವಾಳ ಹೂಡಿಕೆಯ ಮೇಲೆಯೇ ಗಮನ ಹರಿಸುತ್ತಿದ್ದಾರೆ. ಈ ಬಗ್ಗೆ ಅವರ ಗಮನವನ್ನು ಸೆಳೆಯೋಣವೆಂದು ಭಾವಿಸಿದ್ದೆ. ಅಲ್ಲಿಯ ಆಡಳಿತ ವ್ಯವಸ್ಥೆಯ ಬಗ್ಗೆ ಒಂದು ಉದಾಹರಣೆಯನ್ನು ಹೇಳಬೇಕೆಂದರೆ, ಚೈನಾ ದೇಶದಲ್ಲಿ ತುಂಬ ಮೆಕ್ಕೆಜೋಳವನ್ನು ಬೆಳೆಯುತ್ತಾರೆ. ಅಲ್ಲಿನ demandಗಿಂತ ಹೆಚ್ಚಿನ production ಆದರೆ ಬಹಳ ಕಷ್ಟವಾಗುತ್ತದೆ. ಅಂಥ ಪರಿಸ್ಥಿತಿಯಲ್ಲಿ ಏನು ಮಾಡಬೇಕು ಎಂಬ ಬಗ್ಗೆ ರೈತ ಕಂಗಾಲಾದಾಗ ಒಂದೇ ಒಂದು ಮಾತನ್ನು ಮಾವೋ ಹೇಳಿದರು. ಚೈನಾ ದೇಶದ ಜನರು ಬೆಳಗ್ಗೆ ಎದ್ದ ತಕ್ಷಣ ಮೆಕ್ಕೆ ಜೋಳದ ಗಂಜಿಯನ್ನು ಕುಡಿಯಬೇಕು ಎಂದು ಹೇಳಿದರು. ಇದರಿಂದ ದೇಶದಲ್ಲಿ ಬೆಳೆದಿರುವಂಥ ಮೆಕ್ಕೆ ಜೋಳ ಉಪಯೋಗಕ್ಕೂ ಬರುತ್ತದೆ ಮತ್ತು ಅವರು ಈ ಕಾರಣದಿಂದ ಇವತ್ತೂ ಆರೋಗ್ಯವಾಗಿದ್ದಾರೆ. ಅವರಲ್ಲಿ ಎಂಥ ಆಲೋಚನೆಗಳಿವೆ ಎನ್ನುವುದನ್ನು ನಾನು ಕೇಳಿದೆ. ಮಕ್ಕಳಿಗೆ ಅಲ್ಲಿ ಯಾವ ರೀತಿ ಆಹಾರ ಕೊಡುತ್ತಿದ್ದಾರೆ

ಎನ್ನುವುದನ್ನು ಮಾನ್ಯ ಮುಖ್ಯಮಂತ್ರಿಗಳೂ ಅಲ್ಲಿ ನೋಡಿದ್ದಾರೆ. ಖಿಜಟುಜಿಜಿ ತಿಂಡಿಇ ಬಗ್ಗೆ ನಾನು ಹೆಚ್ಚಿಗೆ ಮಾತನಾಡಲು ಹೋಗುವುದಿಲ್ಲ, ನಾವು ಏನು ಮಾಡಬೇಕು ಎನ್ನತಕ್ಕಂಥಾದ್ದನ್ನಷ್ಟೇ ಪ್ರಸ್ತಾಪ ಮಾಡುತ್ತೇನೆ. ಇವತ್ತಿಗೂ ಕೂಡ ಚೈನಾ ದೇಶದಲ್ಲಿ ಶಾಲೆಗೆ ಹೋಗತಕ್ಕಂಥ ಸಣ್ಣಸಣ್ಣ ಮಕ್ಕಳಿಗೆ ಕಡ್ಡಾಯವಾಗಿ ಅರ್ಧ ಲೀಟರ್ fruit juice ಕೊಡುತ್ತಾರೆ. ಇಲ್ಲಿ ಬರಪೀಡಿತ ಪ್ರದೇಶಗಳಲ್ಲಿರುವ ಮಕ್ಕಳು ತತ್ತರಿಸಿ ಹೋಗಿದ್ದಾರೆ. ಅವರಿಗೆ ನಾವು ಅಂಗನವಾಡಿಗಳಲ್ಲಿ, ಮಧ್ಯಾಹ್ನದ ಉಪಹಾರದ ವೇಳೆಯಲ್ಲಿ ಇಂಥಾದ್ದನ್ನೇದಾರೂ ಕೊಡುವ ಒಂದು ಆಲೋಚನೆಯನ್ನೇನಾದರೂ ಮಾಡಿದ್ದೇವೆಯೇ? ಹಾಲು ಜೊತೆಗೆ ಮೊಟ್ಟೆ ಕೊಡಬೇಕು ಎಂದರೆ ಆಗಲೇ ನೀವು ಶುರು ಮಾಡಿಬಿಡುತ್ತೀರಿ. ನೀವಂತೂ ಪಕ್ಕಾ orthodox ಗುಂಪಿಗೆ ಸೇರಿರತಕ್ಕಂಥವರು. ಮೊಟ್ಟೆ ಕೊಡಬೇಕು ಎಂದು ಹೇಳಿದರೆ, ಮೊದಲಲು ಅದನ್ನು ಬೇಡ ಎಂದು ಬಿಟ್ಟುಬಿಡುತ್ತೀರಿ. ಅದು ಪೌಷ್ಟಿಕಾಂಶ ಇರುವಂಥ ಆಹಾರ ಎನ್ನುವುದು ನಿಮ್ಮ ಕಲ್ಪನೆಗೂ ಬರುವಂಥಾದ್ದಲ್ಲ. ಅಲ್ಲಿಗೆ ನೀವು ಹೋಗಿ ಇದನ್ನೆಲ್ಲ ನೋಡಿದಿರಾ, ಇಂಥ ವಿಷಯಗಳು ನಿಮ್ಮ ತಲೆಗೆ ಹೋಯಿತೇ, ನಿಮ್ಮ ಆಡಳಿತದಲ್ಲಿ ಅಂಥಾದ್ದನ್ನೇನಾದರೂ ತರುವ ಯೋಚನೆ ಮಾಡಿದ್ದೀರಾ ಯಡಿಯೂರಪ್ಪನವರೇ ಎಂದು ನಾನು ಕೇಳೋಣವೆಂದಿದ್ದೆ. ಆದರೆ ಅವರು ಬರೀ ಬಂಡವಾಳ ಹೂಡಿಕೆಗಳ ಬಗ್ಗೆ ಯೋಚನೆಯನ್ನು ಮಾಡುತ್ತಿದ್ದಾರೆ. Relief works ವಿಷಯ ಬಂದಾಗ ನಾನೊಂದು ಸ್ವಲ್ಪ ಮಾತನಾಡುತ್ತೇನೆ. ಈಗ ತಮಗೆ ಗೊತ್ತಿರುವ ಹಾಗೆ ಬರ ಅಥವಾ ಅತಿವೃಷ್ಟಿ ಇರುತ್ತದೆ. They are natural calamities. ಪ್ರಕೃತಿ ವಿಕೋಪಕ್ಕೆ ಹೋದಾಗ ಇಂಥ ದುರಂತಗಳಾಗುತ್ತವೆ. ಈ ಸಾರಿ ಈ ರಾಷ್ಟ್ರದ ಅರ್ಧ ಭಾಗದಲ್ಲಿ ಅಂದರೆ ಹೆಚ್ಚಿನ ರಾಜ್ಯಗಳಲ್ಲಿ ಇವತ್ತು ಬರ ಉಂಟಾಗಿದೆ. ಕೆಲವು ಕಡೆ ಪ್ರವಾಹ ಬಂದಿರತಕ್ಕಂಥಾದ್ದನ್ನೂ ಕಾಣುತ್ತಿದ್ದೇವೆ. ಕೇಂದ್ರ ಸರ್ಕಾರ ಯಾವ ರೀತಿ ಸಜ್ಜಾಗುತ್ತದೆ ಎನ್ನತಕ್ಕಂಥದ್ದು ತಮಗೆ ಗೊತ್ತಿದೆ. ಅವರು ಅದಕ್ಕಾಗಿ economy measures ತಂದಿದ್ದಾರೆ. ಏನೇನು ಕಾರ್ಯಕ್ರಮಗಳನ್ನು ಹಾಕಿಕೊಂಡು ರಾಜ್ಯಗಳಿಗೆ ನಾವು ಯಾವ ರೀತಿ ಸಹಾಯ ಮಾಡಬೇಕು, ನೀವು ಯಾವ ರೀತಿ ಮನವಿ ಕೊಡುತ್ತೀರಿ, ಯಾವ ರೀತಿ study ಮಾಡತಕ್ಕಂಥ ಟೀಂಗಳನ್ನು ಕಳುಹಿಸಬೇಕು, ಅದರ ಆಧಾರದ ಮೇಲೆ ನಾವು ಯಾವ ರೀತಿ ರಾಜ್ಯಗಳ ನೆರವಿಗೆ ನಿಲ್ಲಬೇಕು ಎನ್ನುವ ವಿಷಯಗಳಲ್ಲಿ

ಸಜ್ಜಾಗುತ್ತಿದ್ದಾರೆ. ನೀವು ಯಾವ ರೀತಿ ಸಂಪನ್ಮೂಲಗಳನ್ನು ಕ್ರೂಢೀಕರಿಸಬೇಕು, ಇದರ ಬಗ್ಗೆ ಕೇಂದ್ರ ಸರ್ಕಾರ ವಿಶೇಷವಾಗಿ ಹಾಕಿರತಕ್ಕಂಥ ಯೋಜನೆಗಳೇನು ಇವುಗಳನ್ನೆಲ್ಲ ಕೇಂದ್ರ ಸರ್ಕಾರ ಬಹಳ ಕಟ್ಟುನಿಟ್ಟಾಗಿ ಕಣ್ಣಲ್ಲಿ ಕಣ್ಣಿಟ್ಟು ನೋಡತಕ್ಕಂಥಾದ್ದನ್ನು ನಾವು ನೋಡುತ್ತಿದ್ದೇವೆ. ಬರಪೀಡಿತ ರಾಜ್ಯಗಳಲ್ಲಿ ನಮ್ಮ ರಾಜ್ಯವೂ ಕೂಡ ಒಂದಾಗಿದೆ. ಕೇಂದ್ರ ಸರ್ಕಾರ ಅಭಯ ಕೊಟ್ಟಿದೆ, 13 ತಿಂಗಳು ನೀವ್ಯಾರು ಯೋಚನೆ ಮಾಡುವ ಹಾಗಿಲ್ಲ. ನಾನೂ ಕೇಂದ್ರದಲ್ಲಿ Food Minister ಆಗಿದ್ದೆ, ನನಗೆ ತಿಳಿದಿರುವಂತೆ ಕೇಂದ್ರದಲ್ಲಿ buffer stock ಇದೆ. ಆಹಾರ ಭದ್ರತೆಗಾಗಿ ಅದನ್ನು ಇಟ್ಟುಕೊಂಡಿರುತ್ತಾರೆ. 13 ತಿಂಗಳಲ್ಲ, 15 ತಿಂಗಳುಗಳವರೆಗೆ ಯಾವುದೇ ರೀತಿಯಾದಂಥ ಬರವನ್ನು ಅಥವಾ ಅತಿವೃಷ್ಟಿಯಿಂದ ಆಗತಕ್ಕಂಥ ತೊಂದರೆಗಳನ್ನು ಎದುರಿಸತಕ್ಕಂಥ ಸಿದ್ಧತೆ ಇದೆ. ನಮಗೆ ಆ ರೀತಿಯಾದಂಥ ಅವಕಾಶವೂ ಇದೆ. ಕೇಂದ್ರ ಸರ್ಕಾರದವರು ನಿಮಗೆ ಧೈರ್ಯವನ್ನೂ ತುಂಬಿದ್ದಾರೆ, ನಾವಿದ್ದೇವೆ, you just go ahead ಎಂದು ಹೇಳಿದ್ದಾರೆ. ಬರವನ್ನು ಎದುರಿಸತಕ್ಕಂಥ ರೀತಿಯಲ್ಲಿ ನೀವು ಮುಂದುವರೆಯಿರಿ, ಯಾವ ರೀತಿಯಲ್ಲಿ ಕಾರ್ಮಿಕರ ಕೈಗಳಿಗೆ ಕೆಲಸವನ್ನು ಕೊಡಬೇಕು, ಯಾರೂ ಕೂಡ ಗುಳೇ ಹೋಗಬಾರದು ಎಂದು ಹೇಳಿದ್ದಾರೆ. ನಮ್ಮ Revenue Minister ಮತ್ತು ಮುಖ್ಯಮಂತ್ರಿಗಳು ಕೇಂದ್ರದಲ್ಲಿರತಕ್ಕಂಥವರ ಜೊತೆ ಚರ್ಚೆ ಮಾಡಿರಬಹುದು. ಕೇಂದ್ರ ಸರ್ಕಾರ ಯಾವುದೇ ತಾರತಮ್ಯವಿಲ್ಲದೇ, ಯಾವುದೇ ಮಲತಾಯಿ ಧೋರಣೆಯಿಲ್ಲದೇ ನಮಗೆ ಸಹಕಾರವನ್ನು ಕೊಡುತ್ತಾರೆ ಎಂದು ಹೇಳುತ್ತಾ, ಈ ಸಂದರ್ಭದಲ್ಲಿ ನಾವು ಕೇಂದ್ರ ಸರ್ಕಾರದ ನೆರವನ್ನು ಹೆಚ್ಚಿನ ರೀತಿಯಲ್ಲಿ ತೆಗೆದುಕೊಳ್ಳಬೇಕು ಎನ್ನುವುದನ್ನು ಪ್ರಸ್ತಾಪ ಮಾಡುತ್ತೇನೆ. ನೀವು ಕೈಕಟ್ಟಿ ಕುಳಿತ್ತಿದ್ದೀರಿ ಎಂದೇನೂ ಅಲ್ಲ. ಸರ್ಕಾರದವರಾದ ನೀವು ಮಾಡುತ್ತಿದ್ದೀರಿ. ನನಗೆ ಬಹಳ ಸಂತೋಷವಾಯಿತು. ಮುಖ್ಯಮಂತ್ರಿಗಳು ಮತ್ತು ಕಂದಾಯ ಸಚಿವರು ಬರಪೀಡಿತ ಪ್ರದೇಶಗಳಲ್ಲಿ video conferenceಗಳನ್ನು ಮಾಡಿ ಅಲ್ಲಿರುವವರ ಜೊತೆ ಮಾತುಕತೆಯನ್ನು ನಡೆಸಿದ್ದೀರಿ. ಅಲ್ಲಿ ಯಾವ ರೀತಿಯಾಗಿ ಕೆಲಸಕಾರ್ಯಗಳಾಗಬೇಕು, ಕಾಮಗಾರಿಗಳು ಯಾವ ರೀತಿ ಆಗಬೇಕು, ಅಲ್ಲಿರುವವರಿಗೆ ಯಾವುದೇ ರೀತಿ ತೊಂದರೆಯಾಗಬಾರದು ಎನ್ನತಕ್ಕಂಥಾದ್ದನ್ನೂ ತಾವು ಮಾಡಿದ್ದೀರಿ. ಕೆಲವು ಜಿಲ್ಲೆಗಳಲ್ಲಿ ಮುಂಗಾರು

ಬಹಳ ಆಶಾದಾಯಕವಾಗಿತ್ತು. ಕೆಲವು ಕಡೆಗಳಲ್ಲಿ ಕೈಕೊಟ್ಟಿದೆ. ಕೆಲವು ಜಿಲ್ಲೆಗಳಲ್ಲಿ ಬೇಗ ಪ್ರಾರಂಭವಾಯಿತು, ಕೆಲವು ಜಿಲ್ಲೆಗಳಲ್ಲಿ ಆಗಲಿಲ್ಲ, ಆನಂತರ ಕೋಲಾರ, ಚಾಮರಾಜನಗರಗಳಂಥ ಕೆಲವು ಜಿಲ್ಲೆಗಳಲ್ಲಿ ಮಳೆ ಬಂತು. ಹೈದರಾಬಾದ್ ಕರ್ನಾಟಕದ ಕೆಲವು ಜಿಲ್ಲೆಗಳಲ್ಲಿ ಮಳೆಯೇ ಆಗಿರಲಿಲ್ಲ. ಇತ್ತೀಚೆಗೆ ಅಂದರೆ ನಿನ್ನೆ, ಮೊನ್ನೆಯಿಂದ ಮಳೆಯಾಗಿದೆ. ಯುದ್ಧಕಾಲದಲ್ಲಿ ಶಸ್ತ್ರಾಭ್ಯಾಸ ಎನ್ನುವ ಹಾಗೆ ಸರ್ಕಾರದವರು ಬರ ಬಂದು, ಅದರಿಂದ ರೈತ ಪರಿತಪಿಸುವಾಗ ನಾವು ಅದಕ್ಕೆ ಹೆಚ್ಚು ಹೆಚ್ಚು ಗಮನವನ್ನು ಕೊಡುತ್ತೇವೆ. ನಾವು ಇದಕ್ಕೆ ಸರಿಯಾದ ಸಿದ್ಧತೆಗಳನ್ನು ಮಾಡಿಲ್ಲ ಎಂದು ಜಯಚಂದ್ರರವರು ಮಾತನಾಡುವಾಗ ಹೇಳುತ್ತಿದ್ದರು. ಶಾಶ್ವತವಾದ ಬರವಿತಕ್ಕಂಥ ಗ್ರಾಮಗಳು, ತಾಲ್ಲೂಕುಗಳಲ್ಲಿ ನಾವು ಯಾವ ರೀತಿ ಕಣ್ಣಲ್ಲಿ ಕಣ್ಣಿಟ್ಟು ಅದರ ಕಡೆ ಗಮನ ಕೊಡಬೇಕು, ಸಿದ್ಧತೆಗಳನ್ನು ಮಾಡಬೇಕು, ಯಾವ ರೀತಿ ಕಾಮಗಾರಿಗಳಿರಬೇಕು ಎನ್ನುವ ಬಗ್ಗೆ ತುಂಬ ಚೆನ್ನಾಗಿ ಮಾತನಾಡುತ್ತಿದ್ದರು. ತಾವು ಕೃಷಿ ಸಚಿವರಲ್ಲ, ಆದರೆ ತಾವೂ ಕೂಡ ಅದರ ಬಗ್ಗೆ ಯೋಚನೆ ಮಾಡಬೇಕಾಗಿತ್ತು. Natural Calamities ಬಂದಾಗ ಏನು ಮಾಡಬೇಕು ಎಂದು ಅವರು ಹೇಳುತ್ತಿದ್ದರು. Chief Secretaryಯವರ ಅಧ್ಯಕ್ಷತೆಯಲ್ಲಿ ಸಮಿತಿ ಇದೆ. ಬರಪೀಡಿತ ಗ್ರಾಮಗಳಲ್ಲಿ, ತಾಲ್ಲೂಕುಗಳಲ್ಲಿ ಯಾವ ರೀತಿಯಾದಂಥ ಪರಿಹಾರ ಕಾರ್ಯಗಳು ಅಥವಾ ಕಾಮಗಾರಿಗಳು ಆಗಬೇಕು ಎನ್ನುವುದಕ್ಕೆ ಒಂದು ಉಪಸಮಿತಿ ಇದೆ. ಮಾನ್ಯ ಕಂದಾಯ ಸಚಿವರೇ ಅದಕ್ಕೆ ಅಧ್ಯಕ್ಷರಾಗಿದ್ದಾರೆ, ಜಿಲ್ಲಾ ಮಂತ್ರಿಗಳಿದ್ದಾರೆ, ತಾಲ್ಲೂಕು ಮಟ್ಟದಲ್ಲಿ ನಾವೆಲ್ಲರೂ ಕೂಡ ಸದಸ್ಯರಾಗಿದ್ದೇವೆ. ಆದರೆ ನಮ್ಮ ನೀರೀಕ್ಷೆಗೆ ತಕ್ಕಂತೆ ಸರಿಯಾದ ರೀತಿಯಾಗಿ ಆಗಿಲ್ಲ. ಅದರ ಕಡೆ ನಾವು ಹೆಚ್ಚು ಗಮನವನ್ನು ಕೊಟ್ಟಿಲ್ಲ ಎಂದು ಹೇಳಬೇಕಾಗುತ್ತದೆ. ಹೋದ ವರ್ಷ ರೈತರ ಮೇಲೆ ಗುಂಡು ಹಾರಿಸಿದ ಘಟನೆ ನಡೆದಿದ್ದು, ಅದಕ್ಕೆ ಸಂಬಂಧಿಸಿದಂತೆ ಇನ್ನೂ ಕೂಡ ಜಸ್ಟೀಸ್ ಸೋಮಶೇಖರ್‌ರವರ ಆಯೋಗದ ವರದಿ ಬರಬೇಕಾಗಿದೆ. ಇಂಥ ಸಂದರ್ಭದಲ್ಲಿ ಕೃಷಿ ಸಚಿವರು ಬಹಳ alert ಆಗಿರಬೇಕು. ಮೊನ್ನೆ ದಾವಣಗೆರೆ ಮತ್ತು ಹಾವೇರಿಗಳಲ್ಲಿ ಮತ್ತೆ ಗಲಾಟೆ ಶುರುವಾಗಿತ್ತು. firing ಮತ್ತಿತರ ಗಲಾಟೆಗಳು ಆಗುವುದು ನಿಂತಿದೆ. ಅಲ್ಲಿ ಸರಿಯಾದ ರೀತಿಯಲ್ಲಿ ಗೊಬ್ಬರ ಮತ್ತು ಬೀಜಗಳನ್ನು ಕೊಡದೇ ಗಲಾಟೆ ಪ್ರಾರಂಭವಾಗಿತ್ತು. ಸದ್ಯ ಅದು ಅಲ್ಲಿಗೇ ನಿಂತಿದೆ. ನಾನು ಏಕೆ ಇದನ್ನು

ಹೇಳುತ್ತಿದ್ದೇನೆ ಎಂದರೆ ನೀವು ಅದಕ್ಕೆ ಇನ್ನೂ ದೂರಾಲೋಚನೆಯನ್ನು ಮಾಡಲೇ ಇಲ್ಲ. ಹೋದ ಸಾರಿ ನಿಮಗೆ ಅಷ್ಟು ಕಹಿ ಅನುಭವವಾಗಿದೆ, ಗಲಾಟೆಗಳಾಗಿವೆ. ಇವತ್ತು ನಮಗೆ satelliteಗಳಿಂದ ಏನು ಬೇಕೋ ಆ ಎಲ್ಲ ಮಾಹಿತಿ ಸಿಗುತ್ತದೆ. Weather predictionನಿಂದ ಹಿಡಿದು ಪ್ರತಿಯೊಂದು ಮಾಹಿತಿಯೂ ಸಿಗುತ್ತದೆ, ನಾವು ಎಷ್ಟು ಎಚ್ಚರಿಕೆಯಿಂದ ಇರಬೇಕು, ಏನು ಮಾಡಬೇಕು ಎಂದು ಅದರಿಂದ ತಿಳಿಯುತ್ತದೆ. ನಾವು ಏಕೆ ಆ ಕಡೆಗೆ ಗಮನ ಕೊಡುತ್ತಿಲ್ಲ ಎನ್ನುವುದು ನನಗೆ ಆಶ್ಚರ್ಯ ತರುತ್ತಿದೆ. ಬರಪೀಡಿತ ಪ್ರದೇಶಗಳಲ್ಲಿ ಬರ ಬಂದಾಗ ಸಮರೋಪಾದಿಯಲ್ಲಿ ಪರಿಹಾರ ಕಾರ್ಯಕ್ರಮಗಳನ್ನು ತೆಗೆದುಕೊಂಡು ಹೋಗುತ್ತೇವೆ ಎಂದು ಬಾಯಿಯಲ್ಲಿ ಹೇಳಿದರೆ ಆಗುವುದಿಲ್ಲ. ಇದಕ್ಕೆ ನಾವು ಹದ್ದಿನ ಕಣ್ಣಿಟ್ಟು ಕೆಲಸವನ್ನು ಮಾಡಬೇಕಾಗಿದೆ. ನಾವು ಎಷ್ಟೇ ಸಂಪನ್ಮೂಲಗಳು, scarcity funds ಏನೇ ಕೊಟ್ಟರೂ ಅದು ದುರುಪಯೋಗವಾಗತಕ್ಕಂಥಾದ್ದು ತುಂಬಾ ಜಾಸ್ತಿಯಾಗಿರುವುದಿಂದ ಇದನ್ನು ತಡೆಗಟ್ಟಬೇಕು. ಹಿಂದೆ ನಾನು M.P.ಯಾಗಿದ್ದಾಗ ಇದೇ ರೀತಿ ಬರ ಬಂದಿದ್ದಾಗ food for work ಎನ್ನುವ ಕಾರ್ಯಕ್ರಮವಿತ್ತು. ಆಗ ನಾನು ಒಂದು ಮಾತನ್ನು ಹೇಳಿದೆ. ಜನಪ್ರತಿನಿಧಿಗಳಾದ ನಾವು ನಮ್ಮ ಆತ್ಮಸಾಕ್ಷಿಯಾಗಿ ಇದರ ಬಗ್ಗೆ ಮಾತನಾಡೋಣ. ಈ ಒಂದು ಕೆಲಸದಲ್ಲಿ ನಾವೆಲ್ಲರೂ ಭಾಗಿಗಳಾಗೋಣ. ಗ್ರಾಮ, ತಾಲ್ಲೂಕು, ಜಿಲ್ಲಾ ಪಂಚಾಯತ್ ಸದಸ್ಯರು, ಶಾಸಕರು, Parliamentನಿಂದ ಹಿಡಿದು ಎಲ್ಲರೂ ಶಪಥ ಮಾಡೋಣ. ಈ ಬರ ಪರಿಹಾರಕ್ಕೆ ಬರುವ ಕಾಮಗಾರಿಗಳ ಹಣದಲ್ಲಿ ಯಾವುದೇ ರೀತಿಯಲ್ಲಿ ಮೂರು ಕಾಸು ಸಹ ದುರುಪಯೋಗವಾಗಬಾರದು, ಅದರಲ್ಲಿ ನನಗೆ ಯಾವುದೇ ರೀತಿಯ ಆಪಾದನೆ ಬರಬಾರದೆನ್ನುವ ಪ್ರಾಮಾಣಿಕವಾಗಿ ಪ್ರಮಾಣ ಮಾಡೋಣ. ಯಾವ ಅಧಿಕಾರಿಗಳನ್ನೂ ನಾವು ಹಿಡಿತದಲ್ಲಿಟ್ಟುಕೊಂಡು ಈ ಕೆಲಸ ಮಾಡಲಿಕ್ಕಾಗುವುದಿಲ್ಲವೆನ್ನುವ ಮಾತನ್ನು ಕೂಡ ಹೇಳುತ್ತೇನೆ. ಆ ತರಹದ ಆಲೋಚನೆಯನ್ನು, ಪ್ರತಿಜ್ಞೆಯನ್ನು ಮಾಡುವ ರೀತಿಯಲ್ಲಿ ಜನಪ್ರತಿನಿಧಿಗಳಾದ ನಾವು ಮಾಡಬೇಕು. ಕೆಲವು ಜಿಲ್ಲೆಗಳಲ್ಲಿ ಅತಿವೃಷ್ಟಿಯಾಗಿದೆ. ಮಳೆ ಬಂದಾಗ ಏನಾಗುತ್ತದೆನ್ನುವುದು ತಮಗೆಲ್ಲಾ ಗೊತ್ತಿದೆ. ಮುಖ್ಯವಾಗಿ, ಪ್ರವಾಹ ಬಂದಾಗ communication ಇರುವುದಿಲ್ಲ. ಏಕೆಂದರೆ, ಪ್ರದೇಶವೆಲ್ಲಾ ಜಲಾವೃತ್ತವಾಗಿರುತ್ತದೆ. ಬೆಳೆದ

ಬೆಳೆಗಳು ನಮ್ಮ ಕೈಗೆ ಸಿಗುವುದಿಲ್ಲ. ಆ ಸಮಯದಲ್ಲಿ ರೋಗ ರುಜಿಗಳು ಜಾಸ್ತಿಯಾಗುತ್ತವೆ. Relief works ತೆಗೆದುಕೊಳ್ಳಬೇಕಾಗಿರುವುದೆಲ್ಲ ನಮಗೆಲ್ಲ ಗೊತ್ತಿರುವುದು ಇದೆ. ಇದು ನಡೆಯುತ್ತಿರುವುದು regular phenomena. ಇದು ನಮ್ಮ ದೇಶದಲ್ಲಿ ಮಾತ್ರವಲ್ಲ, ಬೇರೆ ದೇಶಗಳಲ್ಲಿಯೂ ನಡೆಯುತ್ತಿದೆ. ನಾವು ಎಷ್ಟು ಎಚ್ಚರಿಕೆಯಿಂದ, ಶ್ರದ್ಧೆಯಿಂದ ಗಮನ ಕೊಟ್ಟು ಕೆಲಸ ಮಾಡುತ್ತೇವೆ, ಕಾಮಗಾರಿಗಳನ್ನು ಮಾಡುತ್ತೇವೆ, ಅವರ ರಕ್ಷಣೆಗೆ ಹೋಗುತ್ತೇವೆ, ಅವರಿಗೆ ಯಾವ ರೀತಿಯ ಸಹಾಯ ಮಾಡುತ್ತೇವೆ ಎನ್ನುವುದು ಮುಖ್ಯ. ಕಂದಾಯ ಸಚಿವರೆ, ಇಲ್ಲಿ ವಾಸ ಮಾಡುವವರು ಬಹಳ ಬಡವರಿರುತ್ತಾರೆ. ಮಲೆನಾಡು ಇರಲಿ, coastal area ಇರಲಿ ಅಲ್ಲಿರತಕ್ಕಂಥ ಬಡವ ಅಂದು ದುಡಿದು ಅಂದೇ ತಿನ್ನುವ ಪರಿಸ್ಥಿತಿಯಲ್ಲಿರುತ್ತಾನೆ. ಅವನು ಈ ಪ್ರವಾಹದಿಂದಾಗಿ ಹೊರಗಡೆಗೆ ಕೆಲಸಕ್ಕೆ ಹೋಗುವುದಕ್ಕೇ ಆಗುವುದಿಲ್ಲ. ಏಕೆಂದರೆ, ಅವನನ್ನು ಯಾರೂ ಕೆಲಸಕ್ಕೆ ಕರೆಯುವ ಪರಿಸ್ಥಿತಿಯಲ್ಲಿರುವುದಿಲ್ಲ, ಏಕೆಂದರೆ, ಅವರೂ ಕೂಡ ಕಷ್ಟದಲ್ಲಿ ಸಿಕ್ಕಿಹಾಕಿಕೊಂಡಿರುತ್ತಾರೆ. ಬೆಳೆದಂಥ ಬೆಳೆ ಕೂಡ ಪ್ರವಾಹದಿಂದಾಗಿ ಅವರ ಕೈಗೆ ಸಿಗುವುದಿಲ್ಲ. ಅವರೂ ಕೂಡ ಅತಂತ್ರ ಸ್ಥಿತಿಯಲ್ಲಿರುತ್ತಾರೆ. ಅವರು ಎಲ್ಲಿಗೆ ಹೋಗಬೇಕು? ನಾವು ಅವರಿಗೆ ಕಟ್ಟಿಸಿಕೊಟ್ಟ ಮನೆಗಳು, ಗುಡಿಸಲು ಮಳೆ ಇಲ್ಲದೆಯೇ ಬೀಳತಕ್ಕಂಥ ಸ್ಥಿತಿಯಲ್ಲಿರುವುದನ್ನು ನಾವು ನೋಡುತ್ತಿದ್ದೇವೆ. ಇನ್ನು, ಮಳೆ ಬಿದ್ದಾಗ ಅವರು ಎಲ್ಲಿಗೆ ಹೋಗಬೇಕು? ಅವರಿಗಾಗಿ ಅಲ್ಲಿ ನಾವು ಗಂಜಿ ಕೇಂದ್ರ ತೆರೆಯುತ್ತೇವೆ. ಅವರು ದುಡಿಯುವುದಕ್ಕೆ ಬಹಳ ಕಷ್ಟವಿದೆ. ಅದರ ಕಡೆಗೆ ಅಧಿಕಾರಿಗಳು ಹೆಚ್ಚು ಗಮನಹರಿಸಬೇಕೆಂದು ತಾವು ಹೇಳಬೇಕು. ಈ ದೇಶದ ಸಾಮಾಜಿಕ ವ್ಯವಸ್ಥೆ ನೋಡಿ ನನಗೆ ಕೆಲವು ಸಾರಿ ಮನಸ್ಸಿಗೆ ನೋವಾಗುತ್ತದೆ. ಎಲ್ಲಾ ಜಾತಿಯವರೂ ಒಂದೇ ಕಡೆ ಗಂಜಿ ಕೇಂದ್ರಕ್ಕೆ ಹೋಗುವುದಕ್ಕೆ ತಯಾರಿರುವುದಿಲ್ಲ. ನಾನು ಇದನ್ನು ಉತ್ಪ್ರೇಕ್ಷೆಯಿಂದ ಹೇಳುತ್ತಿಲ್ಲ. ಒಂದು ಜಾತಿಯವನು ಆ ಗಂಜಿ ಕೇಂದ್ರ ಬೇಡವೆಂದು ಹೇಳುತ್ತಾನೆ. ಆ ರೀತಿಯಾಗಿ ಜಾತಿ ಎನ್ನುವುದು ಮನುಷ್ಯನ bloodಗೆ inject ಆಗಿಬಿಟ್ಟಿದೆ. ಜಾತಿಯತೆಯಲ್ಲಿ ನಾವೆಲ್ಲಿದ್ದೇವೆ ಎನ್ನುವಂಥದ್ದು ಇದರಿಂದ ಗೊತ್ತಾಗುತ್ತದೆ. ಕೆಲವು ಸಾರಿ how it will kill us? ಎಂದು ನಮಗರ್ಥವಾಗುತ್ತದೆ. ಜಾತಿ ಎನ್ನುವುದು ಯಾವ ರೀತಿ ಕೊಲ್ಲುತ್ತದೆನ್ನುವುದು ಆ ಹಿನ್ನೆಲೆಯಲ್ಲಿ ಬಂದವರನ್ನು ಕೇಳಿದಾಗ

ಮನಸ್ಸಿಗೆ ಆಗುಪ ನೋವಿದೆಯಲ್ಲ, ಅದು ಬಹಳ ಜನರಿಗೆ ಅರ್ಥವಾಗುವುದಿಲ್ಲವೆಂದು ತೋರುತ್ತದೆ. ಅದನ್ನು ಅರ್ಥ ಮಾಡಿಕೊಳ್ಳಬೇಕು. ಗಂಜಿ ಕೇಂದ್ರಗಳನ್ನು ತೆರೆದಾಗ, ಅಸಹಾಯಕರು ಅತಂತ್ರ ಸ್ಥಿತಿಯಲ್ಲಿರುವವರ ಮಕ್ಕಳು ನರಳುತ್ತಿರುತ್ತಾರೆ, ವಾಸಕ್ಕೆ ಮನೆಯಿರುವುದಿಲ್ಲ, ದುಡಿಯುವುದಕ್ಕೆ ಕೆಲಸವಿರುವುದಿಲ್ಲ. ಅದನ್ನು ತಾವು ಯೋಚನೆ ಮಾಡಿ ಕೆಲಸ ಮಾಡಬೇಕು. ಅತಿವೃಷ್ಟಿಯಿಂದ ಭೂಪ ರೀತಿಯಲ್ಲಿ ಜನಜೀವನ ಅಸ್ತವ್ಯಸ್ತವಾಗಿರುತ್ತದೆ, ಜನರು ಯಾವ ಯಾವ ರೀತಿಯಲ್ಲಿ ಕಷ್ಟಕ್ಕೆ ಸಿಕ್ಕಿಹಾಕಿಕೊಂಡಿರುತ್ತಾರೆ ಎನ್ನುವುದನ್ನು ತಾವು ಗಮನಹರಿಸಿ, ಅವರ ಆಹಾರದ ಕೊರತೆಯನ್ನು ನೀಗಿಸುವ ಕೆಲಸವನ್ನು ಎಲ್ಲಾ ರೀತಿಯಲ್ಲಿ ಮಾಡಬೇಕು. ಬರದ ಬಗ್ಗೆ ಹೇಳುವುದಾದರೆ, ಕೆಲವು ಕಡೆ ಶಾಶ್ವತವಾಗಿ ಬರವಿರುವುದನ್ನು ನಾವು ಕಂಡಿದ್ದೇವೆ. ಬರ ಬಂದ ಸಂದರ್ಭದಲ್ಲಿ 15, 20, 30 ಎಕರೆ ಜಮೀನಿರಲಿ ಅವರಿಗೆ ಬಿತ್ತನೆ ಮಾಡಿದ ಪ್ರಮಾಣದಲ್ಲಿ ರೈತರಿಗೆ ಕೈಗೆ ಬೆಳೆ ಸಿಗುವುದಿಲ್ಲ. ಬೆಳೆದ ಬೆಳೆ ನಷ್ಟವಾಗಿರುತ್ತದೆ. ರೈತರು ಬಹಳ ಕಷ್ಟದಲ್ಲಿ ಸಿಕ್ಕಿಹಾಕಿಕೊಂಡಿರುತ್ತಾರೆ. ಆಹಾರದ ಸಮಸ್ಯೆಯಾಗುತ್ತದೆ, ಕುಡಿಯುವ ನೀರಿನ ಸಮಸ್ಯೆಯಾಗುತ್ತದೆ, ಮೇವಿನ ಸಮಸ್ಯೆಯಾಗುತ್ತದೆ ಇವೆಲ್ಲವನ್ನೂ ಗಮನಕ್ಕೆ ತೆಗೆದುಕೊಂಡು ಆದ್ಯತೆ ಮೇಲೆ ಇದಕ್ಕೆ Scarcity Fund ನಿಂದೇನು ಕೊಡಬೇಕು ಅಥವಾ ವಿಶೇಷವಾಗಿ ತಂದಂಥ ಹಣವನ್ನು ಯಾವ ರೀತಿ ಕೊಡಬೇಕು, ಬೇರೆ ಬೇರೆ Democratic Institution ನಲ್ಲಿರುವಂಥ, ಬೇರೆ ಬೇರೆ ಸಂಸ್ಥೆಗಳು, ಜಿಲ್ಲಾ, ತಾಲ್ಲೂಕು, ಗ್ರಾಮ ಪಂಚಾಯತ್‌ಗಳಲ್ಲಿರುವ ಹಣವನ್ನು ಯಾವ ರೀತಿ ಕ್ರೋಢೀಕರಿಸಿ ತೆಗೆದುಕೊಂಡು ಹೋಗಿ ಕೊಡಬೇಕು. ಇದೆಲ್ಲವನ್ನೂ ಅಲ್ಲಿ ಮಾಡುವಂಥದ್ದು ಬಹಳ ಮುಖ್ಯವಾಗಿದೆ. ಏಕೆಂದರೆ, ಹಸಿವು ಬಹಳ ಕಷ್ಟ, ಅದನ್ನು ತಡೆದುಕೊಳ್ಳುವುದಕ್ಕಾಗುವುದಿಲ್ಲ. ಅದರ ಬಗ್ಗೆ ತಾವೂ ಕೂಡ ಯೋಚನೆ ಮಾಡಿ, ಅದಕ್ಕೆ ಬೇಕಾದ ಪರಿಹಾರ ಕಾರ್ಯಕ್ರಮಗಳ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ನಮ್ಮಲ್ಲಿ lack of sincerity and honesty ಪ್ರಶ್ನೆ ಏಳುತ್ತದೆ. ಅದು ಇರತಕ್ಕಂಥದ್ದೇ. ನಮ್ಮಲ್ಲಿ ನಿಷ್ಠೆ, ಪ್ರಾಮಾಣಿಕತೆ ಕೊರತೆ ಇವೆಲ್ಲವೂ ಕೂಡ ಇದರಲ್ಲಿ ನಮಗೆ ಕಾಡುತ್ತಿದೆ. ಬರದ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ಎರಡು ಪ್ರಮುಖವಾದ ಕಾರ್ಯಕ್ರಮಗಳನ್ನು ತೆಗೆದುಕೊಂಡಿದೆ. ಮೊದಲನೆಯದು ಉದ್ಯೋಗ ಭರವಸೆ ಯೋಜನೆ ಮತ್ತು ಇನ್ನೊಂದು Food Security ಯೋಜನೆ.

ಇವೆರಡೂ ಬಹಳ ಮುಖ್ಯವಾಗಿರುವಂಥದ್ದು. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಏನಿದೆ ನೀವು ಇದನ್ನು ಸರಿಯಾದ ರೀತಿಯಲ್ಲಿ ಉಪಯೋಗ ಮಾಡಿದರೆ ಯಾರೂ ಕೂಡ ಗುಳೆ ಹೋಗಲಿಕ್ಕೆ ಅವಕಾಶವೇ ಇಲ್ಲ. ಈಗ ನೀವು Action Plan ತಯಾರಿಸಿ 2000 ಕೋ.ರೂ.ಗಳನ್ನು ಖರ್ಚು ಮಾಡುತ್ತೇವೆಂದು ಹೇಳಿದ್ದೀರಿ. ಅದನ್ನು ಬಹಳ speed up ಮಾಡಬೇಕು. ಇದರಿಂದ ಎಲ್ಲರ ಕೈಗಳಿಗೂ ಕೆಲಸ ಸಿಗುತ್ತದೆ. ಇದಕ್ಕೆ ಕೇಂದ್ರದ ನೆರವು ಇದೆ. ಬರದ ಸಂದರ್ಭದಲ್ಲಿ ಇದು ಬಹಳ ಬೇಕಾಗಿರುವ ಯೋಜನೆಯಾಗಿದೆ. ಬರಪೀಡಿತ ಪ್ರದೇಶಗಳಲ್ಲಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಲ್ಲಿ ಈಗಾಗಲೇ ಗುರುತಿನ ಚೀಟಿ ಕೊಟ್ಟಿದ್ದೇವೆ. ಇದರಲ್ಲಿ ದಿನಕ್ಕೆ 80–100 ರೂ.ವರೆಗಿನ ಕೆಲಸವನ್ನು ಅವನಿಗೆ ಕೊಡಬೇಕೆಂದಿದೆ. ಈಗಾಗಲೇ ಕೇಂದ್ರ ಸರ್ಕಾರ ಅದನ್ನು 80 ರಿಂದ 100 ರೂ. ಕೊಡಬೇಕೆಂದು ಕೂಡ ಯೋಚನೆ ಮಾಡಿದೆ. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ನಿಷ್ಠೆಯಿಂದ ಅನುಷ್ಠಾನಕ್ಕೆ ತರುವ ರೀತಿಯಲ್ಲಿ ನಾವು ಮಾಡಲೇಬೇಕು. ಯಾವುದೇ ಕಾರಣಕ್ಕೂ ಕೂಡ ಇದರಿಂದ ಹಿಂದೆ ಸರಿಯಬಾರದು. ನಾನು ಮತ್ತು ಸಿದ್ದರಾಮಯ್ಯನವರು ನಂಜನಗೂಡು ತಾಲ್ಲೂಕಿನಲ್ಲಿ ಇದ್ದರ ಪ್ರಯೋಗ ಮಾಡಿದೆವು. ಆದರೆ, ಅದು ನಮಗೆ ತೃಪ್ತಿ ತರಲಿಲ್ಲ. ಅದು ಸಧ್ಯಕ್ಕೆ ಇನ್ನೂ ಕೂಡ ಯಾವ ರೀತಿಯಲ್ಲಿ ಅಲ್ಲಿ ದುಡಿಯುವವರಿಗೆ, ಅಲ್ಲಿಯ ರೈತರಿಗೆ ಕೆಲಸ ಸಿಗಬೇಕಾಗಿತ್ತೋ, ಬಹುಶ: ಆ ಮಟ್ಟದಲ್ಲಿ ಸಿಕ್ಕಿಲ್ಲ. ಇದನ್ನು ಬಹಳಷ್ಟು ಉಪಯೋಗ ಮಾಡಿಕೊಳ್ಳಬೇಕು. ಈ ಸಾರಿ ಸ್ವಾತಂತ್ರ್ಯ ದಿನಾಚರಣೆಯಂದು ಮಾನ್ಯ ಪ್ರಧಾನ ಮಂತ್ರಿಯವರು ಘೋಷಣೆ ಮಾಡಿ ಆಹಾರ ಭದ್ರತೆ ಎನ್ನುವ ತುಂಬಾ ಒಳ್ಳೆಯ 'ಕಾರ್ಯಕ್ರಮವನ್ನು ಕೊಟ್ಟಿದ್ದಾರೆ. ಈ ಯೋಜನೆಯಲ್ಲಿ ಪ್ರತಿ ಕುಟುಂಬಕ್ಕೆ ಕೂಡ 3 ರೂಪಾಯಿ ದರದಲ್ಲಿ 25 ಕೆ.ಜಿ. ಅಕ್ಕಿಯನ್ನು ಕೊಡುತ್ತೇವೆ ಎನ್ನುವ ಯೋಜನೆಯನ್ನು ಮಾಡಿದ್ದಾರೆ. ಅದರಿಂದ ಇವತ್ತು 75 ರೂಪಾಯಿಗಳಿಗೆ 25 ಕೆ.ಜಿ. ಅಕ್ಕಿ ಸಿಗುತ್ತದೆ. ಇದು ದುರುಪಯೋಗವಾಗಬಾರದು. ಇದು ರಾಜಕೀಯ ಸ್ಟಂಟ್ ಅಥವಾ ಲಾಭ ನಷ್ಟದಲ್ಲಿ ಓಟು ತೆಗೆದುಕೊಳ್ಳುವಂಥದ್ದಾಗಬಾರದು. ನೀವು ನೆಮ್ಮದಿ ಕೇಂದ್ರದಿಂದೇನು ಕೊಟ್ಟಿದ್ದೀರಲ್ಲ, ಅದನ್ನು ಬರಗಾಲ ಮುಗಿಯುವವರೆಗೆ ಮುಟ್ಟುವುದಕ್ಕೆ ಹೋಗಬೇಡಿ. 30% ಕಡಿಮೆ ಮಾಡುತ್ತೇವೆಂದು ಹೇಳಿದ್ದಿರಿ,

ಅದನ್ನು ಯಾವುದೇ ಕಾರಣಕ್ಕೂ ಮಾಡುವುದಕ್ಕೆ ಹೋಗಬೇಡಿ. ಈಗೇನು ನೀವು BPL card ಗಳನ್ನು ಕೊಟ್ಟಿದ್ದೀರಿ, ಅಷ್ಟೂ ಜನರಿಗೆ ಇವತ್ತು ಆಹಾರ ವಿತರಣೆಯಾಗಬೇಕು. ನನಗೆ ಕಷ್ಟ ಗೊತ್ತಿದೆ. ಏಕೆಂದರೆ, ನೀವಿಲ್ಲಿ ಕೊಟ್ಟಿರುವ ಎಲ್ಲಾ BPL card ದಾರರಿಗೆ ಕೇಂದ್ರ ಸರ್ಕಾರದಿಂದ ಪಡಿತರ ಸಿಗುತ್ತಿಲ್ಲ. ಇಲ್ಲಿ ನೀವೇನು BPL ಕುಟುಂಬಗಳನ್ನು identify ಮಾಡಿದ್ದೀರಿ, ಅಷ್ಟೂ ಜನರಿಗೂ subsidized rate ನಲ್ಲಿ ಕೇಂದ್ರ ಸರ್ಕಾರ ಪಡಿತರ ಕೊಡುವುದಿಲ್ಲ. ಏಕೆಂದರೆ, ಕೇಂದ್ರ ಸರ್ಕಾರದವರು ಅವರದೇ ಆದ ರೀತಿಯಲ್ಲಿ ಸರ್ವೆ ಮಾಡುತ್ತಾರೆ. Planning Commission ನಿಂದ Experts Committee ಯಾಗಿ ನಾನು Minister ಆಗಿದ್ದಾಗ ಇದನ್ನು ಪ್ರೊ. ಲಕ್ಡವಾಲ ಕಮಿಟಿ ಎಂದು ಮಾಡಿ, ಪ್ರತಿ ರಾಜ್ಯಕ್ಕೂ ಕೂಡ ನಮ್ಮದೇ ಆದ criteria ಇಟ್ಟುಕೊಂಡು ಪ್ರತಿ ರಾಜ್ಯದಲ್ಲಿ BPL ಕುಟುಂಬಗಳನ್ನು identify ಮಾಡುತ್ತೇವೆ. ಆದರೆ, ಇಲ್ಲಿ ಅದರ ಮೂರರಷ್ಟು identify ಮಾಡಿರುತ್ತಾರೆ. ಹೀಗಾಗಿ, ನೀವು ಅಷ್ಟೂ open marketನಿಂದ ಕೊಂಡು ಪಡಿತರ ಚೀಟಿದಾರರಿಗೆ ಕೊಡಬೇಕಾಗಿರುವುದರಿಂದ ಎಚ್ಚರಿಕೆಯಿಂದ ಮಾಡಬೇಕಾಗಿದೆ. ಇದರಿಂದ ನಿಮಗೆ ಸ್ವಲ್ಪ ಹೊರೆಯಾಗುತ್ತದೆ. ಆದರೂ ಸಹ ಅದಕ್ಕೆ ಹೆಚ್ಚಿನ ರೀತಿಯ ಹಣಕಾಸು ಬಿಡುಗಡೆ ಮಾಡಬೇಕು. ಕೇಂದ್ರ ಸರ್ಕಾರ ಆಹಾರ ಭದ್ರತೆ ಎನ್ನುವ ಯೋಜನೆ ಜಾರಿಗೆ ತಂದಿದೆ ಅದರಿಂದ ಮಾತ್ರ ಇದು ಆಗುವುದಿಲ್ಲ, ನೀವೂ ಸಹ ಅದಕ್ಕೆ ಕೈಜೋಡಿಸಿ ಮಾಡಿದರೆ ಮಾತ್ರ ಆ ಯೋಜನೆ ಸಂಪೂರ್ಣವಾಗಿ ಯಶಸ್ವಿಯಾಗುತ್ತದೆಂಬುದನ್ನು ತಮ್ಮ ಗಮನಕ್ಕೆ ತರುತ್ತೇನೆ. ಇನ್ನು, ನನ್ನ ಕ್ಷೇತ್ರ 14 ಗ್ರಾಮಪಂಚಾಯಿತಿಗಳಲ್ಲಿ ಕಾರ್ಯದರ್ಶಿಗಳೇ ಇಲ್ಲ. ಈ ರೀತಿ ಎಲ್ಲಾ ತಾಲ್ಲೂಕು ಜಿಲ್ಲೆಗಳಲ್ಲಿ ಕಾರ್ಯದರ್ಶಿಗಳು ಇಲ್ಲದಿರಬಹುದು. ಇದನ್ನು ಸರ್ಕಾರ ಸರಿಪಡಿಸಬೇಕು. ಪಂಚಾಯಿತಿಗಳಲ್ಲಿ ಈ ರೀತಿಯಾದ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರಬೇಕಾದರೆ ಕಾರ್ಯದರ್ಶಿಗಳ ಪಾತ್ರ ಬಹಳ ಮುಖ್ಯವಾಗಿರುತ್ತದೆ. ಆ ಗ್ರಾಮ ಪಂಚಾಯತ್ ಕಾರ್ಯದರ್ಶಿಗಳ ನೇಮಕಾತಿಯನ್ನು ಆದಷ್ಟು ಬೇಗ ಮಾಡಬೇಕು. ಇದರ ಜೊತೆಗೆ, ನಾವೆಲ್ಲರೂ ಸಹ ಮಾನವೀಯತೆಯ ದೃಷ್ಟಿಯಿಂದ ಯೋಚಿಸಬೇಕಾಗುತ್ತದೆ. ಒಂದು ಕಡೆ ಜನರು ತತ್ತರಿಸಿ ಹೋಗಿರುತ್ತಾರೆ, ಅವರ ಕೈಗೆ ಕೆಲಸ ಬೇಕು, ಅವರಿಗೆ ಹಸಿವು ಇರುತ್ತದೆ, ಅವರಿಗೆ ಕುಡಿಯುವ ನೀರಿನ ಕೊರತೆ ಇರುತ್ತದೆ, ಅಲ್ಲಿರುವ

ಜಾನುವಾರುಗಳಿಗೆ ಮೇವು ಒದಗಿಸಬೇಕು. ಇದರ ಜೊತೆಗೆ, ಮಕ್ಕಳ ವಿಚಾರದಲ್ಲಿ ತಾವೂ ಇನ್ನೂ ಹೆಚ್ಚಿಗೆ ಕಣ್ಣಲ್ಲಿ ಕಣ್ಣಿಟ್ಟು ನೋಡಬೇಕು. ಅಂಗನವಾಡಿಯಲ್ಲಿ ಸಣ್ಣ ಸಣ್ಣ ಮಕ್ಕಳಿದ್ದು ಯಾವುದೇ ರೀತಿಯ ತೊಂದರೆಯಾಗಬಾರದು. ಅದರಲ್ಲಿಯೂ ಬರಪೀಡಿತ ಪ್ರದೇಶಗಳಲ್ಲಿ ಆ ಮಕ್ಕಳು ಏನನ್ನೂ ಕೇಳುವುದಕ್ಕಾಗುವುದಿಲ್ಲ. ಬರಪೀಡಿತ ಪ್ರದೇಶಗಳಲ್ಲಿ ಬಡತನವಿದ್ದು ಮನೆಗಳಲ್ಲಿ ತಿನ್ನುವುದಕ್ಕೆ ಏನೂ ಸಿಗುವುದಿಲ್ಲವೆಂದು 3, 6 ವರ್ಷ ಮಕ್ಕಳನ್ನು ಅಂಗನವಾಡಿಗೆ ಕಳುಹಿಸುತ್ತಾರೆ. ತಾವು ಎಲ್ಲಾ ಕೋನದಿಂದಲೂ ಯೋಚಿಸಬೇಕು. ಬಹಳ strict ಆಗಿ ಅವರೆಲ್ಲರಿಗೂ ಹೇಳಬೇಕು. ಬರಪೀಡಿತ ಪ್ರದೇಶಗಳಲ್ಲಿರುವ ಅಂಗನವಾಡಿಗಳಲ್ಲಿ ಆ ಮಕ್ಕಳನ್ನು ಹಿಂದಿಗಿಂತಲೂ ಹೆಚ್ಚು ಚೆನ್ನಾಗಿ ನೋಡಿಕೊಳ್ಳಬೇಕು. ಅವರಿಗೆ ಯಾವುದೇ ತೊಂದರೆಯಾಗಬಾರದು. ಅಲ್ಲಿರುವ ಶಾಲೆಗಳಲ್ಲಿ ಜಾರಿಯಲ್ಲಿ midday meals ಏನಿದೆ ಅದನ್ನು ಇನ್ನೂ ವ್ಯವಸ್ಥಿತ ರೀತಿಯಲ್ಲಿ ಮಾಡಿ, ಆ ಮಕ್ಕಳಿಗೆ ಆಹಾರದ ವಿತರಣೆಯಲ್ಲಿ ಯಾವುದೇ ತೊಂದರೆಯಾಗದ ರೀತಿಯಲ್ಲಿ ವ್ಯವಸ್ಥೆ ಮಾಡಬೇಕು. ಆ ಮಕ್ಕಳು ಮತ್ತು ಅಂಗನವಾಡಿಗೆ ಹೋಗುವ ಮಕ್ಕಳ ಬಗ್ಗೆ ನೀವು ಹೆಚ್ಚಿನ ಆಸಕ್ತಿ ವಹಿಸಬೇಕು. ಜೊತೆಗೆ, ವೃದ್ಧಾಪ್ಯ ವೇತನ ಕೊಡುತ್ತೀರಿ, ಸಂಧ್ಯಾ ಸುರಕ್ಷಾ ಕೊಡುತ್ತೀರಿ. ಇದ್ಯಾವುದೂ ಕೂಡ ನಿಲ್ಲಬಾರದು. ಇದು ಬಹಳ ಪ್ರಾಮಾಣಿಕವಾಗಿ ಸಂಬಂಧಪಟ್ಟವರಿಗೆ ತಲುಪುವ ರೀತಿಯಲ್ಲಿ ಮಾಡಬೇಕು. ಅಂಗವಿಕಲರು, ವಯಸ್ಸಾದವರಿಗೆ ಪೆನ್‌ಷನ್ ತಲುಪುವುದು ಇವೆಲ್ಲ ಈ ಸಮಯದಲ್ಲಂತೂ ಯಾವುದೇ ಕಾರಣಕ್ಕೂ ನಿಲ್ಲಬಾರದು. ಈ ಸಮಯದಲ್ಲಿ ಅಂಗನವಾಡಿಗಳಿಗೆ ಹೆಚ್ಚು ಹೆಚ್ಚು ಒಳ್ಳೆಯ ಆಹಾರ ಸಿಗಬೇಕು, midday meals ಸಿಗಬೇಕು. ಇದೂ ಕೂಡ ಬಹಳ ಮುಖ್ಯವಾಗಿರುವಂಥದ್ದು. ಇದನ್ನು ನಾವು ಮರೆಯುತ್ತೇವೆ. Relief works ಅಂತೂ ನಿಜವಾದ ರೀತಿಯಲ್ಲಿ ಬರದಿಂದ ತತ್ತರಿಸಿರುವ ಆ ಗ್ರಾಮಗಳಿಗೆ ತಲುಪಿದರೆ ಮಾತ್ರ ಸಾರ್ಥಕವಾಗುತ್ತದೆ. ಕೇಂದ್ರ ಸರ್ಕಾರದಿಂದ ಸಹ ಸಹಾಯ ಕೊಡುವುದರಲ್ಲಿ ತೊಂದರೆಯಿಲ್ಲ. ಈ ರಾಜ್ಯದಿಂದ ಸಂಸತ್ ಆಯ್ಕೆಗಾಗಿ ಲೋಕಸಭಾ ಸದಸ್ಯರಾಗಿರುವವರು, ಮೂರು ಜನ ಸಚಿವರಿದ್ದು ಅವರಿಗೆ ಅನುಭವವಿದೆ. ಶ್ರೀ ಎಸ್.ಎಂ. ಕೃಷ್ಣರವರು ಇಲ್ಲಿ ಮುಖ್ಯಮಂತ್ರಿಯಾಗಿದ್ದರವರು ಕೇಂದ್ರದಲ್ಲಿ ಸಚಿವರಾಗಿದ್ದಾರೆ. ಶ್ರೀ ವೀರಪ್ಪ ಮೊಯಿಲಿಯವರು ಸಹ ಇಲ್ಲಿ ಮುಖ್ಯಮಂತ್ರಿಯಾಗಿದ್ದವರು. ಈಗ

ಕೇಂದ್ರದಲ್ಲಿ ಕಾನೂನು ಸಚಿವರಾಗಿದ್ದರೆ. ಶ್ರೀ ಧರ್ಮಸಿಂಗ್‌ರವರು ಇಲ್ಲಿ ಮುಖ್ಯಮಂತ್ರಿಯಾಗಿದ್ದವರು ಅಲ್ಲಿ ಸಂಸತ್ ಸದಸ್ಯರಿದ್ದಾರೆ. ಶ್ರೀ ಮಲ್ಲಿಕಾರ್ಜುನ ಖರ್ಗೆ ಅತ್ಯಂತ ಹಿರಿಯ ರಾಜಕಾರಣಿಯಾಗಿದ್ದಾರೆ. ಮುಖ್ಯಮಂತ್ರಿ ಹುದ್ದೆ ಬಿಟ್ಟರೆ ಉಳಿದ ಎಲ್ಲದರಲ್ಲೂ ಅನುಭವವಿದ್ದ ಇವತ್ತು ಕೇಂದ್ರ ಸರ್ಕಾರದಲ್ಲಿ ಕಾರ್ಮಿಕ ಸಚಿವರಾಗಿದ್ದಾರೆ. ರಾಜ್ಯದಲ್ಲಿ ಬರಪರಿಸ್ಥಿತಿ ಇರುವುದರಿಂದ ನಾವು ಕೇಂದ್ರದ ಸಹಾಯವನ್ನು ತೆಗೆದುಕೊಳ್ಳಬೇಕಾಗಿದೆ. ಯಾವುದೇ ಕಾರಣದಿಂದ ತೊಂದರೆಯಾಗದ ರೀತಿಯಲ್ಲಿ ನಾವು ಅವರ ನೆರವನ್ನು ತೆಗೆದುಕೊಳ್ಳಲಿಕ್ಕೆ, ಸಹಾಯವನ್ನು ಪಡೆದುಕೊಳ್ಳಲಿಕ್ಕೆ ಸಹಾಯವಾಗುತ್ತದೆ. ಅದಕ್ಕೆ ನಮ್ಮ ಸಂಸತ್ ಸದಸ್ಯರ ಜೊತೆಯಲ್ಲಿ ಸಮಾಲೋಚನೆ ಮಾಡಿ ಕೇಂದ್ರದಲ್ಲಿ ಮಂತ್ರಿಗಳಾಗಿರುವವರು ನಮಗೆ ಬಹಳಷ್ಟು ಸಹಾಯ ಮಾಡುವವರು ಕೇಂದ್ರದಲ್ಲಿದ್ದಾರೆ. ಅವರ ನೆರವು, ಸಹಾಯ ಪಡೆದುಕೊಂಡು ಯುದ್ಧೋಪಾದಿಯಲ್ಲಿ ಹದ್ದಿನ ಕಣ್ಣಾಗಿ ಇದರ ಕಡೆಗೆ ಗಮನ ಕೊಟ್ಟು ಕಣ್ಣಲ್ಲಿ ಕಣ್ಣಿಟ್ಟು ನಾವೆಲ್ಲರೂ ಕೂಡ, ಪರಸ್ಪರ ವಿಶ್ವಾಸದಿಂದ ಬರ ಪರಿಹಾರದ ವಿರುದ್ಧ ಹೋರಾಟ ಮಾಡುವ ರೀತಿಯಲ್ಲಿ ಒಂದಾಗಿ ಹೋಗೋಣ. ನಾನು parliament ನಲ್ಲಿದ್ದವನು. ರಾಜಕೀಯದಲ್ಲಿ ಅನಿರೀಕ್ಷಿತ ಬೆಳವಣಿಗೆಗಳು ಆಗುತ್ತವೆ. Be as a Roman, when you are in Rome. ಇಲ್ಲಿ ತುಂಬಾ ಛೆನ್ನಾಗಿ ಚರ್ಚೆಗಳಾಗುತ್ತಿವೆ. ನಾನೂ ಕೂಡ ಇಲ್ಲಿಯ ಸಮಸ್ಯೆಗಳ, ರಾಜ್ಯದ ಸ್ಥಿತಿಗತಿಯ ಚರ್ಚೆಯಲ್ಲಿ ಪಾಲ್ಗೊಳ್ಳುವುದಕ್ಕೆ ಅರ್ಥ ಮಾಡಿಕೊಳ್ಳುವುದಕ್ಕೆ ಇಲ್ಲಿ ತುಂಬಾ ಅವಕಾಶವಿದೆ. ಆ ದಿಕ್ಕಿನಲ್ಲಿ ನಾನೂ ಕೂಡ ಕಿಂಚಿತ್ತಾದರೂ ಇಂಥ ಪರಿಸ್ಥಿತಿ ಬಂದ ಸಂದರ್ಭದಲ್ಲಿ ಮಾತನಾಡಬೇಕೆಂದು ತಮ್ಮನ್ನು ಕೇಳಿದ್ದಕ್ಕೆ ನನಗೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳು.

**ಶೀ ಹೆಚ್.ಡಿ. ರೇವಣ್ಣ :** ನಮ್ಮ ಪಕ್ಷದ ಮಹಿಳಾ ಸದಸ್ಯರು ಮಾತನಾಡಬೇಕೆಂದಿದ್ದಾರೆ.

**ಅಧ್ಯಕ್ಷರು:** No, BACಯಲ್ಲಿ ಚರ್ಚೆ ನಡೆದು ಏನು understandingಗೆ ಬರಲಾಗಿದೆ, ಆ ರೀತಿ ತಾವು ನಡೆದುಕೊಳ್ಳಬೇಕು. ರೇವಣ್ಣನವರೆ, ಸಮಸ್ಯೆ ಬರುವುದೇ ನಿಮ್ಮ ಕಡೆಯಿಂದ. Understandingಗೆ ಬಂದಿದ್ದನ್ನು ತಾವು ಅರ್ಥಮಾಡಿಕೊಳ್ಳಬೇಕು. ನೀವೂ ಮತ್ತೆ ಒತ್ತಡಕ್ಕೆ ಮಣಿದುಬಿಡುತ್ತೀರಿ. No, ಇದು ಸರಿಯಲ್ಲ. ನೀವು ಒಬ್ಬರು ಮಾತನಾಡಿ ಅಥವಾ ನೀವು

ಮಾತನಾಡುವುದಿಲ್ಲವೆಂದರೆ ನಿಮ್ಮ ಪರವಾಗಿ ಯಾರಾದರೊಬ್ಬರು ಮಾತನಾಡಲಿ. ಅದು ಬಿಟ್ಟು ನೀವೂ ಮಾತನಾಡಬೇಕು, ನಿಮ್ಮ ಜೊತೆ ಮತ್ತೆ 4 ಜನ ಮಾತನಾಡಬೇಕೆಂದರೆ ಆಗುವುದಿಲ್ಲ.

**ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು) :** ಬೆಳಗ್ಗೆ ನಾವು ಆಡಿದ ಮಾತಿನಿಂದ ತಮಗೇನಾದರೂ ನೋವಾಗಿದ್ದರೆ, ನಿಮ್ಮ ಕುರ್ಚಿ ವಿರುದ್ಧ ನಾವು ಯಾವತ್ತೂ ಮಾತನಾಡುವುದಿಲ್ಲ. ನಾವು ಬಹಳ ವರ್ಷಗಳಿಂದ ಈ ಸದನದಲ್ಲಿದ್ದೇವೆ. ಆದರೆ, ನಿಯಮಾವಳಿಗಳು, ನಮಗೆ ಬಂದಿರುವ ಸಂಪ್ರದಾಯಗಳು ಇವೆಲ್ಲವೂ ಕೂಡ ಪಾಲನೆಯಾಗಬೇಕೆಂಬುದು ಬಹಳ ಮುಖ್ಯ. ಒಳ್ಳೆಯ ಉದ್ದೇಶದಿಂದ ತಾವು ಆ ಮಾತುಗಳನ್ನಾಡಿದ್ದೀರಿ. ನೀವು ತಮ್ಮ ತೀರ್ಮಾನ ಕೊಟ್ಟಿದ್ದರೂ ಕೂಡ ನಮ್ಮ ಮನವಿಯನ್ನು ಪುರಸ್ಕಾರ ಮಾಡಿ ಬಹಳ ಮುಖ್ಯವಾದ, ಪ್ರಮುಖವಾದ ವಿಚಾರ ಇದೆಯೆಂದು ಬರ ಪರಿಸ್ಥಿತಿ ಬಗ್ಗೆ ಚರ್ಚಿಸಲಿಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ. ಅದಕ್ಕೆ ತಮಗೆ ಧನ್ಯವಾದಗಳು. ನಮ್ಮ ಪಕ್ಷದಿಂದ ಇನ್ನೂ ಬಹಳ ಸದಸ್ಯರು ಮಾತನಾಡಬೇಕಾಗಿತ್ತು. ಆದರೆ, ಕಾಲದ ಅಭಾವದಿಂದ ನಾನು BAC ಯಲ್ಲಿ ಒಪ್ಪಿಕೊಂಡು ಬಂದಿರುವುದರಿಂದ ಮಾನ್ಯ ಸದಸ್ಯರಿಗೆಲ್ಲ ಮನವಿ ಮಾಡಿಕೊಂಡಿದ್ದೇನೆ. ಮೊದಲಿಗೆ, ಶ್ರೀನಿವಾಸಪ್ರಸಾದ್‌ರವರು ಮಾತನಾಡುತ್ತಾರೆ ಆಮೇಲೆ ನಾನು ಸ್ವಲ್ಪ ಹೊತ್ತು ಮಾತನಾಡುತ್ತೇನೆ, I am not feeling well today.

**ಅಧ್ಯಕ್ಷರು :** ಸದಸ್ಯರು ಯಾರೂ ಪರಸ್ಪರ ಮಾತನಾಡಬಾರದು. ಸದನದ ಗೌರವ ಕಾಪಾಡಬೇಕು. ಇದು ಒಳ್ಳೆಯದಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಿದ್ದಾರೆ.

**ಶ್ರೀ ಸಿದ್ದರಾಮಯ್ಯ:** ತಮ್ಮಲ್ಲಿ ನನ್ನ ಮನವಿ ಏನೆಂದರೆ, ಸರ್ಕಾರದ ಕಡೆಯಿಂದ ಉತ್ತರ ಕೊಟ್ಟ ಮೇಲೆ ಕೆಲವು ಮಾನ್ಯ ಸದಸ್ಯರು clarification ಕೇಳಲಿಕ್ಕೆ ಅವಕಾಶ ಮಾಡಿಕೊಡಬೇಕು.

**ಅಧ್ಯಕ್ಷರು:** ನೋಡೋಣ. ನಾವು ಒಂದು time limit ಹಾಕಿಕೊಂಡಿದ್ದೇವೆ. ಅನಂತರ ಟೈಮ್ ಉಳಿದರೆ ನೋಡೋಣ.

**ಶ್ರೀ ಸಿದ್ದರಾಮಯ್ಯ :** ಮಧ್ಯಾಹ್ನ 2.30 ಗಂಟೆಯೊಳಗೆ ಮಾತನಾಡಿ ಮುಗಿಸುತ್ತೇನೆ.

**ಅಧ್ಯಕ್ಷರು:** ಹಾಗಾದರೆ ರೇವಣ್ಣನವರು ಯಾವಾಗ ಮಾತನಾಡುವುದು?

**ಶ್ರೀ ಸಿದ್ದರಾಮಯ್ಯ:** ರೇವಣ್ಣ ಇದರ ಬಗ್ಗೆ ಮಾತನಾಡುವುದಿಲ್ಲ. He is very particular about scandal.

**ಅಧ್ಯಕ್ಷರು :** ಇನ್ನೂ reply ಆಗಬೇಕಾಗಿದೆ.

**ಶ್ರೀ ಸಿದ್ದರಾಮಯ್ಯ :** Lunch break ಇಲ್ಲದೆ ಮಧ್ಯಾಹ್ನ ಮೂರು ಗಂಟೆಗೆ ಚರ್ಚೆ ಮುಗಿಸಿ Revenue ಮಂತ್ರಿಯವರು ಉತ್ತರ ಕೊಡಲಿ.

**ಅಧ್ಯಕ್ಷರು :** ನೀವು ಮಧ್ಯಾಹ್ನ 2.15 ರವರೆಗೆ ಮಾತನಾಡಿ. ಆಮೇಲೆ ರೇವಣ್ಣನವರು 10 ನಿಮಿಷ ಮಾತನಾಡಲಿ. ನಂತರ reply ಆಗುತ್ತದೆ. ನಾನು ನಿಜವಾಗಿ Leader of opposition ರವರಿಗೆ restrictions ಹಾಕುವುದಿಲ್ಲ.

**ಶ್ರೀ ಸಿದ್ದರಾಮಯ್ಯ:** ಹಾಕಬಾರದು.

**ಅಧ್ಯಕ್ಷರು:** ಅನಿವಾರ್ಯ ಕಾರಣಗಳಿಂದ ಇವತ್ತು time limitation ಹಾಕುತ್ತಿದ್ದೇವೆ. Leader of oppositionಗೆ ಸಂಪ್ರದಾಯ ಪ್ರಕಾರ ಹಾಕುವುದಿಲ್ಲ. ಅವರಿಗೆ freedom ಇದೆ. Restrictions ಹಾಕುವ ಪ್ರಶ್ನೆಯೇ ಇಲ್ಲ. ಆದರೆ, ಇವತ್ತಿನ ದಿವಸದ time limitation ಪ್ರಕಾರ ಹೋಗಬೇಕಾಗುತ್ತದೆ.

**ಶ್ರೀ ಸಿದ್ದರಾಮಯ್ಯ:** ನಾನು 20 ನಿಮಿಷಗಳಲ್ಲಿ ಮಾತನಾಡಿ ಮುಗಿಸಲು ಪ್ರಯತ್ನಿಸುತ್ತೇನೆ. ನಾನು, ನಮ್ಮೆಲ್ಲ ಸ್ನೇಹಿತರು ರಾಜ್ಯದಲ್ಲಿ ಭೀಕರ ಬರ ಇದೆ, ಬಹಳ ಪ್ರಾಮುಖ್ಯವಾದ ವಿಚಾರ, ರಾಜ್ಯದ ಹಳ್ಳಿಗಾಡಿನ ರೈತರ ಹಿತದೃಷ್ಟಿಯಿಂದ ಇದರ ಬಗ್ಗೆ ಚರ್ಚೆ ಮಾಡಬೇಕೆಂದು ಹೇಳಿ 9ನೇ ತಾರೀಖು ನಿಲುವಳಿ ಸೂಚನೆ ಮಂಡಿಸಿದ್ದೆ. ಆದರೆ, ಸರ್ಕಾರ ಮುಂದುವರೆದ ಅಧಿವೇಶನದಲ್ಲಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ವಿಚಾರದಲ್ಲಿ ಕೃಷಿಗೆ ಒಂದು ಕಾಯಕಲ್ಪ ಕೊಡಬೇಕೆಂದು ಹೇಳಿದ್ದರಿಂದ ನಾವು ಅದಕ್ಕೆ ಆದ್ಯತೆ ಕೊಟ್ಟು ನಿಮ್ಮ ಸೂಚನೆ ಮೇರೆಗೆ ನಾನು ಅಷ್ಟೇ mention ಮಾಡಿದೆ. ನೀವು ಇದನ್ನು Rule 69ಗೆ convert ಮಾಡಿದಿರಿ. ನಿನ್ನೆ ನಾನು Assemblyಯಲ್ಲಿ ಇರಲಿಲ್ಲ. ನಮ್ಮ ಉಪನಾಯಕರು ಮತ್ತು ಅನೇಕ ಜನ ಸದಸ್ಯರು ಬರಗಾಲದ ಬಗ್ಗೆ ಮಾತನಾಡಿದ್ದಾರೆ. ಆಡಳಿತ ಮತ್ತು ವಿರೋಧ ಪಕ್ಷದ ಬಹಳ ಸದಸ್ಯರು ಮಾತನಾಡಿ ಬಹಳ ಉಪಯುಕ್ತ ಸಲಹೆಗಳನ್ನು ಕೊಟ್ಟಿದ್ದಾರೆ. ಕರ್ನಾಟಕದಲ್ಲಿ ಕಳೆದ 9 ವರ್ಷಗಳಿಂದ ಅಂದರೆ 2000ನೇ ಇಸವಿಯಿಂದ ಇಲ್ಲಿಯವರೆಗೆ 7 ವರ್ಷಗಳು ಬರಗಾಲ ಬಂದಿದೆ. Every 2 or 3 years ಕರ್ನಾಟಕದಲ್ಲಿ ಬರಗಾಲ ಬರುತ್ತಲೇ ಇದೆ. ಇದು ನಮಗೆಲ್ಲ ಗೊತ್ತಿದೆ. ನಾವು ಇದರ ಬಗ್ಗೆ ಚರ್ಚೆ ಮಾಡುತ್ತಲೇ ಇದ್ದೇವೆ. Every 2 years 3 years ಬರಗಾಲ ಬರುತ್ತಿದೆ

ಎಂದು ಗೊತ್ತಿದ್ದರೂ ಕೂಡ, ಯಾವುದೇ ಸರ್ಕಾರವಿರಲಿ ಶಾಶ್ವತವಾಗಿ ಪರಿಹಾರ ಮಾಡುವುದಕ್ಕೆ ಒಂದು action plan ಅನ್ನು, ಸ್ಪಷ್ಟವಾದ ಕಾರ್ಯಕ್ರಮವನ್ನು ಇವತ್ತಿನವರೆಗೆ ಮಾಡಿಕೊಂಡಿಲ್ಲವೆಂಬುದು ವಾಸ್ತವಿಕ ವಿಚಾರ. ಈ ವರ್ಷವೂ ಬರಗಾಲವಿದೆ. ಕಳೆದ ವರ್ಷ 84 ತಾಲ್ಲೂಕುಗಳಲ್ಲಿ ಬರಗಾಲವಿತ್ತು. ಹಾಗಾಗಿ, ಕಳೆದ ವರ್ಷ ನಮ್ಮ ಆಹಾರೋತ್ಪಾದನೆ ಸುಮಾರು 20 ಲಕ್ಷ ಟನ್ ಕಡಿಮೆಯಾಯಿತು. ಬಹುಶ: ಈ ವರ್ಷವೂ ಕೂಡ 20 ರಿಂದ 25% ಆಹಾರೋತ್ಪಾದನೆ ಕಡಿಮೆಯಾಗುತ್ತದೆಂದು ಕೃಷಿ ಇಲಾಖೆಯವರು ಹೇಳಿದ್ದಾರೆ ಮತ್ತು ನಾವೆಲ್ಲರೂ ಸಹ ಲೆಕ್ಕಚಾರ ಮಾಡಿದ್ದೇವೆ. ಅಷ್ಟು ಆಗುವ ಸಾಧ್ಯತೆ ಜಾಸ್ತಿ ಇದೆ. ಇಡೀ ದೇಶದಲ್ಲಿ ರಾಜಸ್ಥಾನ ಬಿಟ್ಟರೆ ಕರ್ನಾಟಕವೇ ಬರಗಾಲಕ್ಕೆ ತುತ್ತಾಗುವ ರಾಜ್ಯಗಳಲ್ಲಿ No.1 ಸ್ಥಾನದಲ್ಲಿದೆ. ಏಕೆಂದರೆ, ಕರ್ನಾಟಕದಲ್ಲಿ rain fed area ಸುಮಾರು 70% ಇದೆ. Drought prone area more than 70% ಇದೆ. ಇದಕ್ಕಾಗಿಯೇ ನಾವು ಎರಡು ವರ್ಷಕ್ಕೊಮ್ಮೆ, ಮೂರು ವರ್ಷಕ್ಕೊಮ್ಮೆ ಬರಗಾಲಕ್ಕೆ ತುತ್ತಾಗುತ್ತಲೇ ಇದ್ದೇವೆ. ಆದರೂ ನಾವು ಅನುಭವದಿಂದ ಪಾಠ ಕಲಿಯಲೇ ಇಲ್ಲ. ಕಳೆದ ವರ್ಷ ಬರಗಾಲ ಬಂದಿತ್ತು, ಈ ವರ್ಷ ಬರಗಾಲ ಬಂತು ಎಂದು ನಾವು ಯಾವುದೇ ಒಂದು contingency plan ಕೂಡ ಮಾಡಿಕೊಳ್ಳಲಿಲ್ಲ. ಬರಗಾಲ ಬಂದರೆ ಹೇಗೆ ಎದುರಿಸಬೇಕು ಎನ್ನುವುದಕ್ಕೆ contingency plan ಮಾಡಬೇಕು. ಬೀಜ, ಗೊಬ್ಬರ, ನೀರು, ಮೇವು, ಜನಗಳಿಗೆ ಕೆಲಸ, ಮತ್ತೆ ನಾವು ಪದೇ ಪದೇ ಬರಗಾಲಕ್ಕೆ ತುತ್ತಾಗುತ್ತಿರುವುದರಿಂದ ಶಾರ್ಟ್ ಪಿರಿಯೇಡ್‌ನಲ್ಲಿ ಬೆಳೆಯತಕ್ಕಂಥ ಬೆಳೆಗಳು ಯಾವ್ಯಾವು? ಬರಗಾಲದ ಸಸ್ಪೇನ್ ಮಾಡಿಕೊಳ್ಳವ ಬೆಳೆಗಳು ಯಾವ್ಯಾವು? ಕಡಿಮೆ ಮಳೆ ಬಿದ್ದರೂ ಕೂಡ ಸಸ್ಪೇನ್ ಮಾಡಿಕೊಳ್ಳತಕ್ಕಂಥ ಬೆಳೆಗಳು ಯಾವ್ಯಾವು ಎಂದು ಗಂಭೀರವಾಗಿ ಯೋಚನೆ ಮಾಡಿಲ್ಲ. ನಮ್ಮ ಯೂನಿವರ್ಸಿಟಿಗಳು ಇದರ ಬಗ್ಗೆ ಸಾಕಷ್ಟು ಸಂಶೋಧನೆ ಮಾಡಿಲ್ಲ. ಇದು ನಮ್ಮಲ್ಲಿರುವ ಮುಖ್ಯವಾದ ಬಹಳ ದೊಡ್ಡ ಕೊರತೆ. ನಮ್ಮಲ್ಲಿ ಎರಡು ಕೃಷಿ ವಿಶ್ವವಿದ್ಯಾಲಯಗಳಿವೆ. ಇದರ ಜೊತೆಗೆ ಇನ್ನೊಂದು ಕೃಷಿ ವಿಶ್ವವಿದ್ಯಾನಿಲಯ ಮಾಡುವುದಕ್ಕೆ ಹೊರಟಿದ್ದೀರಿ. ಕಳೆ ಅನೇಕ ವರ್ಷಗಳಿಂದಲೂ ನಾವು ಬರಗಾಲಕ್ಕೆ ತುತ್ತಾಗುತ್ತಿದ್ದೇವೆ. 1999 ರಿಂದ 2004 ರವರೆವಿಗೂ ಸುಮಾರು ನಾಲ್ಕಾರು ವರ್ಷಗಳ ಕಾಲ ಬರಗಾಲ ಇತ್ತು. ಕಳೆದ ವರ್ಷ ಮತ್ತು ಈ ವರ್ಷ ಕೂಡ ಬರಗಾಲವಿದೆ. ರೈತರು ಗೊಬ್ಬರಕ್ಕಾಗಿ ಬಡಿದಾಡುತ್ತಾರೆ. ಅದಕ್ಕಾಗಿ ಶಾಶ್ವತವಾದ ಪರಿಹಾರೋಪಾಯಗಳನ್ನು

ಮಾಡಿಕೊಳ್ಳಬೇಕಾಗುತ್ತದೆ. ಇವುಗಳನ್ನು ಮಾಡಬೇಕಾದರೆ, ನಾವು ಆಹಾರದ ಉತ್ಪಾದನೆ ಹೆಚ್ಚು ಮಾಡಲಿಕ್ಕೆ ಏನು ಮಾಡಬೇಕೆಂದು ವಿಚಾರ ಮಾಡಬೇಕು. Watershed development programme ಗಳನ್ನು ವ್ಯಾಪಕವಾಗಿ ಮಾಡುವ ಕೆಲಸ ಮಾಡಬೇಕು. ಕರ್ನಾಟಕದಲ್ಲಿ ಸುಮಾರು 3,400 ಕೆರೆಗಳಿವೆ. ಮೈನರ್ ಇರಿಗೇಷನ್‌ನಲ್ಲಿ, ಜಿಲ್ಲಾ ಪಂಚಾಯತ್‌ನಲ್ಲಿ, ಒಂದೊಂದು ಕೆರೆಗೆ ಇಷ್ಟಿಷ್ಟು ಅಚ್ಚುಕಟ್ಟು ಪ್ರದೇಶ ಇದೆ ಎಂದು ಲೆಕ್ಕ ಬರೆದುಕೊಂಡಿದ್ದೇವೆ. 200, 300, 500, 1000 ಎಕರೆ ಅಚ್ಚುಕಟ್ಟು ಪ್ರದೇಶ ಇದೆ ಎಂದು ಬರೆದುಕೊಂಡಿದ್ದೇವೆ. ಆದರೆ, ವಾಸ್ತವಿಕವಾಗಿ ಅನೇಕ ಕೆರೆಗಳನ್ನು ಒತ್ತುವರಿ ಮಾಡಿದ್ದಾರೆ. ನಮ್ಮ ಅಚ್ಚುಕಟ್ಟು ಪ್ರದೇಶವನ್ನು ಒತ್ತುವರಿ ಮಾಡಿದ್ದಾರೆ. ಕೆರೆಗಳಿಗೆ ಅಚ್ಚುಕಟ್ಟು ಪ್ರದೇಶಗಳಿಂದ ನಿರು ಬಾರದೆ ಕೆರೆಗಳು ಬಂದ್ ಆಗಿವೆ. ಹೀಗಾಗಿ ಈ ಸಾರಿ ಮುಂಗಾರಿನಲ್ಲಿ 3,400 ಕೆರೆಗಳಲ್ಲಿ 680 ಕೆರೆಗಳಲ್ಲಿ 50 ರಷ್ಟು ನೀರು ತುಂಬಿಲ್ಲ. ಸುಮಾರು 1200 ಕೆರೆಗಳಲ್ಲಿ 40% ಗಿಂತ ಹೆಚ್ಚು ನೀರು ತುಂಬಲಿಲ್ಲ. ಉಳಿದ ಕೆರೆಗಳಲ್ಲಿ ನೀರೇ ಸಂಗ್ರಹಣೆಯಾಗಲಿಲ್ಲ. ನೀರು ಬಾರದೇ ಕೆರೆಗಳು ತುಂಬದೇ ಅವೆಲ್ಲಾ ಒಣಗಿಕೊಂಡು ಬಿದ್ದಿವೆ. ದನಕರುಗಳಿಗೆ ಕುಡಿಯುವುದಕ್ಕೆ ನೀರಿಲ್ಲ. ಈ ರೀತಿಯಾಗಿ 3400 ಕೆರೆಗಳಲ್ಲಿ 50% ಗಿಂತ 40% ಗಿಂತ ಕಡಿಮೆ ನೀರು ತುಂಬಿದ್ದು 1200 ಕೆರೆಗಳಲ್ಲಿ ನೀರೇ ಇಲ್ಲ ಎಂದರೆ ನಮ್ಮ ಅಂತರಜಲ ಯಾವ ಮಟ್ಟಕ್ಕೆ ಕೆಳಗೆ ಹೋಗಿದೆ ಎಂದು ತಮಗೆ ತಿಳಿಸಲಿಕ್ಕೆ ಬಯಸುತ್ತೇನೆ. ಅದಕ್ಕಾಗಿ ನಮ್ಮ ಕೆರೆಗಳನ್ನು ತುಂಬಿಸುವುದಕ್ಕಾಗಿ, ಯಾರ ಮುಲಾಜಿಲ್ಲದೆ, ಒತ್ತುವರಿಯಾಗಿರುವ ಎಲ್ಲವೂ ಕೂಡ ಬುನಾದಿ ಸಮೇತವಾಗಿ ತೆರವುಗೊಳಿಸಬೇಕು. ಏಕೆಂದರೆ, ಕೆಲವರು ಬಹಳ ಪ್ರಭಾವಶಾಲಿಗಳು ಒತ್ತುವರಿ ಮಾಡಿರುತ್ತಾರೆ. ತಹಶೀಲ್ದಾರ್‌ರವರು ಅವುಗಳನ್ನು ಮುಟ್ಟುವುದಕ್ಕೆ ಹೋಗುವುದಿಲ್ಲ. ರಾಜಕೀಯ ಪ್ರಭಾವ ಬೀರತಕ್ಕಂಥವರು ಇರುತ್ತಾರೆ. ಲಂಚ ಕೊಟ್ಟು ಪೊಲೀಸ್‌ರವರನ್ನು, ರೆವಿನ್ಯೂ ಇಲಾಖೆಯವರನ್ನು, ಬಳಸಿಕೊಂಡು ಮೋಸ ಮಾಡಿಕೊಂಡಿರುತ್ತಾರೆ. ಅದಕ್ಕೆ ನನ್ನ ಸಲಹೆ ಏನೆಂದರೆ, 3,400 ಕೆರೆಗಳಿಗೂ ಕೂಡ, ಹೇಗೂ ನಮಗೆ NREG ನಲ್ಲಿ ದುಡ್ಡು ಬಂದಿದೆ. ಅದನ್ನು ಬಳಸಿ. ನಾಲೆಗಳು ಸಿಲ್ಟ್ ಅಪ್ ಮಾಡಬೇಕಾದರೂ NREG ಯಿಂದ ದುಡ್ಡು ಬಳಸುತ್ತಾರೆ, ನೀರಾವರಿಯಿಂದ ಒಂದು ರೂಪಾಯಿ ಕೊಟ್ಟಿಲ್ಲ. ನಮ್ಮ ಬಸವರಾಜ ಬೊಮ್ಮಾಯಿರವರು ಇಲ್ಲಿ ಇಲ್ಲ. ನೀರಾವರಿ ಇಲಾಖೆಯಿಂದ ಕಳೆದ ವರ್ಷ, ಈ ವರ್ಷ for the maintenance of the canals, not a single pie is

given. ನರೇಂದ್ರ ಸ್ವಾಮಿಯವರೆ ನಿಮ್ಮ ಕಡೆಯ ನಾಲೆಗಳನ್ನು ನೀವು ನೋಡಿದ್ದೀರಲ್ಲವೆ? ಈ ಸಾರಿ NREG ಯಿಂದ ತಾನೇ ಮಾಡಿರುವುದು. Not a single pie is released for the maintenance of canals. ಹೋಗಲಿ ಈ ಸಾರಿ NREG ದುಡ್ಡು ಉಪಯೋಗಿಸಿ ಮಾಡಿ. ಅದರಲ್ಲಿ ಕೆಲವು ಎತ್ತಿದರು, ಕೆಲವರು ತೆಗೆದು ಹಾಕಿದರು, jungle remove ಎಂದು ಬರೆದುಕೊಂಡು ಬಿಟ್ಟಿರುತ್ತಾರೆ. ಅದನ್ನು ತೆಗೆದಿದ್ದಾರೋ ಇಲ್ಲವೋ ಅದು ಏನು ಕತೆಯೋ ಅದು ಯಾರಿಗೂ ಗೊತ್ತಾಗುವುದಿಲ್ಲ. ಇದ್ದಕ್ಕಿದ್ದ ಹಾಗೆ ನೀರು ಬಿಟ್ಟುಬಿಡುತ್ತಾರೆ. ಒಂದು ವಾರ ನೀರು ಬಿಡುವುದಕ್ಕೆ ಶುರು ಮಾಡುತ್ತಾರೆ. ಒಂದು ವಾರ ನೀರು ಬಿಡುವುದು ಶುರು ಮಾಡಿ ಅದೆಷ್ಟು ಮಣ್ಣು ಡಿಸಿಲ್ಟ್ ಮಾಡಿದರೋ, ಎಷ್ಟ ಜಂಗಲ್ ತೆಗೆದು ಹಾಕಿದರೋ ಯಾರಿಗೂ ಗೊತ್ತಿರುವುದಿಲ್ಲ, ಲೆಕ್ಕ ಮಾತ್ರ ಬರೆದಿರುತ್ತಾರೆ. This is what going on. ನನ್ನ ಸಲಹೆ ಏನೆಂದರೆ, ಇಷ್ಟು ಕೆರೆಗಳನ್ನು ದುರಸ್ತಿ ಮಾಡುವ ಕೆಲಸವಾಗಬೇಕು. ಇದಕ್ಕೆ ರಾಜ್ಯ ಸರ್ಕಾರ ಹಣ ಖರ್ಚು ಮಾಡಿ. ಕೃಷಿ ಅಭಿವೃದ್ಧಿಯಾಗಬೇಕು ಎನ್ನುವುದಾದರೆ, ಕೃಷಿಯ ಬಗ್ಗೆ ಕಾಳಜಿ ಇರುವುದಾದರೆ, take up this work as a apriority program. M.Iನಲ್ಲಿ ದುಡ್ಡು ಇಲ್ಲ. ಇಲ್ಲಿ ಕಾರಜೋಳರವರು ಇಲ್ಲ. ನಾನು ಕಾರ್‌ಜೋಳರವರಿಗೆ, ಏನ್ರೀ ಹೊಸ ಕೆಲಸ ತೆಗೆದುಕೊಳ್ಳುವುದಕ್ಕೆ ದುಡ್ಡು ಇಟ್ಟು ಕೊಂಡಿದ್ದೀರಾ ಎಂದು ಕೇಳಿದೆ. ಅದಕ್ಕೆ ಅವರು, 53 ಕೋಟಿ ಇದೆ, ನಮಗೆ on going ಕೆಲಸ ಬಿಟ್ಟು, pending bills 125 ಕೋಟಿ ಇದೆ, ಅವರಿಗೆ ಕೊಟ್ಟು ಬಿಟ್ಟರೆ ಏನೂ ಉಳಿದುಕೊಳ್ಳುವುದಿಲ್ಲ, ಹೀಗಾಗಿ ಹೊಸ ಕೆಲಸ ಏನೂ ಇಲ್ಲವೆಂದು ಅವರು ಪಾಪ ಸತ್ಯ ಹೇಳಿಬಿಟ್ಟರು. ಎಲ್ಲಿ ಕ್ಯಾಚ್‌ಮೆಂಟ್ ಏರಿಯಾ ಇದೆ, ಔಟ್‌ಲೆಟ್ಸ್‌ಗಳೇನಿವೆ, ಕೆರೆ ಏನು ಹೂಳು ತುಂಬಿದೆ, ಯಾರು ಒತ್ತುವರಿ ಮಾಡಿದ್ದಾರೆ, ಇದಕ್ಕೆ ಹೆಚ್ಚು ಕಾಳಜಿಯನ್ನು ಕೊಡಬೇಕು ಮಾನ್ಯ ಕರುಣಾಕರರೆಡ್ಡಿಯವರೆ. ಇದಕ್ಕೆ ಹೆಚ್ಚು ಹಣ ಕೊಡಬೇಕು. ಬರಗಾಲ ಬಂತು ಎಂದರೆ ನೀವು ಏನು ಮಾಡುತ್ತಿದ್ದೀರಿ ಎಂದರೆ, ಕೇಂದ್ರ ಸರ್ಕಾರಕ್ಕೆ ಒಂದು ಮೆಮೋರ್ಯಾಂಡಮ್ ಕೊಡುತ್ತೀರಿ. ಎಲ್ಲರೂ ಕೊಟ್ಟಿದ್ದರೆ ನೀವು ಕೊಡುತ್ತೀರಿ. ಕೊಟ್ಟು ಕೇಂದ್ರ ಸರ್ಕಾರದ ಗಮನಕ್ಕೆ ತರುತ್ತೀರಿ. ಈಗ ಅತಿವೃಷ್ಟಿಯಾಯಿತು, ಅತಿವೃಷ್ಟಿಯಲ್ಲಿ ಬಹಳಷ್ಟು ನಷ್ಟವಾಯಿತು. 180 ಜನ ಸತ್ತರು, 1200 ಜಾನುವಾರುಗಳು ಸತ್ತು ಹೋದವು, 11 ಸಾವಿರ ಮನೆಗಳು ಬಿದ್ದು ಹೋದವು. 1 ಲಕ್ಷದ 35 ಸಾವಿರ ಹೆಕ್ಟೇರ್‌ನಲ್ಲಿ ಬಿತ್ತನೆ ಮಾಡಿರುವಂಥದ್ದು ಎಲ್ಲಾ

ಕೊಚ್ಚಿಕೊಂಡು ಹೋಯಿತು. ಉಡುಪಿ, ಮಂಗಳೂರು, ಶಿವಮೊಗ್ಗ, ಹಾಸನ, ಉತ್ತರ ಕನ್ನಡ ಜಿಲ್ಲೆ ಹೀಗೆ 7 ಜಿಲ್ಲೆಗಳಲ್ಲಿ ಕೊಚ್ಚಿಕೊಂಡು ಹೋಯಿತು. 7 ಸಾವಿರ ಕಿ.ಮಿ.ರಸ್ತೆಗಳು ಹಾಳಾಯಿತು. ಇವೆಲ್ಲ ಸರ್ಕಾರ ಕೊಟ್ಟಿರುವ ಅಂಕಿಅಂಶಗಳು. ಸುಮಾರು 400 ಕೆರೆಗಳು ನಾಶವಾದವು. Because of this ಅತಿವೃಷ್ಟಿಯಿಂದ. ಇದು ಜುಲೈನಲ್ಲಿ ಆಯಿತು. ನಂತರ ನಾವು ಹೇಗೆ ಪ್ರಕೃತಿ ವಿಕೋಪಕ್ಕೆ ಸಿಕ್ಕಿ ಹಾಕಿಕೊಳ್ಳುತ್ತೇವೆಂದರೆ, ಒಳನಾಡಿನಲ್ಲಿ ಜುಲೈ 1 ರಿಂದ ಆಗಸ್ಟ್ 15ನೇ ತಾರೀಖಿನವರೆಗೆ ಮಳೆಯಿಲ್ಲ. I am correct ರವೀಂದ್ರನಾಥ್‌ರವರೆ? ಮೇ ಮೊದಲ ಭಾಗದಲ್ಲಿ ಜೂನ್ ಕೊನೆಯಲ್ಲಿ ಮಳೆ ಬಿತ್ತು. ಆಗ ಎಲ್ಲರೂ ಬಿತ್ತನೆ ಮಾಡಿದರು. ಹಾವೇರಿಯಲ್ಲಿ, ದಾವಣಗೇರಿಯಲ್ಲಿ ಗೊಬ್ಬರಕ್ಕಾಗಿ ಹೊಡೆದಾಡಿದರು. ಸಾಲ ಮಾಡಿ ಬೀಜ, ಗೊಬ್ಬರ ತೆಗೆದುಕೊಂಡು ಹೋಗಿ ಬಿತ್ತನೆ ಮಾಡಿದರು. ಬಿತ್ತನೆ ಮಾಡಿದ ಪ್ರದೇಶದಲ್ಲಿ 20 ಲಕ್ಷ ಹೆಕ್ಟೇರ್‌ನಲ್ಲಿ ಬೆಳೆ ಹೊರಟು ಹೋಯಿತು. ಒಟ್ಟು ರಾಜ್ಯದಲ್ಲಿ ಮುಂಗಾರಿಗೆ 70 ಲಕ್ಷ ಹೆಕ್ಟೇರ್‌ನಲ್ಲಿ ನಾವು ಬಿತ್ತನೆ ಮಾಡಬೇಕಾಗಿತ್ತು. ಇದರಲ್ಲಿ 20 ಲಕ್ಷ ಹೆಕ್ಟೇರ್‌ನಲ್ಲಿ ಬಿತ್ತನೆ ಮಾಡಿರುವುದು ಹೊರಟು ಹೋಯಿತು. ಸುಮಾರು 10 ರಿಂದ 12 ಲಕ್ಷ ಹೆಕ್ಟೇರ್ ಭೂಮಿಯಲ್ಲಿ ಬಿತ್ತನೆ ಮಾಡಿಲ್ಲ. ಇವತ್ತಿನ ದಿವಸ ರೈತರಿಗೆ ಮುಂಗಾರಿನಲ್ಲಿ 32 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ನಷ್ಟವಾಗಿದೆ. ಮಾನ್ಯ ಸಹಕಾರ ಇಲಾಖೆ ಸಚಿವರೆ, ಈ ರೀತಿಯಾದರೆ ರೈತರು ಸಾಲದ ಹಣವನ್ನು ಹೇಗೆ ಕಟ್ಟುತ್ತಾರೆ ಹೇಳಿ? ನೀವು ಸಲ ವಸೂಲ್ಮಾಡುವುದಕ್ಕೆ ಹೋದರೆ ಅವರು ಎಲ್ಲಿಂದ ಕಟ್ಟುತ್ತಾರೆ. ಹಣ ಕೊಡುವುದಕ್ಕೆ ಆಗುವುದಿಲ್ಲ. ಕಮರ್ಷಿಯಲ್ ಬ್ಯಾಂಕ್‌ಗಳಿಂದ ರೈತರಿಗೆ 3% ಬಡ್ಡಿ ದರದಲ್ಲಿ ಸಾಲವನ್ನು ಕೊಡಿಸುತ್ತೇವೆಂದು ಹೇಳಿದ್ದೀರಿ. ಆದರೆ ಇವತ್ತಿನವರೆಗೆ ಏತಕ್ಕಾಗಿ ಕೊಡಿಸುವುದಕ್ಕೆ ಆಗಿಲ್ಲವೆಂದರೆ 4% ಬಡ್ಡಿ ದರದಲ್ಲಿ ತೆಗೆದುಕೊಂಡಿರುವ ಸಾಲವನ್ನು ಕಟ್ಟುವುದಕ್ಕೆ ಆಗಿಲ್ಲ. ಮತ್ತೆ ಸಾಲ ಮನ್ನಾ ಮಾಡಿರುವುದರಲ್ಲಿ ನಬಾರ್ಡ್‌ಗೆ ಇನ್ನು ದುಡ್ಡನ್ನು ಪೂರ್ಣವಾಗಿ ಚುಕ್ತಮಾಡಿಲ್ಲ. ಇದೆಲ್ಲಾ ಮಾಡದೆ ಇದ್ದರೆ ರೈತರಿಗೆ ಮುಂಗಾರಿನಲ್ಲಿ ಸಾಲ ಸಿಗುವುದಿಲ್ಲ. ಎಲ್ಲಿ ಸಾಲ ಸಿಗದೆ ಇದ್ದಾಗ ಒಡವೆ ತೆಗೆದುಕೊಂಡು ಹೋಗಿ ಪಾನ್ ಬ್ರೋಕರ್ಸ್ ಹತ್ತಿರು ಗಿರವಿ ಇಟ್ಟು ಸಾಲ ತೆಗೆದುಕೊಳ್ಳುತ್ತಾರೆ. ಈ ಒಂದು ಕಾರಣದಿಂದ ಸಾಲಗಾರರಾಗಿ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ಕಳೆದ ವರ್ಷ 300 ಕ್ಕೂ ಹೆಚ್ಚು ಜನರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಈ ವರ್ಷ ಮತ್ತೆ 50 ರಿಂದ 60 ಜನರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಹಳ್ಳಿಗಾಡಿನ ಜನರು ಮರ್ಯಾದಸ್ಥರು.

ಇವತ್ತಿನ ದಿವಸ ಮೋಸ ಮಾಡುವವರು ಬೇರೆಯವರು. ಹಳ್ಳಿಯ ಜನರು ಯಾವತ್ತೂ ಮೋಸ ಮಾಡುವುದಿಲ್ಲ. ಅವರು ಮೋಸ ಮಾಡುವುದು ಬಹಳ ಕಡಿಮೆ. ಹಿಂದೆ ಯಾರಾದರೂ ಮನೆಗೆ ಬಂದು ಸಾಲ ಕೇಳಿದರೆ ಸಾಲ ಕೊಡುವುದಕ್ಕೆ ಆಗಲಿಲ್ಲವೆಂದು ಆತ್ಮಹತ್ಯೆ ಮಾಡಿಕೊಂಡಿರುವ ಅನೇಕ ನಿದರ್ಶನಗಳಿವೆ. ಅಷ್ಟರಮಟ್ಟಿಗೆ ಹಳ್ಳಿಯ ಜನರು ಮಾರ್ಯಾದಸ್ಥರು ಎಂದು ಹೇಳುವುದಕ್ಕೆ ಬಯಸುತ್ತೇನೆ. ನಮ್ಮ ತಪ್ಪು ನೀತಿಗಳಿಂದ ಇವತ್ತಿನದಿವಸ ಇದೆಲ್ಲಾ ಆಗುತ್ತಿದೆ. ಈಗಲಾದರೂ ಕೂಡ ನಾವು ಎಚ್ಚೆತ್ತುಕೊಳ್ಳದಿದ್ದರೆ ನಾವು ರೈತರನ್ನು ಹಳ್ಳಿಗಳಲ್ಲಿ ನಿಲ್ಲಿಸುವುದಕ್ಕೆ ಆಗುವುದಿಲ್ಲ. ಹಳ್ಳಿಯಲ್ಲಿ ಇರಿ ಎಂದರೆ ಅವರು ಹಳ್ಳಿಯಲ್ಲಿ ಏತಕ್ಕೆ ಇರುತ್ತಾರೆ? ಈ ರೀತಿಯಾಗಿ ಮಳೆ ಹೋದರೆ ಏನು ಮಾಡುತ್ತಾರೆ. ಇವತ್ತಿನದಿವಸ ಸರಾಸರಿ ಛಿoಟಜuಟiಡ ಇರುವುದೇ 1.9 ಹೆಕ್ಟೇರ್. ಆದರೆ, ಇದು ಕೂಡ ಕಡಿಮೆಯಾಗಿದೆ. ಅಂದರೆ, ಈಗ 1.6 ಹೆಕ್ಟೇರ್‌ಗೆ ಬಂದಿದೆ. 2001ನೇ ಇಸವಿಯಲ್ಲಿ 1.9 ಹೆಕ್ಟೇರ್ ಇತ್ತು. It is further reduced to 1.5 or 1.6 hector. ಇಷ್ಟಕ್ಕೆ ನಮ್ಮ holding ಬಂದಿದೆ. ಒಬ್ಬ ಸಣ್ಣ ರೈತನಿಗೆ ಒಂದು ಸಾರಿ ಬೆಳೆ ಹೋದ ಮೇಲೆ ಆತನ ಗತಿ ಏನು? ಆತ ಹೇಗೆ ಬದುಕುತ್ತಾನೆ? ಆದ್ದರಿಂದ. ಈತನ ಬಗ್ಗೆ ಹೆಚ್ಚು ಕಳಕಳಿ ಬೇಕು. ಮತ್ತೆ ಈತನನ್ನು ಹೇಗೆ ಉಳಿಸಬೇಕೆಂಬುದು ಮತ್ತು ಈತನಿಗೆ ಆಹಾರವನ್ನು ಯಾವ ರೀತಿಯಾಗಿ ಕೊಡಬೇಕೆಂದು ಹಾಗೂ ಈತನನ್ನೂ ಯಾವ ರೀತಿಯಾಗಿ ಬದುಕಿಸಬೇಕೆಂಬುದರ ಬಗ್ಗೆ ಮತ್ತು ಈತನಿಗೆ ಕುಡಿಯುವ ನೀರನ್ನು ಹೇಗೆ ಕೊಡುವುದೆಂದು ಮತ್ತು ಈತನಿಗೆ ಯಾವ ರೀತಿಯಾಗಿ ಕೆಲಸ ಕೊಡಬೇಕೆಂಬುದರ ಬಗ್ಗೆ ಯೋಚನೆ ಮಾಡಬೇಕು. ವ್ಯವಸಾಯ ಮಾಡುವವರಿಗೆಲ್ಲಾ ಗೊತ್ತಿರಬಹುದು. ನಾನೂ ಕೂಡ ವ್ಯವಸಾಯ ಕುಟುಂಬದ ರೈತನ ಮಗನಾಗಿದ್ದೇನೆ. ನಾನು ರೈತನ ಮಗನಾಗಿ ಎಲ್ಲವನ್ನು ನೋಡಿದ್ದೇನೆ. ಒಂದು ಕಾಲದಲ್ಲಿ 2 ಅಥವಾ 3 ಸಾವಿರ ರೂಪಾಯಿಗೆ ಒಂದು ಜೊತೆ ಒಳ್ಳೆಯ ಎತ್ತುಗಳು ಸಿಗುತ್ತಿದ್ದವು. ಆದರೆ, ಇವತ್ತಿನದಿವಸ ಏಳೆಂಟು ಕ್ವಿಂಟಲ್ ತುಂಬಿರುವ ಗಾಡಿಯನ್ನು ಎಳೆಯುವ ಎತ್ತುಗಳ ಜೋಡಿಗೆ ಒಂದು ಲಕ್ಷ ರೂಪಾಯಿ ಕೊಡಬೇಕಾಗುತ್ತದೆ. ಒಂದು ಲಕ್ಷ ರೂಪಾಯಿ ಎತ್ತುಗಳೇನಾದರು ಹೊರಟು ಹೋದರೆ ಆತ ಮತ್ತೆ ಎತ್ತುಗಳನ್ನು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಈ ಒಂದು ಕಾರಣಕ್ಕಾಗಿಯೇ ರೈತರು ವ್ಯವಸಾಯವನ್ನು ಬಿಟ್ಟು ಬಿಡುತ್ತಾರೆ. ಈ ರೀತಿಯಾದರೆ ವ್ಯವಸಾಯ ಮಾಡುವುದಕ್ಕೆ ಮತ್ತೆ ಎತ್ತುಗಳು ಎಲ್ಲಿಂದ ಬರುತ್ತದೆ.

These are the hard facts. ಹಳ್ಳಿಗಳಲ್ಲಿ ಇರತಕ್ಕಂಥದ್ದು hard facts. ಇದರ ಜೊತೆಗೆ ಈಗ ಬರಗಾಲ ಬಂತು. ನಿಮ್ಮ ಕಂದಾಯ ಇಲಾಖೆಯವರು ಈಗ ಏನು ಮಾಡುತ್ತಾರೆಂಬುದನ್ನು ಹೇಳುವುದಕ್ಕೆ ಬಯಸುತ್ತೇನೆ. ನಾನು ಹೇಳುವುದನ್ನು ನೀವು ಬೇಕಾದರೆ ನಿಮ್ಮ ಇಲಾಖೆಯಲ್ಲಿ ಪರಿಶೀಲನೆ ಮಾಡಿ. ಮಳೆ ಎಷ್ಟು ಬೀಳುತ್ತದೆಂಬುದನ್ನು ನೋಡುವುದಕ್ಕೆ rain gauge ಇಟ್ಟುಕೊಂಡಿರುತ್ತಾರೆ. ಆದರೆ, ಇವುಗಳನ್ನು 300 ಕಿ.ಮೀ.ಗಿಂತ ದೂರಕ್ಕೊಂದು rain gauge ಗಳನ್ನು ಇಟ್ಟಿದ್ದಾರೆ. ಇವುಗಳಲ್ಲಿ ಕೆಲವು ಕಿತ್ತು ಹೋಗಿರುವುದರಿಂದ ಕೆಲಸವೇ ಮಾಡುವುದಿಲ್ಲ. ಕರಾರುವಕ್ಕಾಗಿ ಎಷ್ಟು ಮಳೆ ಬಿದ್ದಿದೆ ಎಷ್ಟು ಮಳೆ ಬಿದ್ದಿಲ್ಲ ಎಂಬುದರ ಬಗ್ಗೆ ತಪ್ಪು ಲೆಕ್ಕಚಾರವೇ ಜಾಸ್ತಿ ಇರುತ್ತದೆ. The method you have adopted and the telemetric rain gauges are distributed are not adequate and most of them are not functioning. Then how do you asses? ಎಷ್ಟು ಕರೆಕ್ಟ್ ಆಗಿ ಮಳೆ ಬಿದ್ದಿದೆ ಎಂದು ಮತ್ತು ರೈತರಿಗೆ ಎಷ್ಟು ನಷ್ಟವಾಗಿದೆ ಎಂದು ಹೇಗೆ ಅಸೆಸ್ ಮಾಡುವುದಕ್ಕೆ ಆಗುತ್ತದೆ? That is why I suggest, the other day also I suggested, even today I am suggesting. ಪ್ರತಿಯೊಂದು ಗ್ರಾಮ ಪಂಚಾಯಿತಿಯಲ್ಲಿ ಒಂದು Telemetric Rain Gauge ಇಡಬೇಕಾಗುತ್ತದೆ. ಕೇಂದ್ರ ಸರ್ಕಾರ 2007ನೇ ಇಸವಿಯಿಂದ Weather Based Insurance Scheme ಅನ್ನು ಜಾರಿಗೆ ತಂದಿದೆ. ಇದರ ಪ್ರಕಾರ ನಷ್ಟವಾಗಿರುವುದಕ್ಕೆ ರೈತರಿಗೆ ಸಹಾಯ ಸಿಗಬೇಕಾದರೆ ಕರೆಕ್ಟ್ ಆಗಿ assessment ಆಗಬೇಕಾಗುತ್ತದೆ. ಹಾಗೆಯೇ ಬೆಳೆ ವಿಮೆ ಸರಿಯಾಗಿ ಆಗಬೇಕಾಗುತ್ತದೆ. ಆದರೆ, ನೀವು Telemetric Rain Gauges ಗಳನ್ನು 300 ಕಿ.ಮೀ. ದೂರಕ್ಕೊಂದು ಇಟ್ಟಿರುವುದರಿಂದ ಬೆಳೆ ಎಷ್ಟು ಹಾಳಾಯಿತ್ತೆಂದು ಸರಿಯಾಗಿ ಅಸೆಸ್ ಮಾಡುವುದಕ್ಕೆ ಆಗುವುದಿಲ್ಲ. ನಿಮಗೊಂದು ಉದಾಹರಣೆ ಹೇಳುತ್ತೇನೆ. ಬೇಕಾದರೆ ನೀವು ಇದನ್ನು ಪರಿಶೀಲನೆ ಮಾಡಿ ನೋಡಿ. ಮಾನ್ಯ ಕಂದಾಯ ಮಂತ್ರಿಯವರೆ, ನಿಮ್ಮ ಹತ್ತಿರ ಇರುವ ಮಳೆ ಬಿತ್ತನೆ ಲೆಕ್ಕಾಚಾರದ ಬಗ್ಗೆ ಹೇಳುವುದಾದರೆ, ನೆಲಮಂಗಲದಲ್ಲಿ ಇನ್ನು ಬಿತ್ತನೆಯೇ ಮಾಡಿಲ್ಲ. ಅಲ್ಲಿ rain fall data ಏನು ಹೇಳುತ್ತದೆಂದರೆ, ಅಲ್ಲಿ 35 ರಿಂದ 45 ರವರೆಗೆ ಎಕ್ಸಸ್ ಮಳೆಯಾಗಿದೆ ಎಂದು ರೆಕಾರ್ಡ್‌ನಲ್ಲಿದೆ. ಈ ರೀತಿಯಾದರೆ, ಬೆಳೆ ವಿಮೆ ಪ್ರಕಾರ ರೈತರಿಗೆ ಒಂದು ರೂಪಾಯಿ ಸಿಗುತ್ತದೆಯೇ? Not a single pie farmers are getting, who were affected by drought. ಈಗ ಮಳೆ ಕೂಡ ಇಲ್ಲ.

ಆದ್ದರಿಂದ, This to be set right immediately. ಎಷ್ಟೇ ದುಡ್ಡು ಖರ್ಚು ಆಗಲಿ ಇವತ್ತಿನ ದಿವಸ ನಮ್ಮ ರಾಜ್ಯದಲ್ಲಿರುವ 5680 ಗ್ರಾಮಪಂಚಾಯಿತಿಗಳಿಗೆ ಒಂದೊಂದು Telemetric Rain Gauge ಅನ್ನು ಇಡಬೇಕು. ರೈತರಿಗೆ ಸಹಾಯ ಮಾಡಬೇಕೆನ್ನುವುದಾದರೆ ಇದಕ್ಕಾಗಿ ಎಷ್ಟಾದರು ಖರ್ಚಾಗಲಿ ಪರವಾಗಿಲ್ಲ. ಒಂದೊಂದಕ್ಕೆ ಸುಮಾರು 25 ಸಾವಿರ ರೂಪಾಯಿ ಆಗಬಹುದು. ಆದ್ದರಿಂದ, ಇದನ್ನು ಮೊದಲು ಮಾಡಿ. ಆದರೆ, ಏತಕ್ಕಾಗಿ ಹಿಂದೇಟು ಮಾಡುತ್ತಿದ್ದೀರಿ. ನಾನು ನೆಲಮಂಗಲ ತಾಲ್ಲೂಕು ಬಗ್ಗೆ ಹೇಳಿದ್ದೇನಷ್ಟೆ. ನಾನು ಹೇಳುವ ಅನೇಕ ತಾಲ್ಲೂಕುಗಳ ರೆಕಾರ್ಡ್‌ಗಳನ್ನು ತಾವು ಪರಿಶೀಲನೆ ಮಾಡಿ. ಕೋಲಾರ ಜಿಲ್ಲೆಯ ಹೋಬಳಿಯಲ್ಲಿ ವಾಸ್ತವಿಕವಾಗಿ ವಾಡಿಕೆ ಮಳೆಗಿಂತ 50% ನಷ್ಟು ಮಳೆ ಅಲ್ಲಿ ಕಡಿಮೆಯಾಗಿದೆ. ಆದರೆ, ವಾಡಿಕೆ ಮಳೆಗಿಂತ 9% ನಷ್ಟು ಹೆಚ್ಚಿಗೆ ಮಳೆ ಬಿದ್ದಿದೆ ಎಂದು ನಿಮ್ಮ rain gauge ತೋರಿಸಿದೆ. 50% ಗಿಂತ ಕಡಿಮೆ ಮಳೆಯಾಗಿರುವಂಥ ಕೋಲಾರ ಹೋಬಳಿಯಲ್ಲಿ 9% ಜಾಸ್ತಿ ಮಳೆ ಬಿದ್ದಿದೆ ಎಂಬುದು ನಿಮ್ಮ rain gauge ನಲ್ಲಿ ತೋರಿಸಿದೆ. ಕೋಲಾರ ಹೋಬಳಿಗೆ ತಾವು ಹೋಗಿ ಅಲ್ಲಿ ಮಳೆ ಮತ್ತು ಬಿತ್ತನೆಯಾಗಿದೆಯೇ ಎಂಬುದನ್ನು ನೋಡಿಕೊಂಡು ಬನ್ನಿ. ಈ ಹೋಬಳಿಯನ್ನು ನೀವು ಡಿಕ್ಲೇರ್ಡ್ ಮಾಡದೆ ಹೋದರೆ, how can they get the reliefs for drought? ಆದ್ದರಿಂದ, ವಾಸ್ತವಿಕವಾದ ವಿಚಾರವನ್ನು ಪತ್ತೆಹಚ್ಚಿ ಅವುಗಳಿಗೆ ಪರಿಹಾರ ಕೊಡುವಂಥ ಕೆಲಸ ಸರ್ಕಾರದಿಂದ ಆಗಬೇಕೆಂಬುದು ನನ್ನ ಆಗ್ರಹ. ಇದೇ ರೀತಿಯಾಗಿ ಇನ್ನು ಅನೇಕ ಉದಾಹರಣೆಗಳಿವೆ. ಮಾಲೂರು ತಾಲ್ಲೂಕು ಹೋಬಳಿಗಳಲ್ಲಿ 50 ಇದ್ದರೆ 86% deficit ಇದೆ ಎಂದು ಇದರಲ್ಲಿದೆ. ಇದು ನಿಜವಾಗಿ ಇರತಕ್ಕಂಥದ್ದು. ಆದರೆ, ಅಲ್ಲಿ excess rain fall ಎಂದು ರಿಪೋರ್ಟ್‌ನಲ್ಲಿದೆ. ನಮ್ಮ ನಂಜನಗೂಡು ತಾಲ್ಲೂಕಿನ ದೊಡ್ಡಕವಲಂದೆ ಹೋಬಳಿಯಲ್ಲಿ ಮಳೆ ಬಿದ್ದಿಲ್ಲ. ಅಲ್ಲಿ ಬೆಳೆಯೆಲ್ಲ ಹಾಳಾಗಿದೆ. But Nanjangudu Taluk is not declared as drought affected taluk. ಮಾನ್ಯ ಮಹದೇವಪ್ರಸಾದ್‌ರವರೆ ಏಕೆ ಈ ರೀತಿಯಾಗಿತ್ತಿದೆ ಎಂದರೆ ಇವರು Telemetric Rain Gauge ಅನ್ನು 300 Sq. k.m. ಒಂದೊಂದು ಇಟ್ಟಿದ್ದಾರೆ. ಇದರಲ್ಲಿ ಕೆಲವು ಕೆಟ್ಟು ಹೋಗಿರುವುದರಿಂದ ಕೆಲಸ ಮಾಡುತ್ತಿಲ್ಲ. ಯಾವ ತಾಲ್ಲೂಕು ಮತ್ತು ಹೋಬಳಿಯಲ್ಲಿ ನಿಜವಾಗಿ ತೊಂದರೆಯಾಗಿದೆ ಎಂಬ ವಾಸ್ತವಿಕ ವಿಚಾರವನ್ನು ನಾವು ಪತ್ತೆ ಮಾಡುವುದಕ್ಕೆ ಆಗುತ್ತಿಲ್ಲ. ಈ ಒಂದು ಕಾರಣದಿಂದ ಇವತ್ತಿನದಿವಸ ಬರ ಪರಿಹಾರ ಕಾರ್ಯಕ್ರಮಗಳು

ಆದರೂ ಕೂಡ ಅನೇಕ ಜನ ರೈತರಿಗೆ ಒಂದು ರೂಪಾಯಿ ಸಿಗುತ್ತಿಲ್ಲ. ಕೇಂದ್ರ ಸರ್ಕಾರದವರು 2007ರಿಂದ ಮಾಡಿದ್ದಾರೆ. ಅವರ ಕೈಗೆ 1.00 ರೂಪಾಯಿಯು ಅವರ ಕೈಗೆ ಸಿಗುವುದಿಲ್ಲ. ಈ ತರಹ ಅನೇಕ ತಾಲ್ಲೂಕುಗಳ ಬಗ್ಗೆಯೂ ಹೇಳಬಹುದು. ಕಸಬಾ ಹೋಬಳಿ ಮುಳಬಾಗಿಲು, ಪಾವಗಡ, ಶ್ರೀನಿವಾಸಪುರ, ಭಾಗೇಪಲ್ಲಿ, ಕರುಣಾಕರ ರೆಡ್ಡಿಯವರ ತಾಲ್ಲೂಕು ಬಳ್ಳಾರಿ, ಕಸಬಾ ಹೋಬಳಿಯಲ್ಲಿ ಏಕೆಂದರೆ ನಿಮ್ಮ report ಏನಿದೆ ಎಂದರೆ, it is more than normal ಎಂದು ಬಂದಿದೆ. But the truth is, otherwise. ಅಲ್ಲಿ ಮಳೆಯೂ ಆಗಿಲ್ಲ. ಅಲ್ಲಿ ಯಾರಿಗೂ ಕೂಡ Weather Based Crop Insurance ಸಿಕ್ಕುವುದಿಲ್ಲ. ಏಕೆಂದರೆ, more than ವಾಡಿಕೆ ಮಳೆಗಿಂತ ಜಾಸ್ತಿಯಾಗಿಬಿಟ್ಟಿದೆ. Normal rainಗಿಂತ ಜಾಸ್ತಿಯಾಗಿ ಬಿಟ್ಟಿದೆ. ಹಾಗೆಯೇ ಕೂಡ್ಲಿಗಿಯಲ್ಲಿ, ಮಾನ್ವಿಯಲ್ಲಿ, ಕುಂದಗೋಳದಲ್ಲಿ ಇದು ಒಂದು ಕಡೆಯಾಯಿತು. ಇದು NREGA ದುಡ್ಡು ನೀವು ಅದನ್ನು ಬಿಟ್ಟು ಬೇರೆ ಯಾವುದೇ ಒಂದೂ ರೂಪಾಯಿಯನ್ನು ಖರ್ಚು ಮಾಡಿರುವುದಿಲ್ಲ. ನಿಮ್ಮ ಸರ್ಕಾರದಿಂದ except ನಿಮ್ಮ ಪಾಲನ್ನು ಮಾಡಿರುವುದನ್ನು ಬಿಟ್ಟರೆ, ಕಳೆದ ವರ್ಷ 321 ಕೋಟಿ ರೂಪಾಯಿಗಳನ್ನು ಬರಗಾಲ ಇಟ್ಟಿರುವುದು. ನಿಮ್ಮ 34 ಕೋಟಿ ರೂಪಾಯಿಗಳು CRF 25% ಬಿಟ್ಟರೆ, ಅದನ್ನು ಬಿಟ್ಟು ನೀವು ಒಂದು ರೂಪಾಯಿಯನ್ನು ಕಳೆದ ವರ್ಷ ನಿಮ್ಮ ಸರ್ಕಾರದಿಂದ ಖರ್ಚು ಮಾಡಿರುವುದಿಲ್ಲ, not a single pie, ನೀವು ಕೊಟ್ಟಿರುವಂತಹ ಅಂಕಿ ಅಂಶಗಳ ಪ್ರಕಾರವೇ ಹೇಳುತ್ತಿದ್ದೇನೆ. 321 ಕೋಟಿ ರೂಪಾಯಿಯನ್ನು ಕೂಡ 131 ಕೋಟಿ ರೂಪಾಯಿಗಳು ಕಳೆದ ವರ್ಷದ್ದು ಡಿಸಿಯವರ ಕಆ ಅಕೌಂಟ್‌ನಲ್ಲಿದೆ. ನಿಮ್ಮಿಂದ ಒಂದು ರೂಪಾಯಿಯ ಖರ್ಚು ಆಗಿರುವುದಿಲ್ಲ. ಕಳದೆ ವರ್ಷದ್ದು 131 ಕೋಟಿ ರೂಪಾಯಿಗಳು ಈ ವರ್ಷ ಬಂದಿರುವಂತಹ CRF, NCCF, ಎಲ್ಲವೂ ಸೇರಿ ಇವತ್ತು 284 ಕೋಟಿ ರೂಪಾಯಿಗಳು ನಿಮ್ಮ ಹತ್ತಿರ ಇರಬೇಕು. ನೀವು ಇಲ್ಲಿಯವರೆಗೆ ಬಿಡುಗಡೆ ಮಾಡಿರುವ ಹಣ 115 ಕೋಟಿ ರೂಪಾಯಿಗಳು. ನೀವು ಒಂದು ಸಾರಿ 52 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೀರಿ. ಆಮೇಲೆ ಇನ್ನೊಂದು ಸಾರಿ Fodder Mini Kitsಗೆಂದು 7 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ. Diesel Subsidy ಎಂದು 3 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ. 45 ಕೋಟಿ ರೂಪಾಯಿಗಳನ್ನು Drought Reliefಗೆ ಕೊಟ್ಟಿದ್ದೀರಿ. ಒಟ್ಟು 115 ಕೋಟಿ ರೂಪಾಯಿಗಳನ್ನು ಕೊಟ್ಟಿರುವುದು. Total 52 crores,

45 crores, 7 crores, 3 crores, 115 crores, out of 284 crores. Then why are blaming Central Government when such being the case? ನೀವು ಒಂದು ರೂಪಾಯಿಯನ್ನು ನಿಮ್ಮ ಖಜಾನೆಯಿಂದ ಕೊಡದೆಯೇ ಕೇಂದ್ರಸರ್ಕಾರ ಕೊಟ್ಟಿಲ್ಲ, ಕೇಂದ್ರ ಸರ್ಕಾರ ಕೊಟ್ಟಿಲ್ಲವೆಂದರೆ, ಏತಕ್ಕಾಗಿ ಹೇಳುತ್ತೀರಿ. ಕಳೆದ ವರ್ಷ 321 ಕೋಟಿ ರೂಪಾಯಿಗಳಲ್ಲಿ why you could not able to spent entire money? 321 ಕೋಟಿ ರೂಪಾಯಿಗಳನ್ನು ಏತಕ್ಕಾಗಿ ಖರ್ಚು ಮಾಡಲು ಆಗಲಿಲ್ಲ. It is a fact. Facts cannot be denied. ಈ ತರಹ ಇಷ್ಟು ದುಡ್ಡನ್ನು ಇವರು ಬಿಡುಗಡೆ ಮಾಡಿ, 321 ಕೋಟಿ ರೂಪಾಯಿಗಳಲ್ಲಿ ಅಷ್ಟು ಹಣವು ಉಳಿದುಕೊಂಡಿತಾ? ಈ ವರ್ಷ ಇಲ್ಲಿಯವರೆಗೆ 284 ಕೋಟಿ ರೂಪಾಯಿಗಳನ್ನು ಈಗಾಗಲೇ ಇವರದು 17 ಕೋಟಿ ರೂಪಾಯಿಗಳು ಸೇರಿ, ಈಗಾಗಲೇ 284 ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರದವರು ಕೊಟ್ಟಿರುವುದು, ಕಳೆದ ವರ್ಷ ಉಳಿದುಕೊಂಡಿರುವಂತಹ ಹಣ, ಇವರ 17 ಕೋಟಿ ರೂಪಾಯಿಗಳು ಸೇರಿ 284 ಕೋಟಿ ರೂಪಾಯಿಗಳು ಇದೆ. ಕೇಂದ್ರ ಸರ್ಕಾರವು ನಮ್ಮ ರಾಜ್ಯ ಸರ್ಕಾರಕ್ಕೆ ಮಲತಾಯಿ ಧೋರಣೆಯನ್ನು ತೋರಿಸುತ್ತಿದೆ. ಇವರು Memorandum ಕೊಡುವುದು ಲೇಟ್, ನೀವು 317 ಕೋಟಿ ರೂಪಾಯಿಗಳಿಗೆ ಜುಲೈನಲ್ಲಿ Memorandum ಕೊಟ್ಟಿದ್ದೀರಿ. ಆಗಸ್ಟ್‌ನಲ್ಲಿ 394 ಕೋಟಿ ರೂಪಾಯಿಗಳಿಗೆ ಕೊಟ್ಟಿದ್ದೀರಿ. ಅವರು ಬಂದು ಜುಲೈ ತಿಂಗಳಲ್ಲಿ ಬಂದು ನೋಡಿಕೊಂಡು ಹೋಗಿದ್ದಾರೆ. ನೀವು ಒತ್ತಾಯವನ್ನು ಮಾಡಿ ಹಣವನ್ನು ತೆಗೆದುಕೊಳ್ಳಬೇಕು. ಆಮೇಲೆ NREGAದಲ್ಲಿ ಹಣ ಕೆಲವು ಕಡೆಯಲ್ಲಿ ಅದನ್ನು ಖರ್ಚು ಮಾಡುವುದಕ್ಕೆ ಬರುವುದಿಲ್ಲ. ಏಕೆಂದರೆ, it is purely for Rural Development ಅದನ್ನು ಹಳ್ಳಿಗಾಡಿಗೆ ಮಾತ್ರ ಖರ್ಚು ಮಾಡಬೇಕು. ನಮ್ಮಲ್ಲಿ ಹೇಗಿದೆ ಎಂದರೆ, ಕೆಲವು ಹಳ್ಳಿಗಳು, ಕೆಲವು ಪಟ್ಟಣಗಳು so called towns, Yelburga ಅದು ಹಳ್ಳಿಯೂ ಅಲ್ಲ ಪಟ್ಟಣವೂ ಸಹ ಅಲ್ಲ. ಅಲ್ಲಿರುವವರೆಲ್ಲರೂ ವ್ಯವಸಾಯವನ್ನು ಮಾಡುವವರು ಆಗಿದ್ದಾರೆ. ಅವರಿಗೆ NREGAದಲ್ಲಿ ಒಂದು ರೂಪಾಯಿ ಖರ್ಚು ಮಾಡುವುದಕ್ಕೆ ಬರುತ್ತದೆಯೇ? Why cannot you spent from your Government, from your treasury to save the farmers of Yleburga, who are living in Yelburga town. ಇದನ್ನು ಏಕೆ ಮಾಡಿಲ್ಲ? That is my allegation. ಯಲ್ಬುರ್ಗಾಕ್ಕೆ ಒಂದು ರೂಪಾಯಿಯನ್ನು ಖರ್ಚು ಮಾಡುವುದಕ್ಕಾಗಲಿಲ್ಲ. ಹಾಗೆಯೇ ಬೀದರ್

ಜಿಲ್ಲೆಯಲ್ಲಿರತಕ್ಕಂತಹ ಔರಾದ್ ಇರಬಹುದು, ಹುಮ್ನಾಬಾದ್ ಇರಬಹುದು, ಭಾಲ್ಕಿ ಇರಬಹುದು, ಅವು ಹಳ್ಳಿಗಳು ಅಲ್ಲ ಪಟ್ಟಣವು ಸಹ ಅಲ್ಲ and the people who are living in so called towns and villages are villagers and agriculturists. ನೀವು ದುಡ್ಡು ಕೊಟ್ಟಿರುವುದಿಲ್ಲ. NREGAದಲ್ಲಿ ಒಂದು ರೂಪಾಯಿ ಹಣವನ್ನು ಖರ್ಚು ಮಾಡುವುದಕ್ಕಾಗುವುದಿಲ್ಲ. How can you save those farmers? What are your programmes? ಅವರಿಗೆ ಏನು ಮಾಡಿದ್ದೀರಿ? ಈಗ ಟೈಮ್ ಹೋಗುತ್ತಿದೆ ನನಗೆ ಗೊತ್ತಾಗಲಿಲ್ಲ. ಅದಕ್ಕಾಗಿ ನಾನು ಸಲಹೆಗಳನ್ನು ಕೊಟ್ಟು ಬಿಡುತ್ತೇನೆ. ಈ ತರಹ ಬೇಕಾದಷ್ಟು ಇವೆ. ನೀವು ಇಲ್ಲಿಗೆ ಹೋಗಿ ಬನ್ನಿ. ಹುಮ್ನಾಬಾದ್‌ಗೆ ಹೋಗಿ ಬರಲಿ, ಅದನ್ನು ನೀವು ಸಹ ನೋಡಿದ್ದೀರಿ, ಔರಾದ್‌ಗೆ ಹೋಗಿ ನೋಡಿಕೊಂಡು ಬರಲಿ. ಭಾಲ್ಕಿಗೂ ಸಹ ಹೋಗಿ ನೋಡಿಕೊಂಡು ಬರಲಿ, ನಾವು ಹೋಗಿ ನೋಡಿಕೊಳ್ಳಬೇಕು. The are niehter villages nor towns, but majority of the people who are living there are all agriculturists. ಅನೇಕ ತಾಲ್ಲೂಕುಗಳಲ್ಲಿ ಹೀಗೆ ಇದೆ. ಪಾಪ ಅವರಿಗೆ ಏನು ಮಾಡಬೇಕು? ಅವರಿಗೆ ಸಿಗುವುದಿಲ್ಲ. ಬಹಳ ಕಷ್ಟವಾಗುತ್ತದೆ, ಇಂತಹವರನ್ನು cover ಮಾಡುವುದಕ್ಕೆ ಏನು ಮಾಡಬೇಕೆಂಬುದರ ಬಗ್ಗೆ ಅದನ್ನು ನಿಮ್ಮ ಹಣದಿಂದ ಖರ್ಚು ಮಾಡಬೇಕು. ನೀವು ಒಂದು ರೂಪಾಯಿಯನ್ನು ಖರ್ಚು ಮಾಡದೆಯೇ, ಇಲ್ಲಾ ನಾವು ಕೇಂದ್ರಸರ್ಕಾರಕ್ಕೆ ಬರೆದಿದ್ದೇವೆ. ಅಲ್ಲಿಗೆ Memorandumನ್ನು ಕಳುಹಿಸಿದ್ದೇವೆ. ಅವರು ಇನ್ನು ಕೊಟ್ಟಿರುವುದಿಲ್ಲ. Central Team ಬಂದು ಹೋಗಿದೆ ಎಂದು ಹೇಳಿದರೆ ಏನು ಪ್ರಯೋಜನವಾಗುತ್ತದೆ ಇದು ಒಂದು ಕಡೆ ಆಯಿತು. ಆನೆಗಳು, ಹಂದಿಗಳು ಕಾಡಿನಿಂದ ಬಂದು ನುಗ್ಗುತ್ತವೆ, ರೈತರ ಬೆಳೆಗಳನ್ನು ಹಾಳು ಮಾಡಿಬಿಡುತ್ತವೆ. ಹಂದಿಗಳ ಕಾಟವು ಬಹಳ ಜಾಸ್ತಿಯಾಗಿದೆ. ನನ್ನ ಪ್ರಕಾರ 1952 Wild Life Protection Act, 1952 ಪ್ರಕಾರ ಹಂದಿಯನ್ನು ಹೊಡೆಯಬಹುದು ಎಂದು ಇದೆ. ಹಂದಿಯನ್ನು ಶೂಟ್ ಮಾಡುವುದಕ್ಕೆ ಪವರ್ ಇದೆ. ರೈತರಿಗೆ ಶೂಟ್ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಡಿ. ಇದಕ್ಕೆ ನೀವು 200 ರೂಪಾಯಿಯ ಪರಿಹಾರವನ್ನು ಕೊಡುತ್ತೀರಿ, ಇಷ್ಟು ಹಣ ಕೊಟ್ಟರೆ ರೈತನು ಏನು ಮಾಡಬೇಕು? ಆನೆಗಳು ನುಗ್ಗಿ ಬಿಡುತ್ತವೆ, ಬೆಳೆಗಳನ್ನು ತುಳಿದುಹಾಕಿಬಿಡುತ್ತದೆ, ಜನರನ್ನು ಸಾಯಿಸಿಬಿಡುತ್ತದೆ. ಈ ಬಗ್ಗೆ ನಾನು ಒಂದು reportನ್ನು ಕೊಟ್ಟಿದ್ದೇನೆ. ಈ ಬಗ್ಗೆ Public Accounts Committee ಯಿಂದ

ಒಂದು report ಬಂದಿದೆ. ಏನು ಮಾಡಬೇಕೆಂಬುದರ ಬಗ್ಗೆ ಒಂದು ಡಿಜಿಠಿಡಿಣ ಕೊಟ್ಟಿದ್ದೇನೆ. ನಾನು PAC Committee ಯಲ್ಲಿ ಶಿಫಾರಸ್ಸು ಮಾಡಿದ್ದೇನೆ.

**ಒಬ್ಬ ಮಾನ್ಯ ಸದಸ್ಯರು:** ಕರಡಿ ಕಣ್ಣು ಕಿತ್ತು ಹಾಕಿದೆ ನನ್ನ ಕ್ಷೇತ್ರದಲ್ಲಿ ಬರೀ 8,000 ರೂಪಾಯಿ ಪರಿಹಾರವನ್ನು ಕೊಟ್ಟಿದ್ದಾರೆ. ಕೆಳಗಡೆಗೆ ಕಣ್ಣುಗುಡ್ಡೆಯನ್ನು ಕಿತ್ತು ಇಟ್ಟಿದೆ.

**ಶ್ರೀ ಸಿದ್ದರಾಮಯ್ಯ:** ಕರಡಿಯು ಯಾರದೋ ಕಣ್ಣನ್ನು ಕಿತ್ತುಹಾಕಿಬಿಟ್ಟಿದೆಯಂತೆ. ಅವರಿಗೆ 8,000 ಪರಿಹಾರವನ್ನು ಕೊಟ್ಟಿದ್ದಾರಂತೆ, ಕಳೆದ ಸಾರಿಯೇ ಇದನ್ನು ನಾನು ಚೇಂಜ್ ಮಾಡಿ ಎಂದು ಹೇಳಿದ್ದೇನೆ. ಪರಿಹಾರ ಕೊಡುವುದು ಹಳೆಯದು ಇದೆ, ಇದನ್ನು ಚೇಂಜ್ ಮಾಡಿ, ನೀವು ಮಾಡಿದ್ದೀರೆಂದರೆ ಅದು ಉತ್ತರವಾಗುವುದಿಲ್ಲ. ನೀವು ಮಾಡಿಲ್ಲ, ನಾವು ಏಕೆ ಮಾಡಬೇಕು ಎಂದು ಬಹಳ ಹೇಳುವುದು ಸುಲಭ. ನಾವು ಮಾಡದೇ ಇದ್ದರೆ ನೀವು ಮಾಡಬಾರದು ಎಂದು ಇದೆಯೇ? ನಾವು ಮಾಡಲಿಲ್ಲ, ನೀವು. . . . .

**ಶ್ರೀ ಜಿ. ಕರುಣಾಕರರೆಡ್ಡಿ:** ನಾವು ಮಾಡಿದ್ದೇವೆ.

**ಶ್ರೀ ಸಿದ್ದರಾಮಯ್ಯ:** ಹಾಗಾದರೆ ನೀವು ಬಹಳ ಬುದ್ಧಿವಂತರಿದ್ದೀರಿ. ನಾನು ಏನು ಹೇಳುತ್ತೇನೆಂದು expect ಮಾಡುವುದು ಇದೆಯ್ಲಲಾ, you are very intelligent. ನಮಗೆ ಇವೆಲ್ಲವೂ ಹೊಳೆಯುವುದಿಲ್ಲ ನೋಡಿ. ನೀವು ಏನು ಹೇಳುತ್ತೀರೆಂದು ನಮಗೆ ಗೊತ್ತಾಗುವುದೇ ಇಲ್ಲ. ನೀವು ಏನಾದರೂ ಜೋತಿಷ್ಯವನ್ನು ಕೇಳಿಕೊಂಡು ಬಂದಿದ್ದೀರಾ ಹೇಗೇ?

**ಶ್ರೀ ಜಿ. ಕರುಣಾಕರರೆಡ್ಡಿ:** ಇಲ್ಲ.

**ಶ್ರೀ ಸಿದ್ದರಾಮಯ್ಯ:** ಇಲ್ಲವೇ, ನಿಂಬೆಹಣ್ಣಿನ ಬಗ್ಗೆ ನಮಗೆ ಗೊತ್ತಿಲ್ಲಪ್ಪಾ, ನಾನು ಏತಕ್ಕಾಗಿ ಹೇಳುತ್ತಿದ್ದೇನೆಂದೆರೆ, ನೀವು ಹೋಗಿಲ್ಲಾ ನೋಡಿಕೊಂಡು ಬನ್ನಿ.

**ಅಧ್ಯಕ್ಷರು :** ನೀವು ಹೇಳಿರುವ ಪ್ರಕಾರ 2.30 ಗಂಟೆಯಾಯಿತು. ನಿಮ್ಮ ಪ್ರಕಾರವೇ 2.30 ಗಂಟೆಯಾಯಿತು.

**ಶ್ರೀ ಸಿದ್ದರಾಮಯ್ಯ:** ಹಾಗಾದರೆ ನಾನು ಕುಳಿತುಕೊಂಡು ಬಿಡುತ್ತೇನೆ. 5 ನಿಮಿಷದಲ್ಲಿ I will conclude. I will not go beyond 2.35. O.K. ಇದು ಏನಾಗಿದೆ ಎಂದರೆ, ನಾನು ಅದಕ್ಕೆ ನಾನು jump ಮಾಡುತ್ತಿದ್ದೇನೆ. File Jumping ಎನ್ನುವುದು ಇದೆ. ಆ ತರಹ ನಾನು file jumping ಮಾಡುತ್ತಿದ್ದೇನೆ.

ಎಲ್ಲಾ important ವಿಚಾರಗಳನ್ನು ಮಾತ್ರ ಹೇಳುತ್ತಿದ್ದೇನೆ. ಬೇಕಾದರೆ ಇದರ ಬಗ್ಗೆ 4 ಗಂಟೆಯವರೆಗೆ ಮಾತನಾಡಲೇ, ನಾವೆಲ್ಲರೂ ಹಳ್ಳಿಯವರಲ್ಲಾ, ಬೆಳೆ ನಾಶವಾದವರಿಗೆ compansationನ್ನು ಹೆಚ್ಚಿಗೆ ಮಾಡಿ. ಆನೆಗಳು ಕಾಡಿನಿಂದ ಹೊರಗಡೆ ಬರದ ರೀತಿಯಲ್ಲಿ ಕ್ರಮವನ್ನು ತೆಗೆದುಕೊಳ್ಳಬೇಕು.

**2.30 P.M.**

ಆನೆಗಳು ಏಕೆ ಬರುತ್ತವೆ. ಕುಡಿಯುವುದಕ್ಕೆ ನೀರು ಇಲ್ಲವೆಂದು ಅವು ಬರುತ್ತವೆ. ಮೇವು ಇಲ್ಲವೆಂದು ಈ ಕಡೆಗೆ ಬರುತ್ತದೆ ಬೇಸಿಗೆಯಲ್ಲಿ ಮಳೆಯಿಲ್ಲದೆ ಇದ್ದಾಗ ಅವುಗಳಿಗೆ ಕುಡಿಯುವುದಕ್ಕೆ ನೀರಿಲ್ಲದೆಯೇ, ಅವುಗಳಿಗೆ ಮೇವು ಸಿಗದೆಯೇ ಹುಡುಕಿಕೊಂಡು ಹೊರಗಡೆ ಬರುತ್ತದೆ. ನಾವು trenches ಗಳನ್ನು ತೋಡಿಸಿದ್ದೆವು. ಅವುಗಳೆಲ್ಲವೂ ಮುಚ್ಚಿಹೋಗಿವೆ. ಅದನ್ನು maintain ಸಹ ಮಾಡಿರುವುದಿಲ್ಲ. No maintenance absolutely. ಅಲ್ಲಿ ಆಅಈ ರವರನ್ನು ಕೇಳಿದರೆ maintenance ಮಾಡುವುದಕ್ಕೆ ಹಣ ಇಲ್ಲ ಏನು ಮಾಡೋಣ ಸಾರ್ ಎಂದು ಹೇಳುತ್ತಾನೆ. Give them money. ಆನೆ ನಷ್ಟ ಮಾಡುವುದನ್ನು ತಪ್ಪಿಸಿ, ಹಂದಿಗಳು ನಷ್ಟಮಾಡುವುದನ್ನು ತಪ್ಪಿಸಿ, ಅನೇಕ ಜನರು ಪಾಪ ಪ್ರಾಣವನ್ನು ಕಳೆದುಕೊಂಡಿದ್ದಾರೆ. ಹಂದಿಗಳು ಸಾಯುತ್ತವೆ, ಮನುಷ್ಯರು ಸಹ ಸಾಯುತ್ತಾರೆ, ಆನೆಗಳು ಸಾಯುತ್ತವೆ. ಈ ತರಹ ಇವತ್ತು ನಾವು ರೈತರನ್ನು ಉಳಿಸಬೇಕಾದರೆ, ಇವೆಲ್ಲವನ್ನು ಮಾಡಬೇಕು. ನಾನು ಕೊಡುವ 2–3 ಸಲಹೆಗಳನ್ನು ತಾವು ಗಂಭೀರವಾಗಿ ತೆಗೆದುಕೊಳ್ಳಬೇಕು. ಇವತ್ತು ರಾಜ್ಯಮಟ್ಟದಲ್ಲಿ ಒಂದು ಉಪಸಮಿತಿಯನ್ನು ಮಾಡಿಕೊಂಡಿದ್ದೀರಿ. ನೀವು ಯಾವುದಾದರೂ ಜಿಲ್ಲೆಗೆ ಉಪಸಮಿತಿಯವರೊಂದಿಗೆ ಒಟ್ಟಿಗೆ ಹೋಗಿದ್ದೀರಾ? Agriculture Minister, Co-operation Minister, Revenue Minister, Rural Development Minister, ಎಲ್ಲಿಯಾದರೂ ಒಂದು ಕಡೆಗೆ ಹೋಗಿದ್ದೀರಾ? ಎಲ್ಲಿ ಗೋಶಾಲೆಗಳನ್ನು ಮಾಡಿದ್ದೀರಿ? ಎಲ್ಲಿ ತೊಂದರೆ ಇದೆ, Electionನಲ್ಲಿ ಒಟ್ಟಿಗೆ ಹೋಗಿದ್ದೀರೇನೋ ಅದು ನನಗೆ ಗೊತ್ತಿಲ್ಲ. ಎಲ್ಲಿಯಾದರೂ ಒಟ್ಟಿಗೆ ಹೋಗಿದ್ದೀರಾ? ನೀವು ಎಲ್ಲಿಯೂ ಹೋಗಿಲ್ಲ. District in-charge Minister ಅಲ್ಲಿ ಒಂದು Task Force. ಜಿಲ್ಲಾ ಮಂತ್ರಿಗಳು ಇಲ್ಲಿಯವರೆಗೆ ಎಷ್ಟು ಮೀಟಿಂಗ್‌ನ್ನು ಮಾಡಿದ್ದಾರೆ? ಜಿಲ್ಲಾ ಮಂತ್ರಿಗಳು ಯಾರಾದರೂ ಒಂದು ಮೀಟಿಂಗ್‌ನ್ನು ಮಾಡಿದ್ದಾರಾ? ತಾಲ್ಲೂಕು ಮಟ್ಟದಲ್ಲಿ ಕಮಿಟಿಯನ್ನು ರಚನೆ

ಮಾಡಿದ್ದಾರಾ? Drought Relief Committee ಎಂದು ಮಾಡಿದ್ದಾರಾ? ಮಾನ್ಯ ಹಾಲಪ್ಪನವರೆ ತಾವು ಎಲ್ಲಿಗೆ ಹೋಗಿದ್ದೀರಿ?

**ಶ್ರೀ ಹೆಚ್. ಹಾಲಪ್ಪ : (ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು):** ನಾನು ಹೋಗಿದ್ದೇನೆ.

**ಶ್ರೀ ಸಿದ್ದರಾಮಯ್ಯ:** ಮಾನ್ಯ ಹಾಲಪ್ಪನವರೆ, ತಾವು ಚಾಮರಾಜನಗರದಲ್ಲಿ ಯಾವ ತಾಲ್ಲೂಕಿನಲ್ಲಿ ಎಷ್ಟು ಮಳೆಯಾಗಿದೆ ಎಂದು immediately ಹೇಳಿ ನೋಡೋಣ. ತಕ್ಷಣ ಎಷ್ಟು ಮಳೆ ಬಿದ್ದಿದೆ, ಎಷ್ಟು ಬೆಳೆ ಹಾಳಾಗಿದೆ ಎಂದು ಹೇಳಿ ನೋಡೋಣ. ಸುಮ್ಮನೆ ಹೇಳುವುದಕ್ಕೆ ಹೋಗಬೇಡಿ ಹಾಲಪ್ಪನವರೆ ತಾವು ಎಲ್ಲಿಯೂ ಹೋಗಿಲ್ಲ, ತಾವು ಕುಳಿತುಕೊಳ್ಳಿ. ಮೊನ್ನೆ ದಿನ ತಾವು election ಗೆ ಹೋಗಿದ್ದೀರಿ ಅಷ್ಟೇ.

**ಅಧ್ಯಕ್ಷರು:** ಉತ್ತರ ಕೊಡುವಾಗ ತಾವು ಹೇಳುವಿರಂತೆ.

**ಶ್ರೀ ಸಿದ್ದರಾಮಯ್ಯ:** ತಾವು ಉತ್ತರ ಕೊಡುವಾಗ ಹೇಳಿ. ಈಗ ತಾವು ಕುಳಿತುಕೊಳ್ಳಿ. ನೀವು ಯಾವ ಯಾವ ಡೇಟ್‌ನಲ್ಲಿ ಹೋಗಿದ್ದೇ, ಏನೇನು ಮಾಡಿದ್ದೀರಿ, ಎಂದು ರಿಪೋರ್ಟ್‌ನ್ನು ಕೊಡಿ.

**ಶ್ರೀ ಹಾಲಪ್ಪ :** ಈ ಬಗ್ಗೆ ನಾನು ಡೈರಿಯನ್ನು ಕೊಡುತ್ತೇನೆ.

**ಶ್ರೀ ಸಿದ್ದರಾಮಯ್ಯ:** ನನಗೆ ಡೈರಿ ಬೇಕಾಗಿಲ್ಲ. This House is expected to know. You are answerable to this House. The Government is answerable to this House. Accountabiltiy ಇರಬೇಕು. ನಾನು ಡೈರಿ ಕೊಡಬೇಕೆಂದು ಕೇಳಿದ್ದೀನಾ? ನಮ್ಮಂತಹವರು ಎಷ್ಟು ಜನ ಇದ್ದಾರೆ ಕುಳಿತುಕೊಳ್ಳಪ್ಪಾ, ನಿಮ್ಮ ಸೊರಬ ಮತ್ತು ಸಾಗರದಲ್ಲಿ ಯಾರಿಗೂ ನೀನು ಬಗ್ಗುವುದಿಲ್ಲ ಇಲ್ಲಿ ಬಗ್ಗುತ್ತಿಯಾನಪ್ಪಾ? ಕರುಣಾಕರರೆಡ್ಡಿಯವರನ್ನು ಹೆದರಿಸಿದರೆ ಅವರು ಹೆದರಿಕೊಳ್ಳುತ್ತಾರೆಯೇ? ಮಾನ್ಯ ರವೀಂದ್ರನಾಥ್‌ರವರು ಹೆದರಿಕೊಳ್ಳುತ್ತಾರೆಯೇ? ನಾವು ಯಾರನ್ನು ಕೂಡ ಹೆದರಿಸುವುದಿಲ್ಲ, ಹೆದರಿಕೊಳ್ಳಿ ಎಂದು ಹೇಳುವುದಿಲ್ಲ, ಅದನ್ನು ಯಾರು ಮಾಡಲು ಬಾರದು. ನಾನು ಏನು ಹೇಳುತ್ತೇನೆಂದರೆ, ಇವತ್ತು ರೈತರ ಬಗ್ಗೆ ನಾವು ಕಳಕಳಿಯನ್ನು ವ್ಯಕ್ತಪಡಿಸುತ್ತೇವೆಂದಾಗ ನಮ್ಮ action ನಲ್ಲಿಯೂ ಕೂಡ ಅದು ಇರಬೇಕು. ನಮ್ಮ action ಮತ್ತು ನಮ್ಮ ಹೇಳಿಕೆ ಪರಸ್ಪರ ಹೊಂದಿರಬೇಕು. ಏನು ಮಾಡದೆಯೇ ನಾವು ರೈತರ ಪರ ಇದ್ದೇವೆಂದರೆ, ಏಕೇ ನೀವು ಇವತ್ತಿನವರೆಗೆ ಮಾನ್ಯ ಕರುಣಾಕರರೆಡ್ಡಿಯವರೇ ತಾಲ್ಲೂಕು ಮಟ್ಟದಲ್ಲಿ Releif Committee

ಯನ್ನು ಮಾಡಿದ್ದೀರಾ? ಅಲ್ಲಿ ಏನು ಕೆಲಸಗಳನ್ನು ತೆಗೆದುಕೊಳ್ಳಬೇಕು. ಕುಡಿಯುವ ನೀರಿನ ಬಗ್ಗೆ ಎಲ್ಲಿ ತೆಗೆದುಕೊಳ್ಳಬೇಕು. ಎಲ್ಲೆಲ್ಲೆ ಕೆರೆಗಳ ಕೆಲಸಗಳನ್ನು ತೆಗೆದುಕೊಳ್ಳಬೇಕು. ಏನು ಮಾಡಬೇಕೆಂಬುದರ ಬಗ್ಗೆ Relief Committee ಯಲ್ಲಿ ಹಿಂದಿನಿಂದ drought ಬಂದಾಗ ಮಾಡಿದ್ದೀರಾ. ಎಂಎಲ್ಎ ಅಧ್ಯಕ್ಷತೆಯಲ್ಲಿ Relief Committee ಯನ್ನು ಮಾಡುತ್ತೀರಿ. ಇವತ್ತಿನವರೆಗೆ ಎಲ್ಲಿಯಾದರೂ 175 ತಾಲ್ಲೂಕುಗಳಲ್ಲಿ ಒಬ್ಬ ಎಂಎಲ್ಎ ಅವನ ಅಧ್ಯಕ್ಷತೆಯಲ್ಲಿ ಕಮಿಟಿ ಮಾಡಿದ್ದರೆ ಅದರ ಬಗ್ಗೆ ಆರ್ಡರ್ಸ್ನ್ನು ಕೊಡಿ. ಎಲ್ಲಾ ತಾಲ್ಲೂಕುಗಳಲ್ಲಿಯೂ ಕಮಿಟಿಯನ್ನು ಮಾಡಿದ್ದೇವೆ, ಅವರು ಇಷ್ಟು ಮೀಟಿಂಗ್ನ್ನು ಮಾಡಿದ್ದಾರೆ. ಇಷ್ಟು programmeನ್ನು ತೆಗೆದುಕೊಂಡಿದ್ದಾರೆ. ಇಷ್ಟು implement ಆಗಿದೆ. ಕುಡಿಯುವ ನೀರಿಗೆ ಇಷ್ಟು ಹಣವನ್ನು ಕೊಟ್ಟಿದ್ದಾರೆ. ಮೇವಿಗೆ ಇಷ್ಟು ಹಣವನು ಕೊಟ್ಟಿದ್ದಾರೆ. ಇವತ್ತಿನವರೆಗೆ ಏನು ಮಾಡಿರುವುದಿಲ್ಲ. ಈಗ ಏನಾಗಿದೆ ಎಂದರೆ, ಮಳೆ ಬಂದಿದೆ, ಮಳೆ ಬಂದಿರುವುದರಿಂದ ರೈತರು ಸ್ವಲ್ಪ ದನಕರುಗಳಿಗೆ ಮೇವುಗಳು ಸಿಕ್ಕಿದೆ. ಬೇಲಿಗಳಲ್ಲಿ ಅಲ್ಲಲ್ಲಿ ರಸ್ತೆಗಳಲ್ಲಿ ಮೇಯಿಸಿಕೊಳ್ಳುತ್ತಾರೆ. ಅಲ್ಲಿ ಬೆಳೆಯನ್ನು ಬೆಳೆಯುವುದಕ್ಕಾಗುವುದಿಲ್ಲ. ಸ್ವಲ್ಪ ಹಸಿರು ಬರುತ್ತದೆ ಆ ಚಿಗರನ್ನು ಕುರಿಗಳು, ದನಗಳನ್ನು ಮೇಯಿಸಿಕೊಳ್ಳುತ್ತಾರೆ. ಆಮೇಲೆ ಮಳೆಯು ಹೊರಟು ಹೋದ ಮೇಲೆ ಏನು ಮಾಡುತ್ತಾರೆ. ಬೀಜ ಇಲ್ಲ, ಇವತ್ತು 20 ಲಕ್ಷ ಬೆಳೆ ಬಿದ್ದಿರುವಂತಹದ್ದು, 10 ಲಕ್ಷ ಬಿತ್ತನೆಯಾಗದೆ ಇರುವಂತಹದ್ದು. 30 ಲಕ್ಷ ಹೆಕ್ಟೇರ್ ಪ್ಲಸ್ 30 ಲಕ್ಷ ಹೆಕ್ಟೇರ್ ರಬಿ ಕ್ರಾಪ್ ಪಟ್ಟು 60 ಲಕ್ಷ ಹೆಕ್ಟೇರ್ ಆಯಿತು. ಅದಕ್ಕೆ ಎಷ್ಟು ಬಿತ್ತನೆ ಬೀಜ, ಎಷ್ಟು ಗೊಬ್ಬರ ಬೇಕು. ಈಗ 75% ಕೊಡಬೇಕೆಂದು ಹೇಳಿದ್ದೀರಿ. ಅವರಿಗೆ ಗೊಬ್ಬರವನ್ನು ಸಹ ಕೊಡಿ. ಅವರುಗಳು ಮನೆಗಳನ್ನು ಕಳೆದುಕೊಂಡು ನಷ್ಟ ಮಾಡಿಕೊಂಡಿದ್ದಾರೆ. ಅವರಿಗೆ ಗೊಬ್ಬರವನ್ನು ಪುಕ್ಕಟೆಯಾಗಿ ಕೊಡಿ. ಅದಕ್ಕಾಗಿ ಎಷ್ಟು ಖರ್ಚಾಗುತ್ತದೆಯೋ ಅಷ್ಟನ್ನು ಮಾಡಿ. ಮನೆಗಳು ಬಿದ್ದುಹೋಗಿರುವ ಕಡೆಯಲ್ಲಿ ಮನೆಯನ್ನು ಕಟ್ಟಿಸಿಕೊಡಿ. 11,000 ಮನೆಗಳು floodsನಲ್ಲಿ ಹೋದವು. ಅವರುಗಳಿಗೆ ಒಂದು ಮನೆಯನ್ನು ಸಹ ಕಟ್ಟಿಕೊಟ್ಟಿರುವುದಿಲ್ಲ. ನಾನು ಮಲೆನಾಡು ಪ್ರದೇಶ ಹಾಗೂ ಕರಾವಳಿ ಪ್ರದೇಶದವರನ್ನು ಈ ಬಗ್ಗೆ ಕೇಳಿದೆ, ಅವರಿಗೆ ಏನು relief ನ್ನು ಮಾಡಿಯೇ ಇಲ್ಲ. ನಿಮ್ಮ ರೆವಿನ್ಯೂ ಮಂತ್ರಿಗಳ ಜಿಲ್ಲೆಯಲ್ಲಿಯೆ ಮನೆಗಳೆಲ್ಲವೂ ಹಾಳಾಗಿ ಹೋಗಿದೆ. ಮೊನ್ನೆ ಮಳೆ ಬಿದ್ದಾಗ ಹಾನಿಯಾಗಿರುವ ಬಗ್ಗೆ ಪತ್ರಿಕೆಯಲ್ಲಿ ದೊಡ್ಡದಾಗಿ ಬಂದಿದೆ. 90 ಮನೆಗಳು

ಕುಸಿದುಹೋಗಿದೆ ಎಂದು ಬಂದಿದೆ. ಅವರುಗಳು ಪಾಪ ಏನು ಮಾಡಬೇಕು. ಗುಡಿಸಲುಗಳಿಗೆ ನೀರು ನುಗ್ಗಿದರೆ ಭಾರಿ ಕಷ್ಟ. ಇವತ್ತು ನೀವು ಎಷ್ಟು ಗಂಜಿ ಕೇಂದ್ರವನ್ನು ತೆರೆದಿದ್ದೀರಿ. ಎಷ್ಟು ಗೋಶಾಲೆಗಳನ್ನು ತೆರೆದಿದ್ದೀರಿ. ಎಲ್ಲಿ ಮೇವು ಇತ್ತು, ಎಲ್ಲಿ ಮೇವಿಲ್ಲ, ಮೇವು ಬೆಳೆಯುವುದಕ್ಕೆ ಏನು ಮಾಡಿದ್ದೀರಿ. ಮುಂದೆ ಏನು ಮಾಡಬೇಕು. ಇದೆಲ್ಲಾ ಒಂದು ಪ್ಲಾನ್, ಪ್ರೋಗ್ರಾಮ್ ಇದಕ್ಕೆ ಎಷ್ಟು ಹಣ ಖರ್ಚಾಗುತ್ತದೆ ಇದನ್ನು ತಾವು ಯುದ್ಧದೋಪಾಧಿಯಲ್ಲಿ ತಾವು ಮಾಡಬೇಕು. ಅದಕ್ಕೆ on war footing all these programmes have to be taken up. War footingನಲ್ಲಿ ಮಾಡಬೇಕು. ಇಲ್ಲದೆಹೋದರೆ ಬರಗಾಲವು ಬರುತ್ತದೆ, ಬರಗಾಲ ಬಂದಾಗ ಕಾರ್ಯಕ್ರಮವನ್ನು ಮಾಡುತ್ತೇವೆ. ಮತ್ತೇ ಅದೇ ಪರಿಸ್ಥಿತಿಯೂ ಮುಂದುವರಿಯುತ್ತದೆ. ಮಾನ್ಯ ಅಧ್ಯಕ್ಷರೆ ಟೈಮ್ ಇಲ್ಲದೆ ಇರುವುದರಿಂದ ಎಲ್ಲಾ ಸದಸ್ಯರುಗಳು ಮಾತನಾಡಿದ್ದಾರೆ. ಮಾನ್ಯ ಮಂತ್ರಿಗಳು ಸಮಪರ್ಕವಾದಂತಹ ಉತ್ತರವನ್ನು ಕೊಡುತ್ತಾರೆಂದು ಅಂದುಕೊಂಡಿದ್ದೇನೆ. ನಾವು ಕೊಟ್ಟಿರುವಂತಹ ಸಲಹೆಗಳಿಗೆ ಅವರು ಸ್ಪಂದಿಸುತ್ತಾರೆಂದು ಅಂದುಕೊಂಡಿದ್ದೇನೆ. ಅವರು ಕೊಡುವ ಉತ್ತರವನ್ನು ನೋಡಿಕೊಂಡು ನಾನು clarificationsನ್ನು ಕೇಳುತ್ತೇನೆ. ನೀವು ಹೇಳಿದ್ದೀರೆಂದು ಕರೆಕ್ಟಾಗಿ 2.35 ನಿಮಿಷಕ್ಕೆ ನಿಲ್ಲಿಸಿಬಿಟ್ಟಿದ್ದೇನೆ. ನಿಮಗೆ ವಂದನೆಯನ್ನು ಸಲ್ಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

**ಅಧ್ಯಕ್ಷರು :** ಮಾನ್ಯ ರೇವಣ್ಣವರೆ, ನೀವು ಮಾತನಾಡುವುದಿಲ್ಲವೇ?

**ಶ್ರೀ ಹೆಚ್. ಡಿ. ರೇವಣ್ಣ:** ನಾನು ಮಾತನಾಡುತ್ತೇನೆ.

**ಅಧ್ಯಕ್ಷರು :** ನೀವೋಬ್ಬರು ಮಾತನಾಡಿ. ನೀವಾದರೂ ಮಾತನಾಡಿ, ಇಲ್ಲವಾದರೆ ನಿಮ್ಮ ಪರವಾಗಿಯಾದರೂ ಒಬ್ಬರೂ ಮಾತನಾಡಲಿ.

**ಶ್ರೀ ಹೆಚ್. ಡಿ. ರೇವಣ್ಣ:** ನೀವು ಹೇಳುವುದು 25 ನಿಮಿಷ ಆಯಿತು.

**ಅಧ್ಯಕ್ಷರು :** ಈಗಾಗಲೇ 2.30 ಗಂಟೆಯಾಗಿದೆ. actually 2.30 ಗಂಟೆಗೆ ಮುಗಿಸಬೇಕಾಗಿತ್ತು. ಅವರೊಬ್ಬರೇ ಮಾತನಾಡುವುದು. ಆಮೇಲೆ ನೀವು ಮಾತನಾಡುವ ಹಾಗಿಲ್ಲ.

**ಶ್ರೀ ಹೆಚ್.ಡಿ.ಕುಮಾರಸ್ವಾಮಿ:** ಶ್ರೀಮತಿ ಅನಿತಾ ಕುಮಾರಸ್ವಾಮಿಯವರು 15 ನಿಮಿಷ ಮಾತನಾಡುತ್ತಾರೆ.

**ಅಧ್ಯಕ್ಷರು :** ಆಮೇಲೆ ನೀವು ಮಾತನಾಡುವಹಾಗಿಲ್ಲ.

**ಶ್ರೀ ಹೆಚ್. ಡಿ. ಕುಮಾರಸ್ವಾಮಿ** : ಅವರಿಗೆ 15 ನಿಮಿಷ ಮಾತನಾಡುವುದಕ್ಕೆ ಅವಕಾಶವನ್ನು ಕೊಡಿ.

**ಅಧ್ಯಕ್ಷರು:** ನೋಡಿ understand ಆಗಿರುವ ಪ್ರಕಾರ ತಾವು ನಡೆದುಕೊಳ್ಳಬೇಕು ಅಷ್ಟೇ. ಇದನ್ನು ತಾವು violate ಮಾಡುವುದಕ್ಕೆ ಹೋಗಬೇಡಿ. ಏನು understanding ಆಗಿತ್ತು ಅದರ ಪ್ರಕಾರ ತಾವು ನಡೆದುಕೊಳ್ಳಬೇಕು. ಮಾನ್ಯ ರೇವಣ್ಣನವರೆ ಅದಕ್ಕೆ ನಮಗೆ ಬೇಜಾರು ಆಗುತ್ತಿದೆ.

**ಶ್ರೀ ಹೆಚ್. ಡಿ. ರೇವಣ್ಣ :** ಶ್ರೀಮತಿ ಅನಿತಾ ಕುಮಾರಸ್ವಾಮಿಯವರು ಮಾತನಾಡುವುದಕ್ಕೆ ಅವಕಾಶವನ್ನು ಕೊಡಿ.

**ಅಧ್ಯಕ್ಷರು :** ತಾವು ಬೇರೆಯವರಿಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಡಿ:

**ಶ್ರೀ ಹೆಚ್. ಸಿ. ಬಾಲಕೃಷ್ಣ :** ಶ್ರೀಮತಿ ಅನಿತಾ ಕುಮಾರಸ್ವಾಮಿಯವರು 10 ನಿಮಿಷ ಮಾತನಾಡುತ್ತಾರೆ.

**ಅಧ್ಯಕ್ಷರು :** ಅವರು ಎಲ್ಲಿ 10 ನಿಮಿಷ ಮಾತನಾಡುತ್ತಾರೆ? ಟೈಮ್ ಹೇಗೆ ಆಗುತ್ತದೆ ಅದನ್ನು ನೋಡೋಣ.

**ಶ್ರೀ ಹೆಚ್. ಸಿ. ಬಾಲಕೃಷ್ಣ :** ನಮಗೆ ನಿಗಧಿ ಮಾಡಿರುವ ಸಮಯದಲ್ಲಿ ನಾವು ಮಾತನಾಡುತ್ತೇವೆ.

**ಅಧ್ಯಕ್ಷರು:** ಅದು ಬಿಡಿ, ಏನು understanding ಆಗಿದೆ ಅದರ ಪ್ರಕಾರ ತಾವು ನಡೆದುಕೊಳ್ಳಬೇಕು. ಇದಕ್ಕೆ ನಮಗೆ ಬೇಜಾರು ಆಗುವುದು. ಏನು understanding ಆಗಿದೆ ಅದರ ಪ್ರಕಾರ ತಾವು ನಡೆದುಕೊಳ್ಳಬೇಕು. ಅದಕ್ಕಾಗಿಯೇ ಬೇಜಾರು ಆಗುತ್ತದೆ. ಕಾಂಗ್ರೆಸ್ ಪಕ್ಷದಿಂದ ಮಾತನಾಡುವುದಕ್ಕೆ 4-5 ಜನರು ರೆಡಿ ಇದ್ದಾರೆ. ಅವರು tolerate ಮಾಡಿಕೊಳ್ಳಲಿಲ್ಲ.

**ಶ್ರೀಮತಿ ಅನಿತಾ ಕುಮಾರಸ್ವಾಮಿ (ಮಧುಗಿರಿ) :** ಸನ್ಮಾನ್ಯ ಅಧ್ಯಕ್ಷರೆ, ಈ ದಿನ ಮಾತನಾಡಲು ನನಗೆ ಅವಕಾಶವನ್ನು ಕೊಟ್ಟಿದಕ್ಕಾಗಿ ತಮಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ಸಕಾಲಕ್ಕೆ ಮಳೆಯು ಬರದೆ ಇಡೀ ರಾಜ್ಯದಲ್ಲಿ ರೈತರು ಕಂಗೆಟ್ಟಿದ್ದಾರೆ. ಅವರುಗಳು ಬಹಳ ತೊಂದರೆಗೆ ಒಳಗಾಗಿದ್ದಾರೆ. ಬೆಳೆ ಬೆಳೆಯುವುದಕ್ಕಾಗಲಿಲ್ಲ, ಜೊತೆಗೆ ಜಾನುವಾರುಗಳಿಗೂ ಸಹ ನೀರಾಗಲಿ, ಮೇವಿನ ಸಮಸ್ಯೆ ಉಂಟಾಗಿದೆ. ಈ ದಿನ ಹುಲ್ಲಿಗೂ ಸಹ ಪರದಾಡುವಂತಾಗಿದೆ. ಸರ್ಕಾರ ಜಾನುವಾರುಗಳಿಗಾಗಿ ಮೇವಿನ ವ್ಯವಸ್ಥೆಯನ್ನು ಹಾಗೂ ನೀರಿನ ವ್ಯವಸ್ಥೆಯನ್ನು ಸಹ ಮಾಡಬೇಕಾಗಿದೆ. ಇದು ಅಲ್ಲದೆ ವ್ಯಾಪಕವಾಗಿ ಗೋಶಾಲೆಗಳನ್ನು ತೆರೆಯಬೇಕಾಗಿದೆ. ಇದು ಅಲ್ಲದೆ ಇತರೆ ಕಸುಬುಗಳಿಗೆ ವ್ಯವಸಾಯವನ್ನೆ ನಂಬಿಕೊಂಡಿರುವಂತಹ ಪ್ರದೇಶಗಳಲ್ಲಿ ಅದು ಮಳೆಯನ್ನೆ

ನೆಚ್ಚಿಕೊಂಡಿರುವಂತಹ ಪ್ರದೇಶಗಳಲ್ಲಿ ಈ ತರಹ ಕಸುಬುಗಳಿಗೆ ಹೈನುಗಾರಿಕೆ ಇದಕ್ಕೆ ಸರ್ಕಾರ ಹೆಚ್ಚಿನ ಪ್ರೋತ್ಸಾಹವನ್ನು ಕೊಡಬೇಕು. ಕಡಿಮೆ ನೀರನ್ನು ಬಳಕೆ ಮಾಡಿ ಹಣ್ಣು, ಹೂವು ಮತ್ತು ತರಕಾರಿ ಬೆಳೆಯುವುದಕ್ಕೆ ರೈತರಿಗೆ ತರಬೇತಿ ಹಾಗೂ ಮಾಹಿತಿಯನ್ನು ಸರ್ಕಾರದ ಕಡೆಯಿಂದ ಕೊಡಿಸಬೇಕು. ಕೃಷಿ ವಿಶ್ವವಿದ್ಯಾನಿಲಯದವರನ್ನು ಕಳುಹಿಸಿ ಅಲ್ಲಿ agriculture officer ಗಳೆಂದು ಹೇಳುತ್ತಾರೆ. ಅವರು ಹಳ್ಳಿಹಳ್ಳಿಗೂ ಹೋಗಿ ನಮ್ಮ ರೈತರಿಗೆ ತರಬೇತಿ ಹಾಗೂ ಮಾಹಿತಿಯನ್ನು ಕೊಡುವಂತಾಗಬೇಕು. ಆದರೂ Agriculture Officer ಗಳು ಅವರು ರೈತ ಕುಟುಂಬಕ್ಕೆ ಸೇರಿದವರಾದರೂ ಹೆಚ್ಚಿಗೆ ಅವರು ಹಳ್ಳಿ ಕಡೆಗಳಿಗೆ ಹೋಗುವುದಕ್ಕೆ ಇಚ್ಛೆಪಡುವುದಿಲ್ಲ. ಇದಕ್ಕೆ ಕಾರಣ ಏನೋ ಗೊತ್ತಿಲ್ಲ. ಇದರ ಬಗ್ಗೆ ಸರ್ಕಾರ ಸ್ವಲ್ಪ monitor ಮಾಡುವುದು ಒಳ್ಳೆಯದು ಎಂದು ಹೇಳಿ ನಾನು ಅಭಿಪ್ರಾಯವನ್ನು ಪಡುತ್ತೇನೆ. ಬರಪರಿಹಾರಕ್ಕೆ ತಾತ್ಕಾಲಿಕ ಪರಿಹಾರದ ಜೊತೆಗೆ ಶಾಶ್ವತವಾದಂತಹ ಪರಿಹಾರವನ್ನು ಸಹ ಹೆಚ್ಚಿಸಬೇಕಾಗಿದೆ. ಶಾಶ್ವತ ಪರಿಹಾರಗಳಲ್ಲಿ ಅಂತರಜಲವನ್ನು ಅಭಿವೃದ್ಧಿ ಮಾಡುವುದು, ಇದರ ಜೊತೆಗೆ ಭೂಸಂರಕ್ಷಣೆ ಹಾಗೂ ಇತರ ಕಸುಬುಗಳಿಗೆ ಪ್ರೋತ್ಸಾಹವನ್ನು ಕೊಡುವುದು. ಹಿಂದಿನ ಕಾಲದಲ್ಲಿ ಮಳೆಗಾಲದಲ್ಲಿ ಬೆಟ್ಟಗುಡ್ಡಗಳಿಂದ ಹರಿದು ಬರುವಂತಹ ನೀರನ್ನು ಅವರು ಶೇಖರಣೆ ಮಾಡಿಟ್ಟುಕೊಳ್ಳುತ್ತಿದ್ದರು. ಕೆರೆ ಮತ್ತು ಕುಂಟೆಗಳಲ್ಲಿ ನೀರನ್ನು ಶೇಖರಣೆ ಮಾಡಿಟ್ಟುಕೊಂಡು ನಂತರ ಅದನ್ನು ಈ ತರಹದ ಪರಿಸ್ಥಿತಿ ಬಂದಾಗ ಉಪಯೋಗ ಮಾಡಿಟ್ಟುಕೊಳ್ಳುತ್ತಿದ್ದರು. ಆದರೆ ಇತ್ತೀಚೆಗೆ ಅದು ನಡೆಯುತ್ತಿಲ್ಲ. ಅದರ ಬಗ್ಗೆ ನಮ್ಮ ರೈತರುಗಳು ಎಚ್ಚೆತ್ತುಕೊಂಡು ಮಳೆಗಾಲದಲ್ಲಿ ಅವರು ನೀರನ್ನು ಸಂಗ್ರಹಮಾಡಿಟ್ಟುಕೊಳ್ಳಬೇಕಾಗಿದೆ. ನಮ್ಮ ರೈತರು ಎಚ್ಚೆತ್ತುಕೊಂಡು ಮಳೆಗಾಲದಲ್ಲಿ ಸಿಗುವ ನೀರನ್ನು ಸಂಗ್ರಹ ಮಾಡಿಟ್ಟುಕೊಳ್ಳಬೇಕಾಗಿದೆ. ಕೆಲವು ಕಡೆ ಕೆರೆಗಳ ಏರಿಗಳು ದುರಸ್ತಿ ಕಾಣದೆ ನೀರೆಲ್ಲಾ ಹರಿದು ಹೋಗುತ್ತಿವೆ. ಹಾಗೆ ಕೆರೆಗಳನ್ನು ಪುನಶ್ಚೇತನಗೊಳಿಸಬೇಕಾಗಿದೆ. ಕೆರೆಗಳಲ್ಲಿ ಹೂಳೆತ್ತುವ ಕೆಲಸವಾಗಿ ಈಗಲಾದರೂ ಆ ಕೆಲಸವನ್ನು ಪ್ರಾರಂಭ ಮಾಡಿದರೆ ಮುಂದಿನ ಮಳೆಗಾಲದಲ್ಲಿ ಹೆಚ್ಚು ನೀರು ಕೆರೆಗಳಲ್ಲಿ ಸಂಗ್ರಹವಾಗುತ್ತದೆ. ಇದು ವ್ಯವಸಾಯಕ್ಕೂ ಹಾಗೂ ಜನರಿಗೆ ಮತ್ತು ಜಾನುವಾರುಗಳಿಗೂ ಕೂಡ ಉಪಯೋಗವಾಗುತ್ತದೆ. ಮಳೆ ನೀರಿನ ಬಗ್ಗೆ ನಾನೇನು ಮಾತನಾಡಿದೆ, ಇದನ್ನು ಒಂದು ರೀತಿ ಜನಜಾಗೃತಿ ಆಂದೋಲನದ ರೀತಿಯಲ್ಲಿ ಮಾಡಬೇಕು, ರೈತರಿಗೆ ಇದರ ಬಗ್ಗೆ ಒಂದು ಮಾಹಿತಿಯನ್ನು,

ತಥಬೇತಿಯನ್ನು ಕೊಟ್ಟು ಅವರಿಗೆ ಇದರ ಬಗ್ಗೆ ತಿಳುವಳಿಕೆ ನೀಡಬೇಕಾಗಿದೆ ಇದಲ್ಲದೆ ಈಗ ಸಿಟಿಗಳಲ್ಲಿ ಕೈಗಾರಿಕೆಗಳಿರುವ ಜಾಗದಲ್ಲಿ ನಿರಂತರವಾಗಿ ವಿದ್ಯುತ್ ಸರಬರಾಜು ಮಾಡುತ್ತೀರಿ, ಅದೇ ರೀತಿ ಈಗ ನೀರಾವರಿ ಸೌಕರ್ಯವಿಲ್ಲದೇ ಇರುವ ಜಿಲ್ಲೆಗಳಲ್ಲಿ ವಿದ್ಯುತ್ ಸರಬರಾಜು ಮಾಡುವ ನಿಯಮಾವಳಿಯನ್ನು ತುರ್ತಾಗಿ ನೀವು ಬದಲಾಯಿಸಬೇಕಾಗಿದೆ, ಅಂದರೆ ನಿರಂತರವಾಗಿ ಹಗಲಿನಲ್ಲಿ ಬೆಳಿಗ್ಗೆ 6.00–12.00 ಗಂಟೆಯವರೆಗೂ ವಿದ್ಯುತ್ ಸರಬರಾಜು ಮಾಡುವ ವ್ಯವಸ್ಥೆಯನ್ನು ಕಲ್ಪಿಸಿಕೊಡಬೇಕಾಗಿದೆ. ಇದನ್ನು ಬಹಳ ಹಿಂದುಳಿದಿರುವ ಪ್ರದೇಶಗಳಲ್ಲಿ ಎಲ್ಲಿ ನೀರಾವರಿ ಸೌಕರ್ಯಗಳಿರುವುದಿಲ್ಲವೋ ಮಳೆ ಆಧಾರಿತ ಮೇಲೆ ವ್ಯವಸಾಯವನ್ನು ನಂಬಿಕೊಂಡಿರುತ್ತಾರೋ ಅಂಥ ಕಡೆ ಈ ನಿಯಮಾವಳಿಯನ್ನು ತರುವುದರ ಬಗ್ಗೆ ಸರ್ಕಾರ ಯೋಚಿಸಬೇಕಾಗಿದೆ. ಅದರಲ್ಲಿಯೂ ವಿಶೇಷವಾಗಿ ತುಮಕೂರು, ಕೋಲಾರ, ಬೀದರ್, ಬಿಜಾಪುರ ಇಂಥ ಜಿಲ್ಲೆಗಳಲ್ಲಿ ನಾವು ಮಾಡಬೇಕಾಗಿದೆ, ಹೇಗೆ ಈಗ ಒಂದು family ಯಲ್ಲಿ weak ಆಗಿರುವಂಥ ಒಂದು ಮಗುವಿಗೆ ಹೆಚ್ಚು ಪೌಷ್ಟಿಕ ಆಹಾರ ಕೊಟ್ಟು strong ಮಾಡಲಿಕ್ಕೆ ಸಂಸಾರದಲ್ಲಿ ಪ್ರಯತ್ನ ಮಾಡುತ್ತಾರೋ ಅದೇರೀತಿ ಈ ನೀರಾವರಿ ಸೌಕರ್ಯಗಳಿಲ್ಲದೇ ಇರುವ ಪ್ರದೇಶಗಳಲ್ಲಿ ಈ ರೀತಿ ಒಂದು ಸೌಕರ್ಯವನ್ನು ಸರ್ಕಾರ ಕಲ್ಪಿಸಿಕೊಡಬೇಕೆಂದು ನಾನು ತಮ್ಮ ಮೂಲಕ ಮನವಿ ಮಾಡುತ್ತೇನೆ. ಇದಲ್ಲದೆ Garment industry ಗಳನ್ನು ಈಗ ಸಿಟಿಗಳಲ್ಲಿ ಅವರಿಗೆ ಸಾಕಷ್ಟು option ಗಳಿರುತ್ತದೆ. Call center ಗಳಲ್ಲಿ ಕೆಲಸ ಸಿಗುತ್ತದೆ, ಬೇರೆ ಬೇರೆ ರೀತಿ factories ಇರುತ್ತವೆ. ಆದರೆ ಹಳ್ಳಿಗಳಲ್ಲಿ ಆ ರೀತಿ ಇರುವುದಿಲ್ಲವಲ್ಲ, ವ್ಯವಸಾಯವನ್ನೇ ನಂಬಿಕೊಂಡಿರುತ್ತಾರೆ. ಸಕಾಲಕ್ಕೆ ಮಳೆ ಬರದೆ ಬೆಳೆ ಸಹ ಬೆಳೆಯಲಿಕ್ಕಾಗುವುದಿಲ್ಲ, ಅವರಿಗೆ ಆದಾಯ ಹೇಗೆ ಬರುತ್ತದೆ. ಅವರು ಜೀವನ ಹೇಗೆ ಸಾಗಿಸುತ್ತಾರೆ. ಅದರ ಬಗ್ಗೆ ಯೋಚನೆ ಮಾಡಬೇಕಾಗಿದೆ. ಅದರಲ್ಲಿಯೂ ಈ B.P.L. families ಹೇಗೆ ಜೀವನ ಸಾಗಿಸುತ್ತಾರೆ. ಅವರಿಗೆ ಆದಾಯ ಎಲ್ಲಿಂದ ಬರುತ್ತದೆ. ವ್ಯವಸಾಯದಿಂದ ಅವರಿಗೆ ಆದಾಯ ಬರದೆ ಇದ್ದರೆ ಬೇರೆ ರೀತಿಯಲ್ಲಿ ಅವರಿಗೆ ಆದಾಯ ಬರುವ ರೀತಿಯಲ್ಲಿ ಸರ್ಕಾರ ಯೋಜನೆಯನ್ನು ರೂಪಿಸಬೇಕಾಗಿದೆ. ಈ ಸಂಬಂಧವಾಗಿ ಪ್ರತಿ ತಾಲ್ಲೂಕು ಕೇಂದ್ರಗಳಲ್ಲಿಯೂ ಗಾರ್ಮೆಂಟ್ ಫ್ಯಾಕ್ಟರಿ ತೆಗೆಯಲಿಕ್ಕೆ ಯಾರಿಗೆ ಆಸಕ್ತಿ ಇರುತ್ತದೋ ಅಂಥವರಿಗೆ ಸ್ವಲ್ಪ ಉತ್ತೇಜನವನ್ನು ಕೊಟ್ಟು ಸರ್ಕಾರದ ಕಡೆಯಿಂದ ಸವಲತ್ತುಗಳನ್ನು ಒದಗಿಸಿಕೊಡಬೇಕಾಗುತ್ತದೆ.

ಸರ್ಕಾರಿ ಜಮೀನು ಇದಲ್ಲದೆ ವಿದ್ಯುತ್ತನ್ನು ಪೂರೈಕೆ ಮಾಡಿಕೊಡುವುದು, ನೀರಿನ ವ್ಯವಸ್ಥೆ ಹಾಗೆ ಅವರಿಗೆ ಸಬ್ಸಿಡಿ ದರದಲ್ಲಿ ಅವರಿಗೆ ಸಾಲ ದೊರಕುವ ಸೌಲಭ್ಯ ಈ ಎಲ್ಲಾ ಸವಲತ್ತುಗಳನ್ನು ದೊರಕಿಸಿ ಕೊಟ್ಟರೆ ಖಂಡಿತವಾಗಿಯೂ ತಾಲ್ಲೂಕು ಕೇಂದ್ರಗಳಲ್ಲಿ ಗಾರ್ಮೆಂಟ್ ಫ್ಯಾಕ್ಟರಿ ತೆರೆಯಲಿಕ್ಕೆ ಜನ ಮುಂದೆ ಬರುತ್ತಾರೆ. ಇದಲ್ಲದೆ ರಸ್ತೆಗಳ ವ್ಯವಸ್ಥೆಯು ಸಹ ಆಗಬೇಕಾಗಿದೆ. ಹೆಚ್ಚಾಗಿ ಸಿಟಿಗಳಲ್ಲಿ ಗಾರ್ಮೆಂಟ್ ಫ್ಯಾಕ್ಟರಿ ಮಾಡಲಿಕ್ಕೆ ಜನ ಇಷ್ಟಪಡುತ್ತಾರೆ. ಹಳ್ಳಿಗಳವರೆಗೆ ಹೋಗುವುದಕ್ಕೆ ಮನಸ್ಸು ಮಾಡುವುದಿಲ್ಲ, ಈ ರೀತಿ ಸೌಕರ್ಯಗಳನ್ನಾದರೂ ಸರ್ಕಾರ ಒದಗಿಸಿ ಕೊಟ್ಟರೆ ಆಗಲಾದರೂ ಅಲ್ಲಿ ಹೋಗಿ ಕಾರ್ಖಾನೆಗಳನ್ನು ಸ್ಥಾಪಿಸುವ ಕೆಲಸವನ್ನು industrialists ಮಾಡುತ್ತಾರೆ. ಈ ಬಗ್ಗೆ ಸರ್ಕಾರ ಗಂಭೀರವಾಗಿ ಯೋಚನೆ ಮಾಡಬೇಕಾಗಿದೆ. ಇದಲ್ಲದೆ ಕೆರೆಗಳಿಗೆ ನೀರು ತುಂಬಿಸುವಂಥ ಯೋಜನೆಗಳನ್ನು ಸರ್ಕಾರ ರೂಪಿಸಬೇಕಾಗಿದೆ. ತುಮಕೂರಿನ ಕೆಲವು ಭಾಗಗಳಿಗೆ ಹೇಮಾವತಿ, ನೇತ್ರಾವತಿ ನದಿಗಳಿಂದಾಗಲಿ ಸ್ವಲ್ಪ ನೀರು ತರುವುದಕ್ಕೆ ಪ್ರಯತ್ನ ಮಾಡುವಲ್ಲಿ ಸರ್ಕಾರ ಯೋಚಿಸಬಹುದಾಗಿದೆ. ಈ ಬಗ್ಗೆ ನೀರಾವರಿ ತಜ್ಞರ ಸಲಹೆಯನ್ನು ಪಡೆದುಕೊಂಡು ಅಧ್ಯಯನ ಮಾಡಿ ಅವರು ವರದಿಯನ್ನು ಕೊಟ್ಟ ನಂತರ ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕೆಂದು ಹೇಳಬಯಸುತ್ತೇನೆ.

ಕೊನೆಯದಾಗಿ ಬರಗಾಲಕ್ಕೆ ನಮ್ಮ ರೈತರು ತುತ್ತಾಗಿ ಸಂಕಟದಲ್ಲಿದ್ದಾರೆ ಅದಕ್ಕೆ ಸರ್ಕಾರದಿಂದ ಏನು ಕೆಲವು ಸೌಕರ್ಯಗಳನ್ನು ಕೊಡಬಹುದು ಎಂದು ಯೋಚಿಸಿದಾಗ ರೈತರಿಗೆ Interest free loan ಕೊಡುವ ಬಗ್ಗೆ ಸರ್ಕಾರ ಯೋಚಿಸಬಹುದು, ಇದಲ್ಲದೆ ಉಪ ಕಸುಬುಗಳಿಗೆ ಹೆಚ್ಚು ಪ್ರೋತ್ಸಾಹ ಕೊಡಬಹುದು, ಹಾಗೆ ವ್ಯಾಪಕವಾಗಿ ಗೋಶಾಲೆಗಳನ್ನು ತೆರೆಯುವುದರ ಬಗ್ಗೆ ಯೋಚನೆ ಮಾಡಬಹುದು. ಅದಲ್ಲದೆ ನೀರಾವರಿ ವಂಚಿತ ಪ್ರದೇಶಗಳಲ್ಲಿ ಕೆರೆಗಳನ್ನು ತುಂಬಿಸುವಂಥ ಕೆಲಸವನ್ನು ಮಾಡಬಹುದಾಗಿದೆ. ಈಗ ಏನು ಅಧಿವೇಶನ ಕರೆದಿದ್ದೀರಿ, ಕೆಲವು ಶಾಸಕರಿಂದ ಕೆಲವು ಮುಖಂಡರುಗಳಿಂದ ಸಲಹೆಗಳನ್ನು ಪಡೆದುಕೊಂಡಿದ್ದೀರಿ, ಇದರಲ್ಲಿ ಕೆಲವನ್ನಾದರೂ implement ಮಾಡುವುದಕ್ಕೆ ಸರ್ಕಾರ ಪ್ರಯತ್ನವನ್ನು ಮಾಡಲಿ ಎಂದು ನಾನು ತಮ್ಮ ಮೂಲಕ ಸರ್ಕಾರಕ್ಕೆ ಮನವಿ ಮಾಡುತ್ತೇನೆ. ಇನ್ನು ನನ್ನ ಸ್ವಕ್ಷೇತ್ರ ಮಧುಗಿರಿ ಬಗ್ಗೆ ಮಾತನಾಡುವುದಾದರೆ ಬಹಳ ಹಿಂದುಳಿದಿರುವ ಪ್ರದೇಶ ಅದು, ಅಲ್ಲಿ ವ್ಯವಸಾಯ ಬಿಟ್ಟು ಬೇರೇನು ಮಾಡಲಿಕ್ಕೆ ಅಲ್ಲಿನ ಜನಕ್ಕೆ ಗೊತ್ತಿಲ್ಲ. ಅದು

V15-54

ನಂಜುಂಡಪ್ಪ ವರದಿಯ ಪ್ರಕಾರ ಹಿಂದುಳಿದ ತಾಲ್ಲೂಕುಗಳ ಪಟ್ಟಿಗೆ ಸೇರಿದೆ. ಇಲ್ಲಿ ಹೆಚ್ಚಾಗಿ ಮಳೆಯಾಗದೆ ರಾಗಿ ಹಾಗೂ ಕಡಲೆಕಾಯಿಯನ್ನು ಬೆಳೆಯಲಿಕ್ಕೆ ಆಗಿಲ್ಲ. ಇತ್ತೀಚೆಗೆ ಸ್ವಲ್ಪ ಮಳೆ ಬಂದಿದ್ದರಿಂದ ಜೋಳ, ಹುರುಳಿ ಬೆಳೆಯುತ್ತಿದ್ದಾರೆ, ಇನ್ನು ಜಾನುವಾರುಗಳಿಗೆ ಮೇವಿನ ಸಮಸ್ಯೆ ಉಂಟಾಗಿದೆ, ಕುಡಿಯಲಿಕ್ಕೆ ನೀರು ಸಹ ಇಲ್ಲ, ಇದರ ಬಗ್ಗೆ ಸರ್ಕಾರ ಗಮನಹರಿಸಬೇಕಾಗಿದೆ, ನಮ್ಮ ಮೂರು ಹೋಬಳಿಗಳಾದ ಮಿಡಿಗೇಶಿ, ಕೊಡಿಗೆಹಳ್ಳಿ, ಐ.ಡಿ.ಹಳ್ಳಿ, ಇಲ್ಲಂತೂ ಪರಿಸ್ಥಿತಿ ಬಹಳ ಭೀಕರವಾಗಿದೆ. ಇದರ ಬಗ್ಗೆ ಸರ್ಕಾರ ಸರ್ಕಾರ ಹೆಚ್ಚಿಗೆ ಗಮನ ಕೊಟ್ಟು ಹೆಚ್ಚು ಪರಿಹಾರ ಧನವನ್ನು ಕೊಡುವಂಥ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕೆಂದು ನಾನು ತಮ್ಮ ಮೂಲಕ ಮನವಿ ಸರ್ಕಾರಕ್ಕೆ ಮನವಿ ಮಾಡುತ್ತೇನೆ.

**ಶ್ರೀ ಹೆಚ್. ಡಿ. ರೇವಣ್ಣ:** ಸರ್, ನಾನು ಹತ್ತು ನಿಮಿಷದಲ್ಲಿ ಮಾತನಾಡಿ ಮುಗಿಸುತ್ತೇನೆ.

**ಅಧ್ಯಕ್ಷರು:** ರೇವಣ್ಣ ಐದು ನಿಮಿಷದಲ್ಲಿ ಮುಗಿಸಿ, ಅರ್ಧ ತಾಸು Lunch break ಬಿಡುತ್ತೇನೆ, ನಂತರ ನೀವು ಐದು ನಿಮಿಷದಲ್ಲಿ ಮಾತನಾಡಿ, ಸರ್ಕಾರ ಉತ್ತರ ಕೊಟ್ಟುಬಿಡಲಿ.

**ಶ್ರೀ ಹೆಚ್. ಡಿ. ರೇವಣ್ಣ:** ನಾನು ಐದು ನಿಮಿಷದಲ್ಲಿ ಮಾತನಾಡಿ ಮುಗಿಸುತ್ತೇನೆ, ಊಟ ಆದ ನಂತರ ಅವರು ಉತ್ತರ ಕೊಡಲಿ.

**ಅಧ್ಯಕ್ಷರು:** ಆಯಿತು.

**ಶ್ರೀ ಹೆಚ್. ಡಿ. ರೇವಣ್ಣ:** ಮಾನ್ಯ ಅಧ್ಯಕ್ಷರೆ, ಇವತ್ತು ನಾವು ಒಂದು ನಿಲುವಳಿ ಸೂಚನೆಯನ್ನು ನಮ್ಮ ಪಕ್ಷದ ವತಿಯಿಂದ ಕೊಟ್ಟಿದ್ದೆವು. ಈ ರಾಜ್ಯದಲ್ಲಿ 20 ಜಿಲ್ಲೆಗಳಲ್ಲಿ ಬರಗಾಲ ಇರಬಹುದು. ಮೂರು ಜಿಲ್ಲೆಗಳಲ್ಲಿ ಅತೀವೃಷ್ಟಿ ಇರಬಹುದು. ಏಕೆಂದರೆ ಈ ಸರ್ಕಾರ ಬಂದ ಮೇಲೆ ಕಳೆದ 2008–09 ರಿಂದ ಕೆಲವು ಜಿಲ್ಲೆಗಳಲ್ಲಿ ಉದಾಹರಣೆಗೆ ಹೇಳುವುದಾದರೆ, ಕೇಂದ್ರ ಸರ್ಕಾರದಿಂದ ಹಣ ಬಂದಿದೆ, ರಾಜ್ಯ ಸರ್ಕಾರದಿಂದ ಹಣ ಎಷ್ಟು ವಿನಿಯೋಗ ಮಾಡಿದ್ದಾರೆಂಬುದನ್ನು ಮಾನ್ಯ ಕಂದಾಯ ಸಚಿವರು ಸದನದ ಗಮನಕ್ಕೆ ತರಬೇಕೆಂದು ನಾನು ಮೊದಲನೆಯದಾಗಿ ಮನವಿ ಮಾಡುತ್ತಿದ್ದೇನೆ. ಏಕೆಂದರೆ ಇವತ್ತು ಮುಂಗಾರು ಬೆಳೆ ಗುರಿ ಸುಮಾರು 72.00 ಲಕ್ಷ ರೂ.ಗಳಿತ್ತು, ಆ 72.00 ಲಕ್ಷ ರೂ.ಗಳಲ್ಲಿ ಕೇವಲ ವಾಡಿಕೆ ಮಳೆ ಇವತ್ತು ಆಗಸ್ಟ್‌ವರೆಗೆ ಕೇವಲ 61000 ಹೆಕ್ಟೇರ್ ಎಂದು ಹೇಳುತ್ತಾರೆ. ಬಿತ್ತನೆ ಆಗಿರುವಂಥ ಪ್ರದೇಶ 60000

ಹೆಕ್ಟೇರ್, ಮತ್ತೆ ತೇವಾಂಶದ ಕೊರತೆಯಿಂದ ಸುಮಾರು 20000 ಹೆಕ್ಟೇರ್ ಜಮೀನಿನಲ್ಲಿ ಬೆಳೆ ಸಂಪೂರ್ಣವಾಗಿ ಹೋಗಿದೆ ಎಂದು ವರದಿ ಹೇಳುತ್ತಿದೆ. ಅದರೊಂದಿಗೆ ಇವತ್ತಿನ ಕೆಲವು ಏಕದಳ ಧಾನ್ಯದ ಬಿತ್ತನೆ ಬೀಜವೆಂದು ಹೇಳಿ 34.00 ಲಕ್ಷ ರೂ.ಗಳ ಗುರಿ ಇತ್ತು. ಕೇವಲ 29000 ಆಗಿದೆ, ಅದರಲ್ಲಿ ಸುಮಾರು 28000 ಹೆಕ್ಟೇರ್ complete ಆಗಿ ನಾಶವಾಗಿದೆಯೆಂದು ಹೇಳುತ್ತಾರೆ. ಏಕೆಂದರೆ ಒಂದು ಕಡೆ ಕೇಂದ್ರ ಸರ್ಕಾರದಿಂದ ಮೊನ್ನೆ ಒಂದು ಟೀಮ್ ಬಂದಿದೆ, ಇವತ್ತಿನ ದಿವಸ ಕೇಂದ್ರ ಸರ್ಕಾರಕ್ಕೆ, ಮುಖ್ಯಮಂತ್ರಿಗಳು, ವಿರೋಧಪಕ್ಷದವರೆಲ್ಲಾ ಹೋಗಿ ಮನವಿ ಕೊಡುವುದು ಎಂದು ಹೇಳಿದ್ದರು, ಆದರೆ ಇದು ಆಗುವುದಿಲ್ಲ, ದಯಮಾಡಿ ಬರಬೇಡಿ ಎಂದು ನಮಗೆ 31ನೇ ತಾರೀಖು ನಮಗೆ ಒಂದು ಪತ್ರವನ್ನು ಕಳುಹಿಸಿದರು. ಒಂದು ಜಿಲ್ಲೆಯನ್ನು ಉದಾಹರಣೆ ಕೊಡುತ್ತೇನೆ. ಶಿವಮೊಗ್ಗ ತಾಲ್ಲೂಕಿನ ಶಿಕಾರಿಪುರ 14.75 ಲಕ್ಷ ರೂಪಾಯಿಗಳು, ಸೊರಬ 2 ಕೋಟಿ 15 ಲಕ್ಷ ರೂಪಾಯಿಗಳು, ಸಾಗರ 1 ಕೋಟಿ 92 ಸಾವಿರ ರೂಪಾಯಿಗಳು, ಇದೇ ರೀತಿ ಹೊಸನಗರ ಹಾಗೂ ಭದ್ರಾವತಿ ಇವೆಲ್ಲಾ ಸೇರಿ 5 ಕೋಟಿ 34 ಲಕ್ಷ ರೂಪಾಯಿಗಳ ಒಟ್ಟು ಹಣ ಬೆಳೆ ಹಾನಿ ಅತಿವೃಷ್ಟಿಯಿಂದ ಆಗಿದೆ. ಇದೇ ರೀತಿ ಇವತ್ತು ಶಿವಮೊಗ್ಗದ ರೀತಿಯಲ್ಲಿ ಲೆಕ್ಕ ಹಾಕಿದರೆ ಒಂದು ಉದಾಹರಣೆಯನ್ನು ನಮ್ಮ ಜಿಲ್ಲೆಯದ್ದನ್ನೂ ಕೊಡಬೇಕಾಗುತ್ತದೆ. ಏಕೆಂದರೆ, 2008–09ರಲ್ಲಿ 71 ಸಾವಿರ ಹೆಕ್ಟೇರ್ ಜಮೀನಿನಲ್ಲಿ ಆಲೂಗೆಡ್ಡೆ ಬೆಳೆ ಬೆಳೆಯಲಾಗಿತ್ತು. ಅದರಲ್ಲಿ 55 ಸಾವಿರ ಹೆಕ್ಟೇರ್ ಜಮೀನಿನಲ್ಲಿ ಬೆಳೆದ ಆಲೂಗೆಡ್ಡೆ ಬೆಳೆ ಸಂಪೂರ್ಣವಾಗಿ ನಾಶವಾಗಿದೆ. ಇವೆತ್ತು ಒಂದು ಎಕರೆಗೆ 800 ರೂಪಾಯಿಗಳೆಂದು CRF fund ಅನ್ನು ಇಟ್ಟಿದ್ದಾರೆ. ಒಂದು ಹೆಕ್ಟೇರ್‌ಗೆ 2 ಸಾವಿರ ರೂಪಾಯಿಗಳೆಂದು ಮಾಡಿದ್ದಾರೆ. ಇದು 5–10 ವರ್ಷಗಳ ಹಿಂದಿನದು ಇರಬಹುದು. ಅದು ಬೇಡ. ಇತ್ತೀಚಿನ ಎರಡು ವರ್ಷಗಳದ್ದನ್ನು ಇಟ್ಟುಕೊಳ್ಳೋಣ. 800 ರೂಪಾಯಿಗಳಿಗೆ ಒಂದು ಎಕರೆ ಆಲೂಗೆಡ್ಡೆಯನ್ನು ಬೆಳೆಯುವುದಕ್ಕಾಗುತ್ತದೆಯೇ ಸ್ವಾಮಿ? ಕನಿಷ್ಠ ಒಂದು ಎಕರೆಗೆ 15–25 ಸಾವಿರ ರೂಪಾಯಿಗಳು ಬೇಕಾಗುತ್ತದೆ. ಬರೀ ಬಿತ್ತನೆ ಮಾಡುವುದು, ಗೊಬ್ಬರ, ಆಳಿನ ಕೂಲಿ ಸೇರಿ ಸುಮಾರು 25 ಸಾವಿರ ಬೇಕಾಗುತ್ತದೆ. ಜಿಲ್ಲಾಧಿಕಾರಿಗಳು ಒಂದು ಹೆಕ್ಟೇರ್‌ಗೆ 25 ಸಾವಿರ ರೂಪಾಯಿಗಳು ಬೇಕು ಎಂದು ವರದಿ ಕೊಟ್ಟಿದ್ದರು. ಇವತ್ತು 55 ಸಾವಿರ ಹೆಕ್ಟೇರ್ ಜಮೀನಿನಲ್ಲಿ ಸುಮಾರು 140 ಕೋಟಿ ರೂಪಾಯಿಗಳ ಆಲೂಗೆಡ್ಡೆ ಬೆಳೆ ಸರ್ವನಾಶವಾಗಿದೆ.

ಕಳೆದ ವರ್ಷದಲ್ಲಿ 71 ಸಾವಿರ ಹೆಕ್ಟೇರ್ ಜಮೀನಿನಲ್ಲಿ ಆಲೂಗೆಡ್ಡೆಯನ್ನು ಬೆಳೆಯುವಂಥ ರೈತರು ಈ ವರ್ಷ 2008–09ಕ್ಕೆ ಕೇವಲ 17 ಸಾವಿರ ಹೆಕ್ಟೇರ್ ಜಮೀನಿನಲ್ಲಿ ಆಲೂಗೆಡ್ಡೆ ಬೆಳೆದಿದ್ದಾರೆ. ಅದರಲ್ಲೂ 8 ಸಾವಿರ ಹೆಕ್ಟೇರ್ ಜಮೀನಿನಲ್ಲಿ ಇವತ್ತು ಆಲೂಗೆಡ್ಡೆ ಬೆಳೆ ಸರ್ವನಾಶವಾಯಿತು. ಕಳೆದ ವರ್ಷ ಹಾಗೂ ಈ ವರ್ಷ ಸೇರಿ ಇವತ್ತು ರೈತರಿಗೆ 150 ಕೋಟಿ ರೂಪಾಯಿಗಳ loss ಆಗಿದೆ. ಸಂಪೂರ್ಣವಾಗಿ ನಷ್ಟವಾಗಿದೆ. ಏನೆಂದರೆ, ಕಂದಾಯ ಮಂತ್ರಿಗಳು ಹಾಗೂ ಕೃಷಿ ಮಂತ್ರಿಗಳಿಗೆ ನಾನು ಗಮನಕ್ಕೆ ತರುವುದು ಇಷ್ಟೆ. ಇದನ್ನು ಕೇಂದ್ರ ಸರ್ಕಾರದ ಗಮನಕ್ಕೆ ತಂದಿದ್ದೀರಾ? ಕನಿಷ್ಠ ಒಂದು ಎಕರೆಗೆ 5 ಸಾವಿರ ರೂಪಾಯಿಗಳ CRF fund ಮಾಡುವುದಕ್ಕೆ ಸಭೆಯಲ್ಲಿ ನಿರ್ಣಯ ಮಾಡಿ ಕಳುಹಿಸುವುದಕ್ಕೆ ಏನಾದರೂ ಇವತ್ತು ತೊಂದರೆಯಿದೆಯೇ? ಕೇಂದ್ರ ಸರ್ಕಾರಕ್ಕೆ ಒಂದು proposal ಕಳುಹಿಸಿ. ಏಕೆಂದರೆ, ಕನಿಷ್ಠ 5 ಸಾವಿರ ರೂಪಾಯಿಗಳ CRF fund ಕೊಡದೇ ಹೋದರೆ ಆ ರೈತರ ಪಾಡೇನು? ಆಮೇಲೆ ರಾಜ್ಯ ಸರ್ಕಾರದಿಂದ ಏನು ಕೊಡುತ್ತೀರಿ? ಏಕೆಂದರೆ ಕೆಲವು ಭಾಗಗಳಲ್ಲಿ 5 ಕೋಟಿ ರೂಪಾಯಿಗಳನ್ನು release ಮಾಡಿದ್ದೇವೆ ಎಂದು ಹೇಳುತ್ತೀರಿ. 5 ಕೋಟಿ 93 ಲಕ್ಷ ರೂಪಾಯಿಗಳ ಬೆಳೆ ಹಾನಿ ಎಂದು ಹೇಳುತ್ತೀರಿ. ಶಿವಮೊಗ್ಗಕ್ಕೆ release ಮಾಡುತ್ತೀರಿ. ನಾವು ಹಾಸನದವರು ಏನು ಮಾಡಿದ್ದೇವೆ? ಹೋದ ಸಲ ಆಲೂಗೆಡ್ಡೆ ಬೆಳೆ ಸಂಪೂರ್ಣವಾಗಿ 55 ಸಾವಿರ ಹೆಕ್ಟೇರ್ ಬೆಳೆ ಹೋಯಿತಲ್ಲಾ, ಅದಕ್ಕಾಗಿ ಸುಮಾರು 17 ಸಾವಿರ ಹೆಕ್ಟೇರ್ ಜಮೀನಿನಲ್ಲಿ maize ಬೆಳೆಯುತ್ತಿದ್ದಂಥವರು ಇವತ್ತು 55 ಸಾವರಿ ಹೆಕ್ಟೇರ್‌ನಲ್ಲಿ maize ಬೆಳೆದಿದ್ದಾರೆ. ಸರ್ಕಾರ ಅದಕ್ಕೆ ಬೆಂಬಲ ಬೆಲೆಯನ್ನಾದರೂ ಘೋಷಣೆ ಮಾಡಬೇಕಲ್ಲವೇ? ಕನಿಷ್ಠ 1,200 ರೂಪಾಯಿಗಳ ಬೆಂಬಲ ಬೆಲೆಯನ್ನಾದರೂ ಘೋಷಣೆ ಮಾಡಬೇಕು. ಕಳೆದ ವರ್ಷ 850 ರೂಪಾಯಿಗಳ ಬೆಂಬಲ ಬೆಲೆಯನ್ನು ಮಾಡಿದ್ದರು. ಇಲ್ಲಿ ಕೃಷಿ ಸಚಿವರು ಇದ್ದಾರೆ. ಇವತ್ತಿನವರೆಗೆ ಇದರ ಬಗ್ಗೆ ಪ್ರಸ್ತಾಪವಿಲ್ಲ. ಏಕೆಂದರೆ, ಇವತ್ತು ಬರಗಾಲ ಹಾಗೂ ಅತಿವೃಷ್ಟಿ ಬಗ್ಗೆ ಕೇಂದ್ರ ಸರ್ಕಾರಕ್ಕೆ ವರದಿ ಕಳುಹಿಸಿದ್ದೀರಿ. ವರದಿ ಕಳುಹಿಸುವಾಗ 224 ವಿಧಾನಸಭಾ ಕ್ಷೇತ್ರಗಳಲ್ಲಿ ಏನಿದೆ ಎನ್ನುವುದರ ಚಿತ್ರೀಕರಣವನ್ನು ಸೇರಿಸಿ. ವಿರೋಧ ಪಕ್ಷದ ನಾಯಕರನ್ನೂ ಸಹ ವಿಶ್ವಾಸಕ್ಕೆ ತೆಗೆದುಕೊಂಡು, ಎಲ್ಲರನ್ನೂ ನೀವು ವಿಶ್ವಾಸಕ್ಕೆ ತೆಗೆದುಕೊಂಡು ಕೇಂದ್ರ ಸರ್ಕಾರಕ್ಕೆ ವರದಿಯನ್ನು ಕೊಟ್ಟಿದ್ದರೆ ನಾವು ಒಪ್ಪಬಹುದಾಗಿತ್ತು. ಕೇಂದ್ರ ಸರ್ಕಾರಕ್ಕೆ ಸುಮಾರು 700 ಕೋಟಿ ರೂಪಾಯಿಗಳ

ಮನವಿ ಕೊಟ್ಟಿದ್ದೇವೆ ಎಂದು ತಾವು ಹೇಳಿದ್ದೀರಿ. ಮೊನ್ನೆ ಮಾನ್ಯ ಮುಖ್ಯಮಂತ್ರಿಗಳ ಸಮ್ಮುಖದಲ್ಲಿ ಚರ್ಚೆ ಮಾಡಿದಾಗ ಬರಪರಿಹಾರ ಕಾರ್ಯಕ್ರಮಗಳಿಗೆ 394 ಕೋಟಿ ರೂಪಾಯಿಗಳು ಪ್ರವಾಹ ಪೀಡಿತ ಪರಿಹಾರ ಕಾರ್ಯಕ್ರಮಗಳಿಗೆ 317 ಕೋಟಿ ರೂಪಾಯಿಗಳು ಎಂದು ಹೇಳಿದಿರಿ. ರಾಜ್ಯದಲ್ಲಿ ಬೆಳೆ ನಷ್ಟ ಎಷ್ಟಾಗಿದೆ ಎಂದು ಹೇಳಬೇಕಲ್ಲವೇ? ಯಾವ ಯಾವ ಜಿಲ್ಲೆಗಳಲ್ಲಿ ಬೆಳೆ ನಷ್ಟ ಎಷ್ಟೆಷ್ಟಾಗಿದೆ? ಇದರಿಂದ ಎಷ್ಟು ರೈತರು ಸಂಕಷ್ಟಕ್ಕೆ ಒಳಗಾಗಿದ್ದರೆ, ಇದಕ್ಕೆ ಕಾರಣವೇನು? ಉದಾಹರಣೆಗೆ ಹೇಳುವುದಾದರೆ ನೀರಾವರಿ ಪ್ರದೇಶವಿಲ್ಲದೇ ಇರುವಂಥಾದ್ದು ಎಂದರೆ ಕೋಲಾರ ಜಿಲ್ಲೆ, ಚಿಕ್ಕಬಳ್ಳಾಪುರ ಜಿಲ್ಲೆ ಹಾಗೂ ತುಮಕೂರು ಜಿಲ್ಲೆಗಳು. ಇವು ಸಂಪೂರ್ಣವಾಗಿ ನೀರಾವರಿಯಿಲ್ಲದೇ ಇರುವ ಪ್ರದೇಶಗಳು. ಈಗ ಮಾನ್ಯ ಪಶುಸಂಗೋಪನೆ ಇಲಾಖೆಯ ಸಚಿವರು ಇಲ್ಲ. 2 ರೂಪಾಯಿಗಳ ಬೆಂಬಲ ಬೆಲೆಯನ್ನು ಹಾಲಿಗೆ ಕೊಟ್ಟಿದ್ದೀರಿ. ಇವತ್ತಿನವರೆಗೂ ಸಹ ಹಣ release ಮಾಡಿಲ್ಲ. ಸರ್ಕಾರಕ್ಕೆ ಹಣ release ಮಾಡುವುದಕ್ಕೆ ತೊಂದರೆ ಏನಾದರೂ ಇದೆಯೇ? ಒಂದು ಕಡೆಯಲ್ಲಿ ರೈತರಿಗೆ 2 ರೂಪಾಯಿಗಳ ಬೆಂಬಲ ಬೆಲೆ ಕೊಡುತ್ತೇವೆ ಎಂದು ಹೇಳುತ್ತೀರಿ. ಬೆಂಗಳೂರು ಗ್ರಾಮಾಂತರ, ಕೋಲಾರ ಹಾಗೂ ತುಮಕೂರು ಜಿಲ್ಲೆಗಳಲ್ಲಿ ಹೆಚ್ಚಿನ ಹಾಲು ಉತ್ಪಾದನೆಯಾಗುತ್ತದೆ. ತುಮಕೂರು ಹಾಗೂ ಕೋಲಾರ ಜಿಲ್ಲೆಗಳಲ್ಲಿ, ಇವೆರಡೂ ಕಡೆಗಳಿಂದ ಕನಿಷ್ಠ 40 ಲಕ್ಷ ಲೀಟರ್ ಹಾಲಿನಲ್ಲಿ 20 ಲಕ್ಷ ಲೀಟರ್ ಹಾಲು ಇಲ್ಲಿಗೇ ಸರಬರಾಜಾಗುತ್ತದೆ. ಎರಡು ತಿಂಗಳುಗಳಾದರೂ 2 ರೂಪಾಯಿಗಳ ಬೆಂಬಲ ಬೆಲೆ ಇವತ್ತಿನವರೆಗೂ release ಆಗಿಲ್ಲ. ರೈತ ಎರಡು ಲೀಟರ್ ಹಾಲನ್ನು ಮಾರಾಟ ಮಾಡುತ್ತಾನೋ ಅಥವಾ 5 ಲೀಟರ್ ಹಾಲನ್ನು ಮಾರಾಟ ಮಾಡುತ್ತಾನೋ ಗೊತಿಲ್ಲ. ಇದರಿಂದ ರೈತ ಒಂದು ವಾರಕ್ಕೆ ಜೀವನ ಮಾಡುವುದಕ್ಕೆ ಏನು ಮಾಡಬೇಕಾಗುತ್ತದೆ. ಸರ್ಕಾರ ಇದರ ಬಗ್ಗೆ ಚಿಂತನೆ ಮಾಡುವುದಕ್ಕೆ ಏನಾದರೂ ತೊಂದರೆ ಇದೆಯೇ? ಈ ಭಾಗಗಳಲ್ಲಿ ಮಳೆಯೇ ಆಗಿಲ್ಲ. ಇವತ್ತು ಹೋಬಳಿ ಮಟ್ಟದಲ್ಲಿ ನೀವು rain gauge ಇಟ್ಟಿದ್ದೀರಿ. ಅದನ್ನು ಲೆಕ್ಕಾಚಾರ ಹಾಕಿದರೆ ನೀವು ಕಸಬಾ ಹೋಬಳಿ ತೆಗೆದುಕೊಳ್ಳಿ. ಕಸಬಾ ಹೋಬಳಿ ಬಿಟ್ಟು ಬಾಕಿ ಇರುವ ಹೋಬಳಿಗಳಲ್ಲಿ ಏನೇನು ಪರಿಸ್ಥಿತಿ ಇದೆ ಎನ್ನುವುದನ್ನು ಹೇಳಿ. ಏನು ಮಾನ್ಯ ಸಿದ್ದರಾಮಯ್ಯನವರು ಹಾಗೂ ಕೃಷಿ ಸಚಿವರು ಹೇಳಿದರು, ಅದೇ ರೀತಿಯಲ್ಲಿ ಪ್ರತಿ ಪಂಚಾಯಿತಿ ಲೆವೆಲ್‌ನಲ್ಲಿ ಇದನ್ನು ನೀವು ಮಾಡಬೇಕಾಗುತ್ತದೆ. ಇವತ್ತು rain gauge ಅನ್ನು

ಪ್ರತಿ ಪಂಚಾಯಿತಿಯಲ್ಲಿ ನೀವು ಇಡಬೇಕು. ಅದರ ಜೊತೆಗೆ ಬೆಳೆ ವಿಮೆಯನ್ನು ಪಂಚಾಯಿತಿ ಮಟ್ಟದಲ್ಲಿ ತರಬೇಕು. ಕೃಷಿ ಇಲಾಖೆ ಕಾರ್ಯದರ್ಶಿಗಳಿರಬಹುದು, ತಾವು ಇರಬಹುದು, ವಿರೋಧ ಪಕ್ಷದ ನಾಯಕರನ್ನೂ ಸಹ ಕರೆಯಿರಿ. LIC Insurance ಮಾಡುವವರನ್ನೂ ಸಹ ಕರೆಸಿ. ಅವರಿಗೆ ಯಾವ ರೀತಿಯ ಸಲಹೆಗಳನ್ನು ಕೊಡಬೇಕು ಎಂಬುದರ ಬಗ್ಗೆ ಸರ್ಕಾರದಿಂದ ಒಂದು ಕಾಂಕ್ರೀಟ್ proposal ಅನ್ನು ನೀವು ಕೊಡಿ. ಏಕೆಂದರೆ, ಕೇಂದ್ರ ಸರ್ಕಾರದವರು ಕೊಡುತ್ತಾರೋ ಅಥವಾ ಇಲ್ಲವೋ ಅದರ ಬಗ್ಗೆ ನನಗೆ ಗೊತ್ತಿಲ್ಲ. ನೀವು ಅದಕ್ಕೆ ಒತ್ತಾಯವನ್ನಾದರೂ ಕೂಡ ಮಾಡಬೇಕಲ್ಲವೇ? ಇವತ್ತು ಯಾವ್ಯಾವ ಜಿಲ್ಲೆಗಳಲ್ಲಿ ಬೆಳೆ ಹಾನಿಯಾಗಿದೆ, ಎಷ್ಟು ಬೆಳೆ ಇದೆ ಇದರ ಬಗ್ಗೆ ದಯಮಾಡಿ ತಾವು ಉತ್ತರ ಕೊಡುವಂಥ ಸಂದರ್ಭದಲ್ಲಿ ಹೇಳಬೇಕು. ಆ ಬೆಳೆ ಹಾನಿಯಾಗಿರುವುದಕ್ಕೆ ರಾಜ್ಯ ಸರ್ಕಾರ ಏನು ಪರಿಹಾರ ಕೊಡುತ್ತದೆ ಎಂದು ಹೇಳಬೇಕು. ಏನಾದರೂ ಪ್ಯಾಕೇಜ್ ಕೊಡುತ್ತೀರಾ? ಇವತ್ತು 150 ಕೋಟಿ ರೂಪಾಯಿಗಳ ಹಾನಿ ಬರೀ ಹಾಸನ ಜಿಲ್ಲೆ ಒಂದರಲ್ಲಿಯೇ ಆಗಿದೆ. ಅದಕ್ಕೆ ಏನಾದರೂ ಪ್ಯಾಕೇಜ್ ಕೊಡುವುದು ಇದ್ದರೆ ದಯಮಾಡಿ ಹೇಳಿ. ಅಥವಾ ಕೇಂದ್ರ ಸರ್ಕಾರಕ್ಕೆ ಪ್ಯಾಕೇಜ್ ಕಳುಹಿಸಿಕೊಡುವುದು ಇದ್ದರೆ ಹೇಳಿ. ಮೆಕ್ಕೆಜೋಳಕ್ಕೆ ಸಂಬಂಧಿಸಿದಂತೆ, ಸುಮಾರು 17 ಲಕ್ಷ ಟನ್ ಮೆಕ್ಕೆಜೋಳ ಇವತ್ತು ಬೆಳೆಯಲಾಗಿದೆ. ಅದಕ್ಕೆ ಬೆಂಬಲ ಬೆಲೆಯನ್ನಾದರೂ ಕೊಡುತ್ತೀರಾ? ಮತ್ತೆ ರೈತರು ಈ ಬಗ್ಗೆಯೂ ಕಣ್ಣೀರು ಹಾಕುವಂಥ ಪರಿಸ್ಥಿತಿ ಬರುತ್ತದೆಯೇ? ಮೆಕ್ಕೆಜೋಳಕ್ಕೆ ಇಟ್ಟಿರುವ 850 ರೂಪಾಯಿಗಳ ಬೆಂಬಲ ಬೆಲೆಯನ್ನು ಕನಿಷ್ಟ 1200 ರೂಪಾಯಿಗಳಿಗೆ ಮಾಡಬೇಕು. ಇದನ್ನು ನಾನು ಕಂದಾಯ ಹಾಗೂ ಕೃಷಿ ಸಚಿವರ ಗಮನಕ್ಕೆ ತರುತ್ತೇನೆ. ಇವತ್ತಿನವರೆಗೆ ಬರಗಾಲದ ಬಗ್ಗೆ ಚರ್ಚೆಯಾಗಿದೆ. ಇದರ ಬಗ್ಗೆ ವಿರೋಧ ಪಕ್ಷದ ನಾಯಕರು ಸಲಹೆ ಕೊಟ್ಟಿದ್ದಾರೆ. ಆಡಳಿತ ಪಕ್ಷದ ಸದಸ್ಯರು ಸಲಹೆ ಕೊಟ್ಟಿದ್ದಾರೆ. ಎಲ್ಲಾ ಪಕ್ಷದ ಸದಸ್ಯರಿಗೂ ಮಾತನಾಡಲು ಅವಕಾಶ ಕೊಟ್ಟಿದ್ದೀರಿ. ಅದಕ್ಕೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ನೀವು 5 ನಿಮಿಷಗಳ ಕಾಲಾವಕಾಶ ಕೊಟ್ಟಿದ್ದಿರಿ. 5 ನಿಮಿಷಗಳಲ್ಲೇ ನನ್ನ ಭಾಷಣವನ್ನು ಮುಗಿಸಿದ್ದೇನೆ.

**ಅಧ್ಯಕ್ಷರು** : ಬಹಳ ಒಳ್ಳೆಯ ಕೆಲಸ ಮಾಡಿದ್ದೀರಿ.

**ಶ್ರೀ ಹೆಚ್.ಡಿ. ರೇವಣ್ಣ:** ಏಕೆಂದರೆ, ಯಾವುದೇ ಆದೇಶ ಉಲ್ಲಂಘನೆಯಾಗಬಾರದು. ಏಕೆಂದರೆ, ಮಾನ್ಯ ಸಿದ್ದರಾಮಯ್ಯ ಹಾಗೂ

ಶ್ರೀನಿವಾಸ್ ಪ್ರಸಾದ್‌ರವರು ಒಂದು ಗಂಟೆಯ ಕಾಲಾವಕಾಶ ತೆಗೆದುಕೊಂಡು ಮಾತನಾಡಿದ್ದಾರೆ. ನಮ್ಮ ನಾಯಕರು ಮಾತನಾಡಲು ಕಾಲಾವಕಾಶ ತೆಗೆದುಕೊಳ್ಳಲಿ. ನನ್ನದು ಅಭ್ಯಂತರವೇನು ಇಲ್ಲ.

**ಅಧ್ಯಕ್ಷರು:** Within time ನಲ್ಲಿ ಮುಗಿಸಿದ್ದಕ್ಕೆ ವಿಶೇಷವಾದ ಧನ್ಯವಾದಗಳು.

**ಶ್ರೀ ಹೆಚ್.ಡಿ. ರೇವಣ್ಣ:** ಮಾನ್ಯ ಅಧ್ಯಕ್ಷರಿಗೆ ಧನ್ಯವಾದಗಳನ್ನು ಹೇಳುತ್ತೇನೆ.

**ಅಧ್ಯಕ್ಷರು** : ಸದನವನ್ನು ಮಧ್ಯಾಹ್ನ 3 ಗಂಟೆ 30 ನಿಮಿಷಕ್ಕೆ ಸೇರುವಂತೆ ಮುಂದೂಡಲಾಗಿದೆ.

**(ಸದನವು ಮಧ್ಯಾಹ್ನ 2 ಗಂಟೆ 57 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ 3 ಗಂಟೆ 30 ನಿಮಿಷಕ್ಕೆ ಸೇರಲು ನಿಶ್ಚಯಿಸಿತು)**

**3.30 PM**

**ಸದನವು ಪುನ: ಮಧ್ಯಾಹ್ನ 3 ಗಂಟೆ 40 ನಿಮಿಷಕ್ಕೆ ಆರಂಭಗೊಂಡಿತು. ಮಾನ್ಯ ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದರು.**

**ಶ್ರೀ ಜಿ. ಕರುಣಾಕರರೆಡ್ಡಿ (ಕಂದಾಯ ಸಚಿವರು) :** ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಉಂಟಾಗಿರುವ ಭೀಕರ ಬರ ಹಾಗೂ ಅತಿವೃಷ್ಟಿಯಿಂದ ಜನ ಹಾಗೂ ಜಾನುವಾರುಗಳಿಗೆ ತೀವ್ರ ಸ್ವರೂಪದ ತೊಂದರೆಯುಂಟಾಗಿರುವ ಕುರಿತಂತೆ ನಿಯಮ 69ರಡಿ ಸನ್ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಸಿದ್ದರಾಮಯ್ಯ, ಟಿ.ಬಿ. ಜಯಚಂದ್ರ, ಸಿ.ಎಸ್.ನಾಡಗೌಡ, ಹೆಚ್.ಡಿ. ರೇವಣ್ಣ, ಬಂಡೆಪ್ಪ ಕಾಶೆಂಪೂರ್ ಹಾಗೂ ಇನ್ನಿತರ ಅನೇಕ ಮಾನ್ಯ ಸದಸ್ಯರುಗಳು ಮಾತನಾಡಿದ್ದಾರೆ. ಅವರ ಜಿಲ್ಲೆಯಲ್ಲಿ ಮತ್ತು ಅವರ ಕ್ಷೇತ್ರದಲ್ಲಿ ಉಂಟಾಗಿರುವ ಅನೇಕ ವಿಚಾರಗಳನ್ನು ಈ ಸದನಕ್ಕೆ ತಮ್ಮ ಮೂಲಕ ತಿಳಿಸಿದ್ದಾರೆ. ಇವತ್ತು ಅನೇಕ ಮಾನ್ಯ ಸದಸ್ಯರು ಮಾತನಾಡುತ್ತಾ, ಇದಕ್ಕೊಂದು ಶಾಶ್ವತ ಪರಿಹಾರ ಕಂಡುಕೊಳ್ಳಬೇಕೆಂದು ಸಲಹೆ ನೀಡಿದ್ದಾರೆ. ಮಾನ್ಯ ಹಿರಿಯ ಸದಸ್ಯರಾದ ಟಿ.ಬಿ.ಜಯಚಂದ್ರರವರು ಮಾತನಾಡಿ, ಬರಗಾಲ ಬಂದಾಗ ಮಾತ್ರ ಸದ್ ಕಮಿಟಿಗಳು ತುರ್ತಾಗಿ ಸೇರುತ್ತವೆ, ಘೋಷಣೆಯಾಗುತ್ತದೆಂದೂ, ಆನಂತರ, ಆ ಕುರಿತು ಕಾಳಜಿ ವಹಿಸುವುದಿಲ್ಲವೆಂದಿದ್ದಾರೆ. ಬಹುತೇಕ ಸದಸ್ಯರ ಕ್ಷೇತ್ರಗಳಲ್ಲಿ,

ಜಿಲ್ಲೆಗಳಲ್ಲಿ ನದಿಗಳು ಹರಿದು ಹೋಗುತ್ತಿದ್ದು, ನದಿಯಲ್ಲಿ ನೆರೆಯುಂಟಾದಾಗ ಹೆಚ್ಚಿನ ಪ್ರಮಾಣದ ನೀರು ಸಮುದ್ರಕ್ಕೆ ಹರಿದು ಹೋಗುವ ಬದಲು ಅಲ್ಲಿಯೇ ಉಳಿಸಿಕೊಳ್ಳುವ ಪ್ರಯತ್ನ ಮಾಡಿ, ತನ್ಮೂಲಕ ಅಂತರ್ಜಲದ ಮಟ್ಟ ಹೆಚ್ಚಿಸಬೇಕೆಂಬ ಅನೇಕ ರೀತಿಯ ಸಲಹೆ-ಸೂಚನೆಗಳನ್ನು ಕೊಟ್ಟಿದ್ದಾರೆ.

ಇನ್ನು ಬಿತ್ತನೆಗೆ ಸಂಬಂಧಿಸಿದಂತೆ ನಮ್ಮ ಗುರಿ ಏನಿತ್ತು, 72 ಲಕ್ಷ ಹೆಕ್ಟೇರ್‌ಗಳ ಪೈಕಿ 67 ಲಕ್ಷ ಹೆಕ್ಟೇರ್‌ಗಳಲ್ಲಿ ಬಿತ್ತನೆಯಾಗಿದ್ದು, ಅದರಲ್ಲಿ ಸುಮಾರು 20 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ನಷ್ಟವುಂಟಾಗಿರುವುದಕ್ಕೆ ಸಂಬಂಧಿಸಿದಂತೆ ರಾಜ್ಯಕ್ಕೆ ಏನೇನು ಬೇಕೆಂಬ ಬಗ್ಗೆ ಕೇಂದ್ರ ಸರ್ಕಾರಕ್ಕೆ ಮನವಿ ಪತ್ರ ಸಲ್ಲಿಸಿದ್ದೇವೆ. ಬರದ ಬಗ್ಗೆ ಮನವಿ ಪತ್ರ ಸಲ್ಲಿಸಿದ ನಂತರ, 20 ಜಿಲ್ಲೆಗಳ 86 ತಾಲ್ಲೂಕುಗಳನ್ನು 'ಬರಪೀಡಿತ ತಾಲ್ಲೂಕು'ಗಳೆಂದು ಘೋಷಿಸಿದ ಬಳಿಕ ಸತತವಾಗಿ ಉತ್ತಮ ಮಳೆ ಮತ್ತೆ ಪ್ರಾರಂಭಗೊಂಡಿತು. ಅದೇ ರೀತಿ ಆಗಸ್ಟ್ ತಿಂಗಳಿನಲ್ಲಿ ಬಹಳಷ್ಟು ಹೆಚ್ಚಿನ ಪ್ರಮಾಣದಲ್ಲಿ ಮಳೆಯಾಗಿದ್ದರಿಂದ, ಸ್ವಲ್ಪಮಟ್ಟಿಗಾದರೂ ಮೇವು ಮತ್ತು ಕುಡಿಯುವ ನೀರಿನ ವಿಚಾರದಲ್ಲಿ ಸುಧಾರಣೆಯಾಗಿದೆ. ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಾ, ಕೇಂದ್ರ ಸರ್ಕಾರದಿಂದ ಬಂದ 180 ಕೋಟಿ ರೂ. ನಿಮ್ಮ ಬಳಿ ಇದ್ದು, ನೀವು ಆ ಹಣ ಬಿಡುಗಡೆ ಮಾಡಿಲ್ಲವೆಂದು ಹೇಳಿದರು. ಆದರೆ, ಇವತ್ತಿನವರೆಗೂ ಇನ್ನೂ 3 ಕೋಟಿ ಹೆಚ್ಚಿಗೆ, ನಮಗೆ ಕೇಂದ್ರ ಸರ್ಕಾರದಿಂದ ಏನು ಹಣ ಬಂದಿತ್ತು, ಅದರ ಜೊತೆಗೆ ರಾಜ್ಯದ ಪಾಲು ಏನಿತ್ತು, ಎಲ್ಲವನ್ನೂ ಸೇರಿಸಿ, ಒಟ್ಟಾರೆ ಎಲ್ಲಾ ಹಣವನ್ನೂ ಇವತ್ತು ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಿದ್ದೇವೆ. ಈ ವರ್ಷ ನಿರ್ದಿಷ್ಟವಾಗಿ 52 ಕೋಟಿ ರೂ. ಅಖಿಈ ನಲ್ಲಿ ಬಂದಿತ್ತು, 83 ಕೋಟಿ ರೂ.ಗಳು ಓಅಅಈ ನಲ್ಲಿ ಬಂದಿತ್ತು. ಅವೆಲ್ಲವನ್ನೂ ಬಿಡುಗಡೆ ಮಾಡಿದ್ದೇವೆ. ಅದರ ಜೊತೆಗೆ ನಮ್ಮ ಪಾಲನ್ನೂ ಬಿಡುಗಡೆ ಮಾಡಿದ್ದೇವೆ. ಒಟ್ಟಾರೆ ಇವತ್ತು ಎಲ್ಲಾ ದುಡ್ಡು ಕೊಟ್ಟು ಬರಗಾಲದ ವಿಚಾರದಲ್ಲಿ ರೈತರಿಗೆ ಯಾವುದೇ ರೀತಿಯಲ್ಲೂ ತೊಂದರೆಯಾಗಬಾರದು, ಗೋಶಾಲೆಗಳನ್ನು ತೆರೆಯುವುದಾಗಿರಬಹುದು, ಎಲ್ಲೆಲ್ಲಿ ಅವಶ್ಯಕತೆಗಳಿವೆಯೋ, ಈ ಕುರಿತು ಸಾಕಷ್ಟು ಸದಸ್ಯರು ಪ್ರಸ್ತಾಪಿಸಿದರು. ನಾವು ಈ ಕುರಿತಂತೆ ಅಗತ್ಯವಿರುವ ಎಲ್ಲಾ ಸೂಚನೆಗಳನ್ನು ಕೊಟ್ಟು ಮೇವನ್ನು ಸಂಗ್ರಹಿಸುವುದಲ್ಲದೆ, ಕುಡಿಯುವ ನೀರಿನ ವ್ಯವಸ್ಥೆಗೂ ಆದ್ಯತೆ ಕೊಟ್ಟು ಕೆಲಸ ಮಾಡಬೇಕಾಗುತ್ತದೆ.

ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಾ, ಎಂಎಲ್ಎಗಳ ನೇತೃತ್ವದಲ್ಲಿ ಎಲ್ಲಿ ಟಾಸ್ಕ್ಫೋರ್ಸ್ ಕಮಿಟಿ ರಚಿಸಿದ್ದೀರೆಂದು ಪ್ರಶ್ನಿಸಿದರು. ಎಲ್ಲಾ ತಾಲ್ಲೂಕುಗಳಲ್ಲೂ, ಕೇತ್ರಗಳಲ್ಲೂ ಎಂಎಲ್ಎಗಳ ನೇತೃತ್ವದಲ್ಲಿ ಟಾಸ್ಕ್ಫೋರ್ಸ್ ಕಮಿಟಿಗಳಿವೆ. ಸ್ವತ: ನನ್ನ ತಾಲ್ಲೂಕಿನಲ್ಲಿ ನಾನೇ ಹಣ ಕೊಟ್ಟಿದ್ದೇನೆ. ಹಣ ಬಂದಿರುವುದನ್ನು ಎಲ್ಲೆಲ್ಲಿ, ಯಾವುದಕ್ಕೆ ಕೊಡಬೇಕೆಂದು ಮಂಜೂರು ಮಾಡಿದ್ದೇವೋ, ಅನೇಕ ಮಾನ್ಯ ಸದಸ್ಯರುಗಳು ಕೊಟ್ಟಿದ್ದಾರೆ.

**ಶ್ರೀ ಸಿದ್ದರಾಮಯ್ಯ:** ಯಾರಿಗೂ ಕೂಡ ಇವತ್ತಿನವರೆಗೂ ಬರದ ಬಗ್ಗೆ ಮೀಟಿಂಗ್ ಮಾಡಿರುವುದು ಸ್ವತ: ನನಗೇ ಗೊತ್ತಿಲ್ಲ. ಈ ಕುರಿತು ಸರ್ಕಾರದಿಂದ ಆದೇಶ ಬಂದು ನೀವೆಲ್ಲರೂ ಮೀಟಿಂಗ್ ಮಾಡಿ, ಇಷ್ಟು ದುಡ್ಡು ಬಂದಿದೆ, ನಾವು ಇಷ್ಟು ಹಣ ಬಿಡುಗಡೆ ಮಾಡಿದ್ದೇವೆಂದು ಹೇಳಿಲ್ಲ. ಆ ಸಮಿತಿಗೆ ಸಾಮಾನ್ಯವಾಗಿ ಎಂಎಲ್ಎಗಳು ಅಧ್ಯಕ್ಷರಾಗಿರುತ್ತಾರೆ, ತಹಸೀಲ್ದಾರ್ರವರು ಕಾರ್ಯದರ್ಶಿಗಳಾಗಿರುತ್ತಾರೆ, ಸಮಿತಿಗಳನ್ನು ರಚಿಸಿರುವ ಬಗ್ಗೆ ಹೊರಡಿಸಿರುವ ಆದೇಶ ನಮಗೆ ಒದಗಿಸಿಕೊಡಿ. ಅದರ ಬಗ್ಗೆ communication ಇಲ್ಲ. ನೀವು ಮಾಡಿದ್ದರೆ ಆರ್ಡರ್ ಕೊಡಿ.

**ಶ್ರೀ ಜಿ. ಕರುಣಾಕರರೆಡ್ಡಿ:** ಅದರ ಬಗ್ಗೆ ತಮಗೆ ಮಾಹಿತಿ ಇಲ್ಲವೆಂದರೆ, ಇವತ್ತೇ ಈ ಕುರಿತಂತೆ ಸೂಚನೆ ಕೊಡುತ್ತೇನೆ.

**ಶ್ರೀ ಅಪ್ಪಾಜಿ ಎಸ್. ನಾಡಗೌಡ :** ನಾನು ತಮ್ಮ ಸಹಾಯಕ್ಕೆ ಬರುತ್ತೇನೆ. ನಮ್ಮ ಕಲ್ಪನೆ ಏನಿದೆಯೆಂದರೆ, ಹಿಂದೆ ಮಾಡಿರುವ ಆದೇಶವೇನಿದೆ, ಅದು ಇನ್ನೂ ಜಾರಿಯಲ್ಲಿದೆ ಎನ್ನುವ ಕಲ್ಪನೆ ತಮಗಿದೆ, ಆದರೆ, ಸರ್ಕಾರಗಳು ಬದಲಾವಣೆಗಳಾದಾಗ ಹೊಸ ಆದೇಶ ಕಳುಹಿಸಿಕೊಡಬೇಕಾಗುತ್ತದೆ. ಆ ಆದೇಶವನ್ನು ತಾವು ಇದುವರೆಗೂ ಮಾಡಿಲ್ಲ. ಹೀಗಾಗಿ, ಆ ಸಮಿತಿಗಳು ಕಾರ್ಯ ನಿರ್ವಹಿಸುತ್ತಿಲ್ಲ. ಇವತ್ತಿನವರೆಗೂ ಆ ಕುರಿತಂತೆ ಮಾಹಿತಿ ಇಲ್ಲ. ದಯವಿಟ್ಟು ತಾವು ಮಾಹಿತಿ ತರಿಸಿ ನೋಡಬಹುದು.

**ಶ್ರೀ ಜಿ. ಕರುಣಾಕರರೆಡ್ಡಿ :** ಕಮಿಟಿಗಳೇನಿದ್ದವು ಮತ್ತು ಸಿಸ್ಟಮ್ ಏನಿತ್ತು, ಶಾಸಕರು ಅಧ್ಯಕ್ಷತೆಯಲ್ಲಿ ಅಧಿಕಾರಿಗಳು ಸದಸ್ಯರಾಗಿರುವ ಸಮಿತಿಯು ಹಾಗೇ ಮುಂದುವರಿಯುತ್ತಿದೆ.

**Sri Siddaramaiah:** I am telling the truth. ನೀವು ಹೊಸದಾಗಿ ಆದೇಶ ಹೊರಡಿಸದಿದ್ದರೆ, ತಹಸೀಲ್ದಾರ್ಗಳು ಎಲ್ಲಿಯೂ ಒಂದು ಮೀಟಿಂಗ್

ಸಹ ಕರೆಯುವುದಿಲ್ಲ. ಅವರುಗಳಿಗೆ ಡಿ.ಸಿ.ಗಳಿಂದ ಯಾವುದೇ ನಿರ್ದೇಶನವಿಲ್ಲ. How can they call the meeting?

**ಶ್ರೀ ಜಿ. ಕರುಣಾಕರರೆಡ್ಡಿ:** ನಮ್ಮ ತಾಲ್ಲೂಕಿನಲ್ಲಿ ನಾನೇ ಮೀಟಿಂಗ್ ಕರೆದು ನಿರ್ದೇಶನ ನೀಡಿದ್ದೇನೆ.

**ಶ್ರೀ ಸಿದ್ದರಾಮಯ್ಯ:** ನೀವು ಕಂದಾಯ ಮಂತ್ರಿಗಳಾಗಿದ್ದು, ಮೀಟಿಂಗ್ ಕರೆದಿರಬಹುದು. What about other MLAs. ಅವರುಗಳನ್ನು ಕೇಳಿ. ನನಗೆ ಗೊತ್ತಿಲ್ಲ. I am also a Senior Member. ಈ ಕುರಿತು ಯಾವುದೇ ಆದೇಶ ಆಗಿಲ್ಲ. ಸುಮ್ಮನೆ ಏನೋ ಹೇಳಲು ಹೋಗಬೇಡಿ. ಬರಗಾಲ ಬಂದ ಬಳಿಕ ಒಂದು ಆದೇಶ ಹೊರಡಿಸಿದ್ದರೆ, ಅದನ್ನು ಒದಗಿಸಿಕೊಡಿ.

**ಶ್ರೀ ಜಿ. ಕರುಣಾಕರರೆಡ್ಡಿ:** ಈ ರೀತಿ ಗೊಂದಲಗಳಾಗಿದ್ದರೆ, ಖಂಡಿತವಾಗಿಯೂ ಈ ಕುರಿತಂತೆ ಒಂದು ಆದೇಶ ಹೊರಡಿಸಲು ಕ್ರಮ ಕೈಗೊಳ್ಳುತ್ತೇನೆ.

**ಶ್ರೀ ಸಿದ್ದರಾಮಯ್ಯ:** ಬರ ಪರಿಹಾರ ಸಮಿತಿಗಳೆಂದು ರಚಿಸುತ್ತಾರೆ.

**ಶ್ರೀ ಜಿ. ಕರುಣಾಕರರೆಡ್ಡಿ:** ಮಾನ್ಯ ಅಧ್ಯಕ್ಷರೆ, ಈಗಾಗಲೇ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬಗ್ಗೆ ಮೂರು ದಿವಸಗಳ ಕಾಲ ಚರ್ಚೆಯಾಯಿತು. ಇದರ ಬಗ್ಗೆ ಸನ್ಮಾನ್ಯ ಮುಖ್ಯಮಂತ್ರಿಗಳು ಉತ್ತರಿಸುತ್ತಾ, ಕಾಮಗಾರಿಗಳಾಗಿರಬಹುದು, ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಸುಮಾರು 400 ಕೋಟಿ ರೂ. ಖರ್ಚು ಮಾಡಿ ಇನ್ನು 2,000 ಕೋಟಿ ರೂ. ಖರ್ಚು ಮಾಡುವುದಕ್ಕೆ ನಾವು ಗುರಿ ಇಟ್ಟುಕೊಂಡು, ಪ್ರತಿಯೊಂದು ವಿಧಾನಸಭಾ ಕ್ಷೇತ್ರದಲ್ಲಿ ಕೆರೆಗಳ ಅಭಿವೃದ್ಧಿಗೆ ಒತ್ತು ನೀಡುವುದಾಗಿರುಬಹುದು, ಇವತ್ತು 50 ಕಿಲೋಮೀಟರ್ ರಸ್ತೆಯನ್ನು ಪ್ರತಿ ವಿಧಾನಸಭಾ ಕ್ಷೇತ್ರದಲ್ಲೂ ನಿರ್ಮಿಸುವ ಮೂಲಕ ಇದರಿಂದಲೂ ಸಾಕಷ್ಟು ಉದ್ಯೋಗ ಸೃಷ್ಟಿಯಾಗುತ್ತದೆ.

ಅದೇ ರೀತಿ ಇವತ್ತು ಸ್ತ್ರೀಶಕ್ತಿ ಗುಂಪುಗಳು ತಯಾರಿಸಿದ ವಸ್ತುಗಳನ್ನು ಸರ್ಕಾರವೇ ಖರೀದಿಸುವ ವಿಚಾರ ಇರಬಹುದು. ಮುಖ್ಯವಾಗಿ, ರೈತರ ಕಿಸಾನ್ ಕ್ರೆಡಿಟ್ ಕಾರ್ಡ್. ಆ ಕಿಸಾನ್ ಕಾರ್ಡ್ ಇದ್ದರೆ ಯಾವುದೇ ಬ್ಯಾಂಕಿನಲ್ಲಿ ತಕ್ಷಣ 25 ಸಾವಿರ ರೂಪಾಯಿಯವರೆಗೆ ಸಾಲ ತೆಗೆದುಕೊಳ್ಳುವ ಅವಕಾಶ ಸಿಗುತ್ತದೆಂದು ಅದನ್ನು ಒಂದು ಆಂದೋಲನದ ರೀತಿಯಾಗಿ ತೆಗೆದುಕೊಂಡು ಪ್ರತಿಯೊಬ್ಬ ರೈತರಿಗೆ ಕಿಸಾನ್ ಕ್ರೆಡಿಟ್ ಕಾರ್ಡ್‌ನ್ನು ಒದಗಿಸುವ ವಿಚಾರವನ್ನು ಮಾನ್ಯ ಮುಖ್ಯಮಂತ್ರಿಯವರು ಘೋಷಣೆ

ಮಾಡಿದ್ದಾರೆ. ಅದೇ ರೀತಿ, ಬೆಳೆ ವಿಮೆಯಲ್ಲಿಯೂ ಸಹ, ಸಣ್ಣ ಮತ್ತು ಅತೀ ಸಣ್ಣ ರೈತರಿಗೆ 50 ಪರ್ಸೆಂಟ್ ಹಣವನ್ನು ಸರ್ಕಾರ ಭರಿಸುತ್ತದೆಂದು ಹೇಳಿದ್ದಾರೆ. ಮಾನ್ಯ ಜಯಚಂದ್ರರವರು ಮಾತನಾಡುತ್ತಾ, ಸಬ್ ಕಮಿಟಿಯಲ್ಲಿ ನಿರಂತರವಾಗಿ ಯಾವ ರೀತಿಯಾಗಿ ಬರಗಾಲವನ್ನು ಶಾಶ್ವತವಾಗಿ ನಿಬಾಯಿಸಲು ಯೋಜನೆ ರೂಪಿಸಿದ್ದೀರಿ ಎಂದು ಕೇಳಿದರು. ನೀರಿನ ಸಂಗ್ರಹ, ಮಳೆ ನೀರು ನದಿಗಳಿಗೆ ಹೆಚ್ಚಾಗಿ ಹೋಗುತ್ತದೆ, ಅದನ್ನು ಸಂಗ್ರಹ ಮಾಡಬೇಕೆಂದು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ಅದರ ಬಗ್ಗೆ ಕ್ರಮ ಕೈಗೊಳ್ಳುತ್ತೇವೆ. ಅದಲ್ಲದೆ, ಬರಗಾಲದ ಬಗ್ಗೆ ಕೇಂದ್ರ ಸರ್ಕಾರಕ್ಕೇನು ಮೆಮೊರ್ಯಾಂಡಂನ್ನು ಕೊಟ್ಟಿದ್ದೇವೆ, ನೆರೆ ಮತ್ತು ಬರಗಾಲದ ಬಗ್ಗೆ ಅಧ್ಯಯನ ಮಾಡುವ ಸಲುವಾಗಿ ಕೇಂದ್ರದಿಂದ ತಂಡ ಬಂದು ಈಗಾಗಲೇ ಪರಿಶೀಲನೆ ಮಾಡಿಕೊಂಡು ಹೋಗಿದ್ದಾರೆ. ನಾವು ಅವರಿಗೆ ಕೊಟ್ಟಿರುವ ಮೆಮೊರ್ಯಾಡಂ ವಾಸ್ತವಿಕವಾಗಿದೆ. ಮಾನ್ಯ ಸಿದ್ದರಾಮಯ್ಯನವರು ಆ ಗೈಡ್‌ಲೈನ್ಸ್ ಓಬಿರಾಯನ ಕಾಲದ್ದಾಗಿದೆ ಎಂದು ಹೇಳಿದ್ದಾರೆ.

**ಶ್ರೀ ಸಿದ್ದರಾಮಯ್ಯ:** ಪರಿಹಾರ ಕೊಡತಕ್ಕದ್ದು ಎಂದು ನಾನು ಹೇಳಿದ್ದು.

**ಶ್ರೀ ಜಿ. ಕರುಣಾಕರರೆಡ್ಡಿ:** ಕೇಂದ್ರ ಸರ್ಕಾರ ಕೊಟ್ಟಿರುವ ಆ ಗೈಡ್‌ಲೈನ್ಸ್ ಪ್ರಕಾರವೇ ನಾವು ಮೆಮೊರ್ಯಾಡಂ ಕೊಡಬೇಕಾಗುತ್ತದೆ. ವಾಸ್ತವಿಕವಾಗಿ ಹೆಚ್ಚು ನಷ್ಟವಾಗಿದ್ದರೂ ಅವರ ಗೈಡ್‌ಲೈನ್ಸ್ ಪ್ರಕಾರ ನಮಗೆ ಎಷ್ಟು ಬೇಕಾಗುತ್ತದೆ ಅಷ್ಟನ್ನು ಕೊಡಬೇಕಾಗುತ್ತದೆಂದು ನಾವು ಮನವಿ ಪತ್ರವನ್ನು ಕೊಟ್ಟಿದ್ದೇವೆ. ಆದಷ್ಟುಬೇಗ ಕೇಂದ್ರ ಸರ್ಕಾರದವರು ಸ್ಪಂದಿಸುತ್ತಾರೆಂದು ಭಾವಿಸುತ್ತೇವೆ. ಇವತ್ತು ಉದ್ಯೋಗ ಖಾತ್ರಿ ಯೋಜನೆಯಲ್ಲಿ 428 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಗ್ರಾಮೀಣ ಕುಡಿಯುವ ನೀರಿನ ಯೋಜನೆಯ ಸಲುವಾಗಿ ಈ ವರ್ಷ 385 ಕೋಟಿ ಈ ರಾಜ್ಯದಲ್ಲಿ ಆದ್ಯತೆಯ ಮೇರೆಗೆ ಬಿಡುಗಡೆ ಮಾಡಿದ್ದೇವೆ. ಹಿಂದೆ ನಾವು ಏನು ಮಾಡಿದ್ದೇವೆ ಎಂಬ ಬಗ್ಗೆ ಹೇಳಬೇಡಿ, ಮುಂದೆ ಏನು ಮಾಡುತ್ತೀರಿ ಅದನ್ನು ಹೇಳಿ ಎಂದು ಹೇಳಿದ್ದಾರೆ. ಖಂಡಿತಾ ಆ ಸಲಹೆಯನ್ನು ನಾವು ತೆಗೆದುಕೊಳ್ಳುತ್ತೇವೆ. ಏಕೆಂದರೆ ಈ ಹಿಂದೆ ನೀವು ಮಾಡಿಲ್ಲ. ನಾವು ಅದೇ ರೀತಿ ಎಂದು ಹೇಳುವುದಿಲ್ಲ. ನಮ್ಮ ಸರ್ಕಾರ ಬಂದು 1 ವರ್ಷ 3 ತಿಂಗಳುಗಳಾಗಿದೆ. ತಾವು ನೋಡಬೇಕಾಗುತ್ತದೆ. ಸಾಕಷ್ಟು

ವರ್ಷಗಳ ಕಾಲ ಎರಡೂ ಪಕ್ಷದವರು ಅಧಿಕಾರ ನಡೆಸಿದ್ದೀರಿ. ಆದರೂ ತಾವು ಆ ಕೆಲಸವನ್ನು ಮಾಡುವುದಕ್ಕಾಗಿಲ್ಲವೆಂದು ಟೀಕೆ ಮಾಡುವುದಿಲ್ಲ. ಅದು ವಾಸ್ತವ ಸ್ಥಿತಿ ಎಲ್ಲರಿಗೂ ಗೊತ್ತಿದೆ. ಹಾಗೆಂದು ಮುಂದೆ ನಾವು ಸುಮ್ಮನೆ ಕೂರತಕ್ಕದ್ದಲ್ಲ. ಇದಕ್ಕೆ ಒಂದು ಶಾಶ್ವತ ಪರಿಹಾರವನ್ನು ಕೈಗೊಳ್ಳಬೇಕು ಎಂಬುದು ಎಲ್ಲಾ ಸದಸ್ಯರುಗಳ ಕಾಳಜಿಯಾಗಿದೆ. ಈ ದೇಶದ ಬೆನ್ನೆಲುಬು ರೈತ ಎಂದು ನಾವೇನು ಹೇಳಿಕೊಳ್ಳುತ್ತೇವೆ ಆ ರೈತನನ್ನು ಉಳಿಸುವ ಪ್ರಯತ್ನವನ್ನು ನಾವೆಲ್ಲಾ ಮಾಡಬೇಕಾಗಿದೆ. ಇವತ್ತು ಏನು ಕೃಷಿ ಮತ್ತು ಗ್ರಾಮೀಣಾಭಿವೃದ್ಧಿಯ ಬಗ್ಗೆ ಚರ್ಚೆಯಾಯಿತು ಅದರ ಬಗ್ಗೆ ಇನ್ನೂ ಅನೇಕ ಜನ ಸದಸ್ಯರುಗಳು ಮಾತನಾಡಬೇಕಾಗಿತ್ತು. ಆಗ ಇನ್ನೂ ಒಳ್ಳೆಯ ಸಲಹೆಗಳು ಬರುತ್ತಿದ್ದವೋ ಏನೋ ಗೊತ್ತಿಲ್ಲ. ಇವತ್ತು ಸಣ್ಣ ನೀರಾವರಿ, ಭಾರಿ ನೀರಾವರಿ ಇಲಾಖೆಗಳು ಮುಖ್ಯವಾಗಿ ನೀರಿನ ಕೆಲಸವನ್ನು ನೋಡಿಕೊಳ್ಳುವ ಇಲಾಖೆಗಳ ಜೊತೆ ಸಹ ನಾವು ಸಬ್ ಕಮಿಟಿ ಮಾಡಿದ್ದೇವೆ. ಒಂದೊಂದು ಸಬ್ ಕಮಿಟಿಯಲ್ಲಿ ಒಂದೊಂದು ಇಲಾಖೆಗಳವರನ್ನು ಕರೆದು ಚರ್ಚೆ ಮಾಡಿದ್ದೇವೆ. ಅವರು ಕೊಟ್ಟ ಸಲಹೆಯ ಪ್ರಕಾರ ನದಿ ನೀರನ್ನು ಕೆರೆಗಳಿಗೆ ತುಂಬಿಸುವ ಕೆಲಸವನ್ನು ಒಂದೊಂದು ವರ್ಷದಲ್ಲಿ ಎಷ್ಟು ಮಾಡಬಹುದು ಎಂಬ ಬಗ್ಗೆ ಒಂದು ಯೋಜನೆಯನ್ನು ತಯಾರು ಮಾಡಿ, ಅದೇ ರೀತಿ ಸಣ್ಣ ನೀರಾವರಿ ಇಲಾಖೆಯಲ್ಲೂ ಏನು ಮಾಡಬಹುದು ಎಂಬ ಬಗ್ಗೆ ಯೋಜನೆ ಮಾಡುತ್ತೇವೆ. ಮಾನ್ಯ ಸಿದ್ದರಾಮಯ್ಯನವರು ಇವತ್ತು ಸುಮಾರು 40 ಪರ್ಸೆಂಟ್ ಕೆರೆಗಳಿಗೆ ನೀರು ತುಂಬಿಲ್ಲ, ಬಾಕಿ ಕೆರೆಗಳಿಗೆ ನೀರೇ ಬಂದಿಲ್ಲವೆಂದು ಹೇಳಿದರು. ಅದೇ ರೀತಿ ನೆರೆಯಿಂದ 400 ಕೆರೆಗಳು ಒಡೆದುಹೋಗಿದೆಯೆಂದು ಹೇಳಿದರು. ಇವತ್ತು ಆ ಕೆರೆಕಟ್ಟೆಗಳೇನು ಒಡೆದುಹೋಗಿದೆ ಅದಕ್ಕೆ ಆದ್ಯತೆಯನ್ನು ಕೊಟ್ಟು ಉದ್ಯೋಗ ಖಾತ್ರಿ ಯೋಜನೆಯಲ್ಲಿ ಇರಬಹುದು, ಅಥವಾ ಬೇರೆ ಯಾವುದೇ ಯೋಜನೆ ಇರಬಹುದು ಅದನ್ನು ಸರಿಮಾಡುತ್ತೇವೆ. ಅನಂತರ catchment ಏರಿಯಾವನ್ನು ಒತ್ತುವರಿ ಮಾಡಿದ್ದಾರೆಂದು ತಾವು ಹೇಳಿದಿರಿ. ನಾನು ಸಚಿವನಾದ ತಕ್ಷಣ ಜಿಲ್ಲಾಧಿಕಾರಿಗಳ ಸಭೆಯಲ್ಲಿ ಈ ಕೆರೆಕಟ್ಟೆಗಳ ಒತ್ತುವರಿಯ ಬಗ್ಗೆ ತೀವ್ರವಾಗಿ ಕ್ರಮ ಕೈಗೊಂಡು ಅದನ್ನು ತೆರವು ಮಾಡಿಸಬೇಕೆಂದು ಹೇಳಿದ್ದೇನೆ. ಆ ಕೆಲಸವನ್ನು ನಾವು ಮಾಡಿಸಬೇಕಾಗುತ್ತದೆ. ಹಿಂದಿನ ರಾಜಮಹಾರಾಜರೆಲ್ಲಾ ಆವತ್ತೂ ಜನಸಂಖ್ಯೆಗೆ ಅನುಗುಣವಾಗಿ

ಕೆರೆಗಳನ್ನು ನಿರ್ಮಾಣ ಮಾಡಿ ನೀರು ಸಂಗ್ರಹಣೆ ಮಾಡುತ್ತಿದ್ದರು. ಇವತ್ತು ನಾವು ಒಂದು ಡ್ಯಾಂ ಕಟ್ಟಿದರೆ ನಮ್ಮ ಮೇಲಿರುವ ರಾಜ್ಯದವರು ಇನ್ನೊಂದು ಡ್ಯಾಂ ಕಟ್ಟುತ್ತಾರೆ. ಇವತ್ತು ಕೆರೆಗಳಿಗೆ ಬರುವ ನೀರಿಗೆ ಮೇಲುಗಡೆ ಒಂದು ಚಕ್‌ಡ್ಯಾಂ ಕಟ್ಟುತ್ತಾರೆ. ಆ ಚಕ್‌ಡ್ಯಾಂ ಮೇಲೆ ಇನ್ನೊಂದು ಚಕ್‌ಡ್ಯಾಂ. ಆ ರೀತಿ catchment ನಲ್ಲಿ ಏನು ನೀರು ಬರುತ್ತಿತ್ತು ಅದಕ್ಕೂ ಸ್ವಲ್ಪ ತೊಂದರೆ ಇದೆ. ಆದ್ದರಿಂದ ಯಾವ ರೀತಿಯಲ್ಲೇ ಆಗಲಿ, ನಾವು ಚಕ್‌ಡ್ಯಾಂ ಕಟ್ಟಬೇಕಾದರೆ ಯಾವ hight ನಲ್ಲಿ ಕಟ್ಟಬೇಕು, ಎಷ್ಟರಲ್ಲಿ ಮಾಡಬೇಕು, ಆ ಕೆರೆ ಮೊದಲು ಆ catchment ಏರಿಯವನ್ನೇ ನಂಬಿಕೊಂಡು ಇತ್ತೋ, ಆ ಕೆರೆಗೆ ನೀರು ಸಂಗ್ರಹಣೆ ಆಗುವ ರೀತಿಯಲ್ಲಿ ಇವತ್ತು ಚಕ್‌ಡ್ಯಾಂನ್ನು ನಿರ್ಮಾಣ ಮಾಡಬೇಕಾಗುತ್ತದೆ. ಅದರ ಬಗ್ಗೆ ಆ ಕಮಿಟಿಯಲ್ಲಿ ಚರ್ಚೆ ಮಾಡಿದ್ದೇವೆ. ಒಟ್ಟಿನಲ್ಲಿ ರೈತರ ಸಂಕಷ್ಟವನ್ನು ಕಡಿಮೆ ಮಾಡುವುದಕ್ಕೆ, ಅವರನ್ನು ಉದ್ಧಾರ ಮಾಡುವುದಕ್ಕೆ, ನೀರಿನ ಸಂಗ್ರಹಣೆ ಹೆಚ್ಚು ಮಾಡುವುದಕ್ಕೆ ಎಲ್ಲಾ ರೀತಿಯಲ್ಲಿ ಚರ್ಚೆ ಮಾಡಿ ಯಾವ ರೀತಿಯಲ್ಲಿ resultನ್ನು ತೆಗೆದುಕೊಂಡು, ಎಲ್ಲೆಲ್ಲೆ ಜಾರಿ ಮಾಡಬಹುದು, ಕನಿಷ್ಟ ಪೈಲೆಟ್ ಪ್ರಾಜೆಕ್ಟ್ ಆಗಿ ಎಲ್ಲೆಲ್ಲಿ ಜಾರಿ ಮಾಡಬಹುದು ಎಂಬುದನ್ನು ನೋಡುತ್ತೇವೆ. ಮುಖ್ಯವಾಗಿ ನಿಮ್ಮ ಜಿಲ್ಲೆಯಲ್ಲಿ ಮತ್ತು ಬಿಜಾಪುರದಲ್ಲಿ ಬಹಳಷ್ಟು ನದಿಗಳು ಹೋಗುತ್ತಿದೆ. ಅಲ್ಲಿ ಮೊದಲು ಮಾಡಿ ಅನಂತರ ಉಳಿದಂಥ ಜಿಲ್ಲೆಗಳಲ್ಲಿ ಕೂಡ ಯಾವ ರೀತಿ ಶಾಶ್ವತ ಪರಿಹಾರಕ್ಕೆ ಮಾಡಬಹುದು ಎನ್ನುವುದನ್ನು ಯೋಚನೆ ಮಾಡುತ್ತೇವೆ. ಅದೇ ರೀತಿಯಲ್ಲಿ, ಇವತ್ತು ಮಳೆ, ನೆರೆ ಬಂತು ಅನಂತರ ಬರ ಬಂತು. ಆ ಬರದಲ್ಲಿ ಏನು 10–12 ಲಕ್ಷ ಎಕರೆ ಬೆಳೆ ನಷ್ಟವಾಗಿತ್ತು ಅನಂತರ ಮತ್ತೆ ಉತ್ತಮವಾದ ಮಳೆ ಬಂದ ಮೇಲೆ ಸುಮಾರು 13 ಲಕ್ಷ ಎಕರೆಯಲ್ಲಿ ಮತ್ತೆ ಬಿತ್ತನೆಯನ್ನು ಮಾಡಿದ್ದಾರೆ. ಆದ್ದರಿಂದ ಮತ್ತೆ ಮಳೆ ಬಂದಿದ್ದಕ್ಕೆ ಒಳ್ಳೆಯ ಬೆಳೆ ಬರುತ್ತದೆ. ಸತತವಾಗಿ ಆಗುತ್ತಿರುವ ಮಳೆಯನ್ನು ನೋಡಿದರೆ ಒಳ್ಳೆಯ ಫಲ ಸಿಗಲಿ ಎಂದು ನಾವೂ ಕೂಡ ಭಾವಿಸೋಣ. ಬೀಜಗಳ ಬಗ್ಗೆ ಗೊಬ್ಬರದ ಬಗ್ಗೆ ಎಚ್ಚರ ವಹಿಸಬೇಕೆಂದು ಹೇಳಿದ್ದಾರೆ. ಬೀಜಗಳ ಬಗ್ಗೆ ಯಾವುದೇ ಕೊರತೆ ಇಲ್ಲ. ಗೊಬ್ಬರದ ಸರಬರಾಜಿನಲ್ಲೂ ಎಲ್ಲಾ ರೀತಿಯಲ್ಲಿ ಕ್ರಮ ತೆಗೆದುಕೊಂಡಿದ್ದೇವೆ. ಕೆಲವು ಮಂದಿ ಸದಸ್ಯರುಗಳು ಕೃಷಿ ವಿಶ್ವವಿದ್ಯಾನಿಲಯಗಳು ಶಾಶ್ವತವಾಗಿ, ತುಮಕೂರಿನಲ್ಲಿ ನೀರಿನ ಸಮಸ್ಯೆ ಬಹಳಷ್ಟು ಇದೆ, ಅಲ್ಲಿ ಕೃಷಿ

ವಿಶ್ವವಿದ್ಯಾನಿಲಯದವರು ಬಂದು ಕಡಿಮೆ ನೀರಿನಲ್ಲಿ ಯಾವ ರೀತಿಯಾಗಿ ತೋಟಗಾರಿಕೆ ಮಾಡಬಹುದು ಎಂಬ ಬಗ್ಗೆ ಒಂದು ರಿಟಚಿಟಿ ಮಾಡಬೇಕೆಂದು ಹೇಳಿದ್ದಾರೆ. ಒಳ್ಳೆಯ ಸಲಹೆಗಳಿದೆ. ಯಾರೇ ಸದಸ್ಯರುಗಳಾಗಲಿ ಇಂಥ ಒಳ್ಳೆಯ, ಉತ್ತಮವಾದ ಸಲಹೆಗಳನ್ನು ಕೊಟ್ಟಿದ್ದಾರೆ, ಅದರ ಬಗ್ಗೆ ಕೃಷಿ ವಿಶ್ವವಿದ್ಯಾನಿಲಯದ ಅಧಿಕಾರಿಗಳನ್ನು ಕರೆದು ಯಾವ ಯಾವ ಜಿಲ್ಲೆಯ ವಸ್ತುಸ್ಥಿತಿ ಯಾವ್ಯಾವ ರೀತಿ ಇದೆ, ನೀರಿನ ಸಂಗ್ರಹಣೆ ಎಷ್ಟಿದೆ, ನೀರಿನ ಕೊರತೆ ಎಷ್ಟಿದೆ, ಅಲ್ಲಿ ತೋಟಗಾರಿಕೆ ಬೆಳೆ ಮಾಡಬೇಕೋ, ಯಾವ ರೀತಿ ಬೆಳೆ ಮಾಡಬೇಕು, ಬೇರೆ ಯಾವ ಬೆಳೆ ಮಾಡಿದರೆ ಅಲ್ಲಿನ ರೈತರಿಗೆ ಅನುಕೂಲವಾಗುತ್ತದೆ ಎಂಬ ಬಗ್ಗೆ ಚರ್ಚೆ ಮಾಡಿ ಅದರ ಬಗ್ಗೆ ಸರ್ಕಾರ ನಿರ್ಣಯ ತೆಗೆದುಕೊಂಡು ಅದನ್ನು ಜಾರಿಗೊಳಿಸಲು ಕ್ರಮ ಕೈಗೊಳ್ಳುತ್ತದೆ. ಕೃಷಿ ಅಧಿಕಾರಿಗಳು ಬಹಳಷ್ಟು ಮಂದಿ ಹಳ್ಳಿಗಳಿಗೆ ಬರುತ್ತಿಲ್ಲವೆಂದು ಹೇಳಿದ್ದಾರೆ. ಅದನ್ನೂ ಮಾಧ್ಯಮಗಳ ಮೂಲಕ ಮತ್ತು ಇತರೆ ಮೂಲಗಳ ಮೂಲಕ ಪ್ರಚಾರ ಕೊಡುತ್ತಿದ್ದೇವೆ. ಪ್ರತಿಯೊಂದು ಸರ್ಕಾರದಲ್ಲಿಯೂ, ಅದು ಯಾವುದೇ ಸರ್ಕಾರವಿರಲಿ, ಅಧಿಕಾರಿಗಳು ಆಯಾಯ ಸಂದರ್ಭದಲ್ಲಿ ಏನು ಮಾಡಬೇಕು, ಹೇಗೆ ಮಾಡಿದರೆ ಅನುಕೂಲವಾಗುತ್ತದೆ, ಯಾವ ರೀತಿ ಔಷಧಿ ಉಪಯೋಗಿಸಬೇಕೆಂದು ಸಲಹೆಗಳನ್ನು ಕೊಡುತ್ತಿರುತ್ತಾರೆ. ಆಗ ಪ್ರಾಕ್ಟಿಕಲ್ ಆಗಿ ಹಳ್ಳಿಗಳಿಗೆ ಆಯಾಯ ತಾಲ್ಲೂಕಿನ ಕೃಷಿ ಅಧಿಕಾರಿಗಳು ಭೇಟಿ ಕೊಟ್ಟು ಅಲ್ಲಿನ ವಸ್ತುಸ್ಥಿತಿಯ ಬಗ್ಗೆ ತಿಳಿದುಕೊಂಡು ಆ ಸಂದರ್ಭಕ್ಕೆ ತಕ್ಕಂತೆ ಒಳ್ಳೆಯ ಸಲಹೆಗಳನ್ನು ಕೊಟ್ಟರೆ ಅನುಕೂಲವಾಗುತ್ತದೆ. ಅದರ ಬಗ್ಗೆ ಸಹ ಕ್ರಮ ಜರುಗಿಸುತ್ತೇವೆ. ಟೆಲಿಮೆಟ್ರಿಕ್ ಮಳೆಮಾಪನಾ ಕೇಂದ್ರಗಳು. 300 Sq.k.m.ಗೆ ಒಂದೊಂದು ಕೇಂದ್ರಗಳಿದೆಯೆಂದು ತಾವು ಹೇಳಿದ್ದೀರಿ. ಆದರೆ ನಮ್ಮ ರಾಜ್ಯದಲ್ಲಿ ಒಟ್ಟಾರೆ 606 ಟೆಲಿಮೆಟ್ರಿಕ್ ಕೇಂದ್ರಗಳಿವೆ. ನಮ್ಮಲ್ಲಿ 747 ಹೋಬಳಿಗಳಿದ್ದರೆ ಅದರಲ್ಲಿ ಸುಮಾರು 606 ಟೆಲಿಮೆಟ್ರಿಕ್ ಮಳೆಮಾಪನಾ ಕ್ಷೇಂದ್ರಗಳು ಇದ್ದಾವೆ. ಉಳಿದ ಕಡೆ ಸಹ, ಮಾನ್ಯ ಮುಖ್ಯಮಂತ್ರಿಗಳು ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬಗ್ಗೆ ಉತ್ತರವನ್ನು ಕೊಡುವಾಗ ಪ್ರತೀ ಗ್ರಾಮ ಪಂಚಾಯಿತಿಯಲ್ಲೂ ಇದನ್ನು ಮಾಡುತ್ತೇವೆಂದು ಹೇಳಿದ್ದಾರೆ.

**4.00 PM**

ಆ ಬಗ್ಗೆ written reply ಇದೆ. ಅದರ ಬಗ್ಗೆ ನಾವು ಈಗಾಗಲೇ ನಿರ್ಣಯ ತೆಗೆದುಕೊಂಡಿದ್ದೇವೆ, ತೆಗೆದುಕೊಳ್ಳುತ್ತಿದ್ದೇವೆ. 5600 ಗ್ರಾಮ ಪಂಚಾಯಿತಿಗಳೇನಿವೆ, ಆ ಪ್ರತಿಯೊಂದು ಗ್ರಾಮ ಪಂಚಾಯಿತಿಗಳಲ್ಲಿ tele metric centers ಮಾಡಬೇಕೆಂಬುದು ನಮ್ಮ ಸರ್ಕಾರದ ತೀರ್ಮಾನವಾಗಿದೆ. ಅದು ಎಷ್ಟೇ ಕಷ್ಟ ಬರಲಿ, ಅದನ್ನು ಅಳವಡಿಸುತ್ತೇವೆ. ಅದಕ್ಕಾಗಿ programme ಅನ್ನು ಹಾಕಿಕೊಳ್ಳುತ್ತೇವೆ. ಆ ಬಗ್ಗೆ ಅವರ ಹತ್ತಿರ ಎಲ್ಲವನ್ನೂ ಮಾತನಾಡುತ್ತೇವೆ. ಒಂದು ವರ್ಷದಲ್ಲೇ ಎಲ್ಲವನ್ನೂ ಅಳವಡಿಸಬಹುದು ಎನ್ನುವುದಾದರೆ, ಒಂದು ವರ್ಷದಲ್ಲೇ ಎಲ್ಲವನ್ನೂ ಮಾಡೋಣ. ಆರು ತಿಂಗಳಿನಲ್ಲೇ ಮಾಡಬಹುದು, ನಮಗೆ ಕೊಟ್ಟರೆ ಮಾಡುತ್ತೇವೆ, ಎಲ್ಲಾ ಹಳ್ಳಿಗಳಲ್ಲಿ ಹೋಗಿ ಗ್ರಾಮ ಪಂಚಾಯಿತಿಗಳಲ್ಲಿ ಅದನ್ನು ಅಳಡಿಸುತ್ತೇವೆ ಎನ್ನುವುದಾದರೆ, ಆರು ತಿಂಗಳಿನಲ್ಲೇ ಮಾಡುತ್ತೇವೆ. ಒಟ್ಟಾರೆಯಾಗಿ ಹೇಳುವುದಾದರೆ, ಮುಂದಿನ ದಿನಗಳಲ್ಲಿ ಈ ಮಳೆ ಮಾಪನ ಆಧಾರ ಮಾಡಿಕೊಂಡು ಯಾರು crop insurance ಮಾಡಿಸುತ್ತಾರೋ, ಅವರಿಗೆಲ್ಲಾ ಇದರಿಂದ ಅನುಕೂಲವಾಗುತ್ತದೆ. ಆಮೇಲೆ ಇನ್ನೊಂದು ವಿಚಾರ, ಅದನ್ನು ಮಾನ್ಯ ಸದಸ್ಯರು ಪ್ರಸ್ತಾಪ ಮಾಡದೇ ಇರಬಹುದು. ಈಗ ಹೋಬಳಿ ಮಟ್ಟದಲ್ಲಿ ಏನೊಂದು ನಷ್ಟವನ್ನು assessment ಮಾಡುತ್ತಾರೋ, ಅದನ್ನು ಗ್ರಾಮ ಪಂಚಾಯಿತಿ ಮಟ್ಟಕ್ಕೆ ತರಬೇಕೆಂದೂ ಕೂಡ ನಮ್ಮ ಸರ್ಕಾರದ ಚಿಂತನೆ ಇದೆ. ಈಗಾಗಲೇ ಅಧಿಕಾರಿಗಳಿಗೆ ಕೂಡ ಆ ಬಗ್ಗೆ ಸೂಚನೆ ನೀಡಲಾಗಿದೆ. ಗ್ರಾಮ ಪಂಚಾಯಿತಿ ಮಟ್ಟಕ್ಕೆ ನಾವು ತೆಗೆದುಕೊಂಡು ಬಂದರೆ, ಹೆಚ್ಚಿನ ರೈತರಿಗೆ ಅನುಕೂಲವಾಗುತ್ತದೆ. ಹೋಬಳಿ ಎಂದರೆ ಅದರಲ್ಲಿ 20–30 ಹಳ್ಳಿಗಳಿರುತ್ತವೆ. ಅದರಲ್ಲಿ majority ನೋಡುತ್ತಾರೆ. ಅಂದರೆ ಆ ಹೋಬಳಿಯಲ್ಲಿ 20 ಹಳ್ಳಿಗಳಿದ್ದರೆ, 11 ಹಳ್ಳಿಗಳಲ್ಲಿ ನಿಮಗೆ ತೊಂದರೆಯಾಗಿದ್ದರೆ ಮಾತ್ರ declare ಮಾಡುತ್ತಾರೆ. ಆ ರೀತಿ ಮಾಡಿದಾರ ಇನ್ನುಳಿದ 9 ಹಳ್ಳಿಗಳವರಿಗೆ ತೊಂದರೆಯಾಗುತ್ತದೆ. ಗ್ರಾಮ ಪಂಚಾಯಿತಿ ಮಟ್ಟಕ್ಕೆ ಬಂದಾಗ ಅದು ಕಡಿಮೆ ಆಗುತ್ತದೆ. ಈಗಾಗಲೇ ನಮ್ಮ ರಾಜ್ಯದಲ್ಲಿ 1150 ಸಾಮಾನ್ಯ ಮಳೆ ಮಾಪನ ಕೇಂದ್ರಗಳೂ ಕೂಡ ಇವೆ. ಆದರೆ ಈ tele metric centre ಸ್ವಲ್ಪ ಉತ್ತಮವಾದುದು. ಆದ್ದರಿಂದ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ tele metric ಮಳೆ ಮಾಪನ ಕೇಂದ್ರಗಳನ್ನು ಸ್ಥಾಪನೆ

ಮಾಡಲಿಕ್ಕೆ ಎಲ್ಲಾ ರೀತಿಯಲ್ಲೂ ಕ್ರಮ ಜರುಗಿಸುತ್ತೇವೆ. ಇನ್ನು 141 ಹೋಬಳಿಗಳಲ್ಲಿ ಇದನ್ನು ಮಾಡಿ ಬಿಟ್ಟರೆ, ಎಲ್ಲಾ ಹೋಬಳಿ ಕೇಂದ್ರಗಳಲ್ಲಿ ಆ tele metric centers ಮಾಡಿದಂತಾಗುತ್ತದೆ. ಒಂದು ವೇಳೆ priorityಯಲ್ಲಿ ಒಂದೆರಡು ತಿಂಗಳಿನಲ್ಲಿ ಆಗುವುದಾದರೆ, ಈ 141 ಹೋಬಳಿಗಳಲ್ಲಿ ಮೊದಲು ಅಳವಡಿಸುತ್ತೇವೆ. ಇದಾದ ಮೇಲೆ ಈ 5600 ರಲ್ಲಿ balance 700 ಹೋದರೆ, ಇನ್ನುಳಿದ 4900 ಇರುತ್ತದೆ. ಆ ಪ್ರತಿಯೊಂದು ಗ್ರಾಮ ಪಂಚಾಯಿತಿಯಲ್ಲಿ ಅಳವಡಿಸಲಿಕ್ಕೆ ಎಲ್ಲಾ ರೀತಿಯಲ್ಲಿ ಕ್ರಮ ಜರುಗಿಸುತ್ತೇವೆ. ಅದಾದ ಮೇಲೆ ಇವತ್ತು. . . .

**ಶ್ರೀ ಟಿ.ಬಿ. ಜಯಚಂದ್ರ:–** 86 ತಾಲ್ಲೂಕುಗಳನ್ನು ಬರ ಎಂದು ನೀವು declare ಮಾಡಿದ್ದೀರಿ. ಆದರೆ Deputy Commissioners ಗೆ ಏನು message ಹೋಗಿದೆ ಎಂದರೆ, ಒಂದೊಂದು ತಾಲ್ಲೂಕಿನಲ್ಲಿ ಎರಡೆರಡು ಹೋಬಳಿಗಳನ್ನು ಮಾತ್ರ ಬರ ಎಂದು declare ಮಾಡಬೇಕು, ಅದನ್ನು ಬಿಟ್ಟರೆ ಅದೇ ತಾಲ್ಲೂಕಿನಲ್ಲಿ ಬೇರೆಯದಕ್ಕೆ ಅದು apply ಆಗುವುದಿಲ್ಲ ಎಂಬ message ಹೋಗಿದೆ. ಮೊದಲು ತಾಲ್ಲೂಕನ್ನು ಬರ ಎಂದು declare ಮಾಡತಕ್ಕದ್ದು ಮಾಡುತ್ತಿದ್ದರು. ಈಗ ಹೋಬಳಿವಾರು ಎಂದು ಹೊಸ ಸಂಪ್ರದಾಯ ಆಗಿ ಬಿಟ್ಟಿದೆ. ನಮ್ಮಲ್ಲಿ ನಮ್ಮ ಹೋಬಳಿ ಆಗಿದೆ, ನಮ್ಮ ಹೋಬಳಿ ಆಗಿಲ್ಲ ಎಂದು ದೊಡ್ಡ confusion ಆಗಿದೆ. ಇದು ಏಕೆ ಆಗಿಲ್ಲವೋ ನನಗೆ ಅರ್ಥವಾಗಿಲ್ಲ. ಒಂದು ಉದಾಹರಣೆ ಕೊಡುತ್ತೇನೆ. ಕೇಂದ್ರದಿಂದ ಬಂದಂತಹ ಸಮಿತಿಯನ್ನೂ ಕೂಡ ನಾನು ಅಲ್ಲಿಗೆ ಕರೆದುಕೊಂಡು ಹೋಗಿದ್ದೆ. ಹುಲಿಕುಂಟೆ ಹೋಬಳಿ ಎಂಬುದೊಂದು ಇದೆ. ಅಲ್ಲಿ ಮಳೆಯೇ ಇಲ್ಲ, ಬಹಳ ಕಷ್ಟದಲ್ಲಿದ್ದಾರೆ. ಆದರೆ ಮಳೆ ಮಾಪನದಲ್ಲಿ ಮಳೆ ಚೆನ್ನಾಗಿ ಆಗಿದೆ ಎಂದು ಇದೆ ಎಂದಿರುವುದರಿಂದ ಇದನ್ನು ಬಿಟ್ಟಿದ್ದಾರೆ. ಇದನ್ನು ಬಿಟ್ಟು ಎಲ್ಲಿ ಮಳೆ ಚೆನ್ನಾಗಿ ಆಗಿದೆಯೋ, ಅದನ್ನು ಮಾಡಿದ್ದಾರೆ. ಇದು ನನಗೆ ಅರ್ಥವಾಗುವುದಿಲ್ಲ. ಯಾವತ್ತೂ ಕೂಡ ನೀವು ಬರೀ ಈ tele metric ಮತ್ತು ಮಾಪನಗಳನ್ನು ಅವಲಂಬಿಸುವುದರ ಮೇಲೆಯೇ ಬರ declare ಮಾಡಬೇಡಿ. ತಹಶೀಲ್ದಾರ್‌ರವರು ಇರುತ್ತಾರೆ, village accountants ಇರುತ್ತಾರೆ. ಅವರಿಂದ ಯಾವ್ಯಾವ ರೀತಿ ಬಿತ್ತನೆಯಾಗಿದೆ? ಯಾವ್ಯಾವ ರೀತಿ ಮಳೆ ಬಂದಿದೇ? ಎಂದು ವರದಿ ಪಡೆದು ಅದನ್ನೂ ಸಹ

ಆಧಾರವಾಗಿಟ್ಟುಕೊಂಡು drought ಎಂದು declare ಮಾಡಬೇಕು. ಬರೇ rain fall data ಒಂದನ್ನೇ ಇಟ್ಟುಕೊಂಡು ಮಾಡುವುದು ಸರಿಯಲ್ಲ. ಕೇಂದ್ರ ಸರ್ಕಾರ ಕೇಳುತ್ತದೆ ಎನ್ನುವಂತಹ ಕಾರಣದಿಂದ ಅದೊಂದನ್ನೇ ಮಾನದಂಡವಾಗಿ ಇಟ್ಟುಕೊಳ್ಳಬಾರದು. ಅದಕ್ಕಾಗಿಯೇ ನಾನು ಮಾನದಂಡಗಳನ್ನು ಆಯಾ ರಾಜ್ಯಕ್ಕೆ ಆಯಾ ಪರಿಸ್ಥಿತಿಗೆ ಅನುಗುಣವಾಗಿ ಬದಲಾವಣೆ ಮಾಡಿಕೊಳ್ಳಿ ಎಂದು insist ಮಾಡಿದ್ದು. ದಯಮಾಡಿ ಆ ಬದಲಾವಣೆ ಮಾಡಿ, ಹೆಚ್ಚು ವ್ಯಾಪಕವಾಗಿ ತಾಲ್ಲೂಕುಗಳಿಗೆ ಇದನ್ನು declare ಆಗುವುದಕ್ಕೆ ಅವಕಾಶ ಮಾಡಿ.

**ಶ್ರೀ ಜಿ. ಕರುಣಾಕರರೆಡ್ಡಿ** : ಮಾನ್ಯ ಮುಖ್ಯಮಂತ್ರಿಗಳು ಚೀನಾ ಪ್ರವಾಸಕ್ಕೆ ಹೋಗುವ ಮುಂಚೆ ತಮ್ಮನ್ನೆಲ್ಲಾ ಕರೆದು, ಈ ಸಲದ ಅಧಿವೇಶನದ ಬಗ್ಗೆ ಚರ್ಚೆ ಮಾಡುವಂತಹ ಸಂದರ್ಭದಲ್ಲಿ ತಾವು ಈ ವಿಚಾರವನ್ನು ಪ್ರಸ್ತಾಪ ಮಾಡಿದಿರಿ. ನಾನು ಆ ಬಗ್ಗೆ ಅವತ್ತೇ ತಮಗೆ clear ಮಾಡಿದೆ. ಹೋಬಳಿ ಅಲ್ಲ, ತಾಲ್ಲೂಕು as a unit ಆಗಿಯೇ ಬರ declare ಮಾಡಿದ್ದೇವೆ. ಅದು ಇಡೀ ತಾಲ್ಲೂಕಿಗೇ ಅನ್ವಯವಾಗುತ್ತದೆಂದು ನಾನು ಅವತ್ತು ಹೇಳಿದ್ದೆ. ಅದನ್ನೇ ಇವತ್ತೂ ಹೇಳುತ್ತಿದ್ದೇನೆ. ಅದರ ಬಗ್ಗೆ ಯಾವುದೇ ಗೊಂದಲವಿಲ್ಲ.

**ಶ್ರೀ ಟಿ.ಬಿ. ಜಯಚಂದ್ರ:**– ಇಂಥಿಂಥ ಹೋಬಳಿಗಳಲ್ಲಿ ಬರಗಾಲವಿದೆ ಎಂದು ವರದಿ ಹೋಗಿದೆ. ಉದಾಹರಣೆಗೆ ನಮ್ಮ ಶಿರಾ ತಾಲ್ಲೂಕಿನಲ್ಲಿ ಎರಡು ಹೋಬಳಿ ಮಾತ್ರ ಎಂದು ಡಿ.ಸಿ.ಯಿಂದ ಹೋಗಿದೆ. ಅದನ್ನು withdraw ಮಾಡಿಕೊಳ್ಳಬೇಕು.

**ಶ್ರೀ ಜಿ. ಕರುಣಾಕರರೆಡ್ಡಿ** :– ಆ ರೀತಿ ಹೋಗಿಲ್ಲ.

**ಶ್ರೀ ಟಿ.ಬಿ. ಜಯಚಂದ್ರ** :– ಹೋಗಿದೆ.

**ಶ್ರೀ ಜಿ. ಕರುಣಾಕರರೆಡ್ಡಿ** :– ಆ ರೀತಿ ಏನಾದರೂ ಹೋಗಿದ್ದರೆ ನಾನು ಅದನ್ನು ತಾಲ್ಲೂಕು ಕೇಂದ್ರ ಎಂದು ಸರಿಪಡಿಸುತ್ತೇನೆ. ಮಾನ್ಯ ಶ್ರೀನಿವಾಸ ಪ್ರಸಾದ್‌ರವರು ಮಾತನಾಡುತ್ತಾ, ಗಂಜಿ ಕೇಂದ್ರಗಳಲ್ಲಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದವರಿಗೆ ವ್ಯತ್ಯಾಸ ಮಾಡುತ್ತಿದ್ದಾರೆಂದು ಹೇಳಿದರು. ಅವರು ಯಾವ ರೀತಿಯ ಭಾವನೆ ಇಟ್ಟುಕೊಂಡು ಹೇಳಿದರೋ ಗೊತ್ತಿಲ್ಲ. ಕೆಲವು ಗಂಜಿ ಕೇಂದ್ರಗಳಲ್ಲಿ ಸೇರಿಸುವುದಿಲ್ಲ, ಇನ್ನೊಂದು ಗಂಜಿ ಕೇಂದ್ರಗಳಿಗೆ ಹೋಗಿ ಎನ್ನುತ್ತಾರೆ. ಆ ರೀತಿಯ ಭೇದಭಾವ ಮಾಡುತ್ತಿದ್ದಾರೆಂದು ಅವರು

ಹೇಳಿದರು. ನಮ್ಮ ಸರ್ಕಾರಕ್ಕೆ ಆ ರೀತಿಯಲ್ಲಿ ಯಾವುದೇ ಒಂದು ಭೇದಭಾವನೆ ಇಲ್ಲ. ಅಧಿಕಾರಿಗಳು ಆ ರೀತಿ ಮಾಡುವುದಿಲ್ಲ. Particular ಆಗಿ ಏನಾದರೂ ಆಗಿದ್ದರೆ, ಖಂಡಿತವಾಗಿಯೂ ಅವರ ಮೇಲೆ ಕ್ರಮ ಜರುಗಿಸುತ್ತೇನೆ. ನೆರೆಯಿಂದ ತೊಂದರೆಯಾಗಿರುವವರಿಗೆ ಗಂಜಿ ಕೇಂದ್ರಗಳನ್ನು ಏನು ತೆರೆಯಲಾಗುತ್ತದೋ, ಭೇದಭಾವನೆ ಇಲ್ಲದೆ ಅಲ್ಲಿ ಎಲ್ಲರಿಗೂ ಸಮಾವಕಾಶವಾಗಿ ಗಂಜಿ ಅಥವಾ ಊಟ ಸಿಗುವ ಹಾಗೆ ವ್ಯವಸ್ಥೆ ಆಗಬೇಕಾಗುತ್ತದೆ. ಇನ್ನು guidelines ಬದಲಾವಣೆ ಮಾಡಬೇಕು, ಬಹಳಷ್ಟು ಕಡಿಮೆ ಇದೆ ಎಂದು ಸಾಕಷ್ಟು ಮಂದಿ ಸದಸ್ಯರು ಹೇಳಿದ್ದಾರೆ. ಆ ಮಾತನ್ನು ಹಿರಿಯ ಸದಸ್ಯರುಗಳೂ ಕೂಡ ಹೇಳಿದ್ದಾರೆ. ನಾನು ಈ ಮಾತನ್ನು ಹೇಳಿದರೆ, ಅದನ್ನು ರಾಜಕೀಯವೆಂದು ತಿಳಿದುಕೊಳ್ಳುತ್ತಾರೋ ಏನೋ ಗೊತ್ತಿಲ್ಲ. ಇವತ್ತು ರೈತರ ಮಗ, ಮಣ್ಣಿನ ಮಗ ಎಂದು ಘೋಷಣೆ ಮಾಡಿಕೊಂಡವರು, ಈ ದೇಶದ ಪ್ರಧಾನಿಯಾಗಿದ್ದರು. ಕನಿಷ್ಟ ಅವರ ಸಮಯದಲ್ಲಾಗಲಿ ಈ ರೈತರ ಬಗ್ಗೆ, ಈ crop pattern ಬಗ್ಗೆ guide linesನಲ್ಲಿ ಸ್ವಲ್ಪ ಬದಲಾವಣೆ ಮಾಡಿದ್ದರೆ ಚೆನ್ನಾಗಿರುತ್ತಿತ್ತು ಎಂದು ನಾನು ಭಾವಿಸುತ್ತೇನೆ.

[ಗೊಂದಲ]

**ಶ್ರೀ ಹೆಚ್. ಡಿ. ರೇವಣ್ಣ :** ಸಾರ್, ಒಂದು ನಿಮಿಷ ಯೀಲ್ಡ್ ಆಗಿ.

[ಗೊಂದಲ]

**ಶ್ರೀ ಜಿ. ಕರುಣಾಕರ ರೆಡ್ಡಿ:** ಇದರಿಂದ ಇಡೀ ದೇಶದ ರೈತರಿಗೆ ಅನುಕೂಲವಾಗುತ್ತಿತ್ತು. ದೇಶದ ಜನರಿಗೆ ಅನುಕೂಲವಾಗುತ್ತಿತ್ತು.

[ಗೊಂದಲ]

**ಶ್ರೀ ಹೆಚ್. ಸಿ. ಬಾಲಕೃಷ್ಣ:** ಬೇಕಾದರೆ ಅವರ ಕಾಲದಲ್ಲಿ ಏನಾಯಿತು? ಇವರ ಕಾಲದಲ್ಲಿ ಏನಾಗಿದೆ? ಎಂಬ ಬಗ್ಗೆ ಪ್ರತ್ಯೇಕವಾಗಿ ಚರ್ಚೆ ಮಾಡೋಣ.

[ಗೊಂದಲ]

**ಶ್ರೀ ಹೆಚ್. ಡಿ. ರೇವಣ್ಣ :** NDA governmentನಲ್ಲಿ 5 ವರ್ಷ ಏನು ಮಾಡಿದರು? ಮಾನ್ಯ ದೇವೇಗೌಡರ 10 ತಿಂಗಳಿನಲ್ಲಿ ಏನು ಮಾಡಿದರು ಎಂಬ ಬಗ್ಗೆ ಚರ್ಚೆಯಾಗಲಿ.

[ಗೊಂದಲ]

**ಉಪಾಧ್ಯಕ್ಷರು:** ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

**[ಗೊಂದಲ]**

**ಶ್ರೀ ಹೆಚ್. ಸಿ. ಬಾಲಕೃಷ್ಣ :** ಅವರು duplicate ಮಣ್ಣಿನ ಮಗ, ಇವರು original ಎಂಬ ಬಗ್ಗೆ ಆಮೇಲೆ ಚರ್ಚೆ ಮಾಡೋಣ.

**[ಗೊಂದಲ]**

**ಉಪಾಧ್ಯಕ್ಷರು :** ಅವರು ಉತ್ತರ ಹೇಳಲಿ. ದಯವಿಟ್ಟು ಕುಳಿತುಕೊಳ್ಳಿ Please.

**[ಗೊಂದಲ]**

**ಶ್ರೀ ಹೆಚ್. ಸಿ. ಬಾಲಕೃಷ್ಣ :** ದಯವಿಟ್ಟು ಮಾನ್ಯ ಸಚಿವರು ಹೇಳಿರುವುದನ್ನು ಕಡತದಿಂದ ತೆಗೆಸಬೇಕು.

**[ಗೊಂದಲ]**

**ಉಪಾಧ್ಯಕ್ಷರು :** ಅವರು ಯಾರ ಹೆಸರನ್ನೂ ಹೇಳಲಿಲ್ಲ.

**[ಗೊಂದಲ]**

**ಶ್ರೀ ಬಿ.ಎನ್. ಬಚ್ಚೇಗೌಡ :** ಅವರು ಯಾರ ಹೆಸರನ್ನೂ ಹೇಳಲಿಲ್ಲ.

**[ಗೊಂದಲ]**

**ಶ್ರೀ ಹೆಚ್. ಸಿ. ಬಾಲಕೃಷ್ಣ :** ಮಾಜಿ ಪ್ರಧಾನಿ, ಮಣ್ಣಿನ ಮಗ ಎಂದರೆ ಯಾರು? ಅದು ನೀವೇ?

**[ಗೊಂದಲ]**

**ಉಪಾಧ್ಯಕ್ಷರು :** Please, ಕುಳಿತುಕೊಳ್ಳಿ.

**[ಗೊಂದಲ]**

**ಶ್ರೀ ಹೆಚ್. ಸಿ. ಬಾಲಕೃಷ್ಣ :** ಮಾನ್ಯ ಬಚ್ಚೇಗೌಡರು ಯಾರ ಹೆಸರನ್ನೂ ಹೇಳಲಿಲ್ಲವೆಂದು ಹೇಳುತ್ತಿದ್ದಾರೆ. ಹಾಗಾದರೆ 'ಮಾಜಿ ಪ್ರಧಾನಿ', 'ಮಣ್ಣಿನ ಮಗ' ಎಂದರೆ ಬಚ್ಚೇಗೌಡರೇ?

**[ಗೊಂದಲ]**

**ಉಪಾಧ್ಯಕ್ಷರು :** ಅವರು ಯಾರ ಹೆಸರನ್ನೂ ಹೇಳಲಿಲ್ಲ. ಹಾಗಾಗಿ ಆ ಪ್ರಶ್ನೆ ಉದ್ಭವಿಸುವುದಿಲ್ಲ. ನಿಯಮದ ಪ್ರಕಾರ ಹೆಸರನ್ನು ಹೇಳಿದ್ದರೆ ಖಂಡಿತವಾಗಿ ತೆಗೆಸಬಹುದಾಗಿತ್ತು. ಮಾನ್ಯ ಬಾಲಕೃಷ್ಣರವರೆ, ಅವರು ಯಾರ ಹೆಸರನ್ನೂ ಹೇಳಲಿಲ್ಲ, ದಯವಿಟ್ಟು ನೀವು ಕುಳಿತುಕೊಳ್ಳಿ.

**[ಗೊಂದಲ]**

**ಶ್ರೀ ಹೆಚ್. ಸಿ. ಬಾಲಕೃಷ್ಣ** : ಈ ರೀತಿ ಮಾತನಾಡುವುದು ನಿಮ್ಮ ಘನತೆಗೆ ಶೋಭೆ ತರುವುದಿಲ್ಲ.

[ಗೊಂದಲ]

**ಉಪಾಧ್ಯಕ್ಷರು** : ಆಯಿತು, ಕುಳಿತುಕೊಳ್ಳಿ.

[ಗೊಂದಲ]

**ಶ್ರೀ ಹೆಚ್. ಸಿ. ಬಾಲಕೃಷ್ಣ** : ಮಾನ್ಯ ಉಪಾಧ್ಯಕ್ಷರೆ, ಅದನ್ನು ಕಡತದಿಂದ ತೆಗೆಸಿ ಹಾಕಿ.

[ಗೊಂದಲ]

**ಉಪಾಧ್ಯಕ್ಷರು** : ಅವರ ಯಾರ ಹೆಸರನ್ನೂ ಹೇಳಲಿಲ್ಲ.

[ಗೊಂದಲ]

**ಶ್ರೀ ಹೆಚ್. ಸಿ. ಬಾಲಕೃಷ್ಣ** : ಅವರು ಇಲ್ಲಿ ಉತ್ತರ ಕೊಡುವುದಕ್ಕೆ ಇಲ್ಲ.

[ಗೊಂದಲ]

**ಉಪಾಧ್ಯಕ್ಷರು** : ಅವರ ಯಾರ ಹೆಸರನ್ನೂ ಹೇಳಲಿಲ್ಲ.

**ಶ್ರೀ ಹೆಚ್.ಸಿ. ಬಾಲಕೃಷ್ಣ** : ದಯವಿಟ್ಟು ಕಡತದಿಂದ ತೆಗೆಸಿ ಹಾಕಬೇಕು.

**ಉಪಾಧ್ಯಕ್ಷರು** : ಆಯಿತು, ಆ ಬಗ್ಗೆ ಪರಿಶೀಲನೆ ಮಾಡೋಣ.

[ಗೊಂದಲ]

**ಉಪಾಧ್ಯಕ್ಷರು** : ಆ ಬಗ್ಗೆ ಪರಿಶೀಲನೆ ಮಾಡಿ ನೋಡುತ್ತೇನೆ.

[ಗೊಂದಲ]

**ಶ್ರೀ ಜಿ. ಕರುಣಾಕರರೆಡ್ಡಿ**: ಮಾನ್ಯ ಉಪಾಧ್ಯಕ್ಷರೆ, ನಾನು ಅವರ ಬಗ್ಗೆ ಹಗುರವಾಗಿ ಮಾತನಾಡಿಲ್ಲ.

[ಗೊಂದಲ]

**ಉಪಾಧ್ಯಕ್ಷರು**: ಆ ಬಗ್ಗೆ ಪರಿಶೀಲನೆ ಮಾಡಿ ನೋಡುತ್ತೇನೆ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

[ಗೊಂದಲ]

**ಶ್ರೀ ಜಿ. ಕರುಣಾಕರ ರೆಡ್ಡಿ**: ಮಾನ್ಯ ಉಪಾಧ್ಯಕ್ಷರೆ, ಇವತ್ತು ಒಬ್ಬ ರೈತ ಮೆಕ್ಕೆ ಜೋಳ ಬೆಳೆಯಬೇಕಾದರೆ 6500 ರೂ.ಗಳು ಆಗುತ್ತದೆ, ತೊಗರಿಯಾದರೆ 3450 ರೂ.ಗಳು, Groundnut ಆದರೆ 7500 ರೂ.ಗಳು,

ಸೂರ್ಯಕಾಂತಿಯಾದರೆ 6750 ರೂ.ಗಳು, ಸೋಯಾಬೀನ್ ಆದರೆ 7500 ರೂ.ಗಳಾಗುತ್ತದೆ. ಕೆಲವಕ್ಕೆ ಮಾತ್ರ ಅಂದಾಜು ಮಾಡಿ ನಾನು ಹೇಳಿದ್ದೇನೆ. ಅಂದರೆ ಈ ರೀತಿಯಾಗಿ ಇಷ್ಟೊಂದು ಜಾಸ್ತಿ ವೆಚ್ಚ ರೈತರಿಗೆ ಆಗುತ್ತಿದೆ. ನಾವು ಇನ್ನೇನು crop ತೆಗೆದುಕೊಳ್ಳಬೇಕು ಎನ್ನುವಾಗ ನೆರೆ ಬಂದಾಗ ಆ ಸಂದರ್ಭದಲ್ಲಿ ಅವನಿಗೆ ಇನ್ನೂ ಹೆಚ್ಚು ತೊಂದರೆಯಾಗುತ್ತದೆ. ರೈತ ಬಿತ್ತನೆ ಹಾಕಿರುತ್ತಾನೆ, ಆ stageನಲ್ಲಿ ಬರ ಬಣದಾಗ ರೈತನಿಗೆ ಬಿತ್ತನೆ cost, ಗೊಬ್ಬರ cost, ಕೂಲಿ ಖರ್ಚು ಎಲ್ಲಾ ಸೇರಿ ತೊಂದರೆಯಾಗುತ್ತದೆ. ಈ ತರಹ ಇದ್ದಾಗ ಅದನ್ನು ಮಾಡಿದ್ದರೆ ಒಳ್ಳೆಯದಾಗುತ್ತಿತ್ತು ಎಂದು ನಾನು ಹೇಳಿದೆ. ಒಟ್ಟಾರೆಯಾಗಿ ಇವತ್ತು ಭಾರತ ಸರ್ಕಾರ ನಮ್ಮ ರಾಜ್ಯದ 20 ಜಿಲ್ಲೆಗಳನ್ನೂ ಕೂಡ ಸೇರಿಸಿಕೊಂಡು ದೇಶದ ಸುಮಾರು 278 ಜಿಲ್ಲೆಗಳನ್ನು ಬರಪೀಡಿತ ಪ್ರದೇಶ ಎಂದು ಘೋಷಣೆ ಮಾಡಿದ್ದಾರೆ. ಅನೇಕ ಸದಸ್ಯರು ಸಲಹೆ/ಸೂಚನೆಗಳನ್ನು ನೀಡಿದ್ದಾರೆ. ಅವುಗಳಲ್ಲಿ ಒಳ್ಳೆಯದು ಇದ್ದರೆ ಖಂಡಿತವಾಗಿಯೂ ಈ ಸರ್ಕಾರ ಅದನ್ನು ಸ್ವಾಗತ ಮಾಡುತ್ತದೆ.

ಅದರ ಅನುಷ್ಠಾನಕ್ಕೆ ನಿಷ್ಠೆಯಿಂದ ಆ ಉಪ ಸಮಿತಿಯ ಅಧ್ಯಕ್ಷನಾಗಿ ಕೆಲಸ ಮಾಡುತ್ತೇನೆಂದು ತಮ್ಮ ಮೂಲಕ ಎಲ್ಲರಿಗೂ ತಿಳಿಯಬಯಸುತ್ತೇನೆ. ಮತ್ತೆ ಯಾವುದೇ ಒಂದು ಜಿಲ್ಲೆ ಅಥವಾ ತಾಲ್ಲೂಕಿನಲ್ಲಿ ಮೇವಿನ ಮತ್ತು ಕುಡಿಯುವ ನೀರಿನ ತೊಂದರೆ ಇದೆ ಎಂದು ತಾವು ನಿರ್ದಿಷ್ಟವಾಗಿ ಹೇಳಿದರೆ, ಖಂಡಿತಾ ಅದರ ಬಗ್ಗೆ ಕ್ರಮಜರುಗಿಸುತ್ತೇವೆ. ಯಾವುದೇ ಹಿಂದುಮುಂದೆ ನೋಡದೆ ಈಗಿರುವ ಹಣವನ್ನು ಖರ್ಚು ಮಾಡುತ್ತಾರೆ, ಅದೂ ಸಾಕಾಗುವುದಿಲ್ಲವೆಂದು ಜಿಲ್ಲಾಧಿಕಾರಿಗಳು ನಮ್ಮನ್ನು ಕೇಳಿದರೆ ಕೊಡುವುದಕ್ಕೆ ಸರ್ಕಾರ ಸಿದ್ಧವಿದೆ. ಏಕೆಂದರೆ, ಮುಖ್ಯಮಂತ್ರಿಗಳು ಮತ್ತು ನಾವು ಮೊನ್ನೆ ವಿಡಿಯೋ ಕಾನ್ಫರೆನ್ಸ್ ಮಾಡಿದಾಗ, ಬಹುತೇಕ ಜಿಲ್ಲೆಗಳಲ್ಲಿ ಮೇವಿನ ಸಮಸ್ಯೆ ಇರುವುದು ಕಾಣಿಸಲಿಲ್ಲ, ಫಾಡರ್ ಬ್ಯಾಂಕ್ ಮಾಡಿದರೆ ಯಾವ ರೈತರು ತೆಗೆದುಕೊಳ್ಳುವುದಕ್ಕೆ ಬರುತ್ತಿಲ್ಲ, ಕೆಲವು ಕಡೆ ಗೋ ಶಾಲೆಗಳನ್ನು ಪ್ರಾರಂಭ ಮಾಡಿದ್ದರು, ಕೆಲವು ರೈತರು ಗೋಗಳನ್ನು ವಾಪಸ್ ತೆಗೆದುಕೊಂಡು ಹೋಗಿದ್ದಾರೆ, ಗೋ ಶಾಲೆಗಳನ್ನು ಮುಚ್ಚಿದ್ದಾರೆ. ತಾವು ಪ್ರವಾಸ ಮಾಡಿದಾಗ ಅವಶ್ಯಕತೆ ಇದೆ ಎಂದು ಕಂಡು ಬಂದು ತಿಳಿಸಿದರೆ ತಕ್ಷಣ ಸೂಚನೆ ಕೊಡುತ್ತೇವೆ. ಸರ್ಕಾರ ಈ ನಿಟ್ಟಿನಲ್ಲಿ ಬದ್ಧವಾಗಿದೆ. ಬಹುಶ: ಮತ್ತೊಮ್ಮೆ ಈ ಸೂಚನೆಯನ್ನು ಜಿಲ್ಲಾಧಿಕಾರಿಗಳಿಗೆ ಕೊಡುತ್ತೇನೆ. ಒಟ್ಟಾರೆ

ಸತತವಾಗಿ ಬರುತ್ತಿರುವ ಈ ನೆರೆ ಮತ್ತು ಬರಕ್ಕೆ ಒಂದು ಶಾಶ್ವತವಾದ ಪರಿಹಾರವನ್ನು ಕಂಡುಕೊಳ್ಳಬೇಕಾಗಿದೆ. ಆ ನಿಟ್ಟಿನಲ್ಲಿ ನಮ್ಮ ಸರ್ಕಾರ ಖಂಡಿತ ಕೆಲಸ ಮಾಡುತ್ತದೆಂದು ತಮ್ಮ ಮೂಲಕ ತಿಳಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಕೆ. ಎಂ. ಶಿವಲಿಂಗೇಗೌಡ** : 76 ತಾಲ್ಲೂಕುಗಳನ್ನು ಡಿಕ್ಲೇರ್ ಮಾಡಲಾಗಿದೆ, ನಮ್ಮ ಕೆಲವು ತಾಲ್ಲೂಕುಗಳು ಕೈಬಿಡಲಾಗಿದೆ, ಅವನ್ನು ಡಿಕ್ಲೇರ್ ಮಾಡುವುದಕ್ಕೆ ಏನು ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂಬುದನ್ನು ಸಚಿವರು ತಿಳಿಸಬೇಕು.

**ಶ್ರೀ ಕರಡಿ ಸಂಗಣ್ಣ** : ಮಾನ್ಯ ಕಂದಾಯ ಮಂತ್ರಿಗಳು ಮೊದಲು ಬೆಳೆಹಾನಿಗೆ ಪರಿಹಾರವನ್ನು ಘೋಷಣೆ ಮಾಡಬೇಕು.

**ಶ್ರೀ ಬಂಡೆಪ್ಪ ಕಾಶಂಪೂರ್** : ಬೆಳೆ ಹಾನಿಯಾಗಿ ರೈತರು ಆತ್ಮಹತ್ಯೆ ಮಾಡಿಕೊಂಡಿರುವುದನ್ನು ನಾವು ನೋಡಿದ್ದೇವೆ, ಅವರಿಗೆ ಇವತ್ತು ಯಾವುದಾದರು ಒಂದು ಪರಿಹಾರ ಬೇಕಲ್ಲಾ?

**ಶ್ರೀ ಜಿ. ಕರುಣಾಕರ ರೆಡ್ಡಿ:** ಇವತ್ತು ಎಲ್ಲಾ ರೀತಿಯಲ್ಲಿ ಕೂಲಿ ಕೆಲಸ ಮಾಡುವುದಕ್ಕೆ ಬೆರಗ ಕಾರ್ಯಕ್ರಮವಿದೆ. ಅದಲ್ಲದೆ ಸರ್ಕಾರ ಹಲವಾರು ಕಾರ್ಯಕ್ರಮವಿದ್ದಾವೆ, ಅದರ ಪ್ರಯೋಜನ ಪಡೆಯಬಹುದು.

**ಶ್ರೀ ಬಂಡೆಪ್ಪ ಕಾಶಂಪೂರ್** : ಜಮೀನು ಇಟ್ಟುಕೊಂಡಿರುವ ರೈತ ಹೋಗಿ ಕೂಲಿ ಮಾಡುವುದಕ್ಕಾಗುವುದಿಲ್ಲ, ಅವನು ಸಾಲ ಮಾಡಿಕೊಂಡಿದ್ದಾನೆ.

**ಅಧ್ಯಕ್ಷರು** : ನೀವು ಅವರಿಗೆ ಕೇಳಿದ್ದೀರಿ. ಈಗ ಅವರಿಗೆ ಉತ್ತರ ಹೇಳುವುದಕ್ಕಾದರೂ ಅವಕಾಶ ಮಾಡಿಕೊಡಿ. ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಜಿ. ಕರುಣಾಕರ ರೆಡ್ಡಿ:** ಕೆಲವು ಮಾನ್ಯ ಸದಸ್ಯರೇನು ನಮ್ಮ ತಾಲ್ಲೂಕುಗಳನ್ನು ಬರಗಾಲ ಪೀಡಿತ ತಾಲ್ಲೂಕುಗಳೆಂದು ಘೋಷಣೆ ಮಾಡಬೇಕೆಂದು ಕೇಳಿದ್ದಾರೆ. ಆ ಬಗ್ಗೆ ಮುಂದು ನಮ್ಮ ಸಚಿವ ಸಂಪುಟದ ಉಪಸಮಿತಿ ಸೇರಿದಾಗ, ನಾಲ್ಕುವಾರ ಸತತ ಒಣ ಹವೆಯಾಗಿರುಬಹುದು, 20% ಮಳೆ ಕೊರತೆಯಾಗಿರಬಹುದು ಆ ಮಾನದಂಡಗಳಿಗೆ ಒಳಪಟ್ಟು ಬಂದರೆ ಖಂಡಿತ ತಮ್ಮ ತಾಲ್ಲೂಕುಗಳನ್ನು ಘೋಷಣೆ ಮಾಡಲಾಗುವುದು ಎನ್ನುವುದನ್ನು ತಿಳಿಸಬಯಸುತ್ತೇನೆ.

**ಶ್ರೀ ಹೆಚ್. ಡಿ. ರೇವಣ್ಣ** : ಪರಿಹಾರ ಪಡೆಯಲು ಕೇಂದ್ರ ಸರ್ಕಾರ ಸಿಆರ್ಎಫ್ ಗೆ ಕಳುಹಿಸಿಕೊಡಬೇಕು, ರೂ. 800 ಇರುವುದನ್ನು ಕನಿಷ್ಟ ರೂ. 5000 ಕೊಡಬೇಕೆಂದು ಕೇಳಲಾಗಿದೆ, ಅದಕ್ಕೆ ಕ್ಲಾರಿಫಿಕೇಷನ್ ಕಳುಹಿಸಿಲ್ಲ, 55,000 ಹೆಕ್ಟೇರ್‌ನಲ್ಲಿ ಆಲೂಗಡ್ಡೆ ಬೆಳೆ ಹಾಳಾಗಿ ಸುಮಾರು 150 ಕೋಟಿ ನಷ್ಟವಾಗಿದೆ. ಅದಕ್ಕೇನು ಪರಿಹಾರ ಕೊಡುತ್ತೀರೊ ಇಲ್ಲವೊ?

**ಶ್ರೀ ಜಿ. ಕರುಣಾಕರ ರೆಡ್ಡಿ:** ಮಾನ್ಯ ರೇವಣ್ಣನವರೇನು ವಿಚಾರಗಳನ್ನು ಹೇಳಿದ್ದಾರೆ, ಆ ಬಗ್ಗೆ ನಮಗೂ ಕೂಡ ಸಾಕಷ್ಟು ಕಾಳಜಿ ಇದೆ. ಬೇಕಾದರೆ ನಾವೆಲ್ಲರೂ ವಿರೋಧಪಕ್ಷದ ನಾಯಕರುಗಳು ಸೇರಿದಂತೆ ಮಾನ್ಯ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಗೈಡ್ ಲೈನ್ಸ್ ಚೆಂಜ್ ಮಾಡಬೇಕೆನ್ನುವ ಮನವಿಪತ್ರವನ್ನು ಖಂಡಿತಾ ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಡುತ್ತೇವೆಂದು ಹೇಳಬಯಸುತ್ತೇನೆ.

**ಶ್ರೀ ಈಶ್ವರ ಖಂಡ್ರೆ:** ಮಾನ್ಯ ಅಧ್ಯಕ್ಷರೆ, ಸರ್ಕಾರ, ತಮ್ಮ ಉತ್ತರದಲ್ಲಿ 24 ಲಕ್ಷ ಹೆಕ್ಟೇರ್ ನಾಶವಾಗಿದೆ ಎಂದು ತಮ್ಮ ಉತ್ತರದಲ್ಲಿ ಹೇಳಿ, ಮತ್ತೆ 13 ಲಕ್ಷ ಹೆಕ್ಟೇರ್‌ನಲ್ಲಿ ಮಳೆ ಬಿದ್ದಿದೆ, ಬಿತ್ತನೆಯಾಗಿದೆ ಎಂದು ಹೇಳಿದ್ದಾರೆ. ನಮ್ಮ ಜಿಲ್ಲೆಯಲ್ಲಿ ಮುಂಗಾರು ವೈಫಲ್ಯವಾದ ಮೇಲೆ ಪುನಃ ಬಿತ್ತನೆಯಾದರೆ ಹಿಂಗಾರು ಮಾತ್ರ ಬರುವುದ, ಮುಂಗಾರು ಸಂಪೂರ್ಣವಾಗಿ ನಷ್ಟವಾಗಿದೆ. ಏನು ಸಂಪೂರ್ಣವಾಗಿ ಮುಂಗಾರು ಬೆಳೆ ನಾಶವಾಗಿದೆ ಅದಕ್ಕೇನು ಪರಿಹಾರವೆಂದು ಘೋಷಣೆ ಮಾಡಲಿಲ್ಲ. ಪರಿಹಾರ ಹಣ ಎಷ್ಟು ಕೊಡುತ್ತಿದ್ದಾರೆಂದು ತಕ್ಷಣ ಈ ಸದನದಲ್ಲಿ ಅವರು ಘೋಷಣೆ ಮಾಡಬೇಕೆಂದು ತಮ್ಮ ಮೂಲಕ ಅವರಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ. ನಮ್ಮ ಜಿಲ್ಲೆಯಲ್ಲಿ ಕೆಲವು ರೈತರು ಸಹಕಾರಿ ಬ್ಯಾಂಕ್ ಮತ್ತು ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಸಾಲ ತೆಗೆದುಕೊಂಡ 40% ರೈತರು ವಂಚಿತರಾಗಿದ್ದಾರೆ, ಅವರಿಗೆ ಸರಳ ರೀತಿಯಲ್ಲಿ ಸಾಲ ಕೊಡಿಸುವ ವ್ಯವಸ್ಥೆಯ ಬಗ್ಗೆ, ಸುಟ್ಟಂಥ ಟ್ರಾನ್ಸ್ ಫಾರ್ಮರ್‌ಗಳನ್ನು ತಕ್ಷಣ ರಿಪೇರಿ ಮಾಡಿಸಲು ರಿಪೇರಿ ಸೆಂಟರ್ ಪ್ರಾರಂಭ ಮಾಡುವ ಬಗ್ಗೆ, ಈಗೇನು ಮಳೆಯಾಗಿದೆ, ಬಿದ್ದ ನೀರನ್ನು ರೈತರು ಉಪಯೋಗ ಮಾಡಿಕೊಳ್ಳುವ ಅನುಕೂಲ ಮಾಡಿಕೊಡುವ ವ್ಯವಸ್ಥೆಯ ಬಗ್ಗೆ ಮಾನ್ಯ ಸಚಿವರು ಉತ್ತರವನ್ನು ಕೊಡಲಿಲ್ಲ, ಆ ಬಗ್ಗೆ ಹೇಳಬೇಕೆಂದು ನಾನು ಕೋರುತ್ತೇನೆ.

[ಈ ಸಂದರ್ಭದಲ್ಲಿ ಸಭಾಧ್ಯಕ್ಷರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು]

**ಅಧ್ಯಕ್ಷರು:** ಮಾನ್ಯ ಸಿದ್ದರಾಮಯ್ಯನವರೆ, ಒಂದೊ ಎರಡೊ ಕ್ಲಾರಿಫಿಕೇಷನ್ ಇದ್ದರೆ ಕೇಳಿ, ಮಾತನಾಡಿದ್ದಕ್ಕೆ ಅವರು [ಮಂತ್ರಿ] ಈಗ ಉತ್ತರವನ್ನು ಕೊಟ್ಟರು, ಕ್ಲಾರಿಫಿಕೇಷನ್ನೆ ಮತ್ತೊಂದು ರೌಂಡ್ ಆಗುವುದು ಬೇಡ.

**ಶ್ರೀ ಸಿದ್ದರಾಮಯ್ಯ:** ಅವರು ಉತ್ತರವನ್ನೆ ಹೇಳಲಿಲ್ಲ, ನಾವು ಕ್ಲಾರಿಫಿಕೇಷನ್ ಏನು ಕೇಳುವುದು? ನಾವು ಕೇಳಿದ್ದಕ್ಕೆ ಯಾವುದಕ್ಕೂ ಸ್ಪಷ್ಟವಾದ ಉತ್ತರವನ್ನು ಅವರು ಹೇಳಲಿಲ್ಲ. ನಾವು ಈ ರೀತಿಯ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇನೆ. ಅದಕ್ಕೋಸ್ಕರ ಇಷ್ಟು ಹಣ ಇಟ್ಟುಕೊಂಡಿದ್ದೇವೆ, ಕೇಂದ್ರ ಸರ್ಕಾರದಿಂದ ಇಷ್ಟು ಹಣ ಬಂದಿದೆ, ನಮ್ಮ ಸರ್ಕಾರ ಸಂಪನ್ಮೂಲಗಳಿಂದ ಇಷ್ಟು ಹಣ ಸಂಗ್ರಹ ಮಾಡಿದ್ದೇವೆ ಆ ರೀತಿಯಾಗಿ ಸ್ಪಷ್ಟವಾಗಿ ಯಾವುದನ್ನು ಹೇಳಲಿಲ್ಲ. ಈ ಟೆಲಿಮೆಟ್ರಿಕ್ ರೇನ್ ಗೇಜ್‌ಗಳನ್ನು ಎಲ್ಲಾ ಗ್ರಾಮ ಪಂಚಾಯತಿಗಳಿಗೆ ಒಂದೊಂದು ಕೊಡುತ್ತೇವೆಂದು ಹೇಳಿದ್ದೀರಿ. ಅವನ್ನು ಯಾವಾಗ ತೆಗೆದುಕೊಳ್ಳು ಪ್ರಾರಂಭ ಮಾಡಿದ್ದೀರಿ, ಎಲ್ಲಾ ಪಂಚಾಯತಿಗಳಿಗೆ ಒದಗಿಸುತ್ತೀರಾ? ಈಗ ತಪ್ಪು ಮಾಹಿತಿ ಇದೆ, ತಪ್ಪು ಮಾಹಿತಿಗಳಿಂದ ಕೆಲವು ಹೋಬಳಿ ಮತ್ತು ತಾಲ್ಲೂಕುಗಳೆಲ್ಲಾ ಬಿಟ್ಟು ಹೋಗಿದ್ದಾವೆ, ಅವನ್ನು ಸೇರಿಸಿಕೊಳ್ಳುತ್ತೇವೆ, ಅವಕ್ಕು ಪರಿಹಾರವನ್ನು ಕೊಡುತ್ತೇವೆ, ಗುಲ್ಬರ್ಗಾ, ಬೀದರ್ ಜಿಲ್ಲೆಗಳಲ್ಲಿ ತೊಗರಿ ಬಹಳ ಕ್ಯಾಶ್ ಕ್ರಾಪ್, ಉದ್ದು, ಹೆಸರು ಎಲ್ಲಾ ನಷ್ಟವಾಗಿದೆ, ಹಿಂಗಾರಿನಲ್ಲಿ ತೊಗರಿ ಹಾಕುವುದಕ್ಕಾಗುವುದಿಲ್ಲ. ರಬಿ ಕ್ರಾಪ್‌ನಲ್ಲಿ ಈಗ ಸೂರ್ಯಕಾಂತಿ, ಜೋಳ ಮತ್ತು ಕಡಲೆಯನ್ನು ಹಾಕಬಹುದು. ನಾನು ಆಳಂದ ಕ್ಷೇತ್ರಕ್ಕೂ ಹೋಗಿದ್ದೆ, ಅಲ್ಲಿ ಮಳೆಯೇ ಬಿದ್ದಿಲ್ಲ, ಬಿತ್ತನೆಯೇ ಹಾಕಿಲ್ಲ, ಮೇವಿಗೂ ಬಹಳ ತೊಂದರೆ ಇದೆ. ಅದಕ್ಕೆ ನಾನು ಹೇಳುತ್ತೇನೆಂದರೆ, ನಾವು ಮೇವು ಬೆಳೆಯಲು ನಾವು ಈ ರೀತಿಯ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ ಎಂದು ಹೇಳಬೇಕು. ಈಗ ಮುಂಗಾರು ಹೊರಟುಹೋದ ಮೇಲೆ ಮೇವು ಎಲ್ಲಿ ಸಿಗುತ್ತದೆ, ಹಿಂಗಾರಿನಲ್ಲಿ ಅಲ್ಪಸ್ವಲ್ಪ ಮೇವು ಬಂದರೆ ಸಿಗುತ್ತದೆ. ಈ ಸೆಪ್ಟೆಂಬರ್ ತಿಂಗಳಿನಿಂದ ಮುಂದಿನ ಮೇ–ಜೂನ್ ಹೊತ್ತಿಗೆ ಮೇವಿಗೆ ಏನು ಮಾಡುವುದೆಂದು ನಿಮ್ಮಲ್ಲಿ ಒಂದು ಆಕ್ಷನ್ ಪ್ಲಾನ್ ಇರಬೇಕು, ಅದಕ್ಕೆ ಏನು ಮಾಡಿದ್ದೀರಿ? ಈಗಾಗಲೇ ಮೊದಲನೆ ಕಂತಿನ ಹಣ ಸಿಆರ್‌ಎಫ್‌ನಲ್ಲಿ 50

ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ. ಆಮೇಲೆ ನಿಮ್ಮದು 17 ಕೋಟಿ 42 ಲಕ್ಷ ರೂಪಾಯಿಗಳು, ಒಟ್ಟು ಅದು 69 ಕೋಟಿ ರೂಪಾಯಿಗಳು. ಎನ್‌ಸಿಸಿಎಫ್‌ನಲ್ಲಿ 73 ಕೋಟಿ ಸೇರಿದಂತೆ ಈಗಾಗಲೆ ನಿಮ್ಮದು 17 ಕೋಟಿ ಸೇರಿ 150 ಕೋಟಿ ರೂಪಾಯಿಗಳು ಬಂದಿವೆ. ಅದು ಬಿಟ್ಟರೆ ಹೋದ ಸಾರಿ 131 ಕೋಟಿ, ಇದು 150 ಕೋಟಿ ಸೇರಿ 281 ಕೋಟಿಯಾಗುತ್ತದೆ. ಇದುವರೆಗೆ ನೀವು 115 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೀರಿ, ನಿಮ್ಮ ಒಂದು ರೂಪಾಯಿಯನ್ನು ಬಿಡುಗಡೆ ಮಾಡಿಲ್ಲ. ಕಳೆದ ವರ್ಷ 321 ಕೋಟಿ ಬಂದಿತ್ತು, 131 ಕೋಟಿ ಡಿಸಿಗಳ ಪಿಡಿ ಅಕೌಂಟ್‌ನಲ್ಲಿದೆ ಖರ್ಚೆ ಮಾಡಿಲ್ಲ. ಅದಕ್ಕೆ ನಾನೇನು ಹೇಳುತ್ತೇನೆಂದರೆ, ಈ ಸಾರಿ ತೊಗರಿ, ಹಲಸಂದಿ, ಹೆಸರು, ಉದ್ದು ಸೇರಿದಂತೆ ಬೆಳೆ ಪೂರ್ತಿ ಹೋಗಿದೆ, ಅದನ್ನು ರಬಿ ಕ್ರಾಪ್‌ನಲ್ಲಿ ತೆಗೆದುಕೊಳ್ಳುವುದಕ್ಕಾಗುತ್ತದೆಯೇ? ಆಗುವುದಿಲ್ಲ. ಹಿಂದೆಲ್ಲಾ ತೊಗರಿಬೆಳೆ ನಷ್ಟಕ್ಕೆ ಪರಿಹಾರವನ್ನು ಕೊಟ್ಟಿದ್ದಾರೆ, ಅದಕ್ಕೆ ಏನಾದರೂ ಮಾಡುವ ಬಗ್ಗೆ ನೀವು ಹೇಳಬೇಕು. ಬೆಳೆ ಅಸೆಸ್ ಮಾಡಿ ಎಷ್ಟು ಬೆಳೆ ನಷ್ಟವಾಗಿದೆ, ರೈತರಿಗೆ ಕೊಡಲು ಏನು ಮಾಡಬೇಕೆಂಬುದನ್ನೆಲ್ಲಾ ಹೇಳಬೇಕು ಇದನ್ನೆಲ್ಲಾ ಹೇಳದಿದ್ದರೆ, ಸರ್ಕಾರ ಕೆಲಸ ಮಾಡಬೇಕಲ್ಲ, ಅಧಿಕಾರಿಗಳ ರೀತಿ ಉತ್ತರವನ್ನು ಕೊಟ್ಟರಾಗುವುದಿಲ್ಲ. ಅವರಿಗೆ ಏನು ಮಾಡುತ್ತೀರಿ, ಕೂಲಿ ಕಾರ್ಮಿಕರಿಗೆ ಏನು ಮಾಡುತ್ತೀರಿ ಎಂಬ ಬಗ್ಗೆ ನಮ್ಮದು ಕ್ರಿಯಾ ಯೋಜನೆ ಸ್ಪಷ್ಟವಾಗಿ ಈ ರೀತಿ ಇದೆ ಎಂದು ಮಂತ್ರಿಗಳು ಹೇಳಲಿಲ್ಲ. ಆದುದರಿಂದ ನಿಮ್ಮ ಉತ್ತರದಿಂದ ಬರಗಾಲಕ್ಕೆ ತುತ್ತಾದ ಯಾವ ರೈತನಿಗೂ ಕೂಡ ಅನುಕೂಲವಾಗುವುದಿಲ್ಲ. As a matter of fact, ಎಲ್ಲೂ ಕೂಡ ಕೆಲಸ ಪ್ರಾರಂಭವಾಗಿಲ್ಲ, ಒಂದು ಕಡೆ ಒಂದು ಗೋಶಾಲೆ ಮಾಡಿಲ್ಲ, ಮಳೆ ಬಂತು ಮೇವು ಸಿಕ್ಕಿದೆ ಎಂದು ನೀವು ಇದ್ದುಬಿಟ್ಟಿದ್ದೀರಿ, ಬೀದರ್‌ನಲ್ಲಿ ಎಲ್ಲಿದೆ ಮೇವು? ಆಮೇಲೆ ನಾನು ಕೇಳಿದೆ ಕೆಲವು ಹಳ್ಳಿಗಳು ಪಟ್ಟಣಗಳು ಅಲ್ಲ ಹಳ್ಳಿಗಳೂ ಅಲ್ಲ ಅಲ್ಲಿಗೆ ಏನು ಮಾಡುತ್ತೀರಿ? NREGA ದುಡ್ಡು ಅಪ್ಲೈ ಆಗುವುದಿಲ್ಲ, ಅಲ್ಲಿ ನಿಮ್ಮ ದುಡ್ಡನ್ನು ಖರ್ಚು ಮಾಡಿ ಏನಾದರೂ ಮಾಡಬೇಕು, ನೀವೇನು ಮಾಡಿಲ್ಲ. ಈ ಸರ್ಕಾರ ರೈತರ ಬಗ್ಗೆ ಬರೀ ಮಾತನಾಡುತ್ತದೆಯೇ ಹೊರತು, ಬರಗಾಲವನ್ನು ಎದಿರಿಸುವಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ, ರೈತರಿಗೆ ಯಾವುದೇ ರೀತಿಯ ಪರಿಹಾರವನ್ನು ಕೊಟ್ಟಿಲ್ಲ.

VTSOO

**ಶ್ರೀ ಬಿ. ಎಸ್. ಯಡಿಯೂರಪ್ಪ [ಮುಖ್ಯಮಂತ್ರಿಗಳು]:** ಬರಗಾಲದ ಪರಿಸ್ಥಿತಿಯಿಂದ ಎಲ್ಲಿ ಉದ್ಯೋಗ ಸಿಗುತ್ತಿಲ್ಲ, ಕುಡಿಯುವ ನೀರಿನ ಸಮಸ್ಯೆ ಇದೆ, ಈಗ ನಮ್ಮ ನಾರ್ಮ್ಸ್ ಪ್ರಕಾರ ಮನೆಗಳು ಬಿದ್ದು ಅನಾಹುತಗಳಾಗಿ ಆ ರೀತಿಯ ಪರಿಹಾರವನ್ನು ಕೊಟ್ಟಿಲ್ಲವೆಂದು ತಾವು ಹೇಳುತ್ತೀರಾ? ನೀವೇನು ಬೇಸರ ಮಾಡಿಕೊಳ್ಳದಿದ್ದರೆ, ಒಂದರೆಡು ದಿವಸ ನಾವು ನೀವು ಒಟ್ಟಿಗೆ ಹೋಗೋಣ, ಅಲ್ಲಿಯ ಡಿಸಿ, ಸಂಬಂಧಪಟ್ಟ ಅಧಿಕಾರಿಗಳು ಮತ್ತು ಕಂದಾಯ ಮಂತ್ರಿಗಳ ಜೊತೆ ನಾನು ಬರುತ್ತೇನೆ, ಸ್ಥಳದಲ್ಲೇ ಹಣವನ್ನು ವಿತರಣೆ ಮಾಡಿ ಬರೋಣ. ಈಗಾಗಲೇ ನಾನು ಜಿಲ್ಲಾಧಿಕಾರಿಗಳೊಡನೆ ಈಗಾಗಲೇ ವಿಡಿಯೋ ಕಾನ್ಫರೆನ್ಸ್ ಮಾಡಿ ಮಾಹಿತಿಗಳನ್ನು ತೆಗೆದುಕೊಂಡಿದ್ದೇನೆ, ಇದಾದ ಮೇಲೆ ಭಗವಂತನ ದಯೆಯಿಂದ ಮಳೆಯಾಗಿದೆ. ಸ್ವಲ್ಪ ಬಿತ್ತನೆಗಳಾಗಿಲ್ಲ, ಈಗ ಏನು ಬಿತ್ತನೆ ಮಾಡುವುದಕ್ಕೆ ಸಾಧ್ಯ ಇದೆ ಅದನ್ನು ಬಿತ್ತನೆ ಮಾಡುವುದಕ್ಕೆ ಪ್ರಾರಂಭ ಮಾಡಿದ್ದಾರೆ. ನಮ್ಮ ನಾರ್ಮ್ಸ್ ಪ್ರಕಾರ ಕೆಲವು ಪರಿಹಾರ ಕೊಡಬೇಕು, ಅದು ಸಿಕ್ಕಿಲ್ಲವೆಂದು ನೀವು ಹೇಳಿದರೆ ರೆವಿನ್ಯೂ ಮಂತ್ರಿಗಳ ಜೊತೆ ನಾನು ಬರುತ್ತೇನೆ. ಡಿ.ಸಿ. ಹಾಗೂ ಸಂಬಂಧಪಟ್ಟ ಅಧಿಕಾರಿಗಳನ್ನು ಕೂರಿಸಿಕೊಳ್ಳೋಣ ಎರಡೆರಡು ಗಂಟೆ ಒಂದೊಂದು ಕಡೆ ಚೆಕ್ ಮಾಡೋಣ. ಅಲ್ಲಿಯೇ ಸ್ಥಳದಲ್ಲಿ ಹಣವನ್ನು ಬಿಡುಗಡೆ ಮಾಡಿ ಅಧಿಕಾರಿಗಳಿಗೆ ಸರಿಯಾಗಿ ಸೂಚನೆ ಕೊಟ್ಟು ವಾರ್ನ್ ಮಾಡಿ ಬರೋಣ. ನಾವು ನೀವು ಒಟ್ಟಿಗೆ ಮೂರು ನಾಲ್ಕು ಜನ ಒಟ್ಟಿಗೆ ಒಂದು ಹೆಲಿಕಾಪ್ಟರ್ ಮಾಡಿಕೊಂಡೋ ಅಥವಾ ಬೈ ರೋಡೋ ಎಲ್ಲಾ ಕಡೆ ಟ್ರೈನ್ ಇದೆ ಹೋಗೋಣ. ನೀವು ಎಲ್ಲಿ ಹೇಳುತ್ತೀರೋ ನಾನು ಬರುತ್ತೇನೆ. ನಾನು ಹಾಗೂ ರೆವಿನ್ಯೂ ಮಂತ್ರಿಗಳು ಒಟ್ಟಾಗಿ ಬಂದು ಆ ಸಮಸ್ಯೆಯನ್ನು ಸ್ಥಳದಲ್ಲಿಯೇ ಬಗೆಹರಿಸಿ ಕೊಡುತ್ತೇನೆ. ಏಕೆಂದರೆ ಅಧಿಕಾರಿಗಳು over all war foot ನಲ್ಲಿ ಕೆಲಸ ಮಾಡುತ್ತಿರಬೇಕಾದರೆ, ಏನೂ ಆಗಿಲ್ಲ ಎನ್ನುವ ಮೆಸೇಜ್ ಹೋಗುವುದರ ಬದಲಿಗೆ ಪರಿಹಾರ ಹುಡುಕಬೇಕೆಂದು ನಿಮ್ಮ ಕಳಕಳಿ ಇದೆ. ನಾನು ನಿಮ್ಮ ಜೊತೆಗೆ ಬರುತ್ತೇನೆ, ಮಾಡೋಣ. ಸ್ಥಳದಲ್ಲಿಯೇ ಅದಕ್ಕೆ ಪರಿಹಾರ ಹುಡುಕೋಣ.

**ಶ್ರೀ ಸಿದ್ದರಾಮಯ್ಯ:** ಮಾನ್ಯ ಅಧ್ಯಕ್ಷರೆ, 11 ನೇ ತಾರೀಖು ಆಗಸ್ಟ್ ತಿಂಗಳಲ್ಲಿ ಬರಗಾಲ ಘೋಷಣೆ ಆಗಿದೆ. 11.08.09 ರಲ್ಲಿ ಘೋಷಣೆ ಆಗಿ ಇವತ್ತಿಗೆ ಈಗಾಗಲೇ ಒಂದು ತಿಂಗಳ ಮೇಲಾಯಿತು. ನಾವು ಒಂದು

ತಿಂಗಳಲ್ಲಿ ಏನು ಮಾಡಿದ್ದೇವೆಂದು ಹೇಳಬೇಕು. ಮಾನ್ಯ ಮುಖ್ಯಮಂತ್ರಿಗಳು ಟೆಲಿ conference ಮಾಡಿರುವುದು ಒಂದು ಬಿಟ್ಟರೆ, ಯಾವ ಜಿಲ್ಲೆಗಳಿಗೆ ಹೋಗಿ ನೀವು ಮೀಟಿಂಗ್‌ಗಳನ್ನು ಮಾಡಿದ್ದೀರಿ, ಏನು ಮಾಹಿತಿ ತೆಗೆದುಕೊಂಡಿದ್ದೀರಿ? ಏನು ಕಾರ್ಯಕ್ರಮ ಮಾಡುವುದಕ್ಕೆ ಹೋಗಿದ್ದೀರಿ? ಅವರು ಎರಡು – ಮೂರು ಜಿಲ್ಲೆಗಳಿಗೆ ಹೋಗಿದ್ದಾರೆ, ನಮ್ಮ ಜಿಲ್ಲೆಗೆ ಬರುತ್ತೇನೆಂದು ಕ್ಯಾನ್ಸಲ್ ಮಾಡಿಬಿಟ್ಟರು. ನಮ್ಮ ಡಿವಿಷನ್‌ನಲ್ಲಿ ಎಲ್ಲಿಯೂ ಹೋಗಿಲ್ಲ. ಮಾಡಿರುವುದು ನಿಜ ಬರಲಿಲ್ಲ ಆ ಮೇಲಾದರೂ ಹೋಗಬಹುದಿತ್ತು. ನೀವು ಮೈಸೂರು ಡಿವಿಷನ್‌ಗೆ ಬರಲೇ ಇಲ್ಲ. ಚಾಮರಾಜನಗರ ನೋಡಿಕೊಳ್ಳುವವರು ಯಾರು? ಮೈಸೂರು ತಾಲ್ಲೂಕಿನಲ್ಲಿ ಬರಗಾಲ, ನಂಜನಗೂಡು ತಾಲ್ಲೂಕಿನಲ್ಲಿ ಬರಗಾಲ, ದೊಡ್ಡಕವಲಂದೆ ಹೋಬಳಿ, ನೀವು ಹೊಸದಾಗಿ ಅಡಿಷನಲ್ಲಾಗಿ ಸೇರಿಸುತ್ತೇನೆಂದು ಹೇಳಿದಿರಿ. ಅದು ಯಾವುದೂ ಹೇಳಲೇ ಇಲ್ಲ. ಏನೂ ಮಾಡಲಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಒಂದು ಜಿಲ್ಲೆಗೂ ಹೋಗಲಿಲ್ಲ. ಎಲ್ಲೂ ಹೋಗಿ ಡಿಸಿಗಳ conference ಮಾಡಲಿಲ್ಲ. ಕಮಿಟಿಗಳು ಮಾಡಲಿಲ್ಲ, ಇವತ್ತೇ ಕಮಿಟಿಗಳನ್ನು ಇಶ್ಯೂ ಮಾಡಿ. draught relief committee ಗಳಿಗೆ ಇವತ್ತೇ ಹೊಸದಾಗಿ ಆರ್ಡರ್ ಇಶ್ಯೂ ಮಾಡಿ. ಜಿಲ್ಲಾವಾರು ಎಷ್ಟೆಷ್ಟು ದುಡ್ಡು ಬಿಡುಗಡೆ ಮಾಡಿದ್ದೀರಿ ಎಂದು ಹೇಳಿ. ತಾಲ್ಲೂಕುವೈಸ್ ಎಷ್ಟು ಬಿಡುಗಡೆ ಮಾಡಿದ್ದೀರಿ ಎಂದು ಹೇಳಿ. ಏನೂ ಮಾಡದೆ, ಮಾನ್ಯ ಮುಖ್ಯಮಂತ್ರಿಗಳು ಕರೆಯುತ್ತಾರೆ ಜೊತೆಯಲ್ಲಿ ಹೋಗೋಣ. ನನ್ನದೇನೂ ತಕರಾರು ಇಲ್ಲ. ಅಲ್ಲಿಗೆ ಹೋಗಿ ದುಡ್ಡು ಕೊಡುವುದಕ್ಕಾಗುತ್ತಾ? ಬೆಳೆ ಎಲ್ಲಾ ಅಸೆಸ್ ಮಾಡಿಸಿ. ತೊಗರಿ ಬೆಳೆ ನಷ್ಟ ಆಗಿದೆ. ಹಿಂದೆ ಎಲ್ಲಾ ತೊಗರಿ ಬೆಳೆ ನಷ್ಟ ಆಗಿದ್ದಕ್ಕೆ ಪರಿಹಾರ ಕೊಟ್ಟಿರುವಂತಹ ಉದಾಹರಣೆಗಳು ಇವೆ. ಬೇರೆ ಬೇರೆ ನಷ್ಟಗಳಿಗೆ ಪರಿಹಾರ ಕೊಟ್ಟಿರುವ ಉದಾಹರಣೆಗಳಿವೆ. ಕೊಡಿ. ನಾವು ರಿವೈಸ್ ಮಾಡಿ ಎಂದು ಹೇಳಿದೆವು.

**ಶ್ರೀ ಹೆಚ್.ಸಿ. ಬಾಲಕೃಷ್ಣ** : ಮಾನ್ಯ ಅಧ್ಯಕ್ಷರೆ, ಅವರಂತೂ ಕೊಡುವುದಿಲ್ಲ. ಕೊನೇ ಪಕ್ಷ ನೀವಾದರೂ ಜೊತೆಯಲ್ಲಿ ಕರೆದುಕೊಂಡು ಹೋಗಿ ಕೊಡಿಸಿದರೆ ರೈತರಿಗೆ ಅನುಕೂಲವಾಗಲಿ. ಅವರು ಕೊಡುವುದಿಲ್ಲ, ನಾಳೆ ಕೇಳಿದರೆ ನೀವು ಬರಲಿಲ್ಲ, ನಾವು ಕೊಡಲಿಲ್ಲವೆಂದು ಹೇಳುತ್ತಾರೆ.

ನಾಳೆಯಿಂದ ನೀವು ಪ್ರೋಗ್ರಾಂ ಹಾಕಿಕೊಂಡು ಜೊತೆಯಲ್ಲಿ ಕರೆದುಕೊಂಡು ಹೋಗಿ.

**ಶ್ರೀ ಸಿದ್ದರಾಮಯ್ಯ:** ಅವರ ಜೊತೆ ಹೋದರೆ ಜನ ನಮ್ಮನ್ನೂ ನಂಬುವುದು ಬಿಟ್ಟು ಬಿಡುತ್ತಾರೆ. ಆ ಸರ್ಕಾರ ಬರ ನಿಭಾಯಿಸುವುದರಲ್ಲಿ ಸಂಪೂರ್ಣ ವಿಫಲವಾಗಿದ್ದಾರೆ. ಇವತ್ತಿನವರೆಗೆ ಇವರು ಒಂದು ರೂಪಾಯಿ ಖರ್ಚು ಮಾಡಿಲ್ಲ. ಕಳೆದ ವರ್ಷವೂ ಖರ್ಚು ಮಾಡಿಲ್ಲ, ಈ ವರ್ಷವೂ ಖರ್ಚು ಮಾಡಿಲ್ಲ. ಮುಂದೆಯೂ ಖರ್ಚು ಮಾಡುವುದಕ್ಕೆ ಇವರು ಯಾವುದೇ ಕಾರ್ಯಕ್ರಮ ಹಾಕಿಕೊಂಡಿಲ್ಲ. ಒಂದು contingency programme ಇಲ್ಲ. ಈಗ ಏನು ಮಾಡಬೇಕೆಂಬ ಕಾರ್ಯಕ್ರಮ ಇಲ್ಲ. ಮಾನ್ಯ ಮುಖ್ಯಮಂತ್ರಿಗಳು ಮತ್ತು ಈ ಸರ್ಕಾರ ಬರೀ ಮಾತುಗಳು ಹೇಳುತ್ತಿದ್ದಾರೆ ಹೊರತು ರೈತರ ಪರವಾಗಿದ್ದೇವೆ, ಬಡವರ ಪರವಾಗಿದ್ದೇವೆ, ಹಳ್ಳಿಗಾಡಿನವರ ಪರವಾಗಿದ್ದೇವೆ, ಹಳ್ಳಿಗಳ ಬಗ್ಗೆಯೇ ನಾವು ಇರುವುದು, ಹಳ್ಳಿಗಳಿಗೋಸ್ಕರವೇ ನಾವು ಇರುವುದು, ರೈತರ ಮೇಲೆ ಪ್ರಮಾಣ ವಚನ ಸ್ವೀಕಾರ ಮಾಡಿದ್ದೇವೆಂದರೆ, ರೈತರ ಹೊಟ್ಟೆಯೂ ತುಂಬುವುದಿಲ್ಲ, ರೈತರ ಕಷ್ಟವೂ ಪರಿಹಾರವಾಗುವುದಿಲ್ಲ, ನಾವು ಬಹಳ ಗದ್ಗದಿತವಾಗಿ ಮಾತನಾಡಿದರೂ ಅತ್ತು ಬಿಟ್ಟರೂ ಅವರಿಗೇನೂ ಸಿಗುವುದಿಲ್ಲ. ಆ ಕಾರಣದಿಂದ ಈ ಸರ್ಕಾರ ಸಂಪೂರ್ಣ ವಿಫಲವಾಗಿದೆ. ಈ ಸರ್ಕಾರ ರೈತರ ಪರವಾಗಿಲ್ಲ, ಬರಗಾಲ ಎದುರಿಸುವುದರಲ್ಲಿ ಸಂಪೂರ್ಣ ಫೇಲಾಗಿದೆ. ನಾವು ಇಷ್ಟೆಲ್ಲಾ ಒತ್ತಾಯ ಮಾಡಿದರೂ ಕೂಡ, ಇವತ್ತಿಗೂ ಕೂಡ ಸರ್ಕಾರ ಕೆಲಸ ಮಾಡುವುದಕ್ಕೆ ತಯಾರಾಗಿಲ್ಲ. ಈ ಸರ್ಕಾರದ ಬೇಜವಾಬ್ದಾರಿತನವನ್ನು ರೈತ ವಿರೋಧಿ ನೀತಿಯನ್ನು ವಿರೋಧ ಮಾಡಿ ನಾವು ವಾಕ್‌ಔಟ್ ಮಾಡುತ್ತಿದ್ದೇವೆ.

**(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಶಾಸಕರು ವಾಕ್‌ಔಟ್ ಮಾಡಿ ಸದನದಿಂದ ಹೊರನಡೆದರು)**

**ಶ್ರೀ ಬಿ.ಎಸ್. ಯಡಿಯೂರಪ್ಪ :** ಮಾನ್ಯ ಅಧ್ಯಕ್ಷರೆ, ಇದು ಕೇವಲ ರಾಜಕಾರಣ ಮಾಡುವುದಕ್ಕೋಸ್ಕರ ನಾನು ಅವರಿಗೆ ಏನು ಹೇಳಿದೆ, ನಾನು ಒಬ್ಬ ಮುಖ್ಯಮಂತ್ರಿಯಾಗಿ ತಯಾರಾಗಿದ್ದೇನೆ, ಎಲ್ಲೆಲ್ಲಿ ಸವಲತ್ತುಗಳು ಸಿಕ್ಕಿಲ್ಲ ಹೇಳಿ ನಾನು ನಿಮ್ಮ ಜೊತೆಯಲ್ಲಿ ಬರುತ್ತೇನೆ, ಸ್ಥಳದಲ್ಲಿಯೇ ಪರಿಹಾರ ಕೊಡುವುದಕ್ಕೆ ನಾನು ಸಿದ್ದನಿದ್ದೇನೆ ಎಂದು ಹೇಳಿದೆ. ಆದರೆ ಕೇಂದ್ರ ಸರ್ಕಾರಕ್ಕೆ ಇದುವರೆಗೆ ಇಷ್ಟು ಮನವಿಗಳನ್ನು ಸಲ್ಲಿಸಿದರೂ ಸಹ study teem

ಬಂದರೂ ಇದುವರೆಗೆ ಒಂದು ರೂಪಾಯಿ ಹಣ ಬಿಡುಗಡೆ ಆಗಲಿಲ್ಲ. ಸಾಂಕೇತಿಕವಾಗಿ 100 ಕೋಟಿ ಚಿಲ್ಲರೆ ಒಂದು installment ,ಕೊಟ್ಟಿರುವುದು ಬಿಟ್ಟರೆ ನಮ್ಮ ಬೇಡಿಕೆಗಳಿಗೆ ಯಾವುದಕ್ಕೂ ಸ್ಪಂದಿಸಲಿಲ್ಲ. ಹೋದ ವರ್ಷವೂ ನಾವು ಕೇಳಿದೆವು. ಯಾವುದೇ ಹಣ ಬಿಡುಗಡೆ ಮಾಡಲಿಲ್ಲ. ಕೇಂದ್ರ ಸರ್ಕಾರ ಬರಗಾಲ ಹಾಗೂ ಅತಿವೃಷ್ಟಿ ವಿಷಯದಲ್ಲಿ ಮಲತಾಯಿ ಧೋರಣೆ ಅನುಸರಿಸುತ್ತಿದೆ, ಹಣ ಬಿಡುಗಡೆ ಮಾಡುತ್ತಿಲ್ಲ, ಒಂದು ನಿಯೋಗ ಹೋಗಿ ಮನವಿ ಮಾಡೋಣ ಬನ್ನಿ ಎಂದರೆ ನಿಯೋಗದಲ್ಲಿ ಬರುವುದಕ್ಕೆ ಸಿದ್ಧರಿಲ್ಲ. ನಾವು ಎಲ್ಲಿಂದ ತರಬೇಕು, ನಮ್ಮ ಹಣಕಾಸಿನ ಇತಿಮಿತಿಯಲ್ಲಿ ಕೇಂದ್ರ ಸರ್ಕಾರ ಈ ಪರಿಹಾರ ಕೊಡುವುದಕ್ಕೋಸ್ಕರ ಏನು ನಿಗಧಿ ಮಾಡಿದೆ, ಇದುವರೆಗೆ ಏನು ನಡೆದುಕೊಂಡು ಬಂದಿದೆ ಅದರಂತೆ ನಾವು ಪರಿಹಾರ ಕೊಡುವುದಕ್ಕೆ ಸಿದ್ಧರಿದ್ದೇವೆಂದು ಹೇಳಿದ್ದೇವೆ. ಬೀದರ್, ಗುಲ್ಬರ್ಗ ಹಾಗೂ ರಾಯಚೂರು ಆ ಭಾಗದ ಜಿಲ್ಲಾಧಿಕಾರಿಗಳ ಜೊತೆ ನಾನೇ ಬರದ ಬಗ್ಗೆ ಹಾಗೂ ಅತೀವೃಷ್ಟಿ ಬಗ್ಗೆ ಚರ್ಚೆ ಮಾಡಿದ್ದೇನೆ. ಮೊನ್ನೆ ಕಳೆದ ವಾರ ಎಲ್ಲಾ ಜಿಲ್ಲಾಧಿಕಾರಿಗಳು ಹಾಗೂ ಮುಖ್ಯ ಕಾರ್ಯದರ್ಶಿಗಳ ಜೊತೆ ವೀಡಿಯೋ conference ಮಾಡಿದ್ದೇನೆ. ವಾಸ್ತವಿಕ ಸ್ಥಿತಿ ಏನಿದೆ ಎಂದು ತಿಳಿದುಕೊಂಡಿದ್ದೇನೆ. ಬಹಳ ಕಡೆ ಮಳೆ ಆಗಿದ್ದು ಬಿತ್ತನೆ ಕೆಲಸ ಪ್ರಾರಂಭ ಆಗುತ್ತಿದೆ ಎಂದು ಹೇಳಿದ್ದಾರೆ. ಬಹುತೇಕ ಕೆಲವು ಬೆರಳೆಣಿಸುವಷ್ಟು ಜಾಗ ಬಿಟ್ಟರೆ, ಇನ್ನು ಎಲ್ಲಾ ಕಡೆ ಕೂಲಿ ಕಾರ್ಮಿಕರಿಗೆ ಯಾವುದೇ ಸಮಸ್ಯೆ ಇಲ್ಲ. ಗುಳೆ ಹೋಗುವುದು ತಪ್ಪಿದೆ ಎನ್ನುವಂತಹ ಮಾತನ್ನು ಹೇಳಿದ್ದಾರೆ. ಉತ್ತಮವಾದ ಬಿತ್ತನೆ ಬೀಜ ಹಾಗೂ ರಸಗೊಬ್ಬರಗಳನ್ನು ನಾವು ಕೊಟ್ಟಿದ್ದೇವೆ. ಇಷ್ಟೆಲ್ಲಾ ಮೊದಲಬಾರಿಗೆ ಯಾವುದೇ complaint ಇಲ್ಲದೆ, ಜನ ನೆಮ್ಮದಿಯಿಂದ ಮುಂದೆ ಹೋಗುತ್ತಿರುವುದು, ತತಕ್ಷಣಕ್ಕೆ ಪರಿಹಾರಗಳನ್ನು ಕೊಟ್ಟು ಇಷ್ಟೆಲ್ಲಾ ಆದ ಮೇಲೂ ಸಹ ರಾಜಕಾರಣ ಮಾಡುವುದಕ್ಕೆ ವಾಕ್‌ಔಟ್ ಮಾಡುವುದಾದರೆ, ಯಾವುದೇ ಆರೋಪ ಮಾಡಬೇಕಾದರೆ ಪ್ರಾಮಾಣಿಕತೆ ಬೇಕು. ವಾಸ್ತವಿಕ ಸ್ಥಿತಿ ಏನಿದೆ ಎಂದು ಜನರಿಗೆ ಗೊತ್ತಿದೆ. ನಾನು ಈಗಲೂ ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ವಿನಂತಿ ಮಾಡುತ್ತೇನೆ, ಮಾನ್ಯ ರೇವಣ್ಣನವರಿಗೆ ವಿನಂತಿ ಮಾಡುತ್ತೇನೆ, ನೀವು ಇದರಲ್ಲಾದರೂ ಕಾಂಗ್ರೆಸ್ ಪಕ್ಷದ ಜೊತೆ ಕೈ ಜೋಡಿಸಬೇಡಿ. ಯಾವುದೇ ವಿಷಯ ಇದ್ದರೂ ಅನಗತ್ಯವಾಗಿ ಅವರು ರಾಜಕಾರಣ ಮಾಡುವುದು

ಏನಿದೆ, ಇದು ಯಾರಿಗೂ ಶೋಭೆ ತರುವಂಥದ್ದು ಅಲ್ಲ. ನಾವು ಕಾಂಗ್ರೆಸ್ ಮುಖಂಡರಿಂದ ಇದನ್ನು ನಿರೀಕ್ಷೆಯೂ ಮಾಡಿರಲಿಲ್ಲ. ಆಂಧ್ರದಲ್ಲಿ ಹಾಗಾಗಿದೆ, ತಮಿಳುನಾಡಿನಲ್ಲಿ ಹಾಗಾಗಿದೆ, ಆಂಧ್ರಪ್ರದೇಶ ಹಾಗೂ ತಮಿಳುನಾಡು ಜಿಲ್ಲೆಗಳಿಗೆ ಕೊಡುತ್ತಿರುವ ಸೌಲಭ್ಯ ನಮಗೇಕೆ ಕೊಡುತ್ತಿಲ್ಲ? ನಮಗೇಕೆ ಹಣ ಬರುತ್ತಿಲ್ಲ? ನಾವೇನು ಕೇಳುತ್ತಿಲ್ಲವಾ, ಮನವಿ ಅರ್ಪಿಸುತ್ತಿಲ್ಲವಾ? ಮಾನ್ಯ ಪ್ರಧಾನ ಮಂತ್ರಿಗಳಿಗೆ ಕಂಡಿಲ್ಲವಾ, ಕೇಂದ್ರ ಕೃಷಿ ಸಚಿವರಿಗೆ ಕಂಡಿಲ್ಲವಾ? ನಮ್ಮ ಸಮಸ್ಯೆಗಳನ್ನು ಹೇಳಿಲ್ಲವಾ? ಆದರೆ ಈ ರೀತಿ ಕೇಂದ್ರ ಸರ್ಕಾರ ಇವತ್ತೂ ಸಹ ಬರ ಹಾಗೂ ಅತೀವೃಷ್ಟಿ ವಿಷಯದಲ್ಲಿ ಮಲತಾಯಿ ಧೋರಣೆ ಅನುಸರಿಸುತ್ತಿರುವುದರಿಂದ ಈ ಪರಿಸ್ಥಿತಿ ಬಂದಿದೆ. ಆದರೂ ಸಹ ಸರ್ಕಾರದ ಬೊಕ್ಕಸಕ್ಕೆ ಎಷ್ಟೇ ಭಾರ ಬಿದ್ದರೂ ಪರವಾಗಿಲ್ಲ, ಬಿತ್ತನೆ ಬೀಜ, ರಸಗೊಬ್ಬರ, ಕೃಷಿ ಕಾರ್ಮಿಕರಿಗೆ ಉದ್ಯೋಗವಕಾಶಗಳನ್ನು ಕೊಡುವುದು, ಕುಡಿಯುವ ನೀರಿನ ವ್ಯವಸ್ಥೆ ಮಾಡುವಂಥದ್ದು, ಗಂಜಿ ಕೇಂದ್ರಗಳ ಅಗತ್ಯ ಇರುವಂತಹ ಕಡೆ ಗಂಜಿ ಕೇಂದ್ರಗಳನ್ನು ತೆಗೆಯುವುದಕ್ಕೆ ನಾವು ಬದ್ಧರಾಗಿದ್ದೇವೆ. ಕಂದಾಯ ಸಚಿವರು ವಿವರವಾದ ಉತ್ತರವನ್ನು ಕೊಟ್ಟ ಮೇಲೂ ಏನೂ ಉತ್ತರ ಕೊಟ್ಟಿಲ್ಲ, ಇದು ಶೂನ್ಯ ಎಂದು ವಾಕ್ ಔಟ್ ಮಾಡುವುದೇ ಅವರ ಉದ್ದೇಶ ಇದ್ದರೆ ನಮ್ಮದೇನೂ ಅಭ್ಯಂತರವಿಲ್ಲ. ಅದರೆ ನಾನು ಇವರಿಂದ ಇದನ್ನು ನಿರೀಕ್ಷೆ ಮಾಡಿರಲಿಲ್ಲ. ಇವರು ಕೇವಲ ರಾಜಕಾರಣ ಮಾಡುವುದಕ್ಕೆ ವಾಕ್ ಔಟ್ ಮಾಡುತ್ತಿದ್ದಾರೆ ಹೊರತು, ರೈತರ ಬಗ್ಗೆ ಇವರಿಗೆ ಕಳಕಳಿ ಇದ್ದಿದ್ದರೆ ಅವರು ಈ ರೀತಿ ವರ್ತನೆ ಮಾಡುತ್ತಿರಲಿಲ್ಲ. ಗುಲ್ಬರ್ಗದಲ್ಲಿ ಸಭೆ ಮಾಡಿದಾಗ 79% ಬರಗಾಲ ಇರುವ ಕಡೆ ಬಿತ್ತನೆ ಬೀಜಕ್ಕೆ ಸಬ್ಸಿಡಿ ಕೊಡುತ್ತಿದ್ದೇವೆ. ಇದನ್ನು ಯಾರು ಮಾಡಿದರು? NREGP ಅಡಿಯಲ್ಲಿ ಎಲ್ಲೆಲ್ಲಿ ಏನೇನು ಸಾಧ್ಯ ಇದೆಯೋ ಆ ಕಾಮಗಾರಿಗಳನ್ನು ತೆಗೆದುಕೊಂಡಿದ್ದೇವೆ. ಇವತ್ತಿನವರೆಗೆ 500 ಕೋಟಿ ಹಣ ಖರ್ಚು ಮಾಡಿದ್ದೇವೆ. NREGP work ಯಾರಿಗೆ ಆಗುತ್ತಿದೆ, ಬರಗಾಲದಲ್ಲಿ ಸಿಲುಕಿರುವಂತಹ ರೈತರಿಗೆ ಕೃಷಿ ಕಾರ್ಮಿಕರಿಗೆ ಉದ್ಯೋಗ ಕೊಡುವುದಕ್ಕೋಸ್ಕರ ಹಣವನ್ನು ಖರ್ಚು ಮಾಡುತ್ತಿದ್ದೇವೆ. ಹಿಂದೆ ಯಾವಾಗಲೂ, ಯಾವ ವರ್ಷದಲ್ಲಿಯೂ ಇಷ್ಟು ಹಣ ಖರ್ಚಾಗಿರಲಿಲ್ಲ. ಇವರು ನಮ್ಮಿಂದ ಮತ್ತೇನು ನಿರೀಕ್ಷೆ ಮಾಡುತ್ತಾರೆ?

**ಶ್ರೀ ಹೆಚ್. ಡಿ. ರೇವಣ್ಣ** : ಮಾನ್ಯ ಅಧ್ಯಕ್ಷರೆ, ಬರಗಾಲಕ್ಕೆ ಪರಿಹಾರ ಇಲ್ಲ. ಹೊಸ ಸಾಲ ಮನ್ನ ಮಾಡುತ್ತಾರೆಂದು ನಾವು ಇದ್ದೆವು. ಈ ಸರ್ಕಾರ ಸುಳ್ಳಿನ ಸರ್ಕಾರ ಎಂದು ಹೇಳುತ್ತಿದ್ದೇನೆ.

**(ಈ ಹಂತದಲ್ಲಿ ಜೆಡಿಎಸ್ ಶಾಸಕಾಂಗ ಪಕ್ಷದ ಸದಸ್ಯರು ವಾಕ್‌ಔಟ್ ಮಾಡಿ ಸದನದಿಂದ ಹೊರ ನಡೆದರು)**

**ಶ್ರೀ ಆರ್. ಅಶೋಕ್ (ಸಾರಿಗೆ ಸಚಿವರು)**: ಮಾನ್ಯ ಅಧ್ಯಕ್ಷರೆ, ನಿಯಮ 191ರ ಪ್ರಕಾರ ನಾನು ತಮಗೆ ಒಂದು ನೋಟಿಸ್ ಕೊಟ್ಟಿದ್ದೇನೆ. ನಿನ್ನೆ ಒಂದು ಪ್ರಿವಿಲೇಜ್ ನೋಟಿಸ್ ಕೊಟ್ಟಿದ್ದೇನೆ. ನಾನು ಮತ್ತು ಸನ್ಮಾನ್ಯ ಬಚ್ಚೇಗೌಡರು ಇದಕ್ಕೆ ಸಹಿ ಹಾಕಿದ್ದೇವೆ. ಇಡೀ ಸದನಕ್ಕೆ ನಾಯಕರಾಗಿರುವವರ ಬಗ್ಗೆ ಇಡೀ ಸದನಕ್ಕೆ ಗೌರವ ಇದೆ, ಅದೇ ರೀತಿ ವಿರೋಧ ಪಕ್ಷದ ನಾಯಕರ ಬಗ್ಗೆ ನಮಗೂ ಗೌರವ ಇದೆ. ಈ ಸದನದ ಪ್ರತಿಯೊಬ್ಬರಿಗೂ ಅವರದೇ ಆದ ಗೌರವ ಇದೆ. ಈ ಸದನದ ನಾಯಕರ ಬಗ್ಗೆ ಒಂದು ರೀತಿ ಕೀಳು ಮಟ್ಟದ ಪದವನ್ನು ಪತ್ರಿಕಾ ಹೇಳಿಕೆಯಲ್ಲಿ ಉಪಯೋಗಿಸಿದ್ದಾರೆ. ನನ್ನ ಇತಿಹಾಸದಲ್ಲಿ ಆ ತರಹದ ಮಾತುಗಳು ನಮ್ಮ ಬಾಯಿಯಿಂದ ಬಂದಿಲ್ಲ. ಈ ರಾಜ್ಯದ ಮಾಜಿ ಮುಖ್ಯಮಂತ್ರಿಗಳು ಒಬ್ಬರು ಈ ತರಹದ ಪದವನ್ನು ಬಳಕೆ ಮಾಡಿ ಇಡೀ ರಾಜ್ಯದ ಜನತೆಗೆ ಅಗೌರವ ತಂದಿದ್ದಾರೆ. ಸಂಸದೀಯ ನಡವಳಿಕೆ ಏನಿದೆ, ನಮ್ಮ ಭಾಷೆ ಏನಿದೆ ನಮ್ಮ ಭಾಷೆ ಎಲ್ಲಿಯವರೆಗೆ ಹೋಗುತ್ತದೆ ಎಂದು ನಾವು ಜನಸಾಮಾನ್ಯರಿಗೆ ಬಹಳ ಬುದ್ಧಿ ಹೇಳುತ್ತೇವೆ. ಹಾಗಿರಬೇಕು, ಜನಸಾಮಾನ್ಯರು ಹೀಗಿರಬೆಕು ನಮ್ಮ ಶಿಕ್ಷಣ ವ್ಯವಸ್ಥೆ ಹೀಗಿರಬೇಕು ಎಂದು ನಾವು ಎಲ್ಲರಿಗೂ ಬುದ್ಧಿ ಹೇಳುತ್ತೇವೆ.

**(ಈ ಹಂತದಲ್ಲಿ ಜೆಡಿಎಸ್ ಶಾಸಕಾಂಗ ಪಕ್ಷದ ಸದಸ್ಯರು ಪುನ: ಸದಸಕ್ಕೆ ವಾಪಸ್ಸಾದರು)**

**4.30 PM**

**ಶ್ರೀ ಹೆಚ್. ಡಿ. ರೇವಣ್ಣ** : ಒಂದು ನಿಮಿಷ ನಾನು ಮಾತನಾಡುತ್ತೇನೆ.

**(ಗೊಂದಲ)**

**ಶ್ರೀ ಆರ್. ಅಶೋಕ್** : ಈ ಸದನಕ್ಕೆ ಒಂದು ವಿಶೇಷವಾದ ಗೌರವವಿದೆ ಮತ್ತು ಸದನದ ಸಭಾಧ್ಯಕ್ಷರಾದ ತಮಗೆ ಒಂದು ವಿಶೇಷವಾದ ಗೌರವ ಇದೆ.

ಸಭಾನಾಯಕರಾದ ಮುಖ್ಯಮಂತ್ರಿಗಳ ಬಗ್ಗೆ ಒಬ್ಬ ಮಾಜಿ ಮುಖ್ಯಮಂತ್ರಿಗಳು ಬಳಸಿರುವ ಪದಗಳು ಸರಿಯಲ್ಲ.

**ಶ್ರೀ ಹೆಚ್. ಸಿ. ಬಾಲಕೃಷ್ಣ :** ಮಾನ್ಯ ಅಧ್ಯಕ್ಷರೆ, ಅವರು ಕೂಡ ಸದನದ ಹೊರಗೆ ಈ ವಿಷಯದ ಬಗ್ಗೆ ಪ್ರಸ್ತಾಪ ಮಾಡಲಿ. ಅದನ್ನು ಬಿಟ್ಟು ಸದನದಲ್ಲಿ ಆ ವಿಷಯ ಪ್ರಸ್ತಾಪ ಮಾಡುವುದು ಒಳ್ಳೆಯದಲ್ಲ. ಅವರೂ ಬೇಕಾದರೆ ಪ್ರೆಸ್ ಮೀಟ್ ಮಾಡಿ ಈ ಬಗ್ಗೆ ಚರ್ಚೆ ಮಾಡಲಿ. ಅವರಿಗೂ ಮೀಡಿಯಾ ಇರುವುದರಿಂದ ಒಂದು ಪ್ರೆಸ್ ಮೀಟ್ ಕರೆದು ಅವರೂ ಈ ಬಗ್ಗೆ ಹೇಳಿಕೊಳ್ಳಲಿ.

**(ಗೊಂದಲ)**

**ಅಧ್ಯಕ್ಷರು:** ನೋಡಿ ಅಶೋಕ್‌ರವರೆ, ಬಚ್ಚೇಗೌಡರೆ ತಾವುಗಳೇನು ಈಗ ಕಜಣುಣುಂಟಿ ಕೊಟ್ಟಿದ್ದೀರಿ. ಅದನ್ನು ನೋಡಿ ಪರಿಶೀಲನೆ ಮಾಡಿ ಈ ಬಗ್ಗೆ ತೆಗೆದುಕೊಳ್ಳುತ್ತೇನೆ.

**ಶ್ರೀ ಹೆಚ್. ಸಿ. ಬಾಲಕೃಷ್ಣ :** ಮಾನ್ಯ ಅಧ್ಯ ಕ್ಷರೆ, ಹೊರಗೆ ಅವರಿಗೂ ಕೂಡ ಮೀಡಿಯಾ ಇರುವುದರಿಂದ ಪ್ರೆಸ್ ಮಿಟ್ ಮಾಡಿ ಈ ಬಗ್ಗೆ ಹೇಳಿಕೊಳ್ಳಲಿ. ಅದಕ್ಕೇನೂ ನಮ್ಮ ತಕರಾರಿಲ್ಲ.

**ಶ್ರೀ ಬಿ. ಎನ್. ಬಚ್ಚೇಗೌಡ :** ಮಾನ್ಯ ಅಧ್ಯಕ್ಷರೆ, * * * *

**(ಗೊಂದಲ)**

**ಶ್ರೀ ಹೆಚ್. ಸಿ. ಬಾಲಕೃಷ್ಣ :** ಸ್ವಾಮಿ, ಎಲ್ಲಾ ಮಂತ್ರಿಗಳು ಕುಮಾರಸ್ವಾಮಿಯವರ ಬಗ್ಗೆ ಮಾತನಾಡಿರುವುದನ್ನು ನೀವು ನೋಡಿದ್ದೀರಿ. ಎಲ್ಲರೂ ಮಾತನಾಡಿದ್ದಾರೆ. ಅವರೇನೋ ಹೇಳಿರುವುದು ವಿಶೇಷವೇನಲ್ಲ.

**ಅಧ್ಯಕ್ಷರು:** ಮಾನ್ಯ ಬಚ್ಚೇಗೌಡರೆ, ತಾವೇನು ಪಿಟಿಶನ್ ಕೊಟ್ಟಿದ್ದೀರಿ, ಅದನ್ನು ನೋಡಿ ಅದರ ಬಗ್ಗೆ ನಿರ್ಣಯವನ್ನು ನಾನು ತೆಗೆದುಕೊಳ್ಳುತ್ತೇನೆ.

**ಶ್ರೀ ಬಿ. ಎನ್. ಬಚ್ಚೇಗೌಡ :** ಮಾನ್ಯ ಅಧ್ಯಕ್ಷರೆ,

**(ಗೊಂದಲ)**

**ಅಧ್ಯಕ್ಷರು:** ಮಾನ್ಯ ಬಚ್ಚೇಗೌಡರೆ, ತಾವೇನು ಪಿಟಿಶನ್ ಕೊಟ್ಟಿದ್ದೀರಿ ಅದನ್ನು ನೋಡಿಕೊಂಡು I will take decision. Decision ತೆಗೆದುಕೊಂಡು ಅದರ ಬಗ್ಗೆ ನಿರ್ಣಯವನ್ನು ನಾನು ಕೊಡುತ್ತೇನೆ. ಈಗ ತಾವು ಕುಳಿತುಕೊಳ್ಳಿ.

**ಶ್ರೀ ಹೆಚ್. ಸಿ. ಬಾಲಕೃಷ್ಣ** : ಅಧ್ಯಕ್ಷರು ಹೇಳಿದರೂ ಕೂಡ ಮತ್ತೆ ಮತ್ತೆ ಎದ್ದು ನಿಂತುಕೊಂಡು ಮಾತನಾಡಬಾರದು ಎಂಬುದು ಅವರು ತಿಳಿದುಕೊಳ್ಳಬೇಕು.

**ಶ್ರೀ ಬಿ.ಎನ್. ಬಚ್ಚೇಗೌಡ** : ರೀ, ನಾವು ನಿಮ್ಮಿಂದ ಕಲಿಯಬೇಕಾಗಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಈ ಸದನದಲ್ಲಿ ನಮ್ಮ ನಾಯಕರು.

**ಶ್ರೀ ಹೆಚ್. ಸಿ. ಬಾಲಕೃಷ್ಣ** : ರೀ. ಸ್ವಾಮಿ, ಸದನದಲ್ಲಿ ಇಲ್ಲದೇ ಇರುವವರ ಬಗ್ಗೆ ಮಾತನಾಡುತ್ತಿದ್ದೀರಲ್ಲ. ಅವರಿಗೆ ನೀವು ನೋಟಿಸ್ ಕೊಟ್ಟಿದ್ದೀರ? ಮಾನ್ಯ ಅಧ್ಯಕ್ಷರೆ, ತಾವು ಈಗಾಗಲೇ ರೂಲಿಂಗ್ ಕೊಟ್ಟಿದ್ದರೂ ಕೂಡ ಮತ್ತೆ ಮತ್ತೆ ಎದ್ದು ನಿಂತು ಮಾತನಾಡುತ್ತೀದ್ದಾರಲ್ಲ. ಇದು ಸರಿಯೇ?

**ಅಧ್ಯಕ್ಷರು** : ಮಾನ್ಯ ಬಚ್ಚೇಗೌಡರೆ, ತಾವು ಕುಳಿತುಕೊಳ್ಳಿ. ನೀವು ಕೊಟ್ಟಿರುವ ಪಿಟಿಶನ್ ಪರಿಶೀಲಿಸಿ I will take decision.

**ಶ್ರೀ ಬಿ. ಎನ್. ಬಚ್ಚೇಗೌಡ** : ಒಬ್ಬ ಮುಖ್ಯಮಂತ್ರಿ ಬಗ್ಗೆ ಈ ರೀತಿಯ ಅವಹೇಳನಕಾರಿಯಾದ ಮಾತನಾಡಿರುವ ನಿಮ್ಮವರಿಗೆ ನಾಚಿಕೆಯಾಗಬೇಕು.

**ಶ್ರೀ ಹೆಚ್. ಸಿ. ಬಾಲಕೃಷ್ಣ:** ನಾನು ನಿಮ್ಮದೆಲ್ಲವನ್ನೂ ನೋಡಿದ್ದೇನೆ, ಸುಮ್ಮನೆ ಕುಳಿತುಕೊಳ್ಳಿ. ನಿಮಗೆ ನಾಚಿಕೆಯಾಗಬೇಕು. ನೀವು ಹೊರಗಡೆ ಮಾತನಾಡಿಲ್ಲವೇನ್ರಿ, ನೀವು ಹೊರಗಡೆ ಮಾತನಾಡಿಲ್ಲವಾ? ಎಷ್ಟು ಮಾತನಾಡಿದ್ದೀರಿ ಹೊರಗಡೆ ನೀವು.

**ಅಧ್ಯಕ್ಷರು** : ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಬಚ್ಚೇಗೌಡರೆ, ಪ್ಲೀಸ್, ದಯವಿಟ್ಟು ಕುಳಿತುಕೊಳ್ಳಿ. ತಾವೇನು ಪಿಟಿಶನ್ ಕೊಟ್ಟಿದ್ದೀರಿ, ಅದನ್ನು ನೋಡಿ I will take decision. ನಾನು ಅದರ ಬಗ್ಗೆ ನಿರ್ಣಯ ತೆಗೆದುಕೊಳ್ಳುತ್ತೇನೆ. ಆಮೇಲೆ ಡಿಸ್‌ಕಶನ್ ಮಾಡುವ ಅವಶ್ಯಕತೆ ಕಂಡುಬಂದರೆ ಅದರ ಡಿಸ್‌ಕಶನ್ ಮಾಡಲು ಅವಕಾಶ ಕೊಡುತ್ತೇನೆ. ಏಕೆಂದರೆ ಇವತ್ತು ನೀವು ಪಿಟಿಶನ್ ಕೊಟ್ಟಿದ್ದೀರಿ. I will take decision. ಈಗ ಮುಂದಿನ ವಿಷಯವನ್ನು ತೆಗೆದುಕೊಳ್ಳೋಣ.

**(ಗೊಂದಲ)**

**ಶ್ರೀ ಹೆಚ್. ಸಿ. ಬಾಲಕೃಷ್ಣ** : ಮಾನ್ಯ ಅಧ್ಯಕ್ಷರೆ, ಸಿದ್ದರಾಮಯ್ಯನವರು ಒಮ್ಮೆ ಹಂದಿಜ್ವರ ಬಂದಿದೆಯೆಂದು ಹೇಳಿದ್ದರೆ ಇವರು ಸಿದ್ದರಾಮಯ್ಯನವರಿಗೇ ಹಂದಿಜ್ವರ ಬರಲಿ ಎಂದು ಹೇಳಿದ್ದಾರೆ. ನೋಡಿ ಇವರೆಲ್ಲರೂ ಸುಸಂಸ್ಕೃತರೆ. ನಾವೇನು ಸುಸಂಸ್ಕೃತರಲ್ಲವೆ. ಇಂಥ ಮಾತು

ಆಡಿರುವ ಇವರು ಮಾತ್ರ ಸುಸಂಸ್ಕೃತರೆ? ಏನು, ಇವರೆಲ್ಲ ಮಾತನಾಡುವುದೆಲ್ಲವೂ ಸಂಸ್ಕೃತದಲ್ಲೇ ಬಿಡಿ. ನಾವೆಲ್ಲ ಇವರಿಗೆ ಸರಿಯಿಲ್ಲ.

**ಶ್ರೀ ಬಿ.ಎನ್. ಬಚ್ಚೇಗೌಡ** : ನೀವು ಇಂಥ ಪದ ಬಳಸುತ್ತೀರೇನ್ರಿ. ಗೂಂಡಾಗಿರಿ ಮಾಡುತ್ತೀರ.

**(ಗೊಂದಲ)**

**ಅಧ್ಯಕ್ಷರು** : ನೋಡಿ, ನನ್ನ ಅನುಮತಿ ಇಲ್ಲದೆ ನೀವು ಈ ರೀತಿ ಪರಸ್ಪರ ಮಾತನಾಡಬಾರದು. ಯಾರಾದರೂ ಮಾತನಾಡುವುದಿದ್ದರೆ ಸಭಾಧ್ಯಕ್ಷರ ಅನುಮತಿಯನ್ನು ಪಡೆದುಕೊಂಡು ಮಾತನಾಡಿ.

**ಶ್ರೀ ಹೆಚ್.ಸಿ. ಬಾಲಕೃಷ್ಣ** : ನೀವೇನು ಹೊರಗಡೆ ಮಾತನಾಡಿದ್ದೀರೆಂದು ಅದನ್ನೂ ಕೂಡ ನಾವು ಓದಿದ್ದೇವೆ. ಹೊಸಕೋಟೆಯಲ್ಲಿ ಹೋಗಿ ನೀವು ಕೇಳಿ. ಯಾರದ್ದೂ ಗೂಂಡಾಗಿರಿ ಎಂದು ಹೇಳುತ್ತಾರೆ. ನಮ್ಮದು ಗೂಂಡಾಗಿರಿಯೋ ಅಥವಾ ನಿಮ್ಮದು ಗೂಂಡಾಗಿರಿಯೋ ಎಂದು ಹೊಸಕೋಟೆಯ ಜನರು ಹೇಳುತ್ತಾರೆ. ನೀವು ಹೋಗಿ ಕೇಳಿ. ಮಾನ್ಯ ಅಧ್ಯಕ್ಷರೆ, ಹೊಸಕೋಟೆಯಲ್ಲಿ ಬಚ್ಚೇಗೌಡರು ಮಾಡುವಷ್ಟು ಗೂಂಡಾಗಿರಿಯನ್ನು ಬೇರೆ ಯಾರೂ ಮಾಡುವುದಿಲ್ಲ.

**ಶ್ರೀ ಬಿ.ಎನ್. ಬಚ್ಚೇಗೌಡ** : ಮಾನ್ಯ ಅಧ್ಯಕ್ಷರೆ, ನಾವು ಗೂಂಡಾಗಿರಿ ಮಾಡುತ್ತಿಲ್ಲ. ಇವರು ಗೂಂಡಾಗಿರಿ ಪ್ರವೃತ್ತಿಯನ್ನು ತೋರಿಸುತ್ತಿದ್ದಾರೆ.

**ಅಧ್ಯಕ್ಷರು:** ಬಚ್ಚೇಗೌಡರೆ, ಪ್ಲೀಸ್, ಇದನ್ನು ಇಲ್ಲಿಗೇ ಮುಗಿಸಿ. ಮುಂದಿನ ವಿಷಯ ತೆಗೆದುಕೊಳ್ಳೋಣ.

**ಶ್ರೀ ಹೆಚ್.ಸಿ. ಬಾಲಕೃಷ್ಣ:** ಹೊಸಕೋಟೆಯ ಜನ ಹೇಳುತ್ತಾರೆ. ಇವರು ಗೂಂಡಾಗಿರಿ ಮಾಡುತ್ತಾರೆಂದು. ಮರ್ಡರ್‌ಗಳನ್ನು ಮಾಡುತ್ತಾರೆ.

**ಶ್ರೀ ಬಿ.ಎನ್. ಬಚ್ಚೇಗೌಡರೆ:** ಮಾನ್ಯ ಅಧ್ಯಕ್ಷರೆ, . . .

**ಅಧ್ಯಕ್ಷರು:** ಬಚ್ಚೇಗೌಡರೆ, ಆಯಿತು, ಈಗ ಇದನ್ನು ಇಲ್ಲಿಗೇ ನಿಲ್ಲಿಸಿ. ನೀವು ಪಿಟಿಶನ್ ಏನು ಕೊಟ್ಟಿದ್ದೀರಿ, ಅದರ ಬಗ್ಗೆ ನಾನು ಪರಿಶೀಲನೆ ಮಾಡುತ್ತೇನೆ. I will take decision.

**ಶ್ರೀ ಬಿ.ಎನ್. ಬಚ್ಚೇಗೌಡ** : * * * *

**ಶ್ರೀ ಹೆಚ್. ಸಿ. ಬಾಲಕೃಷ್ಣ** : ಮಾನ್ಯ ಅಧ್ಯಕ್ಷರೆ, ನೀವು ರೂಲಿಂಗ್ ಕೊಟ್ಟಿದ್ದೀರಿ. ಆದರೂ ಕೂಡ ಇವರು ಮತ್ತೆ ಅದರ ಬಗ್ಗೆ ಚರ್ಚೆ ಮಾಡುವ ಅವಶ್ಯಕತೆ ಏನಿದೆ?

**ಶ್ರೀ ಆರ್. ಅಶೋಕ್** : ಮುಖ್ಯಮಂತ್ರಿಗಳ ಬಗ್ಗೆ ಈ ರೀತಿ ಮಾತನಾಡಿರುವುದು ಸರಿಯೆ?

**ಶ್ರೀ ಹೆಚ್. ಸಿ. ಬಾಲಕೃಷ್ಣ** : ಸ್ವಾಮಿ, ಮಾನ್ಯ ಬಚ್ಚೇಗೌಡರು, ವಿರೋಧ ಪಕ್ಷದ ನಾಯಕರ ಬಗ್ಗೆ ಮೀಡಿಯಾದಲ್ಲಿ ಏನು ಮಾತನಾಡಿದ್ದಾರೆ ಎಂಬುದನ್ನು ತಾವು ತೆಗೆಸಿ ನೋಡಿ.

**(ಗೊಂದಲ)**

**ಅಧ್ಯಕ್ಷರು:** ನೋಡಿ ಇದು ಸದನ. ಈ ಸದನದ ಗೌರವವನ್ನು ಎಲ್ಲರೂ ಕಾಪಾಡಬೇಕು. ನೀವೇ ಪರಸ್ಪರ ಮಾತನಾಡುವುದಾದರೆ ಸದನ ಏಕೆ ಬೇಕು? ಬಚ್ಚೇಗೌಡರೆ, ಬಾಲಕೃಷ್ಣರವರೆ, ಈ ವಿಷಯವನ್ನು ಇಲ್ಲಿಗೇ ಮುಗಿಸಿ. ಇನ್ನು ಮುಂದುವರೆಸಬೇಡಿ. ಬಚ್ಚೇಗೌಡರೆ, ತಾವೇನು ಪಿಟಿಶನ್ ಕೊಟ್ಟಿದ್ದೀರಿ ಅದರ ಬಗ್ಗೆ I will take decision.

**ಶ್ರೀ ಬಿ. ಎನ್. ಬಚ್ಚೇಗೌಡ:** ಮಾನ್ಯ ಅಧ್ಯಕ್ಷರೆ, ಒಬ್ಬ ಗೌರವಯುತ ಮುಖ್ಯಮಂತ್ರಿಯ ಬಗ್ಗೆ ಆ ರೀತಿಯಲ್ಲಿ ಮಾತನಾಡಿರುವ ಮಾಜಿ ಮುಖ್ಯಮಂತ್ರಿಯನ್ನು ಸದನಕ್ಕೆ ಕರೆಸಬೇಕು. ಅದಕ್ಕಾಗಿ ನೀವು ಸಮನ್ಸ್ ಜಾರಿ ಮಾಡಬೇಕು. He should appear before the House. ಮಾಜಿ ಮುಖ್ಯಮಂತ್ರಿಗಳು ಅಪೀಯರ್ ಆಗಬೇಕು.

**(ಗೊಂದಲ)**

**ಅಧ್ಯಕ್ಷರು:** ಅದರ ಬಗ್ಗೆ ಏನು ಮಾಡಬೇಕೆಂದು ಖ ತಿಟ ಣಚಿಞಜ ಜಜಚಛಿಟಠಟಿ.

**ಶ್ರೀ ಬಂಡೆಪ್ಪ ಕಾಶ್ಯಂಪುರ್** : ಮಾನ್ಯ ಅಧ್ಯಕ್ಷರೆ, ಬರಗಾಲದ ಬಗ್ಗೆ ಕ್ಲಾರಿಫಿಕೇಶನ್ ಕೇಳಿದರೆ ಟೈಂ ಇಲ್ಲವೆನ್ನುತ್ತಾರೆ. ಇದಕ್ಕೆ ಸಾಕಷ್ಟು ಟೈಂ ಇದೆಯೆ?

**ಶ್ರೀ ಬಿ.ಎನ್. ಬಚ್ಚೇಗೌಡ** : ವಿಜಯ ಕರ್ನಾಟಕ ಪತ್ರಿಕೆಯಲ್ಲಿ ಮಾಜಿ ಮುಖ್ಯಮಂತ್ರಿಗಳು ನಮ್ಮ ಮುಖ್ಯಮಂತ್ರಿಯ ಮೇಲೆ ಅವಹೇಳನಕಾರಿ ಹೇಳಿಕೆ ನೀಡಿದ್ದಾರೆ. ಇದರ ಬಗ್ಗೆ ನಾನು ಪ್ರಿವಿಲೇಜ್ ಮೋಶನ್ ಮೂವ್ ಮಾಡಿದ್ದೇನೆ.

**ಶ್ರೀ ಹೆಚ್.ಸಿ. ಬಾಲಕೃಷ್ಣ** : ಮಾನ್ಯ ಅಧ್ಯಕ್ಷರೆ, ಅವರು ಆಚೆ ಹೇಳಿರುವುದು. ಸದನದಲ್ಲಿ ಹೇಳಿಲ್ಲ. ಹೊರಗಡೆ ಆ ರೀತಿ ಮಾತನಾಡಿದ ಮೇಲೆ ತದನಂತರದಲ್ಲಿ ಆ ಬಗ್ಗೆ ವಿಷಾದವನ್ನೂ ಕೂಡ ವ್ಯಕ್ತಮಾಡಿದ್ದಾರೆ.

(ಗೊಂದಲ)

**ಅಧ್ಯಕ್ಷರು:** ಬಚ್ಚೇಗೌಡರೆ, ನೋಡಿ ನೀವು ಪಿಟಿಶನ್ ಕೊಟ್ಟಿದ್ದೀರಿ. ನಾನು ಅದರ ಬಗ್ಗೆ ಏನು ಮಾಡಬೇಕೆಂದು ನಿರ್ಣಯವನ್ನು ತೆಗೆದುಕೊಳ್ಳುತ್ತೇನೆ.

(ಗೊಂದಲ)

**ಅಧ್ಯಕ್ಷರು:** ದಯವಿಟು ಎಲ್ಲರೂ ಕುಳಿತುಕೊಳ್ಳಿ. ಈಗ ರೂಲ್ 69ರ ಅಡಿಯಲ್ಲಿ ಚರ್ಚೆ ಮಾಡುವ ವಿಷಯವನ್ನು ತೆಗೆದುಕೊಳ್ಳೋಣ.

**ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು):** ಮಾನ್ಯ ಅಧ್ಯಕ್ಷರೆ, ನಾನು ಈಗ ಒಳಗೆ ಬಂದೆ. ಇವರು ಏಕೆ ಹೀಗೆ ಜಗಳವಾಡುತ್ತಿದ್ದಾರೆ ಎಂಬುದೇ ನನಗೆ ಅರ್ಥವಾಗಲಿಲ್ಲ. ಗಲಾಟೆಯೊಳಗಡೆ ಬೈಯ್ದಾಡುತ್ತಿದ್ದರು. ಏನು ವಿಷಯ ಎಂಬುದು ನನಗೆ ಗೊತ್ತಾಗಲಿಲ್ಲ.

**ಶ್ರೀ ಬಿ. ಎನ್. ಬಚ್ಚೇಗೌಡ :** ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಏನು ವಿಷಯ ಎಂದು ಕೇಳುತ್ತಿದ್ದಾರೆ. ನಾನು ಇನ್ನೊಂದು ಸಾರಿ ವಿಷಯವನ್ನು ಹೇಳುತ್ತೇನೆ.

**ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು) :** ಏನು ವಿಷಯ ಹೇಳಿ.

(ಗೊಂದಲ)

**ಶ್ರೀ ಸಿದ್ದರಾಮಯ್ಯ:** ಅದು ಏನೆಂದು ಹೇಳಿ.

**ಶ್ರೀ ಬಿ. ಎನ್. ಬಚ್ಚೇಗೌಡ :** ಇನ್ನೊಂದು ಬಾರಿ ಹೇಳುತ್ತೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ಕೇಳುತ್ತಿದ್ದಾರೆ, ಹೇಳುತ್ತೇನೆ ಕೇಳಿ. ನಾನು ನೋಟೀಸ್ ಕೊಟ್ಟಿದ್ದೇನೆ, ಕೇಳಿ. ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಹೇಳುವುದೇನೆಂದರೆ, ನಿನ್ನೆ ಮಾಜಿ ಮುಖ್ಯಮಂತ್ರಿಗಳಾದ ಕುಮಾರಸ್ವಾಮಿಯವರು ಅವರ ಕಛೇರಿಯಲ್ಲಿ ಒಂದು ಪ್ರೆಸ್ ಮೀಟ್ ಮಾಡಿ ನಮ್ಮ ಮುಖ್ಯಮಂತ್ರಿಗಳಿಗೆ ಅವರು ಮೆಟ್ಟಿನಿಂದ ಹೊಡಿಯುತ್ತಾರೆ ಎಂದು ಒಂದು ಪದ ಬಳಸಿದ್ದಾರೆ.

**ಅಧ್ಯಕ್ಷರು:** ನಾನು ಇದರ ಬಗ್ಗೆ ನಿರ್ಣಯ ತೆಗೆದುಕೊಳ್ಳುತ್ತೇನೆಂದು ಹೇಳಿದ್ದೇನೆ. ಆದರೆ ಮಾನ್ಯ ವಿರೋಧ ಪಕ್ಷದ ನಾಯಕರು ಕೇಳಿದರು ಎಂದು ಹೇಳುತ್ತಿದ್ದಾರೆ.

**ಶ್ರೀ ಬಿ. ಎನ್. ಬಚ್ಚೇಗೌಡ:** ನಂತರ ಅದನ್ನು ಏನು ಮಾಡಿದ್ದಾರೆಂದರೆ ಪ್ರೆಸ್‌ನವರಿಗೆ ನೀವು ಯಾರೂ ದಯವಿಟ್ಟು ಬರೆಯಬೇಡಿ ಎಂದು ಹೇಳಿ ಅದನ್ನು ವಾಪಸ್ಸು ಪಡೆದು, ನೀವು ಯಾರೂ ಪೇಪರ್‌ನಲ್ಲಿ ಹಾಕಬೇಡಿ ಎಂದು ಹೇಳಿ, ಅಂತಹ defamative statement ನಮ್ಮ ನಾಯಕರಾದ ಈ ರಾಜ್ಯದ ಮುಖ್ಯಮಂತ್ರಿಯವರ ಮೇಲೆ ಯಾರೂ ಯಾವತ್ತೂ ಮಾಡಿಲ್ಲ, ಅಂತಹ ಹೇಳಿಕೆಯನ್ನು ಇವತ್ತು ಅವರ ಮಾಡಿದ್ದಾರೆ. ಈ ಹೌಸ್‌ನಲ್ಲಿ ಯಾರೇ ಮುಖ್ಯಮಂತ್ರಿಯಾಗಲಿ, This is the House under Consitution, ಈ ಹೌಸ್‌ನಲ್ಲಿ ಯಾರೇ ಇರಬಹುದು, it is a continuous process. ಆ ರೀತಿ ತಪ್ಪು ಮಾಡಿರುವುದರಿಂದ.....

**ಅಧ್ಯಕ್ಷರು:** ಬಚ್ಚೇಗೌಡರೇ ನಾನು ಇದರ ಬಗ್ಗೆ ನಿರ್ಣಯ ತೆಗೆದುಕೊಳ್ಳುತ್ತೇನೆಂದು ಹೇಳಿದ್ದೇನೆ. ನೀವು ಪದೇ ಪದೇ ಅದರ ಬಗ್ಗೆ ಮಾತನಾಡುತ್ತೀರಿ. ಸಾಕು ಬಿಡಿ.

**ಶ್ರೀ ಬಿ. ಎನ್. ಬಚ್ಚೇಗೌಡ :** ಇವತ್ತು ಆ ಮಾಜಿ ಮುಖ್ಯಮಂತ್ರಿಯನ್ನು ಈ ಹೌಸ್‌ಗೆ ಸಮನ್ ಮಾಡಿ. There is provision. ಮಾನ್ಯ ಅಧ್ಯಕ್ಷರೇ, ತಾವು ಅವಕಾಶ ಕೊಟ್ಟರೆ ಹೇಳುತ್ತೇನೆ. Parliament Houseನಲ್ಲಿ, ಅನೇಕ ಬಾರಿ ಕರೆದಿದ್ದಾರೆ. ಅದಕ್ಕೆ ಇಲ್ಲಿ ನಿದರ್ಶನಗಳು ಇವೆ. In the upper House, on a privilege issue the editor of Deccan Herald Pothen Joseph was called and the bar of the House has admonished. Admonish ಮಾಡಿದ್ದಾರೆ.

**ಅಧ್ಯಕ್ಷರು:** ನಾನು close ಮಾಡಿದ್ದೇನೆಂದು ಹೇಳಿದ್ದೇನಲ್ಲ, ಬಚ್ಚೇಗೌಡರೇ ನಾನು ಇದರ ಬಗ್ಗೆ ನಿರ್ಣಯ ಕೊಡುತ್ತೇನೆಂದು ಹೇಳಿದ್ದೇನೆ.

**ಶ್ರೀ ಬಿ. ಎನ್. ಬಚ್ಚೇಗೌಡ :** ಎಸ್.ಪಿ.ಎಲ್.ಷಾ, ಹೆಚ್. ಮಲ್ಲಾರಾಧ್ಯ, ಆರ್.ಕೆ. ಕಾರಂಜಿಯಾ, editor was called in the House. ಮಾಡಿದ್ದಾರೆ ಸ್ವಾಮಿ. ತಾವು ಮಾಜಿ ಮುಖ್ಯಮಂತ್ರಿಯನ್ನು ಸಮನ್ ಮಾಡಿ ಈ ಹೌಸ್‌ಗೆ ಕರೆದು ಛೀಮಾರಿ ಹಾಕಬೇಕು.

**(ಗೊಂದಲ)**

**ಶ್ರೀ ಬಿ. ಎನ್. ಬಚ್ಚೇಗೌಡ :** ನೀವು ಮಾಡಿರುವ ಕೆಲಸಕ್ಕೆ ಛೀಮಾರಿ ಹಾಕಬೇಕು.

**(ಗೊಂದಲ)**

**ಅಧ್ಯಕ್ಷರು :** ಸಾಕು ಬಿಡಿ.

**ಶ್ರೀ ಬಿ.ಎನ್. ಬಚ್ಚೇಗೌಡ :** ಹೌದು ಸ್ವಾಮಿ, ಲಾಟರಿ ಮುಖ್ಯಮಂತ್ರಿ. ...

**ಶ್ರೀ ಹೆಚ್.ಸಿ. ಬಾಲಕೃಷ್ಣ :** ಆಯಿತು, ಕುಳಿತುಕೊಳ್ಳಿ. . . .

**(ಗೊಂದಲ)**

**(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರು ಮಾಜಿ ಮುಖ್ಯಮಂತ್ರಿಗಳನ್ನು ಸದನಕ್ಕೆ ಕರೆದು ಛೀಮಾರಿ ಹಾಕಬೇಕೆಂದು ಕೂಗುತ್ತಾ ತಮ್ಮ ತಮ್ಮ ಸ್ಥಳಗಳಿಂದ ಬಾವಿಗೆ ಬರಲು ಧಾವಿಸಿದರು)**

**ಅಧ್ಯಕ್ಷರು:** ಆಡಳಿತ ಪಕ್ಷದ ಸದಸ್ಯರು ವೆಲ್‌ಗೆ ಬರಬಾರದು. ಅದನ್ನು ಮಂತ್ರಿಗಳು ಹೇಳುತ್ತಿದ್ದಾರೆ.

**(ಗೊಂದಲ)**

**ಅಧ್ಯಕ್ಷರು :** ದಯವಿಟ್ಟು ನೀವು ನಿಮ್ಮ ಸ್ಥಾನಕ್ಕೆ ಹೋಗಿ. ಕಾನೂನು, ನಿಯಮಗಳ ರೀತಿ ಏನಿದೆ ಅದರ ಪ್ರಕಾರ ನಾನು ಅದರ ಬಗ್ಗೆ ನಿರ್ಣಯ ತೆಗೆದುಕೊಳ್ಳುತ್ತೇನೆ. ನಾನು ಈಗಾಗಲೇ ಆ ಪ್ರಕಾರ ತೆಗೆದುಕೊಳ್ಳುತ್ತೇನೆಂದು ಹೇಳಿದ್ದೇನೆ. ದಯವಿಟ್ಟು ನಿಮ್ಮ ಸ್ಥಳಕ್ಕೆ ಹೋಗಿ.

**(ಗೊಂದಲ)**

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಹೆಚ್. ಡಿ. ರೇವಣ್ಣ, ಬಂಡೆಪ್ಪ ಕಾಶೆಂಪೂರ್ ಹಾಗೂ ಹೆಚ್. ಸಿ. ಬಾಲಕೃಷ್ಣರವರು ತಮ್ಮ ಸ್ಥಾನದಲ್ಲಿ ನಿಂತುಕೊಂಡು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಿದ್ದರು)**

ಅಧ್ಯಕ್ಷರು: ದಯವಿಟ್ಟು ನಿಮ್ಮ ಸ್ಥಾನಕ್ಕೆ ಹೋಗಿ.

**(ಗೊಂದಲ)**

**ಅಧ್ಯಕ್ಷರು :** ಅವರಿಗೆ ಏನು ಹೇಳಬೇಕು? ಎಷ್ಟು ಹೇಳಬೇಕು?

**ಶ್ರೀ ಸಿದ್ದರಾಮಯ್ಯ:** ಮಾನ್ಯ ಅಧ್ಯಕ್ಷರೇ, ಪತ್ರಿಕೆಯಲ್ಲಿ ಹೇಳಿಕೆ ಬಂದಿದೆ ಎಂದು ಮಾನ್ಯ ಬಚ್ಚೇಗೌಡರು ಮತ್ತು ಅಶೋಕ್‌ರವರು ಸದನದ ಹೊರಗಡೆ ಆಗಿರತಕ್ಕಂಥ statement ಮೇಲೆ ಮಾನ್ಯ ಮುಖ್ಯಮಂತ್ರಿಯವರಿಗೆ breach of privilege ಆಗಿದೆ ಎಂದು ಹೇಳಿದ್ದಾರೆ. ಆ ರೀತಿ ಕುಮಾರಸ್ವಾಮಿಯವರು statement ಮಾಡಿದ್ದಾರೆ, it amounts to defamation. Defamationಗೆ courtಗೆ ಹೋಗಬೇಕೆ ಹೊರತು ಇಲ್ಲಿ privilegeಗೆ ಹಾಕಿದರೆ, he is not the member of this House.

**(ಗೊಂದಲ)**

**ಶ್ರೀ ಸಿದ್ದರಾಮಯ್ಯ** : ನನಗೆ ತಿಳಿದಿರುವಂತಹ ನಿಯಮಗಳು ಮತ್ತು ಕೌಲ್ ಅಂಡ್ ಶಕ್ದರ್ ಪುಸ್ತಕದಲ್ಲಿ ಇರುವಂತಹ ವಿಚಾರಗಳ ಮಾಹಿತಿ ಪ್ರಕಾರ, it may be defamatory, derogatory statement. ಅದಕ್ಕೆ court is the right forum. ನಮಗೆ defamation ಆಗಿದೆ, in the eye of the people ನಮ್ಮ presitgeಗೆ ಕೆಳಗೆ- ಹೋಗಿಬಿಟ್ಟಿದೆ. ನಮ್ಮ dignity, decorum ಎಲ್ಲಾ ಕೆಳಗಡೆ ಹೊರಟು ಹೋಗಿದೆ ಎಂದು ಆ ರೀತಿ ಆಗಿದ್ದರೆ, ಅದರಲ್ಲಿ ಯಾರು injured ಇರುತ್ತಾರೆ, aggrived ಇರುತ್ತಾರೆ, they have to approach the court in the defamatory proceedings. ಅದು ಬಿಟ್ಟು ನನಗೆ ಗೊತ್ತಿರುವ ಮಟ್ಟಿಗೆ ನಾನು ಹೇಳಿದೆ. I don't know, but I leave it toe you ಮಾನ್ಯ ಅಧ್ಯಕ್ಷರೇ, ನೀವು examine ಮಾಡಿ. ಅದು ನಿಮ್ಮ ವ್ಯಾಪ್ತಿಯೊಳಗೆ ಬರುತ್ತದೆಯೇ? ಇಲ್ಲವೇ ಎನ್ನುವುದನ್ನು ನೋಡಬೇಕು. As per as I am concerned, I don't think. .., ಇದು privilege ಒಳಗಡೆ ಬರುವುದಿಲ್ಲ. ಅವರು ಹೊರಗಡೆ statement ಕೊಟ್ಟಿರುವುದು. ಬಚ್ಚೇಗೌಡರೇ ನಿವೂ ಕೂಡ ಒಂದು statement issue ಮಾಡಿದ್ದೀರಿ, ನಿಮ್ಮ statement ಕೂಡ ನೋಡಿದೆ, equally befitting ಇದೆ.

**ಶ್ರೀ ಬಿ. ಎನ್. ಬಚ್ಚೇಗೌಡ** : I have just mentioned what happened. No, it is not like that.

**ಶ್ರೀ ಸಿದ್ದರಾಮಯ್ಯ**: ನಾನು ಆ ರೀತಿ ಹೇಳಲಿಲ್ಲ, ನಾನು ನಿಮಗೆ ಈಗ defamatory ಎಂದು ಹೇಳಿದ್ದೇನಾ?

**ಶ್ರೀ ಬಿ. ಎನ್. ಬಚ್ಚೇಗೌಡ** : ನೀವು ಅದೇ ಸಂಬಂಧವಾಗಿ ಕೊಟ್ಟಿದ್ದೀರಿ ಎಂದು ಹೇಳಿದಿರಿ.

**ಶ್ರೀ ಸಿದ್ದರಾಮಯ್ಯ**: Befitting ಎಂದು ಹೇಳಿದೆ. ನಿಮ್ಮ statement ಇಲ್ಲಿ ಇದೆ, ನಾನು ನೋಡಿದೆ, ಈಗ issue ಮಾಡಿದಿರಿ. ನೀವು ಏನೇನು ಪದಗಳನ್ನು ಬಳಸಬೇಕು ಎಲ್ಲಾ ಬಳಸಿದ್ದೀರಿ.

**ಶ್ರೀ ಬಿ. ಎನ್. ಬಚ್ಚೇಗೌಡ** : ಎಲ್ಲಾ ಗೌಪ್ಯವಾಗಿ ಹೇಳಿದ್ದೇನೆ.

**ಶ್ರೀ ಸಿದ್ದರಾಮಯ್ಯ**: ಗೌಪ್ಯವಾಗಿ ಹೇ? ಏನು ಗೌಪ್ಯವಾಗಿ ಬಂತು. ನೀವು ಇದನ್ನು ಬಹಿರಂಗವಾಗಿ ಕೊಟಿದ್ದೀರಿ.

**ಶ್ರೀ ಬಿ. ಎನ್. ಬಚ್ಚೇಗೌಡ** : ಏನು ಹೇಳಬೇಕೋ ಅದನ್ನು ಹೇಳಿ.

**ಅಧ್ಯಕ್ಷರು:** ಆ defamative words ಹೇಳುವುದಕ್ಕೆ ಹೋಗಬೇಡಿ.

**ಶ್ರೀ ಸಿದ್ದರಾಮಯ್ಯ:** 'ದೇವೇಗೌಡರು ಪ್ರಧಾನಿಯಾದಾಗ ಸಂಪಾದಿಸಿದ ಭ್ರಷ್ಟಾಚಾರದ ಹಣದಿಂದ ಚಲನಚಿತ್ರಗಳನ್ನು ನಿರ್ಮಿಸಿ ತಾನು ದೊಡ್ಡ ವ್ಯವಹಾರಸ್ಥರೆಂದು ರಾಜ್ಯದ ಜನತೆಗೆ ಟೋಪಿ ಹಾಕಿರುವುದು ಮಾತ್ರವಲ್ಲವೇ?' ಇದನ್ನು ಏನೆಂದು ಕರೆಯಲಿ? ನೀವು ಈ ರೀತಿ ಹೇಳಿರುವುದಕ್ಕೆ ಅವರು ಇಲ್ಲಿಗೆ ಬಂದು ನಿಮ್ಮ ಮೇಲೆ privilege ಹಾಕುವುದಕ್ಕೆ ಆಗುತ್ತದೆಯೇ? ಮಾನ್ಯ ಅಧ್ಯಕ್ಷರೇ, ಇದನ್ನು Parliamentaryಗೆ ತೆಗೆದುಕೊಂಡು ಹೋಗಿ privilege move ಮಾಡುವುದಕ್ಕೆ ಆಗುತ್ತದೆಯೇ?

He is a member in the Parliament. Can he go and move a privilege motion in the Parliamnent against Mr. Bachchegowda? Like wise, here also, ನನ್ನ ಪ್ರಕಾರ, I don't think the privilege motion would stand.

I leave it to you to look into the provision and take a decision.

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ :** ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರು ಹೊರಗಡೆ ಮಾಡಿದಂತಹ statement ಅನ್ನು ಇಲ್ಲಿ ತೆಗೆದುಕೊಂಡು ಬಂದು ಪ್ರಸ್ತಾಪ ಮಾಡುತ್ತಿರುವುದು ಸರಿಯಲ್ಲವೆಂದು ಹೇಳುತ್ತಿದ್ದಾರೆ.

**ಶ್ರೀ ಸಿದ್ದರಾಮಯ್ಯ:** ನಾನು ಆಗಲ್ಲ ಹೇಳಿದ್ದು, privilege move ಮಾಡುವುದಕ್ಕೆ ಬರುವುದಿಲ್ಲವೆಂದು ಹೇಳಿದ್ದು.

**ಶ್ರೀ ಕೆ. ಎಸ್. ಈಶ್ವರಪ್ಪ :** ಬರುವುದಿಲ್ಲವೆಂದು ಹೇಳಿದಿರಿ. ನೀವು ವಿರೋಧ ಪಕ್ಷದ ನಾಯಕರು ಆಗುವುದಕ್ಕಿಂತ ಮೊದಲು ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಶ್ರೀಮತಿ ಸೋನಿಯಾ ಗಾಂಧಿಯವರ ಬಗ್ಗೆ ನಮ್ಮ ನಾಯಕಿಯಾದಂತಹ ಶ್ರೀಮತಿ ಸುಷ್ಮಾ ಸ್ವರಾಜ್‌ರವರು ಪ್ರಸ್ತಾಪ ಮಾಡಿದಂತಹ ಸಂದರ್ಭದಲ್ಲಿ ಇದೇ ಹೌಸ್‌ನಲ್ಲಿ ಅವರನ್ನು ಕರೆಸಿ ಏನೇನು ಹೇಳಬೇಕೆಂದು ಹೇಳಿರುವುದು ರೆಕಾರ್ಡ್‌ನಲ್ಲಿ ಇದೆ. ನಾನು ಈ ಮಾತನ್ನು ಏಕೆ ಪ್ರಸ್ತಾಪ ಮಾಡುತ್ತಿದ್ದೇನೆಂದರೆ, ಒಬ್ಬ ರಾಜ್ಯದ ಮುಖ್ಯಮಂತ್ರಿಗಳ ಬಗ್ಗೆ ಹೊರಗಡೆ ಇರುವಂತಹ ಒಬ್ಬ ಮಾಜಿ ಮುಖ್ಯಮಂತ್ರಿ ಬಳಸಿದಂತಹ ಪದದಿಂದ ಇಡೀ ಸದನಕ್ಕೆ ಆಗುತ್ತಿರುವಂತಹ ನೋವನ್ನು ಸಭಾಧ್ಯಕ್ಷರಿಗೆ...

**ಶ್ರೀ ಸಿದ್ದರಾಮಯ್ಯ:** ನಾನು ಸರಿ ಎಂದು ಹೇಳಲಿಲ್ಲ, defamation ಆಗುತ್ತದೆಂದು ಹೇಳಿದ್ದು.

**ಶ್ರೀ ಕೆ. ಎಸ್. ಈಶ್ವರಪ್ಪ:** Defamation ಆಗುತ್ತದೆ, ಅದು ಸರಿಯೋ ತಪ್ಪೋ.. ಒಂದು ನಿಮಿಷ ಮಾನ್ಯ ರೇವಣ್ಣನವರೇ, ನೀವು ಆಮೇಲೆ ಮಾತನಾಡಿ.

**(ಗೊಂದಲ)**

**ಶ್ರೀ ಕೆ. ಎಸ್. ಈಶ್ವರಪ್ಪ :** ಬಾಲಕೃಷ್ಣರವರೇ ಸ್ವಲ್ಪ ತಡೆಯಿರಿ, ಇಲ್ಲಿ ವಿರೋಧ ಪಕ್ಷದ ನಾಯಕರು .....

**(ಗೊಂದಲ)**

**ಶ್ರೀ ಹೆಚ್. ಸಿ. ಬಾಲಕೃಷ್ಣ :** ಏನು ಹೇಳಿದರು ಎಂದು ಹೇಳಿ. ಅದೇನು ಹೇಳಿದ್ದಾರೆಂದು ಹೇಳಿ?

**ಶ್ರೀ ಕೆ. ಎಸ್. ಈಶ್ವರಪ್ಪ:** ಇಲ್ಲಿ ಪ್ರಶ್ನೆ ಬಂದಿರುವುದು ಮಾನ್ಯ ಸಿದ್ದರಾಮಯ್ಯನವರು, ರೇವಣ್ಣನವರು ಇತ್ತೀಚೆಗೆ ಒಂದಾಗುತ್ತಿದ್ದಾರೆ ಎಂಬ ಅಂಶವನ್ನು ನಾವು ಗಮನಿಸುತ್ತಿದ್ದೇವೆ. ಸಂತೋಷ. ಒಂದಾಗಿ. ಆದರೆ, ಅದಲ್ಲ. ಇಲ್ಲಿ ಪ್ರಶ್ನೆ ಬರುತ್ತಿರತಕ್ಕದ್ದು, ಇಡೀ ಸದನದ ಒಬ್ಬ ನಾಯಕರಿಗೆ ಹಿಂದಿನ ಮುಖ್ಯಮಂತ್ರಿಯಾಗಿದ್ದಂಥ ವ್ಯಕ್ತಿ ಬಳಸಿರುವಂಥ ಪದ.

**ಶ್ರೀ ಎಚ್.ಸಿ. ಬಾಲಕೃಷ್ಣ :** ಏನು ಹೇಳಿದರು ಎಂದು ಹೇಳಿ. ಅದೇನು ಹೇಳಿದ್ದಾರೆಂದು ಹೇಳಿ?

**ಶ್ರೀ ಕೆ.ಎಸ್. ಈಶ್ವರಪ್ಪ :** ಏಕೆ ಅಷ್ಟು ಅರ್ಜೆಂಟ್ ಇದೆ? ಇಡೀ ಕರ್ನಾಟಕ ರಾಜ್ಯದ ಜನರು ವಿಜಯ ಕರ್ನಾಟಕ ಪತ್ರಿಕೆಯನ್ನು ಓದಿದ್ದಾರೆ. ನೀವು ಓದಿಲ್ಲವೇ?

**ಶ್ರೀ ಎಚ್.ಸಿ. ಬಾಲಕೃಷ್ಣ :'** ಅದನ್ನು ನೀವೇ ಹೇಳುತ್ತಿದ್ದೀರಿ. ಮಾಜಿ ಮುಖ್ಯಮಂತ್ರಿಗಳು ಒಂದು ಸಲ ಹೇಳಿದರು. ಇವರು ನೂರು ಸಲ ಹೊಡಿಯುತ್ತಾರೆ ಎಂದು ಹೇಳುತ್ತಿದ್ದಾರೆ. ಅವರು ಎಲ್ಲೋ ಒಂದು ಸಲ ಹೇಳಿ ಅದಕ್ಕೆ ವಿಷಾಧವನ್ನೂ ವ್ಯಕ್ತಪಡಿಸಿದರು. ಇವರು ನೂರು ಸಲ ಅವರು ಮುಖ್ಯಮಂತ್ರಿಗೆ ಹೊಡೆಯುತ್ತಾರೆ, ಹೊಡೆಯುತ್ತಾರೆ ಎಂದು ಹೇಳುತ್ತಾರೆ. ಅವರು ಒಂದು ಸಲ ಹೇಳಿ ವಿಷಾದ ವ್ಯಕ್ತಪಡಿಸಿದರು. ಆದರೆ, ನೀವು ಎಷ್ಟು ಸಲ ಹೇಳುತ್ತಿದ್ದೀರಿ?

**(ಗೊಂದಲ)**

V12-67

**ಶ್ರೀ ಕೆ.ಎಸ್. ಈಶ್ವರಪ್ಪ :** ನಾವು ಹೇಳಲು ಹೊರಟಿರುವುದು ಇದನ್ನೇ. ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳ ಬಗ್ಗೆ ಇಡೀ ರಾಜ್ಯದ ಜನರು ಅವರನ್ನು ಮುಖ್ಯಮಂತ್ರಿಯಾಗಿ ಮಾಡಿರುವ ಸಂದರ್ಭದಲ್ಲಿ ಅವರು ಬಳಸಿರುವಂಥ ಪದ ನಮಗೆ ಎಷ್ಟು ನೋವಾಗಿದೆ ಎನ್ನುವುದನ್ನು, ಇವರೇನು ಪದವನ್ನು ಬಳಸಿದ್ದಾರೆ, ಸ್ವಲ್ಪ ತಡೆಯಿರಿ ಹೇಳುತ್ತೇನೆ, ನಿಮಗೆ ಅರ್ಥವಾಗಿಲ್ಲವೇ?! ನಿಮ್ಮ ಸಂಸ್ಕೃತಿಯೇ ಅದು, ಅದು ನಿಮಗೆ ಮಾಮೂಲಿ. ನಮ್ಮ ಸಂಸ್ಕೃತಿ ಇದಲ್ಲಾ. ಇದಕ್ಕಿಂತಾ ಕೆಟ್ಟ ಪದಗಳು ನಮಗೆ ಬರುತ್ತದೆ. ಆದರೆ, ನಮ್ಮ ಪಕ್ಷ ನಮಗೆ ಸಂಸ್ಕೃತಿಯನ್ನು ಕಲಿಸಿಕೊಟ್ಟಿದೆ. ಇದಕ್ಕಿಂತಾ ಕೆಟ್ಟಪದಗಳನ್ನು ಬಳಸಲು ನಮಗೆ ಬರುತ್ತದೆ. ಆದರೆ ನಾವು ಬಳಸುತ್ತಿಲ್ಲ. ಏಕೆಂದರೆ ನಮಗೆ ನಮ್ಮ ತಂದೆತಾಯಿಗಳು ಮತ್ತು ನಮ್ಮ ಪಕ್ಷ ಒಂದು ಸಂಸ್ಕೃತಿಯನ್ನು ಹೇಳಿಕೊಟ್ಟಿದೆ. ಒಬ್ಬರು ನಾಯಕರಿಗೆ ಹೇಗೆ ಗೌರವ ಕೊಡಬೇಕು, ಯಾವ ಭಾಷೆಯಲ್ಲಿ ಮಾತನಾಡಬೇಕು ಎಂಬುದನ್ನು ಹೇಳಿಕೊಟ್ಟಿದ್ದಕ್ಕೆಯೇ ಇವತ್ತು ಕರ್ನಾಟಕ ರಾಜ್ಯದ ಜನ ಇಂಥ ನಾಯಕರನ್ನು ನಮಗೆ ಕೊಟ್ಟಿದ್ದಾರೆ ಮತ್ತು ಬಹುಮತವನ್ನೂ ಕೊಟ್ಟಿದ್ದಾರೆ. ನಾನು ನಿಮಗೆ ಹೇಳಲು ಹೊರಟಿರುವುದು ಇಷ್ಟೇ, ಇದನ್ನು ಮಾತನಾಡಿರುವುದು ತಪ್ಪು ಎಂದು ಅವರು ಒಪ್ಪಿಕೊಂಡ ನಂತರ ಇಲ್ಲಿ ಇಡೀ ಕರ್ನಾಟಕ ರಾಜ್ಯದಲ್ಲಿ ನೋಡುತ್ತಿರುವ ಸಂದರ್ಭದಲ್ಲಿ, ಮಾನ್ಯ ಬಚ್ಚೇಗೌಡರು ಹೊರಗಡೆ ಮಾತನಾಡಿರುವುದಕ್ಕೂ ಸದನದಲ್ಲಿ ಕರೆದು ಛೀಮಾರಿ ಹಾಕಿರುವ ಉದಾಹರಣೆ ಇದೆಯೆಂದು ಹೇಳಿದ್ದಾರೆ. ಇವತ್ತು ಮಾನ್ಯ ಮುಖ್ಯಮಂತ್ರಿಗಳಿಗೆ ಮಾತ್ರವಲ್ಲ ಕರ್ನಾಟಕ ' ಆರು ಕೋಟಿ ಜನರಿಗೂ ಇದರಿಂದ ನೋವಾಗಿರುವುದಿಂದ ಮಾಜಿ ಮುಖ್ಯಮಂತ್ರಿಗಳನ್ನು ಇಲ್ಲಿಗೆ ಕರೆದು ಛೀಮಾರಿ ಹಾಕಬೇಕು ಎಂದು ನನ್ನ ಮನವಿ. ಇದು ನಿಮಗೆ ಬಿಟ್ಟಿದ್ದು ಮಾನ್ಯ ಅಧ್ಯಕ್ಷರೆ.

**(ಗೊಂದಲ)**

**ಅಧ್ಯಕ್ಷರು:** ಎಲ್ಲರೂ ಕುಳಿತುಕೊಳ್ಳಿ. ಅವರು ಏನು ಮಾತನಾಡುತ್ತಾರೋ ಕೇಳೋಣ. ಕೇಳುವ ತಾಳ್ಮೆ ಇರಬೇಕು. ಅವರು ಏನು ಹೇಳುತ್ತಾರೋ ಕೇಳಿ. ದಯಮಾಡಿ ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಸಿ.ಎಸ್. ಪುಟ್ಟೇಗೌಡ:** ಮಾನ್ಯ ಅಧ್ಯಕ್ಷರೇ, ರಾಜಕೀಯದಲ್ಲಿ ನಾವೂ 60 ವರ್ಷದಿಂದ ಈ ರಾಜ್ಯದ ರಾಜಕಾರಣ ಮಾಡಿದಂಥವರು. ವಿರೋಧ ಪಕ್ಷದವರು ಬೈಗಳ ಇವೆಲ್ಲಾ ನಡೆದುಕೊಂಡು ಬಂದಿರುವಂಥದ್ದು. ಹೊರಗಡೆ ಚುನಾವಣಾ ಸಂದರ್ಭದಲ್ಲಿ ಅಥವಾ ರಾಜಕಾರಣ ಮಾಡಬೇಕಾದರೆ ಹೆಚ್ಚುಕಡಿಮೆ ಇನ್ನೊಬ್ಬರನ್ನು ಬೈದುಕೊಂಡೇ ಎಲ್ಲರೂ ಬಂದಿರುವಂಥದ್ದು.

**(ಗೊಂದಲ)**

ಸ್ವಲ್ಪ ಹೇಳುವವರೆಗೆ ಕೇಳಿ. ಸದನವನ್ನು ತಪ್ಪು ದಾರಿಗೆ ಎಳೆಯುವುದಕ್ಕೋಸ್ಕರ ಈ ರೀತಿ ಮಾಡುತ್ತಿದ್ದಾರೆಂದು ಆಗುತ್ತದೆ. ನಿಮಗೆ ಸದನ ನಡೆಸುವುದಕ್ಕೆ ಆಸಕ್ತಿ ಇಲ್ಲ.

**ಅಧ್ಯಕ್ಷರು:** ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಅವರು ಆದಮೇಲೆ ಬೇಕಾದರೆ ಸಿದ್ದುಸವದಿಯವರೆ ಮಾತನಾಡಿ.

**(ಗೊಂದಲ)**

**ಶ್ರೀ ಸಿ.ಎಸ್. ಪುಟ್ಟೇಗೌಡ :** ಏನು ನಿಮಗಿಂತಾ ಜಗಳ ಮಾಡಲು ಬಂದಿದ್ದೇವೆಯೇ? ಸಮಾಧಾನವಾಗಿ ಕೇಳಿ. ನಮಗೆ ಊರಿನಲ್ಲಿ ಕೆಲಸ ಇದೆ. ಜನರು ಕಾಯುತ್ತಿದ್ದಾರೆ. ಸದನ ನಡೆಸಲು ಸಾಧ್ಯವಾದರೆ ನಡೆಸಿ.

**ಒಬ್ಬ ಮಾನ್ಯ ಸದಸ್ಯರು :** ನಾಲಿಗೆ ಕುಲ ಹೇಳುತ್ತದೆ ಎಂದು ಗಾದೆ ಇದೆ. ಪಾಪ ಬಿಟ್ಟುಬಿಡಿ ಹೋಗಲಿ. ನಾಲಿಗೆ ಅವರ ಕುಲ ಏನು ಎಂದು ಹೇಳುತ್ತಿದೆ.

**(ಗೊಂದಲ)**

**ಅಧ್ಯಕ್ಷರು:** ಮಾನ್ಯ ಸಿದ್ದುಸವದಿಯವರೆ ಕುಳಿತುಕೊಳ್ಳಿ. ಅವರು ಮಾತನಾಡಲಿ. ಅನಂತರ ನಿಮಗೆ ಅವಕಾಶ ಕೊಡುತ್ತೇನೆ. ಅವರು ಏನು ಹೇಳುತ್ತಾರೆ ಕೇಳಿ.

**ಶ್ರೀ ಸಿದ್ದುಸವದಿ :** ಇವರ ನಾಯಕರೇನು ಹೇಳಿದ್ದಾರೆ, ಅದನ್ನು ರಾಜ್ಯದ ಜನರೇ ಅವರಿಗೆ ಮಾಡಿದ್ದಾರೆ. ಚುನಾವಣೆಯಲ್ಲಿ ಅವರನ್ನು ಹೊಡೆದು ಕಳುಹಿಸಿದ್ದಾರೆ. ಮೊದಲು ಅವರು ಅದನ್ನು ಅರ್ಥ ಮಾಡಿಕೊಳ್ಳಲಿ. ನಾಚಿಕೆಯಾಗುವುದಿಲ್ಲವೇ ನಿಮಗೆ ಮಾತನಾಡಲು?

**(ಗೊಂದಲ)**

**ಅಧ್ಯಕ್ಷರು :** ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

**ಒಬ್ಬರೂ ಮಾನ್ಯ ಸದಸ್ಯರು :** ಟೀಕೆ ಮಾಡುವುದಕ್ಕೂ ಒಂದು ಮಿತಿ ಇದೆ. ಹೇಗೆ ಬೇಕಾದರೂ ಟೀಕೆ ಮಾಡಬಹುದೇ? ಏನು ಬೇಕಾದರೂ ಟೀಕೆ ಮಾಡಿದರೆ ಜನರು ನಿಮ್ಮನ್ನು ಸಹಿಸುವುದಿಲ್ಲ.

**(ಗೊಂದಲ)**

**ಶ್ರೀ ಸಿದ್ದುಸವದಿ :** ಸದನದಲ್ಲಿ ಒಂದು ನಿರ್ಣಯವಾಗಬೇಕು. ಅವರ ಮಾತನ್ನು ಖಂಡಿಸಬೇಕು. ಇದು ಸರಿಯಲ್ಲ.

**(ಗೊಂದಲ)**

**ಶ್ರೀ ಸಿ.ಎಸ್. ಪುಟ್ಟೇಗೌಡ :** ಸದನದಲ್ಲಿ ಹೇಗೆ ನಡೆದುಕೊಳ್ಳಬೇಕು ಎಂದು ನಿಮ್ಮಿಂದ ಕಲಿಯಬೇಕಾಗಿಲ್ಲ.

**(ಗೊಂದಲ)**

**ಅಧ್ಯಕ್ಷರು :** ಯಾರಾದರು ಒಬ್ಬರು ಮಾತನಾಡಿ.

**(ಗೊಂದಲ)**

**ಶ್ರೀ ಎಸ್. ಶಿವಣ್ಣ :** ನಿಮ್ಮ ನಾಯಕರು ವಚನಭ್ರಷ್ಟರು. ಅವರ ಹತ್ತಿರ ಏನೂ ಇಲ್ಲ. ಸುಮ್ಮನೆ ಸದನದಲ್ಲಿ ಮಾತನಾಡುತ್ತಾರೆ. ನಿಮಗೆ ನಾಚಿಕೆಯಾಗಬೇಕು. ನೀವು ಒಬ್ಬರೇ ಹರಿಶ್ಚಂದ್ರರು, ಇನ್ನೂ ಯಾರೂ ಹರಿಶ್ಚಂದ್ರರಿಲ್ಲ! ರೇವಣ್ಣ ನೀವು ಒಬ್ಬರೇ ಹರಿಶ್ಚಂದ್ರರು!

**ಅಧ್ಯಕ್ಷರು:** ದಯಮಾಡಿ ಕುಳಿತುಕೊಳ್ಳಿ.

**ಶ್ರೀ ಎನ್. ಗೋಪಾಲಕೃಷ್ಣ ಬೇಳೂರು :** ಯಾರೇ ಆದರೂ ಆ ರೀತಿ ಕೆಟ್ಟ ಪದವನ್ನು ಮಾತನಾಡಲು ಈ ರಾಜ್ಯದಲ್ಲಿ ಅವಕಾಶ ಇಲ್ಲ. ಅದನ್ನು ಕಡತದಿಂದ ತೆಗೆದುಹಾಕಿಬಿಡಿ.

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:** ಹೀಗಾದೆ ಆಗುವುದಿಲ್ಲ. ನಾವು ಹೊರಗಡೆ ಹೋಗಬೇಕಾಗುತ್ತದೆ. ಸದನದ ಸಮಯವನ್ನೆಲ್ಲಾ ಹಾಳುಮಾಡುತ್ತಿದ್ದಾರೆ.

**ಅಧ್ಯಕ್ಷರು:** ಹಾಗಾದರೆ ಸದನವನ್ನು ಮುಂದಕ್ಕೆ ಹಾಕೋಣ. ಈಗ ಸದನವನ್ನು ಹತ್ತು ನಿಮಿಷ ಮುಂದಕ್ಕೆ ಹಾಕಿದ್ದೇನೆ.

**(ಸದನವನ್ನು ಹತ್ತು ನಿಮಿಷಗಳ ಕಾಲ ಮುಂದಕ್ಕೆ ಹಾಕಲಾಯಿತು)**

**(ಸಭೆಯು ಪುನ: 6 ಗಂಟೆ 3 ನಿಮಿಷಕ್ಕೆ ಸಮಾವೇಶಗೊಂಡಾಗ ಮಾನ್ಯ ಅಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು)**

**(ಆಡಳಿತ ಪಕ್ಷದ ಶಾಸಕರು ಮಾನ್ಯ ಹೆಚ್. ಡಿ. ಕುಮಾರಸ್ವಾಮಿಯವರು ನೀಡಿರುವ ಪತ್ರಿಕಾ ಹೇಳಿಕೆ ವಿರುದ್ಧ ಘೋಷಣೆಗಳನ್ನು ಕೂಗುತ್ತಿದ್ದರು.)**

**ಅಧ್ಯಕ್ಷರು :** ಈಗ ಮುಂದಿನ subjectನ್ನು ತೆಗೆದುಕೊಳ್ಳೋಣ.

**ಒಬ್ಬ ಮಾನ್ಯ ಸದಸ್ಯರು :** ಖಂಡನಾ ನಿರ್ಣಯವಾಗಬೇಕು.

**ಅಧ್ಯಕ್ಷರು :** ಅದರ ಬಗ್ಗೆ ನಾನು ನಿರ್ಣಯ ತೆಗೆದುಕೊಳ್ಳುತ್ತೇನೆ.

**(ಗೊಂದಲ)**

**ಶ್ರೀ ಎಂ.ಪಿ. ರೇಣುಕಾಚಾರ್ಯ:** ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಅಗೌರವವನ್ನು ತಂದಿದ್ದಾರೆ. ಈ ರೀತಿ ಅವರ ಬಗ್ಗೆ ಮತನಾಡಿರತಕ್ಕಂಥದ್ದು, ಅವರು ಬಹಳ ಪ್ರಭಾವಿಶಾಲಿಗಳು, ಅವರನ್ನು ನಾವು ಗೌರವಾನ್ವಿತರು ಎಂದು ಅಂದುಕೊಂಡಿದ್ದೆವು. ಈ ರೀತಿ ಹೇಳಿಕೆ ನೀಡಿರುವುದರಿಂದ ಅವರು ಕ್ಷಮಾಪಣೆಯನ್ನು ಕೇಳಬೇಕು.

**(ಗೊಂದಲ)**

**ಒಬ್ಬ ಮಾನ್ಯ ಸದಸ್ಯರು :** ಅವರನ್ನು ಸದನಕ್ಕೆ ಕರೆಸಬೇಕು (ಗೊಂದಲ)

ನಿರ್ಣಯ (ಹೇಳಿಕೆಯನ್ನು ಸಾರಿಗೆ ಸಚಿವ ಶ್ರೀ ಆರ್. ಅಶೋಕರವರು ಓದಿದರು)

**ಶ್ರೀ ಆರ್. ಅಶೋಕ್ (ಸಾರಿಗೆ ಸಚಿವರು):** ಮಾನ್ಯ ಅಧ್ಯಕ್ಷರೆ, ಖಂಡನಾ ನಿರ್ಣಯವನ್ನು ಓದಲಾಯಿತು, ಇದನ್ನು ಅಂಗೀಕರಿಸಬೇಕೆಂದು ವಿನಂತಿಸುತ್ತೇನೆ (ಅದರ ಪ್ರತಿಯನ್ನು ಲಗತ್ತಿಸಲಾಗಿದೆ).

**ಶ್ರೀ ಬಿ.ಎನ್. ಬಚ್ಚೇಗೌಡ (ಕಾರ್ಮಿಕ ಸಚಿವರು) :–** ಮಾನ್ಯ ಅಧ್ಯಕ್ಷರೆ, ಮಾನ್ಯ ಕುಮಾರಸ್ವಾಮಿಯವರ ಅಣ್ಣನವರಾದ ಮಾನ್ಯ ರೇಣ್ಣನವರು ಇಲ್ಲಿಯೆ ಇದ್ದಾರೆ, ಈ ತರಹ ಅವರು ಹೇಳಿಕೆ ಕೊಟ್ಟಿರುವ ಬಗ್ಗೆ ಅವರು ಈ ಸದನದಲ್ಲಿ ಕ್ಷಮಾಪಣೆ ಕೋರಬೇಕು ಸ್ವಾಮಿ.

**(ಗೊಂದಲ)**

**ಖಂಡನಾ ನಿರ್ಣಯ**

ಇದೇ ದಿನಾಂಕ 15ರಂದು ಬೆಂಗಳೂರಿನ ತಮ್ಮ ಪಕ್ಷದ ಕಛೇರಿಯಲ್ಲಿ ನಡೆಸಿದ ಪತ್ರಿಕಾ ಗೋಷ್ಠಿಯಲ್ಲಿ ಮಾಜಿ ಮುಖ್ಯಮಂತ್ರಿಯಾದಂತಹ

ಶ್ರೀ ಎಚ್.ಡಿ. ಕುಮಾರಸ್ವಾಮಿಯವರು ರಾಜ್ಯದ ಸನ್ಮಾನ್ಯ ಮುಖ್ಯಮಂತ್ರಿ ಗಳಾದಂತಹ ಶ್ರೀ ಬಿ.ಎಸ್. ಯಡಿಯೂರಪ್ಪನವರ ಬಗ್ಗೆ ಟೀಕೆ ಮಾಡುತ್ತ ಅವಹೇಳನಕಾರಿ ಹಾಗೂ ಅಪಮಾನಕಾರಿ ಮಾತುಗಳನ್ನಾಡಿದ್ದಾರೆ.

ಇದರಿಂದ ಈ ಸದನದ ನಾಯಕರ ಹಾಗೂ ಸದನದ ಘನತೆಗೆ ಧಕ್ಕೆ ಬಂದಿರುತ್ತದೆ.

ಕಾರಣ ಶ್ರೀ ಕುಮಾರಸ್ವಾಮಿಯವರ ವರ್ತನೆ ಮತ್ತು ಹೇಳಿಕೆಯನ್ನು ಖಂಡಿಸಿ ಈ ಸದನವು ನಿರ್ಣಯವನ್ನು ಅಂಗೀಕರಿಸುತ್ತದೆ. ದಿನಾಂಕ: 16.09.2009

**ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು):** ಮಾನ್ಯ ಬಚ್ಚೇಗೌಡರೆ, ಒಂದು ನಿಮಿಷ ಕುಳಿತುಕೊಳ್ಳಿ. ಶಾಸಕರುಗಳಿಗೆ ಅವರ ಸ್ಥಾನಕ್ಕೆ ಹೋಗುವುದಕ್ಕೆ ಹೇಳಿ.

**ಅಧ್ಯಕ್ಷರು:** ದಯವಿಟ್ಟು ಎಲ್ಲರೂ ನಿಮ್ಮ ಸ್ಥಾನಗಳಿಗೆ ಹೋಗಿ.ಇದು ಸರಿಯಲ್ಲ. ಆಡಳಿತ ಪಕ್ಷದ ಶಾಸಕರಾಗಿ ಈ ರೀತಿ ಮಾಡಿದರೆ ಈ ಸದನಕ್ಕೆ ಗೌರವ ಬರುವುದಿಲ್ಲ. ಯಾರಾದರೂ ಏನಾದರೂ ಮಾತನಾಡುವುದು ಇದ್ದರೆ ನಿಮ್ಮ ಸ್ಥಳಕ್ಕೆ ಹೋಗಿ ಮಾತನಾಡಿ. ನೀವು ಆಡಳಿತ ಪಕ್ಷದ ಶಾಸಕರು, ಇದು ಸರಿಯಾದ ನಡವಳಿಕೆ ಅಲ್ಲ.

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:** ರೂಲ್ಸ್‌ನಲ್ಲಿ ಎಲ್ಲಿದೆ, ಈ ತರಹ ಮಾಡುವುದಕ್ಕೆ ಬರುವುದಿಲ್ಲ.

**(ಗೊಂದಲ)**

**ಅಧ್ಯಕ್ಷರು:** ದಯವಿಟ್ಟು ನಿಮ್ಮ ಸ್ಥಳಕ್ಕೆ ಹೋಗಿ, ಅಜೆಂಡಾ ಪ್ರಕಾರ ಇನ್ನು ಎರಡು-ಮೂರು ವಿಷಯಗಳನ್ನು ಚರ್ಚೆ ಮಾಡಬೇಕಾಗಿದೆ.

**(ಗೊಂದಲ)**

**(ಈ ಹಂತದಲ್ಲಿ ಆಡಳಿತ ಪಕ್ಷದ ಶಾಸಕರು ಧಿಕ್ಕಾರವನ್ನು ಕೂಗುತ್ತಿದ್ದರು)**

**ಅಧ್ಯಕ್ಷರು:** ದಯವಿಟ್ಟು ನಿಮ್ಮ ಸ್ಥಾನಕ್ಕೆ ಹೋಗಿ. ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಿದ್ದಾರೆ.

**ಶ್ರೀ ಎಂ.ಪಿ. ರೇಣುಕಾಚಾರ್ಯ :** ಮಾನ್ಯ ಪ್ರತಿಪಕ್ಷದ ನಾಯಕರ ಬಗ್ಗೆ ನಮಗೆ ಗೌರವ ಇದೆ. ಆದರೆ ಈ ಸದನದ ಕ್ಷಮೆ ಕೇಳಬೇಕು.

**(ಗೊಂದಲ)**

**ಶ್ರೀ ಸಿದ್ದರಾಮಯ್ಯ :** ಸನ್ಮಾನ್ಯ ಅಧ್ಯಕ್ಷರೇ . . . ದಯಮಾಡಿ ಅವರನ್ನು ಅವರ ಸ್ಥಾನಗಳಿಗೆ ಕಳುಹಿಸಿ

**(ಗೊಂದಲ)**

**(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರೆಲ್ಲರೂ ಒಟ್ಟಿಗೆ ಮಾತನಾಡುತ್ತಿದ್ದರು)**

**(ಗೊಂದಲ)**

**ಅಧ್ಯಕ್ಷರು :** ದಯಮಾಡಿ ಆಡಳಿತ ಪಕ್ಷದ ಸದಸ್ಯರು ತಮ್ಮ ಸ್ಥಾನಗಳಿಗೆ ಹೋಗಿ, ಇದು ಸರಿಯಲ್ಲ, ಆಡಳಿತ ಪಕ್ಷದ ಸದಸ್ಯರಾಗಿ ನೀವು ಈ ರೀತಿ ನಡೆದುಕೊಂಡರೆ ಸದನಕ್ಕೆ ಗೌರವ ಬರುವುದಿಲ್ಲ. ನಿಮ್ಮ ಸ್ಥಾನಗಳಿಗೆ ಹೋಗಿ, ಯಾರಾದರೂ ಏನಾದರೂ ಮಾತನಾಡುವುದಿದ್ದರೆ ನಿಮ್ಮ ಸ್ಥಳಕ್ಕೆ ಹೋಗಿ ಮಾತನಾಡಿ. ಆಡಳಿತ ಪಕ್ಷದ ಸದಸ್ಯರಾದ ನಿಮಗೆ ಇದು ಸರಿಯಾದಂಥ ನಡವಳಿಕೆ ಅಲ್ಲ. ನಿಮ್ಮ ಸ್ಥಳಕ್ಕೆ ದಯಮಾಡಿ ಹೋಗಿ. ಪ್ಲೀಸ್,

**(ಗೊಂದಲ)**

**ಅಧ್ಯಕ್ಷರು:** ದಯವಿಟ್ಟು ನಿಮ್ಮ ಸ್ಥಾನಕ್ಕೆ ಹೋಗಿ, ಅಜೆಂಡಾ ಪ್ರಕಾರ ಮುಂದೆ ಇನ್ನು ಎರಡು ಮೂರು ವಿಷಯಗಳನ್ನು ಚರ್ಚೆ ಮಾಡಬೇಕಾಗಿದೆ. ದಯವಿಟ್ಟು ನಿಮ್ಮ ಸ್ಥಾನಕ್ಕೆ ಹೋಗಿ,

**(ಗೊಂದಲ)**

**ಅಧ್ಯಕ್ಷರು:** ದಯವಿಟ್ಟು ನಿಮ್ಮ ಸ್ಥಾನಗಳಿಗೆ ಹೋಗಿ ಪ್ಲೀಸ್, ನೋಡಿ, ವಿರೋಧ ಪಕ್ಷದ ನಾಯಕರು ಮಾತನಾಡುತ್ತಿದ್ದಾರೆ, ನಿಮ್ಮ ಸ್ಥಾನಗಳಿಗೆ ಹೋಗಿ, ಸದನ ನಡೆಸಲಿಕ್ಕೆ ಸಹಕಾರ ಕೊಡಿ, ನಿಮ್ಮ ಸ್ಥಾನಕ್ಕೆ ಹೋಗಿ, ಈ ರೀತಿ ಆದರೆ ಸದನ ನಡೆಸಲಿಕ್ಕೆ ಆಗುವುದಿಲ್ಲ. ಮತ್ತೆ ಮುಂದೆ ಹಾಕಬೇಕಾಗುತ್ತದೆ. ದಯವಿಟ್ಟು ನಿಮ್ಮ ಸ್ಥಾನಕ್ಕೆ ಹೋಗಿ, ವಿರೋಧ ಪಕ್ಷದ ನಾಯಕರು ಮಾತನಾಡುವವರಿದ್ದಾರೆ. ಅವರು ಏನೋ ಹೇಳುವವರಿದ್ದಾರೆ ಕೇಳಿ.

**(ಗೊಂದಲ)**

**ಶ್ರೀ ಎಂ. ಪಿ. ರೇಣುಕಾಚಾರ್ಯ:** ಈ ರಾಜ್ಯದ ಜನತೆಗೆ ಉತ್ತಮ ಸಂದೇಶ ಹೋಗಬೇಕೆಂದರೆ ಮೊದಲು ಅವರು ಕ್ಷಮೆ ಕೇಳಬೇಕು, ಲಜ್ಜೆಗೆಟ್ಟ, ಭಂಡ ರಾಜಕಾರಣಿಗಳು.

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:** ಯಾರನ್ನು ಯಾರು ಕ್ಷಮೆ ಕೇಳಬೇಕು?

(ಗೊಂದಲ)

**ಅಧ್ಯಕ್ಷರು:** ಸದನದ ನಿಯಮದ ಪ್ರಕಾರ ಯಾರಾದರೂ ಶಾಸಕರು ಮಾತನಾಡಬೇಕಾದರೆ ನಿಮ್ಮ ಸ್ಥಾನದಲ್ಲಿ ನಿಂತು ಮಾತನಾಡಬೇಕು. ಈ ರೀತಿ ನೀವು ಇಲ್ಲಿ ನಿಂತು ಮಾತನಾಡಿದರೆ ಯಾವುದು ದಾಖಲೆಗೆ ಹೋಗುವುದಿಲ್ಲ. ನಿಮ್ಮ ಸ್ಥಾನವನ್ನು ಬಿಟ್ಟು ಬೇರೆ ಕಡೆ ನಿಂತು ನೀವೇನೇ ಮಾತನಾಡಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ.

**ಶ್ರೀ ಸಿದ್ದರಾಮಯ್ಯ:** ಇದು ಪ್ರಜಾಪ್ರಭುತ್ವದ ಕಗ್ಗೊಲೆ...

(ಗೊಂದಲ)

**ಅಧ್ಯಕ್ಷರು:** ದಯಮಾಡಿ ನಿಮ್ಮ ಸ್ಥಾನಗಳಿಗೆ ಹೋಗಿ.

**ಶ್ರೀ ಸಿದ್ದರಾಮಯ್ಯ :** ಇದು ಕರ್ನಾಟಕದ . . . ಶಿವಣ್ಣನವರೇ ನೀವು ಐದನೇ ಸಾರಿ ಎಂ.ಎಲ್.ಎ. ಆಗಿದ್ದೀರಿ, ಬಚ್ಚೇಗೌಡರು ಬಹಳ ವರ್ಷ ಮಂತ್ರಿಯಾಗಿರುವವರು. ಮೂರು ನಾಲ್ಕು ಸಾರಿ ಸಚಿವರಾಗಿರುವವರು.

(ಗೊಂದಲ)

**ಅಧ್ಯಕ್ಷರು:** ಈಗ ಸದನವನು ಹತ್ತು ನಿಮಿಷಗಳವರೆಗೆ ಮುಂದೂಡುತ್ತಿದ್ದೇನೆ.

**(ಸದನದ ಕಲಾಪವನ್ನು ಸಂಜೆ 6.11 ಗಂಟೆಗೆ ಮುಂದೂಡಿ ಹತ್ತು ನಿಮಿಷಗಳ ನಂತರ ಸೇರುವುದಾಗಿ ನಿರ್ಣಯಿಸಿತು)**

**(ಸಭೆಯು ಪುನ: ರಾತ್ರಿ 7 ಗಂಟೆ 25 ನಿಮಿಷಕ್ಕೆ ಸಮಾವೇಶಗೊಂಡಿತು)**
**ಮಾನ್ಯ ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು**

**ಅಧ್ಯಕ್ಷರು:** ಮಾನ್ಯ ಮುಖ್ಯಮಂತ್ರಿಗಳು ಮಾತನಾಡುತ್ತಾರೆ.

**ಶ್ರೀ ಬಿ. ಎಸ್. ಯಡಿಯೂರಪ್ಪ (ಮಾನ್ಯ ಮುಖ್ಯಮಂತ್ರಿಯವರು):** ಮಾನ್ಯ ಅಧ್ಯಕ್ಷರೆ, ಹೊರಗಡೆ ನಡೆದಂಥ ಘಟನಾವಳಿಗಳ ಬಗ್ಗೆ ಇಲ್ಲಿ ಸಾಕಷ್ಟು ಕಾಲ ಚರ್ಚೆಯಾಗಿದೆ. ನಾನು ಮಾನನಷ್ಟ ಮೊಕದ್ದಮೆಯನ್ನು ಹಾಕುವುದಕ್ಕೂ ತಯಾರಿಲ್ಲ. ನೋಟೀಸ್ ಕೊಡುವುದಕ್ಕೂ ಸಿದ್ಧನಾಗಿಲ್ಲ. ಆ ಬಗ್ಗೆ ಚರ್ಚೆ ಮಾಡುವುದಕ್ಕೂ ನಾನು ಸಿದ್ಧನಿಲ್ಲ. ಆಡಳಿತ ಪಕ್ಷದ ಗೌರವಾನ್ವಿತ ಸದಸ್ಯರು ಈ ರೀತಿ ಅಪಮಾನಕರ ಮಾತುಗಳನ್ನು ಒಬ್ಬರು ಮಾಜಿ ಮುಖ್ಯಮಂತ್ರಿಗಳು ಆಡಿದರಲ್ಲಾ ಎಂಬು ನೋವಿನಿಂದ ತಮ್ಮ ಅಭಿಪ್ರಾಯಗಳನ್ನು

ವ್ಯಕ್ತಪಡಿಸಿದ್ದಾರೆ. ಸಹಜವಾಗಿ ನಾನು ನಿರೀಕ್ಷೆ ಮಾಡಿದ್ದೆ. ಹೊರಗಡೆಯವರಾಗಲಿ ಯಾರೇ ಆಗಲಿ, ಒಂದು ರಾಜ್ಯದ ಆರು ಕೋಟಿ ಜನ ಪ್ರತಿನಿಧಿಯೆಂದು ಕರೆಸಿಕೊಳ್ಳುವ ಮುಖ್ಯಮಂತ್ರಿಗೆ ಈ ರೀತಿ ಅಪಮಾನ ಮಾಡುವುದು ಸರಿಯಲ್ಲ, ಇದು ಆಗಬಾರದಿತ್ತು, ಅವರ ಪರವಾಗಿ ನಾನೇ ಕ್ಷಮೆ ಕೇಳುತ್ತೇನೆಂದು ಕೊನೆಯ ಪಕ್ಷ ಮಾನ್ಯ ರೇವಣ್ಣನವರು ಕೇಳುತ್ತಾರೆಂದು ನಾನು ಭಾವಿಸಿದ್ದೆ. ಈಗ ಅವರಿಂದಲೂ ನಾನು ನಿರೀಕ್ಷೆ ಮಾಡುವುದಿಲ್ಲ. ಮುಂದಿನ ಕಾರ್ಯಕಲಾಪಕ್ಕೆ ತಾವು ಅವಕಾಶ ಮಾಡಿಕೊಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನಮ್ಮ ಸದಸ್ಯರುಗಳು ಇದರ ಬಗ್ಗೆ ದಯಮಾಡಿ ಏನೂ ಮಾತನಾಡಬಾರದೆಂದು ವಿನಂತಿ ಮಾಡುತ್ತೇನೆ.

**ಶ್ರೀ ಸಿದ್ದರಾಮಯ್ಯ (ಮಾನ್ಯ ವಿರೋಧ ಪಕ್ಷದ ನಾಯಕರು):** ಮಾನ್ಯ ಅಧ್ಯಕ್ಷರೆ, ಇವತ್ತು ಈ ಸದನದಲ್ಲಿ ಆದಂಥ ಬೆಳವಣಿಗೆ ಬಹುಶ: ಕರ್ನಾಟಕದ ವಿಧಾನ ಸಭೆಯ ಇತಿಹಾಸದಲ್ಲಿ ಎಂದೂ ಆಗಿರಲಿಲ್ಲ. ಇಂಥ ಘಟನೆಗಳು ಯಾವಾಗಲೂ ಆಗಬಾರದು. ಇದು ಪ್ರಜಾಪ್ರಭುತ್ವಕ್ಕೆ, ಸಂಸದೀಯ ವ್ಯವಸ್ಥೆಗೆ ಕ್ಷೋಭೆ ತರತಕ್ಕ ಪದ್ಧತಿಯಲ್ಲ. ನಾನು 1983 ರಿಂದ ಇಲ್ಲಿದ್ದೇನೆ, ಮಾನ್ಯ ಯಡಿಯೂರಪ್ಪನವರೂ 1983ರಿಂದ ಇಲ್ಲಿದ್ದಾರೆ. ಅನೇಕ ಜನ ಸ್ನೇಹಿತರನ್ನು ನಾನು ಕೇಳಿದೆ. ಅದಕ್ಕಿಂತಾ ಹಿಂದೆ ಕೂಡ ಈ ರೀತಿಯ ಘಟನೆಗಳು ಇಲ್ಲಿ ನಡೆದಿಲ್ಲ. ಕುಮಾರಸ್ವಾಮಿಯವರು ಈಗ ಈ ಸದನದ ಸದಸ್ಯರಲ್ಲ. ಅವರು ಹೊರಗಡೆ ಅವಹೇಳನಕಾರಿ ಅಥವಾ ಮುಖ್ಯಮಂತ್ರಿಗೆ ಅಪಮಾನಕರವಾದ statement ಮಾಡಿದ್ದಾರೆ ಅದು ಇಲ್ಲಿ ಚರ್ಚೆ ಮಾಡಲು ಬರುವುದಿಲ್ಲ. ಆ ರೀತಿ ಹೇಳಬೇಕೆಂದು ನಾನು ಹೇಳುವುದಿಲ್ಲ. ಆ ರೀತಿ ಹೇಳಬಾರದು. ಯಾರೂ ಕೂಡ ಪರಸ್ಪರ ನಮ್ಮ ಗೌರವವನ್ನು ನಾವೇ ಹಾಳು ಮಾಡಿಕೊಳ್ಳಬಾರದು. ನಾವು ಇಲ್ಲಿ 6 ಕೋಟಿ ಜನರ ಸಮಸ್ಯೆಗಳನ್ನು ಚರ್ಚೆ ಮಾಡುವುದಕ್ಕೋಸ್ಕರ ಬಂದಿರತಕ್ಕದ್ದು. ಅದನ್ನು ಬಿಟ್ಟು ನಾವು defamatory and derogatory statementಗಳನ್ನು ಒಬ್ಬರಿಗೊಬ್ಬರು ಮಾಡಿಕೊಳ್ಳುವುದಿದೆಯಲ್ಲಾ ಅದನ್ನು 6 ಕೋಟಿ ಜನರು ಗಮನಿಸುತ್ತಾರೆ. ಅದರ ಮೂಲಕ ನಮ್ಮ ರಾಜಕೀಯ ಸಂಸ್ಕೃತಿಯೇನು ಎಂದು ಜನರು ತೀರ್ಮಾನ ಮಾಡುತ್ತಾರೆ. ಅದಕ್ಕೆ ಅವಕಾಶ ಮಾಡಿಕೊಡಬಾರದು. ನಾನು ಒಂದು ಬಾರಿ ಹಂದಿ ಜ್ವರ ಬಂದಿದೆ, ಮಂತ್ರಿಗಳು ಯಾವಾಗಲೂ ಇರುವುದಿಲ್ಲವೆಂದು ಹೇಳಿದ್ದಕ್ಕೆ ಜನಾರ್ಧನ ರೆಡ್ಡಿಯವರು ಒಂದು ಪ್ರೆಸ್

ಸ್ಟೇಟ್‌ಮೆಂಟ್ ಮಾಡಿದ್ದರು. ಈಗ ಜನಾರ್ಧನ ರೆಡ್ಡಿ ಸದನಕ್ಕೆ ಇಂದು ಈಗ ಬಂದಿಲ್ಲ. ಅವರು ಸ್ಟೇಟ್‌ಮೆಂಟ್ ಮಾಡಿರುವುದರಲ್ಲಿ ಏನು ಹೇಳಿದ್ದರೆಂದರೆ, ಸಿದ್ದರಾಮಯ್ಯನವರು ಶ್ರೀರಾಮುಲು ಬಗ್ಗೆ ಬೇಕೆಂತಲೇ ಸ್ಟೇಟ್‌ಮೆಂಟ್ ಮಾಡುತ್ತಾರೆ, ಆದುದರಿಂದ ಅವರಿಗೆ ಹಂದಿಜ್ವರ ಬರಲಿ ಎಂದು ಹೇಳಿಬಿಟ್ಟರು. ನಾನು ಅದಕ್ಕೆ ಪ್ರೆಸ್‌ನವರಿಗೆ ಏನು ಹೇಳಿದನೆಂದರೆ, ಅಲ್ಲಪ್ಪಾ ಅವರ ಕಲ್ಚರ್ ಅಷ್ಟು, ನಾನೇನೂ ಮಾಡುವುದಕ್ಕಾಗುವುದಿಲ್ಲ, ನಾನು ಇದರ ಬಗ್ಗೆ ಟೀಕೆ ಮಾಡುವುದಿಲ್ಲ, it is uncivilized statement ಎಂದು ಹೇಳಿ ಅಷ್ಟಕ್ಕೇ ಅದನ್ನು ಬಿಟ್ಟುಬಿಟ್ಟೆ. ಆದುದರಿಂದ ನಾನೇನು ಹೇಳುತ್ತೇನೆಂದರೆ, ಯಾರೂ ಆ ರೀತಿ ಮಾಡಬಾರದು. ಮುಖ್ಯಮಂತ್ರಿಗಳಾದವರು ಈ ರಾಜ್ಯದ ಆರು ಕೋಟಿ ಜನರನ್ನು ಪ್ರತಿನಿಧಿಸುವುದು ನಿಜವಾದ ವಿಷಯ. ಆದರೆ ಇಲ್ಲಿ ಆ ವಿಷಯ ಚರ್ಚೆ ಮಾಡುವ ಅಗತ್ಯವಿರಲಿಲ್ಲ. ಏಕೆಂದರೆ ಅದು ಪ್ರಿವಿಲೇಜ್‌ಗೆ ಬರುವುದೂ ಇಲ್ಲ. ಇದು ಒಂದು ಅಂಶ. ಇನ್ನು ಎರಡನೆಯದಾಗಿ ಆಡಳಿತ ಪಕ್ಷದ ಎಲ್ಲ ಸದಸ್ಯರು ಬಂದು ಗಲಾಟೆ ಮಾಡಬೇಕಾದಂಥ ಅಗತ್ಯವೂ ಇರಲಿಲ್ಲ. ಆಮೇಲೆ ಒಂದು ನಿರ್ಣಯವನ್ನೂ ಕೂಡ ಮಾಡಿದರಲ್ಲ, ಯಾವುದೇ ನಮ್ಮ ನಿಯಮಾವಳಿಗಳಲ್ಲಿ ಅಂಥ ನಿರ್ಣಯವನ್ನು ಮಾಡುವುದಕ್ಕೆ ಬರುವುದಿಲ್ಲ. ರೂಲ್ 146ರಲ್ಲಿ ಏನು ಹೇಳಲಾಗಿದೆಯೆಂದರೆ, ಒಂದು ನಿರ್ಣಯವನ್ನು ಮಾಡಬೇಕಾದರೆ ಅದನ್ನು ಮಂತ್ರಿಗಳು ಮಾಡುವುದಕ್ಕೆ ಬರುವುದಿಲ್ಲ, ಶಾಸಕರುಗಳ್ಯಾರಾದರೂ ಮಾಡಬಹುದು. ಒಂದು ವೇಳೆ ಆ ರೀತಿ ನಿರ್ಣಯ ಮಾಡುವುದಾದರೆ ಏಳು ದಿನಗಳ ಮುಂಚೆಯೇ ಆ ಬಗ್ಗೆ 'ನೋಟಿಸ್ ಕೊಟ್ಟು, ಯಾವುದಕ್ಕೋಸ್ಕರ ಮಾಡುತ್ತೇವೆ, ಏನು ಮಾಡುತ್ತೇವೆ, ಯಾರ ವಿರುದ್ಧ ಮಾಡುತ್ತೇವೆ, ಏಕೆ ಮಾಡುತ್ತಿದ್ದೇವೆ ಎನ್ನತಕ್ಕಂಥದ್ದನ್ನು ಹೇಳಿ ಅದನ್ನು ಸಾರ್ವಜನಿಕ ಹಿತದೃಷ್ಟಿಯಿಂದ ನಿರ್ಣಯವನ್ನು ಮಾಡಬೇಕಾಗುತ್ತದೆ. ಇಲ್ಲಿ ಆ ರೀತಿಯದ್ದೂ ಕೂಡ ಇಲ್ಲ. ಅದಕ್ಕಾಗಿಯೇ ಮಾನ್ಯ ಅಧ್ಯಕ್ಷರೆ, ನಾನು ನಿಮ್ಮಲ್ಲಿ ಮನವಿ ಮಾಡುವುದೇನೆಂದರೆ, ನಿಮ್ಮ ಅನುಮತಿಯನ್ನು ತೆಗೆದುಕೊಳ್ಳದೆಯೆ ಆ ನಿರ್ಣಯವನ್ನು ಸದನದಲ್ಲಿ ಮಂತ್ರಿಗಳು ಓದಿಬಿಟ್ಟಿದ್ದಾರೆ. ಆ ಇಡೀ statement ಏನಿದೆ it should not go into the record. ಆ ರೀತಿ ಏನಾದರೂ ಆ ಸ್ಟೇಟ್‌ಮೆಂಟ್ ರೆಕಾರ್ಡ್‌ಗೆ ಹೋಗಿದ್ದರೆ ದಯಮಡಿ ಓದಿರುವ ಸ್ಟೇಟ್‌ಮೆಂಟ್‌ನ್ನು ಸಂಪೂರ್ಣವಾಗಿ ದಾಖಲೆಯಿಂದ ತೆಗೆದು ಹಾಕಬೇಕು.

ಏಕೆಂದರೆ ಆ ರೀತಿ ನಿರ್ಣಯ ಮಾಡಲು ಬರುವುದಿಲ್ಲ ಮತ್ತು ತಮ್ಮ ಅನುಮತಿಯನ್ನೂ ಕೂಡ ಅವರು ತೆಗೆದುಕೊಂಡಿಲ್ಲ. ಏಕೆಂದರೆ ನಾನು ಇಲ್ಲಿ ಕುಳಿತುಕೊಂಡು ಎಲ್ಲವನ್ನೂ ನೋಡುತ್ತಿದ್ದೆ. ಅನುಮತಿಯನ್ನು ತೆಗೆದುಕೊಂಡಿಲ್ಲದಿರುವುದರಿಂದ ಅದು ದಾಖಲೆಗೆ ಬರುವುದಿಲ್ಲ. ಇದಲ್ಲದೇ 146ರ ನಿಯಮವೇನಿದೆ ಅದನ್ನೂ ಕೂಡ invoke ಮಾಡುವುದಕ್ಕೆ ಬರುವುದಿಲ್ಲ. ಆ ಕಾರಣದಿಂದ ಅದು ರೆಕಾರ್ಡ್‌ಗೆ ಹೋಗಬಾರದು. ಇದರಿಂದ ಏನಾಗುತ್ತದೆಂದರೆ, ನಮ್ಮನ್ನು ನಾವೇ ಚಿಕ್ಕವರನ್ನಾಗಿ ಮಾಡಿಕೊಂಡಂತಾಗುತ್ತದೆ. ಮುಖ್ಯಮಂತ್ರಿಗಳಿಗೆ ಅವಕಾಶವಿದೆ If you fell that it is defamatory, it is derogatory, in the eye of the people ಅವರ ಗೌರವ ಕಡಿಮೆಯಾಯಿತು, ನಿಜ, ಆ ರೀತಿ ಅವರು ಮಾಡನಾಡಬಾರದಿತ್ತು. ನಾನೂ ಸೇರಿದಂತೆ ಯಾರೂ ಕೂಡ ಆ ರೀತಿ ಮಾತನಾಡಬಾರದು. ಆ ರೀತಿ ಮಾತನಾಡಿದ್ದರೆ the proper forum is Court. ಅವರು ಕೋರ್ಟ್‌ನಲ್ಲಿ defamation case ಹಾಕಲಿ. ಈ ಸದನದಲ್ಲಿ ಸಾಕಷ್ಟು ಹೊಸ ಸದಸ್ಯರುಗಳಿದ್ದಾರೆ. ಈಗ ತಾನೆ ಮುಖ್ಯಮಂತ್ರಿಗಳು ಒಂದು ಸ್ಟೇಟ್‌ಮೆಂಟ್ ಮಾಡಿದರು. ನಮ್ಮಲ್ಲಿ ಗುಣಮಟ್ಟದ ಚರ್ಚೆ ದಿನೇ ದಿನೇ ಕುಸಿಯುತ್ತಿದೆ ಎಂದು ಹೇಳಿದರು. ಅದಕ್ಕೆ ನಾವೆಲ್ಲರೂ ಸೇರಿಕೊಂಡು contirbute ಮಾಡುವುದು ಬೇಕಾಗಿಲ್ಲ. ಏಕೆಂದರೆ ಆ ರೀತಿ ಚರ್ಚೆಯ ಗುಣಮಟ್ಟ ಕಡಿಮೆಯಾಗಬಾರದು. ಸಾಧ್ಯವಾದಷ್ಟು ಮಟ್ಟಿಗೆ ಚರ್ಚೆಯ ಗುಣಮಟ್ಟವನ್ನು ಹೆಚ್ಚಿಸುವುದಕ್ಕೆ ಪ್ರಯತ್ನವನ್ನು ಮಾಡೋಣ. ನಿಯಮಾವಳಿಗಳ ಚೌಕಟ್ಟಿನಲ್ಲಿ ಅಧಿವೇಶನ ನಡೆಯುವುದಕ್ಕೆ ನಾವೆಲ್ಲರೂ ಸಹಕಾರ ನೀಡಬೇಕಾಗಿರುವುದು ಅಗತ್ಯತೆ ಇದೆ. ಈ ಬಗ್ಗೆ ಹೆಚ್ಚಿನ ಜವಾಬ್ದಾರಿ ಆಡಳಿತ ನಡೆಸತಕ್ಕಂಥ ಸರ್ಕಾರಕ್ಕೆ ಇರುತ್ತದೆ. ನಮ್ಮದೂ ಕೂಡ ಜವಾಬ್ದಾರಿ ಇದೆ. ಇಲ್ಲವೆಂದು ಹೇಳುವುದಿಲ್ಲ. ಆದರೆ ಹೆಚ್ಚು ಜವಾಬ್ದಾರಿ ಆಡಳಿತ ಪಕ್ಷದವರ ಮೇಲಿರುತ್ತದೆ ಎನ್ನುವ ಮಾತನ್ನು ಹೇಳುತ್ತೇನೆ. ಇವತ್ತು ಆದ ರೀತಿಯಲ್ಲಿ ಮುಂದೆ ಆಗದಿರಲಿ. ಮುಖ್ಯಮಂತ್ರಿಗಳು ಸೇರಿದಂತೆ ನಾವೆಲ್ಲರೂ ಕೂಡ ಇನ್ನು ಮುಂದೆ ಇಂಥದ್ದಕ್ಕೆ ಅವಕಾಶ ಕೊಡಬಾರದೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಈಗ ಯಾವ ವಿಷಯದ ಬಗ್ಗೆ ಚರ್ಚೆಯಾಗಬೇಕೋ ಅದನ್ನು ಮುಂದುವರೆಸಬೇಕೆಂದು ಮಾನ್ಯ ಅಧ್ಯಕ್ಷರಲ್ಲಿ ಕೇಳಿಕೊಳ್ಳುತ್ತೇನೆ.

**ಶ್ರೀ ಹೆಚ್.ಸಿ. ಬಾಲಕೃಷ್ಣ** : ಮಾನ್ಯ ಅಧ್ಯಕ್ಷರೆ, ಇನ್ನು ಮುಂದೆ ಇಂಥ ಘಟನಾವಳಿಗಳಾಗಬಾರದೆಂದು ಇದೀಗ ತಾನೆ ವಿರೋಧ ಪಕ್ಷದ ನಾಯಕರು ಬಹಳ ಚೆನ್ನಾಗಿ ಪ್ರಸ್ತಾಪ ಮಾಡಿ ಹೇಳಿದ್ದಾರೆ. ನಿನ್ನೆ ಆ ಒಂದು ವಿಚಾರ ನಡೆದಂಥ ಸಂದರ್ಭದಲ್ಲಿ ಆ ಪ್ರೆಸ್ ಮೀಟ್‌ನಲ್ಲಿ ನಾನೂ ಕೂಡ ಇದ್ದೆ. ಅವರೇನೂ ಉದ್ದೇಶಪೂರ್ವಕವಾಗಿ ಹೇಳಬೇಕು ಎನ್ನುವ ರೀತಿಯಲ್ಲಿ ಹೇಳಲಿಲ್ಲ. ಮಾತಿನ ಧಾಟಿಯಲ್ಲಿ, ಮಾತಿನ ಬಿಸಿಯಲ್ಲಿ ಆ ಮಾತನ್ನು ಹೇಳಿದರು. ಆ ಕೂಡಲೇ ಅದಕ್ಕಾಗಿ ವಿಷಾದವನ್ನು ವ್ಯಕ್ತಪಡಿಸಿದರು ಮತ್ತು ಹೇಳಿದ ಮಾತನ್ನು ವಾಪಸ್ ತೆಗೆದುಕೊಂಡರು. ಮಾಧ್ಯಮದವರಲ್ಲಿ ಮನವಿ ಮಾಡಿ ದಯಮಾಡಿ ಆ ಭಾಷೆಯಲ್ಲಿ ಮಾತನಾಡಿರುವುದನ್ನು ಪ್ರಕಟಿಸಬೇಡಿ, ನಾನು ಆ ರೀತಿ ಹೇಳಿರತಕ್ಕಂಥದ್ದು ತಪ್ಪು, ಅದಕ್ಕಾಗಿ ವಿಷಾದ ವ್ಯಕ್ತಪಡಿಸುತ್ತೇನೆಂದು ಹೇಳಿ ಕೂಡಲೇ ತಾವು ಆಡಿದ ಮಾತನ್ನು ವಾಪಸ್ ತೆಗೆದುಕೊಂಡರು. ಆ ರೀತಿ ತೆಗೆದುಕೊಂಡಿದ್ದರೂ ಮಾಧ್ಯಮದಲ್ಲಿ ಎಲ್ಲಾ ಕಡೆ ಬಂದಿದೆ. ನಾವು ಅದನ್ನು ಎಲ್ಲಾ ಪತ್ರಿಕೆಗಳಲ್ಲಿ ಓದ್ದಿದ್ದೇವೆ. ಆದರೂ ಕೂಡ ಬೆಳಿಗ್ಗೆ ಮುಖ್ಯಮಂತ್ರಿಗಳು ಸದನಕ್ಕೆ ಬಂದಾಗ ಇದರ ಬಗ್ಗೆ ಪ್ರಸ್ತಾಪ ಮಾಡಬಹುದಿತ್ತು.

**ಶ್ರೀ ಆರ್. ಅಶೋಕ್**: ಅವರು ಬೆಳಿಗ್ಗೆ ಈ ಬಗ್ಗೆ ಹೇಳಿದರು.

**ಶ್ರೀ ಹೆಚ್. ಸಿ. ಬಾಲಕೃಷ್ಣ** : ಪ್ರಸ್ತಾಪ ಮಾಡಿದರು ಎಂದಿದ್ದಾರೆ. ಆಗಲೇ ನಾನು ಏನೂ ಮಾಡುವುದಿಲ್ಲ, ನಾನೂ ಏನೂ ಮಾತನಾಡುವುದಿಲ್ಲವೆಂದು ಮುಖ್ಯಮಂತ್ರಿಗಳು ಹೇಳಿದರು. ಆ ವಿಚಾರವನ್ನು ಅವರಿಗೆ ನಾನು ಬಿಡುತ್ತೇನೆಂದರು. ಆದರೂ ಕೂಡ ಪಾಪ ಬಚ್ಚೇಗೌಡರು ಪತ್ರಿಕಾ ಹೇಳಿಕೆಯನ್ನು ಮುಖ್ಯಮಂತ್ರಿಗಳಿಗೋಸ್ಕರ ಹೇಳಿದ್ದಾರೆ. ಆದರೆ ನಾನು ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ.

**ಶ್ರೀ ಬಿ.ಎನ್. ಬಚ್ಚೇಗೌಡ** : ಪತ್ರಿಕಾ ಹೇಳಿಕೆ ಕೊಟ್ಟಿರುವುದು. ನನ್ನ ಪರ್ಸನಲ್.....

**ಶ್ರೀ ಹೆಚ್.ಸಿ. ಬಾಲಕೃಷ್ಣ** : ನೀವು ಕುಳಿತುಕೊಳ್ಳಿ ಸ್ವಾಮಿ, ನಾವು ಮಾತನಾಡುತ್ತಿರುವಾಗ ನೀವೇಕೆ ಮಾತನಾಡುತ್ತೀರಿ. ನೀವು ಆಮೇಲೆ ಮಾತನಾಡಿ. ಪತ್ರಿಕಾ ಹೇಳಿಕೆಯನ್ನು ನೀವು ಏಕೆ ಮಾಡಿದಿರಿ? ಈಗ ಅಶೋಕ್‌ರವರ ಕೈಯಲ್ಲಿ ... ಈಗ ಅವರು ಹೇಳಿದರು, ಪ್ರೈವೇಟ್‌ದ್ದನ್ನು ಮಾಡುವುದಕ್ಕೆ ಆಗುವುದಿಲ್ಲವೆಂದು ವಿರೋಧ ಪಕ್ಷದ ನಾಯಕರು ಹೇಳಿದರು.

ಅದೇ ರೀತಿ ಮಂತ್ರಿಗಳು ಹೇಳತಕ್ಕಂಥದ್ದು, ಅವರೊಂದು ಪತ್ರಿಕಾ ಹೇಳಿಕೆ ಕೊಡತಕ್ಕಂಥದ್ದು, ಇವೆಲ್ಲವನ್ನೂ ಮಾಡಿಸಿದ್ದಾರೆ ಮುಖ್ಯಮಂತ್ರಿಗಳು. ಅದಕ್ಕಾಗಿ ನಮಗೇನೂ ಬೇಸರವಿಲ್ಲ.

(ಗೊಂದಲ)

**ಅಧ್ಯಕ್ಷರು:** ಬಾಲಕೃಷ್ಣರವರೆ, ಇದೇ ನಿಮ್ಮ ಸಮಸ್ಯೆ.

**ಶ್ರೀ ಬಸವರಾಜ ಬೊಮ್ಮಾಯಿ :** ಬಾಲಕೃಷ್ಣರವರೆ, ಮಾನ್ಯ ಮುಖ್ಯಮಂತ್ರಿಗಳ ಬಗ್ಗೆ ಬಹಳ ಹಗುರವಾಗಿ ಮಾತನಾಡುತ್ತೀರಲ್ಲ.

(ಗೊಂದಲ)

**ಅಧ್ಯಕ್ಷರು:** ಬಾಲಕೃಷ್ಣರವರೆ, ಇದುವರೆಗೂ ವಿರೋಧ ಪಕ್ಷದ ನಾಯಕರು ಮಾತನಾಡಿದರು. ಅವರೇನಾದರೂ ನೀವು ಬಳಸಿದ ಪದವನ್ನು ಎಲ್ಲಾದರೂ ಒಂದು ಕಡೆ ಬಳಸಿದರೆ ಹೇಳಿ. ನೀವೇಕೆ ಈ ರೀತಿ ಮಾತನಾಡುತ್ತೀರಿ?

(ಗೊಂದಲ)

**ಶ್ರೀ ಬಸವರಾಜ ಬೊಮ್ಮಾಯಿ:** ಗೌರವ ಕೊಟ್ಟು ಗೌರವ ತೆಗೆದುಕೊಳ್ಳುವುದನ್ನು ಕಲಿಯಿರಿ. ಮಾನ್ಯ ಮುಖ್ಯಮಂತ್ರಿಗಳ ಬಗ್ಗೆ ಏಕೆ ನೀವು ಹಗುರವಾಗಿ ಮಾತನಾಡುತ್ತೀರಿ.

**ಅಧ್ಯಕ್ಷರು:** ವಿಷಯ ಇಲ್ಲಿಗೇ ಮುಗಿದುಹೋಗಿದ್ದದ್ದನ್ನು ಮತ್ತೆ ನೀವು ಈ ರೀತಿ ಮಾತನಾಡಿ ಮತ್ತೆ ಮುಂದುವರೆಸಬೇಕೆಂದು ವಿಚಾರ ಮಾಡಿದ್ದೀರೇನು? ರೂಲ್ 69 ರದ್ದು ಎರಡ್ಮೂರು ವಿಷಯಗಳ ಬಗ್ಗೆ ಚರ್ಚೆ ಮಾಡಲು ಅವಕಾಶ ಕೊಡಬೇಕೆಂದು ನಾನು ಯೋಚನೆ ಮಾಡುತ್ತಿದ್ದೇನೆ. ಮುಖ್ಯಮಂತ್ರಿಗಳು ಕೂಡ ತಯಾರಾಗಿ ಬಂದಿರುವವರು. ನೋಡಿ, ಬಾಲಕೃಷ್ಣರವರೆ, ಈಗ ವಿರೋಧ ಪಕ್ಷದ ನಾಯಕರು ಯಾವ ರೀತಿ ಮಾತನಾಡಿದರು ಹೇಳಿ ಅವರು ನಿಮ್ಮ ಹಾಗೆ ಏನನ್ನಾದರೂ ಮಾತನಾಡಬಹುದಿತ್ತಲ್ಲ. ಆದರೆ ಅವರು ಆ ರೀತಿ ಮಾತನಾಡಲಿಲ್ಲ. ನೀವು ಏಕೆ ಈ ರೀತಿಯಲ್ಲಿ ಮಾತನಾಡುತ್ತೀರಿ. ತಾವು ಅರ್ಥ ಮಾಡಿಕೊಳ್ಳಬೇಕು.

(ಗೊಂದಲ)

**ಶ್ರೀ ಆರ್. ಅಶೋಕ್ :** ಮಾನ್ಯ ಅಧ್ಯಕ್ಷರೆ, ಅವರು ಕಲ್ಲಿದ್ದಲಿನ ಬಗ್ಗೆ ಮಾತನಾಡಲಿ, ವಾಶ್ ಎಷ್ಟು ಆಗಿದೆ, ವಾಶ್ ಆಗದೇ ಇರುವುದು ಎಷ್ಟು ಎಂಬ ಬಗ್ಗೆ ಚರ್ಚೆ ಮಾಡಲಿ. ಮುಖ್ಯಮಂತ್ರಿಗಳು ಇಂದು ಹೈದ್ರಾಬಾದ್‌ಗೆ

ಹೋಗುವುದನ್ನು ಕ್ಯಾನ್ಸಲ್ ಮಾಡಿ ಸದನಕ್ಕೆ ವಾಪಸ್ ಬಂದಿದ್ದಾರೆ. ಚರ್ಚೆಗೆ ಅವಕಾಶ ಕೊಡಿ, ನಾನೂ ಕೂಡ ಮಾತನಾಡುತ್ತೇನೆಂದು ಹೇಳಿ ಅವರು ವಾಪಸ್ ಸದನಕ್ಕೆ ಬಂದಿದ್ದಾರೆ. ಆದುದರಿಂದ ಈಗ ಕಲ್ಲಿದ್ದಲಿನ ಬಗ್ಗೆ ಮಾನ್ಯ ರೇವಣ್ಣನವರು ಮಾತನಾಡಲಿ.

**ಶ್ರೀ ಹೆಚ್. ಸಿ. ಬಾಲಕೃಷ್ಣ:** ಆಯಿತು ಅಧ್ಯಕ್ಷರೆ, ಆ ವಿಚಾರದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಏನೂ ಮಾಡಿಸಿಲ್ಲ. (ಗೊಂದಲ)

**ಅಧ್ಯಕ್ಷರು:** ಬಾಲಕೃಷ್ಣರವರೆ, ಹೇಗೆ ಮಾತನಾಡಬೇಕು ಎಂಬುದನ್ನು ತಾವೇಕೆ ಅರ್ಥ ಮಾಡಿಕೊಳ್ಳುವುದಿಲ್ಲ.

**ಶ್ರೀ ಹೆಚ್. ಸಿ. ಬಾಲಕೃಷ್ಣ :** ಈ ವಿಚಾರವನ್ನು ಸದನದಲ್ಲಿ ಮೊದಲೇ ಮಾನ್ಯ ಮುಖ್ಯಮಂತ್ರಿಗಳು ಅವರಿದ್ದಾಗ ಹೇಳಿಬಿಟ್ಟಿದ್ದರೆ ಇಂಥದ್ದಕ್ಕೆಲ್ಲಾ ಅವಕಾಶವೇ ಆಗುತ್ತಿರಲಿಲ್ಲ. ಹಗರಣದ ಬಗ್ಗೆ ಚರ್ಚೆ ಶುರುವಾಗುತ್ತಿತ್ತು. ಆದುದರಿಂದ ದಯಮಡಿ ಅವರೆಲ್ಲರೂ ಹಿರಿಯರಿದ್ದಾರೆ. ಅವರೆಲ್ಲರೂ ನಮಗೆ ಮಾರ್ಗದರ್ಶಕರಾಗಬೇಕು. ಮುಂದೆ ಇಂಥದ್ದಕ್ಕೆಲ್ಲಾ ಅವಕಾಶ ಮಾಡಿಕೊಡಬಾರದೆಂದು ತಮ್ಮ ಮೂಲಕ ಮನವಿ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ವಿರೂಪಾಕ್ಷಪ್ಪ:** ಮಾನ್ಯ ಅಧ್ಯಕ್ಷರೆ, ಇವರು ಈ ರೀತಿ ಮಾಡಿರುವುದನ್ನು ನೋಡಿದರೆ ಇವರು ಪೂರ್ವನಿಯೋಜಿತವಾಗಿ ಸಿದ್ಧತೆಯನ್ನು ಮಾಡಿಕೊಂಡು ಬಂದು ಮುಖ್ಯಮಂತ್ರಿಗಳಿಗೆ ಕೆಟ್ಟ ಹೆಸರನ್ನು ತರಬೇಕೆನ್ನುವ ದೃಷ್ಟಿಯಿಂದ ಹೀಗೆಲ್ಲಾ ಮಾಡುತ್ತಿದ್ದಾರೆಂದು ಗೊತ್ತಾಗುತ್ತಿದೆ.

**(ಗೊಂದಲ)**

**ಶ್ರೀ ವಿರೋಪಾಕ್ಷಪ್ಪ :** ಕರ್ನಾಟಕ ರಾಜ್ಯದ ಇತಿಹಾಸದಲ್ಲಿ ಒಬ್ಬ ಮಾಜಿ ಮುಖ್ಯಮಂತ್ರಿ ಹಾಲಿ ಮುಖ್ಯಮಂತ್ರಿ ಬಗ್ಗೆ ಇಂಥ ಪದವನ್ನು ಬಳಸಿದ್ದಾರೆಂದರೆ ನಮ್ಮ ಭಾವನೆಗಳಿಗೆ ಆಗಿರತಕ್ಕಂಥ ನೋವನ್ನು ನಾವು ಯಾವ ರೀತಿ ವ್ಯಕ್ತಪಡಿಸಬೇಕು?

**ಶ್ರೀ ಕೆ. ಎಂ. ವಿರೂಪಾಕ್ಷಪ್ಪ :** ಕರ್ನಾಟಕ ರಾಜ್ಯದ ಇತಿಹಾಸದಲ್ಲಿ ಒಬ್ಬ ಮಾಜಿ ಮುಖ್ಯಮಂತ್ರಿ ಆ ರೀತಿಯಾದಂತಹ ಶಬ್ದಗಳನ್ನು ಬಳಸಿದ್ದಾರೆಂದರೆ ನಮ್ಮ ಭಾವನೆಗಳಿಗೆ ಆಗಿರುವಂತಹ ನೋವನ್ನು ನಾವು ಯಾವ ರೀತಿ ವ್ಯಕ್ತಪಡಿಸಬೇಕು? ನಾವು ಈ ಸದನದಲ್ಲಿ ವ್ಯಕ್ತಪಡಿಸದೇ ಎಲ್ಲಿ ವ್ಯಕ್ತಪಡಿಸಬೇಕು? ಅವರು ಈ ರೀತಿ ವರ್ತನೆ ಮಾಡಿದ್ದಾರೆ, ದಯಮಡಿ

ಅವರು ಈ ರೀತಿಯಾದಂತಹ ಪದಗಳನ್ನು ಬಳಸಬಾರದು. ಅವರು ಈ ರೀತಿ ಶಬ್ದಗಳನ್ನು ಬಳಸಿರುವುದನ್ನು ನಾವು ಖಂಡಿಸುತ್ತೇವೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಕೆ. ಎಸ್. ಈಶ್ವರಪ್ಪ** : ಮಾನ್ಯ ಅಧ್ಯಕ್ಷರೇ, ಈ ವಿಧಾನಮಂಡಲ ದೇವಸ್ಥಾನಕ್ಕಿಂತಲೂ ಕೂಡ ಪವಿತ್ರ ಎಂದು ಭಾವಿಸಿರುವಂತಹ ಜನ ನಾವು.

(ಗೊಂದಲ)

**ಶ್ರೀ ಕೆ.ಎಸ್. ಈಶ್ವರಪ್ಪ** : ರಾಮನ ಹೆಸರಿನಲ್ಲಿ ಇರುವಂತಹ ಪಾವಿತ್ರ್ಯತೆ ರಾವಣನಿಗೆ ಗೊತ್ತಾಗುವುದಿಲ್ಲ. ನಾನು ಹೇಳಿದ್ದು ಬೇರೆ. ಇವತ್ತು ಆಗುತ್ತಿರುವಂತಹ ಪ್ರಸ್ತಾಪ, ಈ ರಾಜ್ಯದಲ್ಲಿರುವಂತಹ ಸಾಮಾನ್ಯ ಜನರಿಗೆ ಇರಬಹುದು, ನಮ್ಮ ಪಕ್ಷದ ಕಾರ್ಯಕರ್ತರಿಗೆ ಇರಬಹುದು, ಇವರಿಗೆಲ್ಲ ಆಗಿರುವಂತಹ ನೋವನ್ನು ಯಾವರೀತಿ ಜಥರಿಡಿಜ ಮಾಡಬೇಕೆಂದು ಸತ್ಯಪಾಗಲೂ ನಮಗೆ ಅರ್ಥವಾಗುತ್ತಿಲ್ಲ. ಮಾನ್ಯ ಸಿದ್ದರಾಮಯ್ಯನವರೇ, ಇದನ್ನು ಪ್ರಾಮಾಣಿಕವಾಗಿ ಹೇಳುತ್ತೇನೆ. ಏಕೆಂದರೆ ಕರ್ನಾಟಕ ರಾಜ್ಯದ ವಿಧಾನಸಭೆಯ ಒಳಗೆ ಹೋಗಿ ಕಾಲಿಡುತ್ತೇವೆ ಎನ್ನುವ ನಂಬಿಕೆ ನಮಗೆ ಯಾರಿಗೂ ಇರಲಿಲ್ಲ. ಈ ರಾಜ್ಯದ ಹಳ್ಳಿಯಲ್ಲಿರುವಂತಹ ರೈತರ ಸಮಸ್ಯೆ ನಮಗೆ ಯಾರಿಗೂ ಗೊತ್ತಿರಲಿಲ್ಲ. ಕಾಶ್ಮೀರ ಸಮಸ್ಯೆ, ಗೋಹತ್ಯೆ ವಿಚಾರ, ರಾಮಮಂದಿರದ ವಿಚಾರದ ಬಗ್ಗೆ ಹೋರಾಟ ಮಾಡಿಕೊಂಡು ನಾವು ಬಂದವರು. ಇಡೀ ರಾಜ್ಯದಲ್ಲಿ ರೈತರ ಪರವಾಗಿ ಹಳ್ಳಿ ಹಳ್ಳಿಯಲ್ಲಿ ತೆಗೆದುಕೊಂಡು ಹೋಗಿ ಭಾರತೀಯ ಜನತಾ ಪಕ್ಷವನ್ನು ಕಟ್ಟಿ, ಈ ರಾಜ್ಯದ ರೈತರಿಗೆ ಅನುಕೂಲವಾಗಬೇಕೆಂದು ಹೇಳಿ ಹೋರಾಟ ಮಾಡಿಕೊಂಡು ಬಂದಿರುವಂತಹ ಒಬ್ಬ ವ್ಯಕ್ತಿ ಮುಖ್ಯಮಂತ್ರಿ ಆಗಿರುವಂತಹ ಸಂದರ್ಭದಲ್ಲಿ ಈ ರಾಜ್ಯದ ರೈತರ ಸಮಸ್ಯೆಗಳನ್ನು ಪರಿಹಾರ ಮಾಡಬೇಕೆಂದು ಒಂದೂವರೆ ವರ್ಷಗಳಿಂದ ಸಾಕಷ್ಟು ಶ್ರಮ ಹಾಕುತ್ತಿದ್ದಾರೆ. ಅದನ್ನು ಕೆಲವರು ಒಪ್ಪಬಹುದು, ಒಪ್ಪದಿರಬಹುದು. ನಾನು ಇವತ್ತು ನಿಮಗೆ ಹೇಳುವುದಕ್ಕೆ ಹೊರಟಿರುವುದು ಏನೆಂದರೆ ಮಾನ್ಯ ಸಿದ್ದರಾಮಯ್ಯನವರು ಮಾತನಾಡುವಂತಹ ಸಂದರ್ಭದಲ್ಲಿ ಹೇಳಿದಂತಹ ಅನೇಕ ಅಂಶಗಳನ್ನು ನಾನು ಒಪ್ಪುತ್ತೇನೆ. ಯಾರಿಗೆ ಮೈ ಚುಚ್ಚುತ್ತದೆ ಅವರಿಗೆ ಮಾತ್ರ ನೋವು ಗೊತ್ತಾಗುವುದು. ಚುಚ್ಚಿದರೆ ಏಕೆ ಹೀಗೆ ಮಾಡುತ್ತೀಯಾ? ನಿನಗೆ ಏನಾಗುತ್ತದೆ? ನಿನಗೆ ಒದ್ದರೆ ಏನಾಗುತ್ತದೆ? ಅದೇನು ಮಹಾ,

ಸುಧಾರಿಸಿಕೋ ಎಂದರೆ ಸ್ವತ: ಯಾರಿಗೆ ಅನುಭವವಾಗಿರುತ್ತದೆ, ಅವರಿಗೆ ಅರ್ಥವಾಗುತ್ತದೆ. ಇವತ್ತು ನಾನು ಹೇಳುವುದಕ್ಕೆ ಹೊರಟಿರುವುದು ಖಂಡಿತಾ ಈ ಸದನವನ್ನು ರಾಜಕೀಯಕ್ಕೆ ದುರ್ಬಳಕ್ಕೆ ಮಾಡಿಕೊಡುವುದಕ್ಕೆ ನಾವು ತಯಾರಿಲ್ಲ. ಕರ್ನಾಟಕ ರಾಜ್ಯದಲ್ಲಿ ಈ ಸದನದ ಹೊರಗಡೆ ಹೋರಾಟ ಮಾಡಿಕೊಂಡು ಬಂದಿರುವುದಕ್ಕೋಸ್ಕರವೇ ಇವತ್ತು ರಾಜ್ಯದಲ್ಲಿ ಅಧಿಕಾರಕ್ಕೆ ಬಂದು ಕುಳಿತ್ತಿದ್ದೇವೆ, ಅವರು ಮುಖ್ಯಮಂತ್ರಿಗಳಾಗಿದ್ದಾರೆ. ನಾನು ಹೇಳುವುದಕ್ಕೆ ಹೊರಟಿರುವುದು ಏನೆಂದರೆ, ನಿಜ, ಕಾನೂನುಗಳು ಬಹಳ ಜನಕ್ಕೆ ಗೊತ್ತಿಲ್ಲ. ಇವರು ಈಗ ಮೂವ್ ಮಾಡಿದರಲ್ಲ, ಅದನ್ನು ಅವರು ಮೇಲೆ ಎತ್ತಿ ಹಿಡಿಯುತ್ತಾರೋ, ಬಿಡುತ್ತಾರೋ, ಅದು ಅವರಿಗೆ ಸಂಬಂಧಪಟ್ಟಿದ್ದು. ಆದರೆ ಪ್ರಶ್ನೆ ಏನೆಂದರೆ ನಾನು ಕಳೆದ ವಿಧಾನಸಭೆಯಲ್ಲಿ ಒಂದು ವಿಚಾರ ಪ್ರಸ್ತಾಪ ಮಾಡಿದಾಗ ವಿರೋಧ ಪಕ್ಷದ ನಾಯಕರಾದಂತಹ ಮಲ್ಲಿಕಾರ್ಜುನ ಖರ್ಗೆಯವರಿಗೆ ನೋವಾಯಿತು. ಅದು ಸ್ವಾಭಾವಿಕ. ಶ್ರೀಮತಿ ಸೋನಿಯಾ ಗಾಂಧೀಯವರ ಬಗ್ಗೆ ಶ್ರೀಮತಿ ಸುಷ್ಮಾ ಸ್ವರಾಜ್‌ಯವರು ಬಹಳ ಹಗುರವಾಗಿ ಹೊರಗಡೆ ಮಾತನಾಡಿದರು. ಮಾತನಾಡಿದ್ದು ಸರಿಯೇ ತಪ್ಪೇ ಎನ್ನುವುದರ ಬಗ್ಗೆ ಚರ್ಚೆ ಮಾಡಿದಂತಹ ಸಂದರ್ಭದಲ್ಲಿ ನೀವು ಹೌದು ಎಂದು ತೀರ್ಮಾನ ಮಾಡಿದಿರಿ. ಹೊರಗಡೆ ಯಾರೋ ಮಾತನಾಡಿದರು, ಇಲ್ಲಿ ಅದನ್ನು ಏಕೆ ಪ್ರಸ್ತಾಪ ಮಾಡಿದರು, ಬಿಟ್ಟರು ಎನ್ನುವುದು ಗೊತ್ತಿಲ್ಲ. ಆದರೆ ಅಂದು ಅವರು ಮಾತನಾಡಿದಂತಹ ಸಂದರ್ಭದಲ್ಲಿ ಸುಷ್ಮಾ ಸ್ವರಾಜ್ ಬಗ್ಗೆ ಅನೇಕ ಭಾಷೆಗಳನ್ನು ಬಳಸಿದಾಗ ನಮಗೆ ನೋವಾಯಿತು. ನಿಲುವಳಿ ವಿಚಾರದಲ್ಲಿ ಹೊರಗಡೆ ಯಾರೋ ಮಾತನಾಡಿದ್ದನ್ನು ಇಲ್ಲಿ ಏಕೆ ತರುತ್ತೀರಿ ಎಂದು ನಾವು ಅಂದು ಪ್ರಸ್ತಾಪ ಮಾಡಿದೆವು. ಆದರೆ ಇಲ್ಲಿ ಇವತ್ತು ಪ್ರಶ್ನೆ ಬಂದಿರುವುದು, ನಾನು ಅದನ್ನು ಹೇಳಲಿಲ್ಲ. ಕಾನೂನು ವಿಚಾರವಾಗಿ ಯಾವುದು ಹೌದು, ಯಾವುದು ಅಲ್ಲ ಎನ್ನುವುದು ಅಲ್ಲ. ಈ 20 ತಿಂಗಳು ಮಾನ್ಯ ಯಡಿಯೂರಪ್ಪನವರು ಏನು ಎನ್ನುವುದನ್ನು ದಿನ ದಿನ, ನಿಮಿಷ ನಿಮಿಷ, ಗಂಟೆ ಗಂಟೆ ಅವರ ಜೊತೆಗೆ ಕಳೆದಂತಹ ಕುಮಾರಸ್ವಾಮಿಯವರ ಬಾಯಿಯಲ್ಲಿ ಬಂದಂತಹ ಮಾತಿನಿಂದ ಮಾನ್ಯ ಯಡಿಯೂರಪ್ಪನವರಿಗೆ ಮಾತ್ರ ನೋವಾಗಿದೆ ಎಂದು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಅವರಿಗೆ ನೋವಾಗಿದೆಯೋ, ಇಲ್ಲವೋ ನನಗೆ ಗೊತ್ತಿಲ್ಲ. ಆದರೆ ನಮಗೆ ಮಾತ್ರ ಸತ್ಯವಾಗಿ ಹೇಳುತ್ತೇನೆ, ಪ್ರಾಣ ಕಳೆದುಕೊಂಡಷ್ಟು

ನೋವಾಗಿದೆ. ಇದನ್ನು ಹೇಗೆ ಹೇಳಬೇಕು? ಎಲ್ಲಿ ಹೇಳಬೇಕು? ನೀವು ವಿರೋಧ ಪಕ್ಷದ ನಾಯಕರಾಗಿ ಪ್ರಕಾರ ಪ್ರಜಾಪ್ರಭುತ್ವದ ಕಗ್ಗೊಲೆ ಎಂದು ಹೇಳಲೇಬೇಕು, ಹೇಳಿ. ಆದರೆ ಅವರೆಲ್ಲರ ಭಾವನೆ ಇದೆಯಲ್ಲ, ಪ್ರತಿಯೊಬ್ಬ ವ್ಯಕ್ತಿ ಮೂಲೆಯಲ್ಲಿ ಬಿದ್ದಂತಹವರನ್ನು ಈ ಪಕ್ಷ, ಈ ಸಂಘಟನೆ, ಈ ನಾಯಕರು ಕರೆದುಕೊಂಡು ಬಂದು ವಿಧಾನಸಭೆಯಲ್ಲಿ ಕೂರಿಸಿದ್ದಾರೆ, ನಿಮಗೆ ವೈಯಕ್ತಿಕವಾಗಿ ಈ ಮಾತನ್ನು ಹೇಳಿದ್ದರೆ, ಏಕೆಂದರೆ ಆ ಮಾತನ್ನು ಬಳಸಿದಾಗ ನಮ್ಮ ಸಂಸ್ಕೃತಿ ಪ್ರಕಾರ ವಾಪಸ್ಸು ಹೋಗಿ ಹೊಡೆಯುವುದಾಗಲಿ, ಆ ಭಾಷೆ ಬಳಸುವುದಾಗಲಿ ನಮ್ಮ ಜೀವನದಲ್ಲಿ ಗೊತ್ತಿಲ್ಲ. ನಾವು ಕುಡಿದಂತಹ ತಾಯಿ ಮೊಲೆ ಹಾಲು ಬಹಳ ಪವಿತ್ರವಾದುದು. ನಮಗೆ ಸಂಘಟನೆ ಕೊಟ್ಟಿರುವಂತಹ ಸಂಸ್ಕೃತಿ ಇದೆಯಲ್ಲ ಬಹಳ ವಿಶೇಷವಾಗಿ ಇದೆ. ನೋವನ್ನು ಈ ರೀತಿ ತೋಡಿಕೊಳ್ಳುತ್ತಿರುವುದು ತಪ್ಪು ಎಂದು ಸಮಾಜದಲ್ಲಿ ಜನ ಹೇಳಿದರೆ ತಪ್ಪೇ, ನಾನು ತಪ್ಪಲ್ಲವೆಂದು ಹೇಳುವುದಿಲ್ಲ. ಈ ಘಟನೆ ಆದಂತಹ ಸಂದರ್ಭದಲ್ಲಿ ನಿನ್ನೆಯಿಂದ ಇವತ್ತಿನವರೆಗೂ ಕೂಡ ಇದರ ಬಗ್ಗೆ ನಾವು ಯಾರೂ ಕೂಡ ಬಾಯಿ ಬಿಟ್ಟಿಲ್ಲ. ಇವತ್ತು ಬೆಳಿಗ್ಗೆ ಮಾನ್ಯ ಮುಖ್ಯಮಂತ್ರಿಗಳು ಯಾವ ರೀತಿ ಪ್ರಸ್ತಾಪ ಮಾಡಿದರು ಎಂದು ನೋಡಿದಿರಿ. ಇಲ್ಲಿ ಪ್ರಶ್ನೆ ಬಂದಿದ್ದು, ಸಿಟ್ಟಿನಿಂದ ಕೆಲವು ಯುವ ಶಾಸಕರು ಕ್ಷಮೆ ಕೇಳಬೇಕೆಂದು ಕೇಳಿದ್ದು ತಪ್ಪು ಎಂದು ನೀವು ಹೇಳುವುದಾದರೆ ಅದು ತಪ್ಪೇ. ಅದರ ತೀರ್ಮಾನ ನೀವು ಮಾಡಿ. ಅವರನ್ನು ಇಲ್ಲಿಗೆ ಕರೆಸಿ ಛೀಮಾರಿ ಹಾಕುವಂತಹ ವ್ಯವಸ್ಥೆ ಇಲ್ಲವೆಂದು ನೀವು ಹೇಳಿದಿರಿ. ಅದಕ್ಕೆ ನಾನು ಹೇಳಿದೆನಲ್ಲ, ಬಹಳ ವರ್ಷಗಳಲ್ಲಿ ನಮಗೆ ಈ ಸಂಸದೀಯ ನಡವಳಿಕೆಗಳಲ್ಲಿ ಕಾನೂನು ವಿಚಾರದಲ್ಲಿ ನನಗೆ ಅಷ್ಟು ಗೊತ್ತಿಲ್ಲ. ಆದರೆ ಇಲ್ಲಿ ಒಂದೆರಡು ಘಟನೆಗಳ ಬಗ್ಗೆ ವಿಧಾನ ಪರಿಷತ್ತಿನಲ್ಲಿ ಕರೆದು ಛೀಮಾರಿ ಹಾಕುವಂತಹ ವ್ಯವಸ್ಥೆಗಳಲ್ಲಿ ಮಿಸ್ಟರ್ ಪೋತನ್ ಜೋಸೆಫ್, ಆರ್.ಕೆ. ಕರಂಬಿಯಾ. . .

**(ಗೊಂದಲ)**

**ಶ್ರೀ ಹೆಚ್. ಡಿ. ರೇವಣ್ಣ :** ಮಾನ್ಯ ಅಧ್ಯಕ್ಷರೇ, ನೀವು ಈ ರೀತಿ ಸುಮ್ಮನೆ ಕುಳಿತುಕೊಂಡು,

**(ಗೊಂದಲ)**

V-13-6Y

**ಶ್ರೀ ಕೆ.ಎಸ್. ಈಶ್ವರಪ್ಪ** : ನೋಡಿ ನಾನು ಅದಕ್ಕೆ ಹೇಳಿದೆ, ನಾನು ಮುಕ್ತಾಯ ಮಾಡುವುದಿಲ್ಲವೆಂದು ಅಲ್ಲ, ಮುಕ್ತಾಯ ಮಾಡುತ್ತೇನೆ. ನಾನು ಹೇಳುತ್ತಿರುವುದು ಬೇರೆ. ದಯವಿಟ್ಟು ತಡೆಯಿರಿ.

(ಗೊಂದಲ)

**ಶ್ರೀ ಕೆ.ಎಸ್. ಈಶ್ವರಪ್ಪ** : ಇಲ್ಲಿಯ ಯುವ ಶಾಸಕರ ಆಕ್ರೋಶ ಇಲ್ಲಿಗೆ ಸೀಮಿತವೆಂದು ತಿಳಿದುಕೊಳ್ಳಬೇಡಿ. ಇದು ಕರ್ನಾಟಕ ರಾಜ್ಯದಲ್ಲಿರುವ ಲಕ್ಷಾಂತರ ಕಾರ್ಯಕರ್ತರ ಆಕ್ರೋಶ.

**ಶ್ರೀ ಹೆಚ್. ಸಿ. ಬಾಲಕೃಷ್ಣ** : ಆಯಿತು, ಅದರ ಬಗ್ಗೆ ಆಚೆ ತೀರ್ಮಾನ ಮಾಡಲಿ ಬಿಡಿ. ಅದರ ಬಗ್ಗೆ ಹೇಳಿದ್ದೇವೆ, ಅವರು ಆ ಕ್ಷಣದಲ್ಲಿ ಕ್ಷಮೆ ಹೇಳಿದರು. ಆದರೆ ಅದನ್ನು ಪುನ: ಪುನ: ತಿರುವಿ ಹಾಕಿಕೊಂಡು, ಮುಗುಚಿ ಹಾಕಿಕೊಂಡು ಹೋದರೆ ಏನಿದು? ಅವರು ಕ್ಷಮೆ ಕೇಳದಿದ್ದರೆ ಆಗ ಅದನ್ನು ಪ್ರಸ್ತಾಪ ಮಾಡಬೇಕಾಗಿತ್ತು. ಅವರು ಮಾಧ್ಯಮದ ಮುಂದೆ ಕ್ಷಮೆ ಕೇಳಿದರು. ನಾವು ಅದನ್ನು ಹೇಳಿದೆವು. ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಸುಮ್ಮನೆ ಅದನ್ನೇ ತಿರುವಿ ಹಾಕಿಕೊಂಡು

**ಶ್ರೀ ಕೆ.ಎಸ್. ಈಶ್ವರಪ್ಪ** : ನಿನ್ನೆ ಟಿ.ವಿ.ನಲ್ಲಿ . . .

**ಶ್ರೀ ಹೆಚ್. ಸಿ. ಬಾಲಕೃಷ್ಣ** : ನೀವು ನೋಡುತ್ತಿರುವಂತಹ ಪತ್ರಿಕೆಯಲ್ಲೇ ಕ್ಷಮೆ ಕೇಳಿದರು ಎಂದು ಬಂದಿದೆ. ಪುನ: ಚರ್ಚೆ ಮಾಡುವಂತಹ ಅವಶ್ಯಕತೆ ಏನಿತ್ತು?

**ಶ್ರೀ ಹೆಚ್.ಡಿ. ರೇವಣ್ಣ**: ಇವರು ಹಗರಣ ಮುಚ್ಚಿ ಹಾಕುವುದಕ್ಕೆ

**ಶ್ರೀ ಕೆ.ಎಸ್. ಈಶ್ವರಪ್ಪ** : ಈಗ ನಿಮ್ಮ ಹಗರಣ ಹೊರಗಡೆ ಬರುತ್ತದೆ ತಡೆಯಿರಿ. ನಿಮ್ಮ ಹಗರಣ ಹೊರಗಡೆ ಬರುತ್ತದಲ್ಲ.

**ಶ್ರೀ ಹೆಚ್. ಡಿ. ರೇವಣ್ಣ** : ಬರಲಿ,

(ಗೊಂದಲ)

**ಶ್ರೀ ಕೆ.ಎಸ್. ಈಶ್ವರಪ್ಪ**: ಇವತ್ತು ಕರ್ನಾಟಕ ರಾಜ್ಯದ ಜನ ಮಾತ್ರ ಟಿ.ವಿ ನೋಡಿಲ್ಲ. ಭಾರತ ದೇಶದ ಜನ ಮಾತ್ರ ಟಿ.ವಿ ನೋಡಿಲ್ಲ. ಪ್ರಪಂಚದ ಎಲ್ಲಾ ಜನರು ಕೂಡ ಒಬ್ಬ ಮಹಾಪುರುಷ ಯಾವ್ಯಾವ ರೀತಿ ಮಾತನಾಡಿದರು, ಕ್ಷಮೆ ಏನು ಕೇಳಿದರು ಎಂದು ಇಡೀ ಪ್ರಪಂಚ ನೋಡಿಯಾಯಿತು. ಅದನ್ನು ಯಾರ ಬಗ್ಗೆ ಮಾತನಾಡಿರುವುದು. ನಾಲಿಗೆ ವ್ಯಕ್ತಿಯ ಕುಲವನ್ನು ಹೇಳುತ್ತದೆಂದು ಹೇಳುತ್ತಾರೆ. ನಾನು ಏನು ಹೇಳುವುದಕ್ಕೆ ಹೊರಟ್ಟಿದ್ದೇನೆಂದರೆ ಮುಖ್ಯಮಂತ್ರಿಗಳಾಗಿದ್ದಂತಹವರ, ಪ್ರಧಾನ

ಮಂತ್ರಿಗಳಾಗಿದ್ದಂತಹವರ ಜೀವನ ಬೇರೆ ಯುವ ರಾಜಕಾರಣಿಗಳಿಗೆ ಮಾರ್ಗದರ್ಶನವಾಗಿರಬೇಕು. ನಾನು ರೇವಣ್ಣನವರಿಗೆ ಬಾಯಿಗೆ ಬಂದ ಹಾಗೆ ಬಯ್ಯುವುದು, ಆಮೇಲೆ ಕ್ಷಮೆ ಕೇಳುವುದು.

**ಶ್ರೀ ಸಿ.ಎಸ್. ಪುಟ್ಟೇಗೌಡ:** ಮಾನ್ಯ ಅಧ್ಯಕ್ಷರೇ, ದಯಮಾಡಿ ಸಬ್ಜೆಕ್ಟ್‌ಗೆ ಬರುವುದಾದರೆ ಬನ್ನಿ. ನಮಗೆ ಹಳ್ಳಿಯಲ್ಲಿ ಜನ ಕರೆಯುತ್ತಿದ್ದಾರೆ.

**(ಗೊಂದಲ)**

**ಶ್ರೀ ಸಿ.ಎಸ್. ಪುಟ್ಟೇಗೌಡ:** ದಯಮಾಡಿ ನೀವು ಏನು ವಿಚಾರ ಮಾಡಿ, ನಮಗೂ ಕಥೆ ಹೇಳುವುದು ಗೊತ್ತಾಗುತ್ತದೆ. ನಮ್ಮ ಹತ್ತಿರ ಅಡುಗಲಜ್ಜಿ ಕಥೆ ಹೇಳಿಸಬೇಡಿ, ಇಲ್ಲಿ ಈಶ್ವರಪ್ಪನವರ ಅಡುಗಲಜ್ಜಿ ಕಥೆ ಹೇಳುವುದಕ್ಕೆ ಬಂದಿಲ್ಲ.

**(ಗೊಂದಲ)**

**ಶ್ರೀ ಹೆಚ್.ಸಿ. ಬಾಲಕೃಷ್ಣ:** ಇದು ಯಾವ ಸಂಸ್ಕೃತಿ. ಇದನ್ನು ಓದಲೇ? ನಮ್ಮವರೆಲ್ಲ ಸತ್ಯಹರಿಶ್ಚಂದ್ರರು, ಅವರೆಲ್ಲ ಕಳ್ಳರು ಎಂದು ಹೇಳುತ್ತಾರಲ್ಲ, ಇದನ್ನು ಮಾಡಿರುವುದನ್ನು ಓದಲೇ?

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:** ಚುನಾವಣೆಯ ಸಮಯದಲ್ಲಿ ರಸ್ತೆಯ ಹಿಡಿದುಕೊಂಡು ಗೂಂಡಾಗಿರಿ ಮಾಡಿದವರು ಯಾರು ಸ್ವಾಮಿ?

**ಶ್ರೀ ಹೆಚ್.ಸಿ. ಬಾಲಕೃಷ್ಣ:** ಸಂಜೆ 6 ಗಂಟೆಯ ಮೇಲೆ ಏಕೆ ಇದ್ದರು?

**(ಗೊಂದಲ)**

**ಶ್ರೀ ಆರ್. ಅಶೋಕ್:** ಅದಕ್ಕೆ ಕಾನೂನು ಇಲ್ಲವೇ?

**(ಗೊಂದಲ)**

**ಶ್ರೀ ಹೆಚ್.ಸಿ. ಬಾಲಕೃಷ್ಣ:** ಚುನಾವಣಾ ವಿಚಾರ ಚರ್ಚೆ ಮಾಡೋಣವೆಂದರೆ ನಾವೂ ಮಾಡುತ್ತೇವೆ. ನಾವೂ ಏನಾಯಿತು ಎಂದು ಹೇಳಬೇಕಾಗುತ್ತದೆ.

**ಶ್ರೀ ಕೆ.ಎಸ್. ಈಶ್ವರಪ್ಪ:** ಗೂಂಡಾಗಿರಿ ಮಾಡಿ ಬೇರೆಯವರಿಗೆ ಹೇಳುತ್ತೀರಲ್ಲಾ?

**(ಗೊಂದಲ)**

**ಶ್ರೀ ಎಸ್.ಆರ್. ಶ್ರೀನಿವಾಸ್:** ನೀವು ಗೂಂಡಾಗಳು.

**ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು:** ನೀವೆಲ್ಲಾ ಗೂಂಡಾಗಳು. ಬೇರೆಯವರಿಗೆ ಮಾತನಾಡುತ್ತೀರಿ.

**ಶ್ರೀ ಕೆ.ಎಂ. ಶಿವಲಿಂಗೇಗೌಡ:** ಯಾರೂ ಗೂಂಡಾಗಳು? ಒಬ್ಬರು ಸಚಿವರಾಗಿ ಹೇಗೆ ಮಾತನಾಡುವುದೆಂದು ಗೊತ್ತಿದೆಯೇ? ಅವರೇನು ಹೇಳುವುದು?

**(ಗೊಂದಲ)**

**ಅಧ್ಯಕ್ಷರು:** ಈ ರೀತಿಯಾದರೆ ಸದನವನ್ನು ನಡೆಸುವುದಕ್ಕೆ ನನ್ನಿಂದ ಆಗುವುದಿಲ್ಲ. ಈಗ ಸದನವನ್ನು ನಾನು ಅನಿರ್ದಿಷ್ಟ ಅವಧಿಯವರೆಗೆ ಮುಂದಕ್ಕೆ ಹಾಕುತ್ತಿದ್ದೇನೆ.

**(ಸದನವನ್ನು ರಾತ್ರಿ 7 ಗಂಟೆ 55 ನಿಮಿಷಕ್ಕೆ ಅನಿರ್ದಿಷ್ಟಾವಧಿಗೆ ಮುಂದೂಡಲಾಯಿತು)**

**ಅನುಬಂಧ–1**

**ಕರ್ನಾಟಕ ವಿಧಾನ ಸಭೆ**

**ಹದಿಮೂರನೇ ವಿಧಾನಸಭೆ**

**ಮೂರನೇ ಅಧಿವೇಶನ**

**(ಮುಂದುವರೆದ ಉಪವೇಶನಗಳು)**

## ಕರ್ನಾಟಕ ವಿಧಾನ ಮಂಡಲದವರ ವೇತನಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ (ಎರಡನೇ ತಿದ್ದುಪಡಿ) ವಿಧೇಯಕ, 2009

**(2009ರ ವಿಧಾನ ಸಭೆಯ ವಿಧೇಯಕ ಸಂಖ್ಯೆ – 39)**

ಕರ್ನಾಟಕ ವಿಧಾನಮಂಡಲದವರ ವೇತನಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ ಅಧಿನಿಯಮ, 1956ಕ್ಕೆ ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ವಿಧಾನಮಂಡಲದವರ ವೇತನಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ ಅಧಿನಿಯಮ, 1956ನ್ನು (1957ರ ಕರ್ನಾಟಕ ಅಧಿನಿಯಮ 2) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು, ಭಾರತ ಗಣರಾಜ್ಯದ ಅರವತ್ತನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:–

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ:–** (1) ಈ ಅಧಿನಿಯಮವನ್ನು **ಕರ್ನಾಟಕ ವಿಧಾನಮಂಡಲದವರ ವೇತನಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ (ಎರಡನೇ ತಿದ್ದುಪಡಿ) ಅಧಿನಿಯಮ 2009** ಎಂದು ಕರೆಯತಕ್ಕದ್ದು.

(2) ಇದು ಈ ಕೊಡಲೇ ಜಾರಿಗೆ ಬರತಕ್ಕದ್ದು.

**2. 11ಬಿ ಪ್ರಕರಣದ ತಿದ್ದುಪಡಿ:–** ಕರ್ನಾಟಕ ವಿಧಾನಮಂಡಲದವರ ವೇತನಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ ಅಧಿನಿಯಮ, 1956ರ (1957ರ ಕರ್ನಾಟಕ ಅಧಿನಿಯಮ 2) 11ಬಿ ಪ್ರಕರಣದ (1)ನೇ ಉಪಪ್ರಕರಣದ ವಿವರಣೆಯನ್ನು ಹೊರತುಪಡಿಸಿ, ಉಳಿದಭಾಗಕ್ಕೆ ಬದಲಾಗಿ ಈ ಮುಂದಿನ ಉಪ ಪ್ರಕರಣವನ್ನು ಪ್ರತಿಯೋಜಿಸತಕ್ಕದ್ದು ಹಾಗೂ 2009ರ ಜನವರಿ ದಿನಾಂಕದಿಂದ ಹಾಗೆ ಪ್ರತಿಯೋಜಿಸಲಾಗಿದೆ ಎಂದು ಭಾವಿಸತಕ್ಕದ್ದು, ಎಂದರೆ:–

"(1) ಸದಸ್ಯರೊಬ್ಬರು ತಮ್ಮ ಪದಾವಧಿಯು ಮುಕ್ತಾಯವಾಗುವುದಕ್ಕೆ ಮುನ್ನವೇ ಮರಣ ಹೊಂದಿದಲ್ಲಿ, ಅಥವಾ 11ಎ ಪ್ರಕರಣದಡಿಯಲ್ಲಿ ನಿವೃತ್ತಿ ವೇತನಕ್ಕೆ ಅರ್ಹರಾದ ಒಬ್ಬ ವ್ಯಕ್ತಿಯು ಮೃತರಾದಲ್ಲಿ. 11ಎ ಪ್ರಕರಣದಡಿಯಲ್ಲಿ ಪ್ರತಿ ತಿಂಗಳಿಗೆ ದೊರೆಯತಕ್ಕ ನಿವೃತ್ತಿ ವೇತನದ ಶೇಕಡಾ ಐವತ್ತರ ದರದಲ್ಲಿ ಕುಟುಂಬ ನಿವೃತ್ತಿ ವೇತನವನ್ನು ಆತನ ಕುಟುಂಬಕ್ಕೆ ಸಂದಾಯ ಮಾಡತಕ್ಕದ್ದು".

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಕರ್ನಾಟಕ ವಿಧಾನಮಂಡಲದ ವೇತನಗಳು, ನಿವೃತಿ ವೇತನಗಳು ಮತ್ತು ಭತ್ಯೆಗಳ ಅಧಿನಿಯಮ, 1956ರ 11–ಬಿ ಪ್ರಕರಣದ (1)ನೇ ಉಪಪ್ರಕರಣದಲ್ಲಿ ಸದಸ್ಯರೊಬ್ಬರು ಮರಣ ಹೊಂದಿದರೆ, 11–ಎ ಪ್ರಕರಣದಡಿಯಲ್ಲಿ ಆ ಸದಸ್ಯರಿಗೆ ದೊರೆಯುತ್ತಿದ್ದ ನಿವೃತ್ತಿ ವೇತನದ ಶೇಕಡಾ ಐವತ್ತರ ದರದಲ್ಲಿ, ಕುಟುಂಬ ನಿವೃತ್ತಿ ವೇತನವನ್ನು ಅವರ ಕುಟುಂಬಕ್ಕೆ ಜೀವಿತಾವಧಿಯವರಿಗೆ ಸಂದಾಯ ಮಾಡಲು ಉಪಬಂಧ ಕಲ್ಪಿಸಲಾಗಿದೆ.

11–ಎ ಪ್ರಕರಣದಡಿಯಲ್ಲಿ ನಿವೃತ್ತಿ ವೇತನಕ್ಕೆ ಅರ್ಹನಾದ ಒಬ್ಬ ವ್ಯಕ್ತಿಯು ಮೃತನಾದ ಸಂದರ್ಭದಲ್ಲಿ, ಅವನ ಕುಟುಂಬವು ನಿವೃತ್ತಿ ವೇತನಕ್ಕೆ ಅರ್ಹವಾಗಿರಲಿಲ್ಲ. ಅಧಿನಿಯಮದ 11–ಎ ಪ್ರಕರಣದಡಿಯಲ್ಲಿ ನಿವೃತ್ತಿ ವೇತನಕ್ಕೆ ಅರ್ಹನಾಗಿದ್ದು, ಮೃತನಾದ ವ್ಯಕ್ತಿಯ ಕುಟುಂಬಕ್ಕೆ ಕುಟುಂಬ ನಿವೃತ್ತಿ ವೇತನವನ್ನು ನೀಡಲು ಉಪಬಂಧವನ್ನು ಕಲ್ಪಿಸುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

## ಆರ್ಥಿಕ ಜ್ಞಾಪಕ ಪತ್ರ

ಪ್ರಸ್ತಾವಿತ ಶಾಸನ ರಚನಾ ಕ್ರಮದಿಂದಾಗಿ ರೂ. 3670 ಲಕ್ಷಗಳ ಸಂಭವನೀಯ ಆವರ್ತಕ ವಾರ್ಷಿಕ ವೆಚ್ಚ ಉಂಟಾಗುತ್ತದೆ.

**ಎಸ್. ಸುರೇಶ್ ಕುಮಾರ್**
ನಗರಾಭಿವೃದ್ಧಿ, ಕಾನೂನು ಮತ್ತು
ಸಂಸದೀಯ ವ್ಯವಹಾರಗಳು ಸಚಿವರು

**ಎಸ್. ಬಿ. ಪಾಟೀಲ್**
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ.

## ಅನುಬಂಧ

### ಕರ್ನಾಟಕ ವಿಧಾನಮಂಡಲದವರ ವೇತನಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ ಅಧಿನಿಯಮ, 1956ರ ಉದ್ಧೃತ ಭಾಗ

XX XX XX

**11ಬಿ. ಕುಟುಂಬ ನಿವೃತ್ತಿ ವೇತನ:–** ಸದಸ್ಯರೊಬ್ಬರು ತಮ್ಮ ಪದಾವಧಿಯು ಮುಕ್ತಾಯವಾಗುವುದಕ್ಕೆ ಮುನ್ನವೇ ಮರಣ ಹೊಂದಿದಲ್ಲಿ, ಸದಸ್ಯರಿಗೆ 11ಎ ಪ್ರಕರಣದಡಿಯಲ್ಲಿ ಪ್ರತಿ ತಿಂಗಳಿಗೆ ದೊರೆಯತಕ್ಕ ನಿವೃತ್ತಿ

ವೇತನದ ಶೇಕಡಾ ಐವತ್ತರ ದರದಲ್ಲಿ ಕುಟುಂಬ ನಿವೃತ್ತಿ ವೇತನವನ್ನು ಆತನ ಕುಟುಂಬಕ್ಕೆ ಸಂದಾಯ ಮಾಡತಕ್ಕದ್ದು.

**ವಿವರಣೆ:-** ಈ ಉಪ ಪ್ರಕರಣದ ಉದ್ದೇಶಗಳಿಗಾಗಿ, 'ಕುಟುಂಬ' ಎಂದರೆ, ಮೃತ ವ್ಯಕ್ತಿಯ ಈ ಮುಂದಿನ ಬಂಧುಗಳು, ಎಂದರೆ"-

(ಎ) ಪತ್ನಿ ಅಥವಾ ಪತಿ ;

(ಬಿ) ಅಪ್ರಾಪ್ತ ವಯಸ್ಸಿನ ಗಂಡು ಮಕ್ಕಳು; ಮತ್ತು

(ಸಿ) ಅವಿವಾಹಿತ ಅಪ್ರಾಪ್ತ ವಯಸ್ಸಿನ ಹೆಣ್ಣು ಮಕ್ಕಳು.

(2) (1)ನೇ ಉಪ ಪ್ರಕರಣದಡಿಯಲ್ಲಿ ದೊರೆಯತಕ್ಕ ಕುಟುಂಬ ವೇತನವನ್ನು ಈ ಮುಂದಿನ ಕ್ರಮದಲ್ಲಿ ಸಂದಾಯ ಮಾಡತಕ್ಕದ್ದು:-

(ಎ) ಪತಿ ಅಥವಾ ಪತ್ನಿಗೆ ; ಮತ್ತು

(ಬಿ) ಮೃತ ಸದಸ್ಯನ ಪತಿ ಅಥವಾ ಪತ್ನಿ ಜೀವಂತವಾಗಿರದ ಸಂದರ್ಭದಲ್ಲಿ ಅಪ್ರಾಪ್ತ ವಯಸ್ಸಿನ ಗಂಡು ಮಕ್ಕಳಲ್ಲಿ ಹಿರಿಯ ಮಗನಿಗೆ ಅಥವಾ ಅಪ್ರಾಪ್ತ ವಯಸ್ಸಿನ ಅವಿವಾಹಿತ ಹೆಣ್ಣು ಮಕ್ಕಳಲ್ಲಿ ಹಿರಿಯ ಮಗಳಿಗೆ ;

ಪರಂತು, ಕುಟುಂಬ ವೇತನವನ್ನು ಪಡೆಯುತ್ತಿದ್ದ ವ್ಯಕ್ತಿಯು ಮೃತನಾದಲ್ಲಿ ಅಥವಾ ವಿವಾಹವಾದಲ್ಲಿ ಅಥವಾ ಪ್ರಾಪ್ತ ವಯಸ್ಕನಾದಲ್ಲಿ, ನಿವೃತ್ತಿ ವೇತನವನ್ನು ಆದ್ಯತಾ ಕ್ರಮದಲ್ಲಿ ನಂತರ ಬರುವ ವ್ಯಕ್ತಿಗೆ ಸಂದಾಯ ಮಾಡತಕ್ಕದ್ದು.

XX XX XX